॥ ಶ್ರೀರಾಮಶ್ರೀ ॥

॥ ಶ್ರೀವೇದವ್ಯಾಸೋ ವಿಜಯತೇ ॥

ಭಗವಾನ್ ಶ್ರೀವೇದವ್ಯಾಸ ಪ್ರಣೀತ

ಮಹಾಭಾರತ

ವನಪರ್ವ

ಭಾಗ-೯

(ಶ್ರೀಮದಾನಂದತೀರ್ಥರ ತಾತ್ಪರ್ಯನಿರ್ಣಯ ಶ್ರೀವಾದಿರಾಜತೀರ್ಥರ
ಲಕ್ಷಾಲಂಕಾರದೊಂದಿಗೆ ಪ್ರತಿ ಶ್ಲೋಕಗಳ ಜೊತೆಗೆ ಕನ್ನಡಾನುವಾದ)

ಅನುಗ್ರಹ :

ಪರಮಪೂಜ್ಯ ಶ್ರೀ ಶ್ರೀ ವಿದ್ಯಾಧೀಶತೀರ್ಥ ಶ್ರೀಪಾದರು

ಶ್ರೀಹೃಷೀಕೇಶತೀರ್ಥಸಂಸ್ಥಾನಂ, ಪಲಿಮಾರು ಮಠ, ಉಡುಪಿ

ಅನುವಾದಕರು :

ವಿದ್ವಾನ್॥ ಪಿ. ಎಸ್. ಶೇಷಗಿರಿ ಆಚಾರ್ಯ,

ಪ್ರಕಾಶಕರು :

ತತ್ವಸಂಶೋಧನಸಂಸತ್ (ರಿ.)

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಮಾನ್ಯತೆ ಪಡೆದಿದೆ

ಶ್ರೀಪಲಿಮಾರು ಮಠ, ಉಡುಪಿ.

ಮಹಾಭಾರತ - ಭಾರತತಾತ್ಪರ್ಯನಿರ್ಣಯ- ಲಕ್ಷಾಲಂಕಾರ ಕನ್ನಡಾನುವಾದದ ಸಮಗ್ರ ಯೋಜನೆಯ ಕೃತಿಗಳನ್ನು ಪರಮಪೂಜ್ಯ ಶ್ರೀ ಶ್ರೀ ವಿದ್ಯಾಧೀಶತೀರ್ಥ ಶ್ರೀಪಾದರ ದ್ವಿತೀಯ ಪರ್ಯಾಯದ ಅಕ್ಕಿಮುಹೂರ್ತದ ಶುಭಸಂದರ್ಭದಲ್ಲಿ(20.01.2017) ದಂದು ಪರಮಪೂಜ್ಯ ಶ್ರೀ ಶ್ರೀ ವಿದ್ಯಾಧೀಶತೀರ್ಥ ಶ್ರೀಪಾದರು ಅನಾವರಣಗೊಳಿಸಿ ಶ್ರೀಕೃಷ್ಣನ ಅಡಿದಾವರೆಗಳಲ್ಲಿ ಸಮರ್ಪಿಸಿದರು.

ವನಪರ್ವ
ಭಾಗ-೯

© ತತ್ವಸಂಶೋಧನ ಸಂಸತ್ (ರಿ.), ಪಲಿಮಾರು ಮಠ, ಉಡುಪಿ.

ISBN : 978-93-81807-55-2

ಈ ಗ್ರಂಥವು ಕರ್ನಾಟಕ ಸರ್ಕಾರದ ಆರ್ಥಿಕ ನೆರವಿನಿಂದ ಮುದ್ರಿತವಾಗಿದೆ

ಪುಟಗಳು	-	VIII + 672 = 680
ಮುದ್ರಿತ ಪ್ರತಿಗಳು	-	1000
ಬೆಲೆ	-	**ರೂ. 425/-**
ಅನುವಾದಕರು	-	ವಿದ್ವಾನ್ ಪಿ.ಎಸ್. ಶೇಷಗಿರಿ ಆಚಾರ್ಯ, ಮೈಸೂರು.
ಪ್ರಕಾಶಕರು	-	ತತ್ವಸಂಶೋಧನಸಂಸತ್, ಪಲಿಮಾರು ಮಠ, ಉಡುಪಿ.
ಪುಟ ಸಂಯೋಜನೆ ಮತ್ತು ಅಕ್ಷರ ಜೋಡಣೆ	-	ಶ್ರೀ ಎಂ. ಶರತ್ ಚಂದ್ರ ಮತ್ತು ಶ್ರೀಮತಿ ನಾಗಲತಾ
ಮುದ್ರಕರು	-	ಪವನ್ ಗ್ರಾಫಿಕ್ಸ್ ಮತ್ತು ಪ್ರಿಂಟರ್ಸ್, ಮೈಸೂರು. ✆ : 7899779255
ಗ್ರಂಥಪ್ರಾಪ್ತಿ	-	ಪಲಿಮಾರು ಮಠ, ಉಡುಪಿ.

ವಿಷಯಾನುಕ್ರಮಣಿಕೆ

ಮಹಾಭಾರತ - ಭಾಗ-೯

ವನಪರ್ವ (ಭಾಗ-೪)

ಅಧ್ಯಾಯ ಸಂಖ್ಯೆ		ಪುಟ ಸಂ.
222.	ಸತ್ಯಭಾಮಾ ದ್ರೌಪದಿಯರ ಸಂವಾದ. ದ್ರೌಪದಿಯಿಂದ ಪತಿವ್ರತಾಧರ್ಮಕಥನ	2
223.	ದ್ರೌಪದಿಯಿಂದ ಪಾತಿವ್ರತ್ಯಧರ್ಮ ನಿರೂಪಣೆ	16
224.	ದ್ರೌಪದಿಯನ್ನು ಸಮಾಧಾನಮಾಡಿ ಸತ್ಯಭಾಮೆಯಿಂದ ದ್ವಾರಕಾಪ್ರಯಾಣ	20
225.	ಬ್ರಾಹ್ಮಣರಿಂದ ಪಾಂಡವರ ವನವಾಸದ ವಾರ್ತೆಯನ್ನು ಕೇಳಿ ಧೃತರಾಷ್ಟ್ರನ ಸಂತಾಪ ಮತ್ತು ತನ್ನ ಪುತ್ರರಿಗೆ ಒದಗಲಿರುವ ಅನರ್ಥವನ್ನು ಚಿಂತಿಸಿ ಶೋಕ	25
226.	ಕರ್ಣ-ಶಕುನಿಗಳಿಂದ ದುರ್ಯೋಧನನಿಗೆ ದ್ವೈತವನಕ್ಕೆ ಹೋಗುವ ಪ್ರೇರಣೆ	35
227.	ಘೋಷಯಾತ್ರೆಗಾಗಿ ದ್ವೈತವನಕ್ಕೆ ಹೋಗಲು ಕರ್ಣ-ಶಕುನಿಗಳಿಂದ ಉಪಾಯ ನಿಶ್ಚಯ	40
228.	ಘೋಷಯಾತ್ರೆಗೆ ಹೋಗಲು ಧೃತರಾಷ್ಟ್ರನಿಂದ ಮನಸ್ಸಿಲ್ಲದೇ ಅನುಮತಿ	46
229.	ದುರ್ಯೋಧನನಿಂದ ದ್ವೈತವನ ಸರೋವರದ ಬಳಿ ಬೀಡು. ಅವನ ಸೈನಿಕರಿಗೂ ಮತ್ತು ಗಂಧರ್ವರಿಗೂ ಕಲಹ	58
230.	ಕೌರವರ ಮತ್ತು ಗಂಧರ್ವರ ಯುದ್ಧ. ಕರ್ಣನ ಪಲಾಯನ	65
231.	ಕೌರವಸೈನ್ಯದ ಪರಾಜಯ. ಚಿತ್ರರಥನಿಂದ ದುರ್ಯೋಧನನ ಬಂಧನ. ಇತರ ಗಂಧರ್ವರಿಂದ ದುರ್ಯೋಧನನ ತಮ್ಮಂದಿರ ಮತ್ತು ಅವರ ಪತ್ನಿಯರ ಬಂಧನ. ದುರ್ಯೋಧನನ ಅಮಾತ್ಯನಿಂದ ಯುಧಿಷ್ಠಿರನಿಗೆ ಈ ವಾರ್ತೆಯ ನಿವೇದನ. ಭೀಮಸೇನನಿಂದ ಬಂಧನದ ಅನುಮೋದನ	73
232.	ಭೀಮಸೇನನಿಂದ ದುರ್ಯೋಧನಾದಿಗಳ ವಿಮೋಚನೆಗೆ ಧರ್ಮರಾಜನ ಅತಿಶಯದ ಒತ್ತಾಯ. ಅರ್ಜುನನ ಅಂಗೀಕಾರ ಮತ್ತು ಪ್ರತಿಜ್ಞೆ	78
233.	ಚಿತ್ರಸೇನ ಮೊದಲಾದ ಗಂಧರ್ವರ ಜೊತೆಯಲ್ಲಿ ಪಾಂಡವರ ಯುದ್ಧ	86

234. ಪಾಂಡವ ಮತ್ತು ಗಂಧರ್ವರ ಘೋರವಾದ ಯುದ್ಧ. ಅದೃಶ್ಯನಾದ ಚಿತ್ರಸೇನನಿಗೆ ಅರ್ಜುನನಿಂದ ಬಾಣಪ್ರಯೋಗ. ಚಿತ್ರಸೇನನ ಪ್ರಾದುರ್ಭಾವ ಮತ್ತು ಸ್ವರೂಪ ಕಥನ. ಯುದ್ಧವಿರಾಮ ಮತ್ತು ಪಾಂಡವರ ಜೊತೆಯಲ್ಲಿ ಚಿತ್ರಸೇನನ ಸಲ್ಲಾಪ. 91

235. ಚಿತ್ರಸೇನನಿಂದ ದುರ್ಯೋಧನನ ಬಂಧನಕ್ಕೆ ಕಾರಣದ ನಿರೂಪಣೆ. ಯುಧಿಷ್ಠಿರನಿಂದ ದುರ್ಯೋಧನಾದಿಗಳ ಬಂಧವಿಮೋಚನೆ. ಅಲ್ಲಿಂದ ದುರ್ಯೋಧನನ ಪ್ರಯಾಣ. 98

236. ಮಾರ್ಗಮಧ್ಯದಲ್ಲಿ ದುರ್ಯೋಧನನ ವಿಶ್ರಾಂತಿ. ಅಲ್ಲಿಗೆ ಕರ್ಣನ ಆಗಮನ ಮತ್ತು ಅಜ್ಞಾನದಿಂದ ದುರ್ಯೋಧನನ ಪ್ರಶಂಸೆ 106

237. ದುರ್ಯೋಧನನಿಂದ ಕರ್ಣನನ್ನು ಕುರಿತು ತನ್ನ ಪರಾಜಯದ ವೃತ್ತಾಂತ ಕಥನ 110

238. ದುರ್ಯೋಧನನಿಂದ ಕರ್ಣನನ್ನು ಕುರಿತು ತನ್ನ ದುರವಸ್ಥೆಯ ಕಥನ. ದುಃಶಾಸನನನ್ನು ರಾಜ್ಯದಲ್ಲಿ ಅಭಿಷೇಕ ಮಾಡುವಂತೆ ಸೂಚನೆ. ದುಃಶಾಸನನ ಪರಿದೇವನೆ ಮತ್ತು ಕರ್ಣನ ಸಮಾಧಾನ ವಚನಗಳು 114

239. ದುರ್ಯೋಧನನಿಂದ ದುಃಶಾಸನನಿಗೆ ರಾಜ್ಯಪಾಲನೆಯ ವಿಧಾನ ಮತ್ತು ಕರ್ಣನ ಸಮಾಧಾನೋಕ್ತಿ 119

240. ಕರ್ಣನ ಸಮಾಧಾನ ವಚನಗಳು. ಆದರೂ ದುರ್ಯೋಧನನ ಹಠ 123

241. ಶಕುನಿಯ ಪ್ರಬೋಧನದಿಂದಲೂ ತನ್ನ ಹಠವನ್ನು ಬಿಡದಿದ್ದ ದುರ್ಯೋಧನನನ್ನು ದೈತ್ಯರು ಕೃತ್ಯಯನ್ನು ಸೃಷ್ಟಿಮಾಡಿ ರಸಾತಳಲೋಕಕ್ಕೆ ಸಮಾನಯನ 129

242. ಪಾತಾಳವಾಸಿಗಳಾದ ದೈತ್ಯದಾನವರಿಂದ ಹೇತೂಪನ್ಯಾಸಪೂರ್ವಕವಾಗಿ ಪ್ರಾಯೋಪವೇಶದಿಂದ ದುರ್ಯೋಧನನ ನಿವರ್ತನೆ 136

243. ಕೃತ್ಯೆಯಿಂದ ಪುನಃ ಪೂರ್ವಸ್ಥಾನದಲ್ಲಿ ದುರ್ಯೋಧನನ ಸ್ಥಾಪನೆ. ದಾನವರ ಉಪದೇಶ ಮತ್ತು ದುರ್ಯೋಧನನ ಸ್ವಪುರ ಪ್ರಾಪ್ತಿ 141

244. ಕರ್ಣನನ್ನು ನಿಂದಿಸಿ ಭೀಷ್ಮರಿಂದ ಪಾಂಡವರ ಜೊತೆಯಲ್ಲಿ ಸಂಧಿ ಮಾಡಿಕೊಳ್ಳುವಂತೆ ದುರ್ಯೋಧನನಿಗೆ ಸೂಚನೆ. ಕರ್ಣನ ಅಸಹನೆಯ ಮಾತುಗಳು ಮತ್ತು ದಿಗ್ವಿಜಯಕ್ಕಾಗಿ ಕರ್ಣನ ಪ್ರಯಾಣ 147

245. ದುರ್ಯೋಧನನಿಂದ ಯಾಗಾನುಷ್ಠಾನ. ಋತ್ವಿಕ್‌ಗಳ ಮತ್ತು ಬ್ರಾಹ್ಮಣರ ಸತ್ಕಾರ. ಅವಭೃಥಸ್ನಾನವನ್ನು ಮಾಡಿ ನಗರ ಪ್ರದೇಶ 156

246. ದುರ್ಯೋಧನನ ಸಭೆಯಲ್ಲಿ ಕರ್ಣನಿಂದ ಅರ್ಜುನನ ವಧೆಯ ಪ್ರತಿಜ್ಞೆ. ಅದನ್ನು ಕೇಳಿ ಧರ್ಮರಾಜನ ಚಿಂತೆ 162

247. ಯುಧಿಷ್ಠಿರನಿಗೆ ಸ್ವಪ್ನದಲ್ಲಿ ಮೃಗಗಳ ಪ್ರಾರ್ಥನೆ ಮತ್ತು ಪುನಃ ಪಾಂಡವರಿಂದ ಕಾಮ್ಯಕ ವನಕ್ಕೆ ಪ್ರಯಾಣ 169

248. ಕಾಮ್ಯಕವನದಲ್ಲಿ ಯುಧಿಷ್ಠಿರನ ಚಿಂತೆ ಮತ್ತು ವ್ಯಾಸರ ಆಗಮನ 174

249. ಯುಧಿಷ್ಠಿರನಿಗೆ ವ್ಯಾಸರ ಉಪದೇಶ 177

250. ದುರ್ವಾಸರಿಂದ ಮುದ್ಗಲನ ಪರೀಕ್ಷೆ. ಮುದ್ಗಲನ ಅನ್ನದಾನದಿಂದ ದುರ್ವಾಸರ ಸಂತೋಷ. ತನ್ನನ್ನು ವಿಮಾನದಲ್ಲಿ ಕರೆದುಕೊಂಡು ಹೋಗಲು ಬಂದ ದೇವದೂತನ ಜೊತೆಯಲ್ಲಿ ಮುದ್ಗಲನ ಸಂವಾದ 183

251. ದೇವದೂತನ ಮುಖದಿಂದ ಸ್ವರ್ಗದ ಗುಣದೋಷಗಳನ್ನು ಮತ್ತು ವಿಷ್ಣುಲೋಕದ ನಿರ್ದೋಷತ್ವವನ್ನು ಕೇಳಿದ ಮುದ್ಗಲನಿಂದ ದೇವದೂತನ ಜೊತೆಯಲ್ಲಿ ವಿಮಾನದಲ್ಲಿ ಹೋಗಲು ನಿರಾಕರಣೆ. ಯುಧಿಷ್ಠಿರನಿಗೆ ಉಪದೇಶವನ್ನು ಮಾಡಿ ವ್ಯಾಸರಿಂದ ತಮ್ಮ ಆಶ್ರಮಕ್ಕೆ ಗಮನ 191

252. ಪಾಂಡವರು ಬೇಟೆಗೆ ಹೋಗಿರುವಾಗ ಜಯದ್ರಥನ ಆಗಮನ. ದ್ರೌಪದಿಯ ರೂಪದಿಂದ ಮೋಹಿತನಾದ ಅವನಿಂದ ತನ್ನ ಮಂತ್ರಿಯಾದ ಕೋಟಿಕಾಶ್ಯನ ಪ್ರೇಷಣ 208

253. ಜಯದ್ರಥನ ಪ್ರೇರಣೆಯಂತೆ ಕೋಟಿಕಾಶ್ಯನಿಂದ ದ್ರೌಪದಿಯ ವಿಚಾರಣೆ 211

254. ಕೋಟಿಕಾಶ್ಯನಿಗೆ ದ್ರೌಪದಿಯಿಂದ ಆತ್ಮವೃತ್ತಾಂತ ಕಥನ 216

255. ಕೋಟಿಕಾಶ್ಯನಿಂದ ದ್ರೌಪದಿಯ ತತ್ತ್ವವನ್ನು ತಿಳಿದ ಜಯದ್ರಥನಿಂದ ದ್ರೌಪದಿಗೆ ತನ್ನ ಪತ್ನಿಯಾಗುವಂತೆ ಒತ್ತಾಯ 219

256. ದ್ರೌಪದಿಯಿಂದ ಜಯದ್ರಥನ ನಿಂದನೆ. ಉತ್ತರೀಯವನ್ನು ಹಿಡಿದ ಅವನ ಅಧಃಪತನ. ದ್ರೌಪದಿಯಿಂದ ಸ್ವತಃ ರಥಾರೋಹಣ 225

257. ಬೇಟೆಗೆ ಹೊರಟ ಪಾಂಡವರಿಂದ ಅಪಶಕುನಗಳನ್ನು ಕಂಡು ಆಶ್ರಮಕ್ಕೆ ಪ್ರತಿನಿವೃತ್ತಿ. ದಾಸಿಯಿಂದ ದ್ರೌಪದಿಯ ವೃತ್ತಾಂತವನ್ನು ತಿಳಿದು ಜಯದ್ರಥನನ್ನು ಹಿಂಬಾಲಿಸಿ ಅವನ ದರ್ಶನ 235

258. ದ್ರೌಪದಿಯಿಂದ ಜಯದ್ರಥನಿಗೆ ಪಾಂಡವರ ಪರಿಚಯ 245

259. ಜಯದ್ರಥನ ಜೊತೆಯಲ್ಲಿ ಪಾಂಡವರ ಯುದ್ಧ. ದ್ರೌಪದಿಯನ್ನು ಬಿಟ್ಟು ಜಯದ್ರಥನ ಪಲಾಯನ. ಭೀಮಾರ್ಜುನರಿಂದ ಕಟೂಕ್ತಿಪೂರ್ವಕವಾಗಿ ಅವನ ಅನುಸರಣ. 253

260. ಭೀಮನಿಂದ ಜಯದ್ರಥನನ್ನು ಹಿಡಿದು ಪಾದಪ್ರಹಾರವನ್ನು ಮಾಡಿ ಅವನಿಗೆ ಪಂಚಚೂಡಾಕರಣ. ಯುಧಿಷ್ಠಿರನಿಂದ ಸೈಂಧವನ ವಿಮೋಚನೆ. ಸೈಂಧವನ ತಪಸ್ಸು ಮತ್ತು ರುದ್ರದೇವರಿಂದ ವರದಾನ. 268

261. ಯುಧಿಷ್ಠಿರನಿಂದ ಮಾರ್ಕಂಡೇಯರನ್ನು ಕುರಿತು ತನ್ನಂತಹ ದುಃಖವಿರುವವನು ಇನ್ನೊಬ್ಬನಿದ್ದಾನೆಯೇ ಎಂಬ ಪ್ರಶ್ನೆ. 286

262. ಮಾರ್ಕಂಡೇಯರಿಂದ ರಾಮಾದಿಗಳ ಉತ್ಪತ್ತಿ ಕಥನ ಮತ್ತು ರಾವಣನ ಉತ್ಪತ್ತಿಗೆ ಉಪೋದ್ಘಾತ ರೂಪವಾಗಿ ಕಥನ. 289

263. ವಿಶ್ರವಸ ಮುನಿಯಿಂದ ಮೂರುಪತ್ನಿಯರಲ್ಲಿ ರಾವಣಾದಿಗಳ ಉತ್ಪತ್ತಿ. ಬ್ರಹ್ಮದೇವರನ್ನು ಕುರಿತು ತಪಸ್ಸನ್ನು ಮಾಡಿ ಅವರ ಅನುಗ್ರಹದಿಂದ ಪುಷ್ಪಕವಿಮಾನವನ್ನು ಅಪಹರಿಸಿ ಕುಬೇರನನ್ನು ಲಂಕೆಯಿಂದ ಓಡಿಸಿ ಲಂಕೆಯಲ್ಲಿ ನಿವಾಸ. 293

264. ರಾವಣನ ಉಪದ್ರವಕ್ಕೆ ಒಳಗಾದ ದೇವತೆಗಳಿಂದ ಬ್ರಹ್ಮದೇವರಲ್ಲಿ ಮೊರೆ. ಬ್ರಹ್ಮದೇವರಿಂದ ರಾಮನಾಗಿ ಅವತಾರ ಮಾಡುವಂತೆ ವಿಷ್ಣುವಿನ ಪ್ರಾರ್ಥನೆ. ಕಪಿಗಳಾಗಿ ಅವತಾರ ಮಾಡಿ ರಾಮನ ಸಹಾಯವನ್ನು ಮಾಡುವಂತೆ ದೇವತೆಗಳಿಗೆ ಪ್ರೇರಣೆ. 302

265. ರಾಮನ ಪಟ್ಟಾಭಿಷೇಕದ ಸಿದ್ಧತೆ. ಮಂಥರೆಯ ಕುತಂತ್ರ. ರಾಮನ ವನಗಮನ. 306

266. ಲಕ್ಷ್ಮಣನಿಂದ ಶೂರ್ಪಣಖೆಯ ವಿರೂಪಕರಣ. ಖರದೂಷಣಾದಿ ಹನನ. ಕ್ರುದ್ಧನಾದ ರಾವಣನಿಂದ ಮಾರೀಚ ಸಮೀಪ ಪ್ರಾಪ್ತಿ. 316

267. ಮಾಯಾಮೃಗ ರೂಪವನ್ನು ಧರಿಸಿ ಮಾರೀಚನಿಂದ ಸೀತೆಯ ಪ್ರಲೋಭನ. ರಾಮನಿಂದ ಮಾರೀಚ ವಧೆ. ಈ ಮಧ್ಯದಲ್ಲಿ ರಾವಣನಿಂದ ಸೀತಾಪಹರಣ 319

268. ರಾವಣನಿಂದ ಜಟಾಯುವನ್ನು ಕೊಂದು ಲಂಕಾ ಪ್ರವೇಶ. ರಾಮನಿಂದ ಸೀತಾನ್ವೇಷಣೆ. ಕಬಂಧನ ಪ್ರಾಪ್ತಿ ಮತ್ತು ಅವನ ಮೋಚನೆ. ಪಂಪಾತಟದಲ್ಲಿ ಸುಗ್ರೀವನ ಸಖ್ಯವನ್ನು ಬೆಳೆಸಲು ಪ್ರಯಾಣ ಮಾಡಲು ಸೂಚನೆ. 328

269. ರಾಮ-ಸುಗ್ರೀವರ ಸಖ್ಯ. ವಾಲಿಯ ಹನನ.
ರಾವಣನಿಂದ ಅಶೋಕವನದಲ್ಲಿ ಸೀತೆಯ ಸ್ಥಾಪನೆ.
ರಾಕ್ಷಸಿಯರ ತರ್ಜನ ಮತ್ತು ತ್ರಿಜಟೆಯಿಂದ ಸೀತೆಯ ಸಾಂತ್ವನ 338

270. ರಾವಣನಿಂದ ಸೀತೆಯ ಪ್ರಲೋಭನೆ ಮತ್ತು ಸೀತೆಯ ನಿರಾಕರಣೆ 353

271. ರಾಮನಿಂದ ಲಕ್ಷ್ಮಣನ ಮೂಲಕ ಸುಗ್ರೀವನಿಗೆ ಎಚ್ಚರಿಕೆಯ ಮಾತುಗಳು.
ಸುಗ್ರೀವನಿಂದ ಕಪಿಗಳ ಪ್ರೇಷಣ. ಹನುಮಂತನಿಂದ ಅಶೋಕವನದಲ್ಲಿ
ಸೀತೆಯನ್ನು ಕಂಡು ರಾಮನಿಗೆ ಅವಳ ಚೂಡಾಮಣಿಯ ಪ್ರದಾನ. 360

272. ವಾನರ ಸೈನ್ಯದ ಜೊತೆಯಲ್ಲಿ ಸಮುದ್ರದಡಕ್ಕೆ ಪ್ರಯಾಣ. ರಾಮನಿಂದ
ವ್ರತರೂಪವಾಗಿ ದರ್ಭೆಯಲ್ಲಿ ಶಯನ. ಸಮುದ್ರರಾಜನಿಂದ ನಳನಿಂದ
ಸೇತುವೆಯನ್ನು ನಿರ್ಮಾಣ ಮಾಡಿಸುವಂತೆ ಪ್ರೇರಣೆ. ವಿಭೀಷಣನ ಸ್ವೀಕಾರ 374

273. ಅಂಗದನಿಂದ ರಾವಣನಿಗೆ ರಾಮಸಂದೇಶವನ್ನು ತಲುಪಿಸಿ ಪ್ರತಿನಿವೃತ್ತಿ.
ಯುದ್ಧಪ್ರಾರಂಭ. ರಾಮನಿಂದ ಸೈನ್ಯಾಪಹಾರ 386

274. ರಾವಣ ಇಂದ್ರಜಿತುಗಳ ಜೊತೆಯಲ್ಲಿ ರಾಮ-ಲಕ್ಷ್ಮಣರ ದ್ವಂದ್ವಯುದ್ಧ 394

275. ಹನುಮಂತ ಮತ್ತು ವಿಭೀಷಣರಿಂದ ಧೂಮ್ರಾಕ್ಷ ಮತ್ತು ಪ್ರಹಸ್ತನ ವಧೆ.
ಕುಂಭಕರ್ಣನ ಯುದ್ಧಭೂಮಿ ಪ್ರವೇಶ 398

276. ಲಕ್ಷ್ಮಣನಿಂದ ಅತಿಕಾಯನ ವಧೆ ಮತ್ತು ಹನುಮಂತ ಮತ್ತು ಅನಿಲರಿಂದ
ವಜ್ರವೇಗ ಮತ್ತು ಪ್ರಮಾತಿಗಳ ವಧೆ 404

277. ಲಕ್ಷ್ಮಣ-ಇಂದ್ರಜಿತುಗಳ ಯುದ್ಧ. ಇಂದ್ರಜಿತುವಿನಿಂದ ಮಾಯಾಶ್ರಯಣ.
ಅಲ್ಲಿಗೆ ರಾಮನ ಆಗಮನ 410

278. ರಾಮಲಕ್ಷ್ಮಣರ ಮೂರ್ಛೆ. ವಿಭೀಷಣನಿಂದ ಪ್ರಜ್ಞಾನಾಸ್ತ್ರಪ್ರಯೋಗದಿಂದ
ಅದರ ನಿವೃತ್ತಿ. ಸುಗ್ರೀವನಿಂದ ಅವರ ವಿಶಲ್ಲೀಕರಣ. ಕುಬೇರನು ಕಳುಹಿಸಿದ
ಜಲದಿಂದ ರಾಮಾದಿಗಳಿಗೆ ಅತೀಂದ್ರಿಯ ದರ್ಶನ ಶಕ್ತಿ. ಲಕ್ಷ್ಮಣನಿಂದ
ಇಂದ್ರಜಿತುವಿನ ವಧೆ. ಸೀತೆಯನ್ನು ಕೊಲ್ಲಲು ಉದ್ಯುಕ್ತನಾದ
ರಾವಣನಿಗೆ ವೃದ್ಧಾಮಾತ್ಯನಾದ ಅವಿಂಧ್ಯನಿಂದ ಪ್ರತಿನಿವರ್ತನ 416

279. ರಣಭೂಮಿಗೆ ರಾವಣನ ಆಗಮನ. ಇಂದ್ರನಿಂದ ರಾಮನಿಗೆ
ಮಾತಲಿಸಹಿತವಾಗಿ ರಥಪ್ರೇಷಣ. ಬ್ರಹ್ಮಾಸ್ತ್ರದಿಂದ ರಾವಣನ ಹನನ 423

280. ಅವಿಂಧ್ಯನಿಂದ ರಾಮನ ಬಳಿಗೆ ಸೀತೆಯ ಆನಯನ. ಸೀತೆಯ ಅಗ್ನಿಪರೀಕ್ಷೆ. ಸೀತಾಲಕ್ಷ್ಮಣ ಸಹಿತನಾದ ರಾಮನಿಂದ ಅಯೋಧ್ಯೆಗೆ ಆಗಮನ. ರಾಮನ ಪಟ್ಟಾಭಿಷೇಕ. ಎಲ್ಲರ ಸನ್ಮಾನ ಮತ್ತು ರಾಮನ ಪ್ರಜಾಪಾಲನ 430

281. ಮಾರ್ಕಂಡೇಯರಿಂದ ಯುಧಿಷ್ಠಿರನಿಗೆ ಸಮಾಧಾನ ವಚನಗಳು 445

282. ಮಾರ್ಕಂಡೇಯರಿಂದ ಯುಧಿಷ್ಠಿರನನ್ನು ಕುರಿತು ಸಾವಿತ್ರ್ಯುಪಾಖ್ಯಾನ ಪ್ರಾರಂಭ. ಗಾಯತ್ರಿಯ ಅನುಗ್ರಹದಿಂದ ಅಶ್ವಪತಿರಾಜನಿಗೆ ಕನ್ಯಾರತ್ನ ಜನನ. ವರಾನ್ವೇಷಣೆಗಾಗಿ ಮಂತ್ರಿಗಳ ಜೊತೆಯಲ್ಲಿ ಸಾವಿತ್ರಿಯ ಪ್ರಯಾಣ 448

283. ದ್ಯುಮತ್ಸೇನನ ಪುತ್ರನಾದ ಸತ್ಯವಂತನನ್ನು ಮನಸಾ ವರಿಸಿ ಸಾವಿತ್ರಿಯ ಹಿಂದಿರುಗುವಿಕೆ. ನಾರದರ ಸಮಾಗಮ. ನಾರದರಿಂದ ವರನ ಅಲ್ಪಾಯುಸ್ಸನ್ನು ತಿಳಿದರೂ ಅವನನ್ನೇ ವರಿಸುವುದಾಗಿ ಸಾವಿತ್ರಿಯ ಆಗ್ರಹ 457

284. ಅಶ್ವಪತಿಯಿಂದ ದ್ಯುಮತ್ಸೇನನ ಆಶ್ರಮದಲ್ಲಿ ಸತ್ಯವಂತನಿಗೆ ಕನ್ಯಾಪ್ರದಾನ. ಅನಂತರ ತನ್ನ ನಗರಕ್ಕೆ ಹಿಂದಿರುಗುವಿಕೆ 464

285. ನಾರದರು ಹೇಳಿದ ಪತಿಯ ಮರಣದ ದಿವಸದಲ್ಲಿ ಸಾವಿತ್ರಿಯಿಂದ ಪತಿಯ ಜೊತೆಯಲ್ಲಿ ವನಗಮನ 470

286. ಸತ್ಯವಂತನ ಜೊತೆಯಲ್ಲಿ ಸಾವಿತ್ರಿಯ ವನಗಮನ. ಮರವನ್ನು ಕಡಿದು ಸತ್ಯವಂತನಿಗೆ ಆಯಾಸ. ಯಮನ ಆಗಮನ. ಯಮ ಸಾವಿತ್ರಿಯ ಸಂವಾದ. ಯಮನಿಂದ ಸತ್ಯವಂತನಿಗೆ ಪುನಃ ಪ್ರಾಣದಾನ 477

287. ಸತ್ಯವಂತನನ್ನು ಪಾಶದಿಂದ ಬಿಡುಗಡೆ ಮಾಡಿದ ಯಮನ ಪ್ರಯಾಣ. ಸಾವಿತ್ರೀ ಮತ್ತು ಸತ್ಯವಂತನ ಸಂವಾದ 492

288. ಸಾವಿತ್ರಿ ಮತ್ತು ಸತ್ಯವಂತರಿಂದ ಪುನಃ ಆಶ್ರಮದ ಕಡೆಗೆ ಪ್ರಯಾಣ 502

289. ಪುತ್ರನನ್ನು ಕಾಣದೆ ಭಾರ್ಯಾಸಹಿತನಾದ ದ್ಯುಮತ್ಸೇನನ ವಿಲಾಪ. ಋಷಿಗಳಿಂದ ಮತ್ತು ಬ್ರಾಹ್ಮಣರಿಂದ ಅವನಿಗೆ ಸಮಾಧಾನ. ಸಾವಿತ್ರಿ ಮತ್ತು ಸತ್ಯವಂತರ ಆಗಮನ ಮತ್ತು ಅವರ ಜೊತೆಯಲ್ಲಿ ಸಂವಾದ 505

290. ದ್ಯುಮತ್ಸೇನನಿಗೆ ಸ್ವರಾಜ್ಯಪ್ರಾಪ್ತಿ ಮತ್ತು ಸತ್ಯವಂತನಿಗೆ ಪಟ್ಟಾಭಿಷೇಕ 516

291. ಕರ್ಣನ ಸ್ವಪ್ನದಲ್ಲಿ ಸೂರ್ಯನಿಂದ ಬ್ರಾಹ್ಮಣವೇಷಧಾರಿಯಾದ ಇಂದ್ರನಿಗೆ ಕವಚ ಕುಂಡಲಗಳನ್ನು ಕೊಡದಂತೆ ಪ್ರತಿಷೇಧ. ಕರ್ಣನಿಂದ ಸೂರ್ಯನ ಒತ್ತಾಯದ ನಿರಾಕರಣೆ 521

292. ಸೂರ್ಯನಿಂದ ಪುನಃ ಕರ್ಣನಿಗೆ ಕವಚ ಕುಂಡಲಗಳನ್ನು ಕೊಡದಿರುವಂತೆ ಒತ್ತಾಯ 529

293. ಕವಚಕುಂಡಲಗಳನ್ನು ಕೊಡುವುದಾದರೆ ಇಂದ್ರನಿಂದ ಶಕ್ತ್ಯಾಯುಧವನ್ನು ಪಡೆದು ಅವುಗಳನನ್ನು ಕೊಡಬೇಕೆಂದು ಕರ್ಣನಿಗೆ ಸೂರ್ಯನ ಒತ್ತಾಯ ಮತ್ತು ಅದಕ್ಕೆ ಕರ್ಣನ ಒಪ್ಪಿಗೆ 534

294. ಕುಂತಿಭೋಜನ ಅರಮನೆಗೆ ದುರ್ವಾಸರ ಆಗಮನ ಮತ್ತು ನಿವಾಸ. ಕುಂತಿಭೋಜನಿಂದ ಅವರ ಸೇವೆಗೆ ಕುಂತಿಯ ನಿಯೋಜನೆ 539

295. ಕುಂತಿಯ ಆಶ್ವಾಸನೆ ಮತ್ತು ಕುಂತಿಭೋಜನ ಅರಮನೆಯಲ್ಲಿ ದುರ್ವಾಸರ ನಿವಾಸಕ್ಕಾಗಿ ಸರ್ವ ವ್ಯವಸ್ಥೆ 546

296. ಕುಂತಿಯ ಸೇವೆಯಿಂದ ಸಂತುಷ್ಟರಾದ ದುರ್ವಾಸರಿಂದ ಅವಳಿಗೆ ಮಂತ್ರೋಪದೇಶ. ಕುಂತಿಭೋಜನ ಜೊತೆಯಲ್ಲಿ ಮಾತನಾಡಿ ಅಂತರ್ಧಾನ 551

297. ಕುಂತಿಯಿಂದ ದುರ್ವಾಸರ ಮಂತ್ರದ ಪರೀಕ್ಷೆ. ಸೂರ್ಯನ ಆಗಮನ ಮತ್ತು ಕುಂತಿ- ಸೂರ್ಯರ ಸಂವಾದ 556

298. ಸೂರ್ಯ-ಕುಂತೀ ಸಮಾಗಮ. ಸೂರ್ಯನಿಂದ ಕುಂತಿಯಲ್ಲಿ ಗರ್ಭಾಧಾನ 563

299. ಕರ್ಣನ ಜನನ ಮತ್ತು ಕುಂತಿಯಿಂದ ಅವನ ಪರಿತ್ಯಾಗ 569

300. ಅಧಿರಥನಿಂದ ಶಿಶುರೂಪ ಕರ್ಣ ಪ್ರಾಪ್ತಿ. ರಾಧೆಯಿಂದ ಪಾಲನೆ. ಪರಶುರಾಮಾದಿಗಳಲ್ಲಿ ಅವನ ಅಸ್ತ್ರಾಭ್ಯಾಸ. ದುರ್ಯೋಧನ ಸಖ್ಯ ಮತ್ತು ದೇವೇಂದ್ರನ ಆಗಮನ 575

301. ಬ್ರಾಹ್ಮಣ ರೂಪದ ಇಂದ್ರನಿಂದ ಕವಚಕುಂಡಲಗಳ ಯಾಚನೆ. ಶಕ್ತ್ಯಾಯುಧವನ್ನು ಕೊಟ್ಟು ಕವಚ-ಕುಂಡಲಗಳ ಸ್ವೀಕಾರ 582

302. ಯುಧಿಷ್ಠಿರಾದಿಗಳಿಂದ ದ್ವೈತವನಕ್ಕೆ ಆಗಮನ ಮೃಗದಿಂದ ಬ್ರಾಹ್ಮಣನ ಅರಣಿಯ ಅಪಹರಣ. ಪಾಂಡವರ ಅನುಧಾವನ ಮತ್ತು ವಟಮೂಲದಲ್ಲಿ ಉಪವೇಶನ 597

303. ಧರ್ಮರಾಜನ ಆದೇಶದಂತೆ ನಕುಲನಿಂದ ಸರೋವರ ದರ್ಶನ. ಯಕ್ಷನ ಆದೇಶವನ್ನು ತಿರಸ್ಕರಿಸಿ ನಕುಲ-ಸಹದೇವ ಅರ್ಜುನ-ಭೀಮರ ದೀರ್ಘನಿದ್ರಾಪ್ರಾಪ್ತಿ. ಯುಧಿಷ್ಠಿರನಿಂದ ಸರೋವರ ಗಮನ 602

304. ಯುಧಿಷ್ಠಿರನ ವಿಲಾಪ. ಯುಧಿಷ್ಠಿರ-ಯಕ್ಷ ಸಂವಾದ
ನಕುಲಾದಿಗಳ ಉತ್ಥಾನ 614

305. ಯಕ್ಷನಿಂದ ಯುಧಿಷ್ಠಿರನಿಗೆ ತನ್ನ ಸ್ವರೂಪ ಪರಿಚಯ ಮತ್ತು ವರದಾನ 647

306. ಅಜ್ಞಾತವಾಸವನ್ನು ಚಿಂತಿಸಿ ಶೋಕಪರನಾದ ಧರ್ಮರಾಜನಿಗೆ
ಧೌಮ್ಯರಿಂದ ಸಮಾಶ್ವಾಸನೆ. ಪಾಂಡವರಿಂದ ಒಂದುಕಡೆಯಲ್ಲಿ
ಕುಳಿತು ಅಜ್ಞಾತವಾಸಕ್ಕಾಗಿ ಮಂತ್ರಾಲೋಚನೆ 654

ಪರಿಶಿಷ್ಟ-೧ 662

ಪರಿಶಿಷ್ಟ-೨ 664

—0—

ದ್ರೌಪದೀಸತ್ಯಭಾಮಾಸಂವಾದಪರ್ವ

ಮಹಾಭಾರತ ತಾತ್ಪರ್ಯನಿರ್ಣಯ -೨೨ ಅಧ್ಯಾಯ

ತತೋಽಮಿತೌಜಾ ಭಗವಾನುಪಾಗಮ-
ನ್ನಾರಾಯಣಃ ಸತ್ಯಭಾಮಾಸಹಾಯಃ ।
ಸಂಪೂಜಿತಃ ಪಾಂಡವೈಸ್ತೈಃ ಸಮೇತ-
ಶ್ಚಕ್ರೇಽಥ ಸೌಹಾರ್ದನಿಮಿತ್ತಸತ್ಕಥಾಃ ॥೩೫೮॥

ಬಳಿಕ ಸರ್ವಶಕ್ತನಾದ ಭಗವಾನ್ ಶ್ರೀಕೃಷ್ಣ ಸತ್ಯಭಾಮಾಸಮೇತನಾಗಿ ಅಲ್ಲಿಗೆ ಬಂದು ಪಾಂಡವರಿಂದ ಪೂಜಿತನಾಗಿ ಅವರೊಂದಿಗೆ ಸೌಹಾರ್ದದಿಂದ ವಿನೋದದ ಮಾತುಕತೆಗಳನ್ನಾಡಿದ.

ಕೃಷ್ಣಾ ಚ ಸತ್ಯಾ ಚ ಪರಸ್ಪರಂ ಮುದಾ
ಸಂಭಾಷಣಂ ಚಕರುತರ್ಯೋಷಿದಗ್ರ್ಯೇ ।
ಪರೀಕ್ಷಯಂತ್ಯಾ ಸತ್ಯಯಾ ಸರ್ವವೇತ್ತ್ರ್ಯಾ
ನಿರ್ದೋಷಯಾ ಚೋದಿತಾ ಪ್ರಾಹ ಕೃಷ್ಣಾ ॥೩೫೯॥

ಸ್ತ್ರೀಧರ್ಮಾನಖಿಲಾಂಸ್ತತ್ರ ಸತ್ಯಾಂ ನಿರ್ದೋಷಸಂವಿದಮ್ ।
ಜ್ಞಾತ್ವಾಽಪಿ ಕೃಷ್ಣಾ ಪ್ರೋವಾಚ ಲೋಕಶಿಕ್ಷಾರ್ಥಮೇವ ತು ॥೩೬೦॥

ಸ್ತ್ರೀಯರಲ್ಲಿ ಉತ್ತಮರಾದ ದ್ರೌಪದಿಯೂ ಸತ್ಯಭಾಮೆಯೂ ಪರಸ್ಪರ ಸಂಭಾಷಣೆಗೈದರು. ಸರ್ವಜ್ಞಳಾದ ನಿರ್ದೋಷಳಾದ ಸತ್ಯಭಾಮೆ ದ್ರೌಪದಿಯ ಧರ್ಮ ಕೌಶಲವನ್ನು ವಿನೋದಕ್ಕಾಗಿ ಪರೀಕ್ಷಿಸುತ್ತ ಪ್ರಶ್ನಿಸಿದಾಗ ದ್ರೌಪದಿ ಎಲ್ಲ ಸ್ತ್ರೀಧರ್ಮಗಳನ್ನೂ ಹೇಳಿದಳು. ಸತ್ಯಭಾಮೆ ನಿರ್ದುಷ್ಟ ಜ್ಞಾನವುಳ್ಳವಳೆಂದು ತಿಳಿದೂ ಕೂಡ ದ್ರೌಪದಿ ಲೋಕಶಿಕ್ಷಾರ್ಥವಾಗಿ ಅವಳಿಗೆ ಎಲ್ಲ ಸ್ತ್ರೀಧರ್ಮಗಳನ್ನೂ ಉಪದೇಶಿಸಿದಳು.

ಕ್ರೀಡಾರ್ಥಮೇವ ವಚನಂ ಜ್ಞಾತ್ವಾ ಸತ್ಯಾಸಮೀರಿತಮ್ ।
ತಸ್ಯಾನುಸಾರಿವಾಕ್ಯಾನಿ ತತ್‌ಪ್ರೀತ್ಯಾ ಏವ ಸಾऽಬ್ರವೀತ್ ॥೩೬೧॥

ಸತ್ಯಭಾಮೆ ಹೇಳಿದ ಮಾತು ವಿನೋದಕ್ಕಾಗಿಯೇ ಹೇಳಿದ್ದೆಂದು ತಿಳಿದು ಅದಕ್ಕೆ ಅನುಸಾರವಾದ ಮಾತುಗಳನ್ನೇ , ಅವಳಿಗೆ ಪ್ರೀತಿಯಾಗಲೆಂದೇ, ದ್ರೌಪದಿ ಆಡಿದಳು.

★ ★ ★ ★

ಇನ್ನೂರ ಇಪ್ಪತ್ತೆರಡನೆಯ ಅಧ್ಯಾಯ

ಸತ್ಯಭಾಮಾ ದ್ರೌಪದಿಯರ ಸಂವಾದ. ದ್ರೌಪದಿಯಿಂದ ಪತಿವ್ರತಾಧರ್ಮಕಥನ.

ವೈಶಂಪಾಯನಃ

ಉಪಾಸೀನೇಷು ವಿಪ್ರೇಷು ಪಾಂಡವೇಷು ಮಹಾತ್ಮಸು ।
ದ್ರೌಪದೀ ಸತ್ಯಭಾಮಾ ಚ ವಿವಿಶಾತೇ ತದಾ ಸಮಮ್ ॥೧॥

ವೈಶಂಪಾಯನ– ಮಹಾತ್ಮರಾದ ಪಾಂಡವರು ಮತ್ತು ಬ್ರಾಹ್ಮಣರು ಕೃಷ್ಣನ ಬಳಿ ಕುಳಿತಿರುವಾಗ ದ್ರೌಪದಿ ಮತ್ತು ಸತ್ಯಭಾಮೆಯರು ಒಟ್ಟಿಗೆ ಆಶ್ರಮವನ್ನು ಪ್ರವೇಶಿಸಿದರು.

ಪ್ರವಿಶ್ಯ ಚಾಶ್ರಮಂ ರಮ್ಯಮುಭೇ ತೇ ಪರಮಸ್ತ್ರಿಯೌ ।
ಜಹಾಸ್ಯಮಾನೇ ಸುಪ್ರೀತೇ ಸುಖಂ ತತ್ರ ನ್ಯಷೀದತಾಮ್ ॥೨॥

ಆ ಇಬ್ಬರು ಶ್ರೇಷ್ಠ ಸ್ತ್ರೀಯರು ರಮ್ಯವಾಗಿದ್ದ ಆಶ್ರಮವನ್ನು ಪ್ರವೇಶಿಸಿ ಸುಪ್ರೀತರಾಗಿ ನಗುತ್ತಾ ಅಲ್ಲಿ ಸುಖವಾಗಿ ಕುಳಿತುಕೊಂಡರು.

ಚಿರಸ್ಯ ದೃಷ್ಟ್ವಾ ರಾಜೇಂದ್ರ ತೇಽನ್ಯೋನ್ಯಸ್ಯ ಪ್ರಿಯಂವದೇ ।
ಕಥಯಾಮಾಸತುಶ್ಚಿತ್ರಾಃ ಕಥಾಃ ಕುರುಯದೂತ್ಥಿತಾಃ ॥೩॥

ಎಲೈ ರಾಜೇಂದ್ರನೇ, ಪರಸ್ಪರವಾಗಿ ಪ್ರಿಯವನ್ನು ಮಾತನಾಡುವ ಅವರಿಬ್ಬರೂ ಒಬ್ಬರನ್ನೊಬ್ಬರು ಬಹಳಕಾಲದ ಮೇಲೆ ನೋಡಿ ಕುರುವಂಶ ಮತ್ತು ಯದುವಂಶಕ್ಕೆ ಸಂಬಂಧಪಟ್ಟ ಅನೇಕ ವಿಷಯಗಳ ಬಗ್ಗೆ ಮಾತನಾಡಿದರು.

ಅಥಾಬ್ರವೀತ್ ಸತ್ಯಭಾಮಾ ಕೃಷ್ಣಸ್ಯ ಮಹಿಷೀ ಪ್ರಿಯಾ ।
ಸಾತ್ರಾಜಿತೀ ಯಾಜ್ಞಸೇನೀಂ ರಹಸೀದಂ ಸುಮಧ್ಯಮಾ ॥೪॥

ಅನಂತರ ಸತ್ರಾಜಿತನ ಮಗಳಾದ ಕೃಷ್ಣನ ಪ್ರಿಯಮಹಿಷಿಯಾದ ಸುಂದರಿಯಾದ ಸತ್ಯಭಾಮೆಯು ಏಕಾಂತದಲ್ಲಿ ಯಜ್ಞಸೇನನ ಮಗಳಾದ ದ್ರೌಪದಿಯನ್ನು ಕುರಿತು ಹೀಗೆ ಮಾತನಾಡಿದಳು.

ಕೇನ ದ್ರೌಪದಿ ವೃತ್ತೇನ ಪಾಂಡವಾನಧಿತಿಷ್ಠಸಿ ।
ಲೋಕಪಾಲೋಪಮಾನ್ ವೀರಾನ್ ಪುನಃ ಪರಮಸಮ್ಮತಾನ್ ॥೫॥

ದ್ರೌಪದಿಯೇ, ಲೋಕಪಾಲಕರಿಗೆ ಸದೃಶರಾದ ಮತ್ತು ಪರಮಸಮ್ಮತರಾದ ಪಾಂಡವರನ್ನು ನೀನು ಯಾವ ನಡತೆಯಿಂದ ವಶಪಡಿಸಿಕೊಂಡಿದ್ದೀಯೆ?

ಕಥಂ ಚ ವಶಗಾಸ್ತುಭ್ಯಂ ನ ಕುಪ್ಯಂತಿ ಚ ತೇ ಶುಭೇ
ತವ ವಶ್ಯಾ ಹಿ ಸತತಂ ಪಾಂಡವಾಃ ಪ್ರಿಯದರ್ಶನೇ ॥೬॥

ಅವರು ಹೇಗೆ ನಿನ್ನ ವಶವಾಗಿದ್ದಾರೆ? ಶುಭಸ್ವರೂಪಳೇ, ಅವರು ನಿನ್ನ ಮೇಲೆ ಕೋಪಗೊಳ್ಳುವುದಿಲ್ಲ. ಪ್ರಿಯದರ್ಶನೆಯೇ, ಪಾಂಡವರು ಸತತವಾಗಿ ನಿನಗೆ ವಶವಾಗಿದ್ದಾರಷ್ಟೆ?

ನ ಚಾನ್ಯೋನ್ಯಮಾಸಾಯಂತೇ ಕಥಂ ವಾ ತೇ ಸುಮಧ್ಯಮೇ ।
ಮುಖಪ್ರೇಕ್ಷಾಶ್ಚ ತೇ ಸರ್ವೇ ತತ್ತ್ವಮೇತದ್ ಬ್ರವೀಹಿ ಮೇ ॥೭॥

ಸುಂದರಿಯೇ, ಅವರು ಪರಸ್ಪರವಾಗಿ ಅಸೂಯೆಯನ್ನು ಪಡುವುದಿಲ್ಲ. ಅವರೆಲ್ಲರೂ ನಿನ್ನ ಮುಖವನ್ನೇ ನೋಡಿಕೊಂಡಿರುತ್ತಾರೆ (ನೀನು ಹೇಳಿದಂತೆ ಕೇಳುತ್ತಾರೆ). ಇದರ ರಹಸ್ಯವನ್ನು ನನಗೆ ತಿಳಿಸು.

ವ್ರತಚರ್ಯಾ ತಪೋ ವಾಪಿ ಸ್ನಾನಮಂತ್ರೌಷಧಾನಿ ವಾ ।
ವಿದ್ಯಾವೀರ್ಯಂ ಮೂಲವೀರ್ಯಂ ಜಪಹೋಮಾಗದಾಸ್ತಥಾ ॥೮॥

ಮಮಾದ್ಯಾಚಕ್ಷ್ವ ಪಾಂಚಾಲಿ ಯಶಸ್ಯಂ ಭಗದೈವತಮ್ ।
ಯೇನ ಕೃಷ್ಣೇ ಭವೇನ್ನಿತ್ಯಂ ಮಮ ಕೃಷ್ಣೋ ವಶಾನುಗಃ ॥೯॥

ಪಾಂಚಾಲಿಯೇ, ವ್ರತಚರ್ಯ ಅಥವಾ ತಪಸ್ಸು ಅಥವಾ ಸ್ನಾನಮಂತ್ರೌಷಧಿಗಳು ಅಥವಾ ವಿದ್ಯಾಸಾಮರ್ಥ್ಯ ಅಥವಾ ಮೂಲಿಕೆಗಳ ಸಾಮರ್ಥ್ಯ, ಜಪಹೋಮ ಔಷಧಿಗಳು ಇವುಗಳಲ್ಲಿ ಯಾವುದನ್ನು ಮಾಡಿದರೆ ಕೃಷ್ಣನು ಯಾವಾಗಲೂ ನನಗೆ ವಶನಾಗುತ್ತಾನೆ? ಎಲೌ ಕೃಷ್ಣೆಯೇ, ಅಂತಹ ಯಶಸ್ಸಿಗೆ ಮತ್ತು ಸೌಭಾಗ್ಯಕ್ಕೆ ಕಾರಣವಾದ ಉಪಾಯವನ್ನು ನನಗೆ ಈ ದಿನ ಹೇಳು.

ವೈಶಂಪಾಯನಃ

ಏವಮುಕ್ತಾ ಸತ್ಯಭಾಮಾ ವಿರರಾಮ ಯಶಸ್ವಿನೀ ।
ಪತಿವ್ರತಾ ಮಹಾಭಾಗಾ ದ್ರೌಪದೀ ಪ್ರತ್ಯುವಾಚ ತಾಮ್ ॥೧೦॥

ವೈಶಂಪಾಯನ– ಹೀಗೆ ಹೇಳಿ ಯಶಸ್ವಿನಿಯಾದ ಸತ್ಯಭಾಮೆಯು ಸುಮ್ಮನಾದನು. ಪತಿವ್ರತೆಯೂ ಮಹಾನುಭಾವಳೂ ಆದ ದ್ರೌಪದಿಯು ಅವಳಿಗೆ ಉತ್ತರವನ್ನು ಕೊಟ್ಟಳು.

ದ್ರೌಪದೀ

ಅಸತ್‌ಸ್ತ್ರೀಣಾಂ ಸಮಾಚಾರಂ ಸತ್ಯೇ ಮಾಮನುಪೃಚ್ಛಸಿ ।
ಅಸದಾಚರಿತೇ ಮಾರ್ಗೇ ಕಥಂ ಸ್ಯಾದನುಕೀರ್ತನಮ್ ॥೧೧॥

ದ್ರೌಪದಿ– ಸತ್ಯಭಾಮೆಯೇ, ದುಷ್ಟಸ್ತ್ರೀಯರ ಸಮಾಚಾರವನ್ನು ನನ್ನನ್ನು ಕುರಿತು ಕೇಳುತ್ತಿದ್ದೀಯೆ. ದುಷ್ಟರು ನಡೆಯುವ ಮಾರ್ಗವನ್ನು ನಾವು ಮಾತನಾಡುವುದಾದರೂ ಹೇಗೆ?

ಅನುಪ್ರಶ್ನಃ ಸಂಶಯೋ ವಾ ನೈತತ್ ತ್ವಯ್ಯುಪಪದ್ಯತೇ ।
ತಥಾ ಹ್ಯುಪೇತಾ ಬುದ್ಧ್ಯಾ ತ್ವಂ ಕೃಷ್ಣಸ್ಯ ಮಹಿಷೀ ಪ್ರಿಯಾ ॥೧೨॥

ಇನ್ನು ಈ ಪ್ರಶ್ನೆಯನ್ನು ಸಂಶಯದಿಂದಾಗಲೀ ಅಥವಾ ಅಜ್ಞಾನದಿಂದಲಾಗಲೀ ಮಾಡಿರುವೆ ಎಂದು ತಿಳಿಯಲು ಸಾಧ್ಯವಿಲ್ಲ. ಏಕೆಂದರೆ ನೀನು ಕೃಷ್ಣನಿಗೆ ಪ್ರಿಯಳಾದ ಮಹಿಷಿ ಮತ್ತು ಯಾವಾಗಲೂ ಅಂತಹ ಸದ್ಬುದ್ಧಿಯಿಂದ ಕೂಡಿದವಳು.

ಯದೈವ ಭರ್ತಾ ಜಾನೀಯಾನ್ ಮಂತ್ರಮೂಲಪರಾಂ ಸ್ತ್ರಿಯಮ್ ।
ಉದ್ವಿಜೇತ ತದೈವಾಸ್ಯಾಃ ಸರ್ಪಾದ್ ವೇಶ್ಮಗತಾದಿವ ॥೧೩॥

ಯಾವಾಗ ಪತಿಯು ತನ್ನ ಪತ್ನಿಯು ಮಂತ್ರಗಳನ್ನು ಮತ್ತು ಮೂಲಿಕೆಗಳನ್ನು ಆಶ್ರಯಿಸುತ್ತಿದ್ದಾಳೆ ಎಂದು ತಿಳಿಯುವನೋ ಆಗ ಮನೆಯಲ್ಲಿ ಪ್ರವೇಶಿಸಿದ ಸರ್ಪಕ್ಕೆ ಹೆದರುವಂತೆ ಪತಿಯು ಅವಳಿಗೆ ಹೆದರುತ್ತಾನೆ.

ಉದ್ವಿಗ್ನಸ್ಯ ಕುತಃ ಶಾಂತಿರಶಾಂತಸ್ಯ ಕುತಃ ಸುಖಮ್ ।
ನ ಜಾತು ವಶಗೋ ಭರ್ತಾ ಸ್ತ್ರಿಯಾಃ ಸ್ಯಾನ್ಮಂತ್ರಕರ್ಮಣಾ ॥೧೪॥

ಭೀತನಾದವನಿಗೆ ಎಲ್ಲಿಯ ಶಾಂತಿ? ಶಾಂತಿಯಿಲ್ಲದವನಿಗೆ ಎಲ್ಲಿಯ ಸುಖ? ಹೆಂಗಸಿನ ಮಂತ್ರಕರ್ಮಗಳಿಂದ ಎಂದೂ ಪತಿಯು ವಶನಾಗುವುದಿಲ್ಲ.

ಅಮಿತ್ರಪ್ರಹಿತಾಂಶ್ಚಪಿ ಗದಾನ್ ಪರಮದಾರುಣಾನ್ ।
ಮೂಲವಾದೈರ್ಹಿ ವಿಷಂ ಪ್ರಯಚ್ಛಂತಿ ಜಿಘಾಂಸವಃ ॥೧೫॥

ಪತಿಯನ್ನೇ ಕೊಲ್ಲಲು ಬಯಸುವ ದುಷ್ಟಸ್ತ್ರೀಯರು ಪತಿಯ ವಿರೋಧಿಗಳಿಂದ ಕಳುಹಿಸಲ್ಪಟ್ಟ ಪರಮದಾರುಣವಾದ ವ್ಯಾಧಿಗಳನ್ನು ತರುವ ವಿಷವನ್ನು ಇದು ಒಳ್ಳೆಯ ಮೂಲಿಕೆ ಎಂಬ ಮಾತುಗಳಿಂದ ಪತಿಗೆ ನೀಡುತ್ತಾರೆ.

ಜಿಹ್ವಯಾ ಯಾನಿ ಪುರುಷಸ್ತ್ವಚಾ ವಾಽಪ್ಯುಪಸೇವತೇ ।
ತಾನಿ ಚೂರ್ಣಾನಿ ದತ್ತಾನಿ ಹನ್ಯುಃ ಕ್ಷಿಪ್ರಮಸಂಶಯಮ್

ಪುರುಷನು ಯಾವುದನ್ನು ನಾಲಿಗೆಯಿಂದ ಸೇವಿಸುತ್ತಾನೋ ಅಥವಾ ಚರ್ಮದ ಮೇಲೆ ಲೇಪಿಸುತ್ತಾನೆಯೋ ಅಲ್ಲಿ ದುಷ್ಟ ಚೂರಣವನ್ನು ಕೊಟ್ಟರೆ ಅದು ನಿಸ್ಸಂಶಯವಾಗಿ ಅವನನ್ನು ಕೊಲ್ಲುತ್ತದೆ.

ಜಲೋದರಸಮಾಯುಕ್ತಾಃ ಶಿತ್ರಿಣಃ ಪಲಿತಾಸ್ತಥಾ ।
ಅಪುಂಭಿಃ ಸತೃತಾ ಸ್ತ್ರೀಭಿಃ ಜಡಾಂಧಬಧಿರಾಸ್ತಥಾ ॥೧೭॥

ಜಲೋದರದಿಂದ ಕೂಡಿದ, ಶಿತ್ರದಿಂದ ಕೂಡಿದ ಮತ್ತು ನೆರೆತ ಪತಿಗಳನ್ನು ಸ್ತ್ರೀಯರು ನಪುಂಸಕರಿಗೆ ಮತ್ತು ಜಡಾಂಧಬಧಿರರಿಗೆ ಸಮಾನವಾಗಿ ಕಾಣುತ್ತಾರೆ.

ಪಾಪಾನುಗಾಸ್ತು ಪಾಪಾಸ್ತಾಃ ಪತೀನುಪಸೃಜಂತ್ಯುತ ।
ನ ಜಾತು ವಿಪ್ರಿಯಂ ಭರ್ತುಃ ಸ್ತ್ರಿಯಾ ಕಾರ್ಯಂ ಕಥಂಚನ ॥೧೮॥

ಪಾಪಿಷ್ಠರಾದ ಸ್ತ್ರೀಯರನ್ನು ಅನುಸರಿಸುವ ಅವರು ತಮ್ಮ ಪತಿಗಳಿಗೆ ವಿರೋಧವನ್ನು ಮಾಡುತ್ತಾರೆ. ಸ್ತ್ರೀಯರು ಎಂದೂ ಯಾವ ಕಾರಣದಿಂದಲೂ ಪತಿಗೆ ವಿಪ್ರಿಯವನ್ನು ಮಾಡಬಾರದು.

ವರ್ತಾಮ್ಯಹಂ ತು ಯಾಂ ವೃತ್ತಿಂ ಪಾಂಡವೇಷು ಮಹಾತ್ಮಸು ।
ತತ್ ಸರ್ವಂ ಶೃಣು ಮೇ ವೃತ್ತಂ ಸತ್ಯಭಾಮೇ ಯಶಸ್ವಿನಿ ॥೧೯॥

ಯಶಸ್ವಿನಿಯಾದ ಸತ್ಯಭಾಮೆಯೇ, ನಾನು ಮಹಾತ್ಮರಾದ ಪಾಂಡವರ ವಿಷಯದಲ್ಲಿ ಯಾವ ನಡತೆಯನ್ನು ಇಟ್ಟುಕೊಂಡಿದ್ದೇನೆಯೋ ಅದೆಲ್ಲವನ್ನೂ ನೀನು ನನ್ನಿಂದ ಕೇಳು.

ಅಹಂಕಾರಂ ವಿಹಾಯಾಹಂ ಕಾಮಕ್ರೋಧೌ ಚ ಸರ್ವದಾ ।
ಸದಾರಾನ್ ಪಾಂಡವಾನ್ ನಿತ್ಯಂ ಪ್ರಯತೋಪಚರಾಮ್ಯಹಮ್ ॥೨೦॥

ನಾನು ಅಹಂಕಾರವನ್ನೂ, ಕಾಮಕ್ರೋಧಗಳನ್ನೂ ಬಿಟ್ಟು ಯಾವಾಗಲೂ ಎಚ್ಚರಿಕೆಯಿಂದ ಪತ್ನಿಯ ಸಹಿತರಾದ ಪಾಂಡವರಿಗೆ ಉಪಚಾರವನ್ನು ಮಾಡುತ್ತಿರುತ್ತೇನೆ (ಪಾಂಡವರಿಗೆ ದ್ರೌಪದಿಯಲ್ಲದೆ ಬೇರೆ ಪತ್ನಿಯರೂ ಇದ್ದಾರೆ).

ಪ್ರಣಯಂ ಪ್ರತಿಸಂಹೃತ್ಯ ನಿಧಾಯಾತ್ಮಾನಮಾತ್ಮನಿ ।
ಶುಶ್ರೂಷುರ್ನಿರಹಂಕಾರಾ(ಮಾನಾ) ಪತೀನಾಂ ಚಿತ್ತರಕ್ಷಿಣೇ ॥೨೧॥

ನನ್ನ ಪ್ರೀತಿಯನ್ನು ಮನಸ್ಸಿನಲ್ಲಿಯೇ ಇಟ್ಟುಕೊಂಡು (ಪ್ರೀತಿಯಿಂದ ಅವರ ಜೊತೆಯಲ್ಲಿ ಹಗುರವಾಗಿ ವರ್ತಿಸದೆ) ನನ್ನ ಬುದ್ಧಿಯಿಂದ ಮನಸ್ಸನ್ನು

ನಿಯಂತ್ರಿಸಿಕೊಂಡು ಅಹಂಕಾರವನ್ನು ಬಿಟ್ಟು ಅವರ ಸೇವೆಯನ್ನು ಮಾಡಿ ಯಾವಾಗಲೂ ಪತಿಗಳ ಚಿತ್ತವನ್ನು ರಕ್ಷಿಸುತ್ತೇನೆ.

ದುರ್ವ್ಯಾಹೃತಾಚ್ಚಂಕಮಾನಾ ದುಃಸ್ಥಿತಾದ್ ದುರವೇಕ್ಷಿತಾತ್ ।
ದುರಾಸೀತಾದ್ ದುರ್ವ್ರಜಿತಾದಿಂಗಿತಾಧ್ಯಾಸಿತಾದಪಿ ॥೨೨॥

ಸೂರ್ಯವೈಶ್ವಾನರಸಮಾನ್ ಸೋಮಕಲ್ಪಾನ್ ಮಹಾರಥಾನ್ ।
ಸೇವೇ ಶತ್ರು(ಚಕ್ಷು)ರ್ಹಣಃ ಪಾರ್ಥಾನುಗ್ರವೀರ್ಯಪ್ರತಾಪಿನಃ ॥೨೩॥

ಕೆಟ್ಟ ಮಾತುಗಳು, ಕೆಟ್ಟ ಸ್ಥಾನದಲ್ಲಿ ನಿಲ್ಲುವುದು, ಕೆಟ್ಟ ನೋಟಗಳು, ಕೆಟ್ಟ ಸ್ಥಾನದಲ್ಲಿ ಕೂಡುವುದು, ಕೆಟ್ಟ ಸ್ಥಾನಕ್ಕೆ ಹೋಗುವುದು ಕೆಟ್ಟ ಇಂಗಿತಾದಿಗಳನ್ನು ಮಾಡುವುದು ಇಂತಹ ದುಷ್ಪತನಗಳಿಗೆ ಹೆದರಿ (ಇಂತಹ ದುರ್ಗುಣಗಳು ಬರದಂತೆ) ಸೂರ್ಯ, ಅಗ್ನಿ, ಚಂದ್ರರಿಗೆ ಸಮಾನರಾದ ಉಗ್ರ ಬಲಪರಾಕ್ರಮಗಳನ್ನು ಹೊಂದಿರುವ ಶತ್ರುಸಂಹಾರಕರಾದ ಮಹಾರಥರಾದ ಪಾಂಡವರ ಸೇವೆಯನ್ನು ಅವರ ಇಂಗಿತವನ್ನು ತಿಳಿದು ಮಾಡುತ್ತೇನೆ.

ದೇವೋ ಮನುಷ್ಯೋ ಗಂಧರ್ವೋ ಯುವಾ ಚಾಪಿ ಸ್ವಲಂಕೃತಃ ।
ದ್ರವ್ಯವಾನಭಿರೂಪೋ ವಾ ನ ಮೇऽನ್ಯಃ ಪುರುಷೋ ಮತಃ ॥೨೪॥

ದೇವತೆಯನ್ನಾಗಲೀ, ಮನುಷ್ಯನನ್ನಾಗಲೀ, ಗಂಧರ್ವನನ್ನಾಗಲೀ ಚೆನ್ನಾಗಿ ಅಲಂಕೃತನಾದ ಯುವಕನನ್ನಾಗಲೀ, ಧನವಂತನನ್ನಾಗಲೀ ಅಥವಾ ಸುಂದರನನ್ನಾಗಲೀ ನಾನು ಇನ್ನೊಬ್ಬನನ್ನು ಪುರುಷನೆಂದು ಭಾವಿಸುವುದಿಲ್ಲ.

ನಭುಕ್ತವತಿ ನಸ್ನಾತೇ ನಾಸಂವಿಷ್ಟೇ ಚ ಭರ್ತರಿ ।
ನ ಸಂವಿಶಾಮಿ ನಾಶ್ನಾಮಿ ನ ಸ್ನಾಯೇ ಕರ್ಮ ಕುರ್ವತೀ ॥೨೫॥

ಪತಿಯು ಭೋಜನ ಮಾಡದೆ ನಾನು ಭೋಜನ ಮಾಡುವುದಿಲ್ಲ. ಅವನು ಅಭ್ಯಂಗವನ್ನು ಮಾಡದೆ ನಾನು ಅಭ್ಯಂಗವನ್ನು ಮಾಡುವುದಿಲ್ಲ. ಅವನು ಮಲಗದೆ ನಾನು ಮಲಗುವುದಿಲ್ಲ. ಹೀಗೆ ಯಾವಾಗಲೂ ಅವನ ಸೇವಾರೂಪವಾದ ಕರ್ಮವನ್ನು ಮಾಡುತ್ತೇನೆ.

ಕ್ಷೇತ್ರಾದ್ವನಾದ್ವಾ ಗ್ರಾಮಾದ್ವಾ ಭರ್ತಾರಂ ಗೃಹಮಾಗತಮ್ ।
ಅಭ್ಯುತ್ಥಾಯಾಭಿನಂದಾಮಿ ಆಸನೇನೋದಕೇನ ಚ ॥೨೬॥

ಕ್ಷೇತ್ರದಿಂದಲಾಗಲೀ, ಕಾಡಿನಿಂದಲಾಗಲೀ, ಗ್ರಾಮದಿಂದಾಗಲೀ ಹಿಂದಿರುಗಿ ಮನೆಗೆ ಬಂದ ಪತಿಯನ್ನು ಎದ್ದುನಿಂತು ಆಸನ ಮತ್ತು ಉದಕದಿಂದ ಅಭಿನಂದಿಸುತ್ತೇನೆ.

ಪ್ರಮೃಷ್ಟಭಾಂಡಾ ಮೃಷ್ಟಾನ್ನಾ ಕಾಲೇ ಭೋಜನದಾಯಿನೀ ।
ಸಂಯತಾ ಗುಪ್ತಧಾನ್ಯಾ ಚ ಸುಸಮೃಷ್ಟನಿವೇಶನಾ ॥೨೭॥

ಪಾತ್ರೆಗಳನ್ನೆಲ್ಲಾ ಚೆನ್ನಾಗಿ ತೊಳೆದು, ಮನೆಯನ್ನು ಚೆನ್ನಾಗಿ ಸಾರಿಸಿ, ಹೆಚ್ಚು ಮಾತನಾಡದೆ ಧಾನ್ಯಾದಿಗಳನ್ನೆಲ್ಲಾ ಚೆನ್ನಾಗಿ ಮುಚ್ಚಿಟ್ಟು ಕಾಲಕ್ಕೆ ಸರಿಯಾಗಿ ನಾನು ಪತಿಗಳಿಗೆ ಭೋಜನವನ್ನು ಕೊಡುತ್ತೇನೆ.

ಅತಿರಭ್ಯತಸಂಭಾಷಾ ದುಃಸ್ತ್ರಿಯೋ ನಾನುಸೇವತೀ ।
ಅನುಕೂಲವತೀ ನಿತ್ಯಂ ಭವಾಮ್ಯನಲಸಾ ಸದಾ ॥೨೮॥

ಪತಿಗಳು ಮಾತನಾಡಿಸಿದಾಗ ಮೌನವಾಗಿರದೆ ದುಷ್ಟಸ್ತ್ರೀಯ ಸಂಪರ್ಕವನ್ನು ಹೊಂದದೆ ಜಾಗರೂಕತೆಯಿಂದ ನಿತ್ಯವೂ ಪತಿಗಳಿಗೆ ಅನುಕೂಲವಾಗಿರುತ್ತೇನೆ.

ಅನರ್ಮೇ ಚಾಪಿ ಹಸನಂ ದ್ವಾರಿ ಸ್ಥಾನಮಭೀಕ್ಷ್ಣಶಃ ।
ಅವಸ್ಕರೇ ಚಿರಂ ಸ್ಥಾನಂ ನಿಷ್ಕುಟೇಷು ವಿಸರ್ಜಯೇ ॥೨೯॥

ಹಾಸ್ಯವಿಲ್ಲದಿದ್ದಾಗ ನಗುವುದು, ಯಾವಾಗಲೂ ಬಾಗಿಲಿನಲ್ಲಿ ನಿಲ್ಲುವುದು, ಕಸದ ಮಧ್ಯದಲ್ಲಿರುವುದು ಮತ್ತು ಶೌಚಸ್ಥಾನದಲ್ಲಿ ಬಹಳ ಹೊತ್ತು ಕೂಡುವುದು ಇವುಗಳನ್ನು ತ್ಯಜಿಸುತ್ತೇನೆ.

ನಿರತಾಹಂ ಸದಾ ಸತ್ಯೇ ಪಾಪಾನಾಂ ಚ ವಿಸರ್ಜನೇ ।
ಅತ್ಯಾಲಾಪಮಸಂತೋಷಂ ಪರವ್ಯಾಪಾರಸಂಕಥಾ ।
ಅತ್ಯಾಹಾರಾತಿರೋಷೌ ಚ ಕ್ರೋಧನಂ ಚ ವಿಸರ್ಜಯೇ ॥೩೦॥

ನಾನು ಯಾವಾಗಲೂ ಸತ್ಯದಲ್ಲಿ ರತಳಾಗಿದ್ದು ಪಾಪಕರ್ಮಗಳನ್ನು ತ್ಯಜಿಸುತ್ತೇನೆ. ಬಹಳವಾಗಿ ಮಾತನಾಡುವುದು, ಯಾವಾಗಲೂ ಅತೃಪ್ತಿಯಿಂದಿರುವುದು, ಇನ್ನೊಬ್ಬರ

ಮನೆಯ ವಿಷಯಗಳನ್ನು ಮಾತನಾಡುವುದು, ಬಹಳವಾಗಿ ಊಟಮಾಡುವುದು, ಅತಿರೋಷ ಮತ್ತು ಕ್ರೋಧಗಳನ್ನು ತ್ಯಜಿಸುತ್ತೇನೆ.

ನಿರತಾऽಹಂ ಸದಾ ಸತ್ಯೇ ಭರ್ತ್ರಾಽಽಮುಪಸೇವನೇ ।
ಸರ್ವಥಾ ಭರ್ತ್ರರಹಿತಂ ನ ಮಮೇಷ್ಟಂ ಕಥಂಚನ ॥೩೧॥

ನಾನು ಯಾವಾಗಲೂ ಸತ್ಯದಲ್ಲಿ ನಿರತಳಾಗಿರುತ್ತೇನೆ. ಪತಿಗಳ ಸಮೀಪದಲ್ಲಿ ಅವರ ಸೇವೆಯಲ್ಲಿ ನಿರತಳಾಗಿರುತ್ತೇನೆ. ಜೊತೆಯಲ್ಲಿ ಪತಿಗಳು ಇರದಿದ್ದರೆ ನನಗೆ ಯಾವುದೂ ಇಷ್ಟವಾಗುವುದಿಲ್ಲ.

ಯದಾ ಪ್ರವಸತೇ ಭರ್ತಾ ಕುಟುಂಬಾರ್ಥೇನ ಕೇನಚಿತ್ ।
ಸುಮನೋವರ್ಜಕಾಯೇತಾ ಭವಾಮಿ ವ್ರತಚಾರಿಣೀ ॥೩೨॥

ಪತಿಗಳು ಯಾವುದಾದರೂ ಕುಟುಂಬದ ಕಾರ್ಯದ ಸಲುವಾಗಿ ಪ್ರವಾಸವನ್ನು ಮಾಡಿದರೆ ನಾನು ಹೂವನ್ನು ಮುಡಿಯದೆ ವ್ರತಚಾರಿಣಿಯಾಗಿರುತ್ತೇನೆ.

ಯಚ್ಚ ಭರ್ತಾ ನ ಪಿಬತಿ ಯಚ್ಚ ಭರ್ತಾ ನ ಸೇವತೇ ।
ಯಚ್ಚ ನಾಶ್ನಾತಿ ಮೇ ಭರ್ತಾ ಸರ್ವಂ ತದ್ ವರ್ಜಯಾಮ್ಯಹಮ್ ॥

ನನ್ನ ಪತಿಯು ಏನನ್ನು ಕುಡಿಯುವುದಿಲ್ಲವೋ, ಯಾವುದನ್ನು ಸೇವಿಸುವುದಿಲ್ಲವೋ ಮತ್ತು ಯಾವುದನ್ನು ತಿನ್ನುವುದಿಲ್ಲವೋ ಅವೆಲ್ಲವನ್ನೂ ನಾನು ವರ್ಜಿಸುತ್ತೇನೆ.

ಯಥೋಪದೇಶಂ ನಿಯತಾ ವರ್ತಮಾನಾ ವರಾಂಗನೇ ।
ಸ್ವಲಂಕೃತಾऽನು ಪ್ರಯತಾ ಭರ್ತುಃ ಪ್ರಿಯಹಿತೇ ರತಾ ॥೩೪॥

ವರಾಂಗನೆಯೇ, ನಾನು ಪತಿಯ ಉಪದೇಶದಂತೆ ನಡೆದುಕೊಂಡು ಅವನು ಅಲಂಕೃತನಾದ ಮೇಲೆ ಅಲಂಕಾರವನ್ನು ಮಾಡಿಕೊಂಡು ಮಾತನ್ನು ನಿಯಂತ್ರಿಸಿ ಯಾವಾಗಲೂ ಪತಿಯ ಪ್ರಿಯದಲ್ಲಿ ಮತ್ತು ಹಿತದಲ್ಲಿ ನಿರತಳಾಗಿರುತ್ತೇನೆ.

ಯೇ ಚ ಧರ್ಮಾಃ ಕುಟುಂಬೇಷು ಶಶ್ವತ್ ಮೇ ಕಥಿತಾಃ ಪುರಾ ।
ಭಿಕ್ಷಾಬಲಿಶ್ರಾದ್ಧಮಿತಿ ಸ್ಥಾಲೀಪಾಕಾಶ್ಚ ಪರ್ವಸು ॥೩೫॥

ಮಾನ್ಯಾನಾಂ ಮಾನಸತ್ಕಾರಾ ಯೇ ಚಾನ್ಯೇ ವಿದಿತಾ ಮಮ ॥೩೬॥

ತಾನ್ ಸರ್ವಾನನುವರ್ತೇಽಹಂ ದಿವಾರಾತ್ರಮತಂದ್ರಿತಾ ।
ವಿನಯಾನ್ನಿಯಮಾಂಶ್ಚೈವ ಸದಾ ಸರ್ವಾತ್ಮನಾ ಶ್ರಿತಾ ॥೩೭॥

ಅತ್ತೆಯು ನನಗೆ ಹಿಂದೆ ಹೇಳಿದ ಕುಟುಂಬ ಧರ್ಮಗಳು ಏನಿವೆಯೋ– ಬ್ರಹ್ಮಚಾರಿಗಳಿಗೆ ಭಿಕ್ಷೆಯನ್ನು ನೀಡುವುದು, ಅತಿಥಿಗಳಿಗೆ ಅನ್ನದಾನ, ಶ್ರಾದ್ಧ, ಸ್ಥಾಲೀಪಾಕವಿಧಿ, ದೊಡ್ಡವರ ಸತ್ಕಾರ ಇವುಗಳ ವಿಷಯದಲ್ಲಿ ಮತ್ತು ನನಗೇ ತಿಳಿದ ಧರ್ಮಗಳನ್ನೂ ಸಹ ಹಗಲೂ ಮತ್ತು ರಾತ್ರಿಯೂ ಎಚ್ಚರಿಕೆಯಿಂದ ಅನುಸರಿಸುತ್ತೇನೆ. ಯಾವಾಗಲೂ ವಿನಯದಿಂದ ಕೂಡಿದವಳಾಗಿ ಸರ್ವಾತ್ಮನಾ ಎಲ್ಲ ನಿಯಮಗಳನ್ನೂ ಪಾಲಿಸುತ್ತೇನೆ.

ಅನುತಿಷ್ಠಾಮಿ ತಾನ್ ಸತ್ಯೇ ನಿತ್ಯಕಾಲಮತಂದ್ರಿತಾ ।

ಮೃದೂನ್ ಸತಃ ಸತ್ಯಶೀಲಾನ್ ಸತ್ಯಧರ್ಮಾನುಪಾಲಿನಃ ।
ಆಶೀವಿಷಾನಿವ ಕ್ರುದ್ಧಾನ್ ಪತೀನ್‌ಪರಿಚರಾಮ್ಯಹಮ್ ॥೩೮॥

ನನ್ನ ಪತಿಗಳು, ಮೃದುಗಳೂ, ಸತ್ಯಶೀಲರೂ, ಸತ್ಯಧರ್ಮಪರಿಪಾಲಕರೂ ಆದರೂ ಸರ್ಪಗಳಂತೆ ಕ್ರುದ್ಧರೂ ಆದವರು. ಅಂತಹ ಪತಿಗಳನ್ನು ನಾನು ಪರಿಚರಿಸುತ್ತೇನೆ.

ಪತ್ಯಾಶ್ರಯೋ ಹಿ ಮೇ ಧರ್ಮೋ ಮತಃ ಸ್ತ್ರೀಣಾಂ ಸನಾತನಃ ।
ಸ ದೇವಃ ಸಾ ಗತಿರ್ನಾನ್ಯಾ ತಸ್ಯ ಕಾ ವಿಪ್ರಿಯಂ ಚರೇತ್ ॥೩೯॥

ಸ್ತ್ರೀಯರ ಎಲ್ಲಾ ಧರ್ಮಗಳೂ ಪತಿಯನ್ನು ಆಶ್ರಯಿಸಿವೆ ಎಂಬುದು ನನಗೆ ತಿಳಿದಿರುವ ಸನಾತನವಾದ ಧರ್ಮ. ಸ್ತ್ರೀಯರಿಗೆ ಅವನೇ ದೇವ, ಅವನೇ ಸಂಪತ್ತು. ಅವನನ್ನು ಬಿಟ್ಟು ಬೇರೆ ಸಂಪತ್ತಿಲ್ಲ. ಅಂತಹ ಪತಿಗೆ ಯಾವಳು ವಿಪ್ರಿಯವನ್ನು ಮಾಡಲು ಸಾಧ್ಯ ?

ಅಹಂ ಪತೀನ್ ನಾತಿಶಯೇ ನಾತ್ಯಶ್ನೇ ನಾತಿಭೂಷಯೇ ।
ನಾಪಿ ಶ್ವಶ್ರೂಂ ಪರಿವದೇ ಸರ್ವದಾ ಪರಿಯಂತ್ರಿತಾ ॥೪೦॥

ನಾನು ಯಾವ ಅಂಶದಲ್ಲಿಯೂ ಪತಿಗಳನ್ನು ಮೀರುವುದಿಲ್ಲ. ಪತಿಗಳಿಗಿಂತ ಹೆಚ್ಚು ಊಟ ಮಾಡುವುದಿಲ್ಲ, ಹೆಚ್ಚು ಅಲಂಕಾರವನ್ನು ಮಾಡಿಕೊಳ್ಳುವುದಿಲ್ಲ, ಎಂದೂ ಅತ್ತೆಯನ್ನು ನಿಂದಿಸುವುದಿಲ್ಲ. ಯಾವಾಗಲೂ ಅವರಿಗೆ ಅಧೀನಳಾಗಿರುತ್ತೇನೆ.

ಅವಧಾನೇನ ಸುಭಗೇ ನಿತ್ಯೋತ್ಥಾನೇನ ಚೈವ ಚ ।
ಭರ್ತಾರೋ ವಶಗಾ ಮಹ್ಯಂ ಗುರುಶುಶ್ರೂಷಯೈವ ಚ ॥೪೧॥

ಎಲೌ ಸುಂದರಿಯೇ, ಯಾವಾಗಲೂ ಜಾಗರೂಕಳಾಗಿರುವುದರಿಂದ ಮತ್ತು ಅವರ ಸೇವೆಯಲ್ಲಿಯೇ ಮನಸ್ಸಿಟ್ಟಿರುವುದರಿಂದ ಮತ್ತು ಗುರುಹಿರಿಯರ ಸೇವೆಯಿಂದ ಪತಿಗಳು ನನಗೆ ಯಾವಾಗಲೂ ವಶರಾಗಿದ್ದಾರೆ.

ನಿತ್ಯಮಾರ್ಯಾಮಹಂ ಕುಂತೀಂ ವೀರಸೂಂ ಸತ್ಯವಾದಿನೀಮ್ ।
ಸ್ವಯಂ ಪರಿಚರಾಮ್ಯೇತಾಂ ಪಾನಾಚ್ಛಾದನಭೋಜನೈಃ ॥೪೨॥

ವೀರಪುತ್ರರನ್ನು ಪಡೆದ ಸತ್ಯವಾದಿನಿಯಾದ ಪೂಜ್ಯಳಾದ ಕುಂತಿಯನ್ನು ನಾನೇ ಯಾವಾಗಲೂ ಅನ್ನವಸ್ತ್ರಭೋಜನಗಳಿಂದ ಪರಿಚರಿಸುತ್ತೇನೆ.

ನೈತಾಮತಿಶಯೇ ಜಾತು ವಸ್ತ್ರಾಲಂಕಾರಭೋಜನೈಃ ।
ನಾಪಿ ಪರಿವದೇ ಚಾಹಂ ತಾಂ ಪೃಥಾಂ ಪೃಥಿವೀಸಮಾಮ್ ॥೪೩॥

ವಸ್ತ್ರ ಅಲಂಕಾರ ಭೋಜನಗಳಲ್ಲಿ ನಾನು ಎಂದೂ ಕುಂತಿಯನ್ನು ಮೀರುವುದಿಲ್ಲ. ಭೂದೇವಿಗೆ ಸಮಾನವಾದ ಕ್ಷಮಾ ಗುಣವುಳ್ಳ ಅವಳನ್ನು ನಾನು ಎಂದೂ ನಿಂದಿಸುವುದಿಲ್ಲ.

ಅಷ್ಟಾವಗ್ರೇ ಬ್ರಾಹ್ಮಣಾನಾಂ ಸಹಸ್ರಾಣಿ ಸ್ಮ ನಿತ್ಯದಾ ।
ಭುಂಜತೇ ರುಗ್ಮಪಾತ್ರೀಷು ಯುಧಿಷ್ಠಿರನಿವೇವನೇ ॥೪೪॥

ಯುಧಿಷ್ಠಿರನ ಮನೆಯಲ್ಲಿ ಎಂಟು ಸಾವಿರ ಬ್ರಾಹ್ಮಣರು ನಿತ್ಯವೂ ಸುವರ್ಣ ಪಾತ್ರೆಗಳಲ್ಲಿ ಮೊದಲು ಊಟವನ್ನು ಮಾಡುತ್ತಾರೆ.

ಅಷ್ಟಾಶೀತಿಸಹಸ್ರಾಣಿ ಸ್ನಾತಕಾ ಗೃಹಮೇಧಿನಃ ।
ತ್ರಿಶಂದ್ಯಾಸೀಕ ಏಕೈಕೋ ಯಾನ್ ವಿಭರ್ತಿ ಯುಧಿಷ್ಠಿರಃ ॥೪೫॥

ಯುಧಿಷ್ಠಿರನು ಒಬ್ಬೊಬ್ಬನಿಗೂ ಮೂವತ್ತು ದಾಸಿಯರಿರುವ ಎಂಬತ್ತೆಂಟು ಸಾವಿರ ಸ್ನಾತಕ ಗೃಹಸ್ಥರನ್ನು ಯಾವಾಗಲೂ ಪೋಷಿಸುತ್ತಾನೆ.

ದಶಾನ್ಯಾನಿ ಸಹಸ್ರಾಣಿ ಯೇಷಾಮನ್ನಂ ಸುಸಂಸ್ಕೃತಮ್ ।
ಹ್ರಿಯತೇ ರುಗ್ಮಪಾತ್ರೀಭಿರ್ಯತೀನಾಮೂರ್ಧ್ವರೇತಸಾಮ್ ॥೪೬॥

ಇನ್ನು ಬೇರೆ ಹತ್ತುಸಾವಿರ ಊರ್ಧ್ವರೇತಸ್ಕರಾದ ಯತಿಗಳಿಗೆ ಸುಸಂಸ್ಕೃತವಾದ ಅನ್ನವು ಸುವರ್ಣಪಾತ್ರೆಗಳಲ್ಲಿ ಕೊಂಡೊಯ್ಯಲ್ಪಡುತ್ತದೆ.

ತಾನ್ ಸರ್ವಾನಗ್ರಹಾರೇಣ ಬ್ರಾಹ್ಮಣಾನ್ ವೇದವಾದಿನಃ ।
ಯಥಾರ್ಹಂ ಪೂಜಯಾಮಿ ಸ್ಮ ಪಾನಾಚ್ಛಾದನಭೋಜನೈಃ ॥೪೭॥

ನಾನು ವೇದವಾದಿಗಳಾದ ಆ ಎಲ್ಲಾ ಬ್ರಾಹ್ಮಣರಿಗೂ ವಾಸಕ್ಕಾಗಿ ಅಗ್ರಹಾರಗಳನ್ನು ಕಟ್ಟಿಸಿಕೊಟ್ಟು ಯಥಾಯೋಗ್ಯವಾಗಿ ಪಾನವಸ್ತ್ರಭೋಜನಗಳಿಂದ ಪೂಜಿಸುತ್ತೇನೆ.

ಶತಂ ದಾಸೀಸಹಸ್ರಾಣಿ ಕೌಂತೇಯಸ್ಯ ಮಹಾತ್ಮನಃ ।
ಕಂಚುಕೇಯೂರಧಾರಿಣ್ಯೋ ನಿಷ್ಕಕಂಠ್ಯಃ ಸ್ವಲಂಕೃತಾಃ ॥೪೮॥

ಮಹಾತ್ಮನಾದ ಕೌಂತೇಯನಿಗೆ ಕಂಚುಕ, ಕೇಯೂರ, ಕಂಠದಲ್ಲಿ ಸುವರ್ಣಮಾಲೆಗಳನ್ನು ಧರಿಸಿದ ಅಲಂಕೃತರಾದ ಹತ್ತುಸಾವಿರ ದಾಸಿಯರಿದ್ದಾರೆ.

ಮಹಾರ್ಹಮಾಲ್ಯಾಭರಣಾಃ ಸುವರ್ಣಾಶ್ಚಂದನೋಕ್ಷಿತಾಃ ।
ಮಣೀನ್ ಹೇಮ ಚ ಬಿಭ್ರತ್ಯೋ ನೃತ್ಯಗೀತವಿಶಾರದಾಃ ॥೪೯॥

ಅವರು ಬೆಲೆಬಾಳುವ ಮಾಲೆ ಮತ್ತು ಆಭರಣಗಳನ್ನೂ, ಸುವರ್ಣಗಳನ್ನೂ ಮತ್ತು ರತ್ನಗಳನ್ನೂ ಧರಿಸಿದವರು. ಒಳ್ಳೆಯ ಬಣ್ಣವನ್ನು ಹೊಂದಿದವರು. ಶ್ರೀಗಂಧದಿಂದ ಲೇಪಿಸಲ್ಪಟ್ಟವರು ಮತ್ತು ನೃತ್ಯಗಾನ ವಿಶಾರದರು.

ತಾಸಾಂ ನಾಮಾನಿ ರೂಪಾಣಿ ಭೋಜನಾಚ್ಛಾದನಾನಿ ಚ ।
ಸರ್ವಾಸಾಮೇವ ವೇದಾಹಂ ಕರ್ಮ ಚೈವ ಕೃತಾಕೃತಮ್ ॥೫೦॥

ಅವರಲ್ಲಿ ಪ್ರತಿಯೊಬ್ಬರ ಹೆಸರನ್ನೂ, ಅವರ ರೂಪವನ್ನೂ, ಅವರ ಭೋಜನಾಚ್ಛಾದನಗಳನ್ನೂ, ಅವರು ಮಾಡಿರುವ ಅಥವಾ ಮಾಡದಿರುವ ಕರ್ಮಗಳನ್ನೂ ನಾನು ತಿಳಿದಿದ್ದೇನೆ.

ಶತಂ ದಾಸೀಸಹಸ್ರಾಣಿ ಕುಂತೀಪುತ್ರಸ್ಯ ಧೀಮತಃ ।
ಪಾತ್ರೀಹಸ್ತಾ ದಿವಾರಾತ್ರಮತಿಥೀನ್ ಭೋಜಯಂತ್ಯುತ ॥೫೧॥

ಮೇಧಾವಿಯಾದ ಕುಂತೀಪುತ್ರನ ಮನೆಯಲ್ಲಿ ಹತ್ತುಸಾವಿರ ದಾಸಿಯರು ಕೈಯಲ್ಲಿ ಪಾತ್ರೆಯನ್ನು ಹಿಡಿದು ಹಗಲೂ ಮತ್ತು ರಾತ್ರಿಯೂ ಅತಿಥಿಗಳಿಗೆ ಭೋಜನವನ್ನು ಬಡಿಸುತ್ತಾರೆ.

ಶತಮಶ್ವಸಹಸ್ರಾಣಿ ದಶನಾಗಾಯುತಾನಿ ಚ ।
ಯುಧಿಷ್ಠಿರಸ್ಯಾನುಯಾತ್ರಂ ಇಂದ್ರಪ್ರಸ್ಥನಿವಾಸಿನಃ ॥೫೨॥

ಯುಧಿಷ್ಠಿರನು ಇಂದ್ರಪ್ರಸ್ಥದಲ್ಲಿ ವಾಸವನ್ನು ಮಾಡುತ್ತಿದ್ದಾಗ ಒಂದುಸಾವಿರ ಕುದುರೆಗಳು ಮತ್ತು ಹತ್ತುಸಾವಿರ ಆನೆಗಳು ಅವನ ಹಿಂದೆ ಹೋಗುತ್ತಿದ್ದವು.

ಏತದಾಸೀತ್ ತದಾ ರಾಜ್ಞೋ ಯನ್ಮಹೀಂ ಪರ್ಯಪಾಲಯತ್ ।
ಯೇಷಾಂ ಸಂಖ್ಯಾವಿಧಿಂ ಚೈವ ಪ್ರದಿಶಾಮಿ ಶೃಣೋಮಿ ಚ ॥೫೩॥

ಇದು ಹಿಂದೆ ಧರ್ಮರಾಜನು ಭೂಮಿಯನ್ನು ಪಾಲಿಸುತ್ತಿದ್ದಾಗ ಅವನ ವೈಭವವಾಗಿದ್ದಿತು. ಅವರಲ್ಲಿ ಪ್ರತಿಯೊಬ್ಬ ಸೇವಕರ ವೇತನ ಸಂಖ್ಯೆಯನ್ನು ತಿಳಿದು ನಾನು ಅವರಿಗೆ ವೇತನವನ್ನು ಕೊಡುತ್ತಿದ್ದೆ ಮತ್ತು ಅವರ ವಾಕ್ಯಗಳನ್ನು ಕೇಳುತ್ತಿದ್ದೆ.

ಅಂತಃಪುರಾಣಾಂ ಸರ್ವೇಷಾಂ ಭೃತ್ಯಾನಾಂ ಚೈವ ಸರ್ವಶಃ ।
ಆಗೋಪಾಲಾವಿಪಾಲೇಭ್ಯಃ ಸರ್ವಂ ವೇದ ಕೃತಾಕೃತಮ್ ॥೫೪॥

ಗೋಪಾಲ ಮತ್ತು ಆವಿಪಾಲರಿಂದ ಹಿಡಿದು ಅಂತಃಪುರದ ಎಲ್ಲಾ ಭೃತ್ಯರೂ ಮಾಡಿದ ಮತ್ತು ಮಾಡದಿದ್ದ ಕಾರ್ಯವನ್ನು ನಾನು ತಿಳಿದಿರುತ್ತೇನೆ.

ಸರ್ವಂ ರಾಜ್ಞಃ ಸಮುದಯಮಾಯಂ ಚ ವ್ಯಯಮೇವ ಚ ।
ಏಕಾಹಂ ವೇದ್ಮಿ ಕಲ್ಯಾಣಿ ಪಾಂಡವಾನಾಂ ಯಶಸ್ವಿನಿ ॥೫೫॥

ಎಲೌ ಯಶಸ್ವಿನಿಯೇ, ಕಲ್ಯಾಣಿಯೇ, ರಾಜನ ಸಂಪತ್ತನ್ನೂ, ಪ್ರತಿದಿನದ ಆಯಾ-ವ್ಯಯಗಳೆಲ್ಲವನ್ನೂ ನಾನೊಬ್ಬಳೇ ತಿಳಿದಿರುತ್ತೇನೆ.

ಮಯಿ ಸರ್ವಂ ಸಮಾಸಜ್ಯ ಕುಟುಂಬಂ ಭರತರ್ಷಭಾಃ ।
ಉಪಾಸನರತಾಃ ಸರ್ವೇ ಘಟಂತೇ ಸ್ಮ ವರಾನನೇ ॥೫೬॥

ಎಲೌ ಸುಂದರಿಯೇ, ಭರತರ್ಷಭರು ನನ್ನ ಮೇಲೆ ಎಲ್ಲಾ ಕುಟುಂಬಭಾರವನ್ನು ಹಾಕಿ ತಾವು ಭಗವದುಪಾಸನೆಯಲ್ಲಿ ನಿರತರಾಗಿರುತ್ತಾರೆ.

ತಮಹಂ ಭರಮಾಸಕ್ತಮನಾಧೃಷ್ಯಂ ದುರಾತ್ಮಭಿಃ ।
ಸುಖಂ ಸರ್ವಂ ಪರಿತ್ಯಜ್ಯ ರಾತ್ರ್ಯಹಾನಿ ಘಟಾಮಿ ವೈ ॥೫೭॥

ಹೀಗೆ ನನ್ನ ಮೇಲೆ ಹೊರಿಸಿದ ದುಷ್ಟರು ಹೊರಲಾರದ ಈ ಭಾರವನ್ನು ಎಲ್ಲಾ ಸುಖಗಳನ್ನೂ ಪರಿತ್ಯಜಿಸಿ ಹಗಲೂ ಮತ್ತು ರಾತ್ರಿಯೂ ನಾನು ನಿರ್ವಹಿಸುತ್ತೇನೆ.

ಅಧೃಷ್ಯಂ ವರುಣಸ್ಯೇವ ವೈ ಪತೀನಾಂ ಧರ್ಮಚಾರಿಣಾಮ್ ॥೫೮॥

ವರುಣನಿಗೆ ನಿಧಿಪೂರ್ಣವಾದ ಸಮುದ್ರದ ಸಂಪತ್ತು ಇರುವಂತೆ ಧರ್ಮಚಾರಿಗಳಾದ ಪತಿಗಳ ಅಧೃಷ್ಯವಾದ (ವ್ಯಯಮಾಡಿ ನಾಶಮಾಡಲು ಸಾಧ್ಯವಿಲ್ಲದ) ಕೋಶವನ್ನು ನಾನೊಬ್ಬಳೇ ತಿಳಿದಿದ್ದೇನೆ.

ಅನಿಶಾಯಾಂ ನಿಶಾಯಾಂ ಚ ಸಹನಾತ್ ಕ್ಷುತ್ಪಿಪಾಸಯೋಃ ।
ಆರಾಧಯಂತ್ಯಾಃ ಕೌರವ್ಯಾಂಸ್ತುಲ್ಯಾ ರಾತ್ರಿರಹಶ್ಚ ಮೇ ॥೫೯॥

ಹಸಿವು, ನೀರಡಿಕೆಗಳನ್ನು ತಡೆದು ಹಗಲೂ ಮತ್ತು ರಾತ್ರಿಯೂ ಪಾಂಡವರನ್ನು ಆರಾಧಿಸುವ ನನಗೆ ಹಗಲೂ ಮತ್ತು ರಾತ್ರಿಯೂ ಸಮಾನವಾಗಿ (ಒಂದೇ ರೀತಿ) ಇರುತ್ತವೆ.

ಪ್ರಥಮಂ ಪ್ರತಿಬುಧ್ಯಾಮಿ ಚರಮಂ ಸಂವಿಶಾಮಿ ಚ ।
ನಿತ್ಯಕಾಲಮಹಂ ಸತ್ಯೇ ಏತತ್‌ಸವಂನನಂ ಮಮ ॥೬೦॥

ನಾನು ಪತಿಗಳಿಗಿಂತ ಮೊದಲು ಏಳುತ್ತೇನೆ. ಅವರು ಮಲಗಿದ ಅನಂತರ ಮಲಗುತ್ತೇನೆ. ಸತ್ಯಭಾಮೆಯೇ, ನಿತ್ಯದಲ್ಲಿಯೂ ಇದು ನಾನು ಮಾಡುವ ಪತಿಗಳ ಪೂಜೆ.

ಏತಜ್ಜಾನಾಮ್ಯಹಂ ಕರ್ತುಂ ಏತತ್‌ಸಂವನನಂ ಮಮ ।
ಅಸತ್‌ಸ್ತ್ರೀಣಾಂ ಸಮಾಚಾರಂ ನಾಹಂ ಕುರ್ಯಾಂ ನ ಕಾಮಯೇ ॥

ನಾನು ಇದನ್ನೇ ಮಾಡಲು ತಿಳಿದಿದ್ದೇನೆ. ಇದೇ ನನ್ನ ಪೂಜೆ. ದುಷ್ಟ ಸ್ತ್ರೀಯರ ಆಚರಣೆಯನ್ನು ನಾನು ಮಾಡುವುದಿಲ್ಲ, ಮಾಡಲು ಇಚ್ಛಿಸುವುದೂ ಇಲ್ಲ.

ವೈಶಂಪಾಯನಃ

ತತ್ ಶ್ರುತ್ವಾ ಧರ್ಮಸಹಿತಂ ಕೃಷ್ಣಾಯಾ ವ್ಯಾಹೃತಂ ತದಾ ।
ಉವಾಚ ಸತ್ಯಾ ಸತ್ಕೃತ್ಯ ಪಾಂಚಾಲೀಂ ಧರ್ಮಚಾರಿಣೀಮ್ ॥೬೨॥

ವೈಶಂಪಾಯನ– ದ್ರೌಪದಿಯ ಧರ್ಮಸಹಿತವಾದ ವಚನಗಳನ್ನು ಕೇಳಿ ಸತ್ಯಭಾಮೆಯು ಧರ್ಮಚಾರಿಣಿಯಾದ ಪಾಂಚಾಲಿಯನ್ನು ಸತ್ಕರಿಸಿ ಹೀಗೆ ಮಾತನಾಡಿದಳು.

ಅಭಿಪನ್ನಾಽಸ್ಮಿ ಪಾಂಚಾಲಿ ಯಾಜ್ಞಸೇನಿ ಕ್ಷಮಸ್ವ ಮೇ ।
ಕಾಮಕಾರಃ ಸಖೀನಾಂ ಹಿ ಸೋಪಹಾಸಂ ಪ್ರಭಾಷಿತಮ್ ॥೬೩॥

ಪಾಂಚಾಲಿಯೇ, ನಿನ್ನಿಂದ ಎಲ್ಲವನ್ನೂ ತಿಳಿದೆ. ಯಾಜ್ಞಸೇನಿಯೇ, ನನ್ನನ್ನು ಕ್ಷಮಿಸು. ಸಖಿಯರು ತಮ್ಮ ಇಚ್ಛಾನುಸಾರವಾಗಿ ಹಾಸ್ಯಪೂರ್ವಕವಾಗಿಯೂ (ರಹಸ್ಯವಿಷಯಗಳನ್ನು) ಮಾತನಾಡಬಹುದಷ್ಟೆ?

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂಸಂಹಿತಾಯಾಂ ವೈಯಾಸಿಕ್ಯಾಂ
ವನಪರ್ವಣಿ ದ್ವಾವಿಂಶತ್ಯಧಿಕದ್ವಿಶತತಮೋಽಧ್ಯಾಯಃ ॥
॥ ಇತಿ ದ್ರೌಪದೀಸತ್ಯಭಾಮಾಸಂವಾದಪರ್ವಣಿ ಪ್ರಥಮೋಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವನಪರ್ವದಲ್ಲಿ ಇನ್ನೂರ ಇಪ್ಪತ್ತೆರಡನೆಯ ಅಧ್ಯಾಯ ಮುಗಿಯಿತು.

★ ★ ★ ★

ಇನ್ನೂರ ಇಪ್ಪತ್ಮೂರನೆಯ ಅಧ್ಯಾಯ

ದ್ರೌಪದಿಯಿಂದ ಪಾತಿವ್ರತ್ಯಧರ್ಮ ನಿರೂಪಣೆ.

ದ್ರೌಪದೀ

ಇಮಂ ತು ತೇ ಮಾರ್ಗಮಪೇತದೋಷಂ
ವಕ್ಷ್ಯಾಮಿ ಚಿತ್ತಗ್ರಹಣಾಯ ಭರ್ತುಃ ।
ಯಸ್ಮಿನ್ಯಥಾಭರ್ತರಿ ವರ್ತಮಾನಾ
ಭರ್ತಾರಮಾಚ್ಛೇತ್ಸ್ಯಸಿ ಕಾಮಿನೀಭ್ಯಃ ॥೧॥

ಪತಿಯ ಮನಸ್ಸನ್ನು ವಶೀಕರಿಸಲು ನಿರ್ದುಷ್ಟವಾದ ಈ ಮಾರ್ಗವನ್ನು ಹೇಳುವೆನು. ಈ ಮಾರ್ಗದಲ್ಲಿ ಸರಿಯಾಗಿ ನಡೆದರೆ ನಿನ್ನ ಪತಿಯನ್ನು ಅನ್ಯಕಾಮಿನಿಯರಿಂದ ದೂರಮಾಡುವಿ.

ನೈತಾದೃಶಂ ದೈವತಮಸ್ತಿ ಕಿಂಚಿತ್
ಸರ್ವೇಷು ಲೋಕೇಷು ಸದೇವಕೇಷು ।
ಯಥಾ ಪತಿ ಸ್ತಸ್ಯ ತು ಸರ್ವಕಾಮಾ
ಲಭ್ಯಾಃ ಪ್ರಸಾದೇ ಕುಪಿತಶ್ಚ ಹನ್ಯಾತ್ ॥೨॥

ಸ್ತ್ರೀಯರಿಗೆ ದೇವತೆಗಳಿಂದ ಕೂಡಿದ ಎಲ್ಲ ಲೋಕಗಳಲ್ಲಿಯೂ ಪತಿಯಂಥ ದೇವತೆಯು ಇನ್ನೊಬ್ಬ ಇಲ್ಲ. ಪತಿಯು ಪ್ರಸನ್ನನಾದರೆ ಅದರಿಂದ ಎಲ್ಲ ಕಾಮಗಳೂ ಲಭ್ಯವಾಗುವುವು. ಅವನು ಕುಪಿತನಾದರೆ ಎಲ್ಲವೂ ನಾಶವಾಗುವುದು.

ತಸ್ಮಾದಪತ್ಯಂ ವಿವಿಧಾಶ್ಚ ಭೋಗಾಃ
ಶಯ್ಯಾಸನಾನ್ಯುತ್ತಮದರ್ಶನಾನಿ ।
ವಸ್ತ್ರಾಣಿ ಮಾಲ್ಯಾನಿ ತಥೈವ ಗಂಧಾಃ
ಸ್ವರ್ಗಶ್ಚ ಲೋಕೋ ವಿಪುಲಾ ಚ ಕೀರ್ತಿಃ ॥೩॥

ಅವನಿಂದಲೇ ಅನೇಕ ವಿಧವಾದ ಭೋಗಗಳು, ಶಯ್ಯಾ, ಆಸನ, ಉತ್ತಮ ದರ್ಶನಗಳು, ವಸ್ತ್ರಗಳು, ಮಾಲ್ಯಗಳು, ಗಂಧಗಳು, ಸ್ವರ್ಗಲೋಕ ಮತ್ತು ವಿಪುಲವಾದ ಕೀರ್ತಿ.

ಸುಖಂ ಸುಖೇನೇಹ ನ ಜಾತು ಲಭ್ಯಂ
ದುಃಖೇನ ಸಾಧ್ವೀ ಲಭತೇ ಸುಖಾನಿ ।
ಸಾ ಕೃಷ್ಣಮಾರಾಧಯ ಸೌಹೃದೇನ
ಪ್ರೇಮ್ಣಾ ಚ ನಿತ್ಯಂ ಪ್ರತಿಕರ್ಮಣಾ ಚ ॥೪॥

ಸುಖದಿಂದ ಸುಖವನ್ನು ಎಂದೂ ಸಂಪಾದಿಸಲು ಸಾಧ್ಯವಿಲ್ಲ. ಸಾಧ್ವಿಯಾದವಳು ಕಷ್ಟಪಟ್ಟು ಸುಖವನ್ನು ಸಂಪಾದಿಸುತ್ತಾಳೆ. ಅಂತಹವಳಾದ ನೀನು ನಿತ್ಯವೂ ಸೌಹಾರ್ದದಿಂದ, ಪ್ರೇಮದಿಂದ ಮತ್ತು ಅವನಿಗೆ ಉಪಕಾರವನ್ನು ಮಾಡುವುದರಿಂದ ಕೃಷ್ಣನನ್ನು ಆರಾಧಿಸು.

ತಥಾऽಶನೈಶ್ಚಾರುಭಿರಗ್ರಮಾಲ್ಯೈ-
ರ್ದಾಕ್ಷಿಣ್ಯಯೋಗೈರ್ವಿವಿಧೈಶ್ಚ ಗಂಧೈಃ ।
ಅಸ್ಯಾಃ ಪ್ರಿಯೋऽಸ್ಮೀತಿ ಯಥಾ ವಿದಿತ್ವಾ
ತ್ವಾಮೇವ ಸಂಶ್ಲಿಷ್ಯತಿ ತದ್ವಿಧತ್ಸ್ವ ॥೫॥

ಹಾಗೆಯೇ ಒಳ್ಳೆಯ ಆಸನಗಳು, ಶ್ರೇಷ್ಠವಾದ ಪುಷ್ಪಮಾಲೆಗಳು, ವಿನಯದಿಂದ ಕೂಡಿದ ಮಾತುಗಳು, ಅನೇಕ ವಿಧವಾದ ಗಂಧಗಳು ಇವುಗಳಿಂದ ಪತಿಯಾದ ಕೃಷ್ಣನನ್ನು ರಕ್ಷಿಸಿದರೆ ಇವಳಿಗೆ ನಾನು ಪ್ರಿಯನಾಗಿದ್ದೇನೆ ಎಂದು ತಿಳಿದು ನಿನ್ನನ್ನೇ ಆಲಿಂಗಿಸುವಂತೆ ಎಲ್ಲ ಕಾರ್ಯಗಳನ್ನೂ ಮಾಡು.

ಶ್ರುತ್ವಾ ಸ್ವರಂ ದ್ವಾರಗತಸ್ಯ ಭರ್ತುಃ
ಪ್ರತ್ಯುತ್ಥಿತಾ ತಿಷ್ಠ ಗೃಹಸ್ಯ ಮಧ್ಯೇ ।
ದೃಷ್ಟ್ವಾ ಪ್ರವಿಷ್ಟಂ ತ್ವರಿತಾऽऽಸನೇನ
ಪಾದ್ಯೇನ ಚೈನಂ ಪ್ರತಿಪೂಜಯಸ್ವ ॥೬॥

ಬಾಗಿಲಿಗೆ ಬಂದ ಪತಿಯ ಸ್ವರವನ್ನು ಕೇಳಿ ಗೃಹದ ಮಧ್ಯಭಾಗದಲ್ಲಿ ಎದ್ದು ನಿಲ್ಲು. ಅವನು ಒಳಗೆ ಪ್ರವೇಶಿಸುದುದನ್ನು ನೋಡಿ ಶೀಘ್ರವಾಗಿ ಆಸನ ಮತ್ತು ಪಾದ್ಯಗಳಿಂದ ಅವನನ್ನು ಪೂಜಿಸು.

ಸಂಪ್ರೇಷಿತಾಯಾಮಥ ಚೈವ ದಾಸ್ಯಾ-
ಮುತ್ಥಾಯ ಸರ್ವಂ ಸ್ವಯಮೇವ ಕಾರ್ಯಮ್ ।

ಜಾನಾತು ಕೃಷ್ಣಸ್ತವ ಭಾವಮೇತಂ
ಸರ್ವಾತ್ಮನಾ ಮಾಂ ಭಜತೀತಿ ಸತ್ಯೇ ॥೭॥

ದಾಸಿಯನ್ನು ಕಳುಹಿಸಿ ನೀನೇ ಎದ್ದು ಅವನಿಗೆ ಮಾಡಬೇಕಾದ ಉಪಚಾರಗಳನ್ನೆಲ್ಲಾ ಸ್ವತಃ ಮಾಡು. ಸತ್ಯಭಾಮೆಯೇ, ಇವಳು ಸರ್ವಾತ್ಮನಾ ನನ್ನನ್ನು ಭಜಿಸುತ್ತಾಳೆ ಎಂದು ಕೃಷ್ಣನು ನಿನ್ನ ಮನಸ್ಸಿನ ಈ ಅಭಿಪ್ರಾಯವನ್ನು ತಿಳಿಯಲಿ.

ತ್ವತ್ಸನ್ನಿಧೌ ಯತ್ಕಥಯೇತ್ ಪತಿಸ್ತೇ
ಯದ್ಯಪ್ಯಗುಹ್ಯಂ ಪರಿರಕ್ಷಿತವ್ಯಮ್ ।
ಕಾಚಿತ್ ಸಪತ್ನೀ ತವ ವಾಸುದೇವಂ
ಪ್ರತ್ಯಾದಿಶೇತ್ ತೇನ ಭವೇದ್ ವಿರಾಗಃ ॥೮॥

ನಿನ್ನ ಸನ್ನಿಧಿಯಲ್ಲಿ ಪತಿಯು ಏನನ್ನು ಹೇಳುತ್ತಾನೆಯೋ ಅದು ರಹಸ್ಯವಲ್ಲದಿದ್ದರೂ ಅದನ್ನು ಇನ್ನೊಬ್ಬರಿಗೆ ಹೇಳಬಾರದು. ಹಾಗೆ ಮಾಡದೆ ಇನ್ನೊಬ್ಬರ ಜೊತೆಯಲ್ಲಿ ಹೇಳಿದರೆ ನಿನ್ನ ಯಾರಾದರೂ ಸವತಿಯು ಆ ಮಾತನ್ನು ಕೃಷ್ಣನಿಗೆ ತಿಳಿಸಿ ಅವನಿಗೆ ನಿನ್ನಲ್ಲಿ ವಿರಾಗವುಂಟಾಗುವಂತೆ ಮಾಡಬಹುದು.

ಪ್ರಿಯಾಂಶ್ಚ ರಕ್ತಾಂಶ್ಚ ಹಿತಾಂಶ್ಚ ಭರ್ತುಃ
ತಾನ್ ಭೋಜಯೇಥಾ ವಿವಿಧೈರುಪಾಯೈಃ ।
ದ್ವೇಷ್ಯೈರುಪೇಕ್ಷ್ಯೈರಹಿತೈಶ್ಚ ತಸ್ಯ
ಭಿದ್ಯಸ್ವ ನಿತ್ಯಂ ಕುಹಕೋದ್ಯತೈಶ್ಚ ॥೯॥

ಪತಿಗೆ ಪ್ರಿಯರಾದವರಿಗೆ, ಹಿತರಾದವರಿಗೆ ಮತ್ತು ಪತಿಯಲ್ಲಿ ಹಿತರಾದವರಿಗೆ ಎಲ್ಲ ಉಪಾಯಗಳಿಂದಲೂ ಭೋಜನವನ್ನು ನೀಡು. ಪತಿಯ ದ್ವೇಷಕ್ಕೆ ವಿಷಯರಾದವರು, ಅವನ ಉಪೇಕ್ಷೆಗೆ ವಿಷಯರಾದವರು, ಅವನಿಗೆ ಅಹಿತರಾದವರು, ಯಾವಾಗಲೂ ವಂಚನೆಯನ್ನು ಮಾಡುವುದಕ್ಕೆ ಪ್ರಯತ್ನ ಪಡುವವರು ಇಂತಹವರಿಂದ ನಿತ್ಯವೂ ದೂರದಲ್ಲಿರು.

ಮದಂ ಪ್ರಮಾದಂ ಪುರುಷೇಷು ಹಿತ್ವಾ
ಸಂಯಚ್ಛ ಮಾನಂ ಪ್ರತಿಗೃಹ್ಯ ವಾಚಮ್ ।
ಪ್ರದ್ಯುಮ್ನಸಾಂಬಾವಪಿ ತೇ ಕುಮಾರೌ
ನೋಪಾಸಿತವ್ಯೌ ರಹಿತೇ ಕದಾಚಿತ್ ॥೧೦॥

ಪುರುಷರಲ್ಲಿ ಮದ ಪ್ರಮಾದಗಳನ್ನು ತೋರಿಸುವುದನ್ನು ಬಿಟ್ಟು ಮಾತನ್ನು ನಿಲ್ಲಿಸಿ ಮಾನವನ್ನು ನಿಯಂತ್ರಿಸಿಕೋ. ನಿನ್ನ ಮಕ್ಕಳಾದ ಪ್ರದ್ಯುಮ್ನ ಸಾಂಬರ ಜೊತೆಯಲ್ಲಿಯೂ ಸಹ ನೀನು ಏಕಾಂತದಲ್ಲಿ ಇರಬಾರದು.

ಮಹಾಕುಲೀನಾಭಿರಪಾಪಿಕಾಭಿಃ
ಸ್ತ್ರೀಭಿಃ ಸತೀಭಿಸ್ತವ ಸಖ್ಯಮಸ್ತು ।
ಚಂಡಾಶ್ಚ ಶೌಂಡಾಶ್ಚ ಮಹಾಶನಾಶ್ಚ
ಚೋರಾಶ್ಚ ದುಷ್ಟಾಶ್ಚಪಲಾಶ್ಚ ವರ್ಜ್ಯಾ ॥೧೧॥

ನಿನಗೆ ಒಳ್ಳೆ ಕುಲೀನರಾದ ಪಾಪಕರ್ಮವನ್ನು ಮಾಡದಿರುವ ಸಾಧ್ವಿಯರಾದ ಸ್ತ್ರೀಯರ ಜೊತೆಯಲ್ಲಿ ಸಖ್ಯವಿರಲಿ. ಹಠಮಾರಿಗಳನ್ನು, ಮದ್ಯಪಾನಮಾಡುವವರನ್ನು, ಬಹಳ ಊಟಮಾಡುವವರನ್ನು, ಕಳ್ಳರನ್ನು, ದುಷ್ಟರನ್ನು ಮತ್ತು ಚಂಚಲೆಯರನ್ನು ಪರಿತ್ಯಜಿಸು.

ಏತದ್ಯಶಸ್ಯಂ ಭಗವೇತನಂ ಚ
ಸ್ವರ್ಗ್ಯಂ(ಸ್ವಾರ್ಥ್ಯಂ) ತಥಾ ಶತ್ರುನಿಬರ್ಹಣಂ ಚ ।
ಮಹಾರ್ಹಮಾಲ್ಯಾಭರಣಾಂಗರಾಗಾ
ಭರ್ತಾರಮಾರಾಧಯ ಪುಣ್ಯಗಂಧೈಃ ॥೧೨॥

ಪಾತಿವ್ರತ್ಯಧರ್ಮದ ಫಲವಾಗಿ ದೊರಕುವ ಪತಿಯ ಅನುಗ್ರಹರೂಪವಾದ ಈ ಭಗವೇತನವು ಯಶಸ್ಕರವಾದುದು. ಅದರಿಂದ ಸ್ವರ್ಗ, ಶತ್ರುಸಂಹಾರ, ಅನರ್ಘ್ಯವಾದ ಮಾಲ್ಯಾಭರಣಗಳು, ಅಂಗರಾಗಗಳು ಎಲ್ಲವೂ ದೊರೆಯುತ್ತವೆ. ಪವಿತ್ರವಾದ ಗಂಧಗಳಿಂದ ಪತಿಯನ್ನು ಆರಾಧಿಸು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂಸಂಹಿತಾಯಾಂ ವನಪರ್ವಣಿ
ತ್ರಯೋವಿಂಶತ್ಯಧಿಕದ್ವಿಶತತಮೋऽಧ್ಯಾಯಃ ॥
॥ ಇತಿ ದ್ರೌಪದೀಸತ್ಯಭಾಮಾಸಂವಾದಪರ್ವಣಿ ದ್ವಿತೀಯೋಧ್ಯಾಯಃ॥

ಇಲ್ಲಿಗೆ ಮಹಾಭಾರತದ ವನಪರ್ವದಲ್ಲಿ ಇನ್ನೂರ ಇಪ್ಪತ್ಮೂರನೆಯ ಅಧ್ಯಾಯ ಮುಗಿಯಿತು.

★ ★ ★ ★

ಇನ್ನೂರ ಇಪ್ಪತ್ನಾಲ್ಕನೆಯ ಅಧ್ಯಾಯ

ದ್ರೌಪದಿಯನ್ನು ಸಮಾಧಾನಮಾಡಿ ಸತ್ಯಭಾಮೆಯಿಂದ ದ್ವಾರಕಾಪ್ರಯಾಣ.

ವೈಶಂಪಾಯನಃ

ಮಾರ್ಕಂಡೆಯಾದಿಭಿರ್ವಿಪ್ರೈಃ ಪಾಂಡವೈಶ್ಚ ಮಹಾತ್ಮಭಿಃ ।
ಕಥಾಭಿರನುಕೂಲಾಭಿಃ ಸಹ ಸ್ಥಿತ್ವಾ ಜನಾರ್ದನಃ ॥೧॥

ತತಸ್ತೈಃ ಸಂವಿದಂ ಕೃತ್ವಾ ಯಥಾವನ್ಮಧುಸೂದನಃ ।
ಆರುರುಕ್ಷೂ ರಥಂ ಸತ್ಯಾಮಾಹ್ವಯಾಮಾಸ ಕೇಶವಃ ॥೨॥

ವೈಶಂಪಾಯನ– ಮಾರ್ಕಂಡೇಯಾದಿ ಬ್ರಾಹ್ಮಣರ ಜೊತೆಯಲ್ಲಿಯೂ ಮತ್ತು ಮಹಾತ್ಮರಾದ ಪಾಂಡವರ ಜೊತೆಯಲ್ಲಿಯೂ ಅನುಕೂಲವಾದ ಮಾತುಗಳನ್ನಾಡುತ್ತಾ ಅವರ ಜೊತೆಯಲ್ಲಿದ್ದು ಜನಾರ್ದನನು ಅವರಿಂದ ಹೊರಡಲು ಅನುಮತಿಯನ್ನು ಪಡೆದು ವಿಧಿವತ್ತಾಗಿ ರಥವನ್ನು ಏರಲು ಬಯಸಿ ಮಧುಸೂದನನಾದ ಕೇಶವನು ಸತ್ಯಭಾಮೆಯನ್ನು ಆಹ್ವಾನಿಸಿದನು.

ಸತ್ಯಭಾಮಾ ತತಸ್ತತ್ರ ಸ್ವಜಿತ್ವಾ ದ್ರುಪದಾತ್ಮಜಾಮ್ ।
ಉವಾಚ ವಚನಂ ಹೃದ್ಯಂ ಯಥಾಭಾವಂ ಸಮಾಹಿತಾ ॥೩॥

ಆಗ ಸತ್ಯಭಾಮೆಯು ಅಲ್ಲಿ ದ್ರೌಪದಿಯನ್ನು ಆಲಿಂಗಿಸಿ ಅವಳ ಮನಸ್ಸಿನ ಭಾವಕ್ಕೆ ಅನುಗುಣವಾಗಿ ಸಮಾಧಾನದಿಂದ ಹಿತವಾದ ಮಾತುಗಳನ್ನು ಆಡಿದಳು.

ಕೃಷ್ಣೇ ಮಾ ಭೂತ್ ತವೋತ್ಕಂಠಾ ಮಾ ವ್ಯಥಾ ಮಾ ಪ್ರಜಾಗರಃ ।
ಭರ್ತೃಭಿರ್ದೇವಸಂಕಾಶೈರ್ಜಿತಾಂ ಪ್ರಾಪ್ಸ್ಯಸಿ ಮೇದಿನೀಮ್ ॥೪॥

ದ್ರೌಪದಿಯೇ, ನೀನು ಕಳವಳವನ್ನಾಗಲೀ, ವ್ಯಥೆಯನ್ನಾಗಲೀ ಪಡಬೇಡ. ಚಿಂತೆಯಿಂದ ನಿದ್ದೆಗೆಡಬೇಡ. ದೇವತೆಗಳನ್ನು ಹೋಲುವ ನಿನ್ನ ಪತಿಗಳಿಂದ ಜಿತವಾದ ಭೂಮಿಯನ್ನು ನೀನು ಹೊಂದುವಿ.

ನ ಹ್ಯೇವಂ ಶೀಲಸಂಪನ್ನಾ ನೈವಂ ಪೂಜಿತಲಕ್ಷಣಾಃ ।
ಪ್ರಾಪ್ನುವಂತಿ ಚಿರಂ ಕ್ಲೇಶಂ ಯಥಾ ತ್ವಮಸಿತೇಕ್ಷಣೇ ॥೫॥

ಎಲೌ ಅಸಿತೇಕ್ಷಣೆಯೇ, ನಿನ್ನಂತೆ ಶೀಲಸಂಪನ್ನರಾದವರು, ನಿನ್ನಂತಹ ಪೂಜ್ಯ ಲಕ್ಷಣಗಳಿಂದ ಕೂಡಿದವರು ಬಹಳ ಕಾಲ ಕ್ಲೇಶವನ್ನು ಅನುಭವಿಸುವುದಿಲ್ಲ.

ಅವಶ್ಯಂ ಚ ತ್ವಯಾ ಭೂಮಿರಿಯಂ ನಿಹತಕಂಟಕಾ ।
ಭರ್ತೃಭಿಃ ಸಹ ಭೋಕ್ತವ್ಯಾ ನಿರ್ದ್ವಂದ್ವೇತಿ ಶ್ರುತಂ ಮಯಾ ॥೬॥

ನೀನು ಖಂಡಿತವಾಗಿ ಶತ್ರುರಹಿತವಾದ ಈ ಭೂಮಿಯನ್ನು ಪತಿಯರ ಜೊತೆಯಲ್ಲಿ ಅಪ್ರತಿದ್ವಂದ್ವಳಾಗಿ ಭೋಗಿಸುವಿ ಎಂಬ ಮಾತನ್ನು ನಾನು ಕೇಳಿದ್ದೇನೆ.

ಧಾರ್ತರಾಷ್ಟ್ರವಧಂ ಕೃತ್ವಾ ವೈರಾಣಿ ಪ್ರತಿಯಾತ್ಯ ಚ ।
ಯುಧಿಷ್ಠಿರಸ್ಥಾಂ ಪೃಥಿವೀಂ ದ್ರಕ್ಷ್ಯಸಿ ದ್ರುಪದಾತ್ಮಜೇ ॥೭॥

ದ್ರುಪದನಂದಿನಿಯೇ, ಧೃತರಾಷ್ಟ್ರಪುತ್ರರ ವಧೆಯನ್ನು ಮಾಡಿ ಅವರು ಮಾಡಿದ ವೈರಕ್ಕೆ ಸೇಡನ್ನು ತೀರಿಸಿ ಯುಧಿಷ್ಠಿರನಲ್ಲಿ ನೆಲೆನಿಂತ ಭೂಮಿಯನ್ನು ನೀನು ನೋಡುವಿ.

ಯಾಸ್ತಾಃ ಪ್ರವ್ರಜಮಾನಾಂ ತ್ವಾಂ ಪ್ರಾಹಸನ್ ದರ್ಪಮೋಹಿತಾಃ ।
ತಾಃ ಕ್ಷಿಪ್ರಂ ಹತಸಂಕಲ್ಪಾ ದ್ರಕ್ಷ್ಯಸಿ ತ್ವಂ ಕುರುಸ್ತ್ರಿಯಃ ॥೮॥

ನೀನು ದ್ಯೂತಸಭೆಯಿಂದ ಕಾಡಿಗೆ ಹೊರಡುವಾಗ ಯಾವ ಕೌರವ ಸ್ತ್ರೀಯರು ದರ್ಪಮೋಹಿತರಾಗಿ ನಿನ್ನನ್ನು ಗೇಲಿಮಾಡಿದರೋ ಅವರು ಕ್ಷಿಪ್ರವಾಗಿಯೇ ಭ್ರಷ್ಟ ಸಂಕಲ್ಪರಾಗುವುದನ್ನು ನೀನು ನೋಡುವಿ.

ತವ ದುಃಖೋಪಪನ್ನಾಯಾ ಯೈರಾಚಿತರಮಪ್ರಿಯಮ್ ।
ವಿದ್ಧಿ ಸಂಪ್ರಸ್ಥಿತಾನ್ ಸರ್ವಾಂಸ್ತಾನ್ ಕೃಷ್ಣೇ ಯಮಸಾದನಮ್ ॥೯॥

ಎಲೌ ಕೃಷ್ಣೆಯೇ, ದುಃಖದಲ್ಲಿರುವ ನಿನಗೆ ಯಾರು ಅಪ್ರಿಯವನ್ನು ಮಾಡಿದ್ದಾರೆಯೋ ಅವರೆಲ್ಲರೂ ಯಮಪಟ್ಟಣಕ್ಕೆ ಹೊರಡಲು ಸಿದ್ಧರಾಗಿದ್ದಾರೆಂದು ತಿಳಿ.

ಯೇ ಚ ತತ್ರ ಸ್ಥಿತಾ ರಾಜ್ಞಿ ತತ್ಪಕ್ಷೀಯಾಃ ಕ್ಷಿತೀಶ್ವರಾಃ ।
ತೇಷಾಂ ಕಾಲಃ ಕ್ಷಿತೀಶಾನಾಂ ಪ್ರಾಪ್ತಃ ಕೃಷ್ಣೇ ದುರಾಸದಃ ।

ಎಲೌ ರಾಣಿಯೇ, ದ್ರೌಪದಿಯೇ, ಆ ಸಭೆಯಲ್ಲಿ ಕೌರವ ಪಕ್ಷದ ರಾಜರು ಯಾರಿದ್ದರೋ ಅವರೆಲ್ಲರಿಗೂ ದುರಾಸದವಾದ ಕಾಲವು ಸಮೀಪಿಸಿದೆ.

ಪುತ್ರಸ್ತೇ ಪ್ರತಿವಿಂಧ್ಯಶ್ಚ ಸುತಸೋಮಸ್ತಥಾವಿಧಃ ।
ಶ್ರುತಕರ್ಮಾರ್ಜುನಿಶ್ಚೈವ ಶತಾನೀಕಶ್ಚ ನಾಕುಲಿಃ ॥೧೦॥

ಸಹದೇವಾಚ್ಚ ಯೋ ಜಾತಃ ಶ್ರುತಸೇನಸ್ತವಾತ್ಮಜಃ ।
ಸರ್ವೇ ಕುಶಲಿನೋ ವೀರಾಃ ಕೃತಾಸ್ತ್ರಾಶ್ಚ ಸುತಾಸ್ತವ ॥೧೧॥

ನಿನ್ನ ಮಕ್ಕಳಾದ ಪ್ರತಿವಿಂಧ್ಯ, ಸುತಸೋಮ, ಅರ್ಜುನನಿಂದ ಪಡೆದ ಶ್ರುತಕರ್ಮ, ನಕುಲನಿಂದ ಪಡೆದ ಶತಾನೀಕ, ಸಹದೇವನಿಂದ ಪಡೆದ ಶ್ರುತಸೇನ ಇವರೆಲ್ಲರೂ ವೀರರಾಗಿ ಅಸ್ತ್ರವಿದ್ಯೆಯನ್ನು ಕಲಿತು ಕ್ಷೇಮದಿಂದಾರೆ.

ಅಭಿಮನ್ಯುರಿವ ಪ್ರೀತಾ ದ್ವಾರವತ್ಯಾಂ ರತಾ ಭೃಶಮ್ ।
ತ್ವಮಿವೈಷಾಂ ಸುಭದ್ರಾ ಚ ಪ್ರೀತ್ಯಾ ಸರ್ವಾತ್ಮನಾ ಸ್ಥಿತಾ ॥೧೨॥

ಅಭಿಮನ್ಯುವಿನಂತೆ ಸಂತೋಷದಿಂದ ದ್ವಾರಾವತಿಯಲ್ಲಿ ಚೆನ್ನಾಗಿ ಸುಖದಿಂದಿದ್ದಾರೆ. ನೀನು ನೋಡಿಕೊಳ್ಳುವಂತೆ ಸುಭದ್ರೆಯು ಈ ಮಕ್ಕಳನ್ನು ಸರ್ವ ಪ್ರಕಾರದಿಂದ ಪ್ರೀತಿಯಿಂದ ನೋಡಿಕೊಳ್ಳುತ್ತಿದ್ದಾಳೆ.

ಪ್ರೀಯತೇ ತವ ನಿರ್ದ್ವಂದ್ವಾ ತೇಭ್ಯಶ್ಚ ವಿಗತಜ್ವರಾ ।
ದುಃಖಿತಾ ತೇನ ದುಃಖೇನ ಸುಖೇನ ಸುಖಿತಾ ತಥಾ ।
ಭೇಜೇ ಸರ್ವಾತ್ಮನಾ ಚೈವ ಪ್ರದ್ಯುಮ್ನಜನನೀ ತಥಾ ॥೧೩॥

ಸುಭದ್ರೆಯು ನಿರ್ದ್ವಂದ್ವಳಾಗಿ ಮಕ್ಕಳನ್ನು ಪ್ರೀತಿಯನ್ನು ಹೊಂದಿದ್ದಾಳೆ ಮತ್ತು ಮಕ್ಕಳಿಂದ ಅವಳಿಗೆ ಯಾವ ಆತಂಕವೂ ಇಲ್ಲ. ಅವರು ದುಃಖಿತರಾದರೆ ಅವಳೂ ದುಃಖಪಡುತ್ತಾಳೆ. ಅವರು ಸುಖಪಟ್ಟರೆ ಅವಳೂ ಸುಖಪಡುತ್ತಾಳೆ ಮತ್ತು ಪ್ರದ್ಯುಮ್ನನ ತಾಯಿಯಾದ ರುಗ್ಮಿಣಿಯೂ ಸಹ ಸರ್ವರೀತಿಯಿಂದ ಅವರನ್ನು ನೋಡುಕೊಳ್ಳುತ್ತಿದ್ದಾಳೆ.

ಭಾನುಪ್ರಭೃತಿಭಿಶ್ಚೈನಾನ್ ವಿಶಿನಷ್ಟಿ ಚ ಕೇಶವಃ ।
ಭೋಜನಾಚ್ಛಾದನೇ ಚೈಷಾಂ ನಿತ್ಯಂ ಮೇ ಶ್ವಶುರಃ ಸ್ಥಿತಃ ॥೧೪॥

ಕೇಶವನು ಭಾನು ಮೊದಲಾದ ತನ್ನ ಮಕ್ಕಳಿಗಿಂತಲೂ ಇವರಲ್ಲಿ ವಿಶೇಷವಾದ ದೃಷ್ಟಿಯನ್ನು ಇಟ್ಟಿದ್ದಾನೆ. ಅವರ ಭೋಜನಾಚ್ಛಾದನ ವಿಷಯದಲ್ಲಿ ನನ್ನ ಮಾವನಾದ ವಸುದೇವನು ಯಾವಾಗಲೂ ಎಚ್ಚರದಿಂದ ಕೂಡಿದವನಾಗಿದ್ದಾನೆ.

ರಾಮಪ್ರಭೃತಯಃ ಸರ್ವೇ ಭಜಂತ್ಯಂಧಕವೃಷ್ಣಯಃ ।
ತುಲ್ಯೋ ಹಿ ಪ್ರಣಯಸ್ತೇಷಾಂ ಪ್ರದ್ಯುಮ್ನಸ್ಯ ಚ ಭಾಮಿನಿ ॥೧೫॥

ಬಲರಾಮ ಮೊದಲಾದವರು ಮತ್ತು ಎಲ್ಲಾ ಅಂಧಕವೃಷ್ಣಿಗಳು ಅವರಲ್ಲಿ ಪ್ರೀತಿಯನ್ನು ಮಾಡಿ ಉಪಚಾರವನ್ನು ಮಾಡುತ್ತಾರೆ. ಎಲೌ ಭಾಮಿನಿಯೇ, ಅವರಿಗೆ ಪ್ರದ್ಯುಮ್ನನ ಮೇಲೆಯೂ ನಿನ್ನ ಮಕ್ಕಳ ಮೇಲೆಯೂ ಸಮಾನವಾದ ಪ್ರೀತಿಯಿದೆ.

ವೈಶಂಪಾಯನಃ

ಏವಮಾದಿ ಪ್ರಿಯಂ ಸತ್ಯಂ ಹೃದ್ಯಮುಕ್ತ್ವಾ ಮನೋಽನುಗಮ್ ।
ಗಮನಾಯ ಮನಶ್ಚಕ್ರೇ ವಾಸುದೇವರಥಂ ಪ್ರತಿ ॥೧೬॥

ವೈಶಂಪಾಯನ– ಇದೇ ಮೊದಲಾದ ಪ್ರಿಯವಾದ, ಹಿತವಾದ ಮತ್ತು ಮನೋನುಸಾರಿಯಾದ ಸತ್ಯವಚನಗಳನ್ನು ಆಡಿ ಕೃಷ್ಣನ ರಥಕ್ಕೆ ಹೋಗಲು ನಿರ್ಧರಿಸಿದಳು.

ತಾಂ ಕೃಷ್ಣಾ ಕೃಷ್ಣಮಹಿಷೀಂ ಚಕಾರಾಭಿಪ್ರದಕ್ಷಿಣಮ್ ।
ಆರುರೋಹಂ ರಥಂ ಶೌರೇಃ ಸತ್ಯಭಾಮಾಽಥ ಭಾಮಿನೀ ॥೧೭॥

ಭಾಮಿನಿಯಾದ ದ್ರೌಪದಿಯು ಕೃಷ್ಣಮಹಿಷಿಯಾದ ಸತ್ಯಭಾಮೆಗೆ ಪ್ರದಕ್ಷಿಣೆಯನ್ನು ಮಾಡಿದಳು. ಅನಂತರ ಸತ್ಯಭಾಮೆಯು ಶೌರಿಯಾದ ಕೃಷ್ಣನ ರಥವನ್ನು ಏರಿದಳು.

ಸ್ಮಯಿತ್ವಾ ತು ಯದುಶ್ರೇಷ್ಠೋ ದ್ರೌಪದೀಂ ಪರಿಸಾಂತ್ವ್ಯ ಚ ।
ಉಪಾವರ್ತ್ಯ ತತಃ ಶೀಘ್ರೈರ್ಹಯೈಃ ಪ್ರಾಯಾತ್ ಪುರಂ ಸ್ವಕಮ್ ॥೧೮॥

ಯದುಶ್ರೇಷ್ಠನಾದ ಕೃಷ್ಣನು ದ್ರೌಪದಿಯನ್ನು ಸಮಾಧಾನಪಡಿಸಿ ಅವರೆಲ್ಲರಿಗೂ ಒಂದು ಮುಗುಳ್ನಗೆಯನ್ನು ಬೀರಿ ರಥವನ್ನು ತಿರುಗಿಸಿ ತನ್ನ ಶೀಘ್ರವಾದ ಹಯಗಳಿಂದ ತನ್ನ ಪಟ್ಟಣಕ್ಕೆ ಹಿಂದಿರುಗಿದನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂಸಂಹಿತಾಯಾಂ ವನಪರ್ವಣಿ
ಚತುರ್ವಿಂಶತ್ಯಧಿಕದ್ವಿಶತತಮೋऽಧ್ಯಾಯಃ ॥
॥ ಇತಿ ದ್ರೌಪದೀಸತ್ಯಭಾಮಾಸಂವಾದಪರ್ವಣಿ ತೃತೀಯೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವನಪರ್ವದಲ್ಲಿ ಇನ್ನೂರ ಇಪ್ಪತ್ತಾಲ್ಕನೆಯ
ಅಧ್ಯಾಯ ಮುಗಿಯಿತು.

॥ ದ್ರೌಪದೀಸತ್ಯಭಾಮಾಸಂವಾದಪರ್ವವು ಮುಗಿಯಿತು ॥

★ ★ ★ ★

ಘೋಷಯಾತ್ರಾಪರ್ವ

ಇನ್ನೂರ ಇಪ್ಪತ್ತೈದನೆಯ ಅಧ್ಯಾಯ

ಬ್ರಾಹ್ಮಣರಿಂದ ಪಾಂಡವರ ವನವಾಸದ ವಾರ್ತೆಯನ್ನು ಕೇಳಿ ಧೃತರಾಷ್ಟ್ರನ ಸಂತಾಪ ಮತ್ತು ತನ್ನ ಪುತ್ರರಿಗೆ ಒದಗಲಿರುವ ಅನರ್ಥವನ್ನು ಚಿಂತಿಸಿ ಶೋಕ.

ಜನಮೇಜಯಃ

ಏವಂ ವನೇ ವರ್ತಮಾನಾ ನರಾಗ್ರ್ಯಾಃ
ಶೀತೋಷ್ಣವಾತಾತಪಕರ್ಶಿತಾಂಗಾಃ ।
ಸರಸ್ತದಾಸಾದ್ಯ ವನಂ ಚ ಪುಣ್ಯಂ ತತಃ
ಪರಂ ಕಿಮಕುರ್ವನ್ ಸ್ಮ ಪಾರ್ಥಾಃ ॥೧॥

ಜನಮೇಜಯ– ಹೀಗೆ ಕಾಡಿನಲ್ಲಿ ಶೀತೋಷ್ಣಗಳಿಂದಲೂ, ಬಿಸಿಲು ಗಾಳಿಗಳಿಂದಲೂ ಕರ್ಶಿತ ಶರೀರವುಳ್ಳ ನರಶ್ರೇಷ್ಠರಾದ ಆ ಪಾಂಡವರು ಆ ಸರೋವರಕ್ಕೂ ಮತ್ತು ಆ ಪುಣ್ಯವನಕ್ಕೂ ಬಂದು ಅಲ್ಲಿಂದ ಮುಂದೆ ಏನು ಮಾಡಿದರು?

ವೈಶಂಪಾಯನಃ

ಸರಸ್ತದಾಸಾದ್ಯ ತು ಪಾಂಡುಪುತ್ರಾ
ಜನಂ ಸಮುತ್ಸೃಜ್ಯ ವಿಹಾಯ ವೇಷಮ್ ।
ವನಾನಿ ರಮ್ಯಾಣ್ಯಥ ಪರ್ವತಾಂಶ್ಚ
ನದೀಪ್ರದೇಶಾಂಶ್ಚ ತದಾ ವಿಚೇರುಃ ॥೨॥

ವೈಶಂಪಾಯನ– ಪಾಂಡುಪುತ್ರರು ಆ ಸರೋವರವನ್ನು ತಲುಪಿ ಜೊತೆಯಲ್ಲಿದ್ದ ಜನರನ್ನು ವಿಸರ್ಜಿಸಿ ವೇಷವನ್ನು ಬದಲಾಯಿಸಿಕೊಂಡು ಸುಂದರವಾದ ಕಾಡಿನಲ್ಲಿ, ಪರ್ವತಗಳಲ್ಲಿ ಮತ್ತು ನದೀಪ್ರದೇಶಗಳಲ್ಲಿ ಆಗ ಸಂಚರಿಸಿದರು.

ತಥಾ ವನೇ ತಾನ್ ವಸತಃ ಪ್ರವೀರಾನ್
ಸ್ವಾಧ್ಯಾಯನವಂತಶ್ಚ ತಪೋಧನಾಶ್ಚ ।
ಅಭ್ಯಾಯಯುರ್ವೇದವಿದಃ ಪುರಾಣಾಃ
ತಾನ್ ಪೂಜಯಾಮಾಸುರಥೋ ನರಾಗ್ರ್ಯಾಃ ॥೩॥

ಆ ರೀತಿಯಲ್ಲಿ ಕಾಡಿನಲ್ಲಿ ವಾಸಿಸುತ್ತಿದ್ದ ವೀರರಾದ ಪಾಂಡವರ ಸಮೀಪಕ್ಕೆ ತಪೋಧನರೂ, ಸ್ವಾಧ್ಯಾಯಶೀಲರೂ, ವೇದಜ್ಞರೂ ಆದ ಹಿರಿಯ ಬ್ರಾಹ್ಮಣರು ಬಂದರು. ಆಗ ಆ ನರಶ್ರೇಷ್ಠರು ಆ ಬ್ರಾಹ್ಮಣರಿಗೆ ಪೂಜೆಯನ್ನು ಮಾಡಿದರು.

ತತಃ ಕದಾಚಿತ್ ಕುಶಲಃ ಕಥಾಸು
ವಿಪ್ರೋಭ್ಯಗಚ್ಛದ್ ಭುವಿ ಕೌರವೇಯಾನ್ ।
ಸ ತೈಃ ಸಮೇತ್ಯಾಥ ಯದೃಚ್ಛಯೈವ
ವೈಚಿತ್ರವೀರ್ಯಂ ನೃಪಮಭ್ಯಗಚ್ಛತ್ ॥೪॥

ಅನಂತರ ಒಮ್ಮೆ ಆ ಬ್ರಾಹ್ಮಣರಲ್ಲಿ ಕಥಾಕುಶಲನಾದ ಒಬ್ಬ ಬ್ರಾಹ್ಮಣನು ದ್ವೈತವನಕ್ಕೆ ಬಂದು ಪಾಂಡವರನ್ನು ಸಂಧಿಸಿದನು. ಅವನು ಅವರ ಜೊತೆಯಲ್ಲಿ ಸಮಾಗಮವನ್ನು ಹೊಂದಿ ಅನಂತರ ಸಹಜವಾಗಿ (ಭಗವದ್ಪ್ರೇರಣೆಯಿಂದ) ಧೃತರಾಷ್ಟ್ರನ ಸಮೀಪಕ್ಕೆ ಬಂದನು.

ಅಥೋಪವಿಷ್ಟಃ ಪ್ರತಿಸತ್ಕೃತಶ್ಚ
ವೃದ್ಧೇನ ರಾಜ್ಞಾ ಕುರುಸತ್ತಮೇನ ।
ಪ್ರಚೋದಿತಃ ಸಂಕಥಯಾಂಬಭೂವ
ಧರ್ಮಾನಿಲೇಂದ್ರಪ್ರಭವಾನ್ ಯಮೌ ಚ ॥೫॥

ಅನಂತರ ಅವನು ಕುಳಿತುಕೊಂಡು ವೃದ್ಧನಾದ, ಕುರುಶ್ರೇಷ್ಠನಾದ ಧೃತರಾಷ್ಟ್ರನಿಂದ ಪೂಜಿತನಾಗಿ ಅನಂತರ ಅವನಿಂದ ಪ್ರೇರಿತನಾಗಿ ಯುಧಿಷ್ಠಿರ, ಭೀಮಸೇನ, ಅರ್ಜುನ ಮತ್ತು ನಕುಲ-ಸಹದೇವರ ವಿಷಯದಲ್ಲಿ ಮಾತನಾಡಿದನು.

ಕೃಶಾಂಶ್ಚ ವಾತಾತಪಕರ್ಶಿತಾಂಗಾನ್
ದುಃಖಸ್ಯ ಚೋಗ್ರಸ್ಯ ಮುಖೇ ಪ್ರಪನ್ನಾನ್ ।
ತಾಂ ಚಾಪ್ಯನಾಥಾಮಿವ ವೀರನಾಥಾಂ
ಕೃಷ್ಣಾಂ ಪರಿಕ್ಲೇಶಗುಣೇನ ಯುಕ್ತಾಮ್ ॥

ಅವನು ಪಾಂಡವರು ಬಿಸಿಲು ಮತ್ತು ವಾತಗಳಿಂದ ಕರ್ಶಿತ ಶರೀರವುಳ್ಳವರಾಗಿ ಕೃಶರಾಗಿದ್ದಾರೆಂದೂ, ಉಗ್ರವಾದ ದುಃಖದ ಮುಖದಲ್ಲಿ ಬಿದ್ದಿದ್ದಾರೆಂದೂ, ವೀರಪತಿಯರನ್ನು ಹೊಂದಿದ ದ್ರೌಪದಿಯು ಅನಾಥೆಯಂತೆ ಕ್ಲೇಶದ ಸಮೂಹದಿಂದ ಕೂಡಿದ್ದಾಳೆಂದೂ ತಿಳಿಸಿದನು.

ವನೇ ತಥಾ ಪಾರ್ಥಿವಪುತ್ರಪೌತ್ರಾನ್
ಶ್ರುತ್ವಾ ತಥಾ ದುಃಖನದೀಂ ಪ್ರಪನ್ನಾನ್ ।
ತತಃ ಕಥಾಸ್ತಸ್ಯ ನಿಶಮ್ಯ ರಾಜಾ
ವೈಚಿತ್ರವೀರ್ಯಃ ಕೃಪಯಾಭಿತಪ್ತಃ ॥
ಪ್ರೋವಾಚ ದೈನ್ಯಾಭಿಹತಾಂತರಾತ್ಮಾ
ನಿಃಶ್ವಾಸಬಾಷ್ಪೋಪಹತಸ್ತದಾನೀಮ್ ॥೬॥

ಕಾಡಿನಲ್ಲಿ ರಾಜಪುತ್ರರೂ ಪೌತ್ರರೂ ಆದ ಪಾಂಡವರು ಆ ರೀತಿಯಲ್ಲಿ ದುಃಖನದಿಯಲ್ಲಿ ಬಿದ್ದಿದ್ದಾರೆಂದು ಕೇಳಿದ ಧೃತರಾಷ್ಟ್ರನು ಪುನಃ ಅವರ ಕಥೆಗಳನ್ನು ಕೇಳಿ ವಿಚಿತ್ರವೀರ್ಯನ ಮಗನಾದ ಆ ರಾಜನು ಕೃಪೆಯಿಂದ ತಾಪವನ್ನು ಹೊಂದಿದನು. ಆಗ ಅವನು ದೈನ್ಯದಿಂದ ಕೂಡಿದ ಮನಸ್ಸುಳ್ಳವನಾಗಿ ನಿಟ್ಟುಸಿರು ಮತ್ತು ಕಣ್ಣೀರಿನಿಂದ ಉಪಹತನಾಗಿ ಮಾತನಾಡಲು ಉದ್ಯುಕ್ತನಾದನು.

ವಾಚಂ ಕಥಂಚಿತ್ಸ್ತ್ಥಿರತಾಮುಪೇತ್ಯ
ತತ್ಸರ್ವಮಾತ್ಮಪ್ರಭವಂ ವಿಚಿಂತ್ಯ ।
ಕಥಂ ನು ಸತ್ಯಃ ಶುಚಿರಾರ್ಯವೃತ್ತೋ
ಜ್ಯೇಷ್ಠಃ ಸುತಾನಾಂ ಮಮ ಧರ್ಮರಾಜಃ ।
ಅಜಾತಶತ್ರುಃ ಪೃಥಿವೀತಳೇ ಸ್ಮ
ಶೇತೇ ಪುರಾ ರಾಂಕವಕೂಟಶಾಯೀ ॥೭॥

ತನ್ನ ಮಾತಿನಲ್ಲಿ ಹೇಗೋ ಸ್ಥೈರ್ಯವನ್ನು ತಂದುಕೊಂಡು ಆ ಅನರ್ಥವೆಲ್ಲವೂ ತನ್ನಿಂದಲೇ ಉಂಟಾದುದೆಂದು ಚಿಂತಿಸಿ ಮಾತನಾಡಿದನು. ಸತ್ಯವಂತನೂ, ಶುಚಿಯೂ, ಶ್ರೇಷ್ಠವಾದ ನಡತೆಯುಳ್ಳವನೂ, ಅಜಾತಶತ್ರುವೂ, ಹಿಂದೆ ಒಳ್ಳೆಯ ಮಂಚದಲ್ಲಿ ಮಲಗುತ್ತಿದ್ದವನೂ ಆದ ನನ್ನ ಜ್ಯೇಷ್ಠಪುತ್ರನಾದ ಧರ್ಮರಾಜನು ಭೂತಳದಲ್ಲಿ ಹೇಗೆ ಮಲಗುತ್ತಾನೆ?

ಪ್ರಬೋಧ್ಯತೇ ಮಾಗಧಸೂತಪೂಗೈರ್ನಿತ್ಯಂ ಸ್ತುವದ್ಭಿಃ ಸ್ವಯಮಿಂದ್ರಕಲ್ಪಃ ।
ಪತತ್ರಿಸಂಘೈಃ ಸ ಜಘನ್ಯರಾತ್ರೇ ಪ್ರಬೋಧ್ಯತೇ ನೂನಮಿಡಾತಳಸ್ಥಃ ॥೮॥

ಸ್ವತಃ ಇಂದ್ರನಂತಿದ್ದ ಯಾವನನ್ನು ಸೂತಮಾಗಧರ ಸಮೂಹವು ನಿತ್ಯವೂ ಸ್ತೋತ್ರವನ್ನು ಮಾಡಿ ನಿದ್ರೆಯಿಂದ ಎಬ್ಬಿಸುತ್ತಿದ್ದಿತೋ ಅಂತಹವನು ಪಶ್ಚಿಮರಾತ್ರಿಯಲ್ಲಿ ಪಕ್ಷಿಗಳ ಗಣದಿಂದ ಎಚ್ಚರಿಸಲ್ಪಡುತ್ತಾನೆ ಮತ್ತು ಭೂತಳದಲ್ಲಿ ಮಲಗಿದ್ದಾನೆ.

ಕಥಂ ನು ವಾತಾತಪಕರ್ಶಿತಾಂಗೋ ವೃಕೋದರಃ ಕೋಪಪರಿಪ್ಲುತಾಂಗಃ ।
ಶೇತೇ ಪೃಥಿವ್ಯಾಮತಥೋಚಿತಾಂಗಃ ಕೃಷ್ಣಾಸಮಕ್ಷಂ ವಸುಧಾತಳಸ್ಥಃ ॥೯॥

ಕೋಪದಿಂದ ತುಂಬಿದ ದೇಹವುಳ್ಳವನಾದ ವೃಕೋದರನು ವಾತಾತಪಗಳ ಕ್ಲೇಶಕ್ಕೆ ಅನರ್ಹನಾದವನು, ಈಗ ವಾತಾತಪಗಳ ಕ್ಲೇಶಕ್ಕೆ ಒಳಗಾಗಿ ದ್ರೌಪದಿಯ ಎದುರಿನಲ್ಲಿ ಭೂತಳದಲ್ಲಿ ಹೇಗೆ ತಾನೆ ಮಲಗುತ್ತಾನೆ?

ತಥಾऽರ್ಜುನಃ ಸುಕುಮಾರೋ ಮನಸ್ವೀ
ವಶೇ ಸ್ಥಿತೋ ಧರ್ಮಸುತಸ್ಯ ರಾಜ್ಞಃ ।
ವಿದೂಯಮಾನೈರಿವ ಸರ್ವಗಾತ್ರೈಃ
ಧ್ರುವಂ ನ ಶೇತೇ ವಸತೀರಮರ್ಷಾತ್ ॥೧೦॥

ಹಾಗೆಯೇ ಸುಕುಮಾರನೂ, ಧೈರ್ಯಶಾಲಿಯೂ, ಧರ್ಮರಾಜನ ವಶದಲ್ಲಿರುವವನೂ ಆದ ಅರ್ಜುನನು ಶರೀರದಲ್ಲೆಲ್ಲಾ ವೇದನೆಯಾದವನಂತೆ ಸಿಟ್ಟಿನಿಂದ ಕೂಡಿದವನಾಗಿ ಖಂಡಿತವಾಗಿ ರಾತ್ರಿಗಳಲ್ಲಿ ಮಲಗುವುದಿಲ್ಲ.

ಯಮೌ ಚ ಕೃಷ್ಣಾಂ ಚ ಯುಧಿಷ್ಠಿರಂ ಚ
ಭೀಮಂ ಚ ದೃಷ್ಟ್ವಾ ಸುಖವಿಪ್ರಯುಕ್ತಮ್ ।

ವಿನಿಃಶ್ವಸನ್ ಸರ್ಪ ಇವೋಗ್ರತೇಜಾ
ಧ್ರುವಂ ನ ಶೇತೇ ವಸತೀರಮರ್ಷಾತ್ ॥೧೧॥

ನಕುಲ-ಸಹದೇವರನ್ನೂ, ದ್ರೌಪದಿಯನ್ನೂ, ಯುಧಿಷ್ಠಿರನನ್ನೂ ಮತ್ತು ಭೀಮನನ್ನೂ ಸುಖದಿಂದ ಚ್ಯುತರಾಗಿರುವುದನ್ನು ನೋಡಿ ಸರ್ಪದಂತೆ ನಿಟ್ಟುಸಿರು ಬಿಡುತ್ತಾ ಉಗ್ರತೇಜಸ್ವಿಯಾದ ಅರ್ಜುನನು ಕ್ರೋಧದಿಂದ ಕೂಡಿದವನಾಗಿ ಖಂಡಿತವಾಗಿ ರಾತ್ರಿಗಳಲ್ಲಿ ನಿದ್ರೆಯನ್ನು ಮಾಡುವುದಿಲ್ಲ.

ತಥಾ ಯಮೌ ಚಾಪ್ಯಸುಖೌ ಸುಖಾರ್ಹೌ
ಸಮೃದ್ಧರೂಪಾವಮರೌ ದಿವೀವ ।
ಪ್ರಜಾಗರಸ್ಥೌ ಧ್ರುವಮಪ್ರಶಾಂತೌ
ಸತ್ಯೇನ ಧರ್ಮೇಣ ಚ ವಾರ್ಯಮಾಣೌ ॥೧೨॥

ಅದರಂತೆ ಸುಖಕ್ಕೆ ಅರ್ಹರಾದ ದೇವಲೋಕದ ದೇವತೆಗಳಂತೆ ಸುಂದರವಾದ ರೂಪವನ್ನು ಹೊಂದಿದ ಈಗ ಕಷ್ಟವನ್ನು ಅನುಭವಿಸಿ ಮನಸ್ಸಿನ ಶಾಂತಿಯನ್ನು ಕಳೆದುಕೊಂಡಿರುವ ನಕುಲ-ಸಹದೇವರು ನಿದ್ರೆಯನ್ನು ಮಾಡದೆ ಸತ್ಯಶೀಲನಾದ ಧರ್ಮರಾಜನಿಂದ (ಪರಾಕ್ರಮವನ್ನು ಮಾಡದಂತೆ ಸತ್ಯ ಮತ್ತು ಧರ್ಮದಿಂದ) ತಡೆಹಿಡಿಯಲ್ಪಟ್ಟಿದ್ದಾರೆ.

ಸಮೀರಣೇನಾಥ ಸಮೋ ಬಲೇನ
ಸಮೀರಣಸ್ಯೈವ ಸುತೋ ಬಲೀಯಾನ್ ।
ಸ ಧರ್ಮಪಾಶೇನ ನಿಬದ್ಧಮೂರ್ತಿಃ
ಧ್ರುವಂ ವಿನಿಃಶ್ವಸ್ಯ ಸಹತ್ಯಮರ್ಷಮ್ ॥೧೩॥

ವಾಯುದೇವರ ಮಗನೂ, ಬಲಶಾಲಿಯೂ, ವಾಯುದೇವರಿಗೆ ಸಮಾನವಾದ ಬಲವುಳ್ಳವನೂ ಆದ ಭೀಮಸೇನನು ಧರ್ಮಪಾಶದಿಂದ ಕಟ್ಟಲ್ಪಟ್ಟವನಾಗಿ ನಿಟ್ಟುಸಿರು ಬಿಡುತ್ತಾ ತನ್ನ ಕೋಪವನ್ನು ನಿಶ್ಚಿತವಾಗಿ ತಡೆದುಕೊಂಡಿದ್ದಾನೆ.

ಸ ಚಾಪಿ ಭೂಮೌ ಪರಿವರ್ತಮಾನೋ
ವಧಂ ಸುತಾನಾಂ ಮಮ ಕಾಂಕ್ಷಮಾಣಃ ।

ಸತ್ಯೇನ ಧರ್ಮೇಣ ಚ ವಾರ್ಯಮಾಣಃ
ಕಾಲಂ ಪ್ರತೀಕ್ಷತ್ಯಧಿಕೋ ರಣೇऽನ್ಯೈಃ ॥೧೪॥

ಅವನಾದರೂ ಭೂಮಿಯಲ್ಲಿ ಹೊರಳಾಡುತ್ತಾ ನನ್ನ ಮಕ್ಕಳ ವಧೆಯನ್ನು ಆಶಿಸುತ್ತಾ ಸತ್ಯದಿಂದಲೂ, ಧರ್ಮದಿಂದಲೂ ನಿವಾರಿಸಲ್ಪಟ್ಟವನಾಗಿ ಉಳಿದವರಿಗಿಂತ ಅಧಿಕವಾಗಿ ಯುದ್ಧದ ಕಾಲವನ್ನು ನಿರೀಕ್ಷಿಸುತ್ತಿದ್ದಾನೆ.

ಅಜಾತಶತ್ರೌ ತು ಜಿತೇ ನಿಕೃತ್ಯಾ
ದುಃಶಾಸನೋ ಯತ್ ಪರುಷಾಣ್ಯವೋಚತ್ ।
ತಾನಿ ಪ್ರವಿಷ್ಟಾನಿ ವೃಕೋದರಾಂಗಂ
ದಹಂತಿ ಕಕ್ಷಾಗ್ನಿರಿವೇಂಧನಾನಿ ॥೧೫॥

ಅಜಾತಶತ್ರುವು ಮೋಸದಿಂದ ಸೋಲಿಸಲ್ಪಟ್ಟಾಗ ದುಶ್ಶಾಸನನು ಯಾವ ಉಗ್ರವಾದ ಮಾತುಗಳನ್ನು ಆಡಿದನೋ ಅವು ವೃಕೋದರನ ಶರೀರವನ್ನು ಪ್ರವೇಶಿಸಿ ಕಾಡ್ಗಿಚ್ಚು ಒಣಗಿದ ಕಟ್ಟಿಗೆಯನ್ನು ಸುಡುವಂತೆ ಸುಡುತ್ತವೆ.

ನ ಪಾಪಕಂ ಧ್ಯಾಸ್ಯತಿ ಧರ್ಮಪುತ್ರೋ
ಧನಂಜಯಶ್ಚಾಪ್ಯನುವರ್ತ್ಸ್ಯತೇ ತಮ್ ।
ಅರಣ್ಯವಾಸೇನ ವಿವರ್ಧತೇ ತು
ಭೀಮಸ್ಯ ಕೋಪೋऽಗ್ನಿರಿವಾನಿಲೇನ ॥೧೬॥

ಧರ್ಮರಾಜನು ಪಾಪವನ್ನು ಚಿಂತಿಸುವುದಿಲ್ಲ ಮತ್ತು ಅರ್ಜುನನು ತನ್ನನ್ನು ಅನುಸರಿಸುವಂತೆ ಮಾಡುತ್ತಾನೆ. ಆದರೆ ಭೀಮನ ಕೋಪವು ಮಾತ್ರ ವಾಯುವಿನಿಂದ ಅಗ್ನಿಯು ಪ್ರಜ್ವಲಿಸುವಂತೆ ಅಭಿವೃದ್ಧಿಯನ್ನು ಹೊಂದುತ್ತದೆ.

ಸ ತೇನ ಕೋಪೇನ ವಿದಹ್ಯಮಾನಃ
ಕರಂ ಕರೇಣಾಭಿನಿಪೀಡ್ಯ ವೀರಃ ।
ವಿನಿಃಶ್ವಸತ್ಯುಷ್ಣಮತೀವ ಘೋರಂ
ದಹನ್ನಿವೇಮಾನ್ ಮಮ ಪುತ್ರಪೌತ್ರಾನ್ ॥೧೭॥

ಆ ವೀರನು ಆ ಕೋಪದಿಂದ ಉರಿಯುತ್ತಾ ಕೈಯನ್ನು ಕೈಯಿಂದ ಹೊಸಕುತ್ತಾ ಈ ನನ್ನ ಪುತ್ರಪೌತ್ರರನ್ನು ಸುಟ್ಟುಬಿಡುವಂತೆ ಮಹಾಘೋರವಾದ ಮತ್ತು ಉಷ್ಣವಾದ ನಿಟ್ಟುಸಿರನ್ನು ಬಿಡುತ್ತಾನೆ.

ಗಾಂಡೀವಧನ್ವಾಚ ವೃಕೋದರಶ್ಚ
ಸರಂಭಿಣಾವಂತಕಕಾಲಕಲ್ಪೌ ।
ನ ಶೇಷಯೇತಾಂ ಯುಧಿ ಶತ್ರುಸೇನಾಂ
ಶರಾನ್ ಕಿರಂತಾವಶನಿಪ್ರಕಾಶಾನ್ ॥೧೮॥

ಗಾಂಡೀವಧನ್ವಿಯಾದ ಅರ್ಜುನನು ಮತ್ತು ವೃಕೋದರನು ಕೋಪದಿಂದ ಕೂಡಿ ಯಮ ಮತ್ತು ಕಾಲನಿಗೆ ಸದೃಶರಾಗಿದ್ದಾರೆ. ಅವರು ಯುದ್ಧದಲ್ಲಿ ಸಿಡಿಲಿನಂತಹ ಬಾಣಗಳನ್ನು ಪ್ರಯೋಗಿಸುತ್ತಾ ಶತ್ರುಸೇನೆಯನ್ನು ಉಳಿಸುವುದಿಲ್ಲ.

ದುರ್ಯೋಧನಃ ಶಕುನಿಃ ಸೂತಪುತ್ರೋ
ದುಃಶಾಸನಶ್ಚಾಪಿ ಸುಮಂದಚೇತಾಃ ।
ಮಧು ಪ್ರಪಾಸ್ಯಂತಿ ನ ತು ಪ್ರಪಾತಂ
ವೃಕೋದರಶ್ಚೈವ ಧನಂಜಯಶ್ಚ ॥೧೯॥

ದುರ್ಯೋಧನ, ಶಕುನಿ, ಸೂತಪುತ್ರನಾದ ಕರ್ಣ ಮತ್ತು ದುಶ್ಶಾಸನ ಇವರೆಲ್ಲರೂ ಮಂದಚೇತನರು. ಮದ್ಯಪಾನವನ್ನು ಮಾಡುತ್ತಾರೆ. ಮುಂದಿರುವ ಪ್ರಪಾತವನ್ನು ಕಾಣುತ್ತಿಲ್ಲ. ಭೀಮಸೇನ ಮತ್ತು ಅರ್ಜುನರು ಮದ್ಯಪಾನವನ್ನು ಮಾಡುವುದಿಲ್ಲ ಮತ್ತು ಅದರಿಂದ ಉಂಟಾಗಬಹುದಾದ ಪ್ರಪಾತವನ್ನೂ ಹೊಂದುವುದಿಲ್ಲ.

ಶುಭಾಶುಭಂ ಕರ್ಮ ನರೋ ಹಿ ಕೃತ್ವಾಪ್ರತೀಕ್ಷತೇ ತಸ್ಯ ಫಲಂ ವಿಪಾಕೇ ।
ಸ ತೇನ ಯುಜ್ಯತ್ಯವಶಃ ಫಲೇನ ಮೋಕ್ಷಃ ಕಥಂ ಸ್ಯಾತ್ ಪುರುಷಸ್ಯ ತಸ್ಮಾತ್

ಮನುಷ್ಯನು ಶುಭಾಶುಭ ಕರ್ಮಗಳನ್ನು ಮಾಡಿ ಕರ್ಮದ ಫಲಗಳನ್ನು ಕರ್ಮವಿಪಾಕದ ಸಮಯದಲ್ಲಿ ನೋಡುತ್ತಾನೆ. ಅವನು ಅವಶನಾಗಿ ಆ ಕರ್ಮದ ಫಲದಿಂದ ಸಂಬಂಧವನ್ನು ಹೊಂದುತ್ತಾನೆ. ಮಾಡಿದ ಶುಭಾಶುಭ ಕರ್ಮಗಳಿಂದ ಮನುಷ್ಯನಿಗೆ ಮೋಚನೆಯು ಹೇಗೆ ಉಂಟಾಗುತ್ತದೆ? (ಮನುಷ್ಯನು ಶುಭಾಶುಭ ಕರ್ಮಗಳ ಫಲವನ್ನು ಹೊಂದದಿರಲು ಹೇಗೆ ಸಾಧ್ಯ ?)

ಕ್ಷೇತ್ರೇ ಸುಕೃಷ್ಟೇ ಹ್ಯುಪಿತೇ ಚ ಸಮ್ಯಗ್
ದೇವೇ ಚ ವರ್ಷತ್ಯೃತುಕಾಲಯುಕ್ತಮ್ ।
ನ ಸ್ಯಾತ್‌ಫಲಂ ತಸ್ಯ ಕುತಃ ಪ್ರಸಿದ್ಧಿಃ
ಅನ್ಯತ್ರ ದೈವಾದಿತಿ ಚಿಂತನೀಯಮ್ ॥೨೧॥

ಭೂಮಿಯನ್ನು ಚೆನ್ನಾಗಿ ಉತ್ತು ಬೀಜವನ್ನು ಬಿತ್ತಿ ಪರ್ಜನ್ಯನು ಋತುಕಾಲಕ್ಕೆ ಅನುಕೂಲವಾದ ಮಳೆಯನ್ನು ನೀಡಿದರೆ ಆ ಬೀಜದಿಂದ ಉಂಟಾದ ಸಸ್ಯದ ಫಲವು ಏಕೆ ದೊರೆಯುವುದಿಲ್ಲ? ದೈವವು ಅನುಕೂಲವಾಗಿರುವಾಗ ಫಲವು ಸಿದ್ಧಿಸುತ್ತದೆ. ದೈವವನ್ನು ಬಿಟ್ಟು ಬೇರೆ ಏನಾದರೂ ಅದಕ್ಕೆ ಕಾರಣವಿದೆಯೇ ಎಂದು ಚಿಂತಿಸಬೇಕು? (ಅಂತಹ ಕಾರಣವು ಯಾವುದೂ ಇಲ್ಲ).

ಕೃತಂ ಮತಾಕ್ಷೇಣ ಯಥಾ ನ ಸಾಧು
ಸಾಧುಪ್ರವೃತ್ತೇನ ಚ ಪಾಂಡವೇನ ।
ಮಯಾ ಚ ದುಷ್ಪುತ್ರವಶಾನುಗೇನ
ಕೃತಃ ಕುರೂಣಾಮಯಮಂತಕಾಲಃ ॥೨೨॥

ಅಕ್ಷಹೃದಯವನ್ನು ಬಲ್ಲ ಶಕುನಿಯು ಮಾಡಿದ ಕಾರ್ಯವು ಎಂದೂ ಸಾಧುವಲ್ಲ. ತನ್ನ ಪ್ರತಿಜ್ಞೆಗೆ ಅನುಸಾರವಾಗಿ ಸಾಧುಮಾರ್ಗದಲ್ಲಿ ಪ್ರವೃತ್ತನಾದ ಪಾಂಡವರಿಂದಲೂ ಮತ್ತು ದುಷ್ಪುತ್ರನಿಗೆ ವಶನಾಗಿ ಕಾರ್ಯವನ್ನು ಮಾಡಿದ ನನ್ನಿಂದಲೂ ಕುರುಕುಲಕ್ಕೆ ಈ ವಿನಾಶಕಾಲವು ತಂದೊಡ್ಡಲ್ಪಟ್ಟಿತು.

ಧ್ರುವಂ ಪ್ರಶಾಮ್ಯತ್ಯಸಮೀರಿತೋಽಗ್ನಿಃ
ಧ್ರುವಂ ಪ್ರಜಾಸ್ಯತ್ಯುತ ಗರ್ಭಿಣೀ ಯಾ ।
ಧ್ರುವಂ ದಿನಾದೌ ರಜನೀಪ್ರಣಾಶಃ
ತಥಾ ಕ್ಷಪಾದೌ ಚ ದಿನಪ್ರಣಾಶಃ ॥೨೩॥

ವಾಯುವಿನಿಂದ ಪ್ರೇರಿತನಾಗದ ಅಗ್ನಿಯು ಖಂಡಿತವಾಗಿ ಶಾಂತವಾಗುತ್ತದೆ. (ವಾಯುವಿನಿಂದ ಪ್ರೇರಿತನಾದ ಅಗ್ನಿಯು ಖಂಡಿತವಾಗಿ ದಾಹರೂಪವಾದ ಶಿಕ್ಷೆಯನ್ನು ಕೊಡುತ್ತಾನೆ). ಶಿಕ್ಷೆಯನ್ನು ಕೊಡುವನು. ಗರ್ಭಿಣಿಯಾದವಳು ನಿಶ್ಚಿತವಾಗಿ ಪ್ರಸವಿಸುವಳು. ದಿನದ ಆದಿಯಲ್ಲಿ ರಾತ್ರಿಯ ನಾಶವೂ, ರಾತ್ರಿಯ ಆದಿಯಲ್ಲಿ ದಿನದ ನಾಶವು ಖಂಡಿತವಾಗಿ ಉಂಟಾಗುವುದು.

ಕ್ರಿಯೇತ ತಸ್ಮಾನ್ನ ಪರೇ ಚ ಕುರ್ಯುಃ
ದತ್ತೇ ನ ದದ್ಯುಃ ಪುರುಷಾಃ ಕಥಂಸ್ವಿತ್ ।
ಪ್ರಾಪ್ಯಾರ್ಥಕಾಲಂ ಚ ಭವೇದನರ್ಥಃ
ಕಥಂ ನ ತತ್ ಸ್ಯಾದಿತಿ ತತ್ಕೃತಃ ಸ್ಯಾತ್ ॥೨೪॥

ಆದ್ದರಿಂದ ತಾನು ಪಾಪಕಾರ್ಯವನ್ನು ಮಾಡಬಾರದು. ಇನ್ನೊಬ್ಬರು ಮಾಡಿದರೆ ಮಾಡಲಿ. ಪುರುಷರಿಗೆ ಏನು ಕೊಡುತ್ತೇವೋ ಅದನ್ನು ಅವರು ಹೇಗೆ ಹಿಂದಿರುಗಿಸಿ ಕೊಡುವುದಿಲ್ಲ? ದುಷ್ಕರ್ಮವನ್ನು ಮಾಡಿದವರಿಗೆ ಆ ಕರ್ಮವಿಪಾಕದ ಕಾಲವು ಬಂದಾಗ ಅನರ್ಥವು ಆಗಿಯೇ ತೀರುತ್ತದೆ. ಅನರ್ಥವು ಆಗಬಾರದು ಎಂದು ಚಿಂತಿಸಿದರೆ ಅದು ಆಗದೇ ಇರಲು ಹೇಗೆ ಸಾಧ್ಯ ?

ಕಥಂ ನ ಭಿದ್ಯೇತ ನ ಚ ಸ್ರವೇತ
ನ ಚ ಪ್ರಸಿದ್ಧ್ಯೇದಿತಿ ರಕ್ಷಿತವ್ಯಮ್ ।
ಅರಕ್ಷ್ಯಮಾಣಃ ಶತಧಾ ವಿಕೀರ್ಯೇತ್
ಧ್ರುವಂ ನ ನಾಶೋಽಸ್ತಿ ಕೃತಸ್ಯ ಲೋಕೇ ॥೨೫॥

ಮಾಡಿದ ಸತ್ಕರ್ಮವು ನಾಶವಾಗದಂತೆ, ನಿಧಾನವಾಗಿ ಸ್ರವಿಸಿ ಹೋಗದಂತೆ, ಪ್ರಸಿದ್ಧಿಯಿಂದ ಹಾಳಾಗಿ ಹೋಗದಂತೆ ರಕ್ಷಿಸಬೇಕು. ರಕ್ಷಣೆ ಮಾಡದಿದ್ದರೆ ಅದು ನೂರು ರೀತಿಯಲ್ಲಿ ಸೋರಿಹೋಗುತ್ತದೆ. ಲೋಕದಲ್ಲಿ ಮಾಡಿದ ಕೆಟ್ಟ ಕರ್ಮಕ್ಕೆ ಎಂದೂ ನಾಶವುಂಟಾಗುವುದಿಲ್ಲ (ಈ ಶ್ಲೋಕದ ಅರ್ಥವನ್ನು ತಿಳಿಯುವುದು ಕಷ್ಟವಾಗಿದೆ).

ಗತೋ ಹ್ಯರಣ್ಯಾದಪಿ ಶಕ್ರಲೋಕಂ
ಧನಂಜಯಃ ಪಶ್ಯತ ವೀರ್ಯಮಸ್ಯ ।
ಅಸ್ತ್ರಾಣಿ ದಿವ್ಯಾನಿ ಚತುರ್ವಿಧಾನಿ
ಜ್ಞಾತ್ವಾ ಪುನರ್ಲೋಕಮಿಮಂ ಪ್ರಪನ್ನಃ ॥೨೬॥

ಕಾಡಿನಿಂದಲೂ ಕೂಡ ಧನಂಜಯನು ಇಂದ್ರಲೋಕಕ್ಕೆ ಹೋಗಿದ್ದಾನೆ. ಅವನ ಸಾಮರ್ಥ್ಯವನ್ನು ನೋಡಿ. ನಾಲ್ಕುವಿಧವಾದ ದಿವ್ಯಾಸ್ತ್ರಗಳನ್ನು ಸಂಪಾದಿಸಿ ಪುನಃ ಈ ಲೋಕಕ್ಕೆ ಬಂದಿದ್ದಾನೆ.

ಸ್ವರ್ಗಂ ಹಿ ಗತ್ವಾ ಸಶರೀರ ಏವ
ಕೋ ಮಾನುಷಃ ಪುನರಾಗಂತುಮಿಚ್ಛೇತ್ ।
ಅನ್ಯತ್ರ ಕಾಲೋಪಹತಾನನೇಕಾನ್
ಸಮೀಕ್ಷಮಾಣಸ್ತು ಕುರೂನ್ ಮುಮೂರ್ಷೂನ್ ॥೨೭॥

ಸಶರೀರವಾಗಿ ಸ್ವರ್ಗಕ್ಕೆ ಹೋದ ಯಾವ ಮನುಷ್ಯನು ಕಾಲೋಪಹತರಾಗಿ ಮರಣವನ್ನು ಹೊಂದಲಿರುವ ಕುರುಗಳನ್ನು ನೋಡುವವನಾಗದಿದ್ದರೆ ಬೇರೆ ಯಾವನು ಪುನಃ ಈ ಲೋಕಕ್ಕೆ ಹಿಂದಿರುಗಲು ಇಚ್ಛಿಸುತ್ತಾನೆ?

ಧನುರ್ಗ್ರಾಹಶ್ಚಾರ್ಜುನಃ ಸವ್ಯಸಾಚೀ
ಧನುಶ್ಚ ತದ್ಗಾಂಡಿವಂ ಭೀಮವೇಗಮ್ ।
ಅಸ್ತ್ರಾಣಿ ದಿವ್ಯಾನಿ ಚ ತಾನಿ ತಸ್ಯ
ತ್ರಯಸ್ಯ ತೇಜಃ ಪ್ರಸಹೇತ ಕೋಽನು ॥೨೮॥

ಧನುಸ್ಸನ್ನು ಹಿಡಿದಿರುವವನು ಸವ್ಯಸಾಚಿಯಾದ ಅರ್ಜುನ. ಧನುಸ್ಸಾದರೂ ಭಯಂಕರ ವೇಗವಾದ ಗಾಂಡೀವ ಧನುಸ್ಸು. ಅವನ ಬಳಿ ಇರುವ ಅಸ್ತ್ರಗಳು ದಿವ್ಯಾಸ್ತ್ರಗಳು. ಅರ್ಜುನ, ಗಾಂಡೀವ ಧನುಸ್ಸು ಮತ್ತು ದಿವ್ಯಾಸ್ತ್ರಗಳು ಈ ಮೂರರ ಸಾಮರ್ಥ್ಯವನ್ನು ತಡೆಯುವವನು ಯಾವನು?

ನಿಶಮ್ಯ ತದ್ವಚನಂ ಪಾರ್ಥಿವಸ್ಯ
ದುರ್ಯೋಧನಃ ಸಹಿತಃ ಸೌಬಲೇನ ।
ಉವಾಚ ತತ್ಕರ್ಣಮುಪೇತ್ಯ ಸರ್ವಂ
ಸ ಚಾಪ್ಯಹೃಷ್ಟೋಽಭವದಲ್ಪಚೇತಾಃ ॥೨೯॥

ಧೃತರಾಷ್ಟ್ರನ ಈ ಮಾತುಗಳನ್ನು ಕೇಳಿ ದುರ್ಯೋಧನನು ಶಕುನಿಯಿಂದ ಸಹಿತನಾಗಿ ಕರ್ಣನ ಸಮೀಪಕ್ಕೆ ಹೋಗಿ ಅವೆಲ್ಲವನ್ನೂ ಹೇಳಿದನು. ಅಲ್ಪಬುದ್ಧಿಯುಳ್ಳ ಕರ್ಣನೂ ಸಹ ಅಸಂತುಷ್ಟನಾದನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂಸಂಹಿತಾಯಾಂ ವನಪರ್ವಣಿ ಪಂಚವಿಂಶತ್ಯಧಿಕದ್ವಿಶತತಮೋಽಧ್ಯಾಯಃ ॥

॥ ಇತಿ ಘೋಷಯಾತ್ರಾಪರ್ವಣಿ ಧೃತರಾಷ್ಟ್ರಖೇದವಾಕ್ಯಂ ನಾಮ ಪ್ರಥಮೋಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವನಪರ್ವದಲ್ಲಿ ಇನ್ನೂರ ಇಪ್ಪತ್ತೈದನೆಯ ಅಧ್ಯಾಯ ಮುಗಿಯಿತು.

★ ★ ★ ★

ಇನ್ನೂರ ಇಪ್ಪತ್ತಾರನೆಯ ಅಧ್ಯಾಯ

ಕರ್ಣ-ಶಕುನಿಗಳಿಂದ ದುರ್ಯೋಧನನಿಗೆ ದ್ವೈತವನಕ್ಕೆ ಹೋಗುವ ಪ್ರೇರಣೆ.

ವೈಶಂಪಾಯನಃ

ಧೃತರಾಷ್ಟ್ರಸ್ಯ ತದ್ವಾಕ್ಯಂ ನಿಶಮ್ಯ ಶಕುನಿಸ್ತದಾ ।
ದುರ್ಯೋಧನಮಿದಂ ಕಾಲೇ ಕರ್ಣೇನ ಸಹಿತೋಽಬ್ರವೀತ್ ॥೧॥

ವೈಶಂಪಾಯನ– ಧೃತರಾಷ್ಟ್ರನ ಈ ಮಾತನ್ನು ಕೇಳಿ ಆಗ ಶಕುನಿಯು ಕರ್ಣನ ಜೊತೆಯಲ್ಲಿ ಕೂಡಿದವನಾಗಿ ಯೋಗ್ಯವಾದ ಕಾಲದಲ್ಲಿ ದುರ್ಯೋಧನನನ್ನು ಕುರಿತು ಈ ರೀತಿ ಹೇಳಿದನು.

ಪ್ರವ್ರಾಜ್ಯ ಪಾಂಡವಾನ್ ವೀರಾನ್ ಸ್ವೇನ ವೀರ್ಯೇಣ ಭಾರತ ।
ಭುಂಕ್ಷ್ವೇಮಾಂ ಪೃಥಿವೀಮೇಕೋ ದಿವಿ ಶಂಬರಹಾ ಯಥಾ ॥೨॥

ಭಾರತನೇ, ನಿನ್ನ ಸಾಮರ್ಥ್ಯದಿಂದ ವೀರರಾದ ಪಾಂಡವರನ್ನು ಕಾಡಿಗೆ ಕಳುಹಿಸಿ ಈ ಭೂಮಿಯನ್ನು ನೀನೊಬ್ಬನೇ ದೇವಲೋಕದ ಶಂಬರಾರಿಯಾದ ಮನ್ಮಥನಂತೆ ಆಳುವವನಾಗು.

ತವಾದ್ಯ ಪೃಥಿವೀ ರಾಜನ್ನಖಿಲಾ ಸಾಗರಾಂಬರಾ ।
ಸಪರ್ವತವನಾರಾಮಾ ಸಹ ಸ್ಥಾವರಜಂಗಮಾ ॥೩॥

ರಾಜನೇ, ಪರ್ವತ-ವನ-ಉದ್ಯಾನವನಗಳಿಂದ ಕೂಡಿದ ಸ್ಥಾವರಜಂಗಮಗಳಿಂದ ಕೂಡಿದ ಸಾಗರಾಂಬರೆಯಾದ ಈ ಸಮಗ್ರಭೂಮಿಯು ಈ ದಿನ ನಿನ್ನದಾಗಿದೆ.

ಪ್ರಾಚ್ಯಾಶ್ಚ ದಾಕ್ಷಿಣಾತ್ಯಾಶ್ಚ ಪ್ರತೀಚ್ಯೋದಿಚ್ಯವಾಸಿನಃ ।
ಕೃತಾಃ ಕರಪ್ರದಾಃ ಸರ್ವೇ ರಾಜಾನಸ್ತೇ ನರಾಧಿಪ ॥೪॥

ಎಲೈ ನರಾಧಿಪನೇ, ಪೂರ್ವದಿಕ್ಕಿನವರು, ದಕ್ಷಿಣದಿಕ್ಕಿನವರು, ಪಶ್ಚಿಮದಿಕ್ಕಿನವರು ಮತ್ತು ಉತ್ತರದಿಕ್ಕಿನವರೂ ಆದ ಎಲ್ಲ ರಾಜರೂ ನಿನಗೆ ಕಪ್ಪವನ್ನು ಕೊಡುವಂತೆ ಮಾಡಲ್ಪಟ್ಟಿದ್ದಾರೆ.

ಯಾ ಹಿ ಮಾ ದೀಪ್ಯಮಾನೇವ ಪಾಂಡವಾನಭಜತ್ಪುರಾ ।
ಸಾದ್ಯ ಲಕ್ಷ್ಮೀಸ್ತ್ವಯಾ ರಾಜನ್ನವಾಪ್ತಾ ಭ್ರಾತೃಭಿಃ ಸಹ ॥೫॥

ಎಲೈ ರಾಜನೇ, ಯಾವ ಸಂಪತ್ತು ಹಿಂದೆ ಪಾಂಡವರಲ್ಲಿ ಬೆಳಗುತ್ತಿತ್ತೋ ಆ ಸಂಪತ್ತನ್ನು ನೀನು ಈ ದಿನ ಸಹೋದರರ ಜೊತೆಯಲ್ಲಿ ಪಡೆದಿದ್ದೀಯೆ.

ಇಂದ್ರಪ್ರಸ್ಥಗತೇ ಯಾಂ ತಾಂ ದೀಪ್ಯಮಾನಾಂ ಯುಧಿಷ್ಠಿರೇ ।
ಅಪಶ್ಯಾಮ ಶ್ರಿಯಂ ರಾಜನ್ ದೃಶ್ಯತೇ ಸಾ ತವಾದ್ಯ ವೈ ।
ಶತ್ರವಸ್ತವ ರಾಜೇಂದ್ರ ನಚಿರಂ ಶೋಕಕರ್ಶಿತಾಃ ॥೬॥

ಯುಧಿಷ್ಠಿರನು ಇಂದ್ರಪ್ರಸ್ಥದಲ್ಲಿರುವಾಗ ಅವನಲ್ಲಿ ಯಾವ ಸಂಪತ್ತನ್ನು ನೋಡಿದ್ದೆವೋ, ಎಲೈ ರಾಜನೇ, ಆ ಸಂಪತ್ತು ಈ ದಿನ ನಿನ್ನದಾಗಿದೆ. ರಾಜೇಂದ್ರನೇ, ನಿನ್ನ ಶತ್ರುಗಳು ಬೇಗ ಇನ್ನೂ ಶೋಕಕರ್ಶಿತರಾಗುತ್ತಾರೆ.

ಸಾ ತು ಬುದ್ಧಿಬಲೇನೇಯಂ ರಾಜ್ಞಸ್ತಸ್ಮಾದ್ ಯುಧಿಷ್ಠಿರಾತ್ ।
ತ್ವಯಾऽऽಕ್ಷಿಪ್ತಾ ಮಹಾಬಾಹೋ ದೀಪ್ಯಮಾನೇವ ದೃಶ್ಯತೇ ॥೭॥

ಎಲೈ ಮಹಾಬಾಹುವೇ, ನೀನು ನಿನ್ನ ಬುದ್ಧಿಬಲದಿಂದ ಯುಧಿಷ್ಠಿರ ರಾಜನಿಂದ ಅಪಹರಿಸಿ ಹಾರಿಸಿಕೊಂಡು ಬಂದ ಈ ಸಂಪತ್ತು ನಿನ್ನಲ್ಲಿ ಬೆಳಗುವಂತೆ ಕಾಣುತ್ತಿದೆ.

ತಥೈವ ತವ ರಾಜೇಂದ್ರ ರಾಜಾನಃ ಪರವೀರಹನ್ ।
ಶಾಸನೇऽಧಿಷ್ಠಿತಾಃ ಸರ್ವೇ ಕಿಂ ಕುರ್ಮ ಇತಿ ವಾದಿನಃ ॥೮॥

ಎಲೈ ರಾಜೇಂದ್ರನೇ, ಎಲೈ ಶತ್ರುವೀರಸಂಹಾರಕನೇ, ಹಾಗೆಯೇ ಎಲ್ಲ ರಾಜರೂ ನಿನ್ನ ಆಳ್ವಿಕೆಗೆ ಒಳಪಟ್ಟವರಾಗಿ ನಿನಗೆ ಏನು ಸೇವೆಯನ್ನು ಮಾಡೋಣ ಎಂದು ಕೇಳುತ್ತಿದ್ದಾರೆ.

ತವೇಯಂ ಪೃಥಿವೀ ರಾಜನ್ ನಿಖಿಲಾ ಸಾಗರಾಂಬರಾ ।
ಸಪರ್ವತವನಾ ದೇವೀ ಸಗ್ರಾಮನಗರಾಕರಾ ॥೯॥

ನಾನಾವನೋದ್ದೇಶವತೀ ಪರ್ವತೈರುಪಶೋಭಿತಾ ।
ನಾನಾಜನಪದಾಕೀರ್ಣಾ ಸ್ಫೀತರಾಷ್ಟ್ರಾ ಮಹಾಬಲಾ ॥೧೦॥

ಸಾಗರಾಂಬರಳಾದ ಪರ್ವತವನಗಳಿಂದಲೂ, ಗ್ರಾಮನಗರಗಳಿಂದಲೂ ಕೂಡಿದ ನಾನಾವನೋದ್ದೇಶಗಳಿಂದಲೂ, ಪರ್ವತಗಳಿಂದಲೂ ಶೋಭಿತವಾದ, ನಾನಾ ಜನಪದರಿಂದ ನಿಬಿಡವಾದ ಪರಿಶುದ್ಧವಾದ ರಾಷ್ಟ್ರವನ್ನು ಹೊಂದಿದ ಮಹಾಬಲವುಳ್ಳ ಈ ಪೃಥಿವೀದೇವಿಯು ನಿನ್ನವಳಾಗಿದ್ದಾಳೆ.

ವಂದ್ಯಮಾನೋ ದ್ವಿಜೈ ರಾಜನ್ ಪೂಜ್ಯಮಾನಶ್ಚ ರಾಜಭಿಃ ।
ಪೌರುಷಾದ್ ದಿವಿ ದೇವೇಷು ಭ್ರಾಜಸೇ ರಶ್ಮಿವಾನಿವ ॥೧೧॥

ರಾಜನೇ, ನೀನು ಬ್ರಾಹ್ಮಣರಿಂದ ವಂದ್ಯಮಾನವಾಗಿ, ರಾಜರಿಂದ ನಮಸ್ಕರಿಸಲ್ಪಟ್ಟು ನಿನ್ನ ಸಾಮರ್ಥ್ಯದಿಂದ ಸೂರ್ಯನು ದೇವತೆಗಳಲ್ಲಿ ಕಂಗೊಳಿಸುವಂತೆ ಕಂಗೊಳಿಸುತ್ತಿದ್ದೀಯೆ.

ರುದ್ರೈರಿವ ಯಮೋ ರಾಜಾ ಮರುದ್ಭಿರಿವ ವಾಸವಃ ।
ಕುರುಭಿಸ್ತ್ವಂ ವೃತೋ ರಾಜನ್ ಭಾಸಿ ನಕ್ಷತ್ರರಾಡಿವ ॥೧೨॥

ಎಲೈ ರಾಜನೇ, ಯಮನು ರುದ್ರಗಣದಿಂದ ಸುತ್ತುವರಿಯಲ್ಪಟ್ಟಂತೆ ಇಂದ್ರನು ಮರುತ್ತುಗಳಿಂದ ಸುತ್ತುವರಿಯಲ್ಪಟ್ಟಂತೆ ನೀನು ಕುರುಗಳಿಂದ ಸುತ್ತುವರಿಯಲ್ಪಟ್ಟು ನಕ್ಷತ್ರರಾಜನಾದ ಚಂದ್ರನಂತೆ ಬೆಳಗುತ್ತಿದ್ದೀಯೆ.

ಯೇ ಸ್ಮ ತೇ ನಾದ್ರಿಯಂತೇऽಜ್ಞಾನೋದ್ವಿಜಂತೇ ಕದಾಚನ ।
ಪಶ್ಯಾಮಸ್ತಾನ್ ಶ್ರಿಯಾ ಹೀನಾನ್ ಪಾಂಡವಾನ್ ವನವಾಸಿನಃ ॥೧೩॥

ಯಾವ ಅಜ್ಞರು ನಿನ್ನನ್ನು ಆದರಿಸುವುದಿಲ್ಲವೋ, ನಿನಗೆ ಹೆದರುವುದಿಲ್ಲವೋ ಅಂತಹ ಪಾಂಡವರು ಸಂಪತ್ತನ್ನು ಕಳೆದುಕೊಂಡು ವನವಾಸಿಗಳಾಗಿರುವುದನ್ನು ನಾವು ನೋಡುತ್ತಿದ್ದೇವೆ.

ಶ್ರೂಯತೇ ಹಿ ಮಹಾರಾಜ ಸರೋ ದ್ವೈತವನಂ ಪ್ರತಿ ।
ವಸಂತಃ ಪಾಂಡವಾಃ ಸಾರ್ಧಂ ಬ್ರಾಹ್ಮಣೈರ್ವನವಾಸಿಭಿಃ ॥೧೪॥

ಎಲೈ ಮಹಾರಾಜನೇ, ದ್ವೈತವನದ ಸಮೀಪದ ಸರೋವರದಲ್ಲಿ ಪಾಂಡವರು ವನವಾಸಿಗಳಾದ ಬ್ರಾಹ್ಮಣರ ಜೊತೆಯಲ್ಲಿ ವಾಸಮಾಡುತ್ತಿದ್ದಾರೆ ಎಂದು ಕೇಳಿಬರುತ್ತಿದೆ.

ಸಂಪ್ರಯಾಹಿ ಮಹಾರಾಜ ಶ್ರಿಯಾ ಪರಮಯಾ ಯುತಃ ।
ತಾಪಯನ್ ಪಾಂಡುಪುತ್ರಾಂಸ್ತ್ವಂ ರಶ್ಮಿಮಾನಿವ ತೇಜಸಾ ॥೧೫॥

ಎಲೈ ಮಹಾರಾಜನೇ, ಪರಮಸಂಪತ್ತಿನಿಂದ ಕೂಡಿದವನಾಗಿ ಪಾಂಡುಪುತ್ರರ ಬಳಿಗೆ ಹೋಗಿ ತನ್ನ ತೇಜಸ್ಸಿನಿಂದ ಸೂರ್ಯನು ಸಂತಾಪಗೊಳಿಸಿದಂತೆ ಅವರನ್ನು ಸಂತಾಪಗೊಳಿಸು.

ಸ್ಥಿತೋ ರಾಜ್ಯೇ ಚ್ಯುತಾನ್ ರಾಜ್ಯಾತ್ ಶ್ರಿಯಾ ಹೀನಾಂಶ್ರಿಯಾ ವೃತಃ ।
ಅಸಮೃದ್ಧಾನ್ ಸಮೃದ್ಧಾರ್ಥಃ ಪಶ್ಯ ಪಾಂಡುಸುತಾನ್ ನೃಪ ॥೧೬॥

ಎಲೈ ರಾಜನೇ, ರಾಜ್ಯದಲ್ಲಿ ಸ್ಥಾಪಿತನಾದ ನೀನು ರಾಜ್ಯಭ್ರಷ್ಟರಾದಂತಹ, ಸಂಪದ್ಯುಕ್ತನಾದ ನೀನು ಸಂಪತ್ತಿನಿಂದ ರಹಿತರಾದಂತಹ, ಸಮೃದ್ಧನಾದ ನೀನು ಸಮೃದ್ಧಿಯಿಲ್ಲದಂತಹ, ಪಾಂಡವರನ್ನು ನೋಡು.

ವಂದೀ

ಮಹಾಭಿಜನಸಂಪನ್ನಂ ಭದ್ರೇ ಮಹತಿ ಸಂಸ್ಥಿತಮ್ ।
ಪಾಂಡವಾಸ್ತ್ವಭಿವೀಕ್ಷಂತಾಂ ಯಯಾತಿಮಿವ ನಾಹುಷಮ್ ॥೧೭॥

ವಂದೀ– ಶ್ರೇಷ್ಠವಾದ ವಂಶದಲ್ಲಿ ಹುಟ್ಟಿ ಮಹಾಸಂಪತ್ತಿನಲ್ಲಿ ಇರುವ ನಿನ್ನನ್ನು ನಹುಷ ಪುತ್ರನಾದ ಯಯಾತಿಯನ್ನು ನೋಡಿದಂತೆ ಪಾಂಡವರು ನೋಡಲಿ.

ಯಾಂ ಶ್ರಿಯಂ ಸೃಹೃದಶ್ಚೈವ ದುರ್ಹೃದಶ್ಚ ವಿಶಾಂಪತೇ ।
ಪಶ್ಯಂತಿ ಪುರುಷೇ ದೀಪ್ತಾಂ ಸ ಸಮರ್ಥೋ ಭವತ್ಯುತ ॥೧೮॥

ಸಮಸ್ಥೋ ವಿಷಮಸ್ಥಾನ್ ಹಿ ದುರ್ಹೃದೋ ಯೋಽಭಿವೀಕ್ಷತೇ ।
ಜಗತೀಸ್ಥಾನಿವಾದ್ರಿಸ್ಥಃ ಕಿಮತಃ ಪರಮಂ ಸುಖಮ್ ॥೧೯॥

ಎಲೈ ರಾಜನೇ, ಮಿತ್ರರು ಮತ್ತು ಶತ್ರುಗಳು ಯಾವ ಪುರುಷನಲ್ಲಿ ಇಂತಹ ದೀಪ್ತವಾದ ಸಂಪತ್ತನ್ನು ನೋಡುತ್ತಾರೆಯೋ ಅಂತಹ ಪುರುಷನು ಸಮರ್ಥನೆನಿಸುತ್ತಾನೆ. ಜೀವನದಲ್ಲಿ ಸಮವಾದ ಸ್ಥಿತಿಯಲ್ಲಿರುವವನು ವಿಷಮ ಸ್ಥಿತಿಯಲ್ಲಿರುವ ಶತ್ರುಗಳನ್ನು ಆಕಾಶದಲ್ಲಿರುವ (ಪರ್ವತದ ಮೇಲಿರುವ) ಸೂರ್ಯನು

ಭೂಮಿಯಲ್ಲಿರುವವರನ್ನು ನೋಡಿದಂತೆ ಯಾವನು ನೋಡುತ್ತಾನೆಯೋ ಅದಕ್ಕಿಂತ ಪರಮಸುಖವಾದುದು ಯಾವುದಿದೆ?

ನ ಪುತ್ರಧನಲಾಭೇನ ನ ರಾಜ್ಯೇನಾಪಿ ವಿಂದತಿ ।
ಪ್ರೀತಿಂ ನೃಪತಿಶಾರ್ದೂಲ ಯಾಮಮಿತ್ರಾಪದರ್ಶನಾತ್ ॥೨೦॥

ಎಲೈ ರಾಜಶಾರ್ದೂಲನೇ, ಶತ್ರುಗಳು ಕಷ್ಟದಲ್ಲಿರುವುದನ್ನು ನೋಡುವುದರಿಂದ ಎಂತಹ ಸುಖವುಂಟಾಗುತ್ತದೆಯೋ ಅಂತಹ ಸುಖವು ಪುತ್ರಲಾಭದಿಂದಲಾಗಲೀ, ಧನಲಾಭದಿಂದಲಾಗಲೀ ಅಥವಾ ರಾಜ್ಯಲಾಭದಿಂದಲಾಗಲೀ ಆಗುವುದಿಲ್ಲ.

ಕಿಂ ನು ತಸ್ಯ ಸುಖಂ ನ ಸ್ಯಾದಾಶ್ರಮೇ ಯೋ ಧನಂಜಯಮ್ ।
ಅಭಿವೀಕ್ಷೇತ ಸಿದ್ಧಾರ್ಥೋ ವಲ್ಕಲಾಜಿನವಾಸಸಮ್ ॥೨೧॥

ಯಾವನು ತಾನು ಸಂಪದ್ಯುಕ್ತನಾಗಿ ಆಶ್ರಮದಲ್ಲಿ ನಾರುಮಡಿ ಮತ್ತು ಕೃಷ್ಣಾಜಿನವನ್ನು ಧರಿಸಿದ ಅರ್ಜುನನನ್ನು ನೋಡುವನೋ ಅವನಿಗೆ ಸುಖವಾಗದೇ ಇರಲು ಹೇಗೆ ಸಾಧ್ಯ ?

ಸುವಾಸಸೋ ಹಿ ತೇ ನಾರ್ಯೋ ವಲ್ಕಲಾಜಿನವಾಸಿನೀಮ್ ।
ಪಶ್ಯಂತು ದುಃಖಿತಾಂ ಕೃಷ್ಣಾಂ ಸಾ ಚ ನಿರ್ವಿದ್ಯತಾಂ ಪುನಃ ॥೨೨॥

ಒಳ್ಳೆಯ ವಸ್ತ್ರಗಳನ್ನು ಉಟ್ಟ ನಿನ್ನ ಪತ್ನಿಯರು ನಾರುಮಡಿ ಮತ್ತು ಕೃಷ್ಣಾಜಿನವನ್ನು ಉಟ್ಟು ದುಃಖಿತಳಾದ ದ್ರೌಪದಿಯನ್ನು ನೋಡಲಿ. ಆಗ ದ್ರೌಪದಿಗೆ ಪುನಃ ಇನ್ನೂ ದುಃಖವಾಗಲಿ.

ವಿಂದಂತಾಂ ಚಾಪ್ಯನಾತ್ಮಾನಂ ಜೀವಿತಸ್ಯ ಧನಾಚ್ಚುತಾಃ ।
ದಾರಾಣಾಂ ತೇ ಶ್ರಿಯಂ ದೃಷ್ಟ್ವಾ ದೀಪ್ತಾಮದ್ಯ ಜನಾಧಿಪ ॥೨೩॥

ಎಲೈ ಜನಾಧಿಪನೇ, ನಿನ್ನ ಪತ್ನಿಯರ ದೀಪ್ತವಾದ ಸಂಪತ್ತನ್ನು ನೋಡಿ, ಸಂಪತ್ತಿನಿಂದ ಚ್ಯುತರಾದ ಪಾಂಡವರು ಜೀವಿಸುವುದಕ್ಕೂ ಪ್ರಯತ್ನವನ್ನು ಮಾಡದೇ ಇರಲಿ.

ನ ತಥಾ ಹಿ ಸಭಾಮಧ್ಯೇ ತಸ್ಯಾ ಭವಿತುಮರ್ಹತಿ ।
ವೈಮನಸ್ಯಂ ಯಥಾ ದೃಷ್ಟ್ವಾ ತವ ಭಾರ್ಯಾಃ ಸ್ವಲಂಕೃತಾಃ ॥೨೪॥

ಅಲಂಕೃತರಾದ ನಿನ್ನ ಭಾರ್ಯೆಯರನ್ನು ನೋಡಿ ದ್ರೌಪದಿಗೆ ಎಂತಹ ವಿಷಾದ ಉಂಟಾಗುತ್ತದೋ ಅದು ಸಭಾಮಧ್ಯದಲ್ಲಿಯೂ ಸಹ ಅವಳಿಗೆ ಆಗಿರಲು ಸಾಧ್ಯವಿಲ್ಲ.

ವೈಶಂಪಾಯನಃ

ಏವಮುಕ್ತ್ವಾ ತು ರಾಜಾನಂ ಕರ್ಣಃ ಶಕುನಿನಾ ಸಹ ।
ತೂಷ್ಣೀಂಬಭೂವತುರುಭೌ ವಾಕ್ಯಾಂತೇ ಜನಮೇಜಯ ॥೨೫॥

ವೈಶಂಪಾಯನ– ಎಲೈ ಜನಮೇಜಯನೇ, ರಾಜನನ್ನು ಕುರಿತು ಕರ್ಣ ಮತ್ತು ಶಕುನಿಗಳು ಈ ರೀತಿ ಮಾತನಾಡಿ ತಮ್ಮ ಮಾತುಗಳು ಮುಗಿದ ಮೇಲೆ ಇಬ್ಬರೂ ಸುಮ್ಮನಾದರು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂಸಂಹಿತಾಯಾಂ ವನಪರ್ವಣಿ
ಷಡ್ವಿಂಶತ್ಯಧಿಕದ್ವಿಶತತಮೋऽಧ್ಯಾಯಃ॥
॥ ಇತಿ ಘೋಷಯಾತ್ರಾಪರ್ವಣಿ ಕರ್ಣಶಕುನಿವಾಕ್ಯಂನಾಮ ದ್ವಿತೀಯೋಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವನಪರ್ವದಲ್ಲಿ ಇನ್ನೂರ ಇಪ್ಪತ್ತಾರನೆಯ ಅಧ್ಯಾಯ ಮುಗಿಯಿತು.

★ ★ ★ ★

ಇನ್ನೂರ ಇಪ್ಪತ್ತೇಳನೆಯ ಅಧ್ಯಾಯ

ಘೋಷಯಾತ್ರೆಗಾಗಿ ದ್ವೈತವನಕ್ಕೆ ಹೋಗಲು ಕರ್ಣ-ಶಕುನಿಗಳಿಂದ ಉಪಾಯ ನಿಶ್ಚಯ.

ವೈಶಂಪಾಯನಃ

ಕರ್ಣಸ್ಯ ವಚನಂ ಶ್ರುತ್ವಾ ರಾಜಾ ದುರ್ಯೋಧನಸ್ತತಃ ।
ಹೃಷ್ಟೋ ಭೂತ್ವಾ ಪುನರ್ದೀನ ಇದಂ ವಚನಮಬ್ರವೀತ್ ॥೧॥

ವೈಶಂಪಾಯನ– ಕರ್ಣನ ಮಾತುಗಳನ್ನು ಕೇಳಿದ ರಾಜನಾದ ದುರ್ಯೋಧನನು ಆಗ ಮೊದಲು ಸಂತೋಷಗೊಂಡು ಪುನಃ ದೀನನಾಗಿ ಈ ಮಾತನ್ನು ಆಡಿದನು.

ಬ್ರವೀಷಿ ಯದಿದಂ ಕರ್ಣ ಸರ್ವಂ ತದ್ ಹೃದಯೇ ಸ್ಥಿತಮ್ ।
ನ ತ್ವಭ್ಯನುಜ್ಞಾಂ ಲಪ್ಸ್ಯಾಮಿ ಗಮನೇ ಯತ್ರ ಪಾಂಡವಾಃ ॥೨॥

ಕರ್ಣನೇ, ನೀನು ಏನು ಹೇಳುತ್ತಿದ್ದೀಯೋ ಅದೆಲ್ಲವೂ ನನ್ನ ಮನಸ್ಸಿನಲ್ಲಿದೆ. ಆದರೆ ಪಾಂಡವರು ಇದ್ದಲ್ಲಿಗೆ ಹೋಗಲು ಧೃತರಾಷ್ಟ್ರನ ಅನುಮತಿ ನನಗೆ ದೊರೆಯುವುದಿಲ್ಲ.

ಪರಿದೇವತಿ ತಾನ್ ವೀರಾನ್ ಧೃತರಾಷ್ಟ್ರೋ ಮಹೀಪತಿಃ ।
ಮನ್ಯತೇಽಭ್ಯಧಿಕಾಂಶ್ಚಾಪಿ ತಪೋಯೋಗೇನ ಪಾಂಡವಾನ್ ॥೩॥

ರಾಜನಾದ ಧೃತರಾಷ್ಟ್ರನು ಆ ವೀರರನ್ನು ಕುರಿತು ಗೋಳಾಡುತ್ತಿದ್ದಾನೆ. ಅಲ್ಲದೆ, ಅವರ ತಪಸ್ಸಿನ ಬಲದಿಂದ ಪಾಂಡವರು ಶ್ರೇಷ್ಠರೆಂದೂ ತಿಳಿದಿದ್ದಾನೆ.

ಅಥವಾಽಪ್ಯನುಬುಧ್ಯೇತ ನೃಪೋಽಸ್ಮಾಕಂ ಚಿಕೀರ್ಷಿತಮ್ ।
ಏತಾಮಪ್ಯಾಯತಿಂ ರಕ್ಷನ್ನಾಭ್ಯನುಜ್ಞಾತುಮರ್ಹತಿ ॥೪॥

ಅಥವಾ ರಾಜನಿಗೆ ನಮ್ಮ ಅಭಿಪ್ರಾಯವೇನಾದರೂ ತಿಳಿದರೆ ಈಗಿರುವ ಸಂಪತ್ತನ್ನು ರಕ್ಷಿಸುವುದೇ ಒಳ್ಳೆಯದೆಂದು ತಿಳಿದು (ಕಲಹವುಂಟಾದರೆ ಅದೂ ಕೂಡ ಹೊರಟು ಹೋಗುತ್ತದೆ ಎಂದು ತಿಳಿದು) ಅನುಮತಿಯನ್ನು ಕೊಡುವುದಿಲ್ಲ.

ನ ಹಿ ದ್ವೈತವನೇ ಕಿಂಚಿದ್ ವಿದ್ಯತೇಽನ್ಯತ್ ಪ್ರಯೋಜನಮ್ ।
ಉತ್ಸಾದನಮೃತೇ ತೇಷಾಂ ವನಸ್ಥಾನಾಂ ಮಹಾದ್ಯುತೇ ॥೫॥

ಎಲೈ ಮಹಾದ್ಯುತಿಯೇ, ಕಾಡಿನಲ್ಲಿರುವ ಅವರನ್ನು ವಿನಾಶಮಾಡುವುದನ್ನು ಬಿಟ್ಟು ದ್ವೈತವನದಲ್ಲಿ ನಮಗೆ ಬೇರೆ ಯಾವ ಪ್ರಯೋಜನವೂ ಇಲ್ಲ.

ಜಾನಾಸಿ ಹಿ ಯಥಾ ಕ್ಷತ್ತಾ ದ್ಯೂತಕಾಲ ಉಪಸ್ಥಿತೇ ।
ಅಬ್ರವೀದ್ ಯಚ್ಚ ಮಾಂ ತ್ವಾಂ ಚ ಸೌಬಲಂ ವಚನಂ ತದಾ ॥೬॥

ದ್ಯೂತಕಾಲವು ಉಪಸ್ಥಿತವಾದಾಗ ವಿದುರನು ನನ್ನ, ನಿನ್ನ ಮತ್ತು ಶಕುನಿಯ ವಿಷಯದಲ್ಲಿ ಏನು ಮಾತಾಡಿದನೆಂದು ನೀನೇ ತಿಳಿದಿದ್ದೀಯೆ.

ತಾನಿ ಸರ್ವಾಣಿ ವಾಕ್ಯಾನಿ ಯಚ್ಚಾನ್ಯತ್ ಪರಿದೇವಿತಮ್ ।
ವಿಚಿಂತ್ಯ ನಾಧಿಗಚ್ಛಾಮಿ ಗಮನಾಯೇತರಾಯ ವಾ ॥೭॥

ಆ ಎಲ್ಲ ಮಾತುಗಳನ್ನೂ ಮತ್ತು ಬೇರೆಯವರ ಪರಿದೇವನೆಗಳನ್ನೂ (ಶೋಕಾಲಾಪ-ಗೋಲಾಟಗಳನ್ನು) ಚಿಂತಿಸಿ ಹೋಗುವುದೇ ಅಥವಾ ಬಿಡುವುದೇ ಎಂದು ನಿರ್ಧರಿಸಲು ನನಗೆ ಸಾಧ್ಯವಾಗುತ್ತಿಲ್ಲ.

ಮಮಾಪಿ ಹಿ ಮಹಾನ್ ಹರ್ಷೋ ಯದಹಂ ಭೀಮಫಲ್ಗುನೌ ।
ಕ್ಲಿಷ್ಟಾವರಣ್ಯೇ ಪಶ್ಯೇಯಂ ಕೃಷ್ಣಯಾ ಸಹಿತಾವಿತಿ ॥೮॥

ದ್ರೌಪದಿಯಿಂದ ಸಹಿತರಾದ ಭೀಮಾರ್ಜುನರು ಅರಣ್ಯದಲ್ಲಿ ಕಷ್ಟಪಡುವುದನ್ನು ನಾನು ನೋಡುವುದಾದರೆ ನನಗೂ ದೊಡ್ಡ ಸಂತೋಷವುಂಟಾಗುತ್ತದೆ.

ನ ತಥಾ ಹ್ಯಾಪ್ನುಯಾಂ ಪ್ರೀತಿಮವಾಪ್ಯ ವಸುಧಾಮಿಮಾಮ್ ।
ದೃಷ್ಟ್ವಾ ಯಥಾ ಪಾಂಡುಸುತಾನ್ ವಲ್ಕಲಾಜಿನವಾಸಸಃ ॥೯॥

ನಾರುಮಡಿ ಮತ್ತು ಕೃಷ್ಣಾಜಿನವನ್ನು ಧರಿಸಿದ ಪಾಂಡವರನ್ನು ನೋಡಿದರೆ ಎಂತಹ ಸಂತೋಷವುಂಟಾಗುವುದೋ ಅಂತಹ ಸಂತೋಷವು ಈ ಭೂಮಿಯನ್ನು ಪಡೆದರೂ ನನಗೆ ಆಗಲಾರದು.

ಕಿಂ ನು ಸ್ಯಾದಧಿಕಂ ತಸ್ಮಾದ್ ಯದಹಂ ದ್ರುಪದಾತ್ಮಜಾಮ್ ।
ದ್ರೌಪದೀಂ ಕರ್ಣ ಪಶ್ಯೇಯಂ ಕಾಷಾಯವಸನಾಂ ವನೇ ॥೧೦॥

ಎಲೈ ಕರ್ಣನೇ, ನಾನು ಕಾಡಿನಲ್ಲಿ ಕಾಷಾಯವಸ್ತ್ರವನ್ನು ಧರಿಸಿದ ದ್ರುಪದಾತ್ಮಜೆಯಾದ ದ್ರೌಪದಿಯನ್ನು ನೋಡುವುದಾದರೆ ಅದಕ್ಕಿಂತ ದೊಡ್ಡದು ಯಾವುದಿದೆ?

ಯದಿ ಮಾಂ ಧರ್ಮರಾಜಶ್ಚ ಭೀಮಸೇನಶ್ಚ ಪಾಂಡವಃ ।
ಯುಕ್ತಂ ಪರಮಯಾ ಲಕ್ಷ್ಮ್ಯಾ ಪಶ್ಯೇತಾಂ ಜೀವಿತಂ ಭವೇತ್ ॥೧೧॥

ಪಾಂಡುಪುತ್ರನಾದ ಧರ್ಮರಾಜನು ಮತ್ತು ಭೀಮಸೇನನು ಪರಮಸಂಪತ್ತಿನಿಂದ ಕೂಡಿದ ನನ್ನನ್ನು ನೋಡುವುದಾದರೆ ನನ್ನ ಜೀವನವು ಸಾರ್ಥಕವಾದೀತು.

ಉಪಾಯಂ ತು ನ ಪಶ್ಯಾಮಿ ಯೇನ ಗಚ್ಛೇಮ ತದ್ವನಮ್ ।
ಯಥಾ ಚಾಭ್ಯನುಜಾನೀಯಾದ್ ಗಚ್ಛಂತಂ ಮಾಂ ಮಹೀಪತಿಃ ॥೧೨॥

ಆದರೆ ನಾವು ಯಾವ ರೀತಿ ದ್ವೈತವನಕ್ಕೆ ಹೋದೇವು ಮತ್ತು ಅಲ್ಲಿಗೆ ಹೋಗುವ ನನಗೆ ಧೃತರಾಷ್ಟ್ರನು ಹೇಗೆ ಅನುಮತಿಯನ್ನು ಕೊಟ್ಟಾನು ಎಂದು ನನಗೆ ತಿಳಿಯುತ್ತಿಲ್ಲ.

ಸ ಸೌಬಲೇನ ಸಹಿತಸ್ತಥಾ ದುಃಶಾಸನೇನ ಚ ।
ಉಪಾಯಂ ಪಶ್ಯ ನಿಪುಣಂ ಯೇನ ಗಚ್ಛೇಮ ತದ್ವನಮ್ ॥೧೩॥

ಅಂತಹ ನೀನಾದರೂ ದುಶ್ಶಾಸನ ಮತ್ತು ಶಕುನಿಗಳ ಜೊತೆಯಲ್ಲಿ ನಾವು ದ್ವೈತವನಕ್ಕೆ ಹೋಗುವ ನಿಪುಣವಾದ ಉಪಾಯವನ್ನು ಕಂಡುಹಿಡಿ.

ಅಹಮಪ್ಯದ್ಯ ನಿಶ್ಚಿತ್ಯ ಗಮನಾಯೇತರಾಯ ವಾ ।
ಕಲ್ಯಮೇವ ಗಮಿಷ್ಯಾಮಿಃ ಸಮೀಪಂ ಪಾರ್ಥಿವಸ್ಯ ಹ ॥೧೪॥

ನಾನೂ ಸಹ ಈ ದಿನ ಹೋಗುವುದೇ ಅಥವಾ ಇಲ್ಲವೇ ಎಂದು ನಿಶ್ಚಯಿಸಿ ನಾಳೆ ಪ್ರಾತಃಕಾಲದಲ್ಲಿಯೇ ರಾಜನ ಸಮೀಪಕ್ಕೆ ಹೋಗುತ್ತೇನೆ.

ಮಯಿ ತತ್ರೋಪವಿಷ್ಟೇ ತು ಭೀಷ್ಮೇ ಚ ಕುರುಸತ್ತಮೇ ।
ಉಪಾಯೋ ಯೋ ಭವೇದ್ ದೃಷ್ಟಸ್ತಂ ಬ್ರೂಯಾಃ ಸಹಸೌಬಲಃ ॥೧೫॥

ನಾನು ಮತ್ತು ಕುರುಶ್ರೇಷ್ಠರಾದ ಭೀಷ್ಮರು ಅಲ್ಲಿ ಕುಳಿತಿರುವಾಗ ನೀನು ಶಕುನಿಯ ಜೊತೆಯಲ್ಲಿ ಕಂಡುಹಿಡಿದ ಉಪಾಯವನ್ನು ಅಲ್ಲಿ ಹೇಳು.

ವಚೋ ಭೀಷ್ಮಸ್ಯ ರಾಜ್ಞಶ್ಚ ನಿಶಮ್ಯ ಗಮನಂ ಪ್ರತಿ ।
ವ್ಯವಸಾಯಂ ಕರಿಷ್ಯೇಽಹಮನುನೀಯ ಪಿತಾಮಹಮ್ ॥೧೬॥

ನಾನು ಗಮನದ ವಿಷಯದಲ್ಲಿ ಭೀಷ್ಮರ ಮತ್ತು ಧೃತರಾಷ್ಟ್ರರ ಮಾತುಗಳನ್ನು ಕೇಳಿ ಒಂದು ನಿರ್ಧಾರಕ್ಕೆ ಬಂದು ಅನಂತರ ಪಿತಾಮಹರಾದ ಭೀಷ್ಮರನ್ನು ಒತ್ತಾಯ ಪಡಿಸುವೆನು.

ವೈಶಂಪಾಯನಃ

ತಥೇತ್ಯುಕ್ತ್ವಾ ತು ತಂ ಸರ್ವೇ ಜಗ್ಮುರಾವಸಥಾನ್ ಪ್ರತಿ ।
ವ್ಯುಷಿತಾಯಾಂ ರಜನ್ಯಾಂ ತು ಕರ್ಣೋ ರಾಜಾನಮಭ್ಯಯಾತ್ ॥೧೭॥

ವೈಶಂಪಾಯನ– ಹಾಗೆಯೇ ಆಗಲಿ ಎಂದು ಅವನಿಗೆ ಹೇಳಿ ಅವರೆಲ್ಲರೂ ತಮ್ಮ ಮನೆಗಳಿಗೆ ಹೋದರು. ರಾತ್ರಿಯು ಕಳೆಯುತ್ತಿರಲು ಕರ್ಣನು ದುರ್ಯೋಧನನ ಬಳಿಗೆ ಬಂದನು.

ತತೋ ದುರ್ಯೋಧನಂ ಕರ್ಣಃ ಪ್ರಹಸನ್ನಿದಮಬ್ರವೀತ್ ।
ಉಪಾಯಃ ಪರಿದೃಷ್ಟೋಽಯಂ ತಂ ನಿಬೋಧ ಜನೇಶ್ವರ ॥೧೮॥

ಆಗ ಕರ್ಣನು ದುರ್ಯೋಧನನ್ನು ನೋಡಿ ನಗುತ್ತಾ, ರಾಜನೇ, ಈ ಉಪಾಯವನ್ನು ಕಂಡುಹಿಡಿದಿದ್ದಾಗಿದೆ. ಅದನ್ನು ತಿಳಿ ಎಂದು ಹೇಳಿದನು.

ಘೋಷಾ ದ್ವೈತವನೇ ಸರ್ವೇ ತ್ವತ್ಪ್ರತೀಕ್ಷಾ ನರಾಧಿಪ ।
ಘೋಷಯಾತ್ರಾಪದೇಶೇನ ಗಮಿಷ್ಯಾಮೋ ನ ಸಂಶಯಃ ॥೧೯॥

ಎಲೈ ರಾಜನೇ, ದ್ವೈತವನದಲ್ಲಿರುವ ಘೋಷಗಳೆಲ್ಲವೂ (ಗೋಪಾಲಕರೆಲ್ಲರೂ - ಘೋಷ ಎಂದರೆ ಗೋಪಾಲಕರು ಇರುವ ಸ್ಥಳ) ನಿನ್ನ ಪ್ರತೀಕ್ಷೆಯಲ್ಲಿದ್ದಾರೆ. ಘೋಷಯಾತ್ರೆಯ ನೆವದಿಂದ ನಾವು ಅಲ್ಲಿಗೆ ಹೋಗುವೆವು. ಇದರಲ್ಲಿ ಸಂಶಯವಿಲ್ಲ.

ಉಚಿತಂ ಹಿ ಸದಾ ಗಂತುಂ ಘೋಷಯಾತ್ರಾಂ ವಿಶಾಂಪತೇ ।
ಏವಂ ಚ ತ್ವಾಂ ಪಿತಾ ರಾಜನ್ ಸಮನುಜ್ಞಾತುಮರ್ಹತಿ ॥೨೦॥

ಎಲೈ ರಾಜನೇ, ಘೋಷಯಾತ್ರೆಗಾಗಿ ಯಾವಾಗ ಬೇಕಾದರೂ ಹೋಗುವುದು ಉಚಿತವಾಗಿದೆ. ರಾಜನೇ, ಹೀಗೆ ಮಾಡಿದರೆ ನಿನ್ನ ತಂದೆಯು ನಿನಗೆ ಅನುಮತಿಯನ್ನು ಕೊಡುತ್ತಾನೆ.

ವೈಶಂಪಾಯನಃ

ತಥಾ ಕಥಯಮಾನೌ ತೌ ಘೋಷಯಾತ್ರಾವಿನಿಶ್ಚಯಮ್ ।
ಗಾಂಧಾರರಾಜಃ ಶಕುನಿಃ ಪ್ರತ್ಯುವಾಚ ಹಸನ್ನಿವ ॥೨೧॥

ವೈಶಂಪಾಯನ– ಘೋಷಯಾತ್ರೆ ವಿನಿಶ್ಚಯವನ್ನು ಮಾಡಿ ಹಾಗೆ ಮಾತನಾಡುತ್ತಿದ್ದ ಅವರಿಬ್ಬರನ್ನು ನೋಡಿ ನಗುತ್ತಾ ಗಾಂಧಾರರಾಜನಾದ ಶಕುನಿಯು ಮಾತನಾಡಿದನು.

ಉಪಾಯೋಽಯಂ ಮಯಾ ದೃಷ್ಟೋ ಗಮನಾಯ ನಿರಾಮಯಃ ।
ಅನುಜ್ಞಾಸ್ಯತಿ ನೋ ರಾಜಾ ಬೋಧಯಿಷ್ಯತಿ ಚಾಪ್ಯುತ ॥೨೨॥

ದ್ವೈತವನಕ್ಕೆ ಹೋಗಲು ಈ ನಿರ್ದುಷ್ಟವಾದ ಉಪಾಯವನ್ನು ಕಂಡುಹಿಡಿದವನು ನಾನು. ನಮಗೆ ರಾಜನು ಅನುಮತಿಯನ್ನು ನೀಡುವನು. ಇಷ್ಟೇ ಅಲ್ಲ ರಾಜನೇ ನಮಗೆ ಅಲ್ಲಿಗೆ ಹೋಗುವಂತೆ ಹೇಳುವನು.

ಘೋಷಾ ದ್ವೈತವನೇ ಸರ್ವೇ ತ್ವತ್ಪ್ರತೀಕ್ಷಾ ನರಾಧಿಪ ।
ಘೋಷಯಾತ್ರಾಪದೇಶೇನ ಗಮಿಷ್ಯಾಮಃ ಸರಃ ಪ್ರತಿ ॥೨೩॥

ಎಲೈ ರಾಜನೇ, ದ್ವೈತವನದಲ್ಲಿರುವ ಘೋಷಗಳೆಲ್ಲವೂ ನಿನ್ನ ಪ್ರತೀಕ್ಷೆಯಲ್ಲಿವೆ. ಘೋಷಯಾತ್ರೆಯ ನೆವದಿಂದ ನಾವು ಆ ಸರೋವರಕ್ಕೆ ಹೋಗೋಣ.

ವೈಶಂಪಾಯನಃ

ತತಃ ಪ್ರಹಸಿತಾಃ ಸರ್ವೇ ತೇಽನ್ಯೋನ್ಯಸ್ಯ ತಳಾನ್ ದದುಃ ।
ತದೇವ ಚ ವಿನಿಶ್ಚಿತ್ಯ ದದೃಶುಃ ಕುರುಸತ್ತಮಮ್ ॥೨೪॥

ಆಗ ಎಲ್ಲರೂ ನಗುತ್ತಾ ಪರಸ್ಪರವಾಗಿ ಹಸ್ತಲಾಘವವನ್ನು ನೀಡಿದರು. ಅದನ್ನೇ ನಿಶ್ಚಯಿಸಿ ಕುರುಶ್ರೇಷ್ಠನಾದ ಧೃತರಾಷ್ಟ್ರನನ್ನು ನೋಡಿದರು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂಸಂಹಿತಾಯಾಂ ವನಪರ್ವಣಿ
ಸಪ್ತವಿಂಶತ್ಯಧಿಕದ್ವಿಶತತಮೋಽಧ್ಯಾಯಃ ॥
॥ ಇತಿ ಘೋಷಯಾತ್ರಾಪರ್ವಣಿ ಘೋಷಯಾತ್ರಾಮಂತ್ರಣಂ ನಾಮ
ತೃತೀಯೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವನಪರ್ವದಲ್ಲಿ ಇನ್ನೂರ ಇಪ್ಪತ್ತೇಳನೆಯ
ಅಧ್ಯಾಯ ಮುಗಿಯಿತು.

★ ★ ★★

ಇನ್ನೂರ ಇಪ್ಪತ್ತೆಂಟನೆಯ ಅಧ್ಯಾಯ

ಘೋಷಯಾತ್ರೆಗೆ ಹೋಗಲು ಧೃತರಾಷ್ಟ್ರನಿಂದ ಮನಸ್ಸಿಲ್ಲದೇ ಅನುಮತಿ.

ವೈಶಂಪಾಯನಃ

ಧೃತರಾಷ್ಟ್ರಂ ತತಃ ಸರ್ವೇ ದದೃಶುರ್ಜನಮೇಜಯ ।
ಪೃಷ್ಟ್ವಾ ಸುಖಿಮಥೋ ರಾಜ್ಞಃ ಪೃಷ್ಟ್ವಾ ರಾಜ್ಞಾ ಚ ಭಾರತ ॥೧॥

ವೈಶಂಪಾಯನ– ಜನಮೇಜಯನೇ, ಅನಂತರ ಎಲ್ಲರೂ ಧೃತರಾಷ್ಟ್ರನನ್ನು ನೋಡಿದರು. ಎಲೈ ಭಾರತನೇ, ಅವರು ರಾಜನ ಕ್ಷೇಮವನ್ನು ವಿಚಾರಿಸಿದರು. ರಾಜನೂ ಅವರ ಕ್ಷೇಮವನ್ನು ವಿಚಾರಿಸಿದನು.

ತತಸ್ತೈರ್ವಿಹಿತಃ ಪೂರ್ವಂ ಸಮಂಗೋ ನಾಮ ವಲ್ಲವಃ ।
ಸಮೀಪಸ್ಥಾಸ್ತದಾ ಗಾವೋ ಧೃತರಾಷ್ಟ್ರೇ ನ್ಯವೇದಯತ್ ॥೨॥

ಆಗ ಅವರು ಮೊದಲೇ ವ್ಯವಸ್ಥೆ ಮಾಡಿದ್ದಂತೆ ಸಮಂಗ ಎಂಬ ಗೋಪಾಲನು ಬಂದು ಧೃತರಾಷ್ಟ್ರನಿಗೆ ಗೋವುಗಳು ಸಮೀಪದಲ್ಲಿಯೇ ಇವೆ ಎಂದು ನಿವೇದಿಸಿದನು.

ಅನಂತರಂ ಚ ರಾಧೇಯಃ ಶಕುನಿಶ್ಚ ಮಹಾರಥಃ ।
ಆಹತುಃ ಪಾರ್ಥಿವಶ್ರೇಷ್ಠಂ ಧೃತರಾಷ್ಟ್ರಂ ಜನಾಧಿಪಮ್ ॥೩॥

ಅನಂತರ ಮಹಾರಥರಾದ ಶಕುನಿ ಮತ್ತು ಕರ್ಣರು ರಾಜಶ್ರೇಷ್ಠನಾದ ಧೃತರಾಷ್ಟ್ರನನ್ನು ಕುರಿತು ಹೇಳಿದರು.

ಶಕುನಿ-ಕರ್ಣೌ

ರಮಣೀಯೇಷು ದೇಶೇಷು ಘೋಷಾಃ ಸಂಪ್ರತಿ ಕೌರವ ।
ಸ್ಮಾರಣಂ ಸಮಯಂ ಪ್ರಾಪ್ತಂ ವತ್ಸಾನಾಮಪಿ ಚಾಂಕನಮ್ ॥೪॥

ಶಕುನಿ-ಕರ್ಣ– ಎಲೈ ಕೌರವನೇ, ಈಗ ರಮಣೀಯ ಪ್ರದೇಶಗಳಲ್ಲಿ ಗೋಪಾಲರು ಬೀಡುಬಿಟ್ಟಿದ್ದಾರೆ. ಗೋವುಗಳ ಗಣನೆಯನ್ನು ತೆಗೆದುಕೊಳ್ಳುವ ಮತ್ತು ವತ್ಸಗಳಿಗೆ ರಾಜಮುದ್ರೆಯನ್ನು ಹಾಕುವ ಸಮಯವು ಈಗ ಪ್ರಾಪ್ತವಾಗಿದೆ.

ಮೃಗಯಾ ಚೋಚಿತಾ ರಾಜನ್ನಸ್ಮಿನ್ ಕಾಲೇ ಸುತಸ್ಯ ತೇ ।
ದುರ್ಯೋಧನಸ್ಯ ಗಮನಂ ಸಮನುಜ್ಞಾತುಮರ್ಹಸಿ ॥೫॥

ರಾಜನೇ, ನಿನ್ನ ಮಗನಿಗೆ ಈಗ ಬೇಟೆಯಾಡಲು ಯೋಗ್ಯವಾದ ಕಾಲವೂ ಆಗಿದೆ. ಆದ್ದರಿಂದ ದುರ್ಯೋಧನನ ವನಗಮನಕ್ಕೆ ನೀನು ಅನುಮತಿಯನ್ನು ಕೊಡಬೇಕು.

ಧೃತರಾಷ್ಟ್ರಃ

ಮೃಗಯಾ ಶೋಭನಾ ತಾತ ಗವಾಂ ಹಿ ಸಮವೇಕ್ಷಣಮ್ ।
ವಿಶ್ರಂಭಸ್ತು ನ ಗಂತವ್ಯೋ ವಲ್ಲವಾನಾಮಿತಿ ಸ್ಮರೇ ॥೬॥

ಧೃತರಾಷ್ಟ್ರ– ಪ್ರೀತಿಪಾತ್ರನೇ, ಬೇಟೆಯಾಡುವುದು ಒಳ್ಳೆಯದು. ಗೋವುಗಳ ಮೇಲ್ವಿಚಾರಣೆಯೂ ಒಳ್ಳೆಯದೆ. ಆದರೆ ಗೋಪಾಲರ ಮಾತಿನಲ್ಲಿ ವಿಶ್ವಾಸವನ್ನು ಮಾಡಬಾರದು ಎಂದು ನಾನು ತಿಳಿಯುತ್ತೇನೆ.

ತೇ ತು ತತ್ರ ನರವ್ಯಾಘ್ರಾಃ ಸಮೀಪೇ ಇತಿ ನಃ ಶ್ರುತಮ್ ।
ಅತೋ ನಾಭ್ಯನುಜಾನಾಮಿ ಗಮನಂ ತತ್ರ ವಃ ಸ್ವಯಮ್ ॥೭॥

ನರವ್ಯಾಘ್ರರಾದ ಪಾಂಡವರು ಅಲ್ಲಿ ಸಮೀಪದಲ್ಲಿಯೇ ಇದ್ದಾರೆಂದು ನಾನು ಕೇಳಿದ್ದೇನೆ. ಆದ್ದರಿಂದ ನಾನಾಗಿಯೇ ನಿಮಗೆ ಅಲ್ಲಿಗೆ ಹೋಗಲು ಅನುಮತಿಯನ್ನು ಕೊಡುವುದಿಲ್ಲ.

ಛದ್ಮನಾ ನಿರ್ಜಿತಾಸ್ತೇ ತು ಕರ್ಶಿತಾಶ್ಚ ಮಹಾವನೇ ।
ತಪೋನಿತ್ಯಾಶ್ಚ ರಾಧೇಯ ಸಮರ್ಥಾಶ್ಚ ಮಹಾರಥಾಃ ॥೮॥

ಅವರು ಮೋಸದಿಂದ ಸೋಲಿಸಲ್ಪಟ್ಟಿದ್ದಾರೆ. ಕಾಡಿನಲ್ಲಿ ಬಳಲಿದ್ದಾರೆ. ಕರ್ಣನೇ, ಮಹಾರಥರಾದ ಅವರು ಸಮರ್ಥರೂ, ತಪೋನಿರತರೂ ಆಗಿದ್ದಾರೆ.

ಧರ್ಮರಾಜೋ ನ ಸಂಕ್ರುದ್ಧ್ಯೇದ್ ಭೀಮಸೇನಸ್ತ್ವಮರ್ಷಣಃ ।
ಯಜ್ಞಸೇನಸ್ಯ ದುಹಿತಾ ತೇಜ ಏವ ತು ಕೇವಲಮ್ ॥೯॥

ಧರ್ಮರಾಜನು ಕೋಪಗೊಳ್ಳಲಾರ. ಆದರೆ ಭೀಮಸೇನನು ಮಾತ್ರ ಮಹಾಕೋಪವುಳ್ಳವನು. ಯಜ್ಞಸೇನನ ಮಗಳಾದ ದ್ರೌಪದಿಯಂತೂ ಅಗ್ನಿಯೇ ಸರಿ.

ಯೂಯಂ ಚಾಪ್ಯಪರಾಧ್ಯೇಯುರ್ದರ್ಪಮೋಹಸಮನ್ವಿತಾಃ ।
ತತೋ ಏನಿರ್ದಹೇಯುಸ್ತೇ ತಪಸಾ ಹಿ ಸಮನ್ವಿತಾಃ ॥೧೦॥

ದರ್ಪಮೋಹಸಮನ್ವಿತರಾದ ನೀವೂ ಸಹ ಅಪರಾಧವನ್ನು ಮಾಡಬಹುದು. ಆಗ ಅವರು ತಪಸ್ಸಿನಿಂದಲೂ ಕೂಡಿದವರಾಗಿ ನಿಮ್ಮನ್ನು ಸುಟ್ಟುಬಿಡಬಹುದು.

ಅಥವಾ ಸಾಯುಧಾ ವೀರಾ ಮನ್ಯುನಾऽಭಿಪರಿಪ್ಲುತಾಃ ।
ಸಹಿತಾ ಬದ್ಧನಿಸ್ತ್ರಿಂಶಾ ದಹೇಯುಃ ಶಸ್ತ್ರತೇಜಸಾ ॥೧೧॥

ಅಥವಾ ಆಯುಧಗಳನ್ನು ಧರಿಸಿದ ಕತ್ತಿಗಳನ್ನು ಕಟ್ಟಿದ ವೀರರಾದ ಅವರು ಎಲ್ಲರೂ ಒಂದಾಗಿ ತಮ್ಮ ಶಸ್ತ್ರತೇಜಸ್ಸಿನಿಂದ ನಿಮ್ಮನ್ನು ದಹಿಸಬಹುದು.

ಅಥ ಯೂಯಂ ಬಹುತ್ವಾತ್ತ್ವಾನಭಿಯಾತ ಕಥಂಚನ ।
ಅನಾರ್ಯಂ ಪರಮಂ ತತ್ ಸ್ಯಾದಶಕ್ಯಂ ತಚ್ಚ ವೈ ಮತಮ್ ॥೧೨॥

ನೀವು ಬಹುಸಂಖ್ಯೆಯಲ್ಲಿ ಇರುವುದರಿಂದ ಅವರ ಜೊತೆಯಲ್ಲಿ ಹೋರಾಡುವುದಾದರೆ ಅದು ದೊಡ್ಡ ಅನಾರ್ಯವಾದ ಕಾರ್ಯವಾಗುತ್ತದೆ. ಅದು ನಿಮ್ಮಿಂದ ಶಕ್ಯವೂ ಅಲ್ಲ ಎಂದು ನನ್ನ ಅಭಿಪ್ರಾಯ.

ಉಷಿತೋ ಹಿ ಮಹಾಬಾಹುರಿಂದ್ರಲೋಕೇ ಧನಂಜಯಃ ।
ದಿವ್ಯಾನ್ಯಸ್ತ್ರಾಣ್ಯವಾಪ್ಯಾಥ ತತಃ ಪ್ರತ್ಯಾಗತೋ ವನಮ್ ॥೧೩॥

ಮಹಾಬಾಹುವಾದ ಅರ್ಜುನನು ಇಂದ್ರಲೋಕದಲ್ಲಿ ವಾಸಮಾಡಿ ದಿವ್ಯಾಸ್ತ್ರಗಳನ್ನು ಸಂಪಾದಿಸಿ ಈಗ ಅಲ್ಲಿಂದ ಹಿಂದಿರುಗಿ ವನಕ್ಕೆ ಬಂದಿದ್ದಾನೆ.

ಅಕೃತಾಸ್ತ್ರೇಣ ಪೃಥಿವೀ ಜಿತಾ ಬೀಭತ್ಸುನಾ ಪುರಾ ।
ಕಿಂ ಪುನಃ ಸ ಕೃತಾಸ್ತ್ರೋऽದ್ಯ ನ ಹನ್ಯಾದ್ ವೋ ಮಹಾರಥಃ ॥೧೪॥

ಹಿಂದೆ ಅಂತಹ ಅಸ್ತ್ರಗಳನ್ನು ಪಡೆಯದಿದ್ದರೂ ಅರ್ಜುನನು ಪೃಥಿವಿಯನ್ನೇ ಜಯಿಸಿದ್ದಾನೆ. ಈಗ ಅಸ್ತ್ರವನ್ನು ಸಂಪಾದಿಸಿರುವ ಆ ಮಹಾರಥನು ಈ ದಿನ ನಿಮ್ಮನ್ನು ಕೊಲ್ಲಬಹುದು ಎಂದು ಹೇಳುವುದೇನು?

ಅಥವಾ ಮದ್ವಚಃ ಶ್ರುತ್ವಾ ತತ್ರ ಯತ್ತಾ ಭವಿಷ್ಯಥ ।
ಉದ್ವಿಗ್ನವಾಸೋಽವಿಸ್ರಂಭಾತ್ ದುಃಖಂ ತತ್ರ ಭವಿಷ್ಯತಿ ॥೧೫॥

ಅಥವಾ ನೀವು ನನ್ನ ಮಾತನ್ನು ಕೇಳಿ ಅಲ್ಲಿ ಎಚ್ಚರಿಕೆಯಿಂದ (ಅವರಿಗೆ ತೊಂದರೆ ಮಾಡದೆ) ಇರುವುದಾದರೂ ನಿಮಗೆ ಪಾಂಡವರಲ್ಲಿ ವಿಶ್ವಾಸವಿಲ್ಲದಿರುವುದರಿಂದ ನಿಮ್ಮ ಸೈನಿಕರು ಅಲ್ಲಿರುವ ಫಲಮೂಲಗಳನ್ನೆಲ್ಲಾ ಅಪಹಾರ ಮಾಡಿದರೆ ಅಲ್ಲಿ ಮುಂದೆ ಪಾಂಡವರ ವಾಸವು ಕಷ್ಟಕರವಾಗುವುದು.

ಅಥವಾ ಸೈನಿಕಾಃ ಕೇಚಿದಪಕುರ್ಯುರ್ಯುಧಿಷ್ಠಿರಮ್ ।
ತದಬುದ್ಧಿಕೃತಂ ಕರ್ಮ ದೋಷಮುತ್ಪಾದಯೇಚ್ಚ ವಃ ॥೧೬॥

ಅಥವಾ ನಿಮ್ಮ ಸೈನಿಕರಲ್ಲಿ ಕೆಲವರು ಯುಧಿಷ್ಠಿರನಿಗೆ ಅಪಚಾರವನ್ನು ಮಾಡಬಹುದು. ಅವರು ಅಜ್ಞಾನದಿಂದ ಅಂತಹ ಕಾರ್ಯವನ್ನು ಮಾಡಿದರೂ ನಿಮಗೇ ದೋಷವುಂಟಾದೀತು.

ತಸ್ಮಾತ್ ಗಚ್ಛಂತು ಪುರುಷಾಃ ಸ್ಮಾರಣಾಯಾಪ್ತಚಾರಿಣಃ ।
ನ ಸ್ವಯಂ ತತ್ರ ಗಮನಂ ರೋಚಯೇ ತವ ಭಾರತ ॥೧೭॥

ಆದ್ದರಿಂದ ಗೋವುಗಳನ್ನು ಗಣನೆಯನ್ನು ಮಾಡಲು ಆಪ್ತರಾದ ಸೇವಕರನ್ನು ಕಳುಹಿಸೋಣ. ಎಲೈ ಭಾರತನೇ, (ದುರ್ಯೋಧನನೇ) ನೀನು ಅಲ್ಲಿಗೆ ಹೋಗುವುದು ನನಗೆ ಸ್ವತಃ ಇಷ್ಟವಲ್ಲ.

ಶಕುನಿಃ

ಧರ್ಮಜ್ಞಃ ಪಾಂಡವೋ ಜ್ಯೇಷ್ಠಃ ಪ್ರತಿಜ್ಞಾತಂ ಚ ಸಂಸದಿ ।
ತೇನ ದ್ವಾದಶ ವರ್ಷಾಣಿ ವಸ್ತವ್ಯಾನೀತಿ ಭಾರತ ॥೧೮॥

ಶಕುನಿ– ಪಾಂಡವರಲ್ಲಿ ಹಿರಿಯನಾದವನು ಧರ್ಮರಾಜನು ಧರ್ಮವನ್ನು ತಿಳಿದವನು. ಎಲೈ ಧೃತರಾಷ್ಟ್ರನೇ, ಅವನು ಹನ್ನೆರಡು ವರ್ಷಗಳ ಕಾಲ ಕಾಡಿನಲ್ಲಿ ವಾಸವನ್ನು ಮಾಡುವುದಾಗಿ ಸಭೆಯಲ್ಲಿ ಪ್ರತಿಜ್ಞೆಯನ್ನು ಮಾಡಿದ್ದಾನೆ.

ಅನುವೃತ್ತಾಶ್ಚ ತೇ ಸರ್ವೇ ಪಾಂಡವಾ ಧರ್ಮಚಾರಿಣಃ ।
ಯುಧಿಷ್ಠಿರಸ್ತು ಕೌಂತೇಯೋ ನ ನಃ ಕೋಪಂ ಕರಿಷ್ಯತಿ ॥೧೯॥

ಆ ಪಾಂಡವರೆಲ್ಲರೂ ಧರ್ಮಚಾರಿಗಳು ಮತ್ತು ಅಣ್ಣನನ್ನು ಅನುಸರಿಸುವವರು. ಕೌಂತೇಯನಾದ ಯುಧಿಷ್ಠಿರನಾದರೂ ನಮ್ಮ ಮೇಲೆ ಕೋಪವನ್ನು ಮಾಡುವುದಿಲ್ಲ.

ಮೃಗಯಾಂ ಚೈವ ನೋ ಗಂತುಮಿಚ್ಛಾ ಸಂವರ್ತತೇ ಭೃಶಮ್ ।
ಸ್ಮಾರಣಂ ತು ಚಿಕೀರ್ಷಾಮೋ ನ ತು ಪಾಂಡವದರ್ಶನಮ್ ॥೨೦॥

ನಮಗೆ ಬೇಟೆಯಾಡಬೇಕೆಂಬ ಬಹಳವಾದ ಆಸೆಯಿದೆ. ಗೋಗಣನೆಯನ್ನು ಮಾತ್ರ ಮಾಡುತ್ತೇವೆ. ಪಾಂಡವರನ್ನು ನೋಡುವುದೂ ಇಲ್ಲ.

ನ ಚಾನಾರ್ಯಸಮಾಚಾರಃ ಕಶ್ಚಿತ್ ತತ್ರ ಭವಿಷ್ಯತಿ ।
ನ ಚ ತತ್ರ ಗಮಿಷ್ಯಾಮೋ ಯತ್ರ ತೇಷಾಂ ಪ್ರತಿಶ್ರಯಃ ॥೨೧॥

ಅಲ್ಲಿ ಅನಾರ್ಯವಾದ ಯಾವ ಘಟನೆಯೂ ಜರುಗುವುದಿಲ್ಲ. ಅವರು ವಾಸವಾಗಿರುವ ಸ್ಥಳಕ್ಕೆ ನಾವು ಹೋಗುವುದೇ ಇಲ್ಲ.

ವೈಶಂಪಾಯನಃ

ಏವಮುಕ್ತಃ ಶಕುನಿನಾ ಧೃತರಾಷ್ಟ್ರೋ ಜನೇಶ್ವರಃ ।
ದುರ್ಯೋಧನಂ ಸಹಾಮಾತ್ಯಮನುಜಜ್ಞೇ ನ ಕಾಮತಃ ॥೨೨॥

ವೈಶಂಪಾಯನ– ಶಕುನಿಯಿಂದ ಹೀಗೆ ಹೇಳಲ್ಪಟ್ಟ ಧೃತರಾಷ್ಟ್ರ ರಾಜನು ಅಮಾತ್ಯರಿಂದ ಕೂಡಿದ ದುರ್ಯೋಧನನಿಗೆ ಅನುಮತಿಯನ್ನು ನೀಡಿದನು. ಮನಃಪೂರ್ವಕವಾಗಿ ನೀಡಲಿಲ್ಲ.

ಅನುಜ್ಞಾತಸ್ತು ಗಾಂಧಾರಿಃ ಕರ್ಣೇನ ಸಹಿತಸ್ತದಾ ।
ನಿರ್ಯಯೌ ಭರತಶ್ರೇಷ್ಠ ಬಲೇನ ಮಹತಾ ವೃತಃ ॥೨೩॥

ಅನುಮತಿಯನ್ನು ಪಡೆದ ದುರ್ಯೋಧನನು ಕರ್ಣನಿಂದ ಸಹಿತನಾಗಿ ಮತ್ತು ದೊಡ್ಡ ಸೇನೆಯಿಂದ ಸಂವೃತನಾಗಿ ಆಗ ಹೊರಟನು.

ದುಃಶಾಸನೇನ ಕರ್ಣೇನ ಸೌಬಲೇನ ಚ ಧೀಮತಾ ।
ಸಂವೃತೋ ಭ್ರಾತೃಭಿಶ್ಚಾನ್ಯೈಃ ಸ್ತ್ರೀಭಿಶ್ಚಾಪಿ ಸಹಸ್ರಶಃ ॥೨೪॥

ದುಃಶಾಸನನಿಂದಲೂ, ಮೇಧಾವಿಯಾದ ಶಕುನಿಯಿಂದಲೂ, ಕರ್ಣನಿಂದಲೂ ಉಳಿದ ತಮ್ಮಂದಿರಿಂದಲೂ ಮತ್ತು ಸಹಸ್ರಾರು ಸ್ತ್ರೀಯರಿಂದಲೂ ಸಹಿತನಾಗಿ ಹೊರಟನು.

ತಂ ನಿರ್ಯಾಂತಂ ಮಹಾಬಾಹುಂ ದ್ರಷ್ಟುಂ ದ್ವೈತವನಂ ಸರಃ ।
ಪೌರಾಶ್ಚಾನುಯಯುಃ ಸರ್ವೇ ಸಹದಾರಾ ವನಂ ಚ ತತ್ ॥೨೫॥

ದ್ವೈತವನದ ಸರೋವರವನ್ನು ನೋಡಲು ಹೊರಟ ಆ ಮಹಾಬಾಹುವಿನ ಹಿಂದೆ ಪೌರರೆಲ್ಲರೂ ಸಹ ತಮ್ಮ ಪತ್ನಿಯರೊಂದಿಗೆ ಆ ವನಕ್ಕೆ ಹೊರಟರು.

ಅಷ್ಟೌ ರಥಸಹಸ್ರಾಣಿ ತ್ರೀಣಿ ನಾಗಾಯುತಾನಿ ಚ ।
ಪತ್ತಯೋ ಬಹುಸಾಹಸ್ರಾ ಹಯಾಶ್ಚ ನವತಿಃ ಶತಾಃ ॥೨೬॥

ಎಂಟುಸಾವಿರ ರಥಗಳು, ಮೂವತ್ತು ಸಾವಿರ ಗಜಗಳು, ಅನೇಕ ಸಹಸ್ರ ಯೋಧರು, ಒಂಬತ್ತು ಸಾವಿರ ಕುದುರೆಗಳು ಹೊರಟವು.

ಶಕಟಾಪಣವೇಶಾಶ್ಚ ವಣಿಜೋ ವಂದಿನಸ್ತಥಾ ।
ನರಾಶ್ಚ ಮೃಗಯಾಶೀಲಾಃ ಶತಶೋಽಥ ಸಹಸ್ರಶಃ ॥೨೭॥

ಗಾಡಿಗಳು, ಅಂಗಡಿಗಳು, ವೇಶ್ಯೆಯರು, ವರ್ತಕರೂ, ವಂದಿಗಳೂ, ಬೇಟೆಯಾಡುಡವ ಸ್ವಭಾವವುಳ್ಳ ಮನುಷ್ಯರು, ನೂರರ ಸಂಖ್ಯೆಯಲ್ಲಿ, ಸಾವಿರದ ಸಂಖ್ಯೆಯಲ್ಲಿ ಹೊರಟರು.

ತತಃ ಪ್ರಯಾಣೇ ನೃಪತೇಃ ಸುಮಹಾನಭವತ್ಸ್ವನಃ ।
ಪ್ರಾವೃಷೀವ ಮಹಾವಾಯೋರುದ್ಧತಸ್ಯ ವಿಶಾಂಪತೇ ॥೨೮॥

ಆಗ ರಾಜನು ಪ್ರಯಾಣವನ್ನು ಮಾಡಿದಾಗ ಎಲೈ ರಾಜನೇ, ಮಳೆಗಾಲದಲ್ಲಿ ಎದ್ದ ಮಹಾಬಿರುಗಾಳಿಯಂತೆ ದೊಡ್ಡ ಶಬ್ದವು ಉಂಟಾಯಿತು.

ಗವ್ಯೂತಿಮಾತ್ರೇ ನ್ಯವಸದ್ ರಾಜಾ ದುರ್ಯೋಧನಸ್ತದಾ ।
ಪ್ರಯಾತೋ ವಾಹನೈಃ ಸರ್ವೈಸ್ತತೋ ದ್ವೈತವನಂ ಸರಃ ॥೨೯॥

ದುರ್ಯೋಧನ ರಾಜನು ಎಲ್ಲಾ ವಾಹನಗಳ ಜೊತೆಯಲ್ಲಿ ಹೊರಟು ಮೊದಲು ಒಂದು ಗವ್ಯೂತಿ ಯೋಜನ ದೂರದಲ್ಲಿ ತಂಗಿ ಅಲ್ಲಿಂದ ಮುಂದೆ ದ್ವೈತವನದ ಸರೋವರದ ಕಡೆಗೆ ಹೊರಟನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂಸಂಹಿತಾಯಾಂ ವೈಯಾಸಿಕ್ಯಾಂ
ವನಪರ್ವಣಿ ಅಷ್ಟವಿಂಶತ್ಯಧಿಕದ್ವಿಶತತಮೋऽಧ್ಯಾಯಃ ॥
॥ ಇತಿ ಘೋಷಯಾತ್ರಾಪರ್ವಣಿ ಧೃತರಾಷ್ಟ್ರಖೇದವಾಕ್ಯಂ ನಾಮ ಚತುರ್ಥೋऽಧ್ಯಾಯಃ॥

ಇಲ್ಲಿಗೆ ಮಹಾಭಾರತದ ವನಪರ್ವದಲ್ಲಿ ಇನ್ನೂರ ಇಪ್ಪತ್ತೆಂಟನೆಯ
ಅಧ್ಯಾಯ ಮುಗಿಯಿತು.

★ ★ ★ ★

ಮಹಾಭಾರತ ತಾತ್ಪರ್ಯನಿರ್ಣಯ -೨೨ ಅಧ್ಯಾಯ

ವನೇ ವಸತ್ಸ್ವೇನ ಚ ಪಾಂಡವೇಷು
ಚಕ್ರೇ ಯಜ್ಞಂ ಪೌಂಡರೀಕಾಖ್ಯಮೇವ ।
ಸಂಸ್ಪರ್ಧಯಾ ರಾಜಸೂಯಸ್ಯ ರಾಜಾ
ದುರ್ಯೋಧನೋ ನಾಪ್ಯಸೌ ತತ್ಕಲಾರ್ಹಃ ॥೩೭॥

ಪಾಂಡವರು ವನವಾಸ ಮಾಡುತ್ತಿದ್ದಾಗಲೇ ಅವರ ರಾಜಸೂಯಕ್ಕೆ ಪ್ರತಿಯಾಗಿ ಸ್ಪರ್ಧೆಯಿಂದ ಪೌಂಡರೀಕವೆಂಬ ಯಾಗವನ್ನು ರಾಜಾ ದುರ್ಯೋಧನ ಮಾಡಿದ. ಆದರೆ ಆ ಯಾಗ ಪಾಂಡವರ ರಾಜಸೂಯಯಾಗಕ್ಕೆ ಹದಿನಾರನೆ ಒಂದಂಶದಷ್ಟೂ ಸಮವಾಗಲಿಲ್ಲ.

ದುರ್ಯೋಧನಸ್ಯಾऽಜ್ಞಯಾ ಪಾಂಡವಾನಾಂ
ದುಃಶಾಸನಃ ಪದೇಷಯಾಮಾಸ ತತ್ರ ।
ಆಗಚ್ಛತೇತ್ಯವಮಾನಾಯ ತಂ ತು
ಭೀಮೋऽವಾದೀದ್ ರಣಯಜ್ಞಂ ಸ್ವಗಮ್ಯಮ್ ॥೩೮॥

ದುರ್ಯೋಧನನ ಆಜ್ಞೆಯಂತೆ ದುಃಶಾಸನ ಪಾಂಡವರನ್ನು ಅವಮಾನಿಸುವುದಕ್ಕಾಗಿ 'ನಾವು ಯಾಗ ಮಾಡುತ್ತೇವೆ, ಬನ್ನಿರೆಂ'ದು ದೂತನನ್ನು ಅವರ ಬಳಿಗೆ ಅಟ್ಟಿದ. ಭೀಮನೆಂದ 'ನಾವು ಯುದ್ಧಕ್ಕೇ ಬರುವೆವು' ಎಂದು.

ತತೋ ದಿನೈಃ ಕೈಶ್ಚನ ಧಾರ್ತರಾಷ್ಟ್ರಾಃ
ಸಕರ್ಣಗಾಂಧಾರನೃಪಾಃ ಕುಮಂತ್ರತಃ ।
ಸಭಾರ್ಯಕಾಃ ಪಾಂಡವಾನ್ ದ್ರೌಪದೀಂ ಚ
ಮಹೈಶವರ್ಯಂ ದರ್ಶಯಿತ್ವಾವಮಂತುಮ್ ॥೩೭॥

ತೈ ಸ್ಯಂದನೈಃ ಕಾಧನರತ್ನಚಿತ್ರೈ
ರ್ಮಹಾಗಜೈಸ್ತುರಗೈಃ ಪತ್ತಿಭಿಶ್ಚ ।
ಸ್ವಲಂಕೃತಾಶ್ಚತ್ರಮಾಲ್ಯಬಂರಾಶ್ಚ
ವಿನಿರ್ಯಯುರ್ದ್ವೈತವನಾಯ ಶೀಘ್ರದಮ್ ॥೩೮॥

ಬಳಿಕ ಕೆಲವು ದಿನಗಳು ಕಳೆದಾಗ ಕೌರವರು ಕರ್ಣಶಕುನಿಗಳೊಂದಿಗೆ ಕೆಟ್ಟ ಮಂತ್ರಾಲೋಚನೆ ಮಾಡಿ, ತಮ್ಮ ಮಹಾ ಐಶ್ವರ್ಯವನ್ನು ತೋರಿಸುವ ಮೂಲಕ ಪಾಂಡವರನ್ನೂ ದ್ರೌಪದಿಯನ್ನೂ ಅವಮಾನಿಸುವ ಉದ್ದೇಶದಿಂದ ಒಳ್ಳೆಯ ಅಲಂಕಾರ ಮಾಡಿಕೊಂಡು ಸುಂದರ ಅಮೂಲ್ಯ ವಸ್ತ್ರಗಳನ್ನು ಧರಿಸಿ ಬಂಗಾರರತ್ನಮಯ ಸುಂದರ ರಥಗಳು ಮಹಾಗಜಗಳು ಕುದುರೆಗಳು ಕಾಲಾಳುಗಳೊಂದಿಗೆ ಪತ್ನೀ ಸಮೇತರಾಗಿ ವೇಗವಾಗಿ ದ್ವೈತವನಕ್ಕೆ ಹೊರಟರು.

ಗವಾಂ ದೃಷ್ಟಿಚ್ಛಣದ್ಮನಾ ನಿರ್ಗತಾಂಸ್ತಾನ್
ಜ್ಞಾತ್ವಾ ಶಕದ್ ಸ್ತೇಜಸೋ ಭಂಘಕಾಮಃ ।
ತತ್ಸಾಮರ್ಥ್ಯಂ ವರಮಸ್ಮೈ ಪ್ರದಾಯ
ತದ್ವಂಧನಾಯಾದಿತ್ ಚಿತ್ರಸೇನಮ್ ॥೩೯॥

ಗೋವುಗಳನ್ನು ನೋಡುವ ನೆಪದಿಂದ ಹೊರಟಿದ್ದ ಕೌರವರ ದುರುದ್ದೇಶವನ್ನು ತಿಳಿದು ದೇವೇಂದ್ರ ಅವರ ತೇಜೋಭಂಗ ಮಾಡಲು ಬಯಸಿದ. ಚಿತ್ರಸೇನ ಗಂಧರ್ವನಿಗೆ ಈ ಕಾರ್ಯದಲ್ಲಿ ಸಾಮರ್ಥ್ಯ ಬರಲಿ ಎಂದು ವರ ನೀಡಿ ಕೌರವರನ್ನು ಸೆರೆ ಹಿಡಿಯಲು ಆದೇಶಿಸಿದ.

ಸ ಷಷ್ಟಿಸಾಹಸ್ರಕೋಟಿಯೂಥಪೈ
ರ್ಗಂಧರ್ವಮುಖ್ಯೈಃ ಸಂವೃತೋಽಗಾತ್ ಸರಸ್ತತ್ ।
ಯಸ್ಮಿನ್ ಸ್ನಾತುಂ ವಾಂಛತಿ ಧಾರ್ತರಾಷ್ಟ್ರ
ಸ್ತದಾಜ್ಞಯಾ ಪುರುಷಾಸ್ತಾನಥೋಚುಃ ॥೩೮೨॥

ಅರವತ್ತು ಸಾವಿರ ಕೋಟಿ ಸೇನಾಧಿಪತಿಗಳಿಂದ ಕೂಡಿದ ಗಂಧರ್ವಶ್ರೇಷ್ಠರಿಂದ ಪರಿವೃತನಾಗಿ ಚಿತ್ರಸೇನ ಗಂಧರ್ವ ದ್ವೈತವನದ ಸರೋವರದ ಬಳಿಗೆ ಹೋದ. ಆಗ ಅದೇ ಸರೋವರದಲ್ಲಿ ಸ್ನಾನ ಮಾಡಲು ದುರ್ಯೋಧನ ಬಯಸಿದ್ದ. ಅವನಾಜ್ಞೆಯಿಂದ ಭಟರು ಗಂಧರ್ವರಿಗೆ ಹೇಳಿದರು.

ಸ್ನಾತುಃ ಸಮಾಯಾಸ್ಯತಿ ಧಾರ್ತರಾಷ್ಟ್ರೋ
ರಾಜೇಶ್ವರೋ ನಿಃಸರಧ್ವಂ ತದಸ್ಮಾತ್ ।
ತೀರ್ಥಾದಾಜ್ಞಾಂ ಧಾರಯಂತಶ್ಚತಸ್ಯೇ-
ತ್ಯುಕ್ತಾ ಗಂಧರ್ವಾ ಜಹಸುಸ್ತಾನಥೌಚ್ಚೈಃ ॥೩೮೩॥

'ರಾಜಾಧಿರಾಜ ದುರ್ಯೋಧನ ಇಲ್ಲಿ ಸ್ನಾನ ಮಾಡಲು ಬರುತ್ತಿದ್ದಾನೆ. ಈ ತೀರ್ಥದಿಂದ ಆಚೆಗೆ ತೊಲಗಿರಿ. ಅವನ ಆಜ್ಞೆಯನ್ನು ಶಿರಸಾವಹಿಸಿರಿ'. ಹೀಗೆ ಹೇಳಿದಾಗ ಗಂಧರ್ವರು ಅವರನ್ನು ಗಟ್ಟಿಯಾಗಿ ಅಪಹಾಸ ಮಾಡಿ ನಕ್ಕರು.

ಊಚುರ್ವಯಂ ಮಾನಯಾಮಸ್ತದಾಜ್ಞಾಂ
ತ್ರಿಲೋಕಾನಾಂ ಯಃ ಪತಿಃ ಶಕ್ರ ದೇವಃ ।
ನ ಮಾನುಷಾಣಾಮಪಿ ಚಕ್ರವರ್ತಿನಾಂ
ಕಿಂವಲ್ಪಸಾರಸ್ಯ ಸುಯೋಧನಸ್ಯ ॥೩೮೪॥

'ನಾವು ಮೂಲೋಕದೊಡೆಯನಾದ ದೇವೇಂದ್ರನ ಆಜ್ಞೆಯನ್ನು ಮನ್ನಿಸುವೆವು. ಮನುಷ್ಯಚಕ್ರವರ್ತಿಗಳ ಆಜ್ಞೆಯನ್ನೂ ಕೂಡ ಮನ್ನಿಸಲಾರೆವು ಎಂದ ಮೇಲೆ ಈ ಅಲ್ಪಶಕ್ತಿ ಉಳ್ಳ ದುರ್ಯೋಧನನ ಬಗ್ಗೆ ಏನು ಹೇಳಬೇಕು?'

ಇತಿರಿತೇ ಕುಪಿತೋ ಧಾರ್ತರಾಷ್ಟ್ರೋ
ಜಘಾನ ಗಂಧರ್ವರಾಂಛರೌಘೈಃ ।

ಜಘ್ನುಃ ಸಕರ್ಣಾ ಅಪಿ ತಸ್ಯ ಸೋದರಾ
ಜಘ್ನುಶ್ಚ ತೇ ಧಾರ್ತರಾಷ್ಟ್ರಸ್ಯ ಸೇನಾಮ್ ॥೩೮೫॥

ಹೀಗೆ ಹೇಳಿದಾಗ ಕುಪಿತನಾದ ದುರ್ಯೋಧನ ಗಂಧರ್ವ ಪ್ರಮುಖರನ್ನು ಬಾಣ ಸಮೂಹಗಳಿಂದ ಹೊಡೆದ. ಅವನ ಸೋದರರೂ ಕರ್ಣನೂ ಅವರನ್ನು ಹೊಡೆದರು. ಅವರೂ ದುರ್ಯೋಧನನ ಸೈನ್ಯವನ್ನು ಹೊಡೆದರು.

ಮುಹೂರ್ತಮಾಸೀತ್ ಸಮವೇವ ಯುದ್ಧಂ
ತೇಷಾಂ ತದಾ ಧಾರ್ತರಾಷ್ಟ್ರಸ್ಯ ಚೈವ ।
ಪುರಾಂ ಭಿಂದೋರ್ವರತೋ ಮಾಯಯಾ ಚ
ಗಂಧರ್ವವೀರಾ ವವೃಧುಸ್ತತಃ ಸ್ಮ ॥೩೮೬॥

ಒಂದು ಮುಹೂರ್ತ ಪರ್ಯಂತ ಗಂಧರ್ವರಿಗೂ ದುರ್ಯೋಧನನಿಗೂ ಯುದ್ಧ ಸಮವೇ ಆಯಿತು. ಬಳಿಕ ದೇವೇಂದ್ರನ ವರದಿಂದಲೂ ಮಾಯೆಯಿಂದಲೂ ಗಂಧರ್ವ ವೀರರ ಕೈ ಮೇಲಾಯಿತು.

ತೇಜೋಭಂಘಂ ತತ್ರ ಸುಯೋಧನಸ್ಯ
ಪಾರ್ಥಾರ್ಥಮತ್ರ ಪದವಿಧಾತುಮೇವ ಚ ।
ಬಲಂ ದದಾವಬ್ಜಜಃ ಕೇಶವಶ್ಚ
ಗಂಧರ್ವಾಣಾಂ ತೇಭ್ಯುಯುರ್ಧಾರ್ತರಾಷ್ಟ್ರಾನ್ ॥೩೮೭॥

ಪಾಂಡವರಿಗಾಗಿ ದುರ್ಯೋಧನನ ತೇಜೋವಧೆ ಮಾಡುವುದಕ್ಕಾಗಿಯೇ ಶ್ರೀಹರಿಯೂ ಬ್ರಹ್ಮನೂ ಗಂಧರ್ವರಿಗೆ ಈ ಯುದ್ಧದಲ್ಲಿ ವಿಶೇಷ ಶಕ್ತಿ ನೀಡಿದ್ದರು. ಅದರಿಂದಲೂ ಗಂಧರ್ವರು ಕೌರವರನ್ನು ಆಕ್ರಮಿಸಿದ್ದರು.

ಸ ಚಿತ್ರಸೇನಃ ಪ್ರಥಮಂ ಕರ್ಣಮೇವ
ಯುಯೋಧ ಪಾರ್ಥಸ್ಪರ್ಧಯಾ ತೇನ ಯುದ್ಧನ್ ।
ಕರ್ಣೋ ನಾಶಾಕ್ನೋದ್ ವಚನಾದ್ ಭಾರ್ಗವಸ್ಯ
ರಾಮಸ್ಯ ನಿತ್ಯಾಮಿತಷಡ್‌ಗುಣಸ್ಯ ॥೩೮೮॥

ಚಿತ್ರಸೇನ ಮೊದಲಿಗೆ ಕರ್ಣನೊಡನೆ ಹೋರಾಡಿದ. ಆಗ ಕರ್ಣ ಅರ್ಜುನನೊಡನೆ ಸ್ಪರ್ಧೆಯಿಂದಲೇ ಯುದ್ಧ ಮಾಡುತ್ತಿದ್ದುದರಿಂದ ನಿತ್ಯ ಅಪರಿಮಿತ ಷಡ್ಗುಣಶಾಲಿಯಾದ ಪರಶುರಾಮರ ಶಾಪದಿಂದ ಅವನು ಗೆಲ್ಲಲು ಶಕ್ತನಾಗಲಿಲ್ಲ.

ಸ ಭಗ್ನಯಾನಶ್ಚ ವಿಕರ್ಣಯಾನ-
ಮಾಸ್ಥಾಯ ತಸ್ಯೈವ ನಿಯಮ್ಯ ವಾಜಿನಃ ।
ಪರಾದ್ರವತ್ ತೇನ ಸಹೈವ ಶೀಘ್ರಂ
ದುರ್ಯೋಧನಶ್ಚ ಚಿತ್ರಸೇನಂ ಯುಯೋಧ ॥೩೮೯॥

ಕರ್ಣ ತನ್ನ ರಥ ನಾಶವಾದಾಗ ವಿಕರ್ಣನ ರಥವೇರಿ ಅವನ ಕುದುರೆಗಳನ್ನು ನಡೆಸಿ ಅವನೊಂದಿಗೆ ಬೇಗನೆ ಪಲಾಯನ ಮಾಡಿದ. ದುರ್ಯೋಧನ ಚಿತ್ರಸೇನನೊಂದಿಗೆ ಯುದ್ಧಮಾಡಿದ.

ಮುಹೂರ್ತಮೇತೇನ ಸಮಂ ಸ ಯುದ್ಧ-
ನ್ನನ್ಯೈರ್ಗಂಧರ್ವೈರ್ಬಹುಭಿರ್ಮಾಯಯೈವ ।
ಭಗ್ನೇ ರಥೇ ಭೂಮಿತಲೇ ಸ್ಥಿತಃ ಸನ್
ಗೃಹೀತ ಆಸೀನ್ ಚಿತ್ರಸೇನೇನ ಸಂಖ್ಯೇ ॥೩೯೦॥

ಮುಹೂರ್ತ ಪರ್ಯಂತ ದುರ್ಯೋಧನ ಚಿತ್ರಸೇನನೊಡನೆ ಸಮನಾಗಿಯೇ ಯುದ್ಧ ಮಾಡಿದ. ಆದರೆ ಬಹುಸಂಖ್ಯೆಯಲ್ಲಿದ್ದ ಬೇರೆ ಗಂಧರ್ವದಿಂದ ಮಾಯೆಯಿಂದಲೇ ಅವನ ರಥ ಮುರಿಯಲ್ಪಟ್ಟಿತು. ಆಗ ಅವನು ನೆಲದಲ್ಲಿನಿಂತು ಚಿತ್ರಸೇನನಿಂದ ಯುದ್ಧದಲ್ಲಿ ಸೆರೆಹಿಡಿಯಲ್ಪಟ್ಟ.

ಮಹಾಬಲೋ ಧಾರ್ತರಾಷ್ಟ್ರೋಽಪಿ ಶಕ್ರ-
ವರಾದ್ ವಿಷ್ಣೋರಾಜ್ಞಯಾ ಚಾಭಿವೃದ್ಧೇ ।
ಸ ಚಿತ್ರಸೇನೇನ ಧೃತಸ್ತದಾಽಸೀದ್
ಬದ್ಧಃ ಪಾಶೈರ್ವೈದ್ಯುತೈರಿಂದ್ರದತ್ತೈಃ ॥೩೯೧॥

ಇಂದ್ರನ ವರದಿಂದಲೂ ಹರೀಚ್ಛೆಯಿಂದರೂ ಬಲಪೂರ್ಣನಾಗಿದ್ದ ಚಿತ್ರಸೇನನಿಂದ ಮಹಾಬಲನಾದ ದುರ್ಯೋಧನನೂ ಇಂದ್ರದತ್ತವಾದ ವಿದ್ಯುತ್ ಪಾಶಗಳಲ್ಲಿ ಸೇರೆ ಹಿಡಿಯಲ್ಪಟ್ಟ.

ತಸ್ಯಾನುಜಾಃ ಶಕುನೀ ರಾಜಭಾರ್ಯಾಃ
ಸರ್ವೇ ಬದ್ಧಾಃ ಶಕ್ರ ದೂತೈಃ ಪದಣೀತಾಃ ।
ಆದಾಯ ತಾನಂಬರೇ ಸಂಪ್ರಯಾತೇ-
ಷ್ವರೂರುವನ್ ಪಾಂಡವಾನ್ ಮಂತ್ರಿಣೋಽಸ್ಯ ॥೩೯೨॥

ಸಮೀಪಮಾಗತ್ಯ ಪೃಥಾಸುತಾನಾಂ
ಪರಾಭೂತಂ ವಃ ಕುಲಂ ಶಕ್ರ ಭೃತ್ಯೈಃ ।
ಧೃತಃ ಸಭಾರ್ಯಃ ಸಾನುಜೋ ಧಾರ್ತರಾಷ್ಟ್ರ-
ಸ್ತಂ ಮೋಚಯಧ್ವಂ ಭದಾತರಂ ಭಾರತಾಗ್ರ್ಯಾಃ ॥೩೯೩॥

ದುರ್ಯೋಧನನ ತಮ್ಮಂದಿರನ್ನೂ ಶಕುನಿಯನ್ನೂ ರಾಣಿಯರನ್ನೂ ಎಲ್ಲರನ್ನೂ ಇಂದ್ರನ ಭೃತ್ಯರು ಕಟ್ಟಿ ಸೆಳೆದೊಯ್ದರು. ಅವರು ಎಲ್ಲರನ್ನೂ ಹಿಡಿದುಕೊಂಡು ಆಕಾಶದಲ್ಲಿ ಹೋಗುತ್ತಿದ್ದಾಗ ದುರ್ಯೋಧನನ ಮಂತ್ರಿಗಳು ಪಾಂಡವರ ಬಳಿಗೆ ಬಂದು 'ಇಂದ್ರನ ಭೃತ್ಯರು ನಿಮ್ಮ ಕುಲವನ್ನು ಪರಾಭವಗೊಳಿಸಿರುವರು. ದುರ್ಯೋಧನ ಸಪತ್ನೀಕನಾಗಿ ತಮ್ಮಂದಿರೊಡನೆ ಶತ್ರುಗಳಿಗೆ ಸೆರೆ ಸಿಕ್ಕಿದ್ದಾನೆ. ಭರವಂಶದ ಶ್ರೇಷ್ಠ ಪುರುಷರಾದ ನೀವು ನಿಮ್ಮ ತಮ್ಮನನ್ನು ಬಿಡಿಸಿಕೊಳ್ಳಿರಿ' ಎಂದು ಕೂಗಿದರು.

ಇತ್ಯುಕ್ತ ಊಚೇ ಭೀಮಸೇನೋಽಗ್ರಜಂ ಸ್ವಂ
ಜಾನೇ ರಾಜನ್ ಯಾದೃಶೋಽಯಂ ವಿಮರ್ದಃ ।
ಐಶ್ವರ್ಯಂ ಸ್ವಂ ದರ್ಶಯನ್ ನಃ ಸಮಾಗಾತ್
ದುರ್ಯೋಧನಸ್ತೇಜಸೋ ಭಂಗಮಿಚ್ಛನ್ ॥೩೯೪॥

ವಿಜ್ಞಾಯ ತೇಷಾಂ ಮಂತ್ರಿತಂ ವಜದಬಾಹು-
ರೇತಚ್ಚಕ್ರೇ ನಾತ್ರ ನಃ ಕಾರ್ಯಹಾನಿಃ ।
ದಿವ್ಯಂ ಜ್ಞಾನಂ ಸ್ವಾತ್ಮನೋ ದರ್ಶಯನ್ ಸ
ಏತಾವದುಕ್ತ್ವಾ ವಿರರಾಮ ಭೀಮಃ ॥೩೯೫॥

ಮಂತ್ರಿಗಳು ಹೀಗೆ ಹೇಳಿದಾಗ ಭೀಮಸೇನ ತಮ್ಮ ಅಣ್ಣನಿಗೆ ಹೇಳಿದ, ಈ ಯುದ್ಧ ಏತರಿಂದಾಯಿತು ನನಗೆ ಗೊತ್ತು. ನಮ್ಮ ಮುಂದೆ ತನ್ನ ಐಶ್ವರ್ಯವನ್ನು ಪ್ರದರ್ಶಿಸಲು

ದುರ್ಯೋಧನ ಬಂದಿದ್ದ. ಅವನ ದುರಾಲೋಚನೆಯನ್ನು ತಿಳಿದು ಅವನ ತೇಜೋವಧೆ ಮಾಡಲು ಬಯಸಿದ ಇಂದ್ರ ಈ ಯುದ್ಧವನ್ನು ಉಂಟುಮಾಡಿದ. ನಮಗೆ ಇದರಿಂದ ಏನೂ ಕಾರ್ಯಹಾನಿ ಇಲ್ಲ'. ಹೀಗೆ ಭೀಮ ತನ್ನ ದಿವ್ಯಜ್ಞಾನವನ್ನು ತೋರುತ್ತ ಇಷ್ಟು ಹೇಳಿ ಸುಮ್ಮನಾದ.

ಏಕಾಹಯಜ್ಞೇ ವೀಕ್ಷಿತೇನೈವ ರಾಜ್ಞಾ
ಸಂಪದೇಷಿತೋ ಭೀಮಸೇನೋಽರ್ಜುನಶ್ಚ ।
ಸಮಾದ್ರೇಯೌ ಚಿತ್ರಸೇನಂ ರಣೇ ತೌ
ವಿಜಿತ್ಯ ದುರ್ಯೋಧನಮಾಶವಮಧುತಾಮ್ ॥೩೯॥

ಏಕಾಹಯಜ್ಞದಲ್ಲಿ ದೀಕ್ಷಿತನಾಗಿದ್ದ ಧರ್ಮರಾಜ ಭೀಮಾರ್ಜುನರನ್ನು ನಕುಲ ಸಹದೇವರೊಂದಿಗೆ ಕಳಿಸಿದ. ಅವರು ಚಿತ್ರಸೇನನನ್ನು ಯುದ್ಧದಲ್ಲಿ ಬೇಗನೆ ಗೆದ್ದು ದುರ್ಯೋಧನನನ್ನು ಬಿಡಿಸಿಕೊಂಡರು.

★ ★ ★ ★

ಇನ್ನೂರ ಇಪ್ಪತ್ತೊಂಬತ್ತನೆಯ ಅಧ್ಯಾಯ

ದುರ್ಯೋಧನನಿಂದ ದ್ವೈತವನ ಸರೋವರದ ಬಳಿ ಬೀಡು.
ಅವನ ಸೈನಿಕರಿಗೂ ಮತ್ತು ಗಂಧರ್ವರಿಗೂ ಕಲಹ.

ವೈಶಂಪಾಯನಃ

ಅಥ ದುರ್ಯೋಧನೋ ರಾಜಾ ತತ್ರ ತತ್ರ ವನೇ ವಸನ್ ।
ಜಗಮ ಘೋಷಾನಭಿತಸ್ತತ್ರ ಚಕ್ರೇ ನಿವೇಶನಂ ॥೧॥

ವೈಶಂಪಾಯನ– ಅನಂತರ ರಾಜನಾದ ದುರ್ಯೋಧನನು ಕಾಡಿನಲ್ಲಿ ಅಲ್ಲಲ್ಲಿ ತಂಗುತ್ತಾ ಘೋಷಗಳ ಸಮೀಪಕ್ಕೆ ಹೋಗಿ ಅಲ್ಲಿ ಬಿಡಾರವನ್ನು ಮಾಡಿದನು.

ರಮಣೀಯೇ ಸಮಾಜ್ಞಾತೇ ಸೋದಕೇ ಸಮಹೀರುಹೇ ।
ದೇಶೇ ಸರ್ವಗುಣೋಪೇತಾನ್ ಚಕ್ರುರಾವಸಥಾನ್ ಪರಾಃ ॥೨॥

ರಮಣೀಯವಾದ ಸಮತಟ್ಟಾದ ಉದಕ ಮತ್ತು ವೃಕ್ಷಗಳಿಂದ ಕೂಡಿದ ಪ್ರದೇಶದಲ್ಲಿ ಎಲ್ಲಾ ಸೌಕರ್ಯಗಳಿಂದ ಕೂಡಿದ ಬಿಡಾರಗಳನ್ನು ಉಳಿದವರು ನಿರ್ಮಿಸಿಕೊಂಡರು.

ತಥೈವ ತತ್ಸಮೀಪಸ್ಥಾನ್ ಪೃಥಗಾವಸಥಾನ್ ಬಹೂನ್ ।
ಕರ್ಣಸ್ಯ ಶಕುನೇಶ್ಚೈವ ಭ್ರಾತೄಣಾಂ ಚೈವ ಸರ್ವಶಃ ॥೩॥

ಹಾಗೆಯೇ ದುರ್ಯೋಧನನ ಬಿಡಾರದ ಸಮೀಪದಲ್ಲಿ ಕರ್ಣನಿಗೆ, ಶಕುನಿಗೆ ಮತ್ತು ದುರ್ಯೋಧನನ ಎಲ್ಲಾ ತಮ್ಮಂದಿರಿಗೆ ಅನೇಕ ಬಿಡಾರಗಳನ್ನು ನಿರ್ಮಿಸಿದರು.

ದದರ್ಶ ಸ ತದಾ ಗಾವಃ ಶತಶೋಽಥ ಸಹಸ್ರಶಃ ।
ಅಂಕೈರ್ಲಕ್ಷ್ಮಭಿಶ್ಚಿತಾಃ ಸರ್ವಾ ಲಕ್ಷಯಾಮಾಸ ಪಾರ್ಥಿವಃ ॥೪॥

ರಾಜನು ಆಗ ನೂರಾರು ಸಾವಿರಾರು ಸಂಖ್ಯೆಯಲ್ಲಿದ್ದ ಗೋವುಗಳನ್ನು ನೋಡಿದನು ಮತ್ತು ಅವುಗಳಿಗೆಲ್ಲಾ ರಾಜಮುದ್ರಾಂಕನವನ್ನು ಮಾಡಿಸಿ ಚಿಹ್ನೆಗಳನ್ನೂ ಮಾಡಿಸಿದನು.

ಅಂಕಯಾಮಾಸ ವತ್ಸಾಂಶ್ಚ ಜಜ್ಞೇ ಚೋಪಸೃತಾಂಸ್ತ್ವಪಿ ।
ಬಾಲವತ್ಸಾಶ್ಚ ಯಾ ಗಾವಃ ಕಾರಯಾಮಾಸ ತಾ ಅಪಿ ॥೫॥

ಕರುಗಳಿಗೂ ಸಹ ಅವನು ರಾಜಚಿಹ್ನೆಯಿಂದ ಮುದ್ರೆಯನ್ನು ಹಾಕಿಸಿದನು. ಸಮೀಪಕ್ಕೆ ಬಂದ ಕರುಗಳನ್ನೂ ಗಮನಿಸಿ ರಾಜಮುದ್ರೆಯನ್ನು ಹಾಕಿಸಿದನು. ಚಿಕ್ಕ ಕರುಗಳಿದ್ದ ಗೋವುಗಳನ್ನೂ ಸಹ ಅಲ್ಲಿಗೆ ಕರೆಸಿ ಮುದ್ರೆಯನ್ನು ಹಾಕಿಸಿದನು.

ಅಥ ಸ ಸ್ಮಾರಣಂ ಕೃತ್ವಾ ಲಕ್ಷಯಿತ್ವಾ ತ್ರಿಹಾಯನಾನ್ ।
ವೃತೋ ಗೋಪಾಲಕೈಃ ಪ್ರೀತೋ ವ್ಯಹರತ್ ಕುರುನಂದನಃ ॥೬॥

ಹೀಗೆ ಗೋವುಗಳ ಗಣನೆಯನ್ನು ಮಾಡಿ ಮೂರುವರ್ಷಗಳನ್ನು ಮೀರಿದ ಕರುಗಳನ್ನೆಲ್ಲಾ ಅಂಕನವನ್ನು ಮಾಡಿ ಕುರುನಂದನನಾದ ದುರ್ಯೋಧನನು ಗೋಪಾಲರ ಜೊತೆಯಲ್ಲಿ ಸಂತೋಷದಿಂದ ವಿಹಾರವನ್ನು ಮಾಡಿದನು.

ಸ ಚ ಪೌರಜನಃ ಸರ್ವಃ ಸೈನಿಕಾಶ್ಚ ಸಹಸ್ರಶಃ ।
ಯಥೋಪಜೋಷಂ ಚಕ್ರೀಡುರ್ವನೇ ತಸ್ಮಿನ್ ಯಥಾಮರಾಃ ॥೭॥

ಆ ಎಲ್ಲಾ ಪೌರಜನರೂ ಮತ್ತು ಸಹಸ್ರಾರು ಸಂಖ್ಯೆಯಲ್ಲಿದ್ದ ಸೈನಿಕರೂ ತಮ್ಮ ಇಚ್ಛೆಗೆ ಅನುಗುಣವಾಗಿ ಕಾಡಿನಲ್ಲಿ ದೇವತೆಗಳಂತೆ ಆಟವಾಡಿದರು.

ತತೋ ಗೋಪಾಃ ಪ್ರಗಾತಾರಃ ಕುಶಲಾ ನೃತ್ಯವಾದನೇ ।
ಧಾರ್ತರಾಷ್ಟ್ರಮುಪಾತಿಷ್ಠನ್ ಕನ್ಯಾಶ್ಚೈವ ಸ್ವಲಂಕೃತಾಃ ॥೮॥

ಅನಂತರ ಗಾನವನ್ನು ಮಾಡುವುದರಲ್ಲೂ, ನೃತ್ಯ ಮತ್ತು ವಾದನಗಳಲ್ಲಿಯೂ ನಿಪುಣರಾದ ಗೋಪಾಲರು ಮತ್ತು ಚೆನ್ನಾಗಿ ಅಲಂಕೃತರಾದ ಕನ್ಯೆಯರು ದುರ್ಯೋಧನನ ಸೇವೆಯನ್ನು ಮಾಡಿದರು.

ಸ ಸ್ತ್ರೀಗಣಯುತೋ ರಾಜಾ ಪ್ರಹೃಷ್ಟಃ ಪ್ರದದೌ ವಸು ।
ತೇಭ್ಯೋ ಯಥಾರ್ಹಮನ್ನಾನಿ ಪಾನಾನಿ ವಿವಿಧಾನಿ ಚ ॥೯॥

ತನ್ನ ಪತ್ನೀಗಣದಿಂದ ಸಹಿತನಾದ ದುರ್ಯೋಧನನು ಸಂತೋಷಗೊಂಡು ಅವರಿಗೆ ಧನವನ್ನೂ, ವಿವಿಧವಾದ ಅನ್ನಪಾನಗಳನ್ನೂ ನೀಡಿದನು.

ತತಸ್ತೇ ಸಹಿತಾಃ ಸರ್ವೇ ತರಕ್ಷೂನ್ ಮಹಿಷಾನ್ ಮೃಗಾನ್ ।
ಗವಯರ್ಷ್ಯವರಾಹಾಂಶ್ಚ ಸಮಂತಾತ್ ಪರ್ಯಕಾಲಯನ್ ॥೧೦॥

ಅನಂತರ ಅವರೆಲ್ಲರೂ ಒಟ್ಟಿಗೆ ಸೇರಿ ಹುಲಿಗಳನ್ನೂ, ಕಾಡೆಮ್ಮೆಗಳನ್ನೂ, ಜಿಂಕೆಗಳನ್ನೂ, ಗವಯ, ಕರಡಿ ಮತ್ತು ವರಾಹಗಳನ್ನೂ ಎಲ್ಲ ಕಡೆಗಳಿಂದಲೂ ಅಟ್ಟಾಡಿದರು.

ಸ ತಾಂಛರೈರ್ವಿನಿರ್ಭಿಂದನ್ ಗಜಾಂಶ್ಚ ಸುಬಹೂನ್ ವನೇ ।
ರಮಣೀಯೇಷು ದೇಶೇಷು ಗ್ರಾಹಯಾಮಾಸ ವೈ ಮೃಗಾನ್ ॥೧೧॥

ಅವನು ಕಾಡಿನಲ್ಲಿ ಅನೇಕ ಗಜಗಳನ್ನು ಬಾಣಗಳಿಂದ ಭೇದಿಸಿ ಜಿಂಕೆಗಳನ್ನೆಲ್ಲಾ ಒಂದು ರಮಣೀಯವಾದ ಪ್ರದೇಶದಲ್ಲಿ ಒಟ್ಟುಗೂಡಿಸಿದನು.

ಗೋರಸಾನುಪಯುಂಜಾನ ಉಪಭೋಗಾಂಶ್ಚ ಭಾರತ ।
ಪಶ್ಯನ್ ಸ ರಮಣೀಯಾನಿ ವನಾನ್ಯುಪವನಾನಿ ಚ ॥೧೨॥

ಮತ್ತಭ್ರಮರಜುಷ್ಟಾನಿ ಬರ್ಹಿಣಾಭಿರುತಾನಿ ಚ ।
ಅಗಚ್ಛದಾನುಪೂರ್ವ್ಯೇಣ ಪುಣ್ಯಂ ದ್ವೈತವನಂ ಸರಃ ॥೧೩॥

ಎಲೈ ಭಾರತನೇ, ಅವನು ಕ್ಷೀರಘೃತಾದಿ ಗೋರಸವನ್ನು ಸೇವಿಸುತ್ತಾ ಬೇರೆ ಭೋಗಗಳನ್ನು ಅನುಭವಿಸುತ್ತಾ ಮತ್ತಭ್ರಮರಗಳಿಂದ ಸೇವಿತವಾದ ನವಿಲುಗಳ ಧ್ವನಿಯಿಂದ ಕೂಡಿದ ರಮಣೀಯವಾದ ವನಗಳನ್ನೂ ಮತ್ತು ಉಪವನಗಳನ್ನೂ ನೋಡುತ್ತಾ ಕ್ರಮವಾಗಿ ದ್ವೈತವನದ ಸರೋವರದ ಬಳಿಗೆ ಹೋದನು.

ಋದ್ಧ್ಯಾ ಪರಮಯಾ ಯುಕ್ತೋ ಮಹೇಂದ್ರ ಇವ ವಜ್ರಭೃತ್ ।
ಮತ್ತಭ್ರಮರಸಂಜುಷ್ಟಂ ನೀಲಕಂಠರವಾಕುಲಮ್ ।
ಸಪ್ತಚ್ಛದಸಮಾಕೀರ್ಣಂ ಪುನ್ನಾಗವ(ಬ)ಕುಲೈರ್ಯುತಮ್ ॥೧೩॥

ವಜ್ರಧರನಾದ ಮಹೇಂದ್ರನಂತೆ ಪರಮಸಮೃದ್ಧಿಯಿಂದ ಯುಕ್ತನಾದ ಅವನು ಮತ್ತಭ್ರಮರಗಳಿಂದ ಸೇವಿತವಾದ ನವಿಲು ಪಕ್ಷಿಗಳ ರವದಿಂದ ಕೂಡಿದ ಸಪ್ತಚ್ಛದ ಪುಷ್ಪಗಳಿಂದಲೂ, ಪುನ್ನಾಗ ಬಕುಳ ಪುಷ್ಪಗಳಿಂದಲೂ ನಿಬಿಡವಾಗಿದ್ದ ಸರೋವರದ ಬಳಿಗೆ ಹೋದನು.

ಯದೃಚ್ಛಯಾ ಚ ತತ್ರಸ್ಥೋ ಧರ್ಮಪುತ್ರೋ ಯುಧಿಷ್ಠಿರಃ ।
ಈಜೇ ರಾಜರ್ಷಿಯಜ್ಞೇನ ಸದ್ಯಸ್ಕೇನ ವಿಶಾಂಪತೇ ॥೧೪॥

ದಿವ್ಯೇನ ವಿಧಿನಾ ಚೈವ ವನ್ಯೇನ ಕುರುಸತ್ತಮ ।
ವಿದ್ವದ್ಭಿಃ ಸಹಿತೋ ಧೀಮಾನ್ ಬ್ರಾಹ್ಮಣೈರ್ವನವಾಸಿಭಿಃ ॥೧೫॥

ಎಲೈ ರಾಜನೇ, ಧರ್ಮಪುತ್ರನಾದ ಯುಧಿಷ್ಠಿರನು ಅಲ್ಲಿ ಯದೃಚ್ಛೆಯಿಂದ ರಾಜರ್ಷಿಗಳಿಗೆ ಯೋಗ್ಯವಾದ ಒಂದೇ ದಿನದಲ್ಲಿ ಮಾಡುವ ಒಂದು ಯಜ್ಞವನ್ನು ಮಾಡುತ್ತಿದ್ದನು. ಎಲೈ ಕುರುಶ್ರೇಷ್ಠನೇ, ವಿದ್ವಾಂಸರಾದ ಬ್ರಾಹ್ಮಣರಿಂದಲೂ, ವನವಾಸಿಗಳಿಂದಲೂ ಸಹಿತನಾಗಿ ದಿವ್ಯವಾದ ವನಕ್ಕೆ ಯೋಗ್ಯವಾದ ವಿಧಿಯ ಪ್ರಕಾರ ಅವನು ಯಜ್ಞವನ್ನು ಮಾಡುತ್ತಿದ್ದನು.

ಭೀಮಾರ್ಜುನಯಮೈಃ ಸಾರ್ಧಂ ಸರೋಭ್ಯಾಶೇ ತದಾವಸತ್ ।
ಕೃತ್ವಾ ನಿವೇಶಮಭಿತಃ ಸರಸಸ್ತಸ್ಯ ಕೌರವಃ ।
ದ್ರೌಪದ್ಯಾ ಸಹಿತೋ ಧೀಮಾನ್ ಧರ್ಮಪತ್ನ್ಯಾ ನರಾಧಿಪಃ ॥೧೬॥

ಕೌರವರಾಜನಾದ ಯುಧಿಷ್ಠಿರನು ಸರೋವರದ ಸುತ್ತಲೂ ಬಿಡಾರಗಳನ್ನು ಮಾಡಿಕೊಂಡು ಭೀಮಾರ್ಜುನ ನಕುಲಸಹದೇವರ ಜೊತೆಯಲ್ಲಿ ಮತ್ತು ಧರ್ಮಪತ್ನಿಯಾದ ದ್ರೌಪದಿಯಿಂದ ಸಹಿತನಾಗಿ ಮೇಧಾವಿಯಾದ ಅವನು ಅಲ್ಲಿ ವಾಸಮಾಡುತ್ತಿದ್ದನು.

ತತೋ ದುರ್ಯೋಧನಃ ಪ್ರೇಷ್ಯಾನಾದಿದೇಶ ಸಹಾನುಜೈಃ ।
ಆಕ್ರೀಡಾವಸಥಾಃ ಕ್ಷಿಪ್ರಂ ಕ್ರಿಯಂತಾಮಿತಿ ಭಾರತ ॥೧೭॥

ಎಲೈ ಭಾರತನೇ, ಆಗ ದುರ್ಯೋಧನನು ತನ್ನ ತಮ್ಮಂದಿರ ಜೊತೆಯಲ್ಲಿ ಸೇವಕರನ್ನು ಕುರಿತು ಕ್ರೀಡಾ ಬಿಡಾರಗಳನ್ನು ಸಹಸ್ರಸಂಖ್ಯೆಯಲ್ಲಿ ನಿರ್ಮಿಸಿ ಎಂದು ಆದೇಶವನ್ನು ಮಾಡಿದನು.

ತೇ ತಥೇತ್ಯೇವ ಕೌರವ್ಯಮುಕ್ತ್ವಾ ಚ ವಚನಕಾರಿಣಃ ।
ಚಿಕೀರ್ಷಂತಸ್ತದಾऽऽಕ್ರೀಡಾನ್‌ಜಗ್ಮುರ್ದ್ವೈತವನಂ ಸರಃ ॥೧೮॥

ಅವನ ಸೇವಕರು ಅವನಿಗೆ ಹಾಗೇ ಆಗಲಿ ಎಂದು ಹೇಳಿ, ಕ್ರೀಡಾ ಬಿಡಾರಗಳನ್ನು ನಿರ್ಮಿಸಲು ಬಯಸಿ ದ್ವೈತವನದ ಸರೋವರದ ಬಳಿಗೆ ಬಂದರು.

ಸೇನಾಗ್ರ್ಯಂ ಧಾರ್ತರಾಷ್ಟ್ರಸ್ಯ ಪ್ರಾಪ್ತಂ ದ್ವೈತವನಂ ಸರಃ ।
ಪ್ರವಿಶಂತಂ ವನದ್ವಾರಿ ಗಂಧರ್ವಾಃ ಸಮವಾರಯನ್ ॥೧೯॥

ದುರ್ಯೋಧನನ ಶ್ರೇಷ್ಠವಾದ ಸೇನೆಯು ದ್ವೈತವನದ ಸಮೀಪಿಸುತ್ತಿದ್ದಂತೆ ಪ್ರವೇಶ ದ್ವಾರದಲ್ಲಿ ಗಂಧರ್ವರು ಅದನ್ನು ತಡೆದರು.

ತತ್ರ ಗಂಧರ್ವರಾಜೋ ವೈ ಪೂರ್ವಮೇವ ವಿಶಾಂಪತೇ ।
ಕುಬೇರಭವನಾದ್ ರಾಜನ್ನಾಜಗಾಮ ಗಣೈರ್ವೃತಃ ॥೨೦॥

ಎಲೈ ರಾಜನೇ, ಅಲ್ಲಿ ಕುಬೇರ ಭವನದಿಂದ ಹೊರಟು ತನ್ನ ಗಣಗಳ ಜೊತೆಯಲ್ಲಿ ಗಂಧರ್ವರಾಜನು ಮೊದಲೇ ಬಂದಿದ್ದನು.

ಗಣೈರಪ್ಸರಸಾಂ ಚೈವ ತ್ರಿದಶಾನಾಂ ತಥಾऽऽತ್ಮಜೈಃ ।
ವಿಹಾರಶೀಲಃ ಕ್ರೀಡಾರ್ಥಂ ತೇನ ತತ್ ಸಂವೃತಂ ಸರಃ ॥೨೧॥

ಅಪ್ಸರೆಯರ ಗಣದಿಂದಲೂ, ದೇವತೆಗಳ ಪುತ್ರರಿಂದಲೂ ಸಹಿತನಾದ ವಿಹಾರಶೀಲನಾದ ಅವನು ವಿಹಾರಕ್ಕೋಸ್ಕರ ಅಲ್ಲಿ ಬಂದು ಆ ಸರೋವರವನ್ನು ಸುತ್ತುವರಿದಿದ್ದನು.

ತೇನ ತತ್ಸಂವೃತಂ ದೃಷ್ಟ್ವಾ ತೇ ರಾಜಪರಿಚಾರಕಾಃ ।
ಪ್ರತಿಜಗ್ಮುಸ್ತತೋ ರಾಜನ್ ಯತೋ ದುರ್ಯೋಧನೋ ನೃಪಃ ॥೨೨॥

ಗಂಧರ್ವರಾಜನಿಂದ ಸರೋವರವು ಸುತ್ತುವರಿಯಲ್ಪಟ್ಟಿದ್ದನ್ನು ನೋಡಿದ ರಾಜಪರಿಚಾರಕರು ರಾಜನಾದ ದುರ್ಯೋಧನನು ಇದ್ದಲ್ಲಿಗೆ ಅಲ್ಲಿಂದ ಹಿಂದಿರುಗಿದರು.

ತೇ ಸಮೇತ್ಯ ತದಾ ಪ್ರೋಚುರ್ಗಂತುಂ ನೈವೋಪಲಭ್ಯತೇ ।
ರಕ್ಷಿತಂ ಬಹುಭಿಃ ಶೂರೈರಾಜನ್ ದ್ವೈತವನಂ ಸರಃ ।
ನ್ಯವೇದಯಂಸ್ತತೋ ರಾಜ್ಞೇ ಗಂಧರ್ವಾಸ್ತತ್ರ ಭಾರತ ॥೨೨.೧॥

ಅವರೆಲ್ಲರೂ ಒಟ್ಟಾಗಿ ರಾಜನ ಬಳಿಗೆ ಬಂದು ಅಲ್ಲಿಗೆ ಹೋಗಲು ಅವಕಾಶವು ಇಲ್ಲ. ರಾಜನೇ, ದ್ವೈತವನದ ಸರೋವರವು ಅನೇಕ ಶೂರರಾದ ಗಂಧರ್ವರಿಂದ ರಕ್ಷಿತವಾಗಿದೆ ಎಂದು ಅವರು ರಾಜನಿಗೆ ನಿವೇದಿಸಿದರು.

ಸ ತು ತೇಷಾಂ ವಚಃ ಶ್ರುತ್ವಾ ಸೈನಿಕಾನ್ ಯುದ್ಧದುರ್ಮದಾನ್ ।
ಪ್ರೇಷಯಾಮಾಸ ಕೌರವ್ಯ ಉತ್ಸಾರಯತ ತಾನಿತಿ ॥೨೩॥

ಅವನಾದರೂ ಅವರ ಮಾತುಗಳನ್ನು ಕೇಳಿ ಯುದ್ಧದುರ್ಮದರಾದ ತನ್ನ ಸೈನಿಕರಿಗೆ ಅವರನ್ನು ವಿನಾಶಗೊಳಿಸಿ ಎಂದು ಹೇಳಿ ಅವರನ್ನು ಕಳುಹಿಸಿದನು.

ತಸ್ಯ ತದ್ವಚನಂ ಶ್ರುತ್ವಾ ರಾಜ್ಞಃ ಸೇನಾಗ್ರಯಾಯಿನಃ ।
ಸರೋ ದ್ವೈತವನಂ ಗತ್ವಾ ಗಂಧರ್ವಾನಿದಮಬ್ರುವನ್ ॥೨೪॥

ರಾಜನ ಆ ಮಾತುಗಳನ್ನು ಕೇಳಿ ಸೇನೆಯ ಮುಂಭಾಗದಲ್ಲಿ ಹೋಗುವ ಸೈನಿಕರು ದ್ವೈತವನದ ಸರೋವರಕ್ಕೆ ಹೋಗಿ ಗಂಧರ್ವರನ್ನು ಕುರಿತು ಹೀಗೆ ಹೇಳಿದರು.

ರಾಜಾ ದುರ್ಯೋಧನೋ ನಾಮ ಧೃತರಾಷ್ಟ್ರಸುತೋ ಬಲೀ ।
ವಿಜಿಹೀರ್ಷುರಿಹಾಯಾತಿ ತದರ್ಥಮಪಸರ್ಪತ ॥೨೫॥

ಧೃತರಾಷ್ಟ್ರನ ಮಗನಾದ ದುರ್ಯೋಧನನೆಂಬ ಬಲಿಷ್ಠನಾದ ರಾಜನು ಇಲ್ಲಿಗೆ ವಿಹಾರಕ್ಕಾಗಿ ಬರುತ್ತಿದ್ದಾನೆ. ಅದಕ್ಕಾಗಿ ನೀವೆಲ್ಲರೂ ದೂರ ಸರಿಯಿರಿ.

ವೈಶಂಪಾಯನಃ

ಏವಮುಕ್ತಾಸ್ತು ಗಂಧರ್ವಾಃ ಪ್ರಹಸಂತೋ ವಿಶಾಂಪತೇ ।
ಪ್ರತ್ಯಬ್ರುವಂಸ್ತಾನ್ ಪುರುಷಾನಿದಂ ಹಿ ಪರುಷಂ ವಚಃ ॥೨೬॥

ವೈಶಂಪಾಯನ– ಎಲೈ ರಾಜನೇ, ಈ ಮಾತುಗಳನ್ನು ಕೇಳಿದ ಗಂಧರ್ವರು ಹಾಸ್ಯಮಾಡುತ್ತಾ ಆ ಸೈನಿಕರಿಗೆ ಈ ಒರಟಾದ ಉತ್ತರವನ್ನು ಕೊಟ್ಟರು.

ನ ಚೇತಯತಿ ವೋ ರಾಜಾ ಮಂದಬುದ್ಧಿಃ ಸುಯೋಧನಃ ।
ಯೋಽಸ್ಮಾನಾಜ್ಞಾಪಯತ್ಯೇವಂ ವೈಶ್ಯಾನಿವ ದಿವೌಕಸಃ ॥೨೭॥

ನಿಮ್ಮ ರಾಜನಾದ ದುರ್ಯೋಧನನು ಮಂದಬುದ್ಧಿಯುಳ್ಳವರು. ವೈಶ್ಯರನ್ನು ಆಜ್ಞಾಪಿಸಿದಂತೆ ದೇವತೆಗಳಾದ ನಮ್ಮನ್ನು ಆಜ್ಞಾಪಿಸುವ ಅವನಿಗೆ ಜ್ಞಾನವಿಲ್ಲ.

ಯೂಯಂ ಮುಮೂರ್ಷವಶ್ಚಾಪಿ ಮಂದಪ್ರಜ್ಞಾ ನ ಸಂಶಯಃ ।
ಯೇ ತಸ್ಯ ವಚನಾದೇವಮಸ್ಮಾನ್ ಬ್ರೂತ ವಿಚೇತಸಃ ॥೨೮॥

ಅವನ ಮಾತನ್ನು ಕೇಳಿ ಜ್ಞಾನವಿಲ್ಲದೆ ನಮಗೆ ಹೀಗೆ ಆಜ್ಞಾಪಿಸುತ್ತಿರುವ ನೀವೂ ಸಹ ಮಂದಪ್ರಜ್ಞರು ಮತ್ತು ಮರಣ ಸಮೀಪದಲ್ಲಿರುವವರು. ಇದರಲ್ಲಿ ಸಂಶಯವಿಲ್ಲ.

ಗಚ್ಛಧ್ವಂ ತ್ವರಿತಾಃ ಸರ್ವೇ ಯತ್ರ ರಾಜಾ ಸ ಕೌರವಃ ।
ನ ಚೇದ್ಯೈವ ಗಚ್ಛಧ್ವಂ ಧರ್ಮರಾಜನಿವೇಶನಮ್ ॥೨೯॥

ನೀವೆಲ್ಲರೂ ಶೀಘ್ರವಾಗಿ ಆ ಕೌರವರಾಜನಿದ್ದಲ್ಲಿಗೆ ಹಿಂದಿರುಗಿ. ಇಲ್ಲದಿದ್ದರೆ ಈ ದಿನವೇ ಯಮಪಟ್ಟಣಕ್ಕೆ ಹೋಗಬೇಕಾಗುತ್ತದೆ (ಎಂದು ಹೇಳಿದರು).

ವೈಶಂಪಾಯನಃ

ಏವಮುಕ್ತಾಸ್ತು ಗಂಧರ್ವೈ ರಾಜ್ಞಃ ಸೇನಾಗ್ರಯಾಯಿನಃ ।
ಸಂಪ್ರಾದ್ರವನ್ ಯತೋ ರಾಜಾ ಧೃತರಾಷ್ಟ್ರಸುತೋಽಭವತ್ ॥೩೦॥

ವೈಶಂಪಾಯನ– ಗಂಧರ್ವರಿಂದ ಹೀಗೆ ಹೇಳಲ್ಪಟ್ಟ ರಾಜನ ಶ್ರೇಷ್ಠ ಸೈನಿಕರು ಧೃತರಾಷ್ಟ್ರಸುತನಾದ ದುರ್ಯೋಧನನು ಇದ್ದಲ್ಲಿಗೆ ಓಡಿ ಹೋದರು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂಸಂಹಿತಾಯಾಂ ವೈಯಾಸಿಕ್ಯಾಂ
ವನಪರ್ವಣಿ ಏಕೋನವತ್ರಿಂಶದಧಿಕದ್ವಿಶತತಮೋಽಧ್ಯಾಯಃ ॥
॥ ಇತಿ ಘೋಷಯಾತ್ರಾಪರ್ವಣಿ ಗಂಧರ್ವದುರ್ಯೋಧನಸೇನಾ
ಸಂವಾದೋ ನಾಮ ಪಂಚಮೋಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವನಪರ್ವದಲ್ಲಿ ಇನ್ನೂರ ಇಪ್ಪತ್ತೊಂಬತ್ತನೆಯ ಅಧ್ಯಾಯ ಮುಗಿಯಿತು.

★ ★ ★ ★

ಇನ್ನೂರ ಮೂವತ್ತನೆಯ ಅಧ್ಯಾಯ

ಕೌರವರ ಮತ್ತು ಗಂಧರ್ವರ ಯುದ್ಧ. ಕರ್ಣನ ಪಲಾಯನ.

ವೈಶಂಪಾಯನಃ

ತತಸ್ತೇ ಸಹಿತಾಃ ಸರ್ವೇ ದುರ್ಯೋಧನಮುಪಾಗಮನ್ ।
ಅಬ್ರುವಂಶ್ಚ ಮಹಾರಾಜ ಯದೂಚುಃ ಕೌರವಂ ಪ್ರತಿ ॥೧॥

ವೈಶಂಪಾಯನ– ಎಲೈ ಮಹಾರಾಜನೇ, ಅನಂತರ ಅವರೆಲ್ಲರೂ ಜೊತೆಯಲ್ಲಿ ದುರ್ಯೋಧನನ ಬಳಿಗೆ ಬಂದು ಗಂಧರ್ವರು ಅವನಿಗೆ ತಿಳಿಸಲು ಹೇಳಿದ ವಿಷಯವನ್ನು ಹೇಳಿದರು.

ಗಂಧರ್ವೈರ್ವಾರಿತೇ ಸೈನ್ಯೇ ಧಾರ್ತರಾಷ್ಟ್ರಃ ಪ್ರತಾಪವಾನ್ ।
ಅಮರ್ಷಪೂರ್ಣಃ ಸೈನ್ಯಾನಿ ಪ್ರತ್ಯಭಾಷತ ಭಾರತ ॥೨॥

ಶಾಸತೈನಾನಧರ್ಮಜ್ಞಾನ್ ಮಮ ವಿಪ್ರಿಯಕಾರಿಣಃ ।
ಯದಿ ಪ್ರಕ್ರೀಡತೇ ಸರ್ವೈರ್ದೇವೈಃ ಸಹ ಶತಕ್ರತುಃ ॥೩॥

ವಯಮತ್ರ ಯಥಾಪ್ರೀತಾಃ ಕ್ರೀಡಿಷ್ಯಾಮೋ ನಿರಂತರಮ್ ।

ಗಂಧರ್ವರು ತನ್ನ ಸೈನ್ಯವನ್ನು ತಡೆಯುತ್ತಿರಲು ಪ್ರತಾಪಶಾಲಿಯಾದ ದುರ್ಯೋಧನನು ಕ್ರೋಧದಿಂದ ಪೂರ್ಣನಾಗಿ ತನ್ನ ಸೈನ್ಯವನ್ನು ಕುರಿತು ನನಗೆ ಪ್ರತಿಕೂಲವನ್ನು ಮಾಡುತ್ತಿರುವಂತಹ ಈ ಅಧರ್ಮಜ್ಞರು ಅವರು ದೇವತೆಗಳಿಂದ ಕೂಡಿದ ಇಂದ್ರನೇ ಆದರೂ ಸಹ ಅವರಿಗೆ ಶಾಸನವನ್ನು ಮಾಡಿ. ನಾವು ಇಲ್ಲಿನಮ್ಮ ಮನಸ್ಸಿಗೆ ಬಂದಂತೆ ವಿಹರಿಸುತ್ತೇವೆ ಎಂದು ಹೇಳಿದನು.

ದುರ್ಯೋಧನವಚಃ ಶ್ರುತ್ವಾ ಧಾರ್ತರಾಷ್ಟ್ರಾ ಮಹಾಬಲಾಃ ।
ಸರ್ವ ಏವಾಭಿಸನ್ನದ್ಧಾ ಯೋಧಾಶ್ಚಾಪಿ ಸಹಸ್ರಶಃ ॥೪॥

ದುರ್ಯೋಧನನ ಮಾತನ್ನು ಕೇಳಿ ಧೃತರಾಷ್ಟ್ರನ ಎಲ್ಲಾ ಪುತ್ರರೂ ಮತ್ತು ಸಹಸ್ರ ಸಂಖ್ಯೆಯಲ್ಲಿ ಯೋಧರು ಸಿದ್ಧರಾದರು.

ತತಃ ಪ್ರಮಥ್ಯ ಸರ್ವಾಂಸ್ತಾಂಸ್ತದ್ವನಂ ವಿವಿಶುರ್ಬಲಾತ್ ।
ಸಿಂಹನಾದೇನ ಮಹತಾ ಪೂರಯಂತೋ ದಿಶೋ ದಶ ॥೫॥

ಅನಂತರ ಆ ಗಂಧರ್ವರೆಲ್ಲರನ್ನೂ ಸೋಲಿಸುವ ಸಲುವಾಗಿ ತಮ್ಮ ದೊಡ್ಡ ಸಿಂಹನಾದದಿಂದ ಹತ್ತುದಿಕ್ಕನ್ನೂ ತುಂಬಿ ಆ ಪ್ರದೇಶವನ್ನು ಪ್ರವೇಶಿಸಿದರು.

ತತೋಽಪರೈರವಾರ್ಯಂತ ಗಂಧರ್ವೈಃ ಕುರುಸೈನಿಕಾಃ ।
ಸಾಮ್ನೈವ ತತ್ರ ವಿಕ್ರಾಂತಾ ಮಾ ಸಾಹಸಮಿತಿ ಪ್ರಭೋ ॥೬॥

ಎಲೈ ಪ್ರಭುವೇ, ಆಗ ಗಂಧರ್ವರಿಂದ ಪರಾಕ್ರಮವನ್ನು ತೋರಲು ಹೊರಟಿದ್ದ ಕುರುಸೈನಿಕರು ಶಾಂತರೀತಿಯಿಂದಲೇ ಈ ಸಾಹಸವನ್ನು ಮಾಡಬೇಡಿ ಎಂದು ಹೇಳಿ ತಡೆಯಲ್ಪಟ್ಟರು.

ತೇ ವಾರ್ಯಮಾಣಾ ಗಂಧರ್ವೈಃ ಸಾಮ್ನೈವ ವಸುಧಾಧಿಪ ।
ತಾನನಾದೃತ್ಯ ಗಂಧರ್ವಾಂಸ್ತದ್ವನಂ ವಿವಿಶುರ್ಮಹತ್ ॥೭॥

ಎಲೈ ರಾಜನೇ, ಗಂಧರ್ವರು ಶಾಂತ ರೀತಿಯಲ್ಲಿ ಅವರನ್ನು ತಡೆಯುತ್ತಿದ್ದರೂ ಆಗ ಗಂಧರ್ವರನ್ನು ತಿರಸ್ಕರಿಸಿ ಕೌರವ ಸೈನಿಕರು ಆ ದೊಡ್ಡ ಕಾಡನ್ನು ಹೊಕ್ಕರು.

ಯದಾ ವಾಚಾ ನ ತಿಷ್ಠಂತಿ ಧಾರ್ತರಾಷ್ಟ್ರಾಃ ಸರಾಜಕಾಃ ।
ತತಸ್ತೇ ಖೇಚರಾಃ ಸರ್ವೇ ಚಿತ್ರಸೇನೇ ನ್ಯವೇದಯನ್ ॥೮॥

ಯಾವಾಗ ರಾಜನಿಂದ ಸಹಿತರಾದ ಧೃತರಾಷ್ಟ್ರ ಪುತ್ರರು ತಮ್ಮ ಮಾತುಗಳನ್ನು ಕೇಳಲಿಲ್ಲವೋ ಆಗ ಆಕಾಶಗಾಮಿಗಳಾದ ಆ ಗಂಧರ್ವರೆಲ್ಲರೂ ತಮ್ಮ ರಾಜನಾದ ಚಿತ್ರಸೇನನಿಗೆ ಈ ವಿಷಯವನ್ನು ನಿವೇದಿಸಿದರು.

ಗಂಧರ್ವರಾಜಸ್ತಾನ್ ಸರ್ವಾನಬ್ರವೀತ್ ಕೌರವಾನ್ ಪ್ರತಿ ।
ಅನಾರ್ಯಾಂಧಾಸತೇತ್ಯೇತಾಂಶ್ಚಿತ್ರಸೇನೋಽತ್ಯಮರ್ಷಣಃ ॥೯॥

ಗಂಧರ್ವರಾಜನಾದ ಚಿತ್ರಸೇನನು ಬಹಳ ಕೋಪವನ್ನು ಹೊಂದಿದವನಾಗಿ ಕೌರವರ ವಿಷಯದಲ್ಲಿ ಅನಾರ್ಯರಾದ ಅವರಿಗೆ ತಕ್ಕ ಶಾಸನವನ್ನು ಮಾಡಿ ಎಂದು ಅವರೆಲ್ಲರನ್ನೂ ಕುರಿತು ಹೇಳಿದನು.

ಅನುಜ್ಞಾತಾಸ್ತು ಗಂಧರ್ವಾಶ್ಚಿತ್ರಸೇನೇನ ಭಾರತ ।
ಪ್ರಗೃಹೀತಾಯುಧಾಃ ಸರ್ವೇ ಧಾರ್ತರಾಷ್ಟ್ರಾನುಪಾದ್ರವನ್ ॥೧೦॥

ಎಲೈ ಭಾರತನೇ, ಚಿತ್ರಸೇನನ ಅನುಮತಿಯನ್ನು ಪಡೆದ ಗಂಧರ್ವರೆಲ್ಲರೂ ಆಯುಧಗಳನ್ನು ಹಿಡಿದು ಧೃತರಾಷ್ಟ್ರನ ಪುತ್ರರ ಕಡೆಗೆ ಓಡಿದರು.

ತಾನ್ ದೃಷ್ಟ್ವಾ ಪತತಃ ಶೀಘ್ರಾನ್ ಗಂಧರ್ವಾನುದ್ಯತಾಯುಧಾನ್ ।
ಪ್ರಾದ್ರವಂಸ್ತೇ ದಿಶಃ ಸರ್ವೇ ಧಾರ್ತರಾಷ್ಟ್ರಸ್ಯ ಪಶ್ಯತಃ ॥೧೧॥

ಕೈಯಲ್ಲಿ ಆಯುಧವನ್ನು ಹಿಡಿದು ವೇಗಶಾಲಿಗಳಾದ ಆ ಗಂಧರ್ವರು ತಮ್ಮ ಮೇಲೆ ಎರಗುತ್ತಿರುವುದನ್ನು ನೋಡಿ ದುರ್ಯೋಧನನ ಕಣ್ಣೆದುರಿಗೇ ಕೌರವ ಯೋಧರು ದಿಕ್ಕು ದಿಕ್ಕುಗಳಿಗೆ ಓಡಿಹೋದರು.

ತಾನ್ ದೃಷ್ಟ್ವಾ ದ್ರವತಃ ಸರ್ವಾನ್ ಧಾರ್ತರಾಷ್ಟ್ರಾನ್ ಪರಾಙ್ಮುಖಾನ್ ।
ರಾಧೇಯಸ್ತು ತದಾ ವೀರೋ ನಾಸೀತ್ ತತ್ರ ಪರಾಙ್ಮುಖಃ ॥೧೨॥

ಆ ಧೃತರಾಷ್ಟ್ರಪುತ್ರರು ಯುದ್ಧಕ್ಕೆ ವಿಮುಖರಾಗಿ ಓಡಿ ಹೋಗುವುದನ್ನು ನೋಡಿದ ವೀರನಾದ ಕರ್ಣನು ಮಾತ್ರ ವಿಮುಖನಾಗಲಿಲ್ಲ.

ಆಪತಂತೀಂ ತು ಸಂಪ್ರೇಕ್ಷ್ಯ ಗಂಧರ್ವಾಣಾಂ ಮಹಾಚಮೂಮ್ ।
ಮಹತಾ ಶರವರ್ಷೇಣ ರಾಧೇಯಃ ಸಮವಾರಯತ್ ॥೧೩॥

ಗಂಧರ್ವರ ದೊಡ್ಡ ಸೈನ್ಯವು ತನ್ನ ಮೇಲೆ ಎರಗುತ್ತಿರುವುದನ್ನು ನೋಡಿದ ಕರ್ಣನು ಬಾಣಗಳ ದೊಡ್ಡ ಮಳೆಯಿಂದ ಅವರನ್ನು ತಡೆದನು.

ಕ್ಷುರಪ್ರೈರ್ನಿಶಿತೈರ್ಭಲ್ಲೈರ್ವತ್ಸದಂತೈಸ್ತದಾऽऽಯಸೈಃ ।
ಗಂಧರ್ವಾಂಛತಶೋऽಭ್ಯಘ್ನಂಲ್ಲಘುತ್ವಾತ್ ಸೂತನಂದನಃ ॥೧೪॥

ಸೂತನಂದನನಾದ ಕರ್ಣನು ಬಹಳ ಕ್ಷಿಪ್ರಕಾರಿಯಾದುದರಿಂದ ಹರಿತವಾದ ಭಲ್ಲಗಳಿಂದಲೂ, ಕಬ್ಬಿಣದ ವತ್ಸದಂತಗಳಿಂದಲೂ ಗಂಧರ್ವರನ್ನು ನೂರರ ಸಂಖ್ಯೆಯಲ್ಲಿ ಹೊಡೆದನು.

ಪಾತಯನ್ನುತ್ತಮಾಂಗಾನಿ ಗಂಧರ್ವಾಣಾಂ ಮಹಾರಥಃ ।
ಕ್ಷಣೇನ ವ್ಯಧಮತ್ ಸರ್ವಾಂ ಚಿತ್ರಸೇನಸ್ಯ ವಾಹಿನೀಮ್ ॥೧೫॥

ಮಹಾರಥನಾದ ಅವನು ಗಂಧರ್ವರ ಶಿರಸ್ಸನ್ನು ನೆಲಕ್ಕೆ ಉರುಳಿಸುತ್ತಾ ಒಂದು ಕ್ಷಣದಲ್ಲಿ ಚಿತ್ರಸೇನನ ಎಲ್ಲಾ ಸೈನ್ಯವನ್ನೂ ಖಾಲಿ ಮಾಡಿದನು.

ತೇ ವಧ್ಯಮಾನಾ ಗಂಧರ್ವಾಃ ಸೂತಪುತ್ರೇಣ ಧನ್ವಿನಾ ।
ಭೂಯ ಏವಾಭಿವರ್ತಂತ ಶತಶೋऽಥ ಸಹಸ್ರಶಃ ॥೧೬॥

ಧನುರ್ಧಾರಿಯಾದ ಕರ್ಣನಿಂದ ಪ್ರಹಾರಕ್ಕೆ ಒಳಗಾದ ಆ ಗಂಧರ್ವರು ಪುನಃ ನೂರರ ಸಂಖ್ಯೆಯಲ್ಲಿ, ಸಾವಿರದ ಸಂಖ್ಯೆಯಲ್ಲಿ ಅವನ ಮೇಲೆ ಎರಗಿದರು.

ಗಂಧರ್ವಭೂತಾ ಪೃಥಿವೀ ಕ್ಷಣೇನ ಸಮಪದ್ಯತ ।
ಆಪತದ್ಭಿರ್ಮಹಾವೇಗೈಶ್ಚಿತ್ರಸೇನಸ್ಯ ಸೈನಿಕೈಃ ॥೧೭॥

ಕರ್ಣನ ಮೇಲೆ ಬೀಳುವ ಚಿತ್ರಸೇನನ ಸೈನಿಕರಿಂದ ಭೂಮಿಯು ಒಂದುಕ್ಷಣದಲ್ಲಿ ಎಲ್ಲವೂ ಗಂಧರ್ವಮಯವಾಗಿ ಕಂಡಿತು.

ಅಥ ದುರ್ಯೋಧನೋ ರಾಜಾ ಶಕುನಿಶ್ಚಾಪಿ ಸೌಬಲಃ ।
ದುಃಶಾಸನೋ ವಿಕರ್ಣಶ್ಚ ಯೇ ಚಾನ್ಯೇ ಧೃತರಾಷ್ಟ್ರಜಾಃ ।
ನ್ಯಹನಂಸ್ತತ್ ತದಾ ಸೈನ್ಯಂ ರಥೈರ್ಗರುಡನಿಸ್ವನೈಃ ॥೧೮॥

ಆಗ ರಾಜನಾದ ದುರ್ಯೋಧನನು ಸುಬಲಪುತ್ರನಾದ ಶಕುನಿಯೂ, ದುಶ್ಶಾಸನ ವಿಕರ್ಣರೂ ಮತ್ತು ಉಳಿದ ಧೃತರಾಷ್ಟ್ರಪುತ್ರರೂ ಗರುಡಧ್ವನಿಯನ್ನು ಮಾಡುವ ರಥಗಳಲ್ಲಿ ಕುಳಿತು ಗಂಧರ್ವರ ಸೈನ್ಯವನ್ನು ಪ್ರಹರಿಸಿದರು.

ಭೂಯಶ್ಚ ಯೋಧಯಾಮಾಸುಃ ಕೃತ್ವಾ ಕರ್ಣಮಥಾಗ್ರತಃ ।
ಮಹತಾ ರಥಸಂಘೇನ ಹಯಚಾರೇಣ ಚಾಪ್ಯುತ ॥೧೯॥

ವೈಕರ್ತನಂ ಪರೀಪ್ಸಂತೋ ಗಂಧರ್ವಾನ್ ಸಮವಾಕಿರನ್ ॥೨೦॥

ಅವರು ಪುನಃ ಕರ್ಣನನ್ನು ಮುಂದೆ ಮಾಡಿಕೊಂಡು ದೊಡ್ಡ ರಥಸಮೂಹದಿಂದ ಮತ್ತು ಅಶ್ವಸಮೂಹದ ಸಂಚಾರದಿಂದ ಕರ್ಣನನ್ನು ರಕ್ಷಿಸಿಕೊಂಡು ಗಂಧರ್ವ ಸೈನ್ಯದ ಮೇಲೆ ಶಸ್ತ್ರಗಳ ಮಳೆಯನ್ನು ಕರೆದರು.

ತತಃ ಸನ್ನ್ಯಪತನ್ ಸರ್ವೇ ಗಂಧರ್ವಾಃ ಕೌರವೈಃ ಸಹ ।
ತದಾ ಸುತುಮುಲಂ ಯುದ್ಧಮುಭಯೋರ್ಲೋಮಹರ್ಷಣಮ್ ॥

ಆಗ ಎಲ್ಲ ಗಂಧರ್ವರೂ ಕೌರವರ ಮೇಲೆ ಬಿದ್ದು ಅವರ ಜೊತೆಯಲ್ಲಿ ಬಹಳ ತೀವ್ರವಾದ ಲೋಮಹರ್ಷಣವಾದ ಯುದ್ಧವನ್ನು ಮಾಡಿದರು.

ತತಸ್ತೇ ಮೃದವೋಽಭೂವನ್‌ಗಂಧರ್ವಾಃ ಶರಪೀಡಿತಾಃ ।
ಉಚ್ಚುಕ್ರುಶುಶ್ಚ ಕೌರವ್ಯಾ ಗಂಧರ್ವಾನ್ ಪ್ರೇಕ್ಷ್ಯ ಪೀಡಿತಾನ್ ॥೨೨॥

ಆಗ ಕೌರವರ ಬಾಣಗಳಿಂದ ಪೀಡಿತರಾದ ಗಂಧರ್ವರು ಮೃದುವಾದರು (ದುರ್ಬಲರಾದರು). ಕೌರವರಾದರೂ ತಮ್ಮಿಂದ ಪೀಡಿತರಾದ ಗಂಧರ್ವರನ್ನು ನೋಡಿ ಹರ್ಷೋದ್ಗಾರವನ್ನು ಮಾಡಿದರು.

ಗಂಧರ್ವಾಂಸ್ತ್ರಾಸಿತಾನ್ ದೃಷ್ಟ್ವಾ ಚಿತ್ರಸೇನೋ ಹ್ಯಮರ್ಷಣಃ ।
ಉತ್ಪಪಾತಾಸನಾತ್ ಕ್ರುದ್ಧೋ ವಧೇ ತೇಷಾಂ ಸಮಾಹಿತಃ ॥೨೩॥

ಗಂಧರ್ವರು ಹೆದರುತ್ತಿರುವುದನ್ನು ನೋಡಿದ ಚಿತ್ರಸೇನನು ಬಹಳ ಕೋಪದಿಂದ ಕೂಡಿದವನಾಗಿ ಕೌರವ ಯೋಧರ ವಧೆಯನ್ನು ನಿಶ್ಚಯಿಸಿ ತನ್ನ ಆಸನದಿಂದ ನೆಗೆದು ಬಂದನು.

ತತೋ ಮಾಯಾಸ್ತ್ರಮಾಸ್ಥಾಯ ಯುಯುಧೇ ಚಿತ್ರಮಾರ್ಗವಿತ್ ।
ವಿಯತ್ ಸಂಛಾದಯಾಮಾಸ ನ ವವೌ ತತ್ರ ಮಾರುತಃ ॥೨೪॥

ಆಗ ಯುದ್ಧದ ಚಿತ್ರಮಾರ್ಗಗಳನ್ನು ಬಲ್ಲ ಅವನು ಮಾಯಾಸ್ತ್ರವನ್ನು ಆಶ್ರಯಿಸಿ ಆಕಾಶವನ್ನು ಬಾಣಗಳಿಂದ ಮುಚ್ಚಿದನು. ಆಗ ಅಲ್ಲಿ ವಾಯುವು ಬೀಸಲಿಲ್ಲ.

ತಯಾ ಮುಹ್ಯಂತ ಕೌರವ್ಯಾಶ್ಚಿತ್ರಸೇನಸ್ಯ ಮಾಯಯಾ ।
ಹಸ್ತ್ಯಾರೋಹಾ ಹತಾಃ ಪೇತುರ್ಹಸ್ತಿಭಿಃ ಸಹ ಭಾರತ ॥೨೫॥

ಹಯಾರೋಹಾಶ್ಚ ಸಹಯೈ ರಥೈಶ್ಚ ರಥಿನಸ್ತಥಾ ।
ಪತ್ತಯಶ್ಚ ತಥಾ ಪೇತುರ್ವಿಶಸ್ತಾಃ ಶರವೃಷ್ಟಿಭಿಃ ॥೨೬॥

ಚಿತ್ರಸೇನನ ಮಾಯಾಸ್ತ್ರದ ಸಾಮರ್ಥ್ಯದಿಂದ ಕೌರವ ಸೈನ್ಯವು ಮೋಹಕ್ಕೆ ಒಳಗಾಯಿತು. ಎಲೈ ಭಾರತನೇ, ಗಜಾರೋಹಿಗಳು ಗಜಗಳ ಜೊತೆಯಲ್ಲಿ ಬಿದ್ದರು. ಅಶ್ವಾರೋಹಿಗಳು ಅಶ್ವದ ಜೊತೆಯಲ್ಲಿ, ರಥಾರೋಹಿಗಳು ರಥಗಳ ಜೊತೆಯಲ್ಲಿ ಬಿದ್ದರು. ಸೈನಿಕರೂ ಸಹ ಬಾಣಗಳ ಮಳೆಯಿಂದ ಕತ್ತರಿಸಿದ ದೇಹವುಳ್ಳವರಾಗಿ ನೆಲಕ್ಕುರುಳಿದರು.

ಏಕೈಕೋऽಪಿ ತದಾ ಯೋಧೋ ಧಾರ್ತರಾಷ್ಟ್ರಸ್ಯ ಭಾರತ ।
ಪರ್ಯವರ್ತತ ಗಂಧರ್ವೈರ್ದಶಭಿರ್ದಶಭಿಃ ಸಹ ॥೨೭॥

ಭಾರತನೇ, ದುರ್ಯೋಧನನ ಸೈನ್ಯದ ಒಬ್ಬೊಬ್ಬ ಯೋಧನೂ ಸಹ ಹತ್ತು ಹತ್ತು ಗಂಧರ್ವನಿಂದ ಸುತ್ತುವರಿಯಲ್ಪಟ್ಟನು.

ತತಃ ಸಂಪೀಡ್ಯಮಾನಾಸ್ತೇ ಬಲೇನ ಮಹತಾ ತದಾ ।
ಪ್ರಾದ್ರವಂತ ರಣೇ ಭೀತಾ ಯೇ ಚ ರಾಜಂಜಿಜೀ(ಗೀ)ಷವಃ ॥೨೭.೧॥

ಎಲೈ ರಾಜನೇ, ಆಗ ಗಂಧರ್ವರ ಮಹಾಸೈನ್ಯದಿಂದ ಪೀಡಿತರಾದ ಕೌರವ ಯೋಧರು ಭೀತರಾಗಿ ಬದುಕುವ ಇಚ್ಛೆಯಿಂದ ಯುದ್ಧವನ್ನು ಬಿಟ್ಟು ಓಡಿಹೋದರು.

ಭಜ್ಯಮಾನೇಷ್ವನೀಕೇಷು ಧಾರ್ತರಾಷ್ಟ್ರೇಷು ಸರ್ವಶಃ ।
ಕರ್ಣೋ ವೈಕರ್ತನೋ ರಾಜಂಸ್ತಸ್ಥೌ ಗಿರಿರಿವಾಚಲಃ ॥೨೮॥

ಎಲೈ ರಾಜನೇ, ಧೃತರಾಷ್ಟ್ರ ಪುತ್ರರು ಮತ್ತು ಅವನ ಸೈನ್ಯವು ಹೀಗೆ ಭೇದಿಸಲ್ಪಡುತ್ತಿರಲು ವೈಕರ್ತನನಾದ ಕರ್ಣನೊಬ್ಬನೇ ಪರ್ವತದಂತೆ ಅಚಲನಾಗಿ ನಿಂತನು.

ದುರ್ಯೋಧನಶ್ಚ ಕರ್ಣಶ್ಚ ಶಕುನಿಶ್ಚಾಪಿ ಸೌಬಲಃ ।
ಗಂಧರ್ವಾನ್ ಯೋಧಯಾಮಾಸುಃ ಸಮರೇ ಭೃಶವಿಕ್ಷತಾಃ ॥೨೯॥

ಆಗ ಬಹಳ ಗಾಯಗೊಂಡ ದುರ್ಯೋಧನನೂ, ಕರ್ಣನೂ ಮತ್ತು ಸೌಬಲನಾದ ಶಕುನಿಯು ಗಂಧರ್ವರ ಜೊತೆಯಲ್ಲಿ ಯುದ್ಧವನ್ನು ಮಾಡಿದರು.

ಸರ್ವ ಏವ ತು ಗಂಧರ್ವಾಃ ಶತಶೋಽಥ ಸಹಸ್ರಶಃ ।
ಜಿಘಾಂಸಮಾನಾಃ ಸಹಿತಾಃ ಕರ್ಣಮಭ್ಯದ್ರವನ್ ರಣೇ ॥೩೦॥

ಸೂತಪುತ್ರಂ ಜಿಘಾಂಸಂತಃ ಸಮಂತಾತ್ ಪರ್ಯವಾಕಿರನ್ ॥೩೧॥

ಎಲ್ಲ ಗಂಧರ್ವರೂ ನೂರರ ಸಂಖ್ಯೆಯಲ್ಲಿ ಸಾವಿರದ ಸಂಖ್ಯೆಯಲ್ಲಿ ಸೂತಪುತ್ರನಾದ ಕರ್ಣನು ಕೊಲ್ಲುವ ಇಚ್ಛೆಯಿಂದ ಒಟ್ಟಿಗೆ ಅವನ ಕಡೆಗೆ ಓಡಿದರು. ಮತ್ತು ಅವನ ಮೇಲೆ ಬಾಣಗಳ ಮಳೆಯನ್ನು ಕರೆದರು.

ಅನ್ಯೇಽಸ್ಯ ಯುಗಮಚ್ಛಿಂದನ್ ಧ್ವಜಮನ್ಯೇ ನ್ಯಪಾತಯನ್ ।
ಈಷಾಮನ್ಯೇ ಹಯಾನನ್ಯೇ ಸೂತಮನ್ಯೇ ನ್ಯಪಾತಯನ್ ॥೩೨॥

ಕೆಲವರು ಅವನ ರಥದ ನೊಗವನ್ನು ಕತ್ತರಿಸಿದರು. ಕೆಲವರು ಧ್ವಜವನ್ನು ಕೆಡವಿದರು. ಕೆಲವರು ರಥದ ಮೂಕಿಯನ್ನು, ಇನ್ನು ಕೆಲವರು ಅಶ್ವಗಳನ್ನೂ, ಇನ್ನು ಕೆಲವರು ಸಾರಥಿಯನ್ನೂ ಉರುಳಿಸಿದರು.

ಅನ್ಯೇ ಛತ್ರಂ ವರೂಥಂ ಚ ಬಂದುರಂ ಚ ತಥಾ ಪರೇ ।
ಅನ್ಯೇ ಸಂಚೂರ್ಣಯಾಮಾಸುರ್ನಲ್ವಂ ಚಾಕ್ಷೌ ತಥಾ ಪರೇ ॥೩೩॥

ಇನ್ನು ಕೆಲವರು ಛತ್ರವನ್ನೂ, ಕೆಲವರು ರಥದ ರಕ್ಷಣೆಗಳನ್ನೂ, ಇನ್ನು ಕೆಲವರು ರಥದ ಅಲಂಕಾರರೂಪವಾದ ಶೋರಣಗಳನ್ನೂ, ಇನ್ನು ಕೆಲವರು ನಲ್ವ ಎಂಬ ಇನ್ನೊಂದು ರಥಾಲಂಕಾರವನ್ನೂ, ಇನ್ನು ಕೆಲವರು ರಥದ ಎರಡು ತೂಬುಗಳನ್ನು ಮುರಿದು ಕೆಡವಿದರು.

ಗಂಧರ್ವಾ ಬಹುಸಾಹಸ್ರಾಸ್ತಿಲಶೋ ವ್ಯಧಮನ್ ರಥಮ್ ।
ಪ್ರಗೃಹೀತಾಯುಧಾ ವೀರಾಶ್ಚಿತ್ರಸೇನಪುರೋಗಮಾಃ ॥೩೪॥

ಚಿತ್ರಸೇನನನ್ನು ಮುಂದೆ ಮಾಡಿಕೊಂಡ ಬಹುಸಹಸ್ರ ಗಂಧರ್ವವೀರರು ಕೈಯಲ್ಲಿ ಆಯುಧಗಳನ್ನು ಹಿಡಿದು ಕರ್ಣನ ರಥವನ್ನು ಎಳ್ಳಿನಂತೆ ಪುಡಿ ಮಾಡಿದರು.

ತತೋ ರಥಾದವಪ್ಲುತ್ಯ ಸೂತಪುತ್ರೋಽಸಿಚರ್ಮಭೃತ್ ।
ಅಂಸಾವಲಂಬಿತಧನುರ್ಧಾವಮಾನೋ ಮಹಾಬಲಃ ॥೩೫॥

ವಿಕರ್ಣರಥಮಾಸ್ಥಾಯ ಮೋಕ್ಷಾಯಾಶ್ವಾನಚೋದಯತ್ ॥೩೬॥

ಆಗ ಸೂತಪುತ್ರನಾದ ಮಹಾಬಲನಾದ ಕರ್ಣನು ಅಸಿಚರ್ಮಗಳನ್ನು ಹಿಡಿದು ಹೆಗಲಿಗೆ ಧನುಸ್ಸನ್ನು ತೂಗುಹಾಕಿಕೊಂಡು ರಥದಿಂದ ಕೆಳಕ್ಕೆ ನೆಗೆದು ಓಡುತ್ತಾ ವಿಕರ್ಣರಥವನ್ನು ಏರಿ ಯುದ್ಧಭೂಮಿಯಿಂದ ಹೊರಗೆ ಹೋಗುವುದಕ್ಕಾಗಿ ಅಶ್ವಗಳನ್ನು ಚೋದಿಸಿದನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂಸಂಹಿತಾಯಾಂ ವೈಯಾಸಿಕ್ಯಾಂ
ವನಪರ್ವಣಿ ತ್ರಿಂಶದಧಿಕದ್ವಿಶತತಮೋಽಧ್ಯಾಯಃ ॥
॥ ಇತಿ ಘೋಷಯಾತ್ರಾಪರ್ವಣಿ ಕರ್ಣಪರಾಭವೋನಾಮ ಷಷ್ಠೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವನಪರ್ವದಲ್ಲಿ ಇನ್ನೂರ ಮೂವತ್ತನೆಯ
ಅಧ್ಯಾಯ ಮುಗಿಯಿತು.

★ ★ ★ ★

ಇನ್ನೂರ ಮೂವತ್ತೊಂದನೆಯ ಅಧ್ಯಾಯ

ಕೌರವಸೈನ್ಯದ ಪರಾಜಯ. ಚಿತ್ರರಥನಿಂದ ದುರ್ಯೋಧನನ ಬಂಧನ. ಇತರ ಗಂಧರ್ವರಿಂದ ದುರ್ಯೋಧನನ ತಮ್ಮಂದಿರ ಮತ್ತು ಅವರ ಪತ್ನಿಯರ ಬಂಧನ. ದುರ್ಯೋಧನನ ಅಮಾತ್ಯನಿಂದ ಯುಧಿಷ್ಠಿರನಿಗೆ ಈ ವಾರ್ತೆಯ ನಿವೇದನ. ಭೀಮಸೇನನಿಂದ ಬಂಧನದ ಅನುಮೋದನ.

ವೈಶಂಪಾಯನಃ

ಗಂಧರ್ವೈಸ್ತು ಮಹಾರಾಜ ಭಗ್ನೇ ಕರ್ಣೇ ಮಹಾರಥೇ ।
ಸಂಪ್ರಾದ್ರವಚ್ಚಮೂಃ ಸರ್ವಾ ಧಾರ್ತರಾಷ್ಟ್ರಸ್ಯ ಪಶ್ಯತಃ ॥೧॥

ವೈಶಂಪಾಯನ– ಮಹಾರಾಜನೇ, ಮಹಾರಥನಾದ ಕರ್ಣನು ಗಂಧರ್ವರಿಂದ ಭಗ್ನನಾದಾಗ ದುರ್ಯೋಧನನು ನೋಡುತ್ತಿರುವಂತೆಯೇ ಅವನ ಸೈನ್ಯವೆಲ್ಲವೂ ಓಡಿಹೋಯಿತು.

ತಾನ್ ದೃಷ್ಟ್ವಾ ದ್ರವತಃ ಸರ್ವಾನ್ ಧಾರ್ತರಾಷ್ಟ್ರಾನ್ ಪರಾಙ್ಮುಖಾನ್ ।
ದುರ್ಯೋಧನೋ ಮಹಾರಾಜೋ ನಾಸೀತ್ ತತ್ರ ಪರಾಙ್ಮುಖಃ ॥೨॥

ಯುದ್ಧಕ್ಕೆ ಪರಾಙ್ಮುಖರಾಗಿ ಓಡುತ್ತಿರುವ ತನ್ನ ಸೈನ್ಯವನ್ನು ನೋಡಿದ ಮಹಾರಾಜನಾದ ದುರ್ಯೋಧನನು ಮಾತ್ರ ಅಲ್ಲಿ ಪರಾಙ್ಮುಖನಾಗಲಿಲ್ಲ.

ತಾಮಾಪತಂತೀಂ ಸಂಪ್ರೇಕ್ಷ್ಯ ಗಂಧರ್ವಾಣಾಂ ಮಹಾಚಮೂಮ್ ।
ಮಹತಾ ಶರವರ್ಷೇಣ ಸೋಽಭ್ಯವರ್ಷದರಿಂದಮಃ ॥೩॥

ಮೇಲೆ ಎರಗುತ್ತಿದ್ದ ಗಂಧರ್ವರ ಮಹಾಸೈನ್ಯವನ್ನು ನೋಡಿದ ಅರಿಂದಮನಾದ ಅವನು ಬಾಣಗಳ ದೊಡ್ಡ ಮಳೆಯನ್ನು ಸುರಿಸಿದನು.

ಅಚಿಂತ್ಯ ಶರವರ್ಷಂ ತು ಗಂಧರ್ವಾಸ್ತಸ್ಯ ತಂ ರಥಮ್ ।
ದುರ್ಯೋಧನಂ ಜಿಘಾಂಸಂತಃ ಸಮಂತಾ ಪರ್ಯವಾರಯನ್ ॥೪॥

ಗಂಧರ್ವರು ಅವನ ಶರವರ್ಷವನ್ನು ಲೆಕ್ಕಿಸದೆ ದುರ್ಯೋಧನನನ್ನು ಕೊಲ್ಲಲು ಬಯಸಿ ಅವರ ರಥವನ್ನು ಸುತ್ತುವರಿದರು.

ಯುಗಮೀಷಾಂ ವರೂಥಂ ಚ ತಥೈವ ಧ್ವಜಸಾರಥೀ ।
ಅಶ್ವಾಂಸ್ತ್ರಿವೇಣು ತಲ್ಪಂ ಚ ತಿಲಶೋ ವ್ಯಧಮಂಛರೈಃ ॥೫॥

ರಥದ ನೊಗ, ಮೂಕಿ, ರಕ್ಷಣೆ, ಧ್ವಜ, ಸಾರಥಿ, ಅಶ್ವಗಳು, ತ್ರಿವೇಣು, ಆಸನ ಇವುಗಳನ್ನು ತಮ್ಮ ಬಾಣಗಳಿಂದ ಎಳ್ಳಿನಂತೆ ಪುಡಿಮಾಡಿದರು.

ದುರ್ಯೋಧನಂ ಚಿತ್ರಸೇನೋ ವಿರಥಂ ಪತಿತಂ ಭುವಿ ।
ಅಭಿದ್ರುತ್ಯ ಮಹಾಬಾಹುರ್ಜೀವಗ್ರಾಹಮಥಾಗ್ರಹೀತ್ ॥೬॥

ಮಹಾಬಾಹುವಾದ ಚಿತ್ರಸೇನನು ರಥವನ್ನು ಕಳೆದುಕೊಂಡು ಭೂಮಿಯ ಮೇಲೆ ಬಿದ್ದ ದುರ್ಯೋಧನನ ಕಡೆಗೆ ಓಡಿಹೋಗಿ ಅವನನ್ನು ಜೀವಸಹಿತವಾಗಿ ಸೆರೆಹಿಡಿದನು.

ತಸ್ಮಿನ್ ಗೃಹೀತೇ ರಾಜೇಂದ್ರ ಸ್ಥಿತಂ ದುಃಶಾಸನಂ ರಥೇ ।
ಪರ್ಯಗೃಹ್ಣಂತ ಗಂಧರ್ವಾಃ ಪರಿವಾರ್ಯ ಸಮಂತತಃ ॥೭॥

ರಾಜೇಂದ್ರನೇ, ದುರ್ಯೋಧನನು ಗೃಹೀತನಾಗುತ್ತಿರಲು ರಥದಲ್ಲಿದ್ದ ದುಃಶಾಸನನನ್ನು ಎಲ್ಲಕಡೆಯಿಂದಲೂ ಸುತ್ತುವರಿದು ಗಂಧರ್ವರು ಅವನನ್ನು ಹಿಡಿದರು.

ವಿವಿಂಶತಿಂ ಚಿತ್ರಸೇನಮಾದಾಯಾನ್ಯೇ ವಿದುದ್ರುವುಃ ।
ವಿಂದಾನುವಿಂದಾನವಪರೇ ರಾಜದಾರಾಂಶ್ಚ ಸರ್ವಶಃ ॥೮॥

ಇನ್ನು ಕೆಲವರು ವಿವಿಂಶತಿ ಮತ್ತು ಚಿತ್ರಸೇನರನ್ನು (ದುರ್ಯೋಧನನ ತಮ್ಮಂದಿರು) ಹಿಡಿದು ಓಡಿದರು. ಇನ್ನು ಕೆಲವರು ವಿಂದಾನುವಿಂದರನ್ನು ಮತ್ತು ಎಲ್ಲಾ ರಾಜಪತ್ನಿಯರನ್ನೂ ಹಿಡಿದರು.

ಸೈನ್ಯಂ ತದಾರ್ತರಾಷ್ಟ್ರಸ್ಯ ಗಂಧರ್ವೈಃ ಸಮಭಿದ್ರುತಮ್ ।
ಪೂರ್ವಂ ಪ್ರಭಗ್ನೈಃ ಸಹಿತಾಃ ಪಾಂಡವಾನಭ್ಯಯುಸ್ತದಾ ॥೯॥

ಗಂಧರ್ವರಿಂದ ಆಘಾತಕ್ಕೆ ಒಳಗಾದ ದುರ್ಯೋಧನನ ಆ ಸೈನ್ಯವು ಮೊದಲು ಭಗ್ನರಾದ ದುರ್ಯೋಧನನ ಸೈನಿಕರ ಜೊತೆಯಲ್ಲಿ ಆಗ ಪಾಂಡವರ ಬಳಿಗೆ ಹೋದರು.

ಶಕಟಾಪಣವೈಶ್ಯಾ(ವೇಶಾ)ಶ್ಚ ಯಾನಯುಗ್ಯಂ ಚ ಸರ್ವಶಃ ।
ಶರಣಂ ಪಾಂಡವಾಂಜಗ್ಮುರ್ಹ್ರಿಯಮಾಣೇ ಮಹೀಪತೌ ॥೧೦॥

ರಾಜನಾದ ದುರ್ಯೋಧನನು ಸೆರೆಹಿಡಿದು ಕೊಂಡೊಯ್ಯಲ್ಪಡುತ್ತಿರಲು ಅಲ್ಲಿಗೆ ಬಂದಿದ್ದ ಗಾಡಿಗಳವರೂ, ಅಂಗಡಿಗಳ ವೈಶ್ಯರೂ, ಅವರ ಎಲ್ಲಾ ವಾಹನಗಳೂ ಪಾಂಡವರನ್ನು ಶರಣುಹೊಂದಿದವು.

ದುರ್ಯೋಧನಾಮಾತ್ಯಾಃ

ಪ್ರಿಯದರ್ಶೀ ಮಹಾಬಾಹುರ್ಧಾರ್ತರಾಷ್ಟ್ರೋ ಮಹಾಬಲಃ ।
ಗಂಧರ್ವೈರ್ಹ್ರಿಯತೇ ರಾಜಾ ಪಾರ್ಥಾಸ್ತಮನುಧಾವತ ॥೧೧॥

ಪ್ರಿಯದರ್ಶಿ ಅಮಾತ್ಯರು ಮಹಾಬಾಹುವೂ, ಮಹಾಬಲನೂ ಆದ ದುರ್ಯೋಧನ ರಾಜನು ಗಂಧರ್ವರಿಂದ ಅಪಹರಿಸಲ್ಪಡುತ್ತಿದ್ದಾನೆ. ಪಾಂಡವರೇ, ಅವನನ್ನು ಹಿಂಬಾಲಿಸಿ.

ದುಃಶಾಸನೋ ದುರ್ವಿಷಹೋ ದುರ್ಮುಖೋ ದುರ್ಜಯಸ್ತಥಾ ।
ಬದ್ಧ್ವಾ ಹ್ರಿಯಂತೇ ಗಂಧರ್ವೈ ರಾಜದಾರಾಶ್ಚ ಸರ್ವಶಃ ॥೧೨॥

ದುಃಶಾಸನ, ದುರ್ವಿಷಹ, ದುರ್ಮುಖ, ದುರ್ಜಯ ಮತ್ತು ಎಲ್ಲಾ ರಾಜಪತ್ನಿಯರು ಇವರನ್ನು ಗಂಧರ್ವರು ಬಂಧಿಸಿ ಅಪಹರಣ ಮಾಡುತ್ತಿದ್ದಾರೆ.

ವೈಶಂಪಾಯನಃ

ಇತಿ ದುರ್ಯೋಧನಾಮಾತ್ಯಾಃ ಕ್ರೋಶಂತೋ ರಾಜಗೃದ್ಧಿನಃ ।
ಆರ್ತಾ ದೀನಾಸ್ತತಃ ಸರ್ವೇ ಯುಧಿಷ್ಠಿರಮುಪಾಗಮನ್ ॥೧೩॥

ವೈಶಂಪಾಯನ– ಹೀಗೆ ರಾಜನ ಹಿತವನ್ನು ಬಯಸುವ ದುರ್ಯೋಧನನ ಅಮಾತ್ಯರೆಲ್ಲರೂ ಆರ್ತರಾಗಿ, ದೀನರಾಗಿ ಕಿರುಚಿಕೊಳ್ಳುತ್ತಾ ಯುಧಿಷ್ಠಿರನ ಸಮೀಪಕ್ಕೆ ಬಂದರು.

ತಾಂಸ್ತಥಾ ವ್ಯಥಿತಾನ್ ದೀನಾನ್ ಭಿಕ್ಷಮಾಣಾನ್ ಯುಧಿಷ್ಠಿರಮ್ ।
ವೃದ್ಧಾನ್ ದುರ್ಯೋಧನಾಮಾತ್ಯಾನ್ ಭೀಮಸೇನೋಽಭ್ಯಭಾಷತ ॥

ವ್ಯಥಿತರೂ, ದೀನರೂ, ಯುಧಿಷ್ಠಿರನನ್ನು ಬೇಡುವವರೂ, ವೃದ್ಧರೂ ಆದ ಆ ದುರ್ಯೋಧನನ ಅಮಾತ್ಯರನ್ನು ಕುರಿತು ಭೀಮಸೇನನು ಮಾತನಾಡಿದನು.

ಅನ್ಯಥಾ ವರ್ತಮಾನಾನಾಮರ್ಥೋ ಜಾತೋಽಯಮನ್ಯಥಾ ।
ಅಸ್ಮಾಭಿರ್ಯದನುಷ್ಠೇಯಂ ಗಂಧರ್ವೈಸ್ತದನುಷ್ಠಿತಮ್ ॥೧೫॥

ಬೇರೆ ರೀತಿಯಲ್ಲಿ ಯೋಚನೆ ಮಾಡಿದುದು ಅದಕ್ಕಿಂತ ಬೇರೆ ರೀತಿಯಲ್ಲಿಯೇ ಪರ್ಯವಸಾನವನ್ನು ಹೊಂದಿತು. ನಾವು ಮಾಡಬೇಕಾಗಿದ್ದ ಕಾರ್ಯವನ್ನು ಗಂಧರ್ವರು ಮಾಡಿದ್ದಾರೆ.

ದುರ್ಮಂತ್ರಿತಮಿದಂ ತಾವದ್ ರಾಜ್ಞೋ ದುರ್ದ್ಯೂತದೇವಿನಃ ।
ದೀನಾನ್ ದುರ್ಯೋಧನಸ್ಯಾಸ್ಮಾನ್ ದ್ರಷ್ಟುಕಾಮಸ್ಯ ದುರ್ಮತೇಃ॥೧೬॥

ಇದು ದೀನರಾದ ನಮ್ಮನ್ನು ನೋಡಲು ಬಯಸಿದ ದುರ್ಮತಿಯಾದ ದುರ್ದ್ಯೂತವನ್ನು ಆಡುವ ದುರ್ಯೋಧನನ ದುರಾಲೋಚನೆಯಾಗಿದೆ.

ದ್ವೇಷ್ಟಾರಮನ್ಯೇ ಕ್ಲೀಬಸ್ಯ ಪಾತಯಂತೀತಿ ನಃ ಶ್ರುತಮ್ ।
ಇದಂ ಕೃತಂ ನಃ ಪ್ರತ್ಯಕ್ಷಂ ತದೇತದತಿಮಾನುಷಮ್ ॥೧೭॥

ದ್ವೇಷಮಾಡುವ ಹೇಡಿಯನ್ನು ಇನ್ನೊಬ್ಬರು ಬೀಳಿಸುತ್ತಾರೆ ಎಂದು ನಾವು ಕೇಳಿದ್ದೇವೆ. ಆದ್ದರಿಂದ ಮನುಷ್ಯರನ್ನು ಮೀರಿದ ಈ ಘಟನೆಯು ನಮಗೆ ಈ ದಿನ ಪ್ರತ್ಯಕ್ಷವಾಯಿತು.

ದಿಷ್ಟ್ಯಾ ಲೋಕೇ ಪುಮಾನಸ್ತಿ ಕಶ್ಚಿದಸ್ಮತ್ಪ್ರಿಯೇ ಸ್ಥಿತಃ ।
ಯೇನಾಸ್ಮಾಕಂ ಹೃತೋ ಭಾರ ಆಸೀನಾನಾಂ ಸುಖಾವಹಃ ॥೧೮॥

ದೇವರ ದಯೆಯಿಂದ ಈ ಪ್ರಪಂಚದಲ್ಲಿ ನಮ್ಮ ಹಿತವನ್ನು ಬಯಸುವ ಯಾವನೋ ಒಬ್ಬನಿದ್ದಾನೆ. ನಾವು ಕುಳಿತಿದ್ದರೂ ಸಹ ಅವನು ನಮ್ಮ ಭಾರವನ್ನು ಇಳಿಸಿ ನಮಗೆ ಸುಖವನ್ನು ತಂದುಕೊಟ್ಟಿದ್ದಾನೆ.

ಶೀತವಾತಾತಪಸಹಾಂಸ್ತಪಸಾ ಚೈವ ಕರ್ಶಿತಾನ್ ।
ಸಮಸ್ಥೋ ವಿಷಮಾಸ್ಥಾನ್ ಹಿ ದ್ರಷ್ಟುಮಿಚ್ಛತಿ ದುರ್ಮತಿಃ ॥೧೯॥

ಸಮೃದ್ಧಿಯಲ್ಲಿರುವ ದುರ್ಮತಿಯಾದ ದುರ್ಯೋಧನನು ಶೀತ, ವಾತ, ಬಿಸಿಲುಗಳನ್ನು ಸಹಿಸಿ ತಪಸ್ಸಿನಿಂದ ಕರ್ಶಿತರಾಗಿ ಸಂಕಟದಲ್ಲಿರುವ ನಮ್ಮನ್ನು ನೋಡಲು ಬಯಸುತ್ತಾನೆ.

ಅಧರ್ಮಚಾರಿಣಸ್ತಸ್ಯ ಕೌರವ್ಯಸ್ಯ ದುರಾತ್ಮನಃ ।
ಯೇ ಶೀಲಮನುವರ್ತಂತೇ ತೇ ಪಶ್ಯಂತಿ ಪರಾಭವಮ್ ॥೨೦॥

ಅಧರ್ಮವನ್ನು ಆಚರಿಸುವ ದುರಾತ್ಮನಾದ ಆ ಕೌರವನ ಗುಣವನ್ನು ಯಾರು ಅನುಸರಿಸುತ್ತಾರೆಯೋ ಅವರು ಹೀಗೆ ಪರಾಭವಕ್ಕೆ ಸಿಲುಕುತ್ತಾರೆ.

ಅಧರ್ಮೋ ಹಿ ಕೃತಸ್ತೇನ ಯೇನೈತದುಪಲಕ್ಷಿತಮ್ ।
ಅನೃಶಾಸಾಂಸ್ತು ಕೌಂತೇಯಾಸ್ತತ್ತ್ವಕ್ಷಂ ಬ್ರವೀಮಿ ವಃ ॥೨೧॥

ಯಾವ ದುರ್ಯೋಧನನು ಇದನ್ನು ಯೋಜನೆ ಮಾಡಿದನೋ ಅವನು ಅಧರ್ಮವನ್ನು ಮಾಡಿದ್ದಾನೆ. ಕೌಂತೇಯರು ಅಧರ್ಮವನ್ನು ಮಾಡುವವರಲ್ಲ. ದಯಾಪರರು. ಇದನ್ನು ಅವನ ಸೈನ್ಯದ ಅಧಿಪತಿಗಳಾದ ಅಮಾತ್ಯರಾದ ನಿಮಗೆ ಹೇಳುತ್ತಿದ್ದೇನೆ.

ಏವಂ ಬ್ರುವಾಣಂ ಕೌಂತೇಯಂ ಭೀಮಸೇನಮಪಸ್ವರಮ್ ।
ನ ಕಾಲಃ ಪರುಷಸ್ಯಾಯಮಿತಿ ರಾಜಾಭ್ಯಭಾಷತ ॥೨೨॥

ಭೀಮಸೇನನು ಹೀಗೆ ಅಪಸ್ವರದಿಂದ ಮಾತನಾಡುತ್ತಿರಲು ಧರ್ಮರಾಜನು ಅವನನ್ನು ಕುರಿತು ಇದು ಇಂತಹ ಒರಟುತನಕ್ಕೆ ಕಾಲವಲ್ಲ ಎಂದು ಹೇಳಿದನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂಸಂಹಿತಾಯಾಂ ವನಪರ್ವಣಿ
ಏಕತ್ರಿಂಶದಧಿಕದ್ವಿಶತತಮೋऽಧ್ಯಾಯಃ ॥
॥ಇತಿ ಘೋಷಯಾತ್ರಾಪರ್ವಣಿ ದುರ್ಯೋಧನಾದಿಹರಣಂ ನಾಮ ಸಪ್ತಮೋಧ್ಯಾಯಃ॥

ಇಲ್ಲಿಗೆ ಮಹಾಭಾರತದ ವನಪರ್ವದಲ್ಲಿ ಇನ್ನೂರ ಮೂವತ್ತೊಂದನೆಯ
ಅಧ್ಯಾಯ ಮುಗಿಯಿತು.

★ ★ ★ ★

ಇನ್ನೂರ ಮೂವತ್ತೆರಡನೆಯ ಅಧ್ಯಾಯ

ಭೀಮಸೇನನಿಂದ ದುರ್ಯೋಧನಾದಿಗಳ ವಿಮೋಚನೆಗೆ ಧರ್ಮರಾಜನ ಅತಿಶಯದ ಒತ್ತಾಯ. ಅರ್ಜುನನ ಅಂಗೀಕಾರ ಮತ್ತು ಪ್ರತಿಜ್ಞೆ.

ಯುಧಿಷ್ಠಿರಃ

ಅಸ್ಮಾನಭಿಗತಾಂಸ್ತಾತ ಭಯಾರ್ತಾಂಛರಣೈಷಿಣಃ ।
ಕೌರವಾನ್ ವಿಷಮಪ್ರಾಪ್ತಾನ್ ಕಥಂ ಬ್ರೂಯಾಸ್ತ್ವಮೀದೃಶಮ್ ॥೧॥

ರಕ್ಷಣೀಯಾ ಮಹಾಬಾಹೋ ಮೈವಂ ವದ ಮಹಾಮತೇ ।

ಯುಧಿಷ್ಠಿರ– ಪ್ರೀತಿಪಾತ್ರನಾದ ಭೀಮಸೇನನೇ, ಭಯಾರ್ತರಾಗಿ ಸಂಕಟಕ್ಕೆ ಸಿಲುಕಿ ರಕ್ಷಣೆಯನ್ನು ಅಪೇಕ್ಷಿಸಿ ನಮ್ಮ ಬಳಿಗೆ ಬಂದ ಕೌರವರನ್ನು ಕುರಿತು ನೀನು ಹೇಗೆ ಇಂತಹ ಮಾತುಗಳನ್ನು ಆಡುತ್ತೀಯೆ? ಮಹಾಮತಿಯೇ, ಮಹಾಬಾಹುವೇ, ಅವರು ನಮ್ಮಿಂದ ರಕ್ಷಿಸಲ್ಪಡಬೇಕಾದವರು. ಹೀಗೆ ಮಾತನಾಡಬೇಡ.

ಭವಂತಿ ಭೇದಾ ಜ್ಞಾತೀನಾಂ ಕಲಹಾಶ್ಚ ವೃಕೋದರ ।
ಪ್ರಸಕ್ತಾನಿ ಚ ವೈರಾಣಿ ಕುಲಧರ್ಮೋ ನ ನಶ್ಯತಿ ॥೨॥

ವೃಕೋದರನೇ, ದಾಯಾದಿಗಳಲ್ಲಿ ವಿರೋಧವೂ, ಕಲಹಗಳೂ ಮತ್ತು ವೈರಗಳೂ ಉಂಟಾಗುತ್ತವೆ. ಆದರೆ ಕುಲಧರ್ಮವು ನಾಶವನ್ನು ಹೊಂದುವುದಿಲ್ಲ.

ಯದಾ ತು ಕಶ್ಚಿಜ್ಜ್ಞಾತೀನಾಂ ಬಾಹ್ಯಃ ಪೋಥಯತೇ ಕುಲಮ್ ।
ನ ಮರ್ಷಯಂತಿ ತತ್ ಸಂತೋ ಬಾಹ್ಯೇನಾಭಿಪ್ರಧರ್ಷಣಮ್ ॥೩॥

ದಾಯಾದಿಗಳಿಂದ ಹೊರಗಿನವನು ಯಾವಾಗ ಕುಲವನ್ನು ಘಾಸಿಗೊಳಿಸುತ್ತಾನೆಯೋ ಆಗ ಬಾಹ್ಯಪುರುಷನಿಂದ ಆಗುವ ಈ ಅವಮಾನವನ್ನು ಸಜ್ಜನರು ಸಹಿಸುವುದಿಲ್ಲ.

ಪರೈಃ ಪರಿಭವೇ ಪ್ರಾಪ್ತೇ ವಯಂ ಪಂಚೋತ್ತರಂ ಶತಮ್ ।
ಪರಸ್ಪರವಿರೋಧೇ ತು ವಯಂ ಪಂಚ ಶತಂ ತು ತೇ ॥೩.೧॥

ಇನ್ನೊಬ್ಬರಿಂದ ಪರಿಭವವುಂಟಾಗುವುದಾದರೆ ನಾವು ನೂರೈದು ಜನ. ನಮ್ಮಲ್ಲಿಯೇ ವಿರೋಧವುಂಟಾಗುವುದಿದ್ದರೆ ಮಾತ್ರ ನಾವು ಐವರು ಮತ್ತು ಅವರು ನೂರುಜನ.

ಜಾನಾತ್ಯೇಷ ಹಿ ದುರ್ಬುದ್ಧಿರಸ್ಮಾನಿಹ ಚಿರೋಷಿತಾನ್ ।
ಸ ಏವಂ ಪರಿಭೂಯಾಸ್ಮಾನಕಾರ್ಷೀದಿದಮಪ್ರಿಯಮ್ ॥೪॥

ದುರ್ಬುದ್ಧಿಯುಳ್ಳ ಈ ದುರ್ಯೋಧನನು ನಾವು ಇಲ್ಲಿ ಬಹಳ ಸಮಯದಿಂದ ವಾಸಿಸುತ್ತಿದ್ದೇವೆಂದು ತಿಳಿದಿದ್ದಾನೆ. ಅವನು ಹೀಗೆ ನಮ್ಮನ್ನು ಅವಮಾನಗೊಳಿಸಿ ಅಪ್ರಿಯವನ್ನು ಮಾಡಿದ್ದಾನೆ.

ದುರ್ಯೋಧನಸ್ಯ ಗ್ರಹಣಾದ್ ಗಂಧರ್ವೇಣ ಬಲಾತ್ಪ್ರಭೋ ।
ಸ್ತ್ರೀಣಾಂ ಬಾಹ್ಯಾಭಿಮರ್ಶಾದ್ಧಿ ಹತಂ ಭವತಿ ನಃ ಕುಲಮ್ ॥೫॥

ಎಲೈ ಪ್ರಭುವೇ, ಗಂಧರ್ವರು ದುರ್ಯೋಧನನನ್ನು ಸೆರೆಹಿಡಿಯುವುದರಿಂದ ಮತ್ತು ಸ್ತ್ರೀಯರ ಮೇಲೆ ಕೈಮಾಡುವುದರಿಂದ ನಮ್ಮ ಕುಲವು ನಾಶವನ್ನು ಹೊಂದುತ್ತದೆ.

ಶರಣಂ ಚ ಪ್ರಪನ್ನಾನಾಂ ತ್ರಾಣಾರ್ಥಂ ಚ ಕುಲಸ್ಯ ಚ ।
ಉತ್ತಿಷ್ಠಧ್ವಂ(ತ) ನರವ್ಯಾಘ್ರಾಃ ಸಜ್ಜೀಭವತ ಮಾಚಿರಮ್ ॥೬॥

ಎಲೈ ನರವ್ಯಾಘ್ರರೇ, ಶರಣಾಗತರ ರಕ್ಷಣೆಗೋಸ್ಕರ ಮತ್ತು ಕುಲದ ರಕ್ಷಣೆಗೋಸ್ಕರ ಎದ್ದು ಶೀಘ್ರವಾಗಿ ಸನ್ನದ್ಧರಾಗಿ.

ಅರ್ಜುನಶ್ಚ ಯಮೌ ಚೈವ ತ್ವಂ ಚ ವೀರಾಪರಾಜಿತಃ ।
ಮೋಕ್ಷಯಧ್ವಂ ನರವ್ಯಾಘ್ರಾ ಹ್ರಿಯಮಾಣಂ ಸುಯೋಧನಮ್ ॥೭॥

ಎಲೈ ವೀರನೇ, ನರವ್ಯಾಘ್ರರಾದ ಅರ್ಜುನ, ನಕುಲ-ಸಹದೇವರು ಮತ್ತು ಅಪರಾಜಿತನಾದ ನೀನು ಗಂಧರ್ವರು ಎಳೆದುಕೊಂಡುಹೋಗುತ್ತಿರುವ ಸುಯೋಧನನನ್ನು ಬಿಡಿಸಿ.

ಏತೇ ರಥಾ ನರವ್ಯಾಘ್ರಾಃ ಸರ್ವಶಸ್ತ್ರಸಮನ್ವಿತಾಃ ।
ಇಂದ್ರಸೇನಾದಿಭಿಃ ಸೂತೈಃ ಕೃತಶಸ್ತ್ರೈರಧಿಷ್ಠಿತಾನ್ ॥೮॥

ಏತಾನಾಸ್ಥಾಯ ವೈ ಯತ್ತಾ ಗಂಧರ್ವಾನ್ ಯೋದ್ಧುಮಾಹವೇ ।
ಸುಯೋಧನಸ್ಯ ಮೋಕ್ಷಾಯ ಪ್ರಯತಧ್ವಮತಂದ್ರಿತಾಃ ॥೯॥

ನರವ್ಯಾಘ್ರರೇ, ಈ ರಥಗಳು ಇಂದ್ರಸೇನ ಮೊದಲಾದ ಸೂತರಿಂದ ಎಲ್ಲ ಶಸ್ತ್ರಾಸ್ತ್ರಗಳಿಂದ ತುಂಬಲ್ಪಟ್ಟಿವೆ. ನೀವು ಈ ರಥಗಳನ್ನು ಏರಿ ಆಲಸ್ಯವಿಲ್ಲದೇ ಜಾಗರೂಕತೆಯಿಂದ ಯುದ್ಧವನ್ನು ಮಾಡಿ ಸುಯೋಧನನನ್ನು ಬಿಡಿಸುವ ಪ್ರಯತ್ನವನ್ನು ಮಾಡಿ.

ಯ ಏವ ಕಶ್ಚಿತ್ ರಾಜನ್ಯಃ ಶರಣಾರ್ಥಮಿಹಾಗತಮ್ ।
ಪರಂ ಶಕ್ಯಾಽಭಿರಕ್ಷೇತ ಕಿಂ ಪುನಸ್ತ್ವಂ ವೃಕೋದರ ॥೧೦॥

ಎಲೈ ವೃಕೋದರನೇ, ಯಾವುದೇ ಒಬ್ಬ ರಾಜನು ತನ್ನ ಬಳಿ ಶರಣಾಗತಿಯಾಗಿ ಬಂದವನನ್ನು ತನ್ನ ಶಕ್ತಿಯನ್ನು ಮೀರಿ ರಕ್ಷಿಸುತ್ತಾನೆ. ಹೀಗಿರುವಾಗ ನೀನು ಹೇಗೆ ರಕ್ಷಿಸುವುದಿಲ್ಲ?

ವೈಶಂಪಾಯನಃ

ಏವಮುಕ್ತಸ್ತು ಕೌಂತೇಯಃ ಪುನರ್ವಾಕ್ಯಮಭಾಷತ ।
ಕೋಪಸಂರಕ್ತನಯನಃ ಪೂರ್ವವೈರಮನುಸ್ಮರನ್ ॥೧೧॥

ವೈಶಂಪಾಯನ– ಹೀಗೆ ಹೇಳಲ್ಪಟ್ಟ ಕುಂತೀಪುತ್ರನಾದ ಭೀಮಸೇನನು ಹಿಂದಿನ ವೈರವನ್ನು ಸ್ಮರಿಸುತ್ತಾ ಕೋಪದಿಂದ ಕೆಂಪಾದ ಕಣ್ಣುಳ್ಳವನಾಗಿ ಪುನಃ ಮಾತನಾಡಿದನು.

ಪುರಾ ಜತುಗೃಹೇಽನೇನ ದಗ್ಧುಮಸ್ಮಾನ್ ಯುಧಿಷ್ಠಿರ ।
ದುರ್ಬುದ್ಧಿರ್ಹಿ ಕೃತಾ ವೀರ ತದಾ ದೈವೇನ ರಕ್ಷಿತಾಃ ॥೧೨॥

ಯುಧಿಷ್ಠಿರನೇ, ಇವನು ಹಿಂದೆ ನಮ್ಮನ್ನು ಅರಗಿನ ಮನೆಯಲ್ಲಿ ಸುಡುವ ದುರ್ಬುದ್ಧಿಯನ್ನು ಮಾಡಿದನು. ಎಲೈ ವೀರನೇ, ನಾವು ಆಗ ದೈವದಿಂದ ರಕ್ಷಿಸಲ್ಪಟ್ಟೆವು.

ಕಾಲಕೂಟಂ ವಿಷಂ ತೀಕ್ಷ್ಣಂ ಭೋಜನೇ ಮಮ ಭಾರತ ।
ಉಪ್ತ್ವಾ ಗಂಗಾಂ ಲತಾಪಾಶೈರ್ಬದ್ಧ್ವಾ ಚ ಪ್ರಾಕ್ಷಿಪತ್ ಪ್ರಭೋ ॥೧೩॥

ಭಾರತನೇ, ಎಲೈ ಪ್ರಭುವೇ, ನನ್ನ ಭೋಜನದಲ್ಲಿ ತೀಕ್ಷ್ಣವಾದ ಕಾಲಕೂಟವಿಷವನ್ನು ಬೆರೆಸಿ ನನ್ನನ್ನು ಲತಾಪಾಶಗಳಿಂದ ಕಟ್ಟಿ ಗಂಗೆಯಲ್ಲಿ ಹಾಕಿದನು.

ರಸಾತಳೇ ಚ ಸಂಪ್ರಾಪ್ಯ ತದಾ ವಾಸುಕಿಮಂಜಸಾ ।
ತತ್ರ ದೃಷ್ಟ್ವಾ ತು ರಾಜೇಂದ್ರ ಪುನಃ ಪ್ರಾಪ್ತೋ ಮಹೀತಳಮ್ ॥

ರಾಜೇಂದ್ರನೇ, ನಾನು ಆಗ ರಸಾತಳಕ್ಕೆ ಹೋಗಿ ಅಲ್ಲಿ ವಾಸುಕಿಯನ್ನು ನೋಡಿ ಪುನಃ ಭೂಮಿಗೆ ಬಂದೆನು.

ದ್ಯೂತಕಾಲೇಽಪಿ ಕೌಂತೇಯ ವೃಜಿನಾನಿ ಕೃತಾನಿ ವೈ ।
ದ್ರೌಪದ್ಯಾಶ್ಚ ಪರಾಮರ್ಶಃ ಕೇಶಗ್ರಹಣಮೇವ ಚ ।
ವಸ್ತ್ರಾಪಹರಣಂ ಚೈವ ಸಭಾಮಧ್ಯೇ ಕೃತಾನಿ ವೈ ॥೧೪॥

ಕೌಂತೇಯನೇ, ದ್ಯೂತಕಾಲದಲ್ಲಿಯೂ ಅನೇಕ ಅಪಚಾರಗಳನ್ನು ಮಾಡಿದನು. ದ್ರೌಪದಿಯನ್ನು ಸ್ಪರ್ಶಿಸಿ ಅವಳ ತಲೆಗೂದಲನ್ನು ಪೀಡಿಸಿದನು. ಸಭೆಯ ಮಧ್ಯದಲ್ಲಿ ವಸ್ತ್ರಾಪಹರಣವನ್ನೂ ಮಾಡಿಸಿದನು.

ಪುರಾ ಕೃತಾನಾಂ ಪಾಪಾನಾಂ ಫಲಂ ಭುಂಕ್ತೇ ಸುಯೋಧನಃ ॥೧೫॥

ಅಸ್ಮಾಭಿರೇವ ಕರ್ತವ್ಯೋ ಧಾರ್ತರಾಷ್ಟ್ರಸ್ಯ ನಿಗ್ರಹಃ ।
ಅನ್ಯೇನ ತು ಕೃತಂ ತದ್ವೈ(ಚ್ಚ) ಮೈತ್ರ್ಯಮಸ್ಮಾಭಿರಿಚ್ಛತಾ ।
ಉಪಕಾರೀ ತು ಗಂಧರ್ವೋ ಮಾ ರಾಜನ್ ವಿಮನಾ ಭವ ॥೧೬॥

ಸುಯೋಧನನನು ಹಿಂದೆ ಮಾಡಿದ ಪಾಪಗಳ ಫಲಗಳನ್ನು ಅನುಭವಿಸುತ್ತಿದ್ದಾನೆ. ನಾವೇ ಅವನ ನಿಗ್ರಹವನ್ನು ಮಾಡಬೇಕಾಗಿದ್ದಿತು. ಆದರೆ ನಮ್ಮ ಮೈತ್ರವನ್ನು ಬಯಸುವ ಇನ್ನೊಬ್ಬನು ಆ ಕಾರ್ಯವನ್ನು ಮಾಡಿದ್ದಾನೆ. ಗಂಧರ್ವನು ನಮಗೆ ಉಪಕಾರವನ್ನೇ ಮಾಡಿದ್ದಾನೆ. ರಾಜನೇ ಬೇಸರಪಡಬೇಡ.

ವೈಶಂಪಾಯನಃ

ಏತಸ್ಮಿನ್ನಂತರೇ ರಾಜಂಶ್ಚಿತ್ರಸೇನೇನ ವೈ ಹೃತಃ ।
ವಿಲಲಾಪ ಸುದುಃಖಾರ್ತೋ ಹ್ರಿಯಮಾಣಃ ಸುಯೋಧನಃ ॥೧೭॥

ವೈಶಂಪಾಯನ– ರಾಜನೇ, ಈ ಸಮಯದಲ್ಲಿ ಚಿತ್ರಸೇನನಿಂದ ಪ್ರಹಾರಕ್ಕೆ ಒಳಗಾದ ಎಳೆದೊಯ್ಯಲ್ಪಡುತ್ತಿದ್ದ ಸುಯೋಧನನು ದುಃಖದಿಂದ ಬಹಳ ಆರ್ತನಾಗಿ ವಿಲಾಪವನ್ನು ಮಾಡಿದನು.

ದುರ್ಯೋಧನಃ

ಯುಧಿಷ್ಠಿರ ಮಹಾಬಾಹೋ ಸರ್ವಧರ್ಮಭೃತಾಂ ವರ ।
ಸರ್ವಧರ್ಮಭೃತಾಂ ಶ್ರೇಷ್ಠ ಗಂಧರ್ವೇಣ ಹೃತಂ ಬಲಾತ್ ॥೧೮॥

ರಕ್ಷಸ್ವ ಪುರುಷವ್ಯಾಘ್ರ ಯುಧಿಷ್ಠಿರ ಮಹಾಯಶಃ ॥೧೯॥

ದುರ್ಯೋಧನ– ಮಹಾಬಾಹುವಾದ ಸರ್ವಧರ್ಮಿಷ್ಠರಲ್ಲಿ ಶ್ರೇಷ್ಠನಾದ, ಮಹಾಕೀರ್ತಿಶಾಲಿಯಾದ, ಪುರುಷವ್ಯಾಘ್ರನಾದ ಯುಧಿಷ್ಠಿರನೇ, ಗಂಧರ್ವನಿಂದ ಬಲವನ್ನು ಆಶ್ರಯಿಸಿ ಎಳೆದೊಯ್ಯಲ್ಪಡುತ್ತಿರುವ ನನ್ನನ್ನು ರಕ್ಷಿಸು.

ಭ್ರಾತರಂ ತೇ ಮಹಾಬಾಹೋ ಬದ್ಧ್ವಾ ನಯತಿ ಮಾಮಯಮ್ ।
ದುಃಶಾಸನಂ ದುರ್ವಿಷಹಂ ದುರ್ಮುಖಂ ದುರ್ಜಯಂ ತಥಾ ॥೨೦॥

ಮಹಾಬಾಹುವೇ, ನಿನ್ನ ತಮ್ಮನಾದ ನನ್ನನ್ನು ಈ ಗಂಧರ್ವನು ಬಂಧಿಸಿ ಕರೆದುಕೊಂಡು ಹೋಗುತ್ತಿದ್ದಾನೆ. ದುಃಶಾಸನ, ದುರ್ವಿಷಹ, ದುರ್ಮುಖ, ದುರ್ಜಯರನ್ನೂ ಕೊಂಡೊಯ್ಯುತ್ತಿದ್ದಾನೆ.

ಬದ್ಧ್ವಾ ಹರಂತಿ ಗಂಧರ್ವಾ ಅಸ್ಮದ್ದಾರಾಂಶ್ಚ ಸರ್ವಶಃ ।
ಅನುಧಾವತ ಮಾಂ ಕ್ಷಿಪ್ರಂ ರಕ್ಷಧ್ವಂ ಪುರುಷೋತ್ತಮಾಃ ।
ವೃಕೋದರ ಮಹಾಬಾಹೋ ಧನಂಜಯ ಮಹಾಯಶಃ ॥೨೧॥

ಗಂಧರ್ವರು ನಮ್ಮ ಪತ್ನಿಯರೆಲ್ಲರನ್ನೂ ಬಂಧಿಸಿ ಕರೆದೊಯ್ಯುತ್ತಿದ್ದಾರೆ. ಮಹಾಬಾಹುವಾದ ವೃಕೋದರನೇ, ಮಹಾಕೀರ್ತಿಶಾಲಿಯಾದ ಧನಂಜಯನೇ, ಪುರುಷೋತ್ತಮರಾದ ನೀವು ನನ್ನ ಬಳಿಗೆ ಓಡಿಬಂದು ಬೇಗ ನನ್ನನ್ನು ರಕ್ಷಿಸಿ.

ಯಮೌ ಮಾಮನುಧಾವೇತಾಂ ರಕ್ಷಾರ್ಥಂ ಮಮ ಸಾಯುಧೌ ।
ಕುರುವಂಶಸ್ಯ ಸು ಮಹದಯಶಃ ಪ್ರಾಪ್ತಮೀದೃಶಮ್ ॥೨೨॥

ವ್ಯಪೋಹಯಧ್ವಂ ಗಂಧರ್ವಾನ್ ಜಿತ್ವಾ ವೀರ್ಯೇಣ ಪಾಂಡವಾಃ ॥

ನಕುಲ-ಸಹದೇವರೇ, ನನ್ನನ್ನು ರಕ್ಷಿಸಲು ಆಯುಧವನ್ನು ಹಿಡಿದು ಓಡಿಬನ್ನಿ. ಕುರುವಂಶಕ್ಕೆ ಇಂತಹ ದೊಡ್ಡ ಅಪಕೀರ್ತಿಯು ಪ್ರಾಪ್ತವಾಗಿದೆ. ಎಲ್ಲೆ ಪಾಂಡವರೇ, ನಿಮ್ಮ ಪರಾಕ್ರಮದಿಂದ ಗಂಧರ್ವರನ್ನು ಗೆದ್ದು ಈ ಅಪಕೀರ್ತಿಯನ್ನು ದೂರಮಾಡಿ.

ವೈಶಂಪಾಯನಃ

ಏವಂ ವಿಲಪಮಾನಸ್ಯ ಕೌರವಸ್ಯಾರ್ತಯಾ ಗಿರಾ ।
ಶ್ರುತ್ವಾ ವಿಲಾಪಂ ಸಂಭ್ರಾಂತೋ ಘೃಣಯಾऽಭಿಪರಿಪ್ಲುತಃ ।
ಯುಧಿಷ್ಠಿರಃ ಪುನರ್ವಾಕ್ಯಂ ಭೀಮಸೇನಮಥಾಬ್ರವೀತ್ ॥೨೪॥

ವೈಶಂಪಾಯನ– ಹೀಗೆ ಆರ್ತಸ್ವರದಿಂದ ವಿಲಾಪಮಾಡುತ್ತಿದ್ದ ದುರ್ಯೋಧನನ ವಿಲಾಪವನ್ನು ಕೇಳಿ ಸಂಭ್ರಾಂತನಾದ ಯುಧಿಷ್ಠಿರನು ಕರುಣೆಯಿಂದ ಪೂರಿತನಾಗಿ ಭೀಮಸೇನನನ್ನು ಕುರಿತು ಪುನಃ ಮಾತನಾಡಿದನು.

ಯುಧಿಷ್ಠಿರಃ

ಸುಯೋಧನಸ್ಯ ಮೋಕ್ಷಾಯ ಪ್ರಯತಧ್ವಮತಂದ್ರಿತಾಃ ॥೨೫॥

ಯ ಏವ ಕಶ್ಚಿದ್ರಾಜನ್ಯಃ ಶರಣಾರ್ಥಮಿಹಾಗತಮ್ ।
ಪರಂ ಶಕ್ತ್ಯಾऽಭಿರಕ್ಷೇತ ಕಿಂ ಪುನಸ್ತ್ವಂ ವೃಕೋದರಃ ॥೨೬॥

ಯುಧಿಷ್ಠಿರ– ಸುಯೋಧನನ ಮೋಚನೆಗಾಗಿ ಆಲಸ್ಯವಿಲ್ಲದೇ ಪ್ರಯತ್ನವನ್ನು ಮಾಡಿ. ಯಾವ ರಾಜನಾದರೂ ಸಹ ಶರಣಾಗತರಾದವರನ್ನು ತನ್ನ ಶಕ್ತಿಯನ್ನು ಮೀರಿ ರಕ್ಷಿಸುತ್ತಾನೆ. ಹೀಗಿರುವಾಗ ವೃಕೋದರನೇ, ನೀನು ರಕ್ಷಿಸಬೇಕಾದ ವಿಷಯದಲ್ಲಿ ಹೇಳುವುದೇನು?

ಕ ವಹೇರ್ಯೋ ಇಹಾತ್ ಪ್ರಾಣಾನಭಿಧಾವೇತಿ ಚೋದಿತಃ ।
ಪ್ರಾಂಜಲಿಂ ಶರಣಾಪನ್ನಂ ದೃಷ್ಟ್ವಾ ಶತ್ರುಮಪಿ ಧ್ರುವಮ್ ॥೨೭॥

ಕೈಗಳನ್ನು ಮುಗಿದು ಶರಣಾಗತನಾಗಿ ನನ್ನ ರಕ್ಷಣೆಗೆ ಓಡಿ ಬನ್ನಿ ಎಂದು ಕರೆಯುವ ಮನುಷ್ಯನು ಅವನು ಶತ್ರುವಾದರೂ ಸಹ ಆರ್ಯಸ್ವಭಾವವನ್ನು ಧರಿಸಿದ ಯಾವನು ಅವನ ರಕ್ಷಣೆಗೆ ಹೋಗದೆ ಜೀವಂತನಾಗಿರುತ್ತಾನೆ?

ವರಪ್ರದಾನಂ ರಾಜ್ಯಂ ಚ ಪುತ್ರಜನ್ಮ ಚ ಪಾಂಡವ ।
ಶತ್ರೋಶ್ಚ ಮೋಕ್ಷಣಂ ಕ್ಲೇಶಾತ್ ತ್ರೀಣಿ ಚೈಕಂ ಚ ತತ್ಸಮಮ್ ॥೨೮॥

ಅಭೀಷ್ಟವಾದ ವರಪ್ರದಾನ, ಶತ್ರುಗಳನ್ನು ಸೋಲಿಸಿ ರಾಜ್ಯಸಂಪಾದನೆ, ಪುತ್ರಕಾಮೇಷ್ಟಿಯಾದಿಗಳಿಂದ ಪುತ್ರಸಂಪಾದನೆ ಇವು ಮೂರು ರಾಜನಿಗೆ ಅಪೇಕ್ಷಿತವಾದುದು. ಎಲೈ ಪಾಂಡವನೇ, ಶರಣಾಗತನಾದವನನ್ನು ಶತ್ರುವಿನಿಂದ ಮೋಚನೆ ಮಾಡುವುದು ಈ ಮೂರಕ್ಕೂ ಸಮನಾದುದು.

ಕಿಮಭ್ಯಧಿಕಮೇತಸ್ಮಾದ್ ಯದಾಪನ್ನಃ ಸುಯೋಧನಃ ।
ತ್ವದ್ಬಾಹುಬಲಮಾಶ್ರಿತ್ಯ ಜೀವಿತಂ ಪರಿಮಾರ್ಗತೇ ॥೨೯॥

ಆಪತ್ತಿಗೊಳಗಾದ ಸುಯೋಧನನು ನಿನ್ನ ಬಾಹುಬಲವನ್ನು ಆಶ್ರಯಿಸಿ ಬದುಕಲು ಅಪೇಕ್ಷಿಸುತ್ತಾನೆ. ಇದಕ್ಕಿಂತ ದೊಡ್ಡ ಲಾಭವು ಏನಿದೆ?

ಪರೈಃ ಪರಿಭವೇ ಪ್ರಾಪ್ತೇ ವಯಂ ಪಂಚೋತ್ತರಂ ಶತಮ್ ।
ಸ್ವಯಮೇವ ಪ್ರಧಾವೇಯಂ ಯದಿ ನ ಸ್ಯಾದ್ ವೃಕೋದರ ।
ವಿತತೋ ಮೇ ಕ್ರತುರ್ವೀರ ನ ಹಿ ಮೇಽತ್ರ ವಿಚಾರಣಾ ॥೩೦॥

ಇನ್ನೊಬ್ಬರಿಂದ ಪರಿಭವವುಂಟಾದರೆ ನಾವು ನೂರೈದು ಮಂದಿ. ಎಲೈ ವೃಕೋದರನೇ, ವೀರನೇ, ನಾನು ಈ ಯಜ್ಞವನ್ನು ಹಬ್ಬಿಸಿಕೊಳ್ಳದಿದ್ದರೆ ನಾನಾಗಿಯೇ ಓಡಿಹೋಗುತ್ತಿದ್ದೆ. ಈ ವಿಷಯದಲ್ಲಿ ಯಾವ ಸಂಶಯವೂ ಇಲ್ಲ.

ಸಾಮ್ನೈವ ತು ಯಥಾ ಭೀಮ ಮೋಕ್ಷಯೇಥಾಃ ಸುಯೋಧನಮ್ ।
ತಥಾ ಸರ್ವೈರುಪಾಯೈಸ್ತ್ವಂ ಯತೇಥಾಃ ಕುರುನಂದನ ॥೩೧॥

ಎಲೈ ಕುರುನಂದನನಾದ ಭೀಮನೇ, ಸಾಮೋಪಾಯದಿಂದಲೇ ನೀನು ಸುಯೋಧನನನ್ನು ಬಿಡಿಸು. (ಅದು ಆಗದಿದ್ದರೆ) ಉಳಿದ ಎಲ್ಲಾ ಉಪಾಯಗಳಿಂದಲೂ ಅವನನ್ನು ಬಿಡಿಸಲು ಪ್ರಯತ್ನವನ್ನು ಮಾಡು.

ನ ಸಾಮ್ನಾ ಪ್ರತಿಪದ್ಯೇತ ಯದಿ ಗಂಧರ್ವರಾಡಸೌ ।
ಪರಾಕ್ರಮೇಣ ಮೃದುನಾ ಮೋಕ್ಷಯೇಥಾಃ ಸುಯೋಧನಮ್ ॥೩೨॥

ಈ ಗಂಧರ್ವರಾಜನು ಸಾಮಮಾರ್ಗದಿಂದ ನಮ್ಮ ಮಾತನ್ನು ಕೇಳದಿದ್ದರೆ ಮೃದುವಾದ ಪರಾಕ್ರಮವನ್ನು ಉಪಯೋಗಿಸಿ ಸುಯೋಧನನನ್ನು ಮೋಚನೆಗೊಳಿಸು.

ಅಥಾಸೌ ಮೃದುಯುದ್ಧೇನ ನ ಮುಂಚೇದ್ ಭೀಮ ಕೌರವಾನ್ ।
ಸರ್ವೋಪಾಯೈರ್ವಿಮೋಚ್ಯಾಸ್ತೇ ನಿಗೃಹ್ಯ ಪರಿಪಂಥಿನಃ ।
ಏತಾವದ್ಧಿ ಮಯಾ ಶಕ್ಯಂ ಸಂದೇಷ್ಟುಂ ವೈ ವೃಕೋದರ ॥೩೩॥

ಇನ್ನು ಮೃದುವಾದ ಯುದ್ಧದಿಂದ ಗಂಧರ್ವರಾಜನು ಕೌರವರನ್ನು ಬಿಡದಿದ್ದರೆ ಎಲ್ಲ ಉಪಾಯಗಳನ್ನೂ ಅನುಸರಿಸಿ ವಿರೋಧಿಗಳನ್ನು ನಿಗ್ರಹಿಸಿ ಸುಯೋಧನಾದಿಗಳು ಮೋಚನೆಗೊಳಿಸಲ್ಪಡಬೇಕು. ವೃಕೋದರನೇ, ನಾನು ನಿನಗೆ ಇಷ್ಟುಮಾತ್ರ ಸಂದೇಶವನ್ನು ಕೊಡಲು ಸಾಧ್ಯ.

ವೈತಾನೇ ಕರ್ಮಣಿ ತತೇ ವರ್ತಮಾನೇ ಚ ಭಾರತ ।
ವರಪ್ರದಾನಂ ಸುಮಹದ್ ಯಾಚಕಸ್ಯ ಪ್ರಕೀರ್ತಿತಮ್ ॥೩೪॥

ಎಲೈ ಭಾರತನೇ, ಯಜ್ಞಕರ್ಮದಲ್ಲಿ ತೊಡಗಿರುವಾಗ ಯಾಚಕನಿಗೆ ವರಪ್ರದಾನವನ್ನು ಮಾಡಿದರೆ ಅದು ಬಹಳ ಶ್ರೇಷ್ಠವೆಂದು ಹೇಳಲ್ಪಡುತ್ತದೆ.

ವೈಶಂಪಾಯನಃ

ಅಜಾತಶತ್ರೋರ್ವಚನಂ ತತ್ಶ್ರುತ್ವಾ ತು ಧನಂಜಯಃ ।
ಪ್ರತಿಜಜ್ಞೇ ಗುರೋರ್ವಾಕ್ಯಂ ಕೌರವಾಣಾಂ ವಿಮೋಕ್ಷಣೇ(ಣಮ್) ॥

ವೈಶಂಪಾಯನ– ಅಜಾತಶತ್ರುವಿನ ಆ ಮಾತುಗಳನ್ನು ಕೇಳಿ ಧನಂಜಯನು ಅಣ್ಣನ ವಾಕ್ಯಗಳಿಗೆ ಅನುಸಾರವಾಗಿ ಕೌರವರನ್ನು ಬಿಡಿಸುವುದಾಗಿ ಪ್ರತಿಜ್ಞೆಯನ್ನು ಮಾಡಿದನು.

ಅರ್ಜುನಃ

ಯದಿ ಸಾಮ್ನಾ ನ ಮೋಕ್ಷ್ಯಂತಿ ಗಂಧರ್ವಾ ಧೃತರಾಷ್ಟ್ರಜಾನ್ ।
ಅದ್ಯ ಗಂಧರ್ವರಾಜಸ್ಯ ಭೂಮಿಃ ಪಾಸ್ಯತಿ ಶೋಣಿತಮ್ ॥೩೬॥

ಅರ್ಜುನ– ಗಂಧರ್ವರು ಧೃತರಾಷ್ಟ್ರಪುತ್ರರನ್ನು ಸಾಮಮಾರ್ಗದಿಂದ ಬಿಡುಗಡೆ ಮಾಡದಿದ್ದರೆ ಈ ದಿನ ಭೂಮಿಯು ಗಂಧರ್ವರಾಜನ ರಕ್ತವನ್ನು ಕುಡಿಯುವುದು.

ಅರ್ಜುನಸ್ಯ ತು ತಾಂ ಶ್ರುತ್ವಾ ಪ್ರತಿಜ್ಞಾಂ ಸತ್ಯವಾದಿನಃ ।
ಕೌರವಾಣಾಂ ತದಾ ರಾಜನ್ ಪುನಃ ಪ್ರತ್ಯಾಗತಂ ಮನಃ ॥೩೭॥

ಎಲೈ ರಾಜನೇ, ಸತ್ಯವಾದಿಯಾದ ಅರ್ಜುನನ ಆ ಪ್ರತಿಜ್ಞೆಯನ್ನು ಕೇಳಿ ಕೌರವರಿಗೆ ಹೊರಟು ಹೋಗಿದ್ದ ಮನಸ್ಸು (ಪ್ರಾಣವು) ಪುನಃ ಬಂದಂತಾಯಿತು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂಸಂಹಿತಾಯಾಂ ವೈಯಾಸಿಕ್ಯಾಂ
ವನಪರ್ವಣಿ ದ್ವಾತ್ರಿಂಶದಧಿಕದ್ವಿಶತತಮೋऽಧ್ಯಾಯಃ ॥
॥ ಇತಿ ಘೋಷಯಾತ್ರಾಪರ್ವಣಿ ದುರ್ಯೋಧನಾದಿಮೋಚನಾನುಜ್ಞಾನಾಮ
ಅಷ್ಟಮೋಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವನಪರ್ವದಲ್ಲಿ ಇನ್ನೂರ ಮೂವತ್ತೆರಡನೆಯ ಅಧ್ಯಾಯ ಮುಗಿಯಿತು.

★ ★ ★ ★

ಇನ್ನೂರ ಮೂವತ್ಮೂರನೆಯ ಅಧ್ಯಾಯ

ಚಿತ್ರಸೇನ ಮೊದಲಾದ ಗಂಧರ್ವರ ಜೊತೆಯಲ್ಲಿ ಪಾಂಡವರ ಯುದ್ಧ.

ವೈಶಂಪಾಯನಃ

ಯುಧಿಷ್ಠಿರವಚಃ ಶ್ರುತ್ವಾ ಭೀಮಸೇನಪುರೋಗಮಾಃ ।
ಪ್ರಹೃಷ್ಟವದನಾಃ ಸರ್ವೇ ಸಮುತ್ತಸ್ಥುರ್ನರರ್ಷಭಾಃ ॥೧॥

ವೈಶಂಪಾಯನ– ಯುಧಿಷ್ಠಿರನ ಮಾತನ್ನು ಕೇಳಿ ಭೀಮಸೇನ ಮೊದಲಾದ ನರಶ್ರೇಷ್ಠರೆಲ್ಲರೂ ಸಂತೋಷದಿಂದ ಕೂಡಿದ ಮುಖವುಳ್ಳವರಾಗಿ ಮೇಲೆದ್ದರು.

ಜಾಂಬೂನದವಿಚಿತ್ರಾಣಿ ಕವಚಾನಿ ಮಹಾರಥಾಃ ।
ಅಭೇದ್ಯಾನಿ ತತಃ ಸರ್ವೇ ಸಮನಹ್ಯಂತ ಭಾರತ ॥೨॥

ಎಲೈ ಭಾರತನೇ, ಆ ಮಹಾರಥರು ಎಲ್ಲರೂ ಸುವರ್ಣದಿಂದ ಅಲಂಕೃತವಾದ, ವಿಚಿತ್ರವಾದ ಮತ್ತು ಅಭೇದ್ಯವಾದ ಕವಚಗಳನ್ನು ಧರಿಸಿದರು.

ಆಯುಧಾನಿ ಚ ದಿವ್ಯಾನಿ ವಿವಿಧಾನಿ ಸಮಾದಧುಃ ।
ತೇ ದಂಶಿತಾ ರಥೈಃ ಸರ್ವೇ ಧ್ವಜಿನಃ ಸಶರಾಸನಾಃ ।
ಪಾಂಡವಾಃ ಪ್ರತ್ಯದೃಶ್ಯಂತ ಜ್ವಲಿತಾ ಇವ ಪಾವಕಾಃ ॥೩॥

ಅವರು ಅನೇಕ ವಿಧವಾದ ದಿವ್ಯವಾದ ಆಯುಧಗಳನ್ನೂ ತೆಗೆದುಕೊಂಡರು. ಪಾಂಡವರು ಧ್ವಜಗಳುಳ್ಳ ರಥಗಳಲ್ಲಿ ಬಿಲ್ಲುಗಳನ್ನು ಹಿಡಿದು ಕವಚವನ್ನು ಧರಿಸಿ ಜ್ವಲಿಸುವ ಅಗ್ನಿಯಂತೆ ಕಂಡುಬಂದರು.

ತಾನ್ರಥಾನ್ ಸಾಧುಸಂಪನ್ನಾನ್ ಸಂಯುಕ್ತಾನ್ ಜವನೈರ್ಹಯೈಃ ।
ಆಸ್ಥಾಯ ನರಶಾರ್ದೂಲಾಃ ಶೀಘ್ರಮೇವ ಯಯುಸ್ತತಃ ॥೪॥

ವೇಗಶಾಲಿಗಳಾದ ಅಶ್ವಗಳನ್ನು ಹೂಡಿದ ಎಲ್ಲ ಸಲಕರಣೆಗಳಿಂದಲೂ ಸಂಪನ್ನವಾದ ಆ ರಥಗಳನ್ನು ಏರಿ ಆ ನರಶಾರ್ದೂಲರು ಶೀಘ್ರವಾಗಿಯೇ ಅಲ್ಲಿಂದ ಹೊರಟರು.

ತತಃ ಕೌರವಸೈನ್ಯಾನಾಂ ಪ್ರಾದುರಾಸೀನ್ ಮಹಾಸ್ವನಃ ।
ಪ್ರಯಾತಾನ್ ಸಹಿತಾನ್ ದೃಷ್ಟ್ವಾ ಪಾಂಡುಪುತ್ರಾನ್ ಮಹಾರಥಾನ್ ॥

ಆಗ ಯುದ್ಧಕ್ಕೆ ಒಟ್ಟಿಗೆ ಹೊರಟ ಮಹಾರಥರಾದ ಪಾಂಡುಪುತ್ರರನ್ನು ನೋಡಿ ಕೌರವ ಸೈನ್ಯದಲ್ಲಿ ಮಹಾನಾದ ಉಂಟಾಯಿತು.

ಜಿತಕಾಶಿನಶ್ಚ ಚತ್ವಾರಸ್ತ್ವರಿತಾಶ್ಚ ಮಹಾರಥಾಃ ।
ಕ್ಷಣೇನೈವ ವನೇ ತಸ್ಮಿನ್ ಸಮಾಜಗ್ಮುರಭೀತವತ್ ॥೬॥

ಜಯವನ್ನು ಬಯಸುವ ಆ ನಾಲ್ವರು ಮಹಾರಥರು ಜಾಗ್ರತೆಯಾಗಿ ಒಂದು ಕ್ಷಣದಲ್ಲಿಯೇ ಯಾವ ಭೀತಿಯೂ ಇಲ್ಲದೆ ಆ ವನಕ್ಕೆ ಬಂದರು.

ನ್ಯವರ್ತಂತ ತತಃ ಸರ್ವೇ ಗಂಧರ್ವಾಃ ಜಿತಕಾಶಿನಃ ।
ದೃಷ್ಟ್ವಾ ರಥಾಗತಾನ್ ವೀರಾನ್ ಪಾಂಡವಾಂಶ್ಚತುರೋ ರಣೇ ॥೭॥

ತಾವು ವಿಜಯಶಾಲಿಗಳೆಂದು ಎಣಿಸುತ್ತಿದ್ದ ಗಂಧರ್ವರೆಲ್ಲರೂ ವೀರರಾದ ನಾಲ್ಕುಜನ ಪಾಂಡವರು ರಥದಲ್ಲಿ ಕುಳಿತು ರಣರಂಗಕ್ಕೆ ಬರುತ್ತಿರುವುದನ್ನು ನೋಡಿ ತಾವೂ ಅವರ ಕಡೆಗೆ ತಿರುಗಿದರು.

ತಾಂಸ್ತು ವಿಭ್ರಾಜಿತಾನ್ ದೃಷ್ಟ್ವಾ ಲೋಕಪಾಲಾನಿವೋದ್ಯತಾನ್ ।
ವ್ಯೂಢಾನೀಕಾ ವ್ಯತಿಷ್ಠಂತ ಗಂಧರ್ವಾ ವನಚಾರಿಣಃ ॥೮॥

ಲೋಕಪಾಲಕರಂತೆ ಉದ್ಯಮಶೀಲರಾದ ಪ್ರಕಾಶಮಾನರಾದ ಅವರನ್ನು ನೋಡಿ ಸೈನ್ಯವನ್ನು ಹೂಡಿದ ವನಚಾರಿಗಳಾದ ಗಂಧರ್ವರು ಅಲ್ಲಿಯೇ ನಿಂತರು.

ರಾಜ್ಞಸ್ತು ವಚನಂ ಸ್ಮೃತ್ವಾ ಧರ್ಮಪುತ್ರಸ್ಯ ಧೀಮತಃ ।
ಕ್ರಮೇಣ ಮೃದುನಾ ಯುದ್ಧಮುಪಕ್ರಾಂತಂ ಚ ಭಾರತ ॥೯॥

ಎಲೈ ಭಾರತನೇ, ರಾಜನಾದ ಮೇಧಾವಿಯಾದ ಧರ್ಮಪುತ್ರನ ಮಾತನ್ನು ಸ್ಮರಿಸಿ ಪಾಂಡವರು ಕ್ರಮವಾಗಿ ಮೃದುವಾಗಿಯೇ ಯುದ್ಧವನ್ನು ಪ್ರಾರಂಭಿಸಿದರು.

ನ ತು ಗಂಧರ್ವರಾಜಸ್ಯ ಸೈನಿಕಾ ಮಂದಚೇತಸಃ ।
ಶಕ್ಯಂತೇ ಮೃದುನಾ ಶ್ರೇಯಃ ಪ್ರತಿಪಾದಯಿತುಂ ತದಾ ॥೧೦॥

ಆದರೆ ಮಂದಚೇತನರಾದ ಗಂಧರ್ವರಾಜನ ಸೈನಿಕರು ಮೃದುವಾದ ಯುದ್ಧದಿಂದ ಶ್ರೇಯೋಮಾರ್ಗವನ್ನು ಹಿಡಿಯಲು ಸಾಧ್ಯವಾಗಲಿಲ್ಲ.

ತತಸ್ತಾನ್ ಯುಧಿ ದುರ್ಧರ್ಷಾನ್ ಸವ್ಯಸಾಚೀ ಪರಂತಪಃ ।
ಸಾಂತ್ವಪೂರ್ವಮಿದಂ ವಾಕ್ಯಮುವಾಚ ಖಚರಾನ್ ರಣೇ ॥೧೧॥

ವಿಸರ್ಜಯತ ರಾಜಾನಂ ಭ್ರಾತರಂ ಮೇ ಸುಯೋಧನಮ್ ।

ಆಗ ಯುದ್ಧದಲ್ಲಿ ದುರ್ಧರ್ಷರಾದ ಆಕಾಶಚಾರಿಗಳಾದ ಆ ಗಂಧರ್ವರನ್ನು ಕುರಿತು ಯುದ್ಧಭೂಮಿಯಲ್ಲಿ ಪರಂತಪನಾದ ಅರ್ಜುನನು ಮೃದುವಾದ ಮಾತಿನಿಂದಲೇ ನಮ್ಮ ಸಹೋದರನಾದ ಸುಯೋಧನನನ್ನು ಮೋಚನೆಗೊಳಿಸಿ ಎಂದು ಹೇಳಿದನು.

ನೈತದ್ ಗಂಧರ್ವರಾಜಸ್ಯ ಯುಕ್ತಂ ಕರ್ಮ ಜುಗುಪ್ಸಿತಮ್ ।
ಪರದಾರಾಭಿಮರ್ಶಶ್ಚ ಮಾನುಷೈಶ್ಚ ಸಮಾಗಮಃ ॥೧೨॥

ಗಂಧರ್ವರಾಜನ ಈ ಕರ್ಮವು ಯೋಗ್ಯವಾದುದಲ್ಲ. ಪರಪತ್ನಿಯರ ಮೇಲೆ ಕೈಮಾಡುವುದು ಮತ್ತು ಮನುಷ್ಯರ ಜೊತೆಯಲ್ಲಿ ಸಮಾಗಮವನ್ನು ಹೊಂದುವುದು ಎರಡೂ ಗಂಧರ್ವರಿಗೆ ಜುಗುಪ್ಸಿತವಾದುದು.

ಉತ್ಸೃಜಧ್ವಂ ಮಹಾವೀರ್ಯಾನ್ ಧೃತರಾಷ್ಟ್ರಸುತಾನಿಮಾನ್ ।
ದಾರಾಂಶ್ಚೈಷಾಂ ವಿಮುಂಚಧ್ವಂ ಧರ್ಮರಾಜಸ್ಯ ಶಾಸನಾತ್ ॥೧೩॥

ಧರ್ಮರಾಜನ ಶಾಸನದಂತೆ ಮಹಾಪರಾಕ್ರಮಶಾಲಿಗಳಾದ ಈ ಧೃತರಾಷ್ಟ್ರ ಪುತ್ರರನ್ನು ವಿಮೋಚನೆಗೊಳಿಸಿ. ಅವರ ಪತ್ನಿಯರನ್ನೂ ವಿಮೋಚನೆಗೊಳಿಸಿ.

ವೈಶಂಪಾಯನಃ

ತ ಏವಮುಕ್ತಾ ಗಂಧರ್ವಾಃ ಪಾಂಡವೇನ ಯಶಸ್ವಿನಾ ।
ಉತ್ಸ್ಮಯಂತಸ್ತದಾ ಪಾರ್ಥಮಿದಂ ವಚನಮಬ್ರುವನ್ ॥೧೪॥

ವೈಶಂಪಾಯನ– ಹೀಗೆ ಕೀರ್ತಿಶಾಲಿಯಾದ ಪಾಂಡವನಿಂದ ಹೇಳಲ್ಪಟ್ಟ ಗಂಧರ್ವರು ನಗುತ್ತಾ ಅರ್ಜುನನನ್ನು ಕುರಿತು ಹೀಗೆ ಮಾತನಾಡಿದರು.

ಏಕಸ್ಯೈವ ವಯಂ ತಾತ ಕುರ್ಯಾಮ ವಚನಂ ಭುವಿ ।
ಯಸ್ಯ ಶಾಸನಮಾಜ್ಞಾಯ ಚರಾಮೋ ವಿಗತಜ್ವರಾಃ ॥೧೫॥

ಪ್ರೀತಿಪಾತ್ರನೇ, ನಾವು ಒಬ್ಬನ ಶಾಸನವನ್ನು ಮಾತ್ರ ಕಾರ್ಯಗತಮಾಡುತ್ತೇವೆ. ಅವನ ಶಾಸನವನ್ನು ಸ್ವೀಕರಿಸಿ ನಿರ್ಭಯರಾಗಿ ಭೂಮಿಯಲ್ಲಿ ಸಂಚರಿಸುತ್ತೇವೆ.

ತೇನೈಕೇನ ಯಥಾऽऽದಿಷ್ಟಂ ತಥಾ ವರ್ತಾಮ ಭಾರತ ।
ನ ಶಾಸ್ತಾ ವಿದ್ಯತೇऽಸ್ಮಾಕಮನ್ಯಸ್ತಸ್ಮಾತ್ ಸುರೇಶ್ವರಾತ್ ॥೧೬॥

ಎಲೈ ಭಾರತನೇ, ಆ ಒಬ್ಬನು ಆದೇಶ ಮಾಡಿದಂತೆ ನಾವು ನಡೆದುಕೊಳ್ಳುತ್ತೇವೆ. ನಮಗೆ ಆ ಸುರೇಶ್ವರನಾದ ಇಂದ್ರನನ್ನು ಬಿಟ್ಟು ಇನ್ನೊಬ್ಬ ಶಾಸಕನು ಇರುವುದಿಲ್ಲ.

ಏವಮುಕ್ತಃ ಸ ಗಂಧರ್ವೈಃ ಕುಂತೀಪುತ್ರೋ ಧನಂಜಯಃ ।
ಗಂಧರ್ವಾನ್ ಪುನರೇವೇದಂ ವಚನಂ ಪ್ರತ್ಯಭಾಷತ ॥೧೭॥

ವೈಶಂಪಾಯನ– ಹೀಗೆ ಗಂಧರ್ವರಿಂದ ಹೇಳಲ್ಪಟ್ಟ ಕುಂತೀಪುತ್ರನಾದ ಧನಂಜಯನು ಗಂಧರ್ವರನ್ನು ಕುರಿತು ಪುನಃ ಹೀಗೆ ಮಾತನಾಡಿದನು.

ನ ತದ್‌ಗಂಧರ್ವರಾಜಸ್ಯ ಯುಕ್ತಂ ಕರ್ಮ ಜುಗುಪ್ಸಿತಮ್ ।
ಪರದಾರಾಭಿಮಾರ್ಶಶ್ಚ ಮಾನುಷೈಶ್ಚ ಸಮಾಗಮಃ ।
ಉತ್ಸೃಜಧ್ವಂ ಮಹಾವೀರ್ಯಾನ್ ಧೃತರಾಷ್ಟ್ರಸುತಾನಿಮಾನ್ ।
ದಾರಾಂಶ್ಚೈಷಾಂ ವಿಮುಂಚಧ್ವಂ ಧರ್ಮರಾಜಸ್ಯ ಶಾಸನಾತ್ ।

ಪರದಾರಾಭಿಮರ್ಶನ ಮತ್ತು ಮಾನುಷ ಸಮಾಗಮರೂಪವಾದ ಈ ಕರ್ಮವು ಗಂಧರ್ವರಾಜನಿಗೆ ಯೋಗ್ಯವಾದುದಲ್ಲ ಮತ್ತು ಜುಗುಪ್ಸಿತವಾದುದು. ಧರ್ಮರಾಜನ ಶಾಸನದಂತೆ ಮಹಾಪರಾಕ್ರಮಶಾಲಿಗಳಾದ ಈ ಧೃತರಾಷ್ಟ್ರಪುತ್ರರನ್ನೂ ಮತ್ತು ಅವರ ಪತ್ನಿಯರನ್ನೂ ವಿಮೋಚನೆಗೊಳಿಸಿ.

ಯದಾ ಸಾಮ್ನಾ ನ ಮುಂಚಧ್ವಂ ಗಂಧರ್ವಾ ಧೃತರಾಷ್ಟ್ರಜಾನ್ ।
ಮೋಕ್ಷಯಿಷ್ಯಾಮಿ ವಿಕ್ರಮ್ಯ ಸ್ವಯಮೇವ ಸುಯೋಧನಮ್ ॥೧೮॥

ಎಲೈ ಗಂಧರ್ವರೇ, ನೀವು ಸಾಮಮಾರ್ಗದಿಂದ ಧೃತರಾಷ್ಟ್ರ ಪುತ್ರರನ್ನು ಮೋಚನೆಗೊಳಿಸದಿದ್ದರೆ ನಾನು ಸ್ವತಃ ನನ್ನ ವಿಕ್ರಮವನ್ನು ತೋರಿಸಿ ಸುಯೋಧನನನ್ನು ಮೋಚನೆಗೊಳಿಸುವೆನು.

ವೈಶಂಪಾಯನಃ

ಏವಮುಕ್ತ್ವಾ ತತಃ ಪಾರ್ಥಃ ಸವ್ಯಸಾಚೀ ಧನಂಜಯಃ ।
ಸಸರ್ಜ ನಿಶಿತಾನ್ ಬಾಣಾನ್ ಖಚರಾನ್ ಖಚರಾನ್ ಪ್ರತಿ ॥೧೯॥

ವೈಶಂಪಾಯನ– ಸವ್ಯಸಾಚಿಯಾದ ಕುಂತೀಪುತ್ರನಾದ ಧನಂಜಯನು ಹೀಗೆ ಮಾತನಾಡಿ ಆಕಾಶಗಾಮಿಗಳಾದ ಆ ಗಂಧರ್ವರ ಮೇಲೆ ಆಕಾಶಗಾಮಿಗಳಾದ ಬಾಣಗಳನ್ನು ಪ್ರಯೋಗಿಸಿದನು.

ತಥೈವ ಶರವರ್ಷೇಣ ಗಂಧರ್ವಾಸ್ತೇ ಬಲೋತ್ಕಟಾಃ ।
ಪಾಂಡವಾನಭ್ಯವರ್ತಂತ ಪಾಂಡವಾಶ್ಚ ದಿವೌಕಸಃ ॥೨೦॥

ಹಾಗೆಯೇ ಬಲೋತ್ಕಟರಾದ ಗಂಧರ್ವರು ಪಾಂಡವರ ಮೇಲೆ ಬಾಣಗಳ ಮಳೆಯನ್ನು ಕರೆದರು. ಪಾಂಡವರೂ ಆ ಸ್ವರ್ಗನಿವಾಸಿಗಳ ಮೇಲೆ ಬಾಣಗಳ ಮಳೆಯನ್ನು ಕರೆದರು.

ತತಃ ಸುತುಮುಲಂ ಯುದ್ಧಂ ಗಂಧರ್ವಾಣಾಂ ತರಸ್ವಿನಾಮ್ ।
ಬಭೂವ ಭೀಮವೇಗಾನಾಂ ಪಾಂಡವಾನಾಂ ಚ ಭಾರತ ॥೨೧॥

ಎಲೈ ಭಾರತನೇ, ಅನಂತರ ವೇಗಶಾಲಿಗಳಾದ ಗಂಧರ್ವರಿಗೂ ಮತ್ತು ಭಯಂಕರವೇಗವುಳ್ಳ ಪಾಂಡವರಿಗೂ ತೀವ್ರವಾದ ಯುದ್ಧವು ಪ್ರಾರಂಭವಾಯಿತು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂಸಂಹಿತಾಯಾಂ ವನಪರ್ವಣಿ
ತ್ರಯಸ್ತ್ರಿಂಶದಧಿಕದ್ವಿಶತತಮೋऽಧ್ಯಾಯಃ ॥
॥ ಇತಿ ಘೋಷಯಾತ್ರಾಪರ್ವಣಿ ಪಾಂಡವಗಂಧರ್ವಯುದ್ಧಂ ನಾಮ
ನವಮೋಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವನಪರ್ವದಲ್ಲಿ ಇನ್ನೂರ ಮೂವತ್ಮೂರನೆಯ ಅಧ್ಯಾಯ ಮುಗಿಯಿತು.

★ ★ ★ ★

ಇನ್ನೂರ ಮೂವತ್ನಾಲ್ಕನೆಯ ಅಧ್ಯಾಯ

ಪಾಂಡವ ಮತ್ತು ಗಂಧರ್ವರ ಘೋರವಾದ ಯುದ್ಧ. ಅದೃಶ್ಯನಾದ ಚಿತ್ರಸೇನನಿಗೆ ಅರ್ಜುನನಿಂದ ಬಾಣಪ್ರಯೋಗ. ಚಿತ್ರಸೇನನ ಪ್ರಾದುರ್ಭಾವ ಮತ್ತು ಸ್ವರೂಪ ಕಥನ. ಯುದ್ಧವಿರಾಮ ಮತ್ತು ಪಾಂಡವರ ಜೊತೆಯಲ್ಲಿ ಚಿತ್ರಸೇನನ ಸಲ್ಲಾಪ.

ವೈಶಂಪಾಯನಃ

ತತೋ ದಿವ್ಯಾಸ್ತ್ರಸಂಪನ್ನಾನ್ ಗಂಧರ್ವಾನ್ ಹೇಮಮಾಲಿನಃ ।
ವಿಸೃಜಂತಃ ಶರಾನ್ ದೀಪ್ತಾನ್ ಸಮಂತಾತ್ ಪರ್ಯವಾರಯನ್ ॥೧॥

ವೈಶಂಪಾಯನ– ಅನಂತರ ಪಾಂಡವರು ದಿವ್ಯಾಸ್ತ್ರಸಂಪನ್ನರಾದ ಹೇಮಮಾಲಿಗಳಾದ ಗಂಧರ್ವರ ಮೇಲೆ ದೀಪ್ತವಾದ ಬಾಣಗಳನ್ನು ಪ್ರಯೋಗಿಸುತ್ತಾ ಎಲ್ಲ ಕಡೆಗಳಿಂದಲೂ ಸುತ್ತುವರಿದರು.

ಚತ್ವಾರಃ ಪಾಂಡವಾ ವೀರಾ ಗಂಧರ್ವಾಶ್ಚ ಸಹಸ್ರಶಃ ।
ರಣೇ ಸನ್ನ್ಯಪತನ್ ರಾಜಂಸ್ತದದ್ಭುತಮಿವಾಭವತ್ ॥೨॥

ನಾಲ್ಕುಜನ ಪಾಂಡವ ವೀರರು ಮತ್ತು ಸಹಸ್ರಾರು ಗಂಧರ್ವರು ಯುದ್ಧದಲ್ಲಿ ಪರಸ್ಪರವಾಗಿ ಎದುರಿಸಿದರು. ರಾಜನೇ, ಅದು ಅದ್ಭುತವಾಗಿದ್ದಿತು.

ಯಥಾ ಕರ್ಣಸ್ಯ ಚ ರಥೋ ಧಾರ್ತರಾಷ್ಟ್ರಸ್ಯ ಚೋಭಯೋಃ ।
ಗಂಧರ್ವೈಃ ಶತಶಶ್ಚಿನ್ನೋ ತಥಾ ತೇಷಾಂ ಪ್ರಚಕ್ರಿರೇ ॥೩॥

ಹೇಗೆ ಕರ್ಣನ ರಥವನ್ನು, ದುರ್ಯೋಧನನ ರಥವನ್ನು ಗಂಧರ್ವರು ನೂರಾರು ಚೂರುಗಳಾಗಿ ವಿಭಜಿಸಿದ್ದರೋ ಅದರಂತೆ ಗಂಧರ್ವರ ರಥಗಳಿಗೂ ಪಾಂಡವರು ಹಾಗೆಯೇ ಮಾಡಿದರು.

ತಾನ್ ಸಮಾಪತತೋ ರಾಜನ್ ಗಂಧರ್ವಾಂಛತಶೋ ರಣೇ ।
ಪ್ರತ್ಯಗೃಹ್ಣನ್ ನರವ್ಯಾಘ್ರಾಃ ಶರವರ್ಷೈರನೇಕಶಃ ॥೪॥

ಎಲೈ ರಾಜನೇ, ಯುದ್ಧದಲ್ಲಿ ನೂರಾರು ಸಂಖ್ಯೆಯಲ್ಲಿ ಮೇಲೆರಗುತ್ತಿದ್ದ ಗಂಧರ್ವರನ್ನು ನರವ್ಯಾಘ್ರರಾದ ಪಾಂಡವರು ಅನೇಕ ಶರವರ್ಷಗಳಿಂದ ಎದುರಿಸಿದರು.

ತೇ ಕೀರ್ಯಮಾಣಾಃ ಖಗಮಾಃ ಶರವರ್ಷೈಃ ಸಮಂತತಃ ।
ನ ಶೇಕುಃ ಪಾಂಡುಪುತ್ರಾಣಾಂ ಸಮೀಪೇ ಪರಿವರ್ತಿತುಮ್ ॥೫॥

ಪಾಂಡವರಿಂದ ಉಂಟಾದ ಶರವರ್ಷದಿಂದ ಗಂಧರ್ವರಿಂದ ಪ್ರಯೋಗಿಸಲ್ಪಟ್ಟ ಬಾಣಗಳು ಆಕಾಶದಲ್ಲಿ ಚದುರಿ ಹೋಗಿ ಪಾಂಡುಪುತ್ರರ ಸಮೀಪಕ್ಕೂ ಬರಲಿಲ್ಲ.

ಅಭಿಕ್ರುದ್ಧಾನಭಿಪ್ರಾಯಾದ್ ಗಂಧರ್ವಾನರ್ಜುನಸ್ತದಾ ।
ಲಕ್ಷಯಿತ್ವಾಽಥ ದಿವ್ಯಾನಿ ಮಹಾಸ್ತ್ರಾಣ್ಯುಪಚಕ್ರಮೇ ॥೬॥

ಆಗ ಅರ್ಜುನನು ಮಹಾಕ್ರೋಧಕ್ಕೆ ಒಳಗಾದ ಗಂಧರ್ವರನ್ನು ಗಮನಿಸಿ ಅವರ ಕಡೆಗೆ ಹೋಗುತ್ತಾ, ಅವರ ಮೇಲೆ ದಿವ್ಯವಾದ ಮಹಾಸ್ತ್ರಗಳನ್ನು ಪ್ರಯೋಗಿಸಲು ಪ್ರಾರಂಭಿಸಿದನು.

ಸಹಸ್ರಾಣಾಂ ಸಹಸ್ರಾಣಿ ಪ್ರಾಹಿಣೋದ್ ಯಮಸಾದನಮ್ ।
ಆಗ್ನೇಯೇನಾರ್ಜುನಃ ಸಂಖೇ ಗಂಧರ್ವಾಣಾಂ ಬಲೋತ್ಕಟಃ ॥೭॥

ಬಲೋತ್ಕಟನಾದ ಅರ್ಜುನನು ಆಗ್ನೇಯಾಸ್ತ್ರದಿಂದ ಹತ್ತುಲಕ್ಷ ಗಂಧರ್ವರನ್ನು ಯಮಪಟ್ಟಣಕ್ಕೆ ಕಳುಹಿಸಿದನು.

ತಥಾ ಭೀಮೋ ಮಹಾಬಾಹುಃ ಸಂಯುಗೇ ಬಲಿನಾಂ ವರಃ ।
ಗಂಧರ್ವಾಂಛತಶೋ ರಾಜನ್ ಜಘಾನ ನಿಶಿತೈಃ ಶರೈಃ ॥೮॥

ಎಲೈ ರಾಜನೇ, ಅದರಂತೆ ಬಲಿಷ್ಠರಲ್ಲಿ ಶ್ರೇಷ್ಠನಾದ ಮಹಾಬಾಹುವಾದ ಭೀಮಸೇನನು ಯುದ್ಧದಲ್ಲಿ ಗಂಧರ್ವರನ್ನು ನಿಶಿತವಾದ ನೂರಾರು ಬಾಣಗಳಿಂದ ಸಂಹರಿಸಿದನು.

ಮಾದ್ರೀಪುತ್ರಾವಪಿ ತದಾ ಯುಧ್ಯಮಾನೌ ಬಲೋತ್ಕಟೌ ।
ಪರಿಗೃಹ್ಯಾಗ್ರತೋ ರಾಜನ್ ನಿಘ್ನತುಃ ಶತಶಃ ಪರಾನ್ ॥೯॥

ಎಲೈ ರಾಜನೇ, ಆಗ ಬಲೋತ್ಕಟರಾದ ಮಾದ್ರಿಪುತ್ರರಾದ ನಕುಲಸಹದೇವರೂ ಸಹ ಮುಂದೆ ಸಾಗಿ ಯುದ್ಧವನ್ನು ಮಾಡುತ್ತಾ ನೂರಾರು ಗಂಧರ್ವರನ್ನು ಹಿಡಿದು ಸಂಹರಿಸಿದರು.

ತೇ ವಧ್ಯಮಾನಾ ಗಂಧರ್ವಾ ದಿವ್ಯೈರಸ್ತ್ರೈರ್ಮಹಾರಥೈಃ ।
ಉತ್ಪೇತುಃ ಖಮುಪಾದಾಯ ಧೃತರಾಷ್ಟ್ರಸುತಾಂಸ್ತತಃ ॥೧೦॥

ಮಹಾರಥರ ದಿವ್ಯಾಸ್ತ್ರಗಳಿಂದ ಪೀಡಿತರಾದ ಗಂಧರ್ವರು ಆಗ ಧೃತರಾಷ್ಟ್ರನ ಮಕ್ಕಳನ್ನು ಎತ್ತಿಕೊಂಡು ಆಕಾಶಕ್ಕೆ ಹಾರಿದರು.

ಸ ತಾನುತ್ಪತಿತಾನ್ ದೃಷ್ಟ್ವಾ ಕುಂತೀಪುತ್ರೋ ಧನಂಜಯಃ ।
ಮಹತಾ ಶರಜಾಲೇನ ಸಮಂತಾತ್ ಪರ್ಯವಾರಯತ್ ॥೧೧॥

ಅವರು ಮೇಲಕ್ಕೆ ಹೋಗುವುದನ್ನು ನೋಡಿದ ಕುಂತೀಪುತ್ರನಾದ ಧನಂಜಯನು ಬಾಣಗಳ ದೊಡ್ಡ ಬಲೆಯನ್ನು ಎಲ್ಲ ಕಡೆಯಲ್ಲಿಯೂ ನಿರ್ಮಾಣ ಮಾಡಿ ಅವರು ಮೇಲೆ ಹೋಗದಂತೆ ತಡೆದನು.

ತೇ ಬದ್ಧಾಃ ಶರಜಾಲೇನ ಶಕುಂತಾ ಇವ ಪಂಜರೇ ।
ವವರ್ಷುರರ್ಜುನಂ ಕ್ರೋಧಾದ್ ಗದಾಶಕ್ತ್ಯಸಿವೃಷ್ಟಯಃ ॥೧೨॥

ಪಂಜರದಲ್ಲಿ ಇಟ್ಟ ಪಕ್ಷಿಗಳಂತೆ ಶರಪಂಜರದಲ್ಲಿ ಬದ್ಧರಾದ ಆ ಗಂಧರ್ವರು ಕ್ರೋಧದಿಂದ ಅರ್ಜುನನ ಮೇಲೆ ಗದೆ, ಶಕ್ತಿ, ಖಡ್ಗ ಮೊದಲಾದ ಶಸ್ತ್ರಗಳ ವೃಷ್ಟಿಯನ್ನು ಕರೆದರು.

ಗದಾಶಕ್ತ್ಯೃಸಿಷ್ಟೀಸ್ತಾ ನಿಹತ್ಯ ಪರಮಾಸ್ತ್ರವಿತ್ ।
ಗಾತ್ರಾಣಿ ಚಾಹನದ್ ಭಲ್ಲೈರ್ಗಂಧರ್ವಾಣಾಂ ಧನಂಜಯಃ ॥೧೩॥

ಪರಮಾಸ್ತ್ರಜ್ಞಾನವನ್ನು ಹೊಂದಿದ ಧನಂಜಯನು ಗಂಧರ್ವರು ಪ್ರಯೋಗಿಸಿದ ಗದಾ, ಶಕ್ತಿ, ಖಡ್ಗ ಮೊದಲಾದವುಗಳ ಮಳೆಯನ್ನು ನಿವಾರಿಸಿ ಗಂಧರ್ವರ ಶರೀರದ ಮೇಲೆ ಭಲ್ಲಗಳನ್ನು ಪ್ರಯೋಗಿಸಿದನು.

ಶಿರೋಭಿಃ ಪ್ರಪತದ್ಭಿಶ್ಚ ಚರಣೈರ್ಬಾಹುಭಿಸ್ತಥಾ ।
ಅಶ್ಮವೃಷ್ಟಿರಿವಾಭಾತಿ ಪರೇಷಾಮಭವದ್ ಭಯಮ್ ॥೧೪॥

ಕತ್ತರಿಸಿ ಬೀಳುವ ಶಿರಸ್ಸುಗಳಿಂದಲೂ, ಪಾದ ಮತ್ತು ಬಾಹುಗಳಿಂದಲೂ ಆ ರಣರಂಗದಲ್ಲಿ ಶಿಲಾವೃಷ್ಟಿಯಾಗುವಂತೆ ತೋರಿತು. ಅದರಿಂದ ಶತ್ರುಗಳಿಗೆ ಭಯ ಉಂಟಾಯಿತು.

ತೇ ವಧ್ಯಮಾನಾ ಗಂಧರ್ವಾಃ ಪಾಂಡವೇನ ಮಹಾತ್ಮನಾ ।
ಭೂಮಿಷ್ಠಮಂತರಿಕ್ಷಸ್ಥಾಃ ಶರವರ್ಷೈರವಾಕಿರನ್ ॥೧೫॥

ಮಹಾತ್ಮನಾದ ಪಾಂಡವನಿಂದ ಪೀಡಿತರಾದ ಗಂಧರ್ವರು ಅಂತರಿಕ್ಷದಲ್ಲಿನಿಂತು ಭೂಮಿಯ ಮೇಲಿದ್ದ ಅರ್ಜುನನ ಮೇಲೆ ಬಾಣಗಳ ಮಳೆಯನ್ನು ಕರೆದರು.

ತೇಷಾಂ ತು ಶರವರ್ಷಾಣಿ ಸವ್ಯಸಾಚೀ ಪರಂತಪಃ ।
ಅಸ್ತ್ರೈಃ ಸಂವಾರ್ಯ ತೇಜಸ್ವೀ ಗಂಧರ್ವಾನ್ ಪ್ರತ್ಯಯುಧ್ಯತ ॥೧೬॥

ಪರಂತಪನೂ, ತೇಜಸ್ವಿಯೂ ಆದ ಅರ್ಜುನನು ಅವರು ಪ್ರಯೋಗಿಸಿದ ಶರವರ್ಷಗಳನ್ನು ತಡೆದು ಆ ಗಂಧರ್ವರ ಜೊತೆಯಲ್ಲಿ ಯುದ್ಧವನ್ನು ಮಾಡಿದನು.

ಸ್ಥೂಣಾಕರ್ಣೇಂದ್ರಜಾಲಂ ಚ ಸೌರಂ ಚಾಪಿ ತಥಾಽರ್ಜುನಃ ।
ಆಗ್ನೇಯಂ ಚಾಪಿ ಸೌಮ್ಯಂ ಚ ಸಸರ್ಜ ಕುರುನಂದನಃ ॥೧೭॥

ಕುರುನಂದನನಾದ ಅರ್ಜುನನು ಸ್ಥೂಣಾಕರ್ಣಾಸ್ತ್ರ, ಇಂದ್ರಾಸ್ತ್ರ, ಸೂರ್ಯಾಸ್ತ್ರ ಮತ್ತು ಚಂದ್ರಾಸ್ತ್ರ ಆಗ್ನೇಯಾಸ್ತ್ರಗಳನ್ನು ಪ್ರಯೋಗಿಸಿದನು.

ತೇ ದಹ್ಯಮಾನಾ ಗಂಧರ್ವಾಃ ಕುಂತೀಪುತ್ರಸ್ಯ ಸಾಯಕೈಃ ।
ದೈತೇಯಾ ಇವ ಶಕ್ರೇಣ ವಿಷಾದಮಗಮನ್ ಪರಮ್ ॥೧೮॥

ಕುಂತೀಪುತ್ರನಾದ ಅರ್ಜುನನು ಪ್ರಯೋಗಿಸಿದ ಅಸ್ತ್ರಗಳಿಂದ ದಹಿಸಲ್ಪಡುತ್ತಿದ್ದ ಆ ಗಂಧರ್ವರು ಇಂದ್ರನಿಂದ ಪೀಡಿತರಾದ ದೈತ್ಯರಂತೆ ವಿಷಾದವನ್ನು ಹೊಂದಿದರು.

ಊರ್ಧ್ವಮಾಕ್ರಮಮಾಣಾಶ್ಚ ಶರಜಾಲೇನ ವಾರಿತಾಃ ।
ವಿಸರ್ಪಮಾಣಾ ಭಲ್ಲೈಶ್ಚ ವಾರ್ಯಂತೇ ಸವ್ಯಸಾಚಿನಾ ॥೧೯॥

ಮೇಲೆ ಹೋಗಲು ಪ್ರಯತ್ನಪಡುವ ಗಂಧರ್ವರು ಅರ್ಜುನನ ಬಾಣ ಪಂಜರದಿಂದ ತಡೆಯಲ್ಪಡುತ್ತಿದ್ದರು. ಪಕ್ಕದಲ್ಲಿ ಹೋಗುವ ಗಂಧರ್ವರನ್ನು ಅರ್ಜುನನು ಭಲ್ಲಗಳಿಂದ ತಡೆಯುತ್ತಿದ್ದನು.

ಗಂಧರ್ವಾಂಸ್ತಾಸಿತಾನ್ ದೃಷ್ಟ್ವಾ ಕುಂತೀಪುತ್ರೇಣ ಭಾರತ ।
ಚಿತ್ರಸೇನೋ ಗದಾಂ ಗೃಹ್ಯ ಸವ್ಯಸಾಚಿನಮಾದ್ರವತ್ ॥೨೦॥

ಎಲೈ ಭಾರತನೇ, ಗಂಧರ್ವರು ಕುಂತೀಪುತ್ರನಿಂದ ಪೀಡಿತರಾದುದನ್ನು ನೋಡಿ ಗಂಧರ್ವರಾಜನಾದ ಚಿತ್ರಸೇನನು ಗದೆಯನ್ನು ಹಿಡಿದು ಅರ್ಜುನನ ಬಳಿಗೆ ಓಡಿದನು.

ತಸ್ಯಾಭಿಪತತಸ್ತೂರ್ಣಂ ಗದಾಹಸ್ತಸ್ಯ ಸಂಯುಗೇ ।
ಗದಾಂ ಸರ್ವಾಯಸೀಂ ಪಾರ್ಥಃ ಶರೈಶ್ಚಿಚ್ಛೇದ ಸಪ್ತಧಾ ॥೨೧॥

ಅವನು ಯುದ್ಧಭೂಮಿಯಲ್ಲಿ ಗದೆಯನ್ನು ಕೈಯಲ್ಲಿ ಹಿಡಿದು ತನ್ನ ಕಡೆಗೆ ವೇಗದಿಂದ ಬರುತ್ತಿರುವುದನ್ನು ಗಮನಿಸಿದ ಅರ್ಜುನನು ಸರ್ವಾಯೋಮಯವಾದ ಆ ಗದೆಯನ್ನು (ಪೂರ್ಣವಾಗಿ ಕಬ್ಬಿಣದಿಂದ ಮಾಡಿದ ಆ ಗದೆಯನ್ನು) ಬಾಣಗಳಿಂದ ಏಳುಭಾಗವಾಗಿ ಕತ್ತರಿಸಿದನು.

ಸ ಗದಾಂ ಬಹುಧಾ ದೃಷ್ಟ್ವಾ ಕೃತ್ತಾಂ ಬಾಣೈಸ್ತರಸ್ವಿನಾ ।
ಸಂವೃತ್ಯ ವಿದ್ಯಯಾऽऽತ್ಮಾನಂ ಯೋಧಯಾಮಾಸ ಪಾಂಡವಮ್ ॥೨೨॥

ಚಿತ್ರಸೇನನು ತನ್ನ ಗದೆಯು ವೇಗಶಾಲಿಯಾದ ಪಾಂಡವನಿಂದ ಅನೇಕ ಭಾಗವಾಗಿ ಕತ್ತರಿಸಲ್ಪಟ್ಟಿದ್ದನ್ನು ನೋಡಿ ತನ್ನ ವಿದ್ಯೆಯಿಂದ ತನ್ನನ್ನು ರಕ್ಷಿಸಿಕೊಂಡು ಪಾಂಡವನಾದ ಅರ್ಜುನನ ಜೊತೆಯಲ್ಲಿ ಯುದ್ಧವನ್ನು ಮಾಡಿದನು.

ಅಸ್ತ್ರಾಣಿ ತಸ್ಯ ದಿವ್ಯಾನಿ ಸಂಪ್ರಯುಕ್ತಾನಿ ಸರ್ವಶಃ ।
ದಿವ್ಯೈರಸ್ತ್ರೈಸ್ತದಾ ವೀರಃ ಪರ್ಯವಾರಯದರ್ಜುನಃ ।
ಸ ವಾರ್ಯಮಾಣಸ್ತೈರಸ್ತ್ರೈರರ್ಜುನೇನ ಮಹಾತ್ಮನಾ ।
ಗಂಧರ್ವರಾಜೋ ಬಲವಾನ್ ಮಾಯಯಾಽಂತರ್ಹಿತಸ್ತದಾ ॥೨೩॥

ಅವನು ಪ್ರಯೋಗಿಸಿದ ಎಲ್ಲಾ ದಿವ್ಯಾಸ್ತ್ರಗಳನ್ನೂ ವೀರನಾದ ಅರ್ಜುನನು ತನ್ನ ದಿವ್ಯಾಸ್ತ್ರಗಳಿಂದ ತಡೆದನು. ತನ್ನ ಅಸ್ತ್ರಗಳು ಮಹಾತ್ಮನಾದ ಅರ್ಜುನನಿಂದ ನಿವಾರಿಸಲ್ಪಟ್ಟಿದ್ದನ್ನು ನೋಡಿ ಬಲಿಷ್ಠನಾದ ಗಂಧರ್ವರಾಜನು ಆಗ ತನ್ನ ಮಾಯಾ ಶಕ್ತಿಯಿಂದ ಅಂತರ್ಧಾನವನ್ನು ಹೊಂದಿದನು.

ಅಂತರ್ಹಿತಂ ಸ(ತ)ಮಾಲಕ್ಷ್ಯ ಪ್ರಹರಂತಮಥಾರ್ಜುನಃ ।
ತಾಡಯಾಮಾಸ ಖಚರೈರ್ದಿವ್ಯಾಸ್ತ್ರಪ್ರತಿಮಂತ್ರಿತೈಃ ॥೨೪॥

ಅಂತರ್ಧಾನವನ್ನು ಹೊಂದಿದ ಚಿತ್ರಸೇನನನ್ನು ಗಮನಿಸಿ ಆಗ ಅರ್ಜುನನು ದಿವ್ಯಾಸ್ತ್ರಗಳಿಂದ ಮಂತ್ರಿತವಾದ ಆಕಾಶಗಾಮಿಯಾದ ಬಾಣಗಳಿಂದ ಪ್ರಹಾರವನ್ನು ಮಾಡಿದನು.

ಅಂತರ್ಧಾನವಧಂ ಚಾಸ್ಯ ಚಕ್ರೇ ಕ್ರುದ್ಧೋಽರ್ಜುನಸ್ತದಾ ।
ಶಬ್ದವೇಧ್ಯಂ ಸಮಾಶ್ರಿತ್ಯ ಬಹುರೂಪೋ ಧನಂಜಯಃ ॥೨೫॥

ಕ್ರೋಧಗೊಂಡ ಅರ್ಜುನನು ಆಗ ಶಬ್ದವೇಧೀ ವಿದ್ಯೆಯನ್ನು ಆಶ್ರಯಿಸಿ ಅನೇಕ ರೂಪವನ್ನು ತೆಗೆದುಕೊಂಡು ಚಿತ್ರಸೇನನ ಅಂತರ್ಧಾನವನ್ನು ನಾಶಮಾಡಿದನು.

ಅವಧ್ಯಮಾನಾಸ್ತೈರಸ್ತ್ರೈರರ್ಜುನೇನ ಮಹಾತ್ಮನಾ ।
ತತೋಽಸ್ಯಾ ದರ್ಶಯಾಮಾಸ ತದಾಽಽತ್ಮಾನಂ ಪ್ರಿಯಃ ಸಖಾ ॥೨೬॥

ಮಹಾತ್ಮನಾದ ಅರ್ಜುನನ ಅಸ್ತ್ರಗಳಿಂದ ಅವಧ್ಯನಾಗಿ ಅರ್ಜುನನಿಗೆ ಪ್ರಿಯಸಖನಾಗಿದ್ದ ಚಿತ್ರಸೇನನು ಆಗ ತನ್ನನ್ನು ತಾನು ಅರ್ಜುನನಿಗೆ ತೋರಿಸಿಕೊಂಡನು.

ಚಿತ್ರಸೇನಸ್ತದೋವಾಚ ಸಖಾಯಂ ಯುಧಿ ವಿದ್ಧಿ ಮಾಮ್ ।
ಚಿತ್ರಸೇನಂ ಸಮಾ(ಮಥಾ)ಲಕ್ಷ್ಯ ಸಖಾಯಂ ಯುಧಿ ವಿಹ್ವಲಮ್ ।
ಸಂಜಹಾರಾಸ್ತ್ರಮಥ ತತ್ ಪ್ರಸೃಷ್ಟಂ ಪಾಂಡವರ್ಷಭಃ ॥೨೭॥

ಚಿತ್ರಸೇನನು ಅರ್ಜುನನನ್ನು ಕುರಿತು ಆ ಯುದ್ಧಭೂಮಿಯಲ್ಲಿ ನನ್ನನ್ನು ನಿನ್ನ ಸ್ನೇಹಿತನಾದ ಚಿತ್ರಸೇನನೆಂದು ತಿಳಿ ಎಂದು ಹೇಳಿದನು. ತನ್ನ ಸ್ನೇಹಿತನಾದ ಚಿತ್ರಸೇನನು ಯುದ್ಧದಲ್ಲಿ ವಿಹ್ವಲನಾಗಿರುವುದನ್ನು ಗಮನಿಸಿ ಪಾಂಡವಶ್ರೇಷ್ಠನಾದ ಅರ್ಜುನನು ತಾನು ಪ್ರಯೋಗಿಸಿದ ಅಸ್ತ್ರವನ್ನು ಉಪಸಂಹಾರ ಮಾಡಿದನು.

ದೃಷ್ಟ್ವಾ ತು ಪಾಂಡವಾಃ ಸರ್ವೇ ಸಂಹೃತಾಸ್ತ್ರಂ ಧನಂಜಯಮ್ ।
ಸಂಜಹ್ರುಃ ಪ್ರದ್ರುತಾನಶ್ವಾನ್ ಶರವೇಗಾನ್ ಧನೂಂಷಿ ಚ ॥೨೮॥

ಧನಂಜಯನು ತನ್ನ ಅಸ್ತ್ರಗಳನ್ನು ಸಂಹಾರಮಾಡಿದುದನ್ನು ನೋಡಿದ ಪಾಂಡವರು ತಮ್ಮ ಧನುಸ್ಸುಗಳನ್ನೂ, ಬಾಣವೇಗವನ್ನೂ, ಓಡುತ್ತಿದ್ದ ಕುದುರೆಗಳನ್ನೂ ಸಂಹಾರ ಮಾಡಿದರು (ನಿಲ್ಲಿಸಿದರು).

ಚಿತ್ರಸೇನಶ್ಚ ಭೀಮಶ್ಚ ಸವ್ಯಸಾಚೀ ಯಮಾವಪಿ ।
ಪೃಷ್ಟ್ವಾ ಕೌಶಲಮನ್ಯೋನ್ಯಂ ರಥೇಷ್ವೇವಾವತಸ್ಥಿರೇ ॥೨೯॥

ಚಿತ್ರಸೇನ, ಭೀಮ, ಅರ್ಜುನ, ನಕುಲಸಹದೇವರು ರಥಗಳಲ್ಲಿಯೇ ಕುಳಿತು ಪರಸ್ಪರ ಯೋಗಕ್ಷೇಮವನ್ನು ವಿಚಾರಿಸಿದರು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂಸಂಹಿತಾಯಾಂ ವನಪರ್ವಣಿ
ಚತುಸ್ತ್ರಿಂಶದಧಿಕದ್ವಿಶತತಮೋऽಧ್ಯಾಯಃ ॥
॥ ಇತಿ ಘೋಷಯಾತ್ರಾಪರ್ವಣಿ ಗಂಧರ್ವಪರಾಭವೋ ನಾಮ ದಶಮೋಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವನಪರ್ವದಲ್ಲಿ ಇನ್ನೂರ ಮೂವತ್ನಾಲ್ಕನೆಯ
ಅಧ್ಯಾಯ ಮುಗಿಯಿತು.

★ ★ ★ ★

ಇನ್ನೂರ ಮೂವತ್ತೈದನೆಯ ಅಧ್ಯಾಯ

ಚಿತ್ರಸೇನನಿಂದ ದುರ್ಯೋಧನನ ಬಂಧನಕ್ಕೆ ಕಾರಣದ ನಿರೂಪಣೆ.
ಯುಧಿಷ್ಠಿರನಿಂದ ದುರ್ಯೋಧನಾದಿಗಳ ಬಂಧವಿಮೋಚನೆ.
ಅಲ್ಲಿಂದ ದುರ್ಯೋಧನನ ಪ್ರಯಾಣ.

ವೈಶಂಪಾಯನಃ

ತತೋಽರ್ಜುನಶ್ಚಿತ್ರಸೇನಂ ಪ್ರಹಸನ್ನಿದಮಬದವೀತ್ ।
ಮಧ್ಯೇ ಗಂಧರ್ವಸೈನ್ಯಾನಾಂ ಮಹೇಷ್ವಾಸೋ ಮಹಾದ್ಯುತಿಃ ॥೧॥

ವೈಶಂಪಾಯನ– ಆಗ ಗಂಧರ್ವ ಸೈನ್ಯಗಳ ಮಧ್ಯೆ ಮಹಾಧನುರ್ಧಾರಿಯೂ ಮತ್ತು ಮಹಾದ್ಯುತಿಯೂ ಆದ ಅರ್ಜುನನು ಚಿತ್ರಸೇನನನ್ನು ಕುರಿತು ಹೀಗೆ ಮಾತನಾಡಿದನು.

ಕಿಂ ತೇ ವ್ಯವಸಿತಂ ವೀರ ಕೌರವಾಣಾಂ ವಿನಿಗ್ರಹೇ ।
ಕಿಮರ್ಥಂ ಚ ಸದಾರೋಽಯಂ ನಿಗೃಹೀತಃ ಸುಯೋಧನಃ ॥೨॥

ಎಲೈ ವೀರನೇ, ಕೌರವರನ್ನು ನಿಗ್ರಹಮಾಡುವುದರಲ್ಲಿ ನಿನ್ನ ಅಭಿಪ್ರಾಯವೇನು? ಪತ್ನೀಸಹಿತನಾದ ಸುಯೋಧನನನ್ನು ನೀನು ಏತಕ್ಕೆ ನಿಗ್ರಹಿಸಿದೆ?

ಚಿತ್ರಸೇನಃ

ವಿದಿತೋಽಯಮಭಿಪ್ರಾಯಸ್ತತ್ರಸ್ಥೇನ ದುರಾತ್ಮನಃ ।
ದುರ್ಯೋಧನಸ್ಯ ಪಾಪಸ್ಯ ಕರ್ಣಸ್ಯ ಚ ಧನಂಜಯ ॥೩॥

ಚಿತ್ರಸೇನ– ಎಲೈ ಧನಂಜಯನೇ, ದುರಾತ್ಮನಾದ ದುರ್ಯೋಧನನ ಮತ್ತು ಪಾಪಶೀಲನಾದ ಕರ್ಣನ ಈ ದುರಭಿಪ್ರಾಯವು ನಮಗೆ ಸ್ವರ್ಗದಲ್ಲಿದ್ದಾಗಲೇ ತಿಳಿಯಿತು.

ವನಸ್ಥಾನ್ ಭವತೋ ಜ್ಞಾತ್ವಾ ಕ್ಲಿಶ್ಯಮಾನಾನನಾಥವತ್ ।
ಇಮೇ ಚ(ಽವ)ಹಸಿತುಂ ಪ್ರಾಪ್ತಾ ದ್ರೌಪದೀಂ ಚ ಯಶಸ್ವಿನೀಮ್ ।
ಜ್ಞಾತ್ವಾ ಚಿಕೀರ್ಷಿತಂ ಚೈಷಾಂ ಮಾಮುವಾಚ ಸುರೇಶ್ವರಃ ॥೪॥

ನೀವು ಯಶಸ್ವಿನಿಯಾದ ದ್ರೌಪದಿಯ ಜೊತೆಯಲ್ಲಿ ಕಾಡಿನಲ್ಲಿ ಕ್ಲೇಶ ಪಡುತ್ತಿರುವುದನ್ನು ನೋಡಿ ನಿಮ್ಮನ್ನೂ ಮತ್ತು ದ್ರೌಪದಿಯನ್ನೂ ಅಪಹಾಸ ಮಾಡುವ ಇವರ ಉದ್ದೇಶವನ್ನು ತಿಳಿದು ಸುರೇಶ್ವರನಾದ ಇಂದ್ರನು ನನ್ನನ್ನು ಕುರಿತು ಹೀಗೆ ಹೇಳಿದನು.

ಗಚ್ಛ ದುರ್ಯೋಧನಂ ಬದ್ಧ್ವಾ ಸಹಾಮಾತ್ಯಮಿಹಾನಯ ।
ಧನಂಜಯಶ್ಚ ತೇ ರಕ್ಷ್ಯಃ ಸಹ ಭ್ರಾತೃಭಿರಾಹವೇ ॥೫॥

ಸ ಚ ಪ್ರಿಯಃ ಸಖಾ ತುಭ್ಯಂ ಶಿಷ್ಯಶ್ಚ ತವ ಪಾಂಡವಃ ॥೬॥

ನೀನು ಹೋಗಿ ಅಮಾತ್ಯರ ಜೊತೆಯಲ್ಲಿ ದುರ್ಯೋಧನನನ್ನು ಬಂಧಿಸಿ ಇಲ್ಲಿಗೆ ಕರೆದುಕೊಂಡು ಬಾ. ಅರ್ಜುನನನ್ನು, ಅವನ ಸಹೋದರರನ್ನು ನೀನು ಯುದ್ಧದಲ್ಲಿ ರಕ್ಷಿಸಬೇಕು. ಆ ಪಾಂಡವನು ನಿನಗೆ ಪ್ರಿಯಸ್ನೇಹಿತನೂ ಮತ್ತು ಶಿಷ್ಯನೂ ಆಗಿದ್ದಾನೆ (ಎಂದು ಹೇಳಿದನು).

ಚಿತ್ರಸೇನಃ

ವಚನಾದ್ ದೇವರಾಜಸ್ಯ ತತೋಽಸ್ಮೀಹಾಗತೋ ದ್ರುತಮ್ ।
ಅಯಂ ದುರಾತ್ಮಾ ಬದ್ಧಶ್ಚ ಗಮಿಷ್ಯಾಮಿ ಸುರಾಲಯಮ್ ॥೭॥

ಚಿತ್ರಸೇನ– ದೇವರಾಜನ ವಚನದಂತೆ ನಾನು ಇಲ್ಲಿಗೆ ಬಂದೆನು. ಈ ದುರಾತ್ಮನಾದ ದುರ್ಯೋಧನನನ್ನು ಬಂಧಿಸಿ ನಾನು ಸ್ವರ್ಗಲೋಕಕ್ಕೆ ಹೋಗುವೆನು.

ಅರ್ಜುನಃ

ಉತ್ಸೃಜ್ಯತಾಂ ಚಿತ್ರಸೇನ ಭ್ರಾತಾಽಸ್ಮಾಕಂ ಸುಯೋಧನಃ ।
ಧರ್ಮರಾಜಸ್ಯ ಸಂದೇಶಾನ್ಮಮ ಚೇದಿಚ್ಛಸಿ ಪ್ರಿಯಮ್ ॥೮॥

ಅರ್ಜುನ– ಚಿತ್ರಸೇನನೇ, ದುರ್ಯೋಧನನು ನಮ್ಮ ಸಹೋದರ. ನನಗೆ ಪ್ರಿಯವನ್ನು ಮಾಡುವುದಾದರೆ ಧರ್ಮರಾಜನ ವಚನದಂತೆ ಇವನನ್ನು ಬಿಟ್ಟುಬಿಡು.

ಚಿತ್ರಸೇನಃ

ಪಾಪೋಽಯಂ ನಿತ್ಯಸಂದುಷ್ಟೋ ನ ವಿಮೋಕ್ಷಣಮರ್ಹತಿ ।
ಪ್ರಲಬ್ಧಾ ಧರ್ಮರಾಜಸ್ಯ ಕೃಷ್ಣಾಯಾಶ್ಚ ಧನಂಜಯ ॥೯॥

ಚಿತ್ರಸೇನ– ಈ ಪಾಪಿಯು ಯಾವಾಗಲೂ ದುಷ್ಟನಾಗಿದ್ದಾನೆ. ಇವನು ಬಿಡುಗಡೆ ಮಾಡಲು ಅರ್ಹನಲ್ಲ. ಇವನು ಧರ್ಮರಾಜನಿಗೂ ಮತ್ತು ದ್ರೌಪದಿಗೂ ವಂಚನೆಯನ್ನು ಮಾಡಿದ್ದಾನೆ.

ಅರ್ಜುನಃ

ನೇದಂ ಚಿಕೀರ್ಷಿತಂ ತಸ್ಯ ಕುಂತೀಪುತ್ರೋ ಮಹಾವ್ರತಃ ।
ಜಾನಾತಿ ಧರ್ಮರಾಜೋ ಹಿ ಶ್ರುತ್ವಾ ಕುರು ಯಥೇಚ್ಛಸಿ ॥೧೦॥

ಅರ್ಜುನ– ಇದು ಮಹಾವ್ರತನಾದ ಧರ್ಮರಾಜನಿಗೆ ಸಮ್ಮತವಾದುದಲ್ಲ. ನೀನು ಹೇಳುವ ವಂಚನೆಯ ಅಭಿಪ್ರಾಯವನ್ನು ಧರ್ಮರಾಜನು ತಿಳಿದಿಲ್ಲ. ಈ ಮಾತನ್ನು ಕೇಳಿ ನಿನಗೆ ಇಷ್ಟವಾದಂತೆ ಮಾಡು.

ವೈಶಂಪಾಯನಃ

ತೇ ಸರ್ವ ಏವ ರಾಜಾನಮಭಿಜಗ್ಮುರ್ಯುಧಿಷ್ಠಿರಮ್ ।
ಅಭಿಗಮ್ಯ ಚ ತತ್ಸರ್ವಂ ಶಶಂಸುಸ್ತಸ್ಯ ಚೇಷ್ಟಿತಮ್ ॥೧೧॥

ವೈಶಂಪಾಯನ– ಆಗ ಅವರೆಲ್ಲರೂ ರಾಜನಾದ ಯುಧಿಷ್ಠಿರನ ಬಳಿಗೆ ಹೋಗಿ ಅವನ ಚೇಷ್ಟೆಎಲ್ಲವನ್ನೂ ಯುಧಿಷ್ಠಿರನಿಗೆ ನಿವೇದಿಸಿದರು.

ಅಜಾತಶತ್ರುಸ್ತಚ್ಛ್ರುತ್ವಾ ಗಂಧರ್ವಸ್ಯ ವಚಸ್ತದಾ ।
ಮೋಕ್ಷಯಾಮಾಸ ತಾನ್ ಸರ್ವಾನ್ ಗಂಧರ್ವಾನ್ ಪ್ರಶಶಂಸ ಚ ॥

ಅಜಾತಶತ್ರುವು ಗಂಧರ್ವನ ಆ ಮಾತುಗಳನ್ನು ಕೇಳಿ ಅವರೆಲ್ಲರನ್ನೂ ಬಂಧನದಿಂದ ಬಿಡುಗಡೆಗೊಳಿಸಿ ಗಂಧರ್ವರನ್ನು ಪ್ರಶಂಸಿಸಿದನು.

ದಿಷ್ಟ್ಯಾ ಭವದ್ಭಿರ್ಬಲಿಭಿಃ ಶಕ್ತೈಃ ಸರ್ವೈರ್ನ ಹಿಂಸಿತಃ ।
ದುರ್ವೃತ್ತೋ ಧಾರ್ತರಾಷ್ಟ್ರೋಽಯಂ ಸಾಮಾತ್ಯಜ್ಞಾತಿಬಾಂಧವಃ ॥೧೩॥

ದೇವರ ದಯೆಯಿಂದ ಪ್ರಬಲರೂ ಮತ್ತು ಸಮರ್ಥರೂ ಆದ ನಿಮ್ಮಿಂದ ದುಷ್ಟನಡತೆಯುಳ್ಳ ಅಮಾತ್ಯಜ್ಞಾತಿಗಳಿಂದ ಮತ್ತು ಬಂಧುಗಳಿಂದ ಸಹಿತನಾದ ಈ ದುರ್ಯೋಧನನು ಹಿಂಸಿಸಲ್ಪಡಲಿಲ್ಲ.

ಉಪಕಾರೋ ಮಹಾಂಸ್ತಾತ ಕೃತೋಽಯಂ ಮಮ ಖೇಚರೈಃ ।
ಕುಲಂ ನ ಪರಿಭೂತಂ ಮೇ ಮೋಕ್ಷಣೇಽಸ್ಯ ದುರಾತ್ಮನಃ ॥೧೪॥

ಎಲೈ ಚಿತ್ರಸೇನನೇ, ಪ್ರೀತಿಪಾತ್ರನೇ, ಗಗನಚರರಾದ ಗಂಧರ್ವರಿಂದ ನನಗೆ ದೊಡ್ಡ ಉಪಕಾರವು ಮಾಡಲ್ಪಟ್ಟಿತು. ಈ ದುರಾತ್ಮನನ್ನು ಮೋಚನೆ ಮಾಡಿರುವುದರಿಂದ ನಮ್ಮ ಕುಲಕ್ಕೆ ಒದಗಿದ್ದ ದೊಡ್ಡ ಅವಮಾನವು ನಿವಾರಣೆಯಾಯಿತು.

ಆಜ್ಞಾಪಯಧ್ವಮಿಷ್ಟಾನಿ ಪ್ರಯಾಮೋ ದರ್ಶನೇನ ವಃ ।
ಪ್ರಾಪ್ಯ ಸರ್ವಾನಭಿಪ್ರಾಯಾಂಸ್ತತೋ ವ್ರಜತ ಮಾಚಿರಮ್ ॥೧೫॥

ನಿಮಗೆ ಏನು ಇಷ್ಟವೆಂದು ಹೇಳಿ. ನಿಮ್ಮ ದರ್ಶನದಿಂದ ನಮಗೆ ಸಂತೋಷವಾಗುತ್ತಿದೆ. ನಿಮಗೆ ಅಭಿಪ್ರೇತವಾದುದನ್ನೆಲ್ಲಾ ಪಡೆದು ಇಲ್ಲಿಂದ ನೀವು ಶೀಘ್ರವಾಗಿ ಹೊರಡಿ.

ವೈಶಂಪಾಯನಃ

ಅನುಜ್ಞಾತಾಸ್ತು ಗಂಧರ್ವಾಃ ಪಾಂಡುಪುತ್ರೇಣ ಧೀಮತಾ ।
ಸಹಾಪ್ಸರೋಭಿಃ ಸಂಹೃಷ್ಟಾಶ್ಚಿತ್ರಸೇನಮುಖಾ ಯಯುಃ ॥೧೬॥

ವೈಶಂಪಾಯನ– ಮೇಧಾವಿಯಾದ ಪಾಂಡುಪುತ್ರರಿಂದ ಅನುಮತಿಯನ್ನು ಪಡೆದ ಚಿತ್ರಸೇನ ಮೊದಲಾದ ಗಂಧರ್ವರು ಸಂತೋಷಯುಕ್ತರಾಗಿ ಅಪ್ಸರೆಯರ ಜೊತೆಯಲ್ಲಿ ಹಿಂದಿರುಗಿದರು.

ದೇವಲೋಕಂ ತತೋ ಗತ್ವಾ ಗಂಧರ್ವೈಃ ಸಹಿತಸ್ತದಾ ।
ನ್ಯವೇದಯಚ್ಚ ತತ್ಸರ್ವಂ ಚಿತ್ರಸೇನಃ ಶತಕ್ರತೋಃ ॥೧೭॥

ಗಂಧರ್ವಸಹಿತನಾದ ಚಿತ್ರಸೇನನು ದೇವಲೋಕಕ್ಕೆ ಹೋಗಿ ನಡೆದ ಘಟನೆಗಳನ್ನೆಲ್ಲಾ ಶತಕ್ರತುವಾದ ಇಂದ್ರನಿಗೆ ನಿವೇದಿಸಿದನು.

ದೇವರಾಡಪಿ ಗಂಧರ್ವಾನ್ಕೃತಾಂಸ್ತಾನ್ ಸಮಜೀವಯತ್ ।
ದಿವ್ಯೇನಾಮೃತವರ್ಷೇಣ ಯೇ ಹತಾಃ ಕೌರವೈರ್ಯುಧಿ ॥೧೮॥

ದೇವೇಂದ್ರನೂ ಸಹ ಯುದ್ಧದಲ್ಲಿ ಕೌರವರಿಂದ ಮೃತರಾದ ಗಂಧರ್ವರನ್ನು ದಿವ್ಯವಾದ ಅಮೃತವರ್ಷದಿಂದ ಉಜ್ಜೀವನಗೊಳಿಸಿದನು.

ಚಿತ್ರಸೇನಸ್ತದಾ ವಾಕ್ಯಮುವಾಚ ಪ್ರೌಢಯಾ ಗಿರಾ ।
ಮುಂಚಧ್ವಂ ಸಾನುಜಾಮಾತ್ಯಂ ಸದಾರಂ ಚ ಸುಯೋಧನಮ್ ॥೧೯॥

ಆಗ ಚಿತ್ರಸೇನನು ಉದಾರವಾದ ಮಾತುಗಳಿಂದ ತಮ್ಮಂದಿರು, ಅಮಾತ್ಯರು ಮತ್ತು ಪತ್ನಿಯರಿಂದ ಕೂಡಿದ ಈ ಸುಯೋಧನನನ್ನು ಬಿಡುಗಡೆ ಮಾಡಿ ಎಂದು ಹೇಳಿದನು.

ಗಂಧರ್ವಾಸ್ತು ವಚಃಶ್ರುತ್ವಾ ಚಿತ್ರಸೇನಸ್ಯ ವೈದ್ರುತಮ್ ।
ರಾಜಾನಂ ಮೋಚಯಾಮಾಸುರ್ಬದ್ಧಂ ನಿಗಡಬಂಧನೈಃ ॥೨೦॥

ಚಿತ್ರಸೇನನ ಮಾತನ್ನು ಕೇಳಿ ಗಂಧರ್ವರು ಶೀಘ್ರವಾಗಿ ಸಂಕೋಲೆಗಳಿಂದ ಬದ್ಧನಾದ ರಾಜನನ್ನು ಬಿಡುಗಡೆಗೊಳಿಸಿದರು.

ಸದಾರಂ ಸಾನುಗಾಮಾತ್ಯಂ ಬಾಣಚಾಲಮಯೇ ವನೇ ।
ಲುಂಠತಶ್ಚಾಽಪಿ ತೇ ಸರ್ವೇ ಯುಧಿಷ್ಠಿರಸಮೀಪತಃ ॥೨೧॥

ಪತಿತಾಃ ಲಜ್ಜಿತಾಶ್ಚೈವ ತಸ್ಥುಶ್ಚಾಧೋಮುಖಾಸ್ತದಾ ।

ಪತ್ನಿಯರು ಮತ್ತು ಅನುಜರು ಅಮಾತ್ಯರಿಂದ ಕೂಡಿದ ದುರ್ಯೋಧನನನ್ನು ಬಾಣಗಳ ಸಮೂಹಗಳು ಹರಡಿದ್ದ ಆ ಕಾಡಿನಲ್ಲಿ ಬಿಡುಗಡೆ ಮಾಡಿದರು. ಅವರೆಲ್ಲರೂ ಆ ಬಾಣಗಳನ್ನು ದಾಟುತ್ತಾ ನಾಚಿಕೆಯಿಂದ ಮುಖವನ್ನು ತಗ್ಗಿಸಿ ಯುಧಿಷ್ಠಿರನ ಸಮೀಪದಲ್ಲಿ ಬಂದು ನಿಂತರು.

ಯುಧಿಷ್ಠಿರೋಽಪಿ ದಯಯಾ ತಾನ್ ಸಮೀಕ್ಷ್ಯ ತಥಾಗತಾನ್ ॥೨೨॥

ಜ್ಞಾತೀಂಸ್ತಾನವಮುಚ್ಯಾಥ ರಾಜದಾರಾಂಶ್ಚ ಸರ್ವಶಃ ।
ಕೃತ್ವಾ ಚ ದುಷ್ಕರಂ ಕರ್ಮ ಪ್ರೀತಿಯುಕ್ತಾಶ್ಚ ಪಾಂಡವಾಃ ॥೨೩॥

ಸಸ್ತ್ರೀಕುಮಾರೈಃ ಕುರುಭಿಃ ಪೂಜ್ಯಮಾನಾ ಮಹಾರಥಾಃ ।
ಬಭ್ರಾಜಿರೇ ಮಹಾತ್ಮಾನಃ ಕ್ರತುಮಧ್ಯೇ ಯಥಾಽಗ್ನಯಃ ॥೨೪॥

ಯುಧಿಷ್ಠಿರನೂ ಸಹ ಆ ಸ್ಥಿತಿಯಲ್ಲಿ ಬಂದ ಅವರನ್ನು ನೋಡಿ ದಯೆಯಿಂದ ಅವರೆಲ್ಲರನ್ನೂ, ರಾಜಪತ್ನಿಯರನ್ನೂ ಬಿಡುಗಡೆಗೊಳಿಸಿ ದುಷ್ಕರವಾದ ಕರ್ಮವನ್ನು ಮಾಡಿದನು. ಮಹಾರಥರೂ, ಮಹಾತ್ಮರೂ ಆದ ಪಾಂಡವರು ಸ್ತ್ರೀಯರು ಮತ್ತು ಕುಮಾರರಿಂದ ಸಹಿತರಾದ ಕುರುಗಳಿಂದ ಪೂಜಿತರಾಗಿ ಸಂತೋಷವನ್ನು ಹೊಂದಿ ಯಜ್ಞಮಧ್ಯದಲ್ಲಿ ಅಗ್ನಿಗಳಂತೆ ಶೋಭಿಸಿದರು.

ತತೋ ದುರ್ಯೋಧನಂ ಮುಕ್ತಂ ಭ್ರಾತೃಭಿಃ ಸಹಿತಸ್ತದಾ ।
ಯುಧಿಷ್ಠಿರಸ್ತು ಪ್ರಣಯಾದಿದಂ ವಚನಮಬ್ರವೀತ್ ॥೨೫॥

ಅನಂತರ ಮುಕ್ತನಾದ ಭ್ರಾತೃಸಹಿತನಾದ ದುರ್ಯೋಧನನನ್ನು ಕುರಿತು ಯುಧಿಷ್ಠಿರನು ಪ್ರೀತಿಯಿಂದ ಹೀಗೆ ಮಾತನಾಡಿದನು.

ಮಾ ಸ್ಮ ತಾತ ಪುನಃ ಕಾರ್ಷೀರೀದೃಶಂ ಸಾಹಸಂ ಕ್ವಚಿತ್ ।
ನ ಹಿ ಸಾಹಸಕರ್ತಾರಃ ಸುಖಮೇಧಂತಿ ಭಾರತ ॥೨೬॥

ಪ್ರೀತಿಪಾತ್ರನೇ, ಪುನಃ ಇಂತಹ ಸಾಹಸಕಾರ್ಯವನ್ನು ಮಾಡಬೇಡ. ಭಾರತನೇ, ಸಾಹಸ ಕಾರ್ಯವನ್ನು ಮಾಡುವವರು ಎಂದೂ ಸುಖವನ್ನು ಹೊಂದುವುದಿಲ್ಲ.

ಸ್ವಸ್ತಿಮಾನ್ ಸಹಿತಃ ಸರ್ವೈರ್ಭ್ರಾತೃಭಿಃ ಕುರುನಂದನ ।
ಗೃಹಾನ್ ವ್ರಜ ಯಥಾಕಾಮಂ ವೈಮನಸ್ಯಂ ಚ ಮಾ ಕೃಥಾಃ ॥೨೭॥

ಎಲೈ ಕುರುನಂದನನೇ, ಎಲ್ಲ ತಮ್ಮಂದಿರಿಂದ ಸಹಿತನಾಗಿ ಕ್ಷೇಮದಿಂದ ನಿನ್ನ ಇಚ್ಛೆಯಂತೆ ಮನೆಗೆ ಹಿಂದಿರುಗು. ವೈಮನಸ್ಯವನ್ನು ಮಾಡಬೇಡ.

ವೈಶಂಪಾಯನಃ

ಪಾಂಡವೇನಾಭ್ಯನುಜ್ಞಾತೋ ರಾಜಾ ದುರ್ಯೋಧನಸ್ತದಾ ।
ವಿದೀರ್ಯಮಾಣೋ ವ್ರೀಡಾವಾನ್ ಜಗಾಮ ನಗರಂ ಪ್ರತಿ ॥೨೮॥

ವೈಶಂಪಾಯನ– ಪಾಂಡವನಾದ ಧರ್ಮರಾಜನಿಂದ ಅನುಜ್ಞೆಯನ್ನು ಪಡೆದ ದುರ್ಯೋಧನ ರಾಜನು ಆಗ ಅವಮಾನದಿಂದ (ನಾಚಿಕೆಯಿಂದ) ಬಿರಿದು ಹೋಗುತ್ತಾ ತನ್ನ ನಗರಕ್ಕೆ ಹೊರಟನು.

ತಸ್ಮಿನ್ ಗತೇ ಕೌರವೇಯೇ ಕುಂತೀಪುತ್ರೋ ಯುಧಿಷ್ಠಿರಃ ।
ಭ್ರಾತೃಭಿಃ ಸಹಿತೋ ವೀರಃ ಪೂಜ್ಯಮಾನೋ ದ್ವಿಜಾತಿಭಿಃ ॥೨೯॥

ತಪೋಧನೈಶ್ಚ ತೈಃ ಸರ್ವೈರ್ವೃತಃ ಶಕ್ರ ಇವಾಮರೈಃ ।
ತದಾ ದ್ವೈತವನೇ ತಸ್ಮಿನ್ ವಿಜಹಾರ ಮುದಾ ಯುತಃ ॥೩೦॥

ಆ ಕೌರವರಾಜನು ಹೊರಟುಹೋಗುತ್ತಿರಲು ಕುಂತೀಪುತ್ರನಾದ ವೀರನಾದ ಯುಧಿಷ್ಠಿರನು ತಮ್ಮಂದಿರಿಂದ ಸಹಿತನಾಗಿ ಬ್ರಾಹ್ಮಣರಿಂದ ಪೂಜಿಸಲ್ಪಟ್ಟು ತಪೋಧನರಿಂದ ಸಂವೃತನಾಗಿ ದೇವತೆಗಳಿಂದ ಕೂಡಿದ ಶಕ್ರನಂತೆ ಆ ದ್ವೈತವನದಲ್ಲಿ ಸಂತೋಷದಿಂದ ಯುಕ್ತನಾಗಿ ವಿಹರಿಸಿದನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂಸಂಹಿತಾಯಾಂ ವನಪರ್ವಣಿ
ಪಂಚತ್ರಿಂಶಾಧಿಕದ್ವಿಶತತಮೋऽಧ್ಯಾಯಃ ॥
॥ ಇತಿ ಘೋಷಯಾತ್ರಾಪರ್ವಣಿ ದುರ್ಯೋಧನ ಮೋಕ್ಷಣಂನಾಮ
ಏಕಾದಶೋಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವನಪರ್ವದಲ್ಲಿ ಇನ್ನೂರ ಮೂವತ್ತೈದನೆಯ
ಅಧ್ಯಾಯ ಮುಗಿಯಿತು.

॥ ಘೋಷಯಾತ್ರಾಪರ್ವ ಸಮಾಪ್ತಮ್ ॥

★ ★ ★ ★

ಮಹಾಭಾರತ ತಾತ್ಪರ್ಯನಿರ್ಣಯ -೨೨ ಅಧ್ಯಾಯ

ಸ ಚಿತ್ರಸೇನೋ ವಾಸವೋಕ್ತಂ ಚ ಸರ್ವಂ
ಕುಮಂತ್ರಿತಂ ಧಾರ್ತರಾಷ್ಟ್ರಸ್ಯ ಚಾऽಹ ।
ಪಾರ್ಥಸ್ಯ ಭೀಮಸ್ಯ ಚ ತನ್ನಿಶಮ್ಯ
ಸುವದೀಡಿತೋ ಧೃತರಾಷ್ಟ್ರತ್ಮಜೋऽಭೂತ್ ॥೩೯॥

ಚಿತ್ರಸೇನ ಅರ್ಜುನನಿಗೂ ಭೀಮನಿಗೂ ದುರ್ಯೋಧನನ ದುರಾಲೋಚನೆಯನ್ನೂ ಇಂದ್ರನ ಆಜ್ಞೆಯನ್ನೂ ಪೂರ್ತಿಯಾಗಿ ತಿಳಿಸಿದ. ಅದನ್ನು ಕೇಳಿ ದುರ್ಯೋಧನ ಬಹಳ ಲಜ್ಜಿತನಾದ.

ಸಮಾಪ್ಯ ಯಜ್ಞಂ ಚ ತತೋಽಭಿಯಾಂತಂ
ಸರ್ವೇ ಪದಾಪುರ್ಧರ್ಮರಾಜಂ ಸ ಚಾಽಶು ।
ಸಂಪೂಜ್ಯ ತೂತ್ಪ್ಜ್ಯ ಚ ಚಿತ್ರಸೇನ-
ಮೂಚೇ ಗಾಂಧಾರೇ ನ ಪುನಃ ಕಾರ್ಯಮೀದೃಕ್ ॥೩೯೮॥

ಅಷ್ಟರಲ್ಲಿ ಯಜ್ಞವನ್ನು ಮುಗಿಸಿ ಎದುರಿಗೆ ಬಂದ ಧರ್ಮರಾಜನ ಬಳಿಯಲ್ಲಿ ಎಲ್ಲರೂ ಬೇಗನೆ ಬಂದು ಸೇರಿದರು. ಧರ್ಮರಾಜ ಚಿತ್ರಸೇನನನ್ನು ಪ್ರಶಂಸೆ ಮಾಡಿ ಕಳಿಸಿಕೊಟ್ಟ ದುರ್ಯೋಧನನಿಗೆ, 'ನೀನಿನ್ನು ಇಂಥ ಸಾಹಸಕ್ಕೆ ತೊಡಗಬೇಡ' ಎಂದ.

ಸ ಪಾಂಡವೈರ್ಮೋಚಿತಃ ಸಾನುಜಶ್ಚ
ಸಭಾರ್ಯಕಃ ಕಿಧಿಟತೋಽಪಗಮ್ಯ ।
ಸಮ್ಮೇಲನಾಯೋಪವಿಷ್ಟಶ್ಚ ತತ್ರ
ಸುವದೀಡಿತಃ ಸೂತಪುತ್ರಂ ದದರ್ಶ: ॥೩೯೯॥

ದುರ್ಯೋಧನ ಪಾಂಡವರ ಸಹಾಯದಿಂದ ಬಿಡುಗಡೆ ಹೊಂದಿ ಬಹಳ ಲಜ್ಜಿತನಾಗಿ ಸೋದರರೊಂದಿಗೆ ಮತ್ತು ಹೆಂಡಂದಿರೊಂದಿಗೆ ಅಲ್ಲಿಂದ ಸ್ವಲ್ಪ ದೂರದವರ್ಗೆಗೆ ಹೋಗಿ ಅಲ್ಲಿಯೇ ತನ್ನ ಸೈನ್ಯವನ್ನು ಒಟ್ಟುಗೂಡಿಸುವುದಕ್ಕಾಗಿ ಕುಳಿತ. ಅಲ್ಲಿಯೇ ಕರ್ಣನನ್ನು ಕಂಡ.

ಸ ಚಾಽಹ ದಿಷ್ಟ್ಯಾ ಜಯಸಿ ರಾಜನ್ನಿತಿ ಸುಯೋಧನಮ್ ।
ವದೀಡಿತೋ ನೇತಿ ತಂ ಚೊಕ್ತ್ವಾ ಯಥಾವೃತ್ತಂ ಸುಯೋಧನಃ ।
ಉಕ್ತ್ವಾ ಪದಾಯೋಪವೇಶಾಂ ಚ ಚಕ್ರೇ ತತ್ರ ಸುದುಃಖಿತಃ ॥೪೦೦॥

ಕರ್ಣದುರ್ಯೋಧನನಿಗೆ ಹೇಳಿದ, 'ರಾಜನೇ, ಸುದೈವದಿಂದ ನೀನು ಜಯಗಳಿಸಿದೆ' ಎಂದು. ದುರ್ಯೋಧನ ಲಜ್ಜಿತನಾಗಿ 'ಇಲ್ಲ' ಎಂದು ಹೇಳಿ ಯಥಾವತ್ತಾಗಿ ನಡೆದುದನ್ನೆಲ್ಲ ಹೇಳಿ ಬಲು ದುಃಖಿತನಾಗಿ ಅಲ್ಲಿಯೇ ಆಮರಣಾಂತ ಉಪವಾಸ ವ್ರತಕ್ಕೆ ಕುಳಿತ.

ಕರ್ಣದುಃಶಾಸನಾಭ್ಯಾಂ ಚ ಸೌಬಲೇನ ಚ ದೇವಿನಾ ।
ಅನ್ಯೈಶ್ಚ ಯಾಚ್ಯಮಾನೋಽಪಿ ನೈವೋತ್ತಸ್ಥೌ ಸುಯೋಧನಃ ॥೪೦೧॥

ಕರ್ಣ ದುಃಶಾಸನ, ಜೂಜುಕೋರನಾದ ಶಕುನಿ ಮತ್ತು ಇನ್ನಿತರರು ಎಲ್ಲರೂ ಬೇಡಿಕೊಂಡರು. ಆದರೂ ದುರ್ಯೋಧನ ಮೇಲೇಳಲಿಲ್ಲ.

★ ★ ★ ★

ಪ್ರಾಯೋಪವೇಶನಪರ್ವ

ಇನ್ನೂರ ಮೂವತ್ತಾರನೆಯ ಅಧ್ಯಾಯ

ಮಾರ್ಗಮಧ್ಯದಲ್ಲಿ ದುರ್ಯೋಧನನ ವಿಶ್ರಾಂತಿ. ಅಲ್ಲಿಗೆ ಕರ್ಣನ ಆಗಮನ ಮತ್ತು ಅಜ್ಞಾನದಿಂದ ದುರ್ಯೋಧನನ ಪ್ರಶಂಸೆ.

ಜನಮೇಜಯಃ

ಶತ್ರುಭಿರ್ಜಿತಬದ್ಧಸ್ಯ ಪಾಂಡವೈಶ್ಚ ಮಹಾತ್ಮಭಿಃ ।
ಮೋಕ್ಷಿತಸ್ಯ ಯುಧಾ ಪಶ್ಚಾನ್ಮಾನಿತಸ್ಯ ದುರಾತ್ಮನಃ ॥೧॥

ಕತ್ಥನಸ್ಯಾವಲಿಪ್ತಸ್ಯ ಗರ್ವಿತಸ್ಯ ಚ ನಿತ್ಯಶಃ ।
ಸದಾ ಚ ಪೌರುಷೌದಾರ್ಯೈಃ ಪಾಂಡವಾನವಜಾನತಃ ॥೨॥

ದುರ್ಯೋಧನಸ್ಯ ಪಾಪಸ್ಯ ನಿತ್ಯಾಹಂಕಾರಮಾನಿನಃ ।
ಪ್ರವೇಶೋ ಹಸ್ತಿನಪುರೇ ದುಷ್ಕರಃ ಪ್ರತಿಭಾತಿ ಮೇ ॥೩॥

ಜನಮೇಜಯ– ಶತ್ರುಗಳಿಂದ ಪರಾಭವವನ್ನು ಹೊಂದಿ ಬದ್ಧನಾಗಿ ಅನಂತರ ಮಹಾತ್ಮರಾದ ಪಾಂಡವರಿಂದ ಯುದ್ಧದಲ್ಲಿ ಬಿಡಿಸಲ್ಪಟ್ಟ ಮಾನಿಯಾದ, ದುರಾತ್ಮನಾದ, ತನ್ನನ್ನು ಹೊಗಳುವ ಶೀಲವುಳ್ಳ, ಯಾವಾಗಲೂ ಗರ್ವಿತನಾದ ಮತ್ತು ಯಾವಾಗಲೂ ತನ್ನ ಔದಾರ್ಯ ಪೌರುಷವನ್ನು ಹೇಳಿಕೊಂಡು ಪಾಂಡವರನ್ನು ಅವಮಾನ ಮಾಡುವ,

ನಿತ್ಯವೂ ಅಹಂಕಾರಭರಿತನಾದ, ಪಾಪಿಯಾದ ದುರ್ಯೋಧನನಿಗೆ ಪುನಃ ಹಸ್ತಿನಪುರದ ಪ್ರವೇಶವು ದುಷ್ಕರವೆಂದು ನನಗೆ ತೋರುತ್ತದೆ.

ತಸ್ಯ ಲಜ್ಜಾನ್ವಿತಸ್ಯೈವ ಶೋಕವ್ಯಾಕುಲಚೇತಸಃ ।
ಪ್ರವೇಶಂ ವಿಸ್ತರೇಣ ತ್ವಂ ವೈಶಂಪಾಯನ ಕೀರ್ತಯ ॥೪॥

ಎಲೈ ವೈಶಂಪಾಯನರೇ, ಹೀಗೆ ಅವಮಾನದಿಂದ ಕೂಡಿ ಶೋಕವ್ಯಾಕುಲವಾದ ಮನಸುಳ್ಳ ಅವನ ಪ್ರವೇಶವನ್ನು ವಿಸ್ತಾರವಾಗಿ ಹೇಳಿ.

ವೈಶಂಪಾಯನಃ

ಧರ್ಮರಾಜನಿಸೃಷ್ಟಸ್ತು ಧಾರ್ತರಾಷ್ಟ್ರಃ ಸುಯೋಧನಃ ।
ಲಜ್ಜಯಾऽಧೋಮುಖಶ್ಚಾಸೀನ್ನಚಾವರ್ತತ ದುಃಖಿತಃ ॥೫॥

ಧರ್ಮರಾಜನಿಂದ ಬಿಡುಗಡೆ ಮಾಡಲ್ಪಟ್ಟ ಧೃತರಾಷ್ಟ್ರಪುತ್ರನಾದ ಸುಯೋಧನನು ನಾಚಿಕೆಯಿಂದ ತಲೆ ತಗ್ಗಿಸಿ, ದುಃಖಿತನಾಗಿ ಪುನಃ ನಗರಕ್ಕೆ ಹಿಂದಿರುಗಲಿಲ್ಲ.

ಸ್ವಪುರಂ ಪ್ರಯಯೌ ರಾಜಾ ಚತುರಂಗಬಲಾನುಗಃ ।
ಶೋಕೋಪಹತಯಾ ಬುದ್ಧ್ಯಾ ಚಿಂತಯಾನಃ ಪರಾಭವಮ್ ॥೬॥

ಚತುರಂಗ ಸೈನ್ಯಯುಕ್ತನಾದ ಆ ರಾಜನು ತನಗೆ ಉಂಟಾದ ಅವಮಾನವನ್ನು ಶೋಕಯುಕ್ತವಾದ ಬುದ್ಧಿಯಿಂದ ಚಿಂತಿಸುತ್ತಾ ತನ್ನ ಪಟ್ಟಣಕ್ಕೆ ಹೊರಟನು.

ವಿಮುಚ್ಯ ಪಥಿ ಯಾನಾನಿ ದೇಶೇ ಸುಯವಸೋದಕೇ ।
ಸನ್ನಿವಿಷ್ಟಃ ಶುಭೇ ರಮ್ಯೇ ಭೂಮಿಭಾಗೇ ಯಥೇಪ್ಸಿತಮ್ ।
ಹಸ್ತ್ಯಶ್ವರಥಪಾದಾತಂ ಯಥಾಸ್ಥಾನಂ ನ್ಯವೇಶಯತ್ ॥೭॥

ಅವನು ದಾರಿಯಲ್ಲಿ ಹೋಗುತ್ತಾ ಒಳ್ಳೆಯ ಹುಲ್ಲುನೀರುಗಳಿದ್ದ ಒಂದು ರಮ್ಯವಾದ ಶುಭವಾದ ಭೂಪ್ರದೇಶದಲ್ಲಿ ತಂಗಿ ಹಸ್ತ್ಯಶ್ವರಥಕಾಲಾಳುಗಳನ್ನು ಅವುಗಳಿಗೆ ಯೋಗ್ಯವಾದ ಸ್ಥಾನಗಳಲ್ಲಿ ಇಟ್ಟುಕುಳಿತುಕೊಂಡನು.

ಅಥೋಪವಿಷ್ಟಂ ರಾಜಾನಂ ಪರ್ಯಂಕೇ ಜ್ವಲನಪ್ರಭೇ ।
ಉಪಪ್ಲುತಂ ಯಥಾ ಸೋಮಂ ರಾಹುಣಾ ರಾತ್ರಿಸಂಕ್ಷಯೇ ॥೮॥

ಉಪಾಗಮ್ಯಾಬ್ರವೀತ್ ಕರ್ಣೋ ದುರ್ಯೋಧನಮಿದಂ ತದಾ ॥೯॥

ರಾತ್ರಿಯ ಕೊನೆಯ ಭಾಗದಲ್ಲಿ ರಾಹುವಿನಿಂದ ಗ್ರಸ್ತವಾದ ಚಂದ್ರನಂತೆ ಅಗ್ನಿಯಂತೆ ಶೋಭಿಸುವ ಮಂಚದಲ್ಲಿ ಉಪವಿಷ್ಟನಾದ ರಾಜನಾದ ದುರ್ಯೋಧನನನ್ನು ಕರ್ಣನು ಸಮೀಪಿಸಿ ಆಗ ಹೀಗೆ ಮಾತನಾಡಿದನು.

ದಿಷ್ಟ್ಯಾ ಜೀವಸಿ ಗಾಂಧಾರೇ ದಿಷ್ಟ್ಯಾ ನಃ ಸಂಗಮಃ ಪುನಃ ।
ದಿಷ್ಟ್ಯಾ ತ್ವಯಾ ಜಿತಾಶ್ಚೈವ ಗಂಧರ್ವಾಃ ಕಾಮರೂಪಿಣಃ ॥೧೦॥

ಗಾಂಧಾರೀ ಪುತ್ರನೇ, ಅದೃಷ್ಟದಿಂದ ನೀನು ಜೀವಿಸಿದ್ದೀಯೆ. ಅದೃಷ್ಟದಿಂದಲೇ ನಮ್ಮ ಸಮಾಗಮವು ಉಂಟಾಗಿದೆ. ದೈವವಶಾತ್ ಕಾಮರೂಪಿಗಳಾದ ಗಂಧರ್ವರು ನಿನ್ನಿಂದ ಪರಾಜಿತರಾಗಿದ್ದಾರೆ.

ದಿಷ್ಟ್ಯಾ ಸಮಗ್ರಾನ್‌ಪಶ್ಯಾಮಿ ಭ್ರಾತೄಂಸ್ತೇ ಕುರುನಂದನ ।
ವಿಜಗೀಷೂನ್ ರಣೇ ಯುಕ್ತಾನ್ ನಿರ್ಜಿತಾರೀನ್ ಮಹಾರಥಾನ್ ॥

ಎಲೈ ಕುರುನಂದನನೇ, ಯುದ್ಧದಲ್ಲಿ ಜಯವನ್ನು ಬಯಸುವ ನಿನ್ನ ಮಹಾರಥರಾದ ತಮ್ಮಂದಿರು ಶತ್ರುಗಳನ್ನು ಗೆದ್ದು ಯಾವ ವ್ರಣವೂ ಇಲ್ಲದೇ ಸಮಗ್ರಾಂಗರಾಗಿ ಇರುವುದನ್ನು ನೋಡುತ್ತಿದ್ದೇನೆ.

ಅಹಂ ತ್ವಭಿದ್ರುತಃ ಸರ್ವೈರ್ಗಂಧರ್ವೈಃ ಪಶ್ಯತಸ್ತವ ।
ನಾಶಕ್ನುವಂ ಧಾರಯಿತುಂ ದೀರ್ಯಮಾಣಾಂ ಚ ವಾಹಿನೀಮ್ ॥೧೨॥

ನಾನಾದರೂ ನೀನು ನೋಡುತ್ತಿರುವಂತೆ ಎಲ್ಲ ಗಂಧರ್ವರ ಆಕ್ರಮಣಕ್ಕೆ ಒಳಗಾಗಿ ಅವರನ್ನು ತಡೆಯಲು ಸಾಧ್ಯವಿಲ್ಲದೆ ಮತ್ತು ಹೆದರಿಹೋಗುತ್ತಿದ್ದ ಸೈನ್ಯವನ್ನು ನಿಲ್ಲಿಸಲು ಸಾಧ್ಯವಾಗದೆ ಓಡಿಹೋದೆನು.

ಶರಕ್ಷತಾಂಗಸ್ತು ಭೃಶಂ ವ್ಯಪಯಾತೋಽಭಿಪೀಡಿತಃ ।
ಇದಂ ತ್ವತ್ಯದ್ಭುತಂ ಮನ್ಯೇ ಯದ್ ಯುಷ್ಮಾನಿಹ ಭಾರತ ॥೧೩॥

ಅರಿಷ್ಟಾನಕ್ಷತಾಂಶ್ಚಾಪಿ ಸದಾರಬಲವಾಹನಾನ್ ।
ವಿಮುಕ್ತಾನ್ ಸಂಪ್ರಪಶ್ಯಾಮಿ ಯುದ್ಧಾತ್ ತಸ್ಮಾದಮಾನುಷಾತ್ ॥೧೪॥

ನಾನು ಅವರಿಂದ ಬಹಳ ಪೀಡಿತನಾಗಿ ಅವರ ಬಾಣದಿಂದ ಶರೀರದಲ್ಲೆಲ್ಲಾ ವ್ರಣಗಳನ್ನು ಹೊಂದಿ ಯುದ್ಧಭೂಮಿಯಿಂದ ಓಡಿಹೋದೆನು. ಎಲೈ ಭಾರತನೇ, ಈಗ ನಾನು ಯಾವ ವ್ರಣವೂ ಇಲ್ಲದೆ, ಯಾವ ನಾಶಗಳನ್ನೂ ಹೊಂದದೆ ಪತ್ನಿ, ಸೈನ್ಯ ಮತ್ತು ವಾಹನಗಳಿಂದ ಸಹಿತರಾಗಿ ಆ ಅಮಾನುಷ ಯುದ್ಧದಿಂದ ಹೊರಬಂದ ನಿಮ್ಮನ್ನು ನೋಡುತ್ತಿದ್ದೇನೆ. ಇದು ಬಹಳ ಅದ್ಭುತವಾದುದು ಎಂದು ತಿಳಿಯುತ್ತೇನೆ.

ನೈತಸ್ಯ ಕರ್ತಾ ಲೋಕೇಽಸ್ಮಿನ್ ಪುಮಾನ್ ಭಾರತ ವಿದ್ಯತೇ ।
ಯತ್ಕೃತಂ ತೇ ಮಹಾರಾಜ ಸಹ ಭ್ರಾತೃಭಿರಾಹವೇ ॥೧೫॥

ಎಲೈ ಭಾರತನೇ, ಮಹಾರಾಜನೇ, ನೀನು ತಮ್ಮಂದಿರ ಜೊತೆಯಲ್ಲಿ ಯುದ್ಧದಲ್ಲಿ ಏನನ್ನು ಮಾಡಿದೆಯೋ ಆ ಕಾರ್ಯವನ್ನು ಮಾಡುವವರು ಈ ಲೋಕದಲ್ಲಿ ಇನ್ನೊಬ್ಬರಿಲ್ಲ.

ವೈಶಂಪಾಯನಃ

ಏವಮುಕ್ತಸ್ತು ಕರ್ಣೇನ ರಾಜಾ ದುರ್ಯೋಧನಸ್ತದಾ ।
ಉವಾಚ ಚಾಂಗರಾಜಾನಂ ಬಾಷ್ಪಗದ್ಗದಯಾ ಗಿರಾ ॥೧೬॥

ವೈಶಂಪಾಯನ– ಕರ್ಣನಿಂದ ಹೀಗೆ ಹೇಳಲ್ಪಟ್ಟ ದುರ್ಯೋಧನನು ಆಗ ಅಂಗರಾಜನನ್ನು ಕುರಿತು ಬಾಷ್ಪಪೂರಿತ ಮಾತುಗಳಿಂದ ಹೀಗೆ ಹೇಳಿದನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂಸಂಹಿತಾಯಾಂ ವನಪರ್ವಣಿ
ಷಟ್‌ತ್ರಿಂಶಾಧಿಕದ್ವಿಶತತಮೋಽಧ್ಯಾಯಃ ॥
॥ ಇತಿ ಪ್ರಾಯೋಪವೇಶನಪರ್ವಣಿ ಕರ್ಣದುರ್ಯೋಧನಸಂವಾದೋನಾಮ
ಪ್ರಥಮೋಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವನಪರ್ವದಲ್ಲಿ ಇನ್ನೂರ ಮೂವತ್ತಾರನೆಯ ಅಧ್ಯಾಯ ಮುಗಿಯಿತು.

★ ★ ★ ★

ಇನ್ನೂರ ಮೂವತ್ತೇಳನೆಯ ಅಧ್ಯಾಯ

ದುರ್ಯೋಧನನಿಂದ ಕರ್ಣನನ್ನು ಕುರಿತು ತನ್ನ ಪರಾಜಯದ ವೃತ್ತಾಂತ ಕಥನ.

ದುರ್ಯೋಧನಃ

ಅಜಾನತಸ್ತೇ ರಾಧೇಯ ನಾಭ್ಯಸೂಯಾಮ್ಯಹಂ ವಚಃ ।
ಜಾನಾಸಿ ತ್ವಂ ಜಿತಾನ್ ಶತ್ರೂನ್ ಗಂಧರ್ವಾಂಸ್ತೇಜಸಾ ಮಯಾ ॥೧॥

ದುರ್ಯೋಧನ– ರಾಧೇಯನೇ, ತಿಳಿಯದೆ ಮಾತನಾಡುತ್ತಿರುವ ನಿನ್ನ ಮಾತುಗಳಿಂದ ನಾನು ಕೋಪಗೊಳ್ಳುವುದಿಲ್ಲ. ನಾನು ಗಂಧರ್ವರನ್ನು ನನ್ನ ಪರಾಕ್ರಮದಿಂದ ಜಯಿಸಿದ್ದೇನೆಂದು ನೀನು ತಿಳಿದಿದ್ದೀಯೆ.

ಆಯೋಧಿತಾಸ್ತು ಗಂಧರ್ವಾಃ ಸುಚಿರಂ ಸೋದರೈರ್ಮಮ ।
ಮಯಾ ಸಹ ಮಹಾಬಾಹೋ ಕೃತಶ್ಚೋಭಯತಃ ಕ್ಷಯಃ ॥೨॥

ಎಲೈ ಮಹಾಬಾಹುವೇ, ನಾನು ಮತ್ತು ನನ್ನ ತಮ್ಮಂದಿರು ಬಹಳ ಸಮಯದವರೆಗೆ ಗಂಧರ್ವರ ಜೊತೆಯಲ್ಲಿ ಯುದ್ಧಮಾಡಿದೆವು. ಎರಡುಪಕ್ಷಗಳಲ್ಲಿಯೂ ಹಾನಿಯುಂಟಾಯಿತು.

ಮಾಯಾಧಿಕಾಸ್ತ್ವಯುಧ್ಯಂತ ಯದಾ ಶೂರಾ ವಿಯದ್ಗತಾಃ ।
ತದಾ ನೋ ನ ಸಮಂ ಯುದ್ಧಮಭವತ್ ಖೇಚರೈಃ ಸಹ ॥೩॥

ಆದರೆ ಅಧಿಕ ಮಾಯಾಶಕ್ತಿಯನ್ನು ಪಡೆದ ಗಂಧರ್ವ ಶೂರರು ಯಾವಾಗ ಆಕಾಶದಲ್ಲಿನಿಂತು ಯುದ್ಧವನ್ನು ಮಾಡಲು ಪ್ರಾರಂಭಿಸಿದರೋ ಆಗ ನಮಗೂ ಮತ್ತು ಖೇಚರರಾದ ಅವರಿಗೂ ಯುದ್ಧವು ಸಮವಾಗಲಿಲ್ಲ.

ಅಸಮರ್ಥಾಸ್ತತಸ್ತಾಂಸ್ತು ಪ್ರತಿಯೋದ್ಧುಂ ವಿಯದ್ಗತಾನ್ ।
ಪರಾಜಯಂ ಚ ಪ್ರಾಪ್ತಾಃ ಸ್ಮೋ ರಣೇ ಬಂಧನಮೇವ ಚ ।
ಸಭೃತ್ಯಾಮಾತ್ಯಪುತ್ರಾಶ್ಚ ಸದಾರಬಲವಾಹನಾಃ ।
ಉಚ್ಚೈರಾಕಾಶಮಾರ್ಗೇಣ ಹ್ರಿಯಾಮಸ್ಸೈಃ ಸುದುಃಖಿತಾಃ ॥೪॥

ಆಕಾಶದಿಂದ ಯುದ್ಧ ಮಾಡುವ ಅವರ ಜೊತೆಯಲ್ಲಿ ಪ್ರತಿಯಾಗಿ ಯುದ್ಧಮಾಡಲು ಸಮರ್ಥರಾಗದೆ ನಾವು ಯುದ್ಧದಲ್ಲಿ ಪರಾಜಯವನ್ನೂ ಮತ್ತು ಬಂಧನವನ್ನೂ ಪಡೆದೆವು. ಭೃತ್ಯರು, ಅಮಾತ್ಯರು, ಪುತ್ರರು, ಪತ್ನಿಯರು, ಸೈನ್ಯ ಮತ್ತು ವಾಹನಗಳು ಇವುಗಳ ಜೊತೆಯಲ್ಲಿ ನಾವು ಆಕಾಶಮಾರ್ಗದಲ್ಲಿ ಅವರಿಂದ ಒಯ್ಯಲ್ಪಟ್ಟವರಾಗಿ ಬಹಳ ದುಃಖಿತರಾದೆವು.

ಅಥ ನಃ ಸೈನಿಕಾಃ ಕೇಚಿದಮಾತ್ಯಾಶ್ಚ ಮಹಾರಥಾನ್ ।
ಉಪಗಮ್ಯಾಬ್ರುವನ್ ದೀನಾಃ ಪಾಂಡವಾಂಛರಣಪ್ರದಾನ್ ॥೫॥

ಆಗ ನಮ್ಮಲ್ಲಿ ಕೆಲವು ಸೈನಿಕರು ಮತ್ತು ಅಮಾತ್ಯರು ಮಹಾರಥರಾದ ಅಭಯಪ್ರದರಾದ ಪಾಂಡವರನ್ನು ದೀನರಾಗಿ ಸಮೀಪಿಸಿ ಮಾತನಾಡಿದರು.

ಏಷ ದುರ್ಯೋಧನೋ ರಾಜಾ ಧಾರ್ತರಾಷ್ಟ್ರಃ ಸಹಾನುಜಃ ।
ಸಾಮಾತ್ಯದಾರೋ ಹ್ರಿಯತೇ ಗಂಧರ್ವೈರ್ದಿವಮಾಸ್ಥಿತೈಃ ॥೬॥

ಧೃತರಾಷ್ಟ್ರ ಪುತ್ರನಾದ ದುರ್ಯೋಧನನು ಅಮಾತ್ಯರು, ಪತ್ನಿಯರು ಮತ್ತು ತಮ್ಮಂದಿರ ಜೊತೆಯಲ್ಲಿ ಗಂಧರ್ವರಿಂದ ಆಕಾಶಮಾರ್ಗವನ್ನು ಆಶ್ರಯಿಸಿದ ಗಂಧರ್ವರಿಂದ ಕರೆದೊಯ್ಯಲ್ಪಡುತ್ತಿದ್ದಾನೆ.

ತಂ ಮೋಕ್ಷಯತ ಭದ್ರಂ ವಃ ಸಹದಾರಂ ನರಾಧಿಪಮ್ ।
ಪರಾಮರ್ಶೋ ಮಾ ಭವತಾಂ ಕುರುದಾರೇಷು ಸರ್ವಶಃ ॥೭॥

ನಿಮಗೆ ಮಂಗಳವಾಗಲಿ. ಪತ್ನಿಯರ ಜೊತೆಯಲ್ಲಿ ರಾಜನನ್ನು ವಿಮೋಚನೆಗೊಳಿಸಿ. ಕುರುರಾಜಪತ್ನಿಯರ ಮೇಲೆ ಎಲ್ಲರೂ ಹಸ್ತಕ್ಷೇಪವನ್ನು ಮಾಡುವುದು ಬೇಡ.

ಏವಮುಕ್ತೇ ತು ಧರ್ಮಾತ್ಮಾ ಜ್ಯೇಷ್ಠಃ ಪಾಂಡುಸುತಸ್ತದಾ ।
ಪ್ರಸಾದ್ಯ ಸೋದರಾನ್ ಸರ್ವಾನಾಜ್ಞಾಪಯತ ಮೋಕ್ಷಣೇ ॥೮॥

ಹೀಗೆ ಹೇಳಲ್ಪಟ್ಟ ಪಾಂಡುಪುತ್ರರಲ್ಲಿ ಜ್ಯೇಷ್ಠನಾದ ಯುಧಿಷ್ಠಿರನು ಆಗ ತಮ್ಮಂದಿರನ್ನು ಒಲಿಸಿ ಅವರನ್ನು ವಿಮೋಚನೆಗೊಳಿಸುವಂತೆ ಆಜ್ಞಾಪಿಸಿದನು.

ಅಥಾಗಮ್ಯ ತದುದ್ದೇಶಂ ಪಾಂಡವಾಃ ಪುರುಷರ್ಷಭಾಃ ।
ಸಾಂತ್ವಪೂರ್ವಮಯಾಚಂತ ಶಕ್ತಾಃ ಸರ್ವೇ ಮಹಾರಥಾಃ ॥೯॥

ಅನಂತರ ಪುರುಷರ್ಷಭರಾದ ಪಾಂಡವರು ಆ ಪ್ರದೇಶಕ್ಕೆ ಬಂದು ಮಹಾರಥರಾದ ಅವರು ಶಕ್ತರಾದರೂ ಗಂಧರ್ವರನ್ನು ವಿಮೋಚನೆಗೊಳಿಸುವಂತೆ ಶಾಂತಿಸಮಾಧಾನಗಳಿಂದ ಬೇಡಿದರು.

ಯದಾ ಚಾಸ್ಮಾನ್ ನ ಮುಮುಚುರ್ಗಂಧರ್ವಾಃ ಸಾಂತ್ವಿತಾ ಅಪಿ ।
ಆಕಾಶಚಾರಿಣೋ ವೀರಾ ನದಂತೋ ಜಲದಾ ಇವ ॥೧೦॥

ತತೋಽರ್ಜುನಶ್ಚ ಭೀಮಶ್ಚ ಯಮಜೌ ಚ ಬಲೋತ್ಕಟೌ ।
ಮುಮುಚುಃ ಶರವರ್ಷಾಣಿ ಗಂಧರ್ವಾನ್ ಪ್ರತ್ಯನೇಕಶಃ ॥೧೧॥

ಯಾವಾಗ ಸಮಾಧಾನದ ಮಾತುಗಳನ್ನು ಹೇಳಿದರೂ ಆಕಾಶಚರರಾದ ಆ ವೀರರಾದ ಗಂಧರ್ವರು ಮೇಘಗಳಂತೆ ಗರ್ಜಿಸುತ್ತಾ ನಮ್ಮನ್ನು ವಿಮೋಚನೆಗೊಳಿಸಲಿಲ್ಲವೋ ಆಗ ಬಲೋತ್ಕಟರಾದ ಅರ್ಜುನ, ಭೀಮ ಮತ್ತು ನಕುಲಸಹದೇವರು ಗಂಧರ್ವರ ಮೇಲೆ ಅನೇಕ ಬಾರಿ ಬಾಣವರ್ಷಗಳನ್ನು ಮಾಡಿದರು.

ಅಥ ಸರ್ವೇ ರಣಂ ಮುಕ್ತ್ವಾ ಪ್ರಯಾತಾಃ ಖೇಚರಾ ದಿವಮ್ ।
ಅಸ್ಮಾನೇವಾಭಿಕರ್ಷಂತೋ ದೀನಾನ್ ಮುದಿತಾಮಾನಸಾಃ ॥೧೨॥

ಅನಂತರ ಆ ಸಂತೋಷಗೊಂಡ ಮನಸ್ಸುಳ್ಳ ಖೇಚರರೆಲ್ಲರೂ ರಣವನ್ನು ಬಿಟ್ಟು ಆಕಾಶವನ್ನು ಏರಿ ದೀನರಾದ ನಮ್ಮನ್ನು ಎಳೆಯುತ್ತಾ ಹೊರಟರು.

ತತಃ ಸಮಂತಾತ್ ಪಶ್ಯಾಮಃ ಶರಜಾಲೇನ ವೇಷ್ಟಿತಾಃ ।
ಅಮಾನುಷಾಣಿ ಚಾಸ್ತ್ರಾಣಿ ಪ್ರಮುಂಚಂತಂ ಧನಂಜಯಮ್ ॥೧೩॥

ಆಗ ನಾವು ಬಾಣಗಳ ಪಂಜರದಲ್ಲಿ ವೇಷ್ಟಿತರಾಗಿರುವುದನ್ನೂ ಅಮಾನುಷವಾದ ಅಸ್ತ್ರಗಳನ್ನು ಪ್ರಯೋಗಿಸುತ್ತಿರುವ ಅರ್ಜುನನನ್ನೂ ನೋಡಿದೆವು.

ಸಮಾವೃತಾ ದಿಶೋ ದೃಷ್ಟ್ವಾ ಪಾಂಡವೇನ ಶಿತೈಃ ಶರೈಃ ।
ಧನಂಜಯಸಖಾऽऽತ್ಮಾನಂ ದರ್ಶಯಾಮಾಸ ವೈ ತದಾ ॥೧೪॥

ಪಾಂಡವನಾದ ಅರ್ಜುನನಿಂದ ಬಾಣಗಳಿಂದ ಎಲ್ಲಾ ದಿಕ್ಕುಗಳೂ ಆವೃತವಾದುದನ್ನು ನೋಡಿದ ಅರ್ಜುನನ ಸ್ನೇಹಿತನಾದ ಚಿತ್ರಸೇನನು ಆಗ ತನ್ನನ್ನು ತಾನು ತೋರಿಸಿಕೊಂಡನು.

ಚಿತ್ರಸೇನಃ ಪಾಂಡವೇನ ಸಮಾಶ್ಲಿಷ್ಯ ಪರಸ್ಪರಮ್ ।
ಕುಶಲಂ ಪರಿಪಪ್ರಚ್ಛ ತೈಃ ಪೃಷ್ಟಶ್ಚಾಪ್ಯನಾಮಯಮ್ ॥೧೫॥

ಚಿತ್ರಸೇನನು ಅರ್ಜುನನಿಂದ ಮತ್ತು ಪರಸ್ಪರವಾಗಿ ಆಲಿಂಗನ ಹೊಂದಿ ಅರ್ಜುನನ ಕುಶಲಪ್ರಶ್ನೆಯನ್ನು ಮಾಡಿದನು. ಪಾಂಡವರೂ ಸಹ ಚಿತ್ರಸೇನನ ಕುಶಲ ಪ್ರಶ್ನೆಯನ್ನು ಮಾಡಿದರು.

ತೇ ಸಮೇತ್ಯ ತಥಾನ್ಯೋನ್ಯಂ ಸದಾರಾನ್ ವಿಪ್ರಮೋಚ್ಯ ಚ ।
ಏಕೀಭೂತಾಸ್ತತೋ ವೀರಾ ಗಂಧರ್ವಾಃ ಪಾಂಡವೈಃ ಸಹ ॥೧೬॥

ಹೀಗೆ ಅವರು ಅನ್ಯೋನ್ಯವಾಗಿ ವರ್ತಿಸಿ ನಮ್ಮ ಪತ್ನಿಯರನ್ನೂ, ನಮ್ಮನ್ನೂ ವಿಮೋಚನೆಗೊಳಿಸಿ ಅನಂತರ ಆ ವೀರರಾದ ಗಂಧರ್ವರು ಪಾಂಡವರ ಜೊತೆಯಲ್ಲಿ ಒಂದಾದರು.

ಅಪೂಜಯೇತಾಮನ್ಯೋನ್ಯಂ ಚಿತ್ರಸೇನಧನಂಜಯೌ ।
ಪರಸ್ಪರಂ ಸಮಾಗಮ್ಯ ಪ್ರೀತ್ಯಾ ಪರಮಯಾ ಯುತಾಃ ॥೧೭॥

ಚಿತ್ರಸೇನ ಮತ್ತು ಅರ್ಜುನರು ಪರಸ್ಪರ ಸಮಾಗಮವನ್ನು ಹೊಂದಿ ಶ್ರೇಷ್ಠವಾದ ಸಂತೋಷದಿಂದ ಕೂಡಿದವರಾಗಿ ಪರಸ್ಪರವಾಗಿ ಸತ್ಕಾರವನ್ನು ಮಾಡಿದರು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂಸಂಹಿತಾಯಾಂ ವೈಯಾಸಿಕ್ಯಾಂ
ವನಪರ್ವಣಿ ಸಪ್ತತ್ರಿಂಶಾಧಿಕದ್ವಿಶತತಮೋಽಧ್ಯಾಯಃ ॥
॥ ಇತಿ ಪ್ರಾಯೋಪವೇಶನಪರ್ವಣಿ ದುರ್ಯೋಧನವಾಕ್ಯಂನಾಮ
ದ್ವಿತೀಯೋಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವನಪರ್ವದಲ್ಲಿ ಇನ್ನೂರ ಮೂವತ್ತೇಳನೆಯ ಅಧ್ಯಾಯ ಮುಗಿಯಿತು.

★ ★ ★ ★

ಇನ್ನೂರ ಮೂವತ್ತೆಂಟನೆಯ ಅಧ್ಯಾಯ

ದುರ್ಯೋಧನನಿಂದ ಕರ್ಣನನ್ನು ಕುರಿತು ತನ್ನ ದುರವಸ್ಥೆಯ ಕಥನ. ದುಃಶಾಸನನನ್ನು ರಾಜ್ಯದಲ್ಲಿ ಅಭಿಷೇಕ ಮಾಡುವಂತೆ ಸೂಚನೆ. ದುಃಶಾಸನನ ಪರಿದೇವನೆ ಮತ್ತು ಕರ್ಣನ ಸಮಾಧಾನ ವಚನಗಳು.

ದುರ್ಯೋಧನಃ

ಚಿತ್ರಸೇನಂ ಸಮಾಗಮ್ಯ ಪ್ರಹಸನ್ನರ್ಜುನಸ್ತದಾ ।
ಇದಂ ವಚನಮಕ್ಲೀಬಮಬ್ರವೀತ್ ಪರವೀರಹಾ ॥೧॥

ದುರ್ಯೋಧನ– ಪರಶತ್ರುನಿಷೂದನನಾದ ಅರ್ಜುನನು ಚಿತ್ರಸೇನನನ್ನು ಸಂಧಿಸಿ ಈ ಪೌರುಷಯುಕ್ತವಾದ ಮಾತುಗಳನ್ನು ಆಡಿದನು.

ಭ್ರಾತ್಄ನರ್ಹಸಿ ಮೇ ವೀರ ಮೋಕ್ತುಂ ಗಂಧರ್ವಸತ್ತಮ ।
ಅನರ್ಹಧರ್ಷಣಾ ಹೀಮೇ ಜೀವಮಾನೇಷು ಪಾಂಡುಷು ॥೨॥

ಎಲೈ ಗಂಧರ್ವಶ್ರೇಷ್ಠನೇ, ವೀರನೇ, ನನ್ನ ಸಹೋದರರನ್ನು ನೀನು ಬಿಡಬೇಕು. ಪಾಂಡವರು ಬದುಕಿರುವಾಗ ಇವರು ಈ ಅವಮಾನಕ್ಕೆ ಅರ್ಹರಲ್ಲ.

ದುರ್ಯೋಧನಃ

ಏವಮುಕ್ತಸ್ತು ಗಂಧರ್ವಃ ಪಾಂಡವೇನ ಮಹಾತ್ಮನಾ ।
ಉವಾಚ ಯತ್‌ಕರ್ಣ ವಯಂ ಮಂತ್ರಯಂತೋ ವಿನಿರ್ಗತಾಃ ॥೩॥

ಎಲೈ ಕರ್ಣನೇ, ಮಹಾತ್ಮನಾದ ಪಾಂಡವನಿಂದ ಹೀಗೆ ಹೇಳಲ್ಪಟ್ಟ ಗಂಧರ್ವನು ನಾವು ಮಂತ್ರಾಲೋಚನೆ ಮಾಡಿ ಹೊರಡುವಾಗ ಏನು ಮಾತನಾಡಿದೆವೋ ಅದನ್ನು ಹೇಳಿದನು.

ದ್ರಷ್ಟಾರಃ ಸ್ಮ ಸುಖಾದ್ದೀನಾನ್ ಸದಾರಾನ್ ಪಾಂಡವಾನಿತಿ ।
ಸ್ಥಿತೋ ರಾಜ್ಯೇ ಚ್ಯುತಾನ್ ಸ್ಥಾನಾತ್‌ಶ್ರಿಯಾ ಹೀನಾನ್ ಶ್ರಿಯಾವೃತಾಃ ॥೪॥

ನಾವು ಸುಖದಿಂದ ಚ್ಯುತರಾದ, ಪತ್ನೀಸಹಿತರಾದ ಪಾಂಡವರನ್ನು ನೋಡುವೆವು. ರಾಜ್ಯದಲ್ಲಿ ಪ್ರತಿಷ್ಠಿತರಾದ ನಾವು ರಾಜ್ಯದಿಂದ ಚ್ಯುತರಾದ, ಸಂಪತ್ತಿನಿಂದ ಕೂಡಿರುವ

ನಾವು ಸಂಪತ್ತಿನಿಂದ ಹೀನರಾದ ಪಾಂಡವರನ್ನು ನೋಡುವೆವು (ಎಂಬ ನಮ್ಮ ಈ ಮಾತನ್ನು ಚಿತ್ರಸೇನನು ಹೇಳಿದನು).

ತಸ್ಮಿನ್ನುಚ್ಚಾರ್ಯಮಾಣೇ ತು ಗಂಧರ್ವೇಣ ವಚಸ್ತಥಾ ।
ಭೂಮಿರ್ವಿವರಮನ್ವೈಚ್ಛಂ ಪ್ರವೇಷ್ಟುಂ ವ್ರೀಡಯಾऽನ್ವಿತಃ ॥೫॥

ಗಂಧರ್ವನು ಹಾಗೆ ಮಾತನಾಡುತ್ತಿರಲು ನಾನು ಅವಮಾನದಿಂದ ಭೂಮಿಯ ಬಿಲವನ್ನು ಪ್ರವೇಶಿಸಲು ಅಪೇಕ್ಷಿಸಿದೆ.

ಯುಧಿಷ್ಠಿರಮಥಾಗಮ್ಯ ಗಂಧರ್ವಾಃ ಸಹ ಪಾಂಡವೈಃ ।
ಅಸ್ಮದ್ದುರ್ಮಂತ್ರಿತಂ ತಸ್ಮೈ ಬದ್ಧಾಂಶ್ಚಾಸ್ಮಾನ್ ನ್ಯವೇದಯನ್ ॥೬॥

ಅನಂತರ ಯುಧಿಷ್ಠಿರನು ಬಂದ ಮೇಲೆ ಪಾಂಡವರಿಂದ ಸಹಿತರಾದ ಗಂಧರ್ವರು ನಮ್ಮ ದುರ್ಮಂತ್ರಣವನ್ನೂ, ನಾವು ಬದ್ಧರಾದ ವಿಷಯವನ್ನೂ ಅವನಿಗೆ ತಿಳಿಸಿದರು.

ಸ್ತ್ರೀಸಮಕ್ಷಮಹಂ ದೀನೋ ಬದ್ಧಃ ಶತ್ರುವಶಂ ಗತಃ ।
ಯುಧಿಷ್ಠಿರಃಸ್ಯೋಪಹೃತಃ ಕಿಂ ನು ದುಃಖಮತಃ ಪರಮ್ ॥೭॥

ನಾನು ಸ್ತ್ರೀಯರ ಎದುರಿನಲ್ಲಿ ಬದ್ಧನಾಗಿ, ದೀನನಾಗಿ, ಶತ್ರುವಶನಾಗಿ ಯುಧಿಷ್ಠಿರನ ಸಮೀಪಕ್ಕೆ ಕರೆದೊಯ್ಯಲ್ಪಟ್ಟೆ. ಇದಕ್ಕಿಂತ ದುಃಖತರವಾದುದು ಯಾವುದು?

ಯೇ ಮೇ ನಿರಾಕೃತಾ ನಿತ್ಯಂ ರಿಪುರ್ಯೇಷಾಮಹಂ ಸದಾ ।
ತೈರ್ಮೋಕ್ಷಿತೋऽಹಂ ದುರ್ಬುದ್ಧಿಸ್ತೈರ್ದತ್ತಂ ಜೀವಿತಂ ಚ ಮೇ ॥೮॥

ನಾನು ಯಾರನ್ನು ನಿರಾಕರಿಸಿದ್ದೇನೆಯೋ ಮತ್ತು ಯಾರಿಗೆ ನಾನು ನಿತ್ಯವೂ ಶತ್ರುವೋ ಅಂತಹ ದುರ್ಬುದ್ಧಿಯುಳ್ಳ ನಾನು ಅವರಿಂದ ಮೋಚನೆಗೊಳಿಸಲ್ಪಟ್ಟೆ ಮತ್ತು ಜೀವಿತವನ್ನೂ ಪಡೆದೆ.

ಪ್ರಾಪ್ತಃ ಸ್ಯಾಂ ಯದ್ಯಹಂ ವೀರ ವಧಂ ತಸ್ಮಿನ್ ಮಹಾರಣೇ ।
ಶ್ರೇಯಸ್ತದ್ ಭವಿತಾ ಮಹ್ಯಂ ನೈವಂಭೂತಸ್ಯ ಜೀವಿತಮ್ ॥೯॥

ಎಲೈ ವೀರನೇ, ಆ ಮಹಾಯುದ್ಧದಲ್ಲಿ ನಾನು ಮರಣವನ್ನು ಹೊಂದಿದ್ದರೆ ಅದು ನನಗೆ ಶ್ರೇಯಸ್ಕರವಾಗುತ್ತಿತ್ತು. ಈ ರೀತಿಯಲ್ಲಿ ಬದುಕಿರುವುದು ಶ್ರೇಯಸ್ಕರವಲ್ಲ.

ಅಭೂದ್ಯಶಃ ಪೃಥಿವ್ಯಾಂ ಮೇ ಖ್ಯಾತಂ ಗಂಧರ್ವತೋ ವಧಾತ್ ।
ಪ್ರಾಪ್ತಶ್ಚ ಪುಣ್ಯಲೋಕಾಃ ಸ್ಯುರ್ಮಹೇಂದ್ರಸದನೇಽಕ್ಷಯಾಃ ॥೧೦॥

ನಾನು ಗಂಧರ್ವರಿಂದ ಮರಣವನ್ನು ಹೊಂದಿದ್ದರೆ ನನಗೆ ಭೂಮಿಯಲ್ಲಿ ಒಳ್ಳೆಯ ಕೀರ್ತಿಯೂ ಬಂದಿರುತ್ತಿತ್ತು. ನಾನು ಇಂದ್ರಸದನದಲ್ಲಿ ಪ್ರಕಾಶಮಾನವಾದ ಪುಣ್ಯಲೋಕಗಳನ್ನೂ ಸಂಪಾದಿಸಿರುತ್ತಿದ್ದೆ.

ಯತ್ತ್ವದ್ಯ ಮೇ ವ್ಯವಸಿತಂ ತತ್ಶ್ರುಣುಧ್ವಂ ನರರ್ಷಭಾಃ ॥೧೧॥

ಇಹ ಪ್ರಾಯಮುಪಾಸಿಷ್ಯೇ ಯೂಯಂ ವ್ರಜತ ವೈ ಗೃಹಾನ್ ।
ಭ್ರಾತರಶ್ಚೈವ ಮೇ ಸರ್ವೇ ಪ್ರಯಾಂತ್ವದ್ಯ ಪುರಂ ಪ್ರತಿ ॥೧೨॥

ಎಲೈ ನರಶ್ರೇಷ್ಠರೇ, ಈ ದಿನದ ನನ್ನ ನಿಶ್ಚಯವನ್ನು ಕೇಳಿ. ನಾನು ಇಲ್ಲಿ ಪ್ರಾಯೋಪವೇಶಕ್ಕೆ ಕುಳಿತುಕೊಳ್ಳುವೆನು. ನೀವು ಮನೆಗಳಿಗೆ ಹಿಂದಿರುಗಿ. ನನ್ನ ತಮ್ಮಂದಿರೆಲ್ಲರೂ ಈ ದಿನ ತಮ್ಮ ನಗರಕ್ಕೆ ಹಿಂದಿರುಗಲಿ.

ನ ಹ್ಯಹಂ ಸಂಪ್ರಯಾಸ್ಯಾಮಿ ಪುರಂ ಶತ್ರುನಿರಾಕೃತಃ ।
ಶತ್ರುಮಾನಾಪಹೋ ಭೂತ್ವಾ ಸುಹೃದಾಂ ಮಾನಕೃತ್ ತಥಾ ॥೧೩॥

ಶತ್ರುಗಳ ಮಾನವನ್ನು ನಾಶಮಾಡುತ್ತಿದ್ದ ಮತ್ತು ಸುಹೃದರಿಗೆ ಮಾನವನ್ನು ಉಂಟುಮಾಡುತ್ತಿದ್ದ ನಾನು ಶತ್ರುಗಳ ಕೈಯಿಂದ ಮಾನವನ್ನು ಕಳೆದುಕೊಂಡು ಪಟ್ಟಣವನ್ನು ಪ್ರವೇಶಿಸುವುದಿಲ್ಲ.

ಕಾರಣೈಃರಸಮ್ಯಗಭಿಹಿತಃ ಶತ್ರುಭಿರ್ವೈ ವಿಮಾನಿತಃ ।
ಸ ಸುಹೃಚ್ಛೋಕದೋ ಭೂತ್ವಾ ಶತ್ರೂಣಾಂ ಹರ್ಷವರ್ಧನಃ ॥೧೪॥

ಸರಿಯಾದ ಕಾರಣಗಳನ್ನು ಹೇಳಿ ಶತ್ರುಗಳಿಂದ ಅವಮಾನಿತನಾದ ನಾನು ಶತ್ರುಗಳಿಗೆ ಸಂತೋಷ ಉಂಟುಮಾಡುತ್ತಾ, ಸುಹೃದರಿಗೆ ಶೋಕವನ್ನು ಉಂಟುಮಾಡುತ್ತಾ ಪಟ್ಟಣವನ್ನು ಪ್ರವೇಶಿಸುವುದಿಲ್ಲ.

ವಾರಣಾಹ್ವಯಮಾಸಾದ್ಯ ಕಿಂ ವಕ್ಷ್ಯಾಮಿ ಜನಾಧಿಪಮ್ ॥೧೫॥

ಭೀಷ್ಮದ್ರೋಣೌ ಕೃಪದ್ರೌಣೇ ವಿದುರಃ ಸಂಜಯಸ್ತಥಾ ।
ಬಾಹ್ಲೀಕಃ ಸೌಮದತ್ತಿಶ್ಚ ಯೇ ಚಾನ್ಯೇ ವೃದ್ಧಸಮ್ಮತಾಃ ॥೧೬॥

ಭೀಷ್ಮ-ದ್ರೋಣರು, ಕೃಪ-ಅಶ್ವತ್ಥಾಮರು, ವಿದುರ-ಸಂಜಯ, ಬಾಹ್ಲೀಕ, ಸೌಮದತ್ತಿ ಮತ್ತು ಉಳಿದ ವೃದ್ಧಸಮ್ಮತರಾದವರು ಇವರಿಗೆ ಮತ್ತು ಧೃತರಾಷ್ಟ್ರನಿಗೆ ನಾನು ಹಸ್ತಿನಾವತಿಗೆ ಹೋಗಿ ಏನು ಹೇಳಲಿ?

ಬ್ರಾಹ್ಮಣಾಃ ಶ್ರೇಣಿಮುಖ್ಯಾಶ್ಚ ತಥೋದಾಸೀನವೃತ್ತಯಃ ।
ಕಿಂ ಮಾಂ ವಕ್ಷ್ಯಂತಿ ಕಿಂ ಚಾಪಿ ಪ್ರತಿವಕ್ಷ್ಯಾಮಿ ತಾನಹಮ್ ॥೧೭॥

ಬ್ರಾಹ್ಮಣರು, ಅಂಗರಕ್ಷಕರು, ಇನ್ನೂ ಉದಾಸೀನರಾದ ಕೆಲವರು ನನ್ನ ವಿಷಯದಲ್ಲಿ ಏನು ಹೇಳುವರು? ಅವರಿಗಾದರೂ ನಾನು ಏನು ಉತ್ತರವನ್ನು ಕೊಡಲಿ?

ರಿಪೂಣಾಂ ಶಿರಸಿ ಸ್ಥಿತ್ವಾ ತಥಾ ವಿಕ್ರಮ್ಯ ಚೋರಸಿ ।
ಆತ್ಮದೋಷಾತ್ ಪರಿಭ್ರಷ್ಟಃ ಕಥಂ ವಕ್ಷ್ಯಾಮಿ ತಾನಹಮ್ ॥೧೮॥

ಶತ್ರುಗಳ ತಲೆಯ ಮೇಲೆ ಕಾಲಿಟ್ಟು, ಅವರ ಎದೆಯ ಮೇಲೆ ನಿಂತ ನಾನು ಈಗ ನನ್ನ ದೋಷದಿಂದ ಪರಿಭ್ರಷ್ಟನಾಗಿ ಅವರ ಜೊತೆಯಲ್ಲಿ ನಾನು ಹೇಗೆ ಮಾತನಾಡಲಿ?

ದುರ್ವಿನೀತಾಃ ಶ್ರಿಯಂ ಪ್ರಾಪ್ಯ ವಿದ್ಯಾಮೈಶ್ವರ್ಯಮೇವ ಚ ।
ತಿಷ್ಠಂತಿ ನ ಚಿರಂ ಭದ್ರೇ ಯಥಾಽಹಂ ಮದಗರ್ವಿತಃ ॥೧೯॥

ದುರ್ವಿನೀತರಾದವರು ಸಂಪತ್ತನ್ನೂ, ವಿದ್ಯೆಯನ್ನೂ, ಐಶ್ವರ್ಯವನ್ನೂ ಪಡೆದು ಮದಗರ್ವಿತರಾಗಿ ನನ್ನಂತೆ ಬಹಳ ಕಾಲ ಮಂಗಲಕರವಾದ ಸ್ಥಿತಿಯಲ್ಲಿ ಇರುವುದಿಲ್ಲ.

ಅಹೋ ನಾರ್ಹಮಿದಂ ಕರ್ಮ ಕಷ್ಟಂ ದುಶ್ಚರಿತಂ ಕೃತಮ್ ।
ಸ್ವಯಂ ದುರ್ಬುದ್ಧಿನಾ ಮೋಹಾದ್ ಯೇನ ಪ್ರಾಪ್ತೋಽಸ್ಮಿ ಸಂಶಯಮ್

ಆದ್ದರಿಂದ ಇಂತಹ ಕಾರ್ಯವನ್ನು ಮಾಡಿರುವ ನಾನು ಸರಿಯಾಗಲಿಲ್ಲ. ನಾನು ಕಷ್ಟಕರವಾದ, ದುಷ್ಕಾರ್ಯವನ್ನು ಮಾಡಿದ್ದೇನೆ. ದುರ್ಬುದ್ಧಿಯುಳ್ಳ ನಾನು ಮೋಹದಿಂದ ಇಂತಹ ಸಂಕಟವನ್ನು ಹೊಂದಿದ್ದೇನೆ.

ತಸ್ಮಾತ್ ಪ್ರಾಯಮುಪಾಸಿಷ್ಯೇ ನ ಹಿ ಶಕ್ಷ್ಯಾಮಿ ಜೀವಿತುಮ್ ।
ಚೇತಯಾನೋ ಹಿ ಕೋ ಜೀವೇತ್ ಕೃಚ್ಛ್ರಾಚ್ಛತ್ರುಭಿರುದ್ಧೃತಃ ॥೨೧॥

ಆದ್ದರಿಂದ ನಾನು ಪ್ರಾಯೋಪವೇಶಕ್ಕೆ ಕುಳಿತುಕೊಳ್ಳುತ್ತೇನೆ. ನಾನು ಹೀಗೆ ಜೀವಿಸಲಾರೆ. ಶತ್ರುಗಳಿಂದ ನಿರಾಕೃತನಾದ ಯಾವನು ತಾನೇ ಚೇತನನು ಜೀವಿಸಲು ಸಾಧ್ಯ ?

ಶತ್ರುಭಿಶ್ಚಾಪಹಸಿತೋ ಮಾನೀ ಪೌರುಷವರ್ಜಿತಃ ।
ಪಾಂಡವೈರ್ವಿಕ್ರಮಾಢ್ಯೈರ್ಹೃಸಾವಮಾನಮವೇಕ್ಷಿತಃ ॥೨೨॥

ಶತ್ರುಗಳಿಂದ ಅಪಹಾಸಕ್ಕೆ ಈಡಾಗಿದ್ದೇನೆ. ಆತ್ಮಾಭಿಮಾನವುಳ್ಳ ನಾನು ಪೌರುಷವರ್ಜಿತನಾಗಿ ವಿಕ್ರಮಶಾಲಿಗಳಾದ ಪಾಂಡವರಿಂದ ಅವಮಾನ ಪೂರ್ವಕವಾಗಿ ನೋಡಲ್ಪಟ್ಟಿದ್ದೇನೆ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂಸಂಹಿತಾಯಾಂ ವೈಯಾಸಿಕ್ಯಾಂ ವನಪರ್ವಣಿ ಅಷ್ಟತ್ರಿಂಶಾಧಿಕದ್ವಿಶತತಮೋऽಧ್ಯಾಯಃ ॥
॥ ಇತಿ ಪ್ರಾಯೋವಶೇನಪರ್ವಣಿ ದುರ್ಯೋಧನ ಪ್ರಾಯೋಪವೇಶ ನಿಶ್ಚಯೋನಾಮ ತೃತೀಯೋಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವನಪರ್ವದಲ್ಲಿ ಇನ್ನೂರ ಮೂವತ್ತೆಂಟನೆಯ ಅಧ್ಯಾಯ ಮುಗಿಯಿತು.

★ ★ ★ ★

ಇನ್ನೂರ ಮೂವತ್ತೊಂಬತ್ತನೆಯ ಅಧ್ಯಾಯ

ದುರ್ಯೋಧನನಿಂದ ದುಃಶಾಸನನಿಗೆ ರಾಜ್ಯಪಾಲನೆಯ ವಿಧಾನ ಮತ್ತು ಕರ್ಣನ ಸಮಾಧಾನೋಕ್ತಿ.

ವೈಶಂಪಾಯನಃ

ಏವಂ ಚಿಂತಾಪರೋ ರಾಜಾ ದುಃಶಾಸನಮಥಾಬ್ರವೀತ್ ।
ದುಃಶಾಸನ ನಿಬೋಧೇದಂ ವಚನಂ ಮಮ ಭಾರತ ।
ಪ್ರತೀಚ್ಛ ತ್ವಂ ಮಯಾ ದತ್ತಮಭಿಷೇಕಂ ನೃಪೋ ಭವ ॥೧॥

ವೈಶಂಪಾಯನ– ಹೀಗೆ ಚಿಂತಾಪರನಾದ ರಾಜನು ದುಃಶಾಸನನನ್ನು ಕುರಿತು ಭಾರತನೇ, ನನ್ನ ಈ ಮಾತನ್ನು ಕೇಳು. ನಾನು ಕೊಡುವ ರಾಜ್ಯಾಭಿಷೇಕವನ್ನು ಸ್ವೀಕರಿಸಿ ರಾಜನಾಗು ಎಂದು ಹೇಳಿದನು.

ಪ್ರಶಾಧಿ ಪೃಥಿವೀಂ ಸ್ಫೀತಾಂ ಕರ್ಣಸೌಬಲಪಾಲಿತಾಮ್ ।
ಭ್ರಾತೄನ್ ಪಾಲಯ ವಿಸ್ರಬ್ಧಂ ಮರುತೋ ವೃತ್ರಹಾ ಯಥಾ ॥೨॥

ಕರ್ಣ-ಶಕುನಿಗಳಿಂದ ರಕ್ಷಿತವಾದ ಸಮೃದ್ಧವಾದ ಭೂಮಿಯನ್ನು ಆಳುವವನಾಗು. ಇಂದ್ರನು ಮರುತ್ತುಗಳನ್ನು ರಕ್ಷಿಸುವಂತೆ ತಮ್ಮಂದಿರನ್ನು ವಿಶ್ವಾಸದಿಂದ ರಕ್ಷಿಸು.

ಬಾಂಧವಾಶ್ಚೋಪಜೀವಂತು ದೇವಾ ಇವ ಶತಕ್ರತುಮ್ ॥೩॥

ದೇವತೆಗಳು ಇಂದ್ರನನ್ನು ಉಪಜೀವಿಸಿದಂತೆ ಬಂಧುಗಳು ನಿನ್ನನ್ನು ಉಪಜೀವಿಸಲಿ.

ಬ್ರಾಹ್ಮಣೇಷು ಸದಾ ವೃತ್ತಿಂ ಕುರ್ವೀಥಾಶ್ಚಾಪ್ರಮಾದತಃ ।
ಬಂಧೂನಾಂ ಸುಹೃದಾಂ ಚೈವ ಭವೇಥಾಸ್ತ್ವಂ ಗತಿಃ ಸದಾ ॥೪॥

ಬ್ರಾಹ್ಮಣರ ವಿಷಯದಲ್ಲಿ ಯಾವಾಗಲೂ ಎಚ್ಚರಿಕೆಯಿಂದ ಸದ್ವೃತ್ತಿಯನ್ನು ಮಾಡು. ಬಂಧುಗಳಿಗೂ ಮತ್ತು ಸುಹೃದರಿಗೂ ನೀನು ಯಾವಾಗಲೂ ಗತಿಯಾಗಿರು.

ಜ್ಞಾತೀಂಶ್ಚಾಪ್ಯನುಪಶ್ಯೇಥಾ ವಿಷ್ಣುರ್ದೇವಗಣಾನ್ ಯಥಾ ।
ಗುರವೋ ಮಾನನೀಯಾಸ್ತೇ ಗಚ್ಛ ಪಾಲಯ ಮೇದಿನೀಮ್ ॥೫॥

ವಿಷ್ಣುವು ದೇವತೆಗಳ ಸಮೂಹವನ್ನು ನೋಡಿಕೊಂಡಂತೆ ಜ್ಞಾತಿಗಳನ್ನು ನೋಡಿಕೋ. ಗುರುಗಳಿಗೆ ಗೌರವವನ್ನು ಕೊಡು. ಹೋಗಿ ಭೂಮಿಯನ್ನು ಆಳು.

ನಂದಯನ್ ಸುಹೃದಃ ಸರ್ವಾನ್‌ಶಾತ್ರವಾಂಶ್ಚೋಪತಾಪಯನ್ ।
ಕಂಠೇ ಚೈನಂ ಪರಿಷ್ವಜ್ಯ ಗಮ್ಯತಾಮಿತ್ಯಥಾಬ್ರವೀತ್ ।

ದುಃಶಾಸನನನ್ನು ಕಂಠದಲ್ಲಿ ಆಲಿಂಗಿಸಿ ಸುಹೃದರಿಗೆ ಸುಖವನ್ನೂ, ಎಲ್ಲಾ ಶತ್ರುಗಳಿಗೆ ತಾಪವನ್ನೂ ಕೊಡುವವನಾಗು, ಹೋಗು ಎಂದು ಹೇಳಿದನು.

ವೈಶಂಪಾಯನಃ

ತಸ್ಯ ತದ್ವಚನಂ ಶ್ರುತ್ವಾ ದೀನೋ ದುಃಶಾಸನೋಽಬ್ರವೀತ್ ।
ಅಶ್ರುಕಂಠಃ ಸುದುಃಖಾರ್ತಃ ಪ್ರಾಂಜಲಿಃ ಪ್ರಣಿಪತ್ಯ ಚ ॥೭॥

ಸಗದ್ಗದಮಿದಂ ವಾಕ್ಯಂ ಭ್ರಾತರಂ ಜ್ಯೇಷ್ಠಮಾತ್ಮನಃ ।
ಪ್ರಸೀದೇತ್ಯಪತದ್ ಭೂಮೌ ದೂಯಮಾನೇನ ಚೇತಸಾ ॥೮॥

ವೈಶಂಪಾಯನ– ಅವನ ಆ ಮಾತನ್ನು ಕೇಳಿದ ದುಃಶಾಸನನು ಬಹಳ ದುಃಖಾರ್ತನಾಗಿ ಅಶ್ರುಕಂಠನಾಗಿ ದೀನನಾಗಿ ಕೈಗಳನ್ನು ಮುಗಿದು ನಮಸ್ಕರಿಸಿ ಗದ್ಗದ ಕಂಠದಿಂದ ಅಣ್ಣನನ್ನು ಕುರಿತು ಪ್ರಸನ್ನನಾಗು ಎಂದು ಭೂಮಿಯಲ್ಲಿ ಬಿದ್ದು ದುಃಖಗೊಂಡ ಮನಸ್ಸಿನಿಂದ ಈ ಮಾತುಗಳನ್ನು ಆಡಿದನು.

ದುಃಖಿತಃ ಪಾದಯೋಸ್ತಸ್ಯ ನೇತ್ರಜಂ ಜಲಮುತ್ಸೃಜನ್ ।
ಉಕ್ತವಾಂಶ್ಚ ನರವ್ಯಾಘ್ರೋ ನೈತದೇವಂ ಭವಿಷ್ಯತಿ ॥೯॥

ಆ ನರವ್ಯಾಘ್ರನು ದುಃಖಿತನಾಗಿ ಅಣ್ಣನ ಕಾಲುಗಳ ಮೇಲೆ ಕಣ್ಣೀರನ್ನು ಸುರಿಸುತ್ತಾ ಇದು ಹೀಗೆ ಆಗಲು ಸಾಧ್ಯವಿಲ್ಲ ಎಂದು ಹೇಳಿದನು.

ವಿದೀರ್ಯೇತ್ ಸನಗಾ ಭೂಮಿರ್ದ್ಯೌಶ್ಚಾಪಿ ಶಕಲೀಭವೇತ್ ।
ರವಿರಾತ್ಮಪ್ರಭಾಂ ಜಹ್ಯಾತ್ ಸೋಮಃ ಶೀತಾಂಶುತಾಂ ತ್ಯಜೇತ್ ॥೧೦॥

ಪರ್ವತ ಸಹಿತವಾದ ಭೂಮಿಯು ಬಿರಿದು ಹೋದೀತು. ಆಕಾಶವು ಚೂರುಚೂರಾದೀತು. ಸೂರ್ಯನು ತನ್ನ ಪ್ರಭೆಯನ್ನು ಬಿಟ್ಟಾನು. ಚಂದ್ರನು ತನ್ನ ಶೀತಕಿರಣಗಳನ್ನು ತೊರೆದಾನು.

ವಾಯುಃ ಶೈಘ್ರ್ಯಮಥೋ ಜಹ್ಯಾದ್ಧಿಮವಾಂಶ್ಚ ಪರಿಪ್ಲವೇತ್ ।
ಶುಷ್ಯೇತ್ ತೋಯಂ ಸಮುದ್ರೇಷು ವಹ್ನಿರಪ್ಯುಷ್ಣತಾಂ ತ್ಯಜೇತ್ ॥೧೧॥

ವಾಯುವು ತನ್ನ ಶೈತ್ಯವನ್ನು ಬಿಡಬಹುದು. ಹಿಮಾಲಯ ಪರ್ವತವು ತೇಲಬಹುದು. ಸಮುದ್ರದ ನೀರು ಒಣಗಿ ಹೋಗಬಹುದು. ವಹ್ನಿಯು ಉಷ್ಣತೆಯನ್ನು ಬಿಡಬಹುದು.

ನ ಚಾಹಂ ತ್ವದೃತೇ ರಾಜನ್ ಪ್ರಶಾಸ್ಯೇಯಂ ವಸುಂಧರಾಮ್ ।
ಪುನಃ ಪುನಃ ಪ್ರಸೀದೇತಿ ವಾಕ್ಯಂ ಚೇದಮುವಾಚ ಹ ॥೧೨॥

ಆದರೆ ರಾಜನೇ, ನೀನಿಲ್ಲದೇ ನಾನು ಭೂಮಿಯನ್ನು ಆಳುವುದಿಲ್ಲ ಎಂದು ಹೇಳಿ ಪುನಃ ಪುನಃ ಪ್ರಸನ್ನನಾಗು ಎಂದು ಹೇಳಿ ಈ ಮಾತನ್ನು ಆಡಿದನು.

ತ್ವಮೇವ ನಃ ಕುಲೇ ರಾಜಾ ಭವಿಷ್ಯತಿ ಶತಂ ಸಮಾಃ ।
ಶತ್ರೂಣಾಂ ಶೋಕಕೃದ್ ರಾಜನ್ ಸುಹೃದಾಂ ಶೋಕನಾಶನಃ ॥೧೩॥

ನೀನೇ ನಮ್ಮ ಕುಲದಲ್ಲಿ ಶತ್ರುಗಳಿಗೆ ಶೋಕವನ್ನು ಉಂಟುಮಾಡುವವನೂ ಸುಹೃದರಿಗೆ ಶೋಕನಾಶನನೂ ಆಗಿ ನೂರುವರ್ಷಗಳ ಕಾಲ ರಾಜ್ಯವಾಳುವಿ.

ವೈಶಂಪಾಯನಃ

ಏವಮುಕ್ತ್ವಾ ಸ ರಾಜಾನಂ ಸುಸ್ವರಂ ಪ್ರರುರೋದ ಹ ।
ಪಾದೌ ಸಂಸ್ಪೃಶ್ಯ ಮಾನಾರ್ಹೌ ಭ್ರಾತುರ್ಜ್ಯೇಷ್ಠಸ್ಯ ಭಾರತ ॥೧೪॥

ವೈಶಂಪಾಯನ– ಎಲೈ ಭಾರತನೇ, ರಾಜನನ್ನು ಕುರಿತು ಹೀಗೆ ಹೇಳಿ ದುಃಶಾಸನನು ಮಾನಾರ್ಹವಾದ ಅಣ್ಣನ ಕಾಲುಗಳನ್ನು ಮುಟ್ಟಿ ಸುಸ್ವರದಿಂದ ರೋದಿಸಿದನು.

ತಥಾ ತೌ ದುಃಖಿತೌ ದೃಷ್ಟ್ವಾ ದುಃಶಾಸನಸುಯೋಧನೌ ।
ಅಧಿಗಮ್ಯ ವ್ಯಥಾವಿಷ್ಟಃ ಕರ್ಣಸ್ತೌ ಪ್ರತ್ಯಭಾಷತ ॥೧೫॥

ದುಃಶಾಸನ ಮತ್ತು ಸುಯೋಧನರು ಹೀಗೆ ದುಃಖಿತರಾಗಿರುವುದನ್ನು ನೋಡಿ ವ್ಯಥೆಯಿಂದ ಕೂಡಿದ ಕರ್ಣನು ಅಲ್ಲಿಗೆ ಬಂದು ಅವರಿಬ್ಬರನ್ನೂ ಕುರಿತು ಮಾತನಾಡಿದನು.

ವಿಷೀದಥಃ ಕಿಂ ಕೌರವ್ಯೆ ಬಾಲಿಶ್ಯಾತ್ ಪ್ರಾಕೃತಾಮಿವ ।
ನ ಶೋಕಃ ಶೋಚಮಾನಸ್ಯ ವಿನಿವರ್ತೇತ ಕರ್ಹಿಚಿತ್ ॥೧೬॥

ಎಲೈ ಕೌರವ್ಯರೇ, ಬಾಲಿಶರಂತೆ, ಸಾಮಾನ್ಯ ಜನರಂತೆ ಏಕೆ ವಿಷಾದಪಡುತ್ತಿದ್ದೀರಿ? ಶೋಕಪಡುವುದರಿಂದ ಎಂದೂ ಶೋಕವು ನಿವೃತ್ತವಾಗುವುದಿಲ್ಲ.

ಯದಾ ಚ ಶೋಚತಃ ಶೋಕೋ ವ್ಯಸನಂ ಚಾ(ನಾ)ಪಕರ್ಷತಿ ।
ಸಾಮರ್ಥ್ಯಂ ಕಿಂ ತತಃ ಶೋಕೇ ಶೋಚಮಾನಃ ಪ್ರಪಶ್ಯತಿ ॥೧೭॥

ಯಾವಾಗ ಶೋಕಪಡುವವನ ಶೋಕವು ಅವನ ವ್ಯಸನವನ್ನು ಪರಿಹರಿಸುವುದಿಲ್ಲವೋ ಆಗ ಶೋಕಪಡುವವನು ಆ ಶೋಕದಲ್ಲಿ ಯಾವ ಸಾಮರ್ಥ್ಯವನ್ನು ನೋಡಿ ಶೋಕಪಡುತ್ತಾನೆ?

ಧೃತಿಂ ಗೃಹ್ಣೀತ ಮಾ ಶತ್ರೂನ್ ಶೋಚಂತೌ ನಂದಯಿಷ್ಯಥಃ ।
ಕರ್ತವ್ಯಂ ಹಿ ಕೃತಂ ರಾಜನ್ ಪಾಂಡವೈಸ್ತವ ಮೋಕ್ಷಣಮ್ ॥೧೮॥

ಧೈರ್ಯವನ್ನು ಹೊಂದಿ. ಶೋಕವನ್ನು ಪಟ್ಟು ಶತ್ರುಗಳಿಗೆ ಸಂತೋಷವನ್ನು ಉಂಟುಮಾಡಬೇಡಿ. ರಾಜನೇ, ನಿನ್ನನ್ನು ಮೋಚನೆಗೊಳಿಸುವುದು ಪಾಂಡವರ ಕರ್ತವ್ಯ. ಅದನ್ನು ಅವರು ಮಾಡಿದ್ದಾರೆ.

ನಿತ್ಯಮೇವ ಪ್ರಿಯಂ ಕಾರ್ಯಂ ರಾಜ್ಞೋ ವಿಷಯವಾಸಿಭಿಃ ।
ಪಾಲ್ಯಮಾನಾಸ್ತ್ವಯಾ ತೇ ಹಿ ನಿವಸಂತಿ ಗತಜ್ವರಾಃ ॥೧೯॥

ಒಬ್ಬ ರಾಜನ ಆಳ್ವಿಕೆಯ ದೇಶದಲ್ಲಿರುವವರು ಯಾವಾಗಲೂ ರಾಜನಿಗೆ ಪ್ರಿಯವನ್ನು ಮಾಡಬೇಕು. ನಿನ್ನಿಂದ ರಕ್ಷಿತರಾಗಿ ಅವರು ಯಾವ ತೊಂದರೆಯೂ ಇಲ್ಲದೆ ವಾಸವನ್ನು ಮಾಡುತ್ತಿದ್ದಾರಷ್ಟೆ?

ನಾರ್ಹಸ್ಯೇವಂಗತೇ ಮನ್ಯುಂ ಕರ್ತುಂ ಪ್ರಾಕೃತವದ್ ಯಥಾ ।
ವಿಷಣ್ಣಾಸ್ತವ ಸೋದರ್ಯಾಸ್ತ್ವಯಿ ಪ್ರಾಯ ಸಮಾಸ್ಥಿತೇ ॥೨೦॥

ಪರಿಸ್ಥಿತಿಯು ಹೀಗಿರುವಾಗ ಪ್ರಾಕೃತನಂತೆ ನಿನ್ನ ಮೇಲೆ ಕೋಪವನ್ನು ಮಾಡಿಕೊಳ್ಳುವುದು ಯುಕ್ತವಲ್ಲ. ನೀನು ಪ್ರಾಯೋಪವೇಶವನ್ನು ಆಶ್ರಯಿಸುತ್ತಿರಲು ನಿನ್ನ ತಮ್ಮಂದಿರೆಲ್ಲಾ ವಿಷಾದದಿಂದ ಕೂಡಿದ್ದಾರೆ.

ತದಲಂ ದುಃಖಿತಾನೇನಾನ್ ಕರ್ತುಂ ಸರ್ವಾನ್ ನರಾಧಿಪ ।
ಉತ್ತಿಷ್ಠ ವ್ರಜ ಭದ್ರಂ ತೇ ಸಮಾಶ್ವಾಸಯ ಸೋದರಾನ್ ॥೨೧॥

ಎಲೈ ರಾಜನೇ, ಇವರೆಲ್ಲರನ್ನೂ ದುಃಖಿತರನ್ನಾಗಿ ಮಾಡಿದುದು ಸಾಕು. ಎದ್ದು ಇಲ್ಲಿಂದ ಹೊರಡು. ನಿನಗೆ ಮಂಗಳವಾಗಲಿ. ನಿನ್ನ ಸೋದರರನ್ನು ಸಮಾಧಾನಪಡಿಸು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂಸಂಹಿತಾಯಾಂ ವೈಯಾಸಿಕ್ಯಾಂ
ವನಪರ್ವಣಿ ಏಕೋನಚತ್ವಾರಿಂಶಾಧಿಕದ್ವಿಶತತಮೋಽಧ್ಯಾಯಃ ॥
॥ ಇತಿ ಘೋಷಯಾತ್ರಾಪರ್ವಣಿ ಕರ್ಣಸಾಂತ್ವನಂ ನಾಮ ಚತುರ್ಥೋಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವನಪರ್ವದಲ್ಲಿ ಇನ್ನೂರ ಮೂವತ್ತೊಂಬತ್ತನೆಯ ಅಧ್ಯಾಯ ಮುಗಿಯಿತು.

★ ★ ★ ★

ಇನ್ನೂರ ನಲವತ್ತನೆಯ ಅಧ್ಯಾಯ

ಕರ್ಣನ ಸಮಾಧಾನ ವಚನಗಳು. ಆದರೂ ದುರ್ಯೋಧನನ ಹಠ.

ಕರ್ಣಃ

ರಾಜನ್ ನಾದ್ಯಾವಗಚ್ಛಾಮಿ ತವೇಹ ಲಘುಸತ್ತ್ವತಾಮ್ ।
ಅಲ್ಪತ್ವಂ ಚ ತಥಾ ಬುದ್ಧೇಃ ಕಾರ್ಯಾಣಾಮವಿವೇಕತಃ ॥೧॥

ಕರ್ಣ– ರಾಜನೇ, ಈ ದಿನ ಈ ನಿನ್ನ ಅಲ್ಪವಾದ ಧೈರ್ಯವನ್ನು, ಬುದ್ಧಿಯ ಅಲ್ಪತ್ವವನ್ನು, ಕಾರ್ಯಗಳ ಬಗ್ಗೆ ಇರುವ ಅವಿವೇಕವನ್ನು ನಾನು ತಿಳಿಯುತ್ತಿಲ್ಲ.

ಕಿಮತ್ರ ಚಿತ್ರಂ ಯದ್ ವೀರ ಮೋಕ್ಷಿತಃ ಪಾಂಡವೈರಸಿ ।
ಸದ್ಯೋ ಯದ್‌ವಶಂ ಮಾಪನ್ನಃ ಶತ್ರೂಣಾಂ ಶತ್ರುಕರ್ಶನ ॥೨॥

ವೀರನೇ, ನೀನು ಪಾಂಡವರಿಂದ ಬಿಡಿಸಲ್ಪಟ್ಟರೆ ಇದರಲ್ಲಿ ಆಶ್ಚರ್ಯವೇನು? ಶತ್ರುಕರ್ಶನನೇ, ನೀನು ಇದ್ದಕ್ಕಿದ್ದಂತೆಯೇ ಶತ್ರುಗಳ ವಶವಾದಿಯಷ್ಟೆ.

ಸೇನಾಜೀವೈಶ್ಚ ಕೌರವ್ಯ ತಥಾ ವಿಷಯವಾಸಿಭಿಃ ।
ಅಜ್ಞಾತೈರ್ಯದಿ ವಾ ಜ್ಞಾತೈಃ ಕರ್ತವ್ಯಂ ನೃಪತೇಃ ಪ್ರಿಯಮ್ ॥೩॥

ಕೌರವ್ಯನೇ, ಸೈನ್ಯದಲ್ಲಿದ್ದು ಜೀವಿಸುವವರು ಮತ್ತು ರಾಜನ ದೇಶದಲ್ಲಿ ವಾಸಿಸುವವರು ಅವರು ತಿಳಿದಿರಲಿ ಅಥವಾ ತಿಳಿಯದಿರಲಿ ರಾಜನಿಗೆ ಪ್ರಿಯವನ್ನೇ ಮಾಡಬೇಕು.

ಪ್ರಾಯಃ ಪ್ರಧಾನಾಃ ಪುರುಷಾಃ ಕ್ಷೋಭಯಂತ್ಯರಿವಾಹಿನೀಮ್ ।
ನಿಗೃಹ್ಯತೇ ಚ ಯುದ್ಧೇಷು ಮೋಕ್ಷ್ಯಂತೇ ಚೈವ ಸೈನಿಕೈಃ ॥೪॥

ಪ್ರಧಾನರಾದ ಪುರುಷರೇ ಶತ್ರುಸೈನ್ಯವನ್ನು ಕ್ಷೋಭೆಗೊಳಿಸುತ್ತಾರೆ. ಯುದ್ಧದಲ್ಲಿ ಬಂಧನಕ್ಕೂ ಒಳಗಾಗುತ್ತಾರೆ ಮತ್ತು ಸೈನಿಕರಿಂದ ಮೋಚನೆಗೊಳಿಸಲ್ಪಡುತ್ತಾರೆ.

ಸೇನಾಜೀವಾಶ್ಚ ಯೇ ರಾಜ್ಞಾಂ ವಿಷಯೇ ಸಂತಿ ಮಾನವಾಃ ।
ತೈಃ ಸಂಗಮ್ಯ ನೃಪಾರ್ಥಾಯ ಯತಿತವ್ಯಂ ಯಥಾತಥಮ್ ॥೫॥

ಸೇನಾಜೀವಿಗಳು ಮತ್ತು ರಾಜ್ಯದಲ್ಲಿ ವಾಸಮಾಡುವ ಮನುಷ್ಯರು ಒಟ್ಟಿಗೆ ಸೇರಿ ರಾಜನ ಹಿತಕ್ಕಾಗಿ ಯಥಾರ್ಥವಾದ ಪ್ರಯತ್ನವನ್ನು ಮಾಡಬೇಕು.

ಯದ್ಯೇವಂ ಪಾಂಡವೈ ರಾಜನ್ ಭವದ್ವಿಷಯವಾಸಿಭಿಃ ।
ಯದೃಚ್ಛಯಾ ಮೋಕ್ಷಿತೋಽಸಿ ತತ್ರ ಕಾ ಪರಿದೇವನಾ ॥೬॥

ಎಲೈ ರಾಜನೇ, ನಿನ್ನ ರಾಜ್ಯದಲ್ಲಿ ವಾಸಿಸುವ ಪಾಂಡವರಿಂದ ನೀನು ಹೀಗೆ ಅನಿರೀಕ್ಷಿತವಾಗಿ ಮೋಚನೆಗೊಳಿಸಲ್ಪಟ್ಟರೆ ಆ ವಿಷಯದಲ್ಲಿ ಗೋಳಾಡುವುದು ಏನಿದೆ?

ನ ಚೈತತ್ ಸಾಧು ಯದ್ ರಾಜನ್ ಪಾಂಡವಾಸ್ತ್ವಾಂ ನೃಪೋತ್ತಮಮ್।
ಸ್ವಸೇನಯಾ ಸಂಪ್ರಯಾಂತಂ ನಾನುಯಾಂತಿ ಸ್ಮ ಪೃಷ್ಠತಃ ॥೭॥

ಎಲೈ ರಾಜನೇ, ನಿನ್ನ ಸೇನೆಯ ಜೊತೆಯಲ್ಲಿ ಹೊರಟಾಗ ಪಾಂಡವರು ರಾಜಶ್ರೇಷ್ಠನಾದ ನಿನ್ನನ್ನು ಹಿಂಬಾಲಿಸದಿದ್ದುದು ಅವರದೇ ದೋಷ.

ಶೂರಾಶ್ಚ ಬಲವಂತಶ್ಚ ಸಂಯುಗೇಷ್ವಪಲಾಯಿನಃ ।
ಭವತಸ್ತೇ ಸಹಾಯಾ ವೈ ಪ್ರೇಷ್ಯತಾಂ ಪೂರ್ವಮಾಗತಾಃ ॥೮॥

ಶೂರರೂ, ಬಲಿಷ್ಠರೂ, ಯುದ್ಧದಲ್ಲಿ ಹಿಮ್ಮೆಟ್ಟದವರೂ ಆದ ಅವರು ಮೊದಲೇ ನಿನ್ನ ದಾಸ್ಯಭಾವವನ್ನು ಹೊಂದಿ ನಿನಗೆ ಸಹಾಯಕರಾಗಿದ್ದಾರಷ್ಟೆ?

ಪಾಂಡವೇಯಾನಿ ರತ್ನಾನಿ ತ್ವಮದ್ಯಾಪ್ಯುಪಭುಂಜಸೇ ।
ಸತ್ತ್ವಸ್ಥಾನ್ ಪಾಂಡವಾನ್ ಪಶ್ಯ ನ ತೇ ಪ್ರಾಯಮುಪಾವಿಶನ್ ॥೯॥

ಈ ದಿನ ನೀನು ಪಾಂಡವರ ರತ್ನಗಳನ್ನು ಭೋಗಿಸುತ್ತಿದ್ದೀಯೆ. ಧೈರ್ಯಶಾಲಿಗಳಾದ ಪಾಂಡವರನ್ನು ನೋಡು. ಅವರು ಪ್ರಾಯೋಪ್ರವೇಶವನ್ನು ಮಾಡಲಿಲ್ಲ.

ಉತ್ತಿಷ್ಠ ರಾಜನ್ ಭದ್ರಂ ತೇ ನಚಿರಂ ಕರ್ತುಮರ್ಹಸಿ ।
ತದಲಂ ತೇ ಮಹಾಬಾಹೋ ಬುದ್ಧಿಃ ಪ್ರಾಯೋಪವೇಶನೇ ॥೧೦॥

ರಾಜನೇ, ನಿನಗೆ ಮಂಗಳವಾಗಲಿ. ಎದ್ದೇಳು. ತಡಮಾಡಬೇಡ. ಮಹಾಬಾಹುವೇ, ನಿನ್ನ ಪ್ರಾಯೋಪ್ರವೇಶದ ನಿರ್ಣಯವನ್ನು ಸಾಕುಮಾಡು.

ಅವಶ್ಯಮೇವ ನೃಪತೇ ರಾಜ್ಞೋ ವಿಷಯವಾಸಿಭಿಃ ।
ಪ್ರಿಯಾಣ್ಯಾಚರಿತವ್ಯಾನಿ ತತ್ರ ಕಾ ಪರಿದೇವನಾ ॥೧೧॥

ರಾಜನ ವಿಷಯವಾಸಿಗಳಾದ ಪ್ರಜೆಗಳಿಂದ ಅವಶ್ಯವಾಗಿ ರಾಜರಿಗೆ ಪ್ರಿಯವಾದುದೇ ಮಾಡಲ್ಪಡಬೇಕು. ಈ ವಿಷಯದಲ್ಲಿ ಸಂತಾಪಪಡುವುದು ಏನಿದೆ?

ಮದ್ವಾಕ್ಯಮೇತದ್ ರಾಜೇಂದ್ರ ಯದ್ಯೇವಂ ನ ಕರಿಷ್ಯಸಿ ।
ಸ್ಥಾಸ್ಯಾಮೀಹ ಭವತ್ಪಾದೌ ಶುಶ್ರೂಷನ್ನರಿಮರ್ದನ ॥೧೨॥

ಎಲೈ ರಾಜೇಂದ್ರನೇ, ಎಲೈ ಅರಿಮರ್ದನನೇ, ನೀನು ಈ ರೀತಿಯಾದ ನನ್ನ ಮಾತುಗಳನ್ನು ನಡೆಸಿಕೊಡದಿದ್ದರೆ ನಾನು ನಿನ್ನ ಪಾದಸೇವೆಯನ್ನು ಮಾಡುತ್ತಾ ಇಲ್ಲಿಯೇ ಇರುವೆನು.

ನೋತ್ಸಹೇ ಜೀವಿತುಮಹಂ ತ್ವದ್ವಿಹೀನೋ ನರರ್ಷಭ ।
ಪ್ರಾಯೋಪವಿಷ್ಟಸ್ತು ತಥಾ ರಾಜ್ಞಾಂ ಹಾಸ್ಯೋ ಭವಿಷ್ಯಸಿ ॥೧೩॥

ಎಲೈ ನರಶ್ರೇಷ್ಠನೇ, ನೀನಿಲ್ಲದೆ ನಾನು ಬದುಕಲು ಇಷ್ಟಪಡುವುದಿಲ್ಲ. ನೀನು ಹೀಗೆ ಪ್ರಾಯೋಪ್ರವೇಶಕ್ಕೆ ಕುಳಿತುಕೊಂಡರೆ ರಾಜನ ಎದುರಿನಲ್ಲಿ ಹಾಸ್ಯಾಸ್ಪದನಾಗುವಿ.

ವೈಶಂಪಾಯನಃ

ಏವಮುಕ್ತಸ್ತು ಕರ್ಣೇನ ರಾಜಾ ದುರ್ಯೋಧನಸ್ತದಾ ।
ನೈವೋತ್ಥಾತುಂ ಮನಶ್ಚಕ್ರೇ ಸ್ವರ್ಗಾಯ ಕೃತನಿಶ್ಚಯಃ ॥೧೪॥

ವೈಶಂಪಾಯನ– ಕರ್ಣನು ಹೀಗೆ ಹೇಳಿದರೂ ರಾಜನಾದ ದುರ್ಯೋಧನನು ಸ್ವರ್ಗವನ್ನು ಸಾಧಿಸುವುದಾಗಿ ನಿರ್ಧರಿಸಿ ಪ್ರಾಯೋಪ್ರವೇಶದಿಂದ ಏಳಲು ಮನಸ್ಸು ಮಾಡಲಿಲ್ಲ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂಸಂಹಿತಾಯಾಂ ವೈಯಾಸಿಕ್ಯಾಂ
ವನಪರ್ವಣಿ ಚತ್ವಾರಿಂಶಾಧಿಕದ್ವಿಶತತಮೋऽಧ್ಯಾಯಃ ॥
॥ ಇತಿ ಪ್ರಾಯೋಪವೇಶನಪರ್ವಣಿ ಕರ್ಣವಾಕ್ಯಂ ನಾಮ ಪಂಚಮೋಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವನಪರ್ವದಲ್ಲಿ ಇನ್ನೂರ ನಲವತ್ತನೆಯ
ಅಧ್ಯಾಯ ಮುಗಿಯಿತು.

★ ★ ★ ★

ಮಹಾಭಾರತ ತಾತ್ಪರ್ಯನಿರ್ಣಯ -೨೨ ಅಧ್ಯಾಯ

ತತೋ ನಿಶಾಯಾಂ ಪ್ರಾಪ್ತಾಯಾಂ ಸ್ವಪಕ್ಷೇ ಪ್ರವಿಷೀದತಿ ।
ಮಂತ್ರಯಿತ್ವಾऽಸುರೈಃ ಕೃತ್ಯಾ ನಿರ್ಮಿತಾ ಹೋಮಕರ್ಮಣಿ ॥೪೦॥

ಅಸುರರು ತಮ್ಮ ಪಕ್ಷ ಹೀಗೆ ಬಲಗುಂದಿದಾಗ ರಾತ್ರಿಕಾಲದಲ್ಲಿ ಮಂತ್ರಾಲೋಚನ ಮಾಡಿ ಹೋಮಕರ್ಮದಿಂದ ಒಂದು ಕೃತ್ರಿಮ ದೇವತೆಯನ್ನು ನಿರ್ಮಿಸಿದರು.

ಶುಕ್ರೇಣೋತ್ಪಾದಿತಾ ಕೃತ್ಯಾ ಸಾ ಪ್ರಸುಪ್ತೇಷು ಮಂತ್ರಿಷು ।
ಧಾರ್ತರಾಷ್ಟ್ರಂ ಸಮಾದಾಯ ಯಯೌ ಪಾತಾಲಮಾಶು ಚ ।
ಅಥ ಸಂಬೋಧಯಾಮಾಸುರ್ದೈತ್ಯಾ ದುರ್ಯೋಧನಂ ನೃಪಮ್ ॥

ದುರ್ಯೋಧನನ ಮಂತ್ರಿಗಳು ನಿದ್ರಿಸುತ್ತಿದ್ದಾಗ ಶುಕ್ರಾಚಾರ್ಯರಿಂದ ನಿರ್ಮಿತವಾದ ಆ ಕ್ಷುದ್ರದೇವತೆ ದುರ್ಯೋಧನನನ್ನು ಎತ್ತಿಕೊಂಡು ಬೇಗನೆ ಪಾತಾಳವನ್ನು ಸೇರಿದ. ಬಳಿಕ ಅಸುರರು ದುರ್ಯೋಧನನಿಗೆ ಬೋಧಿಸಿದರು.

ತ್ವಂ ದಿವ್ಯಃ ಪುರುಷೋ ವೀರಃ ಸೃಷ್ಟೋಽಸ್ಮಾಭಿಃ ಪ್ರತೋಷಿತಾತ್ ।
ತಪಸಾ ಶಂಖಿರಾದ್ ವಜ್ರಕಾಯೋಽವಧ್ಯಶ್ಚ ಸರ್ವದಾ ।
ಅಸ್ಮಾಕಂ ಪಕ್ಷಭೂತಸ್ತ್ವಂ ದೇವಾನಾಂ ಚೈವ ಪಾಂಡವಾಃ ॥೪೦೪॥

ನೀನು ದಿವ್ಯ ಪುರುಷ, ವೀರ. ನಾವು ತಪಸಿನಿಂದ ಒಲಿಸಿಕೊಂಡು ಶಿವನ ಮೂಲಕ ನಿನ್ನನ್ನು ವಜ್ರಕಾಯನನ್ನಾಗಿ ಅವಧ್ಯನನ್ನಾಗಿ ಮಾಡಿದ್ದೇವೆ. ನಮ್ಮ ಪಕ್ಷದವನು ನೀನು. ದೇವತೆಗಳ ಪಕ್ಷದವರು ಪಾಂಡವರು.

ಇದಾನೀಂ ಸರ್ವದೇವಾನಾಂ ವರಾತ್ ತ್ವಂ ವಿಜಿತೋ ರಣೇ ।
ವಯಂ ತಥಾ ಕರಿಷ್ಯಾಮೋ ಯಥಾ ಜೇಷ್ಯಸಿ ಪಾಂಡವಾನ್ ॥೪೦೫॥

ಈಗ ನೀನು ಎಲ್ಲ ದೇವತೆಗಳ ವರದಿಂದ ಪರಾಭವಗೊಂಡಿರುವಿ. ಇನ್ನು ನೀನು ಪಾಂಡವರನ್ನು ಗೆಲ್ಲುವಂತೆ ನಾವು ಮಾಡುವೆವು.

ಕೃಷ್ಣೇನ ನಿಹತಶ್ಚೈವ ನರಕಃ ಕರ್ಣ ಆಸ್ಥಿತಃ ।
ಸ ಚ ಕೃಷ್ಣಾರ್ಜುನಾಭಾವಂ ಕರಿಷ್ಯತಿ ನ ಸಂಶಯಃ ॥೪೦೬॥

ಕೃಷ್ಣನಿಂದ ಹತನಾದ ನರಕಾಸುರ ಈಗ ಕರ್ಣನಲ್ಲಿ ಆವೇಶಗೊಂಡಿದ್ದಾನೆ. ಅವನು ಕೃಷ್ಣಾರ್ಜುನರನ್ನು ನಾಶಮಾಡುತ್ತಾನೆ. ಇದರಲ್ಲಿ ಸಂಶಯವಿಲ್ಲ.

ಭೀಷ್ಮಾದೀಂಶ್ಚ ವಯಂ ಸರ್ವಾನಾವಿಶಾಮ ಜಯಾಯ ತೇ ।
ತಪಸಾ ವರ್ದ್ಧಯಿಷ್ಯಾಮಸ್ತ್ವಾಂ ಕರ್ಣಾದೀಂಶ್ಚ ಸರ್ವಶಃ ॥೪೦೭॥

ನಿನ್ನ ವಿಜಯಕ್ಕಾಗಿ ನಾವೆಲ್ಲರೂ ಭೀಷ್ಮಾದಿಗಳಲ್ಲಿ ಆವೇಶಗೊಳ್ಳುತ್ತೇವೆ. ತಪಸ್ಸಿನಿಂದ ನಿನ್ನನ್ನೂ ಕರ್ಣಾದಿಗಳನ್ನೂ ಎಲ್ಲರನ್ನೂ ಬಲಪಡಿಸುತ್ತೇವೆ.

ತಸ್ಮಾದ್ ಗತ್ವಾ ಪಾಲಯಸ್ವ ರಾಜ್ಯಂ ರಾಜನ್ನಪೇತಭೀಃ ।
ಇದಂ ಕಸ್ಯಾಪಿ ನಾಽಖ್ಯೇಯಂ ಸುಗುಪ್ತಂ ಭೂತಿವರ್ದ್ಧನಮ್ ॥೪೦೮॥

ಆದರಿಂದ ರಾಜನೇ, ನೀನು ನಿರ್ಭಯನಾಗಿ ರಾಜ್ಯವಾಳು. ಈ ವಿಷಯವನ್ನು ಯಾರಿಗೂ ಹೇಳಬೇಡ. ಇದು ರಹಸ್ಯ ಐಶ್ವರ್ಯ ವರ್ಧಕ.

ಇತ್ಯುಕ್ತ್ವಾ ಕೃತ್ಯಯಾ ಭೂಯಃ ಸ್ವಸ್ಥಾನೇ ಸ್ಥಾಪಿತೋ ನೃಪಃ ।
ಉಮಯಾ ನಿರ್ಮಿತಾತ್ಮಾರ್ದ್ಧಮುತ್ತರಂ ಹರಿನಿರ್ಮಿತಮ್ ॥೪೦೯॥
ಜ್ಞಾತ್ವೈವಾವಧ್ಯತಾಂ ಚೈವ ರಾಜ್ಯೇ ಬುದ್ಧಿಂ ಚಕಾರ ಸಃ ।
ನೋವಾಚ ಕಸ್ಯಚಿತ್ ತೇಷು ಸ್ವಾನುಭೂತಂ ಸುಯೋಧನಃ ॥೪೧೦॥

ಹೀಗೆ ಹೇಳಿ ಅಸುರರು ಕ್ಷುದ್ರದೇವತೆಯ ಮೂಲಕ ದುರ್ಯೋಧನನನ್ನು ಅವನ ಸ್ವಸ್ಥಾನದಲ್ಲಿ ಇರಿಸಿದರು. ತನ್ನ ಶರೀರದ ಕೆಳಗಿನ ಅರ್ಧ ಉಮೆಯಿಂದ ನಿರ್ಮಿತವಾದುದೆಂದೂ ಮೇಲಿನ ಅರ್ಧ ಶಿವನಿಂದ ನಿರ್ಮಿತವಾದುದೆಂದೂ ತಾನು ಅವಧ್ಯನೆಂದೂ ತಿಳಿದು ದುರ್ಯೋಧನ ರಾಜ್ಯವಾಳಲು ಮನಸು ಮಾಡಿದ. ತಾನು ಅನುಭವದಿಂದ ಕಂಡುದನ್ನು ತನ್ನವರಲ್ಲಿಯೂ ಯಾರಿಗೂ ಹೇಳಲಿಲ್ಲ.

ಪ್ರಭಾತಾಯಾಂ ತು ಶರ್ವರ್ಯಾಂ ಪುನಃ ಕರ್ಣೋ ವಚೋಽಬ್ರವೀತ್ ।
ಭೃತ್ಯೈಸ್ತವೈವ ಪಾರ್ಥೈರ್ಯನ್ಮೋಚಿತೋಽಸಿ ಪರಂತಪ ॥೪೧೧॥

ತೇನ ಮಾನ್ಯೋಽಧಿಕಂ ಲೋಕೇ ಯದ್ ಭೃತ್ಯಾ ಏವ ತಾದೃಶಾಃ ।
ಕಿಮು ತ್ವಂ ರಾಜಶಾರ್ದೂಲ ತದುತ್ತಿಷ್ಠ ಸ್ಥಿರೋ ಭವ ॥೪೧೨॥

ರಾತ್ರಿ ಬೆಳಗಾದಾಗ ಪುನಃ ಕರ್ಣ ಈ ಮಾತನ್ನು ಹೇಳಿದ. 'ಮಹಾರಾಜ, ಶತ್ರುನಾಶಕ, ನಿನ್ನ ದಾಸರಾದ ಪಾಂಡವರಿಂದಲೇ ಬಿಡುಗಡೆ ಹೊಂದಿರುವುದರಿಂದ ನೀನು ಲೋಕದಲ್ಲಿ ಇನ್ನೂ ಹೆಚ್ಚು ಮಾನ್ಯನೆನಿಸಿರುವೆ. ನಿನ್ನ ದಾಸರೇ ಅಂಥ ವೀರರೆಂದರೆ ನೀನು ಎಂಥವನು ಎಂದು. ಅದರಿಂದ ಎದ್ದೇಳು. ಸ್ಥಿರಬುದ್ಧಿಯವನಾಗು' ಎಂದು.

ಯಾ ಚ ತೇಽರ್ಜುನಮಾಹಾತ್ಮ್ಯೇ ಶಂಕಾ ಸಾ ವ್ಯೇತು ಮೇ ಶೃಣು ।
ಯಾವನ್ನೈವಾರ್ಜುನಂ ಹನ್ಯಾಂ ಪಾದೌ ಪ್ರಕ್ಷಾಲಯೇ ಸ್ವಯಮ್ ॥

ಇತ್ಯುಕ್ತೋಽವರಜೈಶ್ಚೈವ ಸರ್ವೈಃ ಶಕುನಿನಾ ತಥಾ ।
ಯಾಚಿತೋ ರಥಮಾರುಹ್ಯ ಯಯೌ ನಾಗಪುರಂ ದ್ರುತಮ್ ॥೪೧೪॥

ಅರ್ಜುನನ ಬಲದ ವಿಷಯದಲ್ಲಿ ಇರುವ ನಿನ್ನ ಭಯ ದೂರವಾಗಲಿ. ನಾನು ಹೇಳುವುದನ್ನು ಕೇಳು, 'ಅರ್ಜುನನನ್ನು ಕೊಲ್ಲದ ತನಕ ನಾನು ನನ್ನ ಪಾದಗಳನ್ನು

ನಾನೇ ತೊಳೆದುಕೊಳ್ಳುತ್ತೇನೆ' ಕರ್ಣ ಹೀಗೆ ಹೇಳಿ ರಾಜಧಾನಿಗೆ ಹಿಂತಿರುಗಲು ಬೇಡಿದ. ಎಲ್ಲಸೋದರರೂ ಶಕುನಿಯೂ ಬೇಡಿದರು. ಆಗ ದುರ್ಯೋಧನ ರಥವನ್ನೇರಿ ಬೇಗನೆ ಹಸ್ತಿನಾವತಿಗೆ ತೆರಳಿದ.

★ ★ ★ ★

ಇನ್ನೂರ ನಲವತ್ತೊಂದನೆಯ ಅಧ್ಯಾಯ

ಶಕುನಿಯ ಪ್ರಬೋಧನದಿಂದಲೂ ತನ್ನ ಹಠವನ್ನು ಬಿಡದಿದ್ದ ದುರ್ಯೋಧನನನ್ನು ದೈತ್ಯರು ಕೃತ್ಯಯನ್ನು ಸೃಷ್ಟಿ ಮಾಡಿ ರಸಾತಳಲೋಕಕ್ಕೆ ಸಮಾನಯನ.

ವೈಶಂಪಾಯನ

ಪ್ರಾಯೋಪವಿಷ್ಟಂ ರಾಜಾನಂ ದುರ್ಯೋಧನಮಮರ್ಷಣಮ್ ।
ಉವಾಚ ಸಾಂತ್ವಯನ್ ರಾಜನ್ ಶಕುನಿಃ ಸೌಬಲಸ್ತದಾ ॥೧॥

ಎಲೈ ರಾಜನೇ, ಸಿಟ್ಟಿನಿಂದ ಪ್ರಾಯೋಪ್ರವೇಶಕ್ಕೆ ಕುಳಿತಿದ್ದ ದುರ್ಯೋಧನನನ್ನು ಕುರಿತು ಸೌಬಲನಾದ ಶಕುನಿಯು ಆಗ ಸಮಾಧಾನಪಡಿಸುತ್ತಾ ಮಾತನಾಡಿದನು.

ಶಕುನಿಃ

ಸಮ್ಯಗುಕ್ತಂ ಹಿ ಕರ್ಣೇನ ನ ಶ್ರುತಂ ಕೌರವ ತ್ವಯಾ ।
ಮಯಾ ಹೃತಾಂ ಶ್ರಿಯಂ ಸ್ಫೀತಾಂ ತಾಂ ಮೋಹಾದಪಹಾಯ ಕಿಮ್ ॥

ತ್ವಂ ಬುಧ್ವಾ ನೃವರ ಪ್ರಾಣಾನುತ್ಸ್ರಷ್ಟುಮಿಹ ಚೇಚ್ಛಸಿ ।
ಅಥವಾಪ್ಯವಗಚ್ಛಾಮಿ ನ ವೃದ್ಧಾಃ ಸೇವಿತಾಸ್ತ್ವಯಾ ॥೩॥

ಶಕುನಿ– ಕೌರವನೇ, ಕರ್ಣನು ಸರಿಯಾಗಿ ಮಾತನಾಡಿದುದನ್ನು ನೀನು ಕೇಳಲಿಲ್ಲವೇ? ಎಲೈ ನರಶ್ರೇಷ್ಠನೇ, ನಾನು ಅಪಹರಿಸಿ ಸಂಪಾದಿಸಿಕೊಟ್ಟ ಪರಿಶುದ್ಧವಾದ ಸಂಪತ್ತನ್ನು ಮೋಹದಿಂದ ನಿರಾಕರಿಸಿ ಏನನ್ನು ಯೋಚಿಸಿ ಇಲ್ಲಿ ಪ್ರಾಣಗಳನ್ನು ಬಿಡಲು ಹೊರಟಿರುವೆ? ಅಥವಾ ನೀನು ವೃದ್ಧರ ಸೇವೆಯನ್ನು ಮಾಡಿಲ್ಲವೆಂದು ನಾನು ತಿಳಿಯುತ್ತೇನೆ.

ಯಃ ಸಮುತ್ಪತಿತಂ ಹರ್ಷಂ ದೈನ್ಯಂ ವಾ ನ ನಿಯಚ್ಛತಿ ।
ಸ ನಶ್ಯತಿ ಶ್ರಿಯಂ ಪ್ರಾಪ್ಯ ಪಾತ್ರಮಾಮನಮಿವಾಂಭಸಿ ॥೪॥

ಯಾವನು ಉಂಟಾದ ಹರ್ಷವನ್ನಾಗಲೀ, ದೈನ್ಯವನ್ನಾಗಲೀ ನಿಯಂತ್ರಿಸುವುದಿಲ್ಲವೋ ಅವನು ಸಂಪತ್ತನ್ನು ಹೊಂದಿ ನೀರು ತುಂಬಿದ ಹಸಿಯ ಮಣ್ಣಿನ ಪಾತ್ರೆಯಂತೆ ನಾಶವನ್ನು ಹೊಂದುತ್ತಾನೆ.

ಯಃ ಶೋಕಂ ಸಮನುಪ್ರಾಪ್ತಂ ನ ನಿಯಚ್ಛತಿ ಭಾರತ ।
ತಮೀದೃಶಂ ನರಂ ನ ಶ್ರೀಃ ಕದಾಚಿದಪಿ ಸೇವತೇ ॥೫॥

ಎಲೈ ಭಾರತನೇ, ಯಾರು ಸಂಪ್ರಾಪ್ತವಾದ ಶೋಕವನ್ನು ನಿಯಂತ್ರಿಸುವುದಿಲ್ಲವೋ ಇಂತಹ ನರನನ್ನು ಲಕ್ಷ್ಮಿಯು ಯಾವಾಗಲೂ ಸೇವಿಸುವುದಿಲ್ಲ.

ಅತಿಭೀರುಮತಿಕ್ಲೀಬಂ ದೀರ್ಘಸೂತ್ರಂ ಪ್ರಮಾದಿನಮ್ ।
ವ್ಯಸನಾದ್ ವಿಷಯಾಕ್ರಾಂತಂ ನ ಭಜಂತಿ ನೃಪಂ ಪ್ರಜಾಃ ॥೬॥

ಬಹಳ ಭಯಪಡುವಂತಹ, ಪೌರುಷವಿಲ್ಲದಂತಹ, ವಿಳಂಬದಿಂದ ಕೆಲಸ ಮಾಡುವಂತಹ, ಪ್ರಮಾದದಿಂದಿರುವಂತಹ, ವ್ಯಸನಗಳಿಗೆ ತುತ್ತಾಗಿ ವಿಷಯ ಭೋಗಗಳಿಗೆ ತುತ್ತಾದಂತಹ ರಾಜನನ್ನು ಪ್ರಜೆಗಳು ಸೇವಿಸುವುದಿಲ್ಲ.

ಸತೃತಸ್ಯ ಹಿ ತೇ ಶೋಕೋ ವಿಪರೀತಃ ಕಥಂ ಭವೇತ್ ।
ಮಾ ಕೃತಂ ಶೋಭನಂ ಪಾರ್ಥೈಃ ಶೋಕಮಾಲಂಬ್ಯ ನಾಶಯ ॥೭॥

ನೀನು ಸತ್ಕರಿಸಲ್ಪಟ್ಟಿದ್ದೀಯೆ. ಅದಕ್ಕೆ ವಿಪರೀತವಾಗಿ ಶೋಕವು ಹೇಗೆ ಉಂಟಾಯಿತು? ಪಾಂಡವರು ಮಾಡಿದ ಒಳ್ಳೆಯ ಉಪಕಾರವನ್ನು (ಸೇವೆಯನ್ನು) ಶೋಕವನ್ನು ಆಶ್ರಯಿಸಿ ನಾಶಮಾಡಬೇಡ.

ಯತ್ರ ಹರ್ಷಸ್ತ್ವಯಾ ಕಾರ್ಯಃ ಸತ್ಕರ್ತವ್ಯಾಶ್ಚ ಪಾಂಡವಾಃ ।
ತತ್ರ ಶೋಚಸಿ ರಾಜೇಂದ್ರ ವಿಪರೀತಮಿದಂ ತವ ॥೮॥

ನೀನು ಎಲ್ಲಿ ಹರ್ಷವನ್ನು ಪಡಬೇಕೋ ಮತ್ತು ಪಾಂಡವರನ್ನು ಸತ್ಕರಿಸಬೇಕೋ ಅಂತಹ ಸ್ಥಳದಲ್ಲಿ ಶೋಕಪಡುತ್ತಿದ್ದೀಯೆ. ರಾಜೇಂದ್ರನೇ, ಇದೇನು ನಿನ್ನ ವಿಪರೀತ ವರ್ತನೆ?

ಪ್ರಸೀದ ಮಾ ತ್ಯಜಾತ್ಮಾನಂ ತುಷ್ಟಶ್ಚ ಸುಕೃತಂ ಸ್ಮರ ।
ಪ್ರಯಚ್ಛ ರಾಜ್ಯಂ ಪಾರ್ಥಾನಾಂ ಯಶೋ ಧರ್ಮಮವಾಪ್ನುಹಿ ।
ಕ್ರಿಯಾಮೇತಾಂ ಸಮಾಜ್ಞಾಯ ಕೃತಜ್ಞಸ್ತ್ವಂ ಭವಿಷ್ಯಸಿ ।
ತೇಷಾಂ ಪ್ರತಿಕೃತಂ ಕೃತ್ವಾ ಯಶೋ ಧರ್ಮಮವಾಪ್ನುಹಿ ॥೯॥

ಪ್ರಸನ್ನನಾಗು. ಪ್ರಾಣವನ್ನು ತೊರೆಯಬೇಡ. ಸಂತೋಷದಿಂದ ಮಾಡಿದ ಒಳ್ಳೆಯ ಕೆಲಸವನ್ನು ಸ್ಮರಿಸು. ಪಾಂಡವರಿಗೆ ರಾಜ್ಯವನ್ನು ಕೊಟ್ಟು ಯಶಸ್ಸನ್ನು ಮತ್ತು ಧರ್ಮವನ್ನು ಹೊಂದು. ಅವರ ಉಪಕಾರಕ್ಕೆ ಪ್ರತಿ ಉಪಕಾರವನ್ನು ಮಾಡಿ ಯಶಸ್ಸನ್ನು ಮತ್ತು ಧರ್ಮವನ್ನು ಸಂಪಾದಿಸು.

ಸೌಭ್ರಾತ್ರಂ ಪಾಂಡವೈಃ ಕೃತ್ವಾ ಸಮವಸ್ಥಾಪ್ಯ ಚೈವ ತಾನ್ ।
ಪಿತ್ರ್ಯಂ ರಾಜ್ಯಂ ಪ್ರಯಚ್ಛೈಷಾಂ ತತಃ ಸುಖಮವಾಪ್ಸ್ಯಸಿ ॥೧೦॥

ಪಾಂಡವರ ಜೊತೆಯಲ್ಲಿ ಭ್ರಾತೃಸ್ನೇಹವನ್ನು ಹೊಂದಿ ರಾಜ್ಯದಲ್ಲಿ ಅವರನ್ನಿಟ್ಟು ಅವರ ಪಿತೃಸಂಬಂಧಿಯಾದ ರಾಜ್ಯವನ್ನು ಅವರಿಗೆ ಕೊಟ್ಟು ಸುಖವನ್ನು ಹೊಂದುವವನಾಗು.

ವೈಶಂಪಾಯನಃ

ಶಕುನೇಸ್ತು ವಚಃ ಶ್ರುತ್ವಾ ದುಃಶಾಸನಮವೇಕ್ಷ್ಯ ಚ ।
ಪಾದಯೋಃ ಪತಿತಂ ವೀರಂ ವಿಕೃತಂ ಭ್ರಾತೃಸೌಹೃದಾತ್ ॥೧೧॥

ಬಾಹುಭ್ಯಾಂ ಸಾಧುಜಾತಾಭ್ಯಾಂ ದುಃಶಾಸನಮರಿಂದಮಮ್ ।
ಉತ್ಥಾಪ್ಯ ಸಂಪರಿಷ್ವಜ್ಯ ಪ್ರೀತ್ಯಾಽಜಿಘ್ರತ ಮೂರ್ಧನಿ ॥೧೨॥

ವೈಶಂಪಾಯನ– ಶಕುನಿಯ ಮಾತುಗಳನ್ನು ಕೇಳಿ ಪಾದಗಳಲ್ಲಿ ಬಿದ್ದಿದ್ದ ವೀರನಾದ, ದುಃಖವಿಕಾರವನ್ನು ಹೊಂದಿದ್ದ ದುಃಶಾಸನನನ್ನು ನೋಡಿ ಭ್ರಾತೃಸ್ನೇಹದಿಂದ ತನ್ನ ಪುಷ್ಟವಾದ ಬಾಹುಗಳಿಂದ ಅರಿಂದಮನಾದ ದುಃಶಾಸನನನ್ನು ಎಬ್ಬಿಸಿ ಆಲಿಂಗಿಸಿ ಪ್ರೀತಿಯಿಂದ ಶಿರಸ್ಸನ್ನು ಆಘ್ರಾಣಿಸಿದನು.

ಕರ್ಣಸೌಬಲಯೋಶ್ಚಾಪಿ ಸಂಶ್ರುತ್ಯವಚನಾನ್ಯಸೌ ।
ನಿರ್ವೇದಂ ಪರಮಂ ಗತ್ವಾ ರಾಜಾ ದುರ್ಯೋಧನಸ್ತದಾ ॥೧೩॥

ಕರ್ಣ ಶಕುನಿಗಳ ಮಾತನ್ನು ಕೇಳಿದರೂ ಸಹ ರಾಜನಾದ ದುರ್ಯೋಧನನು ಆಗ ಬಹಳ ನಿರಾಸೆಯನ್ನು ತಾಳಿದನು.

ವ್ರೀಡಯಾऽಭಿಪರೀತಾತ್ಮಾ ನೈರಾಶ್ಯಮಗಮತ್ ಪರಮ್ ।
ತತ್ಶ್ರುತ್ವಾ ಸುಹೃದಶ್ಚೈವ ಸಮನ್ಯುರಿದಮಬ್ರವೀತ್ ॥೧೪॥

ನಾಚಿಕೆಯಿಂದ ಕೂಡಿದವನಾಗಿ ಪರಮನೈರಾಶ್ಯವನ್ನು ಹೊಂದಿದನು. ಸುಹೃದರ ಆ ಮಾತುಗಳನ್ನು ಕೇಳಿ ಕೋಪದಿಂದ ಈ ಮಾತುಗಳನ್ನು ಆಡಿದನು.

ನ ಧರ್ಮಧನಸೌಖ್ಯೇನ ನೈಶ್ವರ್ಯೇಣ ನ ಚಾಜ್ಞಯಾ ।
ನೈವ ಭೋಗೈಶ್ಚ ಮೇ ಕಾರ್ಯಂ ಮಾ ವಿಹಾಯ ಚ ಗಚ್ಛತ ॥೧೫॥

ನನಗೆ ಧರ್ಮದಿಂದಲಾಗಲೀ, ಧನದಿಂದಲಾಗಲೀ, ಸೌಖ್ಯದಿಂದಲಾಗಲೀ, ಐಶ್ವರ್ಯದಿಂದಲಾಗಲೀ, ಶಾಸನದಿಂದಲಾಗಲೀ, ಭೋಗಗಳಿಂದಲಾಗಲೀ ಆಗಬೇಕಾದುದು ಏನೂ ಇಲ್ಲ. ನೀನು ನನ್ನನ್ನು ಬಿಟ್ಟು ಹೊರಡಿ.

ನಿಶ್ಚಿತೇಯಂ ಮಮ ಮತಿಃ ಸ್ಥಿತಾ ಪ್ರಾಯೋಪವೇಶನೇ ।
ಗಚ್ಛಧ್ವಂ ನಗರಂ ಸರ್ವೇ ಪೂಜ್ಯಾಶ್ಚ ಗುರವೋ ಮಮ ॥೧೬॥

ಈ ನನ್ನ ಬುದ್ಧಿಯು ಪ್ರಾಯೋಪ್ರವೇಶದಲ್ಲಿ ಸ್ಥಿರವಾಗಿದೆ. ನೀವೆಲ್ಲರೂ ನಗರಕ್ಕೆ ಹೋಗಿ ನನ್ನ ಹಿರಿಯರನ್ನು ಸತ್ಕರಿಸಿ.

ತ ಏವಮುಕ್ತಾಃ ಪ್ರತ್ಯೂಚೂ ರಾಜಾನಮರಿಮರ್ದನಮ್ ॥೧೭॥

ಹೀಗೆ ಹೇಳಲ್ಪಟ್ಟ ಅವರು ಅರಿಮರ್ದನನಾದ ರಾಜನನ್ನು ಕುರಿತು ಪ್ರತ್ಯುತ್ತರವನ್ನು ನೀಡಿದರು.

ಯಾ ಗತಿಸ್ತವ ರಾಜೇಂದ್ರ ಸಾऽಸ್ಮಾಕಮಪಿ ಭಾರತ ।
ಕಥಂ ವಾ ಸಂಪ್ರವೇಕ್ಷ್ಯಾಮಸ್ತ್ವದ್ವಿಹೀನಾಃ ಪುರಂ ವಯಮ್ ॥೧೮॥

ಎಲೈ ರಾಜೇಂದ್ರನೇ, ಭಾರತನೇ, ನಿನಗೆ ಯಾವ ಗತಿಯಾಗುತ್ತದೆಯೋ ನಮಗೂ ಅದೇ ಆಗಲಿ. ನೀನಿಲ್ಲದೆ ನಾವು ಹೇಗೆ ಪಟ್ಟಣವನ್ನು ಪ್ರವೇಶಿಸುವೆವು (ಎಂದು ಹೇಳಿದರು).

ಸ ಸುಹೃದ್ಭಿರಮಾತ್ಯೈಶ್ಚ ಭ್ರಾತೃಭಿಃ ಸ್ವಜನೇನ ಚ ।
ಬಹುಪ್ರಕಾರಮಪ್ಯುಕ್ತೋ ನಿಶ್ಚಯಾನ್ನ ವಿಚಾಲ್ಯತೇ ॥೧೯॥

ಅವನು ಸುಹೃದರಿಂದ, ಅಮಾತ್ಯರಿಂದ, ತಮ್ಮಂದಿರಿಂದ, ಸ್ವಜನರಿಂದ ಬಹುಪ್ರಕಾರವಾಗಿ ಹೇಳಲ್ಪಟ್ಟರೂ ತನ್ನ ನಿಶ್ಚಯದಿಂದ ಅಲುಗಾಡಲಿಲ್ಲ.

ದರ್ಭಾಸ್ತರಣಮಾಸ್ತೀರ್ಯ ನಿಶ್ಚಯಾದ್ ಧೃತರಾಷ್ಟ್ರಜಃ ।
ಸಂಸ್ಪೃಶ್ಯಾಪಃ ಶುಚಿರ್ಭೂತ್ವಾ ಭೂತಲೇ ಸಮುಪಸ್ಥಿತಃ ॥೨೦॥

ಭೂಮಿಯ ಮೇಲೆ ದರ್ಭಾಸನವನ್ನು ಹಾಕಿ ಜಲವನ್ನು ಸ್ಪರ್ಶಮಾಡಿ, ಶುಚಿಯಾಗಿ ನಿಶ್ಚಯವನ್ನು ಹೊಂದಿ ಧೃತರಾಷ್ಟ್ರಪುತ್ರನಾದ ಅವನು ಕುಳಿತುಕೊಂಡನು.

ಕುಶಚೀರಾಂಬರಧರಃ ಪರಂ ನಿಯಮಮಾಸ್ಥಿತಃ ।
ವಾಗ್ಯತೋ ರಾಜಶಾರ್ದೂಲಃ ಸ ಸ್ವರ್ಗಗತಿಕಾಮ್ಯಯಾ ॥೨೧॥

ಕುಶಚೀರ ವಸ್ತ್ರಗಳನ್ನು ಧರಿಸಿ, ಶ್ರೇಷ್ಠವಾದ ನಿಯಮವನ್ನು ಆಶ್ರಯಿಸಿದವನಾಗಿ ಮೌನವಾಗಿ ಆ ರಾಜಶಾರ್ದೂಲನು ಸ್ವರ್ಗವನ್ನು ಹೊಂದುವ ಇಚ್ಛೆಯಿಂದ ಕುಳಿತುಕೊಂಡನು.

ಮನಸೋಪಚಿತಿಂ ಕೃತ್ವಾ ನಿರಸ್ಯ ಚ ಬಹಿಷ್ಕ್ರಿಯಾಃ ।
ತಸ್ಥೌ ಪ್ರಾಯೋಪವೇಶೇಽಥ ಮತಿಂ ಕೃತ್ವಾ ಸುನಿಶ್ಚಿತಾಮ್ ॥೨೨॥

ಮನಸ್ಸನ್ನು ಬೇರೆ ವಿಷಯಗಳಿಂದ ತೆಗೆದು ಬಾಹ್ಯಕ್ರಿಯೆಗಳೆಲ್ಲವನ್ನೂ ತ್ಯಜಿಸಿ ಪ್ರಾಯೋಪವೇಶದ ವಿಷಯದಲ್ಲಿ ಸುದೃಢವಾದ ಬುದ್ಧಿಯುಳ್ಳವನಾಗಿ ಕುಳಿತನು.

ಅಥ ತಂ ನಿಶ್ಚಯಂ ತಸ್ಯ ಬುದ್ಧ್ವಾ ದೈತೇಯದಾನವಾಃ ।
ಪಾತಾಳವಾಸಿನೋ ರೌದ್ರಾಃ ಪೂರ್ವಂ ದೇವೈರ್ವಿನಿರ್ಜಿತಾಃ ॥೨೩॥

ತೇ ಸ್ವಪಕ್ಷಕ್ಷಯಂ ತಂ ತು ಜ್ಞಾತ್ವಾ ದುರ್ಯೋಧನಸ್ಯ ವೈ ।
ಆಹ್ವಾನಾಯ ತದಾ ಚಕ್ರುಃ ಕರ್ಮ ವೈತಾನಸಂಭವಮ್ ॥೨೪॥

ಅವನ ನಿಶ್ಚಯವನ್ನು ತಿಳಿದ ಪಾತಾಳವಾಸಿಗಳೂ, ಉಗ್ರರೂ, ಹಿಂದೆ ದೇವತೆಗಳಿಂದ ಪರಾಜಿತರಾದವರೂ ಆದ ದೈತ್ಯದಾನವರು ತಮ್ಮ ಪಕ್ಷದ ಕ್ಷಯವನ್ನು

ತಿಳಿದವರಾಗಿ ದುರ್ಯೋಧನನನ್ನು ಕರೆಯಲು ಆಗ ಒಂದು ಅಭಿಚಾರಕ ಪ್ರಯೋಗವನ್ನು ಮಾಡಿದರು.

ಬೃಹಸ್ಪತ್ಯುಶನಃಪ್ರೋಕ್ತೈಃ ಮಂತ್ರೈರ್ಮಂತ್ರವಿಶಾರದಾಃ ।
ಅಥರ್ವವೇದಪ್ರೋಕ್ತೈಶ್ಚ ಯಾಶ್ಚೋಪನಿಷದಿ ಕ್ರಿಯಾಃ ।
ಮಂತ್ರಜಪ್ಯಸಮಾಯುಕ್ತಾಸ್ತಾದಾ ಸಂಪ್ರವರ್ತಯನ್ ॥೨೫॥

ಮಂತ್ರವಿಶಾರದರಾದ ಅವರು ಬೃಹಸ್ಪತಿ ಮತ್ತು ಶುಕ್ರಾಚಾರ್ಯರು ಹೇಳಿದ ಮಂತ್ರದಿಂದಲೂ, ಅಥರ್ವವೇದದಲ್ಲಿ ಹೇಳಿರುವ ವಿಧಾನದಿಂದಲೂ ಮಂತ್ರ ಮತ್ತು ಜಪಗಳನ್ನು ಮಾಡಿದವರಾಗಿ ಉಪನಿಷತ್ತಿನಲ್ಲಿ ಹೇಳಿದ ಕ್ರಿಯೆಗಳನ್ನು ಆಗ ನೆರವೇರಿಸಿದರು.

ಜುಹ್ವತ್ಯಗ್ನೌ ಹವಿಃ ಕ್ಷೀರಂ ಮಂತ್ರವತ್ಸುಸಮಾಹಿತಾಃ ।
ಬ್ರಾಹ್ಮಣಾ ವೇದವೇದಾಂಗಪಾರಗಾಃ ಸ್ಯದೃಢವ್ರತಾಃ ॥೨೬॥

ವೇದವೇದಾಂಗ ಪಾರಂಗತರೂ, ದೃಢವ್ರತರೂ ಆದ ಬ್ರಾಹ್ಮಣರು ಆಗ ಮಂತ್ರಪೂರ್ವಕವಾಗಿ ಅಗ್ನಿಯಲ್ಲಿ ಕ್ಷೀರರೂಪವಾದ ಹವಿಸ್ಸನ್ನು ಹೋಮ ಮಾಡಿದರು.

ಅಧ್ವರ್ಯವೋ ದಾನವಾನಾಂ ಕರ್ಮ ಪ್ರಾವರ್ತಯಂಸ್ತತಃ ॥೨೭॥

ಕರ್ಮಸಿದ್ಧೌ ತದಾ ತತ್ರ ಜೃಂಭಮಾಣಾ ಮಹಾದ್ಭುತಾ ।
ಕೃತ್ಯಾ ಸಮುತ್ಥಿತಾ ರಾಜನ್ ಕಿಂ ಕರೋಮೀತಿ ಚಾಬ್ರವೀತ್ ॥೨೮॥

ಆಹುರ್ದೈತ್ಯಾಶ್ಚ ತಾಂ ತತ್ರ ಸುಪ್ರೀತೇನಾಂತರಾತ್ಮನಾ ।
ಪ್ರಾಯೋಪವಿಷ್ಟಂ ರಾಜಾನಂ ಧಾರ್ತರಾಷ್ಟ್ರಮಿಹಾನಯ ॥೩೦॥

ದಾನವರ ಅಧ್ವರ್ಯುಗಳಾದ ಬ್ರಾಹ್ಮಣರು ಆಗ ಅಲ್ಲಿ ಆ ಕರ್ಮವನ್ನು ನೆರವೇರಿಸಿದರು. ರಾಜನೇ, ಆ ಕರ್ಮವು ಸಂಪೂರ್ಣಗೊಳ್ಳುತ್ತಿರಲು ಒಂದು ಬಹಳ ದೊಡ್ಡದಾಗ ಮತ್ತು ಅದ್ಭುತವಾದ ಕೃತ್ಯೆಯು (ಪಿಶಾಚಿಯು) ಎದ್ದು ನಾನು ಏನು ಮಾಡಲಿ ಎಂದು ಕೇಳಿತು. ಆಗ ದೈತ್ಯರು ಸಂತೋಷಗೊಂಡ ಮನಸ್ಸುಳ್ಳವರಾಗಿ ಪ್ರಾಯೋಪ್ರವೇಶಕ್ಕೆ ಕುಳಿತ ದುರ್ಯೋಧನನನ್ನು ಇಲ್ಲಿಗೆ ಕರೆದುಕೊಂಡು ಬಾ ಎಂದು ಹೇಳಿದರು.

ವೈಶಂಪಾಯನಃ

ತಥೇತಿ ಚ ಪ್ರತಿಶ್ರುತ್ಯ ಸಾ ಕೃತ್ಯಾ ಪ್ರಯಯೌ ತದಾ ।
ನಿಮೇಷಾದಗಮಚ್ಚಾಪಿ ಯತ್ರ ರಾಜಾ ಸುಯೋಧನಃ ॥೩೦॥

ಆ ಕೃತ್ಯೆಯು ಹಾಗೆಯೇ ಆಗಲಿ ಎಂದು ಪ್ರತಿಜ್ಞೆ ಮಾಡಿ ಅಲ್ಲಿಂದ ಹೊರಟಿತು. ಮತ್ತು ಒಂದು ನಿಮಿಷದಲ್ಲಿ ರಾಜನಾದ ಸುಯೋಧನನು ಕುಳಿತಿದ್ದ ಸ್ಥಳಕ್ಕೆ ಬಂದಿತು.

ಸಮಾದಾಯ ಚ ರಾಜಾನಂ ಪ್ರವಿವೇಶ ರಸಾತಳಮ್ ।
ದಾನವಾನಾಂ ಮುಹೂರ್ತಾಚ್ಚ ತಮಾನೀತಂ ನ್ಯವೇದಯತ್ ॥೩೧॥

ಮತ್ತು ರಾಜನನ್ನು ಎತ್ತಿಕೊಂಡು ರಸಾತಲ ಲೋಕಕ್ಕೆ ಹೋಯಿತು. ಒಂದು ಮುಹೂರ್ತದ ಸಮಯದಲ್ಲಿ ದಾನವರಿಗೆ ಅದು ರಾಜನನ್ನು ತಂದಿದ್ದೇನೆಂದು ಹೇಳಿತು.

ತಮಾನೀತಂ ನೃಪಂ ದೃಷ್ಟ್ವಾ ರಾತ್ರೌ ಸಂಹತ್ಯ ದಾನವಾಃ ।
ಪ್ರಹೃಷ್ಟಮನಸಃ ಸರ್ವೇ ಕಂಚಿದುತ್ಫುಲ್ಲಲೋಚನಾಃ ॥೩೨॥

ದೃಢಮೇನಂ ಪರಿಷ್ವಜ್ಯ ಪೃಷ್ಟ್ವಾ ಚ ಕುಶಲಂ ತದಾ ।
ಸಾಭಿಮಾನಮಥೋ ವಾಕ್ಯಂ ದುರ್ಯೋಧನಮಥಾಬ್ರುವನ್ ॥೩೩॥

ಅಲ್ಲಿಗೆ ರಾತ್ರಿಯಲ್ಲಿ ತರಲ್ಪಟ್ಟ ಅವನನ್ನು ನೋಡಿ ದಾನವರೆಲ್ಲರೂ ಸಂತೋಷಗೊಂಡ ಮನಸ್ಸುಳ್ಳವರಾಗಿ ಸ್ವಲ್ಪ ಅರಳಿದ ಕಣ್ಣುಳ್ಳವರಾಗಿ ದುರ್ಯೋಧನನನ್ನು ಆಲಿಂಗಿಸಿ ಅವನ ಕುಶಲ ಪ್ರಶ್ನೆಯನ್ನು ಮಾಡಿ ಅಭಿಮಾನ ಪೂರ್ವಕವಾಗಿ ಅವನನ್ನು ಕುರಿತು ಈ ಮಾತನ್ನು ಆಡಿದರು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂಸಂಹಿತಾಯಾಂ ವೈಯಾಸಿಕ್ಯಾಂ
ವನಪರ್ವಣಿ ಏಕಚತ್ವಾರಿಂಶದಧಿಕದ್ವಿಶತತಮೋऽಧ್ಯಾಯಃ ॥
॥ ಇತಿ ಪ್ರಾಯೋಪವೇಶನಪರ್ವಣಿ ದುರ್ಯೋಧನಸ್ಯ ರಸಾತಳನಯನಂ ನಾಮ
ಷಷ್ಠೋऽऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವನಪರ್ವದಲ್ಲಿ ಇನ್ನೂರ ನಲವತ್ತೊಂದನೆಯ ಅಧ್ಯಾಯ ಮುಗಿಯಿತು.

★ ★ ★ ★

ಇನ್ನೂರ ನಲವತ್ತೆರಡನೆಯ ಅಧ್ಯಾಯ

ಪಾತಾಳವಾಸಿಗಳಾದ ದೈತ್ಯದಾನವರಿಂದ ಹೇತೂಪನ್ಯಾಸಪೂರ್ವಕವಾಗಿ ಪ್ರಾಯೋಪವೇಶದಿಂದ ದುರ್ಯೋಧನನ ನಿವರ್ತನೆ.

ದಾನವಾಃ

ಭೋಃ ಸುಯೋಧನ ರಾಜೇಂದ್ರ ಭರತಾನಾಂ ಕುಲೋದ್ವಹ ।
ಶೂರೈಃ ಪರಿವೃತೋ ನಿತ್ಯಂ ತಥೈವ ಚ ಮಹಾತ್ಮಭಿಃ ॥೧॥

ಅಕಾರ್ಷೀಃ ಸಾಹಸಮಿದಂ ಕಸ್ಮಾತ್ ಪ್ರಾಯೋಪವೇಶನಮ್ ।
ಆತ್ಮತ್ಯಾಗೀ ಹ್ಯಧೋ ಯಾತಿ ವಾಚ್ಯತಾಂ ಚಾಯಶಸ್ಕರೀಮ್ ॥೨॥

ದಾನವರು– ಎಲೈ ರಾಜೇಂದ್ರನಾದ ಭರತಕುಲೋದ್ಭವನಾದ ಸುಯೋಧನನೇ, ಶೂರರಿಂದಲೂ ಮತ್ತು ಮಹಾತ್ಮರಿಂದಲೂ ನಿತ್ಯವೂ ಪರಿವೃತನಾದ ನೀನು ಈ ಪ್ರಾಯೋಪವೇಶರೂಪವಾದ ಸಾಹಸಕಾರ್ಯವನ್ನು ಏಕೆ ಮಾಡಿದೆ? ಆತ್ಮತ್ಯಾಗವನ್ನು ಮಾಡುವವನು ಅಧಃಪತನವನ್ನು ಹೊಂದುತ್ತಾನೆ ಮತ್ತು ಲೋಕದಲ್ಲಿ ನಿಂದನೆಯನ್ನು ಮತ್ತು ಅಕೀರ್ತಿಯನ್ನು ಪಡೆಯುತ್ತಾನಷ್ಟೆ?

ನ ಹಿ ಕಾರ್ಯವಿರುದ್ಧೇಷು ಬಹುಪಾಪೇಷು ಕರ್ಮಸು ।
ಮೂಲಘಾತಿಷು ಸಜ್ಜಂತೇ ಬುದ್ಧಿಮಂತೋ ಭವದ್ವಿಧಾಃ ॥೩॥

ನಿನ್ನಂತಹ ಮೇಧಾವಿಗಳು ಮೂಲಘಾತವನ್ನು ಮಾಡುವ, ಉದ್ದೇಶಕ್ಕೆ ವಿರುದ್ಧವಾದ, ಬಹಳ ಪಾಪಕರವಾದ ಕರ್ಮಗಳಲ್ಲಿ ಆಸಕ್ತರಾಗುವುದಿಲ್ಲವಷ್ಟೆ?

ನಿಯಚ್ಛೈನಾಂ ಮತಿಂ ರಾಜನ್ ಧರ್ಮಾರ್ಥಸುಖನಾಶಿನೀಮ್ ।
ಯಶಃಪ್ರತಾಪವೀರ್ಯಘ್ನೀಂ ಶತ್ರೂಣಾಂ ಹರ್ಷವರ್ಧನೀಮ್ ॥೪॥

ಎಲೈ ರಾಜನೇ, ಧರ್ಮಾರ್ಥಸುಖವನ್ನು ನಾಶಮಾಡುವ, ಕೀರ್ತಿ ಪ್ರತಾಪ ಮತ್ತು ಪರಾಕ್ರಮವನ್ನು ನಾಶಮಾಡುವ, ಶತ್ರುಗಳಿಗೆ ಸಂತೋಷವನ್ನು ಹೆಚ್ಚಿಸುವ ಈ ನಿನ್ನ ಬುದ್ಧಿಯನ್ನು ನಿಯಂತ್ರಿಸು.

ಶ್ರೂಯತಾಂ ಚ ಪ್ರಭೋ ತತ್ತ್ವಂ ದಿವ್ಯತಾಂ ಚಾತ್ಮನೋ ನೃಪ ।
ನಿರ್ಮಾಣಂ ಚ ಶರೀರಸ್ಯ ತತೋ ಧೈರ್ಯಮವಾಪ್ನುಹಿ ।
ಪುರಾ ತ್ವಂ ತಪಸಾऽಸ್ಮಾಭಿರ್ಲಬ್ಧೋ ರಾಜನ್ ಮಹೇಶ್ವರಾತ್ ॥೫॥

ಪ್ರಭುವೇ, ರಾಜನೇ, ನಿನ್ನ ಶರೀರವು ಹೇಗೆ ದಿವ್ಯಪ್ರಕಾರದಿಂದ ನಿರ್ಮಾಣವಾಗಿದೆ ಎಂದು ತಿಳಿದು ಧೈರ್ಯವನ್ನು ತಂದುಕೋ. ಎಲೈ ರಾಜನೇ, ನಾವು ಹಿಂದೆ ಮಹೇಶ್ವರನನ್ನು ಕುರಿತು ತಪಸ್ಸು ಮಾಡಿ ನಿನ್ನನ್ನು ಪಡೆದಿದ್ದೇವೆ.

ಪೂರ್ವಕಾಯಶ್ಚ ಸರ್ವಸ್ತೇ ನಿರ್ಮಿತೋ ವಜ್ರಸಂಚಯೈಃ ।
ಅಸ್ತ್ರೈರಭೇದ್ಯಃ ಶಸ್ತ್ರೈಶ್ಚಾಪ್ಯಧಃಕಾಯಸ್ತು ತೇऽನಘ ॥೬॥

ನಿನ್ನ ಪೂರ್ವಕಾಯವೆಲ್ಲವೂ (ನಾಭಿಯಿಂದ ಮೇಲ್ಭಾಗವೆಲ್ಲವೂ) ವಜ್ರಸಮೂಹಗಳಿಂದ ನಿರ್ಮಿತವಾಗಿದೆ. ಅನಘನೇ, ನಿನ್ನ ನಾಭಿಯ ಕೆಳಗಿನ ಶರೀರವೂ ಸಹ ಅಸ್ತ್ರಶಸ್ತ್ರಗಳಿಂದ ಅಭೇದ್ಯವಾಗಿದೆ.

ಕೃತಃ ಪುಷ್ಪಮಯೋ ದೇವ್ಯಾ ರೂಪತಃ ಸ್ತ್ರೀಮನೋಹರಃ ।
ಏವಮೀಶ್ವರಸಂಯುಕ್ತಸ್ತವ ದೇಹೋ ನೃಪೋತ್ತಮ ।
ದೇವ್ಯಾ ಚ ರಾಜಶಾರ್ದೂಲ ದಿವ್ಯಸ್ತ್ವಂ ಹಿ ನ ಮಾನುಷಃ ॥೭॥

ಪಾರ್ವತೀದೇವಿಯು ನಿನ್ನ ಈ ಶರೀರವನ್ನು ಸ್ತ್ರೀಮನೋಹರವಾಗಿ ಪುಷ್ಪಮಯವಾಗಿ ಸೃಷ್ಟಿಸಿದ್ದಾಳೆ. ಎಲೈ ನೃಪೋತ್ತಮನೇ, ರಾಜಶಾರ್ದೂಲನೇ, ಈಗ ನೀನು ಈಶ್ವರನಿಂದಲೂ ಮತ್ತು ಪಾರ್ವತಿಯಿಂದಲೂ ಸಂಯುಕ್ತನಾಗಿರುವುದರಿಂದ ನೀನು ಒಬ್ಬ ದೇವತೆ. ಮನುಷ್ಯನೇ ಅಲ್ಲ.

ಕ್ಷತ್ರಿಯಾಶ್ಚ ಮಹಾವೀರ್ಯಾ ಭಗದತ್ತಪುರೋಗಮಾಃ ।
ದಿವ್ಯಾಸ್ತ್ರನಿಪುಣಾಃ ಶೂರಾಃ ಕ್ಷಪಯಿಷ್ಯಂತಿ ತೇ ರಿಪೂನ್ ।
ತದಲಂ ತೇ ವಿಷಾದೇನ ಭಯಂ ತವ ನ ವಿದ್ಯತೇ ॥೮॥

ಭಗದತ್ತನೇ ಮೊದಲಾದ ಮಹಾಪರಾಕ್ರಮಿಗಳಾದ ಶೂರರಾದ ಕ್ಷತ್ರಿಯರು ದಿವ್ಯಾಸ್ತ್ರಗಳನ್ನು ತಿಳಿದವರಾಗಿ ನಿನ್ನ ಶತ್ರುಗಳನ್ನು ನಾಶಮಾಡುವರು. ಆದ್ದರಿಂದ ನಿನ್ನ ವಿಷಾದವನ್ನು ಸಾಕು ಮಾಡು. ನಿನಗೆ ಭಯವಿಲ್ಲ.

ಸಾಹಾಯ್ಯಾರ್ಥಂ ಚ ತೇ ವೀರಾಃ ಸಂಭೂತಾ ಭುವಿ ದಾನವಾಃ ।
ಭೀಷ್ಮದ್ರೋಣಕೃಪಾದೀಂಶ್ಚ ಪ್ರವೇಕ್ಷ್ಯಂತ್ಯಪರೇಽಸುರಾಃ ।
ತೈರಾವಿಷ್ಟಾ ಘೃಣಾಂ ತ್ಯಕ್ತ್ವಾ ಯೋತ್ಸ್ಯಂತೇ ಸಹ ವೈರಿಭಿಃ ॥೯॥

ನಿನ್ನ ಸಹಾಯಕ್ಕಾಗಿ ವೀರರಾದ ದಾನವರು ಭೂಮಿಯಲ್ಲಿ ಜನಿಸಿದ್ದಾರೆ. ಉಳಿದ ಅಸುರರು ಭೀಷ್ಮದ್ರೋಣಕೃಪಾದಿಗಳನ್ನು ಪ್ರವೇಶಿಸುವರು. ಅವರಿಂದ ಆವಿಷ್ಟರಾದ ಭೀಷ್ಮ- ದ್ರೋಣಾದಿಗಳು ದಯೆಯನ್ನು ತೊರೆದು ಶತ್ರುಗಳ ಜೊತೆಯಲ್ಲಿ ಯುದ್ಧವನ್ನು ಮಾಡುವರು.

ನೈವ ಪುತ್ರಾನ್ನ ಚ ಭ್ರಾತೄನ್ನ ಪಿತೄನ್ನ ಚ ಬಾಂಧವಾನ್ ।
ನೈವ ಶಿಷ್ಯಾನ್ನ ಚ ಜ್ಞಾತೀನ್ನ ಬಾಲಾನ್ನ ಸ್ಥವಿರಾನ್ನ ಚ ।
ಯುಧಿ ಸಂಪ್ರಹರಿಷ್ಯಂತೋ ಮೋಕ್ಷ್ಯಂತಿ ಕುರುಸತ್ತಮ ॥೧೦॥

ಎಲೈ ಕುರುಶ್ರೇಷ್ಠನೇ, ಅವರು ಯುದ್ಧದಲ್ಲಿ ಪ್ರಹಾರವನ್ನು ಮಾಡುತ್ತಾ ಪುತ್ರರನ್ನಾಗಲೀ, ಭ್ರಾತೃಗಳನ್ನಾಗಲೀ, ಪಿತೃಗಳನ್ನಾಗಲೀ, ಬಾಂಧವರನ್ನಾಗಲೀ, ಶಿಷ್ಯರನ್ನಾಗಲೀ, ದಾಯಾದಿಗಳನ್ನಾಗಲೀ, ಬಾಲಕರನ್ನಾಗಲೀ, ವೃದ್ಧರನ್ನಾಗಲೀ ಉಳಿಸುವುದಿಲ್ಲ (ವಧೆ ಮಾಡದೆ ಬಿಡುವುದಿಲ್ಲ).

ನಿಃಸ್ನೇಹಾ ದಾನವಾವಿಷ್ಟಾಃ ಸಮಾಕ್ರಾಂತೇಽಂತರಾತ್ಮನಿ ।
ಪ್ರಹರಿಷ್ಯಂತಿ ವಿವಶಾಃ ಸ್ನೇಹಮುತ್ಸೃಜ್ಯ ದೂರತಃ ॥೧೧॥

ಅವರ ಅಂತರಾತ್ಮವು ದಾನವರಿಂದ ಆವಿಷ್ಟವಾದಾಗ ಭೀಷ್ಮಾದಿಗಳು ವಿವಶರಾಗಿ ಸ್ನೇಹವನ್ನು ದೂರದಲ್ಲಿಟ್ಟು ಸಂಹಾರವನ್ನು ಮಾಡುವರು.

ದೃಷ್ಟಾಃ ಪುರುಷಶಾರ್ದೂಲಾಃ ಕಲುಷೀಕೃತಮಾನಸಾಃ ।
ಅವಿಜ್ಞಾನವಿಮೂಢಾಶ್ಚ ದೈವಾಚ್ಚ ವಿಧಿನಿರ್ಮಿತಾಃ ॥೧೨॥

ವ್ಯಭಾಷಮಾಣಾಶ್ಚಾನ್ಯೋನ್ಯಂ ನ ಮೇ ಜೀವನ್ ವಿಮೋಕ್ಷ್ಯಸೇ ।
ಸರ್ವೇ ಶಸ್ತ್ರಾಸ್ತ್ರಮೋಕ್ಷೇಣ ಪೌರುಷೇ ಸಮವಸ್ಥಿತಾಃ ॥೧೩॥

ಆ ಪುರುಷಶಾರ್ದೂಲರು ಪರಸ್ಪರ ವೈರವುಳ್ಳ ಮನಸ್ಸುಳ್ಳವರಾಗಿ ವಿಧಿಯ ಪ್ರೇರಣೆಯಿಂದ ಅಜ್ಞಾನದಿಂದ ಮೋಹಿತರಾಗಿ ಒಬ್ಬರಿಗೊಬ್ಬರು ನೀನು ನನ್ನ ಎದುರಿನಲ್ಲಿ ಜೀವಂತವಾಗಿ ಹೋಗುವುದಿಲ್ಲ ಎಂದು ಮಾತನಾಡುತ್ತಾ ಶಸ್ತ್ರಾಸ್ತ್ರಗಳನ್ನು ಪ್ರಯೋಗ ಮಾಡಿ ಎಲ್ಲರೂ ಪೌರುಷವನ್ನು ಆಶ್ರಯಿಸುತ್ತಾರೆ.

ಶ್ಲಾಘಮಾನಾಃ ಕುರುಶ್ರೇಷ್ಠ ಕರಿಷ್ಯಂತಿ ಜನಕ್ಷಯಮ್ ।
ತೇಽಪಿ ಪಂಚ ಮಹಾತ್ಮಾನಃ ಪ್ರತಿಯೋತ್ಸ್ಯಂತಿ ಪಾಂಡವಾಃ ।
ಕ್ಷಯಂ ಚೈಷಾಂ ಕರಿಷ್ಯಂತಿ ದೈವಯುಕ್ತಾ ಮಹಾಬಲಾಃ ॥೧೪॥

ಎಲೈ ಕುರುಶ್ರೇಷ್ಠನೇ, ತಮ್ಮನ್ನೇ ತಾವು ಹೊಗಳಿಕೊಳ್ಳುತ್ತಾ ಜನಕ್ಷಯವನ್ನು ಮಾಡುವರು. ಮಹಾತ್ಮರಾದ, ಮಹಾಬಲವುಳ್ಳ ಪಾಂಡವರೂ ಸಹ ದೈವಚೋದಿತರಾಗಿ ಭೀಷ್ಮದ್ರೋಣಾದಿ ಸೈನ್ಯದ ವಧೆಯನ್ನು ಮಾಡುವರು.

ದೈತ್ಯರಕ್ಷೋಗಣಾಶ್ಚೈವ ಸಂಭೂತಾಃ ಕ್ಷತ್ರಯೋನಿಷು ।
ಯೋತ್ಸ್ಯಂತಿ ಯುಧಿ ವಿಕ್ರಮ್ಯ ಶತ್ರುಭಸ್ತವ ಪಾರ್ಥಿವ ॥೧೫॥

ಎಲೈ ರಾಜನೇ, ದೈತ್ಯರ ಮತ್ತು ರಾಕ್ಷಸರ ಗಣಕ್ಕೆ ಸೇರಿದವರು ಕ್ಷತ್ರಿಯ ಜಾತಿಯಲ್ಲಿ ಜನಿಸಿ ವಿಕ್ರಮವನ್ನು ಆಶ್ರಯಿಸಿ ನಿನ್ನ ಶತ್ರುಗಳ ಜೊತೆಯಲ್ಲಿ ಯುದ್ಧವನ್ನು ಮಾಡುವರು.

ಗದಾಭಿರ್ಮುಸಲೈಃ ಶೂಲೈಃ ಶಸ್ತ್ರೈರುಚ್ಚಾವಚೈಸ್ತಥಾ ।
ಪ್ರಹರಿಷ್ಯಂತಿ ತೇ ವೀರಾಸ್ತವಾರಿಷು ಮಹಾಬಲಾಃ ॥೧೬॥

ಮಹಾಬಲರಾದ ಆ ವೀರರು ಗದೆಗಳಿಂದ, ಮುಸಲಗಳಿಂದ, ಶ್ರೇಷ್ಠವಾದ ಮತ್ತು ಕನಿಷ್ಠವಾದ ಶಸ್ತ್ರಗಳಿಂದ ನಿನ್ನ ಶತ್ರುಗಳಲ್ಲಿ ಪ್ರಹಾರವನ್ನು ಮಾಡುವರು.

ಯಚ್ಚ ತೇಽಂತರ್ಗತಂ ವೀರ ಭಯಮರ್ಜುನಸಂಭವಮ್ ।
ತತ್ರಾಪಿ ವಿಹಿತೋಽಸ್ಮಾಭಿರ್ವಧೋಪಾಯೋಽರ್ಜುನಸ್ಯ ವೈ ॥೧೭॥

ಎಲೈ ವೀರನೇ, ಅರ್ಜುನನ ವಿಷಯದಲ್ಲಿ ನಿನಗೆ ಒಳಗೇ ಹುದುಗಿರುವ ಭಯವು ಏನಿದೆಯೋ ಆ ವಿಷಯದಲ್ಲಿಯೂ ಅರ್ಜುನನ ವಧೆಯ ಉಪಾಯವು ನಮ್ಮಿಂದ ಕಂಡುಹಿಡಿಯಲ್ಪಟ್ಟಿದೆ.

ಹತಸ್ಯ ನರಕಸ್ಯಾತ್ಮಾ ಕರ್ಣಮೂರ್ತಿಮುಪಾಶ್ರಿತಃ ।
ತದ್ವೈರಂ ಸಂಸ್ಮರನ್ ವೀರ ಯೋತ್ಸ್ಯತೇ ಕೇಶವಾರ್ಜುನೌ ॥೧೮॥

ಎಲೈ ವೀರನೇ, ನರಕನು ಕೃಷ್ಣನಿಂದ ಹತನಾದ ಮೇಲೆ ಅವನ ಆತ್ಮವು ಕರ್ಣನನ್ನು ಪ್ರವೇಶಿಸಿದೆ. ಅವನು ಆ ಹಿಂದಿನ ವೈರವನ್ನು ಸ್ಮರಿಸಿಕೊಂಡು ಕೃಷ್ಣಾರ್ಜುನರ ಜೊತೆಯಲ್ಲಿ ಯುದ್ಧವನ್ನು ಮಾಡುವನು.

ಸ ತೇ ವಿಕ್ರಮಶೌಂಡೀರೋ ರಣೇ ಪಾರ್ಥಂ ವಿಜೇಷ್ಯತಿ ।
ಕರ್ಣಃ ಪ್ರಹರತಾಂ ಶ್ರೇಷ್ಠಃ ಸರ್ವಾಂಶ್ಚಾರೀನ್ ಮಹಾರಥಃ ॥೧೯॥

ಪರಾಕ್ರಮಪಟುವಾದ ಶಸ್ತ್ರಪ್ರಯೋಗವನ್ನು ಮಾಡುವವರಲ್ಲಿ ಶ್ರೇಷ್ಠನಾದ ಮಹಾರಥನಾದ ಕರ್ಣನು ಯುದ್ಧದಲ್ಲಿ ಅರ್ಜುನನನ್ನೂ ಮತ್ತು ನಿನ್ನ ಎಲ್ಲಾ ಶತ್ರುಗಳನ್ನೂ ಗೆಲ್ಲುವನು.

ಜ್ಞಾತ್ವೈತಚ್ಛದ್ಮನಾ ವಜ್ರೀ ರಕ್ಷಾರ್ಥಂ ಸವ್ಯಸಾಚಿನಃ ।
ಕುಂಡಲೇ ಕವಚಂ ಚೈವ ಕರ್ಣಸ್ಯಾಪಹರಿಷ್ಯತಿ ॥೨೦॥

ಇದನ್ನು ತಿಳಿದ ಇಂದ್ರನು ಅರ್ಜುನನನ್ನು ರಕ್ಷಿಸುವುದಕ್ಕೋಸ್ಕರ ಒಂದು ಛದ್ಮ ಬ್ರಾಹ್ಮಣವೇಷವನ್ನು ಧರಿಸಿ ಕರ್ಣನ ಕವಚ ಕುಂಡಲಗಳನ್ನು ಅಪಹರಿಸುವನು.

ತಸ್ಮಾದಸ್ಮಾಭಿರಪ್ಯತ್ರ ದೈತ್ಯಾಃ ಶತಸಹಸ್ರಶಃ ।
ನಿಯುಕ್ತಾ ರಾಕ್ಷಸಾಶ್ಚೈವ ಯೇ ತೇ ಸಂಶಪ್ತಕಾ ಇತಿ ॥೨೧॥

ಆದ್ದರಿಂದ ನಾವು ಈ ವಿಷಯದಲ್ಲಿ ಸಾವಿರಾರು ಸಂಖ್ಯೆಯಲ್ಲಿ ದೈತ್ಯರನ್ನು ನಿಯೋಜಿಸಿದ್ದೇವೆ. ಸಂಶಪ್ತಕರೆಂದು ಕರೆಯಲ್ಪಡುವ ರಾಕ್ಷಸರೂ ಸಹ ಕರ್ಣನ ರಕ್ಷಣೆಯಲ್ಲಿ ನಿಯೋಜಿಸಲ್ಪಟ್ಟಿದ್ದಾರೆ.

ಪ್ರಖ್ಯಾತಾಸ್ತೇऽರ್ಜುನಂ ವೀರಂ ನಿಹನಿಷ್ಯಂತಿ ಮಾ ಶುಚಃ ।
ಅಸಪತ್ನಾ ತ್ವಯಾ ಹೀಯಂ ಭೋಕ್ತವ್ಯಾ ವಸುಧಾ ನೃಪ ॥೨೨॥

ಪ್ರಖ್ಯಾತರಾದ ಅವರು ವೀರನಾದ ಅರ್ಜುನನನ್ನು ಕೊಲ್ಲುವರು. ನೀನು ಶೋಕಪಡಬೇಡ. ಎಲೈ ರಾಜನೇ, ಶತ್ರುರಹಿತವಾದ ಈ ಭೂಮಿಯನ್ನು ನೀನು ಆಳಬೇಕು.

ಮಾ ವಿಷಾದಂ ಗಮಸ್ತಸ್ಮಾನ್ನೈತತ್ತ್ವಯ್ಯುಪಪದ್ಯತೇ ।
ವಿನಷ್ಟೇ ತ್ವಯಿ ಚಾಸ್ಮಾಕಂ ಪಕ್ಷೋ ಹೀಯೇತ ಕೌರವ ॥೨೩॥

ಆದ್ದರಿಂದ ವಿಷಾದವನ್ನು ಪಡಬೇಡ. ಈ ವಿಷಾದವು ನಿನಗೆ ಯೋಗ್ಯವಾದುದಲ್ಲ. ಎಲೈ ಕೌರವನೇ, ನೀನು ನಾಶವನ್ನು ಹೊಂದಿದರೆ ನಮ್ಮ ಪಕ್ಷವು ಹಾನಿಗೊಳಗಾಗುತ್ತದೆ.

ಗಚ್ಛ ವೀರ ನ ತೇ ಬುದ್ಧಿರನ್ಯಾ ಕಾರ್ಯಾ ಕಥಂಚನ ।
ತ್ವಮಸ್ಮಾಕಂ ಗತಿರ್ನಿತ್ಯಂ ದೇವತಾನಾಂ ಚ ಪಾಂಡವಾಃ ॥೨೪॥

ಎಲೈ ವೀರನೇ, ನೀನು ಇಲ್ಲಿಂದ ಹೊರಡು. ಯಾವ ಕಾರಣದಿಂದಲೂ ಬೇರೆ ಯೋಚನೆಯನ್ನು ಮಾಡಬೇಡ. ನೀನು ನಿತ್ಯವೂ ನಮಗೆ ಗತಿಯಾದವನು. ಮತ್ತು ಎಲ್ಲ ದೇವತೆಗಳಿಗೆ ಪಾಂಡವರು ಗತಿಯಾದವರು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂಸಂಹಿತಾಯಾಂ ವೈಯಾಸಿಕ್ಯಾಂ
ವನಪರ್ವಣಿ ದ್ವಿಚತ್ವಾರಿಂಶಾಧಿಕದ್ವಿತತಮೋऽಧ್ಯಾಯಃ ॥
॥ ಇತಿ ಪ್ರಾಯೋಪವೇಶನಪರ್ವಣಿ ದಾನವಸಾಂತ್ವನಂ ನಾಮ ಸಪ್ತಮೋಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವನಪರ್ವದಲ್ಲಿ ಇನ್ನೂರ ನಲವತ್ತೆರಡನೆಯ
ಅಧ್ಯಾಯ ಮುಗಿಯಿತು.

★ ★ ★ ★

ಇನ್ನೂರ ನಲವತ್ಮೂರನೆಯ ಅಧ್ಯಾಯ

ಕೃತ್ಯೆಯಿಂದ ಪುನಃ ಪೂರ್ವಸ್ಥಾನದಲ್ಲಿ ದುರ್ಯೋಧನನ ಸ್ಥಾಪನೆ. ದಾನವರ ಉಪದೇಶ ಮತ್ತು ದುರ್ಯೋಧನನ ಸ್ವಪುರ ಪ್ರಾಪ್ತಿ.

ವೈಶಂಪಾಯನಃ

ಏವಮುಕ್ತ್ವಾ ಪರಿಷ್ವಜ್ಯ ದೈತ್ಯಾಸ್ತಂ ರಾಜಕುಂಜರಮ್ ।
ಸಮಾಶ್ವಾಸ್ಯ ಚ ದುರ್ಧರ್ಷಂ ಪುತ್ರವದ್ ದಾನವರ್ಷಭಾಃ ॥೧॥

ಸ್ಥಿರಾಂ ಕೃತ್ವಾ ಬುದ್ಧಿಮಸ್ಯ ಪ್ರಿಯಾಣ್ಯುಕ್ತ್ವಾ ಚ ಭಾರತ ।
ಗಮ್ಯತಾಮಿತ್ಯನುಜ್ಞಾಯ ಜಯಮಾಪ್ನುಹಿ ಚೇತ್ಯಥ ॥೨॥

ವೈಶಂಪಾಯನ– ಎಲೈ ಭಾರತನೇ, ದೈತ್ಯರು ಮತ್ತು ದಾನವಶ್ರೇಷ್ಠರು ರಾಜಕುಂಜರನಾದ ದುರ್ಧರ್ಷನಾದ ಆ ದುರ್ಯೋಧನನಿಗೆ ಈ ರೀತಿಯಾಗಿ ಹೇಳಿ ಅವನನ್ನು ಆಲಿಂಗಿಸಿ ಸಮಾಧಾನಪಡಿಸಿ ಅವನ ಬುದ್ಧಿಯನ್ನು ಸ್ಥಿರಗೊಳಿಸಿ ನೀನು ಹೊರಡು ಎಂದು ಅನುಜ್ಞೆಯನ್ನು ಕೊಟ್ಟು ಜಯವನ್ನು ಹೊಂದು ಎಂದೂ ಆಶಂಸನೆ ಮಾಡಿದರು.

ತೈರ್ವಿಸೃಷ್ಟಂ ಮಹಾಬಾಹುಂ ಕೃತ್ಯಾ ಸೈವಾನಯತ್ಪುನಃ ।
ತಮೇವ ದೇಶಂ ಯತ್ರಾಸೌ ತದಾ ಪ್ರಾಯಮುಪೇಯಿವಾನ್ ॥೩॥

ಅವರಿಂದ ಬೀಳ್ಕೊಡಲ್ಪಟ್ಟ ಮಹಾಬಾಹುವಾದ ಅವನನ್ನು ಅದೇ ಕೃತ್ಯೆಯೇ ಮೊದಲು ಯಾವ ಸ್ಥಳದಲ್ಲಿ ಪ್ರಾಯೋಪ್ರವೇಶಕ್ಕೆ ಕುಳಿತಿದ್ದನೋ ಅಲ್ಲಿಗೇ ತೆಗೆದುಕೊಂಡು ಬಂದಿತು.

ಪ್ರತಿನಿಕ್ಷಿಪ್ಯ ತಂ ವೀರಂ ಕೃತ್ಯಾ ಸಮಭಿಪೂಜ್ಯ ಚ ।
ಅನುಜ್ಞಾತಾ ಚ ರಾಜ್ಞಾ ಸಾ ತಥೈವಾಂತರಧೀಯತ ॥೪॥

ಆ ಕೃತ್ಯೆಯು ಆ ವೀರನನ್ನು ಅಲ್ಲಿಟ್ಟು ಅವನನ್ನು ಸತ್ಕರಿಸಿ ರಾಜನಾದ ಅವನಿಂದ ಅಪ್ಪಣೆಯನ್ನು ಪಡೆದು ಅಲ್ಲಿಯೇ ಅಂತರ್ಧಾನವನ್ನು ಹೊಂದಿತು.

ಗತಾಯಾಮಥ ತಸ್ಯಾಂ ತು ರಾಜಾ ದುರ್ಯೋಧನಸ್ತದಾ ।
ಸ್ವಪ್ನಭೂತಮಿದಂ ಸರ್ವಮಚಿಂತಯತ ಭಾರತ ॥೫॥

ಎಲೈ ಭಾರತನೇ, ಆ ಕೃತ್ಯೆಯು ಹೊರಟು ಹೋದಮೇಲೆ ರಾಜನಾದ ದುರ್ಯೋಧನನು ನಡೆದ ಈ ಘಟನೆಯನ್ನೆಲ್ಲಾ ಸ್ವಪ್ನದಂತೆ ಚಿಂತಿಸಿದನು.

ವಿಜೇಷ್ಯಾಮಿ ರಣೇ ಪಾಂಡೂನಿತಿ ಚಾಸ್ಯಾಭವನ್ಮತಿಃ ॥೬॥

ಸಂಸ್ಮೃತ್ಯ ತಾನಿ ವಾಕ್ಯಾನಿ ದಾನವೋಕ್ತಾನಿ ದುರ್ಮತಿಃ ।
ಕರ್ಣಂ ಸಂಶಪ್ತಕಾಂಶ್ಚೈವ ಪಾರ್ಥಸ್ಯಾಮಿತ್ರಘಾತಿನಃ ।
ಅಮನ್ಯತ ವಧೇ ಯುಕ್ತಾನ್ ಸಮರ್ಥಾಂಶ್ಚ ಸುಯೋಧನಃ ॥೭॥

ಯುದ್ಧದಲ್ಲಿ ಪಾಂಡವರನ್ನು ಗೆಲ್ಲುವೆನು ಎಂದು ಅವನಿಗೆ ಬುದ್ಧಿಯುಂಟಾಯಿತು. ದುರ್ಮತಿಯಾದ ಆ ದುರ್ಯೋಧನನು ದಾನವರು ಆಡಿದ ಆ ಮಾತುಗಳನ್ನು ಸ್ಮರಿಸಿಕೊಂಡು ಕರ್ಣನನ್ನು ಮತ್ತು ಸಂಶಪ್ತಕರನ್ನು ಶತ್ರುಘಾತಿಯಾದ ಅರ್ಜುನನ ವಧೆಯಲ್ಲಿ ನಿಯುಕ್ತರಾದವರು ಮತ್ತು ಆ ಕಾರ್ಯವನ್ನು ಮಾಡಲು ಸಮರ್ಥರಾದವರು ಎಂದು ಭಾವಿಸಿದನು.

ಏವಮಾಶಾ ದೃಢಾ ತಸ್ಯ ಧಾರ್ತರಾಷ್ಟ್ರಸ್ಯ ದುರ್ಮತೇಃ ।
ವಿನಿರ್ಜಯೇ ಪಾಂಡವಾನಾಮಭವದ್ ಭರತರ್ಷಭ ॥೮॥

ಎಲೈ ಭರತರ್ಷಭನೇ, ದುರ್ಮತಿಯಾದ ದುರ್ಯೋಧನನಿಗೆ ಪಾಂಡವರನ್ನು ಗೆಲ್ಲುತ್ತೇನೆ ಎಂಬ ಆಸೆಯು ಹೀಗೆ ದೃಢವಾಯಿತು.

ಕರ್ಣೋಽಪ್ಯಾವಿಷ್ಟಚಿತ್ತಾತ್ಮಾ ನರಕಸ್ಯಾಂತರಾತ್ಮನಾ ।
ಅರ್ಜುನಸ್ಯ ವಧೇ ಕ್ರೂರಾಂ ಕರೋತಿ ಸ್ಮ ತದಾ ಮತಿಮ್ ॥೯॥

ಕರ್ಣನೂ ಸಹ ನರಕನ ಅಂತರಾತ್ಮದಿಂದ ಆವಿಷ್ಟವಾದ ಮನಸ್ಸುಳ್ಳವನಾಗಿ ಅರ್ಜುನನ ವಧೆಯನ್ನು ಕುರಿತು ಯಾವಾಗಲೂ ಕ್ರೂರವಾದ ಬುದ್ಧಿಯನ್ನು ಮಾಡಿದನು.

ಸಂಶಪ್ತಕಾಶ್ಚ ತೇ ವೀರಾ ರಾಕ್ಷಸಾವಿಷ್ಟಚೇತಸಃ ।
ರಜಸ್ತಮೋಭ್ಯಾಮಾಕ್ರಾಂತಾಃ ಫಲ್ಗುನಸ್ಯ ವಧೈಷಿಣಃ ॥೧೦॥

ವೀರರಾದ ಆ ಸಂಶಪ್ತಕರೂ ಸಹ ರಾಕ್ಷಸರಿಂದ ಆವಿಷ್ಟವಾದ ಮನಸ್ಸುಳ್ಳವರಾಗಿ ರಜೋಗುಣ ಮತ್ತು ತಮೋಗುಣಗಳಿಂದ ತುಂಬಿದವರಾಗಿ ಅರ್ಜುನನ ವಧೆಯನ್ನು ಆಶಿಸಿದರು.

ಭೀಷ್ಮದ್ರೋಣಕೃಪಾದ್ಯಾಶ್ಚ ದಾನವಾಕ್ರಾಂತಚೇತಸಃ ।
ನ ತಥಾ ಪಾಂಡುಪುತ್ರಾಣಾಂ ಸ್ನೇಹವಂತೋ ವಿಶಾಂಪತೇ ॥೧೧॥

ಎಲೈ ರಾಜನೇ, ಭೀಷ್ಮದ್ರೋಣಕೃಪಾದಿಗಳು ದಾನವರಿಂದ ಆವಿಷ್ಟವಾದ ಮನಸ್ಸುಳ್ಳವರಾಗಿ ಪಾಂಡುಪುತ್ರರಲ್ಲಿ ಮೊದಲಿನಂತೆ ಸ್ನೇಹವನ್ನು ಮಾಡಲಿಲ್ಲ.

ನ ಚಾಚಚಕ್ಷೇ ಕಸ್ಯೈಚಿದೇತದ್ ರಾಜಾ ಸುಯೋಧನಃ ।
ಕೃತ್ಯಯಾऽऽನಾಯ್ಯ ಕಥಿತಂ ಯದಸ್ಯ ನಿಶಿ ದಾನವೈಃ ॥೧೨॥

ರಾಜನಾದ ಸುಯೋಧನನು ಆ ಪಿಶಾಚಿಯು ರಾತ್ರಿಯಲ್ಲಿ ತನ್ನನ್ನು ಕರೆದುಕೊಂಡು ಹೋದುದನ್ನು ಮತ್ತು ದಾನವರು ತನಗೆ ಹೇಳಿದ ಮಾತನ್ನು ಯಾರಿಗೂ ಹೇಳಲಿಲ್ಲ.

ದುರ್ಯೋಧನಂ ನಿಶಾಂತೇ ಚ ಕರ್ಣೋ ವೈಕರ್ತನೋऽಬ್ರವೀತ್ ।
ಸ್ಥಯನ್ನಿವಾಂಜಲಿಂ ಕೃತ್ವಾ ಪಾರ್ಥಿವಂ ಹೇತುಮದ್ವಚಃ ॥೧೩॥

ರಾತ್ರಿಯು ಕಳೆಯುವ ವೇಳೆಗೆ ವೈಕರ್ತನನಾದ ಕರ್ಣನು ರಾಜನಾದ ದುರ್ಯೋಧನನನ್ನು ಕುರಿತು ಕೈಗಳನ್ನು ಮುಗಿದು ನಗುತ್ತಾ ಹೇತುಯುಕ್ತವಾದ ಮಾತುಗಳನ್ನು ಆಡಿದನು.

ನ ಮೃತೋ ಜಯತೇ ಶತ್ರೂನ್ ಜೀವನ್ ಭದ್ರಾಣಿ ಪಶ್ಯತಿ ।
ಮೃತಸ್ಯ ಭದ್ರಾಣಿ ಕುತಃ ಕೌರವೇಯ ಕುತೋ ಜಯಃ ।
ನ ಕಾಲೋऽದ್ಯ ವಿಷಾದಸ್ಯ ಭಯಸ್ಯ ಮರಣಸ್ಯ ವಾ ॥೧೪॥

ಮೃತನಾದವನು ಶತ್ರುಗಳನ್ನು ಜಯಿಸುವುದಿಲ್ಲ. ಬದುಕಿರುವವನು ಮುಂದೆ ಕಲ್ಯಾಣವನ್ನು ಕಾಣುತ್ತಾನೆ. ಎಲೈ ಕೌರವೇಯನೇ, ಮೃತನಾದವನಿಗೆ ಕಲ್ಯಾಣವಾಗಲೀ, ಜಯವಾಗಲೀ ಎಲ್ಲಿಂದ ಬರಬೇಕು? ಇದು ವಿಷಾದಕ್ಕೆ ಅಥವಾ ಭಯಕ್ಕೆ ಅಥವಾ ಮರಣಕ್ಕೆ ಉಚಿತವಾದ ಕಾಲವಲ್ಲ.

ವೈಶಂಪಾಯನಃ

ಪರಿಷ್ವಜ್ಯಾಬ್ರವೀಚ್ಚೈನಂ ಭುಜಾಭ್ಯಾಂ ಸ ಮಹಾಬಲಃ ॥೧೫॥

ಉತ್ತಿಷ್ಠ ರಾಜನ್ ಕಿಂ ಶೇಷೇ ಕಸ್ಮಾಚ್ಛೋಚಸಿ ಶತ್ರುಹನ್ ।
ಶತ್ರೂನ್‌ಪ್ರತಾಪ್ಯ ವೀರ್ಯೇಣ ಸ ಕಥಂ ಮೃತ್ಯುಮಿಚ್ಛಸಿ ॥೧೬॥

ವೈಶಂಪಾಯನ– ಮಹಾಬಲನಾದ ಕರ್ಣನು ತನ್ನ ಭುಜಗಳಿಂದ ದುರ್ಯೋಧನನನ್ನು ಆಲಿಂಗಿಸಿ ಅವನನ್ನು ಕುರಿತು ರಾಜನೇ ಎದ್ದೇಳು. ಏತಕ್ಕೆ ಮಲಗಿದ್ದೀಯೆ? ಶತ್ರುಸೂದನನೇ, ಏತಕ್ಕೆ ಶೋಕಪಡುತ್ತೀಯೆ? ಪರಾಕ್ರಮದಿಂದ

ಶತ್ರುಗಳನ್ನು ಸಂತಾಪಗೊಳಿಸಿದ ನೀನು ಹೇಗೆ ಮರಣವನ್ನು ಬಯಸುತ್ತೀಯೆ? ಎಂದು ಹೇಳಿದನು.

ಅಥವಾ ತೇ ಭಯಂ ಜಾತಂ ದೃಷ್ಟ್ವಾऽರ್ಜುನಪರಾಕ್ರಮಮ್ ।
ಸತ್ಯಂ ತೇ ಪ್ರತಿಜಾನಾಮಿ ವಧಿಷ್ಯಾಮಿ ರಣೇऽರ್ಜುನಮ್ ॥೧೭॥

ಗತೇ ತ್ರಯೋದಶೇ ವರ್ಷೇ ಸತ್ಯೇನಾಯುಧಮಾಲಭೇ ।
ಆನಯಿಷ್ಯಾಮ್ಯಹಂ ಪಾರ್ಥಾನ್ ವಶಂ ತವ ಜನಾಧಿಪ ॥೧೮॥

ಅಥವಾ ನಿನಗೆ ಅರ್ಜುನನ ಪರಾಕ್ರಮವನ್ನು ನೋಡಿ ಭಯವುಂಟಾಗಿದ್ದರೆ ಹದಿಮೂರು ವರ್ಷಗಳು ಕಳೆದ ಮೇಲೆ ನಾನು ಅರ್ಜುನನನ್ನು ಕೊಲ್ಲುವೆನು ಎಂದು ಪ್ರತಿಜ್ಞೆಯನ್ನು ಮಾಡುತ್ತೇನೆ. ನನ್ನ ಆಯುಧವನ್ನು ಹಿಡಿದು ಪ್ರಮಾಣ ಮಾಡಿ ಇದ್ದನ್ನು ಹೇಳುತ್ತಿದ್ದೇನೆ. ಎಲೈ ರಾಜನೇ, ಪಾಂಡವರನ್ನು ನಿನ್ನ ವಶವರ್ತಿಗಳನ್ನಾಗಿ ಮಾಡುವೆನು (ಎಂದು ಹೇಳಿದನು).

ವೈಶಂಪಾಯನಃ

ಏವಮುಕ್ತಸ್ತು ಕರ್ಣೇನ ದೈತ್ಯಾನಾಂ ವಚನಾತ್ ತಥಾ ।
ಪ್ರಣಿಪಾತೇನ ಚಾಪ್ಯೇಷಾಮುದತಿಷ್ಠತ್ ಸುಯೋಧನಃ ॥೧೯॥

ವೈಶಂಪಾಯನ– ಹೀಗೆ ಹೇಳಲ್ಪಟ್ಟ ದುರ್ಯೋಧನನು ಕರ್ಣನ ಮಾತುಗಳಿಂದಲೂ, ದೈತ್ಯರ ಮಾತುಗಳಿಂದಲೂ, ಉಳಿದವರ ನಮಸ್ಕಾರಗಳಿಂದಲೂ ಪ್ರೇರಿತನಾಗಿ ಎದ್ದುನಿಂತನು.

ದೈತ್ಯಾನಾಂ ತದ್ವಚಃ ಶ್ರುತ್ವಾ ಹೃದಿ ಕೃತ್ವಾ ಸ್ಥಿರಾಂ ಮತಿಮ್ ।
ತತೋ ಮನುಜಶಾರ್ದೂಲೋ ಯೋಜಯಾಮಾಸ ವಾಹಿನೀಮ್ ।
ರಥನಾಗಾಶ್ವಕಲಿಲಾಂ ಪದಾತಿಜನಸಂಕುಲಾಮ್ ॥೨೦॥

ದೈತ್ಯರ ಆ ಮಾತುಗಳನ್ನು ಕೇಳಿ ಅದನ್ನು ಮನಸ್ಸಿನಲ್ಲಿ ಇಟ್ಟುಕೊಂಡು ಪಾಂಡವರ ಹನನ ವಿಷಯದಲ್ಲಿ ಸ್ಥಿರವಾದ ಬುದ್ಧಿಯನ್ನು ಹೊಂದಿ ಮನುಜಶಾರ್ದೂಲನಾದ ಅವನು ರಥನಾಗಾಶ್ವಗಳಿಂದ ತುಂಬಿದ ಮತ್ತು ಪದಾತಿಜನರಿಂದ ನಿಬಿಡವಾದ ತನ್ನ ಸೈನ್ಯವನ್ನು ಮುಂದಿನ ಪ್ರಯಾಣಕ್ಕೆ ಯೋಜನೆ ಮಾಡಿದನು.

ಗಂಗೌಘಪ್ರತಿಮಾ ರಾಜನ್ ಸಾ ಪ್ರಯಾತಾ ಮಹಾಚಮೂಃ ।
ಶ್ವೇತಚ್ಛತ್ರೈಃ ಪತಾಕಾಭಿಶ್ಚಾಮರೈಶ್ಚ ಸುಪಾಂಡರೈಃ ॥೨೧॥

ರಥೈರ್ನಾಗೈಃ ಪದಾತೈಶ್ಚ ಶುಶುಭೇಽತೀವ ಸಂಕುಲಾ ॥೨೨॥

ಎಲೈ ರಾಜನೇ, ಗಂಗಾಪ್ರವಾಹದಂತಿದ್ದ ಆ ದೊಡ್ಡ ಸೈನ್ಯವು ಶ್ವೇತಚ್ಛತ್ರಗಳಿಂದಲೂ, ಪತಾಕೆಗಳಿಂದಲೂ, ಶ್ವೇತಚಾಮರಗಳಿಂದಲೂ, ರಥನಾಗ ಪದಾತಿಗಳಿಂದಲೂ ಪ್ರಯಾಣ ಮಾಡುತ್ತಾ ನಿಬಿಡವಾಗಿ ಬಹಳವಾಗಿ ಶೋಭಿಸಿತು.

ವ್ಯಪೇತಾಭ್ರಘನೇ ಕಾಲೇ ದ್ಯೌರಿವ ವ್ಯಾಪ್ತಶಾರದೀ ।
ಹಂಸಪಂಕ್ತಿಸಮಾಕೀರ್ಣಾ ಭ್ರಮತ್ಸಾರಸಶೋಭಿತಾ ॥೨೩॥

ಹಂಸಗಳ ಪಂಕ್ತಿಗಳಿಂದ ನಿಬಿಡವಾಗಿ ಚಲಿಸುವ ಸಾರಸಗಳಿಂದ ಶೋಭಿತವಾದ ನಿರಭ್ರವಾದ ಶರತ್ಕಾಲದ ಆಕಾಶದಂತೆ ಆ ಸೈನ್ಯವು ಶೋಭಿಸಿತು.

ಜಯಾಶೀರ್ಭಿರ್ದ್ವಿಜೇಂದ್ರೈಃ ಸ ಸ್ತೂಯಮಾನೋಽಧಿರಾಜವತ್ ।
ಗೃಹ್ಣನ್ನಂಜಲಿಮಾಲಾಶ್ಚ ಧಾರ್ತರಾಷ್ಟ್ರೋ ಜನಾಧಿಪಃ ॥೨೪॥

ಸುಯೋಧನೋ ಯಯಾವಗ್ರೇ ಶ್ರಿಯಾ ಪರಮಯಾ ಜ್ವಲನ್ ।
ಕರ್ಣೇನ ಸಾರ್ಧಂ ರಾಜೇಂದ್ರ ಸೌಬಲೇನ ಚ ದೇವಿನಾ ॥೨೫॥

ಎಲೈ ರಾಜೇಂದ್ರನೇ, ಜನಾಧಿಪನಾದ ದುರ್ಯೋಧನನು ಬ್ರಾಹ್ಮಣಶ್ರೇಷ್ಠರ ಜಯಾಶೀರ್ವಾದಗಳಿಂದ ಚಕ್ರವರ್ತಿಯಂತೆ ಸ್ತೋತ್ರಮಾಡಲ್ಪಡುತ್ತಾ ಅಂಜಲಿ ಮಾಲೆಗಳನ್ನು ಸ್ವೀಕರಿಸುತ್ತಾ ಪರಮಕಾಂತಿಯಿಂದ ಕಂಗೊಳಿಸುತ್ತಾ ಕರ್ಣನ ಜೊತೆಯಲ್ಲಿ ಮತ್ತು ದ್ಯೂತಪ್ರಿಯನಾದ ಶಕುನಿಯ ಜೊತೆಯಲ್ಲಿ ಮುಂದೆ ಹೊರಟನು.

ದುಃಶಾಸನಾದಯಶ್ಚಾಸ್ಯ ಭ್ರಾತರಃ ಸರ್ವ ಏವ ತೇ ।
ಭೂರಿಶ್ರವಾಃ ಸೋಮದತ್ತೋ ಮಹಾರಾಜಶ್ಚ ಬಾಹ್ಲಿಕಃ ॥೨೬॥

ರಥೈರ್ನಾನಾವಿಧಾಕಾರೈರ್ಹಯೈರ್ಗಜವರೈಸ್ತಥಾ ।
ಪ್ರಯಾಂತಂ ನೃಪಸಿಂಹಂ ತಮನುಜಗ್ಮುಃ ಕುರೂದ್ವಹಾಃ ॥೨೭॥

ಭೂರಿಶ್ರವ, ಸೋಮದತ್ತ, ಬಾಹ್ಲಿಕ ಮಹಾರಾಜ ಮೊದಲಾದ ಕುರೂದ್ವಹರು ನಾನಾವಿಧವಾದ ರಥಗಳಿಂದಲೂ, ಅಶ್ವಗಳಿಂದಲೂ, ಶ್ರೇಷ್ಠವಾದ ಗಜಗಳಿಂದಲೂ ಮುಂದೆ ಸಾಗುತ್ತಿದ್ದ ಆ ರಾಜಸಿಂಹನನ್ನು ಹಿಂಬಾಲಿಸಿದರು.

ಪ್ರತ್ಯುದ್ಗತಾಶ್ಚ ಕುರುಭಿರ್ನಾಗರೈರ್ಬ್ರಾಹ್ಮಣೈರಪಿ ।
ಕಾಲೇನಾಲ್ಪೇನ ರಾಜೇಂದ್ರ ಸ್ವಪುರಂ ವಿವಿಶುಸ್ತದಾ ॥೨೮॥

ಎಲೈ ರಾಜೇಂದ್ರನೇ, ನಗರವಾಸಿಗಳಾದ ಕುರುಗಳಿಂದಲೂ, ಬ್ರಾಹ್ಮಣರಿಂದಲೂ ಎದ್ದು ಮುಂದೆ ಬಂದು ಸ್ವೀಕರಿಸಲ್ಪಟ್ಟು ಅಲ್ಪಕಾಲದಲ್ಲಿಯೇ ಅವರು ತಮ್ಮ ಪಟ್ಟಣವನ್ನು ಪ್ರವೇಶಿಸಿದರು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂಸಂಹಿತಾಯಾಂ ವೈಯಾಸಿಕ್ಯಾಂ
ವನಪರ್ವಣಿ ತ್ರಿಚತ್ವಾರಿಂಶಾಧಿಕದ್ವಿಶತತಮೋಽಧ್ಯಾಯಃ ॥
॥ ಇತಿ ಪ್ರಾಯೋಪವೇಶನಪರ್ವಣಿ ದುರ್ಯೋಧನ ಪುರಪ್ರವೇಶೋನಾಮ
ಅಷ್ಟೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವನಪರ್ವದಲ್ಲಿ ಇನ್ನೂರ ನಲವತ್ಮೂರನೆಯ
ಅಧ್ಯಾಯ ಮುಗಿಯಿತು.

★ ★ ★ ★

ಇನ್ನೂರ ನಲವತ್ತನಾಲ್ಕನೆಯ ಅಧ್ಯಾಯ

ಕರ್ಣನನ್ನು ನಿಂದಿಸಿ ಭೀಷ್ಮರಿಂದ ಪಾಂಡವರ ಜೊತೆಯಲ್ಲಿ ಸಂಧಿ ಮಾಡಿಕೊಳ್ಳುವಂತೆ ದುರ್ಯೋಧನನಿಗೆ ಸೂಚನೆ. ಕರ್ಣನ ಅಸಹನೆಯ ಮಾತುಗಳು ಮತ್ತು ದಿಗ್ವಿಜಯಕ್ಕಾಗಿ ಕರ್ಣನ ಪ್ರಯಾಣ.

ಜನಮೇಜಯಃ

ವರ್ತಮಾನೇಷು ಪಾರ್ಥೇಷು ವನೇ ತೇಷುಮಹಾತ್ಮಸು ।
ಧಾರ್ತರಾಷ್ಟ್ರಾ ಮಹೇಷ್ವಾಸಾಃ ಕಿಮಕುರ್ವತ ಸತ್ತಮ ॥೧॥

ಜನಮೇಜಯ– ಎಲೈ ಸಜ್ಜನರಲ್ಲಿ ಶ್ರೇಷ್ಠನೇ, ಮಹಾತ್ಮರಾದ ಪಾಂಡವರು ಕಾಡಿನಲ್ಲಿ ವಾಸಿಸುತ್ತಿರುವಾಗ ಮಹಾಧನುರ್ಧಾರಿಗಳಾದ ಧೃತರಾಷ್ಟ್ರಪುತ್ರರು ಏನು ಮಾಡಿದರು?

ಕರ್ಣೋ ವೈಕರ್ತನಶ್ಚಾಪಿ ಶಕುನಿಶ್ಚ ಮಹಾಬಲಃ ।
ಭೀಷ್ಮದ್ರೋಣಕೃಪಾಶ್ಚೈವ ತನ್ಮೇ ಶಂಸಿತುಮರ್ಹಸಿ ॥೨॥

ವೈಕರ್ತನನಾದ ಕರ್ಣನೂ, ಮಹಾಬಲನಾದ ಶಕುನಿಯೂ, ಭೀಷ್ಮದ್ರೋಣಕೃಪರೂ ಏನು ಮಾಡಿದರೆಂದು ನನಗೆ ಹೇಳಿ.

ವೈಶಂಪಾಯನಃ

ಏವಂ ಗತೇಷು ಪಾರ್ಥೇಷು ವಿಸೃಷ್ಟೇ ಚ ಸುಯೋಧನೇ ।
ಆಗತೇ ಹಸ್ತಿನಪುರಂ ಮೋಕ್ಷಿತೇ ಪಾಂಡುನಂದನೈಃ ।
ಭೀಷ್ಮೋಽಬ್ರವೀನ್ಮಹಾರಾಜ ಧಾರ್ತರಾಷ್ಟ್ರಮಿದಂ ವಚಃ ॥೩॥

ಎಲೈ ಮಹಾರಾಜನೇ, ಪಾಂಡವರು ಹೀಗಿರುವಾಗ ಪಾಂಡವರಿಂದ ಮೋಚಿತನಾಗಿ ಬಿಡುಗಡೆಗೊಳಿಸಲ್ಪಟ್ಟ ಸುಯೋಧನನು ಹಸ್ತಿನಪುರಕ್ಕೆ ಹಿಂದಿರುಗುತ್ತಿರಲು ಭೀಷ್ಮರು ಸುಯೋಧನನನ್ನು ಕುರಿತು ಹೀಗೆ ಮಾತನಾಡಿದರು.

ಉಕ್ತಂ ತಾತ ಯಥಾ ಪೂರ್ವಂ ಗಚ್ಛತಸ್ತೇ ತಪೋವನಮ್ ।
ಗಮನಂ ಮೇ ನ ರುಚಿತಂ ಮದ್ವಚೋ ನ ಕೃತಂ ಚ ತೇ ॥೪॥

ಪ್ರೀತಿಪಾತ್ರನೇ, ನೀನು ಮೊದಲು ತಪೋವನಕ್ಕೆ ಹೊರಡುವಾಗಲೇ ಇದು ನನಗೆ ಇಷ್ಟವಿಲ್ಲ ಎಂದು ಹೇಳಿದೆನು. ನನ್ನ ಮಾತನ್ನು ನೀನು ನಡೆಸಲಿಲ್ಲ.

ತತಃ ಪ್ರಾಪ್ತಂ ತ್ವಯಾ ವೀರ ಗ್ರಹಣಂ ಶತ್ರುಭಿರ್ಬಲಾತ್ ।
ಮೋಕ್ಷಿತಶ್ಚಾಸಿ ಧರ್ಮಜ್ಞೈಃ ಪಾಂಡವೈರ್ನ ಚ ಲಜ್ಜಸೇ ॥೫॥

ಎಲೈ ವೀರನೇ, ಆದ್ದರಿಂದ ನಿನಗೆ ಶತ್ರುಗಳಿಂದ ಬಲಾತ್ಕಾರದಿಂದ ಗ್ರಹಣವು ಉಂಟಾಯಿತು. ಧರ್ಮಜ್ಞರಾದ ಪಾಂಡವರು ನಿನ್ನನ್ನು ಬಿಡಿಸಿದರು. ಆದರೂ ನಿನಗೆ ನಾಚಿಕೆಯಿಲ್ಲ.

ಪ್ರತ್ಯಕ್ಷಂ ತವ ಗಾಂಧಾರೇ ಸಸೈನ್ಯಸ್ಯ ವಿಶಾಂಪತೇ ।
ಸೂತಪುತ್ರೋಪಯಾದ್ ಭೀತೋ ಗಂಧರ್ವಾಣಾಂ ತದಾ ರಣಾತ್ ॥

ಎಲೈ ಗಾಂಧಾರಿ ಪುತ್ರನೇ, ರಾಜನೇ, ನೀನು ಮತ್ತು ನಿನ್ನ ಸಕಲ ಸೈನ್ಯವು ನೋಡುತ್ತಿರುವಂತೆಯೇ ಗಂಧರ್ವರಿಗೆ ಭೀತನಾಗಿ ಸೂತಪುತ್ರನಾದ ಕರ್ಣನು ರಣರಂಗದಿಂದ ಓಡಿಹೋದನು.

ಕ್ರೋಶತಸ್ತವ ರಾಜೇಂದ್ರ ಸಸೈನ್ಯಸ್ಯ ನೃಪಾತ್ಮಜ ।
ವ್ಯಪಯಾತಃ ಪೃಷ್ಠತಸ್ತತ್ ಪ್ರೇಕ್ಷಮಾಣಃ ಪುನಃ ಪುನಃ ।
ದೃಷ್ಟಸ್ತೇ ವಿಕ್ರಮಶ್ಚೈವ ಪಾಂಡವಾನಾಂ ಮಹಾತ್ಮನಾಮ್ ॥೭॥

ಎಲೈ ರಾಜೇಂದ್ರನೇ, ರಾಜಕುಮಾರನೇ, ನೀನು ಮತ್ತು ನಿನ್ನ ಸೈನ್ಯವು ಕಿರುಚಿಕೊಳ್ಳುತ್ತಿದ್ದರೂ ಅವನು ಆ ಸೈನ್ಯವನ್ನು ಮತ್ತೆ ಮತ್ತೆ ನೋಡುತ್ತಾ ಹಿಂಭಾಗದಿಂದ ಹೊರಟುಹೋದನು. ಮಹಾತ್ಮರಾದ ಪಾಂಡವರ ಪರಾಕ್ರಮವನ್ನು ನೀನು ನೋಡಿದೆ.

ಕರ್ಣಸ್ಯ ಚ ಮಹಾಬಾಹೋ ಸೂತಪುತ್ರಸ್ಯ ದುರ್ಮತೇಃ ॥೮॥

ನ ಚಾಪಿ ಪಾದಭಾಕ್ ಕರ್ಣಃ ಪಾಂಡವಾನಾಂ ನೃಪೋತ್ತಮ ।
ಧನುರ್ವೇದೇ ಚ ಶೌರ್ಯೇ ಚ ಧರ್ಮೇ ವಾ ಧರ್ಮವತ್ಸಲ ॥೯॥

ಮಹಾಬಾಹುವೇ, ದುರ್ಮತಿಯಾದ ಸೂತಪುತ್ರನಾದ ಕರ್ಣನ ವಿಕ್ರಮವನ್ನೂ ನೀನು ನೋಡಿದೆ. ನೃಪಶ್ರೇಷ್ಠನೇ, ಧರ್ಮವತ್ಸಲನೇ, ಧನುರ್ವೇದದಲ್ಲಾಗಲೀ, ಶೌರ್ಯದಲ್ಲಾಗಲೀ, ಧರ್ಮದಲ್ಲಾಗಲೀ ಕರ್ಣನು ಪಾಂಡವರ ನಾಲ್ಕನೆಯ ಒಂದಂಶಕ್ಕೂ ಸಮಾನನಲ್ಲ.

ತಸ್ಮಾದಹಂ ಕ್ಷಮಂ ಮನ್ಯೇ ಪಾಂಡವೈಸ್ತೈರ್ಮಹಾತ್ಮಭಿಃ ।
ಸಂಧಿಂ ಸಂಧಿವಿದಾಂ ಶ್ರೇಷ್ಠ ಕುಲಸ್ಯಾಸ್ಯ ವಿವೃದ್ಧಯೇ ॥೧೦॥

ಆದ್ದರಿಂದ ಸಂಧಿಯನ್ನು ತಿಳಿದವರಲ್ಲಿ ಶ್ರೇಷ್ಠನೇ, ಈ ಕುಲದ ವೃದ್ಧಿಗಾಗಿ ಮಹಾತ್ಮರಾದ ಪಾಂಡವರ ಜೊತೆಯಲ್ಲಿ ಸಂಧಾನವನ್ನು ಮಾಡಿಕೊಳ್ಳುವುದು ಯೋಗ್ಯವೆಂದು ನಾನು ತಿಳಿಯುತ್ತೇನೆ.

ವೈಶಂಪಾಯನಃ

ಏವಮುಕ್ತಶ್ಚ ಭೀಷ್ಮೇಣ ಧಾರ್ತರಾಷ್ಟ್ರೋ ಜನೇಶ್ವರಃ ।
ಪ್ರಹಸ್ಯ ಸಹಸಾ ರಾಜನ್ ವಿಪ್ರತಸ್ಥೇ ಸಸೌಬಲಃ ॥೧೧॥

ವೈಶಂಪಾಯನ– ಎಲೈ ರಾಜನೇ, ಭೀಷ್ಮರಿಂದ ಹೀಗೆ ಹೇಳಲ್ಪಟ್ಟ ರಾಜನಾದ ದುರ್ಯೋಧನನು ನಕ್ಕು ಶಕುನಿಯ ಜೊತೆಯಲ್ಲಿ ತಕ್ಷಣದಲ್ಲಿ ಹೊರಟನು.

ತಂ ತು ಪ್ರಸ್ಥಿತಮಾಜ್ಞಾಯ ಕರ್ಣದುಃಶಾಸನಾದಯಃ ।
ಅನುಜಗ್ಮುರ್ಮಹೇಷ್ವಾಸಾ ಧಾರ್ತರಾಷ್ಟ್ರಂ ಮಹಾಬಲಮ್ ॥೧೨॥

ಮಹಾಬಲನಾದ ದುರ್ಯೋಧನನು ಹೊರಟುದುದನ್ನು ತಿಳಿದು ಮಹೇಶ್ವಾಸರಾದ ಕರ್ಣದುಃಶಾಸನಾದಿಗಳು ಅವನನ್ನು ಹಿಂಬಾಲಿಸಿದರು.

ತಾಂಸ್ತು ಸಂಪ್ರಸ್ಥಿತಾನ್ ದೃಷ್ಟ್ವಾ ಭೀಷ್ಮಃ ಕುರುಪಿತಾಮಹಃ ।
ಲಜ್ಜಯಾऽಧೋಮುಖೋ ರಾಜನ್ ಜಗಾಮ ಸ್ವಂ ನಿವೇಶನಮ್ ॥

ಎಲೈ ರಾಜನೇ, ತಮ್ಮ ಮಾತುಗಳಿಗೆ ಉತ್ತರವನ್ನು ಕೊಡದೆ ಹೊರಟ ಅವರೆಲ್ಲರನ್ನೂ ನೋಡಿ ಕುರುಕುಲಪಿತಾಮಹರಾದ ಭೀಷ್ಮರು ನಾಚಿಕೆಯಿಂದ ತಲೆಯನ್ನು ತಗ್ಗಿಸಿ ತಮ್ಮ ಮನೆಗೆ ಹಿಂದಿರುಗಿದರು.

ಗತೇ ಭೀಷ್ಮೇ ಮಹಾರಾಜ ಧಾರ್ತರಾಷ್ಟ್ರೋ ಜನೇಶ್ವರಃ ।
ಪುನರಾಗಮ್ಯ ತಂ ದೇಶಮಮಂತ್ರಯತ ಮಂತ್ರಿಭಿಃ ॥೧೪॥

ಎಲೈ ಮಹಾರಾಜನೇ, ಭೀಷ್ಮರು ಹೊರಟು ಹೋದಮೇಲೆ ರಾಜನಾದ ಸುಯೋಧನನು ಪುನಃ ಆ ಪ್ರದೇಶಕ್ಕೆ ಬಂದು ಮಂತ್ರಿಗಳ ಜೊತೆಯಲ್ಲಿ ಮಂತ್ರಾಲೋಚನೆಯನ್ನು ಮಾಡಿದನು.

ಕಿಮಸ್ಮಾಕಂ ಭವೇತ್‌ಶ್ರೇಯಃ ಕಿಂ ಕಾರ್ಯಮವಶಿಷ್ಯತೇ ।
ಕಥಂ ಚ ಸುಕೃತಂ ತತ್ ಸ್ಯಾನ್ಮಂತ್ರಯಾಮೋऽದ್ಯ ಯದ್ ಹಿತಮ್ ॥

ನಮಗೆ ಏನು ಮಾಡಿದರೆ ಒಳ್ಳೆಯದಾಗುತ್ತದೆ? ಏನು ಮಾಡುವುದು ಉಳಿದಿದೆ? ಏನು ಮಾಡಿದರೆ ಮಾಡಿದ ಕೆಲಸವು ಒಳ್ಳೆಯ ಫಲವನ್ನು ನೀಡುತ್ತದೆ? ನಮಗೆ ಯಾವುದು ಹಿತ ಎಂದು ಈ ದಿನ ಮಂತ್ರಾಲೋಚನೆಯನ್ನು ಮಾಡೋಣ.

ಕರ್ಣಃ

ದುರ್ಯೋಧನ ನಿಬೋಧೇದಂ ಯತ್ತ್ವಾಂ ವಕ್ಷ್ಯಾಮಿ ಕೌರವ ।
ಶ್ರುತ್ವಾ ವಾಚಂ ತಥಾ ಸರ್ವಂ ಕರ್ತುಮರ್ಹಸ್ಯರಿಂದಮ ॥೧೬॥

ಕರ್ಣ– ಕೌರವನಾದ ದುರ್ಯೋಧನನೇ, ನಾನು ಆಡುವ ಈ ಮಾತನ್ನು ತಿಳಿದುಕೋ. ಅರಿಂದಮನೇ, ನನ್ನ ಮಾತನ್ನು ಪೂರ್ಣವಾಗಿ ಕೇಳಿ ಅನಂತರ ನೀನು ಪ್ರವೃತ್ತನಾಗು.

ತವಾದ್ಯ ಪೃಥಿವೀ ವೀರ ನಿಃಸಪತ್ನಾ ನೃಪೋತ್ತಮ ।
ತಾಂ ಪಾಲಯ ಯಥಾ ಶಕ್ರೋ ಹತಶತ್ರುರ್ಮಹಾಮನಾಃ ॥೧೬.೧॥

ಎಲೈ ನೃಪೋತ್ತಮನೇ, ವೀರನೇ, ಈ ದಿನ ನಿನಗೆ ಶತ್ರುರಹಿತವಾದ ಸಮಗ್ರವಾದ ಭೂಮಿಯು ವಶವಾಗಿದೆ. ಹತಶತ್ರುವಾದ ನೀನು ಸಂತೋಷದಿಂದ ಕೂಡಿ ಇಂದ್ರನಂತೆ ಆ ಭೂಮಿಯನ್ನು ಪಾಲಿಸು.

ವೈಶಂಪಾಯನಃ

ಏವಮುಕ್ತಸ್ತು ಕರ್ಣೇನ ಕರ್ಣಂ ರಾಜಾಽಬ್ರವೀತ್ ಪುನಃ ॥೧೭॥

ವೈಶಂಪಾಯನ– ಕರ್ಣನಿಂದ ಹೀಗೆ ಹೇಳಲ್ಪಟ್ಟ ರಾಜನು ಪುನಃ ಕರ್ಣನನ್ನು ಕುರಿತು ಹೀಗೆ ಮಾತನಾಡಿದನು.

ದುರ್ಯೋಧನಃ

ದುರ್ಲಭಂ ತಸ್ಯ ಕಿಂ ನಾಮ ಯಸ್ಯ ತ್ವಂ ಪುರುಷರ್ಷಭ ।
ಸಹಾಯಶ್ಚಾನುರಕ್ತಶ್ಚ ಮದರ್ಥಂ ಚ ಸಮುದ್ಯತಃ ॥೧೮॥

ಅಭಿಪ್ರಾಯಶ್ಚ(ಸ್ತು)ಮೇ ಕಶ್ಚಿತ್ತಂ ವೈ ಶೃಣು ಯಥಾತಥಮ್ ॥೧೯॥

ದುರ್ಯೋಧನ– ಎಲೈ ಪುರುಷಶ್ರೇಷ್ಠನೇ, ನೀನು ನನಗೆ ಸಹಾಯಕನೂ, ನನ್ನಲ್ಲಿ ಪ್ರೀತಿಯುಕ್ತನೂ ಮತ್ತು ನನ್ನ ಸಲುವಾಗಿ ಪ್ರಯತ್ನಶೀಲನೂ ಆಗಿರುವಾಗ ನನಗೆ ಯಾವುದು ತಾನೇ ದುರ್ಲಭವಾದೀತು? ಆದರೆ ನನಗೆ ಒಂದು ಅಭಿಪ್ರಾಯವಿದೆ. ಅದನ್ನು ಸರಿಯಾಗಿ ಕೇಳು.

ರಾಜಸೂಯಂ ಪಾಂಡವಸ್ಯ ದೃಷ್ಟ್ವಾ ಕ್ರತುವರಂ ಮಹತ್ ।
ಮಮ ಸ್ಪೃಹಾ ಸಮುತ್ಪನ್ನಾ ತಾಂ ಸಂಪಾದಯ ಸೂತಜ ।

ಸೂತಪುತ್ರನೇ, ಪಾಂಡವರು ಕ್ರತುಶ್ರೇಷ್ಠವಾದ ರಾಜಸೂಯ ಮಹಾಯಾಗವನ್ನು ಮಾಡಿದುದನ್ನು ನೋಡಿ ನನಗೂ ಸಹ ಆ ಯಾಗವನ್ನು ಮಾಡಬೇಕೆಂದು ಆಸೆ ಉಂಟಾಗಿದೆ. ಸೂತಪುತ್ರನೇ, ನನಗೆ ಆ ಯಾಗವನ್ನು ಸಂಪಾದಿಸು.

ವೈಶಂಪಾಯನಃ

ಏವಮುಕ್ತಸ್ತತಃ ಕರ್ಣೋ ರಾಜಾನಮಿದಮಬ್ರವೀತ್ ॥೨೦॥

ತವಾದ್ಯ ಪೃತಿವೀಪಾಲಾ ವಶ್ಯಾಃ ಸರ್ವೇ ನೃಪೋತ್ತಮ ।
ಆಹೂಯಂತಾಂ ದ್ವಿಜವರಾಃ ಸಂಭಾರಾಶ್ಚ ಯಥಾವಿಧಿ ॥೨೧॥

ವೈಶಂಪಾಯನ– ಹೀಗೆ ಹೇಳಲ್ಪಟ್ಟ ಕರ್ಣನು ರಾಜನನ್ನು ಕುರಿತು ಹೀಗೆ ಮಾತನಾಡಿದನು. ನೃಪೋತ್ತಮನೇ, ಈ ದಿನ ನಿನಗೆ ಎಲ್ಲ ರಾಜರೂ ವಶರಾಗಿದ್ದಾರೆ. ಎಲ್ಲ ಬ್ರಾಹ್ಮಣಶ್ರೇಷ್ಠರನ್ನೂ ಕರೆಸು. ಯಜ್ಞಸಂಭಾರಗಳನ್ನು ಶಾಸ್ತ್ರೋಕ್ತವಾಗಿ ಅಣಿಮಾಡು.

ಸಂಭ್ರಿಯಂತಾಂ ಕುರುಶ್ರೇಷ್ಠ ಯಜ್ಞೋಪಕರಣಾನಿ ಚ ।
ಋತ್ವಿಜಶ್ಚ ಸಮಾಹೂತಾ ಯಥೋಕ್ತಾ ವೇದಪಾರಗಾಃ ॥೨೨॥

ಕ್ರಿಯಾಂ ಕುರ್ವಂತು ಹೇ ರಾಜನ್ ಯಥಾಶಾಸ್ತ್ರಮರಿಂದಮ ॥೨೩॥

ಕುರುಶ್ರೇಷ್ಠನೇ, ಯಜ್ಞೋಪಕರಣಗಳನ್ನೂ ಸಿದ್ಧಗೊಳಿಸು. ವೇದಪಾರಂಗತರಾದ ಆಹೂತರಾದ ಋತ್ವಿಕ್‌ಗಳು ಎಲೈ ಅರಿಂದಮನೇ, ರಾಜನೇ, ಶಾಸ್ತ್ರೋಕ್ತ ರೀತಿಯಿಂದ ಕ್ರಿಯೆಗಳನ್ನು ಮಾಡಲಿ.

ಬಹ್ವನ್ನಪಾನಸಂಯುಕ್ತಃ ಸುಸಮೃದ್ಧಗುಣಾನ್ವಿತಃ ।
ಪ್ರವರ್ತತಾಂ ಮಹಾಯಜ್ಞಸ್ತವಾಪಿ ವಸುಧಾಧಿಪ ॥೨೪॥

ಎಲೈ ವಸುಧಾಧಿಪನೇ, ಬಹಳ ಅನ್ನಪಾನಗಳಿಂದ ಕೂಡಿದ ಮತ್ತು ಸಮೃದ್ಧವಾದ ಗುಣಗಳಿಂದ ಕೂಡಿದ ನಿನ್ನ ಮಹಾಯಜ್ಞವೂ ಕೂಡ ನಡೆಯಲಿ.

ವೈಶಂಪಾಯನಃ

ಏವಮುಕ್ತಸ್ತು ಕರ್ಣೇನ ಧಾರ್ತರಾಷ್ಟ್ರೋ ವಿಶಾಂಪತೇ ।
ಪುರೋಹಿತಂ ಸಮಾನಾಯ್ಯ ಇದಂ ವಚನಮಬ್ರವೀತ್ ॥೨೫॥

ವೈಶಂಪಾಯನ– ರಾಜನೇ, ಕರ್ಣನಿಂದ ಹೀಗೆ ಹೇಳಲ್ಪಟ್ಟ ದುರ್ಯೋಧನನು ಪುರೋಹಿತರನ್ನು ಕರೆಸಿ ಈ ಮಾತನ್ನು ಆಡಿದನು.

ರಾಜಸೂಯಂ ಕ್ರತುವರಂ ಸಮಾಪ್ತವರದಕ್ಷಿಣಮ್ ।
ಆಹರ ತ್ವಂ ಮಮ ಕೃತೇ ಯಥಾನ್ಯಾಯಂ ಯಥಾಕ್ರಮಮ್ ।

ಶ್ರೇಷ್ಠಕ್ರತುವಾದ ರಾಜಸೂಯವನ್ನು ಶ್ರೇಷ್ಠ ದಕ್ಷಿಣೆಯಿಂದ ಕೂಡಿದುದಾಗಿ ಶಾಸ್ತ್ರಕ್ಕೆ ಅನುಸಾರವಾಗಿ ಕ್ರಮಗಳನ್ನು ಬಿಡದೆ ನನ್ನ ಸಲುವಾಗಿ ಮಾಡುವವನಾಗು.

ವೈಶಂಪಾಯನಃ

ಸ ಏವಮುಕ್ತೋ ನೃಪತಿಮುವಾಚ ದ್ವಿಜಸತ್ತಮಃ ॥೨೬॥

ಬ್ರಾಹ್ಮಣೈಃ ಸಹಿತೋ ಧೀಮಾನ್ ಯೇ ತತ್ರಾಸನ್ ಸಮಾಗತಾಃ ।
ನ ಸ ಶಕ್ಯಃ ಕುರುಶ್ರೇಷ್ಠೇ ಜೀವಮಾನೇ ಯುಧಿಷ್ಠಿರೇ ॥೨೭॥

ಆಹರ್ತುಂ ಕೌರವಶ್ರೇಷ್ಠ ಕುಲೇ ತವ ನೃಪೋತ್ತಮ ।
ದೀರ್ಘಾಯುರ್ಜೀವತಿ ಚ ವೈ ಧೃತರಾಷ್ಟ್ರಃ ಪಿತಾ ನೃಪ ॥೨೮॥

ಅತಶ್ಚಾಪಿ ವಿರುದ್ಧಸ್ತೇ ಕ್ರತುರೇಷ ನೃಪೋತ್ತಮ ॥೨೯॥

ಹೀಗೆ ಹೇಳಲ್ಪಟ್ಟ ಆ ಮೇಧಾವಿಯಾದ ದ್ವಿಜಶ್ರೇಷ್ಠನು ಅಲ್ಲಿ ಬಂದಿದ್ದ ಬ್ರಾಹ್ಮಣರ ಜೊತೆಯಲ್ಲಿ ದುರ್ಯೋಧನನನ್ನು ಕುರಿತು ಹೀಗೆ ಹೇಳಿದನು. ಎಲೈ ನೃಪೋತ್ತಮನೇ, ಕೌರವಶ್ರೇಷ್ಠನೇ, ನಿನ್ನ ಕುಲದಲ್ಲಿ ಹಿರಿಯನಾದ ಯುಧಿಷ್ಠಿರನು ಬದುಕಿರುವಾಗ ನೀನು ಆ ಯಾಗವನ್ನು ಮಾಡಲು ಸಾಧ್ಯವಿಲ್ಲ. ನೃಪೋತ್ತಮನೇ, ನಿನ್ನ ತಂದೆಯಾದ ಧೃತರಾಷ್ಟ್ರನು ದೀರ್ಘಾಯುಷ್ಯವನ್ನು ಹೊಂದಿ ಬದುಕಿದ್ದಾನೆ. ಆದ್ದರಿಂದಲೂ ಈ ಯಾಗವನ್ನು ಮಾಡುವುದು ನಿನಗೆ ವಿರುದ್ಧವಾಗುತ್ತದೆ ಎಂದು ಹೇಳಿದನು.

ಅಸ್ತಿ ತ್ವನ್ಯನ್ಮಹತ್ಕ್ರತ್ವಂ ರಾಜಸೂಯಸಮಂ ಪ್ರಭೋ ।
ತೇನ ತ್ವಂ ಯಜ ರಾಜೇಂದ್ರ ಶೃಣು ಚೇದಂ ವಚೋ ಮಮ ॥೩೦॥

ಪ್ರಭುವೇ, ರಾಜಸೂಯಕ್ಕೆ ಸಮಾನವಾದ ಇನ್ನೊಂದು ಯಾಗವಿದೆ. ರಾಜೇಂದ್ರನೇ, ನೀನು ಆ ಯಾಗವನ್ನು ಮಾಡು ಮತ್ತು ನನ್ನ ಈ ಮಾತನ್ನು ಕೇಳು.

ಯ ಇಮೇ ಪೃಥಿವೀಪಾಲಾಃ ಕರದಾಸ್ತವ ಪಾರ್ಥಿವ ।
ತೇ ಕರಾನ್ ಸಂಪ್ರಯಚ್ಛಂತು ಸುವರ್ಣಂ ಚ ಕೃತಾಕೃತಮ್ ॥೩೧॥

ಎಲೈ ಪಾರ್ಥಿವನೇ, ನಿನಗೆ ಕಪ್ಪವನ್ನು ಕೊಡುವ ಈ ರಾಜರು ಯಾರು ಇದ್ದಾರೆಯೋ ಅವರು ನಿನಗೆ ಆಭರಣ ರೂಪವಾದ ಮತ್ತು ಗಟ್ಟಿಯ ರೂಪವಾದ ಸುವರ್ಣರೂಪವಾದ ಕಪ್ಪವನ್ನು ತಂದುಕೊಡಲಿ.

ತೇನ ತೇ ಕ್ರಿಯತಾಮದ್ಯ ಲಾಂಗಲಂ ನೃಪಸತ್ತಮ ।
ಯಜ್ಞವಾಟಸ್ಯ ತೇ ಭೂಮಿಃ ಕೃಷ್ಯತಾಂ ತೇನ ಭಾರತ ॥೩೨॥

ಎಲೈ ನೃಪಶ್ರೇಷ್ಠನೇ, ಆ ಸುವರ್ಣದಿಂದ ನೀನು ಒಂದು ನೇಗಿಲನ್ನು ಮಾಡಿಸು. ಎಲೈ ಭಾರತನೇ, ಯಜ್ಞವನ್ನು ಮಾಡುವ ಆ ಭೂಮಿಯು ಎಂದರೆ ಯಜ್ಞಶಾಲಾ ಪ್ರದೇಶವು ಆ ನೇಗಿಲಿನಿಂದ ಉಳಲ್ಪಡಲಿ.

ತತ್ರ ಯಜ್ಞೋ ನೃಪಶ್ರೇಷ್ಠ ಪ್ರಭೂತಾನ್ನಃ ಸುಸಂಸ್ಕೃತಃ ।
ಪ್ರವರ್ತತಾಂ ಯಥಾನ್ಯಾಯಂ ಸರ್ವತೋ ಹ್ಯನಿವಾರಿತಃ ॥೩೩॥

ಎಲೈ ನೃಪಶ್ರೇಷ್ಠನೇ, ಅಲ್ಲಿ ಪ್ರಭೂತವಾದ ಅನ್ನವನ್ನು ಹೊಂದಿದ ಸುಸಂಸ್ಕೃತವಾದ ನಿನ್ನ ಯಜ್ಞವು ಯಾವ ವಿಘ್ನವೂ ಇಲ್ಲದೆ ಶಾಸ್ತ್ರೋಕ್ತ ರೀತಿಯಲ್ಲಿ ನಡೆಯಲಿ.

ಏಷ ತೇ ವೈಷ್ಣವೋ ನಾಮ ಯಜ್ಞಃ ಸತ್ಪುರುಷೋಚಿತಃ ।
ಏತೇನ ನೇಷ್ಟವಾನ್ ಕಶ್ಚಿದೃತೇ ವಿಷ್ಣುಂ ಪುರಾತನಮ್ ॥೩೪॥

ಇದಕ್ಕೆ ವೈಷ್ಣವ ಯಜ್ಞ ಎಂದು ಹೆಸರು. ಇದು ಸತ್ಪುರುಷರು ಆಚರಿಸಲು ಯೋಗ್ಯವಾದುದು. ಹಿಂದೆ ವಿಷ್ಣುವನ್ನು ಬಿಟ್ಟು ಯಾರೂ ಈ ಯಾಗವನ್ನು ಮಾಡಿಲ್ಲ.

ರಾಜಸೂಯಂ ಕ್ರತುಶ್ರೇಷ್ಠಂ ಸ್ಪರ್ಧತ್ಯೇಷ ಮಹಾಕ್ರತುಃ ।
ಅಸ್ಮಾಕಂ ರೋಚತೇ ಚೈಷಃ ಶ್ರೇಯಶ್ಚ ತವ ಭಾರತ ॥೩೫॥

ಈ ಮಹಾಯಜ್ಞವು ಕ್ರತುಶ್ರೇಷ್ಠವಾದ ರಾಜಸೂಯದ ಜೊತೆಯಲ್ಲಿ ಸ್ಪರ್ಧೆಯನ್ನು ಮಾಡುತ್ತದೆ. ನಮಗೆ ಇಷ್ಟವಾಗಿದೆ ಮತ್ತು ಭಾರತನೇ, ನಿನಗೆ ಶ್ರೇಯಸ್ಕರವೂ ಆಗಿದೆ.

ನಿರ್ವಿಘ್ನಶ್ಚ ಭವತ್ಯೇಷ ಸಫಲಾ ಸ್ಯಾತ್ಸ್ಪೃಹಾ ತವ ।
ತಸ್ಮಾದೇಷ ಮಹಾಬಾಹೋ ತವ ಯಜ್ಞಃ ಪ್ರವರ್ತತಾಮ್ ॥೩೬॥

ಈ ಯಜ್ಞಕ್ಕೆ ಯಾವ ವಿಘ್ನವೂ ಬರುವುದಿಲ್ಲ. ನಿನ್ನ ಆಸೆಯೂ ಪೂರ್ಣಗೊಳ್ಳುತ್ತದೆ. ಮಹಾಬಾಹುವೇ, ಆ ಕಾರಣದಿಂದ ಈ ನಿನ್ನ ಯಜ್ಞವು ಪ್ರವೃತ್ತವಾಗಲಿ (ಎಂದು ಹೇಳಿದರು).

ಏವಮುಕ್ತಸ್ತು ತೈರ್ವಿಪ್ರೈರ್ಧಾರ್ತರಾಷ್ಟ್ರೋ ಮಹೀಪತಿಃ ।
ಕರ್ಣಂ ಚ ಸೌಬಲಂ ಚೈವ ಭ್ರಾತೃಂಶ್ಚೈವೇದಮಬ್ರವೀತ್ ॥೩೭॥

ರೋಚತೇ ಮೇ ವಚಃ ಕೃತ್ಸ್ನಂ ಬ್ರಾಹ್ಮಣಾನಾಂ ನ ಸಂಶಯಃ ।
ರೋಚತೇ ಯದಿ ಯುಷ್ಮಾಕಂ ತಸ್ಮಾತ್ ಪ್ರಬ್ರೂತ ಮಾಚಿರಮ್ ॥೩೮॥

ಆ ಬ್ರಾಹ್ಮಣರಿಂದ ಹೀಗೆ ಹೇಳಲ್ಪಟ್ಟ ರಾಜನಾದ ದುರ್ಯೋಧನನು ಕರ್ಣನನ್ನೂ, ಶಕುನಿಯನ್ನೂ ಮತ್ತು ತಮ್ಮಂದಿರನ್ನೂ ಕುರಿತು ಬ್ರಾಹ್ಮಣರ ಎಲ್ಲ ಮಾತುಗಳೂ ನನಗೆ ಚೆನ್ನಾಗಿ ಇಷ್ಟವಾಗುತ್ತವೆ. ಇದರಲ್ಲಿ ಸಂಶಯವಿಲ್ಲ. ನಿಮಗೆ ಇಷ್ಟವಾಗುವುದೇ ಇಲ್ಲವೇ ಎಂದು ಶೀಘ್ರವಾಗಿ ಹೇಳಿ ಎಂದು ಹೇಳಿದನು.

ವೈಶಂಪಾಯನಃ

ಏವಮುಕ್ತಾಸ್ತು ತೇ ಸರ್ವೇ ತಥೇತ್ಯೂಚುರ್ನರಾಧಿಪಮ್ ।
ಸಂದಿದೇಶ ತತೋ ರಾಜಾ ವ್ಯಾಪಾರಸ್ಥಾನ್ ಯಥಾಕ್ರಮಮ್ ॥೩೯॥

ವೈಶಂಪಾಯನ– ಹೀಗೆ ಹೇಳಲ್ಪಟ್ಟ ಅವರೆಲ್ಲರೂ ರಾಜನನ್ನು ಕುರಿತು ಹಾಗೆಯೇ ಆಗಲಿ ಎಂದು ಹೇಳಿದರು. ಅನಂತರ ರಾಜನು ಯಾರು ಯಾರು ಯಾವ ಕಾರ್ಯವನ್ನು ಮಾಡಬೇಕೆಂದು ಕ್ರಮದಿಂದ ಹೇಳಿದನು.

ಹಲಸ್ಯ ಕರಣೇ ಚಾಪಿ ವ್ಯಾದಿಷ್ಟಾಃ ಸರ್ವಶಿಲ್ಪಿನಃ ।
ಯಥೋಕ್ತಂ ಚ ನೃಪಶ್ರೇಷ್ಠ ಕೃತಂ ಸರ್ವಂ ಯಥಾಕ್ರಮಮ್ ॥೪೦॥

ಎಲ್ಲ ಶಿಲ್ಪಿಗಳನ್ನೂ ನೇಗಿಲ ನಿರ್ಮಾಣಕ್ಕಾಗಿ ಆಜ್ಞೆಮಾಡಿದನು. ನೃಪಶ್ರೇಷ್ಠನೇ, ಶಾಸ್ತ್ರಕ್ಕೆ ಅನುಗುಣವಾಗಿ ಎಲ್ಲವೂ ಅದೇ ಕ್ರಮದಿಂದ ಸಿದ್ಧಮಾಡಲ್ಪಟ್ಟಿತು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂಸಂಹಿತಾಯಾಂ ವೈಯಾಸಿಕ್ಯಾಂ
ವನಪರ್ವಣಿ ಚತುಶ್ಚತ್ವಾರಿಂಶಾಧಿಕದ್ವಿಶತತಮೋऽಧ್ಯಾಯಃ ॥
॥ ಇತಿ ಪ್ರಾಯೋಪವೇಶನಪರ್ವಣಿ ದುರ್ಯೋಧನ ಯಜ್ಞ ಸಮಾರಂಭೋ ನಾಮ
ನವಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವನಪರ್ವದಲ್ಲಿ ಇನ್ನೂರ ನಲವತ್ತನಾಲ್ಕನೆಯ
ಅಧ್ಯಾಯ ಮುಗಿಯಿತು.

★ ★ ★ ★

ಇನ್ನೂರ ನಲವತ್ತೈದನೆಯ ಅಧ್ಯಾಯ

ದುರ್ಯೋಧನನಿಂದ ಯಾಗಾನುಷ್ಠಾನ. ಋತ್ವಿಕ್‌ಗಳ ಮತ್ತು ಬ್ರಾಹ್ಮಣರ ಸತ್ಕಾರ. ಅವಭೃಥಸ್ನಾನವನ್ನು ಮಾಡಿ ನಗರ ಪ್ರದೇಶ.

ವೈಶಂಪಾಯನಃ

ತತಸ್ತು ಶಿಲ್ಪಿನಃ ಸರ್ವೇ ತೇಽಮಾತ್ಯಪ್ರವರಾಶ್ಚ ಹ ।
ವಿದುರಶ್ಚ ಮಹಾಪ್ರಾಜ್ಞೋ ಧಾರ್ತರಾಷ್ಟ್ರೇ ನ್ಯವೇದಯನ್ ॥೧॥

ಸಜ್ಜಂ ಕ್ರತುವರಂ ರಾಜನ್ ಪ್ರಾಪ್ತಕಾಲಂ ಚ ಭಾರತ ।
ಸೌವರ್ಣಂ ಚ ಕೃತಂ ಸರ್ವಂ ಲಾಂಗಲಂ ಚ ಮಹಾಧನಮ್ ॥೨॥

ವೈಶಂಪಾಯನ– ಅನಂತರ ಎಲ್ಲ ಶಿಲ್ಪಿಗಳು, ಅಮಾತ್ಯರಲ್ಲಿ ಮುಖ್ಯರಾದವರು ಮತ್ತು ಮಹಾಪ್ರಾಜ್ಞರಾದ ವಿದುರನು ದುರ್ಯೋಧನನಿಗೆ ರಾಜನೇ, ಭಾರತನೇ, ಯಾಗಕ್ಕೆ ಸಿದ್ಧಪಡಿಸಬೇಕಾದ ಎಲ್ಲವನ್ನೂ ಯೋಗ್ಯಕಾಲದಲ್ಲಿ ಸಿದ್ಧಪಡಿಸಿದ್ದಾಗಿದೆ. ಬೆಲೆಬಾಳುವ ಸುವರ್ಣಮಯವಾದ ನೇಗಿಲನ್ನೂ ಮಾಡಿಸಿದ್ದಾಗಿದೆ ಎಂದು ಹೇಳಿದರು.

ಏತತ್‌ಶ್ರುತ್ವಾ ನೃಪಶ್ರೇಷ್ಠೋ ಧಾರ್ತರಾಷ್ಟ್ರೋ ವಿಶಾಂಪತೇ ।
ಭೀಷ್ಮೋ ದ್ರೋಣಃ ಕೃಪಃ ಕರ್ಣೋ ಗಾಂಧಾರೀ ಚ ಯಶಸ್ವಿನೀ ।
ಆಜ್ಞಾಪಯಾಮಾಸ ತದಾ ಕ್ರತುರಾಜಪ್ರವರ್ತನೇ ॥೩॥

ಎಲೈ ರಾಜನೇ, ಇದನ್ನು ಕೇಳಿದ ನೃಪಶ್ರೇಷ್ಠನಾದ ದುರ್ಯೋಧನನು ಭೀಷ್ಮರೂ, ದ್ರೋಣರೂ, ಕೃಪರೂ, ಕರ್ಣನೂ, ಯಶಸ್ವಿನಿಯಾದ ಗಾಂಧಾರಿಯೂ ಈ ಕ್ರತುಶ್ರೇಷ್ಠದ ಅನುಷ್ಠಾನಕ್ಕೆ ಅನುಮತಿಯನ್ನು ಕೊಟ್ಟರು. ಆಗ ರಾಜನು ಯಜ್ಞಾನುಷ್ಠಾನಕ್ಕೆ ಆದೇಶವನ್ನು ನೀಡಿದನು.

ತತಃ ಪ್ರವವೃತೇ ಯಜ್ಞಃ ಪ್ರಭೂತಾನ್ನಃ ಸುಸಂಸ್ಕೃತಃ ।
ದೀಕ್ಷಿತಶ್ಚಾಪಿ ಗಾಂಧಾರಿರ್ಯಥಾಶಾಸ್ತ್ರಂ ಯಥಾಕ್ರಮಮ್ ॥೪॥

ಅನಂತರ ದುರ್ಯೋಧನನು ಶಾಸ್ತ್ರಕ್ಕೆ ಅನುಗುಣವಾಗಿ ಕ್ರಮಕ್ಕೆ ಅನುಗುಣವಾಗಿ ದೀಕ್ಷಿತನಾದನು. ಅನಂತರ ಪ್ರಭೂತ ಅನ್ನದಾನದಿಂದ ಕೂಡಿದ ಸುಸಂಸ್ಕೃತವಾದ ಯಜ್ಞವು ಪ್ರವೃತ್ತವಾಯಿತು.

ಪ್ರಹೃಷ್ಟೋ ಧೃತರಾಷ್ಟ್ರಕಭೂದ್ ವಿದುರಶ್ಚ ಮಹಾಮನಾಃ ।
ಭೀಷ್ಮೋ ದ್ರೋಣಃ ಕೃಪಃ ಕರ್ಣೋ ಗಾಂಧಾರೀ ಯ ಯಶಸ್ವಿನೀ ॥೫॥

ಧೃತರಾಷ್ಟ್ರನೂ, ಮಹಾಮನನಾದ ವಿದುರನೂ, ಭೀಷ್ಮರೂ, ದ್ರೋಣರೂ, ಕೃಪರೂ, ಕರ್ಣ ಮತ್ತು ಯಶಸ್ವಿನಿಯಾದ ಗಾಂಧಾರಿಯೂ ಎಲ್ಲರೂ ಸಂತೋಷಪಟ್ಟರು.

ನಿಮಂತ್ರಣಾರ್ಥಂ ದೂತಾಂಶ್ಚ ಪ್ರೇಷಯಾಮಾಸ ಶೀಘ್ರಗಾನ್ ।
ಪಾರ್ಥಿವಾನಾಂ ಚ ರಾಜೇಂದ್ರ ಬ್ರಾಹ್ಮಣಾನಾಂ ತಥೈವ ಚ ॥೬॥

ರಾಜೇಂದ್ರನೇ, ಬ್ರಾಹ್ಮಣರನ್ನೂ ಮತ್ತು ರಾಜರನ್ನೂ ಆಹ್ವಾನಮಾಡಲು ಶೀಘ್ರಗಾಮಿಗಳಾದ ದೂತರನ್ನು ದುರ್ಯೋಧನನು ಕಳುಹಿಸಿದನು.

ತೇ ಪ್ರಯಾತಾ ಯಥೋದ್ದಿಷ್ಟಂ ದೂತಾಸ್ತ್ವರಿತವಾಹನಾಃ ।
ತತ್ರ ಕಂಚಿತ್ ಪ್ರಯಾತಂ ತು ದೂತಂ ದುಃಶಾಸನೋಽಬ್ರವೀತ್ ॥೭॥

ಗಚ್ಛ ದ್ವೈತವನಂ ಕ್ಷಿಪ್ರಂ ಪಾಂಡವಾನ್ ಪಾಪಪೂರುಷಾನ್ ।
ನಿಮಂತ್ರಯ ಯಥಾನ್ಯಾಯಂ ವಿಪ್ರಾಂಸ್ತಸ್ಮಿನ್ ವನೇ ತದಾ ॥೮॥

ಆ ದೂತರೆಲ್ಲರೂ ಶೀಘ್ರವಾಗಿ ಚಲಿಸುವ ವಾಹನಗಳಲ್ಲಿ ತಮ ತಮಗೆ ನಿರ್ದಿಷ್ಟವಾದ ಸ್ಥಳಗಳಿಗೆ ಹೊರಟನು. ಆಗ ದುಃಶಾಸನನು ಹೊರಟಿದ್ದ ಒಬ್ಬ ದೂತನನ್ನು ಕುರಿತು ನೀನು ದ್ವೈತವನಕ್ಕೆ ಶೀಘ್ರವಾಗಿ ಹೋಗಿ ಆ ಪಾಪ ಪುರುಷರಾದ ಪಾಂಡವರನ್ನು ನಿಮಂತ್ರಿಸು. ಆ ವನದಲ್ಲಿರುವ ಉಳಿದ ಬ್ರಾಹ್ಮಣರನ್ನು ಶಾಸ್ತ್ರೋಕ್ತವಾಗಿ ನಿಮಂತ್ರಿಸು ಎಂದು ಹೇಳಿದನು.

ವೈಶಂಪಾಯನಃ

ಸ ಗತ್ವಾ ಪಾಂಡವಾನ್ ಸರ್ವಾನುವಾಚಾಭಿಪ್ರಣಮ್ಯ ಚ ।
ದುರ್ಯೋಧನೋ ಮಹಾರಾಜ ಯಜತೇ ನೃಪಸತ್ತಮಃ ।
ಸ್ವವೀರ್ಯಾರ್ಜಿತಮರ್ಥೌಘಮವಾಪ್ಯ ಕುರುಸತ್ತಮಃ ॥೯॥

ಆ ದೂತನು ಪಾಂಡವರ ಬಳಿಗೆ ಹೋಗಿ ನಮಸ್ಕರಿಸಿ ಅವರೆಲ್ಲರನ್ನೂ ಕುರಿತು ಮಹಾರಾಜನೂ, ನೃಪಶ್ರೇಷ್ಠನೂ, ಕುರುಸತ್ತಮನೂ ಆದ ದುರ್ಯೋಧನನು ತನ್ನ ಬಾಹುಬಲದಿಂದ ಧನರಾಶಿಯನ್ನು ಸಂಪಾದಿಸಿ ಯಾಗವನ್ನು ಮಾಡುತ್ತಿದ್ದಾನೆ.

ತತ್ರ ಗಚ್ಛಂತಿ ರಾಜಾನೋ ಬ್ರಾಹ್ಮಣಾಶ್ಚ ತತಸ್ತತಃ ॥೧೦॥

ಅಹಂ ತು ಪ್ರೇಷಿತೋ ರಾಜನ್ ಕೌರವೇಣ ಮಹಾತ್ಮನಾ ।
ಆಮಂತ್ರಯತಿ ವೋ ರಾಜಾ ಧಾರ್ತರಾಷ್ಟ್ರೋ ಜನೇಶ್ವರಃ ।
ಮನೋಽಭಿಲಷಿತಂ ರಾಜ್ಞಸ್ತಂ ಕ್ರತುಂ ದ್ರಷ್ಟುಮರ್ಹಥ ॥೧೧॥

ಅಲ್ಲಿಗೆ ಬೇರೆ ಬೇರೆ ಸ್ಥಳಗಳಿಂದ ರಾಜರೂ ಮತ್ತು ಬ್ರಾಹ್ಮಣರೂ ಹೋಗುತ್ತಿದ್ದಾರೆ. ಮಹಾತ್ಮನಾದ ಕೌರವನು ನನ್ನನ್ನು ನಿಮ್ಮ ಬಳಿಗೆ ಕಳುಹಿಸಿದ್ದಾನೆ. ಎಲೈ ರಾಜನೇ, ಜನೇಶ್ವರನಾದ ದುರ್ಯೋಧನ ರಾಜನು ನಿಮ್ಮನ್ನು ಆಮಂತ್ರಿಸುತ್ತಿದ್ದಾನೆ. ನೀವು ಬಂದು ಆ ಯಾಗವನ್ನು ನೋಡಬೇಕು ಎಂಬುದು ರಾಜನ ಮನೋಭಿಲಾಷೆ ಎಂದು ಹೇಳಿದನು.

ತತೋ ಯುಧಿಷ್ಠಿರೋ ರಾಜಾ ತತ್ಶ್ರುತ್ವಾ ದೂತಭಾಷಿತಮ್ ।
ಅಬ್ರವೀನ್ನೃಪಶಾರ್ದೂಲೋ ದಿಷ್ಟ್ಯಾ ರಾಜಾ ಸುಯೋಧನಃ ॥೧೨॥

ಯಜತೇ ಕ್ರತುಮುಖ್ಯೇನ ಸರ್ವೇಷಾಂ ಪ್ರೀತಿವರ್ಧನಃ ।
ವಯಮಪ್ಯುಪಯಾಸ್ಯಾಮೋ ನ ತ್ವಿದಾನೀಂ ಕಥಂಚನ ॥೧೩॥

ಸಮಯಃ ಪರಿಪಾಲ್ಯೋ ನೋ ಯಾವದ್ವರ್ಷಂ ತ್ರಯೋದಶಮ್ ।

ಆಗ ರಾಜನಾದ ನೃಪಶಾರ್ದೂಲನಾದ ಯುಧಿಷ್ಠಿರನು ದೂತನ ವಾಕ್ಯವನ್ನು ಕೇಳಿ ಅದೃಷ್ಟವಶಾತ್ ನಮ್ಮ ಪೂರ್ವಜರ ಕೀರ್ತಿಯನ್ನು ಅಭಿವೃದ್ಧಪಡಿಸುವ ದುರ್ಯೋಧನನು ಶ್ರೇಷ್ಠವಾದ ಕ್ರತುವನ್ನು ಮಾಡುತ್ತಿದ್ದಾನೆ. ಆದರೆ ನಾವು ಈಗ ಅಲ್ಲಿಗೆ ಯಾವ ಕಾರಣದಿಂದಲೂ ಹೋಗುವುದಿಲ್ಲ. ಏಕೆಂದರೆ ನಾವು ನಮ್ಮ ಹದಿಮೂರು ವರ್ಷದ ಪ್ರತಿಜ್ಞೆಯನ್ನು ಪಾಲನೆ ಮಾಡಬೇಕು ಎಂದು ಹೇಳಿದನು.

ವೈಶಂಪಾಯನಃ

ಶ್ರುತ್ವೈತದ್ ಧರ್ಮರಾಜಸ್ಯ ಭೀಮೋ ವಚನಮಬ್ರವೀತ್ ॥೧೪॥

ತದಾ ತು ನೃಪತಿರ್ಗಂತಾ ಧರ್ಮರಾಜೋ ಯುಧಿಷ್ಠಿರಃ ।
ಅಸ್ತ್ರಶಸ್ತ್ರಪ್ರದೀಪ್ತೇಽಗ್ನೌ ಯದಾ ತಂ ಪಾತಯಿಷ್ಯತಿ ॥೧೫॥

ವೈಶಂಪಾಯನ– ಧರ್ಮರಾಜನ ಈ ಮಾತುಗಳನ್ನು ಕೇಳಿದ ಭೀಮಸೇನನು ಹೀಗೆ ಮಾತನಾಡಿದನು. ಅಸ್ತ್ರಶಸ್ತ್ರಗಳಿಂದ ಉರಿಯುವ ಅಗ್ನಿಯಲ್ಲಿ ಯಾವಾಗ ದುರ್ಯೋಧನನು ಕೆಡವುತ್ತಾನೆಯೋ ಆ ಕಾಲದಲ್ಲಿ ಮಾತ್ರ ಧರ್ಮರಾಜನಾದ ಯುಧಿಷ್ಠಿರನು ಅಲ್ಲಿಗೆ ಬರುವನು.

ವರ್ಷಾತ್ ತ್ರಯೋದಶಾದೂರ್ಧ್ವಂ ರಣಸತ್ರೇ ನರಾಧಿಪಮ್ ।
ಯದಾ ಕ್ರೋಧಹವಿರ್ಯೋಕ್ತಾ ಧಾರ್ತರಾಷ್ಟ್ರೇಷು ಪಾಂಡವಃ ॥೧೬॥

ಆಗಂತಾಹಂ ತದಾಸ್ಮೀತಿ ವಾಚ್ಯ ಏವಂ ಸುಯೋಧನಃ ॥೧೭॥

ಹದಿಮೂರು ವರ್ಷಗಳು ಕಳೆದ ಮೇಲೆ ಯುದ್ಧ ಎಂಬ ಯಾಗದಲ್ಲಿ ರಾಜನಾದ ಪಾಂಡವನು ದುರ್ಯೋಧನಾದಿಗಳಲ್ಲಿ ಕ್ರೋಧವೆಂಬ ಹವಿಸ್ಸನ್ನು ಯಾವಾಗ ಅಗ್ನಿಯಲ್ಲಿ ಹಾಕುವನೋ ಆಗ ನಾನೂ ಬರುವೆನು ಎಂದು ಸುಯೋಧನನಿಗೆ ಹೇಳು (ಎಂದು ಹೇಳಿದನು).

ವೈಶಂಪಾಯನಃ

ಶೇಷಾಸ್ತು ಪಾಂಡವಾ ರಾಜನ್ ನೈವೋಚುಃ ಕಿಂಚಿದಪ್ರಿಯಮ್ ।
ದೂತಶ್ಚಾಪಿ ಯಥಾವೃತ್ತಂ ಧಾರ್ತರಾಷ್ಟ್ರೇ ನ್ಯವೇದಯತ್ ॥೧೮॥

ವೈಶಂಪಾಯನ– ಎಲೈ ರಾಜನೇ, ಉಳಿದ ಪಾಂಡವರು ಯಾವ ಅಪ್ರಿಯವನ್ನೂ ಮಾತನಾಡಲಿಲ್ಲ. ಆ ದೂತನಾದರೂ ದುರ್ಯೋಧನನ ಬಳಿಗೆ ಹೋಗಿ ನಡೆದುದೆಲ್ಲವನ್ನೂ ನಿವೇದಿಸಿದನು.

ಅಥ ಜಗ್ಮುರ್ನೃಪಶ್ರೇಷ್ಠಂ ನಾನಾಜನಪದೇಶ್ವರಾಃ ।
ಬ್ರಾಹ್ಮಣಾಶ್ಚ ಮಹಾಭಾಗ ಧಾರ್ತರಾಷ್ಟ್ರಪುರಂ ಪ್ರತಿ ॥೧೯॥

ಎಲೈ ಮಹಾನುಭಾವನೇ, ಅನಂತರ ನಾನಾ ದೇಶದ ಅಧಿಪತಿಗಳಾದ ರಾಜಶ್ರೇಷ್ಠರೂ ಮತ್ತು ಬ್ರಾಹ್ಮಣರೂ ದುರ್ಯೋಧನ ಪಟ್ಟಣವಾದ ಹಸ್ತಿನಪುರಕ್ಕೆ ಬಂದರು.

ತೇ ತ್ವರ್ಚಿತಾ ಯಥಾಶಾಸ್ತ್ರಂ ಯಥಾವಿಧಿ ಯಥಾಕ್ರಮಮ್ ।
ಮುದಾ ಪರಮಯಾ ಯುಕ್ತಾಃ ಪ್ರೀತಾಶ್ಚಾಪಿ ನರೇಶ್ವರಾಃ ॥೨೦॥

ಆ ರಾಜರು ಕ್ರಮವಾಗಿ, ವಿಧಿವತ್ತಾಗಿ, ಶಾಸ್ತ್ರಾನುಗುಣವಾಗಿ ಪೂಜಿಸಲ್ಪಟ್ಟು ಪರಮ ಸಂತೋಷದಿಂದ ಕೂಡಿದವರಾದರು.

ಧೃತರಾಷ್ಟ್ರೋಽಪಿ ಕೌರವ್ಯ ಸಂವೃತಃ ಸರ್ವಕೌರವೈಃ ।
ಹರ್ಷೇಣ ಮಹತಾ ಯುಕ್ತೋ ವಿದುರಂ ಪ್ರತ್ಯಭಾಷತ ॥೨೧॥

ಯಥಾ ಸುಖೀ ಜನಃ ಸರ್ವಃ ಕ್ಷತ್ತಃ ಸ್ಯಾದನ್ನಸಂಯುತಃ ।
ತುಷ್ಯೇತ್ ತು ಯಜ್ಞಸದನೇ ಸದಾ ಕ್ಷಿಪ್ರಂ ವಿಧೀಯತಾಮ್ ॥೨೨॥

ಎಲೈ ಕೌರವ್ಯನೇ, ಧೃತರಾಷ್ಟ್ರನೂ ಸಹ ಎಲ್ಲ ಕೌರವರಿಂದಲೂ ಕೂಡಿದವನಾಗಿ ಬಹಳ ಸಂತೋಷವನ್ನು ಹೊಂದಿ ವಿದುರನನ್ನು ಕುರಿತು ಎಲೈ ವಿದುರನೇ, ಹೇಗೆ ಎಲ್ಲ ಜನರು ಸುಖದಿಂದ ಇದ್ದು ಒಳ್ಳೆಯ ಭೋಜನವನ್ನು ಹೊಂದಿ ಯಜ್ಞಶಾಲೆಯಲ್ಲಿ ಸಂತೋಷ ಪಡುವರೋ ಅದರಂತೆ ಎಲ್ಲವನ್ನೂ ಶೀಘ್ರವಾಗಿ ವ್ಯವಸ್ಥೆಗೊಳಿಸು ಎಂದು ಹೇಳಿದನು.

ವಿದುರಸ್ತು ತದಾಜ್ಞಾಯ ಸರ್ವವರ್ಣಾನರಿಂದಮ ।
ಯಥಾಪ್ರಮಾಣತೋ ವಿದ್ವಾನ್ ಪೂಜಯಾಮಾಸ ಧರ್ಮವಿತ್ ॥೨೩॥

ಅರಿಂದಮನೇ, ವಿದ್ವಾಂಸನೂ ಮತ್ತು ಧರ್ಮಜ್ಞನೂ ಆದ ವಿದುರನು ಧೃತರಾಷ್ಟ್ರನ ಅಭಿಪ್ರಾಯವನ್ನು ತಿಳಿದು ಎಲ್ಲ ವರ್ಣದವರನ್ನೂ ಪ್ರಮಾಣಕ್ಕೆ ಅನುಸಾರವಾಗಿ ಪೂಜಿಸಿದನು.

ಭಕ್ಷ್ಯಪೇಯಾನ್ನಪಾನೇನ ಮಾಲ್ಯೈಃ ಶಾಟೈಪಿ ಸುಗಂಧಿಭಿಃ ।
ವಾಸೋಭಿರ್ವಿವಿಧೈಶ್ಚೈವ ಯೋಜಯಾಮಾಸ ಹೃಷ್ಟವತ್ ॥೨೪॥

ಅವನು ಸಂತೋಷದಿಂದ ಭಕ್ಷ್ಯ, ಪೇಯ, ಅನ್ನಪಾನಗಳನ್ನು, ಸುಗಂಧಯುಕ್ತವಾದ ಮಾಲೆಗಳನ್ನೂ, ವಿಧವಿಧವಾದ ವಸ್ತ್ರಗಳನ್ನೂ ಎಲ್ಲರಿಗೂ ತಲಪುವಂತೆ ವ್ಯವಸ್ಥೆ ಮಾಡಿದನು.

ಕೃತ್ವಾ ಹ್ಯಾವಸಥಾನ್ ವೀರೋ ಯಥಾಶಾಸ್ತ್ರಂ ಯಥಾಕ್ರಮಮ್ ।
ಸಾಂತ್ವಯಿತ್ವಾ ಚ ರಾಜೇಂದ್ರೋ ದತ್ತ್ವಾ ಚ ವಿವಿಧಂ ವಸು ।
ವಿಸರ್ಜಯಾಮಾಸ ನೃಪಾನ್ ಬ್ರಾಹ್ಮಣಾಂಶ್ಚ ಸಹಸ್ರಶಃ ॥೨೫॥

ವೀರನಾದ ರಾಜೇಂದ್ರನಾದ ದುರ್ಯೋಧನನು ಶಾಸ್ತ್ರಕ್ಕೆ ಅನುಗುಣವಾಗಿ ಮತ್ತು ಶ್ರೇಷ್ಠತೆಗೆ ಅನುಗುಣವಾಗಿ ಬಿಡಾರಗಳನ್ನು ಮಾಡಿ, ಎಲ್ಲರನ್ನೂ ಸಮಾಧಾನಪಡಿಸಿ, ಅನೇಕ ವಿಧವಾದ ದ್ರವ್ಯಗಳನ್ನು ದಾನವಾಗಿ ಕೊಟ್ಟು ಸಹಸ್ರ ಸಂಖ್ಯೆಯಲ್ಲಿ ಬಂದಿದ್ದ ರಾಜರನ್ನೂ ಮತ್ತು ಬ್ರಾಹ್ಮಣರನ್ನೂ ಬೀಳ್ಕೊಟ್ಟನು.

ಸ್ನಾತಶ್ಚಾವಭೃಥೋ ರಾಜಾ ಧಾರ್ತರಾಷ್ಟ್ರೋ ಮಹಾಮನಾಃ ।
ವಿಸೃಜ್ಯ ಚ ನೃಪಾನ್ ಸರ್ವಾನ್ ಭ್ರಾತೃಭಿಃ ಪರಿವಾರಿತಃ ।
ವಿವೇಶ ಹಸ್ತಿನಪುರಂ ಸಹಿತಃ ಕರ್ಣಸೌಬಲೈಃ ॥೨೬॥

ಮಹಾಮನನಾದ ರಾಜನಾದ ದುರ್ಯೋಧನನು ಅವಭೃಥಸ್ನಾನವನ್ನು ಮಾಡಿ ಎಲ್ಲ ರಾಜರನ್ನೂ ಬೀಳ್ಕೊಟ್ಟು ತಮ್ಮಂದಿರಿಂದ ಕೂಡಿದವನಾಗಿ ಕರ್ಣಶಕುನಿಗಳ ಜೊತೆಯಲ್ಲಿ ಹಸ್ತಿನಪುರವನ್ನು ಪ್ರವೇಶ ಮಾಡಿದನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂಸಂಹಿತಾಯಾಂ ವೈಯಾಸಿಕ್ಯಾಂ
ವನಪರ್ವಣಿ ಪಂಚಚತ್ವಾರಿಂಶದಧಿಕದ್ವಿಶತತಮೋऽಧ್ಯಾಯಃ ॥
॥ ಇತಿ ಪ್ರಾಯೋಪವೇಶನಪರ್ವಣಿ ದುರ್ಯೋಧನಯಜ್ಞೋನಾಮ
ದಶಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವನಪರ್ವದಲ್ಲಿ ಇನ್ನೂರ ನಲವತ್ತೈದನೆಯ
ಅಧ್ಯಾಯ ಮುಗಿಯಿತು.

★ ★ ★ ★

ಇನ್ನೂರ ನಲವತ್ತಾರನೆಯ ಅಧ್ಯಾಯ

ದುರ್ಯೋಧನನ ಸಭೆಯಲ್ಲಿ ಕರ್ಣನಿಂದ ಅರ್ಜುನನ ವಧೆಯ ಪ್ರತಿಜ್ಞೆ. ಅದನ್ನು ಕೇಳಿ ಧರ್ಮರಾಜನ ಚಿಂತೆ.

ವೈಶಂಪಾಯನಃ

ಪ್ರವಿಶಂತಂ ಮಹಾರಾಜ ಸೂತಾಸ್ತುಷ್ಟುವುರಚ್ಯುತಮ್ ।
ಜನಾಶ್ಚಾಪಿ ಮಹೇಷ್ವಾಸಂ ತುಷ್ಟುವೂ ರಾಜಸತ್ತಮ ॥೧॥

ವೈಶಂಪಾಯನ– ಮಹಾರಾಜನೇ, ರಾಜಸತ್ತಮನೇ, ದುರ್ಯೋಧನನು ನಗರವನ್ನು ಪ್ರವೇಶಿಸುತ್ತಿದ್ದಂತೆ ತನ್ನ ವರ್ಚಸ್ಸಿನಿಂದ ಚ್ಯುತನಾಗದ ಆ ಮಹೇಷ್ವಾಸನನ್ನು ಸೂತರೂ ಮತ್ತು ಜನರೂ ಸ್ತೋತ್ರಮಾಡಿದರು.

ಲಾಜೈಶ್ಚಂದನಚೂರ್ಣೈಶ್ಚ ವಿಕೀರ್ಯ ಚ ಜನಾಸ್ತತಃ ।
ಊಚುರ್ದಿಷ್ಟ್ಯಾ ನೃಪಾವಿಘ್ನಃ ಸಮಾಪ್ತೋಽಯಂ ಕ್ರತುಸ್ತವ ॥೨॥

ಲಾಜಗಳನ್ನು ಮತ್ತು ಚಂದನಚೂರ್ಣವನ್ನು ಎರಚಿ ಜನಗಳು ರಾಜನೇ, ದೇವರ ದಯೆಯಿಂದ ಈ ನಿನ್ನ ಯಜ್ಞವು ಚೆನ್ನಾಗಿ ಸಮಾಪ್ತವಾಯಿತು ಎಂದು ಹೇಳಿದರು.

ಅಪರೇ ತ್ವಬ್ರುವಂಸ್ತತ್ರ ವಾದಿಕಾಸ್ತಂ ಮಹೀಪತಿಮ್ ।
ಯುಧಿಷ್ಠಿರಸ್ಯ ಯಜ್ಞಸ್ಯ ನ ಸಮೋ ಹ್ಯೇಷ ತೇ ಕ್ರತುಃ ॥೩॥

ಇನ್ನೂ ಕೆಲವು ಯಥಾರ್ಥವಾದಿಗಳು ಆ ರಾಜನನ್ನು ಕುರಿತು ಈ ನಿನ್ನ ಯಜ್ಞವು ಯುಧಿಷ್ಠಿರನು ಮಾಡಿದ ಯಜ್ಞಕ್ಕೆ ಸಮಾನವಲ್ಲ ಎಂದು ಹೇಳಿದರು.

ನೈವ ತಸ್ಯ ಕ್ರತೋರೇಷ ಕಲಾಮರ್ಹತಿ ಷೋಡಶೀಮ್ ।
ಏವಂ ತತ್ರಾಬ್ರುವನ್ ಕೇಚಿದ್ ವಾದಿಕಾಸ್ತಂ ಜನೇಶ್ವರಮ್ ॥೪॥

ಇನ್ನು ಕೆಲವರು ಸತ್ಯವಾದಿಗಳು ಆ ರಾಜನನ್ನು ಕುರಿತು ಯುಧಿಷ್ಠಿರನು ಮಾಡಿದ ಯಜ್ಞದ ಹದಿನಾರನೆಯ ಒಂದಂಶಕ್ಕೂ ನಿನ್ನ ಯಜ್ಞವು ಸಮಾನವಲ್ಲ ಎಂದು ಹೇಳಿದರು.

ಸೃಹೃದಸ್ತ್ವಬ್ರುವಂಸ್ತತ್ರ ಅತಿ ಸರ್ವಾನಯಂ ಕ್ರತುಃ ।
ಯಯಾತಿರ್ನಹುಷಶ್ಚಾಪಿ ಮಾಂಧಾತಾ ಭರತಸ್ತಥಾ ।
ಕ್ರತುಮೇನಂ ಸಮಾಹೃತ್ಯ ಪೂತಾಃ ಸರ್ವೇ ದಿವಂ ಗತಾಃ ॥೫॥

ಯಯಾತಿ, ನಹುಷ, ಮಾಂಧಾತಾ ಮತ್ತು ಭರತ ಇವರೆಲ್ಲರೂ ಈ ಯಜ್ಞವನ್ನು ನೆರವೇರಿಸಿ ಸ್ವರ್ಗವನ್ನು ಸಂಪಾದಿಸಿದರು. ಈ ಯಜ್ಞವು ಅವೆಲ್ಲವನ್ನೂ ಮೀರಿಸಿದುದು ಎಂದು ಕೆಲವು ಸುಹೃದರು ಹೇಳಿದರು.

ಏತಾ ವಾಚಃ ಶುಭಾಃ ಶೃಣ್ವನ್ ಸುಹೃದಾಂ ಭರತರ್ಷಭ ।
ಪ್ರವಿವೇಶ ಪುರಂ ಹೃಷ್ಟಃ ಸ್ವವೇಶ್ಮ ಚ ನರಾಧಿಪಃ ॥೬॥

ಭರತರ್ಷಭನೇ, ಇಂತಹ ಸುಹೃದರ ಶುಭವಾದ ಮಾತುಗಳನ್ನು ಕೇಳುತ್ತಾ ನರಾಧಿಪನಾದ ಸುಯೋಧನನು ಸಂತೋಷದಿಂದ ತನ್ನ ಪಟ್ಟಣವನ್ನೂ ಅಲ್ಲಿ ತನ್ನ ಮನೆಯನ್ನೂ ಪ್ರವೇಶಿಸಿದನು.

ಅಭಿವಾದ್ಯ ತತಃ ಪಾದೌ ಮಾತಾಪಿತ್ರೋರ್ವಿಶಾಂಪತೇ ।
ಭೀಷ್ಮದ್ರೋಣಕೃಪಾದೀನಾಂ ವಿದುರಸ್ಯ ಚ ಧೀಮತಃ ॥೭॥

ಅಭಿವಾದಿತಃ ಕನೀಯೋಭಿರ್ಭ್ರಾತೃಭಿರ್ಭ್ರಾತೃನಂದನಃ ।
ನಿಷಸಾದಾಸನೇ ಮುಖ್ಯೇ ಭ್ರಾತೃಭಿಃ ಪರಿವಾರಿತಃ ॥೮॥

ಎಲೈ ರಾಜನೇ, ತಂದೆತಾಯಿಗಳಿಗೆ ನಮಸ್ಕಾರವನ್ನು ಮಾಡಿ ಭೀಷ್ಮದ್ರೋಣಕೃಪರ ಮತ್ತು ಮೇಧಾವಿಯಾದ ವಿದುರನ ಪಾದಗಳಿಗೂ ನಮಸ್ಕರಿಸಿ ಭ್ರಾತೃನಂದನನಾದ ಅವನು ತಮ್ಮಂದಿರಿಂದ ನಮಸ್ಕರಿಸಲ್ಪಟ್ಟು ತಮ್ಮಂದಿರಿಂದ ಸುತ್ತುವರಿಯಲ್ಪಟ್ಟು ಮುಖ್ಯವಾದ ಆಸನದಲ್ಲಿ ಕುಳಿತುಕೊಂಡನು.

ಸ(ತ)ಮುತ್ಥಾಯ ಮಹಾರಾಜಂ ಸೂತಪುತ್ರೋಽಬ್ರವೀದ್ ವಚಃ ।
ದಿಷ್ಟ್ಯಾ ತೇ ಭರತಶ್ರೇಷ್ಠ ಸಮಾಪ್ತೋಽಯಂ ಮಹಾಕ್ರತುಃ ॥೯॥

ಹತೇಷು ಯುಧಿ ಪಾರ್ಥೇಷು ರಾಜಸೂಯೇ ತಥಾ ತ್ವಯಾ ।
ಆಹೃತೇಽಹಂ ನರಶ್ರೇಷ್ಠ ತ್ವಾಂ ಸಭಾಜಯಿತಾ ಪುನಃ ॥೧೦॥

ಸೂತಪುತ್ರನಾದ ಕರ್ಣನು ತನ್ನ ಆಸನದಿಂದ ಎದ್ದು ಮಹಾರಾಜನನ್ನು ಕುರಿತು ಭರತಶ್ರೇಷ್ಠನೇ, ದೈವಪ್ರೇರಣೆಯಂತೆ ಈ ಮಹಾಯಜ್ಞವು ಮುಗಿಯಿತು. ನರಶ್ರೇಷ್ಠನೇ, ಯುದ್ಧದಲ್ಲಿ ನೀನು ಪಾಂಡವರನ್ನು ಕೊಂದು ರಾಜಸೂಯ ಯಾಗವನ್ನು ಮಾಡುವಾಗ ನಾನು ಇನ್ನೊಮ್ಮೆ ನಿನ್ನನ್ನು ಸತ್ಕರಿಸುತ್ತೇನೆ ಎಂದು ಹೇಳಿದನು.

ತಮಬ್ರವೀನ್ಮಹಾರಾಜೋ ಧಾರ್ತರಾಷ್ಟ್ರೋ ಮಹಾಯಶಾಃ ॥೧೧॥

ಸತ್ಯಮೇತತ್ ತ್ವಯೋಕ್ತಂ ಹಿ ಪಾಂಡವೇಷು ದುರಾತ್ಮಸು ।
ನಿಹತೇಷು ನರಶ್ರೇಷ್ಠ ಪ್ರಾಪ್ತೇ ಚಾಪಿ ಮಹಾಕ್ರತೌ ।
ರಾಜಸೂಯೇ ಪುನರ್ಧೀರ ತ್ವಮೇವಂ ವರ್ಧಯಿಷ್ಯಸಿ ॥೧೨॥

ಆಗ ಮಹಾಕೀರ್ತಿವಂತನಾದ ದುರ್ಯೋಧನ ಮಹಾರಾಜನು ಕರ್ಣನನ್ನು ಕುರಿತು ನೀನು ಹೇಳಿದ ಮಾತು ಸತ್ಯವಾದುದು. ಎಲೈ ನರಶ್ರೇಷ್ಠನೇ, ಧೀರನೇ, ದುರಾತ್ಮರಾದ ಪಾಂಡವರು ಹತರಾದ ಮೇಲೆ ರಾಜಸೂಯ ಮಹಾಕ್ರತುವನ್ನು ಮಾಡಿದಾಗ ನೀನು ಪುನಃ ನನ್ನನ್ನು ಶುಭಾಶಂಸನೆಗಳಿಂದ ವರ್ಧಿಸುವಿ ಎಂದು ಹೇಳಿದರು.

ಏವಮುಕ್ತ್ವಾ ಮಹಾರಾಜ ಕರ್ಣಮಾಶ್ಲಿಷ್ಯ ಭಾರತ ।
ರಾಜಸೂಯಂ ಕ್ರತುಶ್ರೇಷ್ಠಂ ಚಿಂತಯಾಮಾಸ ಕೌರವಃ ॥೧೩॥

ಎಲೈ ಮಹಾರಾಜನೇ, ಭಾರತನೇ, ಕೌರವನು ಹೀಗೆ ಹೇಳಿ ಕರ್ಣನನ್ನು ಆಲಿಂಗಿಸಿ ಕ್ರತುಶ್ರೇಷ್ಠವಾದ ರಾಜಸೂಯ ಯಾಗವನ್ನು ಕುರಿತು ಚಿಂತಿಸಿದನು.

ಸೋಽಬ್ರವೀತ್ ಕೌರವಾಂಶ್ಚಾಪಿ ಪಾರ್ಶ್ವಸ್ಥಾನ್ ನೃಪಸತ್ತಮಃ ।
ರಾಧೇಯಸೌಬಲಾದೀನ್ ವೈ ಧಾರ್ತರಾಷ್ಟ್ರೋ ಮಹೀಪತಿಃ ॥೧೪॥

ಕದಾ ತು ತಂ ಕ್ರತುವರಂ ರಾಜಸೂಯಂ ಮಹಾಧನಮ್ ।
ನಿಹತ್ಯ ಪಾಂಡವಾನ್ ಸರ್ವಾನಾಹರಿಷ್ಯಾಮಿ ಕೌರವಾಃ ॥೧೫॥

ನೃಪಶ್ರೇಷ್ಠನಾದ ಧೃತರಾಷ್ಟ್ರಪುತ್ರನಾದ ಅವನು ಪಕ್ಕದಲ್ಲಿದ್ದ ಕೌರವರನ್ನೂ ಮತ್ತು ಕರ್ಣಶಕುನಿಗಳನ್ನೂ ಕುರಿತು ಎಲೈ ಕೌರವರೇ, ನಾನು ಯಾವಾಗ ಎಲ್ಲಾ ಪಾಂಡವರನ್ನೂ

ಕೊಂದು ಮಹಾಧನದಿಂದ ಕೂಡಿದ ಕ್ರತುಶ್ರೇಷ್ಠವಾದ ರಾಜಸೂಯವನ್ನು ನೆರವೇರಿಸುವೆನು ಎಂದು ಹೇಳಿದನು.

ತಮಬ್ರವೀತ್ ತದಾ ಕರ್ಣಃ ಶೃಣು ಮೇ ರಾಜಕುಂಜರ ।
ಪಾದೌ ನ ಧಾವಯೇ ತಾವದ್ ಯಾವನ್ನ ನಿಹತೋಽರ್ಜುನಃ ॥೧೬॥

ಆಗ ಕರ್ಣನು ಅವನನ್ನು ಕುರಿತು ಎಲೈ ರಾಜಕುಂಜರನೇ, ನನ್ನ ಮಾತನ್ನು ಕೇಳು. ನಾನು ಅರ್ಜುನನನ್ನು ಕೊಲ್ಲುವವರೆಗೆ ದಾಸಿಯರಿಂದ ನನ್ನ ಪಾದಗಳನ್ನು ಕಾಂತಿ ವಿಶೇಷ ಉಂಟಾಗುವಂತೆ ತೊಳೆಸಿಕೊಳ್ಳುವುದಿಲ್ಲ.

ಕೀಲಾಲಜಂ ನ ಖಾದೇಯಂ ಕರಿಷ್ಯೇ ಚಾಸುಖಿತಮ್ ।
ನಾಸ್ತೀತಿ ನೈವ ವಕ್ಷ್ಯಾಮಿ ಯಾಚಿತೋ ಯೇನ ಕೇನಚಿತ್ ॥೧೭॥

ಹಾಲನ್ನು ಕುಡಿಯುವುದಿಲ್ಲ. ಈ ಅಸುರವ್ರತವನ್ನು ಮಾಡುವೆನು. ಯಾರು ಏನು ಬೇಡಿದರೂ ಇಲ್ಲವೆಂದು ಹೇಳುವುದಿಲ್ಲ (ಎಂದು ಹೇಳಿದನು).

ಅಥೋತ್ಕೃಷ್ಟಂ ಮಹೇಷ್ವಾಸೈರ್ಧಾರ್ತರಾಷ್ಟ್ರೈರ್ಮಹಾರಥೈಃ ॥೧೮॥

ಆಗ ಮಹೇಷ್ವಾಸರೂ ಮಹಾರಥರೂ ಆದ ಧೃತರಾಷ್ಟ್ರಪುತ್ರರು ಸಂತೋಷದಿಂದ ಸಿಂಹನಾದವನ್ನು ಮಾಡಿದರು.

ಪ್ರತಿಜ್ಞಾತೋ ಫಲ್ಗುನಸ್ಯ ವಧೇ ಕರ್ಣೇನ ಸಂಯುಗೇ ।
ವಿಜಿತಾಂಶ್ಚಾಪ್ಯಮನ್ಯಂತ ಪಾಂಡವಾನ್ ಧೃತರಾಷ್ಟ್ರಜಾಃ ॥೧೯॥

ಕರ್ಣನಿಂದ ಯುದ್ಧದಲ್ಲಿ ಅರ್ಜುನನ ವಧೆಯು ಪ್ರತಿಜ್ಞಾತವಾಗುತ್ತಿರಲು ಧೃತರಾಷ್ಟ್ರಪುತ್ರರು ಪಾಂಡವರನ್ನು ವಿಜಿತರೆಂದೇ ತಿಳಿದರು.

ತದಾ ಪ್ರತಿಜ್ಞಾಮಾರುಹ್ಯ ಸೂತಪುತ್ರೇಣ ಭಾಷಿತೇ ॥೨೦॥

ಪ್ರವಿವೇಶ ಗೃಹಂ ಶ್ರೀಮಾನ್ ಯಥಾ ಚೈತ್ರರಥಂ ಪ್ರಭುಃ ।
ತೇಽಪಿ ಸರ್ವೇ ಮಹೇಷ್ವಾಸಾ ಜಗ್ಮುರ್ವೇಶ್ಮಾನಿ ಭಾರತ ॥೨೧॥

ಎಲೈ ರಾಜೇಂದ್ರನೇ, ಸೂತಪುತ್ರನು ಹೀಗೆ ಪ್ರತಿಜ್ಞಾಪೂರ್ವಕವಾಗಿ ಮಾತನಾಡುತ್ತಿರಲು ದುರ್ಯೋಧನನು ಶ್ರೇಷ್ಠರಾದ ಸಭಾಸದರನ್ನು ಕಳುಹಿಸಿ ಚೈತ್ರರಥದಂತೆ ಇದ್ದ ತನ್ನ ಗೃಹವನ್ನು ಪ್ರಭುವೂ, ಕಾಂತಿಯುಕ್ತನೂ ಆದ ಅವನು ಪ್ರವೇಶಿಸಿದನು.

ಕರ್ಣೋಪಿ ಸ್ವಗೃಹಂ ಗತ್ವಾ ಮುದಿತೋ ಬಾಂಧವೈಃ ಸಹ ।
ಪ್ರದದೌ ವಿತ್ತಮರ್ಥಿಭ್ಯೋ ಧನಾಧ್ಯಕ್ಷ ಇವಾಪರಃ ॥೨೨॥

ಕರ್ಣನೂ ಬಂಧುಗಳ ಜೊತೆಯಲ್ಲಿ ಸಂತೋಷದಿಂದ ತನ್ನ ಮನೆಗೆ ಹೋಗಿ ಯಾಚಕರಿಗೆ ಕುಬೇರನಂತೆ ಬೇಡಿದುದನ್ನು ಕೊಟ್ಟನು.

ಸ್ವಾನಿ ಸ್ವಾನಿ ಮಹಾರಾಜ ಭೀಷ್ಮದ್ರೋಣಾದಯೋ ನೃಪಾಃ ।
ಪಾಂಡವಾಶ್ಚ ಮಹೇಷ್ವಾಸಾ ದೂತವಾಕ್ಯಪ್ರಚೋದಿತಾಃ ।
ಚಿಂತಯಂತಸ್ತಮೇವಾರ್ಥಂ ನಾಲಭಂತ ಸುಖಂ ಕ್ವಚಿತ್ ॥೨೩॥

ಎಲೈ ಮಹಾರಾಜನೇ, ಭೀಷ್ಮದ್ರೋಣಾದಿಗಳು ಮತ್ತು ಉಳಿದ ರಾಜರು ತಮ್ಮ ತಮ್ಮ ಮನೆಗಳಿಗೆ ಹೋದರು. ಮಹೇಷ್ವಾಸರಾದ ಪಾಂಡವರಾದರೂ ದೂತರ ಮೂಲಕವಾಗಿ ಕರ್ಣನ ಪ್ರತಿಜ್ಞೆಯನ್ನು ತಿಳಿದು ಅದನ್ನೇ ಕುರಿತು ಚಿಂತಿಸುತ್ತಾ ಸುಖಹೀನರಾದರು.

ಭೂಯಶ್ಚಾರೈರ್ನರವ್ಯಾಘ್ರ ಪ್ರವೃತ್ತಿರುಪಪಾದಿತಾಃ ।
ಪ್ರತಿಜ್ಞಾ ಸೂತಪುತ್ರಸ್ಯ ವಿಜಯಸ್ಯ ವಧಂ ಪ್ರತಿ ॥೨೪॥

ರಾಜೇಂದ್ರನೇ, ನರವ್ಯಾಘ್ರನೇ, ಪುನಃ ಚಾರರ ಮೂಲಕವಾಗಿ ಕರ್ಣನು ಮಾಡಿದ ಅರ್ಜುನನ ವಧೆಯ ಪ್ರತಿಜ್ಞೆಯು ಎಲ್ಲ ಕಡೆಯಲ್ಲಿಯೂ ಹರಡಲ್ಪಟ್ಟಿತು.

ಏತತ್ಶ್ರುತ್ವಾ ಧರ್ಮಪುತ್ರಃ ಸಮುದ್ವಿಗ್ನೋ ನರಾಧಿಪ ।
ಅಧೋಮುಖಶ್ಚಿರಂ ತಸ್ಥೌ ಕಿಂ ಕಾರ್ಯಮಿತಿ ಚಿಂತಯನ್ ॥೨೫॥

ಎಲೈ ನರಾಧಿಪನೇ, ಇದನ್ನು ಕೇಳಿದ ಧರ್ಮಪುತ್ರನು ಉದ್ವೇಗಕ್ಕೆ ಒಳಗಾಗಿ ಮುಖವನ್ನು ಕೆಳಗೆ ಹಾಕಿ ಬಹಳ ಸಮಯದವರೆಗೆ ಏನು ಮಾಡುವುದು ಎಂದು ಚಿಂತಿಸಿದನು.

ಅಭೇದ್ಯಕವಚಂ ಮತ್ವಾ ಕರ್ಣಮದ್ಭುತವಿಕ್ರಮಮ್ ।
ಅನುಸ್ಮರಂಶ್ಚ ಸಂಕ್ಲೇಶಾನ್ ನ ಶಾಂತಿಮುಪಯಾತಿ ಸಃ ॥೨೬॥

ಕರ್ಣನ ಕವಚವು ಅಭೇದ್ಯವೆಂದು ತಿಳಿದು ಕರ್ಣನ ಅದ್ಭುತ ಪರಾಕ್ರಮವನ್ನೂ ಮತ್ತು ತಾವು ಅನುಭವಿಸಿದ ಕ್ಲೇಶವನ್ನೂ ನೆನೆದು ಅವನು ಶಾಂತಿಯನ್ನು ಹೊಂದಲಿಲ್ಲ.

ತಸ್ಯ ಚಿಂತಾಪರೀತಸ್ಯ ಬುದ್ಧಿರ್ಜಜ್ಞೇ ಮಹಾತ್ಮನಃ ।
ಬಹುವ್ಯಾಲಮೃಗಾಕೀರ್ಣಂ ತ್ಯಕ್ತುಂ ದ್ವೈತವನಂ ಸರಃ ॥೨೭॥

ಹೀಗೆ ಚಿಂತಾಪರವಶನಾದ ಮಹಾತ್ಮನಿಗೆ ಅನೇಕ ಮೃಗಗಳಿಂದ ಮತ್ತು ವ್ಯಾಲಗಳಿಂದ ಕೂಡಿದ ದ್ವೈತವನನ್ನು ಬಿಟ್ಟುಹೊರಡಬೇಕೆಂದು ಬುದ್ಧಿಯುಂಟಾಯಿತು.

ಧಾರ್ತರಾಷ್ಟ್ರೋಽಪಿ ನೃಪತಿಃ ಪ್ರಶಶಾಸ ವಸುಂಧರಾಮ್ ।
ಭ್ರಾತೃಭಿಃ ಸಹಿತೋ ವೀರೈರ್ಭೀಷ್ಮದ್ರೋಣಕೃಪೈಸ್ತಥಾ ॥೨೮॥

ದುರ್ಯೋಧನನೂ ಸಹ ಭ್ರಾತೃಸಹಿತನಾಗಿ ಭೀಷ್ಮದ್ರೋಣಕೃಪ ಮೊದಲಾದ ವೀರರಿಂದ ಒಡಗೂಡಿ ಪೃಥಿವಿಯನ್ನು ಆಳಿದನು.

ಸಂಗಮ್ಯ ಸೂತಪುತ್ರೇಣ ಕರ್ಣೇನಾಹವಶೋಭಿನಾ ।
ಸತತಂ ಪ್ರಿಯಮಾಣೋ ವೈ ದೇವಿನಾ ಸೌಬಲೇನ ಚ ॥೨೯॥

ಯುದ್ಧದಲ್ಲಿ ಶೋಭಿಸುವ ಸೂತಪುತ್ರನಾದ ಕರ್ಣನಿಂದಲೂ, ದ್ಯೂತಪ್ರಿಯನಾದ ಶಕುನಿಯಿಂದಲೂ ಕೂಡಿ ಸತತವಾಗಿ ಸಂತೋಷದಲ್ಲಿದ್ದನು.

ದುರ್ಯೋಧನಃ ಪ್ರಿಯೇ ನಿತ್ಯಂ ವರ್ತಮಾನೋ ಮಹೀಭೃತಾಮ್ ।
ಪೂಜಯಾಮಾಸ ವಿಪ್ರೇಂದ್ರಾನ್ ಕ್ರತುಭಿರ್ಭೂರಿದಕ್ಷಿಣೈಃ ॥೩೦॥

ಉಳಿದ ರಾಜರ ಪ್ರಿಯದಲ್ಲಿ ಯಾವಾಗಲೂ ನಿರತನಾದ ದುರ್ಯೋಧನನು ಅನೇಕ ಕ್ರತುಗಳನ್ನು ಮಾಡಿ ಭೂರಿದಕ್ಷಿಣೆಯನ್ನು ಕೊಟ್ಟು ಬ್ರಾಹ್ಮಣಶ್ರೇಷ್ಠರನ್ನು ಪೂಜಿಸಿದನು.

ಭ್ರಾತೄಣಾಂ ಚ ಪ್ರಿಯಂ ರಾಜನ್ ಚಕಾರ ಸ ಪರಂತಪಃ ।
ನಿಶ್ಚಿತ್ಯ ಮನಸಾ ವೀರೋ ದತ್ತಭುಕ್ತಫಲಂ ಧನಮ್ ॥೩೧॥

ರಾಜನೇ, ದಾನ ಮತ್ತು ಭೋಗ ಇವೆರಡೇ ಧನದ ಫಲವೆಂದು ಮನಸ್ಸಿನಲ್ಲಿ ನಿಶ್ಚಯಿಸಿ ವೀರನೂ, ಪರಂತಪನೂ ಆದ ಅವನು ತನ್ನ ತಮ್ಮಂದಿರಿಗೂ ಹಿತವನ್ನು ಮಾಡಿದನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂಸಂಹಿತಾಯಾಂ ವೈಯಾಸಿಕ್ಯಾಂ
ವನಪರ್ವಣಿ ಷಟ್‌ಚತ್ವಾರಿಂಶದಧಿಕದ್ವಿಶತತಮೋऽಧ್ಯಾಯಃ ॥
॥ ಇತಿ ಪ್ರಾಯೋಪವೇಶನಪರ್ವಣಿ ಯುಧಿಷ್ಠಿರಚಿಂತಾ ನಾಮ ಏಕಾದಶೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವನಪರ್ವದಲ್ಲಿ ಇನ್ನೂರ ನಲವತ್ತಾರನೆಯ
ಅಧ್ಯಾಯ ಮುಗಿಯಿತು.

॥ ಪ್ರಾಯೋಪವೇಶಪರ್ವ ಸಮಾಪ್ತಮ್ ॥

★ ★ ★ ★

ಮೃಗಸ್ವಪ್ನೋದ್ಭವಪರ್ವ

ಇನ್ನೂರ ನಲವತ್ತೇಳನೆಯ ಅಧ್ಯಾಯ

ಯುಧಿಷ್ಠಿರನಿಗೆ ಸ್ವಪ್ನದಲ್ಲಿ ಮೃಗಗಳ ಪ್ರಾರ್ಥನೆ ಮತ್ತು ಪುನಃ ಪಾಂಡವರಿಂದ ಕಾಮ್ಯಕ ವನಕ್ಕೆ ಪ್ರಯಾಣ.

ಜನಮೇಜಯಃ

ದುರ್ಯೋಧನಂ ಮೋಕ್ಷಯಿತ್ವಾ ಪಾಂಡುಪುತ್ರಾ ಮಹಾಬಲಾಃ ।
ಕಿಮಕಾರ್ಷುರ್ವನೇ ತಸ್ಮಿಂಸ್ತನ್ಮಮಾಖ್ಯಾತುಮರ್ಹಸಿ ॥೧॥

ಜನಮೇಜಯ– ಮಹಾಬಲರಾದ ಪಾಂಡುಪುತ್ರರು ದುರ್ಯೋಧನನನ್ನು ಮೋಚನೆಗೊಳಿಸಿ ಆ ದ್ವೈತವನದಲ್ಲಿ ಏನು ಮಾಡಿದರೆಂದು ನೀವು ನನಗೆ ಹೇಳಬೇಕು.

ವೈಶಂಪಾಯನಃ

ತತಃ ಶಯಾನಂ ಕೌಂತೇಯಂ ರಾತ್ರೌ ದ್ವೈತವನೇ ಮೃಗಾಃ ।
ಸ್ವಪ್ನಾಂತೇ ದರ್ಶಯಾಮಾಸುರ್ಬಾಷ್ಪಕಂಠಾ ಯುಧಿಷ್ಠಿರಮ್ ।
ತಾನಬ್ರವೀತ್ ಸ ರಾಜೇಂದ್ರೋ ವೇಪಮಾನಾನ್ ಕೃತಾಂಜಲೀನ್ ॥೨॥

ಬ್ರೂತ ಯದ್ವಕ್ತುಕಾಮಾಃ ಸ್ಥ ಕೇ ಭವಂತಃ ಕಿಮಿಷ್ಯತೇ ॥೩॥

ಅನಂತರ ದ್ವೈತವನದಲ್ಲಿ ಯುಧಿಷ್ಠಿರನು ರಾತ್ರಿಯಲ್ಲಿ ನಿದ್ರಿಸುತ್ತಿರುವಾಗ ಸ್ವಪ್ನದ ಮಧ್ಯದಲ್ಲಿ ಬಾಷ್ಪಕಂಠದಿಂದ ಕೂಡಿದ ಮೃಗಗಳು ಬಂದು ದರ್ಶನವನ್ನು ನೀಡಿದವು.

ಆ ರಾಜೇಂದ್ರನು ಕೈಗಳನ್ನು ಮುಗಿದು ನಡುಗುತ್ತಿದ್ದ ಆ ಮೃಗಗಳನ್ನು ಕುರಿತು ನೀವು ಯಾರು? ಏನು ಹೇಳಲು ಬಯಸುತ್ತೀರಿ? ನಿಮಗೆ ಏನಾಗಬೇಕಾಗಿದೆ? ಎಂದು ಕೇಳಿದನು.

ವೈಶಂಪಾಯನಃ

ಏವಮುಕ್ತಾ ಪಾಂಡವೇನ ಕೌಂತೇಯೇನ ಯಶಸ್ವಿನಾ ।
ಪ್ರತ್ಯುಬ್ರುವನ್ ಮೃಗಾಸ್ತತ್ರ ಹತಶೇಷಾ ಯುಧಿಷ್ಠಿರಮ್ ॥೪॥

ವೈಶಂಪಾಯನ– ಯಶಸ್ವಿಯಾದ ಕುಂತೀಪುತ್ರನಾದ ಪಾಂಡವನಾದ ಯುಧಿಷ್ಠಿರನು ಹೀಗೆ ಹೇಳುತ್ತಿರಲು ಅಳಿದುಳಿದ ಮೃಗಗಳು ಅಲ್ಲಿ ಅವನಿಗೆ ಹೀಗೆ ಉತ್ತರವನ್ನು ನೀಡಿದವು.

ವಯಂ ಮೃಗಾ ದ್ವೈತವನೇ ಹತಶಿಷ್ಟಾಸ್ತು ಭಾರತ ।
ನೇತ್ತೀದೇಮ ಮಹಾಭಾಗ ಕ್ರಿಯತಾಂ ವಾಸಪರ್ಯಯಃ ॥೫॥

ಎಲೈ ಭಾರತನೇ, ನಾವು ದ್ವೈತವನದಲ್ಲಿ ಅಳಿದು ಉಳಿದಿರುವ ಮೃಗಗಳು. ಮಹಾರಾಜನೇ, ನಮ್ಮ ಕುಲವು ಸಂಪೂರ್ಣವಾಗಿ ನಾಶವಾಗುವುದು ಬೇಡ. ಬೇರೆ ಸ್ಥಳದಲ್ಲಿ ವಾಸವನ್ನು ಮಾಡು.

ಭವತೋ ಭ್ರಾತರಃ ಶೂರಾಃ ಸರ್ವ ಏವಾಸ್ತ್ರಕೋವಿದಾಃ ।
ಕುಲಾನ್ಯಲ್ಪಾವಶಿಷ್ಟಾನಿ ಕೃತವಂತೋ ವನೌಕಸಾಮ್ ॥೬॥

ನಿನ್ನ ತಮ್ಮಂದಿರೆಲ್ಲರೂ ಶೂರರು ಮತ್ತು ಅಸ್ತ್ರಕೋವಿದರು. ಅವರು ವನವಾಸಿಗಳಾದ ನಮ್ಮ ಕುಲವು ಅಲ್ಪಮಾತ್ರ ಉಳಿಯುವಂತೆ ಮಾಡಿದ್ದಾರೆ.

ಬೀಜಭೂತಾ ವಯಂ ಕೇಚಿದವಶಿಷ್ಟಾ ಮಹಾಮತೇ ।
ವಿವರ್ಧೇಮಹಿ ರಾಜೇಂದ್ರ ಪ್ರಸಾದಾತ್ ತೇ ಯುಧಿಷ್ಠಿರ ॥೭॥

ಮಹಾಮತಿಯೇ, ನಮ್ಮಲ್ಲಿ ಬೀಜಭೂತರಾದ ಕೆಲವರು ಮಾತ್ರ ಉಳಿದಿದ್ದೇವೆ. ರಾಜೇಂದ್ರನಾದ ಯುಧಿಷ್ಠಿರನೇ, ನಿನ್ನ ಅನುಗ್ರಹದಿಂದ ನಾವು ಪುನಃ ಬೆಳೆಯುತ್ತೇವೆ (ಎಂದು ಹೇಳಿದವು).

ತಾನ್ ವೇಪಮಾನಾನ್ ವಿತ್ರಸ್ತಾನ್ ಬೀಜಮಾತ್ರಾವಶೇಷಿತಾನ್ ।
ಮೃಗಾನ್ ದೃಷ್ಟ್ವಾ ಸುದುಃಖಾರ್ತೋ ಧರ್ಮರಾಜೋ ಯುಧಿಷ್ಠಿರಃ ।
ತಾಂಸ್ತಥೇತ್ಯಬ್ರವೀದ್ ರಾಜಾ ಸರ್ವಭೂತಹಿತೇ ರತಃ ॥೮॥

ಯಥಾ ಭವಂತೋ ಬ್ರುವತೇ ಕರಿಷ್ಯಾಮಿ ಚ ತತ್ತಥಾ ॥೯॥

ಹೆದರಿ ನಡುಗುತ್ತಿರುವ ಬೀಜಮಾತ್ರವಾಗಿ ಉಳಿದಿರುವ ಆ ಮೃಗಗಳನ್ನು ನೋಡಿ ದುಃಖಪೂರಿತನಾದ ಸರ್ವಭೂತಹಿತದಲ್ಲಿ ರತನಾದ ಯುಧಿಷ್ಠಿರನು ನೀವು ಹೇಗೆ ಹೇಳುತ್ತೀರೋ ಅದರಂತೆ ಮಾಡುತ್ತೇನೆ ಎಂದು ಹೇಳಿದನು.

ಇತ್ಯೇವಂ ಪ್ರತಿಬುದ್ಧಃ ಸ ರಾತ್ರ್ಯಂತೇ ರಾಜಸತ್ತಮಃ ।
ಅಬ್ರವೀತ್ ಸಹಿತಾನ್ ಭ್ರಾತೃನ್ ದಯಾಪನ್ನೋ ಮೃಗಾನ್ ಪ್ರತಿ ॥

ಉಕ್ತಂ ರಾತ್ರೌ ಮೃಗೈರಸ್ಮಿನ್ ಸ್ವಪ್ನಾಂತೇ ಹತಶೇಷಿತೈಃ ।
ಅನುಭೂತಾಃ ಸ್ಮ ಭದ್ರಂ ತೇ ದಯಾ ನಃ ಕ್ರಿಯತಾಮಿತಿ ॥೧೧॥

ಹೀಗೆ ರಾತ್ರಿಯ ಕೊನೆಯ ಭಾಗದಲ್ಲಿ ಸ್ವಪ್ನವನ್ನು ನೋಡಿದ ಆ ರಾಜಶ್ರೇಷ್ಠನು ಎದ್ದು ಮೃಗಗಳ ಮೇಲೆ ದಯೆಯುಳ್ಳವನಾಗಿ ತಮ್ಮಂದಿರನ್ನು ಕುರಿತು ರಾತ್ರಿಯಲ್ಲಿ ಹತಶೇಷರಾದ ಮೃಗಗಳು ಸ್ವಪ್ನದಲ್ಲಿ ನನಗೆ ದರ್ಶನವನ್ನು ಕೊಟ್ಟು ನಾವು ಇದುವರೆಗೆ ನಿಮಗೆ ಅನುಕೂಲವಾಗಿದ್ದೇವೆ, ನಿಮಗೆ ಮಂಗಳವಾಗಲಿ, ನಮ್ಮ ಮೇಲೆ ದಯೆಯನ್ನು ತೋರಿಸಿ ಎಂದು ಹೇಳಿದವು.

ತೇ ಸತ್ಯಮಾಹುಃ ಕರ್ತವ್ಯಾ ದಯಾಽಸ್ಮಾಭರ್ವನೌಕಸಾಮ್ ।
ಸಾಷ್ಟಮಾಸಂ ಹಿ ನೋ ವರ್ಷಂ ಯದೇನಾನು(ತದು)ಪಯುಂಜ್ಮಹೇ ॥

ಪ್ರಾಣಿಗಳು ಹೇಳಿದ ಮಾತು ಸತ್ಯವಾದುದು. ನಾವು ವನನಿವಾಸಿಗಳಾದ ಅವುಗಳಿಗೆ ದಯೆಯನ್ನು ತೋರಿಸಬೇಕು. ನಾವು ಈ ಪ್ರಾಣಿಗಳನ್ನು ಉಪಜೀವಿಸುತ್ತಾ ಒಂದು ವರ್ಷ ಮತ್ತು ಎಂಟು ತಿಂಗಳುಗಳು ಕಳೆದಿವೆ (ಎಂದು ಹೇಳಿದನು).

ಅರ್ಜುನಃ

ತ್ವದಧೀನಾ ವಯಂ ರಾಜನ್ ಮಾ ತ್ವಮಸ್ಮಾನ್ ವಿಚಾರಯ ।
ಯತ್ರೈವ ಮನ್ಯಸೇ ಪಾರ್ಥ ತತ್ರ ಗಚ್ಛಾಮಹೇ ವಯಮ್ ॥೧೩॥

ಅರ್ಜುನ– ರಾಜನೇ, ನಾವು ನಿನಗೆ ಅಧೀನರಾದವರು. ಈ ವಿಷಯದಲ್ಲಿ ನೀನು ನಮ್ಮನ್ನು ವಿಚಾರಿಸಬೇಡ. ನೀನು ಎಲ್ಲಿಗೆ ಹೋಗಬೇಕೆಂದು ತಿಳಿಯುತ್ತೀಯೋ, ನಾವು ಅಲ್ಲಿಗೆ ಹೋಗುತ್ತೇವೆ.

ಯುಧಿಷ್ಠಿರಃ

ಪುನರ್ಬಹುಮೃಗಂ ರಮ್ಯಂ ಕಾಮ್ಯಕಂ ಕಾನನೋತ್ತಮಮ್ ।
ಮರುಭೂಮೇಃ ಶಿರಃಸ್ಥಾನಂ ತೃಣಬಿಂದುಸರಃ ಪ್ರತಿ ।
ತತ್ರೇಮಾಂ ವಸತಿಂ ಶಿಷ್ಟಾಂ ವಿಹರಂತೋ ರಮೇಮಹಿ ॥೧೪॥

ಯುಧಿಷ್ಠಿರ– ಮರುಭೂಮಿಯ ಶಿರಃಸ್ಥಾನವಾದ ತುದಿಯಲ್ಲಿ ತೃಣಬಿಂದು ಸರೋವರದ ಸಮೀಪದಲ್ಲಿ ಶ್ರೇಷ್ಠವಾದ ಕಾಮ್ಯಕವನವಿದೆ. ಅದು ಸುಂದರವೂ ಬಹುಮೃಗಗಳಿಂದ ಕೂಡಿದುದೂ ಆಗಿದೆ. ನಾವು ಉಳಿದ ಕಾಲವನ್ನು ಅಲ್ಲಿ ವಾಸಮಾಡಿ ಸುಖವಾಗಿ ಕಳೆಯೋಣ.

ವೈಶಂಪಾಯನಃ

ಇತ್ಯುಕ್ತಾಸ್ತೇ ಮಹಾತ್ಮನಃ ಪಾಂಡವೇನ ಮಹಾತ್ಮನಾ ।
ತತಸ್ತೇ ಪಾಂಡವಾಃ ಶೀಘ್ರಂ ಪ್ರಯಯುರ್ಧರ್ಮಕೋವಿದಃ ॥೧೫॥

ವೈಶಂಪಾಯನ– ಮಹಾತ್ಮನಾದ ಧರ್ಮರಾಜನಿಂದ ಹೀಗೆ ಹೇಳಲ್ಪಟ್ಟ ಮಹಾತ್ಮರಾದ ಮತ್ತು ಧರ್ಮಕೋವಿದರಾದ ಪಾಂಡವರು ಶೀಘ್ರವಾಗಿ ಅಲ್ಲಿಂದ ಹೊರಟರು.

ಬ್ರಾಹ್ಮಣೈಃ ಸಹಿತಾ ರಾಜನ್ ಯೇ ತತ್ರಾಸನ್ ಸಮಾಗತಾಃ ।
ಇಂದ್ರಸೇನಾದಿಭಿಶ್ಚೈವ ಪ್ರೇಷ್ಯೈರನುಗತಾಸ್ತದಾ ॥೧೬॥

ಎಲೈ ರಾಜನೇ, ಅಲ್ಲಿಗೆ ಬಂದ ಬ್ರಾಹ್ಮಣರಿಂದಲೂ ಇಂದ್ರಸೇನಾದಿ ದೂತರಿಂದಲೂ ಹಿಂಬಾಲಿಸಲ್ಪಟ್ಟವರಾಗಿ ಅವರು ಹೊರಟರು.

ತೇ ಯಾತ್ವಾ ಸುಸುಖೈರ್ಮಾರ್ಗೈಃ ಸ್ವನ್ನೈಃ ಶುಚಿಜಲಾನ್ವಿತೈಃ ।
ದದೃಶುಃ ಕಾಮ್ಯಕಂ ಪುಣ್ಯಮಾಶ್ರಮಂ ತಾಪಸೈರ್ಯುತಮ್ ॥೧೭॥

ಅವರು ಒಳ್ಳೆಯ ಆಹಾರವು ಮತ್ತು ಶುಚಿಯಾದ ಜಲವು ದೊರೆಯುವ ಸುಖಕರವಾದ ಮಾರ್ಗಗಳಿಂದ ಪ್ರಯಾಣಮಾಡಿ ತಾಪಸರಿಂದ ಯುಕ್ತವಾದ ಪವಿತ್ರವಾದ ಕಾಮ್ಯಕವನದ ಆಶ್ರಮವನ್ನು ನೋಡಿದರು.

ವಿವಿಶುಸ್ತೇ ಸ್ಮ ಕೌರವ್ಯಾ ವೃತಾ ವಿಪ್ರರ್ಷಭೈಸ್ತದಾ ।
ತದ್ವನಂ ಭರತಶ್ರೇಷ್ಠಾಃ ಸ್ವರ್ಗಂ ಸುಕೃತಿನೋ ಯಥಾ ॥೧೮॥

ಆ ಕೌರವ್ಯರಾದ ಭರತಶ್ರೇಷ್ಠರು ವಿಪ್ರಶ್ರೇಷ್ಠರಿಂದ ಕೂಡಿದವರಾಗಿ ಪುಣ್ಯವನ್ನು ಮಾಡಿದವರು ಸ್ವರ್ಗವನ್ನು ಪ್ರವೇಶಿಸುವಂತೆ ಆ ವನವನ್ನು ಪ್ರವೇಶಿಸಿದರು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂಸಂಹಿತಾಯಾಂ ವೈಯಾಸಿಕ್ಯಾಂ
ವನಪರ್ವಣಿ ಸಪ್ತಚತ್ವಾರಿಂಶದಧಿಕದ್ವಿಶತತಮೋऽಧ್ಯಾಯಃ ॥
॥ ಇತಿ ಮೃಗಸ್ವಪ್ನೋದಭ್ವಪರ್ವಣಿ ಕಾಮ್ಯಕವನಪ್ರವೇಶೋನಾಮ ಪ್ರಥಮೋಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವನಪರ್ವದಲ್ಲಿ ಇನ್ನೂರಜಲವತ್ತೇಳನೆಯ
ಅಧ್ಯಾಯ ಮುಗಿಯಿತು.

॥ ಮೃಗಸ್ವಪ್ನೋದ್ಭವಪರ್ವವು ಮುಗಿಯಿತು ॥

★ ★ ★ ★

ವ್ರೀಹಿದ್ರೌಣಿಕಪರ್ವ

ಇನ್ನೂರ ನಲವತ್ತೆಂಟನೆಯ ಅಧ್ಯಾಯ

ಕಾಮ್ಯಕವನದಲ್ಲಿ ಯುಧಿಷ್ಠಿರನ ಚಿಂತೆ ಮತ್ತು ವ್ಯಾಸರ ಆಗಮನ.

ವೈಶಂಪಾಯನಃ

ವನೇ ನಿವಸತಾಂ ತೇಷಾಂ ಪಾಂಡವಾನಾಂ ಮಹಾತ್ಮನಾಮ್ ।
ವರ್ಷಾಣ್ಯೇಕಾದಶಾತೀಯುಃ ಕೃಚ್ಛ್ರೇಣ ಭರತರ್ಷಭ ॥೧॥

ವೈಶಂಪಾಯನ– ಭರತರ್ಷಭನೇ, ವನವಾಸವನ್ನು ಮಾಡುತ್ತಿದ್ದ ಮಹಾತ್ಮರಾದ ಪಾಂಡವರಿಗೆ ಹನ್ನೊಂದು ವರ್ಷಗಳು ಕಷ್ಟದಿಂದ ಕಳೆದವು.

ಫಲಮೂಲಾಶನಾಸ್ತೇ ಹಿ ಸುಖಾರ್ಹಾ ದುಃಖಮುತ್ತಮಮ್ ।
ಪ್ರಾಪ್ತಕಾಲಮನುಧ್ಯಾಂತಃ ಸೇಹಿರೇ ವರಪೂರುಷಾಃ ॥೨॥

ಸುಖಾರ್ಹರಾದ ಆ ಶ್ರೇಷ್ಠಪುರುಷರು ಫಲಮೂಲಗಳನ್ನು ಸೇವಿಸುತ್ತಾ ಪ್ರಸಕ್ತ ಸಮಯದಲ್ಲಿ ಮಾಡಬಹುದಾದುದನ್ನು ಯೋಚಿಸುತ್ತಾ ಆ ದೊಡ್ಡ ಕ್ಲೇಶವನ್ನು ಸಹಿಸಿದರು.

ಯುಧಿಷ್ಠಿರಸ್ತು ರಾಜರ್ಷಿರಾತ್ಮಕರ್ಮಾಪರಾಧಜಮ್ ।
ಚಿಂತಯನ್ ಸ ಮಹಾಬಾಹುರ್ಭ್ರಾತೄಣಾಂ ದುಃಖಮುತ್ತಮಮ್ ॥೩॥

ನ ಸುಷ್ವಾಪ ಸುಖಿಂ ರಾಜಾ ಹೃದಿ ಶಲ್ಯೈರಿವಾರ್ಪಿತೈಃ ।
ದೌರಾತ್ಮ್ಯಮನುಪಶ್ಯಂಸ್ತತ್ಕಾಲೇ ದ್ಯೂತೋದ್ಭವಸ್ಯ ಹಿ ॥೪॥

ರಾಜರ್ಷಿಯೂ, ಮಹಾಬಾಹುವೂ ಆದ ಯುಧಿಷ್ಠಿರನಾದರೂ ತನ್ನ ಕರ್ಮಾಪರಾಧದಿಂದ ಸೋದರರಿಗೆ ಇಂತಹ ದುಃಖ ಉಂಟಾಗಿದೆ ಎಂದು ಚಿಂತಿಸುತ್ತಾ ದ್ಯೂತದಿಂದ ಉಂಟಾದ ದುಷ್ಫಲಗಳನ್ನು ಗಮನಿಸುತ್ತಾ ಹೃದಯದಲ್ಲಿ ಶಲ್ಯಗಳು ನಾಟಿದವನಂತೆ ಸುಖವಾಗಿ ನಿದ್ದೆಯನ್ನು ಮಾಡಲಿಲ್ಲ.

ಸಂಸ್ಮರನ್ ಪರುಷಾ ವಾಚಃ ಸೂತಪುತ್ರಸ್ಯ ಪಾಂಡವಃ ।
ನಿಃಶ್ವಾಸಪರಮೋ ದೀನೋ ಬಿಭ್ರತ್ ಕೋಪವಿಷಂ ಮಹತ್ ॥೫॥

ಸೂತಪುತ್ರನಾದ ಕರ್ಣನು ಆಡಿದ ತೀಕ್ಷ್ಣವಾದ ಮಾತುಗಳನ್ನು ಸ್ಮರಿಸುತ್ತಾ ಧರ್ಮರಾಜನು ದೊಡ್ಡ ಕೋಪವಿಷವನ್ನು ಮನಸ್ಸಿನಲ್ಲಿಯೇ ಧರಿಸಿ ದೀನನೂ, ನಿಃಶ್ವಾಸಪರನೂ ಆದನು.

ಅರ್ಜುನೋ ಯಮಜೌ ಚೋಭೌ ದ್ರೌಪದೀ ಚ ಯಶಸ್ವಿನೀ ।
ಸ ಚ ಭೀಮೋ ಮಹಾತೇಜಾಃ ಸರ್ವೇಷಾಮುತ್ತಮೋ ಬಲೀ ॥೬॥

ಚಿರಸ್ಯ ಜಾತಂ ಧರ್ಮಜ್ಞಂ ಸಾಸೂಯಮಿವ ತೇ ತದಾ ।
ಯುಧಿಷ್ಠಿರಮುದೀಕ್ಷಂತಃ ಸೇಹುರ್ದುಃಖಮನುತ್ತಮಮ್ ॥೭॥

ಅರ್ಜುನ, ನಕುಲಸಹದೇವರಿಬ್ಬರೂ, ಯಶಸ್ವಿನಿಯಾದ ದ್ರೌಪದಿ, ಮಹಾತೇಜಸ್ವಿಯೂ, ಬಲಿಷ್ಠನೂ, ಎಲ್ಲರಿಗಿಂತಲೂ ಶ್ರೇಷ್ಠನೂ ಆದ ಆ ಭೀಮಸೇನ ಇವರೂ ಬಹಳ ಕಾಲದ ನಂತರ ಕೋಪಾಸೂಯೆಗಳನ್ನು ಹೊಂದಿದ ಯುಧಿಷ್ಠಿರನನ್ನು ನೋಡಿ ತಮ್ಮ ಮಹತ್ತಾದ ಕ್ಲೇಶಗಳನ್ನು ಸಹಿಸಿಕೊಂಡರು.

ಅವಶಿಷ್ಟಮಲ್ಪಕಾಲಂ ಮನ್ವಾನಾಃ ಪುರುಷರ್ಷಭಾಃ ।
ವಪುರನ್ಯದಿವಾಕಾರ್ಷುರುತ್ಸಾಹಾಮರ್ಷಚೇಷ್ಟಿತೈಃ ॥೮॥

ಆ ಪುರುಷರ್ಷಭರು ಸ್ವಲ್ಪವೇ ಕಾಲವು ಉಳಿದಿದೆ ಎಂದು ತಿಳಿದು ಉತ್ಸಾಹ ಮತ್ತು ಕೋಪಗಳಿಂದ ಕೂಡಿದ ಕ್ರಿಯೆಗಳನ್ನು ಮಾಡುತ್ತಾ ಒಳಗಿದ್ದ ದುಃಖವನ್ನು ತೋರಗೊಡದೆ ಬೇರೆ ರೂಪವನ್ನೇ ತೋರಿಸಿದರು.

ಕಸ್ಯಚಿತ್ತ್ವಥ ಕಾಲಸ್ಯ ವ್ಯಾಸಃ ಸತ್ಯವತೀಸುತಃ ।
ಆಜಗಾಮ ಮಹಾಯೋಗೀ ಪಾಂಡವಾನವಲೋಕಕಃ ॥೯॥

ಸ್ವಲ್ಪ ಕಾಲವು ಕಳೆದ ಮೇಲೆ ಮಹಾಯೋಗಿಗಳಾದ ಸತ್ಯವತೀ ಸುತರಾದ ವ್ಯಾಸರು ಪಾಂಡವರನ್ನು ನೋಡುವುದಕ್ಕಾಗಿ ಅಲ್ಲಿಗೆ ಬಂದರು.

ತಮಾಗತಮಭಿಪ್ರೇಕ್ಷ್ಯ ಕುಂತೀಪುತ್ರೋ ಯುಧಿಷ್ಠಿರಃ ।
ಪ್ರತ್ಯುದ್ಗಮ್ಯ ಮಹಾತ್ಮಾನಂ ಪ್ರತ್ಯಗೃಹ್ಣಾದ್ ಯಥಾವಿಧಿ ॥೧೦॥

ಬರುತ್ತಿರುವ ಅವರನ್ನು ನೋಡಿದ ಕುಂತೀಪುತ್ರನಾದ ಯುಧಿಷ್ಠಿರನು ಎದ್ದು ಅವರ ಕಡೆಗೆ ನಡೆದು ಮಹಾತ್ಮರಾದ ಅವರನ್ನು ವಿಧಿಪೂರ್ವಕವಾಗಿ ಸ್ವೀಕರಿಸಿದನು.

ತಮಾಸೀನಮುಪಾಸೀನಃ ಶುಶ್ರೂಷುರ್ನಿಯತೇಂದ್ರಿಯಃ ।
ತೋಷಯನ್ ಪ್ರಣಿಪಾತೇನ ವ್ಯಾಸಂ ಪಾಂಡವನಂದನಃ ॥೧೧॥

ಕುಳಿತುಕೊಂಡ ವ್ಯಾಸರ ಬಳಿ ನಮಸ್ಕಾರವನ್ನು ಮಾಡಿ ಪಾಂಡವನಂದನನು ನಿಯತೇಂದ್ರಿಯಾಗಿ ಅವರ ಸೇವೆಯನ್ನು ಮಾಡುವವನಾಗಿ ಸಂತೋಷಪಡಿಸುತ್ತಾ ಸಮೀಪದಲ್ಲಿ ನಿಂತನು.

ತಾನವೇಕ್ಷ್ಯ ಕೃಶಾನ್ ಪೌತ್ರಾನ್ ವನೇ ವನ್ಯೇನ ಜೀವತಃ ।
ಮಹರ್ಷಿರನುಕಂಪಾರ್ಥಮಬ್ರವೀದ್ ಬಾಷ್ಪಗದ್ಗದಮ್ ॥೧೨॥

ವನ್ಯಪದಾರ್ಥಗಳಿಂದ ಜೀವಿಸಿ ಕೃಶರಾದ ತನ್ನ ಪೌತ್ರರನ್ನು ನೋಡಿದ ಆ ಮಹರ್ಷಿಗಳು ಅನುಕಂಪದಿಂದ ಬಾಷ್ಪಗದ್ಗದವಾದ ಈ ಮಾತುಗಳನ್ನು ಆಡಿದರು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂಸಂಹಿತಾಯಾಂ ವೈಯಾಸಿಕ್ಯಾಂ
ವನಪರ್ವಣಿ ಅಷ್ಟಚತ್ವಾರಿಂಶಾಧಿಕದ್ವಿಶತತಮೋऽಧ್ಯಾಯಃ ॥
॥ ಇತಿ ವ್ರೀಹಿದ್ರೌಣಿಕಪರ್ವಣಿ ವ್ಯಾಸಾಗಮನಂ ನಾಮ ಪ್ರಥಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವನಪರ್ವದಲ್ಲಿ ಇನ್ನೂರ ನಲವತ್ತೆಂಟನೆಯ
ಅಧ್ಯಾಯ ಮುಗಿಯಿತು.

★ ★ ★ ★

ಇನ್ನೂರ ನಲವತ್ತೊಂಬತ್ತನೆಯ ಅಧ್ಯಾಯ

ಯುಧಿಷ್ಠಿರನಿಗೆ ವ್ಯಾಸರ ಉಪದೇಶ.

ವ್ಯಾಸಃ

ಯುಧಿಷ್ಠಿರ ಮಹಾಬಾಹೋ ಶೃಣು ಧರ್ಮಭೃತಾಂ ವರ ।
ನಾತಪ್ತತಪಸೋ ಲೋಕೇ ಪ್ರಾಪ್ನುವಂತಿ ಮಹತ್ಸುಖಮ್ ॥೧॥

ವ್ಯಾಸ– ಮಹಾಬಾಹುವೇ, ಧರ್ಮಿಷ್ಠರಲ್ಲಿ ಶ್ರೇಷ್ಠನಾದ ಯುಧಿಷ್ಠಿರನೇ ಕೇಳು. ಲೋಕದಲ್ಲಿ ತಪಸ್ಸನ್ನು ಮಾಡದವರು ದೊಡ್ಡ ಸುಖವನ್ನು ಹೊಂದುವುದಿಲ್ಲ.

ಸುಖದುಃಖೇ ಹಿ ಪುರುಷಃ ಪರ್ಯಾಯೇಣೋಪಸೇವತೇ ।
ನಾತ್ಯರ್ಥಮಸುಖಂ ಕಶ್ಚಿತ್ ಪ್ರಾಪ್ನೋತಿ ಪುರುಷರ್ಷಭ ॥೨॥

ಪುರುಷರ್ಷಭನೇ, ಮನುಷ್ಯನಿಗೆ ಸುಖದುಃಖಗಳು ಪರ್ಯಾಯದಿಂದ ಬರುತ್ತವೆ. ಯಾವನೂ ಕೇವಲ ದುಃಖವನ್ನೇ ಹೊಂದುವುದಿಲ್ಲ.

ಪ್ರಜ್ಞಾವಾಂಸ್ತ್ವೇವ ಪುರುಷಃ ಸಂಯುಕ್ತಃ ಪರಯಾ ಧಿಯಾ ।
ಉದಯಾಸ್ತಮನಜ್ಞೋ ಹಿ ನ ಹೃಷ್ಯತಿ ನ ಶೋಚತಿ ॥೩॥

ಪ್ರಜ್ಞಾವಂತನಾದ ಪುರುಷನು ಶ್ರೇಷ್ಠಬುದ್ಧಿಯನ್ನು ಹೊಂದಿದವನಾಗಿ ಸಂಪತ್ತಿನ ಉದಯಾಸ್ತಗಳನ್ನು ತಿಳಿದು ಸಂತೋಷವನ್ನೂ ಪಡುವುದಿಲ್ಲ, ಶೋಕವನ್ನೂ ಪಡುವುದಿಲ್ಲ.

ಸುಖಮಾಪತಿತಂ ಸೇವೇತ್ ದುಃಖಮಾಪತಿತಂ ಸಹೇತ್ ।
ಪ್ರಾಪ್ತಕಾಲಮುಪಾಸೀತ ಸಸ್ಯಾನಾಮಿವ ಕರ್ಷಕಃ ॥೪॥

ಒದಗಿ ಬಂದ ಸುಖವನ್ನು ಅನುಭವಿಸಬೇಕು, ಒದಗಿದ ದುಃಖವನ್ನು ಸಹಿಸಬೇಕು. ಸಸ್ಯಗಳಿಗೆ ಕೃಷೀವಲದಂತೆ ಆಯಾ ಕಾಲಕ್ಕೆ ಪ್ರಾಪ್ತವಾದುದನ್ನು ಸೇವಿಸಬೇಕು.

ತಪಸೋ ಹಿ ಪರಂ ನಾಸ್ತಿ ತಪಸಾ ವಿಂದತೇ ಮಹತ್ ।
ನಾಸಾಧ್ಯಂ ತಪಸಃ ಕಿಂಚಿದಿತಿ ಬುದ್ಧ್ಯಸ್ಯ ಭಾರತ ॥೫॥

ತಪಸ್ಸಿಗಿಂತ ಶ್ರೇಷ್ಠವಾದುದು ಇನ್ನೊಂದಿಲ್ಲ. ತಪಸ್ಸಿನಿಂದ ದೊಡ್ಡ ಫಲವನ್ನು ಪಡೆಯಬಹುದು. ತಪಸ್ಸಿನಿಂದ ಅಸಾಧ್ಯವಾದುದು ಯಾವುದೂ ಇಲ್ಲ. ಭಾರತನೇ, ಇದನ್ನು ತಿಳಿ.

ಸತ್ವ(ತ್ಯ)ಮಾರ್ಜವಮಕ್ರೋಧಃ ಸಂವಿಭಾಗೋ ದಮಃ ಶಮಃ ।
ಅನಸೂಯಾऽವಿಹಿಂಸಾ ಚ ಶೌಚಮಿಂದ್ರಿಯಸಂಯಮಃ ।
ಪಾವನಾನಿ ಮಹಾರಾಜ ನರಾಣಾಂ ಪುಣ್ಯಕರ್ಮಣಾಮ್ ॥೬॥

ಮಹಾರಾಜನೇ, ಸತ್ಯ, ಧೈರ್ಯ, ಆರ್ಜವ, ಅಕ್ರೋಧ, ಸಂವಿಭಾಗ (ಇನ್ನೊಬ್ಬರಿಗೆ ಹಂಚುವುದು), ದಮ, ಶಮ, ಅನಸೂಯಾ, ಅಹಿಂಸಾ, ಶೌಚ, ಇಂದ್ರಿಯ ನಿಯಂತ್ರಣ ಇವುಗಳು ಪುಣ್ಯಕರ್ಮರಾದ ಮನುಷ್ಯರಿಗೆ ಪವಿತ್ರವಾದವುಗಳು.

ಅಧರ್ಮರುಚಯೋ ಮೂಢಾಸ್ತಿರ್ಯಗ್ಗತಿಪರಾಯಣಾಃ ।
ಕೃಚ್ಛ್ರಯೋನಿಮನುಪ್ರಾಪ್ತಾ ನ ಸುಖಂ ವಿಂದತೇ ಜನಾಃ ॥೭॥

ಅಧರ್ಮದಲ್ಲಿಯೇ ಆಸಕ್ತರಾದ ಮೂಢರು ತಿರ್ಯಯೋನಿಗಳನ್ನೇ ಹೊಂದುವವರಾಗಿ ಕ್ಲೇಶಕರವಾದ ಯೋನಿಗಳನ್ನು ಹೊಂದಿ ಸುಖವನ್ನು ಪಡೆಯುವುದಿಲ್ಲ.

ಕರ್ಮಭೂಮಿರಿಯಂ ತಾತ ಫಲಭೂಮಿರಸೌ ಪರಾ ।
ಇಹ ಯತ್ಕ್ರಿಯತೇ ಕರ್ಮ ತತ್ ಪರತ್ರೋಪಯುಜ್ಯತೇ ॥೮॥

ಪ್ರೀತಿಪಾತ್ರನೇ, ಇದು ಕರ್ಮಭೂಮಿ. ಆ ಪರಲೋಕವು (ಸ್ವರ್ಗ-ನರಕಗಳು) ಫಲಭೂಮಿಗಳು. ಇಲ್ಲಿ ಏನು ಮಾಡುತ್ತಾನೆಯೋ ಅದರ ಫಲವನ್ನು ಪರಲೋಕದಲ್ಲಿ ಅನುಭವಿಸುತ್ತಾನೆ.

ತಸ್ಮಾತ್ ಶರೀರಂ ಯುಂಜೀತ ತಪಸಾ ನಿಯಮೇನ ಚ ।
ಮೂಲೇಸಿಕ್ತಸ್ಯ ವೃಕ್ಷಸ್ಯ ಫಲಂ ಶಾಖಾಸು ದೃಶ್ಯತೇ ।
ಯಥಾಶಕ್ತಿ ಪ್ರಯಚ್ಛೇತ ಸಂಪೂಜ್ಯಾಭಿಪ್ರಣಮ್ಯ ಚ ॥೯॥

ಆದ್ದರಿಂದ ಶರೀರವನ್ನು ತಪಸ್ಸು ಮತ್ತು ನಿಯಮಗಳಿಂದ ಯೋಜಿಸಬೇಕು. ವೃಕ್ಷದ ಮೂಲಕ್ಕೆ ನೀರೆರೆದರೆ ಕೊಂಬೆಗಳಲ್ಲಿ ಫಲವು ಕಾಣಿಸುತ್ತದೆ. ಸಜ್ಜನರನ್ನು ಸತ್ಕರಿಸಿ ಪ್ರಣಾಮವನ್ನು ಮಾಡಿ ಯೋಗ್ಯರಿಗೆ ಯಥಾಶಕ್ತಿ ದಾನವನ್ನು ಮಾಡಬೇಕು.

ಕಾಲೇ ಪಾತ್ರೇ ಚ ಹೃಷ್ಟಾತ್ಮಾ ರಾಜನ್ ವಿಗತಮತ್ಸರಃ ।
ಸತ್ಯವಾದೀ ಲಭೇತಾಯುರನಾಯಾಸಮನಾಮಯಮ್ ॥೧೦॥

ಯೋಗ್ಯವಾದ ಕಾಲದಲ್ಲಿ ಪಾತ್ರನಲ್ಲಿ ಸಂತೋಷದಿಂದ ಮಾತ್ಸರ್ಯವಿಲ್ಲದೆ ದಾನವನ್ನು ಮಾಡುವ ಸತ್ಯವಾದಿಯು ಆಯುಸ್ಸನ್ನೂ, ಅಕ್ಲೇಶವನ್ನೂ ಮತ್ತು ಕ್ಷೇಮವನ್ನೂ ಪಡೆಯುತ್ತಾನೆ.

ಅಕ್ರೋಧನೋऽನಸೂಯಶ್ಚ ನಿರ್ವೃತಿಂ ಲಭತೇ ಪರಾಮ್ ।
ದಾಂತಃ ಶಮಪರಃ ಶಶ್ವತ್ ಪರಿಕ್ಲೇಶಂ ನ ವಿಂದತಿ ।
ನ ಚ ತಪ್ಯತಿ ಶಾಂತಾತ್ಮಾ ದೃಷ್ಟ್ವಾ ಪರಗತಾಂ ಶ್ರಿಯಮ್ ॥೧೧॥

ಕ್ರೋಧರಹಿತನೂ, ಅಸೂಯಾ ರಹಿತನೂ ಆದ ನರನು ಶ್ರೇಷ್ಠವಾದ ಸುಖವನ್ನು ಪಡೆಯುತ್ತಾನೆ. ಯಾವಾಗಲೂ ಶಮ-ದಮಗಳನ್ನು ಹೊಂದಿದವನು ಕ್ಲೇಶಗಳನ್ನು ಪಡೆಯುವುದಿಲ್ಲ. ಶಾಂತವಾದ ಮನಸ್ಸುಳ್ಳವನು ಇನ್ನೊಬ್ಬರ ಸಂಪತ್ತನ್ನು ನೋಡಿ ತಾಪ ಪಡುವುದಿಲ್ಲ.

ಸಂವಿಭಕ್ತಾ ಚ ದಾತಾ ಚ ಭೋಗವಾನ್ ಸುಖಿವಾನ್ ನರಃ ।
ಭವತ್ಯಹಿಂಸಕಶ್ಚೈವ ಪರಮಾರೋಗ್ಯಮಶ್ನುತೇ ॥೧೨॥

ತನ್ನ ವಸ್ತುವನ್ನು ಹಂಚಿ ಕೊಡುವವನು ಮತ್ತು ದಾನ ಮಾಡುವವನು ಆದ ನರನು ಭೋಗವನ್ನೂ, ಸುಖವನ್ನೂ ಹೊಂದುತ್ತಾನೆ. ಹಿಂಸೆಯನ್ನು ಮಾಡದಿರುವವನು ಒಳ್ಳೆಯ ಆರೋಗ್ಯವನ್ನು ಪಡೆಯುತ್ತಾನೆ.

ಮಾನ್ಯಮಾನಯಿತಾ ಜನ್ಮ ಕುಲೇ ಮಹತಿ ವಿಂದತಿ ।
ವ್ಯಸನೈರ್ನ ತು ಸಂಯೋಗಂ ಪ್ರಾಪ್ನೋತಿ ವಿಜಿತೇಂದ್ರಿಯಃ ॥೧೩॥

ಮಾನ್ಯರಾದವರನ್ನು ಸತ್ಕರಿಸುವವನು ಶ್ರೇಷ್ಠವಾದ ಕುಲದಲ್ಲಿ ಜನ್ಮವನ್ನು ಪಡೆಯುತ್ತಾನೆ. ಜಿತೇಂದ್ರಿಯನಾದವನು ಚಟಗಳಿಗೆ ಬಲಿಯಾಗುವುದಿಲ್ಲ.

ವಿಂದತೇ ಸುಖಮತ್ಯಂತಮಿಹ ಲೋಕೇ ಪರತ್ರ ಚ ।
ಶುಭಾನುಶಯಬುದ್ಧಿರ್ಹಿ ಸಂಯುಕ್ತಃ ಕಾಲಧರ್ಮಣಾ ॥೧೪॥

ಪ್ರಾದುರ್ಭವತಿ ತದ್ಯೋಗಾತ್ ಕಲ್ಯಾಣಮತಿರೇವ ಸಃ ॥೧೫॥

ಯಾವನು ಸುಖದಲ್ಲಿಯೇ ಬುದ್ಧಿಯನ್ನು ಹೊಂದಿರುತ್ತಾನೆಯೋ ಅವನು ಆಯಾ ಕಾಲದಲ್ಲಿ ಉಂಟಾಗುವ ಧರ್ಮಗಳಿಂದ ಸಂಯುಕ್ತನಾಗಿ ಈ ಲೋಕದಲ್ಲಿಯೂ ಮತ್ತು ಪರಲೋಕದಲ್ಲಿಯೂ ಅತ್ಯಂತ ಸುಖವನ್ನೇ ಹೊಂದುತ್ತಾನೆ. ಅವನು ಅದರಿಂದ ಕಲ್ಯಾಣಬುದ್ಧಿಯನ್ನೇ ಹೊಂದುವವನಾಗುತ್ತಾನೆ.

ಯುಧಿಷ್ಠಿರಃ

ಭಗವನ್ ದಾನಧರ್ಮಾಣಾಂ ತಪಸೋ ವಾ ಮಹಾಮುನೇ ।
ಕಿಂಸ್ವಿದ್ ಬಹುಗುಣಂ ಪ್ರೇತಯ ಕಿಂ ವಾ ದುಷ್ಕರಮುಚ್ಯತೇ ॥೧೬॥

ಯುಧಿಷ್ಠಿರ– ಪೂಜ್ಯರೇ, ಮಹಾಮುನಿಗಳೇ, ದಾನ-ಧರ್ಮ ಮತ್ತು ತಪಸ್ಸುಗಳಲ್ಲಿ ಯಾವುದು ಮರಣಾನಂತರದಲ್ಲಿ ಶ್ರೇಷ್ಠಫಲವನ್ನು ಕೊಡುತ್ತದೆ. ಅವುಗಳಲ್ಲಿ ಕಷ್ಟಸಾಧ್ಯವಾದುದು ಯಾವುದು?

ವ್ಯಾಸಃ

ದಾನಾನ್ನ ದುಷ್ಕರಂ ತಾತ ಪೃಥಿವ್ಯಾಮಸ್ತಿ ಕಿಂಚನ ।
ಅರ್ಥೇ ಹಿ ಮಹತೀ ತೃಷ್ಣಾ ಸ ಚ ದುಃಖೇನ ಲಭ್ಯತೇ ॥೧೭॥

ವ್ಯಾಸರು– ಪ್ರೀತಿಪಾತ್ರನೇ, ಪೃಥಿವಿಯಲ್ಲಿ ದಾನಕ್ಕಿಂತಲೂ ಕಷ್ಟಸಾಧ್ಯವಾದುದು ಇನ್ನೊಂದಿಲ್ಲ. ಅರ್ಥದಲ್ಲಿ ಎಲ್ಲರಿಗೂ ಬಹಳ ಆಸೆ ಇರುತ್ತದೆ. ಆ ಅರ್ಥವಾದರೂ ದುಃಖದಿಂದ ಸಂಪಾದಿಸಲ್ಪಡುತ್ತದೆ.

ರಾಜನ್ ಪ್ರತ್ಯಕ್ಷಮೇವೈದ್ ದೃಶ್ಯತೇ ಲೋಕಸಾಕ್ಷಿಕಮ್ ।
ಪರಿತ್ಯಜ್ಯ ಪ್ರಿಯಾನ್ ಪ್ರಾಣಾನ್ ಧನಾರ್ಥಂ ಹಿ ರಣಾಜಿರಮ್ ।
ಪ್ರವಿಶಂತಿ ಮಹಾವೀರಾಃ ಸಮುದ್ರಮಟವೀಂ ತಥಾ ॥೧೮॥

ರಾಜನೇ, ಇದು ಲೋಕಸಾಕ್ಷಿಕವಾದ ಪ್ರತ್ಯಕ್ಷವಾಗಿ ಕಾಣುವ ವಿಷಯ. ಪ್ರಿಯವಾದ ಪ್ರಾಣಗಳನ್ನು ತ್ಯಜಿಸಿ ಮಹಾವೀರರು ರಣರಂಗಕ್ಕೆ ಹೋಗುತ್ತಾರೆ. ಅದರಂತೆ ಕೆಲವರು ಸಮುದ್ರಕ್ಕೂ, ಕಾಡಿಗೂ ಹೋಗುತ್ತಾರೆ.

ಕೃಷಿಗೋರಕ್ಷಮಿತ್ಯೇಕೇ ಪ್ರತಿಪದ್ಯಂತಿ ಮಾನವಾಃ ।
ಪುರುಷಾಃ ಪ್ರೇಷ್ಯತಾಮೇಕೇ ನಿರ್ಗಚ್ಛಂತಿ ಧನಾರ್ಥಿನಃ ॥೧೯॥

ಕೆಲವು ಮನುಷ್ಯರು ಕೃಷಿ ಮತ್ತು ಗೋರಕ್ಷೆಗಳನ್ನು ಮಾಡುವವರಾಗುತ್ತಾರೆ. ಇನ್ನು ಕೆಲವರು ಧನವನ್ನು ಅಪೇಕ್ಷಿಸಿ ದಾಸ್ಯಭಾವವನ್ನೂ ಹೊಂದುತ್ತಾರೆ.

ತಸ್ಮಾದ್ ದುಃಖಾರ್ಜಿತಸ್ಯೈವ ಪರಿತ್ಯಾಗಃ ಸುದುಷ್ಕರಃ ।
ನ ದುಷ್ಕರತರಂ ದಾನಾತ್ ತಸ್ಮಾದ್ ದಾನಂ ಮತಂ ಮಮ ॥೨೦॥

ಆದ್ದರಿಂದ ಕಷ್ಟದಿಂದ ಸಂಪಾದಿಸಿದ ವಸ್ತುವನ್ನು ತ್ಯಾಗಮಾಡುವುದು ಬಹಳ ದುಷ್ಕರವಾದುದು. ದಾನಕ್ಕಿಂತಲೂ ದುಷ್ಕರವಾದುದು ಇನ್ನೊಂದಿಲ್ಲ. ಆದ್ದರಿಂದ ಮೂರರಲ್ಲಿ ದಾನವೇ ಶ್ರೇಷ್ಠವೆಂದು ನನ್ನ ಅಭಿಪ್ರಾಯ.

ವಿಶೇಷಸ್ತ ತ್ರ ವಿಜ್ಞೇಯೋ ನ್ಯಾಯೇನೋಪಾರ್ಜಿತಂ ಧನಮ್ ।
ಪಾತ್ರೇ ಕಾಲೇ ಚ ದೇಶೇ ಚ ಸಾಧುಭ್ಯಃ ಪ್ರತಿಪಾದಯೇತ್ ।
ಶ್ರದ್ಧಯಾ ವಿಧಿವತ್ಪಾತ್ರೇ ದತ್ತಸ್ಯಾಂತೋ ನ ವಿದ್ಯತೇ ॥೨೧॥

ಈ ವಿಷಯದಲ್ಲಿ ವಿಶೇಷವನ್ನು ತಿಳಿಯಬೇಕು. ನ್ಯಾಯದಿಂದ ಗಳಿಸಿದ ಧನವನ್ನು ಸತ್ಪಾತ್ರರಲ್ಲಿ, ಯೋಗ್ಯಕಾಲದಲ್ಲಿ, ಯೋಗ್ಯದೇಶದಲ್ಲಿ ವಿಧಿಗೆ ಅನುಸಾರವಾಗಿ ಶ್ರದ್ಧೆಯಿಂದ ಕೊಟ್ಟರೆ ಅದರ ಫಲಕ್ಕೆ ಅಂತವಿಲ್ಲ.

ಅನ್ಯಾಯಾತ್ ಸಮುಪಾತ್ತೇನ ದಾನಧರ್ಮೋ ಧನೇನ ಯಃ ।
ಕ್ರಿಯತೇ ನ ಸ ಕರ್ತಾರಂ ತ್ರಾಯತೇ ಮಹತೋ ಭಯಾತ್ ॥೨೨॥

ಯಾವನು ಅನ್ಯಾಯದಿಂದ ಧನವನ್ನು ಸಂಪಾದನೆ ಮಾಡಿ ದಾನ ಧರ್ಮಗಳನ್ನು ಮಾಡುತ್ತಾನೆಯೋ ಅವನನ್ನು ಆ ದಾನ-ಧರ್ಮಗಳು ದೊಡ್ಡ ಭಯದಿಂದ ಪಾರು ಮಾಡುವುದಿಲ್ಲ.

ಪಾತ್ರೇ ದಾನಂ ಸ್ವಲ್ಪಮಪಿ ಕಾಲೇ ದತ್ತಂ ಯುಧಿಷ್ಠಿರ ।
ಮನಸಾ ಹಿ ವಿಶುದ್ಧೇನ ಪ್ರೇತ್ಯಾನಂತಫಲಂ ಸ್ಮೃತಮ್ ॥೨೩॥

ಎಲೈ ಯುಧಿಷ್ಠಿರನೇ, ಸತ್ಪಾತ್ರರಲ್ಲಿ, ಯೋಗ್ಯಕಾಲದಲ್ಲಿ ವಿಶುದ್ಧವಾದ ಮನಸ್ಸಿನಿಂದ ಕೊಟ್ಟ ಅಲ್ಪವಾದ ದಾನವೂ ಸಹ ಮರಣಾನಂತರದಲ್ಲಿ ಅನಂತಫಲವನ್ನು ಕೊಡುತ್ತದೆ ಎಂದು ಹೇಳಲ್ಪಡುತ್ತದೆ.

ದೇಶೇ ಕಾಲೇ ಚ ಪಾತ್ರೇ ಚ ಮುದ್ಗಲಃ ಶ್ರದ್ಧಯಾನ್ವಿತಃ ।
ವ್ರೀಹಿದ್ರೋಣಂ ಪ್ರದಾಯಾಥ ಪರಂ ಪದಮವಾಪ್ತವಾನ್ ॥೨೪॥

ದೇಶ, ಕಾಲ ಮತ್ತು ಪಾತ್ರಗಳಲ್ಲಿ ಶ್ರದ್ಧೆ ಮತ್ತು ಮಾರ್ದವದಿಂದ ಒಂದು ಕೊಳಗ ಭತ್ತವನ್ನು ಕೊಟ್ಟ ಮುದ್ಗಲನು ಸಹ ಶ್ರೇಷ್ಠವಾದ ಸ್ಥಾನವನ್ನು ಹೊಂದಿದನು.

ಶ್ರದ್ಧಾ ಧರ್ಮಾನುಗಾ ದೇವೀ ಪಾವನೀ ವಿಶ್ವಧಾರಿಣೀ ।
ಸಾವಿತ್ರೀ ಪ್ರಸವಿತ್ರೀ ಚ ಸಂಸಾರಾರ್ಣವತಾರಿಣೀ ॥೨೫॥

ಶ್ರದ್ಧೆ ಎನ್ನುವುದು ಧರ್ಮಾನುಸಾರಿಯಾದ ಧರ್ಮದ ಕಡೆಗೆ ಕೊಂಡೊಯ್ಯುವ ದೇವತೆ. ಆ ದೇವತೆಯು ಪಾವನಳಾದವಳು, ವಿಶ್ವವನ್ನು ಧರಿಸುವವಳು, ಎಲ್ಲ ಶುಭಗಳನ್ನು ಉಂಟುಮಾಡುವವಳು, ಶಾಶ್ವತಳಾದವಳು ಮತ್ತು ಸಂಸಾರ ಸಾಗರದಿಂದ ದಾಟಿಸುವವಳು.

ಶ್ರದ್ಧಯಾ ಧಾರ್ಯತೇ ಧರ್ಮೋ ಮಹದ್ಭಿರ್ನಾರ್ಥದರ್ಶಿಭಿಃ ।
ಸಧನಾ ಅಪಿ ರಾಜಾನೋ ನಿಃಶ್ರದ್ಧಾ ನರಕಂ ಗತಾಃ ।
ನಿಷ್ಕಿಂಚನಾಶ್ಚ ಮುನಯೋ ಶ್ರದ್ಧಾವಂತೋ ದಿವಂ ಗತಾಃ ॥೨೬॥

ಮಹಾತ್ಮರು ಶ್ರದ್ಧೆಯಿಂದಲೇ ಧರ್ಮವನ್ನು ಉಳಿಸಿಕೊಳ್ಳುತ್ತಾರೆ. ಕೇವಲ ಧನವನ್ನೇ ನೋಡುವವರು ಧರ್ಮವನ್ನು ಧರಿಸುವುದಿಲ್ಲ. ಶ್ರೀಮಂತರಾದ ರಾಜರೂ ಸಹ ಶ್ರದ್ಧೆಯಿಲ್ಲದೆ ನರಕಕ್ಕೆ ಹೋಗಿದ್ದಾರೆ. ನಿಷ್ಕಿಂಚನರಾದ ಋಷಿಗಳೂ ಸಹ ಶ್ರದ್ಧೆಯಿಂದ ಸ್ವರ್ಗಕ್ಕೆ ಹೋಗಿದ್ದಾರೆ.

ಅತ್ರಾಪ್ಯುದಾಹರಂತೀಮಂ ಇತಿಹಾಸಂ ಪುರಾತನಮ್ ।
ವ್ರೀಹಿದ್ರೋಣಪರಿತ್ಯಾಗಾದ್ ಯತ್ಫಲಂ ಪ್ರಾಪ ಮುದ್ಗಲಃ ॥೨೭॥

ಈ ವಿಷಯದಲ್ಲಿ ಮುದ್ಗಲನೆಂಬ ಬ್ರಾಹ್ಮಣನು ಒಂದು ಕೊಳಗ ಭತ್ತವನ್ನು ದಾನವಾಗಿ ಕೊಟ್ಟು ಎಂತಹ ಫಲವನ್ನು ಪಡೆದ ಎಂಬ ಪ್ರಾಚೀನವಾದ ಇತಿಹಾಸವನ್ನು ಹಿರಿಯರು ಹೇಳುತ್ತಾರೆ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂಸಂಹಿತಾಯಾಂ ವೈಯಾಸಿಕ್ಯಾಂ
ವನಪರ್ವಣಿ ಏಕೋನಪಂಚಶಾಧಿಕದ್ವಿಶತತಮೋऽಧ್ಯಾಯಃ ॥
॥ ಇತಿ ವ್ರೀಹಿದ್ರೌಣಕಪರ್ವಣಿ ದಾನದುಷ್ಕರತ್ವಕಥನಂ ನಾಮ ದ್ವಿತೀಯೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವನಪರ್ವದಲ್ಲಿ ಇನ್ನೂರ ನಲವತ್ತೊಂಬತ್ತನೆಯ ಅಧ್ಯಾಯ ಮುಗಿಯಿತು.

★ ★ ★ ★

ಇನ್ನೂರ ಐವತ್ತನೆಯ ಅಧ್ಯಾಯ

ದುರ್ವಾಸರಿಂದ ಮುದ್ಗಲನ ಪರೀಕ್ಷೆ. ಮುದ್ಗಲನ ಅನ್ನದಾನದಿಂದ ದುರ್ವಾಸರ ಸಂತೋಷ. ತನ್ನನ್ನು ವಿಮಾನದಲ್ಲಿ ಕರೆದುಕೊಂಡು ಹೋಗಲು ಬಂದ ದೇವದೂತನ ಜೊತೆಯಲ್ಲಿ ಮುದ್ಗಲನ ಸಂವಾದ.

ಯುಧಿಷ್ಠಿರಃ

ವ್ರೀಹಿದ್ರೋಣಃ ಪರಿತ್ಯಕ್ತಃ ಕಥಂ ತೇನ ಮಹಾತ್ಮನಾ ।
ಕಸ್ಮೈ ದತ್ತಶ್ಚ ಭಗವನ್ ವಿಧಿನಾ ಕೇನ ಚಾತ್ಥ ಮೇ ॥೧॥

ಪ್ರತ್ಯಕ್ಷಧರ್ಮಾ ಭಗವಾನ್ ಯಸ್ಯ ತುಷ್ಟೋ ಹಿ ಕರ್ಮಭಿಃ ।
ಸಫಲಂ ತಸ್ಯ ಜನ್ಮಾಹಂ ಮನ್ಯೇ ಸದ್ಧರ್ಮಚಾರಿಣಃ ॥೨॥

ಯುಧಿಷ್ಠಿರ– ಆ ಮಹಾತ್ಮನು ಒಂದು ಕೊಳಗ ಭತ್ತವನ್ನು ಹೇಗೆ ದಾನಮಾಡಿದನು? ಪೂಜ್ಯರೇ, ಯಾವ ವಿಧಾನದಿಂದ ಅವನು ದಾನಮಾಡಿದನೆಂದು ನನಗೆ ಹೇಳಿ. ಯಾವನ ಕರ್ಮಗಳಿಂದ ಧರ್ಮಪ್ರತ್ಯಕ್ಷವುಳ್ಳ ಭಗವಂತನೇ ಸಂತುಷ್ಟನಾದನೋ ಅಂತಹ ಸದ್ಧರ್ಮವನ್ನು ಅನುಷ್ಠಾನ ಮಾಡುವ ಅವನ ಜನ್ಮವು ಸಫಲವೆಂದು ನಾನು ಭಾವಿಸುತ್ತೇನೆ.

ಶ್ರೀ ವ್ಯಾಸಃ

ಸಿಲೋಂಛವೃತ್ತಿರ್ಧರ್ಮಾತ್ಮಾ ಮುದ್ಗಲಃ ಸಂಶ್ರಿತವ್ರತಃ ।
ಆಸೀದ್ ರಾಜನ್ ಕುರುಕ್ಷೇತ್ರೇ ಸತ್ಯವಾಗನಸೂಯಕಃ ॥೩॥

ವ್ಯಾಸರು– ರಾಜನೇ, ಕುರುಕ್ಷೇತ್ರದಲ್ಲಿ ಧರ್ಮಿಷ್ಠನೂ, ಶ್ರೇಷ್ಠವಾದ ವ್ರತಗಳನ್ನು ಮಾಡುವವನೂ, ಸತ್ಯವಚನನೂ, ಅಸೂಯಾ ರಹಿತನೂ, ಸಿಲೋಂಛನವೃತ್ತಿಯಿಂದ ಜೀವಿಸುವವನೂ ಆದ ಮುದ್ಗಲನೆಂಬ ಬ್ರಾಹ್ಮಣನಿದ್ದನು.

ಅತಿಥಿವ್ರತೀ ಕ್ರಿಯಾವಾಂಶ್ಚ ಕಾಪೋತೀಂ ವೃತ್ತಿಮಾಶ್ರಿತಃ ।
ಸತ್ರಮಿಷ್ಟೀಕೃತಂ ನಾಮ ಸಮುಪಾಸ್ತೇ ಮಹಾತಪಾಃ ॥೪॥

ಅತಿಥಿ ಪೂಜಾವ್ರತವುಳ್ಳ ಕ್ರಿಯಾಶೀಲನಾದ ಅವನು ಕಪೋತ ಪಕ್ಷಿಯಂತೆ ಕಣಕಣಗಳನ್ನು ಆರಿಸುವ ಸಿಲೋಂಛವೃತ್ತಿಯನ್ನು ಆಶ್ರಯಿಸಿದವನಾಗಿದ್ದನು. ಆ ಮಹಾತಪಸ್ವಿಯು ಇಷ್ಟೀಕೃತ ಎಂಬ ವ್ರತವನ್ನು ಮಾಡುತ್ತಿದ್ದನು.

ಸಪುತ್ರದಾರೋ ಹಿ ಮುನಿಃ ಪಕ್ಷಾಹಾರೋ ಬಭೂವ ಸಃ ।
ಕಪೋತವೃತ್ತ್ಯಾ ಪಕ್ಷೇಣ ವ್ರೀಹಿದ್ರೋಣಮುಪಾರ್ಜಯತ್ ॥೫॥

ಭಾರ್ಯಾಪುತ್ರರಿಂದ ಸಹಿತನಾದ ಆ ಋಷಿಯು ಒಂದುಪಕ್ಷದಲ್ಲಿ ಒಂದು ದಿವಸ ಆಹಾರವನ್ನು ಸೇವಿಸುತ್ತಿದ್ದನು. ಮತ್ತು ಒಂದು ಪಕ್ಷದಲ್ಲಿ ಕಪೋತವೃತ್ತಿಯಿಂದ ಒಂದು ಕೊಳಗ ಭತ್ತವನ್ನು ಸಂಗ್ರಹಿಸುತ್ತಿದ್ದನು.

ದರ್ಶಂ ಚ ಪೌರ್ಣಮಾಸ್ಯಂ ಚ ಕುರ್ವನ್ ವಿಗತಮತ್ಸರಃ ।
ದೇವತಾತಿಥಿಶೇಷೇಣ ಕುರುತೇ ದೇಹಯಾಪನಮ್ ॥೬॥

ಅವನು ಮತ್ಸರರಹಿತನಾಗಿ ದರ್ಶಪೂರ್ಣಮಾಸ ಯಾಗವನ್ನು ಮಾಡಿ ದೇವತಾ ಅತಿಥಿಶೇಷದಿಂದ ದೇಹಯಾತ್ರೆಯನ್ನು ನಡೆಸುತ್ತಿದ್ದನು.

ತಸ್ಯೇಂದ್ರಃ ಸಹಿತೋ ದೇವೈಃ ಸಾಕ್ಷಾತ್ ತ್ರಿಭುವನೇಶ್ವರಃ ।
ಪ್ರತ್ಯಗೃಹ್ಣನ್ಮಹಾರಾಜ ಭಾಗಂ ಪರ್ವಣಿ ಪರ್ವಣಿ ॥೭॥

ಎಲೈ ಮಹಾರಾಜನೇ, ಅವನು ದರ್ಶಪೂರ್ಣಮಾಸಗಳಲ್ಲಿ ಹೋಮವನ್ನು ಮಾಡುವಾಗ ತ್ರಿಲೋಕೇಶ್ವರನಾದ ಇಂದ್ರನು ದೇವತೆಗಳ ಜೊತೆಯಲ್ಲಿ ಬಂದು ಸಾಕ್ಷಾತ್ತಾಗಿ ಹವಿರ್ಭಾಗವನ್ನು ಸ್ವೀಕರಿಸುತ್ತಿದ್ದನು.

ಸ ಪರ್ವಕಾಲಂ ಕೃತ್ವಾ ತು ಮುನಿವೃತ್ತ್ಯಾ ಸಮನ್ವಿತಃ ।
ಅತಿಥಿಭ್ಯೋ ದದಾವನ್ನಂ ಪ್ರಹೃಷ್ಟೇನಾನಂತರಾತ್ಮನಾ ॥೮॥

ಅವನು ದರ್ಶಪೂರ್ಣಮಾಸಾದಿ ಪರ್ವಕಾಲಗಳಲ್ಲಿ ಮಾಡಬೇಕಾದ ಇಷ್ಟಿಗಳನ್ನು ಮಾಡಿ ಮುನಿವೃತ್ತಿಯಿಂದ ಕೂಡಿದವನಾಗಿ ಅತಿಥಿಗಳಿಗೆ ಸಂತುಷ್ಟವಾದ ಮನಸ್ಸಿನಿಂದ ಅನ್ನವನ್ನು ಕೊಡುತ್ತಿದ್ದನು.

ವ್ರೀಹಿದ್ರೋಣಸ್ಯ ಸಿದ್ಧಸ್ಯ ದದತೋಽನ್ನಂ ಮಹಾತ್ಮನಃ ।
ಶಿಷ್ಟಂ ಮಾತ್ಸರ್ಯಹೀನಸ್ಯ ವರ್ಧತೇಽತಿಥಿದರ್ಶನಾತ್ ।
ತಚ್ಛತಾನ್ಯಪಿ ಭುಂಜಂತಿ ಬ್ರಾಹ್ಮಣಾನಾಂ ಮನೀಷಿಣಾಮ್ ॥೯॥

ಒಂದು ಕೊಳಗ ಭತ್ತದಿಂದ ಅನ್ನವನ್ನು ದಾನಮಾಡುವ ಮತ್ಸರಹೀನನಾದ ಆ ಮಹಾತ್ಮನಿಗೆ ಅತಿಥಿಗಳನ್ನು ನೋಡಿದ ತಕ್ಷಣ ಉಳಿದ ಅನ್ನವು ಅಭಿವೃದ್ಧಿಯನ್ನು ಹೊಂದುತ್ತಿತ್ತು. ಅದರಿಂದ ಮೇಧಾವಿಗಳಾದ ನೂರುಮಂದಿ ಬ್ರಾಹ್ಮಣರೂ ಸಹ ಭೋಜನ ಮಾಡುತ್ತಿದ್ದರು.

ಮುನೇಸ್ತ್ಯಾಗವಿಶುದ್ಧ್ಯಾ ತು ತದನ್ನಂ ವೃದ್ಧಿಮೃಚ್ಛತಿ ॥೧೦॥

ಮುನಿಯ ವಿಶುದ್ಧ ತ್ಯಾಗದಿಂದ ಮಾಡಿದ ಅನ್ನವು ವೃದ್ಧಿಯನ್ನು ಹೊಂದುತ್ತಿತ್ತು.

ತಂ ತು ಶುಶ್ರಾವ ಧರ್ಮಿಷ್ಠಂ ಮುದ್ಗಲಂ ಶಂಸಿತವ್ರತಮ್ ।
ದುರ್ವಾಸಾ ನೃಪ ದಿಗ್ವಾಸಾಸ್ತಮಥಾಭ್ಯಾಜಗಾಮ ಹ ॥೧೧॥

ಎಲೈ ರಾಜನೇ, ದಿಗಂಬರರಾದ ದುರ್ವಾಸರು ಮುದ್ಗಲನು ಧರ್ಮಿಷ್ಠನು ಮತ್ತು ಒಳ್ಳೆಯ ವ್ರತವನ್ನು ಧರಿಸಿದವನು ಎಂಬ ವಿಷಯವನ್ನು ಕೇಳಿ ಅಲ್ಲಿಗೆ ಆಗಮಿಸಿದರು.

ಬಿಭ್ರಚ್ಚಾನಿಯತಂ ವೇಷಮುನ್ಮತ್ತ ಇವ ಪಾಂಡವ ।
ವಿಕಚಃ ಪರುಷಾ ವಾಚೋ ವ್ಯಾಹರನ್ ವಿವಿಧಾ ಮುನಿಃ ।
ಅಭಗಮ್ಯಾಥ ತಂ ವಿಪ್ರಮುವಾಚ ಮುನಿಸತ್ತಮಃ ॥೧೨॥

ಅನ್ನಾರ್ಥಿನಮನುಪ್ರಾಪ್ತಂ ವಿದ್ಧಿ ಮಾಂ ದ್ವಿಜಸತ್ತಮ ॥೧೩॥

ಎಲೈ ಪಾಂಡವನೇ, ಆ ಮುನಿಶ್ರೇಷ್ಠರು ಉನ್ಮತ್ತನಂತೆ ಅನಿಯತವೇಷವನ್ನು ಧರಿಸಿ ತಲೆಯಲ್ಲಿ ಕೂದಲಿಲ್ಲದೇ ಅನೇಕ ವಿಧವಾದ ಉಗ್ರವಾದ ಮಾತುಗಳನ್ನು ಆಡುತ್ತಾ ಆ ಬ್ರಾಹ್ಮಣನ ಬಳಿಗೆ ಬಂದು ಬ್ರಾಹ್ಮಣ ಶ್ರೇಷ್ಠನೇ ನಾನು ಅನ್ನಾರ್ಥಿಯಾಗಿ ಬಂದಿದ್ದೇನೆ ಎಂದು ತಿಳಿ ಎಂದು ಹೇಳಿದರು.

ವೈಶಂಪಾಯನ

ಸ್ವಾಗತಂ ತೇಽಸ್ತ್ವಿತಿ ಮುನಿಂ ಮುದ್ಗಲಃ ಪ್ರತ್ಯಭಾಷತ ।
ಪಾದ್ಯಮಾಚಮನೀಯಂ ಚ ಪ್ರತಿಪಾದ್ಯಾರ್ಘ್ಯಮುತ್ತಮಮ್ ॥೧೪॥

ವೈಶಂಪಾಯನ– ಮುದ್ಗಲನು ಆ ಮುನಿಗಳಿಗೆ ಸ್ವಾಗತವನ್ನು ಕೋರಿ ಪಾದ್ಯ, ಆಚಮನೀಯ ಮತ್ತು ಅರ್ಘ್ಯಗಳನ್ನು ನೀಡಿದನು.

ಪ್ರಾದಾತ್ ಸ ತಾಪಸಾಯಾನ್ನಂ ಕ್ಷುಧಿತಾಯಾತಿಥಿವ್ರತೀ ।
ಉನ್ಮತ್ತಾಯ ಪರಾಂ ಶ್ರದ್ಧಾಮಾಸ್ಥಾಯ ಸ ಧೃತವ್ರತಃ ॥೧೫॥

ಅತಿಥಿವ್ರತವನ್ನು ಹೊಂದಿದ ಧೃತ್ರವ್ರತವುಳ್ಳ ಅವನು ಉನ್ಮತ್ತನಂತಿದ್ದ ಆ ತಾಪಸನಿಗೆ ಶ್ರದ್ಧಾಪೂರ್ವಕವಾಗಿ ಅನ್ನವನ್ನು ನೀಡಿದನು.

ತತಸ್ತದನ್ನಂ ರಸವತ್ ಸ ಏವ ಕ್ಷುಧಯಾಽನ್ವಿತಃ ।
ಬುಭುಜೇ ಕೃತ್ಸ್ನಮುನ್ಮತ್ತಃ ಪ್ರಾದಾತ್ ತಸ್ಮೈ ಚ ಮುದ್ಗಲಃ ॥೧೬॥

ಆಗ ಹಸಿವಿನಿಂದ ಕೂಡಿದ್ದ ಆ ಉನ್ಮತ್ತನು ಎಲ್ಲಾ ಅನ್ನವನ್ನೂ ತಾನೇ ಊಟಮಾಡಿದನು. ಮುದ್ಗಲನು ಅವನಿಗೆ ಅನ್ನವನ್ನು ನೀಡಿದನು.

ಭುಕ್ತ್ವಾ ಚಾನ್ನಂ ತತಃ ಸರ್ವಮುಚ್ಛಿಷ್ಟೇನಾತ್ಮನಸ್ತತಃ ।
ಅಥಾಂಗಂ ಲಿಲಿಪೇಽನ್ನೇನ ಯಥಾಗತಮಗಾಚ್ಚ ಸಃ ॥೧೭॥

ಎಲ್ಲಾ ಅನ್ನವನ್ನು ಊಟಮಾಡಿ ಭೋಜನ ಪಾತ್ರೆಯಲ್ಲಿ ಉಳಿದಿದ್ದ ಉಚ್ಛಿಷ್ಟವನ್ನು ತನ್ನ ಶರೀರಕ್ಕೆಲ್ಲಾ ಲೇಪಿಸಿಕೊಂಡು ಆ ಉನ್ಮತ್ತನು ಬಂದಂತೆಯೇ ಹೊರಟು ಹೋದನು.

ಏವಂ ದ್ವಿತೀಯೇ ಸಂಪ್ರಾಪ್ತೇ ಯಥಾಕಾಲೇ ಮನೀಷಿಣಃ ।
ಆಗಮ್ಯ ಬುಭುಜೇ ಸರ್ವಮನ್ನಮುಂಛೋಪಜೀವಿನಃ ॥೧೮॥

ಹೀಗೆಯೇ ಎರಡನೆಯ ಪರ್ವಕಾಲವು ಪ್ರಾಪ್ತವಾದಾಗ ಆ ಕಾಲದಲ್ಲಿ ಪುನಃ ಬಂದು ಮೇಧಾವಿಯಾದ ಆ ಉಂಛೋಪಜೀವಿಯಾದ ಬ್ರಾಹ್ಮಣನ ಅನ್ನವೆಲ್ಲವನ್ನೂ ಭುಂಜಿಸಿದನು.

ನಿರಾಹಾರಸ್ತು ಸ ಮುನಿರುಂಛಮಾರ್ಜಯತೇ ಪುನಃ ।
ನ ಚೈನಂ ವಿಕ್ರಿಯಾಂ ನೇತುಮಶಕನ್ಮುದ್ಗಲಂ ಕ್ಷುಧಾ ॥೧೯॥

ನಿರಾಹಾರನಾದ ಆ ಬ್ರಾಹ್ಮಣನು ಪುನಃ ಉಂಛವೃತ್ತಿಯಿಂದ ಧಾನ್ಯವನ್ನು ಸಂಪಾದಿಸಿದನು. ದುರ್ವಾಸರು ಮುದ್ಗಲನಿಗೆ ಹಸಿವೆಯಿಂದ ವಿಕಾರವನ್ನು ಉಂಟು ಮಾಡಲು ಶಕ್ತರಾಗಲಿಲ್ಲ.

ನ ಕ್ರೋಧೋ ನ ಚ ಮಾತ್ಸರ್ಯಂ ನಾವಮಾನೋ ನ ಸಂಭ್ರಮಃ ।
ಸಪುತ್ರದಾರಮುಂಛಂತಮಾವಿವೇಶ ದ್ವಿಜೋತ್ತಮಮ್ ॥೨೦॥

ಉಂಛವೃತ್ತಿಯಿಂದ ಭಾರ್ಯಾಪುತ್ರರ ಜೊತೆಯಲ್ಲಿ ಜೀವಿಸುವ ಆ ದ್ವಿಜೋತ್ತಮನಿಗೆ ಕ್ರೋಧವಾಗಲೀ, ಮಾತ್ಸರ್ಯವಾಗಲೀ, ಅವಮಾನವಾಗಲೀ, ಕಳವಳವಾಗಲೀ ಉಂಟಾಗಲಿಲ್ಲ.

ತಥಾ ತಮುಂಛಧರ್ಮಾಣಂ ದುರ್ವಾಸಾ ಮುನಿಸತ್ತಮಮ್ ।
ಉಪತಸ್ಥೇ ಯಥಾಕಾಲಂ ಷಟ್‌ಕೃತ್ವಃ ಕೃತನಿಶ್ಚಯಃ ॥೨೧॥

ಹಾಗೆ ಆ ಉಂಛಧರ್ಮವುಳ್ಳ ಆ ಮುನಿಯನ್ನು ದುರ್ವಾಸರು ಪರೀಕ್ಷಿಸಬೇಕೆಂದು ನಿಶ್ಚಯಿಸಿ ಪರ್ವಕಾಲದಲ್ಲಿ ಆರುಬಾರಿ ಬಂದರು.

ನ ಚಾಸ್ಯ ಮಾನಸಂ ಕಂಚಿದ್ ವಿಕಾರಂ ದದೃಶೇ ಮುನಿಃ ।
ಶುದ್ಧಸತ್ತ್ವಸ್ಯ ಶುದ್ಧಂ ಸ ದದೃಶೇ ನಿರ್ಮಲಂ ಪುನಃ ।
ತಮುವಾಚ ತತಃ ಪ್ರೀತಃ ಸ ಮುನಿರ್ಮುದ್ಗಲಂ ತತಃ ॥೨೨॥

ಆದರೆ ಆ ಮುನಿಯಲ್ಲಿ ಯಾವ ಮಾನಸ ವಿಕಾರವನ್ನೂ ಅವರು ಕಾಣಲಿಲ್ಲ. ಶುದ್ಧಸತ್ತ್ವವುಳ್ಳ ಆ ಬ್ರಾಹ್ಮಣನ ನಿರ್ಮಲವಾದ ಮನಸ್ಸನ್ನೇ ಪುನಃ ಪುನಃ ನೋಡಿ ಸಂತುಷ್ಟರಾಗಿ ಅವರು ಮುದ್ಗಲನನ್ನು ಕುರಿತು ಹೀಗೆ ಮಾತನಾಡಿದರು.

ತ್ವತ್ಸಮೋ ನಾಸ್ತಿ ಲೋಕೇಽಸ್ಮಿನ್ ದಾತಾ ಮಾತ್ಸರ್ಯವರ್ಜಿತಃ ॥೨೩॥

ಲೋಕದಲ್ಲಿ ಮಾತ್ಸರ್ಯವರ್ಜಿತನಾಗಿ ನಿನಗೆ ಸಮಾನವಾಗಿ ದಾನವನ್ನು ಮಾಡುವವನು ಇನ್ನೊಬ್ಬನಿಲ್ಲ.

ಕ್ಷುದ್ ಧರ್ಮಸಂಜ್ಞಾಂ ಪ್ರಣುದತ್ಯಾದತ್ತೇ ಧೈರ್ಯಮೇವ ಚ ।
ರಸಾನುಸಾರಿಣೀ ಜಿಹ್ವಾ ಕರ್ಷತ್ಯೇವ ರಸಾನ್‌ಪ್ರತಿ ॥೨೪॥

ಹಸಿವು ಧರ್ಮಪ್ರಜ್ಞೆಯನ್ನು ನಾಶಮಾಡುತ್ತದೆ. ಧೈರ್ಯವನ್ನು ಅಪಹರಿಸುತ್ತದೆ. ರುಚಿಯನ್ನು ಅನುಸರಿಸುವ ಜಿಹ್ವೆಯು ರಸಗಳ ಕಡೆಗೇ ಎಳೆದುಕೊಂಡು ಹೋಗುತ್ತದೆ.

ಆಹಾರಪ್ರಭವಾಃ ಪ್ರಾಣಾ ಮನೋ ದುರ್ನಿಗ್ರಹಂ ಚಲಮ್ ।
ಮನಸಶ್ಚೇಂದ್ರಿಯಾಣಾಂ ಚಾಪ್ಯೈಕಾಗ್ರ್ಯಂ ನಿಶ್ಚಿತಂ ತಪಃ ॥೨೫॥

ಶ್ರಮೇಣೋಪಾರ್ಜಿತಂ ತ್ಯಕ್ತುಂ ನ ಚ ದುಃಖೇನ ಚೇತಸಾ ।
ತತ್ಸರ್ವಂ ಭವತಾ ಸಾಧೋ ಯಥಾವದುಪಪಾದಿತಮ್ ॥೨೬॥

ಆಹಾರದಿಂದ ಎಲ್ಲ ಇಂದ್ರಿಯಗಳು ಚುರುಕಾಗುತ್ತವೆ. ಮನಸ್ಸು ಚಂಚಲ ಮತ್ತು ನಿಗ್ರಹಿಸಲು ಕಷ್ಟಸಾಧ್ಯವಾದುದು. ಮನಸ್ಸು ಮತ್ತು ಇಂದ್ರಿಯಗಳಿಗೂ ದುಃಖವುಂಟಾಗುವಂತೆ ಶ್ರಮದಿಂದ ಗಳಿಸಿದ ಧನವನ್ನು (ವಸ್ತುವನ್ನು) ವೈರಾಗ್ಯಯುಕ್ತವಾದ ಮನಸ್ಸಿನಿಂದ ಕೊಡಲು (ಮನಃಪೂರ್ವಕವಾಗಿ) ನಿನ್ನ ಏಕಾಗ್ರವಾದ ಮನಸ್ಸು ನಿಶ್ಚಯಿಸಿದೆ. ಸಾಧುವೇ, ನೀನು ದಾನಮಾಡಿದುದನ್ನೆಲ್ಲಾ ನೀನು ನ್ಯಾಯದಿಂದ ಸಂಪಾದಿಸಿ ವಿಧಿಪೂರ್ವಕವಾಗಿ ಕೊಟ್ಟಿದ್ದೀಯೆ.

ಪ್ರೀತಾಃ ಸ್ಮೋಽನುಗೃಹೀತಾಶ್ಚ ಸಮೇತ್ಯ ಭವತಾ ಸಹ ।
ಪಾವನಂ ಪರಮಂ ಮನ್ಯೇ ದರ್ಶನಂ ತೇ ಮಹಾಮುನೇ ॥೨೭॥

ನಿನ್ನ ಸಮಾಗಮದಿಂದ ನಾನು ಸಂತುಷ್ಟನೂ ಮತ್ತು ಅನುಗೃಹೀತನೂ ಆಗಿದ್ದೇನೆ. ಎಲೈ ಮಹಾಮುನಿಯೇ, ನಿನ್ನ ದರ್ಶನವನ್ನು ಪರಮಪಾವನವೆಂದು ಭಾವಿಸಿದ್ದೇನೆ.

ಇಂದ್ರಿಯಾಭಿಜಯೋ ಧೈರ್ಯಂ ಸಂವಿಭಾಗೋ ದಮಃ ಶಮಃ ।
ದಯಾ ಸತ್ಯಂ ಚ ಧರ್ಮಶ್ಚ ತ್ವಯಿ ಸರ್ವಂ ಪ್ರತಿಷ್ಠಿತಮ್ ॥೨೮॥

ವಿಶುದ್ಧಸತ್ತ್ವಸಂಪನ್ನೋ ನ ತ್ವದನ್ಯೋಽಸ್ತಿ ಕಶ್ಚನ ।

ಇಂದ್ರಿಯ ಜಯ, ಧೈರ್ಯ, ಸಂವಿಭಾಗ, ದಮ, ಶಮ, ದಯಾ, ಸತ್ಯ, ಧರ್ಮ ಇವೆಲ್ಲವೂ ನಿನ್ನಲ್ಲಿ ಆಶ್ರಿತವಾಗಿವೆ. ಇಂತಹ ವಿಶುದ್ಧವಾದ ಮನಸ್ಸುಳ್ಳವನು ನಿನ್ನನ್ನು ಬಿಟ್ಟು ಇನ್ನೊಬ್ಬನಿಲ್ಲ.

ಜಿತಾಸ್ತೇ ಕರ್ಮಭಿರ್ಲೋಕಾಃ ಪ್ರಾಪ್ತೋಽಸಿ ಪರಮಾಂ ಗತಿಮ್ ॥೨೯॥

ನಿನ್ನ ವಿಶುದ್ಧ ಕರ್ಮಗಳಿಂದ ಲೋಕಗಳನ್ನು ಜಯಿಸಿದ್ದೀಯೆ. ಶ್ರೇಷ್ಠವಾದ ಗತಿಯನ್ನು ಹೊಂದಿದ್ದೀಯೆ.

ಸದ್ಭಿಃ ಸಮಾಗಮೋ ನಿತ್ಯಂ ಸರ್ವಪಾಪಹರಃ ಸ್ಮೃತಃ ।
ಧರ್ಮೋಽಪಿ ಧಾರ್ಯತೇ ಯೇನ ಧೃತಿಯುಕ್ತಾತ್ಮನಾಕ್ತತ್ವಯಾ ॥೩೦॥

ಸಜ್ಜನರ ಸಮಾಗಮವು ಯಾವಾಗಲೂ ಸರ್ವಪಾಪ ಪರಿಹಾರಕವೆಂದು ಹೇಳಲ್ಪಡುತ್ತದೆ. ಚರಾಚರವಾದ ಸಮಸ್ತ ಲೋಕಗಳೂ ಧರ್ಮದಿಂದ ಧರಿಸಲ್ಪಡುತ್ತದೆ. ಎಲೈ ಧೈರ್ಯಶಾಲಿಯೇ, ಆ ಧರ್ಮವನ್ನು ನೀನು ಧರಿಸಿದ್ದೀಯೆ.

ಅಹೋ ದಾನಂ ವಿಘುಷ್ಟಂ ತೇ ಸುಮಹತ್ ಸ್ವರ್ಗವಾಸಿಭಿಃ ।
ಸಶರೀರೋ ಭವಾನ್ ಗಂತಾ ಸ್ವರ್ಗಂ ಸುಚರಿತವ್ರತ ॥೩೧॥

ನಿನ್ನ ದಾನವು ಸ್ವರ್ಗವಾಸಿಗಳಿಂದ ದೊಡ್ಡದೆಂದು ಘೋಷಿಸಲ್ಪಡುತ್ತದೆ. ಸುಚರಿತವ್ರತನೇ, ನೀನು ಶರೀರಸಹಿತನಾಗಿ ಸ್ವರ್ಗಕ್ಕೆ ಹೋಗುವಿ.

ಇತ್ಯೇವಂ ವದತಸ್ತಸ್ಯ ತದಾ ದುರ್ವಾಸಸೋ ಮುನೇಃ ।
ದೇವದೂತೋ ವಿಮಾನೇನ ಮುದ್ಗಲಂ ಪ್ರತ್ಯುಪಸ್ಥಿತಃ ॥೩೨॥

ಹೀಗೆ ದುರ್ವಾಸ ಮುನಿಗಳು ಹೇಳುತ್ತಿರುವಾಗಲೇ ದೇವದೂತನು ವಿಮಾನವನ್ನು ತೆಗೆದುಕೊಂಡು ಮುದ್ಗಲನ ಸಮೀಪಕ್ಕೆ ಬಂದನು.

ಆದರೆ ಆ ಮುನಿಯಲ್ಲಿ ಯಾವ ಮಾನಸ ವಿಕಾರವನ್ನೂ ಅವರು ಕಾಣಲಿಲ್ಲ. ಶುದ್ಧಸತ್ತ್ವವುಳ್ಳ ಆ ಬ್ರಾಹ್ಮಣನ ನಿರ್ಮಲವಾದ ಮನಸ್ಸನ್ನೇ ಪುನಃ ಪುನಃ ನೋಡಿ ಸಂತುಷ್ಟರಾಗಿ ಅವರು ಮುದ್ಗಲನನ್ನು ಕುರಿತು ಹೀಗೆ ಮಾತನಾಡಿದರು.

ತ್ವತ್ಸಮೋ ನಾಸ್ತಿ ಲೋಕೇಽಸ್ಮಿನ್ ದಾತಾ ಮಾತ್ಸರ್ಯವರ್ಜಿತಃ ॥೨೩॥

ಲೋಕದಲ್ಲಿ ಮಾತ್ಸರ್ಯವರ್ಜಿತನಾಗಿ ನಿನಗೆ ಸಮಾನವಾಗಿ ದಾನವನ್ನು ಮಾಡುವವನು ಇನ್ನೊಬ್ಬನಿಲ್ಲ.

ಕ್ಷುದ್ ಧರ್ಮಸಂಜ್ಞಾಂ ಪ್ರಣುದತ್ಯಾದತ್ತೇ ಧೈರ್ಯಮೇವ ಚ ।
ರಸಾನುಸಾರಿಣೀ ಜಿಹ್ವಾ ಕರ್ಷತ್ಯೇವ ರಸಾನ್‌ಪ್ರತಿ ॥೨೪॥

ಹಸಿವು ಧರ್ಮಪ್ರಜ್ಞೆಯನ್ನು ನಾಶಮಾಡುತ್ತದೆ. ಧೈರ್ಯವನ್ನು ಅಪಹರಿಸುತ್ತದೆ. ರುಚಿಯನ್ನು ಅನುಸರಿಸುವ ಜಿಹ್ವೆಯು ರಸಗಳ ಕಡೆಗೇ ಎಳೆದುಕೊಂಡು ಹೋಗುತ್ತದೆ.

ಆಹಾರಪ್ರಭವಾಃ ಪ್ರಾಣಾ ಮನೋ ದುರ್ನಿಗ್ರಹಂ ಚಲಮ್ ।
ಮನಸಶ್ಚೇಂದ್ರಿಯಾಣಾಂ ಚಾಪ್ಯೈಕಾಗ್ರ್ಯಂ ನಿಶ್ಚಿತಂ ತಪಃ ॥೨೫॥

ಶ್ರಮೇಣೋಪಾರ್ಜಿತಂ ತ್ಯಕ್ತುಂ ನ ಚ ದುಃಖೇನ ಚೇತಸಾ ।
ತತ್ಸರ್ವಂ ಭವತಾ ಸಾಧೋ ಯಥಾವದುಪಪಾದಿತಮ್ ॥೨೬॥

ಆಹಾರದಿಂದ ಎಲ್ಲ ಇಂದ್ರಿಯಗಳು ಚುರುಕಾಗುತ್ತವೆ. ಮನಸ್ಸು ಚಂಚಲ ಮತ್ತು ನಿಗ್ರಹಿಸಲು ಕಷ್ಟಸಾಧ್ಯವಾದುದು. ಮನಸ್ಸು ಮತ್ತು ಇಂದ್ರಿಯಗಳಿಗೂ ದುಃಖವುಂಟಾಗುವಂತೆ ಶ್ರಮದಿಂದ ಗಳಿಸಿದ ಧನವನ್ನು (ವಸ್ತುವನ್ನು) ವೈರಾಗ್ಯಯುಕ್ತವಾದ ಮನಸ್ಸಿನಿಂದ ಕೊಡಲು (ಮನಃಪೂರ್ವಕವಾಗಿ) ನಿನ್ನ ಏಕಾಗ್ರವಾದ ಮನಸ್ಸು ನಿಶ್ಚಯಿಸಿದೆ. ಸಾಧುವೇ, ನೀನು ದಾನಮಾಡಿದುದನ್ನೆಲ್ಲಾ ನೀನು ನ್ಯಾಯದಿಂದ ಸಂಪಾದಿಸಿ ವಿಧಿಪೂರ್ವಕವಾಗಿ ಕೊಟ್ಟಿದ್ದೀಯೆ.

ಪ್ರೀತಾಃ ಸ್ಮೋಽನುಗೃಹೀತಾಶ್ಚ ಸಮೇತ್ಯ ಭವತಾ ಸಹ ।
ಪಾವನಂ ಪರಮಂ ಮನ್ಯೇ ದರ್ಶನಂ ತೇ ಮಹಾಮುನೇ ॥೨೭॥

ನಿನ್ನ ಸಮಾಗಮದಿಂದ ನಾನು ಸಂತುಷ್ಟನೂ ಮತ್ತು ಅನುಗೃಹೀತನೂ ಆಗಿದ್ದೇನೆ. ಎಲೈ ಮಹಾಮುನಿಯೇ, ನಿನ್ನ ದರ್ಶನವನ್ನು ಪರಮಪಾವನವೆಂದು ಭಾವಿಸಿದ್ದೇನೆ.

ಇಂದ್ರಿಯಾಭಿಜಯೋ ಧೈರ್ಯಂ ಸಂವಿಭಾಗೋ ದಮಃ ಶಮಃ ।
ದಯಾ ಸತ್ಯಂ ಚ ಧರ್ಮಶ್ಚ ತ್ವಯಿ ಸರ್ವಂ ಪ್ರತಿಷ್ಠಿತಮ್ ॥೨೮॥

ವಿಶುದ್ಧಸತ್ತ್ವಸಂಪನ್ನೋ ನ ತ್ವದನ್ಯೋಽಸ್ತಿ ಕಶ್ಚನ ।

ಇಂದ್ರಿಯ ಜಯ, ಧೈರ್ಯ, ಸಂವಿಭಾಗ, ದಮ, ಶಮ, ದಯಾ, ಸತ್ಯ, ಧರ್ಮ ಇವೆಲ್ಲವೂ ನಿನ್ನಲ್ಲಿ ಆಶ್ರಿತವಾಗಿವೆ. ಇಂತಹ ವಿಶುದ್ಧವಾದ ಮನಸ್ಸುಳ್ಳವನು ನಿನ್ನನ್ನು ಬಿಟ್ಟು ಇನ್ನೊಬ್ಬನಿಲ್ಲ.

ಜಿತಾಸ್ತೇ ಕರ್ಮಭಿರ್ಲೋಕಾಃ ಪ್ರಾಪ್ತೋಽಸಿ ಪರಮಾಂ ಗತಿಮ್ ॥೨೯॥

ನಿನ್ನ ವಿಶುದ್ಧ ಕರ್ಮಗಳಿಂದ ಲೋಕಗಳನ್ನು ಜಯಿಸಿದ್ದೀಯೆ. ಶ್ರೇಷ್ಠವಾದ ಗತಿಯನ್ನು ಹೊಂದಿದ್ದೀಯೆ.

ಸದ್ಭಿಃ ಸಮಾಗಮೋ ನಿತ್ಯಂ ಸರ್ವಪಾಪಹರಃ ಸ್ಮೃತಃ ।
ಧರ್ಮೋಽಪಿ ಧಾರ್ಯತೇ ಯೇನ ಧೃತಿಯುಕ್ತಾತ್ಮನಾಕತ್ತ್ವಯಾ ॥೩೦॥

ಸಜ್ಜನರ ಸಮಾಗಮವು ಯಾವಾಗಲೂ ಸರ್ವಪಾಪ ಪರಿಹಾರಕವೆಂದು ಹೇಳಲ್ಪಡುತ್ತದೆ. ಚರಾಚರವಾದ ಸಮಸ್ತ ಲೋಕಗಳೂ ಧರ್ಮದಿಂದ ಧರಿಸಲ್ಪಡುತ್ತದೆ. ಎಲೈ ಧೈರ್ಯಶಾಲಿಯೇ, ಆ ಧರ್ಮವನ್ನು ನೀನು ಧರಿಸಿದ್ದೀಯೆ.

ಅಹೋ ದಾನಂ ವಿಘುಷ್ಟಂ ತೇ ಸುಮಹತ್ ಸ್ವರ್ಗವಾಸಿಭಿಃ ।
ಸಶರೀರೋ ಭವಾನ್ ಗಂತಾ ಸ್ವರ್ಗಂ ಸುಚರಿತವ್ರತ ॥೩೧॥

ನಿನ್ನ ದಾನವು ಸ್ವರ್ಗವಾಸಿಗಳಿಂದ ದೊಡ್ಡದೆಂದು ಘೋಷಿಸಲ್ಪಡುತ್ತದೆ. ಸುಚರಿತವ್ರತನೇ, ನೀನು ಶರೀರಸಹಿತನಾಗಿ ಸ್ವರ್ಗಕ್ಕೆ ಹೋಗುವಿ.

ಇತ್ಯೇವಂ ವದತಸ್ತಸ್ಯ ತದಾ ದುರ್ವಾಸಸೋ ಮುನೇಃ ।
ದೇವದೂತೋ ವಿಮಾನೇನ ಮುದ್ಗಲಂ ಪ್ರತ್ಯುಪಸ್ಥಿತಃ ॥೩೨॥

ಹೀಗೆ ದುರ್ವಾಸ ಮುನಿಗಳು ಹೇಳುತ್ತಿರುವಾಗಲೇ ದೇವದೂತನು ವಿಮಾನವನ್ನು ತೆಗೆದುಕೊಂಡು ಮುದ್ಗಲನ ಸಮೀಪಕ್ಕೆ ಬಂದನು.

ಹಂಸಸಾರಸಯುಕ್ತೇನ ಕಿಂಕಿಣೀಜಾಲಮಾಲಿನಾ ।
ಕಾಮಗೇನ ವಿಚಿತ್ರೇಣ ದಿವ್ಯಗಂಧವತಾ ತಥಾ ।
ಉವಾಚ ಚೈನಂ ವಿಪ್ರರ್ಷಿಂ ವಿಮಾನಂ ಕರ್ಮಭಿರ್ಜಿತಮ್ ॥೩೨॥

ಹಂಸಸಾರಸಪಕ್ಷಿಗಳನ್ನು ಹೂಡಿದ ಸಣ್ಣ ಗಂಟೆಗಳ ಸಮೂಹ ಮತ್ತು ಮಾಲೆಗಳನ್ನು ಹೊಂದಿದ, ದಿವ್ಯಗಂಧಗಳನ್ನು ಹೊಂದಿದ, ಇಚ್ಛಾನುಸಾರವಾಗಿ ಹೋಗುವ ಆ ಬ್ರಾಹ್ಮಣನ ಕರ್ಮದಿಂದ ಜಿತವಾದ ಆ ವಿಚಿತ್ರ ವಿಮಾನವನ್ನು ತಂದು ಆ ವಿಪ್ರ ಋಷಿಯನ್ನು ಕುರಿತು ಹೇಳಿದನು.

ಸಮುಪಾರೋಹ ಸಂಸಿದ್ಧಿಂ ಪ್ರಾಪ್ತೋಽಸಿ ಪರಮಾಂ ಮುನೇ ।
ತಮೇವಂ ವಾದಿನಮೃಷಿರ್ದೇವದೂತಮುವಾಚ ಹ ॥೩೩॥

ಮುನಿಯೇ, ಶ್ರೇಷ್ಠವಾದ ಸಂಸಿದ್ಧಿಯನ್ನು ಹೊಂದಿದ್ದೀಯೆ. ವಿಮಾನವನ್ನು ಏರು (ಎಂದು ಹೇಳಿದನು). ಹೀಗೆ ಹೇಳಿದ ಆ ದೇವದೂತನನ್ನು ಕುರಿತು ಋಷಿಯು ಹೀಗೆ ಮಾತನಾಡಿದನು.

ಇಚ್ಛಾಮಿ ಭವತಾ ಪ್ರೋಕ್ತಾನ್ ಗುಣಾನ್ ಸ್ವರ್ಗನಿವಾಸಿನಾಮ್ ॥೩೪॥

ಕೇ ಗುಣಾಸ್ತತ್ರ ವಸತಾಂ ಕಿ ತಪಃ ಕಶ್ಚ ನಿಶ್ಚಯಃ ।
ಸ್ವರ್ಗೇ ತತ್ರ ಸುಖಂ ಕಿಂ ಚ ದೋಷೋ ವಾ ದೇವದೂತಕ ॥೩೫॥

ಎಲೈ ದೇವದೂತನೇ, ಸ್ವರ್ಗನಿವಾಸಿಗಳಿಗೆ ಸ್ವರ್ಗದಲ್ಲಿರುವ ಗುಣಗಳು ಎಂತಹವು ಎಂದು ನಿನ್ನಿಂದ ಕೇಳಲು ಬಯಸುತ್ತೇನೆ. ಅಲ್ಲಿ ವಾಸಮಾಡುವವರಿಗೆ ಯಾವ ಗುಣಗಳು, ಯಾವ ತಪಸ್ಸು, ಎಂತಹ ಜ್ಞಾನ, ಸ್ವರ್ಗದಲ್ಲಿರುವ ಸುಖವು ಎಂತಹದು, ಅಲ್ಲಿರುವ ದೋಷವಾದರೂ ಏನು?

ಸತಾಂ ಸಪ್ತಪದಂ ಮೈತ್ರಮಾಹುಃ ಸಂತಃ ಕುಲೋಚಿತಃ ।
ಮಿತ್ರತಾಂ ಚ ಪುರಸ್ಕೃತ್ಯ ಪೃಚ್ಛಾಮಿ ತ್ವಾಮಹಂ ವಿಭೋ ॥೩೬॥

ಎಲೈ ವಿಭುವೇ, ಸಜ್ಜನರ ಸ್ನೇಹವು ಸಪ್ತಪದದಿಂದ- ಎದ್ದು ಅವರನ್ನು ಸ್ವೀಕರಿಸಲು ಏಳು ಹೆಜ್ಜೆ ನಡೆಯುವುದರಿಂದ, ಪ್ರಿಯವಾದ ವಿಷಯವನ್ನು ಹೇಳುವ ಏಳು

ಪದಗಳುಳ್ಳ ವಾಕ್ಯದಿಂದ - ಉಂಟಾಗುತ್ತದೆ ಎಂದು ಸಜ್ಜನರು ಹೇಳುತ್ತಾರೆ. ಒಳ್ಳೆಯ ಕುಲದಲ್ಲಿ ಜನಿಸಿದ ನಾನು ನಿನ್ನ ಸ್ನೇಹವನ್ನು ಪುರಸ್ಕರಿಸಿ ನಿನಗೆ ಪ್ರಶ್ನೆಯನ್ನು ಕೇಳುತ್ತಿದ್ದೇನೆ.

ಯದತ್ರ ತಥ್ಯಂ ಪಥ್ಯಂ ಚ ತದ್ಬ್ರವೀಹ್ಯವಿಚಾರಯನ್ ।
ಶ್ರುತ್ವಾ ತಥಾ ಕರಿಷ್ಯಾಮಿ ವ್ಯವಸಾಯಂ ಗಿರಾ ತವ ॥೩೭॥

ಇದರಲ್ಲಿ ಯಾವುದು ನಿಜವೋ ಮತ್ತು ಯಾವುದು ಹಿತವೋ ಅದನ್ನು ಸಂಕೋಚ ಪಡದೆ ಹೇಳು. ನಿನ್ನ ಮಾತನ್ನು ಕೇಳಿ ನಾನು ಬರುವ ಅಥವಾ ಬಿಡುವ ವಿಷಯವನ್ನು ನಿರ್ಧರಿಸುವೆನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂಸಂಹಿತಾಯಾಂ ವೈಯಾಸಿಕ್ಯಾಂ
ವನಪರ್ವಣಿ ಪಂಚಾಶಾದಧಿಕದ್ವಿಶತತಮೋऽಧ್ಯಾಯಃ ॥
॥ ಇತಿ ವ್ರೀಹಿದ್ರೌಣಿಕಪರ್ವಣಿ ಮೌದ್ಗಲೋಪಾಖ್ಯಾನಂ ನಾಮ ತೃತೀಯೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವನಪರ್ವದಲ್ಲಿ ಇನ್ನೂರ ಐವತ್ತನೆಯ
ಅಧ್ಯಾಯ ಮುಗಿಯಿತು.

★ ★ ★ ★

ಇನ್ನೂರ ಐವತ್ತೊಂದನೆಯ ಅಧ್ಯಾಯ

ದೇವದೂತನ ಮುಖದಿಂದ ಸ್ವರ್ಗದ ಗುಣದೋಷಗಳನ್ನು ಮತ್ತು ವಿಷ್ಣುಲೋಕದ ನಿರ್ದೋಷತ್ವವನ್ನು ಕೇಳಿದ ಮುದ್ಗಲನಿಂದ ದೇವದೂತನ ಜೊತೆಯಲ್ಲಿ ವಿಮಾನದಲ್ಲಿ ಹೋಗಲು ನಿರಾಕರಣೆ. ಯುಧಿಷ್ಠಿರನಿಗೆ ಉಪದೇಶವನ್ನು ಮಾಡಿ ವ್ಯಾಸರಿಂದ ತಮ್ಮ ಆಶ್ರಮಕ್ಕೆ ಗಮನ.

ದೇವದೂತಃ

ಮಹರ್ಷೇऽನಾರ್ಯಬುದ್ಧಿಸ್ತ್ವಂ ಯಃ ಸ್ವರ್ಗಸುಖಮುತ್ತಮಮ್ ।
ಸಂಪ್ರಾಪ್ತಂ ಬಹು ಮಂತವ್ಯಂ ವಿಮೃಶಸ್ಯಬುಧೋ ಯಥಾ ॥೧॥

ದೇವದೂತ– ಮಹರ್ಷಿಯೇ, ನೀನು ಆರ್ಯಬುದ್ಧಿಯುಳ್ಳವನಲ್ಲ. ಒದಗಿ ಬಂದ ಬಹುಮಾನ್ಯವಾದ ಉತ್ತಮವಾದ ಸ್ವರ್ಗಸುಖವನ್ನು ನೀನು ಅಜ್ಞಾನಿಯಂತೆ ವಿಮರ್ಶೆ ಮಾಡುತ್ತಿದ್ದೀಯೆ.

ನಂದನಾದೀನಿ ರಮ್ಯಾಣಿ ತತ್ರೋದ್ಯಾನಾನಿ ಮುದ್ಗಲ ।
ಸರ್ವಕಾಮಫಲೈರ್ವೃಕ್ಷೈಃ ಶೋಭಿತಾನಿ ಸಮಂತತಃ ॥೧೦.೧॥

ಮುದ್ಗಲನೇ, ಅಲ್ಲಿ ಅಪೇಕ್ಷಿತ ಫಲಗಳೆಲ್ಲವನ್ನೂ ಕೊಡುವ ವೃಕ್ಷಗಳಿಂದ ಶೋಭಿಸುವ ಸುಂದರವಾದ ನಂದನಾದಿ ಉದ್ಯಾನವನಗಳು ಎಲ್ಲ ಕಡೆಯಲ್ಲಿಯೂ ಇವೆ.

ಉಪರಿಷ್ಟಾದಸೌಲೋಕೋ ಯೋಽಯಂ ಸ್ವರಿತಿ ಸಂಜ್ಞಿತಃ ।
ಊರ್ಧ್ವಗಃ ಸತ್ಪಥಃ ಶಶ್ವದ್ ದೇವಯಾನಚರೋ ಮುನೇ ॥೨॥

ಸ್ವರ್ಗಲೋಕವೆಂದು ಕರೆಯಲ್ಪಡುವ ಆ ಲೋಕವು ಮೇಲ್ಭಾಗದಲ್ಲಿ ಇದೆ. ಎಲೈ ಋಷಿಯೇ, ಅದು ಮೇಲ್ಭಾಗದಲ್ಲಿ ಹೋಗುವ ದೇವಯಾನ ರೂಪವಾದ ಸನ್ಮಾರ್ಗವಾಗಿದೆ.

ನಾತಪ್ತತಪಸಃ ಪುಂಸೋ ನಾಮಹಾಯಜ್ಞಯಾಜಿನಃ ।
ನಾನೃತಾ ನಾಸ್ತಿಕಾಶ್ಚೈವ ತತ್ರ ಗಚ್ಛಂತಿ ಮುದ್ಗಲ ॥೩॥

ಎಲೈ ಮುದ್ಗಲನೇ, ತಪಸ್ಸನ್ನು ಮಾಡದ ಪುರುಷರು, ಮಹಾಯಜ್ಞವನ್ನು ಮಾಡದವರು, ಅನೃತವನ್ನು ನುಡಿಯುವವರು ಮತ್ತು ನಾಸ್ತಿಕರು ಅಲ್ಲಿಗೆ ಹೋಗುವುದಿಲ್ಲ.

ಧರ್ಮಾತ್ಮಾನೋ ಜಿತಾತ್ಮಾನಃ ಶಾಂತಾ ದಾಂತಾ ವಿಮತ್ಸರಾಃ ।
ದಾನಧರ್ಮಪರಾನಿತ್ಯಂ ಶೂರಾಶ್ಚಾಹವಲಕ್ಷಣಾಃ ॥೪॥

ತತ್ರ ಗಚ್ಛಂತಿ ಕರ್ಮಾಗ್ರ್ಯಂ ಕೃತ್ವಾ ಶಮದಮಾತ್ಮಕಮ್ ।
ಲೋಕಾನ್ ಪುಣ್ಯಕೃತಾಂ ಬ್ರಹ್ಮನ್ ಸದ್ಭಿರಾಚರಿತಾನ್ ನೃಭಿಃ ॥೫॥

ಧರ್ಮಾತ್ಮರೂ, ಜಿತಮನಸ್ಕರೂ, ಶಾಂತರೂ, ದಾಂತರೂ, ಮಾತ್ಸರ್ಯ ರಹಿತರೂ, ನಿತ್ಯವೂ ದಾನಧರ್ಮದಲ್ಲಿ ರತರಾದವರೂ, ಯುದ್ಧದಲ್ಲಿ ಶೂರರಾದವರೂ, ಶಮದಮಾತ್ಮಕವಾದ ಸಜ್ಜನರಿಂದ ಆಚರಿಸಲ್ಪಟ್ಟ ಶ್ರೇಷ್ಠಧರ್ಮವನ್ನು ಆಚರಿಸಿ ಪುಣ್ಯವನ್ನು ಮಾಡಿದವರಿಗೆ ದೊರಕುವ ಆ ಲೋಕಗಳಿಗೆ ಹೋಗುತ್ತಾರೆ.

ದೇವಾಃ ಸಾಧ್ಯಾಸ್ತಥಾ ವಿಶ್ವೇ ತಥೈವ ಚ ಮಹರ್ಷಯಃ ।
ಧರ್ಮೋ ಧಾಮಾಶ್ಚ ಮೌದ್ಗಲ್ಯ ಗಂಧರ್ವಾಪ್ಸರಸ್ತಥಾ ॥೬॥

ಮೌದ್ಗಲ್ಯನೇ, ಅಲ್ಲಿ ದೇವತೆಗಳೂ, ಸಾಧ್ಯರೂ, ಎಲ್ಲಾ ಮಹರ್ಷಿಗಳೂ, ಧರ್ಮವೂ, ಗಂಧರ್ವ ಅಪ್ಸರೆಗಳೂ ಮತ್ತು ಅನೇಕ ಭವನಗಳೂ ಇರುತ್ತವೆ.

ಏಷಾಂ ದೇವನಿಕಾಯಾನಾಂ ಪೃಥಕ್‌ಪೃಥಗನೇಕಶಃ ।
ಭಾಸ್ವಂತಃ ಕಾಮಸಂಪನ್ನಾ ಲೋಕಾಸ್ತೇಜೋಮಯಾಃ ಶುಭಾಃ ॥೭॥

ಈ ದೇವಸಮೂಹಗಳಿಗೆ ಪ್ರಕಾಶಮಾನವಾದ ಎಲ್ಲ ಕಾಮ್ಯವಸ್ತುಗಳಿಂದಲೂ ಸಂಪನ್ನವಾದ, ತೇಜೋಮಯವಾದ, ಶುಭವಾದ ಅನೇಕ ಲೋಕಗಳು ಬೇರೆ ಬೇರೆಯಾಗಿಯೇ ಇರುತ್ತವೆ.

ತ್ರಯಸ್ತ್ರಿಂಶತ್ಸಹಸ್ರಾಣಿ ಯೋಜನಾನಿ ಹಿರಣ್ಮಯಃ ।
ಮೇರುಃ ಪರ್ವತರಾಡ್ ಯತ್ರ ದೇವೋದ್ಯಾನಾನಿ ಮುದ್ಗಲ ॥೮॥

ಎಲೈ ಮುದ್ಗಲನೇ, ಮೂವತ್ತುಮೂರು ಸಾವಿರ ಯೋಜನ ಎತ್ತರವಾದ ಸುವರ್ಣಮಯವಾದ ಪರ್ವತರಾಜನಾದ ಮೇರುವೂ ಮತ್ತು ದೇವೋದ್ಯಾನಗಳೂ ಅಲ್ಲಿವೆ.

ನಂದನಾದೀನಿ ಪುಣ್ಯಾನಿ ವಿಹಾರಾಃ ಪುಣ್ಯಕರ್ಮಣಾಮ್ ।
ನ ಕ್ಷುತ್ಪಿಪಾಸೇ ನ ಗ್ಲಾನಿರ್ನ ಶೀತೋಷ್ಣಭಯಂ ತಥಾ ॥೯॥

ಪುಣ್ಯಕರ್ಮವನ್ನು ಮಾಡಿದವರಿಗೆ ಪವಿತ್ರವಾದ ನಂದನಾದಿ ವಿಹಾರ ಸ್ಥಾನಗಳಿವೆ. ಅಲ್ಲಿ ಹಸಿವು ನೀರಡಿಕೆಗಳಿಲ್ಲ, ಶ್ರಮವಿಲ್ಲ ಮತ್ತು ಶೀತೋಷ್ಣಗಳ ಭಯವಿಲ್ಲ.

ಬೀಭತ್ಸಮಶುಭಂ ವಾಪಿ ತತ್ರ ಕಿಂಚಿನ್ನ ವಿದ್ಯತೇ ।
ಮನೋಜ್ಞಾಃ ಸರ್ವತೋ ಗಂಧಾಃ ಸುಖಿಸ್ಪರ್ಶಾಶ್ಚ ಸರ್ವಶಃ ॥೧೦॥

ಅಲ್ಲಿ ಜುಗುಪ್ಸಿತವಾದುದಾಗಲೀ, ಅಶುಭವಾದುದಾಗಲೀ ಯಾವುದೂ ಇಲ್ಲ. ಎಲ್ಲ ಕಡೆಯಲ್ಲಿಯೂ ಸುಗಂಧವೂ ಮತ್ತು ಸುಖಿಸ್ಪರ್ಶವುಳ್ಳ ವಸ್ತುಗಳೂ ಇರುತ್ತವೆ.

ಶಬ್ದಾಃ ಶ್ರುತಿಮನೋಗ್ರಾಹ್ಯಾಃ ಸರ್ವತಸ್ತತ್ರ ವೈ ಮುನೇ ।
ನ ಶೋಕೋ ನ ಜರಾ ತತ್ರ ನಾಯಾಸಃ ಪರಿದೇವನಮ್ ॥೧೧॥

ಎಲೈ ಋಷಿಯೇ, ಅಲ್ಲಿ ಶ್ರೋತ್ರಕ್ಕೂ ಮತ್ತು ಮನಸ್ಸಿಗೂ ಹಿತವಾದ ಶಬ್ದಗಳು ಎಲ್ಲ ಕಡೆಗಳಲ್ಲಿಯೂ ಕೇಳಿ ಬರುತ್ತವೆ. ಅಲ್ಲಿ ಶೋಕವಿಲ್ಲ, ಮುಪ್ಪಿಲ್ಲ, ಆಯಾಸವಿಲ್ಲ, ಗೋಳಾಟಗಳಿಲ್ಲ.

ಈದೃಶಃ ಸ ಮುನೇ ಲೋಕಃ ಸ್ವಕರ್ಮಫಲಹೇತುಕಃ ।
ಸುಕೃತೈಸ್ತತ್ರ ಪುರುಷಾಃ ಸಂಭವಂತ್ಯಾತ್ಮಕರ್ಮಭಿಃ ॥೧೨॥

ಎಲೈ ಋಷಿಯೇ, ಹೀಗೆ ಆ ಲೋಕವು ತನ್ನ ಕರ್ಮದ ಫಲವಾಗಿ ಪಡೆಯಬಹುದಾದುದು. ಪುರುಷರು ತಾವು ಮಾಡಿದ ಸತ್ಕರ್ಮಗಳಿಂದ ಅಲ್ಲಿಗೆ ಹೋಗುತ್ತಾರೆ.

ತೈಜಸಾನಿ ಶರೀರಾಣಿ ಭವಂತ್ಯತ್ರೋಪಪದ್ಯತಾಮ್ ।
ಕರ್ಮಜಾನ್ಯೇವ ಮೌದ್ಗಲ್ಯ ನ ಮಾತೃಪಿತೃಜಾನ್ಯುತ ॥೧೩॥

ಎಲೈ ಮೌದ್ಗಲ್ಯನೇ, ಸ್ವರ್ಗದಲ್ಲಿ ಇರುವವರಿಗೆ ತೈಜಸವಾದ ಶರೀರಗಳು ಉಂಟಾಗುತ್ತವೆ. ಅವು ಕರ್ಮಜನ್ಯವಾದವುಗಳೇ. ಆದರೆ ಮಾತಾಪಿತೃಗಳಿಂದ ಜನ್ಯವಾದುದಲ್ಲ.

ನ ಸ್ವೇದೋ ನಚ ದೌರ್ಗಂಧ್ಯಂ ಪುರೀಷಂ ಮೂತ್ರಮೇವ ಚ ।
ತೇಷಾಂ ನ ಚ ರಜೋ ವಸ್ತ್ರಂ ಬಾಧತೇ ತತ್ರ ವೈ ಮುನೇ ॥೧೪॥

ಅಲ್ಲಿ ಬೆವರು ಇರುವುದಿಲ್ಲ, ದುರ್ಗಂಧವಿರುವುದಿಲ್ಲ, ಮಲಮೂತ್ರಗಳಿರುವುದಿಲ್ಲ. ಎಲೈ ಋಷಿಯೇ, ಅವರು ಧರಿಸಿದ ವಸ್ತ್ರಗಳು ಕೊಳೆಯಾಗುವುದಿಲ್ಲ.

ನ ಮ್ಲಾಯಂತಿ ಸ್ರಜಸ್ತೇಷಾಂ ದಿವ್ಯಗಂಧಾ ಮನೋರಮಾಃ ।
ಸಂಯುಜ್ಯಂತೇ ವಿಮಾನೈಶ್ಚ ಬ್ರಹ್ಮನ್ನೇವಂವಿಧೈಶ್ಚ ತೇ ॥೧೫॥

ಅವರು ಧರಿಸಿದ ಮಾಲೆಗಳು ಬಾಡುವುದಿಲ್ಲ. ಅವು ದಿವ್ಯಗಂಧದಿಂದ ಕೂಡಿ ಮನೋಹರವಾಗಿರುತ್ತವೆ. ಎಲೈ ಬ್ರಾಹ್ಮಣನೇ, ಇಂತಹ ಅನೇಕ ವಿಮಾನಗಳು ಅಲ್ಲಿ ಅವರಿಗೆ ದೊರೆಯುತ್ತವೆ.

ಈರ್ಷ್ಯಾಶೋಕಕ್ಲಮಾಪೇತಾ ಮೋಹಮಾತ್ಸರ್ಯವರ್ಜಿತಾಃ ।
ಸುಖಿಂ ಸ್ವರ್ಗಜಿತಸ್ತತ್ರ ವರ್ತಯಂತೇ ಮಹಾಮುನೇ ॥೧೬॥

ಮಹಾಮುನಿಯೇ, ಅಲ್ಲಿ ಅಸೂಯೆ, ಶೋಕ, ಆಯಾಸಗಳಿಂದ ರಹಿತರಾಗಿ, ಮೋಹಮಾತ್ಸರ್ಯಗಳಿಂದ ವರ್ಜಿತರಾಗಿ ತಮ್ಮ ಕರ್ಮಗಳಿಂದ ಸ್ವರ್ಗವನ್ನು ಸಂಪಾದಿಸಿದವರು ಸುಖವನ್ನೇ ಅನುಭವಿಸುತ್ತಾರೆ.

ತೇಷಾಂ ತಥಾವಿಧಾನಾಂ ತು ಲೋಕಾನಾಂ ಮುನಿಪುಂಗವ ।
ಉಪರ್ಯುಪರಿ ಲೋಕಸ್ಯ ಲೋಕಾ ದಿವ್ಯಾ ಗುಣಾನ್ವಿತಾಃ ॥೧೭॥

ಎಲೈ ಮುನಿಪುಂಗವನೇ, ಸ್ವರ್ಗವಾಸಿಗಳ ಅಂತಹ ಲೋಕಗಳ ಮೇಲೆ ದಿವ್ಯವಾದ ಗುಣಗಳಿಂದ ಕೂಡಿದ ಲೋಕಗಳು ಮೇಲೆ ಮೇಲೆ ಇವೆ.

ಪರಸ್ತಾದ್ ಬ್ರಹ್ಮಣಸ್ತತ್ರ ಲೋಕಾಸ್ತೇಜೋಮಯಾಃ ಶುಭಾಃ ।
ಯತ್ರ ಯಾಂತ್ಯೃಷಯೋ ಬ್ರಹ್ಮನ್ ಪೂತಾಃ ಸ್ವೈಃ ಕರ್ಮಭಿಃ ಶುಭೈಃ ॥

ಬ್ರಹ್ಮಲೋಕದಿಂದ ಆಚೆಗೆ ತೇಜೋಮಯವಾದ ಶುಭವಾದ ಲೋಕಗಳಿವೆ. ಬ್ರಾಹ್ಮಣನೇ, ಅಲ್ಲಿಗೆ ಶುಭವಾದ ಕರ್ಮಗಳನ್ನು ಮಾಡಿದ ಋಷಿಗಳು ಹೋಗುತ್ತಾರೆ.

ಋಜವೋ ನಾಮ ತತ್ರಾನ್ಯೇ ದೇವಾನಾಮಪಿ ದೇವತಾಃ ।
ತೇಷಾಂ ಲೋಕಾತ್ ಪರತರೇ ಯಾನ್ಯಜಂತೀಹ ದೇವತಾಃ ॥೧೯॥

ಋಜುಗಳು ಎಂಬ ದೇವತೆಗಳಿಗೂ ದೇವತೆಗಳಾದ ಬೇರೆಯವರಿದ್ದಾರೆ. ಅವರ ಲೋಕವು ಸ್ವರ್ಗಾದಿ ಲೋಕಗಳಿಗಿಂತ ಮೇಲೆ ಇದೆ. ಅಂತಹ ಋಜುಗಳನ್ನು ದೇವತೆಗಳೂ ಪೂಜಿಸುತ್ತಾರೆ.

ಸ್ವಯಂಪ್ರಭಾಸ್ತೇ ಭಾಸ್ವಂತೋ ಲೋಕಾಃ ಕಾಮದುಘಾಃ ಪರೇ ।
ನ ತೇಷಾಂ ಸ್ತ್ರೀಕೃತಸ್ತಾಪೋ ನ ಲೋಕೈಶ್ವರ್ಯಮತ್ಸರಃ ॥೨೦॥

ಇನ್ನು ಸ್ವಯಂ ಪ್ರಕಾಶವಾದ ಬೇಡಿದುದೆಲ್ಲಾ ದೊರೆಯುವ ಬೇರೆ ಪ್ರಕಾಶಮಾನವಾದ ಲೋಕಗಳಿವೆ. ಅಲ್ಲಿ ಇರುವವರಿಗೆ ಸ್ತ್ರೀಯರಿಂದ ಉಂಟಾಗುವ ತಾಪವಾಗಲೀ ಅಥವಾ ಲೋಕೈಶ್ವರ್ಯವನ್ನು ನೋಡಿ ಮತ್ಸರವಾಗಲಿ ಇರುವುದಿಲ್ಲ.

ನ ವರ್ತಯಂತ್ಯಾಹುತಿಭಿಸ್ತೇ ನಾಪ್ಯಮೃತಭೋಜನಾಃ ।
ತಥಾ ದಿವ್ಯಶರೀರಾಸ್ತೇ ನ ಚ ವಿಗ್ರಹಮೂರ್ತಯಃ ॥೨೧॥

ಅವರು ಆಹುತಿಗಳನ್ನು ಕೊಡುವುದಿಲ್ಲ. ಅಮೃತಭೋಜನವನ್ನೂ ಮಾಡುವುದಿಲ್ಲ. ಅವರು ಅಂತಹ ದಿವ್ಯಶರೀರವನ್ನು ಉಳ್ಳವರು. ಅವರು ಪ್ರಾಕೃತ ಶರೀರವನ್ನು ಧರಿಸಿದವರಲ್ಲ.

ನಾಸುಖಾಃ ಸುಖಿಕಾಮಾಸ್ತೇ ದೇವದೇವಾಃ ಸನಾತನಾಃ ।
ನ ಕಲ್ಪಪರಿವರ್ತೇಷು ಪರಿವರ್ತಂತಿ ತೇ ತಥಾ ॥೨೨॥

ಅವರಿಗೆ ದುಃಖವಿಲ್ಲ. ಸುಖಕಾಮನೆಯೂ ಇಲ್ಲ. ಅವರು ಸನಾತನರಾದ ದೇವದೇವತೆಗಳು. ಕಲ್ಪವು ತಿರುಗಿದಂತೆ ಅವರು ತಿರುಗುವುದಿಲ್ಲ.

ಜರಾ ಮೃತ್ಯುಃ ಕುತಸ್ತೇಷಾಂ ಹರ್ಷಃ ಪ್ರೀತಿಃ ಸುಖಂ ನ ಚ ।
ನ ದುಃಖಂ ನ ಸುಖಂ ಚಾಪಿ ರಾಗದ್ವೇಷೌ ಕುತೋ ಮುನೇ ॥೨೩॥

ಎಲೈ ಮುನಿಯೇ, ಅವರಿಗೆ ಜರಾಮೃತ್ಯುಗಳು ಎಲ್ಲಿಂದ ಬರಬೇಕು? ಪ್ರಾಕೃತವಾದ ಸುಖದುಃಖಗಳು ಎಲ್ಲಿಂದ ಬರಬೇಕು? ಅವರಿಗೆ ಅಂತಹ ಸುಖದುಃಖಗಳಿಲ್ಲ, ಇನ್ನು ರಾಗದ್ವೇಷಗಳು ಎಲ್ಲಿಂದ ಬರಬೇಕು?

ದೇವಾನಾಮಪಿ ಮೌದ್ಗಲ್ಯ ಕಾಂಕ್ಷಿತಾ ಸಾ ಗತಿಃ ಪರಾ ।
ದುಷ್ಪ್ರಾಪಾ ಪರಮಾ ಸಿದ್ಧಿರಗಮ್ಯಾ ಕಾಮಗೋಚರೈಃ ॥೨೪॥

ಎಲೈ ಮೌದ್ಗಲ್ಯನೇ, ದೇವತೆಗಳಿಗೂ ಅಂತಹ ಗತಿಯು ಪ್ರಾರ್ಥ್ಯಮಾನವಾದುದು. ಆ ಪರಮಸಿದ್ಧಿಯು ಬಹಳ ಕಷ್ಟದಿಂದ ಪಡೆಯಲು ಸಾಧ್ಯವಾದುದು. ಕಾಮಾಸಕ್ತರು ಅದನ್ನು ಪಡೆಯಲು ಸಾಧ್ಯವಿಲ್ಲ.

ತ್ರಯಸ್ತ್ರಿಂಶದಿಮೇ ದೇವಾ ಯೇಷಾಂ ಲೋಕಾ ಮನೀಷಿಭಿಃ ।
ಗಮ್ಯಂತೇ ನಿಯಮೈಃ ಶ್ರೇಷ್ಠೈರ್ದಾನೈರ್ವಾ ವಿಧಿಪೂರ್ವಕೈಃ ॥೨೫॥

ಈ ಮೂವತ್ತಮೂರು ದೇವತೆಗಳಿಗೆ ಬೇರೆ ಬೇರೆ ಲೋಕಗಳೇ ಇವೆ ಎಂದು ಜ್ಞಾನಿಗಳು ಹೇಳುತ್ತಾರೆ. ವಿಧಿಪೂರ್ವಕವಾದ ಶ್ರೇಷ್ಠವಾದ ದಾನಗಳಿಂದಲೂ, ನಿಯಮಗಳಿಂದಲೂ ಆ ಲೋಕಗಳು ಪ್ರಾಪ್ತವಾಗುತ್ತವೆ.

ಸೇಯಂ ದಾನಕೃತಾ ವ್ಯುಷ್ಟಿರನುಪ್ರಾಪ್ತಾ ಸುಖಾವಹಾ ।
ತಾಂ ಭುಂಕ್ಷ್ವ ಸುಕೃತೈರ್ಲಬ್ಧಾಂ ತಪಸಾ ದ್ಯೋತಿತಪ್ರಭಃ ॥೨೬॥

ತಪಸ್ಸಿನಿಂದ ಕಾಂತಿಯನ್ನು ಹೊಂದಿದ ನೀನು, ನೀನು ಮಾಡಿದ ದಾನದ ಫಲವಾಗಿ ಉಂಟಾದ ಸುಕೃತಲಬ್ಧವಾದ ಈ ಸುಖಸಮೃದ್ಧಿಯನ್ನು ಅನುಭವಿಸು.

ಏತತ್ ಸ್ವರ್ಗಸುಖಂ ವಿಪ್ರ ಲೋಕಾ ನಾನಾವಿಧಾಸ್ತಥಾ ।
ಗುಣಾಃ ಸ್ವರ್ಗಸ್ಯ ಪ್ರೋಕ್ತಾಸ್ತೇ ದೋಷಾನಪಿ ನಿಬೋಧ ಮೇ ॥೨೭॥

ಎಲೈ ಬ್ರಾಹ್ಮಣನೇ, ಸ್ವರ್ಗಸುಖವೆಂದರೆ ಇದು. ಅದರಂತೆಯೇ ನಾನಾ ವಿಧವಾದ ಲೋಕಗಳೂ ಇವೆ. ಸ್ವರ್ಗದ ಗುಣಗಳನ್ನು ನಿನಗೆ ಹೇಳಿದ್ದಾಯಿತು. ದೋಷಗಳನ್ನೂ ನನ್ನಿಂದ ಕೇಳು.

ಕೃತಸ್ಯ ಕರ್ಮಣಸ್ತತ್ರ ಭುಜ್ಯತೇ ಯತ್ಫಲಂ ದಿವಿ ।
ನ ಚಾನ್ಯತ್ ಕ್ರಿಯತೇ ಕರ್ಮ ಮೂಲಚ್ಛೇದೇನ ಭುಜ್ಯತೇ ॥೨೮॥

ಸ್ವರ್ಗಲೋಕದಲ್ಲಿ ಭೂಲೋಕದಲ್ಲಿ ಮಾಡಿದ ಕರ್ಮದ ಫಲವು ಮಾತ್ರ ಅನುಭವಿಸಲ್ಪಡುತ್ತದೆ. ಅಲ್ಲಿ ಯಾವ ಸತ್ಕರ್ಮವೂ (ಪುಣ್ಯಸಂಪಾದನೆಯನ್ನು ಮಾಡುವ ಕರ್ಮವು) ಮಾಡಲ್ಪಡುವುದಿಲ್ಲ. ಅನುಭವಿಸುವ ಸುಖವು ಮೂಲಪುಣ್ಯದ ನಾಶದಿಂದಲೇ ಅನುಭವಿಸಲ್ಪಡುತ್ತದೆ.

ಸೋಽತ್ರ ದೋಷೋ ಮಮ ಮತಸ್ತಸ್ಯಾಂತೇ ಪತನಂ ಚ ಯತ್ ।
ಸುಖವ್ಯಾಪ್ತಸ್ಯ ಸಹಸಾ ಪತನಂ ಯಚ್ಚ ಮುದ್ಗಲ ॥೨೯॥

ಇದು ದೋಷವೆಂದು ನನ್ನ ಅಭಿಪ್ರಾಯ. ಪುಣ್ಯವು ನಾಶವನ್ನು ಹೊಂದಿದ ಮೇಲೆ ಸ್ವರ್ಗದಿಂದ ಪತನವೂ ಇದೆ. ಎಲೈ ಮುದ್ಗಲನೇ, ಸುಖದಲ್ಲಿ ಇದ್ದವನಿಗೆ ಇದ್ದಕ್ಕಿದ್ದಂತೆಯೇ ಪತನವೂ ಸಹ ದೋಷವಾಗಿದೆ.

ಅಸಂತೋಷಃ ಪರೀತಾಪೋ ದೃಷ್ಟ್ವಾ ದೀಪ್ತಾಂ ಪರಶ್ರಿಯಮ್ ।
ಯದ್ ಭವತ್ಯಮರಸ್ಥಾನೇ ಸ್ಥಿತಾನಾಂ ತತ್ ಸುದುಷ್ಕರಮ್ ॥೩೦॥

ಸ್ವರ್ಗದಲ್ಲಿ ಇದ್ದವರಿಗೆ ತಮಗಿಂತ ಉನ್ನತ ಸ್ಥಾನದಲ್ಲಿ ಇರುವವರ ಪ್ರಕಾಶಮಾನವಾದ ವೈಭವವನ್ನು ನೋಡಿ ಅತೃಪ್ತಿಯೂ, ಪರಿತಾಪವೂ ಉಂಟಾಗುತ್ತದೆ. ಇದು ಬಹಳ ದುಃಖವನ್ನು ಕೊಡುವ ಇನ್ನೊಂದು ದೋಷ.

ಸಂಜ್ಞಾಮೋಹಶ್ಚ ಪತತಾಂ ರಜಸಾ ಚ ಪ್ರಧರ್ಷಣಮ್ ।
ಪ್ರಮ್ಲಾನೇಷು ಚ ಮಾಲ್ಯೇಷು ತತಃ ಪಿಪತಿಷೋರ್ಭಯಮ್ ॥೩೧॥

ಕೆಳಗೆ ಬೀಳುವವರಿಗೆ ಜ್ಞಾನದ ಲೋಪವುಂಟಾಗುತ್ತದೆ. ಧೂಳು ಮತ್ತು ಕೊಳೆಗಳಿಂದ ಸಂಬಂಧವುಂಟಾಗುತ್ತದೆ. ಮಾಲೆಗಳು ಬಾಡುತ್ತವೆ. ಇದು ಬೀಳುವವರಿಗೆ ಇರುವ ಭಯ.

ಆಬ್ರಾಹ್ಮಭವನಾದೇತೇ ದೋಷಾ ಮೌದ್ಗಲ್ಯ ದಾರುಣಾಃ ।
ನಾಕಲೋಕೇ ಸುಕೃತಿನಾಂ ಗುಣಾಸ್ತ್ವಯುತಶೋ ನೃಣಾಮ್ ॥೩೨॥

ಮೌದ್ಗಲ್ಯನೇ, ಬ್ರಹ್ಮಲೋಕದವರೆಗೂ ಇರುವ ಲೋಕಗಳಲ್ಲಿ ದಾರುಣವಾದ ಈ ದೋಷಗಳಿವೆ. ಸ್ವರ್ಗಲೋಕದಲ್ಲಿರುವ ಪುಣ್ಯವಂತರಿಗೆ ಮನುಷ್ಯರಿಗಿಂತ ಹತ್ತುಸಾವಿರಪಟ್ಟು ಸುಖಗಳಿರುತ್ತವೆ.

ಅಯಂ ತ್ವನ್ಯೋ ಗುಣಃ ಶ್ರೇಷ್ಠಃಚ್ಯುತಾನಾಂ ಸ್ವರ್ಗತೋ ಮುನೇ ।
ಶುಭಾನುಶಯಯೋಗೇನ ಮನುಷ್ಯೇಷೂಪಜಾಯತೇ ॥೩೩॥

ಎಲೈ ಋಷಿಯೇ, ಸ್ವರ್ಗದಿಂದ ಬೀಳುವವರೆಗೆ ಇನ್ನೊಂದು ಗುಣವಿದೆ. ಪುಣ್ಯಶೇಷವನ್ನು ಉಳಿಸಿಕೊಂಡು ಅವರು ಮನುಷ್ಯಯೋನಿಯಲ್ಲಿ ಜನಿಸುವುದೇ ಆ ಗುಣ.

ತತ್ರಾಪಿ ಸ ಮಹಾಭಾಗಃ ಸುಖಭಾಗಭಿಜಾಯತೇ ।
ನ ಚೇತ್ ಸಂಬುಧ್ಯತೇ ತತ್ರ ಗಚ್ಛತ್ಯಧಮತಾಂ ತತಃ ॥೩೪॥

ಅಲ್ಲಿಯೂ ಸಹ ಆ ಪುಣ್ಯವಂತನು ಸುಖಭಾಗಿಯಾಗಿಯೇ ಜನಿಸುತ್ತಾನೆ. ಅಲ್ಲಿ ಅವನು ವಿವೇಕವನ್ನು ಪಡೆಯದಿದ್ದರೆ ಅಧಃಪತನವನ್ನು ಹೊಂದುತ್ತಾನೆ.

ಇಹ ಯತ್‌ಕ್ರಿಯತೇ ಕರ್ಮ ತತ್ ಪರತ್ರೋಪಭುಜ್ಯತೇ ।
ಕರ್ಮಭೂಮಿರಿಯಂ ಬ್ರಹ್ಮನ್ ಫಲಭೂಮಿರಸೌ ಮತಾ ॥೩೫॥

ಇಲ್ಲಿ ಏನು ಕರ್ಮವನ್ನು ಮಾಡುತ್ತಾರೆಯೋ ಅದರ ಫಲವು ಪರಲೋಕದಲ್ಲಿ ಅನುಭವಿಸಲ್ಪಡುತ್ತದೆ. ಬ್ರಾಹ್ಮಣನೇ, ಇದು ಕರ್ಮಭೂಮಿ, ಅದು ಫಲಭೂಮಿ ಎಂದು ಕರೆಯಲ್ಪಡುತ್ತದೆ.

ಮೌದ್ಗಲ್ಯಃ

ಮಹಾಂತಃ ಖಲ್ವಮೀ ದೋಷಾಃ ತ್ವಯಾ ಸ್ವರ್ಗಸ್ಯ ಕೀರ್ತಿತಾಃ ।
ನಿರ್ದೋಷ ಏವ ಯಸ್ತ್ವನ್ಯೋ ಲೋಕಂ ತಂ ವೈ ವದಸ್ವ ಮೇ ॥೩೬॥

ಮುದ್ಗಲ– ನೀನು ಸ್ವರ್ಗಲೋಕಕ್ಕೆ ಈ ದೊಡ್ಡ ದೋಷಗಳನ್ನೇ ಹೇಳಿದ್ದೀಯೆ. ನಿರ್ದೋಷವಾದ ಯಾವ ಇನ್ನೊಂದು ಲೋಕವಿದೆಯೋ ಅದನ್ನು ನನಗೆ ಹೇಳು.

ದೇವದೂತಃ

ಬ್ರಹ್ಮಣಃ ಸದನಾದೂರ್ಧ್ವಂ ತದ್ ವಿಷ್ಣೋಃ ಪರಮಂ ಪದಮ್ ।
ಶುದ್ಧಂ ಸನಾತನಂ ಜ್ಯೋತಿಃ ಪರಂ ಬ್ರಹ್ಮೇತಿ ಯ ವಿದುಃ ॥೩೭॥

ದೇವದೂತ– ಚತುರ್ಮುಖ ಬ್ರಹ್ಮದೇವರ ಲೋಕದ ಮೇಲೆ ಇರುವುದು ವಿಷ್ಣುವಿನ ಪರಮಸ್ಥಾನ. ಆ ವಿಷ್ಣುವನ್ನು ಶುದ್ಧನೆಂದೂ, ಸನಾತನನೆಂದೂ, ಜ್ಯೋತಿ ಎಂದೂ, ಪರಬ್ರಹ್ಮನೆಂದೂ ಜ್ಞಾನಿಗಳು ತಿಳಿಯುತ್ತಾರೆ.

ನ ತತ್ರ ವಿಪ್ರ ಗಚ್ಛಂತಿ ಪುರುಷಾ ವಿಷಯಾತ್ಮಕಾಃ ।
ಡಂಬಲೋಭಮದಕ್ರೋಧಮೋಹದ್ರೋಹೈರಭಿದ್ರುತಾಃ ॥೩೮॥

ಎಲೈ ಬ್ರಾಹ್ಮಣನೇ, ಅಲ್ಲಿಗೆ ವಿಷಯಾಸಕ್ತರೂ, ಡಂಬ, ಲೋಭ, ಮಹಾಕ್ರೋಧ, ಮೋಹ, ದ್ರೋಹ ಇವುಗಳನ್ನು ಹೊಂದಿದ ಪುರುಷರೂ ಹೋಗುವುದಿಲ್ಲ.

ನಿರ್ಮಮಾ ನಿರಹಂಕಾರಾ ನಿರ್ದ್ವಂದ್ವಾಃ ಸಂಯತೇಂದ್ರಿಯಾಃ ।
ಧ್ಯಾನಯೋಗ್ಯಪರಾಶ್ಚೈವ ತತ್ರ ಗಚ್ಛಂತಿ ಮಾನವಾಃ ॥೩೯॥

ಅಹಂಕಾರ ಮಮಕಾರಗಳನ್ನು ಬಿಟ್ಟವರೂ, ದ್ವಂದ್ವಾತೀತರಾದವರೂ, ಇಂದ್ರಿಯ ಸಂಯಮವುಳ್ಳವರೂ, ಧ್ಯಾನಯೋಗಪರರೂ ಆದ ಪುರುಷರು ಅಲ್ಲಿಗೆ ಹೋಗುತ್ತಾರೆ.

ಏತತ್ ತೇ ಸರ್ವಮಾಖ್ಯಾತಂ ಯನ್ಮಾಂ ಪೃಚ್ಛಸಿ ಮುದ್ಗಲ ।
ತವಾನುಕಂಪಯಾ ಸಾಧೋ ಸಾಧು ಗಚ್ಛಾಮ ಮಾಚಿರಮ್ ॥೪೦॥

ಎಲೈ ಮುದ್ಗಲನೇ, ನೀನು ಏನು ಪ್ರಶ್ನೆಯನ್ನು ಮಾಡಿದೆಯೋ ನಿನ್ನ ಮೇಲಿನ ಅನುಕಂಪೆಯಿಂದ ಅದಕ್ಕೆ ಉತ್ತರವಾಗಿ ಎಲ್ಲವನ್ನೂ ನಿನಗೆ ಹೇಳಿದೆನು. ಸಜ್ಜನನೇ, ತಡಮಾಡಬೇಡ. ಬೇಗ ಹೊರಡೋಣ.

ಶ್ರೀ ವ್ಯಾಸಃ

ಏತತ್ ಶ್ರುತ್ವಾ ತು ಮೌದ್ಗಲ್ಯೋ ವಾಕ್ಯಂ ವಿಮಮೃಶೇ ಧಿಯಾ ।
ವಿಮೃಶ್ಯ ಚ ಮುನಿಶ್ರೇಷ್ಠೋ ದೇವದೂತಮುವಾಚ ಹ ॥೪೧॥

ವ್ಯಾಸ– ದೇವದೂತನ ಈ ವಾಕ್ಯವನ್ನು ಕೇಳಿದ ಮುದ್ಗಲನು ತನ್ನ ಬುದ್ಧಿಯಿಂದ ವಿಮರ್ಶೆ ಮಾಡಿದನು. ವಿಮರ್ಶೆಮಾಡಿದ ಆ ಮುನಿಶ್ರೇಷ್ಠನು ದೇವದೂತನನ್ನು ಕುರಿತು ಹೀಗೆ ಹೇಳಿದನು.

ದೇವದೂತ ನಮಸ್ತೇಽಸ್ತು ಗಚ್ಛ ತಾತ ಯಥಾಸುಖಮ್ ।
ಮಹಾದೋಷೇಣ ಮೇ ಕಾರ್ಯಂ ನ ಸ್ವರ್ಗೇಣ ಸುಖೇನ ವಾ ॥೪೨॥

ದೇವದೂತನೇ, ನಿನಗೆ ನಮಸ್ಕಾರ. ಪ್ರೀತಿಪಾತ್ರನೇ, ನೀನು ಸುಖವಾಗಿ ಹೋಗಿಬಾ. ಮಹಾದೋಷವಿರುವ ಸ್ವರ್ಗದಿಂದಾಗಲೀ ಅಥವಾ ಸುಖದಿಂದಾಗಲೀ ನನಗೆ ಏನೂ ಆಗಬೇಕಾದುದಿಲ್ಲ.

ಪತನಾಂತೇ ಮಹದ್ ದುಃಖಂ ಪರಿತಾಪಃ ಸುದಾರುಣಃ ।
ಸ್ವರ್ಗಭಾಜಶ್ಚರಂತೀಹ ತಸ್ಮಾತ್‌ಸ್ವರ್ಗಂ ನ ಕಾಮಯೇ ॥೪೩॥

ಪತನವನ್ನು ಹೊಂದಿದ ಮೇಲೆ ಮಹಾದುಃಖ, ಅಲ್ಲಿಯೇ ಇರುವಾಗ ಇನ್ನೊಬ್ಬರನ್ನು ನೋಡಿ ದಾರುಣವಾದ ಪರಿತಾಪ, ಸ್ವರ್ಗವಾಸವು ಮುಗಿದ ಮೇಲೆ ಪುನಃ ಭೂಮಿಯಲ್ಲಿ ಸಂಚಾರ. ಆದ್ದರಿಂದ ನಾನು ಸ್ವರ್ಗವನ್ನು ಬಯಸುವುದಿಲ್ಲ.

ಯತ್ರ ಗತ್ವಾ ನ ಶೋಚಂತಿ ನ ವ್ಯಥಂತೇ ಚಲಂತಿ ವಾ ।
ತದಹಂ ಸ್ಥಾನಮತ್ಯಂತಂ ಮಾರ್ಗಯಿಷ್ಯಾಮಿ ಕೇವಲಮ್ ॥೪೪॥

ಎಲ್ಲಿ ಹೋದರೆ ಶೋಕವುಂಟಾಗುವುದಿಲ್ಲವೋ, ವ್ಯಥೆ ಉಂಟಾಗುವುದಿಲ್ಲವೋ, ಪತನವುಂಟಾಗುವುದಿಲ್ಲವೋ ಅಂತಹ ಅತ್ಯಂತ ಶುದ್ಧವಾದ ಸ್ಥಾನವನ್ನು ನಾನು ಹುಡುಕುವೆನು.

ವ್ಯಾಸಃ

ಇತ್ಯುಕ್ತ್ವಾ ಸ ಮುನಿರ್ವಾಕ್ಯಂ ದೇವದೂತಂ ವಿಸೃಜ್ಯ ತಮ್ ।
ಸಿಲೋಂಛವೃತ್ತಿರ್ಧರ್ಮಾತ್ಮಾ ಶಮಮಾತಿಷ್ಠದುತ್ತಮಮ್ ॥೪೫॥

ವ್ಯಾಸ– ಧರ್ಮಾತ್ಮನಾದ ಆ ಮುನಿಯು ದೇವದೂತನನ್ನು ಕುರಿತು ಹೀಗೆ ಹೇಳಿ ಅವನನ್ನು ಕಳುಹಿಸಿ ಸಿಲೋಂಛವೃತ್ತಿಯನ್ನು ಮಾಡಿ ಶ್ರೇಷ್ಠವಾದ ಶಮದ ಮಾರ್ಗವನ್ನು ಅನುಸರಿಸಿದನು.

ತುಲ್ಯನಿಂದಾಸ್ತುತಿರ್ಭೂತ್ವಾ ಸಮಲೋಷ್ಟಾಶ್ಮಕಾಂಚನಃ ।
ಜ್ಞಾನಯೋಗೇನ ಶುದ್ಧೇನ ಧ್ಯಾನನಿತ್ಯೋ ಬಭೂವ ಹ ॥೪೬॥

ನಿಂದಾಸ್ತುತಿಗಳಲ್ಲಿ ಸಮಾನವಾಗಿದ್ದು, ಮಣ್ಣಿನ ಹೆಂಟೆ, ಕಲ್ಲು ಮತ್ತು ಸುವರ್ಣಗಳನ್ನು ಸಮದೃಷ್ಟಿಯಿಂದ ನೋಡಿ ಶುದ್ಧವಾದ ಜ್ಞಾನಯೋಗದಿಂದ ನಿತ್ಯವೂ ಧ್ಯಾನಪರನಾದನು.

ವಿನಿಗೃಹ್ಯೇಂದ್ರಿಯಗ್ರಾಮಂ ಸಮಯೋಜಯದಾತ್ಮನಿ ।
ಯುಕ್ತಚಿಂತಂ ತಥಾತ್ಮಾನಂ ಯುಯೋಜ ಪರಮೇಶ್ವರೇ ॥೪೭॥

ಇಂದ್ರಿಯಗ್ರಾಮವನ್ನು ನಿಯಂತ್ರಿಸಿ ಮನಸ್ಸನ್ನು ಪರಮಾತ್ಮನಲ್ಲಿ ನಿಯೋಜಿಸಿದನು. ಯುಕ್ತಚಿಂತನೆಯಿಂದ ಕೂಡಿದವನಾಗಿ ಪರಮೇಶ್ವರನಲ್ಲಿಯೇ ತನ್ನನ್ನು ಯೋಜಿಸಿದನು.

ಧ್ಯಾನಯೋಗಾತ್ ಪರಂ ಲಬ್ಧ್ವಾ ಪ್ರಾಪ್ಯ ಬುದ್ಧಿಮನುತ್ತಮಾಮ್ ।
ಜಗಾಮ ಶಾಶ್ವತೀಂ ಸಿದ್ಧಿಂ ಪರಾಂ ನಿರ್ವಾಣಲಕ್ಷಣಾಮ್ ॥೪೮॥

ಧ್ಯಾನಯೋಗದಿಂದ ಪರಮಾತ್ಮನನ್ನು ಹೊಂದಿ ಶ್ರೇಷ್ಠವಾದ ಅಪರೋಕ್ಷಜ್ಞಾನವನ್ನು ಪಡೆದು ಮೋಕ್ಷರೂಪವಾದ ಶಾಶ್ವತವಾದ ಸಿದ್ಧಿಯನ್ನು ಪಡೆದನು.

ತಸ್ಮಾತ್ ತ್ವಮಪಿ ಕೌಂತೇಯ ನ ಶೋಕಂ ಕರ್ತುಮರ್ಹಸಿ ।
ರಾಜ್ಯಾತ್ ಸ್ಫೀತಾತ್ ಪರಿಭ್ರಷ್ಟಸ್ತಪಸಾ ತದವಾಪ್ಸ್ಯಸಿ ॥೪೯॥

ಆದ್ದರಿಂದ ಕೌಂತೇಯನೇ, ನೀನೂ ಸಹ ಶೋಕವನ್ನು ಮಾಡಬೇಡ. ಸಮೃದ್ಧವಾದ ರಾಜ್ಯದಿಂದ ಚ್ಯುತನಾದ ನೀನು ತಪಸ್ಸಿನಿಂದ ಪುನಃ ಅದನ್ನು ಪಡೆಯುವಿ.

ಸುಖಸ್ಯಾನಂತರಂ ದುಃಖಂ ದುಃಖಸ್ಯಾನಂತರಂ ಸುಖಮ್ ।
ಪರ್ಯಾಯೇಣೋಪಸರ್ಪಂತೇ ನರಂ ನೇಮಿಮರಾ ಇವ ॥೫೦॥

ಸುಖದ ಅನಂತರ ದುಃಖ. ದುಃಖದ ಅನಂತರ ಸುಖ. ಹೀಗೆ ಮನುಷ್ಯನಿಗೆ ಚಕ್ರದಲ್ಲಿ ಆರಗಳು ತಿರುಗುವಂತೆ ಪರ್ಯಾಯವಾಗಿ ಉಂಟಾಗುತ್ತದೆ.

ಪಿತೃಪೈತಾಮಹಂ ರಾಜ್ಯಂ ಪ್ರಾಪ್ಸ್ಯಸ್ಯಮಿತವಿಕ್ರಮ ।
ವರ್ಷಾತ್ ತ್ರಯೋದಶಾದೂರ್ಧ್ವಂ ವ್ಯೇತು ತೇ ಮಾನಸೋ ಜ್ವರಃ ॥

ಅಮಿತವಿಕ್ರಮನೇ, ಪಿತೃಪಿತಾಮಹರ ರಾಜ್ಯವನ್ನು ನೀನು ಹದಿಮೂರು ವರ್ಷಗಳ ನಂತರ ಪಡೆಯುವಿ. ನಿನ್ನ ಮನಸ್ಸಿನ ತಾಪವು ದೂರವಾಗಲಿ.

ವೈಶಂಪಾಯನಃ

ಸ ಏವಮುಕ್ತ್ವಾ ಭಗವಾನ್ ವ್ಯಾಸಃ ಪಾಂಡವನಂದನಮ್ ।
ಜಗಾಮ ತಪಸೇ ಧೀಮಾನ್ ಪುನರೇವಾಶ್ರಮಂ ಪ್ರತಿ ॥೫೨॥

ವೈಶಂಪಾಯನ– ಪಾಂಡವನಂದನನಾದ ಧರ್ಮರಾಜನನ್ನು ಕುರಿತು ಹೀಗೆ ಹೇಳಿ ಮೇಧಾವಿಯಾದ ಭಗವಾನ್ ವ್ಯಾಸರು ಪುನಃ ತಪಸ್ಸಿಗಾಗಿ ತಮ್ಮ ಆಶ್ರಮಕ್ಕೆ ಹೋದರು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂಸಂಹಿತಾಯಾಂ ವೈಯಾಸಿಕ್ಯಾಂ
ವನಪರ್ವಣಿ ಏಕಪಂಚಾಶಾಧಿಕದ್ವಿಶತತಮೋऽಧ್ಯಾಯಃ ॥
॥ ಇತಿ ವ್ರೀಹಿದ್ರೌಣಿಕಪರ್ವಣಿ ಮುದ್ಗಲದೇವದೂತ ಸಂವಾದೋ ನಾಮ
ಚತುರ್ಥೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವನಪರ್ವದಲ್ಲಿ ಇನ್ನೂರ ಐವತ್ತೊಂದನೆಯ
ಅಧ್ಯಾಯ ಮುಗಿಯಿತು.

॥ ವ್ರೀಹಿದ್ರೌಣಿಕಪರ್ವ ಸಮಾಪ್ತಮ್ ॥

★ ★ ★ ★

ದ್ರೌಪದೀಹರಣಪರ್ವ

ಮಹಾಭಾರತತಾತ್ಪರ್ಯನಿರ್ಣಯ-೨೨ ಅಧ್ಯಾಯ

ತತಃ ಕತಿಪಯಾಹಾನಿ ನಿರುಷ್ಯಾತ್ರ ಜನಾರ್ದನಃ ।
ಯಯೌ ಸಭಾರ್ಯಃ ಸ್ವಪುರೀಂ ಪಾಂಡವಾನನುಮಾನ್ಯ ಚ ॥೩೬೨॥

ಬಳಿಕ ಶ್ರೀಕೃಷ್ಣಕೆಲವು ದಿನ ಪಾಂಡವರ ಜೊತೆಗೆ ಇದ್ದು ಅವರಿಂದ ಬೀಳ್ಕೊಂಡು ಸತ್ಯಭಾಮೆಯೊಡನೆ ತನ್ನ ಪಟ್ಟಣಕ್ಕೆ ತೆರಳಿದ.

ತತಃ ಕದಾಚಿನ್ಮೃಗಯಾಂ ಗತೇಷು
ಪಾರ್ಥೇಷು ರಾಜಾ ಸೈಂಧವ ಆಸಸಾದ ।
ಸಕೋಟಿಕಾಶ್ಯಃ ಸಬಲಶ್ಚ ತೇಷಾಂ
ವರಾಶ್ರಮಂ ಸೋಽತ್ರ ದದರ್ಶ ಕೃಷ್ಣಾಮ್ ॥೩೬೩॥

ಬಳಿಕ ಒಮ್ಮೆ ಪಾಂಡವರು ಬೇಟೆಗೆ ಹೋಗಿದ್ದಾಗ ಅವರ ಆಶ್ರಮಕ್ಕೆ ರಾಜಾ ಸೈಂಧವ ಕೋಟಿಕಾಶ್ಯನೊಂದಿಗೆ ಸೈನ್ಯ ಸಮೇತನಾಗಿ ಬಂದ. ಅಲ್ಲಿ ದ್ರೌಪದಿಯನ್ನು ಕಂಡ.

ವ್ರಜನ್ ವಿವಾಹಾರ್ಥಮಸೌ ನಿಶಾಮ್ಯ
ಕೃಷ್ಣಾಂ ಕೋಟಂ ಪ್ರೇಷಯಿತ್ವೈವ ಕಾಶ್ಯಮ್ ।

ಆಯಾಹಿ ಮಾಮಿತ್ಯವದತ್ ಸುಪಾಪ
ಸ್ತಯಾ ನಿರಸ್ತೋ ಜಗೃಹೇ ಕರೇ ಚ ॥೩೬೪॥

ವಿವಾಹಕ್ಕೆ ಹೋಗುತ್ತಿದ್ದ ಆ ಮಹಾಪಾಪಿ ಜಯದ್ರಥ ದ್ರೌಪದಿಯನ್ನು ಕಂಡು ಕೋಟಿಕಾಶ್ಯನನ್ನು ಕಳಿಸಿಕೊಟ್ಟು ನನ್ನ ಬಳಿಗೆ ಬಾ ಎಂದ. ಅವಳು ನಿರಾಕರಿಸಿದಾಗ ಕೈಯಲ್ಲಿ ಹಿಡಿದ.

ತಯಾ ಧೂತೋ ನಿಪಪಾತಾऽಶು ಭೂಮೌ
ಪುನಸ್ಸಸಂಜ್ಞೋऽಭ್ಯಗಮದ್ ವಿಲಜ್ಜಃ ।
ತತೋऽಸಹಾಯತ್ವತ ಏವ ಕೃಷ್ಣಾ
ಧೌಮ್ಯಾಯೋತ್ತ್ವಾ ಸಾಗ್ನಿರನ್ವೇಹಿ ಮೇತಿ ॥೩೬೫॥

ಸಮಾರುಹತ್ ಸೈಂಧವಸ್ಯೈವ ಯಾನಂ
ಸುಖಂ ನ ಯಾಸೀತಿ ತಮೀರಯಿತ್ವಾ ।
ತದಾ ನಿಮಿತ್ತಾನಿ ನಿಶಾಮ್ಯ ಪಾರ್ಥಾಃ
ಸಮಾಯಯುಸ್ತ್ವರಯೈವಾऽಶ್ರಮಾಯ ॥೩೬೬॥

ದ್ರೌಪದಿ ಕೈ ಕೊಡವಿಕೊಂಡಾಗ ಜಯದ್ರಥ ತಕ್ಷಣ ನೆಲದಲ್ಲಿ ಬಿದ್ದು, ಮೂರ್ಛೆ ಹೋದ. ಪುನಃ ಎದ್ದು ಬಂದ, ನಾಚಿಕೆಯಿಲ್ಲದ ಆತ ದ್ರೌಪದಿ ತಾನೀಗ ಅಸಹಾಯಕಳಾಗಿದ್ದೇನೆ ಎಂದು, ಧೌಮ್ಯರಿಗೆ ಅಗ್ನಿ ಸಹಿತರಾಗಿ ನನ್ನನ್ನು ಹಿಂಬಾಲಿಸಿ ಬನ್ನಿರೆಂದು ಹೇಳಿ, ಸೈಂಧವನಿಗೆ, 'ನೀನು ಸುಖವಾಗಿ ಹೋಗುವುದಿಲ್ಲ!' ಎನ್ನುತ್ತ ಅವನ ರಥವನ್ನೇರಿದಳು. ಆಗ ಉತ್ಪಾತಗಳನ್ನು ಕಂಡು ಪಾಂಡವರು ವೇಗದಿಂದ ಆಶ್ರಮಕ್ಕೆ ಬಂದರು.

ಶ್ರುತ್ವಾ ದಾಸೀವಚನಾತ್ ಸರ್ವಮೇವ ಚಕ್ರುಃ
ಕ್ಷಿಪ್ರಂ ಸೈಂಧವಸ್ಯಾನುಯಾನಮ್ ।
ಆಕ್ರೋಶಮಾನಂ ಭೀಮಸೇನೇತಿ ಧೌಮ್ಯಂ
ದೃಷ್ಟ್ವಾ ತಸ್ಯಾಗ್ನೇ ಸೈಂಧವಂ ಚಾತಿಪಾಪಮ್ ॥೩೬೭॥

ಚಕ್ರುರ್ನಾದಾನ್ ಸಿಂಹವತ್ ಪಾಂಡುಪುತ್ರಾ
ದೃಷ್ಟ್ವಾ ಕೃಷ್ಣಾ ಚಾವತರದ್ ರಥಾತ್ ತದಾ ।
ಧೌಮ್ಯೇನ ಸಾರ್ದ್ಧಂ ಸಾ ಯಯೌ ಚಾಽಶ್ರಮಾಯ
ಸೈನ್ಯಂ ಪಾರ್ಥಸ್ತತ್ರ ನಿಜಘ್ನುರೋಜಸಾ ॥೩೬೮॥

ಪಾಂಡವರು ದಾಸಿಯ ಮಾತಿನಿಂದ ಎಲ್ಲವನ್ನೂ ಕೇಳಿ ತಿಳಿದು ಬೇಗನೆ ಸೈಂಧವನನ್ನು ಬೆನ್ನಟ್ಟಿ ಹೋದರು. 'ಭೀಮಸೇನ!' ಎಂದು ಧೌಮ್ಯರು ಕೂಗುತ್ತಿದ್ದುದನ್ನೂ ಅವರಿಗೆ ಮುಂಭಾಗದಲ್ಲಿ ಮಹಾಪಾಪಿ ಸೈಂಧವ ಹೋಗುತ್ತಿದ್ದುದನ್ನೂ ಕಂಡು ಸಿಂಹನಾದ ಮಾಡಿದರು. ದ್ರೌಪದಿ ಅವರನ್ನು ಕಂಡು ರಥದಿಂದಿಳಿದು ಧೌಮ್ಯರೊಂದಿಗೆ ಆಶ್ರಮದ ಕಡೆಗೆ ನಡೆದಳು. ಪಾಂಡವರು ಅಲ್ಲಿ ಸೈಂಧವನ ಸೈನ್ಯವನ್ನು ಪರಾಕ್ರಮದಿಂದ ಸಂಹರಿಸಿದರು.

ಅಗ್ರೇ ಕೃಷ್ಣಾಂ ಯೋಽವದತ್ ಸಿಂಧುರಾಜಂ
ಯಾಹೀತಿ ತಂ ಕೋಟಿಕಾಶ್ಯಂ ಸುಪಾಪಮ್ ।
ಛಿತ್ವಾ ಶಿರೋ ಮೃತ್ಯವೇ ಭೀಮಸೇನೋ
ನಿವೇದಯಾಮಾಸ ತಮಃ ಸ ಚಾಗಾತ್ ॥೩೬೯॥

ಮೊದಲಿಗೆ, ದ್ರೌಪದಿಯನ್ನು ಅಪಹರಿಸೆಂದು ಸೈಂಧವನಿಗೆ ಹೇಳಿದ ಮಹಾಪಾಪಿ ಕೋಟಿಕಾಶ್ಯನನ್ನು ಭೀಮಸೇನ ಶಿರಶ್ಛೇದ ಮಾಡಿ ಮೃತ್ಯುವಿಗೆ ನೀಡಿದ. ಆ ಕೋಟಿಕಾಶ್ಯ ತಮಸ್ಸಿಗೆ ನಡೆದ.

ಹತ್ವಾ ಸೇನಾಮಖಿಲಾಂ ಸೈಂಧವಸ್ಯ
ಭೀಮಾರ್ಜುನೌ ಸಯಮಂ ಧರ್ಮರಾಜಮ್ ।
ವಿಸರಜ್ಯ ಧಾವಂತಮಥಾನುಜಗ್ಮತುರ್ಜಯದ್ರಥಂ
ವಿರಥಂ ಪಲ್ಗುನೋಽಕಃ ॥೩೭೦॥

ಭೀಮಾರ್ಜುನರು ಸೈಂಧವನ ಎಲ್ಲ ಸೈನ್ಯವನ್ನೂ ಕೊಂದು ಧರ್ಮರಾಜ ನಕುಲ ಸಹದೇವರನ್ನು ಹಿಂದೆ ಕಳಿಸಿ ತಾವು ಮುಂದೆ ಧಾವಿಸುತ್ತಿದ್ದ ಜಯದ್ರಥನನ್ನು ಬೆನ್ನಟ್ಟಿದರು. ಅರ್ಜುನ ಅವನನ್ನು ವಿರಥನನ್ನಾಗಿ ಮಾಡಿದ.

ಪದ್ಭ್ಯಾಂ ಧಾವಂತಂ ಭೀಮಸೇನೋ ನಿಗೃಹ್ಯ
ದತ್ತ್ವಾ ಪ್ರಹಾರಾಂಶ್ಚ ಭೃಶಂ ತಮಾರ್ತಮ್ ।
ಆದಾಯಾಧಾದ್ ದ್ರೌಪದೀಪಾದಯೋಶ್ಚ ತಂ
ಮೋಚಯಾಮಾಸ ಚ ಧರ್ಮಸೂನುಃ ॥೩೭೧॥

ಕಾಲ್ನಡೆಯಿಂದ ಧಾವಿಸುತ್ತಿದ್ದ ಜಯದ್ರಥನನ್ನು ಭೀಮಸೇನ ಹಿಡಿದು ಚೆನ್ನಾಗಿ ಒದೆಗಳನ್ನು ಕೊಟ್ಟು ಆರ್ತನಾದ ಆತನನ್ನು ದ್ರೌಪದಿಯ ಕಾಲುಗಳ ಮೇಲೆ ಚೆಲ್ಲಿದ. ಧರ್ಮರಾಜ ಬಿಡಿಸಿದ.

ದಾಸೋ ದ್ರೌಪದ್ಯಾ ಅಹಮಿತ್ಯೇವ ವಾಕ್ಯೇ
ತೇನೈವೋಕ್ತೇ ಭೀಮಸೇನೋಽಪ್ಯಮುಂಚತ್ ।
ಸ ವ್ರೀಡಿತೋಽವಾಗ್ವದನೋ ಯಯೌ ವನಂ
ಪಾರ್ಥ್ಯಾಶ್ಚ ತತ್ರೋಷುರತಿಪ್ರಮೋದಿನಃ ॥೩೭೨॥

ನಾನು ದ್ರೌಪದಿಯ ದಾಸನೆಂದು ಜಯದ್ರಥ ಹೇಳಿದಾಗಲೇ ಭೀಮಸೇನ ಅವನನ್ನು ಬಿಟ್ಟ. ಅವನು ನಾಚಿ ಮುಖ ತಗ್ಗಿಸಿ ಕಾಡಿಗೆ ಹೊರಟು ಹೋದ. ಪಾಂಡವರು ಅಲ್ಲಿ ಸಂತುಷ್ಟರಾಗಿ ವಾಸಮಾಡಿದರು.

ಜಯದ್ರಥಸ್ತು ಭೀಮೇನ ತದಾ ಪಂಚಶಿಖೀಕೃತಃ ।
ತಪಸಾ ಶಿವಮಾರಾಧ್ಯ ವವ್ರೇ ಪಾಂಡವರೋಧನಮ್ ।
ಋತೇಽರ್ಜುನಾದರ್ಜುನಸ್ಯ ತುಷ್ಟೋ ಹಿ ತಪಸಾ ಶಿವಃ ॥೩೭೩॥

ಜಯದ್ರಥ ಭೀಮನಿಂದ ತಲೆಯಲ್ಲಿ ಐದು ಜುಟ್ಟು ಇಡಿಸಿಕೊಂಡಾಗ ಅವನು ತಪಸ್ಸಿನಿಂದ ಶಿವನನ್ನು ಆರಾಧಿಸಿ ಅರ್ಜುನನನ್ನು ಹೊರತು ಎಲ್ಲ ಪಾಂಡವರನ್ನು ಇದಿರಿಸಿ ತಡೆಯುವ ಶಕ್ತಿಯನ್ನು ಪಡೆದುಕೊಂಡ. ಏಕೆಂದರೆ ಅರ್ಜುನನಿಗೆ ತಪಸ್ಸಿನಿಂದ ಶಿವ ಮೊದಲೇ ಒಲಿದಿದ್ದ.

★ ★ ★ ★

ಇನ್ನೂರ ಐವತ್ತೆರಡನೆಯ ಅಧ್ಯಾಯ

ಪಾಂಡವರು ಬೇಟೆಗೆ ಹೋಗಿರುವಾಗ ಜಯದ್ರಥನ ಆಗಮನ.
ದ್ರೌಪದಿಯ ರೂಪದಿಂದ ಮೋಹಿತನಾದ ಅವನಿಂದ ತನ್ನ
ಮಂತ್ರಿಯಾದ ಕೋಟಿಕಾಶ್ಯನ ಪ್ರೇಷಣ.

ವೈಶಂಪಾಯನಃ

ತಸ್ಮಿನ್ ಬಹುಮೃಗೇಽರಣ್ಯೇ ಅಟಮಾನಾ ಮಹಾರಥಾಃ ।
ಕಾಮ್ಯಕೇ ಭರತಶ್ರೇಷ್ಠಾ ವಿಜಹ್ರುಸ್ತೇ ಯಥಾಽಮರಾಃ ॥೧॥

ವೈಶಂಪಾಯನ– ಬಹುಮೃಗಗಳು ಇದ್ದ ಆ ಕಾಮ್ಯಕವನದಲ್ಲಿ ಮಹಾರಥರಾದ ಭರತಶ್ರೇಷ್ಠರು ತಿರುಗಾಡುತ್ತಾ ದೇವತೆಗಳಂತೆ ವಿಹರಿಸಿದರು.

ಪ್ರೇಕ್ಷಮಾಣಾ ಬಹುವಿಧಾನ್ ವನೋದ್ದೇಶಾನ್ ಸಮಂತತಃ ।
ಯಥರ್ತುಕಾಲರಮ್ಯಾಶ್ಚ ವನರಾಜೀಃ ಸುಪುಷ್ಪಿತಾಃ ॥೨॥

ಪಾಂಡವಾ ಮೃಗಯಾಶೀಲಾಶ್ಚರಂತಸ್ತನ್ಮಹದ್ವನಮ್ ।
ವಿಜಹ್ರುರಿಂದ್ರಪ್ರತಿಮಾಃ ಕಂಚಿತ್ಕಾಲಮರಿಂದಮಾಃ ॥೩॥

ಸುತ್ತಲೂ ಬಹುವಿಧವಾದ ವನಪ್ರದೇಶಗಳನ್ನು ನೋಡುತ್ತಾ ಆಯಾ ಕಾಲಗಳಲ್ಲಿ ಅರಳಿದ ಹೂಗಳುಳ್ಳ ಸುಂದರವಾದ ವನಶ್ರೇಣಿಗಳನ್ನು ನೋಡುತ್ತಾ ಬೇಟೆಯಾಡುವುದರಲ್ಲಿ ನಿರತರಾಗಿ ಇಂದ್ರನಂತಿದ್ದ ಅರಿಂದಮರಾದ ಪಾಂಡವರು ಆ ದೊಡ್ಡ ಕಾಡಿನಲ್ಲಿ ಸಂಚರಿಸುತ್ತಾ ಸ್ವಲ್ಪ ಕಾಲ ವಿಹರಿಸಿದರು.

ತತಸ್ತೇ ಯೌಗಪದ್ಯೇನ ಯಯುಃ ಸರ್ವೇ ಚತುರ್ದಿಶಮ್ ।
ಮೃಗಾಯಾಂ ಪುರುಷವ್ಯಾಘ್ರಾ ಬ್ರಾಹ್ಮಣಾರ್ಥೇ ಪರಂತಪಾಃ ॥೪॥

ಅನಂತರ ಪುರುಷವ್ಯಾಘ್ರರಾದ ಪರಂತಪರಾದ ಅವರು ಒಮ್ಮೆ ಬ್ರಾಹ್ಮಣರ ಸಲುವಾಗಿ ಬೇಟೆಯಾಡಲು ಎಲ್ಲರೂ ಒಟ್ಟಿಗೆ ನಾಲ್ಕು ದಿಕ್ಕುಗಳಿಗೆ ಹೊರಟರು.

ದ್ರೌಪದೀಮಾಶ್ರಮೇ ನ್ಯಸ್ಯ ತೃಣಬಿಂದೋರನುಜ್ಞಯಾ ।
ಮಹರ್ಷೇರ್ದೀಪ್ತತಪಸೋ ಧೌಮ್ಯಸ್ಯ ಚ ಪುರೋಧಸಃ ॥೫॥

ಮಹರ್ಷಿಗಳಾದ ತೃಣಬಿಂದು ಋಷಿಗಳ ಅನುಮತಿಯನ್ನು ಪಡೆದು ದೀಪ್ತ ತಪಸ್ಸುಳ್ಳ ಪುರೋಹಿತರಾದ ಧೌಮ್ಯರ ಅನುಮತಿಯನ್ನು ಪಡೆದು ದ್ರೌಪದಿಯನ್ನು ಆಶ್ರಮದಲ್ಲಿ ಇರಿಸಿ (ಅವರು ಹೊರಟರು).

ತತಸ್ತು ರಾಜಾ ಸಿಂಧೂನಾಂ ವಾರ್ದ್ಧಕ್ಷತ್ರಿರ್ಜಯದ್ರಥಃ ।
ವಿವಾಹಕಾಮಃ ಶಾಲ್ವೇಯಾನ್ ಪ್ರಯಾತಃ ಸೋಽಭವತ್ ತದಾ ॥೬॥

ಅನಂತರ ಸಿಂಧು ದೇಶದ ದೊರೆಯಾದ ವೃದ್ಧಕ್ಷತ್ರನ ಮಗನಾದ ಜಯದ್ರಥ ರಾಜನು ವಿವಾಹವನ್ನು ಮಾಡಿಕೊಳ್ಳುವ ಇಚ್ಛೆಯಿಂದ ಶಾಲ್ವದೇಶಕ್ಕೆ ಹೊರಟವನಾಗಿದ್ದನು.

ಮಹತಾ ಪರಿಬರ್ಹೇಣ ರಾಜಯೋಗ್ಯೇನ ಸಂವೃತಃ ।
ರಾಜಭಿರ್ಬಹುಭಿಃ ಸಾರ್ಧಮುಪಾಯಾತ್ ಕಾಮ್ಯಕಂ ಚ ಸಃ ॥೭॥

ಅವನು ರಾಜಯೋಗ್ಯವಾದ ದೊಡ್ಡ ಸಲಕರಣೆಗಳಿಂದ ಕೂಡಿ ಅನೇಕ ರಾಜರ ಜೊತೆಯಲ್ಲಿ ಕಾಮ್ಯಕವನಕ್ಕೆ ಬಂದನು.

ತತ್ರಾಪಶ್ಯತ್ ಪ್ರಿಯಾಂ ಭಾರ್ಯಾಂ ಪಾಂಡವಾನಾಂ ಯಶಸ್ವಿನೀಮ್ ।
ತಿಷ್ಠಂತೀಮಾಶ್ರಮದ್ವಾರಿ ದ್ರೌಪದೀಂ ನಿರ್ಜನೇ ವನೇ ॥೮॥

ಅಲ್ಲಿ ಅವನು ನಿರ್ಜನವಾದ ಅರಣ್ಯದಲ್ಲಿ ಆಶ್ರಮದ್ವಾರದಲ್ಲಿ ನಿಂತಿರುವ ಪಾಂಡವರ ಪ್ರಿಯಪತ್ನಿಯಾದ ಯಶಸ್ವಿನಿಯಾದ ದ್ರೌಪದಿಯನ್ನು ನೋಡಿದನು.

ವಿಭ್ರಾಜಮಾನಾಂ ವಪುಷಾ ಬಿಭ್ರತೀಂ ರೂಪಮುತ್ತಮಮ್ ।
ಭ್ರಾಜಯಂತೀಂ ವನೋದ್ದೇಶಂ ನೀಲಾಭ್ರಮಿವ ವಿದ್ಯುತಮ್ ॥೯॥

ಉತ್ತಮ ರೂಪವನ್ನು ಧರಿಸಿ ತನ್ನ ದೇಹದಿಂದ ಶೋಭಿಸುತ್ತಾ ಆ ವನಪ್ರದೇಶವನ್ನು ಬೆಳಗುತ್ತಿರುವ ಮಿಂಚಿನಿಂದ ಕೂಡಿದ ನೀಲಮೇಘದಂತಿದ್ದ (ದ್ರೌಪದಿಯನ್ನು ನೋಡಿದನು).

ಅಪ್ಸರಾ ದೇವಕನ್ಯಾ ವಾ ಮಾಯಾ ವಾ ದೇವನಿರ್ಮಿತಾ ।
ಇತಿ ಕೃತ್ವಾಽಂಜಲಿಂ ಸರ್ವೇ ದದೃಶುಸ್ತಾಮನಿಂದಿತಾಮ್ ॥೧೦॥

ಇವಳೇನು ಅಪ್ಸರೆಯೋ, ದೇವಕನ್ಯೆಯೋ ಅಥವಾ ದೈವನಿರ್ಮಿತ ಮಾಯೆಯೋ ಎಂದು ಎಲ್ಲರೂ ಕೈಗಳನ್ನು ಮುಗಿದು ಅನಿಂದಿತಳಾದ ಅವಳನ್ನು ನೋಡಿದರು.

ತತಃ ಸ ರಾಜಾ ಸಿಂಧೂನಾಂ ವಾರ್ದ್ಧಕ್ಷತ್ರಿರ್ಜಯದ್ರಥಃ ।
ವಿಸ್ಮಿತಸ್ತ್ವನವದ್ಯಾಂಗೀಂ ದೃಷ್ಟ್ವಾ ತಾಂ ದುಷ್ಟಮಾನಸಃ ।
ಸ ಕೋಟಿಕಾಶ್ಯ ರಾಜಾನಮಬ್ರವೀತ್ ಕಾಮಮೋಹಿತಃ ॥೧೧॥

ಆಗ ಸಿಂಧುಪತಿಯಾದ ವೃದ್ಧಕ್ಷತ್ರನ ಮಗನಾದ ಜಯದ್ರಥನು ಆ ಅನವದ್ಯಾಂಗಿಯನ್ನು ನೋಡಿ ವಿಸ್ಮಿತನಾಗಿ ಕಾಮಮೋಹಿತನಾಗಿ ದುಷ್ಟ ಅಭಿಪ್ರಾಯವನ್ನು ಹೊಂದಿದವನಾಗಿ ಕೋಟಿಕಾಶ್ಯನೆಂಬ ತನ್ನ ಸಾಮಂತರಾಜನನ್ನು ಕಳುಹಿಸಿದನು.

ಕಸ್ಯ ತ್ವೇಷಾऽನವದ್ಯಾಂಗೀ ಯದಿ ವಾಪಿ ನ ಮಾನುಷೀ ।
ವಿವಾಹಾರ್ಥೋ ನ ಮೇ ಕಶ್ಚಿದಿಮಾಂ ಪ್ರಾಪ್ಯಾತಿಸುಂದರೀಮ್ ॥೧೨॥

ಏತಾಮೇವಾಹಮಾದಾಯ ಗಮಿಷ್ಯಾಮಿ ಸ್ವಮಾಲಯಮ್ ॥೧೩॥

ಈ ಅನವದ್ಯಾಂಗಿಯು ಯಾರಿಗೆ ಸೇರಿದವಳು ಅಥವಾ ಇವಳೇನು ಅಮಾನುಷಳಾದ ದೇವ ವನಿತೆಯೇ? ನಾನು ಈ ಸುಂದರಿಯನ್ನು ಹೊಂದಿದರೆ ನನಗೆ ಬೇರೆ ವಿವಾಹದಿಂದ ಆಗಬೇಕಾದುದು ಏನೂ ಇಲ್ಲ. ಇವಳನ್ನೇ ಕರೆದುಕೊಂಡು ನನ್ನ ಮನೆಗೆ ಹೋಗುವೆನು.

ಗಚ್ಛ ಜಾನೀಹಿ ಸೌಮ್ಯೇಮಾಂ ಕಸ್ಯ ವಾऽತ್ರ ಕುತೋऽಪಿ ವಾ ।
ಕಿಮರ್ಥಮಾಗತಾ ಸುಭ್ರೂರಿದಂ ಕಂಟಕಿತಂ ವನಮ್ ॥೧೪॥

ಕೋಟಿಕಾಶ್ಯನೇ, ಸೌಮ್ಯನೇ, ಹೋಗಿ ಈ ಸುಂದರಿಯು ಯಾರು? ಎಲ್ಲಿಂದ ಬಂದಳು? ಏಕೆ ಈ ಮುಳ್ಳಿರುವ ವನಕ್ಕೆ ಬಂದಳು? ಎಂದು ತಿಳಿದುಕೋ.

ಅಪಿ ನಾಮ ವರಾರೋಹಾ ಮಾಮೇಷಾ ಲೋಕಸುಂದರೀ ।
ಭಜೇದದ್ಯಾಯತಾಪಾಂಗೀ ಸುದತೀ ತನುಮಧ್ಯಮಾ ॥೧೫॥

ಅಪ್ಯಹಂ ಕೃತಕಾಮಃ ಸ್ಯಾಮಿಮಾಂ ಪ್ರಾಪ್ಯ ವರಸ್ತ್ರಿಯಮ್ ।
ಗಚ್ಛ ಜಾನೀಹಿ ಕೋ ನ್ವಸ್ಯಾ ನಾಥ ಇತ್ಯೇವ ಕೋಟಿಕ ॥೧೬॥

ಈ ವರಾರೋಹಳೂ, ಸುದತಿಯೂ, ತನುಮಧ್ಯಮೆಯೂ, ವಿಶಾಲನೇತ್ರೆಯೂ ಆದ ಲೋಕಸುಂದರಿಯು ನನ್ನನ್ನು ಭಜಿಸುವುದಾದರೆ ಇಂತಹ ಶ್ರೇಷ್ಠ ವನಿತೆಯನ್ನು ಪಡೆದು ನಾನು ಕೃತಕೃತ್ಯನಾಗುತ್ತೇನೆ. ಕೋಟಿಕಾಶ್ಯನೇ, ನೀನು ಹೋಗಿ ಇವಳ ಒಡೆಯನು ಯಾರು ಎಂದು ತಿಳಿದುಕೋ (ಎಂದು ಹೇಳಿದನು).

ವೈಶಂಪಾಯನಃ

ಸ ಕೋಟಿಕಾಶ್ಯಸ್ತಚ್ಛ್ರುತ್ವಾ ರಥಾತ್ ಪ್ರಸ್ಕಂದ್ಯ ಕುಂಡಲೀ ।
ಉಪೇತ್ಯ ಪಪ್ರಚ್ಛ ತದಾ ಕ್ರೋಷ್ಟಾ ವ್ಯಾಘ್ರವಧೂಮಿವ ॥೧೭॥

ವೈಶಂಪಾಯನ– ಈ ಮಾತುಗಳನ್ನು ಕೇಳಿದ ಕುಂಡಲಧಾರಿಯಾದ ಕೋಟಿಕಾಶ್ಯನು ರಥದಿಂದ ಕೆಳಗಿಳಿದು ನರಿಯು ಹೆಣ್ಣು ಹುಲಿಯನ್ನು ಸಮೀಪಿಸುವಂತೆ ಅವಳನ್ನು ಸಮೀಪಿಸಿ ಆಗ ಪ್ರಶ್ನೆಯನ್ನು ಮಾಡಿದನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂಸಂಹಿತಾಯಾಂ ವೈಯಾಸಿಕ್ಯಾಂ
ವನಪರ್ವಣಿ ದ್ವಿಪಂಚಾಶಾಧಿಕದ್ವಿಶತತಮೋऽಧ್ಯಾಯಃ ॥
॥ ಇತಿ ದ್ರೌಪದೀಹರಣಪರ್ವಣಿ ಜಯದ್ರಥಾಗಮನಂ ನಾಮ ಪ್ರಥಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವನಪರ್ವದಲ್ಲಿ ಇನ್ನೂರ ಐವತ್ತೆರಡನೆಯ ಅಧ್ಯಾಯ ಮುಗಿಯಿತು.

★ ★ ★ ★

ಇನ್ನೂರ ಐವತ್ತೂರನೆಯ ಅಧ್ಯಾಯ

ಜಯದ್ರಥನ ಪ್ರೇರಣೆಯಂತೆ ಕೋಟಿಕಾಶ್ಯನಿಂದ ದ್ರೌಪದಿಯ ವಿಚಾರಣೆ.

ಕೋಟಿಕಃ

ಕಾ ತ್ವಂ ಕದಂಬಸ್ಯ ವಿನಾಮ್ಯ
ಶಾಖಾಮೇಕಾऽऽಶ್ರಮೇ ತಿಷ್ಠಸಿ ಶೋಭಮಾನಾ ।
ದೇದೀಪ್ಯಮಾನಾऽಗ್ನಿಶಿಖೇವ ನಕ್ತಂ
ಆಚಕ್ಷ್ವ ಶೀಘ್ರಂ ವೃಜಿನಾಗ್ರಕೇಶಿ ॥೧॥

ಕೋಟಿಕಾಶ್ಯ– ಎಲೌ ಗುಂಗುರು ಕೂದಲುಳ್ಳವಳೇ, ನೀನು ಯಾರು? ಕದಂಬ ವೃಕ್ಷದ ಶಾಖೆಯನ್ನು ಬಗ್ಗಿಸಿ ಶೋಭಮಾನಳಾಗಿ ರಾತ್ರಿಯಲ್ಲಿ ಜ್ವಲಿಸುವ ಅಗ್ನಿಶಿಖೆಯಂತೆ ಒಬ್ಬಳೇ ಆಶ್ರಮದಲ್ಲಿ ಏಕೆ ನಿಂತಿದ್ದೀಯೆ? ಶೀಘ್ರವಾಗಿ ಹೇಳು.

ಅತೀವ ರೂಪೇಣ ಸಮನ್ವಿತಾ ತ್ವಂ ನ
ಚಾಪ್ಯರಣ್ಯೇಷು ವಿಭೇಷಿ ಕಿಂ ನು ।
ದೇವೀ ನು ಯಕ್ಷೀ ಯದಿ ದಾನವೀ ವಾ
ವರಾಪ್ಸರಾ ದೈತ್ಯವರಾಂಗನಾ ವಾ ॥೨॥

ನೀನು ಬಹಳ ರೂಪಸಂಪನ್ನಳಾಗಿದ್ದೀಯೆ. ಅರಣ್ಯದಲ್ಲಿ ನಿನಗೆ ಭಯವಾಗುವುದಿಲ್ಲವೇ? ನೀನು ದೇವವನಿತೆಯೋ? ಅಥವಾ ಯಕ್ಷಿಯೋ? ಅಥವಾ ದಾನವಿಯೋ? ಅಥವಾ ಶ್ರೇಷ್ಠಳಾದ ಅಪ್ಸರೆಯೋ? ಅಥವಾ ದೈತ್ಯವನಿತೆಯೋ? (ಎಂದು ಹೇಳು).

ವಪುಷ್ಮತೀ ವೋರಗರಾಜಕನ್ಯಾ ವನೇಚರೀ ವಾ ಕ್ಷಣದಾ ಚಲಸ್ತ್ರೀ ।
ಕಿಂದೇವರಾಜ್ಞೋ ವರುಣಸ್ಯ ಪತ್ನೀ ಯಮಸ್ಯ ಸೋಮಸ್ಯ ಧನೇಶ್ವರಸ್ಯ ॥

ದೇಹವನ್ನು ಧರಿಸಿದ ಉರಗರಾಜ ಕನ್ಯೆಯೋ? ಅಥವಾ ವನಚರಿಯೋ? ಅಥವಾ ರಾತ್ರಿದೇವತೆಯೋ? ಅಥವಾ ಚಂಚಲವಾದ ವನಿತೆಯೋ? ಅಥವಾ ದೇವರಾಜನಾದ ವರುಣನ ಅಥವಾ ಯಮನ ಅಥವಾ ಚಂದ್ರನ ಅಥವಾ ಕುಬೇರನ ಪತ್ನಿಯೋ?

ಧಾತುರ್ವಿಧಾತುಃ ಸವಿತುರ್ವಿಭೋರ್ವಾ
ಶಕ್ರಸ್ಯ ವಾ ತ್ವಂ ಸದನಾತ್ ಪ್ರಪನ್ನಾ ।
ನ ಹ್ಯೇವ ನಃ ಪೃಚ್ಛಸಿ ಯೇ ವಯಂ ಸ್ಮ
ನ ಚಾಪಿ ಜಾನೀಮ ತವೇಹ ನಾಥಮ್ ॥೪॥

ನೀನು ಬ್ರಹ್ಮದೇವರ ಮನೆಯಿಂದಲೋ, ವಿಷ್ಣುವಿನ ಮನೆಯಿಂದಲೋ, ಸವಿತೃವಿನ ಮನೆಯಿಂದಲೋ ಅಥವಾ ಶಕ್ರಸದನದಿಂದಲೋ ಇಲ್ಲಿಗೆ ಬಂದಿರುವೆಯಾ? ನೀವು ಯಾರು ಎಂದು ನನ್ನನ್ನು ನೀನು ಕೇಳುತ್ತಿಲ್ಲ. ನಮಗಾದರೂ ನಿಮ್ಮ ಒಡೆಯನು ಯಾರು ಎಂದು ತಿಳಿಯುತ್ತಿಲ್ಲ.

ವಯಂ ಹಿ ಮಾನಂ ತವ ವರ್ಧಯಂತಃ
ಪೃಚ್ಛಾಮ ಭದ್ರೇ ಪ್ರಭವಂ ಪ್ರಭುಂ ಚ ।

ಆಚಕ್ಷ್ವ ಬಂಧೂಂಶ್ಚ ಪತಿಂ ಕುಲಂ ಚ
ತತ್ತ್ವೇನ ಯಚ್ಚೇಹ ಕರೋಷಿ ಕಾರ್ಯಮ್ ॥೫॥

ಎಲೌ ಭದ್ರೆಯೇ, ನಾನು ನಿನಗೆ ಗೌರವವನ್ನು ಕೊಡುತ್ತಾ ನಿನ್ನ ತಂದೆಯಾರು? ಒಡೆಯನು ಯಾರು ಎಂದು ಕೇಳುತ್ತಿದ್ದೇನೆ? ನಿನ್ನ ಬಂಧುಗಳು ಯಾರು? ಪತಿಯು ಯಾರು? ಕುಲವು ಯಾವುದು? ಇಲ್ಲಿ ಏನು ಮಾಡಲು ಬಂದಿದ್ದೀಯೆ? ಎಲ್ಲವನ್ನೂ ನಿಜವಾಗಿ ಹೇಳು.

ಅಹಂ ತು ರಾಜ್ಞಃ ಸುರಥಸ್ಯ ಪುತ್ರೋ
ಯಂ ಕೋಟಿಕಾಶ್ಯೇತಿ ವಿದುರ್ಮನುಷ್ಯಾಃ ।
ಅಸೌ ತು ಯಸ್ತಿಷ್ಠತಿ ಕಾಂಚನಾಂಗೇ ರಥೇ
ಹುತೋಽಗ್ನಿಶ್ಚಯನೇ ಯಥೈವ ।
ತ್ರಿಗರ್ತರಾಜಃ ಕಮಲಾಯತಾಕ್ಷಿ
ಕ್ಷೇಮಂಕರೋ ನಾಮ ಸ ಏಷ ವೀರಃ ॥೬॥

ನಾನು ಸುರಥರಾಜನ ಪುತ್ರ. ನನ್ನನ್ನು ಕೋಟಿಕಾಶ್ಯನೆಂದು ಮನುಷ್ಯರು ತಿಳಿಯುತ್ತಾರೆ. ಕಾಂಚನಮಯವಾದ ರಥದಲ್ಲಿ ವೇದಿಕೆಯಲ್ಲಿ ಚಿತವಾದ ಅಗ್ನಿಯಂತೆ ಪ್ರಕಾಶಿಸುತ್ತಿರುವ ಇವನು ಎಲೌ ಕಮಲಾಯತಾಕ್ಷಿಯೇ, ತ್ರಿಗರ್ತರಾಜನಾದ ಕ್ಷೇಮಂಕರನೆಂಬ ವೀರನು.

ವಶ್ಯೇಂದ್ರಿಯಃ ಸತ್ಯರುಚಿರ್ವರೋರು
ವೃದ್ಧೋಪಸೇವೀ ಗುರುಪೂಜಕಶ್ಚ ॥೭॥

ಎಲೌ ವರೋರುವೇ, ಇವನು ಜಿತೇಂದ್ರಿಯನು, ಸತ್ಯದಲ್ಲಿ ಆಸಕ್ತನಾದವನು, ವೃದ್ಧರ ಸೇವೆಯನ್ನು ಮಾಡುವವನು ಮತ್ತು ಹಿರಿಯರನ್ನು ಪೂಜಿಸುವವನು.

ಅಸ್ಮಾತ್ ಪರಸ್ತ್ವೇಷ ಮಹಾಧನುಷ್ಮಾನ್
ಪುತ್ರಃ ಕುಲಿಂದಾಧಿಪತೇರ್ವರಿಷ್ಠಃ ।
ನಿರೀಕ್ಷತೇ ತ್ವಾಂ ವಿಪುಲಾಯತಾಕ್ಷಃ
ಸುಪುಷ್ಪಿತಃ ಪರ್ವತವಾಸನಿತ್ಯಃ ॥೮॥

ಅವನಿಂದ ಆಚೆಗೆ ಮಹಾಧನುಸ್ಸನ್ನು ಹಿಡಿದಿರುವ ಇವನು ಕುಲಿಂದಾಧಿಪತಿಯ ಶ್ರೇಷ್ಠನಾದ ಪುತ್ರ. ಒಳ್ಳೆಯ ಪುಷ್ಪವನ್ನು ಧರಿಸಿದ ನಿತ್ಯವೂ ಪರ್ವತವಾಸಿಯಾದ ವಿಪುಲನೇತ್ರನಾದ ಇವನು ನಿನ್ನನ್ನು ನೋಡುತ್ತಿದ್ದಾನೆ.

ಅಸೌ ತು ಯಃ ಪುಷ್ಕರಿಣೀಸಮೀಪೇ
ಶ್ಯಾಮೋ ಯುವಾ ತಿಷ್ಠತಿ ದರ್ಶನೀಯಃ ।
ಇಕ್ಷ್ವಾಕುರಾಜ್ಞಃ ಸುಬಲಸ್ಯ ಪುತ್ರಃ
ಸ ಏವ ಹಂತಾ ದ್ವಿಷತಃ ಸುಗಾತ್ರಿ ॥೯॥

ಪುಷ್ಕರಿಣೀ ಸಮೀಪದಲ್ಲಿ ಇರುವ ಶ್ಯಾಮಲ ವರ್ಣದವನೂ, ಯುವಕನೂ, ಸುಂದರನೂ ಆದ ಇವನು ಇಕ್ಷ್ವಾಕುರಾಜನಾದ ಸುಬಲನ ಪುತ್ರನು. ಸುಗಾತ್ರಿಯೇ, ಇವನು ಶತ್ರುಗಳನ್ನು ನಾಶಮಾಡುವಂತಹವನು.

ಯಸ್ಯಾನುಯಾತ್ರಾ ಧ್ವಜಿನಃ ಪ್ರಯಾಂತಿ
ಸೌವೀರಕಾ ದ್ವಾದಶ ರಾಜಪುತ್ರಾಃ ।
ಶೋಣಾಶ್ವಯುಕ್ತೇಷು ರಥೇಷು ಸರ್ವೇ
ಮಖೇಷು ದೀಪ್ತಾ ಇವ ಹವ್ಯವಾಹಾಃ ॥೧೦॥

ಅವನನ್ನು ಹಿಂಬಾಲಿಸಿ ಧ್ವಜಗಳನ್ನು ಹೊಂದಿದ, ಯಜ್ಞದಲ್ಲಿರುವ ಅಗ್ನಿಯಂತೆ ದೀಪ್ತರಾದ ಹನ್ನೆರಡು ಜನ ಸೌವೀರ ರಾಜಕುಮಾರರು ಕೆಂಪುಕುದುರೆಗಳನ್ನು ಹೂಡಿದ ರಥದಲ್ಲಿ ಅವನನ್ನು ಹಿಂಬಾಲಿಸುತ್ತಾರೆ.

ಅಂಗಾರಕಃ ಕುಂಜರೋ ಗುಪ್ತಕಶ್ಚ
ಶತ್ರುಂಜಯಃ ಸಂಜಯಸುಪ್ರವೃದ್ಧೌ ।
ಪ್ರಭಾಕರೋಽಥ ಭ್ರಮರೋ ರವಿಶ್ಚ
ಶೂರಃ ಪ್ರತಾಪಃ ಕುಹರಶ್ಚ ನಾಮಾ ॥೧೧॥

ಅಂಗಾರಕ, ಕುಂಜರ, ಗುಪ್ತಕ, ಶತ್ರುಂಜಯ, ಸಂಜಯ, ಸುಪ್ರವೃದ್ಧ, ಪ್ರಭಾಕರ, ಭ್ರಮರ, ರವಿ, ಶೂರ, ಪ್ರತಾಪ ಮತ್ತು ಕುಹರ (ಇವರು ಆ ಹನ್ನೆರಡು ಮಂದಿ ಸೌವೀರ ರಾಜಕುಮಾರರು).

ಯಂ ಷಟ್‌ಸಹಸ್ರಾ ರಥಿನೋಽನುಯಾಂತಿ
ನಾಗಾ ಹಯಾಶ್ಚೈವ ಪದಾತಿನಶ್ಚ ।
ಜಯದ್ರಥೋ ನಾಮ ಯದಿ ಶ್ರುತಸ್ತೇ
ಸೌವೀರರಾಜಃ ಸುಭಗೇ ಸ ಏಷಃ ॥೧೨॥

ಎಲೌ ಸುಂದರಿಯೇ, ಯಾವನು ಹೊರಟರೆ ಅವನನ್ನು ಆರು ಸಹಸ್ರ ರಥಿಕರು, ಗಜಾಶ್ವಪದಾತಿಗಳು ಹಿಂಬಾಲಿಸುತ್ತವೆಯೋ ಅಂತಹ ಇವನು ನೀನು ಅವನನ್ನು ಕೇಳಿದ್ದರೆ ಸೌವೀರರಾಜನಾದ ಜಯದ್ರಥನೆಂಬುವನು.

ತಸ್ಯಾಪರೇ ಭ್ರಾತರೋಽದೀನಸತ್ತ್ವಾ
ಬಲಾಹಕಾನೀಕವಿದಾರಣಾದ್ಯಾಃ ।
ಸೌವೀರವೀರಾಃ ಪ್ರವರಾ ಯುವಾನೋ
ರಾಜಾನಮೇತೇ ಬಲಿನೋಽನುಯಾಂತಿ ॥೧೩॥

ಅದೂ ಅಲ್ಲದೇ ಬಲಾಹಕ, ಅನೀಕವಿದಾರಣ ಮೊದಲಾದ ಸೌವೀರ ವೀರರೂ ಶ್ರೇಷ್ಠರೂ, ಯುವಕರೂ ಮತ್ತು ಪರಾಕ್ರಮಶಾಲಿಗಳೂ ಆದ ಅವನ ತಮ್ಮಂದಿರು ಆ ರಾಜನನ್ನು ಹಿಂಬಾಲಿಸುತ್ತಾರೆ.

ಏತೈಃ ಸಹಾಯೈರುಪಯಾತಿ ರಾಜಾ
ಮರುದ್ಗಣೈರಿಂದ್ರ ಇವಾಭಗುಪ್ತಃ ।
ಸಾ ಜಾನತೀ ವ್ಯಾಪನಯಃ ಸುಕೇಶಿ
ಕಸ್ಯಾಪಿ ಭಾರ್ಯಾ ದುಹಿತಾ ಚ ಕಸ್ಯ ॥೧೪॥

ಇಂತಹವರ ಜೊತೆಯಲ್ಲಿ ಈ ರಾಜನು ಮರುದ್ಗಣಗಳಿಂದ ರಕ್ಷಿತನಾದ ಇಂದ್ರನಂತೆ ಬರುತ್ತಾನೆ. ಇದನ್ನು ತಿಳಿದು ಎಲೌ ಸುಕೇಶಿಯೇ, ನೀನು ಯಾರ ಪತ್ನಿ, ಯಾರ ಪುತ್ರಿ ಎಂದು ಬಾಯಿಯನ್ನು ತೆಗೆದು ಮಾತನಾಡು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂಸಂಹಿತಾಯಾಂ ವೈಯಾಸಿಕ್ಯಾಂ
ವನಪರ್ವಣಿ ತ್ರಿಪಂಚಾಶಾಧಿಕದ್ವಿಶತತಮೋಽಧ್ಯಾಯಃ ॥
॥ ಇತಿ ದ್ರೌಪದೀಹರಣಪರ್ವಣಿ ಕೋಟಿಕಾಶ್ಯಪ್ರಶ್ನೋನಾಮ ದ್ವಿತೀಯೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವನಪರ್ವದಲ್ಲಿ ಇನ್ನೂರ ಐವತ್ಮೂರನೆಯ ಅಧ್ಯಾಯ ಮುಗಿಯಿತು.

★ ★ ★ ★

ಇನ್ನೂರ ಐವತ್ತನಾಲ್ಕನೆಯ ಅಧ್ಯಾಯ

ಕೋಟಿಕಾಶ್ಯನಿಗೆ ದ್ರೌಪದಿಯಿಂದ ಆತ್ಮವೃತ್ತಾಂತ ಕಥನ.

ವೈಶಂಪಾಯನಃ

ಅಥಾಬ್ರವೀದ್ ದ್ರೌಪದೀ ರಾಜಪುತ್ರೀ
ಪೃಷ್ಟಾ ಶಿಬೀನಾಂ ಪ್ರವರೇಣ ತೇನ ।
ಅವೇಕ್ಷ್ಯ ಮಂದಂ ಪ್ರವಿಮುಚ್ಯ ಶಾಖಾಂ
ಸಂಗೃಹ್ಣತೀ ಕೌಶಿಕಮುತ್ತರೀಯಮ್ ॥೧॥

ವೈಶಂಪಾಯನ– ಶಿಬಿವಂಶದ ಶ್ರೇಷ್ಠನಾದ ಒಬ್ಬ ಪುರುಷನಿಂದ ಹೀಗೆ ಹೇಳಲ್ಪಟ್ಟ ರಾಜಪುತ್ರಿಯಾದ ದ್ರೌಪದಿಯು ಅನಂತರ ಅವನನ್ನು ನೋಡಿ ಮೆಲ್ಲನೆ ಕದಂಬ ಶಾಖೆಯನ್ನು ಬಿಟ್ಟು ರೇಷ್ಮೆಯ ಉತ್ತರೀಯವನ್ನು ಸರಿಯಾಗಿ ಹೊದ್ದು ಮಾತನಾಡಿದಳು.

ಬುದ್ಧ್ಯಾಭಿಜಾನಾಮಿ ನರೇಂದ್ರಪುತ್ರ
ನ ಮಾದೃಶೀ ತ್ವಾಮಭಿಭಾಷ್ಟುಮರ್ಹತಿ ।
ನ ತ್ವೇಹ ವಕ್ತಾಽಸ್ತಿ ತವೇಹ ವಾಕ್ಯಂ
ಅನ್ಯೋ ನರೋ ವಾಽಪ್ಯಥವಾಽಪಿ ನಾರೀ ॥೨॥

ಎಲೈ ನರೇಂದ್ರಪುತ್ರನೇ, ನಾನು ನನ್ನ ಬುದ್ಧಿಯಿಂದ ಎಲ್ಲವನ್ನೂ ತಿಳಿದಿದ್ದೇನೆ. ಆದರೆ ನನ್ನಂತಹವಳು ನಿನ್ನ ಜೊತೆಯಲ್ಲಿ ಮಾತನಾಡಬಾರದು. ಆದರೆ ಇಲ್ಲಿ ನೀನು ಕೇಳುವ ಪ್ರಶ್ನೆಗಳಿಗೆ ಉತ್ತರವನ್ನು ಹೇಳುವ ಇನ್ನೊಬ್ಬ ಪುರುಷನಾಗಲೀ ಅಥವಾ ನಾರಿಯಾಗಲೀ ಇಲ್ಲ.

ಏಕಾ ಹ್ಯಹಂ ಸಂಪ್ರತಿ ತೇನ ವಾಚಂ
ದದಾಮಿ ವೈ ಭದ್ರ ನಿಬೋಧ ಚೇದಮ್ ।
ಅಹಂ ಹ್ಯರಣ್ಯೇ ಕಥಮೇಕಮೇಕಾ
ತ್ವಾಮಾಲಪೇಯಂ ನಿರತಾ ಸ್ವಧರ್ಮೇ ॥೩॥

ಸದ್ಯಕ್ಕೆ ನಾನು ಒಬ್ಬಳೇ ಇದ್ದೇನೆ. ಆದ್ದರಿಂದ ನಿನಗೆ ಉತ್ತರವನ್ನು ಕೊಡುತ್ತೇನೆ. ಭದ್ರನೇ, ಇದನ್ನು ತಿಳಿದುಕೋ. ಇಲ್ಲದಿದ್ದರೆ ಅರಣ್ಯದಲ್ಲಿ ಏಕಾಂಗಿಯಾಗಿದ್ದು ಸ್ವಧರ್ಮದಲ್ಲಿ ನಿರತಳಾದ ನಾನು ನಿನ್ನ ಜೊತೆಯಲ್ಲಿ ಹೇಗೆ ಮಾತನಾಡಲು ಸಾಧ್ಯ ?

ಜಾನಾಮಿ ಚ ತ್ವಾಂ ಸುರಥಸ್ಯ ಪುತ್ರಂ
ಯಂ ಕೋಟಿಕಾಶ್ಯೇತಿ ವಿದುರ್ಮನುಷ್ಯಾಃ ।
ತಸ್ಮಾದಹಂ ಶೈಬ್ಯ ತಥೈವ ತುಭ್ಯಂ
ಆಖ್ಯಾಮಿ ಬಂಧೂನ್ ಪ್ರಥಿತಂ ಕುಲಂ ಚ ॥೪॥

ನಾನು ನಿನ್ನನ್ನು ಸುರಥನ ಪುತ್ರನೆಂದೂ, ನಿನ್ನನ್ನು ಮನುಷ್ಯರು ಕೋಟಿಕಾಶ್ಯನೆಂದು ಕರೆಯುತ್ತಾರೆಂದೂ ತಿಳಿದಿದ್ದೇನೆ. ಆದ್ದರಿಂದ ಎಲೈ ಶೈಬ್ಯನೇ ನಿನಗೆ ಅದಕ್ಕೆ ಅನುಗುಣವಾಗಿ ನಾನು ನನ್ನ ಪ್ರಸಿದ್ಧವಾದ ಕುಲವನ್ನು ಮತ್ತು ಬಂಧುಗಳನ್ನೂ ಹೇಳುತ್ತೇನೆ.

ಅಪತ್ಯಮಸ್ಮಿ ದ್ರುಪದಸ್ಯ ರಾಜ್ಞಃ
ಕೃಷ್ಣೇತಿ ಮಾಂ ಶೈಬ್ಯ ವಿದುರ್ಮನುಷ್ಯಾಃ ।
ಸಾಽಹಂ ವೃಣೇ ಪಂಚ ಜನಾನ್ ಪತಿತ್ವೇ
ಯೇ ಖಾಂಡವಪ್ರಸ್ಥಗತಾಃ ಶ್ರುತಾಸ್ತೇ ॥೫॥

ಶೈಬ್ಯನೇ, ನಾನು ದ್ರುಪದ ರಾಜನ ಪುತ್ರಿ . ನನ್ನನ್ನು ಕೃಷ್ಣಾ ಎಂದು ಮನುಷ್ಯರು ಕರೆಯುತ್ತಾರೆ. ನೀನು ಕೇಳಿದ್ದರೆ ನಾನು ಇಂದ್ರಪ್ರಸ್ಥ ನಿವಾಸಿಗಳಾದ ಐದು ಜನರನ್ನು ಪತಿಗಳಾಗಿ ವರಿಸಿದ್ದೇನೆ.

ಯುಧಿಷ್ಠಿರೋ ಭೀಮಸೇನಾರ್ಜುನೌ ಚ
ಮಾದ್ರ್ಯಾಶ್ಚ ಪುತ್ರೌ ಪುರುಷಪ್ರವೀರೌ ।
ತೇ ಮಾಂ ನಿವೇಶ್ಯೇಹ ದಿಶಶ್ಚತಸ್ರೋ
ವಿಭಜ್ಯ ಪಾರ್ಥಾ ಮೃಗಯಾಂ ಪ್ರಯಾತಾಃ ॥೬॥

ಯುಧಿಷ್ಠಿರ, ಭೀಮಸೇನ, ಅರ್ಜುನ ಮತ್ತು ಮಾದ್ರೀಪುತ್ರರಾದ ಪುರುಷ ಪ್ರವೀರರಾದ ನಕುಲಸಹದೇವರು ಅವರು ನನ್ನನ್ನು ಇಲ್ಲಿ ಇಟ್ಟು ವಿಭಾಗವನ್ನು ಮಾಡಿಕೊಂಡು ನಾಲ್ಕು ದಿಕ್ಕುಗಳಿಗೂ ಬೇಟೆಗಾಗಿ ಹೋಗಿದ್ದಾರೆ.

ಪ್ರಾಚೀಂ ರಾಜಾ ದಕ್ಷಿಣಾಂ ಭೀಮಸೇನೋ
ಜಯಃ ಪ್ರತೀಚೀಂ ಯಮಜಾವುದೀಚೀಮ್ ।
ಮನ್ಯೇ ತು ತೇಷಾಂ ರಥಸತ್ತಮಾನಾಂ
ಕಾಲೋಬಹು ಪ್ರಾಪ್ತ ಇಹೋಪಯಾತುಮ್ ॥೭॥

ಯುಧಿಷ್ಠಿರನು ಪೂರ್ವದಿಕ್ಕಿಗೂ, ಭೀಮಸೇನನು ದಕ್ಷಿಣ ದಿಕ್ಕಿಗೂ, ಅರ್ಜುನನು ಪಶ್ಚಿಮದಿಕ್ಕಿಗೂ, ನಕುಲಸಹದೇವರು ಉತ್ತರದಿಕ್ಕಿಗೂ, ರಥಶ್ರೇಷ್ಠರಾದ (ಮಹಾರಥರಾದ) ಅವರು ಹೋಗಿ ಬಹಳ ಕಾಲವಾಗಿರುವುದರಿಂದ ಈಗ ಇನ್ನೇನು ಬರುವ ಸಮಯ ಎಂದು ನಾನು ತಿಳಿದಿದ್ದೇನೆ.

ಸಮ್ಮಾನಿತಾ ಯಾಸ್ಯಥ ತೈರ್ಯಥೇಷ್ಟಂ
ವಿಮುಚ್ಯ ವಾಹಾನವರೋಹಯಧ್ವಮ್ ।
ಪ್ರಿಯಾತಿಥಿರ್ಧರ್ಮಸುತೋ ಮಹಾತ್ಮಾ
ಪ್ರೀತೋ ಭವಿಷ್ಯತ್ಯಭಿವೀಕ್ಷ್ಯ ಯುಷ್ಮಾನ್ ॥೮॥

ನೀವು ಅವರಿಂದ ಸಮ್ಮಾನಿತರಾಗಿ ಹೋಗುವವರಾಗಿರಿ. ಅಶ್ವಗಳನ್ನು ಬಿಡಿಸಿ ರಥಗಳಿಂದ ಇಳಿಯಿರಿ. ಮಹಾತ್ಮನಾದ ಧರ್ಮಪುತ್ರನು ಅತಿಥಿಪ್ರಿಯನಾದವನು ನಿಮ್ಮನ್ನು ನೋಡಿ ಅವನು ಸಂತೋಷಪಡುವನು.

ಏತಾವದುಕ್ತ್ವಾ ದ್ರುಪದಾತ್ಮಜಾ ಸಾ
ಶೈಬ್ಯಾತ್ಮಜಂ ಚಂದ್ರಮುಖೀ ಪ್ರತೀತಾ ।
ವಿವೇಶ ತಾಂ ಪರ್ಣಶಾಲಾಂ ಪ್ರಶಸ್ತಾಂ
ಸಂಚಿಂತ್ಯ ತೇಷಾಮತಿಥಿತ್ವಧರ್ಮಂ (ಮರ್ಥೇ) ॥೯॥

ಪ್ರಸಿದ್ಧಳಾದ ಚಂದ್ರಮುಖಿಯಾದ ಆ ದ್ರೌಪದಿಯು ಶೈಬ್ಯಪುತ್ರನಾದ ಕೋಟಿಕಾಶ್ಯನನ್ನು ಕುರಿತು ಇಷ್ಟು ಮಾತ್ರ ಹೇಳಿ ಅವರಿಗೆ ಮಾಡಬೇಕಾದ ಅತಿಥಿ ಧರ್ಮವನ್ನು ಚಿಂತಿಸಿ ಆ ಪ್ರಶಸ್ತವಾದ ಪರ್ಣಶಾಲೆಯನ್ನು ಪ್ರವೇಶಿಸಿದಳು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂಸಂಹಿತಾಯಾಂ ವೈಯಾಸಿಕ್ಯಾಂ
ವನಪರ್ವಣಿ ಚತುಃಪಂಚಾಶಾಧಿಕದ್ವಿಶತತಮೋऽಧ್ಯಾಯಃ ॥
॥ ಇತಿ ದ್ರೌಪದೀಹರಣಪರ್ವಣಿ ದೌಪದೀವಾಕ್ಯಂ ನಾಮ ತೃತೀಯೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವನಪರ್ವದಲ್ಲಿ ಇನ್ನೂರ ಐವತ್ತನಾಲ್ಕನೆಯ
ಅಧ್ಯಾಯ ಮುಗಿಯಿತು.

★ ★ ★ ★

ಇನ್ನೂರ ಐವತ್ತೈದನೆಯ ಅಧ್ಯಾಯ

ಕೋಟಿಕಾಶ್ಯನಿಂದ ದ್ರೌಪದಿಯ ತತ್ತ್ವವನ್ನು ತಿಳಿದ ಜಯದ್ರಥನಿಂದ ದ್ರೌಪದಿಗೆ ತನ್ನ ಪತ್ನಿಯಾಗುವಂತೆ ಒತ್ತಾಯ.

ವೈಶಂಪಾಯನಃ

ತಥಾऽऽಸೀನೇಷು ಸರ್ವೇಷು ತೇಷು ರಾಜಸು ಭಾರತ ।
ಕೋಟಿಕಾಶ್ಯೋ ಜಗಾಮಾಶು ಸಿಂಧುರಾಜ ನಿವೇಶನಮ್ ।
ಯದುಕ್ತಂ ಕೃಷ್ಣಯಾ ಸಾರ್ಧಂ ತತ್ಸರ್ವಂ ಪ್ರತ್ಯವೇದಯತ್ ॥೧॥

ವೈಶಂಪಾಯನ– ಎಲೈ ಭಾರತನೇ, ಎಲ್ಲ ರಾಜರೂ ಹಾಗೆ ಕುಳಿತಿರುವಾಗ ಕೋಟಿಕಾಶ್ಯನು ಶೀಘ್ರವಾಗಿ ಸಿಂಧುರಾಜನ ಬಿಡಾರಕ್ಕೆ ಹೋಗಿ ದ್ರೌಪದಿಯು ಹೇಳಿದ ಎಲ್ಲವನ್ನೂ ಅವನಿಗೆ ತಿಳಿಸಿದನು.

ಜಯದ್ರಥಃ

ಯದಾ ವಾಚಂ ವ್ಯಾಹರಂತ್ಯಾಮಸ್ಯಾಂ ಮೇ ರಮತೇ ಮನಃ ।
ಸೀಮಂತಿನೀನಾಂ ಮುಖ್ಯಾಯಾಂ ವಿನಿವೃತ್ತಃ ಕಥಂ ಭವಾನ್ ॥೨॥

ಜಯದ್ರಥ– ಸೀಮಂತಿನಿಯರಲ್ಲಿ ಶ್ರೇಷ್ಠಳಾದ ಅವಳು ಮಾತನಾಡುತ್ತಿರುವಾಗ ನನ್ನ ಮನಸ್ಸಿಗೆ ಇಷ್ಟು ಸಂತೋಷವಾಗುತ್ತಿರುವಾಗ ನೀನು ಅವಳನ್ನು ಬಿಟ್ಟು ಹೇಗೆ ಬಂದೆ?

ಏತಾಂ ದೃಷ್ಟ್ವಾ ಸ್ತ್ರಿಯೋ ಮೇऽನ್ಯಾ ಯಥಾ ಶಾಖಾಮೃಗಸ್ತ್ರಿಯಃ ।
ಪ್ರತಿಭಾಂತಿ ಮಹಾಬಾಹೋ ಸತ್ಯಮೇತದ್ ಬ್ರವೀಮಿ ತೇ ॥೩॥

ಎಲೈ ಮಹಾಬಾಹುವೇ, ಇವಳನ್ನು ನೋಡಿದ ಮೇಲೆ ನನಗೆ ಬೇರೆ ಸ್ತ್ರೀಯರು ಹೆಣ್ಣು ಕೋತಿಗಳಂತೆ ಕಾಣುತ್ತಿದ್ದಾರೆ. ಇದನ್ನು ನಿನಗೆ ಸತ್ಯವಾಗಿ ಹೇಳುತ್ತಿದ್ದೇನೆ.

ದರ್ಶನಾದೇವ ಹಿ ಮನಸ್ತಯಾ ಮೇऽಪಹೃತಂ ಭೃಶಮ್ ।
ತಾಂ ಸಮಾಚಕ್ಷ್ವ ಕಲ್ಯಾಣೀಂ ಯದಿ ಸ್ಯಾಚ್ಛ್ರೋತ್ರಿಯಾ ಮಾನುಷೀ ॥೪॥

ಅವಳ ದರ್ಶನದಿಂದಲೇ ನನ್ನ ಮನಸ್ಸು ಅವಳಿಂದ ಅಪಹೃತವಾಗಿದೆ. ಎಲೈ ಶೈಭ್ಯನೇ, ಅವಳು ಮನುಷ್ಯವನಿತೆಯಾಗಿದ್ದರೆ ಈ ವಿಷಯವನ್ನು ಹೇಳು.

ಕೋಟಿಕಃ

ಏಷಾ ವೈ ದ್ರೌಪದೀ ಕೃಷ್ಣಾ ರಾಜಪುತ್ರೀ ಯಶಸ್ವಿನೀ ।
ಪಂಚಾನಾಂ ಪಾಂಡುಪುತ್ರಾಣಾಂ ಮಹಿಷೀ ಸಮ್ಮತಾ ಭೃಶಮ್ ॥೫॥

ಕೋಟಿಕ– ಇವಳು ಯಶಸ್ವಿನಿಯಾದ ರಾಜಪುತ್ರಿಯಾದ ದ್ರುಪದನ ಮಗಳಾದ ಕೃಷ್ಣೆ. ಐದುಜನ ಪಾಂಡುಪುತ್ರರಿಗೂ ಚೆನ್ನಾಗಿ ಸಮ್ಮತಳಾದ ಪಟ್ಟಮಹಿಷಿ.

ಸರ್ವೇಷಾಂ ಚೈವ ಪಾರ್ಥಾನಾಂ ಪ್ರಿಯಾ ಬಹುಮತಾ ಸತೀ ।
ತಯಾಽಸಮೇತ್ಯ ಸೌವೀರ ಸೌವೀರಾಭಿಮುಖೋ ವ್ರಜ ॥೬॥

ಎಲ್ಲ ಪಾರ್ಥರಿಗೂ ಪ್ರಿಯಳಾದವಳು ಮತ್ತು ಗೌರವಿಸಲ್ಪಡುವವಳೂ ಆದ ಸಾಧ್ವೀ. ಎಲೈ ಸೌವೀರನೇ, ಅವಳನ್ನು ಭೇಟಿಯಾಗದೇ ಸೌವೀರದೇಶಕ್ಕೆ ತಿರುಗಿ ಹೋಗು.

ವೈಶಂಪಾಯನಃ

ಏವಮುಕ್ತಃ ಪ್ರತ್ಯುವಾಚ ಪಶ್ಯಾಮಿ ದ್ರೌಪದೀಮಿತಿ ।
ಪತಿಃ ಸೌವೀರಸಿಂಧೂನಾಂ ದುಷ್ಟಭಾವೋ ಜಯದ್ರಥಃ ॥೭॥

ವೈಶಂಪಾಯನ– ಹೀಗೆ ಹೇಳಲ್ಪಟ್ಟ ಸಿಂಧು ಸೌವೀರಪತಿಯಾದ ಜಯದ್ರಥನು ದುಷ್ಟಭಾವವನ್ನು ಹೊಂದಿ ನಾನು ದ್ರೌಪದಿಯನ್ನು ನೋಡುತ್ತೇನೆ ಎಂದು ಹೇಳಿದನು.

ಜಯದ್ರಥಃ

ಸ ಪ್ರವಿಶ್ಯಾಶ್ರಮಂ ಪುಣ್ಯಂ ಸಿಂಹಗೋಷ್ಠಂ ವೃಕೋ ಯಥಾ ।
ಆತ್ಮನಾ ಸಪ್ತಮಃ ಕೃಷ್ಣಾಮಿದಂ ವಚನಮಬ್ರವೀತ್ ॥೮॥

ಕುಶಲಂ ತೇ ವಹಾರೋಹೇ ಭರ್ತಾರಸ್ತೇಽಪ್ಯನಾಮಯಾಃ ।
ಯೇಷಾಂ ಕುಶಲಕಾಮಾಽಸಿ ತೇಽಪಿ ಕಚ್ಚಿದನಾಮಯಾಃ ॥೯॥

ತೋಳವು ಸಿಂಹದ ಗುಹೆಯನ್ನು ಪ್ರವೇಶಿಸುವಂತೆ ಅವನು ತನ್ನಿಂದ ಏಳನೆಯವನಾಗಿ ಆ ಪವಿತ್ರವಾದ ಆಶ್ರಮವನ್ನು ಪ್ರವೇಶಿಸಿ ದ್ರೌಪದಿಯನ್ನು ಕುರಿತು ವರಾರೋಹೆಯೇ, ನೀನು ಕುಶಲವೇ? ನಿನ್ನ ಪತಿಗಳು ಕ್ಷೇಮದಿಂದಿದ್ದಾರೆಯೇ? ನೀನು ಯಾರ ಕುಶಲವನ್ನು ಬಯಸುತ್ತೀಯೋ ಅವರು ಕುಶಲವಾಗಿದ್ದಾರೆಯೇ? ಎಂದು ಕೇಳಿದನು.

ದ್ರೌಪದೀ

ಕೌರವ್ಯಃ ಕುಶಲೀ ರಾಜಾ ಕುಂತೀಪುತ್ರೋ ಯುಧಿಷ್ಠಿರಃ ।
ಅಹಂ ಚ ಭ್ರಾತರಶ್ಚಾಸ್ಯ ಯಾಂಶ್ಚಾನ್ಯಾನ್ ಪರಿಪೃಚ್ಛಸಿ ॥೧೦॥

ದ್ರೌಪದೀ– ಕುರುವಂಶದಲ್ಲಿ ಜನಿಸಿದ ಕುಂತೀಪುತ್ರನಾದ ಯುಧಿಷ್ಠಿರ ರಾಜನು ಕುಶಲದಿಂದಿದ್ದಾನೆ. ನಾನು, ಅವನ ತಮ್ಮಂದಿರು ಮತ್ತು ನೀನು ಕೇಳುವ ಉಳಿದವರು ಎಲ್ಲರೂ ಕುಶಲದಿಂದಿದ್ದೇವೆ.

ಅಪಿ ತ್ವಂ ಕುಶಲೀ ರಾಜನ್ ಸಹಾಮಾತ್ಯಃ ಸಹಪ್ರಜಃ ।
ಅಪಿ ತೇ ಕುಶಲಂ ರಾಜನ್ ರಾಷ್ಟ್ರೇ ಕೋಶೇ ಬಲೇ ತಥಾ ॥೧೧॥

ಎಲೈ ರಾಜನೇ, ಪ್ರಜೆಗಳು ಮತ್ತು ಅಮಾತ್ಯರಿಂದ ಕೂಡಿದ ನೀನು ಕುಶಲನಾಗಿದ್ದೀಯಾ? ರಾಜನೇ, ನಿನ್ನ ರಾಷ್ಟ್ರದಲ್ಲಿ, ಕೋಶದಲ್ಲಿ ಮತ್ತು ಸೈನ್ಯದಲ್ಲಿ ಎಲ್ಲವೂ ಕುಶಲವೇ?

ಕಚ್ಚಿದೇಕಃ ಶಿಬೀನಾಥ್ಯಾನ್ ಸೌವೀರಾನ್ ಸಹ ಸಿಂಧುಭಿಃ ।
ಅನುತಿಷ್ಠಸಿ ಧರ್ಮೇಣ ಯೇ ಚಾನ್ಯೇ ವಿಜಿತಾಸ್ತ್ವಯಾ ॥೧೨॥

ನೀನೊಬ್ಬನೇ ಆಢ್ಯರಾದ ಶಿಬಿಗಳನ್ನೂ, ಸಿಂಧುಗಳಿಂದ ಸಹಿತರಾದ ಸೌವೀರರನ್ನೂ ಮತ್ತು ನೀನು ಜಯಿಸಿದ ಉಳಿದ ದೇಶದವರನ್ನೂ ಧರ್ಮದಿಂದ ನಡೆಸುತ್ತಿದ್ದೀಯಾ?

ಪಾದ್ಯಂ ಪ್ರತಿಗೃಹಾಣೇದಮಾಸನಂ ಚ ನೃಪಾತ್ಮಜ ।
ಮೃಗಾನ್‌ಪಂಚಾಶತಂ ಚೈವ ಪ್ರಾತರಾಶಂ ದದಾನಿ ತೇ ॥೧೩॥

ರಾಜಪುತ್ರನೇ, ಪಾದ್ಯವನ್ನು ಸ್ವೀಕರಿಸು. ಈ ಆಸನವನ್ನೂ ಸ್ವೀಕರಿಸು. ಐವತ್ತು ಮೃಗಗಳನ್ನು (ಮೃಗಗಳ ಮಾಂಸವನ್ನು) ನಿನಗೆ ಉಪಹಾರವಾಗಿ ಕೊಡುವೆನು.

ಏಣೇಯಾನ್ ಪೃಷತಾಂ ನ್ಯಂಕೂನ್ ಹರಿಣಾನ್ ಶರಭಾನ್ ಶಶಾನ್ ।
ಋಕ್ಷಾನ್ ರುರೂನ್ ಶಂಬರಾಂಶ್ಚ ಗವಯಾಂಶ್ಚ ಮೃಗಾನ್‌ಬಹೂನ್ ॥

ವರಾಹಾನ್ ಮಹಿಷಾಂಶ್ಚೈವ ಯಾಶ್ಚಾನ್ಯಾ ಮೃಗಜಾತಯಃ ।
ಪ್ರದಾಸ್ಯತಿ ಸ್ವಯಂ ತುಭ್ಯಂ ಕುಂತೀಪುತ್ರೋ ಯುಧಿಷ್ಠಿರಃ ॥೧೫॥

ಜಿಂಕೆಗಳು, ಪೃಷತ್ತುಗಳು, ನ್ಯಂಕುಗಳು, ಹರಿಣಗಳು, ಶರಭಗಳು, ಮೊಲಗಳು, ಕರಡಿಗಳು, ರುರುಗಳು, ಶರಭಗಳು, ಗವಯಗಳು ಇನ್ನೂ ಅನೇಕ ಮೃಗಗಳು, ವರಾಹಗಳು, ಮಹಿಷಗಳು ಇನ್ನು ಉಳಿದ ಮೃಗಜಾತಿಗಳು ಇವುಗಳ ಉಪಹಾರವನ್ನು ಕುಂತೀಪುತ್ರನಾದ ಯುಧಿಷ್ಠಿರನು ನಿನಗೆ ಸ್ವತಃ ಕೊಡುವನು.

ಜಯದ್ರಥಃ

ಕುಶಲಂ ಪ್ರಾತರಾಶಾಯ ಸರ್ವಂ ಮೇಽಪಚಿತಿಃ ಕೃತಾ ।
ಏಹಿ ಮೇ ರಥಮಾರೋಹ ಸುಖಮಾಪ್ನುಹಿ ಕೇವಲಮ್ ॥೧೬॥

ಜಯದ್ರಥ– ನಿನ್ನ ಉಪಹಾರವು ಕ್ಷೇಮದಿಂದಿರಲಿ. ನನಗೆ ಎಲ್ಲಾ ಪೂಜೆಯೂ ಸಂಧಿದೆ. ಬಂದು ನನ್ನ ರಥವನ್ನು ಏರು. ನನ್ನ ಜೊತೆಯಲ್ಲಿ ಸುಖವನ್ನು ಹೊಂದು.

ಗತಶ್ರೀಕಾಂಶ್ಚ್ಯುತಾನ್ ರಾಜ್ಯಾತ್ ಕೃಪಣಾನ್ ಗತಚೇತಸಃ ।
ಅರಣ್ಯವಾಸಿನಃ ಪಾರ್ಥಾನ್ ನಾನುರೋದ್ಧುಂ ತ್ವಮರ್ಹಸಿ ॥೧೭॥

ಸಂಪತ್ತನ್ನು ಕಳೆದುಕೊಂಡು, ರಾಜ್ಯದಿಂದ ಚ್ಯುತರಾಗಿ, ಗತಚೇತನರಾಗಿ, ಕೃಪಣರಾಗಿ, ಅರಣ್ಯವಾಸವನ್ನು ಮಾಡುವ ಪಾಂಡವರನ್ನು ನೀನು ಅನುಸರಿಸುವುದು ಉಚಿತವಲ್ಲ.

ನೈವ ಪ್ರಾಜ್ಞಾ ಗತಶ್ರೀಕಂ ಭರ್ತಾರಮುಪಯುಂಜತೇ ।
ಯುಂಜಾನಮನುಯುಂಜೀತ ನ ಶ್ರಿಯಃ ಸಂಕ್ಷಯೇ ವಸೇತ್ ॥೧೮॥

ಪ್ರಾಜ್ಞರಾದವರು ಸಂಪತ್ತಿನಿಂದ ಹೀನರಾದ ಪತಿಯನ್ನು ಸೇವಿಸುವುದಿಲ್ಲ. ಯಾವನು ನಿನ್ನನ್ನು ಸೇವಿಸುತ್ತಾನೆಯೋ ಅಂತಹವನನ್ನು ಸೇವಿಸು. ಸಂಪತ್ತು ನಾಶವಾದ ಸ್ಥಳದಲ್ಲಿ ವಾಸವನ್ನು ಮಾಡಬಾರದು.

ಶ್ರಿಯಾ ವಿಹೀನಾ ರಾಷ್ಟ್ರಾಚ್ಚ ವಿನಷ್ಟಾಃ ಶಾಶ್ವತೀಃ ಸಮಾಃ ।
ಅಲಂ ತೇ ಪಾಂಡುಪುತ್ರಾಣಾಂ ಭಕ್ತ್ಯಾ ಕ್ಲೇಶಮುಪಾಸಿತುಮ್ ॥೧೯॥

ಸಂಪತ್ತಿನಿಂದ ವಿಹೀನರಾದ, ರಾಷ್ಟ್ರದಿಂದಲೂ ವಿಹೀನರಾದ, ಬಹುಕಾಲದವರೆ ವಿನಷ್ಟರಾದ ಪಾಂಡುಪುತ್ರರಲ್ಲಿ ಭಕ್ತಿಯನ್ನು ಮಾಡಿ ಅವರ ಸೇವೆಯನ್ನು ಮಾಡಿ ನೀನು ಕ್ಲೇಶವನ್ನು ಪಡುವುದು ಸಾಕು.

ಭಾರ್ಯಾ ಮೇ ಭವ ಸುಶ್ರೋಣಿ ತ್ಯಜೈನಾನ್ ಸುಖಮಾಪ್ನುಹಿ ।
ಅಖಿಲಾನ್ ಸಿಂಧುಸೌವೀರಾನಾಪ್ನುಹಿ ತ್ವಂ ಮಯಾ ಸಹ ॥೨೦॥

ಸುಶ್ರೋಣಿಯೇ, ನನ್ನ ಭಾರ್ಯೆಯಾಗು. ಈ ಪಾಂಡವರನ್ನು ಬಿಟ್ಟು ಸುಖವನ್ನು ಹೊಂದು. ನನ್ನ ಜೊತೆಯಲ್ಲಿ ಸಮಗ್ರವಾದ ಸಿಂಧುಸೌವೀರರಾಜ್ಯವನ್ನು ಹೊಂದುವವಳಾಗು.

ವೈಶಂಪಾಯನಃ

ಇತ್ಯುಕ್ತಾ ಸಿಂಧುರಾಜೇನ ವಾಕ್ಯಂ ಹೃದಯಕಂಪನಮ್ ।
ಕೃಷ್ಣಾ ತಸ್ಮಾದಪಾಕ್ರಾಮದ್ ದೇಶಾತ್ ಸಭ್ರುಕುಟೀಮುಖೀ ॥೨೧॥

ವೈಶಂಪಾಯನ– ಹೀಗೆ ಸಿಂಧುರಾಜನಿಂದ ಎದೆಯನ್ನು ನಡುಗಿಸುವ ಮಾತುಗಳನ್ನು ಕೇಳಿದ ದ್ರೌಪದಿಯು ಹುಬ್ಬುಗಳನ್ನು ಗಂಟಿಕ್ಕಿ ಆ ಪ್ರದೇಶದಿಂದ ದೂರಸರಿದಳು.

ಅವಮತ್ಯಾಸ್ಯ ತದ್ವಾಕ್ಯಮಾಕ್ಷಿಪ್ಯ ಚ ಸುಮಧ್ಯಮಾ ।
ಮೈವಮಿತ್ಯಬ್ರವೀತ್ ಕೃಷ್ಣಾ ಲಜ್ಜಸ್ವೇತಿ ಚ ಸೈಂಧವ ॥೨೨॥

ಸುಮಧ್ಯಮಳಾದ ದ್ರೌಪದಿಯು ಅವನ ಆ ವಾಕ್ಯಗಳನ್ನು ತಿರಸ್ಕರಿಸಿ ಮತ್ತು ನಿಂದಿಸಿ, ಸೈಂಧವನೇ, ಹೀಗೆ ಮಾತನಾಡಬೇಡ. ನೀನು ನಾಚಿಕೆಯನ್ನು ಪಡಬೇಕು ಎಂದು ಹೇಳಿದಳು.

ಸಾ ಕಾಂಕ್ಷಮಾಣಾ ಭರ್ತೄಣಾಮುಪಯಾನಮನಿಂದಿತಾ ।
ವಿಲೋಭಯಾಮಾಸ ಪರಂ ವಾಕ್ಯೈರ್ವಾಕ್ಯಾನಿ ಯುಂಜತೀ ।
ನೈವಂ ವದ ಮಹಾಬಾಹೋ ನ್ಯಾಯ್ಯಂ ತ್ವಂ ನ ಚ ಮನ್ಯಸೇ ॥೨೩॥

ಭರ್ತೃಗಳ ಆಗಮನವನ್ನು ನಿರೀಕ್ಷಿಸುತ್ತಿದ್ದ ಅನಿಂದಿತೆಯಾದ ಆ ದ್ರೌಪದಿಯು ಅವನ ವಾಕ್ಯಗಳಿಗೆ ಅನುರೂಪವಾದ ವಾಕ್ಯಗಳನ್ನು ಜೋಡಿಸಿ ಅವನನ್ನು ವಿಲೋಭಗೊಳಿಸಿದಳು. ಮಹಾಬಾಹುವೇ, ಹೀಗೆ ಮಾತನಾಡಬೇಡ. ನಿನಗೆ ನ್ಯಾಯಮಾರ್ಗವು ಕಾಣುತ್ತಿಲ್ಲ.

ದ್ರೌಪದೀ

ಪಾಂಡೂನಾಂ ಧಾರ್ತರಾಷ್ಟ್ರಾಣಾಂ ಸ್ವಸಾ ಚೈವ ಕನೀಯಸೀ ।
ದುಃಶಲಾ ನಾಮ ತಸ್ಯಾಸ್ತ್ವಂ ಭರ್ತಾ ರಾಜಕುಲೋದ್ವಹ ॥೨೪॥

ಎಲೈ ರಾಜಕುಲೋದ್ವಹನೇ, ಪಾಂಡವರಿಗೂ ಮತ್ತು ಧಾರ್ತರಾಷ್ಟ್ರರಿಗೂ ತಂಗಿಯಾದವಳು ದುಃಶಲೆ. ನೀನು ಅವಳ ಪತಿ.

ಮಮ ಭ್ರಾತಾ ಚ ನ್ಯಾಯ್ಯೇನ ತ್ವಯಾ ರಕ್ಷ್ಯಃ ಮಹಾರಥ ।
ಧರ್ಮಿಷ್ಠಾನಾಂ ಕುಲೇ ಜಾತೋ ನ ಧರ್ಮಂ ತ್ವಮವೇಕ್ಷಸೇ ॥೨೫॥

ಎಲೈ ಮಹಾರಥನೇ, ನೀನು ನ್ಯಾಯವಾಗಿ ನೋಡಿದರೆ ನನ್ನ ಸಹೋದರ. ನಾನು ನಿನ್ನಿಂದ ರಕ್ಷಿಸಲ್ಪಡಬೇಕಾದವಳು. ಧರ್ಮಿಷ್ಠರ ಕುಲದಲ್ಲಿ ಹುಟ್ಟಿ ನೀನು ಧರ್ಮವನ್ನು ಕಾಣುತ್ತಿಲ್ಲ (ಎಂದು ಹೇಳಿದಳು).

ವೈಶಂಪಾಯನಃ

ಇತ್ಯುಕ್ತಃ ಸಿಂಧುರಾಜೋಽಥ ವಾಕ್ಯಮುತ್ತರಮಬ್ರವೀತ್ ॥೨೬॥

ರಾಜ್ಞಾಂ ಧರ್ಮಂ ನ ಜಾನೀಷೇ ಸ್ತ್ರಿಯೋ ರತ್ನಾನಿ ಚೈವ ಹಿ ।
ಸಾಧಾರಣಾನಿ ಲೋಕೇಽಸ್ಮಿನ್ ಪ್ರವದಂತಿ ಮನೀಷಿಣಃ ॥೨೭॥

ವೈಶಂಪಾಯನ– ಹೀಗೆ ಹೇಳಲ್ಪಟ್ಟ ಸಿಂಧುರಾಜನು ನಿನಗೆ ರಾಜಧರ್ಮವು ತಿಳಿದಿಲ್ಲ. ಸ್ತ್ರೀಯರು ಮತ್ತು ರತ್ನಗಳು ಈ ಲೋಕದಲ್ಲಿ ಎಲ್ಲರಿಗೂ ಸೇರಿದವುಗಳು ಎಂದು ವಿವೇಕಿಗಳು ಹೇಳುತ್ತಾರೆ.

ಸ್ವಸಾ ಚ ಸ್ವಸ್ರಿಯಾ ಚೈವ ಭ್ರಾತೃಭಾರ್ಯಾ ತಥೈವ ಚ ।
ಸುಖಂ ಗೃಹ್ಣಂತಿ ರಾಜಾನಸ್ತಾಶ್ಚ ತತ್ರ ನೃಪೋದ್ಭವಾಃ ॥೨೮॥

ತಂಗಿಯರು, ತಂಗಿಯ ಮಗಳು ಹಾಗೆಯೇ ಸೋದರನ ಪತ್ನಿ ಇವರನ್ನು ರಾಜರು ಸುಖವಾಗಿ ಸ್ವೀಕರಿಸುತ್ತಾರೆ. ಆ ರಾಜಕುಲದಲ್ಲಿ ಹುಟ್ಟಿದ ಸ್ತ್ರೀಯರೂ ಸಹ ರಾಜರನ್ನು ಸುಖವಾಗಿ ಸ್ವೀಕರಿಸುತ್ತಾರೆ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂಸಂಹಿತಾಯಾಂ ವೈಯಾಸಿಕ್ಯಾಂ
ವನಪರ್ವಣಿ ಪಂಚಪಂಚಾಶಾಧಿಕದ್ವಿಶತತಮೋಽಧ್ಯಾಯಃ ॥
॥ ಇತಿ ದ್ರೌಪದೀಹರಣಪರ್ವಣಿ ದ್ರೌಪದೀ ಜಯದ್ರಥ ಸಂವಾದೋ ನಾಮ
ಚತುರ್ಥೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವನಪರ್ವದಲ್ಲಿ ಇನ್ನೂರ ಐವತ್ತೈದನೆಯ
ಅಧ್ಯಾಯ ಮುಗಿಯಿತು.

★ ★ ★ ★

ಇನ್ನೂರ ಐವತ್ತಾರನೆಯ ಅಧ್ಯಾಯ

ದ್ರೌಪದಿಯಿಂದ ಜಯದ್ರಥನ ನಿಂದನೆ. ಉತ್ತರೀಯವನ್ನು ಹಿಡಿದ
ಅವನ ಅಧಃಪತನ. ದ್ರೌಪದಿಯಿಂದ ಸ್ವತಃ ರಥಾರೋಹಣ.

ವೈಶಂಪಾಯನಃ

ಸರೋಷರಾಗೋಪಹತೇನ ವಲ್ಗುನಾ
ಸರಾಗನೇತ್ರೇಣ ನತೋನ್ನತಭ್ರುವಾ ।
ಮುಖೇನ ವಿಸ್ಫೂರ್ಯ ಸುವೀರರಾಷ್ಟ್ರಪಂ
ತತೋಽಬ್ರವೀತ್ತಂ ದ್ರುಪದಾತ್ಮಜಾ ಪುನಃ ॥೧॥

ವೈಶಂಪಾಯನ– ಆಗ ರೋಷದಿಂದ ಉಪಹತವಾದ ಸುಂದರವಾದ ಕೆಂಪಾದ ಕಣ್ಣುಗಳಿಂದಲೂ, ನತೋನ್ನತವಾದ ಹುಬ್ಬುಗಳಿಂದಲೂ, ಅದರುವ ತುಟಿಗಳಿಂದಲೂ ಕೂಡಿದ ದ್ರುಪದಾತ್ಮಜೆಯು ಪುನಃ ಸೌವೀರಾದಿಪತಿಯಾದ ಅವನನ್ನು ಕುರಿತು ಮಾತನಾಡಿದಳು.

ದ್ರೌಪದೀ

ಯಶಸ್ವಿನಸ್ತೀಕ್ಷ್ಣವಿಷಾನ್ ಮಹಾರಥಾನ್
ಅಭಿಬ್ರುವನ್ ಮೂಢ ನ ಲಜ್ಜಸೇ ಕಥಮ್ ।
ಮಹೇಂದ್ರಕಲ್ಪಾನ್ನಿರತಾನ್ ಸ್ವಕರ್ಮಸು
ಸ್ಥಿತಾನ್ ಸಮೂಹೇಷ್ವಪಿ ಯಕ್ಷರಕ್ಷಸಾಮ್ ॥೨॥

ದ್ರೌಪದೀ– ಎಲೈ ಮೂಢನೇ, ಯಶಸ್ವಿಗಳೂ, ತೀಕ್ಷ್ಣವಿಷವುಳ್ಳವರೂ, ಮಹಾರಥರೂ ಆದ ನನ್ನ ಪತಿಗಳ ವಿಷಯದಲ್ಲಿ ಹೀಗೆ ಕೆಟ್ಟ ಮಾತನಾಡುವ ನಿನಗೆ ನಾಚಿಕೆಯಾಗುವುದಿಲ್ಲವೆ? ಅವರು ತಮ್ಮ ತಮ್ಮ ಕರ್ಮಗಳಲ್ಲಿ ನಿರತರಾದವರು, ಮಹೇಂದ್ರನಿಗೆ ಸದೃಶರಾದವರು ಮತ್ತು ಯಕ್ಷರಾಕ್ಷಸರ ಸಮೂಹದೆದುರಿಗೂ ಅಲುಗಾಡದೇ ನಿಲ್ಲುವವರು.

ನ ಕಿಂಚಿದೀಡ್ಯಂ ಪ್ರವದಂತಿ ಪಾಪಂ
ವನೇಚರಂ ವಾ ಗೃಹಮೇಧಿನಂ ವಾ ।
ತಪಸ್ವಿನಂ ಸಂಪರಿಪೂರ್ಣವಿದ್ಯಂ
ಭಷಂತಿ ಹ್ಯೇವಂ ಶ್ವನರಾಃ ಸುವೀರ ॥೩॥

ಪ್ರಶಂಶನೀಯನಾದ ವ್ಯಕ್ತಿಯು ಕಾಡಿನಲ್ಲಿರಲಿ ಅಥವಾ ಗೃಹದಲ್ಲಿರಲಿ ತಪಸ್ವಿಯೂ, ಪರಿಪೂರ್ಣವಿದ್ಯೆಯುಳ್ಳವನೂ ಆದವನ ವಿಷಯದಲ್ಲಿ ಕೆಟ್ಟದ್ದನ್ನು ಮಾತನಾಡುವುದಿಲ್ಲ. ಎಲೈ ಸೌವೀರನೇ, ನಾಯಿಯಂತಹ ಮನುಷ್ಯರು ಹೀಗೆ ಬೊಗಳುತ್ತಾರೆ.

ಅಹಂ ತು ಮನ್ಯೇ ತವ ನಾಸ್ತಿ ಕಶ್ಚಿತ್
ಏತಾದೃಶೇ ಕ್ಷತ್ರಿಯಸಂನಿವೇಶೇ ।
ಯಸ್ತ್ವಾಽದ್ಯ ಪಾತಾಳಮುಖೇ ಪತಂತಂ
ಪಾಣೌ ಗೃಹೀತ್ವಾ ಪ್ರತಿಸಂಹರೇತ ॥೪॥

ಪಾತಾಳಮುಖದಲ್ಲಿ ಬೀಳುವ ನಿನ್ನನ್ನು ಈ ದಿನ ಕೈಯಲ್ಲಿ ಹಿಡಿದು ನಿಲ್ಲಿಸುವ ವ್ಯಕ್ತಿಯು ಇಂತಹ ಕ್ಷತ್ರಿಯಸಮೂಹದಲ್ಲಿ ಯಾರೂ ಇಲ್ಲವೆಂದು ತೋರುತ್ತದೆ.

ನಾಗಂ ಪ್ರಭಿನ್ನಂ ಗಿರಿಕೂಟಕಲ್ಪಮ್
ಉಪತ್ಯಕಾಂ ಹೈಮವತೀಂ ಚರಂತಮ್ ।
ದಂಡೀವ ಯೂಥಾದಪಸೇಧಸಿ ತ್ವಂ
ಯೋ ಜೇತುಮಾಶಂಸಸಿ ಧರ್ಮರಾಜಮ್ ॥೫॥

ಹಿಮಾಲಯದ ಸಮೀಪದಲ್ಲಿ ಸಂಚರಿಸುವ ಪರ್ವತ ಶಿಖರದಂತಿರುವ ಮದ್ದಾನೆಯನ್ನು ಕೈಯಲ್ಲಿಕೋಲನ್ನು ಹಿಡಿದು ಓಡಿಸುವವನಂತೆ ನೀನು ಧರ್ಮರಾಜನನ್ನು ಗೆಲ್ಲಲು ಬಯಸುತ್ತಿದ್ದೀಯೆ.

ಬಾಲ್ಯಾತ್ ಪ್ರಸುಪ್ತಸ್ಯ ಮಹಾಬಲಸ್ಯ
ಸಿಂಹಸ್ಯ ಪಕ್ಷ್ಮಾಣಿ ಮುಖಾಲ್ಲುನಾಸಿ ।
ಪದಾ ಸಮಾಹತ್ಯ ಪಲಾಯಮಾನಃ
ಕ್ರುದ್ಧಂ ಯದಾ ದ್ರಕ್ಷ್ಯಸಿ ಭೀಮಸೇನಮ್ ॥೬॥

ನೀನು ಯಾವಾಗ ಕ್ರುದ್ಧನಾದ ಭೀಮಸೇನನನ್ನು ನೋಡುವಿಯೋ ಆಗ ಮಹಾಬಲವುಳ್ಳ ಪ್ರಸುಪ್ತವಾದ ಸಿಂಹವನ್ನು ಬಾಲಬುದ್ಧಿಯಿಂದ ಕಾಲಿನಿಂದ ಒದ್ದು ಅದರ ಮುಖದಿಂದ ರೆಪ್ಪೆಯನ್ನು ಕಿತ್ತು ಓಡುವವನ ಪರಿಸ್ಥಿತಿಯಂತೆಯೇ ನಿನ್ನ ಅವಸ್ಥೆಯೂ ಆಗುತ್ತದೆ.

ಮಹಾಬಲಂ ಘೋರತರಂ ಪ್ರವೃದ್ಧಂ
ಜಾತಂ ಹರಿಂ ಪರ್ವತಕಂದರೇಷು ।
ಪ್ರಸುಪ್ತಮುಗ್ರಂ ಪ್ರಪದೇನ ಹಂಸಿ
ಯಃ ಕ್ರುದ್ಧಮಾಯೋತ್ಸ್ಯಸಿ ಜಿಷ್ಣುಮುಗ್ರಮ್ ॥೭॥

ಯಾವ ನೀನು ಕ್ರುದ್ಧನಾದ ಉಗ್ರನಾದ ಅರ್ಜುನನ ಜೊತೆಯಲ್ಲಿ ಯುದ್ಧವನ್ನು ಮಾಡಲು ಬಯಸುತ್ತೀಯೋ ಅಂತಹ ನೀನು ಮಹಾಬಲವುಳ್ಳ ಘೋರತರವಾದ ಪರ್ವತದ ಕಂದರದಲ್ಲಿ ಜನಿಸಿ ಪೂರ್ಣವಾಗಿ ಬೆಳೆದ ಮಲಗಿದ ಸಿಂಹವನ್ನು ಕಾಲಿನಿಂದ ಒದ್ದುಕೊಲ್ಲಲು ಆಶಿಸುತ್ತೀಯೆ.

ಕೃಷ್ಣೋರಗೌ ತೀಕ್ಷ್ಣಮುಖೌ ದ್ವಿಜಿಹ್ವೌ
ಮತ್ತಃ ಪದಾऽऽಕ್ರಾಮಸಿ ಪುಚ್ಛದೇಶೇ ।
ಯಃ ಪಾಂಡವಾಭ್ಯಾಂ ಪುರುಷೋತ್ತಮಾಭ್ಯಾಂ
ಜಘನ್ಯಜಾಭ್ಯಾಂ ಪ್ರಯುಯುತ್ಸಸೇ ತ್ವಮ್ ॥೮॥

ಯಾವ ನೀನು ಪಾಂಡವರಲ್ಲಿ ಅತಿಚಿಕ್ಕವರಾದ, ಪುರುಷೋತ್ತಮರಾದ ನಕುಲ ಸಹದೇವರ ಜೊತೆಯಲ್ಲಿ ಯುದ್ಧವನ್ನು ಮಾಡಲು ಬಯಸುತ್ತೀಯೋ ಅಂತಹ ನೀನು ತೀಕ್ಷ್ಣಮುಖವುಳ್ಳ, ಎರಡು ನಾಲಿಗೆಗಳುಳ್ಳ, ಎರಡು ಕೃಷ್ಣಸರ್ಪಗಳನ್ನು ಕೆಣಕಿ ಅವುಗಳ ಬಾಲದ ಮೇಲೆ ಮತ್ತನಾಗಿ ನಿಲ್ಲುತ್ತೀಯೆ.

ಯಥಾ ಚ ವೇಣುಃ ಕದಲೀ ನಲೋ ವಾ
ಫಲಂತ್ಯಭಾವಾಯ ನ ಭೂತಯೇತ್ಮನಃ ।
ತಥೈವ ಮಾಂ ತೈಃ ಪರಿರಕ್ಷ್ಯಮಾಣಾ–
ಮಾದಾಸ್ಯಸೇ ಕರ್ಕಟಕೀವಗರ್ಭಮ್ ॥೯॥

ಹೇಗೆ ಬಿದಿರಾಗಲೀ, ಬಾಳೆಯಾಗಲೀ, ನಲವೃಕ್ಷವಾಗಲೀ ತಮ್ಮ ನಾಶಕ್ಕಾಗಿಯೇ ಫಲವನ್ನು ಬಿಡುತ್ತವೆಯೋ, ತಮ್ಮ ಸಮೃದ್ಧಿಗಾಗಿ ಬಿಡುವುದಿಲ್ಲವೋ ಅದರಂತೆ ಆ ಪಾಂಡವರಿಂದ ರಕ್ಷಿಸಲ್ಪಡುವ ನನ್ನನ್ನು ಕರೆದುಕೊಂಡು ಹೋಗಲು ಬೇಳು ಗರ್ಭವನ್ನು ಧರಿಸಿದಂತೆ ಬಯಸುತ್ತೀಯೆ.

ಜಯದ್ರಥಃ

ಜಾನಾಮಿ ಕೃಷ್ಣೇ ವಿದಿತಂ ಮಮೈತದ್
ಯಥಾವಿಧಾಸ್ತೇ ನರದೇವಪುತ್ರ್ಯಾಃ ।
ನ ತ್ವೇವಮೇತೇನ ವಿಭೀಷಣೇನ ಶಕ್ಯಾ
ವಯಂ ತ್ರಾಸಯಿತುಂ ತ್ವಯಾऽದ್ಯ ॥೧೦॥

ಜಯದ್ರಥ– ಎಲೌ ದ್ರೌಪದಿಯೇ, ರಾಜಕುಮಾರರಾದ ನಿನ್ನ ಆ ಪತಿಗಳು ಎಂಥವರು ಎಂದು ನಾನು ತಿಳಿದಿದ್ದೇನೆ. ಇಂತಹ ಬೆದರಿಕೆಗಳಿಂದ ನೀನು ನನ್ನನ್ನು ಈ ದಿವಸ ಹೆದರಿಸಲು ಸಾಧ್ಯವಿಲ್ಲ.

ವಯಂ ಪುನಃ ಸಪ್ತದಶೇಷು ಕೃಷ್ಣೇ
ಕುಲೇಷು ಸರ್ವೇಽನವಮೇಷು ಜಾತಾಃ ।
ಷಡ್ಭ್ಯೋ ಗುಣೇಭ್ಯೋಽಭ್ಯಧಿಕಾ ವಿಹೀನಾನ್
ಮನ್ಯಾಮಹೇ ದ್ರೌಪದೀ ಪಾಂಡುಪುತ್ರಾನ್ ॥೧೧

ಎಲೌ ದ್ರೌಪದಿಯೇ, ನಾವಾದರೂ ಹದಿನೇಳು ಶ್ರೇಷ್ಠ ಕುಲದಲ್ಲಿ ಜನಿಸಿದ್ದೇವೆ. ಸಂಧಿವಿಗ್ರಹ ಮೊದಲಾದ ಆರು ರಾಜಗುಣಗಳಿಂದ ನಾವು ಉತ್ಕೃಷ್ಟರಾಗಿದ್ದೇವೆ. ದ್ರೌಪದಿಯೇ, ಪಾಂಡುಪುತ್ರರು ಹೀನರಾಗಿದ್ದಾರೆ ಎಂದು ನಾವು ಭಾವಿಸುತ್ತೇವೆ.

ಸಾ ಕ್ಷಿಪ್ರಮಾತಿಷ್ಠ ಗಜಂ ರಥಂ ವಾ
ನ ವಾಕ್ಯಮಾತ್ರೇಣ ವಯಂ ಹಿ ಶಕ್ಯಾಃ ।
ಆಶಂಸ ವಾ ತ್ವಂ ಕೃಪಣಂ ವದಂತೀ
ಸೌವೀರರಾಜಸ್ಯ ಪುನಃ ಪ್ರಸಾದಮ್ ॥೧೨॥

ಅಂತಹ ನೀನು ಬೇಗ ನನ್ನ ಗಜವನ್ನಾಗಲೀ ಅಥವಾ ನನ್ನ ರಥವನ್ನಾಗಲೀ ಏರು. ಕೇವಲ ಮಾತಿನಿಂದ ನನ್ನನ್ನು ನಿವಾರಿಸಲು ಶಕ್ಯವಿಲ್ಲ. ಅಥವಾ ಹೀಗೆ ಕಾರ್ಪಣ್ಯದಿಂದ ಮಾತನಾಡುತ್ತಾ ಸೌವೀರರಾಜನಾದ ನನ್ನ ಅನುಗ್ರಹವನ್ನು ಆಶಿಸುವವಳಾಗು.

ದ್ರೌಪದೀ

ಮಹಾಬಲಾ ಕಿಂತ್ವಿಹ ದುರ್ಬಲೇವ
ಸೌವೀರರಾಜಸ್ಯ ಮತಾಹಮಸ್ಮಿ ।
ನಾಹಂ ಪ್ರಮಾಥಾದಿಹ ಸಂಪ್ರತೀತಾ
ಸೌವೀರರಾಜಂ ಕೃಪಣಂ ವದೇಯಮ್ ॥೧೩॥

ದ್ರೌಪದೀ– ಮಹಾಬಲವುಳ್ಳ ನನ್ನನ್ನು ಸೌವೀರರಾಜನು ಇಂದು ಇಲ್ಲಿ ದುರ್ಬಲಳೆಂದು ತಿಳಿದಿದ್ದಾನೆ. ಅವನ ಘರ್ಷಣೆಗೆ ಒಳಗಾದ ನಾನು ಮನಸ್ಸಮಾಧಾನದಿಂದ ಸೌವೀರರಾಜನನ್ನು ಕುರಿತು ಯಾವ ದೈನ್ಯದ ಮಾತನ್ನೂ ಆಡುವುದಿಲ್ಲ.

ಯಸ್ಯಾ ಹಿ ಕೃಷ್ಣೌ ಪದವೀಂ ಚರೇತಾಂ
ಸಮಾಸ್ಥಿತಾವೇಕರಥೇ ಸಮೇತೌ ।
ಇಂದ್ರೋಽಪಿ ತಾಂ ನಾಪಹರೇತ್ ಕಥಂಚಿತ್
ಮನುಷ್ಯಮಾತ್ರಃ ಕೃಪಣಃ ಕುತೋಽನ್ಯಃ ॥೧೪॥

ಯಾವಳ ಮಾರ್ಗವನ್ನು ಒಂದೇ ರಥದಲ್ಲಿ ಕುಳಿತ ಇಬ್ಬರು ಕೃಷ್ಣರು (ಕೃಷ್ಣಾರ್ಜುನರು) ಅನುಸರಿಸಿ ರಕ್ಷಿಸುತ್ತಾರೆಯೋ ಅಂತಹ ನನ್ನನ್ನು ಇಂದ್ರನೂ ಯಾವ ಕಾರಣದಿಂದಲೂ ಅಪಹರಿಸಲಾರ. ಇನ್ನು ಕೃಪಣನಾದ ಒಬ್ಬ ಕೇವಲ ಮನುಷ್ಯನು ಹೇಗೆ ಅಪಹರಿಸಿಯಾನು?

ಯದಾ ಕಿರೀಟೀ ಪರವೀರಘಾತೀ
ನಿಘ್ನನ್ ರಥಸ್ಥೋ ದ್ವಿಷತಾಂ ಮನಾಂಸಿ ।
ಮದಂತರೇ ತ್ವದ್‌ಧ್ವಜಿನೀಂ ಪ್ರವೇಷ್ಟಾ
ಕಕ್ಷಂ ದಹನ್ನಗ್ನಿರಿವೋಷ್ಣಗೇಷು ॥೧೫॥

ಜನಾರ್ದನಃ ಸಾಂಧಕವೃಷ್ಣಿವೀರೋ
ಮಹೇಷ್ವಾಸಃ ಕೇಕಯಾಶ್ಚಾಪಿ ಸರ್ವೇ ।
ಏತೇ ಹಿ ಸರ್ವೇ ಮಮ ರಾಜಪುತ್ರಾಃ
ಪ್ರಹೃಷ್ಟರೂಪಾಃ ಪದವೀಂ ಚರೇಯುಃ ॥೧೬॥

ಯಾವಾಗ ಶತ್ರುವೀರಘಾತಿಯಾದ ಅರ್ಜುನನು ರಥದಲ್ಲಿ ಕುಳಿತು ಶತ್ರುಗಳ ಮನಸ್ಸನ್ನು ನಾಶಗೊಳಿಸುತ್ತಾ ನನ್ನ ನಿಮಿತ್ತದಿಂದಾಗಿ ನಿನ್ನ ಸೈನ್ಯವನ್ನು ಬೇಸಿಗೆ ಕಾಲದಲ್ಲಿ ಹುಲ್ಲುಗಾವಲನ್ನು ಪ್ರವೇಶಿಸುವ ಅಗ್ನಿಯಂತೆ ಪ್ರವೇಶಿಸುತ್ತಾನೆಯೋ ಆಗ ಅಂಧಕ ವೃಷ್ಣಿವೀರರ ಜೊತೆಯಲ್ಲಿ ಸೇರಿದ ಕೃಷ್ಣನೂ ಮಹಾಧನುರ್ಧಾರಿಯಾದ ಎಲ್ಲ ಕೈಕೇಯರೂ, ನನ್ನ ರಾಜಪುತ್ರರೂ ಎಲ್ಲರೂ ಸಂತೋಷದಿಂದ ಅವನನ್ನು ಹಿಂಬಾಲಿಸುವರು.

ಮೌರ್ವೀವಿಸೃಷ್ಟಾಃ ಸ್ತನಯಿತ್ನುಘೋಷಾ
ಗಾಂಡೀವಮುಕ್ತಾಸ್ತ್ವತಿವೇಗವಂತಃ ।
ಹಸ್ತಂ ಸಮಾಹತ್ಯ ಧನಂಜಯಸ್ಯ
ಭೀಮಾಃ ಶಬ್ದಂ ಘೋರತರಂ ನದಂತಿ ॥೧೭॥

ಅರ್ಜುನನ ಪಾಣಿತಲವನ್ನು ಸ್ಪರ್ಶಮಾಡಿ ಹೆದೆಯಿಂದ ಚಿಮ್ಮಿದ ಸಿಡಿಲಿನ ಘೋಷವನ್ನು ಹೊಂದಿರುವ ಗಾಂಡೀವ ಧನುಸ್ಸಿನಿಂದ ಹೊರಹೊಮ್ಮಿದ ಅತಿವೇಗಶಾಲಿಗಳಾದ ಧನಂಜಯನ ಬಾಣಗಳು ಭಯಂಕರ ಶಬ್ದವನ್ನು ಮಾಡುತ್ತಾ ಬಹಳ ಘೋರವಾಗಿ ಗರ್ಜಿಸುತ್ತವೆ.

ಗಾಂಡೀವಮುಕ್ತಾಂಶ್ಚ ಮಹಾಶರೌಘಾನ್
ಪತಂಗಸಂಘಾನಿವ ಶೀಘ್ರವೇಗಾನ್ ।
ಸಶಂಖಘೋಷಃ ಸತಲತ್ರಘೋಷೋ
ಗಾಂಡೀವಧನ್ವಾ ಮುಹುರುದ್ವಹಂಶ್ಚ ।
ಯದಾ ಶರಾನರ್ಪಯಿತಾ ತವೋರಸಿ
ತದಾ ಮನಸ್ತೇ ಕಮಿವಾಭವಿಷ್ಯತ್ ॥೧೮॥

ತನ್ನ ದೇವದತ್ತ ಶಂಖದ ಘೋಷದ ಜೊತೆಯಲ್ಲಿ ಮತ್ತು ಹಸ್ತರಕ್ಷಣೆಗಳ ಘೋಷದ ಜೊತೆಯಲ್ಲಿ ಗಾಂಡೀವ ಧನುಸ್ಸನ್ನು ಹೊಂದಿದ ಅರ್ಜುನನು ಆ ಧನುಸ್ಸನ್ನು ಎತ್ತಿ ಪತಂಗಗಳ ಸಮೂಹದಂತೆ ಶೀಘ್ರವೇಗವುಳ್ಳ ಗಾಂಡೀವ ಮುಕ್ತವಾದ ದೊಡ್ಡ ಬಾಣಗಳ ಸಮೂಹವನ್ನು ನಿನ್ನ ಎದೆಯಲ್ಲಿ ಅರ್ಪಿಸುತ್ತಾನೆಯೋ ಆಗ ನಿನ್ನ ಮನಸ್ಸು ಹೇಗಾದೀತು?

ಗದಾಹಸ್ತಂ ಭೀಮಮಭಿದ್ರವಂತಂ
ಮಾದ್ರೀಪುತ್ರೌ ಸಂಪತಂತೌ ದಿಶಶ್ಚ ।
ಅಮರ್ಷಜಂ ಕ್ರೋಧವಿಷಂ ವಮಂತೌ
ದೃಷ್ಟ್ವಾ ಚಿರಂ ತಾಪಮುಪೈಷ್ಯಸೇಽಧಮ ॥೧೯॥

ಎಲೈ ಅಧಮನೇ, ಕೈಯಲ್ಲಿ ಗದೆಯನ್ನು ಹಿಡಿದು ಮೇಲೇರಿಬರುತ್ತಿರುವ ಭೀಮಸೇನನನ್ನೂ ದಿಕ್ಕು ದಿಕ್ಕುಗಳಲ್ಲಿ ಕೋಪದಿಂದ ಉಂಟಾದ ವಿಷವನ್ನು ಕಾರುತ್ತಾ ನಿನ್ನ ಮೇಲೆ ಎರಗುವ ಮಾದ್ರಿಪುತ್ರರಾದ ನಕುಲಸಹದೇವರನ್ನೂ ನೋಡಿ ಬಹುಕಾಲ ತಾಪವನ್ನು ಹೊಂದುವಿ.

ಯಥಾ ಚಾಹಂ ನಾತಿಚರೇ ಕಥಂಚಿತ್
ಪತೀನ್ ಮಹಾರ್ಹಾನ್ ಮನಸಾಪಿ ಜಾತು ।
ತೇನಾದ್ಯ ಸತ್ಯೇನ ವಶೀಕೃತಂ ತ್ವಾಂ
ದ್ರಷ್ಟಾಸ್ಮಿ ಪಾರ್ಥೈಃ ಪರಿಕೃಷ್ಯಮಾಣಮ್ ॥೨೦॥

ನಾನು ಯಾವ ರೀತಿಯಲ್ಲಿ ಬಹಳ ಪೂಜ್ಯರಾದ ನನ್ನ ಪತಿಗಳನ್ನು ಮನಸ್ಸಿನಿಂದಲೂ ಅತಿಕ್ರಮಿಸುವುದಿಲ್ಲವೋ ಆ ಸತ್ಯದಿಂದ ನೀನು ಈ ದಿನ ಪಾಂಡವರಿಂದ ಎಳೆದಾಡಲ್ಪಡುವುದನ್ನು ನೋಡುವೆನು.

ನ ಸಂಭ್ರಮಂ ಗಂತುಮಹಂ ಹಿ ಶಕ್ಷ್ಯೇ
ತ್ವಯಾ ನೃಶಂಸೇನ ವಿಕೃಷ್ಯಮಾಣಾ ।
ಸಮಾಗತಾऽಹಂ ಹಿ ಕುರುಪ್ರವೀರೈಃ
ಪುನರ್ವನಂ ಕಾಮ್ಯಕಮಾಗತಾऽಸ್ಮಿ ॥೨೧॥

ಕ್ರೂರನಾದ ನಿನ್ನಿಂದ ಎಳೆಯಲ್ಪಟ್ಟು ನಾನು ಯಾವ ಕಳವಳವನ್ನೂ ಹೊಂದಲು ಸಾಧ್ಯವಾಗುವುದಿಲ್ಲ. ಕುರುಪ್ರವೀರರ ಜೊತೆಯಲ್ಲಿ ಸಮಾಗಮವನ್ನು ಹೊಂದಿ ನಾನು ಪುನಃ ಕಾಮ್ಯಕವನಕ್ಕೇ ಬರುವವಳಾಗುತ್ತೇನೆ.

ವೈಶಂಪಾಯನಃ

ಇತ್ಯೇವಮುಕ್ತಸ್ತು ಸ ಸಿಂಧುನಾಥಃ
ತಾಂ ದ್ರೌಪದೀಮಾಹ ವಿಶಾಲನೇತ್ರಾಮ್ ।
ಆರುಹ್ಯತಾಮಾಶು ರಥಂ ಮದೀಯಂ
ಮಾತ್ವಾಂ ಬಲಾದ್ ದ್ರೌಪದಿ ಕರ್ಷಯೇऽಹಮ್ ॥೨೨॥

ವೈಶಂಪಾಯನ– ಹೀಗೆ ಹೇಳಲ್ಪಟ್ಟ ಸೈಂಧವನು ವಿಶಾಲನೇತ್ರೆಯಾದ ದ್ರೌಪದಿಯನ್ನುದ್ದೇಶಿಸಿ ಬೇಗ ನನ್ನ ರಥವನ್ನು ಏರು. ಇಲ್ಲದಿದ್ದರೆ ನಾನು ಕೈಯಿಂದ ನಿನ್ನನ್ನು ಎಳೆಯಬೇಕಾದೀತು ಎಂದು ಹೇಳಿದನು.

ಸಾ ತಾನನುಪ್ರೇಕ್ಷ್ಯ ವಿಶಾಲನೇತ್ರಾ
ಜಿಘೃಕ್ಷಮಾಣಾನವಭರ್ತ್ಸಯಂತೀ ।
ಪ್ರೋವಾಚ ಮಾ ಮಾ ಸ್ಪೃಶತೇತಿ ಭೀತಾ
ಧೌಮ್ಯಂ ಪ್ರಚುಕ್ರೋಶ ಪುರೋಹಿತಂ ಸಾ ॥೨೩॥

ವಿಶಾಲನೇತ್ರೆಯಾದ ಅವಳು ತನ್ನನ್ನು ಹಿಡಿಯಲು ಬರುವ ಜಯದ್ರಥನನ್ನೂ, ಅವನ ಸೈನಿಕರನ್ನೂ ನೋಡಿ ಅವರನ್ನು ಗದರಿಸುತ್ತಾ ನನ್ನನ್ನು ಮುಟ್ಟಬೇಡಿ, ಮುಟ್ಟಬೇಡಿ ಎಂದು ಹೇಳಿ ಭಯದಿಂದ ಪುರೋಹಿತರಾದ ಧೌಮ್ಯರನ್ನು ಕೂಗಿ ಕರೆದಳು.

ಜಗ್ರಾಹ ತಾಮುತ್ತರವಸ್ತ್ರದೇಶೇ
ಜಯದ್ರಥಸ್ತಂ ಸಮವಾಕ್ಷಿಪತ್ ಸಾ ।
ತಯಾ ಸಮಾಕ್ಷಿಪ್ತತನುಃ ಸ ಪಾಪಃ
ಪಪಾತ ಶಾಖೀವ ನಿಕೃತ್ತಮೂಲಃ ॥೨೪॥

ಜಯದ್ರಥನು ಅವಳ ಉತ್ತರೀಯದಲ್ಲಿ ಹಿಡಿದನು. ಆಗ ಅವಳು ತನ್ನ ಉತ್ತರೀಯವನ್ನು ಕೊಡವಿದಳು. ಆಗ ಆ ಪಾಪಿಯು ಬುಡವನ್ನು ಕಡಿದ ಮರದಂತೆ ದೂರದಲ್ಲಿ ಹೋಗಿ ಬಿದ್ದನು.

ಪ್ರಗೃಹ್ಯಮಾಣಾ ತು ಮಹಾಜವೇನ
ಮುಹುರ್ವಿನಿಃಶ್ವಸ್ಯ ಚ ರಾಜಪುತ್ರೀ ।
ಸಾ ಕೃಷ್ಯಮಾಣಾ ರಥಮಾರುರೋಹ
ಧೌಮ್ಯಸ್ಯ ಪಾದಾವಭಿವಾದ್ಯ ಕೃಷ್ಣಾ ॥೨೫॥

ಅವನು ಪುನಃ ಮಹಾವೇಗದಿಂದ ಕೈಯನ್ನು ಹಿಡಿದು ಎಳೆಯಲು ಬರುತ್ತಿರಲು ರಾಜಕುಮಾರಿಯಾದ ದ್ರೌಪದಿಯು ಧೌಮ್ಯರ ಪಾದಗಳಿಗೆ ನಮಸ್ಕರಿಸಿ ತಾನೇ ರಥವನ್ನು ಏರಿದಳು.

ಧೌಮ್ಯಃ

ನೇಯಂ ಶಕ್ಯಾ ತ್ವಯಾ ನೇತುಮವಿಜಿತ್ಯ ಮಹಾರಥಾನ್ ।
ಧರ್ಮಂ ಕ್ಷತ್ರಸ್ಯ ಪೌರಾಣಮವೇಕ್ಷಸ್ವ ಜಯದ್ರಥ ॥೨೬॥

ಧೌಮ್ಯರು– ಜಯದ್ರಥನೇ, ಮಹಾರಥರನ್ನು ಜಯಿಸದೆ ಇವಳನ್ನು ನೀನು ಕರೆದುಕೊಂಡು ಹೋಗುವುದು ಸಾಧ್ಯವಿಲ್ಲ. ಪುರಾತನವಾದ ಕ್ಷತ್ರಿಯ ಧರ್ಮವನ್ನು ಗಮನಿಸು.

ಕ್ಷುದ್ರಂ ಕೃತ್ವಾ ಫಲಂ ಪಾಪಂ ತ್ವಂ ಪ್ರಾಪ್ಸ್ಯಸಿ ನ ಸಂಶಯಃ ।
ಆಸಾದ್ಯ ಪಾಂಡವಾನ್ ವೀರಾನ್ ಧರ್ಮರಾಜಪುರೋಗಮಾನ್ ॥

ನೀನು ನೀಚವಾದ ಕರ್ಮವನ್ನು ಮಾಡಿ ಧರ್ಮರಾಜ ಮೊದಲಾದ ವೀರರಾದ ಪಾಂಡವರನ್ನು ಸಂಧಿಸಿ ಆ ನೀಚಕರ್ಮದ ಫಲವನ್ನು ಹೊಂದುವಿ ಎಂಬ ವಿಷಯದಲ್ಲಿ ಸಂಶಯವಿಲ್ಲ.

ವೈಶಂಪಾಯನಃ

ಇತ್ಯುಕ್ತ್ವಾ ಹ್ರಿಯಮಾಣಾಂ ತಾಂ ರಾಜಪುತ್ರೀಂ ಯಶಸ್ವಿನೀಮ್ ।
ಅನ್ವಗಚ್ಛತ್ ತದಾ ಧೌಮ್ಯಃ ಪದಾತಿಗಣಮಧ್ಯಗಃ ॥೨೮॥

ವೈಶಂಪಾಯನ– ರಾಜಕುಮಾರಿಯಾದ ಯಶಸ್ವಿನಿಯಾದ ದ್ರೌಪದಿಯನ್ನು ಕುರಿತು ಹೀಗೆ ಹೇಳಿ ಧೌಮ್ಯರು ಅಪಹರಿಸಲ್ಪಡುತ್ತಿದ್ದ ಅವಳನ್ನು ಪದಾತಿಗಳ ಸಮೂಹದ ಮಧ್ಯದಲ್ಲಿ ಸೇರಿ ಹಿಂಬಾಲಿಸಿದರು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂಸಂಹಿತಾಯಾಂ ವೈಯಾಸಿಕ್ಯಾಂ
ವನಪರ್ವಣಿ ಷಟ್ಪಂಚಾಶಾಧಿಕದ್ವಿಶತತಮೋऽಧ್ಯಾಯಃ ॥
॥ ಇತಿ ದ್ರೌಪದೀಹರಣಪರ್ವಣಿ ದ್ರೌಪದ್ಯ ಸೈಂಧವರಥಾರೋಹಣಂ ನಾಮ
ಪಂಚಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವನಪರ್ವದಲ್ಲಿ ಇನ್ನೂರ ಐವತ್ತಾರನೆಯ
ಅಧ್ಯಾಯ ಮುಗಿಯಿತು.

★ ★ ★ ★

ಇನ್ನೂರ ಐವತ್ತೇಳನೆಯ ಅಧ್ಯಾಯ

ಬೇಟೆಗೆ ಹೊರಟ ಪಾಂಡವರಿಂದ ಅಪಶಕುನಗಳನ್ನು ಕಂಡು ಆಶ್ರಮಕ್ಕೆ ಪ್ರತಿನಿವೃತ್ತಿ. ದಾಸಿಯಿಂದ ದ್ರೌಪದಿಯ ವೃತ್ತಾಂತವನ್ನು ತಿಳಿದು ಜಯದ್ರಥನನ್ನು ಹಿಂಬಾಲಿಸಿ ಅವನ ದರ್ಶನ.

ವೈಶಂಪಾಯನಃ

ತತೋ ದಿಶಃ ಸಂಪ್ರವಿಹೃತ್ಯ ಪಾರ್ಥಾ
ಮೃಗಾನ್ ವರಾಹಾನ್ ಮಹಿಷಾಂಶ್ಚ ಹತ್ವಾ ।
ಧನುರ್ಧರಾಃ ಶ್ರೇಷ್ಠತಮಾಃ ಪೃಥಿವ್ಯಾಂ
ಪೃಥಕ್ಚರಂತಃ ಸಹಿತಾ ಬಭೂವುಃ ॥೧॥

ವೈಶಂಪಾಯನ– ಆಗ ಧನುರ್ಧರರೂ, ಅತ್ಯಂತ ಶೇಷ್ಠರೂ ಆದ ಆ ಪಾಂಡವರು ಬೇರೆ ಬೇರೆಯಾಗಿ ಆ ಕಾಡಿನಲ್ಲಿ ಎಲ್ಲ ದಿಕ್ಕುಗಳಲ್ಲಿಯೂ ವಿಹಾರವನ್ನು ಮಾಡಿ ಮೃಗಗಳನ್ನೂ, ವರಾಹಗಳನ್ನೂ, ಮಹಿಷಗಳನ್ನೂ ಕೊಂದು ಪುನಃ ಒಂದುಗೂಡಿದರು.

ತತೋ ಮೃಗವ್ಯಾಲಗಣಾನುಕೀರ್ಣಂ
ಮಹಾವನಂ ತದ್ ವಿಹಗೋಪಘುಷ್ಟಮ್ ।
ಭ್ರಾತ್ಸ್ಸಂಶ್ಚ ತಾನಭ್ಯವದದ್ ಯುಧಿಷ್ಠಿರಃ
ಶ್ರುತ್ವಾ ಗಿರೋ ವ್ಯಾಹರತಾಂ ಮೃಗಾಣಾಮ್ ॥೨॥

ಆಗ ಮೃಗಗಳ ಮತ್ತು ವ್ಯಾಲಗಳ ಸಮೂಹದಿಂದ ಸಂಕುಲವಾದ, ಪಕ್ಷಿಗಳ ನಾದದಿಂದ ತುಂಬಿದ, ಆ ಮಹಾವನವನ್ನು ನೋಡಿ ಅರಚುವ ಮೃಗಗಳ ಶಬ್ದವನ್ನು ಕೇಳಿ ಆ ತಮ್ಮಂದಿರನನ್ನು ಕುರಿತು ಯುಧಿಷ್ಠಿರನು ಮಾತನಾಡಿದನು.

ಆದಿತ್ಯದೀಪ್ತಾಂ ದಿಶಮಭ್ಯುಪೇತ್ಯ
ಮೃಗಾ ದ್ವಿಜಾಃ ಕ್ರೂರಮಿಮೇ ವದಂತಿ ।
ಆಯಾಸಮುಗ್ರಂ ಪ್ರತಿವೇದಯಂತೋ
ಮಹಾವನಂ ಶತ್ರುಭಿರ್ಬಾಧ್ಯಮಾನಮ್ ॥೩॥

ಆದಿತ್ಯನು ಬೆಳಗುವ ಪೂರ್ವದಿಕ್ಕನ್ನು ಸೇರಿ ಮೃಗಪಕ್ಷಿಗಳು ಕ್ರೂರವಾಗಿ ಶಬ್ದವನ್ನು ಮಾಡುತ್ತಿವೆ. ಇವು ಉಗ್ರವಾದ ಒಂದು ಕಷ್ಟದ ಸೂಚನೆಯನ್ನೂ ಮತ್ತು ಈ ಮಹಾವನವು ಶತ್ರುಗಳಿಂದ ಬಾಧಿಸಲ್ಪಡುತ್ತದೆ ಎಂಬ ಸೂಚನೆಯನ್ನೂ ಕೊಡುತ್ತಿವೆ.

ಕ್ಷಿಪ್ರಂ ನಿವರ್ತಧ್ವಮಲಂ ಮೃಗೈರ್ನೋ
ಮನೋ ಹಿ ಮೇ ದೂಯತಿ ದಹ್ಯತೇ ಚ ।
ಬುದ್ಧಿಂ ಸಮಾಚ್ಛಾದ್ಯ ಚ ಮೇ ಸಮನ್ಯು–
ರುದ್ಧೂಯತೇ ಪ್ರಾಣಪತಿಃ ಶರೀರೇ ॥೪॥

ಬೇಗ ಹಿಂದಿರುಗಿರಿ. ನಮಗೆ ಸಂಹರಿಸಲ್ಪಟ್ಟ ಮೃಗಗಳು ಸಾಕು. ನನ್ನ ಮನಸ್ಸು ದುಃಖಿಗೊಂಡು ದಹಿಸುತ್ತಿದೆ. ನನ್ನ ಬುದ್ಧಿಯನ್ನು ಆವರಿಸಿ ಕೋಪದಿಂದ ಕೂಡಿದ ಪ್ರಾಣನನ್ನು ಪತಿಯನ್ನಾಗಿ ಉಳ್ಳ ಅಗ್ನಿಯು ನನ್ನ ಶರೀರದಲ್ಲಿ ಮೇಲ್ಮುಖವಾಗಿ ಜ್ವಲಿಸುತ್ತಿದೆ.

ಸರಃ ಸುಪರ್ಣೇನ ಹೃತೋರಗೇಂದ್ರ–
ಮರಾಜಕಂ ರಾಜ್ಯಮಿವೇಹ ಶಾಸ್ತ್ರಮ್ ।
ಏವಂ ವಿಧಂ ಮೇ ಪ್ರತಿಭಾತಿ ಕಾಮ್ಯಕಂ
ಶೌಂಡೈರ್ಯಥಾ ಪೀತರಸಶ್ಚ ಕುಂಭಃ ॥೫॥

ಗರುಡನು ಸರ್ಪವನ್ನು ಅಪಹರಿಸಿದ ಮೇಲೆ ಇರುವ ಸರೋವರದಂತೆ, ಅರಾಜಕವಾದ ರಾಜ್ಯದಂತೆ, ಕಲಿಯುಗದ ಶಾಸ್ತ್ರಾಭ್ಯಾಸದಂತೆ, ಕುಶಲರೂ ರಸವನ್ನು ಕುಡಿದು ಎಸೆದ ಮಡಕೆಯಂತೆ (ಕೊಡದಂತೆ) ಈ ಕಾಮ್ಯಕವನವು ನನಗೆ ತೋರುತ್ತಿದೆ.

ವೈಶಂಪಾಯನಃ

ತೇ ಸೈಂಧವೈರತ್ಯನಿಲೋಗ್ರವೇಗೈರ್ಮಹಾಜವೈರ್ವಾಜಿಭಿರುಹ್ಯಮಾನಾಃ ।
ಯುಕ್ತೈರ್ಬೃಹದ್ಭಿಃ ಸುರಥೈರ್ನ್ಯವೀರಾಸ್ತದಾऽऽಶ್ರಮಾಯಾಭಿಮುಖಾ ಬಭೂವುಃ ॥೬॥

ವೈಶಂಪಾಯನ– ಆಗ ಆ ವೀರ ಸಿಂಧುದೇಶದಲ್ಲಿ ಜನಿಸಿದ ವಾಯುವಿನಂತೆ ಉಗ್ರವೇಗವುಳ್ಳ, ಮಹಾಜವವುಳ್ಳ ಕುದುರೆಗಳನ್ನು ಹೂಡಿದ ದೊಡ್ಡ ರಥಗಳಲ್ಲಿ ಸಂಚರಿಸುವವರಾಗಿ ಆಶ್ರಮಕ್ಕೆ ಅಭಿಮುಖವಾದರು.

ತೇಷಾಂ ತು ಗೋಮಾಯುರನಲ್ಪಘೋಷೋ
ನಿವರ್ತತಾಂ ವಾಮಮುಪೇತ್ಯ ಪಾರ್ಶ್ವಮ್ ।
ಪ್ರವ್ಯಾಹರತ್ತತ್ಪರಿಮೃಶ್ಯ ರಾಜಾ
ಪ್ರೋವಾಚ ಭೀಮಂ ಚ ಧನಂಜಯಂ ಚ ॥೭॥

ಅವರು ಹಾಗೆ ಹಿಂದಿರುಗಲು ಹೊರಟಾಗ ಅವರ ಎಡಭಾಗದಲ್ಲಿ ಒಂದು ನರಿಯು ದೊಡ್ಡದಾಗಿ ಶಬ್ದವನ್ನು ಮಾಡಿತು. ಧರ್ಮರಾಜನು ಅದನ್ನು ವಿಮರ್ಶೆ ಮಾಡಿ ಭೀಮ ಮತ್ತು ಅರ್ಜುನರನ್ನು ಕುರಿತು ಹೀಗೆ ಮಾತನಾಡಿದನು.

ಯದಾ ವದತ್ಯೇಷ ವಿಹೀನಯೋನಿಃ
ಶಾಲಾವೃಕೋ ವಾಮಮುಪೇತ್ಯ ಪಾರ್ಶ್ವಮ್ ।
ಸುವ್ಯಕ್ತಮಸ್ಮಾನವಮನ್ಯ ಪಾಪೈಃ
ಕೃತೋಽಭಿಮರ್ದಃ ಕುರುಭಿಃ ಪ್ರಸಹ್ಯ ॥೮॥

ಈ ನೀಚಯೋನಿಯಲ್ಲಿರುವ ನರಿಯು ನಮ್ಮ ಎಡಪಾರ್ಶ್ವಕ್ಕೆ ಬಂದು ಹೇಳುತ್ತಿರುವುದನ್ನು ನೋಡಿದರೆ ಪಾಪಿಷ್ಠರಾದ ಕುರುಗಳು ನಮ್ಮನ್ನು ಅವಮಾನ ಮಾಡಿ ಬಲದಿಂದ ನಮಗೆ ಏನೋ ಮರ್ದನೆಯನ್ನು ಮಾಡಿದ್ದಾರೆ ಎಂದು ಸ್ಪಷ್ಟವಾಗಿ ತೋರುತ್ತದೆ.

ಇತ್ಯೇವ ತೇ ತದ್ವನಮಾವಿಶಂತೋ
ಮಹತ್ಯರಣ್ಯೇ ಮೃಗಯಾಂ ಚರಿತ್ವಾ ।
ಬಾಲಾಮಪಶ್ಯಂತ ತದಾ ರುದಂತೀಂ
ಧಾತ್ರೇಯಿಕಾಂ ಪ್ರೇಷ್ಯವಧೂಂ ಪ್ರಿಯಾಯಾಃ ॥೯॥

ಹೀಗೆ ಅವರು ಮಹಾರಣ್ಯದಲ್ಲಿ ಬೇಟೆಯಾಡಿ ಆ ಕಾಡಿನಲ್ಲಿ ತಿರುಗಿ ಹಿಂದಿರುಗುತ್ತಾ ಆಶ್ರಮದ ಬಾಗಿಲಲ್ಲಿ ತಮ್ಮ ಪ್ರಿಯೆಯ ದಾಸಿಯ ಚಿಕ್ಕವಯಸ್ಸಿನ ಪುತ್ರಿಯು ಅಳುತ್ತಿರುವುದನ್ನು ನೋಡಿದರು.

ತಾಮಿಂದ್ರಸೇನಸ್ತ್ವರಿತೋಽಭಿಸೃತ್ಯ
ರಥಾದವಪ್ಲುತ್ಯ ತತೋಽಭ್ಯಧಾವತ್ ।

ಪ್ರೋವಾಚ ಚೈನಾಂ ವಚನಂ ನರೇಂದ್ರ
ಧಾತ್ರೇಯಿಕಾಮಂತಿತರಸ್ತದಾನೀಮ್ ॥೧೦॥

ಎಲೈ ನರೇಂದ್ರನೇ, ಆಗ ಧರ್ಮರಾಜನ ಸಾರಥಿಯಾದ ಇಂದ್ರಸೇನನು ರಥದಿಂದ ಧುಮುಕಿ ಶೀಘ್ರವಾಗಿ ಅವಳ ಬಳಿಗೆ ಓಡಿ ಅವಳ ಸಮೀಪದಲ್ಲಿ ನಿಂತು ಆಗ ಅವಳನ್ನು ಕುರಿತು ಹೀಗೆ ಮಾತನಾಡಿದನು.

ಕಿಂ ರೋದಿಷಿ ತ್ವಂ ಪತಿತಾ ಧರಣ್ಯಾಂ
ಕಿಂ ತೇ ಮುಖಂ ಶುಷ್ಯತಿ ದೀನವರ್ಣಮ್ ।
ಕಚ್ಚಿನ್ನ ಪಾಪೈಃ ಸುನೃಶಂಸಕೃದ್ಭಿಃ
ಪ್ರಮಾಥಿತಾ ದ್ರೌಪದೀ ರಾಜಪುತ್ರೀ ॥೧೧॥

ಏಕೆ ನೆಲದಲ್ಲಿ ಬಿದ್ದು ಅಳುತ್ತಿದ್ದೀಯೆ? ನಿನ್ನ ಮುಖವು ದೈನ್ಯದಿಂದ ಏಕೆ ಬಾಡಿಹೋಗಿದೆ? ಕ್ರೂರ ಕರ್ಮಿಗಳಾದ ಆ ಪಾಪಿಗಳು ರಾಜಕುಮಾರಿಯಾದ ದ್ರೌಪದಿಗೆ ಯಾವ ಅವಮಾನವನ್ನೂ ಮಾಡಿಲ್ಲವಷ್ಟೆ?

ಪರ್ಯಾಕುಲಾ ಸಾಧು ಸಮೀಕ್ಷ್ಯ ಸೂತ–
ಮಭ್ಯಾಪತಂತಂ ದ್ರುತಮಿಂದ್ರಸೇನಮ್ ।
ಉರೋ ಘ್ನತೀ ಕಷ್ಟತರಂ ತದಾನೀ–
ಮುಚ್ಚೈಃ ಪ್ರಚುಕ್ರೋಶ ಹತೇತಿ ದೇವೀ ॥೧೨॥

ವೈಶಂಪಾಯನ– ಗಾಬರಿಗೊಂಡಿದ್ದ ಆ ಧಾತ್ರೇಯಿ ಈಕೆಯು ಸೂತನಾದ ಇಂದ್ರಸೇನನು ಶೀಘ್ರವಾಗಿ ತನ್ನ ಕಡೆಗೆ ಬರುತ್ತಿರುವುದನ್ನು ನೋಡಿ ತನ್ನ ಎದೆಯನ್ನು ದುಃಖಕರವಾಗಿ ಬಡಿದುಕೊಂಡು ಆಗ ದ್ರೌಪದಿಯು ಅಪಹೃತಳಾಗಿದ್ದಾಳೆ ಎಂದು ಗಟ್ಟಿಯಾಗಿ ಕಿರುಚಿದಳು.

ಇಂದ್ರಸೇನಃ

ಅಚಿಂತ್ಯರೂಪಾ ತು ವಿಶಾಲನೇತ್ರಾ
ಶರೀರತುಲ್ಯಾ ಕುರುಪುಂಗವಾನಾಮ್ ।
ಕೇನಾತ್ಮನಾಶಾಯ ಪದಾऽಪನೀತಾ
ಛಿದ್ರಂ ಸಮಾಸಾದ್ಯ ನರೇಂದ್ರಪತ್ನೀ ॥೧೩॥

ಇಂದ್ರಸೇನ– ಅಚಿಂತ್ಯಲಾವಣ್ಯವತಿಯೂ, ವಿಶಾಲನೇತ್ರೆಯೂ, ಕುರುಶ್ರೇಷ್ಠರಿಗೆ ಶರೀರದಂತೆಯೂ ಇರುವ ಆ ನರೇಂದ್ರ ಪತ್ನಿಯನ್ನು ಯಾವನು ತನ್ನ ನಾಶಕ್ಕಾಗಿ ಒಂದು ಅವಕಾಶಕ್ಕಾಗಿ ಕಾಯ್ದು ಕಾಲಿನಿಂದ ನಡೆದುಬಂದು ಅಪಹರಿಸಿದ್ದಾನೆ?

ಯದ್ಯೇವ ದೇವೀ ಪೃಥಿವೀಂ ಪ್ರವಿಷ್ಟಾ
ದಿವಂ ಪ್ರಪನ್ನಾಪ್ಯಥವಾ ಸಮುದ್ರಮ್ ।
ತಸ್ಯಾ ಗಮಿಷ್ಯಂತಿ ಪದೇ ಹಿ ಪಾರ್ಥಾ
ಯಥಾ ಹಿ ಸಂತಪ್ಯತಿ ಧರ್ಮಪುತ್ರಃ ॥೧೪॥

ಧರ್ಮರಾಜನು ಸಂತಾಪ ಪಡುವುದನ್ನು ನೋಡಿದರೆ ಭೂಮಿಯ ಒಳಗೆ ಹುದುಗಿರಲಿ ಅಥವಾ ಅಂತರಿಕ್ಷದಲ್ಲಿರಲಿ ಅಥವಾ ಸಮುದ್ರದಲ್ಲಿ ಮುಳುಗಿರಲಿ ಪಾಂಡವರು ಅವಳನ್ನು ಹುಡುಕಿಯೇ ತೀರುತ್ತಾರೆ ಎಂದು ತೋರುತ್ತದೆ.

ಕೋ ಹೀದೃಶಾನಾಮರಿಮರ್ದನಾನಾಂ
ಕ್ಲೇಶಕ್ಷಮಾಣಾಮಪರಾಜಿತಾನಾಮ್ ।
ಪ್ರಾಣೈಃ ಸಮಾಮಿಷ್ಟತಮಾಂ ಜಿಹೀರ್ಷೇ–
ದನುತ್ತಮಂ ರತ್ನಮಿವ ಪ್ರಮೂಢಃ ॥೧೫॥

ಯಾವ ಮೂಢನು ತಾನೇ ಶತ್ರುಮರ್ದನರಾದ, ಕಷ್ಟಸಹಿಷ್ಣುಗಳಾದ, ಅಪರಾಜಿತರಾದ ಪಾಂಡವರಿಗೆ ಪರಮಪ್ರಿಯಳಾದ ಅತಿಶ್ರೇಷ್ಠ ರತ್ನದಂತಿರುವ ಇಂತಹ ದ್ರೌಪದಿಯನ್ನು ಅಪಹರಿಸಲು ಬಯಸಿಯಾನು?

ನ ಬುಧ್ಯತೇ ನಾಥವತೀಮಿಹಾದ್ಯ
ಬಹಿಶ್ಚರಂ ಹೃದಯಂ ಪಾಂಡವಾನಾಮ್ ।
ಕಸ್ಯಾದ್ಯ ಕಾಯಂ ಪ್ರತಿಭಿದ್ಯ ಘೋರಾ
ಮಹೀಂ ಪ್ರವೇಕ್ಷ್ಯಂತಿ ಶಿತಾಃ ಶರಾಗ್ರ್ಯಾಃ ॥೧೬॥

ಅವನು ದ್ರೌಪದಿಯು ಸನಾಥಳೆಂದೂ, ಪಾಂಡವರ ಹೊರಗೆ ಚಲಿಸುವ ಪಾಂಡವರ ಹೃದಯವೆಂದೂ ತಿಳಿದಿಲ್ಲ. ಈ ದಿನ ಹರಿತವಾದ ಮತ್ತು ಘೋರವಾದ ಬಾಣಗಳು ಯಾರ ಶರೀರವನ್ನು ಭೇದಿಸಿ ಭೂಮಿಯನ್ನು ಪ್ರವೇಶಿಸುವುವು?

ಮಾ ತ್ವಂ ಶುಚಸ್ತಾಂ ಪ್ರತಿ ಭೀರು ವಿದ್ಧಿ
ಯಥಾದ್ಯ ಕೃಷ್ಣಾ ಪುನರೇಷ್ಯತೀತಿ ।
ನಿಹತ್ಯ ಸರ್ವಾನ್ ದ್ವಿಷತಃ ಸಮಗ್ರಾನ್
ಪಾರ್ಥಾಃ ಸಮೇಷ್ಯಂತ್ಯಥ ಯಾಜ್ಞಸೇನ್ಯಾ ॥೧೭॥

ಎಲೈ ಭೀರುವೇ, ನೀನು ಅವಳನ್ನು ಕುರಿತು ಶೋಕಪಡಬೇಡ. ನಿಶ್ಚಯವಾಗಿ ದ್ರೌಪದಿಯು ಪುನಃ ಬರುವಳು. ಪಾರ್ಥರು ತಮ್ಮ ಶತ್ರುಗಳನ್ನೆಲ್ಲಾ ಕೊಂದು ದ್ರೌಪದಿಯ ಜೊತೆಯಲ್ಲಿ ಸಮಾಗಮವನ್ನು ಹೊಂದುವರು.

ವೈಶಂಪಾಯನಃ

ಅಥಾಬ್ರವೀಚ್ಚಾರು ಮುಖಂ ವಿಮೃಶ್ಯ(ಪ್ರಮೃಜ್ಯ)
ಧಾತ್ರೇಯಿಕಾ ಸಾರಥಿಮಿಂದ್ರಸೇನಮ್ ।
ಜಯದ್ರಥೇನಾಪಹೃತಾ ಪ್ರಮಥ್ಯ
ಪಂಚೇಂದ್ರಕಲ್ಪಾನ್ ಪರಿಭೂಯ ಕೃಷ್ಣಾ ॥೧೮॥

ಆಗ ಆ ಧಾತ್ರೇಯಿಕೆಯು ತನ್ನ ಸುಂದರವಾದ ಮುಖವನ್ನು ಒರೆಸಿಕೊಂಡು ಧರ್ಮರಾಜನ ಸಾರಥಿಯಾದ ಇಂದ್ರಸೇನನನ್ನು ಕುರಿತು ಇಂದ್ರಕಲ್ಪರಾದ ಐವರನ್ನು ಪರಿಭವಗೊಳಿಸಿ ಜಯದ್ರಥನು ಬಲಾತ್ಕಾರದಿಂದ ದ್ರೌಪದಿಯನ್ನು ಅಪಹರಿಸಿದನು ಎಂದು ಹೇಳಿದಳು.

ತಿಷ್ಠಂತಿ ವರ್ತ್ಮಾನಿ ನವಾನ್ಯಮೂನಿ
ವೃಕ್ಷಾಶ್ಚ ನ ಮ್ಲಾಂತಿ ತಥೈವ ಭಗ್ನಾಃ ।
ಆವರ್ತಯಧ್ವಂ ಹ್ಯನುಯಾತ ಶೀಘ್ರಂ
ನ ದೂರಯಾತೈವ ಹಿ ರಾಜಪುತ್ರೀ ॥೧೯॥

ಅವರು ಹೋದ ಮಾರ್ಗವು ಹಾಗೆಯೇ ಹೊಸದಾಗಿಯೇ ಇದೆ. ಅವರು ದಾರಿಯಲ್ಲಿ ಮುರಿದುಕೊಂಡು ಹೋದ ಮರಗಳು ಇನ್ನೂ ಒಣಗಿಲ್ಲ. ರಥಗಳನ್ನು ತಿರುಗಿಸಿ ನೀವು ಅವಳನ್ನು ಬೇಗ ಹಿಂಬಾಲಿಸಿ. ರಾಜಕುಮಾರಿಯಾದ ದ್ರೌಪದಿಯು ದೂರ ಹೋಗಿರಲು ಸಾಧ್ಯವಿಲ್ಲ.

ಸನ್ನಹ್ಯಧ್ವಂ ಸರ್ವ ಏವೇಂದ್ರಕಲ್ಪಾ
ಮಹಾಂತಿ ಚಾರೂಣಿ ಚ ದಂಸನಾನಿ ।
ಗೃಹ್ಣೀತ ಚಾಪಾನಿ ಮಹಾಧನಾನಿ
ಶರಾಂಶ್ಚ ಶೀಘ್ರಂ ಪದವೀಂ ಚರಧ್ವಮ್ ॥೨೦॥

ಇಂದ್ರಕಲ್ಪರಾದ ನೀವೆಲ್ಲರೂ ದೊಡ್ಡದಾದ ಮತ್ತು ಸುಂದರವಾದ ಕವಚಗಳನ್ನು ತೊಡಿ. ಬೆಲೆಬಾಳುವ ಬಿಲ್ಲುಗಳನ್ನು ಮತ್ತು ಬಾಣಗಳನ್ನು ತೆಗೆದುಕೊಳ್ಳಿ. ಶೀಘ್ರವಾಗಿ ಅವಳ ಮಾರ್ಗವನ್ನು ಹಿಡಿದು ಹೋಗಿ.

ಪುರಾ ಹಿ ನಿರ್ಭರ್ತ್ಸನದಂಡಮೋಹಿತಾ
ಪ್ರಮೋಹಚಿತ್ತಾ ವದನೇನ ಶುಷ್ಕತಾ ।
ದದಾತಿ ಕಸ್ಮೈಚಿದನರ್ಹತೇ ತನುಂ
ವರಾಜ್ಯಪೂರ್ಣಾಮಿವ ಭಸ್ಮನಿ ಸ್ರುಚಮ್ ॥೨೧॥

ಅವಳು ಒಣಗಿದ ಮುಖವುಳ್ಳವಳಾಗಿ ಚಿತ್ತಭ್ರಾಂತಿಗೆ ಒಳಗಾಗಿ ಬೆದರಿಕೆಯ ದಂಡಕ್ಕೆ ಹೆದರಿದವಳಾಗಿ ಆಜ್ಯದಿಂದ ಪೂರ್ಣವಾದ ಸ್ರುಚವನ್ನು ಭಸ್ಮದಲ್ಲಿ ಹಾಕಿದಂತೆ ತನ್ನ ದೇಹವನ್ನು ಅನರ್ಹನಾದ ಇನ್ನೊಬ್ಬನಿಗೆ ಒಪ್ಪಿಸುವುದಕ್ಕಿಂತಲೂ ಮೊದಲೇ ನೀವು ಅವಳ ಬಳಿಗೆ ಹೋಗಿ.

ಪುರಾ ತುಷಾಗ್ನಾವಿವ ಹೂಯತೇ ಹವಿಃ
ಪುರಾ ಶ್ಮಶಾನೇ ಸ್ರಗಿವಾಪವಿದ್ಧ್ಯತೇ ।
ಪುರಾ ಚ ಸೋಮೋऽಧ್ವರಗೋऽವಲಿಹ್ಯತೇ
ಶುನಾ ಯಥಾ ವಿಪ್ರಜನೇ ಪ್ರಮೋಹಿತೇ ॥೨೨॥

ಹೊಟ್ಟಿನ ರೂಪವಾದ ಅಗ್ನಿಯಲ್ಲಿ ಹವಿಸ್ಸನ್ನು ಹಾಕಿದಂತಾಗುವ ಮೊದಲೇ, ಸ್ಮಶಾನದಲ್ಲಿ ಹೂಮಾಲೆಯನ್ನು ಎಸೆದಂತೆ ಆಗುವುದಕ್ಕಿಂತ ಮೊದಲೇ, ವಿಪ್ರಜನರು ಅನ್ಯಮನಸ್ಕರಾಗಿರುವಾಗ ನಾಯಿಯು ಅಧ್ವರದ ಹವಿಸ್ಸನ್ನು ನೆಕ್ಕಿದಂತೆ ಆಗುವ ಮೊದಲೇ ನೀವು ಅವಳನ್ನು ಸಮೀಪಿಸಿ.

ಶ್ರುತಿಂ ಚ ಸಮ್ಯಕ್ ಪ್ರಕೃತಿಂ ಮಹಾಧ್ವರೇ
ಗ್ರಾಮ್ಯೋ ಜನೋ ಯದ್ದದಸೌ ನ ನಾಶಯೇತ್ ।
ಮಹತ್ಯರಣ್ಯೇ ಮೃಗಯಾಂ ಚರಿತ್ವಾ
ಪುರಾ ಶೃಗಾಲೋ ನಳಿನೀಂ ವಿಗಾಹತೇ ।
ಪುರಾ ಹಿ ಮಂತ್ರಾಹುತಿಪೂಜಿತಾಯಾಂ
ಹುತಾಗ್ನಿವೇದ್ಯಾಂ ಬಲಿಬುಜ್ ನಿಲೀಯತೇ ॥೨೩॥

ಒಳ್ಳೆಯ ಯಜ್ಞದಲ್ಲಿ ಗ್ರಾಮ್ಯಜನರು ವೇದವನ್ನು ಸ್ಪರ್ಶಿಸಿ ನಾಶಮಾಡುವಂತೆ ಅವನು ದ್ರೌಪದಿಯನ್ನು ನಾಶಮಾಡದಿರಲಿ. ದೊಡ್ಡ ಕಾಡಿನಲ್ಲಿ ಬೇಟೆಯಾಡಿ ನರಿಯು ಸರೋವರದಲ್ಲಿ ಸ್ನಾನವನ್ನು ಮಾಡದಂತೆ ಆಗುವುದಕ್ಕಿಂತ ಮೊದಲೇ, ವೇದಿಕೆಯಲ್ಲಿ ಸ್ಥಾಪಿಸಿದ ಅಗ್ನಿಯಲ್ಲಿ ಮಂತ್ರಾಹುತಿಯನ್ನು ಕೊಟ್ಟು ಪೂಜಿಸಿದ ಆ ಅಗ್ನಿಯು ಶಾಂತಿಯು ಆಗುವುದಕ್ಕಿಂತ ಮೊದಲೇ (ನೀವು ಅವಳನ್ನು ಸಮೀಪಿಸಿ).

ಮಾ ವಃ ಪ್ರಿಯಾಯಾಃ ಸುನಸಂ ಸುಲೋಚನಂ
ಚಂದ್ರಪ್ರಭಾಚ್ಛಂ ವದನಂ ಪ್ರಸನ್ನಮ್ ।
ಸ್ಪೃಶ್ಯಾಚ್ಛುಭಂ ಕಶ್ಚಿದಕೃತ್ಯಕಾರೀ
ಶ್ವಾ ವೈ ಪುರೋಡಾಶಮಿವಾಧ್ವರಸ್ಥಮ್ ॥೨೪॥

ನಾಯಿಯು ಯಜ್ಞದ ಪುರೋಡಾಶವನ್ನು ಮುಟ್ಟಿದಂತೆ ನಿಮ್ಮ ಪ್ರಿಯಯ ಸುಂದರವಾದ ನಾಸಿಕ ಮತ್ತು ನೇತ್ರಗಳುಳ್ಳ ಚಂದ್ರನಂತಿರುವ ಪ್ರಸನ್ನವಾದ ಶುಭವಾದ ಮುಖವನ್ನು ಅಕಾರ್ಯವನ್ನು ಮಾಡುವ ಯಾವನೋ ಒಬ್ಬನು ಮುಟ್ಟದಿರಲಿ.

ಏತಾನಿ ವರ್ತ್ಮಾನ್ಯನುಯಾತ ಶೀಘ್ರಂ
ಮಾ ವಃ ಕಾಲಃ ಕ್ಷಿಪ್ರಮಿಹಾತ್ಯಗಾದ್ವೈ ।
ಶೀಘ್ರಂ ಪ್ರಧಾವಧ್ವಮಿತೋ ನರೇಂದ್ರಾಃ
ಯಾವನ್ನದೂರಂ ವ್ರಜತೀತಿ ಪಾಪಃ ।
ಪ್ರತ್ಯಾಹರಧ್ವಂ ದ್ವಿಷತಾಂ ಸಕಾಶಾ–
ಲ್ಲಕ್ಷ್ಮೀಮಿವ ಸ್ವಾಂ ದಯಿತಾಂ ನೃಸಿಂಹಃ ॥೨೫॥

ನೀವು ಈ ಮಾರ್ಗದಲ್ಲಿ ಶೀಘ್ರವಾಗಿ ಹೋಗಿ. ಒಂದುಕ್ಷಣವೂ ತಡವಾಗುವುದು ಬೇಡ. ಎಲೈ ನರೇಂದ್ರರೇ, ಆ ಪಾಪಿಯು ದೂರಹೋಗುವುದಕ್ಕಿಂತ ಮೊದಲೇ ನೀವು ಶೀಘ್ರವಾಗಿ ಇಲ್ಲಿಂದ ಓಡಿ, ನರಸಿಂಹದೇವರು ಪ್ರಿಯಳಾದ ಲಕ್ಷ್ಮಿಯನ್ನು ಕರೆದುಕೊಂಡು ಬಂದಂತೆ ಶತ್ರುಗಳ ಕೈಯಿಂದ ಬಿಡಿಸಿ ದ್ರೌಪದಿಯನ್ನು ಕರೆದುಕೊಂಡು ಬನ್ನಿ.

ಯುಧಿಷ್ಠಿರಃ

ಭದ್ರೇ ಪ್ರತಿಕ್ರಾಮ ನಿಯಚ್ಛ ವಾಚಂ
ಮಾಸ್ಮತ್ಸಕಾಶೇ ಪರುಷಾಣ್ಯವೋಚಃ ।
ರಾಜಾನೋ ವಾ ಯದಿ ವಾ ರಾಜಪುತ್ರಾ
ಬಲೇನ ಮತ್ತಾ ವಂಚನಾಂ ಪ್ರಾಪ್ನುವಂತಿ ॥೨೬॥

ಯುಧಿಷ್ಠಿರ– ಭದ್ರೆಯೇ, ಇಲ್ಲಿಂದ ಹೊರಡು. ಮಾತಿನಲ್ಲಿ ಬಿಗಿ ಇರಲಿ. ನಮ್ಮ ಸಮೀಪದಲ್ಲಿ ಬಾಯಿಗೆ ಬಂದಂತೆ ಕೆಟ್ಟ ಮಾತುಗಳನ್ನು ಆಡಬೇಡ. ರಾಜರಾಗಲೀ, ರಾಜಪುತ್ರರಾಗಲೀ ಅವರು ತಮ್ಮ ಬಲದಿಂದ ಮತ್ತರಾಗಿದ್ದರೆ ವಂಚನೆಯನ್ನು ಹೊಂದುತ್ತಾರೆ.

ವೈಶಂಪಾಯನಃ

ಏತಾವದುಕ್ತ್ವಾ ಪ್ರಯಯುರ್ಹಿ ಶೀಘ್ರಂ
ತಾನ್ಯೇವ ವರ್ತ್ಮಾನ್ಯನುವರ್ತಮಾನಾಃ ।
ಮುಹುರ್ಮುಹುರ್ವ್ಯಾಲವದುಚ್ಛ್ವಸಂತೋ
ಜ್ಯಾ(ಜ್ಯಾಂ) ವಿಕ್ಷಿಪಂತಶ್ಚ ಮಹಾಧನುರ್ಭ್ಯಃ ॥೨೭॥

ವೈಶಂಪಾಯನ– ಹೀಗೆ ಹೇಳಿ ಅವರು ಮತ್ತೆ ಮತ್ತೆ ಸರ್ಪಗಳಂತೆ ಉಸಿರು ಬಿಡುತ್ತಾ ತಮ್ಮ ದೊಡ್ಡ ಧನುಸ್ಸುಗಳಿಂದ ಹೆದೆಯನ್ನು ಎಳೆಯುತ್ತಾ ಅದೇ ಮಾರ್ಗವನ್ನು ಅನುಸರಿಸಿ ಶೀಘ್ರವಾಗಿ ಅಲ್ಲಿಂದ ಹೊರಟರು.

ತತೋऽಪಶ್ಯಂಸ್ತಸ್ಯ ಸೈನ್ಯಸ್ಯ ರೇಣು–
ಮುದ್ಧೂತಂ ವೈ ವಾಜಿಖುರಪ್ರಣುನ್ನಮ್ ।

ಪದಾತೀನಾಂ ಮಧ್ಯಗತಂ ಚ ಧೌಮ್ಯಂ
ವಿಕ್ರೋಶಂತಂ ಭೀಮಮಭಿದ್ರವೇತಿ ॥೨೮॥

ಅನಂತರ ಅವರು ಸೈನ್ಯವನ್ನೂ ಕುದುರೆಗಳ ಗೊರಸಿನಿಂದ ಮೇಲೇಳುತ್ತಿರುವ ಧೂಳನ್ನೂ ಪದಾತಿಗಳ ಮಧ್ಯದಲ್ಲಿ ಬೇಗ ಓಡಿ ಬಾ ಎಂದು ಭೀಮನನ್ನು ಕುರಿತು ಕಿರುಚುತ್ತಿರುವ ಧೌಮ್ಯರನ್ನೂ ನೋಡಿದರು.

ತೇ ಸಾಂತ್ವ್ಯ ಧೌಮ್ಯಂ ಪರಿದೀನಸತ್ತ್ವಾಃ
ಸುಖಿಂ ಭವಾನೇತ್ವಿತಿ ರಾಜಪುತ್ರಾಃ ।
ಶ್ಯೇನಾ ಯಥೈವಾಮಿಷಸಂಪ್ರಯುಕ್ತಾ
ಜವೇನ ತತ್ಸೈನ್ಯಮಥಾಭ್ಯಧಾವನ್ ॥೨೯॥

ಆ ರಾಜಪುತ್ರರು ಧೌಮ್ಯರನ್ನು ಮೃದುವಾದ ಮಾತುಗಳಿಂದ ಸಮಾಧಾನಪಡಿಸಿ ನೀವು ಸುಖವಾಗಿ ಆಶ್ರಮಕ್ಕೆ ಹೋಗಿ ಎಂದು ಹೇಳಿ ಬಾಯಲ್ಲಿ ಮಾಂಸವನ್ನು ಹಿಡಿದ ಶ್ಯೇನ ಪಕ್ಷಿಗಳಂತೆ ವೇಗವಾಗಿ ಜಯದ್ರಥನ ಸೈನ್ಯದ ಕಡೆಗೆ ಓಡಿದರು.

ತೇಷಾಂ ಮಹೇಂದ್ರೋಪಮವಿಕ್ರಮಾಣಾಂ
ಸಂರಬ್ಧಾನಾಂ ಧರ್ಷಣಾದ್ಯಾಜ್ಞಸೇನ್ಯಾಃ ।
ಕ್ರೋಧಃ ಪ್ರಜಜ್ವಾಲ ಜಯದ್ರಥಂ ಚ
ದೃಷ್ಟ್ವಾ ಪ್ರಿಯಾಂ ತಸ್ಯ ರಥೇ ಸ್ಥಿತಾಂ ಚ ॥೩೦॥

ಮಹೇಂದ್ರನಿಗೆ ಸಮನಾದ ವಿಕ್ರಮವುಳ್ಳ, ಯಾಜ್ಞಸೇನಿಯ ದರ್ಶನದಿಂದ ಕೋಪಗೊಂಡ ಅವರ ಕ್ರೋಧವು ಜಯದ್ರಥನನ್ನು ಮತ್ತು ಅವನ ರಥದಲ್ಲಿ ಕುಳಿತಿರುವ ತಮ್ಮ ಪ್ರಿಯೆಯನ್ನು ನೋಡಿದ ತಕ್ಷಣ ಅಗ್ನಿಯಂತೆ ಹತ್ತಿ ಉರಿಯಿತು.

ಪ್ರಚುಕ್ರುಶುಶ್ಚಾಪ್ಯಥ ಸಿಂಧುರಾಜಂ
ವೃಕೋದರಶ್ಚೈವ ಧನಂಜಯಶ್ಚ ।
ಯಮೌ ಚ ರಾಜಾ ಚ ಮಹಾಧನುರ್ಧರಾ–
ಸ್ತತೋ ದಿಶಃ ಸಮ್ಮುಮುಹುಃ ಪರೇಷಾಮ್ ॥೩೧॥

ಅನಂತರ ಮಹಾಧನುರ್ಧರರಾದ ವೃಕೋದರನೂ, ಧನಂಜಯನೂ, ನಕುಲಸಹದೇವರೂ ಮತ್ತು ಧರ್ಮರಾಜನೂ ಸಿಂಧುರಾಜನನ್ನು ಗಟ್ಟಿಯಾಗಿ ಕರೆದರು. ಆಗ ಶತ್ರುಗಳಿಗೆ ದಿಗ್ಭ್ರಾಂತಿ ಉಂಟಾಯಿತು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂಸಂಹಿತಾಯಾಂ ವೈಯಾಸಿಕ್ಯಾಂ ವನಪರ್ವಣಿ ಸಪ್ತಪಂಚಾಶಾಧಿಕದ್ವಿಶತತಮೋऽಧ್ಯಾಯಃ ॥
॥ ಇತಿ ದ್ರೌಪದೀಹರಣಪರ್ವಣಿ ಪಾರ್ಥಾಗಮನಂ ನಾಮ ಷಷ್ಠೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವನಪರ್ವದಲ್ಲಿ ಇನ್ನೂರ ಐವತ್ತೇಳನೆಯ ಅಧ್ಯಾಯ ಮುಗಿಯಿತು.

★ ★ ★ ★

ಇನ್ನೂರ ಐವತ್ತೆಂಟನೆಯ ಅಧ್ಯಾಯ

ದ್ರೌಪದಿಯಿಂದ ಜಯದ್ರಥನಿಗೆ ಪಾಂಡವರ ಪರಿಚಯ.

ವೈಶಂಪಾಯನಃ

ತತೋ ಘೋರತರಃ ಶಬ್ದೋ ವನೇ ಸಮಭವತ್ ತದಾ ।
ಭೀಮಸೇನಾರ್ಜುನೌ ದೃಷ್ಟ್ವಾ ಕ್ಷತ್ರಿಯಾಣಾಮಮರ್ಷಿಣಾಮ್ ॥೧॥

ವೈಶಂಪಾಯನ– ಆಗ ಭೀಮಸೇನ ಮತ್ತು ಅರ್ಜುನರನ್ನು ನೋಡಿ ಕೋಪಿಷ್ಠರಾದ ಆ ಕ್ಷತ್ರಿಯರಿಗೆ ಆ ಕಾಡಿನಲ್ಲಿ ಆಗ ಘೋರತರವಾದ ಶಬ್ದವುಂಟಾಯಿತು.

ತೇಷಾಂ ಧ್ವಜಾಗ್ರಾಣ್ಯಭಿವೀಕ್ಷ್ಯ ರಾಜಾ
ಸ್ವಯಂ ದುರಾತ್ಮಾ ಕುರುಪುಂಗವಾನಾಮ್ ।
ಜಯದ್ರಥೋ ಯಾಜ್ಞಸೇನೀಮುವಾಚ
ರಥೇ ಸ್ಥಿತಾಂ ಭಾನುಮತೀಂ ಹತೌಜಾಃ ॥೨॥

ಕುರುಪುಂಗವರ ಆ ಶ್ರೇಷ್ಠವಾದ ಧ್ವಜಗಳನ್ನು ನೋಡಿದ ಸ್ವತಃ ದುರಾತ್ಮನಾದ ಜಯದ್ರಥರಾಜನು ಪತಿಗಳ ದರ್ಶನದಿಂದ ಕಾಂತಿಯುಕ್ತಳಾಗಿದ್ದ ರಥದಲ್ಲಿ ಕುಳಿತಿದ್ದ ದ್ರೌಪದಿಯನ್ನು ಕುರಿತು ತಾನು ಕಾಂತಿಹೀನನಾಗಿ ಮಾತನಾಡಿದನು.

ಜಯದ್ರಥಃ

ಆಯಾಂತೀಮೇ ಪಂಚ ರಥಾ ಮಹಾಂತೋ
ಮನ್ಯೇ ಚ ಕೃಷ್ಣೇ ಪತಯಸ್ತವೈತೇ ।
ಸಾ ಜಾನತೀ ಖ್ಯಾಪಯ ನಃ ಸುಕೇಶಿ
ಪರಾವರಂ ಪಾಂಡವಾನಾಂ ರಥಸ್ಥಮ್ ॥೩॥

ಜಯದ್ರಥ– ಈ ಐದು ದೊಡ್ಡ ರಥಗಳು ಬರುತ್ತಿವೆ. ದ್ರೌಪದಿಯೇ, ಇವರು ನಿನ್ನ ಪತಿಗಳೆಂದು ತಿಳಿಯುತ್ತೇನೆ. ಎಲೌ ಸುಕೇಶಿಯೇ, ಚೆನ್ನಾಗಿ ತಿಳಿದಿರುವ ನೀನು ರಥಸ್ಥ ಈ ಪಾಂಡವರಲ್ಲಿ ಯಾರು ಜ್ಯೇಷ್ಠರು, ಯಾರು ಕನಿಷ್ಟರು ಎಂದು ನನಗೆ ತಿಳಿಸು.

ದ್ರೌಪದೀ

ಕಿಂ ತೇ ಜ್ಞಾತ್ಯೈ (ಶಾತ್ಯೈ)ರ್ಮೂಢ ಮಹಾಧನುರ್ಧರೈ–
ರನಾಯುಷ್ಯಂ ಕರ್ಮ ಕೃತ್ವಾತಿಘೋರಮ್ ।
ಏತೇ ವೀರಾಃ ಪತಯೋ ಮೇ ಸಮೇತಾ
ನ ವಃ ಶೇಷಃ ಕಶ್ಚಿದಿಹಾಸ್ತಿ ಯುದ್ಧೇ ॥೪॥

ದ್ರೌಪದೀ– ಎಲೈ ಮೂಢನೇ, ಆಯುಷ್ಯವನ್ನು ನಾಶಮಾಡುವ ಘೋರವಾದ ಕರ್ಮವನ್ನು ಮಾಡಿರುವ ನಿನಗೆ ಆ ಮಹಾಧನುರ್ಧರರನ್ನು ತಿಳಿದು ಏನಾಗಬೇಕಾಗಿದೆ? ಈ ವೀರರು ನನ್ನ ಪತಿಗಳು ಅವರೆಲ್ಲರೂ ಸೇರಿ ಯುದ್ಧದಲ್ಲಿ ಇಲ್ಲಿ ನಿನ್ನವರಲ್ಲಿ ಯಾರನ್ನೂ ಉಳಿಸುವುದಿಲ್ಲ.

ಆಖ್ಯಾತವ್ಯಂ ತ್ವೇವ ಸರ್ವಂ ಮುಮೂರ್ಷೋ–
ರ್ಮಯಾ ತುಭ್ಯಂ ಪೃಷ್ಟಯಾ ಧರ್ಮ ಏಷಃ ।
ನ ಮೇ ವ್ಯಥಾ ವಿದ್ಯತೇ ತ್ವದ್ಭಯಂ ವಾ
ಸಂಪಶ್ಯಂತ್ಯಾಃ ಸಾನುಜಂ ಧರ್ಮರಾಜಮ್ ॥೫॥

ಮರಣವು ಸಮೀಪಿಸಿರುವವರಿಗೆ ಅವರು ಕೇಳಿದುದನ್ನು ಹೇಳಬೇಕು ಎಂಬುದು ಧರ್ಮ. ಆದ್ದರಿಂದ ನಿನಗೆ ಹೇಳುತ್ತೇನೆ. ಧರ್ಮರಾಜನನ್ನು ಮತ್ತು ಅವನ ತಮ್ಮಂದಿರನ್ನು ನೋಡುತ್ತಿರುವ ನನಗೆ ನಿನ್ನಿಂದ ದುಃಖವಾಗಲೀ ಅಥವಾ ನಿನ್ನ ಭಯವಾಗಲೀ ಇಲ್ಲ.

ಯಸ್ಯ ಧ್ವಜಾಗ್ರೇ ನದತೋ ಮೃದಂಗೌ
ನಂದೋಪನಂದೌ ಮಧುರೌ ಯುಕ್ತರೂಪೌ ।
ಏತಂ ಸ್ವಧರ್ಮಾರ್ಥವಿನಿಶ್ಚಯಜ್ಞಂ
ಸದಾ ಜನಾಃ ಕೃತ್ಯವಂತೋಽನುಯಾಂತಿ ॥೬॥

ಯ ಏಷ ಜಾಂಬೂನದಶುದ್ಧಗೌರಃ
ಪ್ರಚಂಡಘೋಣಸ್ತನುರಾಯತಾಕ್ಷಃ ।
ಏನಂ ಕುರುಶ್ರೇಷ್ಠತಮಂ ವದಂತಿ
ಯುಧಿಷ್ಠಿರಂ ಧರ್ಮಸುತಂ ಪತಿಂ ಮೇ ॥೭॥

ಯಾವನ ಧ್ವಜದ ಮೇಲ್ಭಾಗದಲ್ಲಿ ಮಧುರವಾಗಿ ನುಡಿಯುವ ನಂದ ಮತ್ತು ಉಪನಂದ ಎಂಬ ಎರಡು ಮೃದಂಗಗಳಿವೆಯೋ, ಸ್ವಧರ್ಮ ಮತ್ತು ಅರ್ಥಗಳ ನಿಶ್ಚಯವನ್ನು ಹೊಂದಿದ ಯಾವನನ್ನು ಉಪಕಾರವನ್ನು ಪಡೆಯುವ ಜನರು ಯಾವಾಗಲೂ ಹಿಂಬಾಲಿಸುತ್ತಾರೋ, ಅಂತಹ ಚಿನ್ನದಂತೆ ಶುದ್ಧವೂ, ಧವಳವೂ ಆದ ಪ್ರಚಂಡವಾದ ಶರೀರವುಳ್ಳ ಸುವ್ಯಕ್ತವಾದ ನಾಸಿಕವೂ ಮತ್ತು ವಿಶಾಲವಾದ ನೇತ್ರಗಳೂ ಇರುವ ಈ ಕುರುಶ್ರೇಷ್ಠತಮನನ್ನು ಜನರು ನನ್ನ ಪತಿಯಾದ ಧರ್ಮಸುತನಾದ ಯುಧಿಷ್ಠಿರನೆಂದು ಕರೆಯುತ್ತಾರೆ.

ಅಪ್ಯೇಷ ಶತ್ರೋಃ ಶರಣಾಗತಸ್ಯ
ದದ್ಯಾತ್ ಪ್ರಾಣಾನ್ ಧರ್ಮಚಾರೀ ನೃವೀರಃ ।
ಪರೇಹ್ಯೇನಂ ಮೂಢ ಜವೇನ ಭೂತಯೇ
ತ್ವಮಾತ್ಮನಃ ಪ್ರಾಂಜಲಿರ್ನ್ಯಸ್ತಶಸ್ತ್ರಃ ॥೮॥

ಈ ಧರ್ಮಚಾರಿಯಾದ ನೃವೀರನು ಶತ್ರುವು ಶರಣಾಗತನಾದರೆ ಅವನಿಗೆ ತನ್ನ ಪ್ರಾಣವನ್ನೂ ಕೊಟ್ಟಾನು. ಮೂಢನೇ, ಅವನನ್ನು ನಿನ್ನ ಕಲ್ಯಾಣಕ್ಕಾಗಿ ಕೈಗಳನ್ನು ಮುಗಿದು ಶಸ್ತ್ರವನ್ನು ಕೆಳಗಿಟ್ಟು ಶರಣುವನ್ನು ಹೊಂದು.

ಅಥಾಪ್ಯೇನಂ ಪಶ್ಯಸಿ ಯಂ ರಥಸ್ಥಂ
ಮಹಾಭುಜಂ ಶಾಲಮಿವ ಪ್ರವೃದ್ಧಮ್ ।

ಸಂದಷ್ಟೌ (ಷ್ಮಂ) ಭ್ರುಕುಟೀಸಂಹತಭ್ರುವಂ
ವೃಕೋದರೋ ನಾಮ ಪತಿರ್ಮಮೈಷಃ ॥೯॥

ಇನ್ನು ರಥದಲ್ಲಿ ಕುಳಿತ ಮಹಾಭುಜನಾದ, ಸಾಲವೃಕ್ಷದಂತೆ ಎತ್ತರವಾದ, ತುಟಿಯನ್ನು ಕಚ್ಚಿ ಹುಬ್ಬನ್ನು ಗಂಟಿಕ್ಕಿರುವ ಯಾವ ಇವನನ್ನು ನೋಡುತ್ತಿದ್ದೀಯೋ ಇವನು ವೃಕೋದರನೆಂಬ ನನ್ನ ಪತಿ.

ಆಜಾನೇಯಾ ಬಲಿನಃ ಸಾಧುದಾಂತಾ
ಮಹಾಬಲಾಃ ಶೂರಮುದಾವಹಂತಿ ।
ಏತಸ್ಯ ಕರ್ಮಾಣ್ಯತಿಮಾನುಷಾಣಿ
ಭೀಮೇತಿ ಶಬ್ದೋಽಸ್ಯ ಗತಃ ಪೃಥಿವ್ಯಾಮ್ ॥೧೦॥

ಸತ್ಕುಲದಲ್ಲಿ ಹುಟ್ಟಿದವೂ, ಬಲವುಳ್ಳವೂ, ಸಾಧುಗಳೂ, ಪಳಗಿಸಲ್ಪಟ್ಟವೂ, ಮಹಾಬಲವುಳ್ಳವೂ ಆದ ಅಶ್ವಗಳು ಈ ಶೂರನನ್ನು ಎಳೆಯುತ್ತವೆ. ಅವನ ಕರ್ಮಗಳೆಲ್ಲವೂ ಮನುಷ್ಯರನ್ನು ಮೀರಿದವುಗಳು. ಭೂಮಿಯಲ್ಲಿ ಭೀಮನೆಂದು ಅವನ ಹೆಸರು ಪ್ರಖ್ಯಾತವಾಗಿದೆ.

ನಾಸ್ಯಾಪರಾದ್ಧಾಃ ಶೇಷಮವಾಪ್ನುವಂತಿ
ನಾಯಂ ವೈರಂ ವಿಸ್ಮರತೇ ಕದಾಚಿತ್ ।
ವೈರಸ್ಯಾಂತಂ ಸಂವಿಧಾಯೋಪಯಾತಿ
ಪಶ್ಚಾಚ್ಛಾಂತಿಂ ನ ಚ ತಪ್ಯತೀಹ ॥೧೧॥

ಇವನಿಗೆ ಅಪರಾಧವನ್ನು ಮಾಡಿದವರು ಯಾರೂ ಉಳಿಯುವುದಿಲ್ಲ. ಇವನು ತನಗೆ ಮಾಡಿದ ವೈರವನ್ನು ಎಂದೂ ಮರೆಯುವುದಿಲ್ಲ. ವೈರಕ್ಕೆ ಪ್ರತೀಕಾರವನ್ನು ಮಾಡಿ ಅನಂತರ ಸಮಾಧಾನವನ್ನು ಹೊಂದುತ್ತಾನೆ. ಆ ವಿಷಯದಲ್ಲಿ ಪಶ್ಚಾತ್ತಾಪವನ್ನು ಪಡುವುದಿಲ್ಲ.

ಧನುರ್ಧರಾಗ್ರ್ಯೋ ಧೃತಿಮಾನ್ ಯಶಸ್ವೀ
ಜಿತೇಂದ್ರಿಯೋ ವೃದ್ಧಸೇವೀ ನೃವೀರಃ ।
ಭ್ರಾತಾ ಚ ಶಿಷ್ಯಶ್ಚ ಯುಧಿಷ್ಠಿರಸ್ಯ
ಧನಂಜಯೋ ನಾಮ ಪತಿರ್ಮಮೈಷಃ ॥೧೨॥

ಧನುರ್ಧಾರಿಗಳಲ್ಲಿ ಶ್ರೇಷ್ಠನಾದವನೂ, ಧೈರ್ಯಶಾಲಿಯೂ, ಕೀರ್ತಿಶಾಲಿಯೂ, ಜಿತೇಂದ್ರಿಯನೂ, ಹಿರಿಯರನ್ನು ಸೇವಿಸುವವನೂ, ನ್ಯವೀರನೂ ಆದ ಇವನು ಯುಧಿಷ್ಠಿರನ ತಮ್ಮ ಮತ್ತು ಶಿಷ್ಯ . ಇವನು ಧನಂಜಯನೆಂಬ ನನ್ನ ಪತಿ.

ಯೋ ವೈ ನ ಕಾಮಾನ್ನ ಭಯಾನ್ನ ಲೋಭಾತ್
ತ್ಯಜೇದ್ಧರ್ಮಂ ನ ನೃಶಂಸ್ಯಂ(ಸಂ) ಚ ಕುರ್ಯಾತ್ ।
ಸ ಏಷ ವೈಶ್ವಾನರತುಲ್ಯತೇಜಾಃ
ಕುಂತೀಸುತಃ ಶತ್ರುಸಹಃ ಪ್ರಮಾಥೀ ॥೧೩॥

ಯಾವನು ಕಾಮದಿಂದಲಾಗಲೀ, ಭಯದಿಂದಲಾಗಲೀ, ಲೋಭದಿಂದಾಗಲೀ ತನ್ನ ಧರ್ಮವನ್ನು ತ್ಯಜಿಸುವುದಿಲ್ಲವೋ, ಮತ್ತು ಕ್ರೂರ (ಅಸಾಧು) ಕರ್ಮವನ್ನು ಮಾಡುವುದಿಲ್ಲವೋ, ಅಂತಹ ಈ ಕುಂತೀಪುತ್ರನು ಶತ್ರುಗಳ ವೇಗವನ್ನು ಸಹಿಸುವವನು, ಶತ್ರುಗಳನ್ನು ಮರ್ದಿಸುವವನು ಮತ್ತು ಅಗ್ನಿಗೆ ಸಮಾನವಾದ ತೇಜಸ್ಸುಳ್ಳವನು.

ಯಃ ಸರ್ವಧರ್ಮಾರ್ಥವಿನಿಶ್ಚಯಜ್ಞೋ
ಭಯಾರ್ತಾನಾಂ ಭಯಹರ್ತಾ ಮನೀಷೀ ।
ಬಂಧುಪ್ರಿಯಃ ಶಸ್ತ್ರಭೃತಾಂ ವರಿಷ್ಠೋ
ಮಹಾಬಲೇಷ್ವಪ್ರತಿವಾರ್ಯವೀರ್ಯಃ ॥೧೪॥

ಯಸ್ಯೋತ್ತಮಂ ರೂಪಮಾಹುಃ ಪೃಥಿವ್ಯಾಂ
ಯಂ ಪಾಂಡವಾಃ ಪರಿರಕ್ಷಂತಿ ಸರ್ವೇ ।
ಪ್ರಾಣೈರ್ಗರೀಯಾಂಸಮನುವ್ರತಂ ವೈ
ಸ ಏಷ ವೀರೋ ನಕುಲಃ ಪತಿರ್ಮೇ ॥೧೫॥

ಯಾವನು ಧರ್ಮಾರ್ಥಗಳ ವಿಷಯದ ನಿಶ್ಚಿತಜ್ಞಾನವನ್ನು ಹೊಂದಿದ್ದಾನೆಯೋ, ಭಯಾರ್ತರಿಗೆ ಭಯವನ್ನು ಪರಿಹರಿಸುವನೋ, ಮೇಧಾವಿಯೋ, ಬಂಧುಪ್ರಿಯನೋ, ಶಸ್ತ್ರವನ್ನು ಧರಿಸಿದವರಲ್ಲಿ ಶ್ರೇಷ್ಠನೋ, ಯಾವನ ಪರಾಕ್ರಮಕ್ಕೆ ಮಹಾಬಲಿಷ್ಠರಲ್ಲಿಯೂ ಪ್ರತಿವಾರಣೆ ಇಲ್ಲವೋ, ಯಾವನಿಗೆ ಉತ್ತಮವಾದ ಸೌಂದರ್ಯವಿದೆಯೋ, ತಮ್ಮ

ಪ್ರಾಣಕ್ಕಿಂತ ಪ್ರಿಯನಾದ ತಮ್ಮನ್ನು ಅನುಸರಿಸುವ ಯಾವನನ್ನು ಎಲ್ಲಾ ಪಾಂಡವರೂ ರಕ್ಷಿಸುತ್ತಾರೆಯೋ ಅಂತಹ ಈ ವೀರನು ನನ್ನ ಪತಿಯಾದ ನಕುಲ.

ಯಃ ಖಡ್ಗಯೋಧೀ ಲಘುಚಿತ್ರಹಸ್ತೋ
ಮಹಾಂಶ್ಚ ಧೀಮಾನ್ ಸಹದೇವೋಽದ್ವಿತೀಯಃ ।
ಶೂರಃ ಕೃತಜ್ಞೋ ದೃಢಸೌಹೃದಶ್ಚ
ಮಹಾಹವೇ ಯಶ್ಚ ರಿಪುಪ್ರಮಾಥೀ ।
ಯಸ್ಯಾದ್ಯ ಕರ್ಮ ದ್ರಕ್ಷ್ಯಸೇ ಮೂಢಸತ್ತ್ವ
ಶತಕ್ರತೋರ್ವಾ ದೈತ್ಯಸೇನಾಸು ಸಂಖ್ಯೇ ॥೧೬॥

ಶೂರಃ ಕೃತಾಸ್ತ್ರೋ ಮತಿಮಾನ್ ಮನಸ್ವೀ
ಪ್ರಿಯಂಕರೋ ಧರ್ಮಸುತಸ್ಯ ರಾಜ್ಞಃ ।
ಯ ಏಷ ಚಂದ್ರಾರ್ಕಸಮಾನತೇಜಾಃ
ಜಘನ್ಯಜಃ ಪಾಂಡವಾನಾಂ ಪ್ರಿಯಶ್ಚ ॥೧೭॥

ಎಲೈ ಮೂಢಸತ್ತ್ವನೇ, ಯಾವನು ಖಡ್ಗಯುದ್ಧದಲ್ಲಿ ನಿಪುಣನೋ, ಲಘುವಾದ ವಿಚಿತ್ರ ಹಸ್ತವ್ಯಾಪಾರ ಉಳ್ಳವನೋ, ಮಹಾತ್ಮನೋ, ಮೇಧಾವಿಯೋ, ಅದ್ವಿತೀಯನೋ, ದೇವತೆಗಳನ್ನು ಅರ್ಚಿಸುವವನೋ, ಶೂರನೋ, ಕೃತಜ್ಞನೋ, ದೃಢಸೌಹೃದವುಳ್ಳವನೋ, ದೊಡ್ಡ ಯುದ್ಧದಲ್ಲಿ ಶತ್ರುಗಳನ್ನು ಮರ್ದಿಸುವವನೋ, ದೈತ್ಯಸೈನ್ಯದ ಜೊತೆ ಯುದ್ಧದಲ್ಲಿ ಶತಕ್ರತುವಿನಂತಿರುವ ಯಾವನ ಕರ್ಮವನ್ನು ಈ ದಿನ ನೀನು ನೋಡುವಿಯೋ, ಯಾವನು ಅಸ್ತ್ರಗಳನ್ನು ಬಲ್ಲವನೋ, ಮೇಧಾವಿಯೋ, ಧೈರ್ಯಶಾಲಿಯೋ, ಧರ್ಮರಾಜನಿಗೆ ಯಾವಾಗಲೂ ಪ್ರಿಯವನ್ನು ಮಾಡುವವನೋ ಅಂತಹ ಚಂದ್ರಸೂರ್ಯರಿಗೆ ಸಮಾನ ತೇಜಸ್ಸುಳ್ಳ ಇವನು ಪಾಂಡವರಲ್ಲಿ ಕನಿಷ್ಠನಾದವನು ಮತ್ತು ಪ್ರಿಯನಾದವನು.

ಬುದ್ಧ್ಯಾ ಸಮೋ ಯಸ್ಯ ನರೋ ನ ವಿದ್ಯತೇ
ವಕ್ತಾ ತಥಾ ಸತ್ಸು ವಿನಿಶ್ಚಯಜ್ಞಃ ।
ಸ ಏಷ ಶೂರೋ ನಿತ್ಯಮಮರ್ಷಣಶ್ಚ
ಧೀಮಾನ್ ಪ್ರಾಜ್ಞಃ ಸಹದೇವಃ ಪತಿರ್ಮೇ ॥೧೮॥

ಯಾವನ ಬುದ್ಧಿಗೆ ಸಮವಾದ ಬುದ್ಧಿಯುಳ್ಳ ಇನ್ನೊಬ್ಬ ಮನುಷ್ಯನು ಇಲ್ಲವೋ, ಸಜ್ಜನರ ಸಭೆಯಲ್ಲಿ ನಿರ್ಣಯಗಳ ವಿಷಯದಲ್ಲಿ ಮಾತನಾಡುವವನು ಯಾವನಂತೆ ಇನ್ನೊಬ್ಬನಿಲ್ಲವೋ, ಅಂತಹ ಶೂರನೂ, ನಿತ್ಯವೂ ಕ್ರೋಧವುಳ್ಳವನೂ, ಮೇಧಾವಿಯೂ, ಪ್ರಾಜ್ಞನೂ ಆದ ಈ ಸಹದೇವನು ನನ್ನ ಪತಿ.

ತ್ಯಜೇತ್ ಪ್ರಾಣಾನ್ ಪ್ರವಿಶೇದ್ಧವ್ಯವಾಹಂ
ನ ತ್ವೇವೈಷ ವ್ಯಾಹರೇದ್ಧರ್ಮಬಾಹ್ಯಮ್ ।
ಸದಾ ಮನಸ್ವೀ ಕ್ಷತ್ರಧರ್ಮೇ ರತಶ್ಚ
ಕುಂತ್ಯಾಃ ಪ್ರಾಣೈರಿಷ್ಟತಮೋ ನೃವೀರಃ ॥೧೯॥

ಅವನು ಪ್ರಾಣಗಳನ್ನು ಬಿಟ್ಟಾನು, ಅಗ್ನಿಯನ್ನು ಪ್ರವೇಶಿಸಿಯಾನು ಆದರೆ ಧರ್ಮಬಾಹ್ಯವಾದುದನ್ನು ಎಂದೂ ಮಾತನಾಡಲಾರ. ಅವನು ಯಾವಾಗಲೂ ಧೈರ್ಯಶಾಲಿ, ಕ್ಷತ್ರಿಯ ಧರ್ಮದಲ್ಲಿ ರತನಾದವನು ಮತ್ತು ಕುಂತಿಗೆ ತನ್ನ ಪ್ರಾಣಕ್ಕಿಂತ ಇಷ್ಟನಾದ ವೀರನಾದವನು.

ವಿಶೀರ್ಯಂತೀಂ ನಾವಮಿವಾರ್ಣವಾಂತೇ
ರತ್ನಾಭಿಪೂರ್ಣಾಂ ಮಕರಸ್ಯ ಪೃಷ್ಠೇ ।
ಸೇನಾಂ ತವೇಮಾಂ ಹತಸರ್ವಯೋಧಾಂ
ವಿಕ್ಷೋಭಿತಾಂ ದ್ರಕ್ಷ್ಯಸಿ ಪಾಂಡುಪುತ್ರೈಃ ॥೨೦॥

ಸಮುದ್ರದ ಮಧ್ಯದಲ್ಲಿ ರತ್ನದಿಂದ ತುಂಬಿದ ನಾವೆಯು ಮೊಸಳೆಯ ಬೆನ್ನಿನ ಮೇಲೆ ಸಿಕ್ಕಿ ಒಡೆದು ಹೋಗುವಂತೆ ಈ ದಿನ ಈ ನಿನ್ನ ಸೈನ್ಯವೆಲ್ಲವೂ ಪಾಂಡುಪುತ್ರರಿಂದ ನಾಶಗೊಳಿಸಲ್ಪಡುವುದನ್ನು ನೀನು ನೋಡುವಿ.

ಇತ್ಯೇತೇ ವೈ ಕಥಿತಾಃ ಪಾಂಡುಪುತ್ರಾ
ಯಾಂಸ್ತ್ವಂ ಮೋಹಾದವಮನ್ಯ ಪ್ರವೃತ್ತಃ ।
ಯದ್ಯೇತೇಭ್ಯೋ ಮುಚ್ಯಸೇऽರಿಷ್ಟದೇಹಃ
ಪುನರ್ಜನ್ಮ ಪ್ರಾಪ್ಸ್ಯಸೇ ಜೀವ ಏವ ॥೨೧॥

ಯಾವ ಪಾಂಡುಪುತ್ರರನ್ನು ಮೋಹವಶನಾಗಿ ನೀನು ಅವಮಾನ ಮಾಡಿ ಹೊರಟಿದ್ದೀಯೋ ಅಂತಹ ಪಾಂಡುಪುತ್ರರನ್ನು ನಿನಗೆ ಪರಿಚಯಿಸಿದ್ದೇನೆ. ಈ ದಿನ ನೀನು ಇವರಿಂದ ಗಾಯಗೊಳ್ಳದೇ ಜೀವಂತನಾಗಿ ಬಿಡುಗಡೆಯನ್ನು ಹೊಂದುವುದಾದರೆ ಅದು ನೀನು ಪುನರ್ಜನ್ಮವನ್ನು ಪಡೆದಂತೆಯೇ ಸರಿ.

ವೈಶಂಪಾಯನಃ

ತತಃ ಪಾರ್ಥಾಃ ಪಂಚ ಪಂಚೇಂದ್ರಕಲ್ಪಾ-
ಸ್ಯಕ್ತ್ವಾ ತ್ರಸ್ತಾನ್ ಪ್ರಾಂಜಲೀಂಸ್ತಾನ್ ಪದಾತೀನ್ ।
ಯ(ರ)ಥಾನೀಕಂ ಶರವರ್ಷಾಂಧಕಾರಂ
ಚಕ್ರುಃ ಕ್ರುದ್ಧಾಃ ಸರ್ವತಃ ಸನ್ನಿಗೃಹ್ಯ ॥೨೨॥

ವೈಶಂಪಾಯನ– ಆಗ ಪಂಚೇಂದ್ರಿಯರಿಗೆ ಸದೃಶರಾಗಿದ್ದ ಆ ಪಂಚಪಾಂಡವರು ಹೆದರಿ ಕೈಗಳನ್ನು ಮುಗಿದ ಪದಾತಿಗಳನ್ನು ಬಿಟ್ಟುಕೋಪದಿಂದ ಕೂಡಿದವರಾಗಿ ಎಲ್ಲ ಕಡೆಗಳಿಂದಲೂ ಸೈನ್ಯವನ್ನು ನಿಗ್ರಹಿಸಿ ರಥಗಳ ಸಮೂಹದ ಮೇಲೆ ಬಾಣಗಳ ಮಳೆಯನ್ನು ಕರೆದು ಅಂಧಕಾರಮಯವನ್ನಾಗಿ ಮಾಡಿದರು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂಸಂಹಿತಾಯಾಂ ವೈಯಾಸಿಕ್ಯಾಂ
ವನಪರ್ವಣಿ ಅಷ್ಟಪಂಚಾಶಾಧಿಕದ್ವಿಶತತಮೋಽಧ್ಯಾಯಃ ॥
॥ ಇತಿ ದ್ರೌಪದೀಹರಣಪರ್ವಣಿ ದ್ರೌಪದೀವಾಕ್ಯಂ ನಾಮ ಸಪ್ತಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವನಪರ್ವದಲ್ಲಿ ಇನ್ನೂರ ಐವತ್ತೆಂಟನೆಯ
ಅಧ್ಯಾಯ ಮುಗಿಯಿತು.

★ ★ ★ ★

ಇನ್ನೂರ ಐವತೊಂಬತ್ತನೆಯ ಅಧ್ಯಾಯ

ಜಯದ್ರಥನ ಜೊತೆಯಲ್ಲಿ ಪಾಂಡವರ ಯುದ್ಧ. ದ್ರೌಪದಿಯನ್ನು ಬಿಟ್ಟು ಜಯದ್ರಥನ ಪಲಾಯನ. ಭೀಮಾರ್ಜುನರಿಂದ ಕಟೂಕ್ತಿಪೂರ್ವಕವಾಗಿ ಅವನ ಅನುಸರಣ.

ವೈಶಂಪಾಯನಃ

ಸಂತಿಷ್ಠತ ಪ್ರಹರತ ತೂರ್ಣಂ ವಿಪರಿಧಾವತ ।
ಇತಿ ಸ್ಮ ಸೈಂಧವೋ ರಾಜಾ ಚೋದಯಾಮಾಸ ತಾನ್ ನೃಪಾನ್ ॥೧॥

ವೈಶಂಪಾಯನ– ನಿಲ್ಲಿ, ಹೊಡೆಯಿರಿ, ಕ್ಷಿಪ್ರವಾಗಿ ಎಲ್ಲ ಕಡೆಯಲ್ಲಿಯೂ ತಿರುಗಾಡಿ ಎಂದು ರಾಜನಾದ ಸೈಂಧವನು ಉಳಿದ ರಾಜರುಗಳನ್ನು ಪ್ರೇರಿಸಿದನು.

ತತೋ ಘೋರತಮಃ ಶಬ್ದೋ ರಣೇ ಸಮಭವತ್ ತದಾ ।
ಭೀಮಾರ್ಜುನಯಮಾನ್ ದೃಷ್ಟ್ವಾ ಸೈನ್ಯಾನಾಂ ಸಯುಧಿಷ್ಠಿರಾನ್ ॥೨॥

ಅನಂತರ ಭೀಮಾರ್ಜುನ ನಕುಲಸಹದೇವರಿಂದ ಸಹಿತನಾದ ಯುಧಿಷ್ಠಿರನನ್ನು ನೋಡಿದ ಆ ಸೈನ್ಯದಲ್ಲಿ ಘೋರವಾದ ಶಬ್ದವು ರಣರಂಗದಲ್ಲಿ ಉಂಟಾಯಿತು.

ಶಿಬಿಸೌವೀರಸಿಂಧೂನಾಂ ವಿಷಾದಶ್ಚಾಪ್ಯಜಾಯತ ।
ತಾನ್ ದೃಷ್ಟ್ವಾ ಪುರುಷವ್ಯಾಘ್ರಾನ್ ವ್ಯಾಘ್ರಾನಿವ ಬಲೋತ್ಕಟಾನ್ ॥೩॥

ವ್ಯಾಘ್ರಗಳಂತೆ ಬಲೋತ್ಕಟರಾದ ಆ ಪುರುಷವ್ಯಾಘ್ರರನ್ನು ನೋಡಿ ಶಿಬಿ, ಸೌವೀರ ಮತ್ತು ಸಿಂಧುದೇಶಗಳ ವೀರರು ವಿಷಾದವನ್ನು ಹೊಂದಿದರು.

ಹೈಮಚಿತ್ರಸಮುತ್ಸೇಧಾಂ ಸರ್ವಶೈಕ್ಯಾಯಸೀಂ ಗದಾಮ್ ।
ಪ್ರಗೃಹ್ಯಾಭ್ಯದ್ರವದ್ ಭೀಮಃ ಸೈಂಧವಂ ಕಾಲಚೋದಿತಮ್ ॥೪॥

ಭೀಮನು ಚಿನ್ನದ ಹೂಗಳು ಮೆಟ್ಟಲ್ಪಟ್ಟಿದ್ದ ಎತ್ತರವಾದ ಯಾವಾಗಲೂ ಏಲುಗೆನಲ್ಲಿರುವ ತನ್ನ ಗದೆಯನ್ನು ಎತ್ತಿಕೊಂಡು ಕಾಲಚೋದಿತನಾದ ಸೈಂಧವನ ಕಡೆಗೆ ಓಡಿದನು.

ತದಂತರಮಥಾವೃತ್ಯ ಕೋಟಿಕಾಶ್ಯೋಽಭ್ಯಹಾರಯತ್ ।
ಮಹತಾ ರಥವಂಶೇನ ಪರಿವಾರ್ಯ ವೃಕೋದರಮ್ ॥೫॥

ಆ ಮಧ್ಯದಲ್ಲಿ ಕೋಟಿಕಾಶ್ಯನು ದೊಡ್ಡ ರಥವ್ಯೂಹದಿಂದ ವೃಕೋದರನನ್ನು ಸುತ್ತುವರಿದು ಅವನ ಮೇಲೆ ಶಸ್ತ್ರಗಳನ್ನು ಸುರಿಸಿದನು.

ಶಕ್ತಿತೋಮರನಾರಾಚೈರ್ವೀರಬಾಹುಪ್ರಚೋದಿತೈಃ ।
ಕೀರ್ಯಮಾಣೋಽಪಿ ಬಹುಭಿರ್ನ ಸ್ಮ ಭೀಮೋಽಭ್ಯಕಂಪತ ॥೬॥

ವೀರರ ಬಾಹುಗಳಿಂದ ಪ್ರೇರಿತವಾದ ಶಕ್ತಿ, ತೋಮರ, ನಾರಾಚ ಮೊದಲಾದ ಆಯುಧಗಳ ಅನೇಕ ವಿಧವಾದ ಮಳೆಯು ತನ್ನ ಮೇಲೆ ಬೀಳುತ್ತಿದ್ದರೂ ಭೀಮನು ಅಲುಗಾಡಲಿಲ್ಲ.

ಗಜಂ ತು ಸಗಜಾರೋಹಂ ಪದಾತೀಂಶ್ಚ ಚತುರ್ದಶ ।
ಜಘಾನ ಗದಯಾ ಭೀಮಃ ಸೈಂಧವಧ್ವಜಿನೀಮುಖೇ ॥೭॥

ಭೀಮನು ತನ್ನ ಗದೆಯಿಂದ ಗಜಾರೋಹಿಯಾದ ಯೋಧನನ್ನೂ ಅವನ ಸಹಾಯಕ್ಕಾಗಿ ಒಂದೊಂದು ಗಜದ ಸುತ್ತಲೂ ಇದ್ದ ಹದಿನಾಲ್ಕು ಹದಿನಾಲ್ಕು ಪದಾತಿಗಳನ್ನೂ ಸೈಂಧವನ ಸೇನಾಮುಖದಲ್ಲಿ (ಅನೇಕ ಸಂಖ್ಯೆಗಳಲ್ಲಿ) ತನ್ನ ಗದೆಯಿಂದ ಕೊಂದನು.

ಪಾರ್ಥಃ ಪಂಚ ಶತಾನ್ ಶೂರಾನ್ ಪಾ(ಪ)ರ್ವತೀಯಾನ್ ಮಹಾರಥಾನ್ ।
ಪರೀಪ್ಸಮಾನಃ ಸೌವೀರಂ ಜಘಾನ ಧ್ವಜಿನೀಮುಖೇ ॥೮॥

ಅರ್ಜುನನು ಸೌವೀರಾಧಿಪತಿಯಾದ ಜಯದ್ರಥನನ್ನು ಉಳಿಸುತ್ತಾ ಸೇನಾಮುಖದಲ್ಲಿದ್ದ ಐನೂರು ಮಂದಿ ಪರ್ವತದೇಶದ ಶೂರರಾದ ಮಹಾರಥರನ್ನು ಸಂಹರಿಸಿದನು.

ರಾಜಾ ಸ್ವಯಂ ಸುವೀರಾಣಾಂ ಪ್ರವರಾಣಾಂ ಪ್ರಹಾರಿಣಾಮ್ ।
ನಿಮೇಷಮಾತ್ರೇಣ ಶತಂ ಜಘಾನ ಸಮರೇ ತದಾ ॥೯॥

ಧರ್ಮರಾಜನು ಒಂದು ನಿಮಿಷದಲ್ಲಿ ಆಗ ಶ್ರೇಷ್ಠವಾಗಿ ಯುದ್ಧವನ್ನು ಮಾಡುವ ಸುವೀರರ ನೂರುಜನ ಸೈನಿಕರನ್ನು ಸ್ವತಃ ಯುದ್ಧದಲ್ಲಿ ಕೊಂದನು.

ದದೃಶೇ ನಕುಲಸ್ತತ್ರ ರಥಾತ್ ಪ್ರಸ್ಕಂದ್ಯ ಖಡ್ಗಧೃಕ್ ।
ಶಿರಾಂಸಿ ಪಾದರಕ್ಷಾಣಾಂ ಬೀಜವತ್ ಪ್ರವಪನ್ ಮುಹುಃ ॥೧೦॥

ನಕುಲನು ತನ್ನ ರಥದಿಂದ ಧುಮುಕಿ ಖಡ್ಗವನ್ನು ಹಿಡಿದು ಪದಾತಿಗಳ ಶಿರಸ್ಸುಗಳನ್ನು ಬೀಜಗಳನ್ನು ಎರಚಿದಂತೆ ಉರುಳಿಸುತ್ತಿರುವುದು ಅಲ್ಲಿ ಕಂಡುಬಂದಿತು.

ಸಹದೇವಸ್ತು ಸಂಧಾ(ಯಾ)ಯ ರಥೇನ ಗಜಯೋಧಿನಃ ।
ಪಾತಯಾಮಾಸ ನಾರಾಚೈರ್ದ್ರುಮೇಭ್ಯ ಇವ ಬರ್ಹಿಣಃ ॥೧೧॥

ಸಹದೇವನು ರಥವನ್ನು ಯೋಜಿಸಿ ಗಜಯೋಧಿಗಳನ್ನು ಮರಗಳಿಂದ ನವಿಲುಗಳನ್ನು ಉರುಳಿಸುವಂತೆ ತನ್ನ ಬಾಣಗಳಿಂದ ಉರುಳಿಸಿದನು.

ತತಸ್ತ್ರಿಗರ್ತಃ ಸಧನುರವತೀರ್ಯ ಮಹಾರಥಾನ್(ತ್) ।
ಗದಯಾ ಚತುರೋ ವಾಹಾನ್ ರಾಜ್ಞಸ್ತಸ್ಯ ತದಾऽವಧೀತ್ ॥೧೨॥

ಆಗ ತ್ರಿಗರ್ತರಾಜನು ಧನುಸ್ಸನ್ನು ಹಿಡಿದು ತನ್ನ ದೊಡ್ಡ ರಥದಿಂದ ಇಳಿದು ಗದೆಯಿಂದ ಧರ್ಮರಾಜನ ನಾಲ್ಕು ಅಶ್ವಗಳನ್ನು ಕೊಂದನು.

ತಮಭ್ಯಾಶಗತಂ ರಾಜಾ ಪದಾತಿಂ ಕುಂತಿನಂದನಃ ।
ಅರ್ಧಚಂದ್ರೇಣ ಬಾಣೇನ ವಿವ್ಯಾಧೋರಸಿ ಧರ್ಮರಾಟ್ ॥೧೩॥

ಕುಂತಿನಂದನನಾದ ಧರ್ಮರಾಜನು ಸಮೀಪಕ್ಕೆ ಬಂದು ಪದಾತಿಯಾಗಿದ್ದ ಅವನ ಎದೆಯಲ್ಲಿ ಅರ್ಧಚಂದ್ರಬಾಣದಿಂದ ಭೇದಿಸಿದನು.

ಸ ಭಿನ್ನಹೃದಯೋ ವೀರೋ ವಕ್ತ್ರಾಚ್ಛೋಣಿತಮುದ್ವಮನ್ ।
ಪಪಾತಾಭಿಮುಖಃ ಪಾರ್ಥಂ ಛಿನ್ನಮೂಲ ಇವ ದ್ರುಮಃ ॥೧೪॥

ಹೃದಯವು ಭೇದಿಸಲ್ಪಟ್ಟ ಆ ವೀರನು ಬಾಯಿಂದ ರಕ್ತವನ್ನು ಕಾರುತ್ತಾ ಧರ್ಮರಾಜನಿಗೆ ಅಭಿಮುಖವಾಗಿ ಬುಡವನ್ನು ಕತ್ತರಿಸಿದ ಮರದಂತೆ ಬಿದ್ದನು.

ಇಂದ್ರಸೇನದ್ವಿತೀಯಸ್ತು ರಥಾನ್ ಪ್ರಸ್ಕಂದ್ಯ ಧರ್ಮರಾಟ್ ।
ಹತಾಶ್ವಃ ಸಹದೇವಸ್ಯ ಪ್ರತಿಪೇದೇ ಮಹಾರಥಮ್ ॥೧೫॥

ತನ್ನ ಅಶ್ವಗಳನ್ನು ಕಳೆದುಕೊಂಡಿದ್ದ ಧರ್ಮರಾಜನು ಇಂದ್ರಸೇನನ ಜೊತೆಯಲ್ಲಿ ರಥದಿಂದಿಳಿದು ಸಹದೇವನ ದೊಡ್ಡ ರಥವನ್ನು ತಲುಪಿದನು.

ನಕುಲಂ ತ್ವಭಿಸಂಧಾಯ ಕ್ಷೇಮಂಕರಮಹಾಮುಖೌ ।
ಉಭಾವುಭಯತಸ್ತೀಕ್ಷ್ಣೈಃ ಶರವರ್ಷೈರವರ್ಷತಾಮ್ ॥೧೬॥

ಕ್ಷೇಮಂಕರ ಮತ್ತು ಮಹಾಮುಖ ಇವರಿಬ್ಬರು ನಕುಲನನ್ನು ಉದ್ದೇಶಿಸಿ ಎರಡು ಭಾಗಗಳಲ್ಲಿಯೂ ತೀಕ್ಷ್ಣವಾದ ಬಾಣಗಳ ಮಳೆಯನ್ನು ಅವನ ಮೇಲೆ ಕರೆದರು.

ತೌ ಶರೈರಭಿವರ್ಷಂತೌ ಜೀಮೂತಾವಿವ ವಾರ್ಷಿಕೌ ।
ಏಕೈಕೇನ ವಿಪಾಠೇನ ಜಘ್ನೇ ಮಾದ್ರವತೀಸುತಃ ॥೧೭॥

ಮಳೆಗಾಲದ ಮೋಡಗಳಂತೆ ತನ್ನ ಮೇಲೆ ಬಾಣಗಳ ಮಳೆಗಳನ್ನು ಸುರಿಸುತ್ತಿದ್ದ ಅವರನ್ನು ಮಾದ್ರವತೀಸುತನಾದ ನಕುಲನು ಒಂದೊಂದು ವಿಪಾಠದಿಂದ (ಬಾಣ ವಿಶೇಷದಿಂದ) ಕೊಂದನು.

ತ್ರಿಗರ್ತರಾಜಃ ಸುರಥಃ ತಸ್ಯಾಥ ರಥಧೂರ್ಗತಃ ।
ರಥಮಾಕ್ಷೇಪಯಾಮಾಸ ಗಜೇನ ಗಜಯಾನವಿತ್ ॥೧೮॥

ಗಜಯಾವನನ್ನು ತಿಳಿದ ತ್ರಿಗರ್ತರಾಜನಾದ ಸುರಥನು ಅನಂತರ ನಕುಲನ ರಥಮಾರ್ಗದ ಎದುರಿನಲ್ಲಿ ಬಂದು ತನ್ನ ಗಜದಿಂದ ನಕುಲನ ರಥವನ್ನು ಎತ್ತಿಹಾಕಿಸಿದನು.

ನಕುಲಸ್ತ್ವಭೀಸ್ತಸ್ಮಾದ್ ರಥಾಚ್ಚರ್ಮಾಸಿಪಾಣಿಮಾನ್ ।
ಉದ್ಪ್ಲಾವ್ಯ(ದ್ಪ್ಲಾಂತಂ) ಸ್ಥಾನಮಾಸ್ಥಾಯ ತಸ್ಥೌ ಗಿರಿರಿವಾಚಲಃ ॥೧೯॥

ನಕುಲನು ಭಯವನ್ನು ಹೊಂದದೆ ಕೈಯಲ್ಲಿ ಅಸಿಚರ್ಮಗಳನ್ನು ಹಿಡಿದು ತಿರುಗುವ ರಥದಿಂದ ಇಳಿದು ಒಂದುಸ್ಥಾನವನ್ನು ತಲುಪಿ ಪರ್ವತದಂತೆ ಅಚಲನಾಗಿ ನಿಂತನು.

ಸುರಥಸ್ತಂ ಗಜವರಂ ವಧಾಯ ನಕುಲಸ್ಯ ತು ।
ಪ್ರೇಷಯಾಮಾಸ ಸಕ್ರೋಧಮತ್ಯುಚ್ಚ್ರಿತಕರಂ ತತಃ ॥೨೦॥

ಸುರಥನು ನಕುಲನ ವಧೆಗಾಗಿ ಸೊಂಡಿಲನ್ನು ಎತ್ತಿದ ತನ್ನ ಕ್ರೋಧಯುಕ್ತವಾದ ಶ್ರೇಷ್ಠವಾದ ಗಜವನ್ನು ನಕುಲನ ಕಡೆಗೆ ಕಳುಹಿಸಿದನು.

ನಕುಲಸ್ತಸ್ಯ ನಾಗಸ್ಯ ಸಮೀಪೇ ಪರಿವರ್ತಿನಃ ।
ಸವಿಷಾಣಂ ಭುಜಂ ಮೂಲೇ ಖಡ್ಗೇನ ನಿರಕೃಂತತ ॥೨೧॥

ನಕುಲನು ಸಮೀಪಕ್ಕೆ ಬಂದ ಆ ಗಜದ ವಿಷಾಣಸಹಿತವಾದ ಭುಜವನ್ನು ತನ್ನ ಖಡ್ಗದಿಂದ ಕತ್ತರಿಸಿದನು.

ಸ ವಿನದ್ಯ ಮಹಾನಾದಂ ಗಜಃ ಕಿಂಕಿಣಿಭೂಷಣಃ ।
ಪತನ್ನವಾಕ್ಕಿರಾ ಭೂಮೌ ಹಸ್ತ್ಯಾರೋಹಮಪೋಥಯತ್ ॥೨೨॥

ಸಣ್ಣ ಗಂಟೆಗಳಿಂದ ಭೂಷಿತವಾದ ಆ ಗಜವು ಮಹಾನಾದವನ್ನು ಉಂಟುಮಾಡುತ್ತಾ ತಲೆಕೆಳಗಾಗಿ ಭೂಮಿಯ ಮೇಲೆ ಬೀಳುತ್ತಾ ಗಜಾರೋಹಿಯನ್ನೂ ಸಹ ಪುಡಿಮಾಡಿತು.

ಸ ತತ್ಕರ್ಮ ಮಹತ್ ಕೃತ್ವಾ ಶೂರೋ ಮಾದ್ರವತೀಸುತಃ ।
ಭೀಮಸೇನರಥಂ ಪ್ರಾಪ್ಯ ಶರ್ಮ ಲೇಭೇ ಮಹಾರಥಃ ॥೨೩॥

ಮಾದ್ರವತೀಸುತನಾದ ಶೂರನಾದ ನಕುಲನು ಆ ಮಹಾಕರ್ಮವನ್ನು ಮಾಡಿ ಭೀಮಸೇನನ ರಥವನ್ನು ತಲುಪಿ ಮಹಾರಥನಾದ ಅವನು ಸಮಾಧಾನವನ್ನು ಹೊಂದಿದನು.

ಭೀಮಸ್ತ್ವಾಪತತೋ ರಾಜ್ಞಃ ಕೋಟಿಕಾಶ್ಯಸ್ಯ ಸಂಗರೇ ।
ಸೂತಸ್ಯ ನುದತೋ ವಾಹಾನ್ ಕ್ಷುರೇಣಾಪಾಹರಚ್ಛಿರಃ ॥೨೪॥

ಭೀಮನಾದರೂ ಯುದ್ಧದಲ್ಲಿ ಮುಂದೆ ಬರುತ್ತಿರುವ ಕೋಟಿಕಾಶ್ಯನ ರಥದ ಅಶ್ವಪ್ರೇರಕನಾದ ಸಾರಥಿಯ ಶಿರಸ್ಸನ್ನು ಕ್ಷುರ ಎಂಬ ಚಿಕ್ಕಬಾಣದಿಂದ ಕೆಡವಿದನು.

ನ ಬುಬೋಧ ಹತಂ ಸೂತಂ ಸ ರಾಜಾ ಬಾಹುಶಾಲಿನಾ ।
ತಸ್ಯಾಶ್ವಾ ವ್ಯದ್ರವನ್ ಸಂಖೇ ಹತಸೂತಾಸ್ತತಸ್ತತಃ ॥೨೫॥

ಬಾಹುಶಾಲಿಯಾದ ಆ ಕೋಟಿಕಾಶ್ಯರಾಜನಿಗೆ ಸೂತನು ಹತನಾದುದೇ ತಿಳಿಯಲಿಲ್ಲ. ಯುದ್ಧದಲ್ಲಿ ಸೂತನು ಹತನಾದಾಗ ಅವನ ಅಶ್ವಗಳು ಚೆಲ್ಲಾಪಿಲ್ಲಿಯಾಗಿ ಓಡಿಹೋದವು.

ವಿಮುಖಂ ಹತಸೂತಂ ತಂ ಭೀಮಃ ಪ್ರಹರತಾಂ ವರಃ ।
ಜಘಾನ ತಲಯುಕ್ತೇನ ಪ್ರಾಸೇನಾಭ್ಯೇತ್ಯ ಪಾಂಡವಃ ॥೨೬॥

ಪ್ರಹಾರಮಾಡುವವರಲ್ಲಿ ಶ್ರೇಷ್ಠನಾದ ಭೀಮನು, ಹತಸೂತನೂ, ವಿಮುಖನೂ ಆದ ಕೋಟಿಕಾಶ್ಯನನ್ನು ಸಮೀಪಿಸಿ ತಲಯುಕ್ತವಾದ ಪ್ರಾಸದಿಂದ ಅವನನ್ನು ಸಂಹರಿಸಿದನು.

ಅಂಗಾರಕಃ ಕುಂಜರಶ್ಚ ಸಂಜಯೋ ಗುಪ್ತಕಸ್ತಥಾ ।
ಶತ್ರುಂಜಯಃ ಸುಪ್ರಬುದ್ಧೋ ಶುಭಕೃದ್ ಭ್ರಮಕಾ ಅಪಿ ॥೨೬.೧॥

ಶೂರಃ ಪರಾಕುಃ ಕುಹಕೋ ದ್ವಾದಶೈತೇ ಮಹಾರಥಾಃ ।
ಸುಬಲಾಃ ಸೈಂಧವಾಶ್ಚೈವ ತ್ರಿಗರ್ತಾಶ್ಚ ಮಹಾಬಲಾಃ ॥೨೬.೨॥

ಇಕ್ಷ್ವಾಕುಯೋಧಾಃ ಪ್ರಬಲಾ ರಥಿನಃ ಸಹಯದ್ವಿಪಾಃ ।
ಕೋಟೀಕೃತ್ಯ ಚ ಪಾರ್ಥಂ ತು ಶರವರ್ಷೈರವಾಕಿರನ್ ॥೨೬.೩॥

ಹೀಗೆ ಸೈನಿಕರ ಸಂಕ್ಷಯವನ್ನು ಮಾಡುವ ಘೋರವಾದ ಯುದ್ಧವು ನಡೆಯುತ್ತಿರಲು ಅಂಗಾರಕ, ಕುಂಜರಕ, ಸಂಜಯ, ಗುಪ್ತಕ, ಶತ್ರುಂಜಯ, ಸುಪ್ರಬುದ್ಧ, ಶುಭಕೃದ್, ಭ್ರಮಕ, ಶೂರ, ಪರಾಕು, ಕುಹಕ ಮತ್ತು ಸೌವೀರರಾದ ಈ ಹನ್ನೆರಡು ಜನ ಮಹಾರಥರೂ ಮತ್ತು ಸುಬಲ, ಸಿಂಧು, ತ್ರಿಗರ್ತ ದೇಶದ ಮಹಾಬಲಿಷ್ಠರಾದ ಯೋಧರೂ, ಪ್ರಬಲರಾದ ಇಕ್ಷ್ವಾಕು ಯೋಧರೂ ರಥಗಳನ್ನು ಏರಿ ಅಶ್ವಗಜಗಳ ಜೊತೆಯಲ್ಲಿ ಅರ್ಜುನನ ಸುತ್ತಲೂ ಒಂದು ಆವರಣವನ್ನು ನಿರ್ಮಾಣ ಮಾಡಿ ಅರ್ಜುನನನ್ನು ಬಾಣಗಳ ಮಳೆಯಿಂದ ಮುಚ್ಚಿದರು.

ಅರ್ಜುನಸ್ತು ತತಃ ಕ್ರುದ್ಧಃ ಶರವರ್ಷಂ ನಿಹತ್ಯ ಚ ।
ದ್ವಾದಶಾನಾಂ ತು ಸರ್ವೇಷಾಂ ಸೌವೀರಾಣಾಂ ಧನಂಜಯಃ ।
ಚಕರ್ತ ನಿಶಿತೈರ್ಭಲ್ಲೈರ್ಧನೂಂಷಿ ಚ ಶಿರಾಂಸಿ ಚ ॥೨೭॥

ಆಗ ಅರ್ಜುನನು ಕ್ರುದ್ಧನಾಗಿ ಅವರ ಶರವರ್ಷವನ್ನು ನಾಶಮಾಡಿ ಸೌವೀರರಾದ ಆ ಹನ್ನೆರಡು ಜನರ ಧನುಸ್ಸುಗಳೂ ಮತ್ತು ಶಿರಸ್ಸುಗಳನ್ನು ನಿಶಿತವಾದ ಭಲ್ಲಗಳಿಂದ ಕತ್ತರಿಸಿದನು.

ಶಿಬೀನಿಕ್ಷ್ವಾಕುಮುಖ್ಯಾಂಶ್ಚ ತ್ರಿಗರ್ತಾನ್ ಸೈಂಧವಾನಪಿ ।
ಜಘಾನಾತಿರಥಃ ಸಂಖೇ ಬಾಣಗೋಚರಮಾಗತಾನ್ ॥೨೮॥

ಯುದ್ಧದಲ್ಲಿ ತನ್ನ ಬಾಣಕ್ಕೆ ವಿಷಯರಾದ ಶಿಬಿಗಳನ್ನೂ, ಇಕ್ಷ್ವಾಕು ಪ್ರಮುಖರನ್ನೂ, ತ್ರಿಗರ್ತರನ್ನೂ, ಸೈಂಧವರನ್ನೂ ಅತಿರಥನಾದ ಅರ್ಜುನನು ಕೊಂದನು.

ಸಾದಿತಾಃ ಪ್ರತ್ಯದೃಶ್ಯಂತ ಬಹುಶಃ ಸವ್ಯಸಾಚಿನಾ ।
ಸಪತಾಕಾಶ್ಚ ಮಾತಂಗಾಃ ಸಧ್ವಜಾಶ್ಚ ಮಹಾರಥಾಃ ॥೨೯॥

ಅರ್ಜುನನಿಂದ ಸಂಹರಿಸಲ್ಪಟ್ಟ ಪತಾಕ ಸಹಿತವಾದ ಗಜಗಳೂ, ಧ್ವಜಸಹಿತವಾದ ಮಹಾರಥಗಳೂ ಬಹಳವಾಗಿ ಕಂಡುಬಂದವು.

ಪ್ರಚ್ಛಾದ್ಯ ಪೃಥಿವೀಂ ತಸ್ಥುಃ ಸರ್ವಮಾಯೋಧನಂ ಪ್ರತಿ ।
ಶರೀರಾಣ್ಯಶಿರಸ್ಕಾನಿ ವಿದೇಹಾನಿ ಶಿರಾಂಸಿ ಚ ॥೩೦॥

ಆ ರಣರಂಗದ ಎಲ್ಲಾ ಭೂಪ್ರದೇಶವನ್ನೂ, ಮುಂಡವಿಲ್ಲದ ರುಂಡಗಳು ಮತ್ತು ರುಂಡವಿಲ್ಲದ ಮುಂಡಗಳು ಮುಚ್ಚಿದವು.

ಶ್ವಗೃಧ್ರಕಂಕಕಾಕೋಲಭಾಸಗೋಮಾಯುವಾಯಸಾಃ ।
ಅತೃಪ್ಯಂಸ್ತತ್ರ ವೀರಾಣಾಂ ಹತಾನಾಂ ಮಾಂಸಶೋಣಿತೈಃ ॥೩೧॥

ನಾಯಿಗಳು, ಹದ್ದುಗಳು, ಕಂಕ, ಕಾಕ, ಉಲೂಕ, ಭಾಸ ಮೊದಲಾದ ಪಕ್ಷಿಗಳು, ನರಿಗಳು ಅಲ್ಲಿ ಹತರಾದ ವೀರರ ಮಾಂಸರಕ್ತಗಳಿಂದ ತೃಪ್ತಿಯನ್ನು ಹೊಂದಿದವು.

ಏವಂ ತೀಕ್ಷ್ಣಶರಜ್ವಾಲೈರ್ಗಾಂಡಿವಾನಿಲಚೋದಿತೈಃ ।
ಸೇನೇಂಧನಂ ದದಾಹಾಶು ಸರೋಷಃ ಪಾರ್ಥಪಾವಕಃ ॥೩೨॥

ಚಕ್ರಾಣಾಂ ಪತಿತಾನಾಂ ಚ ಯುಗಾನಾಂ ಚ ಮಹೀಪತೇ ।
ತೂಣೀರಾಣಾಂ ಪತಾಕಾನಾಂ ಧ್ವಜಾನಾಂ ಚ ರಥೈಸ್ಸಹ ॥೩೩॥

ಈಷಾಣಾಮನುಕರ್ಷಾಣಾಂ ತ್ರಿವೇಣೂನಾಂ ತಥೈವ ಚ ।
ಅಕ್ಷಾಣಾಮಥ ಯೋಕ್ತ್ರಾಣಾಂ ಪ್ರತೋದಾನಾಂ ಚ ರಾಶಯಃ ॥೩೪॥

ಹೀಗೆ ರೋಷದಿಂದ ಕೂಡಿದ ಪಾರ್ಥನೆಂಬ ಪಾವಕನು ಗಾಂಡೀವವೆಂಬ ವಾಯುವಿನಿಂದ ಪ್ರೇರಿತವಾದ ತೀಕ್ಷ್ಣಬಾಣಗಳೆಂಬ ಜ್ವಾಲೆಗಳಿಂದ ಕೂಡಿದವನಾಗಿ ಸೈನ್ಯ ಎಂಬ ಕಟ್ಟಿಗೆಯನ್ನು ಶೀಘ್ರವಾಗಿ ಸುಟ್ಟುಹಾಕಿದನು. ರಾಜನೇ, ಅಲ್ಲಿ ಕೆಳಗೆ ಬಿದ್ದ ಚಕ್ರಗಳ, ನೊಗಗಳ, ಬತ್ತಳಿಕೆಗಳ, ಪತಾಕೆಗಳ, ರಥಸಹಿತವಾದ ಧ್ವಜಗಳ, ಮೂಕಿಗಳ, ಧ್ವಜದ ಸಲಕರಣೆಗಳ, ತ್ರಿವೇಣುಗಳ, ಅಕ್ಷಗಳ, ಗೂಟಗಳ ಮತ್ತು ಚಾವಟಿಗಳ ರಾಶಿಗಳು ಕಂಡುಬಂದವು.

ಶಿರಸಾಂ ಪತಿತಾನಾಂ ಚ ಕುಂಡಲೋಷ್ಣೀಷಧಾರಿಣಾಮ್ ।
ಭುಜಾನಾಂ ಮಕುಟಾನಾಂ ಚ ಹಾರಣಾಮಂಗದೈಸ್ಸಹ ॥೩೫॥

ಛತ್ರಾಣಾಂ ವ್ಯಜನಾನಾಂ ಚ ಚರ್ಮಣಾಂ ವರ್ಮಣಾಂ ತಥಾ ।
ಛಿನ್ನಾನಾಂ ಕಾರ್ಮುಕಾನಾಂ ಚ ಪಟ್ಟಸಾನಾಂ ತಥೈವ ಚ ॥೩೬॥

ಶಕ್ತೀನಾಮಥ ಖಡ್ಗಾನಾಂ ದಂಡಾನಾಂ ಸಹ ತೋಮರೈಃ ।
ರಾಶಯಶ್ಚಾತ್ರ ದೃಶ್ಯಂತೇ ತತ್ರ ತತ್ರ ವಿಶಾಂಪತೇ ॥೩೭॥

ಎಲೈ ರಾಜನೇ, ಕರ್ಣಕುಂಡಲ ಮತ್ತು ರುಮಾಲುಗಳನ್ನು ಧರಿಸಿ ಬಿದ್ದ ಶಿರಸ್ಸುಗಳ, ಹಾರ ಅಂಗದ ಸಹಿತವಾದ ಭುಜಗಳ, ಕಿರೀಟಗಳ, ಛತ್ರಗಳ, ಚಾಮರಗಳ, ಗುರಾಣಿಗಳ, ಕವಚಗಳ, ಮುರಿದುಹೋದ ಬಿಲ್ಲುಗಳ, ಪಟ್ಟಸಗಳ, ಶಕ್ತಿಗಳ, ಖಡ್ಗಗಳ, ತೋಮರ ಸಹಿತವಾದ ದಂಡಗಳ ರಾಶಿಗಳು ಅಲ್ಲಲ್ಲಿ ಕಾಣುತ್ತಿದ್ದವು.

ಪತಿತೈಶ್ಚೈವ ಮಾತಂಗೈಃ ಸಯೋಧೈಃ ಪರ್ವತೋಪಮೈಃ ।
ಹಯೈರ್ದ್ವಿಧಾಕೃತೈಃ ಸಾರ್ಧಂ ಸಾದಿಭಿಃ ಸಾಯುಧೈಸ್ತಥಾ ॥೩೮॥

ವಿಪ್ರವಿದ್ಧೈಃ ರಥೈಶ್ಚೈವ ನಿಹತೈಶ್ಚ ಪದಾತಿಭಿಃ ।
ಆಗಮ್ಯರೂಪಾ ಪೃಥಿವೀ ಮಾಂಸಶೋಣಿತಕರ್ದಮಾ ॥೩೯॥

ಯೋಧಸಹಿತವಾಗಿ ಕೆಳಗೆ ಉರುಳಿದ ಪರ್ವತದಂತಹ ಗಜಗಳಿಂದ, ಆಯುಧವನ್ನು ಹಿಡಿದ ಅಶ್ವಾರೋಹಿಗಳಿಂದ ಸಹಿತವಾದ ಕತ್ತರಿಸಲ್ಪಟ್ಟ ಕುದುರೆಗಳಿಂದ,

ಮುರಿಯಲ್ಪಟ್ಟ ರಥಗಳಿಂದ, ಹತರಾದ ಪದಾತಿಗಳಿಂದ ಮತ್ತು ಮಾಂಸಶೋಣಿತ ಕರ್ದಮದಿಂದ ಕೂಡಿದ ಆ ಭೂಮಿಯು ನಡೆಯಲು ಅಸಾಧ್ಯವಾಗಿದ್ದಿತು.

ಹತೇಷು ತೇಷು ವೀರೇಷು ಸಿಂಧುರಾಜೋ ಜಯದ್ರಥಃ ।
ವಿಮುಚ್ಯ ಕೃಷ್ಣಾಂ ಸಂತ್ರಸ್ತಃ ಪಲಾಯನಪರೋऽಭವತ್ ॥೪೦॥

ಆ ವೀರರು ಹತರಾಗುತ್ತಿರಲು ಸಿಂಧುರಾಜನಾದ ಜಯದ್ರಥನು ಹೆದರಿ ದ್ರೌಪದಿಯನ್ನು ಬಿಟ್ಟು ಪಲಾಯನ ಪರನಾದನು.

ಸ ತಸ್ಮಿನ್ ಸಂಕುಲೇ ಸೈನ್ಯೇ ದ್ರೌಪದೀಮವತಾರ್ಯ ತಾಮ್ ।
ಪ್ರಾಣಪ್ರೇಪ್ಸುರುಪಾಧಾವದ್ ವನಂ ತತ್ರ ನರಾಧಮಃ ॥೪೧॥

ಆ ನರಾಧಮನು ಸೈನ್ಯದ ಗಡಿಬಿಡಿಯಲ್ಲಿ ದ್ರೌಪದಿಯನ್ನು ರಥದಿಂದ ಇಳಿಸಿ ತನ್ನ ಪ್ರಾಣವನ್ನು ಉಳಿಸಿಕೊಳ್ಳಲು ಕಾಡಿನ ಕಡೆಗೆ ಓಡಿದನು.

ದ್ರೌಪದೀಂ ಧರ್ಮರಾಜಸ್ತು ದೃಷ್ಟ್ವಾ ಧೌಮ್ಯಪುರಸ್ಕೃತಾಮ್ ।
ಮಾದ್ರೀಪುತ್ರೇಣ ವೀರೇಣ ರಥಮಾರೋಪಯತ್ ತದಾ ॥೪೨॥

ಧರ್ಮರಾಜನಾದರೂ ದ್ರೌಪದಿಯನ್ನು ನೋಡಿ ಧೌಮ್ಯರನ್ನು ಮುಂದೆ ಮಾಡಿಕೊಂಡು ವೀರನಾದ ಮಾದ್ರೀಪುತ್ರನಿಂದ ಅವಳನ್ನು ರಥಕ್ಕೆ ಹತ್ತಿಸಿದನು.

ತತಸ್ತದ್ವಿದ್ರುತಂ ಸೈನ್ಯಮಪಯಾತೇ ಜಯದ್ರಥೇ ।
ಆದಿಶ್ಯಾದಿಶ್ಯ ನಾರಾಚೈರಾಜಘಾನ ವೃಕೋದರಃ ॥೪೩॥

ಜಯದ್ರಥನು ಓಡಿಹೋಗುತ್ತಿರಲು ಆ ಸೈನ್ಯವು ಒಡೆದು ಹೋಯಿತು. ವೃಕೋದರನು ಬಾಣಗಳಿಂದ ಹೇಳಿ ಹೇಳಿ ಸೈನಿಕರಿಗೆ ಹೊಡೆದು ಕೊಂದನು.

ಸವ್ಯಸಾಚೀ ತು ತಂ ದೃಷ್ಟ್ವಾ ಪಲಾಯಂತಂ ಜಯದ್ರಥಮ್ ।
ವಾರಯಾಮಾಸ ನಿಘ್ನಂತಂ ಭೀಮಂ ಸೈಂಧವಸೈನಿಕಾನ್ ॥೪೪॥

ಸವ್ಯಸಾಚಿಯಾದ ಅರ್ಜುನನು ಓಡಿಹೋಗುತ್ತಿದ್ದ ಜಯದ್ರಥನನ್ನು ನೋಡಿ ಸೈಂಧವರ ಸೈನಿಕರನ್ನು ಕೊಲ್ಲುತ್ತಿದ್ದ ಭೀಮಸೇನನನ್ನು ತಡೆಹಿಡಿದನು.

ಅರ್ಜುನಃ

ಯಸ್ಯಾಪಚಾರಾತ್ ಪ್ರಾಪ್ತೋಽಯಮಸ್ಮಾನ್ ಕ್ಲೇಶೋ ದುರಾಸದಃ ।
ತಮಸ್ಮಿನ್ ಸಮರೋದ್ದೇಶೇ ನ ಪಶ್ಯಾಮಿ ಜಯದ್ರಥಮ್ ॥೪೫॥

ಅರ್ಜುನ– ಯಾವನ ಅಪಚಾರದಿಂದ ನಮಗೆ ಹೊಂದಲು ಅಸಾಧ್ಯವಾದ ಈ ಕ್ಲೇಶವು ಉಂಟಾಯಿತೋ ಆ ಜಯದ್ರಥನನ್ನು ಈ ಸಮರಭೂಮಿಯಲ್ಲಿ ನಾನು ಕಾಣುತಿಲ್ಲ.

ಮೂಢಂ ನೈಕೃತಿಕಂ ದುಷ್ಟಂ ದ್ರೌಪದ್ಯಾಃ ಕ್ಲೇಶಕಾರಿಣಮ್ ।
ತಮೇವಾನ್ವಿಷ ಭದ್ರಂ ತೇ ಕಿಂ ತೇ ಯೋಧೈರ್ನಿಪಾತಿತೈಃ ।
ಅನಾಮಿಷಮಿದಂ ಕರ್ಮ ಕಥಂ ವಾ ಮನ್ಯತೇ ಭವಾನ್ ॥೪೬॥

ಮೂಢನಾದ, ವಂಚನಶೀಲನಾದ, ದುಷ್ಟನಾದ, ದ್ರೌಪದಿಗೆ ಕ್ಲೇಶವನ್ನು ಕೊಟ್ಟ ಅವನನ್ನೇ ಹುಡುಕು. ನಿನಗೆ ಮಂಗಳವಾಗಲಿ. ಈ ಯೋಧರನ್ನು ಕೊಂದು ಏನು ಪ್ರಯೋಜನ? ಇದು ನಮಗೆ ತೃಪ್ತಿಯನ್ನು ಕೊಡುವ ಜಯದ್ರಥನೆಂಬ ಆಮಿಷವಿಲ್ಲದಿರುವ ಸೈನ್ಯವನ್ನು ಕೊಲ್ಲುವ ಕಾರ್ಯ. ನಿನ್ನ ಅಭಿಪ್ರಾಯವೇನು?

ವೈಶಂಪಾಯನಃ

ಇತ್ಯುಕ್ತೋ ಭೀಮಸೇನಸ್ತು ಗುಡಾಕೇಶೇನ ಧೀಮತಾ ।
ಯುಧಿಷ್ಠಿರಮಭಿಪ್ರೇಕ್ಷ್ಯ ವಾಗ್ಮೀ ವಚನಮಬ್ರವೀತ್ ॥೪೭॥

ವೈಶಂಪಾಯನ– ಹೀಗೆ ಮೇಧಾವಿಯಾದ ಅರ್ಜುನನಿಂದ ಹೇಳಲ್ಪಟ್ಟ ವಾಗ್ಮಿಯಾದ ಭೀಮಸೇನನು ಯುಧಿಷ್ಠಿರನನ್ನು ನೋಡಿ ಮಾತನಾಡಿದನು.

ಹತಪ್ರವೀರಾ ರಿಪವೋ ಭೂಯಿಷ್ಠಂ ವಿದ್ರುತಾ ದಿಶಃ ।
ಗೃಹೀತ್ವಾ ದ್ರೌಪದೀಂ ರಾಜನ್ ನಿವರ್ತತು ಭವಾನಿತಃ ॥೪೮॥

ಶತ್ರುಗಳಲ್ಲಿ ಪ್ರಧಾನರಾದವರು ಹತರಾಗಿದ್ದಾರೆ. ಇನ್ನು ಹೆಚ್ಚಿನ ಸೈನ್ಯಭಾಗವು ಓಡಿಹೋಗಿದೆ. ರಾಜನೇ, ನೀನು ದ್ರೌಪದಿಯನ್ನು ಕರೆದುಕೊಂಡು ಇಲ್ಲಿಂದ ಹಿಂದಿರುಗು.

ಯಮಾಭ್ಯಾಂ ಸಹ ರಾಜೇಂದ್ರ ಧೌಮ್ಯೇನ ಚ ಮಹಾತ್ಮನಾ ।
ಪ್ರಾಪ್ಯಾಶ್ರಮಪದಂ ರಾಜನ್ ದ್ರೌಪದೀಂ ಪರಿಸಾಂತ್ವಯ ॥೪೯॥

ರಾಜೇಂದ್ರನೇ, ನೀನು ನಕುಲಸಹದೇವರಿಂದಲೂ, ಮಹಾತ್ಮರಾದ ಧೌಮ್ಯರಿಂದಲೂ ಸಹಿತನಾಗಿ ಆಶ್ರಮಸ್ಥಾನವನ್ನು ತಲುಪಿ ದ್ರೌಪದಿಯನ್ನು ಸಮಾಧಾನಗೊಳಿಸು.

ನ ಹಿ ಮೇ ಮೋಕ್ಷ್ಯತೇ ಜೀವನ್ ಮೂಢಃ ಸೈಂಧವಕೋ ನೃಪಃ ।
ಪಾತಾಳತಲಸಂಸ್ಥೋಽಪಿ ಯದಿ ಶಕ್ರೋಽಸ್ಯ ಸಾರಥಿಃ ॥೫೦॥

ಈ ದಿನ ಮೂಢನಾದ ಸೈಂಧವನು ಪಾತಾಳತಳವನ್ನು ಸೇರಿದರೂ, ಇಂದ್ರನೇ ಅವನಿಗೆ ಸಾರಥಿಯಾಗಿದ್ದರೂ ಸಹ ಜೀವಸಹಿತನಾಗಿ ನನ್ನಿಂದ ಬಿಡುಗಡೆಯನ್ನು ಹೊಂದುವುದಿಲ್ಲ.

ಯುಧಿಷ್ಠಿರಃ

ನ ಹಂತವ್ಯೋ ಮಹಾಬಾಹೋ ದುರಾತ್ಮಾಽಪಿ ಸ ಸೈಂಧವಃ ।
ದುಃಶಲಾಮಭಿಸಂಸ್ಮೃತ್ಯ ಗಾಂಧಾರೀಂ ಚ ಯಶಸ್ವಿನೀಮ್ ॥೫೧॥

ಯುಧಿಷ್ಠಿರ– ಮಹಾಬಾಹುವೇ, ಸೈಂಧವನು ದುಷ್ಟನಾದರೂ ಯಶಸ್ವಿನಿಯಾದ ಗಾಂಧಾರಿಯನ್ನು ಮತ್ತು ತಂಗಿಯಾದ ದುಃಶಲೆಯನ್ನು ಸ್ಮರಣೆ ಮಾಡಿ ನೀನು ಅವನನ್ನು ಕೊಲ್ಲಬಾರದು.

ವೈಶಂಪಾಯನಃ

ತಚ್ಛ್ರುತ್ವಾ ದ್ರೌಪದೀ ಭೀಮಮುವಾಚ ವ್ಯಾಕುಲೇಂದ್ರಿಯಾ ।
ಕುಪಿತಾ ಹ್ರೀಮತೀ ಪ್ರಾಜ್ಞಾ ಪತೀ ಭೀಮಾರ್ಜುನಾವುಭೌ ॥೫೨॥

ವೈಶಂಪಾಯನ– ಅದನ್ನು ಕೇಳಿದ ಪ್ರಾಜ್ಞಳಾದ ನಾಚಿಕೆಯಿಂದ ಕೂಡಿದ ದ್ರೌಪದಿಯು ಕೋಪಗೊಂಡವಳಾಗಿ ವ್ಯಾಕುಲೇಂದ್ರಿಯಳಾಗಿ ಪತಿಗಳಾದ ಭೀಮಾರ್ಜುನರನ್ನು ಕುರಿತು ಮಾತನಾಡಿದಳು.

ಕರ್ತವ್ಯಂ ಚೇತ್ ಪ್ರಿಯಂ ಮಹ್ಯಂ ವಧ್ಯಃ ಸ ಪುರುಷಾಧಮಃ ।
ಸೈಂಧವಾಪಶದಃ ಪಾಪೋ ದುರ್ಮತಿಃ ಕುಲಪಾಂಸನಃ ॥೫೩॥

ನನಗೆ ಪ್ರಿಯವನ್ನು ಮಾಡುವುದಾದರೆ ಪಾಪಿಯೂ, ದುರ್ಮತಿಯೂ, ಕುಲಪಾಂಸನನೂ, ಪುರುಷಾಧಮನೂ ಆದ ಸೈಂಧವಾಪಶದನನ್ನು ಕೊಲ್ಲಬೇಕು.

ಭಾರ್ಯಾಭಿಮರ್ಷಾ ನಿರ್ವೈರೋ ಯಶ್ಚ ರಾಜ್ಯಾಪಹಾರಕಃ ।
ಯಾಚಮಾನೋಽಪಿ ಸಂಗ್ರಾಮೇ ನ ಮೋಕ್ತವ್ಯಃ ಕಥಂಚನ ॥೫೪॥

ಪತ್ನಿಯ ಮೇಲೆ ಕೈಮಾಡಿದವನು ಮತ್ತು ರಾಜ್ಯವನ್ನು ಅಪಹರಿಸಿದವನು ಯುದ್ಧದಲ್ಲಿ ವೈರವನ್ನು ತ್ಯಜಿಸಿ ಬೇಡಿದರೂ ಸಹ ಅವನನ್ನು ಎಂದೂ ಜೀವ ಸಹಿತವಾಗಿ ಉಳಿಸಬಾರದು.

ವೈಶಂಪಾಯನಃ

ಇತ್ಯುಕ್ತೌ ತೌ ನರವ್ಯಾಘ್ರೌ ಯಯತುರ್ಯತ್ರ ಸೈಂಧವಃ ।
ರಾಜಾ ನಿವವೃತೇ ಕೃಷ್ಣಾಮಾದಾಯ ಸಪುರೋಹಿತಃ ॥೫೫॥

ವೈಶಂಪಾಯನ– ಹೀಗೆ ದ್ರೌಪದಿಯು ಹೇಳಿದಾಗ ಆ ನರವ್ಯಾಘ್ರರು ಸೈಂಧವನು ಹೋದ ಕಡೆಗೆ ಹೋದರು. ಧರ್ಮರಾಜನು ಪುರೋಹಿತರ ಜೊತೆಯಲ್ಲಿ ದ್ರೌಪದಿಯನ್ನು ಕರೆದುಕೊಂಡು ಹಿಂದಿರುಗಿದನು.

ಸ ಪ್ರವಿಶ್ಯಾಶ್ರಮಪದಮಪವಿದ್ಧಬೃಸೀಕಟಮ್ ।
ಮಾರ್ಕಂಡೇಯಾದಿಭಿರ್ವಿಪ್ರೈರನುಕೀರ್ಣಂ ದದರ್ಶ ಹ ॥೫೬॥

ಅವನು ಆಶ್ರಮವನ್ನು ಪ್ರವೇಶಿಸಿ ಚೆಲ್ಲಾಪಿಲ್ಲಿಯಾಗಿ ಬಿದ್ದಿದ್ದ ಕಮಂಡಲು, ಚಾಪೆ ಮೊದಲಾದವುಗಳನ್ನು ಮಾರ್ಕಂಡೇಯಾದಿ ಬ್ರಾಹ್ಮಣರು ಜೋಡಿಸುತ್ತಿರುವುದನ್ನು ನೋಡಿದನು.

ದ್ರೌಪದೀಮನುಶೋಚದ್ಭಿರ್ಬ್ರಾಹ್ಮಣೈಸ್ತೈಃ ಸಮಾಹಿತೈಃ ।
ಸಮಿಯಾಯ ಮಹಾಪ್ರಾಜ್ಞಃ ಸಭಾರ್ಯೋ ಭ್ರಾತೃಮಧ್ಯಗಃ ॥೫೭॥

ಮಹಾಪ್ರಾಜ್ಞನಾದ ಅವನು ದ್ರೌಪದಿಯನ್ನು ಕುರಿತು ಆ ಸಮಾಹಿತರಾದ ಬ್ರಾಹ್ಮಣರು ಶೋಕಪಡುತ್ತಿರಲು ಭಾರ್ಯಾಸಹಿತನಾಗಿ ಭ್ರಾತೃಗಳ ಮಧ್ಯದಲ್ಲಿ ಇರುವವನಾಗಿ ಆ ಬ್ರಾಹ್ಮಣರ ಜೊತೆಯಲ್ಲಿ ಸಮಾಗಮವನ್ನು ಹೊಂದಿದನು.

ತೇ ಸ್ಮ ತಂ ಮುದಿತಾ ದೃಷ್ಟ್ವಾ ಪುನರಭ್ಯಾಗತಂ ನೃಪಮ್ ।
ಜಿತ್ವಾ ತಾನ್ ಸಿಂಧುಸೌವೀರಾನ್ ದ್ರೌಪದೀಂ ಚಾಹೃತಾಂ ಪುನಃ ।
ಸ ತೈಃ ಪರಿವೃತೋ ರಾಜಾ ತತ್ರೈವೋಪವಿವೇಶ ಹ ॥೫೮॥

ಅವರು ಸಿಂಧುಸೌವೀರರನ್ನು ಗೆದ್ದು ದ್ರೌಪದಿಯನ್ನು ಕರೆದುಕೊಂಡು ಪುನಃ ಆಶ್ರಮಕ್ಕೆ ಬಂದ ರಾಜನನ್ನು ನೋಡಿ ಸಂತುಷ್ಟರಾದರು. ಅವರಿಂದ ಸುತ್ತುವರಿಯಲ್ಪಟ್ಟ ರಾಜನು ಅಲ್ಲಿಯೇ ಕುಳಿತುಕೊಂಡನು.

ಪ್ರವಿವೇಶಾಶ್ರಮಂ ಕೃಷ್ಣಾ ಯಮಾಭ್ಯಾಂ ಸಹ ಭಾಮಿ(ವಿ)ನೀ ॥೫೯॥

ಭಾಮಿನಿಯಾದ ದ್ರೌಪದಿಯೂ ಸಹ ನಕುಲಸಹದೇವರ ಜೊತೆಯಲ್ಲಿ ಆಶ್ರಮವನ್ನು ಪ್ರವೇಶಿಸಿದಳು.

ಭೀಮಸೇನಾರ್ಜುನೌ ಚಾಪಿ ಶ್ರುತ್ವಾ ಕ್ರೋಶಗತಂ ರಿಪುಮ್ ।
ಸ್ವಯಮಶ್ವಾಂಸ್ತುದಂತೌ ತೌ ಜವೇನೈವಾಭ್ಯಧಾವತಾಮ್ ॥೬೦॥

ಭೀಮಸೇನ ಅರ್ಜುನರೂ ಸಹ ಸೈಂಧವನು ಒಂದು ಕ್ರೋಶ ದೂರ ಹೋಗಿದ್ದಾನೆಂದು ಕೇಳಿ ಕುದುರೆಗಳನ್ನು ತಾವೇ ಪ್ರೇರಣೆ ಮಾಡುತ್ತಾ ವೇಗದಿಂದ ಓಡಿದರು.

ಇದಮತ್ಯದ್ಭುತಂ ಚಾತ್ರ ಚಕಾರ ಪುರುಷೋऽರ್ಜುನಃ ।
ಕ್ರೋಶಮಾತ್ರಗತಾನಶ್ವಾನ್ ಸೈಂಧವಸ್ಯ ಜಘಾನ ಯತ್ ॥೬೧॥

ಒಂದು ಕ್ರೋಶದೂರದಲ್ಲಿದ್ದ ಸೈಂಧವನ ಕುದುರೆಗಳಿಗೆ ಬಾಣಪ್ರಯೋಗವನ್ನು ಮಾಡಿ ಅವುಗಳನ್ನು ಕೊಂದು ಅರ್ಜುನನು ಈ ಅದ್ಭುತವಾದ ಕಾರ್ಯವನ್ನು ಮಾಡಿದನು.

ಸ ಹಿ ದಿವ್ಯಾಸ್ತ್ರಸಂಪನ್ನಃ ಕೃಚ್ಛ್ರಕಾಲೇऽಪ್ಯಸಂಭ್ರಮಃ ।
ಅಕರೋದ್ ದುಷ್ಕರಂ ಕರ್ಮ ಶರೈರಸ್ತ್ರಾನುಮಂತ್ರಿತೈಃ ॥೬೨॥

ದಿವ್ಯಾಸ್ತ್ರಸಂಪನ್ನನೂ ಕಷ್ಟಕಾಲದಲ್ಲಿಯೂ ಪ್ರಮಾದಕ್ಕೆ ಒಳಗಾಗದವನೂ ಆದ ಅವನು ಅಸ್ತ್ರಗಳಿಂದ ಮಂತ್ರಿತವಾದ ಶರಗಳಿಂದ ದುಷ್ಕರವಾದ ಕರ್ಮವನ್ನು ಮಾಡಿದನು.

ತತೋಽಭ್ಯಧಾವತಾಂ ವೀರಾವುಭೌ ಭೀಮಧನಂಜಯೌ ।
ಹತಾಶ್ವಂ ಸೈಂಧವಂ ಭೀತಮೇಕಂ ವ್ಯಾಕುಲಚೇತಸಮ್ ॥೬೩॥

ಅನಂತರ ಅಶ್ವಗಳನ್ನು ಕಳೆದುಕೊಂಡು ವ್ಯಾಕುಲಚೇತನನಾಗಿ ಭಯದಿಂದ ಏಕಾಕಿಯಾಗಿ ಓಡುತ್ತಿದ್ದ ಸೈಂಧವನ ಕಡೆಗೆ ವೀರರಾದ ಭೀಮಾರ್ಜುನರಿಬ್ಬರೂ ಓಡಿದರು.

ಸೈಂಧವಸ್ತು ಹತಾನ್ ದೃಷ್ಟ್ವಾ ತಥಾऽಶ್ವಾನ್ ಸ್ವಾನ್ ಸುದುಃಖಿತಃ ।
ರಥಾತ್ ಪ್ರಸ್ಕಂದ್ಯ ಪದ್ಭ್ಯಾಂ ವೈ ಪಲಾಯನಪರೋऽಭವತ್ ॥೬೪॥

ಸೈಂಧವನಾದರೂ ತನ್ನ ಕುದುರೆಗಳು ಹತವಾದುದನ್ನು ನೋಡಿ ಬಹಳ ದುಃಖದಿಂದ ಕೂಡಿದವನಾಗಿ ರಥದಿಂದ ಧುಮುಕಿ ಕಾಲಿನಿಂದಲೇ ಓಡಲು ಪ್ರಾರಂಭ ಮಾಡಿದನಷ್ಟೆ?

ದೃಷ್ಟ್ವಾ ಏಕ್ಷವಕರ್ಮಾಣೆ ಕುರ್ವಾಣಂ ಚ ಧನಂಜಯಮ್ ।
ಪಲಾಯನಕೃತೋತ್ಸಾಹಃ ಪ್ರಾದ್ರವದ್ ಯೇನ ವೈ ವನಮ್ ॥೬೫॥

ಅರ್ಜುನನು ಒಮ್ಮೊಮ್ಮೆ ಎಡವುತ್ತಿದ್ದುದನ್ನು ಗಮನಿಸಿದ ಅವನು ಪಲಾಯನದಲ್ಲಿ ಉತ್ಸಾಹವನ್ನು ಹೊಂದಿದವನಾಗಿ ಕಾಡಿನ ಕಡೆಗೆ ಓಡಿದನು.

ಸೈಂಧವಂ ತ್ವಭಿಸಂಪ್ರೇಕ್ಷ್ಯ ಪರಾಕ್ರಾಂತಂ ಪಲಾಯನೇ ।
ಅನುಯಾಯ ಮಹಾಬಾಹುಃ ಫಲ್ಗುನೋ ವಾಕ್ಯಮಬ್ರವೀತ್ ॥೬೬॥

ಪಲಾಯನದಲ್ಲಿ ನಿರತನಾಗಿದ್ದ ಸೈಂಧವನನ್ನು ನೋಡಿ ಅವನನ್ನು ಹಿಂಬಾಲಿಸಿ ಮಹಾಬಾಹುವಾದ ಅರ್ಜುನನು ಅವನನ್ನು ಕುರಿತು ಮಾತನಾಡಿದನು.

ಅನೇನ ವೀರ್ಯೇಣ ಕಥಂ ಸ್ತ್ರಿಯಂ ಪ್ರಾರ್ಥಯಸೇ ಬಲಾತ್ ।
ರಾಜಪುತ್ರ ನಿವರ್ತಸ್ವ ನ ತೇ ಯುಕ್ತಂ ಪಲಾಯನಮ್ ।
ಕಥಂ ಹ್ಯನುಚರಾನ್ ಹಿತ್ವಾ ಶತ್ರುಮಧ್ಯೇ ಪಲಾಯಸೇ ॥೬೭॥

ಎಲೈ ರಾಜಪುತ್ರನೇ, ಇಂತಹ ಪರಾಕ್ರಮವನ್ನು ಹೊಂದಿದ ನೀನು ಹೇಗೆ ಇನ್ನೊಬ್ಬರ ಪತ್ನಿಯನ್ನು ಬಯಸುವಿ? ಹಿಂದಿರುಗು. ಪಲಾಯನವು ನಿನಗೆ ಯೋಗ್ಯವಲ್ಲ. ನಿನ್ನ ಹಿಂಬಾಲಕರನ್ನು ಬಿಟ್ಟು ಹೇಗೆ ಶತ್ರುಗಳ ಮಧ್ಯದಲ್ಲಿ ಓಡಿಹೋಗುತ್ತಿದ್ದೀಯೆ?

ವೈಶಂಪಾಯನಃ

ಇತ್ಯುಚ್ಯಮಾನಃ ಪಾರ್ಥೇನ ಸೈಂಧವೋ ನ ನ್ಯವರ್ತತ ॥೬೮॥

ತಿಷ್ಠ ತಿಷ್ಠೇತಿ ತಂ ಭೀಮಃ ಸಹಸಾऽಭ್ಯದ್ರವದ್ ಬಲೀ ।
ಮಾ ವಧೀರಿತಿ ಪಾರ್ಥಸ್ತಂ ದಯಾವಾನ್ ಪ್ರತ್ಯಭಾಷತ ॥೬೯॥

ವೈಶಂಪಾಯನ– ಅರ್ಜುನನು ಹೀಗೆ ಹೇಳುತ್ತಿದ್ದರೂ ಸೈಂಧವನು ಹಿಂದಿರುಗಲಿಲ್ಲ. ಬಲಿಷ್ಠನಾದ ಭೀಮಸೇನನು ನಿಲ್ಲು, ನಿಲ್ಲು ಎಂದು ಹೇಳುತ್ತಾ ಅವನ ಹಿಂದೆ ಓಡಿದನು. ದಯಾಳುವಾದ ಅರ್ಜುನನು ಭೀಮಸೇನನನ್ನು ಕುರಿತು ಅವನನ್ನು ಕೊಲ್ಲಬೇಡ ಎಂದು ಹೇಳಿದನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂಸಂಹಿತಾಯಾಂ ವೈಯಾಸಿಕ್ಯಾಂ
ವನಪರ್ವಣಿ ಏಕೋನನವಷ್ಟ್ಯಧಿಕದ್ವಿಶತತಮೋऽಧ್ಯಾಯಃ ॥
॥ಇತಿ ದ್ರೌಪದೀಹರಣಪರ್ವಣಿ ಜಯದ್ರಥಕುಲಾಯನಂ ನಾಮ ಅಷ್ಟಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವನಪರ್ವದಲ್ಲಿ ಇನ್ನೂರ ಐವತ್ತೊಂಬತ್ತನೆಯ
ಅಧ್ಯಾಯ ಮುಗಿಯಿತು.

★ ★ ★ ★

ಜಯದ್ರಥ ವಿಮೋಕ್ಷಪರ್ವ

ಇನ್ನೂರ ಅರವತ್ತನೆಯ ಅಧ್ಯಾಯ

ಭೀಮನಿಂದ ಜಯದ್ರಥನನ್ನು ಹಿಡಿದು ಪಾದಪ್ರಹಾರವನ್ನು ಮಾಡಿ ಅವನಿಗೆ ಪಂಚಚೂಡಾಕರಣ. ಯುಧಿಷ್ಠಿರನಿಂದ ಸೈಂಧವನ ವಿಮೋಚನೆ. ಸೈಂಧವನ ತಪಸ್ಸು ಮತ್ತು ರುದ್ರದೇವರಿಂದ ವರದಾನ.

ವೈಶಂಪಾಯನಃ

ಜಯದ್ರಥಸ್ತು ಸಂಪ್ರೇಕ್ಷ್ಯ ಭ್ರಾತರಾವುದ್ಯತಾವುಭೌ ।
ಪ್ರಾಧಾವತ್ತೂರ್ಣಮವ್ಯಗ್ರೋ ಜೀವಿತೇಪ್ಸುಃ ಸುದುಃಖಿತಃ ॥೧॥

ವೈಶಂಪಾಯನ– ಜಯದ್ರಥನು ಸಹೋದರರಿಬ್ಬರೂ ತನ್ನ ಬೆನ್ನು ಹತ್ತಿ ಬರುತ್ತಿರುವುದನ್ನು ನೋಡಿ ಸುದುಃಖಿತನಾಗಿ ಜೀವವನ್ನು ಉಳಿಸಿಕೊಳ್ಳಲು ಬಯಸಿ ಅವ್ಯಗ್ರನಾಗಿ ಶೀಘ್ರವಾಗಿ ಓಡಿದನು.

ಲತಾಭಿಃ ಸಂವೃತೇ ಕಕ್ಷೇ ಕಿರೀಟಂ ರತ್ನಭಾಸ್ವರಮ್ ।
ಅಪವಿಧ್ಯ ಪ್ರಧಾವಂತಂ ನಿಲೀಯಂತಂ ವನಾಂತರೇ ॥೨॥

ಲತೆಗಳಿಂದ ಮುಚ್ಚಲ್ಪಟ್ಟಿದ್ದ ಒಂದು ಪೊದೆಯಲ್ಲಿ ತನ್ನ ರತ್ನದಿಂದ ಶೋಭಿಸುವ ಕಿರೀಟವನ್ನು ಎಸೆದು ಕಾಡಿನಲ್ಲಿ ಅಲ್ಲಲ್ಲಿ ಅವಿತುಕೊಂಡು ಓಡಿದನು.

ಭೀಮಸೇನಸ್ತು ತಂ ಕಕ್ಷೇ ಲೀಯಮಾನಂ ಭಯಾಕುಲಮ್ ।
ಮಾರ್ಗಮಾಣೋऽವತೀರ್ಯಾಶು ರಥಾದ್ರತ್ನವಿಭೂಷಿತಾತ್ ॥೩॥

ಭೀಮಸೇನನಾದರೂ ಭಯಾಕುಲನಾಗಿ ಪೊದೆಗಳಲ್ಲಿ ಅವಿತುಕೊಳ್ಳುತ್ತಿದ್ದ ಅವನನ್ನು ಹುಡುಕುತ್ತಾ ತನ್ನ ರತ್ನವಿಭೂಷಿತವಾದ ರಥದಿಂದ ಇಳಿದು (ಹಿಂಬಾಲಿಸಿದನು).

ತಂ ಭೀಮಸೇನೋ ಧಾವಂತಮವತೀರ್ಯ ರಥಾದ್ ಬಲೀ ।
ಅಭಿದ್ರುತ್ಯ ನಿಜಗ್ರಾಹ ಕೇಶಪಕ್ಷೇ ಹ್ಯಮರ್ಷಣಃ ॥೪॥

ಸಮುದ್ಯಮ್ಯ ಚ ತಂ ಭೀಮೋ ನಿಷ್ಪಿಪೇಷ ಮಹೀತಲೇ ।
ಶಿರೋ ಗೃಹೀತ್ವಾ ರಾಜಾನಂ ತಾಡಯಾಮಾಸ ಚೈವ ಹಿ ॥೫॥

ಕ್ರೋಧಶೀಲನಾದ ಭೀಮಸೇನನು ಅವನ ಹಿಂದೆ ಓಡಿ ಅವನ ಕೇಶಗಳಲ್ಲಿ ಅವನನ್ನು ಹಿಡಿದು ಭೂಮಿಯಲ್ಲಿ ಹಾಕಿ ಅರೆದನು. ಮತ್ತು ಶಿರಸ್ಸನ್ನು ಹಿಡಿದುಕೊಂಡು ಆ ರಾಜನಿಗೆ ತಾಡನವನ್ನು ಮಾಡಿದನು.

ಪುನಃ ಸಂಜೀವಮಾನಸ್ಯ ತಸ್ಯೋತ್ಪತಿತುಮಿಚ್ಛತಃ ।
ಪದಾ ಮೂರ್ಧ್ನಿ ಮಹಾಬಾಹುಃ ಪ್ರಾಹರದ್ ವಿಲಪಿಷ್ಯತಃ ॥೬॥

ಪುನಃ ಮೇಲೇಳಲು ಇಚ್ಛಿಸಿ ಜೀವಸಹಿತನಾಗಿ ವಿಲಾಪವನ್ನು ಮಾಡುತ್ತಿದ್ದ ಅವನ ತಲೆಯನ್ನು ಮಹಾಬಾಹುವಾದ ಭೀಮಸೇನನು ತನ್ನ ಕಾಲಿನಿಂದ ಒದ್ದನು.

ತಸ್ಯ ಜಾನೂ ದದೌ ಭೀಮೋ ಜಘ್ನೇ ಚೈನಮರತ್ನಿನಾ ।
ಸ ಮೋಹಮಗಮದ್ ರಾಜಾ ಪ್ರಹಾರವರಪೀಡಿತಃ ॥೭॥

ಅವನನ್ನು ತನ್ನ ಮಂಡಿಗಳಿಂದ ಹಿಡಿದು ತನ್ನ ಮೊಣಕೈಯಿಂದ ಅವನಿಗೆ ಗುದ್ದಿದನು. ಅಂತಹ ದೊಡ್ಡ ಹೊಡೆತದಿಂದ ಪೀಡಿತನಾದ ಜಯದ್ರಥನು ಮೂರ್ಛೆ ಹೋದನು.

ಸರೋಷಂ ಭೀಮಸೇನಂ ತು ವಾರಯಾಮಾಸ ಫಲ್ಗುನಃ ।
ದುಃಶಲಾಯಾಃ ಕೃತೇ ರಾಜಾ ಯತ್ತದಾಹೇತಿ ಕೌರವಃ ॥೮॥

ಅರ್ಜುನನು ದುಃಶಲೆಯ ಸಲುವಾಗಿ ಕೌರವರಾಜನಾದ ಯುಧಿಷ್ಠಿರನು ಏನು ಹೇಳಿದನೋ ಅದನ್ನು ಸ್ಮರಿಸಿ ರೋಷದಿಂದ ಕೂಡಿದ ಭೀಮಸೇನನನ್ನು ತಡೆದನು.

ಭೀಮಸೇನಃ

ನಾಯಂ ಪಾಪಸಮಾಚಾರೋ ಮತ್ತೋ ಜೀವಿತುಮರ್ಹತಿ ।
ಕೃಷ್ಣಾಯಾಸ್ತದನರ್ಹಾಯಾಃ ಪರಿಕ್ಲೇಷ್ಟಾ ನರಾಧಮಃ ॥೯॥

ಭೀಮಸೇನ– ಪಾಪಾಚಾರವುಳ್ಳ ಇವನು ನನ್ನ ಕೈಗೆ ಸಿಲುಕಿ ಜೀವಂತವಾಗಿ ಉಳಿಯಬಾರದು. ಇವನು ಅಂತಹ ಕ್ಲೇಶಕ್ಕೆ ಅರ್ಹಳಲ್ಲದ ದ್ರೌಪದಿಗೆ ಬಹಳ ಕ್ಲೇಶವನ್ನು ಕೊಟ್ಟ ನರಾಧಮ.

ಕಿಂ ನು ಶಕ್ಯಂ ಮಯಾ ಕರ್ತುಂ ಯದ್ ರಾಜಾ ಸತತಂ ಘೃಣೀ ।
ತ್ವಂ ಚ ಬಾಲಿಶಯಾ ಬುದ್ಧ್ಯಾ ಸದೈವಾಸ್ಮಾನ್ ಪ್ರಬಾಧಸೇ ॥೧೦॥

ರಾಜನು ಹೀಗೆ ಯಾವಾಗಲೂ ದಯಾಪರನಾಗಿರುವಾಗ ನಾನೇನು ಮಾಡಲಿ? ನೀನೂ ಸಹ ಬಾಲಿಶ ಬುದ್ಧಿಯಿಂದ ಯಾವಾಗಲೂ ನನ್ನನ್ನು ಪೀಡಿಸುತ್ತಿದ್ದೀಯೆ.

ಏವಮುಕ್ತ್ವಾ ಸಟಾಸ್ತಸ್ಯ ಪಂಚ ಚಕ್ರೇ ವೃಕೋದರಃ ।
ಅರ್ಧಚಂದ್ರೇಣ ಬಾಣೇನ ಕಿಂಚಿದಬ್ರುವತಸ್ತದಾ ।
ವಿಕಲ್ಪಯಿತ್ವಾ ರಾಜಾನಂ ತತಃ ಪ್ರಾಹ ವೃಕೋದರಃ ॥೧೧॥

ವೈಶಂಪಾಯನ– ಹೀಗೆ ಹೇಳಿ ವೃಕೋದರನು ತನ್ನ ಅರ್ಧಚಂದ್ರ ಬಾಣದಿಂದ ಏನೂ ಮಾತನಾಡದೆ ಮೌನವಾಗಿದ್ದ ಅವನ ತಲೆಕೂದಲುಗಳನ್ನು ಐದುಭಾಗವನ್ನಾಗಿ ಮಾಡಿದನು. ಆ ರಾಜನನ್ನು ವಿರೂಪಗೊಳಿಸಿ ಅನಂತರ ಭೀಮಸೇನನು ಮಾತನಾಡಿದನು.

ಜೀವಿತುಂ ಚೇಚ್ಛಸೇ ಮೂಢ ಹೇತುಂ ಮೇ ಗದತಃ ಶೃಣು ॥೧೨॥

ದಾಸೋಽಸ್ಮೀತಿ ತಥಾ ವಾಚ್ಯಂ ಸಂಸತ್ಸು ಚ ಸಭಾಸು ಚ ।
ಏವಂ ಚೇಜ್ಜೀವಿತಂ ದದ್ಯಾಂ ಏಷ ಯುದ್ಧಜಿತೋ ವಿಧಿಃ ॥೧೩॥

ಮೂಢನೇ, ನೀನು ಬದುಕಲು ಬಯಸುತ್ತೀಯೆ. ಬದುಕಬೇಕಾದರೆ ಅದಕ್ಕೆ ಕಾರಣವನ್ನು ಹೇಳುತ್ತೇನೆ, ಕೇಳು. ನಾನು ನಿಮ್ಮ ದಾಸನಾಗಿದ್ದೇನೆ ಎಂದು ನೀನು ಸಜ್ಜನರಿರುವ ಸಭೆಯಲ್ಲಿ ಹೇಳಬೇಕು. ಹಾಗಾದರೆ ನಿನಗೆ ಜೀವಿತವನ್ನು ಕೊಡುತ್ತೇನೆ. ಇದು ಯುದ್ಧದಲ್ಲಿ ಪರಾಜಿತರಾದವರು ಅನುಸರಿಸಬೇಕಾದ ಕ್ರಮ.

ವೈಶಂಪಾಯನಃ

ಏವಮಸ್ತ್ವಿತಿ ತಂ ರಾಜಾ ಕೃಷ್ಯಮಾಣೋ ಜಯದ್ರಥಃ ।
ಪ್ರೋವಾಚ ಪುರುಷವ್ಯಾಘ್ರಂ ಭೀಮಮಾಹವಶೋಭಿನಮ್ ॥೧೪॥

ವೈಶಂಪಾಯನ– ಹಾಗೆಯೇ ಆಗಲಿ ಎಂದು ಹೇಳಿ ಭೀಮಸೇನನಿಂದ ಎಳೆಯಲ್ಪಡುತ್ತಿದ್ದ ಆ ಜಯದ್ರಥರಾಜನು ಆಹವಶೋಭಿಯಾದ ಪುರುಷವ್ಯಾಘ್ರನಾದ ಭೀಮಸೇನನನ್ನು ಕುರಿತು ಹೇಳಿದನು.

ತತ ಏನಂ ವಿಚೇಷ್ಟಂತಂ ಬದ್ವಾ ಪಾರ್ಥೋ ವೃಕೋದರಃ ।
ರಥಮಾರೋಪಯಾಮಾಸ ವಿಸಂಜ್ಞಂ ಪಾಂಸುಗುಂಠಿತಮ್ ॥೧೫॥

ಅನಂತರ ಕುಂತೀಪುತ್ರನಾದ ವೃಕೋದರನು ವಿಸಂಜ್ಞನಾಗಿ ಧೂಳಿನಿಂದ ಆವೃತನಾಗಿ ಸ್ವಲ್ಪ ಶರೀರ ಚೇಷ್ಟೆಯನ್ನು ಹೊಂದಿದ್ದ ಅವನನ್ನು ಕಟ್ಟಿ ರಥದಲ್ಲಿ ಹಾಕಿದನು.

ತತಸ್ತಂ ರಥಮಾಸ್ಥಾಯ ಭೀಮಃ ಪಾರ್ಥಾನುಗಸ್ತದಾ ।
ಅಭ್ಯೇತ್ಯಾಶ್ರಮಮಧ್ಯಸ್ಥಮಭ್ಯಗಚ್ಛದ್ ಯುಧಿಷ್ಠಿರಮ್ ॥೧೬॥

ಅನಂತರ ಅರ್ಜುನನಿಂದ ಹಿಂಬಾಲಿಸಲ್ಪಟ್ಟ ಭೀಮನು ಆ ರಥವನ್ನು ಏರಿ ಆಶ್ರಮಕ್ಕೆ ಬಂದು ಆಶ್ರಮದ ಮಧ್ಯದಲ್ಲಿದ್ದ ಯುಧಿಷ್ಠಿರನ ಸಮೀಪಕ್ಕೆ ಬಂದನು.

ದರ್ಶಯಾಮಾಸ ಭೀಮಸ್ತು ತದವಸ್ಥಂ ಜಯದ್ರಥಮ್ ।
ತಂ ರಾಜಾ ಪ್ರಾಹಸದ್ ದೃಷ್ಟ್ವಾ ಮುಚ್ಯತಾಮಿತಿ ಚಾಬ್ರವೀತ್ ॥೧೭॥

ಭೀಮಸೇನನಾದರೂ ಆ ಅವಸ್ಥೆಯಲ್ಲಿದ್ದ ಜಯದ್ರಥನನ್ನು ಯುಧಿಷ್ಠಿರನಿಗೆ ತೋರಿಸಿದನು. ಆ ರಾಜನು ಅವನನ್ನು ನೋಡಿ ನಕ್ಕು ಅವನನ್ನು ಬಿಡುಗಡೆ ಮಾಡು ಎಂದು ಹೇಳಿದನು.

ರಾಜಾನಂ ಚಾಬ್ರವೀದ್ ಭೀಮೋ ದ್ರೌಪದ್ಯಾ ಕಥ್ಯತಾಮಿತಿ ।
ದಾಸಭಾವಗತೋ ಹ್ಯೇಷ ಪಾಂಡೂನಾಂ ಪಾಪಚೇತನಃ ।
ತಮುವಾಚ ತತೋ ಜ್ಯೇಷ್ಠೋ ಭ್ರಾತಾ ಸಪ್ರಣಯಂ ವಚಃ ॥೧೮॥

ಮುಂಚೈನಮಧಮಾಚಾರಂ ಪ್ರಮಾಣಾ ಯದಿ ತೇ ವಯಮ್ ।
ದ್ರೌಪದೀ ಚಾಬ್ರವೀದ್ ಭೀಮಮಭಿಪ್ರೇಕ್ಷ್ಯ ಯುಧಿಷ್ಠಿರಮ್ ॥೧೯॥

ದಾಸೋಽಯಂ ಮುಚ್ಯತಾಂ ರಾಜನ್ಸ್ತ್ವಯಾ ಪಂಚಸಟಃ ಕೃತಃ ।
ಏವಮುಕ್ತಃ ಸ ಭೀಮಸ್ತು ಭ್ರಾತ್ರಾ ಚೈವ ಚ ಕೃಷ್ಣಯಾ ।
ಮುಮೋಚ ತಂ ಮಹಾಪಾಪಂ ಜಯದ್ರಥಮಚೇತಸಮ್ ॥೨೦॥

ಭೀಮನು ರಾಜನನ್ನು ಕುರಿತು ದ್ರೌಪದಿಯು ಹೇಳಲಿ ಎಂದು ಹೇಳಿದನು. ಈ ಪಾಪಚೇತನನು ಪಾಂಡವರಿಗೆ ದಾಸನಾಗಿದ್ದಾನೆ ಎಂದೂ ಹೇಳಿದನು. ಆಗ ಅಣ್ಣನಾದ ಧರ್ಮರಾಜನು ಸ್ನೇಹಪೂರ್ವಕವಾಗಿ ಭೀಮಸೇನನನ್ನು ಕುರಿತು ಪ್ರೀತಿಪೂರ್ವಕವಾಗಿ ನಿನಗೆ ನನ್ನ ಮೇಲೆ ಗೌರವವಿದ್ದರೆ ಈ ನೀಚ ಕರ್ಮವನ್ನು ಮಾಡಿರುವ ಜಯದ್ರಥನನ್ನು ಬಿಟ್ಟುಬಿಡು ಎಂದು ಹೇಳಿದನು. ದ್ರೌಪದಿಯೂ ಸಹ ಯುಧಿಷ್ಠಿರನನ್ನು ನೋಡುತ್ತಾ ಭೀಮಸೇನನನ್ನು ಕುರಿತು ರಾಜನಾದ ದಾಸನಾದ ಇವನಿಗೆ ನೀನು ಪಂಚಚೂಡಗಳನ್ನು ಮಾಡಿದ್ದೀಯೆ. ಇವನನ್ನು ಬಿಟ್ಟುಬಿಡು ಎಂದು ಹೇಳಿದಳು. ಹೀಗೆ ಅಣ್ಣನಿಂದಲೂ ಮತ್ತು ದ್ರೌಪದಿಯಿಂದಲೂ ಹೇಳಲ್ಪಟ್ಟ ಭೀಮನು ವಿಚೇತನನಾದ, ಮಹಾಪಾಪಿಯಾದ ಆ ಜಯದ್ರಥನನ್ನು ಮೋಚನೆ ಮಾಡಿದನು.

ಸ ಮುಕ್ತೋಽಭ್ಯೇತ್ಯ ರಾಜಾನಮಭಿವಾದ್ಯ ಯುಧಿಷ್ಠಿರಮ್ ।
ವವಂದೇ ವಿಹ್ವಲೋ ರಾಜಂಸ್ತಾಂಶ್ಚ ದೃಷ್ಟ್ವಾ ಮುನೀಂಸ್ತದಾ ॥೨೧॥

ಎಲೈ ರಾಜನೇ, ಬಿಡುಗಡೆಯನ್ನು ಹೊಂದಿದ ಅವನು ರಾಜನಾದ ಯುಧಿಷ್ಠಿರನಿಗೆ ನಮಸ್ಕಾರವನ್ನು ಮಾಡಿ ಅಲ್ಲಿ ನೆರೆದಿದ್ದ ಮುನಿಗಳನ್ನು ನೋಡಿ ಅವರಿಗೂ ಸಹ ವಿಹ್ವಲನಾಗಿ ನಮಸ್ಕಾರವನ್ನು ಮಾಡಿದನು.

ತಮುವಾಚ ಘೃಣೀ ರಾಜಾ ಧರ್ಮಪುತ್ರೋ ಯುಧಿಷ್ಠಿರಃ ।
ತಥಾ ಜಯದ್ರಥಂ ದೃಷ್ಟ್ವಾ ಗೃಹೀತಂ ಸವ್ಯಸಾಚಿನಾ ॥೨೨॥

ಅರ್ಜುನನಿಂದ ಗೃಹೀತನಾಗಿದ್ದ ಜಯದ್ರಥನನ್ನು ನೋಡಿ ದಯಾಳುವಾದ ಧರ್ಮಪುತ್ರನಾದ ಯುಧಿಷ್ಠಿರ ರಾಜನು ಅವನನ್ನು ಕುರಿತು ಮಾತನಾಡಿದನು.

ಅದಾಸೋ ಗಚ್ಚ ಮುಕ್ತೋಸಿ ಮೈವಂ ಕಾರ್ಷೀಃ ಪುನಃ ಕ್ವಚಿತ್ ।
ಸ್ತ್ರೀಕಾಮುಕ ಧಿಗಸ್ತು ತ್ವಾಂ ಕ್ಷುದ್ರಃ ಕ್ಷುದ್ರಸಹಾಯವಾನ್ ॥೨೩॥

ನಿನ್ನನ್ನು ಬಿಡುಗಡೆ ಮಾಡಿದ್ದೇವೆ. ನೀನು ದಾಸನಾಗದೆ ಇಲ್ಲಿಂದ ಹೋಗು. ಇನ್ನೊಮ್ಮೆ ಇಂತಹ ಕಾರ್ಯವನ್ನು ಮಾಡಬೇಡ. ಸ್ತ್ರೀಕಾಮುಕನೇ ನಿನಗೆ ಧಿಕ್ಕಾರವಿರಲಿ. ನೀನು ಕ್ಷುದ್ರನಾದವನು ಮತ್ತು ಕ್ಷುದ್ರರ ಸಹಾಯವನ್ನು ಹೊಂದಿದವನು.

ಏವಂವಿಧಂ ಹಿ ಕಃ ಕುರ್ಯಾತ್ ತ್ವದನ್ಯಃ ಪುರುಷಾಧಮಃ ।
ಕರ್ಮ ಧರ್ಮವಿರುದ್ಧಂ ವೈ ಲೋಕದುಷ್ಟಂ ಚ ದುರ್ಮತೇ ॥೨೪॥

ಎಲೈ ದುರ್ಮತಿಯೇ, ಇಂತಹ ಧರ್ಮವಿರುದ್ಧವಾದ ಲೋಕದುಷ್ಟವಾದ ಕಾರ್ಯವನ್ನು ನಿನ್ನನ್ನು ಬಿಟ್ಟು ಯಾವ ಪುರುಷಾಧಮನು ಮಾಡಿಯಾನು? (ಎಂದು ಹೇಳಿದನು).

ವೈಶಂಪಾಯನಃ

ಗತಸತ್ವಮಿವ ಜ್ಞಾತ್ವಾ ಕರ್ತಾರಮ ಶುಭಸ್ಯ ತಮ್ ।
ಸಂಪ್ರೇಕ್ಷ್ಯ ಭರತಶ್ರೇಷ್ಠಃ ಕೃಪಾಂ ಚಕ್ರೇ ನರಾಧಿಪಃ ॥೨೫॥

ವೈಶಂಪಾಯನ– ಪ್ರಾಣವೇ ಹೋದಂತಿದ್ದ ಅಶುಭ ಕಾರ್ಯವನ್ನು ಮಾಡಿದ ಅವನನ್ನು ನೋಡಿ ಭರತಶ್ರೇಷ್ಠನಾದ ಧರ್ಮರಾಜನು ಅವನಲ್ಲಿ ದಯೆಯನ್ನು ಮಾಡಿದನು.

ಧರ್ಮೇ ತೇ ವರ್ಧತಾಂ ಬುದ್ಧಿಃ ಕ್ಷುದ್ರ ಧರ್ಮೇ ಮನಃ ಕೃಥಾಃ ।
ಸಾಶ್ವಃ ಸರಥಪಾದಾತಃ ಸ್ವಸ್ತಿ ಗಚ್ಛ ಜಯದ್ರಥ ॥೨೬॥

ಯುಧಿಷ್ಠಿರ– ನಿನಗೆ ಧರ್ಮದಲ್ಲಿ ಬುದ್ಧಿಯು ಹೆಚ್ಚಾಗಲಿ. ಎಲೈ ಕ್ಷುದ್ರನೇ, ಇನ್ನು ಮೇಲೆ ಧರ್ಮದಲ್ಲಿಯೇ ಮನಸ್ಸನ್ನು ಇಡುವವನಾಗು. ಜಯದ್ರಥನೇ, ನಿನ್ನ ಅಶ್ವ ರಥ ಪದಾತಿಗಳ ಜೊತೆಯಲ್ಲಿ ಕ್ಷೇಮದಿಂದ ಇಲ್ಲಿಂದ ಹೊರಡು.

ಏವಮುಕ್ತಸ್ತು ಸವ್ರೀಡಂ ತೂಷ್ಣೀಂ ಕಂಚಿದವಾಙ್ಮುಖಃ ।
ಜಗಾಮ ರಾಜನ್ ದುಃಖಾರ್ತೋ ಗಂಗಾದ್ವಾರಾಯ ಭಾರತ ॥೨೭॥

ವೈಶಂಪಾಯನ– ಭಾರತನೇ, ರಾಜನೇ, ಹೀಗೆ ಹೇಳಲ್ಪಟ್ಟ ಜಯದ್ರಥನು ಮುಖವನ್ನು ಸ್ವಲ್ಪ ತಗ್ಗಿಸಿ ನಾಚಿಕೆಯಿಂದ ಕೂಡಿದವನಾಗಿ ದುಃಖಾರ್ತನಾಗಿ ಮೌನದಿಂದ ಗಂಗಾದ್ವಾರಕ್ಕೆ ಹೋದನು.

ಸ ದೇವಂ ಶರಣಂ ಗತ್ವಾ ವಿರೂಪಾಕ್ಷಮುಮಾಪತಿಮ್ ।
ತಪಶ್ಚಚಾರ ವಿಪುಲಂ ತಸ್ಯ ಪ್ರೀತೋ ವೃಷಧ್ವಜಃ ॥೨೮॥

ಅಲ್ಲಿ ಅವನು ಉಮಾಪತಿಯಾದ ವಿರೂಪಾಕ್ಷನಿಗೆ ಶರಣಾಗತನಾಗಿ ಅವನನ್ನು ಕುರಿತು ವಿಪುಲನಾದ ತಪಸ್ಸನ್ನು ಆಚರಿಸಿದನು. ವೃಷಧ್ವಜನಾದ ಶಂಕರನು ಅವನಿಗೆ ಪ್ರಸನ್ನನಾದನು.

ಬಲಿಂ ಸ್ವಯಂ ಪ್ರತ್ಯಗೃಹ್ಣಾತ್ ಪ್ರೀಯಮಾಣಸ್ತ್ರಿಲೋಚನಃ ।
ವರಂ ಚಾಸ್ಮೈ ದದೌ ದೇವಃ ಸ ಜಗ್ರಾಹ ಚ ತಚ್ಛ್ರಣು ॥೨೯॥

ಸಮಸ್ತಾನ್ ಸರಥಾನ್ ಪಂಚ ಜಯೇಯಂ ಯುಧಿ ಪಾಂಡವಾನ್ ।
ಇತಿ ರಾಜಾಬ್ರವೀದ್ದೇವಂ ನೇತಿ ದೇವಸ್ತಮಬ್ರವೀತ್ ॥೩೦॥

ತ್ರಿಲೋಚನನು ಸಂತೋಷದಿಂದ ಸ್ವತಃ ಅವನ ಪೂಜೆಯನ್ನು ಸ್ವೀಕರಿಸಿದನು. ಆ ದೇವನು ಅವನಿಗೆ ವರವನ್ನೂ ನೀಡಿದನು. ಅವನು ಕೇಳಿದ ವರವನ್ನು ಹೇಳುತ್ತೇನೆ ಕೇಳು.

ನಾನು ಯುದ್ಧದಲ್ಲಿ ರಥದಿಂದ ಕೂಡಿದ ಐದು ಪಾಂಡವರನ್ನು ಒಟ್ಟಿಗೆ ಗೆಲ್ಲಬೇಕು ಎಂದು ರಾಜನು ಶಂಕರನನ್ನು ಕುರಿತು ಹೇಳಿದನು.ಶಂಕರನು ಅದು ಸಾಧ್ಯವಿಲ್ಲ ಎಂದು ಹೇಳಿದನು.

ವೈಶಂಪಾಯನಃ

ಅಜಯ್ಯಾಂಶ್ಚಾಪ್ಯವಧ್ಯಾಂಶ್ಚ ವಾರಯಿಷ್ಯಸಿ ತಾನ್ ಯುಧಿ ।
ಋತೇಽರ್ಜುನಂ ಮಹಾಬಾಹುಂ ನರಂ ನಾಮ ಸುರೇಶ್ವರಮ್ ॥೩೧॥

ವೈಶಂಪಾಯನ– ಅವರು ಅಜೇಯರು ಮತ್ತು ಅವಧ್ಯರು. ಅರ್ಜುನನು ನರನಾಮಕನಾದ ಸುರೇಶ್ವರ. ಮಹಾಬಾಹುವಾದ ಅರ್ಜುನನನ್ನು ಬಿಟ್ಟು ನೀನು ಯುದ್ಧದಲ್ಲಿ ಒಂದು ದಿವಸ ಉಳಿದ ಪಾಂಡವರನ್ನು ತಡೆಯುವಿ.

ಮಮ ಪಾಶುಪತಾಸ್ತ್ರೇಣ ಗುಪ್ತಂ ಸರ್ವತ್ರ ಸರ್ವದಾ ।
ಬದರ್ಯಾಂ ತಪ್ತತಪಸಂ ನಾರಾಯಣಸಹಾಯಕಮ್ ॥೩೨॥

ಅವನು ನನ್ನ ಪಾಶುಪತಾಸ್ತ್ರದಿಂದ ಯಾವಾಗಲೂ ರಕ್ಷಿತನಾಗಿದ್ದಾನೆ. ಬದರಿಯಲ್ಲಿ ತಪಸ್ಸನ್ನು ಆಚರಿಸಿ ನಾರಾಯಣನ ಅನುಗ್ರಹವನ್ನು ಸಂಪಾದಿಸಿದ್ದಾನೆ.

ಮಯಾ ದತ್ತಂ ಪಾಶುಪತಂ ದಿವ್ಯಮಪ್ರತಿಮಂ ಶರಮ್ ।
ಅವಾಪ ಲೋಕಪಾಲೇಽಭ್ಯೋ ವಜ್ರಾದೀನ್ ಸ ಮಹಾಶರಾನ್ ॥೩೩॥

ನಾನು ಅವನಿಗೆ ಅಸದೃಶವಾದ ದಿವ್ಯವಾದ ಪಾಶುಪತಾಸ್ತ್ರವನ್ನು ನೀಡಿದ್ದೇನೆ. ಅವನು ಇಂದ್ರಾದಿ ಲೋಕಪಾಲಕರಿಂದ ವಜ್ರ ಮೊದಲಾದ ಮಹಾಬಾಣಗಳನ್ನು (ಮಹಾಸ್ತ್ರಗಳನ್ನು) ಪಡೆದಿದ್ದಾನೆ.

ದೇವದೇವೋ ಹ್ಯನಂತಾತ್ಮಾ ವಿಷ್ಣುಃ ಸುರಗುರುಃ ಪ್ರಭುಃ ।
ಪ್ರಧಾನಪುರುಷೋಽವ್ಯಕ್ತೋ ವಿಶ್ವಾತ್ಮಾ ವಿಶ್ವಮೂರ್ತಿಮಾನ್ ॥೩೪॥

ದೇವದೇವನಾದ ಆ ನಾರಾಯಣನು ಅನಂತರೂಪವುಳ್ಳವನು, ಅವನೇ ವಿಷ್ಣು. ದೇವತೆಗಳಿಗೆ ಗುರು, ಪ್ರಭು, ಪ್ರಧಾನಪುರುಷನಾದವನು, ಅವ್ಯಕ್ತನಾದವನು, ವಿಶ್ವವನ್ನು ವ್ಯಾಪಿಸಿದವನು, ವಿಶ್ವವನ್ನೇ ಒಂದು ಪ್ರತಿಮೆಯಾಗಿ ಉಳ್ಳವನು.

ಯುಗಾಂತಕಾಲೇ ಸಂಪ್ರಾಪ್ತೇ ಕಾಲಾಗ್ನಿರ್ದಹತೇ ಜಗತ್ ।
ಸಪರ್ವತಾರ್ಣವದ್ವೀಪಂ ಸಶೈಲವನಕಾನನಮ್ ॥೩೫॥

ಯುಗಾಂತಕಾಲವು ಪ್ರಾಪ್ತವಾದಾಗ ಕಾಲಾಗ್ನಿಯು ಪರ್ವತ ಸಮುದ್ರ ದ್ವೀಪಗಳಿಂದ ಸಹಿತವಾದ ವನಕಾನನಶೈಲಗಳಿಂದ ಸಹಿತವಾದ ಈ ಜಗತ್ತನ್ನು ಸುಡುತ್ತದೆ.

ನಿರ್ದಹನ್ ನಾಗಲೋಕಾಂಶ್ಚ ಪಾತಾಳತಳಚಾರಿಣಃ ।
ಅಥಾಂತರಿಕ್ಷೇ ಸುಮಹನ್ ನಾನಾವರ್ಣಾಃ ಪಯೋಧರಾಃ ॥೩೬॥

ಘೋರಸ್ವರಾ ವಿನದಿನಸ್ತಡಿನ್ಮಾಲಾವಲಂಬಿನಃ ।
ಸಮುತ್ತಿಷ್ಠನ್ ದಿಶಃ ಸರ್ವಾ ವಿವರ್ಷಂತಃ ಸಮಂತತಃ ॥೩೭॥

ತತೋಽಗ್ನಿಂ ನಾಶಯಾಮಾಸುಃ ಸಂವರ್ತಾಗ್ನಿನಿಯಾಮಕಾಃ ।
ಅಕ್ಷಮಾತ್ರೈಶ್ಚ ಧಾರಾಭಿಸ್ತಿಷ್ಠಂತ್ಯಾಪೂರ್ಯ ಸರ್ವಶಃ ॥೩೮॥

ಅದು ಪಾತಾಳ ತಳದಲ್ಲಿ ವಾಸಿಸುವವರನ್ನೂ, ನಾಗಲೋಕಾದಿಗಳನ್ನೂ ಸುಡುತ್ತದೆ. ಅನಂತರ ಅಂತರಿಕ್ಷದಲ್ಲಿ ನಾನಾವರ್ಣದ ಘೋರವಾದ ಮೋಡಗಳು ಗುಡುಗುತ್ತಾ ಮಿಂಚಿನ ಮಾಲೆಗಳನ್ನು ಹೊಂದಿ ಮೇಲೇಳುತ್ತವೆ. ಎಲ್ಲ ದಿಕ್ಕುಗಳಲ್ಲಿಯೂ ಬಹಳವಾಗಿ ಮಳೆಯನ್ನು ಸುರಿಸುತ್ತವೆ. ಅನಂತರ ಒಂದು ಒನಕೆ ಗಾತ್ರದಷ್ಟು ದೊಡ್ಡ ಧಾರೆಗಳಿಂದ ಕೂಡಿದ ಆ ಮಳೆಯ ನೀರು ಜಗತ್ತನ್ನು ತುಂಬಿ ಸಂವರ್ತಾಗ್ನಿಯನ್ನು ನಿಯಂತ್ರಿಸಿ ನಾಶಗೊಳಿಸುತ್ತವೆ.

ಏಕಾರ್ಣವೇ ತದಾ ತಸ್ಮಿನ್ನುಪಶಾಂತಚರಾಚರೇ ।
ನಷ್ಟಚಂದ್ರಾರ್ಕಪವನೇ ಗ್ರಹನಕ್ಷತ್ರವರ್ಜಿತೇ ॥೩೯॥

ಚತುರ್ಯುಗಸಹಸ್ರಾಂತೇ ಸಲಿಲೇನಾಪ್ಲುತಾ ಮಹೀ ।

ಜಗತ್ತೆಲ್ಲವೂ ಏಕಾರ್ಣವವಾಗಿ ಚರಾಚರಗಳೆಲ್ಲವೂ ನಾಶವನ್ನು ಹೊಂದಿ ಸೂರ್ಯಚಂದ್ರವಾಯುಗಳು ನಷ್ಟರಾಗಿ, ಗ್ರಹನಕ್ಷತ್ರಗಳು ಇಲ್ಲದಿರುವ ಆ ಚತುರ್ಯುಗಸಹಸ್ರಗಳ ಕೊನೆಯಲ್ಲಿ ಭೂಮಿಯು ನೀರಿನಲ್ಲಿ ಮುಳುಗಿಹೋಗುತ್ತದೆ.

ತತೋ ನಾರಾಯಣಾಖ್ಯಸ್ತು ಸಹಸ್ರಾಕ್ಷಃ ಸಹಸ್ರಪಾತ್ ॥೪೦॥

ಸಹಸ್ರೀಶೀರ್ಷಾ ಪುರುಷಃ ಸ್ವಪ್ನಕಾಮಸ್ತ್ವತೀಂದ್ರಿಯಃ ।
ಘಟಾಸಹಸ್ರವಿಕಟಂ ಶೇಷಂ ಪರ್ಯಂಕಭಾಜನಮ್ ॥೪೧॥

ಸಹಸ್ರಮಿವ ತಿಗ್ಮಾಂಶುಸಂಘಾತಮಮಿತದ್ಯುತಿಮ್ ।
ಕುಂದೇಂದುಹಾರಗೋಕ್ಷೀರಮೃಣಾಲಕುಮುದಪ್ರಭಮ್ ॥೪೨॥

ತತ್ರಾಸೌ ಭಗವಾನ್ ದೇವಃ ಸ್ವಪನ್ ಜಲನಿಧೌ ತದಾ ।
ನೈಶೇನ ತಮಸಾ ವ್ಯಾಪ್ತಾಂ ಸ್ವಾಂ ರಾತ್ರಿಂ ಕುರುತೇ ವಿಭುಃ ॥೪೩॥

ಆಗ ಅದರಿಂದ (ನೀರಿನಲ್ಲಿ ಮಲಗಿರುವುದರಿಂದ) ಅವನಿಗೆ ನಾರಾಯಣನೆಂದು ಹೆಸರು. ಸಹಸ್ರಾಕ್ಷಗಳನ್ನೂ, ಸಹಸ್ರಪಾದಗಳನ್ನೂ, ಸಹಸ್ರಶಿರಸ್ಸುಗಳನ್ನೂ ಹೊಂದಿದ ಅತೀಂದ್ರಿಯನಾದ ಅವನು ನಿದ್ರಿಸಲು ಬಯಸುತ್ತಾನೆ. ಸಾವಿರ ಹೆಡಗಳಿಂದ ಶೋಭಿಸುವ ಸಹಸ್ರಸೂರ್ಯಕಾಂತಿಯನ್ನು ಹೊಂದಿರುವ ಅಮಿತದ್ಯುತಿಯಾದ ಕುಂದ ಪುಷ್ಪದಂತೆ, ಚಂದ್ರನಂತೆ, ಮುತ್ತಿನಹಾರದಂತೆ, ಮೋಕ್ಷೀರದಂತೆ, ಕಮಲದ ನಾಳದಂತೆ, ಕುಮುದದಂತೆ ಕಾಂತಿಯನ್ನು ಹೊಂದಿರುವ ಆ ಶೇಷಪರ್ಯಂಕದಲ್ಲಿ ಭಗವಂತನಾದ ಈ ನಾರಾಯಣನು ಜಲನಿಧಿಯಲ್ಲಿ ಆಗ ಮಲಗುತ್ತಾನೆ. ಆ ವಿಭುವು ಎಲ್ಲ ಕಡೆಯಲ್ಲಿಯೂ ಕತ್ತಲೆಯನ್ನು ಹರಡಿ ತನ್ನ ರಾತ್ರಿಯನ್ನು ಕಳೆಯುತ್ತಾನೆ.

ಸತ್ತ್ವೋದ್ರೇಕಾತ್ ಪ್ರಬುದ್ಧಸ್ತು ಶೂನ್ಯಂ ಲೋಕಮಪಶ್ಯತ ।
ಇಮಂ ಚೋದಾಹರಂತ್ಯತ್ರ ಶ್ಲೋಕಂ ನಾರಾಯಣಂ ಪ್ರತಿ ॥೪೪॥

ಸತ್ತ್ವೋದ್ರೇಕದ ಕಾಲದಲ್ಲಿ ಎಚ್ಚರಗೊಂಡು ಶೂನ್ಯವಾದ ಈ ಜಗತ್ತನ್ನು ನೋಡುತ್ತಾನೆ. ಆ ನಾರಾಯಣನ ವಿಷಯದಲ್ಲಿ ಜ್ಞಾನಿಗಳು ಈ ಶ್ಲೋಕವನ್ನು ಹೇಳುತ್ತಾರೆ.

ಆಪೋ ನಾರಾಸ್ತತ್ತನವ ಇತ್ಯಪಾಂ ನಾಮ ಶುಶ್ರುಮ ।
ಅಯನಂ ತೇನ ಚೈವಾಸ್ತೇ ತೇನ ನಾರಾಯಣಃ ಸ್ಮೃತಃ ॥೪೫॥

ನಾರ ಎಂದರೆ ಜಲವೆಂದು ನಾವು ಕೇಳಿದ್ದೇವೆ. ಆ ನಾರವು ಅವನ ಶರೀರವಾಗಿದೆ (ಶರೀರದಲ್ಲಿ ಜೀವನು ವಾಸಿಸುವಂತೆ ವಿಷ್ಣುವು ಅಲ್ಲಿ ವಾಸಿಸುತ್ತಾನೆ). ಆ ಜಲವು ಅವನಿಗೆ ಅಯನ ಎಂದರೆ ಆಶ್ರಯವಾಗಿರುವುದರಿಂದ ನೀರನ್ನು ಆಶ್ರಯವಾಗಿ ಹೊಂದಿದವನು ಎಂಬ ಅರ್ಥದಲ್ಲಿ ನಾರಾಯಣ ಎಂಬ ಶಬ್ದವು ಹೇಳಲ್ಪಡುತ್ತದೆ.

ಪ್ರಧ್ಯಾನಸಮಕಾಲಂ ತು ಪ್ರಜಾಹೇತೋಃ ಸನಾತನಃ ।
ಧ್ಯಾತಮಾತ್ರೇ ತು ಭಗವನ್ನಾಭ್ಯಾಂ ಪದ್ಮಃ ಸಮುತ್ಥಿತಃ ॥೪೬॥

ಸನಾತನನಾದ ಆ ನಾರಾಯಣನು ಪ್ರಜೆಗಳನ್ನು ಸೃಷ್ಟಿ ಮಾಡುವ ಸಲುವಾಗಿ ಧ್ಯಾನವನ್ನು ಮಾಡುವ ಸಮಕಾಲದಲ್ಲಿಯೇ ಕೇವಲ ಧ್ಯಾನಮಾತ್ರದಿಂದಲೇ ಅವನ ನಾಭಿಯಲ್ಲಿ ಪದ್ಮವು ಉದಯಿಸಿತು.

ತತ್ತಶ್ಚತುರ್ಮುಖೋ ಬ್ರಹ್ಮಾ ನಾಭಿಪದ್ಮಾದ್ ವಿನಿಃಸೃತಃ ।
ತತ್ರೋಪವಿಷ್ಟಃ ಸಹಸಾ ಪದ್ಮೇ ಲೋಕಪಿತಾಮಹಃ ॥೪೭॥

ಶೂನ್ಯಂ ದೃಷ್ಟ್ವಾ ಜಗತ್ತತ್ಸ್ಥಂ ಮಾನಸಾನಾತ್ಮನಃ ಸಮಾನ್ ।
ತತೋ ಮರೀಚಿಪ್ರಮುಖಾನ್ ಮಹರ್ಷೀನಸೃಜನ್ ನವ ॥೪೮॥

ಅಲ್ಲಿ ನಾಭಿಪದ್ಮದಿಂದ ಚತುರ್ಮುಖ ಬ್ರಹ್ಮನು ಹೊರಬಂದನು. ಆ ಪದ್ಮದಲ್ಲಿ ಕುಳಿತ ಲೋಕಪಿತಾಮಹನಾದ ಬ್ರಹ್ಮನು ಲೋಕವೆಲ್ಲವೂ ಪ್ರಜೆಗಳಿಂದ ಶೂನ್ಯವಾಗಿರುವುದನ್ನು ನೋಡಿ ತನಗೆ ಸದೃಶವಾದ ಮರೀಚಿ ಮೊದಲಾದ ಒಂಭತ್ತು ಮಹರ್ಷಿಗಳನ್ನು ಮನಸ್ಸಿನಿಂದಲೇ ಸೃಷ್ಟಿಸಿದನು.

ತೇಽಸೃಜನ್ ಸರ್ವಭೂತಾನಿ ತ್ರಸಾನಿ ಸ್ಥಾವರಾಣಿ ಚ ।
ಯಕ್ಷರಾಕ್ಷಸಭೂತಾನಿ ಪಿಶಾಚೋರಗಮಾನುಷಾನ್ ॥೪೯॥

ಸೃಜ್ಯತೇ ಬ್ರಹ್ಮಮೂರ್ತಿಸ್ತು ರಕ್ಷತೇ ಪೌರುಷೀ ತನುಃ ।
ರೌದ್ರೀಭಾವೇನ ಶಮಯೇತ್ತಿಸ್ರೋಽವಸ್ಥಾಃ ಪ್ರಜಾಪತೇಃ ॥೫೦॥

ಆ ಮಹರ್ಷಿಗಳು (ಅವರನ್ನು ಪ್ರಜಾಪತಿಗಳು ಎಂದು ಹೇಳುತ್ತಾರೆ). ಸ್ಥಾವರ ಜಂಗಮಾತ್ಮಕವಾದ ಎಲ್ಲಾ ಪ್ರಾಣಿಗಳನ್ನೂ ಎಂದರೆ ಯಕ್ಷರಾಕ್ಷಸ ಭೂತಗಳನ್ನೂ, ಪಿಶಾಚ ಸರ್ಪ ಮನುಷ್ಯರು ಮೊದಲಾದವರನ್ನೂ ಸೃಷ್ಟಿಸಿದರು. ಆ ನಾರಾಯಣನು ಬ್ರಹ್ಮ ರೂಪದಿಂದ ಸೃಷ್ಟಿಸುತ್ತಾನೆ, ಪುರುಷರೂಪದಿಂದ ರಕ್ಷಿಸುತ್ತಾನೆ, ರುದ್ರರೂಪದಿಂದ ಸಂಹರಿಸುತ್ತಾನೆ. ಈ ಮೂರು ಅವಸ್ಥೆಗಳು (ಮೂರು ರೂಪಗಳು) ಎಲ್ಲ ಪ್ರಜೆಗಳ ಒಡೆಯನಾದ ಅವನವೇ.

ನ ಶ್ರುತಂ ತೇ ಸಿಂಧುಪತೇ ವಿಷ್ಣೋರದ್ಭುತಕರ್ಮಣಃ ।
ಕಥ್ಯಮಾನಾನಿ ಮುನಿಭಿರ್ಬ್ರಾಹ್ಮಣೈರ್ವೇದಪಾರಗೈಃ ॥೫೧॥

ಎಲೈ ಸಿಂಧುರಾಜನೇ, ಮುನಿಗಳು ಮತ್ತು ವೇದಪಾರಂಗತರಾದ ಬ್ರಾಹ್ಮಣರು ಹೇಳುವ ವಿಷ್ಣುವಿನ ಅದ್ಭುತ ಕರ್ಮಗಳನ್ನು (ಅದ್ಭುತ ಕರ್ಮವನ್ನು ಮಾಡುವ ವಿಷ್ಣುವಿನ ವಿಷಯವಾಗಿ) ನೀನು ಕೇಳಿಲ್ಲವೇ?

ಜಲೇನ ಸಮನುಪ್ರಾಪ್ತೇ ಸರ್ವತಃ ಪೃಥಿವೀತಲೇ ।
ತದಾ ಚೈಕಾರ್ಣವೇ ತಸ್ಮಿನ್ನೇಕಾಕಾಶೇ ಪ್ರಭುಶ್ಚರನ್ ॥೫೨॥

ನಿಶಾಯಾಮಿವ ಖದ್ಯೋತಃ ಪ್ರಾವೃಟ್ ಕಾಲೇ ಸಮಂತತಃ ।
ಪ್ರತಿಷ್ಠಾನಾಯ ಪೃಥಿವೀಂ ಮಾರ್ಗಮಾಣಸ್ತದಾऽಭವತ್ ॥೫೩॥

ಜಲವು ಭೂತಳವನ್ನೆಲ್ಲಾ ಮುಚ್ಚಿ ಎಲ್ಲವೂ ಏಕಾರ್ಣವವೂ, ಏಕಾಕಾಶವೂ ಆಗಿರಲು ಆ ಪ್ರಭುವು ರಾತ್ರಿಯಲ್ಲಿ ವರ್ಷಾಕಾಲದಲ್ಲಿ ಮಿಣುಕುಹುಳದಂತೆ ಸಂಚರಿಸುತ್ತಾ ಎಲ್ಲ ಪ್ರಜೆಗಳನ್ನೂ ಸ್ಥಾಪಿಸುವುದಕ್ಕಾಗಿ ಭೂಮಿಯನ್ನು ಹುಡುಕಲು ಪ್ರಾರಂಭಿಸಿದನು.

ಜಲೇ ನಿಮಗ್ನಾಂ ಗಾಂ ದೃಷ್ಟ್ವಾ ಚೋದ್ಧರ್ತುಂ ಮನಸೇಚ್ಛತಿ ।
ಕಿಂ ನು ರೂಪಮಹಂ ಕೃತ್ವಾ ಸಲಿಲಾದುದ್ಧರೇ ಮಹೀಮ್ ॥೫೪॥

ಏವಂ ಸಂಚಿಂತ್ಯ ಮನಸಾ ದೃಷ್ಟ್ವಾ ದಿವ್ಯೇನ ಚಕ್ಷುಷಾ ।
ಜಲಕ್ರೀಡಾಭಿರುಚಿತಂ ವಾರಾಹಂ ರೂಪಮಸ್ಮರತ್ ॥೫೫॥

ನೀರಿನಲ್ಲಿ ಮುಳುಗಿಹೋದ ಭೂಮಿಯನ್ನು ನೋಡಿ ಅದನ್ನು ಎತ್ತಲು ಮನಸ್ಸಿನಲ್ಲಿ ಇಚ್ಛಿಸಿದನು. ಯಾವ ರೂಪವನ್ನು ತೆಗೆದುಕೊಂಡು ನಾನು ಭೂಮಿಯನ್ನು ಮೇಲಕ್ಕೆತ್ತಲಿ ಎಂದು ಚಿಂತಿಸಿದ ಅವನು ತನ್ನ ಮನಸ್ಸಿನಲ್ಲಿಯೇ ದಿವ್ಯದೃಷ್ಟಿಯಿಂದ ಜಲಕ್ರೀಡೆಯಲ್ಲಿ ಸಂತೋಷಪಡುವ ವರಾಹರೂಪವನ್ನು ಸ್ಮರಿಸಿದನು.

ಕೃತ್ವಾ ವರಾಹವಪುಷಂ ವಾಙ್ಮಯಂ ವೇದಸಮ್ಮಿತಮ್ ।
ದಶಯೋಜನವಿಸ್ತೀರ್ಣಮಾಯತಂ ಶತಯೋಜನಮ್ ॥೫೬॥

ಮಹಾವರ್ಪತವರ್ಷ್ಮಾಭಂ ತೀಕ್ಷ್ಣದಂಷ್ಟ್ರಂ ಪ್ರದೀಪ್ತಿಮತ್ ।
ಮಹಾಮೇಘೌಘನಿರ್ಘೋಷಂ ನೀಲಜೀಮೂತಸನ್ನಿಭಮ್ ॥೫೭॥

ಭೂತ್ವಾ ಯಜ್ಞವರಾಹೋ ವೈ ಅಪಃ ಸಂಪ್ರಾವಿಶತ್ ಪ್ರಭುಃ ।
ದಂಷ್ಟ್ರೇಣೈಕೇನ ಚೋದ್ಧೃತ್ಯ ಸ್ವೇ ಸ್ಥಾನೇ ನ್ಯವಿಶನ್ಮಹೀಮ್ ॥೫೮॥

ವೇದ ಪ್ರತಿಪಾದ್ಯವಾದ, ವೇದದಂತೆ ಪವಿತ್ರವಾದ, ಹತ್ತುಯೋಜನ ಅಗಲವೂ, ನೂರು ಯೋಜನ ಉದ್ದವೂ ಇದ್ದು ಮಹಾಪರ್ವತದ ಶರೀರದ ಕಾಂತಿಯನ್ನು ಹೊಂದಿದ, ನಿಶಿತವಾದ ಕೋರೆದಾಡುಗಳುಳ್ಳ, ಪ್ರಕಾಶಿಸುವ ಮಹಾಮೇಘಗಳ ಸಮೂಹದಂತೆ, ಗರ್ಜಿಸುವ, ನೀಲಮೇಘಕಾಂತಿಯನ್ನು ಹೊಂದಿದ, ವರಾಹರೂಪವನ್ನು ಧರಿಸಿ ಆ ಪ್ರಭುವು ಯಜ್ಞವರಾಹನಾಗಿ ಜಲವನ್ನು ಪ್ರವೇಶಿಸಿದನು ಮತ್ತು ಭೂಮಿಯನ್ನು ಒಂದು ಕೋರೆದಾಡೆಯಿಂದ ಎತ್ತಿ ಅದರ ಸ್ಥಾನದಲ್ಲಿ ಸ್ಥಾಪಿಸಿದನು.

ಪುನರೇವ ಮಹಾಬಾಹುರಪೂರ್ವಾಂ ತನುಮಾಶ್ರಿತಃ ।
ನರಸ್ಯ ಕೃತ್ವಾಽರ್ಧತನುಂ ಸಿಂಹಸ್ಯಾರ್ಧತನುಂ ಪ್ರಭುಃ ॥೫೯॥

ದೈತ್ಯೇಂದ್ರಸ್ಯ ಸಭಾಂ ಗತ್ವಾ ಪಾಣಿಂ ಸಂಸ್ಪೃಶ್ಯ ಪಾಣಿನಾ ।

ಪುನಃ ಮಹಾಬಾಹುವಾದ ಪ್ರಭುವಾದ ನಾರಾಯಣನು ಅರ್ಧಮನುಷ್ಯನ ಶರೀರವೂ, ಅರ್ಧ ಸಿಂಹದ ಶರೀರವೂ ಇರುವ ಅಪೂರ್ವವಾದ ರೂಪವನ್ನು ಧರಿಸಿ ಕೈಯಿಂದ ಕೈಯನ್ನು ಮಸೆಯುತ್ತಾ ದೈತ್ಯೇಂದ್ರನಾದ ಹಿರಣ್ಯಕಶಿಪುವಿನ ಸಭೆಗೆ ಹೋಗಿ (ಹೋದನು).

ದೈತ್ಯಾನಾಮಾದಿಪುರುಷಃ ಸುರಾರಿರ್ದಿತಿನಂದನಃ ॥೬೦॥

ದೃಷ್ಟ್ವಾ ಚಾಪೂರ್ವಪುರುಷಂ ಕ್ರೋಧಾತ್ ಸಂರಕ್ತಲೋಚನಃ ।
ಶೂಲೋದ್ಯತಕರಃ ಸ್ರಗ್ವೀ ಹಿರಣ್ಯಕಶಿಪುಸ್ತದಾ ॥೬೧॥

ಮೇಘಸ್ತನಿತನಿರ್ಘೋಷೋ ನೀಲಾಭ್ರಚಯಸನ್ನಿಭಃ ।
ದೇವಾರಿರ್ದಿತಿಜೋ ವೀರೋ ನೃಸಿಂಹಂ ಸಮುಪಾದ್ರವತ್ ॥೬೨॥

ದೈತ್ಯರ ಆದಿಪುರುಷನೂ, ದೇವತೆಗಳ ಶತ್ರುವೂ, ದಿತಿನಂದನನೂ ಆದ ಹಿರಣ್ಯಕಶಿಪುವು ಆಗ ಈ ಅಪೂರ್ವಪುರುಷನನ್ನು ನೋಡಿ ಕೋಪದಿಂದ ಕೆಂಪಾದ

ಕಣ್ಣುಳ್ಳವನಾಗಿ ಎತ್ತಿದ ಕೈಯಲ್ಲಿ ಶೂಲವನ್ನು ಹಿಡಿದು ಮಾಲೆಗಳಿಂದ ಅಲಂಕೃತನಾಗಿ ಮೇಘ ಗರ್ಜನೆಯಂತೆ ನಾದವನ್ನು ಹೊಂದಿದ, ನೀಲಮೇಘಸಮೂಹ ಕಾಂತಿಯನ್ನು ಹೊಂದಿದ ವೀರನಾದ ದಿತಿಪುತ್ರನಾದ ದೇವಶತ್ರುವಾದ ಅವನು ನರಸಿಂಹನ ಕಡೆಗೆ ಧಾವಿಸಿದನು.

ಸಮುಪೇತ್ಯ ತತಸ್ತೀಕ್ಷ್ಣೈರ್ಮೃಗೇಂದ್ರೇಣ ಬಲೀಯಸಾ ।
ನಾರಸಿಂಹೇನ ವಪುಷಾ ದಾರಿತಃ ಕರಜೈರ್ಭೃಶಮ್ ॥೬೩॥

ಬಲಿಷ್ಠನಾದ ಮೃಗೇಂದ್ರರೂಪದಿಂದ ಸಮಾಗಮವನ್ನು ಹೊಂದಿದ ಹಿರಣ್ಯಕಶಿಪುವು ನರಸಿಂಹರೂಪವನ್ನು ಧರಿಸಿದ ಆ ಪ್ರಭುವಿನ ನಿಶಿತವಾದ ಉಗುರುಗಳಿಂದ ಚೆನ್ನಾಗಿ ಸೀಳಿಹಾಕಲ್ಪಟ್ಟನು.

ಏವಂ ನಿಹತ್ಯ ಭಗವಾನ್ ದೈತ್ಯೇಂದ್ರಂ ರಿಪುಘಾತಿನಮ್ ।
ಭೂಯೋಽನ್ಯಃ ಪುಂಡರೀಕಾಕ್ಷಃ ಪ್ರಭುರ್ಲೋಕಹಿತಾಯ ಚ ॥೬೪॥

ಕಶ್ಯಪಸ್ಯಾತ್ಮಜಃ ಶ್ರೀಮಾನದಿತ್ಯಾ ಗರ್ಭಧಾರಿತಃ ।
ಪೂರ್ಣೇ ವರ್ಷಸಹಸ್ರೇ ತು ಪ್ರಸೂತಾ ಗರ್ಭಮುತ್ತಮಮ್ ॥೬೫॥

ಹೀಗೆ ಭಗವಂತನಾದ ಕಾಂತಿಮಂತನಾದ ಪುಂಡರೀಕಾಕ್ಷನು ಶತ್ರುಸಂಹಾರಕನಾದ ದೈತ್ಯೇಂದ್ರನನ್ನು ಸಂಹರಿಸಿ ಲೋಕಹಿತಕ್ಕಾಗಿ ಪುನಃ ಇನ್ನೊಂದು ರೂಪವನ್ನು ಧರಿಸಿ ಕಶ್ಯಪರಿಂದ ಅದಿತಿಯ ಉದರಕ್ಕೆ ಬಂದು ಅದಿತಿಯಿಂದ ಗರ್ಭದಲ್ಲಿ ಧರಿಸಲ್ಪಟ್ಟನು. ಒಂದು ಸಹಸ್ರವರ್ಷಗಳು ಪೂರ್ಣವಾದ ಮೇಲೆ ಅವಳು ಶ್ರೇಷ್ಠವಾದ ಆ ಗರ್ಭವನ್ನು ಪ್ರಸವಿಸಿದಳು.

ದುರ್ದಿನಾಂಭೋದಸದೃಶೋ ದೀಪ್ತಾಕ್ಷೋ ವಾಮನಾಕೃತಿಃ ।
ದಂಡೀ ಕಮಂಡಲುಧರಃ ಶ್ರೀವತ್ಸೋರಸಿ ಭೂಷಿತಃ ॥೬೬॥

ಜಟೀ ಯಜ್ಞೋಪವೀತೀ ಚ ಭಗವಾನ್ ಬಾಲರೂಪಧೃಕ್ ।
ಯಜ್ಞವಾಟಂ ಗತಃ ಶ್ರೀಮಾನ್ ದಾನವೇಂದ್ರಸ್ಯ ವೈ ತದಾ ॥೬೭॥

ಸೂರ್ಯನಿಲ್ಲದಿರುವ ದಿವಸದ ಮೇಘಗಳ ಕಾಂತಿಯನ್ನು ಹೊಂದಿದ, ಪ್ರಕಾಶಮಾನವಾದ ಕಣ್ಣುಗಳನ್ನು ಹೊಂದಿದ, ಚಿಕ್ಕ ಆಕೃತಿಯುಳ್ಳ, ವಕ್ಷಸ್ಥಲದಲ್ಲಿ

ಶ್ರೀವತ್ಸವನ್ನು ಧರಿಸಿದ ಆ ಭಗವಂತನು ಬಾಲರೂಪವನ್ನು ಧರಿಸಿ ದಂಡಕಮಂಡಲುಗಳನ್ನು ಹಿಡಿದು ಜಟೆಯನ್ನು ಧರಿಸಿ, ಯಜ್ಞೋಪವೀತವನ್ನು ಧರಿಸಿ ಕಾಂತಿಯುಕ್ತನಾದ ಅವನು ದಾನವೇಂದ್ರನಾದ ಬಲಿಯ ಯಜ್ಞಶಾಲೆಗೆ ಹೋದನು.

ಬೃಹಸ್ಪತಿಸಹಾಯೋಽಸೌ ಪ್ರವಿಷ್ಟೋ ಬಲಿನೋ ಮಖೇ ।
ತಂ ದೃಷ್ಟ್ವಾ ವಾಮನತನುಂ ಪ್ರಹೃಷ್ಟೋ ಬಲಿರಬ್ರವೀತ್ ॥೬೮॥

ಬೃಹಸ್ಪತಿ ಸಹಿತನಾಗಿ ಅವನು ಬಲಿಯ ಯಜ್ಞಶಾಲೆಯನ್ನು ಪ್ರವೇಶಮಾಡಲು ಆ ವಾಮನರೂಪವನ್ನು ನೋಡಿದ ಬಲಿಯು ಸಂತುಷ್ಟನಾಗಿ ಅವನನ್ನು ಕುರಿತು ಹೀಗೆ ಹೇಳಿದನು.

ಪ್ರೀತೋಽಸ್ಮಿ ದರ್ಶನೇ ವಿಪ್ರ ಬ್ರೂಹಿ ತ್ವಂ ಕಂ ದದಾನಿ ತೇ ।
ಏವಮುಕ್ತಸ್ತು ಬಲಿನಾ ವಾಮನಃ ಪ್ರತ್ಯುವಾಚ ಹ ॥೬೯॥

ವಿಪ್ರನೇ, ನಿನ್ನ ದರ್ಶನದಿಂದ ಸಂತುಷ್ಟನಾಗಿದ್ದೇನೆ. ನಿನಗೆ ಏನು ಕೊಡಲಿ ಎಂದು ಹೇಳು. ಹೀಗೆ ಬಲಿಯಿಂದ ಹೇಳಲ್ಪಟ್ಟ ವಾಮನನು ಅವನಿಗೆ ಉತ್ತರವನ್ನು ನೀಡಿದನಷ್ಟೆ?

ಸ್ವಸ್ತೀತ್ಯುಕ್ತ್ವಾ ಬಲಿಂ ದೇವಃ ಸ್ಮಯಮಾನೋಽಭ್ಯಭಾಷತ ।
ಮೇದಿನೀಂ ದಾನವಪತೇ ದೇಹಿ ಮೇ ವಿಕ್ರಮತ್ರಯಮ್ ॥೭೦॥

ದೇವನು ನಿನಗೆ ಮಂಗಳವಾಗಲಿ ಎಂದು ಹೇಳಿ ನಗುತ್ತಾ ಬಲಿಯನ್ನು ಕುರಿತು ದಾನವಪತಿಯೇ ನನಗೆ ನನ್ನ ಹೆಜ್ಜೆಯಲ್ಲಿ ಮೂರು ಹೆಜ್ಜೆ ಭೂಮಿಯನ್ನು ಕೊಡು ಎಂದು ಮಾತನಾಡಿದನು (ಯಾಚಿಸಿದನು).

ಬಲಿರ್ದದೌ ಪ್ರಸನ್ನಾತ್ಮಾ ವಿಪ್ರಾಯಾಮಿತತೇಜಸೇ ।
ತತೋ ದಿವ್ಯಾದ್ಭುತತಮಂ ರೂಪಂ ವಿಕ್ರಮತೋ ಹರೇಃ ॥೭೧॥

ವಿಕ್ರಮೈಸ್ತ್ರಿಭಿರಕ್ಷೋಭ್ಯೋ ಜಹಾರಾಶು ಸ ಮೇದಿನೀಮ್ ।
ದದೌ ಶಕ್ರಾಯ ಚ ಮಹೀಂ ವಿಷ್ಣುರ್ದೇವಃ ಸನಾತನಃ ॥೭೨॥

ಬಲಿಯು ಅಮಿತತೇಜಸ್ವಿಯಾದ ಬ್ರಾಹ್ಮಣನಿಗೆ ಪ್ರಸನ್ನವಾದ ಮನಸ್ಸಿನಿಂದ ಭೂಮಿಯನ್ನು ಕೊಟ್ಟನು. ಆಗ ಅಕ್ಷೋಭ್ಯನಾದ ಹರಿಯು ದಿವ್ಯಾದ್ಭುತ ರೂಪವನ್ನು ತೆಗೆದುಕೊಂಡು ಆ ಸನಾತನದೇವನಾದ ವಿಷ್ಣುವು ತನ್ನ ಪಾದವಿಕ್ಷೇಪಗಳಿಂದ ಬಲಿಯಿಂದ ಶೀಘ್ರವಾಗಿ ಎಲ್ಲಾ ಭೂಮಿಯನ್ನೂ ಅಪಹರಿಸಿ ಇಂದ್ರನಿಗೆ ಭೂಮಿಯನ್ನು ಕೊಟ್ಟನು.

ಏಷ ತೇ ವಾಮನೋ ನಾಮ ಪ್ರಾದುರ್ಭಾವಃ ಪ್ರಕೀರ್ತಿತಃ ।
ತೇನ ದೇವಾಃ ಪ್ರಾದುರಾಸನ್ ವೈಷ್ಣವಂ ಚೋಚ್ಯತೇ ಜಗತ್ ॥೭೩॥

ನಾನು ನಿನಗೆ ಹೇಳಿದುದು ವಾಮನನೆಂಬ ಅವತಾರ. ಅವನಿಂದ ದೇವತೆಗಳು ಸಮೃದ್ಧಿಯನ್ನು ಹೊಂದಿ ಜಗತ್ತೆಲ್ಲಾ ವೈಷ್ಣವವಾಯಿತು.

ಅಸತಾಂ ನಿಗ್ರಹಾರ್ಥಾಯ ಧರ್ಮಸಂರಕ್ಷಣಾಯ ಚ ।
ಅವತೀರ್ಣೋ ಮನುಷ್ಯಾಣಾಮಜಾಯತ ಯದುಕ್ಷಯೇ ॥೭೪॥

ಸ ಏವಂ ಭಗವಾನ್ ವಿಷ್ಣುಃ ಕೃಷ್ಣೇತಿ ಪರಿಕೀರ್ತ್ಯತೇ ।

ದುಷ್ಟರ ನಿಗ್ರಹಕ್ಕೋಸ್ಕರ ಮತ್ತು ಧರ್ಮಸಂರಕ್ಷಣೆಗೋಸ್ಕರ ಅವನು ಯದುಕುಲದಲ್ಲಿ ಮನುಷ್ಯರ ಮನೆಯಲ್ಲಿ ಅವತಾರ ಮಾಡಿದನು. ಆ ಭಗವಂತನಾದ ವಿಷ್ಣುವೇ ಈ ರೀತಿಯಲ್ಲಿ ಕೃಷ್ಣನೆಂದು ಕರೆಯಲ್ಪಡುತ್ತಾನೆ.

ಅನಾದ್ಯಂತಮಜಂ ದೇವಂ ಪ್ರಭುಂ ಲೋಕನಮಸ್ಕೃತಮ್ ॥೭೫॥

ಯಮಾಹುರಜಿತಂ ಕೃಷ್ಣಂ ಶಂಖಚಕ್ರಗದಾಧರಮ್ ।
ಶ್ರೀವತ್ಸಧಾರಿಣಂ ದೇವಂ ಪೀತಕೌಶೇಯವಾಸಸಮ್ ।
ಪ್ರಧಾನಃ ಸೋಽಸ್ತ್ರವಿದುಷಾಂ ತೇನ ಕೃಷ್ಣೇನ ರಕ್ಷ್ಯತೇ ॥೭೬॥

ಆದ್ಯಂತರಹಿತನೂ, ಜನನರಹಿತನೂ, ಕ್ರೀಡಾದಿ ಗುಣವಿಶಿಷ್ಟನೂ, ಸಮರ್ಥನೂ, ಲೋಕನಮಸ್ಕೃತನೂ, ಶಂಖಚಕ್ರಗದಾಧರನೂ, ಶ್ರೀವತ್ಸಧಾರಿಯೂ, ಪೀತಾಂಬರಧಾರಿಯೂ ಆದ ದೇವನಾದ ಕೃಷ್ಣನನ್ನು ಅಜಿತನೆಂದು ಹೇಳುತ್ತಾರೆ. ಅಸ್ತ್ರಜ್ಞರಲ್ಲಿ ಶ್ರೇಷ್ಠನಾದ ಆ ಅರ್ಜುನನು ಆ ಕೃಷ್ಣನಿಂದ ರಕ್ಷಿಸಲ್ಪಡುತ್ತಿದ್ದಾನೆ.

ತಸ್ಮಾತ್ತ್ವಂ ಪಾರ್ಥರಹಿತಾನ್ ಪಾಂಡವಾನ್ ವಾರಯಿಷ್ಯಸಿ ।
ಏಕದಾ ಪುರುಷವ್ಯಾಘ್ರ ಮಯಾ ದತ್ತಂ ವರಂ ತವ ॥೭೭॥

ಆದ್ದರಿಂದ ನೀನು ಆ ಅರ್ಜುನನನ್ನು ಬಿಟ್ಟು ಉಳಿದ ಪಾಂಡವರನ್ನು ಒಂದು ಬಾರಿ ತಡೆಯುವಿ. ಪುರುಷವ್ಯಾಘ್ರನೇ, ಇದು ನಾನು ನಿನಗೆ ಕೊಟ್ಟಿರುವ ವರ.

ಸಹಾಯಃ ಪುಂಡರೀಕಾಕ್ಷಃ ಶ್ರೀಮಾನತುಲವಿಕ್ರಮಃ ।
ಸಮಾನಸ್ಯಂದನೇ ಪಾರ್ಥಮಾಸ್ಥಾಯ ಪರವೀರಹಾ ॥೭೮॥

ನ ಶಕ್ಯತೇ ತೇನ ಜೇತುಂ ತ್ರಿದಶೈರಪಿ ದುಃಸಹಃ ।
ಕಃ ಪುನರ್ಮಾನುಷೋ ಭಾವೋ ರಣೇ ಪಾರ್ಥಂ ವಿಜೇಷ್ಯತಿ ॥೭೯॥

ಯಾವ ಪಾರ್ಥನಿಗೆ ಶತ್ರುನಿಷೂದನನಾದ, ಅತುಲವಿಕ್ರಮನಾದ, ಕಾಂತಿಯುಕ್ತನಾದ ಪುಂಡರೀಕಾಕ್ಷನು ಒಂದೇ ರಥದಲ್ಲಿ ಕುಳಿತು ಸಹಾಯನಾಗಿದ್ದಾನೆಯೋ ಆ ಕಾರಣದಿಂದ ಅರ್ಜುನನನ್ನು ದೇವತೆಗಳೂ ಸಹ ಜಯಿಸಲು ಸಾಧ್ಯವಿಲ್ಲ. ಇನ್ನು ಯಾವ ಮನುಷ್ಯನು ಯುದ್ಧದಲ್ಲಿ ಅರ್ಜುನನನ್ನು ಗೆಲ್ಲುವನು?

ತಮೇಕಂ ವರ್ಜಯಿತ್ವಾ ತು ಸರ್ವಂ ಯೌಧಿಷ್ಠಿರಂ ಬಲಮ್ ।
ಚತುರಃ ಪಾಂಡವಾನ್ ರಾಜನ್ ದಿನೈಕಂ ಜೇಷ್ಯಸೇ ರಿಪೂನ್ ॥೮೦॥

ಎಲೈ ರಾಜನೇ, ಅವನೊಬ್ಬನನ್ನು ಬಿಟ್ಟು ಉಳಿದ ಎಲ್ಲಾ ಯುಧಿಷ್ಠಿರನ ಸೈನ್ಯವನ್ನು ಮತ್ತು ನಿನ್ನ ಶತ್ರುಗಳಾದ ನಾಲ್ವರನ್ನು ಒಂದು ದಿನ ನೀನು ಗೆಲ್ಲುವಿ.

ವೈಶಂಪಾಯನಃ

ಇತ್ಯೇವಮುಕ್ತ್ವಾ ನೃಪತಿಂ ಸರ್ವಪಾಪಹರೋ ಹರಃ ।
ಉಮಾಪತಿಃ ಪಶುಪತಿರ್ಯಜ್ಞಹಾ ತ್ರಿಪುರಾರ್ದನಃ ॥೮೧॥

ವಾಮನೈರ್ವಿಕಟೈಃ ಕುಬ್ಜೈರುಗ್ರಶ್ರವಣದರ್ಶನೈಃ ।
ವೃತಃ ಪಾರಿಷದೈರ್ಘೋರೈರ್ನಾನಾಪ್ರಹರಣೋದ್ಯನಃ(ತೈಃ) ॥೮೨॥

ತ್ರ್ಯಂಬಕೋ ರಾಜಶಾರ್ದೂಲ ಭಗನೇತ್ರನಿಪಾತನಃ ।
ಉಮಾಸಹಾಯೋ ಭಗವಾಂಸ್ತತ್ರೈವಾಂತರಧೀಯತ ॥೮೩॥

ವೈಶಂಪಾಯನ– ಎಲೈ ರಾಜಶಾರ್ದೂಲನೇ, ಹೀಗೆ ಆ ರಾಜನಿಗೆ ಹೇಳಿ ಸರ್ವಪಾಪಹರನೂ, ಉಮಾಪತಿಯೂ, ಪಶುಪತಿಯೂ, ದಕ್ಷಾದ್ವರಭಂಜಕನೂ, ತ್ರಿಪುರವಿನಾಶಕನೂ, ತ್ರ್ಯಂಬಕನೂ, ಭಗನೇತ್ರ ನಿಪಾತನನೂ, ಉಮಾಸಹಾಯನೂ ಆದ ಭಗವಾನ್ ಶಂಕರನು ಉಗ್ರಶ್ರವಣ ಮತ್ತು ಉಗ್ರದರ್ಶನವುಳ್ಳ ವಾಮನರೂ, ವಿಕಟರೂ ಮತ್ತು ಕುಬ್ಜರ ಜೊತೆಯಲ್ಲಿ ಅಲ್ಲಿಯೇ ಅಂತರ್ಧಾನವನ್ನು ಹೊಂದಿದನು.

ಜಯದ್ರಥೋಽಪಿ ಮಂದಾತ್ಮಾ ಸ್ವಮೇವ ಭವನಂ ಯಯೌ ।
ಪಾಂಡವಾಶ್ಚ ವನೇ ತಸ್ಮಿನ್ ನ್ಯವಸನ್ ಕಾಮ್ಯಕೇ ತಥಾ ॥೮೪॥

ಮಂದಾತ್ಮನಾದ ಜಯದ್ರಥನೂ ಸಹ ತನ್ನ ಮನೆಗೇ ಹಿಂದಿರುಗಿದನು. ಪಾಂಡವರಾದರೂ ಆ ಕಾಮ್ಯಕ ವನದಲ್ಲಿ ಹಾಗೆಯೇ ವಾಸಮಾಡಿದರು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂಸಂಹಿತಾಯಾಂ ವೈಯಾಸಿಕ್ಯಾಂ
ವನಪರ್ವಣಿ ಷಷ್ಟ್ಯಧಿಕತ್ರಿಶತತಮಮಹಾಭಾರತ ಆದಿಪರ್ವಘೋಷಯಾತ್ರಾಪರ್ವಣಿ
ಕದ್ವಿಶತತಮೋಽಧ್ಯಾಯಃ ॥
॥ ಇತಿ ಜಯದ್ರಥವಿಮೋಕ್ಷಣಪರ್ವಣಿ ಜಯದ್ರಥ ವಿಮೋಕ್ಷೋ ನಾಮ
ಪ್ರಥಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವನಪರ್ವದಲ್ಲಿ ಇನ್ನೂರ ಅರವತ್ತನೆಯ ಅಧ್ಯಾಯ ಮುಗಿಯಿತು.

★ ★ ★ ★

ರಾಮೋಪಾಖ್ಯಾನಪರ್ವ

ಇನ್ನೂರ ಅರವತ್ತೊಂದನೆಯ ಅಧ್ಯಾಯ

ಯುಧಿಷ್ಠಿರನಿಂದ ಮಾರ್ಕಂಡೇಯರನ್ನು ಕುರಿತು ತನ್ನಂತಹ ದುಃಖವಿರುವವನು ಇನ್ನೊಬ್ಬನಿದ್ದಾನೆಯೇ ಎಂಬ ಪ್ರಶ್ನೆ.

ಜನಮೇಜಯಃ

ಏವಂ ಹೃತಾಯಾಂ ಕೃಷ್ಣಾಯಾಂ ಪ್ರಾಪ್ಯ ಕ್ಲೇಶಮನುತ್ತಮಮ್ ।
ಅತ ಊರ್ಧ್ವಂ ನರವ್ಯಾಘ್ರಾಃ ಕಿಮಕುರ್ವತ ಪಾಂಡವಾಃ ॥೧॥

ಜನಮೇಜಯ– ಹೀಗೆ ದ್ರೌಪದಿಯು ಅಪಹೃತವಾದಾಗ ಬಹಳ ಕ್ಲೇಶವನ್ನು ಅನುಭವಿಸಿದ ನರವ್ಯಾಘ್ರರಾದ ಪಾಂಡವರು ಅಲ್ಲಿಂದ ಮುಂದೆ ಏನು ಮಾಡಿದರು?

ವೈಶಂಪಾಯನಃ

ಏವಂ ಕೃಷ್ಣಾಂ ಮೋಕ್ಷಯಿತ್ವಾ ವಿನಿರ್ಜಿತ್ಯ ಜಯದ್ರಥಮ್ ।
ಆಸಾಂಚಕ್ರೇ ಮುನಿಗಣೈರ್ಧರ್ಮರಾಜೋ ಯುಧಿಷ್ಠಿರಃ ॥೨॥

ತೇಷಾಂ ಮಧ್ಯೇ ಮಹರ್ಷೀಣಾಂ ಶೃಣ್ವತಾಮನುಶೋಚತಾಮ್ ।
ಮಾರ್ಕಂಡೇಯಮಿದಂ ವಾಕ್ಯಮಬ್ರವೀತ್ ಪಾಂಡುನಂದನಃ ॥೩॥

ವೈಶಂಪಾಯನ– ಹೀಗೆ ಜಯದ್ರಥನನ್ನು ಸೋಲಿಸಿ ದ್ರೌಪದಿಯನ್ನು ಬಿಡಿಸಿ ಧರ್ಮರಾಜನಾದ ಯುಧಿಷ್ಠಿರನು ಮುನಿಗಣಗಳ ಜೊತೆಯಲ್ಲಿ ಕಾಮ್ಯಕವನದಲ್ಲಿ

ವಾಸಮಾಡಿದನು. ತನ್ನ ಮಾತನ್ನು ಕೇಳುವ ಮತ್ತು ತನ್ನ ಸ್ಥಿತಿಯನ್ನು ನೋಡಿ ಶೋಕಪಡುವ ಮಹರ್ಷಿಗಳ ಮಧ್ಯದಲ್ಲಿ ಮಾರ್ಕಂಡೇಯರನ್ನು ಕುರಿತು ಪಾಂಡುನಂದನನಾದ ಯುಧಿಷ್ಠಿರನು ಹೀಗೆ ಮಾತನಾಡಿದನು.

ಯುಧಿಷ್ಠಿರಃ

ಭಗವನ್ ದೇವರ್ಷೀಣಾಂ ತ್ವಂ ಖ್ಯಾತೋ ಭೂತಭವಿಷ್ಯವಿತ್ ।
ಸಂಶಯಂ ಪರಿಪೃಚ್ಛಾಮಿ ಛಿಂಧಿ ಮೇ ಹೃದಿ ಸಂಸ್ಥಿತಮ್ ॥೪॥

ಯುಧಿಷ್ಠಿರ– ಪೂಜ್ಯರೇ, ನೀವು ದೇವರ್ಷಿಗಳಲ್ಲಿ ಪ್ರಖ್ಯಾತರಾಗಿ ಭೂತ ಭವಿಷ್ಯವನ್ನು ತಿಳಿದವರು. ನನ್ನ ಮನಸ್ಸಿನಲ್ಲಿರುವ ಒಂದು ಸಂಶಯ ವಿಷಯವನ್ನು ಕೇಳುತ್ತೇನೆ. ಅದನ್ನು ಪರಿಹರಿಸಿ.

ದ್ರುಪದಸ್ಯ ಸುತಾ ಹ್ಯೇಷಾ ವೇದಿಮಧ್ಯಾತ್ ಸಮುತ್ಥಿತಾ ।
ಅಯೋನಿಜಾ ಮಹಾಭಾಗಾ ಸ್ನುಷಾ ಪಾಂಡೋರ್ಮಹಾತ್ಮನಃ ॥೫॥

ಈ ದ್ರುಪದಕುಮಾರಿಯು ವೇದಿ ಮಧ್ಯದಿಂದ ಎದ್ದುಬಂದವಳು. ಅಯೋನಿಜಳಾದವಳು, ಮಹಾನುಭಾವಳು ಮತ್ತು ಮಹಾತ್ಮನಾದ ಪಾಂಡುವಿನ ಸೊಸೆ.

ಮನ್ಯೇ ಕಾಲಶ್ಚ ಭಗವನ್ ದೈವಂ ಚ ವಿಧಿನಿರ್ಮಿತಮ್ ।
ಭವಿತವ್ಯಂ ಚ ಭೂತಾನಾಂ ಯಸ್ಮ ನಾಸ್ತಿ ವ್ಯತಿಕ್ರಮಃ ॥೬॥

ಪೂಜ್ಯರೇ, ಕಾಲವು ಮತ್ತು ದೈವವು ವಿಧಿನಿರ್ಮಿತವೆಂದು ಭಾವಿಸುತ್ತೇನೆ. ಜೀವರ ಭವಿತವ್ಯವೂ ಸಹ ವಿಧಿನಿರ್ಮಿತವಾದುದು. ಅದನ್ನು ಯಾರೂ ದಾಟಲಾರರು.

ಇಮಾಂ ಹಿ ಪತ್ನೀಮಸ್ಮಾಕಂ ಧರ್ಮಜ್ಞಾಂ ಧರ್ಮಚಾರಿಣೀಮ್ ।
ಸಂಸ್ಪೃಶೇದೀದೃಶೋ ಭಾವಃ ಶುಚಿಂ ಸ್ವೈನ್ಯಮಿವಾನೃತಮ್ ॥೭॥

ನಮ್ಮ ಧರ್ಮಜ್ಞಳಾದ, ಧರ್ಮಚಾರಿಣಿಯಾದ ಈ ಪತ್ನಿಯನ್ನು ಶುಚಿಯಾದ ಪುರುಷನನ್ನು ಕಳ್ಳತನವು ಹೇಗೆ ಸ್ಪರ್ಶಿಸಲು ಸಾಧ್ಯವಿಲ್ಲವೋ ಅಂತಹ ಪರಪುರುಷ ಸ್ಪರ್ಶರೂಪವಾದ ಭಾವವು ಹೇಗೆ ಉಂಟಾಯಿತು?

ನ ಹಿ ಪಾಪಂ ಕೃತಂ ಕಿಂಚಿತ್ ಕರ್ಮ ವಾ ನಿಂದಿತಂ ಕ್ವಚಿತ್ ।
ದ್ರೌಪದ್ಯಾ ಬ್ರಾಹ್ಮಣೇಷ್ವೇವ ಧರ್ಮಃ ಸುಚರಿತೋ ಮಹಾನ್ ॥೮॥

ದ್ರೌಪದಿಯು ಯಾವ ಪಾಪಕರ್ಮವನ್ನಾಗಲೀ ಅಥವಾ ನಿಂದಿತಕರ್ಮವನ್ನಾಗಲಿ ಮಾಡಲಿಲ್ಲ. ದ್ರೌಪದಿಯು ಬ್ರಾಹ್ಮಣರ ವಿಷಯದಲ್ಲಿ ಮಹಾಧರ್ಮವನ್ನು ಆಚರಿಸಿದ್ದಾಳೆ.

ತಂ ಜಹಾರ ಬಲಾದ್ ರಾಜಾ ಮೂಢಬುದ್ಧಿರ್ಜಯದ್ರಥಃ ।
ತಸ್ಯಾಃ ಸಂಹರಣಾತ್ ಪಾಪಃ ಶಿರಸಃ ಕೇಶಪಾತನಮ್ ।
ಪರಾಜಯಂ ಚ ಸಂಗ್ರಾಮೇ ಸಸಹಾಯಃ ಸಮಾಪ್ತವಾನ್ ॥೯॥

ಅಂತಹವಳನ್ನು ಮೂಢಬುದ್ಧಿಯುಳ್ಳ ಜಯದ್ರಥನು ಬಲಾತ್ಕಾರದಿಂದ ಅಪಹರಿಸಿದನು. ಅವಳ ಅಪಹರಣದಿಂದ ಆ ಪಾಪಿಯು ಶಿರಸ್ಸಿನಲ್ಲಿ ಕೇಶವಪನವನ್ನು ಮತ್ತು ಯುದ್ಧದಲ್ಲಿ ಪರಾಜಯವನ್ನು ಸಹಾಯದಿಂದ ಕೂಡಿದ್ದರೂ ಪಡೆದನು.

ಪ್ರತ್ಯಾಹೃತಾ ತಥಾಽಸ್ಮಾಭಿರ್ಹತ್ವಾ ತತ್ ಸೈಂಧವಂ ಬಲಮ್ ॥೧೦॥

ತದ್ದಾರಹರಣಂ ಪ್ರಾಪ್ತಮಸ್ಮಾಭಿರವಿತರ್ಕಿತಮ್ ।
ದುಃಖಿಶ್ಚಾಯಂ ವನೇ ವಾಸೋ ಮೃಗಯಾಯಾಂ ಚ ಜೀವಿಕಾ ॥೧೧॥

ನಾವು ಸೈಂಧವ ಸೈನ್ಯವನ್ನು ಸೋಲಿಸಿ (ವಧೆ ಮಾಡಿ) ಅವಳನ್ನು ಮರಳಿ ತಂದೆವು. ನಾವು ನಿರೀಕ್ಷಿಸದಿದ್ದ ಪತ್ನಿಯ ಅಪಹಾರವು ನಮಗೆ ಉಂಟಾಯಿತು. ಈ ಕಾಡಿನಲ್ಲಿ ವಾಸವೂ ಬೇಟೆಯಿಂದ ಜೀವನವೂ ಸಹ ದುಃಖದಾಯಕವಾದುದು.

ಹಿಂಸಾ ಚ ಮೃಗಜಾತೀನಾಂ ವನೌಕೋಭಿರ್ವನೌಕಸಾಮ್ ।
ಜ್ಞಾತಿಭಿರ್ವಿಪ್ರವಾಸಶ್ಚ ಮಿಥ್ಯಾವ್ಯವಸಿತೈರಯಮ್ ॥೧೨॥

ಕಾಡಿನಲ್ಲಿ ವಾಸಮಾಡುವವರಾಗಿ ನಾವು ವನಮೃಗಗಳಿಗೂ ಮತ್ತು ವನವಾಸಿಗಳಿಗೂ ಹಿಂಸೆಯನ್ನು ಉಂಟುಮಾಡಿದೆವು. ದುಷ್ಟಸಂಕಲ್ಪವುಳ್ಳ ಜ್ಞಾತಿಗಳ ನಿಮಿತ್ತದಿಂದ ನಮಗೆ ರಾಜ್ಯವನ್ನು ಬಿಟ್ಟು ಈ ವಿಪ್ರವಾಸವು ಉಂಟಾಯಿತು.

ಅಸ್ತಿ ಕಶ್ಚಿನ್ಮಯಾ ನೂನಂ ಅಲ್ಪಭಾಗ್ಯತರೋ ನರಃ ।
ಭವತಾ ದೃಷ್ಟಪೂರ್ವೋ ವಾ ಶ್ರುತಪೂರ್ವೋಽಪಿ ವಾ ಕ್ವಚಿತ್ ॥೧೩॥

ನನಗಿಂತ ದುರ್ಭಾಗ್ಯನಾದ ಒಬ್ಬ ಮನುಷ್ಯನು ಯಾವನಾದರೂ ಇದ್ದಾನೆಯೇ? ಅಂತಹವನನ್ನು ನೀವು ಹಿಂದೆ ನೋಡಿದ್ದೀರಾ? ಅಥವಾ ಕೇಳಿದ್ದೀರಾ?

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂಸಂಹಿತಾಯಾಂ ವೈಯಾಸಿಕ್ಯಾಂ ವನಪರ್ವಣಿ ಏಕಷಷ್ಟ್ಯಧಿಕದ್ವಿಶತತಮೋಽಧ್ಯಾಯಃ ॥
॥ ಇತಿ ರಾಮೋಪಾಖ್ಯಾನಪರ್ವಣಿ ಯುಧಿಷ್ಠಿರಪ್ರಶ್ನೋ ನಾಮ ಪ್ರಥಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವನಪರ್ವದಲ್ಲಿ ಇನ್ನೂರ ಅರವತ್ತೊಂದನೆಯ ಅಧ್ಯಾಯ ಮುಗಿಯಿತು.

★ ★ ★ ★

ಇನ್ನೂರ ಅರವತ್ತೆರಡನೆಯ ಅಧ್ಯಾಯ

ಮಾರ್ಕಂಡೇಯರಿಂದ ರಾಮಾದಿಗಳ ಉತ್ಪತ್ತಿ ಕಥನ ಮತ್ತು ರಾವಣನ ಉತ್ಪತ್ತಿಗೆ ಉಪೋದ್ಘಾತ ರೂಪವಾಗಿ ..... ಕಥನ.

ಮಾರ್ಕಂಡೇಯಃ

ಪ್ರಾಪ್ತಮಪ್ರತಿಮಂ ದುಃಖಂ ರಾಮೇಣ ಭರತರ್ಷಭ ।
ರಕ್ಷಸಾ ಜಾನಕೀ ತಸ್ಯ ಹೃತಾ ಭಾರ್ಯಾ ಬಲೀಯಸಾ ॥೧॥

ಮಾರ್ಕಂಡೇಯರು– ಭರತರ್ಷಭನೇ, ರಾಮನು ಅಸದೃಶವಾದ ದುಃಖವನ್ನು ಹೊಂದಿದನು. ಅವನ ಪತ್ನಿಯಾದ ಜಾನಕಿಯು ಬಲಿಷ್ಠನಾದ ರಾಕ್ಷಸನಿಂದ ಅಪಹರಿಸಲ್ಪಟ್ಟಳು.

ಆಶ್ರಮಾದ್ ರಾಕ್ಷಸೇಂದ್ರೇಣ ರಾವಣೇನ ದುರಾತ್ಮನಾ ।
ಮಾಯಾಮಾಸ್ಥಾಯ ತರಸಾ ಹತ್ವಾ ಗೃಧ್ರಂ ಜಟಾಯುಷಮ್ ॥೨॥

ದುರಾತ್ಮನಾದ ರಾಕ್ಷಸೇಂದ್ರನಾದ ರಾವಣನು ಮಾಯೆಯನ್ನು ಆಶ್ರಯಿಸಿ ತನ್ನ ಬಲದಿಂದ ಜಟಾಯು ಪಕ್ಷಿಯನ್ನು ಕೊಂದು ಆಶ್ರಮದಿಂದ ಜಾನಕಿಯನ್ನು ಅಪಹರಿಸಿದನು.

ಪ್ರತ್ಯಾಜಹಾರ ತಾಂ ರಾಮಃ ಸುಗ್ರೀವಬಲಮಾಶ್ರಿತಃ ।
ಬದ್ಧ್ವಾ ಸೇತುಂ ಸಮುದ್ರಸ್ಯ ದಗ್ಧ್ವಾ ಲಂಕಾಂ ಶಿತೈಃ ಶರೈಃ ॥೩॥

ರಾಮನು ಸುಗ್ರೀವನ ಬಲವನ್ನು ಆಶ್ರಯಿಸಿ ಸಮುದ್ರಕ್ಕೆ ಸೇತುವೆಯನ್ನು ನಿರ್ಮಾಣ ಮಾಡಿ ನಿಶಿತವಾದ ಶರಗಳಿಂದ ಲಂಕೆಯನ್ನು ದಹಿಸಿ ಅವಳನ್ನು ಕರೆದುಕೊಂಡು ಬಂದನು.

ತತಸ್ತಂ ಬಲವಾನ್ ರಾಮೋ ರಿಪುಂ ಭಾರ್ಯಾಪಹಾರಿಣಮ್ ।
ಸಹ ವಾನರಸೈನ್ಯೇನ ಜಘಾನ ರಣಮೂರ್ಧನಿ ॥೪॥

ಅನಂತರ ಬಲಿಷ್ಠನಾದ ರಾಮನು ವಾನರಸೈನ್ಯದ ಜೊತೆಯಲ್ಲಿ ಘೋರವಾದ ಯುದ್ಧದಲ್ಲಿ ತನ್ನ ಪತ್ನಿಯನ್ನು ಅಪಹರಿಸಿದ್ದ ಶತ್ರುವನ್ನು ಸಂಹರಿಸಿದನು.

ಯುಧಿಷ್ಠಿರಃ

ಕಸ್ಮಿನ್ ರಾಮಃ ಕುಲೇ ಜಾತಃ ಕಿಂವೀರ್ಯಃ ಕಿಂಪರಾಕ್ರಮಃ ।
ರಾವಣಃ ಕಸ್ಯ ಪುತ್ರೋ ವಾ ಕಿಂ ವೈರಂ ತಸ್ಯ ತೇನ ಹ ॥೪॥

ಯುಧಿಷ್ಠಿರ– ರಾಮನು ಯಾವ ಕುಲದಲ್ಲಿ ಜನಿಸಿದನು. ಅವನ ವೀರ್ಯ ಎಂತಹುದು. ಪರಾಕ್ರಮ ಎಂಥಹುದು? ಮತ್ತು ರಾವಣನು ಯಾರ ಪುತ್ರ ? ಅವನಿಗೆ ರಾಮನ ಜೊತೆಯಲ್ಲಿ ಏತಕ್ಕೆ ವೈರವುಂಟಾಯಿತು?

ಏತನ್ಮೇ ಭಗವನ್ ಸರ್ವಂ ಸಮ್ಯಗಾಖ್ಯಾತುಮರ್ಹಸಿ ।
ಶ್ರೋತುಮಿಚ್ಛಾಮಿ ಚರಿತಂ ರಾಮಸ್ಯಾಕ್ಲಿಷ್ಟಕರ್ಮಣಃ ।
ತ್ವಯಾ ಪ್ರತ್ಯಕ್ಷತೋ ದೃಷ್ಟಂ ಯಥಾ ಸರ್ವಮಶೇಷತಃ ॥೫॥

ಪೂಜ್ಯರೇ, ಇದೆಲ್ಲವನ್ನೂ ನನಗೆ ನೀವು ಸರಿಯಾಗಿ ಹೇಳಬೇಕು. ನೀವು ಪ್ರತ್ಯಕ್ಷವಾಗಿ ನೋಡಿದ ಅಕ್ಲಿಷ್ಟಕಾರಿಯಾದ ರಾಮನ ಸಮಗ್ರವಾದ ಚರಿತ್ರವನ್ನು ಯಥಾವತ್ತಾಗಿ ಕೇಳಲು ಬಯಸುತ್ತೇನೆ.

ಮಾರ್ಕಂಡೇಯಃ

ಶೃಣು ರಾಜನ್ ಪುರಾ ವೃತ್ತಮಿತಿಹಾಸಂ ಪುರಾತನಮ್ ।
ಅಜೋ ನಾಮಾಭವದ್ ರಾಜಾ ಮಹಾನಿಕ್ಷ್ವಾಕುವಂಶಜಃ ।
ತಸ್ಯ ಪುತ್ರೋ ದಶರಥಃ ಶಶ್ವತ್ಸ್ವಾಧ್ಯಾಯವಾನ್ ಶುಚಿಃ ॥೬॥

ಮಾರ್ಕಂಡೇಯರು– ರಾಜನೇ, ಹಿಂದೆ ನಡೆದ ಪುರಾತನವಾದ ಇತಿಹಾಸವನ್ನು ಕೇಳು. ಇಕ್ಷ್ವಾಕು ವಂಶದಲ್ಲಿ ಅಜನೆಂಬ ದೊಡ್ಡ ರಾಜನಿದ್ದನು. ಅವನ ಪುತ್ರ ದಶರಥ. ಅವನು ಯಾವಾಗಲೂ ಸ್ವಾಧ್ಯಾಯಶೀಲನೂ ಮತ್ತು ಶುಚಿಯೂ ಆಗಿದ್ದನು.

ಅಭವಂಸ್ತಸ್ಯ ಚತ್ವಾರಃ ಪುತ್ರಾ ಧರ್ಮಾರ್ಥಕೋವಿದಾಃ ।
ರಾಮಲಕ್ಷ್ಮಣಶತ್ರುಘ್ನಾ ಭರತಶ್ಚ ಮಹಾಬಲಃ ॥೭॥

ಅವನಿಗೆ ಧರ್ಮಾರ್ಥಕೋವಿದರಾದ ನಾಲ್ಕುಮಕ್ಕಳು ಜನಿಸಿದರು. ಅವರು ಮಹಾಬಲರಾದ ರಾಮ, ಲಕ್ಷ್ಮಣ, ಶತ್ರುಘ್ನ ಮತ್ತು ಭರತರು.

ರಾಮಸ್ಯ ಮಾತಾ ಕೌಸಲ್ಯಾ ಕೈಕೇಯೀ ಭರತಸ್ಯ ತು ।
ಸುತೌ ಲಕ್ಷ್ಮಣಶತ್ರುಘ್ನೌ ಸುಮಿತ್ರಾಯಾಃ ಪರಂತಪೌ ॥೮॥

ರಾಮನ ತಾಯಿ ಕೌಸಲ್ಯೆ. ಕೈಕೇಯಿಯು ಭರತನ ತಾಯಿ. ಪರಂತಪರಾದ ಲಕ್ಷ್ಮಣಶತ್ರುಘ್ನರು ಸುಮಿತ್ರೆಯ ಮಕ್ಕಳು.

ವಿದೇಹರಾಜೋ ಜನಕಃ ಸೀತಾ ತಸ್ಯಾತ್ಮಜಾ ವಿಭೋ ।
ಯಾಂ ಚಕಾರ ಸ್ವಯಂ ತಪ್ತ್ವಾ ರಾಮಸ್ಯ ಮಹಿಷೀಂ ಪ್ರಿಯಾಮ್ ॥೯॥

ಎಲೈ ವಿಭುವೇ, ಜನಕನು ವಿದೇಹರಾಜ. ಸೀತೆಯು ಅವನ ಪುತ್ರಿ. ಅವಳನ್ನು ಬ್ರಹ್ಮದೇವರೇ ರಾಮನ ಪ್ರಿಯಮಹಿಷಿಯನ್ನಾಗಿ ಮಾಡಿದರು.

ಏತದ್ ರಾಮಸ್ಯ ತೇ ಜನ್ಮ ಸೀತಾಯಾಶ್ಚ ಪ್ರಕೀರ್ತಿತಮ್ ।
ರಾವಣಸ್ಯಾಪಿ ತೇ ಜನ್ಮ ವ್ಯಾಖ್ಯಾಸ್ಯಾಮಿ ಜನೇಶ್ವರ ॥೧೦॥

ನಿನಗೆ ರಾಮ ಮತ್ತು ಸೀತೆಯರ ಜನ್ಮವನ್ನು ಹೇಳಿದೆನು. ಜನೇಶ್ವರನೇ, ರಾವಣನ ಜನ್ಮವನ್ನೂ ನಿನಗೆ ಹೇಳುವೆನು.

ಪಿತಾಮಹೋ ರಾವಣಸ್ಯ ಸಾಕ್ಷಾದ್ದೇವಃ ಪ್ರಜಾಪತಿಃ ।
ಸ್ವಯಂಭೂಃ ಸರ್ವಲೋಕಾನಾಂ ಪ್ರಭುಃ ಸ್ರಷ್ಟಾ ಮಹಾತಪಾಃ ॥೧೧॥

ಸರ್ವಲೋಕಗಳಿಗೆ ಪ್ರಭುವಾದ ಸರ್ವಲೋಕವನ್ನು ಸೃಷ್ಟಿಮಾಡುವ ಮಹಾತಪಸ್ವಿಯಾದ ಸ್ವಯಂಭೂ ಎಂದು ಕರೆಯಲ್ಪಡುವ ಪ್ರಜಾಪತಿಗಳಾದ ಬ್ರಹ್ಮದೇವರು ರಾವಣನ ತಾತ (ರಾವಣನ ತಂದೆಯಾದ ವಿಶ್ರವಸನು ಪುಲಸ್ತ್ಯನ ಅರ್ಧದೇಹರೂಪನಾದುದರಿಂದ ಬ್ರಹ್ಮದೇವರು ರಾವಣನಿಗೆ ಪಿತಾಮಹರಾಗುತ್ತಾರೆ).

ಪುಲಸ್ತ್ಯೋ ನಾಮ ತಸ್ಯಾಸೀನ್ಮಾನಸೋ ದಯಿತಃ ಸುತಃ ।
ತಸ್ಯ ವೈಶ್ರವಣೋ ನಾಮ ಗವಿ ಪುತ್ರೋಽಭವತ್ ಪ್ರಭುಃ ॥೧೨॥

ಅವರಿಗೆ ಪುಲಸ್ತ್ಯನೆಂಬ ಪ್ರೀತಿಪಾತ್ರನಾದ ಮಾನಸ ಪುತ್ರನು ಜನಿಸಿದನು. ಪುಲಸ್ತ್ಯನಿಗೆ ಗೋವಿನಲ್ಲಿ ಪ್ರಭುವಾದ ಕುಬೇರನು ಪುತ್ರನಾಗಿ ಜನಿಸಿದನು.

ಪಿತರಂ ಸ ಸಮುತ್ಸೃಜ್ಯ ಪಿತಾಮಹಮುಪಸ್ಥಿತಃ ।
ತಸ್ಯ ಕೋಪಾತ್ ಪಿತಾ ರಾಜನ್ ಸಸರ್ಜಾತ್ಮಾನಮಾತ್ಮನಾ ।
ಸ ಜಜ್ಞೇ ವಿಶ್ರವಾ ನಾಮ ತಸ್ಯಾತ್ಮಾರ್ಧೇನ ವೈ ದ್ವಿಜಃ ॥೧೩॥

ಅವನು ತಂದೆಯನ್ನು ಬಿಟ್ಟು ಪಿತಾಮಹನನ್ನು ಆಶ್ರಯಿಸಿದನು. ರಾಜನೇ, ಅವನ ಮೇಲಿನ ಕೋಪದಿಂದ ಆಗ ತಂದೆಯು ತನ್ನನ್ನೇ ಪುನಃ ಸೃಷ್ಟಿಸಿಕೊಂಡನು. ಅವನು ಪುಲಸ್ತ್ಯರ ಅರ್ಧದೇಹದಿಂದ ಕೂಡಿದವನಾಗಿ ವಿಶ್ರವ ಎಂಬ ಬ್ರಾಹ್ಮಣನಾಗಿ ಜನಿಸಿದನು.

ಪಿತಾಮಹಸ್ತು ಪ್ರೀತಾತ್ಮಾ ದದೌ ವೈಶ್ರವಣಸ್ಯ ಹ ।
ಅಮರತ್ವಂ ಧನೇಶತ್ವಂ ಲೋಕಪಾಲತ್ವಮೇವ ಚ ॥೧೪॥

ಪಿತಾಮಹರಾದ ಬ್ರಹ್ಮದೇವರು ಸಂತೋಷಗೊಂಡು ವೈಶ್ರವಣನಿಗೆ (ಕುಬೇರನಿಗೆ) ದೇವತ್ವವನ್ನೂ, ಧನೇಶತ್ವವನ್ನೂ ಮತ್ತು ಲೋಕಪಾಲಕತ್ವವನ್ನೂ ಕೊಟ್ಟರು.

ಈಶಾನೇನ ತಥಾ ಸಖ್ಯಂ ಪುತ್ರಂ ಚ ನಳಕೂಬರಮ್ ।
ರಾಜಧಾನೀನಿವೇಶಂ ಚ ಲಂಕಾಂ ರಕ್ಷೋಗಣಾನ್ವಿತಾಮ್ ।
ವಿಮಾನಂ ಪುಷ್ಪಕಂ ನಾಮ ಕಾಮಗಂ ಚ ದದೌ ಪ್ರಭುಃ ॥೧೫॥

ರುದ್ರದೇವರಿಂದ ಸಖ್ಯವನ್ನೂ, ನಳಕೂಬರ ಎಂಬ ಪುತ್ರನನ್ನೂ ಕೊಟ್ಟರು. ರಾಕ್ಷಸಗಣದಿಂದ ಕೂಡಿದ ಲಂಕೆಯನ್ನು ರಾಜಧಾನಿಯಾಗಿ ಕೊಟ್ಟರು ಮತ್ತು ಕಾಮಗಾಮಿಯಾದ ಪುಷ್ಪಕ ವಿಮಾನವನ್ನು ಪ್ರಭುಗಳಾದ ಅವರು ನೀಡಿದರು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂಸಂಹಿತಾಯಾಂ ವೈಯಾಸಿಕ್ಯಾಂ
ವನಪರ್ವಣಿ ದ್ವಿಷಷ್ಟ್ಯಧಿಕದ್ವಿಶತತಮೋಽಧ್ಯಾಯಃ ॥
॥ ಇತಿ ರಾಮೋಪಾಖ್ಯಾನಪರ್ವಣಿ ರಾಮರಾವಣಯೋರ್ಜನ್ಮ ಕಥನಂ ನಾಮ
ದ್ವಿತೀಯಾಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವನಪರ್ವದಲ್ಲಿ ಇನ್ನೂರ ಅರವತ್ತೆರಡನೆಯ ಅಧ್ಯಾಯ ಮುಗಿಯಿತು.

★ ★ ★ ★

ಇನ್ನೂರ ಅರವತ್ಮೂರನೆಯ ಅಧ್ಯಾಯ

ವಿಶ್ರವಸ ಮುನಿಯಿಂದ ಮೂರುಪತ್ನಿಯರಲ್ಲಿ ರಾವಣಾದಿಗಳ ಉತ್ಪತ್ತಿ. ಬ್ರಹ್ಮದೇವರನ್ನು ಕುರಿತು ತಪಸ್ಸನ್ನು ಮಾಡಿ ಅವರ ಅನುಗ್ರಹದಿಂದ ಪುಷ್ಪಕವಿಮಾನವನ್ನು ಅಪಹರಿಸಿ ಕುಬೇರನನ್ನು ಲಂಕೆಯಿಂದ ಓಡಿಸಿ ಲಂಕೆಯಲ್ಲಿ ನಿವಾಸ.

ಮಾರ್ಕಂಡೇಯಃ

ಪುಲಸ್ತ್ಯಸ್ಯ ತು ಯಃ ಕ್ರೋಧಾದರ್ಧದೇಹೋಽಭವನ್ಮುನಿಃ ।
ವಿಶ್ರವಾ ನಾಮ ಸಕ್ರೋಧಃ ಸ ವೈಶ್ರವಣಮೈಕ್ಷತ ॥೧॥

ಮಾರ್ಕಂಡೇಯ– ಯಾವ ವಿಶ್ರವಾ ಮುನಿಯು ಕ್ರೋಧದಿಂದ ಪುಲಸ್ತ್ಯರ ಅರ್ಧದೇಹವನ್ನು ಹೊಂದಿದರೋ ಅವರು ಕ್ರೋಧಯುಕ್ತರಾಗಿ ಕುಬೇರನನ್ನು ನೋಡಿದರು.

ಬುಬುಧೇ ತಂ ತು ಸಕ್ರೋಧಂ ಪಿತರಂ ರಾಕ್ಷಸೇಶ್ವರಃ ।
ಕುಬೇರಸ್ತು ಪ್ರಸಾದಾರ್ಥಂ ಯತತೇ ಸ್ಮ ಸದಾ ನೃಪ ॥೨॥

ರಾಕ್ಷಸರ ರಾಜನಾದ ಕುಬೇರನು ತಂದೆಯ ಆ ಕ್ರೋಧವನ್ನು ತಿಳಿದನು. ಎಲೈ ರಾಜನೇ, ಕುಬೇರನು ತಂದೆಯ ಅನುಗ್ರಹವನ್ನು ಸಂಪಾದಿಸಲು ಯಾವಾಗಲೂ ಪ್ರಯತ್ನ ಪಡುತ್ತಿದ್ದನು.

ಸ ರಾಜರಾಜೋ ಲಂಕಾಯಾಂ ನ್ಯವಸನ್ ನರವಾಹನಃ ।
ರಾಕ್ಷಸೀಃ ಪ್ರದದೌ ತಿಸ್ರಃ ಪಿತುರ್ವೈ ಪರಿಚಾರಿಕಾಃ ॥೩॥

ಆ ರಾಜರಾಜನಾದ ಕುಬೇರನು ನರವಾಹನನಾಗಿ ಲಂಕೆಯಲ್ಲಿ ವಾಸಿಸುತ್ತಿದ್ದನು. ಅವನು ತಂದೆಯ ಸೇವೆಗಾಗಿ ಅವನಿಗೆ ಮೂರುಜನ ರಾಕ್ಷಸ ಸ್ತ್ರೀಯರನ್ನು ಕೊಟ್ಟನು.

ತಾಃ ಸದಾ ತಂ ಮಹಾತ್ಮಾನಂ ಸಂತೋಷಯಿತುಮುದ್ಯತಾಃ ।
ಋಷಿಂ ಭರತಶಾರ್ದೂಲ ನೃತ್ಯಗೀತವಿಶಾರದಾಃ ॥೪॥

ಎಲೈ ಭರತಶಾರ್ದೂಲನೇ, ನೃತ್ಯಗಾನವಿಶಾರದರಾದ ಅವರು ಮಹಾತ್ಮನಾದ ಋಷಿಯನ್ನು ಸಂತೋಷಪಡಿಸಲು ಉದ್ಯುಕ್ತರಾದರು.

ಪುಷ್ಪೋತ್ಕಟಾ ಚ ರಾಕಾ ಚ ಮಾಲಿನೀ ಚ ವಿಶಾಂಪತೇ ।
ಅನ್ಯೋನ್ಯಸ್ಪರ್ಧಯಾ ರಾಜನ್ ಶ್ರೇಯಸ್ಕಾಮಾಃ ಸುಮಧ್ಯಮಾಃ ॥೫॥

ಎಲೈ ರಾಜನೇ, ಪುಷ್ಪೋತ್ಕಟಾ, ರಾಕಾ ಮತ್ತು ಮಾಲಿನೀ ಎಂಬ ಆ ಮೂವರು ಸುಂದರಿಯರು ಶ್ರೇಯಸ್ಕಾಮರಾಗಿ ಪರಸ್ಪರ ಸ್ಪರ್ಧೆಯನ್ನು ಮಾಡಿದರು.

ಸ ತಾಸಾಂ ಭಗವಾಂಸ್ತುಷ್ಟೋ ಮಹಾತ್ಮಾ ಪ್ರದದೌ ವರಾನ್ ।
ಲೋಕಪಾಲೋಪಮಾನ್ ಪುತ್ರಾನೇಕೈಕಸ್ಯಾ ಯಥೇಪ್ಸಿತಾನ್ ॥೬॥

ಅವರ ಸೇವೆಯಿಂದ ಸಂತುಷ್ಟರಾದ ಪೂಜ್ಯರಾದ ಆ ಮಹಾತ್ಮರು ಅವರಿಗೆ ಒಬ್ಬೊಬ್ಬರಿಗೂ ಇಷ್ಟವಾದಂತಹ ಲೋಕಪಾಲಕರಂತಹ ಶ್ರೇಷ್ಠರಾದ ಪುತ್ರರನ್ನು ಕೊಟ್ಟರು.

ಪುಷ್ಪೋತ್ಕಟಾಯಾಂ ಜಜ್ಞಾತೇ ದ್ವೌ ಪುತ್ರೌ ರಾಕ್ಷಸೇಶ್ವರೌ ।
ಕುಂಭಕರ್ಣದಶಗ್ರೀವೌ ಬಲೇನಾಪ್ರತಿಮೌ ಭುವಿ ॥೭॥

ಪುಷ್ಪೋತ್ಕಟಾ ಎಂಬ ರಾಕ್ಷಸ ಸ್ತ್ರೀಯಲ್ಲಿ ಭೂಮಿಯಲ್ಲಿ ಅಪ್ರತಿಮ ಬಲವುಳ್ಳ ಕುಂಭಕರ್ಣ ಮತ್ತು ರಾವಣನೆಂಬ ರಾಕ್ಷಸೇಶ್ವರರಾದ ಇಬ್ಬರು ಪುತ್ರರು ಜನಿಸಿದರು.

ಮಾಲಿನೀ ಜನಯಾಮಾಸ ಪುತ್ರಮೇಕಂ ವಿಭೀಷಣಮ್ ।
ರಾಕಾಯಾಂ ಮಿಥುನಂ ಜಜ್ಞೇ ಖರಃ ಶೂರ್ಪಣಖಾ ತಥಾ ॥೮॥

ಮಾಲಿನಿಯು ವಿಭೀಷಣನೆಂಬ ಒಬ್ಬ ಪುತ್ರನನ್ನು ಪಡೆದಳು. ರಾಕೆಯಲ್ಲಿ ಖರ ಮತ್ತು ಶೂರ್ಪಣಖಾ ಎಂಬ ಅವಳಿ ಮಕ್ಕಳು ಜನಿಸಿದರು.

ವಿಭೀಷಣಸ್ತು ರೂಪೇಣ ಸರ್ವೇಭ್ಯೋಽಭ್ಯಧಿಕೋಽಭವತ್ ।
ಸ ಬಭೂವ ಮಹಾಭಾಗೋ ಧರ್ಮಗೋಪ್ತಾ ಕ್ರಿಯಾರತಿಃ ॥೯॥

ವಿಭೀಷಣನು ರೂಪದಲ್ಲಿ ಎಲ್ಲರಿಗಿಂತಲೂ ಶ್ರೇಷ್ಠನಾಗಿದ್ದನು. ಆ ಮಹಾನುಭಾವನು ಧರ್ಮರಕ್ಷಕನೂ, ಸತ್ಕರ್ಮನಿರತನೂ ಆಗಿದ್ದನು.

ದಶಗ್ರೀವಸ್ತು ಸರ್ವೇಷಾಂ ಶ್ರೇಷ್ಠೋ ರಾಕ್ಷಸಪುಂಗವಃ ।
ಮಹೋತ್ಸಾಹೋ ಮಹಾವೀರ್ಯೋ ಮಹಾಸತ್ತ್ವಪರಾಕ್ರಮಃ ॥೧೦॥

ದಶಗ್ರೀವನಾದ ರಾವಣನು ಎಲ್ಲರಿಗಿಂತಲೂ ಶ್ರೇಷ್ಠನಾದ ರಾಕ್ಷಸಪುಂಗವ. ಅವನು ಮಹಾ ಉತ್ಸಾಹವನ್ನೂ, ವೀರ್ಯವನ್ನೂ, ಸತ್ತ್ವಪರಾಕ್ರಮಗಳನ್ನೂ ಹೊಂದಿದ್ದನು.

ಕುಂಭಕರ್ಣೋ ಬಲೇನಾಸೀತ್ ಸರ್ವೇಭ್ಯೋಽಭ್ಯಧಿಕೋ ಯುಧಿ ।
ಮಾಯಾವೀ ರಣಶೌಂಡಶ್ಚ ರೌದ್ರಶ್ಚ ರಜನೀಚರಃ ॥೧೧॥

ಕುಂಭಕರ್ಣನು ತನ್ನ ಬಲದಿಂದ ಯುದ್ಧದಲ್ಲಿ ಎಲ್ಲರಿಗೂ ಮಿಗಿಲಾಗಿದ್ದನು. ಅವನು ಮಯಾವಿ, ಯುದ್ಧಕುಶಲ ಮತ್ತು ಭಯಂಕರನಾದ ರಾಕ್ಷಸ.

ಖರೋ ಧನುಷಿ ವಿಕ್ರಾಂತೋ ಬ್ರಹ್ಮದ್ವಿಟ್ ಪಿಶಿತಾಶನಃ ।
ಸಿದ್ಧವಿಘ್ನಕರೀ ಚಾಪಿ ರೌದ್ರೀ ಶೂರ್ಪಣಖಾ ತಥಾ ॥೧೨॥

ಖರನು ಧನುರ್ವಿದ್ಯೆಯನ್ನು ಬಲ್ಲವನು, ಬ್ರಹ್ಮದ್ವೇಷಿ ಮತ್ತು ಮಾಂಸಾಹಾರಿಯಾದವನು. ಶೂರ್ಪಣಖೆಯು ಸಿದ್ಧಿಗಳಿಗೆ ವಿಘ್ನವನ್ನು ಉಂಟು ಮಾಡುವ ಭಯಂಕರಳಾದ ರಾಕ್ಷಸೀ.

ಸರ್ವೇ ವೇದವಿದಃ ಶೂರಾಃ ಸರ್ವೇ ಸುಚರಿತವ್ರತಾಃ ।
ಊಷುಃ ಪಿತ್ರಾ ಸಹ ರತಾ ಗಂಧಮಾದನಪರ್ವತೇ ॥೧೩॥

ಎಲ್ಲರೂ ವೇದವನ್ನು ತಿಳಿದವರು, ಶೂರರು ಮತ್ತು ವ್ರತಗಳನ್ನು ಅನುಷ್ಠಾನ ಮಾಡುವವರು. ಅವರು ತಂದೆಯ ಜೊತೆಯಲ್ಲಿ ಗಂಧಮಾದನ ಪರ್ವತದಲ್ಲಿ ಸಂತೋಷದಿಂದ ವಾಸಮಾಡಿದರು.

ತತೋ ವೈಶ್ರವಣಂ ತತ್ರ ದದೃಶುರ್ನರವಾಹನಮ್ ।
ಪಿತ್ರಾ ಸಾರ್ಧಂ ಸಮಾಸೀನಮೃದ್ಧ್ಯಾ ಪರಮಯಾ ಯುತಮ್ ॥೧೪॥

ಅನಂತರ ಅವರು ಅಲ್ಲಿ ತಮ್ಮ ತಂದೆಯು ಜೊತೆಯಲ್ಲಿ ಕುಳಿತಿದ್ದ ಪರಮ ಸಮೃದ್ಧಿಯಿಂದ ಯುತನಾದ ನರವಾಹನನಾದ ಕುಬೇರನನ್ನು ನೋಡಿದರು.

ಜಾತಾಮರ್ಷಾಸ್ತತಸ್ತೇ ತು ತಪಸೇ ಧೃತನಿಶ್ಚಯಾಃ ।
ಬ್ರಹ್ಮಾಣಂ ತೋಷಯಾಮಾಸುರ್ಘೋರೇಣ ತಪಸಾ ತದಾ ॥೧೫॥

ಅದರಿಂದ ಕೋಪಗೊಂಡ ಅವರು ತಪಸ್ಸನ್ನು ಮಾಡುವುದಾಗಿ ನಿಶ್ಚಯಿಸಿ ಘೋರವಾದ ತಪಸ್ಸಿನಿಂದ ಬ್ರಹ್ಮದೇವರನ್ನು ಸಂತೋಷಪಡಿಸಿದರು.

ಅತಿಷ್ಠದೇಕಪಾದೇನ ಸಹಸ್ರಂ ಪರಿವತ್ಸರಾನ್ ।
ವಾಯುಭಕ್ಷೋ ದಶಗ್ರೀವಃ ಪಂಚಾಗ್ನಿಃ ಸುಸಮಾಹಿತಃ ॥೧೬॥

ರಾವಣನು ವಾಯುಭಕ್ಷನಾಗಿ ಪಂಚಾಗ್ನಿಗಳ ಮಧ್ಯೆ ಒಂದು ಪಾದದ ಮೇಲೆ ನಿಂತು ಒಂದುಸಾವಿರ ವರ್ಷಗಳ ಕಾಲ ಸಮಾಹಿತನಾಗಿ ತಪಸ್ಸನ್ನು ಮಾಡಿದನು.

ಅಧಃಶಾಯೀ ಕುಂಭಕರ್ಣೋ ಯತಾಹಾರೋ ಯತವ್ರತಃ ।
ವಿಭೀಷಣಃ ಶೀರ್ಣಪರ್ಣಮೇಕಮಭ್ಯವಹಾರಯನ್ ॥೧೭॥

ಕುಂಭಕರ್ಣನು ನಿಯತವ್ರತನಾಗಿ ನಿಯತ ಆಹಾರವನ್ನು ಹೊಂದಿ ನೆಲದ ಮೇಲೆ ಮಲಗಿ ತಪಸ್ಸನ್ನು ಮಾಡಿದನು. ವಿಭೀಷಣನು ಪ್ರತಿದಿನವೂ ಒಂದು ಒಣಗಿದ ಎಲೆಯನ್ನು ಭಕ್ಷಿಸಿ ತಪಸ್ಸನ್ನು ಮಾಡಿದನು.

ಉಪವಾಸರತಿರ್ಧೀಮಾನ್ ಸದಾ ಜಪ್ಯಪರಾಯಣಃ ।
ತಮೇವ ಕಾಲಮಾತಿಷ್ಠತ್ ತೀವ್ರಂ ತಪ ಉದಾರಧೀಃ ॥೧೮॥

ಅವನು ಯಾವಾಗಲೂ ಉಪವಾಸದಲ್ಲಿ ರತನಾಗಿದ್ದು, ಮೇಧಾವಿಯೂ, ಜಪಪರಾಯಣನೂ ಆಗಿದ್ದನು. ಉದಾರಬುದ್ಧಿಯುಳ್ಳ ಅವನು ಅಷ್ಟೇ ಕಾಲ ಎಂದರೆ ಒಂದುಸಹಸ್ರ ವರ್ಷಗಳ ಕಾಲ ತೀವ್ರವಾದ ತಪಸ್ಸನ್ನು ಆಚರಿಸಿದನು.

ಖರಃ ಶೂರ್ಪಣಖಾ ಚೈವ ತೇಷಾಂ ವೈ ತಪ್ಯತಾಂ ತಪಃ ।
ಪರಿಚರ್ಯಾಂ ಚ ರಕ್ಷಾಂ ಚ ಚಕ್ರತುರ್ಹೃಷ್ಟಮಾನಸೌ ॥೧೯॥

ಖರ ಮತ್ತು ಶೂರ್ಪಣಖೆಯರು ತಪಸ್ಸು ಮಾಡುವ ಆ ಮೂವರಿಗೆ ಸಂತೋಷಗೊಂಡ ಮನಸ್ಸಿನಿಂದ ಸೇವೆಯನ್ನು ಮತ್ತು ರಕ್ಷಣೆಯನ್ನು ಮಾಡಿದರು.

ಪೂರ್ಣೇ ವರ್ಷಸಹಸ್ರೇ ತು ಶಿರಶ್ಛಿತ್ತ್ವಾ ದಶಾನನಃ ।
ಜುಹೋತ್ಯಗ್ನೌ ದುರಾಧರ್ಷಸ್ತೇನಾತುಷ್ಯಜ್ಜಗತ್ಪ್ರಭುಃ ॥೨೦॥

ಒಂದುಸಾವಿರ ವರ್ಷಗಳು ಪೂರ್ಣವಾದಾಗ ದುರಾಧರ್ಷನಾದ ದಶಾನನನು ತನ್ನ ತಲೆಯನ್ನು ಕತ್ತರಿಸಿ ಅಗ್ನಿಯಲ್ಲಿ ಹೋಮವನ್ನು ಮಾಡಿದನು. ಅದರಿಂದ ಪ್ರಭುಗಳಾದ ಬ್ರಹ್ಮದೇವರು ಪ್ರಸನ್ನರಾದರು.

ತತೋ ಬ್ರಹ್ಮಾ ಸ್ವಯಂ ಗತ್ವಾ ತಪಸಸ್ತಾನ್ ನ್ಯವಾರಯತ್ ।
ಪ್ರಲೋಭ್ಯ ವರದಾನೇನ ಸರ್ವಾನೇವ ಪೃಥಕ್‌ಪೃಥಕ್ ॥೨೧॥

ಆಗ ಬ್ರಹ್ಮದೇವರು ತಾವಾಗಿಯೇ ಹೋಗಿ ಅವರೆಲ್ಲರನ್ನೂ ಬೇರೆ ಬೇರೆ ವರಗಳಿಂದ ಪ್ರಲೋಭಗೊಳಿಸಿ ಅವರ ತಪಸ್ಸನ್ನು ನಿಲ್ಲಿಸಿದರು.

ಬ್ರಹ್ಮಾ

ಪ್ರೀತೋಽಸ್ಮಿ ವೋ ನಿವರ್ತಧ್ವಂ ವರಾನ್ ವೃಣುತ ಪುತ್ರಕಾಃ ।
ಯದ್ಯದಿಷ್ಟಮೃತೇ ತ್ವೇಕಮಮರತ್ವಂ ತಥಾಸ್ತು ತತ್ ॥೨೨॥

ಬ್ರಹ್ಮ– ಮಕ್ಕಳೇ, ನಾನು ನಿಮಗೆ ಪ್ರಸನ್ನನಾಗಿದ್ದೇನೆ. ತಪಸ್ಸನ್ನು ನಿಲ್ಲಿಸಿ, ಅಮರತ್ವವನ್ನು ಬಿಟ್ಟು ನಿಮಗೆ ಯಾವುದು ಯಾವುದು ಇಷ್ಟವಾಗಿದೆಯೋ ಅದೆಲ್ಲವೂ ಹಾಗೆಯೇ ಉಂಟಾಗಲಿ.

ಯದ್ಯದಗ್ನೌ ಹುತಂ ಸರ್ವಂ ಶಿರಸ್ತೇ ಮಹದೀಪ್ಸಯಾ ।
ತಥೈವ ತಾನಿ ತೇ ದೇಹೇ ಭವಿಷ್ಯಂತಿ ಯಥೇಪ್ಸಯಾ ॥೨೩॥

ನೀನು ಯಾವ ಯಾವ ಶಿರಸ್ಸನ್ನು ಮಹತ್ವವನ್ನು ಪಡೆಯುವ ಉದ್ದೇಶದಿಂದ ಅಗ್ನಿಯಲ್ಲಿ ಹೋಮವನ್ನು ಮಾಡಿದೆಯೋ ಅವೆಲ್ಲವೂ ನಿನ್ನ ಇಷ್ಟದಂತೆ ನಿನ್ನ ದೇಹಕ್ಕೇ ಬಂದು ಸೇರುವುವು.

ವೈರೂಪ್ಯಂ ಚ ನ ತೇ ದೇಹೇ ಕಾಮರೂಪಧರಸ್ತಥಾ ।
ಭವಿಷ್ಯಸಿ ರಣೇಽರೀಣಾಂ ವಿಜೇತಾ ನ ಚ ಸಂಶಯಃ ॥೨೪॥

ನಿನ್ನ ದೇಹದಲ್ಲಿ ವೈರೂಪ್ಯವು ಉಂಟಾಗುವುದಿಲ್ಲ. ನೀನು ಕಾಮರೂಪಧರನಾಗುವಿ. ಯುದ್ಧದಲ್ಲಿ ಶತ್ರುಗಳನ್ನೂ ಜಯಿಸುವಿ. ಇದರಲ್ಲಿ ಸಂಶಯವಿಲ್ಲ.

ರಾವಣಃ

ಗಂಧರ್ವದೇವಾಸುರತೋ ಯಕ್ಷರಾಕ್ಷಸತಸ್ತಥಾ ।
ಸರ್ಪಕಿನ್ನರಭೂತೇಭ್ಯೋ ನ ಮೇ ಭೂಯಾತ್ ಪರಾಭವಃ ॥೨೫॥

ರಾವಣ– ಗಂಧರ್ವದೇವ ಅಸುರರಿಂದ ಅದರಂತೆ ಯಕ್ಷರಾಕ್ಷಸರಿಂದ ಮತ್ತು ಸರ್ಪಕಿನ್ನರ ಭೂತಗಳಿಂದ ನನಗೆ ಸೋಲು ಉಂಟಾಗಬಾರದು.

ಬ್ರಹ್ಮಾ

ಯ ಏತೇ ಕೀರ್ತಿತಾಃ ಸರ್ವೇ ನ ತೇಭ್ಯೋಽಸ್ತಿ ಭಯಂ ತವ ।
ಋತೇ ಮನುಷ್ಯಾದ್ ಭದ್ರಂ ತೇ ತಥಾ ತದ್ ವಿಹಿತಂ ಮಯಾ॥೨೬॥

ಬ್ರಹ್ಮ– ನಿನಗೆ ಮಂಗಳವಾಗಲಿ. ಮನುಷ್ಯನನ್ನು ಬಿಟ್ಟು ನೀನು ಈ ಯಾರನ್ನು ಉಲ್ಲೇಖಿಸಿದ್ದೀಯೋ ಆ ಯಾರಿಂದಲೂ ನಿನಗೆ ಭಯವಿಲ್ಲ ಎಂದು ನಾನು ವಿಧಾನ ಮಾಡಿದ್ದೇನೆ.

ಮಾರ್ಕಂಡೇಯಃ

ಏವಮುಕ್ತೋ ದಶಗ್ರೀವಸ್ತುಷ್ಟಃ ಸಮಭವತ್ ತದಾ ।
ಅವಮೇನೇ ಹಿ ದುರ್ಬುದ್ಧಿರ್ಮನುಷ್ಯಾನ್ ಪುರುಷಾದಕಃ ॥೨೭॥

ಮಾರ್ಕಂಡೇಯರು– ಹೀಗೆ ಹೇಳಲ್ಪಟ್ಟ ರಾವಣನು ಆಗ ಸಂತುಷ್ಟನಾದನು. ನರಮಾಂಸಭಕ್ಷಕನಾದ ಆ ದುರ್ಬುದ್ಧಿಯು ಮನುಷ್ಯರನ್ನು ಅವಮಾನ ಮಾಡಿದನು.

ಕುಂಭಕರ್ಣಮಥೋವಾಚ ತಥೈವ ಪ್ರಪಿತಾಮಹಃ ।
ವರಂ ವೃಣೀಷ್ವ ಭದ್ರಂ ತೇ ಪ್ರೀತೋಽಸ್ಮೀತಿ ಪುನಃ ಪುನಃ ॥೨೮॥

ಅದರಂತೆ ಪ್ರಪಿತಾಮಹರಾದ ಬ್ರಹ್ಮದೇವರು ಕುಂಭಕರ್ಣನನ್ನು ಕುರಿತು ನಿನಗೆ ಪ್ರಸನ್ನನಾಗಿದ್ದೇನೆ. ಬೇಕಾದ ವರವನ್ನು ಕೇಳು ಎಂದು ಪುನಃ ಪುನಃ ಹೇಳಿದರು.

ಸ ವವ್ರೇ ಮಹತೀಂ ನಿದ್ರಾಂ ತಮಸಾ ಗ್ರಸ್ತಚೇತನಃ ।
ತಥಾ ಭವಿಷ್ಯತೀತ್ಯುಕ್ತ್ವಾ ವಿಭೀಷಣಮುವಾಚ ಹ ।
ವರಂ ವೃಷ್ಣೀಷ್ವ ಪುತ್ರ ತ್ವಂ ಪ್ರೀತೋಽಸ್ಮೀತಿ ಪುನಃ ಪುನಃ ॥೨೯॥

ತಮೋಗುಣದಿಂದ ಗ್ರಸ್ತವಾದ ಮನಸ್ಸುಳ್ಳ ಅವನು ದೀರ್ಘವಾದ ನಿದ್ರೆಯನ್ನು ವರವಾಗಿ ಬೇಡಿದನು. ಹಾಗೆಯೇ ಆಗಲಿ ಎಂದು ಬ್ರಹ್ಮದೇವರು ವಿಭೀಷಣನನ್ನು ಕುರಿತು ಪುತ್ರನೇ, ನಿನಗೆ ಪ್ರಸನ್ನನಾಗಿದ್ದೇನೆ, ಇಷ್ಟವಾದ ವರವನ್ನು ಕೇಳು ಎಂದು ಪುನಃ ಪುನಃ ಹೇಳಿದರು.

ವಿಭೀಷಣಃ

ಪರಮಾಪದ್ಗತಸ್ಯಾಪಿ ನಾಧರ್ಮೇ ಮೇ ಮತಿರ್ಭವೇತ್ ।
ಅಶಿಕ್ಷಿತಂ ಚ ಭಗವನ್ ಬ್ರಹ್ಮಾಸ್ತ್ರಂ ಪ್ರತಿಭಾತು ಮೇ ॥೩೦॥

ವಿಭೀಷಣ– ಪೂಜ್ಯನೇ, ಎಂತಹ ಆಪತ್ತು ಬಂದರೂ ನನಗೆ ಅಧರ್ಮವನ್ನು ಮಾಡುವ ಬುದ್ಧಿಯುಂಟಾಗಬಾರದು. ನಾನು ಬ್ರಹ್ಮಾಸ್ತ್ರದ ಉಪದೇಶವನ್ನು ಪಡೆಯದಿದ್ದರೂ ಅದು ನನಗೆ ಪ್ರತಿಭಾತವಾಗಬೇಕು.

ಬ್ರಹ್ಮಾ

ಯಸ್ಮಾದ್ ರಾಜಕ್ಷಸಯೋನೌ ತೇ ಜಾತಸ್ಯಾಮಿತ್ರಕರ್ಶನ ।
ನಾಧರ್ಮೇ ಧೀಯತೇ ಬುದ್ಧಿರಮರತ್ವಂ ದದಾಮಿ ತೇ ॥೩೧॥

ಬ್ರಹ್ಮ– ಎಲೈ ಶತ್ರುಕರ್ಶನನೇ, ರಾಕ್ಷಸಯೋನಿಯಲ್ಲಿ ಜನಿಸಿದರೂ ನಿನಗೆ ಅಧರ್ಮವನ್ನು ಮಾಡುವ ಬುದ್ಧಿ ಇಲ್ಲದಿರುವುದರಿಂದ ನಿನಗೆ ಕಲ್ಪಾಂತದವರೆಗೂ ಮರಣರಾಹಿತ್ಯರೂಪವಾದ ಅಮರತ್ವವನ್ನು ಕೊಡುತ್ತೇನೆ.

ಮಾರ್ಕಂಡೇಯಃ

ರಾಕ್ಷಸಸ್ತು ವರಂ ಲಬ್ಧ್ವಾ ದಶಗ್ರೀವೋ ವಿಶಾಂಪತೇ ।
ಲಂಕಾಯಾಶ್ಚ್ಯಾವಯಾಮಾಸ ಯುಧಿ ಜಿತ್ವಾ ಧನೇಶ್ವರಮ್ ॥೩೨॥

ಮಾರ್ಕಂಡೇಯರು– ಎಲೈ ರಾಜನೇ, ರಾಕ್ಷಸನಾದ ರಾವಣನು ಬ್ರಹ್ಮದೇವರಿಂದ ವರವನ್ನು ಪಡೆದು ಯುದ್ಧದಲ್ಲಿ ಕುಬೇರನನ್ನು ಸೋಲಿಸಿ ಅವನನ್ನು ಲಂಕೆಯಿಂದ ಓಡಿಸಿದನು.

ಹಿತ್ವಾ ಸ ಭಗವಾಂಲ್ಲಂಕಾಮಾವಿಶದ್ ಗಂಧಮಾದನಮ್ ।
ಗಂಧರ್ವಯಕ್ಷಾನುಗತೋ ರಕ್ಷಃಕಿಂಪುರುಷೈಃ ಸಹ ॥೩೩॥

ಆ ಪೂಜ್ಯನಾದ ಕುಬೇರನು ಲಂಕೆಯನ್ನು ಬಿಟ್ಟು ಗಂಧರ್ವರು, ಯಕ್ಷರು, ರಾಕ್ಷಸರು ಮತ್ತು ಕಿಂಪುರುಷರ ಜೊತೆಯಲ್ಲಿ ಗಂಧಮಾದನ ಪರ್ವತವನ್ನು ಪ್ರವೇಶಿಸಿದನು.

ವಿಮಾನಂ ಪುಷ್ಪಕಂ ತಸ್ಯ ಜಹಾರಾಕ್ರಮ್ಯ ರಾವಣಃ ।
ಶಶಾಪ ತಂ ವೈಶ್ರವಣೋ ನ ತ್ವಾಮೇತದ್ ವಹಿಷ್ಯತಿ ॥೩೪॥

ಅವನ ಪುಷ್ಪಕವಿಮಾನವನ್ನೂ ತನ್ನ ವಿಕ್ರಮದಿಂದ ರಾವಣನು ಅಪಹರಿಸಿದನು. ಆಗ ಕುಬೇರನು ಅವನಿಗೆ ಈ ವಿಮಾನವು ಎಂದೂ ನಿನ್ನನ್ನು ಧರಿಸುವುದಿಲ್ಲ ಎಂದು ಶಾಪವನ್ನು ಕೊಟ್ಟನು.

ಯಸ್ತು ತ್ವಾಂ ಸಮರೇ ಹಂತಾ ತಮೇವೈತದ್ವಹಿಷ್ಯತಿ ।
ಅವಮನ್ಯ ಗುರುಂ ಮಾಂ ಚ ಕ್ಷಿಪ್ರಂ ತ್ವಂ ನ ಭವಿಷ್ಯಸಿ ॥೩೫॥

ಯಾವನು ನಿನ್ನನ್ನು ಯುದ್ಧದಲ್ಲಿ ಕೊಲ್ಲುವನೋ ಅವನನ್ನು ಈ ವಿಮಾನವು ಹೊರುವುದು. ಹಿರಿಯನಾದ ನನಗೆ ಅವಮಾನವನ್ನು ಮಾಡಿದ ನೀನು ಶೀಘ್ರವಾಗಿ ನಾಶವನ್ನು ಹೊಂದುವಿ (ಎಂದೂ ಶಾಪವನ್ನು ಕೊಟ್ಟನು).

ವಿಭೀಷಣಸ್ತು ಧರ್ಮಾತ್ಮಾ ಸತಾಂ ಮಾರ್ಗಮನುಸ್ಮರನ್ ।
ಅನ್ವಗಚ್ಛನ್ಮಹಾರಾಜ ಶ್ರಿಯಾ ಪರಮಯಾ ಯುತಃ ॥೩೬॥

ಎಲೈ ಮಹಾರಾಜನೇ, ಧರ್ಮಾತ್ಮನಾದ ವಿಭೀಷಣನು ಸಜ್ಜನ ಮಾರ್ಗವನ್ನು ಸ್ಮರಿಸುತ್ತಾ ಪರಮೈಶ್ವರ್ಯದಿಂದ ಯುಕ್ತನಾಗಿ ಕುಬೇರನನ್ನು ಅನುಸರಿಸಿದನು.

ತಸ್ಯೈ ಸ ಭಗವಾಂಸ್ತುಷ್ಟೋ ಭ್ರಾತಾ ಭ್ರಾತ್ರೇ ಧನೇಶ್ವರಃ ।
ಸೈನಾಪತ್ಯಂ ದದೌ ಧೀಮಾನ್ ಯಕ್ಷರಾಕ್ಷಸಸೇನಯೋಃ ॥೩೭॥

ತನ್ನ ತಮ್ಮನಾದ ಅವನಿಗೆ ಅಣ್ಣನಾದ ಮೇಧಾವಿಯಾದ ಕುಬೇರನು ಯಕ್ಷರಾಕ್ಷಸ್ಯೆನ್ಯದ ಸೇನಾಧಿಪತ್ಯವನ್ನು ಕೊಟ್ಟನು.

ರಾಕ್ಷಸಾಃ ಪುರುಷಾದಾಶ್ಚ ಪಿಶಾಚಾಶ್ಚ ಮಹಾಬಲಾಃ ।
ಸರ್ವೇ ಸಮೇತ್ಯ ರಾಜಾನಮಭ್ಯಷಿಂಚನ್ ದಶಾನನಮ್ ॥೩೮॥

ನರಮಾಂಸಭಕ್ಷಕರಾದ ರಾಕ್ಷಸರು ಮತ್ತು ಮಹಾಬಲವುಳ್ಳ ಪಿಶಾಚಗಳು ಎಲ್ಲರೂ ಸೇರಿ ರಾವಣನನ್ನು ರಾಜನಾಗಿ ಅಭಿಷೇಕ ಮಾಡಿದರು.

ದಶಗ್ರೀವಶ್ಚ ದೈತ್ಯಾನಾಂ ದೇವಾನಾಂ ಚ ಬಲೋತ್ಕಟಃ ।
ಆಕ್ರಮ್ಯ ರತ್ನಾನ್ಯಹರತ್ ಕಾಮರೂಪೀ ವಿಹಂಗಮಃ ॥೩೯॥

ಬಲೋದ್ಧತನಾದ ರಾವಣನು ಕಾಮರೂಪವನ್ನು ಧರಿಸಿ ಆಕಾಶದಲ್ಲಿ ಸಂಚಾರ ಮಾಡುವವನಾಗಿ ತನ್ನ ಪರಾಕ್ರಮದಿಂದ ದೈತ್ಯರ ಮತ್ತು ದೇವತೆಗಳ ರತ್ನಗಳನ್ನು ಅಪಹರಿಸಿದನು.

ರಾವಯಾಮಾಸ ಲೋಕಾನ್ ಯತ್ ತಸ್ಮಾದ್ ರಾವಣ ಉಚ್ಯತೇ ।
ದಶಗ್ರೀವಃ ಕಾಮಬಲೋ ದೇವಾನಾಂ ಭಯಮಾದಧತ್ ॥೪೦॥

ಎಲ್ಲ ಲೋಕಗಳನ್ನೂ ಗೋಳಾಡಿಸಿದ್ದರಿಂದ ದಶಗ್ರೀವನಾದ ಅವನಿಗೆ ರಾವಣ ಎಂದು ಹೆಸರು ಬಂದಿತು. ಕಾಮಬಲನಾದ ದಶಗ್ರೀವನು ದೇವತೆಗಳಿಗೆ ಭಯವನ್ನು ಉಂಟು ಮಾಡಿದನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂಸಂಹಿತಾಯಾಂ ವೈಯಾಸಿಕ್ಯಾಂ
ವನಪರ್ವಣಿ ತ್ರಿಷಷ್ಟ್ಯಧಿಕದ್ವಿಶತತಮೋಽಧ್ಯಾಯಃ ॥
॥ ಇತಿ ರಾಮೋಪಖ್ಯಾನಪರ್ವಣಿ ರಾವಣಾದೀನಾಂವರಪ್ರಾಪ್ತಿರ್ನಾಮ
ತೃತೀಯೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವನಪರ್ವದಲ್ಲಿ ಇನ್ನೂರ ಅರವತ್ಮೂರನೆಯ ಅಧ್ಯಾಯ ಮುಗಿಯಿತು.

★ ★ ★ ★

ಇನ್ನೂರ ಅರವತ್ತನಾಲ್ಕನೆಯ ಅಧ್ಯಾಯ

ರಾವಣನ ಉಪದ್ರವಕ್ಕೆ ಒಳಗಾದ ದೇವತೆಗಳಿಂದ ಬ್ರಹ್ಮದೇವರಲ್ಲಿ ಮೊರೆ. ಬ್ರಹ್ಮದೇವರಿಂದ ರಾಮನಾಗಿ ಅವತಾರ ಮಾಡುವಂತೆ ವಿಷ್ಣುವಿನ ಪ್ರಾರ್ಥನೆ. ಕಪಿಗಳಾಗಿ ಅವತಾರ ಮಾಡಿ ರಾಮನ ಸಹಾಯವನ್ನು ಮಾಡುವಂತೆ ದೇವತೆಗಳಿಗೆ ಪ್ರೇರಣೆ.

ಮಾರ್ಕಂಡೇಯಃ

ತತೋ ಬ್ರಹ್ಮರ್ಷಯಃ ಸರ್ವೇ ಸಿದ್ಧಾ ದೇವರ್ಷಯಸ್ತಥಾ ।
ಹವ್ಯವಾಹಂ ಪುರಸ್ಕೃತ್ಯ ಬ್ರಹ್ಮಾಣಂ ಶರಣಂ ಗತಾಃ ॥೧॥

ಮಾರ್ಕಂಡೇಯರು– ಅನಂತರ ಎಲ್ಲ ಬ್ರಹ್ಮರ್ಷಿಗಳು, ಸಿದ್ಧರು ಮತ್ತು ದೇವರ್ಷಿಗಳು ಅಗ್ನಿಯನ್ನು ಮುಂದೆ ಮಾಡಿಕೊಂಡು ಬ್ರಹ್ಮದೇವರಿಗೆ ಶರಣಾಗತರಾದರು.

ಅಗ್ನಿಃ

ಯೋಽಸೌ ವಿಶ್ರವಸಃ ಪುತ್ರೋ ದಶಗ್ರೀವೋ ಮಹಾಬಲಃ ।
ಅವಧ್ಯೋ ವರದಾನೇನ ಕೃತೋ ಭಗವತಾ ಪುರಾ ॥೨॥

ಸ ಬಾಧತೇ ಪ್ರಜಾಃ ಸರ್ವಾ ವಿಪ್ರಕಾರೈರ್ಮಹಾಬಲಃ ।
ತತೋ ನಸ್ತ್ರಾತು ಭಗವನ್ ನಾನ್ಯಸ್ತ್ರಾತಾ ಹಿ ವಿದ್ಯತೇ ॥೩॥

ಅಗ್ನಿ– ವಿಶ್ರವಸನ ಪುತ್ರನಾದ ಮಹಾಬಲನಾದ ದಶಗ್ರೀವನು ಯಾವನಿದ್ದಾನೆಯೋ ಅವನು ಹಿಂದೆ ಪೂಜ್ಯರಾದ ನೀವು ನೀಡಿದ ವರದಾನದಿಂದ ಅವಧ್ಯನಾಗಿ ಎಲ್ಲಾ ಪ್ರಜೆಗಳಿಗೂ ಅಪಕಾರವನ್ನು ಮಾಡಿ ಬಾಧಿಸುತ್ತಿದ್ದಾನೆ. ಪೂಜ್ಯರೇ, ಅವನ ಉಪದ್ರವದಿಂದ ನಮ್ಮನ್ನು ರಕ್ಷಿಸಿ. ನಿಮ್ಮನ್ನು ಬಿಟ್ಟು ನಮಗೆ ಬೇರೆ ರಕ್ಷಕರಿಲ್ಲ.

ಬ್ರಹ್ಮಾ

ನ ಸ ದೇವಾಸುರೈಃ ಶಕ್ಯೋ ಯುದ್ಧೇ ಜೇತುಂ ವಿಭಾವಸೋ ।
ವಿಹಿತಂ ತತ್ರ ಯತ್ಕಾರ್ಯಮಭಿತಸ್ತಸ್ಯ ನಿಗ್ರಹಃ ॥೪॥

ತದರ್ಥಮವತೀರ್ಣೋಽಸೌ ಮನ್ನಿಯೋಗಾಚ್ಚತುರ್ಭುಜಃ ।
ವಿಷ್ಣುಃ ಪ್ರಹರತಾಂ ಶ್ರೇಷ್ಠಃ ಸ ತತ್ಕರ್ಮ ಕರಿಷ್ಯತಿ ॥೫॥

ಬ್ರಹ್ಮದೇವರು– ಎಲೈ ಅಗ್ನಿಯೇ, ದೇವತೆಗಳಿಂದಲಾಗಲೀ, ಅಸುರರಿಂದಾಗಲೀ ಅವನನ್ನು ಯುದ್ಧದಲ್ಲಿ ಜಯಿಸಲು ಸಾಧ್ಯವಿಲ್ಲ. ಅವನ ನಿಗ್ರಹದ ವಿಷಯದಲ್ಲಿ ಏನು ಮಾಡಬೇಕಾಗಿದೆಯೋ ಅದು ಈಗಾಗಲೇ ವಿಹಿತವಾಗಿದೆ (ಕ್ಲಪ್ತವಾಗಿದೆ). ಅವನ ನಿಗ್ರಹದ ಸಲುವಾಗಿ ನನ್ನ ಪ್ರಾರ್ಥನೆಯಂತೆ ಚತುರ್ಭುಜನಾದ ವಿಷ್ಣುವು ಅವತರಿಸಿದ್ದಾನೆ. ಪ್ರಹಾರಮಾಡುವವರಲ್ಲಿ ಶ್ರೇಷ್ಠನಾದ ಅವನು ಅವನ ನಿಗ್ರಹ ರೂಪವಾದ ಕರ್ಮವನ್ನು ಮಾಡುವನು.

ಮಾರ್ಕಂಡೇಯಃ

ಪಿತಾಮಹಸ್ತತಸ್ತೇಷಾಂ ಸನ್ನಿಧೌ ಶಕ್ರಮಬ್ರವೀತ್ ।
ಸರ್ವೈರ್ದೇವಗಣೈಃ ಸಾರ್ಧಂ ಸಂಭವ ತ್ವಂ ಮಹೀತಲೇ ॥೬॥

ವಿಷ್ಣೋಃ ಸಹಾಯಾನ್ಕಕ್ಷೇಷು ವಾನರೇಷು ಚ ಸರ್ವಶಃ ।
ಜನಯಧ್ವಂ ಸುತಾನ್ ವೀರಾನ್ ಕಾಮರೂಪಬಲಾನ್ವಿತಾನ್ ॥೭॥

ಮಾರ್ಕಂಡೇಯ– ಪಿತಾಮಹರಾದ ಬ್ರಹ್ಮದೇವರು ಅವರೆಲ್ಲರ ಸನ್ನಿಧಿಯಲ್ಲಿ ಇಂದ್ರನನ್ನು ಕುರಿತು ಎಲ್ಲ ದೇವಗಣಗಳ ಜೊತೆಯಲ್ಲಿ ನೀನು ಭೂತಲದಲ್ಲಿ ಅವತರಿಸು. ನೀವು ಹೆಣ್ಣು ಕರಡಿಗಳಲ್ಲಿ ಮತ್ತು ಕಪಿಗಳಲ್ಲಿ ವಿಷ್ಣುವಿಗೆ ಸಹಾಯವನ್ನು ಮಾಡುವ ಕಾಮರೂಪಬಲವನ್ನು ಹೊಂದಿದ ವೀರರಾದ ಪುತ್ರರನ್ನು ಎಲ್ಲರೂ ಪಡೆಯಿರಿ ಎಂದು ಹೇಳಿದರು.

ತೇ ಯಥೋಕ್ತಂ ಭಗವತಾ ತತ್ತಥಿಶ್ರುತ್ಯ ಶಾಸನಮ್ ।
ಸಸೃಜುರ್ದೇವಗಂಧರ್ವಾಃ ಪುತ್ರಾನ್ ವಾನರರೂಪಿಣಃ ॥೮॥

ತತೋ ಭಾಗಾನುಭಾಗೇನ ದೇವಗಂಧರ್ವಪನ್ನಗಾಃ ।
ಅವತರ್ತುಂ ಮಹೀಂ ಸರ್ವೇ ಮಂತ್ರಯಾಮಾಸುರಂಜಸಾ ॥೯॥

ಅವರು ಬ್ರಹ್ಮದೇವರ ಶಾಸನದ ವಿಷಯದಲ್ಲಿ ಹಾಗೆಯೇ ಆಗಲಿ ಎಂದು ಪ್ರತಿಜ್ಞೆ ಮಾಡಿ ಆ ದೇವಗಂಧರ್ವ ಸರ್ಪಗಳೆಲ್ಲರೂ ಅಂಶಾಂಶಗಳಿಂದ ಭೂಮಿಯಲ್ಲಿ ಅವತಾರವನ್ನು ಮಾಡಲು ಚೆನ್ನಾಗಿ ಮಂತ್ರಾಲೋಚನೆಯನ್ನು ಮಾಡಿದರು.

ಅವತೇರುರ್ಮಹೀಂ ಸ್ವರ್ಗಾದಂಶೈಶ್ಚ ಸಹಿತಾಃ ಸುರಾಃ ।
ಋಷಯಶ್ಚ ಮಹಾತ್ಮಾನಃ ಸಿದ್ಧಾಶ್ಚ ಸಹ ಕಿನ್ನರೈಃ ।
ಚಾರಣಾಶ್ಚಾಸೃಜನ್ ಘೋರಾನ್ ವಾನರಾನ್ ವನಚಾರಿಣಃ ॥೧೦॥

ಅನಂತರ ಸ್ವರ್ಗದಿಂದ ಭೂಮಿಗೆ ಬಂದು ದೇವತೆಗಳು ತಮ್ಮ ಅಂಶಗಳಿಂದ ಅವತಾರ ಮಾಡಿದರು. ಮಹಾತ್ಮರಾದ ಋಷಿಗಳೂ, ಸಿದ್ಧರೂ, ಕಿನ್ನರರೂ, ಚಾರಣರೂ ಸಹ ವನಚಾರಿಗಳಾದ ಘೋರರಾದ ವಾನರರನ್ನು ಸೃಷ್ಟಿಸಿದರು.

ಯಸ್ಯ ದೇವಸ್ಯ ಯದ್ರೂಪಂ ವೇಷಸ್ತೇಜಶ್ಚ ಯದ್ವಿಧಮ್ ।
ಅಜಾಯಂತ ಸಮಾಸ್ತೇನ ತಸ್ಯ ತಸ್ಯ ಸುತಾಸ್ತದಾ ॥೧೧॥

ಯಾವ ದೇವತೆಗೆ ಎಂತಹ ರೂಪ, ಎಂತಹ ಸಾಮರ್ಥ್ಯ ಮತ್ತು ಎಂತಹ ವೇಷವಿದೆಯೋ ಅವನ ಪುತ್ರರೂ ಸಹ ಅದಕ್ಕೆ ಸಮಾನವಾಗಿ ಜನಿಸಿದರು.

ತೇ ಸೃಷ್ಟಾ ಬಹುಸಾಹಸ್ರಾ ದಶಗ್ರೀವವಧೇ ರತಾಃ ।
ಅಪ್ರಮೇಯಬಲಾಃ ಶೂರಾ ವಾನರಾಃ ಕಾಮರೂಪಿಣಃ ॥೧೨॥

ಅನೇಕ ಸಹಸ್ರಸಂಖ್ಯೆಯಲ್ಲಿ ಸೃಷ್ಟಿಸಲ್ಪಟ್ಟ ಅವರು ದಶಗ್ರೀವನ ವಧೆಯಲ್ಲಿ ನಿರತರಾಗಿದ್ದರು. ಅವರೆಲ್ಲರೂ ಅಪ್ರಮೇಯಬಲವುಳ್ಳ ಕಾಮರೂಪಿಗಳಾದ ಶೂರರಾದ ವಾನರರಾಗಿದ್ದರು.

ತೇಷಾಂ ಸಮಕ್ಷಂ ಗಂಧರ್ವೀಂ ದುಂದುಭೀಂ ನಾಮ ನಾಮತಃ ।
ಶಶಾಸ ವರದೋ ದೇವೋ ಗಚ್ಛ ಕಾರ್ಯಾರ್ಥಸಿದ್ಧಯೇ ॥೧೩॥

ವರಪ್ರದರಾದ ಬ್ರಹ್ಮದೇವರು ಅವರ ಎದುರಿನಲ್ಲಿಯೇ ದುಂಧುಬಿ ಎಂಬ ಗಂಧರ್ವಸ್ತ್ರೀಯನ್ನು ಕಾರ್ಯಸಿದ್ಧಿಗಾಗಿ ಭೂಲೋಕಕ್ಕೆ ಹೋಗು ಎಂದು ಆಜ್ಞೆ ಮಾಡಿದರು.

ಪಿತಾಮಹವಚಃ ಶ್ರುತ್ವಾ ಗಂಧರ್ವೀ ದುಂದುಭೀ ತತಃ ।
ಮಂಥರಾ ಮಾನುಷೇ ಲೋಕೇ ಕುಬ್ಜಾ ಸಮಭವತ್ ತದಾ ॥೧೪॥

ಬ್ರಹ್ಮದೇವರ ಮಾತನ್ನು ಕೇಳಿದ ದುಂದುಭೀ ಎಂಬ ಗಂಧರ್ವಿಯು ಆಗ ಮನುಷ್ಯ ಲೋಕದಲ್ಲಿ ಮಂಥರೆ ಎಂಬ ಹೆಸರಿನಿಂದ ಕುಬ್ಜೆಯಾಗಿ ಜನಿಸಿದಳು.

ಶಕ್ರಪ್ರಭೃತಯಶ್ಚೈವ ಸರ್ವೇ ತೇ ಸುರಸತ್ತಮಾಃ ।
ವಾನರರ್ಕ್ಷವರಸ್ತ್ರೀಷು ಜನಯಾಮಾಸುರಾತ್ಮಜಾನ್ ॥೧೫॥

ಇಂದ್ರ ಮೊದಲಾದ ಶ್ರೇಷ್ಠದೇವತೆಗಳೆಲ್ಲರೂ ವಾನರಋಕ್ಷಸ್ತ್ರೀಯರಲ್ಲಿ ಮಕ್ಕಳನ್ನು ಪಡೆದರು.

ಭೇತ್ತಾರೋ ಗಿರಿಶೃಂಗಾಣಾಂ ಶಾಲತಾಳಶಿಲಾಯುಧಾಃ ।
ವಜ್ರಸಂಹನನಾಃ ಸರ್ವೇ ಸರ್ವೇ ಚೌಘಬಲಾಸ್ತಥಾ ॥೧೬॥

ಅವರೆಲ್ಲರೂ ಗಿರಿಶಿಖರಗಳನ್ನು ಭೇದಿಸುವವರು. ಸಾಲವೃಕ್ಷಗಳನ್ನೂ, ಶಿಲೆಗಳನ್ನೂ ಆಯುಧವನ್ನಾಗಿ ಉಳ್ಳವರು. ವಜ್ರಶರೀರರು ಮತ್ತು ಪ್ರವಾಹದ ಬಲವುಳ್ಳವರು.

ತೇಽನ್ವವರ್ತನ್ ಪಿತೄನ್ ಸರ್ವೇ ಯಶಸಾ ಚ ಬಲೇನ ಚ ।
ಕಾಮವೀರ್ಯಬಲಾಶ್ಚೈವ ಸರ್ವೇ ಯುದ್ಧ ವಿಶಾರದಾಃ ॥೧೭॥

ಅವರೆಲ್ಲರೂ ಯಶಸ್ಸಿನಿಂದಲೂ ಮತ್ತು ಬಲದಿಂದಲೂ ತಮ್ಮ ತಮ್ಮ ಪಿತೃಗಳನ್ನು ಅನುಸರಿಸಿದರು. ಎಲ್ಲರೂ ಕಾಮವೀರ್ಯಬಲವುಳ್ಳವರು ಮತ್ತು ಯುದ್ಧದಲ್ಲಿ ವಿಶಾರದರು.

ನಾಗಾಯುತಸಮಪ್ರಾಣಾ ವಾಯುವೇಗಸಮಾ ಜವೇ ।
ಯಥೇಚ್ಛಕನಿವಾಸಾಶ್ಚ ಕೇಚಿದತ್ರ ವನೌಕಸಃ ॥೧೮॥

ಹತ್ತುಸಹಸ್ರ ಆನೆಯಬಲವುಳ್ಳವರು. ವೇಗದಲ್ಲಿ ವಾಯುವೇಗಕ್ಕೆ ಸಮಾನರಾದವರು. ತಮ್ಮ ಇಚ್ಛೆಬಂದ ಕಡೆಯಲ್ಲಿ ನಿವಾಸ ಮಾಡುವವರು ಮತ್ತು ಕೆಲವರು ವನವಾಸಿಗಳು.

ಏವಂ ವಿಧಾಯ ತತ್ಸರ್ವಂ ಭಗವಾನ್ ಲೋಕಭಾವನಃ ।
ಮಂಥರಾಂ ಬೋಧಯಾಮಾಸ ಯದ್ಕರ್ತ್ಯಂ ಯಥಾ ಯಥಾ ॥

ಬ್ರಹ್ಮದೇವರು ಹೀಗೆ ಎಲ್ಲವನ್ನೂ ವ್ಯವಸ್ಥೆಗೊಳಿಸಿ ಮುಂದೆ ಮಾಡಬೇಕಾದ ಕಾರ್ಯದ ವಿಷಯದಲ್ಲಿ ಮಂಥರೆಗೆ ತಿಳುವಳಿಕೆಯನ್ನು ನೀಡಿದರು.

ಸಾ ತದ್ವಚಃ ಸಮಾಜ್ಞಾಯ ತಥಾ ಚಕ್ರೇ ಮನೋಜವಾ ।
ಇತಶ್ಚೇತಶ್ಚ ಗಚ್ಛಂತೀ ವೈರಸಂಧುಕ್ಷಣೇ ರತಾ ॥೨೦॥

ಮನೋಜವವನ್ನು ಹೊಂದಿದ ಮಂಥರೆಯು ಬ್ರಹ್ಮದೇವರ ಮಾತನ್ನು ತಿಳಿದು ಅದರಂತೆಯೇ ಇಲ್ಲಿಂದಲ್ಲಿಗೆ ಸಂಚರಿಸುತ್ತಾ ವೈರವನ್ನು ಉಂಟುಮಾಡುವ ಕಾರ್ಯವನ್ನು ಮಾಡಿದಳು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂಸಂಹಿತಾಯಾಂ ವೈಯಾಸಿಕ್ಯಾಂ
ವನಪರ್ವಣಿ ಚತುಷಷ್ಟ್ಯಧಿಕದ್ವಿಶತತಮೋऽಧ್ಯಾಯಃ ॥
॥ ಇತಿ ರಾಮೋಪಖ್ಯಾನಪರ್ವಣಿ ವಾನರಾದ್ಯುಪ್ಪತ್ತಿರ್ನಾಮ ಚತುರ್ಥೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವನಪರ್ವದಲ್ಲಿ ಇನ್ನೂರ ಅರವತ್ತನಾಲ್ಕನೆಯ ಅಧ್ಯಾಯ ಮುಗಿಯಿತು.

★ ★ ★ ★

ಇನ್ನೂರ ಅರವತ್ತೈದನೆಯ ಅಧ್ಯಾಯ

ರಾಮನ ಪಟ್ಟಾಭಿಷೇಕದ ಸಿದ್ಧತೆ. ಮಂಥರೆಯ ಕುತಂತ್ರ. ರಾಮನ ವನಗಮನ.

ಯುಧಿಷ್ಠಿರಃ

ಉಕ್ತಂ ಭಗವತಾ ಜನ್ಮ ರಾಮಾದೀನಾಂ ಪೃಥಕ್‌ಪೃಥಕ್।
ಪ್ರಸ್ಥಾನಶಮನೇ ಬ್ರಹ್ಮಂಶ್ಶ್ರೋತುಮಿಚ್ಛಾಮಿ ಕಥ್ಯತಾಮ್ ॥೧॥

ಯುಧಿಷ್ಠಿರ– ಪೂಜ್ಯರಾದ ನೀವು ರಾಮಾದಿಗಳ ಜನ್ಮವನ್ನು ಪ್ರತ್ಯೇಕವಾಗಿ ಹೇಳಿದ್ದೀರಿ. ಬ್ರಾಹ್ಮಣಶ್ರೇಷ್ಠರೇ, ರಾಮನ ವನವಾಸವನ್ನೂ ಮತ್ತು ಭರತಶತ್ರುಘ್ನರ ರಾಜ್ಯದಲ್ಲಿ ಸ್ಥಿತಿಯನ್ನೂ ಕೇಳಲು ಬಯಸುತ್ತೇನೆ. ಅದನ್ನು ತಿಳಿಸಿ.

ಜನ್ಮಾದಿ ಚರಿತಂ ಸರ್ವಂ ವಿವಾಹಾದಿ ಮಯಾ ಶ್ರುತಮ್ ।
ಕಥಂ ದಾಶರಥೀ ವೀರೌ ಭ್ರಾತರೌ ರಾಮಲಕ್ಷ್ಮಣೌ ।
ಸಂಪ್ರಸ್ಥಿತೌ ವನೇ ಬ್ರಹ್ಮನ್ ಮೈಥಿಲೀ ಚ ಯಶಸ್ವಿನೀ ॥೨॥

ರಾಮನ ಜನ್ಮ, ವಿವಾಹಾದಿಗಳು ಎಲ್ಲವನ್ನೂ ನಾನು ಕೇಳಿದ್ದೇನೆ. ಬ್ರಾಹ್ಮಣರೇ, ದಶರಥ ಪುತ್ರರಾದ ಸಹೋದರರಾದ ವೀರರಾದ ರಾಮಲಕ್ಷ್ಮಣರು ಹೇಗೆ ಕಾಡಿಗೆ ಹೋದರು. ಯಶಸ್ವಿನಿಯಾದ ಜಾನಕಿಯೂ ಸಹ ಹೇಗೆ ಕಾಡಿಗೆ ಹೋದಳು?

ಮಾರ್ಕಂಡೇಯಃ

ಜಾತಪುತ್ರೋ ದಶರಥಃ ಪ್ರೀತಿಮಾನಭವನ್ನೃಪ ।
ಕ್ರಿಯಾರತಿರ್ಧರ್ಮರತಃ ಸತತಂ ವೃದ್ಧಸೇವಿತಾ ॥೩॥

ಮಾರ್ಕಂಡೇಯರು– ಎಲೈ ರಾಜನೇ, ದಶರಥನು ಪುತ್ರರನ್ನು ಪಡೆದು ಸಂತೋಷಯುಕ್ತನಾದನು. ಸತ್ಕರ್ಮನಿರತನೂ, ಧರ್ಮನಿರತನೂ, ಸತತವೂ ಹಿರಿಯರನ್ನು ಸೇವಿಸುವವನೂ ಆದನು.

ವೃಷ್ಟಿರ್ಜಯಂತೋ ವಿಜಯಃ ಸಿದ್ಧಾರ್ಥೋ ರಾಷ್ಟ್ರವರ್ಧನಃ ।
ಅಶೋಕೋ ಧರ್ಮಪಾಲಶ್ಚ ಸುಮಂತ್ರಶ್ಚಾಷ್ಟಮೋऽಭವತ್ ॥೪॥

ದಶರಥನಿಗೆ ವೃಷ್ಟಿ, ಜಯಂತ, ಸಿದ್ಧಾರ್ಥ, ರಾಷ್ಟ್ರವರ್ಧನ, ಅಶೋಕ, ಧರ್ಮಪಾಲ, ಸುಮಂತ್ರನೆಂಬ ಎಂಟು ಜನ ಅಮಾತ್ಯರಿದ್ದರು.

ಕ್ರಮೇಣ ಚಾಸ್ಯ ತೇ ಪುತ್ರಾ ವ್ಯವರ್ಧಂತ ಮಹೌಜಸಃ ।
ವೇದೇಷು ಸರಹಸ್ಯೇಷು ಧನುರ್ವೇದೇಷು ಪಾರಗಾಃ ॥೫॥

ದಶರಥನ ಮಕ್ಕಳೆಲ್ಲರೂ ಕ್ರಮವಾಗಿ ಸರಹಸ್ಯವಾದ ವೇದಗಳಲ್ಲಿಯೂ, ಧನುರ್ವೇದಗಳಲ್ಲಿಯೂ ಪಾರಂಗತರಾಗಿ ಮಹಾಬಲಶಾಲಿಗಳಾಗಿ ಬೆಳೆದರು.

ಚರಿತಬ್ರಹ್ಮಚರ್ಯಾಸ್ತೇ ಕೃತದಾರಾಶ್ಚ ಪಾರ್ಥಿವ ।
ಯದಾ ತದಾ ದಶರಥಃ ಪ್ರೀತಿಮಾನಭವತ್ ಸುಖೀ ॥೬॥

ಎಲೈ ರಾಜನೇ, ಅವರು ಬ್ರಹ್ಮಚರ್ಯವ್ರತವನ್ನು ಮುಗಿಸಿ ವಿವಾಹವನ್ನು ಮಾಡಿಕೊಂಡ ಮೇಲೆ ದಶರಥನು ಸಂತೋಷದಿಂದ ಕೂಡಿದವನಾದನು.

ಜ್ಯೇಷ್ಠೋ ರಾಮೋऽಭವತ್ ತೇಷಾಂ ರಮಯಾಮಾಸ ಹಿ ಪ್ರಜಾಃ ।
ಮನೋಹರತಯಾ ಧೀಮಾನ್ ಪಿತುರ್ಹೃದಯನಂದನಃ ॥೭॥

ಅವರಲ್ಲಿ ಜ್ಯೇಷ್ಠನಾದ ರಾಮನು ಪ್ರಜೆಗಳನ್ನು ಸಂತೋಷಪಡಿಸಿದನು. ಅವನು ಮನೋಹರನೂ, ಮೇಧಾವಿಯೂ, ತಂದೆಯ ಮನಸ್ಸಿಗೆ ಬಹಳ ಸಂತೋಷವನ್ನು ಕೊಡುವವನೂ ಆಗಿದ್ದನು.

ತತಃ ಸ ರಾಜಾ ಮತಿಮಾನ್ ಮತ್ವಾऽऽತ್ಮಾನಂ ವಯೋऽಧಿಕಮ್ ।
ಮಂತ್ರಯಾಮಾಸ ಸಚಿವೈರ್ಧರ್ಮಜ್ಞೈಶ್ಚ ಪುರೋಹಿತೈಃ ॥೮॥

ಅನಂತರ ಆ ಮೇಧಾವಿಯಾದ ರಾಜನು ತನ್ನನ್ನು ವಯಸ್ಸಾದವನೆಂದು ತಿಳಿದು ಧರ್ಮಜ್ಞರಾದ ಪುರೋಹಿತರ ಮತ್ತು ಸಚಿವರ ಜೊತೆಯಲ್ಲಿ ಮಂತ್ರಾಲೋಚನೆಯನ್ನು ಮಾಡಿದನು.

ಅಭಿಷೇಕಾಯ ರಾಮಸ್ಯ ಯೌವರಾಜ್ಯೇನ ಭಾರತ ।
ಪ್ರಾಪ್ತಕಾಲಂ ಚ ತೇ ಸರ್ವೇ ಮೇನಿರೇ ಮಂತ್ರಿಸತ್ತಮಾಃ ॥೯॥

ಎಲೈ ಭಾರತನೇ, ಆ ಮಂತ್ರಿಶ್ರೇಷ್ಠರೆಲ್ಲರೂ ರಾಮನಿಗೆ ಯುವರಾಜ್ಯದಲ್ಲಿ ಪಟ್ಟಾಭಿಷೇಕವನ್ನು ಮಾಡಲು ಯೋಗ್ಯವಾದ ಕಾಲವು ಬಂದಿದೆ ಎಂದು ಹೇಳಿದರು.

ಲೋಹಿತಾಕ್ಷಂ ಮಹಾಬಾಹುಂ ಮತ್ತಮಾತಂಗಮಿನಮ್ ।
ದೀರ್ಘಬಾಹುಂ ಮಹೋರಸ್ಕಂ ನೀಲಕುಂಚಿತಮೂರ್ಧಜಮ್ ॥೧೦॥

ದೀಪ್ಯಮಾನಂ ಶ್ರಿಯಾ ವೀರಂ ಶಕ್ರಾದನವರಂ ರಣೇ ।
ಪಾರಗಂ ಸರ್ವಧರ್ಮಾಣಾಂ ಬೃಹಸ್ಪತಿಸಮಂ ಮತೌ ॥೧೧॥

ಸರ್ವಾನುರಕ್ತಪ್ರಕೃತಿಂ ಸರ್ವವಿದ್ಯಾವಿಶಾರದಮ್ ।
ಜಿತೇಂದ್ರಿಯಮಮಿತ್ರಾಣಾಮಪಿ ದೃಷ್ಟಿಮನೋಹರಮ್ ॥೧೨॥

ನಿಯಂತಾರಮಸಾಧೂನಾಂ ಗೋಪ್ತಾರಂ ಧರ್ಮಚಾರಿಣಾಮ್ ।
ಧೃತಿಮಂತಮನಾಧೃಷ್ಯಂ ಜೇತಾರಮಪರಾಜಿತಮ್ ॥೧೩॥

ಪುತ್ರಂ ರಾಜಾ ದಶರಥಃ ಕೌಸಲ್ಯಾನಂದವರ್ಧನಮ್ ।
ಸಂದೃಶ್ಯ ಪರಮಾಂ ಪ್ರೀತಿಮಗಚ್ಛತ್ ಕುರುನಂದನ ॥೧೪॥

ಲೋಹಿತಾಕ್ಷನೂ, ಮಹಾಬಾಹುವೂ, ಮತ್ತಗಜಗಮನನೂ, ದೀರ್ಘಬಾಹುವೂ, ಮಹಾವಕ್ಷಸ್ಥಲವನ್ನು ಹೊಂದಿದವನೂ, ಕಪ್ಪಾದ ಗುಂಗುರುಕೂದಲುಳ್ಳವನೂ, ಕಾಂತಿಯಿಂದ ಬೆಳಗುವವನೂ, ವೀರನೂ, ಯುದ್ಧದಲ್ಲಿ ಇಂದ್ರನಿಗಿಂತ ಕಡಿಮೆಯಲ್ಲದವನೂ, ಎಲ್ಲ ಧರ್ಮದಲ್ಲಿ ಪಾರಂಗತನಾದವನೂ, ಬುದ್ಧಿಯಲ್ಲಿ

ಬೃಹಸ್ಪತಿಗೆ ಸಮನಾದವನೂ, ಎಲ್ಲ ಪ್ರಜೆಗಳಲ್ಲಿ ಅನುರಾಗವನ್ನು ಸಂಪಾದಿಸಿದವನೂ, ಸರ್ವವಿದ್ಯಾವಿಶಾರದನೂ, ಜಿತೇಂದ್ರಿಯನೂ, ಶತ್ರುಗಳ ದೃಷ್ಟಿಗೂ ಮನೋಹರವಾಗಿ ಕಾಣುವವನೂ, ದುಷ್ಟರನ್ನು ನಿಯಂತ್ರಿಸುವವನೂ, ಧರ್ಮಾಚರಣೆಯನ್ನು ಮಾಡುವವರನ್ನು ರಕ್ಷಿಸುವವನೂ, ಧೈರ್ಯವಂತನೂ, ಯಾರಿಗೂ ಸೋಲದವನೂ, ಎಲ್ಲರನ್ನೂ ಗೆಲ್ಲುವವನೂ, ಅಪರಾಜಿತನೂ, ಕೌಸಲ್ಯಾನಂದವರ್ಧನನೂ ಆದ ಪುತ್ರನನ್ನು ನೋಡಿ ಎಲೈ ಕುರುನಂದನನೇ, ದಶರಥನು ಪರಮಸಂತೋಷವನ್ನು ಹೊಂದಿದನು.

ಚಿಂತಯಂಶ್ಚ ಮಹಾತೇಜಾ ಗುಣಾನ್ ರಾಮಸ್ಯ ವೀರ್ಯವಾನ್ ।
ಅಭ್ಯಭಾಷತ ಭದ್ರಂ ತೇ ಪ್ರೀಯಮಾಣಃ ಪುರೋಹಿತಮ್ ॥೧೫॥

ಕುರುನಂದನನೇ, ನಿನಗೆ ಮಂಗಳವಾಗಲಿ. ಮಹಾತೇಜಸ್ವಿಯೂ, ಪರಾಕ್ರಮಶಾಲಿಯೂ ಆದ ಅವನು ರಾಮನ ಗುಣಗಳನ್ನು ಚಿಂತಿಸುತ್ತಾ ಸಂತೋಷಪಡುತ್ತಾ ಪುರೋಹಿತನನ್ನು ಕರೆದು ಹೇಳಿದನು.

ಅದ್ಯ ಪುಷ್ಯೋ ನಿಶಿ ಬ್ರಹ್ಮನ್ ಪುಣ್ಯಂ ಯೋಗಮುಪೈಷ್ಯತಿ ।
ಸಂಭಾರಾಃ ಸಂಭ್ರಿಯಾಂತಾಂ ವೈ ರಾಮಶ್ಚೋಪನಿಮಂತ್ರ್ಯತಾಮ್ ॥

ಬ್ರಾಹ್ಮಣನೇ, ಈ ರಾತ್ರಿಯಲ್ಲಿ ಪವಿತ್ರವಾದ ಪುಷ್ಯಯೋಗವು ಉಂಟಾಗುವುದು. ಎಲ್ಲ ಸಲಕರಣೆಗಳನ್ನು ಸಿದ್ಧಪಡಿಸಿ ರಾಮನನ್ನು ಆಮಂತ್ರಿಸಿ.

ಶ್ವ ಏವ ಪುಷ್ಯೋ ಭವಿತಾ ಯತ್ರ ರಾಮಃ ಸುತೋ ಮಯಾ ।
ಯೌವರಾಜ್ಯೇಽಭಿಷೇಕ್ತವ್ಯಃ ಪೌರೈಶ್ಚ ಸಹ ಮಂತ್ರಿಭಿಃ ॥೧೭॥

ನಾಳೆಯೇ ಪುಷ್ಯನಕ್ಷತ್ರವು ಬರುವುದು. ಆದರಲ್ಲಿ ಪೌರರಿಂದಲೂ ಮತ್ತು ಮಂತ್ರಿಗಳಿಂದಲೂ ಸೇರಿ ರಾಮನು ಯೌವರಾಜ್ಯದಲ್ಲಿ ಅಭಿಷೇಕವನ್ನು ಹೊಂದಬೇಕು.

ಇತಿ ತದ್ ರಾಜವಚನಂ ಪ್ರತಿಶ್ರುತ್ಯಾಥ ಮಂಥರಾ ।
ಕೈಕೇಯೀಮಭಿಗಮ್ಯೇದಂ ಕಾಲೇ ವಚನಮಬ್ರವೀತ್ ॥೧೮॥

ರಾಜನ ಈ ವಚನವನ್ನು ಕೇಳಿದ ಮಂಥರೆಯು ಆಗ ಕೈಕೇಯಿಯ ಸಮೀಪಕ್ಕೆ ಬಂದು ಯೋಗ್ಯವಾದ ಕಾಲದಲ್ಲಿ ಈ ಮಾತನ್ನು ಆಡಿದಳು.

ಅದ್ಯ ಕೈಕೇಯಿ ದೌರ್ಭಾಗ್ಯಂ ರಾಜ್ಞಾತೇ ಖ್ಯಾಪಿತಂ ಮಹತ್ ।
ಆಶೀವಿಷಸ್ತಾ ತ್ವಂ ಸಂಕ್ರುದ್ಧಶ್ಚಂಡೋ ದಶತಿ ದುರ್ಭಗೇ ॥೧೯॥

ಕೈಕೇಯಿಯೇ ಇವತ್ತು ರಾಜನು ನಿನಗೆ ದೊಡ್ಡ ದೌರ್ಭಾಗ್ಯವನ್ನು ಪ್ರಕಟಿಸಿದ್ದಾನೆ. ಎಲೌ ದೌರ್ಭಾಗ್ಯಶಾಲಿನಿಯೇ ಕ್ರುದ್ಧವಾದ ಭಯಂಕರವಾದ ಸರ್ಪವು ನಿನ್ನನ್ನು ಕಚ್ಚುತ್ತಿದೆ.

ಸುಭಗಾ ಖಲು ಕೌಸಲ್ಯಾ ಯಸ್ಯಾಃ ಪುತ್ರೋಽಭಿಷೇಕ್ಷ್ಯತೇ ।
ಕುತೋ ಹಿ ತವ ಸೌಭಾಗ್ಯಂ ಯಸ್ಯಾಃ ಪುತ್ರೋ ನ ರಾಜ್ಯಭಾಕ್ ॥೨೦॥

ಕೌಸಲ್ಯಯು ಭಾಗ್ಯವತಿ. ಏಕೆಂದರೆ ಅವಳ ಮಗನು ಅಭಿಷಿಕ್ತನಾಗುವನು. ನಿನ್ನ ಮಗನಿಗೆ ರಾಜ್ಯವು ಬರದಿದ್ದ ಮೇಲೆ ನಿನಗೆ ಎಲ್ಲಿಂದ ಸೌಭಾಗ್ಯವು ಬರಬೇಕು?

ಸಾ ತದ್ವಚನಮಾಜ್ಞಾಯ ಸರ್ವಾಭರಣಭೂಷಿತಾ ।
ದೇವೀ ವಿಲಗ್ನಮಧ್ಯೇವ ಬಿಭ್ರತೀ ರೂಪಮುತ್ತಮಮ್ ॥೨೧॥

ವಿವಿಕ್ತೇ ಪತಿಮಾಸಾದ್ಯ ಹಸಂತೀವ ಶುಚಿಸ್ಮಿತಾ ।
ಪ್ರಣಯಂ ವ್ಯಂಜಯಂತೀವ ಮಧುರಂ ವಾಕ್ಯಮಬ್ರವೀತ್ ॥೨೨॥

ಕೈಕೇಯಿಯು ಆ ಮಾತನ್ನು ಕೇಳಿ ಸರ್ವಾಭರಣಭೂಷಿತಳಾಗಿ ಸುಂದರಿಯಂತಹ ಶ್ರೇಷ್ಠರೂಪವನ್ನು ಧರಿಸಿ, ಏಕಾಂತದಲ್ಲಿ ಪತಿಯನ್ನು ಸಮೀಪಿಸಿ ನಗುವವಳಂತೆ ಒಳ್ಳೆಯ ನಗುವನ್ನು ನಟಿಸಿ, ಪ್ರೀತಿಯನ್ನು ತೋರಿಸುವವಳಂತೆ ಮಧುರವಾಗಿ ಮಾತನಾಡಿದಳು.

ಸತ್ಯಪ್ರತಿಜ್ಞ ಯನ್ಮೇ ತ್ವಂ ಕಾಮಮೇಕಂ ನಿಸೃಷ್ಟವಾನ್ ।
ಉಪಾಕುರುಷ್ವ ತದ್ರಾಜಂಸ್ತಸ್ಮಾನ್ಮುಚ್ಯಸ್ವ ಸಂಕಟಾತ್ ।
ತದದ್ಯ ಕುರು ಸತ್ಯಂ ಮೇ ವರಂ ವರದ ಭೂಪತೇ ॥೨೩॥

ಸತ್ಯಪ್ರತಿಜ್ಞನೇ, ನೀನು ನನಗೆ ಒಂದು ವರವನ್ನು ಕೊಟ್ಟಿದ್ದಿಯಷ್ಟೆ? ಅದನ್ನು ಈಗ ನೀಡಿ ಸಂಕಟದಿಂದ ಪಾರಾಗುವವನಾಗು. ಎಲೈ ಭೂಪತಿಯೇ, ವರದನೇ, ಆ ದಿನ ಆಡಿದ ಮಾತನ್ನು ಸತ್ಯವನ್ನಾಗಿ ಮಾಡು.

ದಶರಥಃ

ವರಂ ದದಾನಿ ತೇ ಹಂತ ತದ್ಗೃಹಾಣ ಯದಿಚ್ಛಸಿ ।
ಅಬಧ್ಯೋ ಬಧ್ಯತಾಂ ಕೋಽದ್ಯ ಬಧ್ಯಃ ಕೋಽದ್ಯ ವಿಮುಚ್ಯತಾಮ್ ॥

ಧನಂ ದದಾನಿ ಕಸ್ಯಾದ್ಯ ಹ್ರಿಯತಾಂ ಕಸ್ಯ ವಾ ಪುನಃ ।
ಬ್ರಾಹ್ಮಣಸ್ವಾದಿಹಾನ್ಯತ್ರ ಯತ್ಕಿಂಚಿದ್ ವಿತ್ತಮಸ್ತಿ ಮೇ ॥೨೫॥

ದಶರಥ– ಸಂತೋಷ. ನಿನಗೆ ವರವನ್ನು ಕೊಡುವೆನು. ಬೇಕಾದ ವರವನ್ನು ಕೇಳು. ಅವಧ್ಯನಾದ ಯಾವನನ್ನು ವಧೆ ಮಾಡಬೇಕು? ವಧ್ಯನಾದ ಯಾವನನ್ನು ಬಿಡುಗಡೆ ಮಾಡಬೇಕು? ಈ ದಿನ ಯಾರಿಗೆ ಧನವನ್ನು ಕೊಡಬೇಕು? ಅಥವಾ ಯಾವ ಧನವನ್ನು ಅಪಹರಿಸಬೇಕು? ಬ್ರಾಹ್ಮಣನ ಧನವನ್ನು ಬಿಟ್ಟು ಇಲ್ಲಿ ಮತ್ತು ಬೇರೆ ಕಡೆಯಲ್ಲಿ ನನಗೆ ಎಷ್ಟು ಧನವಿದೆಯೋ ಅವೆಲ್ಲವೂ ನಿನ್ನದೇ? (ಎಂದು ಹೇಳಿದನು).

ಮಾರ್ಕಂಡೇಯಃ

ಸಾ ತದ್ವಚನಮಾಜ್ಞಾಯ ಪರಿಗೃಹ್ಯ ನರಾಧಿಪಮ್ ।
ಆತ್ಮನೋ ಬಲಮಾಜ್ಞಾಯ ತತ ಏನಮುವಾಚ ಹ ॥೨೬॥

ಮಾರ್ಕಂಡೇಯ– ಅವಳು ಆ ಮಾತುಗಳನ್ನು ಕೇಳಿ ತನ್ನ ಬಲವನ್ನು ತಿಳಿದು ರಾಜನನ್ನು ಹಿಡಿದು ಅವನನ್ನು ಕುರಿತು ಹೀಗೆ ಮಾತನಾಡಿದಳು.

ಕೈಕೇಯೀ

ಅಭಿಷೇಚನಿಕಂ ಯತ್ ತೇ ರಾಮಾರ್ಥಮುಪಕಲ್ಪಿತಮ್ ।
ಭರತಸ್ತದವಾಪ್ನೋತು ವನಂ ಗಚ್ಛತು ರಾಘವಃ ॥೨೭॥

ನವಪಂಚ ಚ ವರ್ಷಾಣಿ ದಂಡಕಾರಣ್ಯಮಾಶ್ರಿತಃ ।
ಚೀರಾಜಿನಜಟಾಧಾರೀ ರಾಮೋ ಭವತು ತಾಪಸಃ ॥೨೮॥

ಕೈಕೇಯೀ– ನೀನು ರಾಮನ ಅಭಿಷೇಕಕ್ಕಾಗಿ ಏನು ಅಣಿಗೊಳಿಸಿದ್ದೀಯೋ ಅದರಿಂದ ಭರತನು ಅಭಿಷಿಕ್ತನಾಗಲಿ. ರಾಮನು ಕಾಡಿಗೆ ಹೋಗಲಿ. ಹದಿನಾಲ್ಕು ವರ್ಷಗಳ ಕಾಲ ದಂಡಕಾರಣ್ಯವಾಸಿಯಾಗಿ ನಾರುಮಡಿ, ಕೃಷ್ಣಾಜಿನ ಮತ್ತು ಜಟೆಯನ್ನು ಧರಿಸಿದವನಾಗಿ ರಾಮನು ತಾಪಸನಾಗಲಿ.

ಮಾರ್ಕಂಡೇಯಃ

ಸ ತದ್ರಾಜಾ ವಚಃ ಶ್ರುತ್ವಾ ವಿಪ್ರಿಯಂ ದಾರುಣೋದಯಮ್ ।
ದುಃಖಾರ್ತೋ ಭರತಶ್ರೇಷ್ಠ ನ ಕಿಂಚಿದ್ ವ್ಯಾಜಹಾರ ಹ ॥೨೯॥

ಮಾರ್ಕಂಡೇಯರು– ಎಲೈ ಭರತಶ್ರೇಷ್ಠನೇ, ಆ ರಾಜನು ಅಪ್ರಿಯವಾದ ದಾರುಣಫಲವನ್ನು ಹೊಂದಿದ ಆ ಮಾತನ್ನು ಕೇಳಿ ದುಃಖಾರ್ತನಾಗಿ ಏನೂ ಮಾತನಾಡಲಿಲ್ಲ.

ತತಸ್ತಥೋಕ್ತಂ ಪಿತರಂ ರಾಮೋ ವಿಜ್ಞಾಯ ವೀರ್ಯವಾನ್ ।
ವನಂ ಪ್ರತಸ್ಥೇ ಧರ್ಮಾತ್ಮಾ ರಾಜಾ ಸತ್ಯೋ ಭವತ್ವಿತಿ ॥೩೦॥

ಆಗ ತಂದೆಯು ಹಾಗೆ ಮಾತನಾಡಿರುವುದನ್ನು ತಿಳಿದ ಧೀರನಾದ ಮತ್ತು ಧರ್ಮಾತ್ಮನಾದ ರಾಮನು ರಾಜನ ಮಾತು ಸತ್ಯವಾಗಲಿ ಎಂದು ಕಾಡಿಗೆ ಹೊರಟನು.

ತಮನ್ವಗಚ್ಛಲ್ಲಕ್ಷ್ಮೀವಾನ್ ಧನುಷ್ಮಾಂಲ್ಲಕ್ಷ್ಮಣಸ್ತದಾ ।
ಸೀತಾ ಚ ಭಾರ್ಯಾ ಭದ್ರಂ ತೇ ವೈದೇಹೀ ಜನಕಾತ್ಮಜಾ ॥೩೧॥

ಕಾಂತಿಯುಕ್ತನಾದ ಧನುರ್ಧಾರಿಯಾದ ಲಕ್ಷ್ಮಣನೂ ಅವನನ್ನು ಹಿಂಬಾಲಿಸಿದನು. ನಿನಗೆ ಮಂಗಳವಾಗಲಿ. ವಿದೇಹರಾಜಕುಮಾರಿಯಾದ ಅವನ ಪತ್ನಿಯಾದ ಸೀತೆಯೂ ಹಿಂಬಾಲಿಸಿದಳು.

ತತೋ ವನಂ ಗತೇ ರಾಮೇ ರಾಜಾ ದಶರಥಸ್ತದಾ ।
ಸಮಯುಜ್ಯತ ಧರ್ಮಾತ್ಮಾ ಕಾಲಪರ್ಯಾಯಧರ್ಮಣಾ ॥೩೨॥

ರಾಮನು ಕಾಡಿಗೆ ಹೋಗುತ್ತಿರಲು ಧರ್ಮಾತ್ಮನಾದ ದಶರಥರಾಜನು ಕಾಲಧರ್ಮವನ್ನು ಹೊಂದಿದನು.

ರಾಮಂ ತು ಗತಮಾಜ್ಞಾಯ ರಾಜಾನಂ ಚ ತಥಾಗತಮ್ ।
ಆನಾಯ್ಯ ಭರತಂ ದೇವೀ ಕೈಕೇಯೀ ವಾಕ್ಯಮಬ್ರವೀತ್ ॥೩೩॥

ರಾಮನು ಕಾಡಿಗೆ ಹೋದುದನ್ನು ಮತ್ತು ದಶರಥನು ವಿಪನ್ನನಾದುದನ್ನು ತಿಳಿದ ಕೈಕೇಯಿಯು ಭರತನನ್ನು ಕರೆಸಿ ಅವನಿಗೆ ಈ ಮಾತನ್ನು ಹೇಳಿದಳು.

ಗತೋ ದಶರಥಃ ಸ್ವರ್ಗಂ ವನಸ್ಥೌ ರಾಮಲಕ್ಷ್ಮಣೌ ।
ಗೃಹಾಣ ರಾಜ್ಯಂ ವಿಪುಲಂ ಕ್ಷೇಮಂ ನಿಹತಕಂಟಕಮ್ ॥೩೪॥

ದಶರಥನು ಸ್ವರ್ಗಸ್ಥನಾದನು. ರಾಮಲಕ್ಷ್ಮಣರು ಕಾಡಿನಲ್ಲಿದ್ದಾರೆ. ಕ್ಷೇಮವಾದ ಶತ್ರುರಹಿವಾದ ಈ ವಿಪುಲವಾದ ರಾಜ್ಯವನ್ನು ನೀನು ಹೊಂದುವವನಾಗು.

ಮಾರ್ಕಂಡೇಯಃ

ತಾಮುವಾಚ ಸ ಧರ್ಮಾತ್ಮಾ ನೃಶಂಸಂ ಬತ ತೇ ಕೃತಮ್ ।
ಪತಿಂ ಹತ್ವಾ ಕುಲಂ ಚೇದಮುತ್ಸಾದ್ಯ ಧನಲುಬ್ಧಯಾ ॥೩೫॥

ಅಯಶಃ ಪಾತಯಿತ್ವಾ ಮೇ ಮೂರ್ಧ್ನಿ ತ್ವಂ ಕುಲಪಾಂಸನೇ ।
ಸಕಾಮಾ ಭವ ಮೇ ಮಾತರಿತ್ಯುಕ್ತ್ವಾ ಪ್ರರುರೋದ ಹ ॥೩೬॥

ಮಾರ್ಕಂಡೇಯರು– ಧರ್ಮಾತ್ಮನಾದ ಭರತನು ಅವಳನ್ನು ಕುರಿತು ಧನಲೋಭಯಾದ ನೀನು ಪತಿಯನ್ನು ಕೊಂದು ಈ ಕುಲವನ್ನು ವಿನಾಶಮಾಡಿ ಕ್ರೂರಕರ್ಮವನ್ನು ಮಾಡಿದ್ದೀಯೆ. ಎಲೌ ಕುಲನಾಶಿನಿಯೇ, ನನ್ನ ತಲೆಯ ಮೇಲೆ ಅಪಕೀರ್ತಿಯನ್ನು ಹಾಕಿ ಈಗ ಕೃತಕೃತ್ಯಳಾಗು ಎಂದು ಹೇಳಿ ರೋಧಿಸಿದನು.

ಸ ಚಾರಿತ್ರಂ ವಿಶೋಧ್ಯಾಥ ಸರ್ವಪ್ರಕೃತಿಸನ್ನಿಧೌ ।
ಅನ್ವಯಾದ್ ಭ್ರಾತರಂ ರಾಮಂ ವಿನಿವರ್ತನಲಾಲಸಃ ॥೩೭॥

ಅವನು ತನ್ನ ನಡತೆಯನ್ನೇ ಶೋಧಿಸಿ ಎಲ್ಲಾ ಪ್ರಜೆಗಳನ್ನೂ ಕರೆದುಕೊಂಡು ರಾಮನನ್ನು ಕಾಡಿನಿಂದ ಹಿಂದಿರುಗಿಸುವ ಆಸೆಯಿಂದ ಅಣ್ಣನಾದ ರಾಮನನ್ನು ಹುಡುಕಿಕೊಂಡು ಹೊರಟನು.

ಸಂಸೃತ್ಯ ಪಿತರಂ ವೃತ್ತಂ ಭರತೋ ಧರ್ಮವತ್ಸಲಃ ।
ಕೌಸಲ್ಯಾಂ ಚ ಸುಮಿತ್ರಾಂ ಚ ಕೈಕೇಯೀಂ ಚ ಸುದುಃಖಿತಃ ।
ಅಗ್ರೇ ಪ್ರಸ್ಥಾಪ್ಯ ಯಾನೈಃ ಸ ಶತ್ರುಘ್ನಸಹಿತೋ ಯಯೌ ॥೩೮॥

ತಂದೆಯ ಸಂಸ್ಕಾರವನ್ನು ಮಾಡಿ ಧರ್ಮವತ್ಸಲನಾದ ಭರತನು ಸುದುಃಖಿತನಾಗಿ ಕೌಸಲ್ಯೆ , ಸುಮಿತ್ರೆ , ಕೈಕೇಯೀಯರನ್ನು ಯಾನಗಳಿಂದ ಮುಂದೆ ಕಳುಹಿಸಿ ಶತ್ರುಘ್ನನ ಜೊತೆಯಲ್ಲಿ ಹೊರಟನು.

ವಸಿಷ್ಠವಾಮದೇವಾಭ್ಯಾಂ ವಿಪ್ರೈಶ್ಚಾನ್ಯೈಃ ಸಹಸ್ರಶಃ ।
ಪೌರಜಾನಪದೈಃ ಸಾರ್ಧಂ ರಾಮಾನಯನಕಾಂಕ್ಷಯಾ ॥೩೯॥

ವಸಿಷ್ಠವಾಮದೇವಾದಿ ಸಹಸ್ರಾರು ವಿಪ್ರರ ಜೊತೆಯಲ್ಲಿ ಮತ್ತು ಪೌರಜಾನಪದರ ಜೊತೆಯಲ್ಲಿ ರಾಮನನ್ನು ಹಿಂದಕ್ಕೆ ಕರೆತರುವ ಆಸೆಯಿಂದ ಅವನು ಹೊರಟನು.

ದದರ್ಶ ಚಿತ್ರಕೂಟಸ್ಥಂ ಸ ರಾಮಂ ಸಹಲಕ್ಷ್ಮಣಮ್ ।
ತಾಪಸಾನಾಮಲಂಕಾರಂ ಧಾರಯಂತಂ ಧನುರ್ಧರಮ್ ॥೪೦॥

ಅವನು ತಾಪಸವೇಷವನ್ನು ಧರಿಸಿ ಧನುರ್ಧಾರಿಯಾದ ರಾಮನನ್ನು ಲಕ್ಷ್ಮಣನ ಜೊತೆಯಲ್ಲಿ ಚಿತ್ರಕೂಟಪರ್ವತದಲ್ಲಿ ನೋಡಿದನು.

ಶಶಂಸ ಮರಣಂ ರಾಜ್ಞಃ ಸೋಽನಾಥಾಂಶ್ಚಾಪಿ ಕೋಸಲಾನ್ ।
ಸ ತಸ್ಯ ವಚನಂ ಶ್ರುತ್ವಾ ರಾಮಃ ಪರಮದುಃಖಿತಃ ॥೪೧॥

ಚಕಾರ ದೇವಕಲ್ಪಸ್ಯ ಪಿತುಃ ಸ್ನಾತ್ವೋದಕಕ್ರಿಯಾಮ್ ।

ಅವನು ತಂದೆಯ ಮರಣವನ್ನೂ ಮತ್ತು ಕೋಸಲರು ಅನಾಥರಾಗಿದ್ದಾರೆ ಎಂಬ ವಿಷಯವನ್ನೂ ರಾಮನಿಗೆ ತಿಳಿಸಿದನು. ಆ ಮಾತನ್ನು ಕೇಳಿದ ರಾಮನು ಪರಮ ದುಃಖಿತನಾಗಿ ಸ್ನಾನವನ್ನು ಮಾಡಿ ದೇವಕಲ್ಪನಾದ ತಂದೆಗೆ ಉದಕಕ್ರಿಯೆಯನ್ನು ಮಾಡಿದನು.

ಅಬ್ರವೀತ್ ಸ ತದಾ ರಾಮೋ ಭ್ರಾತರಂ ಭ್ರಾತೃವತ್ಸಲಃ ॥೪೨॥

ಪಾದುಕೇ ಮೇ ಭವಿಷ್ಯೇತೇ ರಾಜ್ಯಗೋಪ್ತ್ರೈ ಪರಂತಪ ।
ಏವಮಸ್ತ್ವಿತಿ ತಂ ಪ್ರಾಹ ಭರತಃ ಪ್ರಣತಸ್ತದಾ ॥೪೩॥

ಆಗ ಭ್ರಾತೃವತ್ಸಲನಾದ ರಾಮನು ತಮ್ಮನನ್ನು ಕುರಿತು ಪರಂತಪನೇ, ಈ ನನ್ನ ಪಾದುಕೆಗಳು ರಾಜ್ಯವನ್ನು ರಕ್ಷಿಸುವವು ಎಂದು ಹೇಳಿದನು. ಹಾಗೆಯೇ ಆಗಲಿ ಎಂದು ಹೇಳಿ ಭರತನು ಅವನಿಗೆ ನಮಸ್ಕಾರವನ್ನು ಮಾಡಿದನು.

ಸ ರಾಮೋ ಭರತಂ ದೃಷ್ಟ್ವಾ ಶ್ರುತ್ವಾ ಸ್ವರ್ಗಗತಿಂ ಪಿತುಃ ।
ಕೃತ್ವಾ ತಸ್ಯೋದಕಂ ಸಮ್ಯಗುವಾಚ ಭ್ರಾತರಂ ಪ್ರಿಯಮ್ ।
ಗಚ್ಛ ತಾತ ಪ್ರಜಾ ರಕ್ಷ್ಯಾಃ ಸತ್ಯಂ ರಕ್ಷಾಮ್ಯಹಂ ಪಿತುಃ ॥೪೪॥

ಆ ರಾಮನು ಭರತನನ್ನು ನೋಡಿ ತಂದೆಯ ಸ್ವರ್ಗಗತಿಯನ್ನು ಕೇಳಿ ಅವನಿಗೆ ಉದಕಕ್ರಿಯೆಯನ್ನು ಮಾಡಿ ಪ್ರಿಯನಾದ ಆ ತಮ್ಮನನ್ನು ಕುರಿತು ಪ್ರೀತಿಪಾತ್ರನೇ, ಹೋಗು ಪ್ರಜೆಗಳನ್ನು ರಕ್ಷಿಸಬೇಕು. ನಾನು ತಂದೆಯ ಸತ್ಯವಚನವನ್ನು ರಕ್ಷಿಸಬೇಕು ಎಂದು ಹೇಳಿದನು.

ಮಾರ್ಕಂಡೇಯಃ

ವಿಸರ್ಜಿತಃ ಸ ರಾಮೇಣ ಪಿತುರ್ವಚನಕಾರಿಣಾ ।
ನಂದಿಗ್ರಾಮೇಽಕರೋದ್ ರಾಜ್ಯಂ ಪುರಸ್ಕೃತ್ಯಾಸ್ಯ ಪಾದುಕೇ ॥೪೫॥

ಮಾರ್ಕಂಡೇಯರು– ತಂದೆಯ ಮಾತನ್ನು ನಡೆಸುವ ರಾಮನಿಂದ ಬೀಳ್ಕೊಡಲ್ಪಟ್ಟ ಭರತನು ರಾಮನ ಪಾದುಕೆಗಳನ್ನು ಮುಂದಿಟ್ಟುಕೊಂಡು ನಂದಿಗ್ರಾಮದಲ್ಲಿ ನೆಲೆಸಿ ರಾಜ್ಯಭಾರವನ್ನು ಮಾಡಿದನು.

ರಾಮಸ್ತು ಪುನರಾಶಂಕ್ಯ ಪೌರಜಾನಪದಾಗಮಮ್ ।
ಪ್ರವಿವೇಶ ಮಹಾರಣ್ಯಂ ಶರಭಂಗಾಶ್ರಮಂ ಪ್ರತಿ ॥೪೬॥

ರಾಮನು ಪುನಃ ಪೌರಜಾನಪದರು ಬರಬಹುದೆಂದು ಶಂಕಿಸಿ ಮಹಾರಣ್ಯದಲ್ಲಿ ಶರಭಂಗರ ಆಶ್ರಮವನ್ನು ಪ್ರವೇಶಿಸಿದನು.

ಸತ್ಕೃತ್ಯ ಶರಭಂಗಂ ಸ ದಂಡಕಾರಣ್ಯಮಾಶ್ರಿತಃ ।
ನದೀಂ ಗೋದಾವರೀಂ ರಮ್ಯಾಮಾಶ್ರಿತ್ಯ ನ್ಯವಸತ್ ತದಾ ॥೪೭॥

ಶರಭಂಗರಿಗೆ ಸತ್ಕಾರವನ್ನು ಮಾಡಿ ದಂಡಕಾರಣ್ಯವನ್ನು ತಲುಪಿ ರಮ್ಯವಾದ ಗೋದಾವರೀ ನದಿಯ ತೀರದಲ್ಲಿ ಆಗ ವಾಸ ಮಾಡಿದನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂಸಂಹಿತಾಯಾಂ ವೈಯಾಸಿಕ್ಯಾಂ
ವನಪರ್ವಣಿ ಪಂಚಪಷ್ಟ್ಯಧಿಕದ್ವಿಶತತಮೋಽಧ್ಯಾಯಃ ॥
॥ ಇತಿ ರಾಮೋಪಖ್ಯಾನಪರ್ವಣಿ ರಾಮಸ್ಯ ವನಪ್ರಾಪ್ತಿರ್ನಾಮ ಪಂಚಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವನಪರ್ವದಲ್ಲಿ ಇನ್ನೂರ ಅರವತ್ತೈದನೆಯ
ಅಧ್ಯಾಯ ಮುಗಿಯಿತು.

★ ★ ★ ★

ಇನ್ನೂರ ಅರವತ್ತಾರನೆಯ ಅಧ್ಯಾಯ

ಲಕ್ಷ್ಮಣನಿಂದ ಶೂರ್ಪಣಖೆಯ ವಿರೂಪಕರಣ. ಖರದೂಷಣಾದಿ ಹನನ. ಕ್ರುದ್ಧನಾದ ರಾವಣನಿಂದ ಮಾರೀಚ ಸಮೀಪ ಪ್ರಾಪ್ತಿ.

ಮಾರ್ಕಂಡೇಯಃ

ವಸತಸ್ತಸ್ಯ ರಾಮಸ್ಯ ತತಃ ಶೂರ್ಪಣಖಾಕೃತಮ್ ।
ಖರೇಣಾಸೀನ್ಮಹದ್ ವೈರಂ ಜನಸ್ಥಾನನಿವಾಸಿನಾ ॥೧॥

ಮಾರ್ಕಂಡೇಯ– ಅಲ್ಲಿ ವಾಸಮಾಡುತ್ತಿದ್ದ ರಾಮನಿಗೆ ಶೂರ್ಪಣಖೆಯ ನಿಮಿತ್ತದಿಂದಾಗಿ ಜನಸ್ಥಾನದಲ್ಲಿ ವಾಸಮಾಡುವ ಖರನ ಜೊತೆಯಲ್ಲಿ ದೊಡ್ಡ ವೈರವು ಉಂಟಾಯಿತು.

ರಕ್ಷಾರ್ಥಂ ತಾಪಸಾನಾಂ ತು ರಾಘವೋ ಧರ್ಮವತ್ಸಲಃ ।
ಚತುರ್ದಶಸಹಸ್ರಾಣಿ ಜಘಾನ ಭುವಿ ರಕ್ಷಸಾಮ್ ॥೨॥

ತಾಪಸರನ್ನು ರಕ್ಷಿಸುವುದಕ್ಕೋಸ್ಕರ ಧರ್ಮವತ್ಸಲನಾದ ರಾಮನು ಭೂಮಿಯಲ್ಲಿ ಅಲ್ಲಿ ಹದಿನಾಲ್ಕು ಸಹಸ್ರ ರಾಕ್ಷಸರನ್ನು ಕೊಂದನು.

ದೂಷಣಂ ಚ ಖರಂ ಚೈವ ನಿಹತ್ಯ ಸುಮಹಾಬಲೌ ।
ಚಕ್ರೇ ಕ್ಷೇಮಂ ಪುನರ್ಧೀಮಾನ್ ಧರ್ಮಾರಣ್ಯಂ ಚ ರಾಘವಃ ॥೩॥

ಧೀಮಂತನಾದ ರಾಘವನು ಮಹಾಬಲಿಷ್ಠರಾದ ಖರದೂಷಣರನ್ನು ಸಂಹರಿಸಿ ಆ ಧರ್ಮಾರಣ್ಯವನ್ನು ಕ್ಷೇಮದಿಂದ ಕೂಡಿದುದನ್ನಾಗಿ ಮಾಡಿದನು.

ಹತೇಷು ತೇಷು ರಕ್ಷಃಸು ತತಃ ಶೂರ್ಪಣಖಾ ಪುನಃ ।
ಯಯೌ ನಿಕೃತ್ತನಾಸೋಷ್ಠೀ ಲಂಕಾಂ ಭ್ರಾತುರ್ನಿವೇಶನಮ್ ॥೪॥

ಆ ರಾಕ್ಷಸರೆಲ್ಲರೂ ಹತರಾದ ಮೇಲೆ ಶೂರ್ಪಣಖೆಯು ಕತ್ತರಿಸಿದ ನಾಸೋಷ್ಠ ಉಳ್ಳವಳಾಗಿ ಲಂಕೆಯಲ್ಲಿ ತನ್ನ ಅಣ್ಣನ ಮನೆಗೆ ಹೋದಳು.

ತತೋ ರಾವಣಮಭ್ಯೇತ್ಯ ರಾಕ್ಷಸೀ ದುಃಖಮೂರ್ಚ್ಛಿತಾ ।
ಪಪಾತ ಪಾದಯೋರ್ಭ್ರಾತುಃ ಸಂಶುಷ್ಕರುಧಿರಾನನಾ ॥೫॥

ದುಃಖಮೂರ್ಛಿತಳಾದ ಆ ರಾಕ್ಷಸಿಯು ಆಗ ರಾವಣನನ್ನು ಸಮೀಪಿಸಿ ಒಣಗಿದ ರಕ್ತವುಳ್ಳ ಮುಖದಿಂದ ಅಣ್ಣನಾದ ಅವನ ಪಾದಗಳ ಮೇಲೆ ಬಿದ್ದಳು.

ತಾಂ ತಥಾ ವಿಕೃತಾಂ ದೃಷ್ಟ್ವಾ ರಾವಣಃ ಕ್ರೋಧಮೂರ್ಚ್ಛಿತಃ ।
ಉತ್ಪಪಾತಾಸನಾತ್ ಕ್ರುದ್ಧೋ ದಂತೈರ್ದಂತಾನುಪಸ್ಪೃಶನ್ ।
ಸ್ವಾನಮಾತ್ಯಾನ್ ವಿಸೃಜ್ಯಾಥ ವಿವಿಕ್ತೇ ತಾಮುವಾಚ ಸಃ ॥೬॥

ಅವಳು ಹಾಗೆ ವಿರೂಪಳಾಗಿರುವುದನ್ನು ನೋಡಿದ ರಾವಣನು ಕ್ರೋಧ ಮೂರ್ಛಿತನಾಗಿ ಹಲ್ಲುಗಳಿಂದ ಹಲ್ಲುಗಳನ್ನು ಕಡಿಯುತ್ತಾ ಕ್ರುದ್ಧನಾಗಿ ಆಸನದಿಂದ ಮೇಲೆ ಹಾರಿ ತನ್ನ ಅಮಾತ್ಯರನ್ನು ದೂರಕಳುಹಿಸಿ ಏಕಾಂತದಲ್ಲಿ ಅವಳನ್ನು ಕುರಿತು ಮಾತನಾಡಿದನು.

ಕೇನಾಸ್ಯೇವಂ ಕೃತಾ ಭದ್ರೇ ಮಾಮಚಿಂತ್ಯಾವಮನ್ಯ ಚ ।
ಕಃ ಶೂಲಂ ತೀಕ್ಷ್ಣಮಾಸಾದ್ಯ ಸರ್ವಗಾತ್ರೈರ್ನಿಷೇವತೇ ॥೭॥

ಎಲೌ ಭದ್ರೆಯೇ, ನನ್ನನ್ನು ಲೆಕ್ಕಿಸದೇ ನನಗೆ ಅವಮಾನವನ್ನು ಮಾಡಿದ ಯಾವನು ನಿನಗೆ ಈ ರೀತಿಯಲ್ಲಿ ಮಾಡಿದ್ದಾನೆ? ಯಾವನು ತನ್ನ ಎಲ್ಲಾ ಶರೀರದಲ್ಲಿ ಈ ದಿನ ತೀಕ್ಷ್ಣವಾದ ಶೂಲವನ್ನು ಹೊಂದುವವನಾಗುತ್ತಾನೆ?

ಕಃ ಶಿರಸ್ಯಗ್ನಿಮಾಧಾಯ ವಿಶ್ವಸ್ತಃ ಸ್ವಪತೇ ಸುಖಿಮ್ ।
ಆಶೀವಿಷಂ ಘೋರತರಂ ಪಾದೇನ ಸ್ಪೃಶತೀಹ ಕಃ ॥೮॥

ಸಿಂಹಂ ಕೇಸರಿಣಂ ಕಶ್ಚ ದಂಷ್ಟ್ರಾಯಾಂ ಸ್ಪೃಶ್ಯ ತಿಷ್ಠತಿ ॥೯॥

ಯಾವನು ಶಿರಸ್ಸಿನಲ್ಲಿ ಅಗ್ನಿಯನ್ನು ಇಟ್ಟುಕೊಂಡು ವಿಶ್ವಾಸದಿಂದ ಸುಖವಾಗಿ ಮಲಗಿ ನಿದ್ರಿಸುತ್ತಾನೆ? ಘೋರವಾದ ಸರ್ಪವನ್ನು ಯಾವನು ಪಾದದಿಂದ ಮುಟ್ಟುತ್ತಿದ್ದಾನೆ? ಯಾವನು ಕೇಸರವುಳ್ಳ ಸಿಂಹವನ್ನು ಅದರ ಕೋರದಾಡೆಯಲ್ಲಿ ಹಿಡಿದು ನಿಂತಿದ್ದಾನೆ?

ಮಾರ್ಕಂಡೇಯಃ

ಇತ್ಯೇವಂ ಬ್ರುವತಸ್ತಸ್ಯ ಸ್ರೋತೋಭ್ಯಸ್ತೇಜಸೋऽರ್ಚಿಷಃ ।
ನಿಶ್ಚೇರುರ್ದಹ್ಯತೋ ರಾತ್ರೌ ವೃಕ್ಷಸ್ಯೈವ ಸ್ವರಂಧ್ರತಃ ॥೧೦॥

ಮಾರ್ಕಂಡೇಯ– ಹೀಗೆ ಮಾತನಾಡುತ್ತಿದ್ದ ಅವನ ನವದ್ವಾರಗಳಿಂದಲೂ ರಾತ್ರಿಯ ಕಾಲದಲ್ಲಿ ಒಣಗಿ ಹತ್ತಿ ಉರಿಯುತ್ತಿರುವ ಮರದ ರಂಧ್ರಗಳಿಂದ ಹೊರಬಂದಂತೆ ಜ್ವಾಲೆಗಳು ಹೊರಬಂದವು.

ತಸ್ಯ ತತ್‌ಸರ್ವಮಾಚಖ್ಯೌ ಭಗಿನೀ ರಾಮವಿಕ್ರಮಮ್ ।
ಖರದೂಷಣಸಂಯುಕ್ತಂ ರಾಕ್ಷಸಾನಾಂ ಪರಾಭವಮ್ ॥೧೧॥

ಅವನ ತಂಗಿಯು ರಾಮವಿಕ್ರಮ, ಖರದೂಷಣರನ್ನೂ ಸೇರಿಸಿ ಎಲ್ಲ ರಾಕ್ಷಸರ ಪರಾಭವ ಮೊದಲಾದ ಎಲ್ಲ ವಿಷಯಗಳನ್ನೂ ಅವನಿಗೆ ಹೇಳಿದಳು.

ಸ ನಿಶ್ಚಿತ್ಯ ತತಃ ಕೃತ್ಯಂ ಸ್ವಸಾರಮುಪಾಸಾಂತ್ವ್ಯ ಚ ।
ಊರ್ಧ್ವಮಾಚಕ್ರಮೇ ರಾಜಾ ವಿಧಾಯ ನಗರೇ ವಿಧಿಮ್ ॥೧೨॥

ಆ ರಾಜನು ಮಾಡಬೇಕಾದ ಕಾರ್ಯವನ್ನು ನಿಶ್ಚಯಿಸಿ ತಂಗಿಯನ್ನು ಸಮಾಧಾನ ಪಡಿಸಿ ನಗರದಲ್ಲಿ ಎಲ್ಲ ವ್ಯವಸ್ಥೆಯನ್ನೂ ಮಾಡಿ ಊರ್ಧ್ವಮುಖವಾಗಿ (ಉತ್ತರಾಭಿಮುಖವಾಗಿ) ಹೊರಟನು.

ತ್ರಿಕೂಟಂ ಸಮತಿಕ್ರಮ್ಯ ಕಾಲಪರ್ವತಮೇವ ಚ ।
ದದರ್ಶ ಮಕರಾವಾಸಂ ಗಂಭೀರೋದಂ ಮಹೋದಧಿಮ್ ॥೧೩॥

ತ್ರಿಕೂಟಪರ್ವತವನ್ನೂ, ಕಾಲಪರ್ವತವನ್ನೂ ದಾಟಿ ಗಂಭೀರವಾದ ಉದಕವಿರುವ ಮಕರಾದಿಗಳ ಆವಾಸಸ್ಥಾನವಾದ ಮಹಾಸಮುದ್ರವನ್ನು ನೋಡಿದನು.

ತಮತೀತ್ಯಾಥ ಗೋಕರ್ಣಮಭ್ಯಗಚ್ಛದ್ ದಶಾನನಃ ।
ದಯಿತಂ ಸ್ಥಾನಮವ್ಯಗ್ರಂ ಶೂಲಪಾಣೇರ್ಮಹಾತ್ಮನಃ ॥೧೪॥

ದಶಾನನನು ಅದನ್ನು ದಾಟಿ ಮಹಾತ್ಮನಾದ ಶೂಲಪಾಣಿಗೆ ಪ್ರಿಯವಾದ ಸ್ಥಾನವಾದ ಗೋಕರ್ಣ ಕ್ಷೇತ್ರವನ್ನು ಅವ್ಯಗ್ರವಾಗಿ ತಲುಪಿದನು.

ತತ್ರಾಭ್ಯಗಚ್ಛನ್ಮಾರೀಚಂ ಪೂರ್ವಾಮಾತ್ಯಂ ದಶಾನನಃ ।
ಪುರಾ ರಾಮಭಯಾದೇವ ತಾಪಸ್ಯಂ ಸಮುಪಾಶ್ರಿತಮ್ ॥೧೫॥

ಅಲ್ಲಿ ದಶಾನನನು ತನ್ನ ಹಿಂದಿನ ಅಮಾತ್ಯನಾಗಿದ್ದ ಹಿಂದೆ ರಾಮನ ಬಾಣದ ಸ್ಪರ್ಶವನ್ನು ಹೊಂದಿ ರಾಮಭಯದಿಂದಲೇ ತಾಪಸ ವೇಷವನ್ನು ಧರಿಸಿದ್ದ ಮಾರೀಚನ ಸಮೀಪಕ್ಕೆ ಬಂದನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂಸಂಹಿತಾಯಾಂ ವೈಯಾಸಿಕ್ಯಾಂ
ವನಪರ್ವಣಿ ಷಟ್‌ಷಷ್ಟ್ಯಧಿಕದ್ವಿಶತತಮೋಽಧ್ಯಾಯಃ ॥
॥ ಇತಿ ರಾಮೋಪಾಖ್ಯಾನಪರ್ವಣಿ ರಾವಣಸ್ಯ ಮಾರೀಚ ಪ್ರಾತಿರ್ಯಾಮ
ಪಂಚಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವನಪರ್ವದಲ್ಲಿ ಇನ್ನೂರ ಅರವತ್ತಾರನೆಯ ಅಧ್ಯಾಯ ಮುಗಿಯಿತು.

★ ★ ★ ★

ಇನ್ನೂರ ಅರವತ್ತೇಳನೆಯ ಅಧ್ಯಾಯ

ಮಾಯಾಮೃಗ ರೂಪವನ್ನು ಧರಿಸಿ ಮಾರೀಚನಿಂದ ಸೀತೆಯ ಪ್ರಲೋಭನ. ರಾಮನಿಂದ ಮಾರೀಚ ವಧೆ. ಈ ಮಧ್ಯದಲ್ಲಿ ರಾವಣನಿಂದ ಸೀತಾಪಹರಣ.

ಮಾರ್ಕಂಡೇಯಃ

ಮಾರೀಚಸ್ತ್ವಥ ಸಂಭ್ರಾಂತೋ ದೃಷ್ಟ್ವಾ ರಾವಣಮಾಗತಮ್ ।
ಪೂಜಯಾಮಾಸ ಸತ್ಕಾರೈಃ ಫಲಮೂಲಾದಿಭಿಸ್ತತಃ ॥೧॥

ಮಾರ್ಕಂಡೇಯರು– ಮಾರೀಚನು ಆಗ ಪ್ರಾಪ್ತನಾದ ರಾವಣನನ್ನು ನೋಡಿ ಸಂಭ್ರಾಂತನಾಗಿ ಫಲಮೂಲಾದಿ ಸತ್ಕಾರಗಳಿಂದ ಅವನನ್ನು ಪೂಜಿಸಿದನು.

ವಿಶ್ರಾಂತಂ ಚೈನಮಾಸೀನಮನ್ವಾಸೀನಃ ಸ ರಾಕ್ಷಸಃ ।
ಉವಾಚ ಪ್ರಶ್ರಿತಂ ವಾಕ್ಯಂ ವಾಕ್ಯಜ್ಞೋ ವಾಕ್ಯಕೋವಿದಮ್ ॥೨॥

ವಿಶ್ರಾಂತಿಯನ್ನು ತೆಗೆದುಕೊಂಡು ಕುಳಿತಿದ್ದ ರಾವಣನ ಸಮೀಪದಲ್ಲಿ ಕುಳಿತ ವಾಕ್ಯಜ್ಞನಾದ ಮಾರೀಚನು ವಾಕ್ಯಕೋವಿದನಾದ ರಾವಣನನ್ನು ಕುರಿತು ವಿನಯದಿಂದ ಮಾತನಾಡಿದನು.

ನ ತೇ ಪ್ರಕೃತಿಮಾನ್ ವರ್ಣಃ ಕಚ್ಚಿತ್ ಕ್ಷೇಮಂ ಪುರೇ ತವ ।
ಕಚ್ಚಿತ್ ಪ್ರಕೃತಯಃ ಸರ್ವಾ ಭಜಂತೇ ತ್ವಾಂ ಯಥಾ ಪುರಾ ॥೩॥

ನಿನ್ನ ಬಣ್ಣವು ಎಂದಿನಂತಿಲ್ಲ. ನಿನ್ನ ಪಟ್ಟಣದಲ್ಲಿ ಎಲ್ಲವೂ ಕ್ಷೇಮವಷ್ಟೆ? ನಿನ್ನ ಪ್ರಜೆಗಳೆಲ್ಲರೂ ನಿನ್ನನ್ನು ಮೊದಲಿನಂತೆಯೇ ಸತ್ಕರಿಸುತ್ತಿದ್ದಾರೆಯೇ?

ಕಿಮಿಹಾಗಮನೇ ಚಾಪಿ ಕಾರ್ಯಂ ತೇ ರಾಕ್ಷಸೇಶ್ವರ ।
ಕೃತಮಿತ್ಯೇವ ತದ್ ವಿದ್ಧಿ ಯದ್ಯಪಿ ಸ್ಯಾತ್ ಸುದುಷ್ಕರಮ್ ॥೪॥

ರಾಕ್ಷಸೇಶ್ವರನೇ, ಇಲ್ಲಿ ಬರುವುದಕ್ಕೆ ನಿನಗೆ ಆಗಬೇಕಾದ ಕಾರ್ಯವೇನು? ಅದು ಬಹಳ ದುಷ್ಕರವಾದರೂ ಅದು ಮಾಡಲ್ಪಟ್ಟಿದೆ ಎಂದೇ ತಿಳಿ.

ಮಾರ್ಕಂಡೇಯಃ

ಶಶಂಸ ರಾವಣಸ್ತಸ್ಮೈ ತತ್ಸರ್ವಂ ರಾಮಚೇಷ್ಟಿತಮ್ ।
ಮಾರೀಚಸ್ತ ಬ್ರವೀತ್ ಶ್ರುತ್ವಾ ಸಮಾಸೇನೈವ ರಾವಣಮ್ ॥೫॥

ಮಾರ್ಕಂಡೇಯರು– ರಾವಣನು ಅವನಿಗೆ ರಾಮನ ಚೇಷ್ಟಿತವೆಲ್ಲವನ್ನೂ ತಿಳಿಸಿದನು. ಮಾರೀಚನು ಅದನ್ನು ಕೇಳಿ ಸಂಕ್ಷೇಪವಾಗಿ ರಾವಣನನ್ನು ಕುರಿತು ಹೀಗೆ ಮಾತನಾಡಿದನು.

ಅಲಂ ತೇ ರಾಮಮಾಸಾದ್ಯ ವೀರ್ಯಜ್ಞೋ ಹ್ಯಸ್ಮಿ ತಸ್ಯ ವೈ ।
ಬಾಣವೇಗಂ ಹಿ ಕಸ್ತಸ್ಯ ಶಕ್ತಃ ಸೋಢುಂ ಮಹಾತ್ಮನಃ ॥೬॥

ನಿನಗೆ ರಾಮನ ಸಹವಾಸವು ಸಾಕು. ಅವನ ಪರಾಕ್ರಮವನ್ನು ನಾನು ತಿಳಿದಿದ್ದೇನೆ. ಆ ಮಹಾತ್ಮನ ಬಾಣವೇಗವನ್ನು ಸಹಿಸಲು ಯಾವನಿಗೆ ಸಾಧ್ಯ ?

ಪ್ರವ್ರಜ್ಯಾಯಾಂ ಹಿ ಮೇ ಹೇತುಃ ಸ ಏವ ಪುರುಷರ್ಷಭಃ ।
ವಿನಾಶಮುಖಮೇತತ್ ತೇ ಕೇನಾಖ್ಯಾತಂ ದುರಾತ್ಮನಾ ।
ತಮುವಾಚಾಥ ಸಕ್ರೋಧೋ ರಾವಣಃ ಪರಿಭರ್ತ್ಸಯನ್ ॥೭॥

ಅಕುರ್ವತೋಽಸ್ಯದ್ವಚನಂ ಸ್ಯಾನ್ಮೃತ್ಯುರಪಿ ತೇ ಧ್ರುವಮ್ ॥೮॥

ನಾನು ಈ ಏಕಾಂತಸ್ಥಳಕ್ಕೆ ಬರಲು ಆ ಪುರುಷಶ್ರೇಷ್ಠನೇ ಕಾರಣ. ನಿನ್ನ ವಿನಾಶವನ್ನು ತಂದೊಡ್ಡುವ ಇಂತಹ ಕಾರ್ಯವನ್ನು ಯಾವ ದುರಾತ್ಮನು ನಿನಗೆ ಹೇಳಿದನು? (ಎಂದು ಹೇಳಿದನು). ಆಗ ರಾವಣನು ಕ್ರೋಧದಿಂದ ಕೂಡಿದವನಾಗಿ ಅವನನ್ನು ಗದರಿಸುತ್ತಾ

ನನ್ನ ಮಾತನ್ನು ನಡೆಸಿಕೊಡದಿದ್ದರೆ ನಿನಗೆ ನಿಶ್ಚಿತವಾಗಿ ಮೃತ್ಯುವೇ ಉಂಟಾಗುವುದು ಎಂದು ಹೇಳಿದನು.

ಮಾರ್ಕಂಡೇಯಃ

ಮಾರೀಚಶ್ಚಿಂತಯಾಮಾಸ ವಿಶಿಷ್ಟಾನ್ಮರಣಂ ವರಮ್ ।
ಅವಶ್ಯಂ ಮರಣೇ ಪ್ರಾಪ್ತೇ ಕರಿಷ್ಯಾಮ್ಯಸ್ಯ ಯನ್ಮತಮ್ ।
ತತಸ್ತಂ ಪ್ರತ್ಯುವಾಚಾಥ ಮಾರೀಚೋ ರಾಕ್ಷಸೇಶ್ವರಮ್ ॥೯॥

ಮಾರ್ಕಂಡೇಯರು– ಮರಣವು ಅವಶ್ಯವಾಗಿ ಪ್ರಾಪ್ತವಾಗುವುದಾದರೆ ಶ್ರೇಷ್ಠ ಪುರುಷನಿಂದ ಮರಣವೇ ಒಳ್ಳೆಯದು. ಆದ್ದರಿಂದ ಇವನ ಅಭಿಪ್ರಾಯದಂತೆ ನಡೆಯುವೆ ಎಂದು ಯೋಚಿಸಿದನು. ಅನಂತರ ಮಾರೀಚನು ಆ ರಾಕ್ಷಸೇಶ್ವರನನ್ನು ಕುರಿತು ಮಾತನಾಡಿದನು.

ಕಿಂ ತೇ ಸಾಹ್ಯಂ ಮಯಾ ಕಾರ್ಯಂ ಕರಿಷ್ಯಾಮ್ಯವಶೋಽಪಿ ತತ್ ॥

ನಿನಗೆ ನನ್ನಿಂದ ಏನು ಸಹಾಯವಾಗಬೇಕು? ನಾನು ಅವಶವಾಗಿಯಾದರೂ ಆ ಕಾರ್ಯವನ್ನು ಮಾಡುವೆನು.

ತಮಬ್ರವೀದ್ ದಶಗ್ರೀವೋ ಗಚ್ಛ ಸೀತಾಂ ಪ್ರಲೋಭಯ ।
ರತ್ನಶೃಂಗೋ ಮೃಗೋ ಭೂತ್ವಾ ರತ್ನಚಿತ್ರತನೂರುಹಃ ॥೧೦॥

ನೀನು ಹೋಗಿ ರತ್ನಶೃಂಗವುಳ್ಳ ರತ್ನಗಳಿಂದ ಚಿತ್ರವಾದ ಶರೀರವುಳ್ಳ ಜಿಂಕೆಯಾಗಿ ಸೀತೆಯನ್ನು ಪ್ರಲೋಭಗೊಳಿಸು ಎಂದು ದಶಗ್ರೀವನು ಹೇಳಿದನು.

ಧ್ರುವಂ ಸೀತಾ ಸಮಾಲಕ್ಷ್ಯ ತ್ವಾಂ ರಾಮಂ ಚೋದಯಿಷ್ಯತಿ ।
ಅಪಕ್ರಾಂತೇ ಚ ಕಾಕುತ್ಸ್ಥೇ ಸೀತಾ ಮಯ್ಯಾ ಭವಿಷ್ಯತಿ ॥೧೨॥

ನಿನ್ನನ್ನು ನೋಡಿ ಖಂಡಿತವಾಗಿ ಸೀತೆಯು ರಾಮನನ್ನು ಅದನ್ನು ತರುವಂತೆ ಪ್ರೇರಿಸುತ್ತಾಳೆ. ರಾಮನು ದೂರಹೋಗುತ್ತಿರಲು ಸೀತೆಯು ವಶಳಾಗುವಳು.

ತಾಮಾದಾಯಾಪನೇಷ್ಯಾಮಿ ತತಃ ಸ ನ ಭವಿಷ್ಯತಿ ।
ಭಾರ್ಯಾವಿಯೋಗಾದ್ ದುರ್ಬುದ್ಧಿರೇತತ್ ಸಾಹ್ಯಂ ಕುರುಷ್ವ ಮೇ ॥

ನಾನು ಅವಳನ್ನು ಕರೆದುಕೊಂಡು ಹೊರಟುಬರುವೆನು. ಅನಂತರ ದುರ್ಬುದ್ಧಿಯಾದ ರಾವಣನು ಭಾರ್ಯಾವಿಯೋಗದಿಂದ ಮರಣವನ್ನು ಹೊಂದುವನು. ನನಗೆ ಈ ಸಹಾಯವನ್ನು ಮಾಡು.

ಇತ್ಯೇವಮುಕ್ತೋ ಮಾರೀಚಃ ಕೃತ್ವೋದಕಮಥಾತ್ಮನಃ ।
ರಾವಣಂ ಪುರತೋ ಯಾಂತಮನ್ವಗಚ್ಛತ್ ಸುದುಃಖಿತಃ ॥೧೪॥

ಹೀಗೆ ಹೇಳಲ್ಪಟ್ಟ ಮಾರೀಚನು ತನಗೆ ಉದಕಕ್ರಿಯೆಯನ್ನು ಮಾಡಿಕೊಂಡು ಬಹಳ ದುಃಖಿತನಾಗಿ ಮುಂದೆ ಹೋಗಿ ರಾವಣನನ್ನು ಹಿಂಬಾಲಿಸಿದನು.

ತತಸ್ತಸ್ಯಾಶ್ರಮಂ ಗತ್ವಾ ರಾಮಸ್ಯಾಕ್ಲಿಷ್ಟಕರ್ಮಣಃ ।
ಚಕ್ರತುಸ್ತತ್ ತಥಾ ಸರ್ವಮುಭೌ ಯತ್‌ಪೂರ್ವಮಂತ್ರಿತಮ್ ॥೧೫॥

ಅನಂತರ ಅಕ್ಲಿಷ್ಟಕಾರಿಯಾದ ರಾಮನ ಆಶ್ರಮದ ಬಳಿಗೆ ಹೋಗಿ ಅವರಿಬ್ಬರು ಮೊದಲು ಮಾತನಾಡಿಕೊಂಡಿದ್ದಂತೆ ಎಲ್ಲವನ್ನೂ ಮಾಡಿದರು.

ರಾವಣಸ್ತು ಯತಿರ್ಭೂತ್ವಾ ಮುಂಡಃ ಕುಂಡೀ ತ್ರಿದಂಡಧೃತ್ ।
ಮೃಗಶ್ಚ ಭೂತ್ವಾ ಮಾರೀಚಸ್ತಂ ದೇಶಮುಪಜಗ್ಮತುಃ ॥೧೬॥

ರಾವಣನಾದರೂ ತಲೆಯನ್ನು ಮುಂಡನ ಮಾಡಿ ಕೈಯಲ್ಲಿ ಕಮಂಡಲುವನ್ನು ಹಿಡಿದ ತ್ರಿದಂಡಧಾರಿಯಾಗಿ ಮತ್ತು ಮಾರೀಚನು ರಾವಣನು ಹೇಳಿದಂತೆ ಮೃಗವಾಗಿ ಆ ದೇಶಕ್ಕೆ ಬಂದರು.

ದರ್ಶಯಾಮಾಸ ಮಾರೀಚೋ ವೈದೇಹೀಂ ಮೃಗರೂಪಧೃಕ್ ।
ಚೋದಯಾಮಾಸ ತಸ್ಯಾರ್ಥೇ ಸಾ ರಾಮಂ ವಿಧಿಚೋದಿತಾ ॥೧೭॥

ಮಾರೀಚನು ಮೃಗರೂಪವನ್ನು ಧರಿಸಿ ಸೀತೆಗೆ ಕಾಣಿಸಿಕೊಂಡನು. ವಿಧಿ ಚೋದಿತಳಾದ ಸೀತೆಯು ರಾಮನಿಗೆ ಅದನ್ನು ತರುವಂತೆ ಒತ್ತಾಯ ಮಾಡಿದಳು.

ರಾಮಸ್ತಸ್ಯಾಃ ಪ್ರಿಯಂ ಕುರ್ವನ್ ಧನುರಾದಾಯ ಸತ್ವರಃ ।
ರಕ್ಷಾರ್ಥೇ ಲಕ್ಷ್ಮಣಂ ನ್ಯಸ್ಯ ಪ್ರಯಯೌ ಮೃಗಲಿಪ್ಸಯಾ ॥೧೮॥

ರಾಮನು ಅವಳಿಗೆ ಪ್ರಿಯವನ್ನು ಮಾಡುವವನಾಗಿ ಬೇಗ ಧನುಸ್ಸನ್ನು ತೆಗೆದುಕೊಂಡು ಲಕ್ಷ್ಮಣನನ್ನು ಅವಳ ರಕ್ಷಣೆಯಲ್ಲಿಟ್ಟು ಮೃಗವನ್ನು ಹಿಡಿಯುವ ಅಭಿಪ್ರಾಯದಿಂದ ಆಶ್ರಮದಿಂದ ಹೊರಟನು.

ಸ ಧನ್ವೀ ಬದ್ಧತೂಣೀರಃ ಖಡ್ಗಗೋಧಾಂಗುಲಿತ್ರವಾನ್ ।
ಅನ್ವಧಾವನ್ಮೃಗಂ ರಾಮೋ ರುದ್ರಸ್ತಾರಾಮೃಗಂ ಯಥಾ ॥೧೯॥

ಆ ರಾಮನು ಧನುಸ್ಸನ್ನು ಹಿಡಿದು ಬತ್ತಳಿಕೆಯನ್ನು ಕಟ್ಟಿಕೊಂಡು ಖಡ್ಗ ಮತ್ತು ಉಡದ ಚರ್ಮದಿಂದ ಮಾಡಿದ ಹಸ್ತರಕ್ಷಣೆಗಳನ್ನು ಹಾಕಿಕೊಂಡು ರುದ್ರದೇವರು ಮೃಗಶೀರ್ಷ ಎಂಬ ಹೆಸರಿನ ಮೃಗವನ್ನು ಹಿಂಬಾಲಿಸಿದಂತೆ ಆ ಮೃಗದ ಹಿಂದೆ ಓಡಿದನು.

ಸೋಽಂತರ್ಹಿತಃ ಪುನಸ್ತಸ್ಯ ದರ್ಶನಂ ರಾಕ್ಷಸೋ ವ್ರಜನ್ ।
ಚಕರ್ಷ ಚ ಮಹಾಧ್ವಾನಂ ರಾಮಸ್ತಂ ಬುಬುಧೇ ತತಃ ॥೨೦॥

ಆ ರಾಕ್ಷಸನು ಒಮ್ಮೆ ಅಂತರ್ಧಾನವನ್ನು ಹೊಂದಿ ಇನ್ನೊಮ್ಮೆ ದೃಶ್ಯನಾಗಿ ಹೋಗುತ್ತಾ ರಾಮನನ್ನು ಬಹಳ ದೂರದವರೆಗೆ ಎಳೆದನು. ಆಗ ರಾಮನು ಅವನ ನಿಜಸ್ವರೂಪವನ್ನು ತಿಳಿದನು.

ನಿಶಾಚರಂ ವಿದಿತ್ವಾ ತಂ ರಾಘವಃ ಪ್ರತಿಭಾನವಾನ್ ।
ಅಮೋಘಂ ಶರಮಾದಾಯ ಜಘಾನ ಮೃಗರೂಪಿಣಮ್ ॥೨೧॥

ಅವನು ರಾಕ್ಷಸನೆಂದು ತಿಳಿದ ರಾಮನು ದಿವ್ಯಜ್ಞಾನವನ್ನು ಹೊಂದಿದವನಾಗಿ ಅಮೋಘವಾದ ಶರವನ್ನು ತೆಗೆದುಕೊಂಡು ಮೃಗರೂಪಿಯಾದ ಅವನನ್ನು ಅದರಿಂದ ಹೊಡೆದನು.

ಸ ರಾಮಬಾಣಾಭಿಹತಃ ಕೃತ್ವಾ ರಾಮಸ್ವರಂ ತದಾ ।
ಹಾ ಸೀತೇ ಲಕ್ಷ್ಮಣೇತ್ಯೇವಂ ಚುಕ್ರೋಶಾರ್ತಸ್ವರೇಣ ಹ ॥೨೨॥

ರಾಮನ ಬಾಣದಿಂದ ಹೊಡೆಯಲ್ಪಟ್ಟ ಆ ಮಾರೀಚನು ರಾಮನ ಧ್ವನಿಯನ್ನು ಮಾಡಿಕೊಂಡು ಹಾ ಸೀತೇ, ಹಾ ಲಕ್ಷ್ಮಣ ಎಂದು ಆರ್ತಸ್ವರದಿಂದ ಗಟ್ಟಿಯಾಗಿ ಕಿರುಚಿದನು.

ಶುಶ್ರಾವ ತಸ್ಯ ವೈದೇಹೀ ತತಸ್ತಾಂ ಕರುಣಾಂ ಗಿರಮ್ ।
ಸಾ ಪ್ರಾದ್ರವದ್ ಯತಃ ಶಬ್ದಸ್ತಾಮುವಾಚಾಥ ಲಕ್ಷ್ಮಣಃ ॥೨೩॥

ಅಲಂ ತೇ ಶಂಕಯಾ ಭೀರು ಕೋ ರಾಮಂ ಪ್ರಹರಿಷ್ಯತಿ ।
ಮುಹೂರ್ತಾದ್ ದ್ರಕ್ಷ್ಯಸೇ ರಾಮಂ ಭರ್ತಾರಂ ತ್ವಂ ಶುಚಿಸ್ಮಿತೇ ॥೨೪॥

ಅವನ ಆ ಕರುಣಾಜನಕವಾದ ಶಬ್ದವನ್ನು ಜಾನಕಿಯು ಕೇಳಿದಳು. ಅನಂತರ ಅವಳು ಶಬ್ದವು ಬಂದ ದಿಕ್ಕಿಗೆ ಓಡಲು ಪ್ರಾರಂಭಿಸಿದಳು. ಆಗ ಲಕ್ಷ್ಮಣನು ಅವಳನ್ನು ಕುರಿತು ಭೀರುವೇ, ನೀನು ಭಯಪಡಬೇಡ. ರಾಮನನ್ನು ಹೊಡೆಯುವವನು ಯಾವನಿದ್ದಾನೆ? ಶುಚಿಸ್ಮಿತೆಯೇ, ಒಂದು ಮುಹೂರ್ತದಲ್ಲಿ ನೀನು ಪತಿಯಾದ ರಾಮನನ್ನು ನೋಡುವಿ ಎಂದು ಹೇಳಿದನು.

ಮಾರ್ಕಂಡೇಯಃ

ಇತ್ಯುಕ್ತಾ ಸಾ ಪ್ರರುದತೀ ಪರ್ಯಶಂಕತ ಲಕ್ಷ್ಮಣಮ್ ।
ಹತಾ ವೈ ಸ್ತ್ರೀಸ್ವಭಾವೇನ ಶುಕ್ಲಚಾರಿತ್ರಭೂಷಣಾ ।
ಸಾ ತಂ ಪರುಷಮಾರಬ್ಧಾ ವಕ್ತುಂ ಸಾಧ್ವೀ ಪತಿವ್ರತಾ ॥೨೫॥

ಮಾರ್ಕಂಡೇಯರು– ಹೀಗೆ ಹೇಳಲ್ಪಟ್ಟ ಸೀತೆಯು ಅಳುತ್ತಾ ಲಕ್ಷ್ಮಣನನ್ನು ಶಂಕಿಸಿದಳು. ಶುದ್ಧ ಚಾರಿತ್ರ್ಯ ಅಲಂಕಾರದಿಂದ ಕೂಡಿದ ಸಾಧ್ವಿಯೂ, ಪತಿವ್ರತೆಯೂ ಆದ ಅವಳು ಸ್ತ್ರೀಸ್ವಭಾವದಿಂದ ಕೂಡಿದವಳಾಗಿ ಲಕ್ಷ್ಮಣನನ್ನು ಕುರಿತು ಕ್ರೂರವಾದ ಮಾತುಗಳನ್ನು ಆಡಲು ಪ್ರಾರಂಭಿಸಿದಳು.

ನೈಷ ಕಾಮೋ ಭವೇನ್ಮೂಢ ಯಂ ತ್ವಂ ಪ್ರಾರ್ಥಯಸೇ ಹೃದಾ ॥೨೬॥

ಅಪ್ಯಹಂ ಶಸ್ತ್ರಮಾದಾಯ ಹನ್ಯಾಮಾತ್ಮಾನಮಾತ್ಮನಾ ।
ಪತೇಯಂ ಗಿರಿಶೃಂಗಾದ್ವಾ ವಿಶೇಯಂ ವಾ ಹುತಾಶನಮ್ ॥೨೭॥

ಸೀತಾ– ಮೂಢನೇ, ನೀನು ನಿನ್ನ ಮನಸ್ಸಿನಲ್ಲಿ ಏನನ್ನು ಬಯಸುತ್ತೀದ್ದೀಯೋ ಅಂತಹ ನಿನ್ನ ಕಾಮವು ನೆರವೇರುವುದಿಲ್ಲ. ನಾನು ಬೇಕಾದರೆ ಶಸ್ತ್ರವನ್ನು ತೆಗೆದುಕೊಂಡು ನನ್ನನ್ನೇ ನಾನು ಕೊಂದುಕೊಳ್ಳುವೆನು. ಅಥವಾ ಗಿರಿಶಿಖರದಿಂದ ಕೆಳಗೆ ಹಾರುವೆನು ಅಥವಾ ಅಗ್ನಿಪ್ರವೇಶವನ್ನು ಮಾಡುವೆನು.

ರಾಮಂ ಭರ್ತಾರಮುತ್ಸೃಜ್ಯ ನ ತ್ವಹಂ ತ್ವಾಂ ಕಥಂಚನ ।
ನ ಹೀನಮುಪತಿಷ್ಠೇಯಂ ಶಾರ್ದೂಲೀ ಕ್ರೋಷ್ಟುಕಂ ಯಥಾ ॥೨೮॥

ಪತಿಯಾದ ರಾಮನನ್ನು ಬಿಟ್ಟು ಹೀನಪುರುಷನಾದ ನಿನ್ನನ್ನು ಹೆಣ್ಣು ಹುಲಿಯು ನರಿಯನ್ನು ಸೇವಿಸುವಂತೆ ಎಂದೂ ಸೇವಿಸುವುದಿಲ್ಲ.

ಮಾರ್ಕಂಡೇಯಃ

ಏತಾದೃಶಂ ವಚಃ ಶ್ರುತ್ವಾ ಲಕ್ಷ್ಮಣಃ ಪ್ರಿಯರಾಘವಃ ।
ವಿಧಾಯ ಕರ್ಣೌ ಸದ್ವೃತ್ತಃ ಪ್ರಸ್ಥಿತೋ ಯೇನ ರಾಘವಃ ।
ಸ ರಾಮಸ್ಯ ಪದಂ ಗೃಹ್ಯ ಪ್ರಸಸಾರ ಧನುರ್ಧರಃ ॥೨೯॥

ಮಾರ್ಕಂಡೇಯರು– ಈ ಮಾತುಗಳನ್ನು ಕೇಳಿ ರಾಮನಿಗೆ ಪ್ರಿಯನಾದವನೂ, ಒಳ್ಳೆಯ ನಡತೆಯಿಂದ ಕೂಡಿದವನೂ ಆದ ಲಕ್ಷ್ಮಣನು ಕಿವಿಗಳನ್ನು ಮುಚ್ಚಿಕೊಂಡು ರಾಮನು ಹೋದ ಕಡೆಗೆ ಹೊರಟನು. ಅವನು ರಾಮನ ಹೆಜ್ಜೆಗಳನ್ನು ಹಿಡಿದುಕೊಂಡು ಧನುರ್ಧರನಾಗಿ ಮುಂದೆ ಸಾಗಿದನು.

ಏತಸ್ಮಿನ್ನಂತರೇ ರಕ್ಷೋ ರಾವಣಃ ಪ್ರತ್ಯದೃಶ್ಯತ ।
ಅಭವ್ಯೋ ಭವ್ಯರೂಪೇಣ ಭಸ್ಮಚ್ಛನ್ನ ಇವಾನಲಃ ॥೩೦॥

ಈ ಮಧ್ಯದಲ್ಲಿ ಬೂದಿಯು ಮುಚ್ಚಿದ ಅಗ್ನಿಯಂತೆ ಅಮಂಗಳನಾದ ರಾಕ್ಷಸನಾದ ರಾವಣನು ಮಂಗಳಸ್ವರೂಪವನ್ನು ಧರಿಸಿ ಕಾಣಿಸಿಕೊಂಡನು.

ಯತಿವೇಷಪ್ರತಿಚ್ಛನ್ನೋ ಜಿಹೀರ್ಷುಸ್ತಾಮನಿಂದಿತಾಮ್ ।
ಉಪಾಗಚ್ಛತ್ ಸ ವೈದೇಹೀಂ ರಾವಣಃ ಪಾಪನಿಶ್ಚಯಃ ॥೩೧॥

ಪಾಪನಿರ್ಧಾರವುಳ್ಳ ಆ ರಾವಣನು ಯತಿವೇಷದಿಂದ ತನ್ನ ನಿಜಸ್ವರೂಪವನ್ನು ಮರೆಮಾಚಿಕೊಂಡು ಅನಿಂದಿತಳಾದ ಅವಳನ್ನು ಅಪಹರಣ ಮಾಡಲು ಬಯಸಿ ವೈದೇಹಿಯ ಸಮೀಪಕ್ಕೆ ಬಂದನು.

ಸಾ ತಮಾಲಕ್ಷ್ಯ ಸಂಪ್ರಾಪ್ತಂ ಧರ್ಮಜ್ಞಾ ಜನಕಾತ್ಮಜಾ ।
ನಿಮಂತ್ರಯಾಮಾಸ ತದಾ ಫಲಮೂಲಾಶನಾದಿಭಿಃ ॥೩೨॥

ಸಮೀಪಕ್ಕೆ ಬಂದ ರಾವಣನನ್ನು ನೋಡಿ ಧರ್ಮಜ್ಞಳಾದ ಆ ಜನಕ ರಾಜಕುಮಾರಿಯು ಅವನಿಗೆ ಫಲಮೂಲಗಳಿಂದ ನಿಮಂತ್ರಣ ಮಾಡಿದಳು.

ಅವಮನ್ಯ ತತಃ ಸರ್ವಂ ಸ್ವರೂಪಂ ಪ್ರತ್ಯಪದ್ಯತ ।
ಸಾಂತ್ವಯಾಮಾಸ ವೈದೇಹೀಮಿತಿ ರಾಕ್ಷಸಪುಂಗವಃ ॥೩೩॥

ಆ ರಾಕ್ಷಸಶ್ರೇಷ್ಠನು ಅವೆಲ್ಲವನ್ನೂ ತಿರಸ್ಕರಿಸಿ ತನ್ನ ನಿಜರೂಪವನ್ನು ತೆಗೆದುಕೊಂಡು ವೈದೇಹಿಯನ್ನು ಹೀಗೆ ಸಮಾಧಾನಪಡಿಸಿದನು.

ಸೀತೇ ರಾಕ್ಷಸರಾಜೋಽಹಂ ರಾವಣೋ ನಾಮ ವಿಶ್ರುತಃ ।
ಮಮ ಲಂಕಾ ಪುರೀ ನಾಮ್ನಾ ರಮ್ಯಾ ಪಾರೇ ಮಹೋದಧೇಃ ॥೩೪॥

ರಾವಣ– ಎಲೌ ಸೀತೆಯೇ, ನಾನು ರಾಕ್ಷಸರಾಜ. ರಾವಣ ಎಂದು ಪ್ರಖ್ಯಾತನಾಗಿದ್ದೇನೆ. ನನ್ನ ಪಟ್ಟಣವು ಲಂಕಾ ಎಂಬ ಹೆಸರನ್ನು ಹೊಂದಿದೆ. ರಮ್ಯವಾದ ಆ ಪಟ್ಟಣವು ಸಮುದ್ರದ ದಡದಲ್ಲಿದೆ.

ತತ್ರ ತ್ವಂ ನರನಾರೀಷು ಶೋಭಿಷ್ಯಸಿ ಮಯಾ ಸಹ ।
ಭಾರ್ಯಾ ಮೇ ಭವ ಸುಶ್ರೋಣಿ ತಾಪಸಂ ತ್ಯಜ ರಾಘವಮ್ ॥೩೫॥

ಅಲ್ಲಿ ನೀನು ನರನಾರಿಯರ ಮಧ್ಯದಲ್ಲಿ ನನ್ನ ಜೊತೆಯಲ್ಲಿ ಶೋಭಿಸುವಿ. ಎಲೌ ಸುಶ್ರೋಣಿಯೇ, ನನ್ನ ಪತ್ನಿಯಾಗು. ತಾಪಸನಾದ ರಾಮನನ್ನು ಪರಿತ್ಯಾಗ ಮಾಡು.

ಮಾರ್ಕಂಡೇಯಃ

ಏವಮಾದೀನಿ ವಾಕ್ಯಾನಿ ಶ್ರುತ್ವಾ ತಸ್ಯಾಥ ಜಾನಕೀ ।
ಪಿಧಾಯ ಕರ್ಣೌ ಸುಶ್ರೋಣೀ ಮೈವಮಿತ್ಯಬ್ರವೀತ್ ವಚಃ ॥೩೬॥

ಮಾರ್ಕಂಡೇಯರು– ಜಾನಕಿಯು ಇವೇ ಮೊದಲಾದ ಅವನ ಮಾತುಗಳನ್ನು ಕೇಳಿ ಅನಂತರ ಕಿವಿಗಳನ್ನು ಮುಚ್ಚಿಕೊಂಡು ಸುಶ್ರೋಣಿಯಾದ ಅವಳು ಹೀಗೆ ಮಾತನಾಡಬೇಡ ಎಂದು ಹೇಳಿದಳು.

ಪ್ರಪತೇದ್ ದ್ಯೌಃ ಸನಕ್ಷತ್ರಾ ಪೃಥಿವೀ ಶಕಲೀಭವೇತ್ ।
ಶುಷ್ಯೇತ್ ತೋಯನಿಧೌ ತೋಯಂ ಚಂದ್ರಃ ಶೀತಾಂಶುತಾಂ ತ್ಯಜೇತ್ ॥

ಸೂರ್ಯನಕ್ಷತ್ರಗಳಿಂದ ಕೂಡಿದ ದ್ಯುಲೋಕವು ಕೆಳಗೆ ಬೀಳಬಹುದು. ಪೃಥಿವಿಯು ಚೂರುಚೂರಾಗಬಹುದು. ಸಮುದ್ರದಲ್ಲಿನೀರು ಬತ್ತಿಹೋಗಬಹುದು. ಚಂದ್ರನು ತನ್ನ ಶೀತಕಿರಣಗಳನ್ನು ತ್ಯಜಿಸಬಹುದು.

ಉಷ್ಣಾಂಶುತ್ವಮಥೋ ಜಹ್ಯಾದಾದಿತ್ಯೋ ವಹ್ನಿರುಷ್ಣತಾಮ್ ।
ಶೈತ್ಯಮಗ್ನಿರಿಯಾನ್ನಾಹಂ ತ್ಯಜೇಯಂ ರಘುನಂದನಮ್ ॥೩೮॥

ಆದಿತ್ಯನು ತನ್ನ ಉಷ್ಣಕಿರಣಗಳನ್ನು ತ್ಯಜಿಸಬಹುದು. ವಹ್ನಿಯು ತನ್ನ ಉಷ್ಣತೆಯನ್ನು ತ್ಯಜಿಸಬಹುದು. ಅಗ್ನಿಯು ಶೀತವಾಗಬಹುದು. ಆದರೆ ನಾನು ರಘುನಂದನನನ್ನು ಬಿಡಲಾರೆ.

ಕಥಂ ಹಿ ಭಿನ್ನಕರಟಂ ಹಸ್ತಿನಂ(ಪದ್ಮಿನಂ) ವನಗೋಚರಮ್ ।
ಉಪಸ್ಥಾಯ ಮಹಾನಾಗಂ ಕರೇಣುಃ ಸೂಕರಂ ಸ್ಪೃಶೇತ್ ॥೩೯॥

ವನಗೋಚರವಾದ ಮದಿಸಿದ ದೊಡ್ಡ ಆನೆಯನ್ನು ಭಜಿಸಿದ ಮರಿ ಹೆಣ್ಣಾನೆಯು ಹಂದಿಯನ್ನು ಹೇಗೆ ಮುಟ್ಟೀತು?

ಕಥಂ ಹಿ ಪೀತ್ವಾ ಮಾಧ್ವೀಕಂ ಪೀತ್ವಾ ಚ ಮಧುಮಾಧವೀಮ್ ।
ಲೋಭಂ ಸೌವೀರಕೇ ಕುರ್ಯಾನ್ನಾರೀ ಕಾಚಿದಿತಿ ಸ್ಮರೇತ್ ॥೪೦॥

ಜೇನುತುಪ್ಪವನ್ನು ಮತ್ತು ಮಧುಮಾಧವಿಯನ್ನು ಪಾನಮಾಡಿದ ಯಾವ ಹೆಂಗಸು ಅಂಬಲಿಯನ್ನು ಕುಡಿಯಲು ಆಸೆಮಾಡಿ ಸ್ಮರಿಸಬಹುದು?

ಮಾರ್ಕಂಡೇಯಃ

ಇತಿ ತಾ ತಂ ಸಮಾಭಾಷ್ಯ ಪ್ರವಿವೇಶಾಶ್ರಮಂ ತತಃ ।
ಕ್ರೋಧಾತ್ ಪ್ರಸ್ಫುರಮಾಣೌಷ್ಠೀ ವಿಧುನ್ವಾನಾ ಕರೌ ಮುಹುಃ ।
ತಾಮಭಿದ್ರುತ್ಯ ಸುಶ್ರೋಣೀಂ ರಾವಣಃ ಪ್ರತ್ಯಷೇಧಯತ್ ॥೪೧॥

ಮಾರ್ಕಂಡೇಯರು– ಹೀಗೆ ಅವಳು ಅವನನ್ನು ಕುರಿತು ಮಾತನಾಡಿ ಕೈಗಳನ್ನು ನಿಷೇಧ ಸೂಚಕವಾಗಿ ಅಲ್ಲಾಡಿಸುತ್ತಾ ಕ್ರೋಧದಿಂದ ಅದುರುವ ತುಟಿಗಳುಳ್ಳವಳಾಗಿ ಆಶ್ರಮದ ಒಳಭಾಗವನ್ನು ಪ್ರವೇಶಿಸಿದಳು. ರಾವಣನು ಆ ಸುಶ್ರೋಣಿಯ ಕಡೆಗೆ ಓಡಿ ಅವಳನ್ನು ತಡೆದನು.

ಭರ್ತ್ಸಯಿತ್ವಾ ತು ರೂಕ್ಷೇಣ ಸ್ವರೇಣ ಗತಚೇತನಾಮ್ ।
ಮೂರ್ಧಜೇಷು ನಿಜಗ್ರಾಹ ಊರ್ಧ್ವಮಾಚಕ್ರಮೇ ತತಃ ॥೪೨॥

ತನ್ನ ಒರಟಾದ ಸ್ವರದಿಂದ ಅವಳನ್ನು ಗದರಿಸಿ ಗತಚೇತನಳಾದ ಅವಳನ್ನು ತಲೆಗೂದಲುಗಳಲ್ಲಿ ಹಿಡಿದು ಮೇಲ್ಮುಖವಾಗಿ ಹಾರಿ ಹೊರಟನು.

ತಾಂ ದದರ್ಶ ತತೋ ಗೃಧ್ರೋ ಜಟಾಯುರ್ಗಿರಿಗೋಚರಃ ।
ರುದತೀಂ ರಾಮ ರಾಮೇತಿ ಹ್ರಿಯಮಾಣಾಂ ತಪಸ್ವಿನೀಮ್ ॥೪೩॥

ಪರ್ವತವಾಸಿಯಾದ ಜಟಾಯು ಎಂಬ ಪಕ್ಷಿಯು ರಾಮ ರಾಮ ಎಂದು ಅಳುತ್ತಿದ್ದ ಅಪಹರಿಸಲ್ಪಡುತ್ತಿದ್ದ ತಪಸ್ವಿಯಾದಂತಹ ಆ ಸೀತೆಯನ್ನು ನೋಡಿದನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂಸಂಹಿತಾಯಾಂ ವೈಯಾಸಿಕ್ಯಾಂ
ವನಪರ್ವಣಿ ಸಪ್ತಷಷ್ಟ್ಯಧಿಕದ್ವಿಶತತಮೋऽಧ್ಯಾಯಃ ॥
॥ ಇತಿ ರಾಮೋಪಾಖ್ಯಾನಪರ್ವಣಿ ಮಾರೀಚವಧ ಸೀತಾಪಹರಣಂ ನಾಮ
ಷಷ್ಠೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವನಪರ್ವದಲ್ಲಿ ಇನ್ನೂರ ಅರವತ್ತೇಳನೆಯ ಅಧ್ಯಾಯ ಮುಗಿಯಿತು.

★ ★ ★ ★

ಇನ್ನೂರ ಅರವತ್ತೆಂಟನೆಯ ಅಧ್ಯಾಯ

ರಾವಣನಿಂದ ಜಟಾಯುವನ್ನು ಕೊಂದು ಲಂಕಾ ಪ್ರವೇಶ. ರಾಮನಿಂದ ಸೀತಾನ್ವೇಷಣೆ. ಕಬಂಧನ ಪ್ರಾಪ್ತಿ ಮತ್ತು ಅವನ ಮೋಚನೆ. ಪಂಪಾತಟದಲ್ಲಿ ಸುಗ್ರೀವನ ಸಖ್ಯವನ್ನು ಬೆಳೆಸಲು ಪ್ರಯಾಣ ಮಾಡಲು ಸೂಚನೆ.

ಮಾರ್ಕಂಡೇಯಃ

ಸಖಾ ದಶರಥಸ್ಯಾಸೀಜ್ಜಟಾಯುररುಣಾತ್ಮಜಃ ।
ಗೃಧ್ರರಾಜೋ ಮಹಾವೀರಃ ಸಂಪಾತಿರ್ಯಸ್ಯ ಸೋದರಃ ॥೧॥

ಮಾರ್ಕಂಡೇಯರು– ಅರುಣನ ಮಗನಾದ ಜಟಾಯುವು ದಶರಥನ ಸ್ನೇಹಿತನಾಗಿದ್ದನು. ಅವನು ಮಹಾವೀರನಾದ ಪಕ್ಷಿರಾಜನೂ, ಸಂಪಾತಿಪಕ್ಷಿಯ ಸೋದರನೂ ಆಗಿದ್ದನು.

ಸ ದದರ್ಶ ತದಾ ಸೀತಾಂ ರಾವಣಾಂಕಗತಾಂ ಸ್ನುಷಾಮ್ ।
ಸಕ್ರೋಧೋಽಭ್ಯದ್ರವತ್ ಪಕ್ಷೀ ರಾವಣಂ ರಾಕ್ಷಸೇಶ್ವರಮ್ ॥೨॥

ಆಗ ಅವನು ರಾವಣನ ತೊಡೆಯಲ್ಲಿ ಇದ್ದ ತನ್ನ ಸೊಸೆಯಂತಿದ್ದ ಸೀತೆಯನ್ನು ನೋಡಿದನು. ಪಕ್ಷಿಯಾದ ಅವನು ಕ್ರೋಧದಿಂದ ಕೂಡಿದವನಾಗಿ ರಾಕ್ಷಸೇಶ್ವರನಾದ ರಾವಣನ ಕಡೆಗೆ ಓಡಿದನು.

ಅಥೈನಮಬ್ರವೀದ್ ಗೃಧ್ರೋ ಮುಂಚ ಮುಂಚೇತಿ ಮೈಥಿಲೀಮ್ ।
ಧ್ರಿಯಮಾಣೇ ಮಯಿ ಕಥಂ ಹರಿಷ್ಯತಿ ನಿಶಾಚರ ॥೩॥

ಅನಂತರ ಆ ಪಕ್ಷಿರಾಜನು ರಾವಣನನ್ನು ಕುರಿತು ಮೈಥಿಲಿಯನ್ನು ಬಿಡು ಬಿಡು. ನಿಶಾಚರನೇ, ನಾನು ಬದುಕಿರುವಾಗ ಹೇಗೆ ಜಾನಕಿಯನ್ನು ಅಪಹರಿಸುವಿ ಎಂದು ಹೇಳಿದನು.

ನ ಹಿ ಮೇ ಮೋಕ್ಷ್ಯಸೇ ಜೀವನ್ ಯದಿ ನೋತ್ಸೃಜಸೇ ವಧೂಮ್ ।
ಉಕ್ತ್ವೈವಂ ರಾಕ್ಷಸೇಂದ್ರಂ ತಂ ಚಕರ್ತ ನಖರೈರ್ಭೃಶಮ್ ॥೪॥

ವಧುವಾದ ಜಾನಕಿಯನ್ನು ಬಿಡದಿದ್ದರೆ ಜೀವಂತನಾಗಿ ನೀನು ನನ್ನಿಂದ ಬಿಡುಗಡೆಯನ್ನು ಹೊಂದುವುದಿಲ್ಲ. ರಾಕ್ಷಸೇಂದ್ರನನ್ನು ಕುರಿತು ಹೀಗೆ ಹೇಳಿ ಅವನನ್ನು ತನ್ನ ಉಗುರುಗಳಿಂದ ಚೆನ್ನಾಗಿ ಗಾಯಗೊಳಿಸಿದನು.

ಪಕ್ಷತುಂಡಪ್ರಹಾರೈಶ್ಚ ಶತಶೋ ಜರ್ಜರೀಕೃತಃ ।
ಚಕ್ಷಾರ ರುಧಿರಂ ಭೂರಿ ಗಿರಿಃ ಪ್ರಸ್ರವಣೈರಿವ ॥೫॥

ಕೊಕ್ಕಿನ ಮತ್ತು ರೆಕ್ಕೆಗಳ ಪ್ರಹಾರಗಳಿಂದ ನೂರಾರು ಬಾರಿ ಜರ್ಜರೀಕೃತನಾದ ರಾವಣನು ಪರ್ವತವು ಮಳೆಯ ನೀರನ್ನು ಕೆಳಗೆ ಸುರಿಸುವಂತೆ ತನ್ನ ಶರೀರದಿಂದ ಬಹಳ ರಕ್ತವನ್ನು ಸುರಿಸಿದನು.

ಸ ವಧ್ಯಮಾನೋ ಗೃಧ್ರೇಣ ರಾಮಪ್ರಿಯಹಿತೈಷಿಣಾ ।
ಖಡ್ಗಮಾದಾಯ ಚಿಚ್ಛೇದ ಭುಜೌ ತಸ್ಯ ಪತತ್ರಿಣಃ ॥೬॥

ರಾಮನಿಗೆ ಪ್ರಿಯಹಿತಗಳನ್ನು ಮಾಡಲು ಬಯಸಿದ ಪಕ್ಷಿಯಿಂದ ಹೀಗೆ ಪ್ರಹಾರಕ್ಕೆ ಒಳಗಾದ ಅವನು ಖಡ್ಗವನ್ನು ತೆಗೆದುಕೊಂಡು ಆ ಪಕ್ಷಿಯ ಭುಜಗಳನ್ನು ಕತ್ತರಿಸಿದನು.

ನಿಹತ್ಯ ಗೃಧ್ರರಾಜಂ ಸ ಭಿನ್ನಾಭ್ರಶಿಖರೋಪಮಮ್ ।
ಊರ್ಧ್ವಮಾಚಕ್ರಮೇ ಸೀತಾಂ ಗೃಹೀತ್ವಾಽಂಕೇನ ರಾಕ್ಷಸಃ ॥೭॥

ಆ ರಾಕ್ಷಸನು ಭಿನ್ನವಾದ ಮೋಡದ ಶಿಖರದಂತಿದ್ದ ಗೃಧ್ರರಾಜನನ್ನು ಸಂಹರಿಸಿ ಸೀತೆಯನ್ನು ತೊಡೆಮೇಲೆ ಇಟ್ಟುಕೊಂಡೇ ಆಕಾಶಕ್ಕೆ ಹಾರಿದನು.

ಯತ್ರ ಯತ್ರ ತು ವೈದೇಹೀ ಪಶ್ಯತ್ಯಾಶ್ರಮಮಂಡಲಮ್ ।
ಸರೋ ವಾ ಸರಿತೋ ವಾಪಿ ತತ್ರ ಮುಂಚತಿ ಭೂಷಣಮ್ ॥೮॥

ವೈದೇಹಿಯು ಎಲ್ಲೆಲ್ಲಿ ಆಶ್ರಮಸ್ಥಾನಗಳನ್ನು, ಸರೋವರವನ್ನು, ನದಿಗಳನ್ನು ಕಾಣುತ್ತಿದ್ದಳೋ ಅಲ್ಲಿ ತನ್ನ ಭೂಷಣಗಳನ್ನು ಕೆಳಗೆ ಹಾಕುತ್ತಿದ್ದಳು.

ಸಾ ದದರ್ಶ ಗಿರಿಪ್ರಸ್ಥೇ ಪಂಚ ವಾನರಪುಂಗವಾನ್ ।
ತತ್ರ ವಾಸೋ ಮಹದ್ದಿವ್ಯಮುತ್ಸಸರ್ಜ ಮನಸ್ವಿನೀ ॥೯॥

ಅವಳು ಒಂದು ಪರ್ವತದ ತಪ್ಪಲಿನಲ್ಲಿ ಐದುಜನ ವಾನರಶ್ರೇಷ್ಠರನ್ನು ನೋಡಿದಳು. ಧೈರ್ಯಶಾಲಿಯಾದ ಅವಳು ಅಲ್ಲಿ ತನ್ನ ದಿವ್ಯವಾದ ಉತ್ತರೀಯವನ್ನು ಕೆಳಗೆ ಹಾಕಿದಳು.

ತತ್ತೇಷಾಂ ವಾನರೇಂದ್ರಾಣಾಂ ಪಪಾತ ಪವನೋದ್ಧತಮ್ ।
ಮಧ್ಯೇ ಸುಪೀತಂ ಪಂಚಾನಾಂ ವಿದ್ಯುನ್ಮೇಘಾಂತರೇ ಯಥಾ ॥೧೦॥

ಮೋಡದ ಮಧ್ಯದಲ್ಲಿ ಕಾಣುವ ಮಿಂಚಿನಂತಿದ್ದ ಆ ಉತ್ತರೀಯವು ಗಾಳಿಯಿಂದ ಹೊಡೆಯಲ್ಪಟ್ಟು ಆ ಐವರು ವಾನರೇಂದ್ರರ ಮಧ್ಯೆ ಬಿದ್ದಿತು.

ಏವಂ ಹೃತಾಯಾಂ ವೈದೇಹ್ಯಾಂ ರಾಮೋ ಹತ್ವಾ ಮಹಾಮೃಗಮ್ ।
ನಿವೃತ್ತೋ ದದೃಶೇ ಧೀಮಾನ್‌ಭ್ರಾತರಂ ಲಕ್ಷ್ಮಣಂ ತಥಾ ।
ಕಥಮುತ್ಸೃಜ್ಯ ವೈದೇಹೀಂ ವನೇ ರಾಕ್ಷಸಸೇವಿತೇ ॥೧೧॥

ಇತಿ ತಂ ಭ್ರಾತರಂ ದೃಷ್ಟ್ವಾ ಪ್ರಾಪ್ತೋಽಸೀತಿ ವ್ಯಗರ್ಹಯತ್ ॥೧೨॥

ಇತ್ತ ಕಡೆ ವೈದೇಹಿಯು ಅಪಹರಿಸಲ್ಪಡುತ್ತಿರಲು ರಾಮನು ಮಹಾಮೃಗವನ್ನು ಕೊಂದು ಹಿಂದಿರುಗಿ ಲಕ್ಷ್ಮಣನನ್ನು ನೋಡಿ ರಾಕ್ಷಸ ಪೀಡಿತವಾದ ಕಾಡಿನಲ್ಲಿ ವೈದೇಹಿಯೊಬ್ಬಳನ್ನೇ ಏಕೆ ಬಿಟ್ಟು ಬಂದೆ ಎಂದು ಕೇಳಿ ಲಕ್ಷ್ಮಣನನ್ನು ನಿಂದಿಸಿದನು.

ಮೃಗರೂಪಧರೇಣಾಥ ರಕ್ಷಸಾ ಸೋಽಪಕರ್ಷಣಮ್ ।
ಭ್ರಾತುರಾಗಮನಂ ಚೈವ ಚಿಂತಯನ್ ಪರ್ಯತಪ್ಯತ ।
ಗರ್ಹಯನ್ನೇವ ರಾಮಸ್ತು ತ್ವರಿತಸ್ತಂ ಸಮಾಸದತ್ ॥೧೩॥

ಅನಂತರ ಅವನು ಮೃಗರೂಪವನ್ನು ಧರಿಸಿದ ರಾಕ್ಷಸನಿಂದ ತನ್ನ ಅಪಕರ್ಷಣವನ್ನು ಮತ್ತು ಲಕ್ಷ್ಮಣನ ಆಗಮನವನ್ನು ಚಿಂತಿಸಿ ತಾಪವನ್ನು ಪಟ್ಟನು. ಅವನನ್ನು ನಿಂದಿಸುತ್ತಲೇ ರಾಮನು ಶೀಘ್ರವಾಗಿ ಅವನ ಬಳಿಗೆ ಬಂದನು.

ಶ್ರೀರಾಮಃ

ಅಪಿ ಜೀವತಿ ವೈದೇಹೀ ನೇತಿ ಪಶ್ಯಾಮಿ ಲಕ್ಷ್ಮಣ ॥೧೪॥

ತಸ್ಯ ತತ್ಸರ್ವಮಾಚಖ್ಯೌ ಸೀತಾಯಾ ಲಕ್ಷ್ಮಣೋ ವಚಃ ।
ಯದುಕ್ತವತ್ಯಸದೃಶಂ ವೈದೇಹೀ ಪಶ್ಚಿಮಂ ವಚಃ ॥೧೫॥

ಶ್ರೀರಾಮ– ಲಕ್ಷ್ಮಣನೇ, ಸೀತೆಯು ಬದುಕಿದ್ದಾಳೆಯೋ ಇಲ್ಲವೋ ಎಂದು ನೋಡುತ್ತೇನೆ ಎಂದು ಹೇಳಿದನು. ಲಕ್ಷ್ಮಣನು ವೈದೇಹಿಯು ಆಡಿದ ಅಸದೃಶವಾದ ಹೀನವಾದ ಮಾತುಗಳನ್ನೆಲ್ಲಾ ರಾಮನಿಗೆ ಹೇಳಿದನು.

ದಹ್ಯಮಾನೇನ ತು ಹೃದಾ ರಾಮೋಽಭ್ಯಪತದಾಶ್ರಮಮ್ ।
ಸ ದದರ್ಶ ತದಾ ಗೃಧ್ರಂ ನಿಹತಂ ಪರ್ವತೋಪಮಮ್ ॥೧೬॥

ಹೃದಯವು ದಹಿಸಿ ಹೋಗುತ್ತಿದ್ದ ರಾಮನು ಬೇಗ ಆಶ್ರಮಕ್ಕೆ ಹಿಂದಿರುಗಿ ದಾರಿಯಲ್ಲಿ ರಾವಣನಿಂದ ಏಟು ತಿಂದು ಬಿದ್ದಿದ್ದ ಪರ್ವತದಂತಿದ್ದ ಪಕ್ಷಿಯನ್ನು ನೋಡಿದನು.

ರಾಕ್ಷಸಂ ಶಂಕಮಾನಸ್ತಂ ವಿಕೃಷ್ಯ ಬಲವತ್ ಧನುಃ ।
ಅಭ್ಯಧಾವತ ಕಾಕುತ್ಸ್ಥಸ್ತತಸ್ತಂ ಸಹಲಕ್ಷ್ಮಣಃ ।
ಸ ತಾವುವಾಚ ತೇಜಸ್ವೀ ಸಹಿತೌ ರಾಮಲಕ್ಷ್ಮಣೌ ॥೧೭॥

ಗೃಧ್ರರಾಜೋಽಸ್ಮಿ ಭದ್ರಂ ವಾಂ ಸಖಾ ದಶರಥಸ್ಯ ವೈ ॥೧೮॥

ರಾಮನು ಆ ಪಕ್ಷಿಯನ್ನು ರಾಕ್ಷಸನೆಂದು ಶಂಕಿಸಿ ಬಲಿಷ್ಠವಾದ ಧನುಸ್ಸನ್ನು ಎಳೆದು ಅವನ ಕಡೆಗೆ ಲಕ್ಷ್ಮಣನ ಜೊತೆಯಲ್ಲಿ ಓಡಿದನು. ಆಗ ತೇಜಸ್ವಿಯಾದ ಆ ಪಕ್ಷಿಯು ಒಟ್ಟುಗೂಡಿದ ರಾಮಲಕ್ಷ್ಮಣರನ್ನು ಕುರಿತು ನಾನು ದಶರಥನ ಸ್ನೇಹಿತನಾದ ಪಕ್ಷಿರಾಜನಾಗಿದ್ದೇನೆ. ನಿಮ್ಮಿಬ್ಬರಿಗೂ ಮಂಗಳವಾಗಲಿ ಎಂದು ಹೇಳಿತು.

ತಸ್ಯ ತದ್ವಚನಂ ಶ್ರುತ್ವಾ ಸಂಗೃಹ್ಯ ಧನುಷೀ ಶುಭೇ ।
ಕೋಽಯಂ ಪಿತರಮಸ್ಮಾಕಂ ನಾಮ್ನಾऽऽಹೇತ್ಯೂಚತುಶ್ಚ ತೌ ।
ತತೋ ದದೃಶತುಸ್ತೌ ತಂ ಛಿನ್ನಪಕ್ಷದ್ವಯಂ ಖಗಮ್ ॥೧೯॥

ತಯೋಃ ಶಶಂಸ ಗೃಧ್ರಸ್ತು ಸೀತಾರ್ಥೇ ರಾವಣಾದ್ ವಧಮ್ ॥೨೦॥

ಜಟಾಯುವಿನ ಆ ಮಾತನ್ನು ಕೇಳಿ ಶುಭವಾದ ಧನುಸ್ಸುಗಳನ್ನು ಹಿಂದಕ್ಕಿಟ್ಟುನಮ್ಮ ತಂದೆಯ ಹೆಸರನ್ನು ಹೇಳುತ್ತಿರುವ ಇವನು ಯಾರು ಎಂದು ಪರಸ್ಪರವಾಗಿ ಮಾತನಾಡಿಕೊಂಡರು. ಅನಂತರ ಅವರು ಎರಡು ರೆಕ್ಕೆಗಳೂ ಕತ್ತರಿಸಲ್ಪಟ್ಟ ಪಕ್ಷಿಯನ್ನು ನೋಡಿದರು. ಆ ಪಕ್ಷಿರಾಜನು ಸೀತೆಯ ಸಲುವಾಗಿ ಹೋರಾಡಿ ರಾವಣನಿಂದ ಪ್ರಾಪ್ತವಾದ ತನ್ನ ವಧೆಯನ್ನು ಅವರಿಬ್ಬರಿಗೂ ಹೇಳಿದನು.

ಅಪೃಚ್ಛದ್ ರಾಘವೋ ಗೃಧ್ರಂ ರಾವಣಃ ಕಾಂ ದಿಶಂ ಗತಃ ।
ತಸ್ಯ ಗೃಧ್ರಃ ಶಿರಃಕಂಪೈರಾಚಚಕ್ಷೇ ಮಮಾರ ಚ ॥೨೧॥

ರಾಮನು ಆ ಪಕ್ಷಿಯನ್ನು ಕುರಿತು ರಾವಣನು ಯಾವ ದಿಕ್ಕಿಗೆ ಹೋದನು ಎಂದು ಕೇಳಿದನು. ಅದಕ್ಕೆ ಆ ಪಕ್ಷಿಯು ತಲೆಯ ಕಂಪನದಿಂದಲೇ ದಿಕ್ಕನ್ನು ಹೇಳಿ ಮರಣವನ್ನು ಹೊಂದಿತು.

ದಕ್ಷಿಣಾಮಿತಿ ಕಾಕುತ್ಸ್ಥೋವಿದಿತ್ವಾऽಸ್ಯ ತದಿಂಗಿತಮ್ ।
ಸಂಸ್ಕಾರಂ ಲಂಭಯಾಮಾಸ ಸಖಾಯಂ ಪೂಜಯನ್ ಪಿತುಃ ॥೨೨॥

ಅದರ ಸೂಚನೆಯಿಂದ ರಾಮನು ದಕ್ಷಿಣದಿಕ್ಕು ಎಂದು ಅದರ ಇಂಗಿತವನ್ನು ತಿಳಿದು ತಂದೆಯ ಸ್ನೇಹಿತನಾದ ಆ ಗೃಧ್ರರಾಜನಿಗೆ ಉತ್ತರಕ್ರಿಯೆಗಳನ್ನು ಮಾಡಿದನು.

ತತೋ ದೃಷ್ಟ್ವಾऽऽಶ್ರಮಪದಂ ವ್ಯಪವಿದ್ಧಬೃಸೀಕಟಮ್ ।
ವಿಧ್ವಸ್ತಕಲಶಂ ಶೂನ್ಯಂ ಗೋಮಾಯುಶತಸಂಕುಲಮ್ ॥೨೩॥

ಅನಂತರ ಆಶ್ರಮದ ಪ್ರದೇಶಕ್ಕೆ ಬಂದು ದರ್ಭೆ, ಚಾಪೆಗಳು, ಆಸನಗಳು, ಒಡೆದ ಕಮಂಡಲುಗಳು ಎಲ್ಲವೂ ಚೆಲ್ಲಾಪಿಲ್ಲಿಯಾಗಿ ಬಿದ್ದಿದ್ದ ನರಿಗಳಿಂದ ತುಂಬಿದ ಪ್ರಿಯೆಯಿಂದ ಶೂನ್ಯವಾದ ಆ ಆಶ್ರಮವನ್ನು ನೋಡಿದನು.

ದುಃಖಶೋಕಸಮಾವಿಷ್ಟೌ ವೈದೇಹೀಹರಣಾರ್ದಿತೌ ।
ಜಗ್ಮತುರ್ದಂಡಕಾರಣ್ಯಂ ದಕ್ಷಿಣೇನ ಪರಂತಪೌ ॥೨೪॥

ಪರಂತಪರಾದ ರಾಮಲಕ್ಷ್ಮಣರು ಜಾನಕೀಹರಣದಿಂದ ಹಿಂಸಿತರಾಗಿ ದುಃಖಶೋಕಗಳನ್ನು ಹೊಂದಿದವರಾಗಿ ದಕ್ಷಿಣಮಾರ್ಗದಿಂದ ದಂಡಕಾರಣ್ಯಕ್ಕೆ ಹೋದರು.

ವನೇ ಮಹತಿ ತಸ್ಮಿಂಸ್ತು ರಾಮಃ ಸೌಮಿತ್ರಿಣಾ ಸಹ ।
ದದರ್ಶ ಮೃಗಯೂಥಾನಿ ದ್ರವಮಾಣಾನಿ ಸರ್ವಶಃ ॥೨೫॥

ಲಕ್ಷ್ಮಣನಿಂದ ಒಡಗೂಡಿದ ರಾಮನು ಆ ದೊಡ್ಡ ವನದಲ್ಲಿ ಎಲ್ಲ ಕಡೆಗಳಲ್ಲಿಯೂ ಓಡಾಡುತ್ತಿರುವ ಜಿಂಕೆಗಳ ಗುಂಪುಗಳನ್ನು ನೋಡಿದನು.

ಶಬ್ದಂ ಚ ಘೋರಂ ಸತ್ತ್ವಾನಾಂ ದಾವಾಗ್ನೇರಿವ ವರ್ಧತಃ ।
ಅಪಶ್ಯೇತಾಂ ಮುಹೂರ್ತಾಚ್ಚ ಕಬಂಧಂ ಘೋರದರ್ಶನಮ್ ॥೨೬॥

ಅಲ್ಲಿ ಅಭಿವೃದ್ಧಿಯನ್ನು ಹೊಂದುವ ದಾವಾಗ್ನಿಯ ಶಬ್ದದಂತೆ ಇರುವ ಕ್ರೂರ ಮೃಗಗಳ ನಾದಗಳನ್ನು ಅವರು ಕೇಳಿದರು. ಒಂದುಮುಹೂರ್ತದಲ್ಲಿ ಅವರು ಘೋರವಾದ ಆಕಾರವನ್ನು ಹೊಂದಿದ್ದ ಕಬಂಧನನ್ನು ನೋಡಿದರು.

ಮೇಘಪರ್ವತಸಂಕಾಶಂ ಶಾಲಸ್ಕಂಧಂ ಮಹಾಭುಜಮ್ ।
ಉರೋಗತವಿಶಾಲಾಕ್ಷಂ ಮಹೋದರಮಹಾಮುಖಿಮ್ ॥೨೭॥

ಮೇಘದಂತೆ, ಪರ್ವತದಂತೆ ಕಾಂತಿಯನ್ನು ಹೊಂದಿದ್ದ ಸಾಲವೃಕ್ಷದಂತೆ ಉನ್ನತವಾದ ಮಹಾಭುಜನಾದ ಉದರದಲ್ಲಿ ಮುಖವು ಅಡಗಿ ವಕ್ಷಸ್ಥಲದಲ್ಲಿ ವಿಶಾಲವಾದ ಕಣ್ಣನ್ನು ಹೊಂದಿದ್ದ ಆ ಕಬಂದನನ್ನು ನೋಡಿದರು.

ಯದೃಚ್ಛಯಾಥ ತದ್ರಕ್ಷಃ ಕರೇ ಜಗ್ರಾಹ ಲಕ್ಷ್ಮಣಮ್।
ವಿಷಾದಮಗಮತ್ ಸದ್ಯಃ ಸೌಮಿತ್ರಿರಥ ಭಾರತ ॥೨೮॥

ಭಾರತನೇ, ಆ ರಾಕ್ಷಸನು ಯದೃಚ್ಛೆಯಿಂದ ತನ್ನ ಕೈಗಳನ್ನು ಚಾಚಿ ಲಕ್ಷ್ಮಣನನ್ನು ಹಿಡಿದುಕೊಂಡನು. ಆಗ ಸೌಮಿತ್ರಿಯು ತಕ್ಷಣದಲ್ಲಿಯೇ ವಿಷಾದವನ್ನು ಹೊಂದಿದನು.

ಸ ರಾಮಮಭಿಸಂಪ್ರೇಕ್ಷ್ಯ ಕೃಷ್ಯತೇ ಯೇನ ತನ್ಮುಖಮ್ ।
ವಿಷಣ್ಣಶ್ಚಾಬ್ರವೀದ್ ರಾಮಂ ಪಶ್ಯಾವಸ್ಥಾಮಿಮಾಂ ಮಮ ॥೨೯॥

ಹರಣಂ ಚೈವ ವೈದೇಹ್ಯಾ ಮಮ ಚಾಯಮುಪಪ್ಲವಃ ।
ರಾಜ್ಯಭ್ರಂಶಶ್ಚ ಭವತಸ್ತಾತಸ್ಯ ಮರಣಂ ತಥಾ ॥೩೦॥

ಕಬಂಧನು ತನ್ನ ಕೈಗಳಿಂದ ತನ್ನ ಬಾಯಿಯು ಇದ್ದ ಹೊಟ್ಟೆಯ ಕಡೆಗೆ ಲಕ್ಷ್ಮಣನನ್ನು ಎಳೆಯುತ್ತಿರಲು ಲಕ್ಷ್ಮಣನು ರಾಮನನ್ನು ನೋಡಿ ಈ ನನ್ನ ಅವಸ್ಥೆಯನ್ನು ನೋಡು. ವೈದೇಹಿಯ ಅಪಹರಣ ಮತ್ತು ನನಗೆ ಒದಗಿದ ಈ ಉಪದ್ರವ, ನಿನ್ನ ರಾಜ್ಯಭ್ರಂಶ, ತಂದೆಯ ಮರಣ (ಇವೆಲ್ಲವನ್ನೂ ಗಮನಿಸು) ಎಂದು ಹೇಳಿದನು.

ನಾಹಂ ತ್ವಾಂ ಸಹ ವೈದೇಹ್ಯಾ ಸಮೇತಂ ಕೋಸಲಾಗತಮ್ ।
ದ್ರಕ್ಷ್ಯಾಮಿ ಪೃಥಿವೀರಾಜ್ಯೇ ಪಿತೃಪೈತಾಮಹೇ ಸ್ಥಿತಮ್ ॥೩೧॥

ನಾನು ಇನ್ನೊಮ್ಮೆ ಕೋಸಲದೇಶದ ರಾಜಧಾನಿಯಲ್ಲಿ ಪಿತೃಪಿತಾಮಹರಿಂದ ಬಂದ ಪೃಥಿವೀರಾಜ್ಯದಲ್ಲಿ ಜಾನಕಿಯ ಜೊತೆಯಲ್ಲಿ ಕುಳಿತಿರುವ ನಿನ್ನನ್ನು ನೋಡುವುದಿಲ್ಲ.

ದ್ರಕ್ಷ್ಯಂತ್ಯಾರ್ಯಸ್ಯ ಧನ್ಯಾ ಯೇ ಕುಶಲಾಜಶಮೀದಲೈಃ ।
ಅಭಿಷಿಕ್ತಸ್ಯ ವದನಂ ಸೋಮಂ ಶಾಂತಘನಂ ಯಥಾ ॥೩೨॥

ಯಾರು ಕುಶ, ಲಾಜ ಮತ್ತು ಶಮೀಪತ್ರಗಳಿಂದ ಅಭಿಷಿಕ್ತವಾದ ಅಣ್ಣನಾದ ನಿನ್ನ ಮುಖವನ್ನು ಮೋಡನಿಲ್ಲದ ಚಂದ್ರನನ್ನು ನೋಡಿದಂತೆ ನೋಡುವರೋ ಅವರೇ ಧನ್ಯರು.

ಏವಂ ಬಹುವಿಧಂ ಧೀಮಾನ್ ವಿಲಲಾಪ ಸ ಲಕ್ಷ್ಮಣಃ ।
ತಮುವಾಚಾಥ ಕಾಕುತ್ಸ್ಥಃ ಸಂಭ್ರಮೇಷ್ವಪ್ಯಸಂಭ್ರಮಃ ॥೩೩॥

ಹೀಗೆ ಮೇಧಾವಿಯಾದ ಲಕ್ಷ್ಮಣನು ಬಹುವಿಧವಾಗಿ ವಿಲಾಪವನ್ನು ಮಾಡಿದನು. ಆಗ ಗಾಬರಿಯಾಗುವ ಸಂದರ್ಭದಲ್ಲಿಯೂ ಗಾಬರಿಗೊಳ್ಳದೇ ಸಮಾಧಾನದಿಂದಿರುವ ರಾಮನು ಅವನನ್ನು ಕುರಿತು ಮಾತನಾಡಿದನು.

ಮಾ ವಿಷೀದ ನರವ್ಯಾಘ್ರ ನೈಷ ಕಶ್ಚಿನ್ಮಯಿ ಸ್ಥಿತೇ ।
ಛಿಂಧ್ಯಸ್ಯ ದಕ್ಷಿಣಂ ಬಾಹುಂ ಛಿನ್ನಃ ಸವ್ಯೋ ಮಯಾ ಭುಜಃ ॥೩೪॥

ನರವ್ಯಾಘ್ರನೇ, ವಿಷಾದಪಡಬೇಡ. ನಾನು ಇರುವಾಗ ಈ ಕಬಂಧನು ಯಾವ ವಸ್ತುವೂ ಅಲ್ಲ. ಅವನ ಬಲಭುಜವನ್ನು ಕತ್ತರಿಸು, ನಾನು ಅವನ ಎಡಭುಜವನ್ನು ಕತ್ತರಿಸಿದ್ದೇನೆ.

ಮಾರ್ಕಂಡೇಯಃ

ಇತ್ಯೇವಂ ವದತಾ ತಸ್ಯ ಭುಜೋ ರಾಮೇಣ ಪಾತಿತಃ ।
ಖಡ್ಗೇನ ಭೃಶತೀಕ್ಷ್ಣೇನ ನಿಕೃತ್ತಸ್ತಿಲಕಾಂಡವತ್ ॥೩೫॥

ಹೀಗೆ ಮಾತನಾಡುತ್ತಾ ರಾಮನು ಬಹಳ ನಿಶಿತವಾದ ತನ್ನ ಖಡ್ಗದಿಂದ ಅವನ ಎಡಭುಜವನ್ನು ಎಳ್ಳಿನ ಕಡ್ಡಿಯಂತೆ ಕತ್ತರಿಸಿ ಬೀಳಿಸಿದನು.

ತತೋಽಸ್ಯ ದಕ್ಷಿಣಂ ಬಾಹುಂ ಖಡ್ಗೇನಾಜಘ್ನಿವಾನ್ ಬಲೀ ।
ಸೌಮಿತ್ರಿರಪಿ ಸಂಪ್ರೇಕ್ಷ್ಯ ಭ್ರಾತರಂ ರಾಘವಂ ಸ್ಥಿತಮ್ ॥೩೬॥

ಅನಂತರ ಬಲಿಷ್ಠನಾದ ಲಕ್ಷ್ಮಣನೂ ಕೂಡ ಅಣ್ಣನಾದ ರಾಮನು ಸ್ಥಿರವಾಗಿರುವುದನ್ನು ನೋಡಿ ತನ್ನ ಖಡ್ಗದಿಂದ ಕಬಂಧನ ದಕ್ಷಿಣಬಾಹುವನ್ನು ಕತ್ತರಿಸಿದನು.

ಪುನರ್ಜಘಾನ ಪಾರ್ಶ್ವೇ ವೈ ತದ್ರಕ್ಷೋ ಲಕ್ಷ್ಮಣೋ ಭೃಶಮ್ ।
ಗತಾಸುರಪತದ್ ಭೂಮೌ ಕಬಂಧಃ ಸುಮಹಾಂಸ್ತತಃ ॥೩೭॥

ಪುನಃ ಲಕ್ಷ್ಮಣನು ಆ ಕಬಂಧನ ಪಾರ್ಶ್ವಕ್ಕೆ ಹೊಡೆದನು. ಆ ರಾಕ್ಷಸನು ಪ್ರಾಣಗಳನ್ನು ಕಳೆದುಕೊಂಡು ಆ ದೊಡ್ಡ ರೂಪದಿಂದ ಭೂಮಿಯಲ್ಲಿ ಬಿದ್ದನು.

ತಸ್ಯ ದೇಹಾದ್ ವಿನಿಃಸೃತ್ಯ ಪುರುಷೋ ದಿವ್ಯದರ್ಶನಃ ।
ದದೃಶೇ ದಿವಮಾಸ್ಥಾಯ ದಿವಿ ಸೂರ್ಯ ಇವ ಜ್ವಲನ್ ॥೩೮॥

ಅವನ ದೇಹದಿಂದ ಹೊರಟ ದಿವ್ಯಾಕೃತಿಯ ಒಬ್ಬ ಪುರುಷನು ಆಕಾಶದಲ್ಲಿ ಸೂರ್ಯನು ಜ್ವಲಿಸುವಂತೆ ಆಕಾಶವನ್ನು ಆಶ್ರಯಿಸಿ ನಿಂತಿರುವುದು ಕಾಣಬಂದಿತು.

ಪಪ್ರಚ್ಛ ರಾಮಸ್ತಂ ವಾಗ್ಮೀ ಕಸ್ತ್ವಂ ಪ್ರಬ್ರೂಹಿ ಪೃಚ್ಛತಃ ।
ಕಾಮಯಾ ಕಿಮಿದಂ ಚಿತ್ರಮಾಶ್ಚರ್ಯಂ ಪ್ರತಿಭಾತಿ ಮೇ ॥೩೯॥

ವಾಗ್ಮಿಯಾದ ರಾಮನು ಅವನನ್ನು ಕುರಿತು ನೀನು ಯಾರು ಎಂದು ಕೇಳುತ್ತಿರುವ ನನಗೆ ಮನಃಪೂರ್ವಕವಾಗಿ ಉತ್ತರವನ್ನು ಹೇಳು. ಇದು ಆಶ್ಚರ್ಯವೆಂದು ನನಗೆ ತೋರುತ್ತಿದೆ ಎಂದು ಕೇಳಿದನು.

ತಸ್ಯಾಚಚಕ್ಷೇ ಗಂಧರ್ವೋ ವಿಶ್ವಾವಸುರಹಂ ನೃಪ ।
ಪ್ರಾಪ್ತೋ ಬ್ರಾಹ್ಮಣಶಾಪೇನ ಯೋನಿಂ ರಾಕ್ಷಸಸೇವಿತಾಮ್ ॥೪೦॥

ರಾಮನನ್ನು ಕುರಿತು ಆ ಪುರುಷನು ರಾಜನೇ, ನಾನು ವಿಶ್ವಾವಸು ಎಂಬ ಗಂಧರ್ವ. ಬ್ರಾಹ್ಮಣಶಾಪದಿಂದ ನಾನು ರಾಕ್ಷಸಯೋನಿಯನ್ನು ಹೊಂದಿದೆನು.

ರಾವಣೇನ ಹೃತಾ ಸೀತಾ ರಾಜ್ಞಾ ಲಂಕಾಧಿವಾಸಿನಾ ।
ಸುಗ್ರೀವಮಭಿಗಚ್ಛಸ್ವ ಸ ತೇ ಸಾಹ್ಯಂ ಕರಿಷ್ಯತಿ ॥೪೧॥

ಲಂಕಾನಿವಾಸಿಯಾದ, ಲಂಕಾಪತಿಯಾದ ರಾವಣನಿಂದ ಸೀತೆಯು ಅಪಹರಿಸಲ್ಪಟ್ಟಿದ್ದಾಳೆ. ನೀನು ಸುಗ್ರೀವನ ಕಡೆಗೆ ಹೋಗು. ಅವನು ನಿನಗೆ ಸಹಾಯವನ್ನು ಮಾಡುವನು.

ಏಷಾ ಪಂಪಾ ಶಿವಜಲಾ ಹಂಸಕಾರಂಡವೈರ್ಯುತಾ ।
ಋಷ್ಯಮೂಕಸ್ಯ ಶೈಲಸ್ಯ ಸನ್ನಿಕರ್ಷೇ ತಟಾಕಿನೀ ॥೪೨॥

ಋಷ್ಯಮೂಕಪರ್ವತದ ಸಮೀಪದಲ್ಲಿ ಹಂಸಕಾರಂಡವಾದಿ ಜಲಪಕ್ಷಿಗಳಿಂದ ಕೂಡಿದ ಪವಿತ್ರವಾದ ಜಲವುಳ್ಳ ಈ ಪಂಪಾಸರೋವರವಿದೆ.

ವಸತೇ ತತ್ರ ಸುಗ್ರೀವಶ್ಚತುರ್ಭಿಃ ಸಚಿವೈಃ ಸಹ ।
ಭ್ರಾತಾ ವಾನರರಾಜಸ್ಯ ವಾಲಿನೋ ಹೇಮಮಾಲಿನಃ ॥೪೩॥

ಅಲ್ಲಿ ಸುಗ್ರೀವನು ತನ್ನ ನಾಲ್ವರು ಮಂತ್ರಿಗಳ ಜೊತೆಯಲ್ಲಿ ವಾಸಮಾಡುತ್ತಾನೆ. ಅವನು ಹೇಮಮಾಲೆಯನ್ನು ಧರಿಸಿದ ವಾನರರಾಜನಾದ ವಾಲಿಯ ತಮ್ಮ.

ತೇನ ತ್ವಂ ಸಹ ಸಂಗಮ್ಯ ದುಃಖಿಮೂಲಂ ನಿವೇದಯ ।
ಏತಾವಚ್ಛಕ್ಯಮಸ್ಮಾಭಿರ್ವಕ್ತುಂ ದ್ರಷ್ಟಾಸಿ ಜಾನಕೀಮ್ ।
ಧ್ರುವಂ ವಾನರರಾಜಸ್ಯ ವಿದಿತೋ ರಾವಣಾದಯಃ ॥೪೪॥

ನೀನು ಅವನ ಸಮಾಗಮವನ್ನು ಹೊಂದಿ ನಿನ್ನ ದುಃಖಕ್ಕೆ ಕಾರಣವನ್ನು ಅವನಿಗೆ ತಿಳಿಸು. ನೀನು ಜಾನಕಿಯನ್ನು ನೋಡುವಿ ಎಂದು ಇಷ್ಟೇ ನಾನು ಹೇಳಲು ಸಾಧ್ಯ. ಖಂಡಿತವಾಗಿ ರಾವಣಾದಿಗಳು ವಾನರರಾಜನಾದ ವಾಲಿಗೆ ಪರಿಚಿತರಾದವರು.

ಇತ್ಯುಕ್ತ್ವಾ ಂತರ್ಹಿತೋ ದಿವ್ಯಃ ಪುರುಷಃ ಸ ಮಹಾಪ್ರಭಃ ।
ವಿಸ್ಮಯಂ ಜಗ್ಮತುಶ್ಚೋಭೌ ಪ್ರವೀರೌ ರಾಮಲಕ್ಷ್ಮಣೌ ॥೪೫॥

ಹೀಗೆ ಹೇಳಿ ಮಹಾಪ್ರಭೆಯುಳ್ಳ ಆ ದಿವ್ಯಪುರುಷನು ಅಂತರ್ಧಾನವನ್ನು ಹೊಂದಿದನು. ವೀರರಾದ ಆ ರಾಮಲಕ್ಷ್ಮಣರಿಬ್ಬರೂ ಆಶ್ಚರ್ಯವನ್ನು ಹೊಂದಿದರು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂಸಂಹಿತಾಯಾಂ ವೈಯಾಸಿಕ್ಯಾಂ
ವನಪರ್ವಣಿ ಅಷ್ಟಷಷ್ಟ್ಯಧಿಕದ್ವಿಶತತಮೋಽಧ್ಯಾಯಃ ॥
॥ ಇತಿ ರಾಮೋಪಖ್ಯಾನಪರ್ವಣಿ ಕಬಂಧದಹನನಂ ನಾಮ ಸಪ್ತಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವನಪರ್ವದಲ್ಲಿ ಇನ್ನೂರ ಅರವತ್ತೆಂಟನೆಯ
ಅಧ್ಯಾಯ ಮುಗಿಯಿತು.

★ ★ ★ ★

ಇನ್ನೂರ ಅರವತ್ತೊಂಬತ್ತನೆಯ ಅಧ್ಯಾಯ

ರಾಮ-ಸುಗ್ರೀವರ ಸಖ್ಯ. ವಾಲಿಯ ಹನನ.
ರಾವಣನಿಂದ ಅಶೋಕವನದಲ್ಲಿ ಸೀತೆಯ ಸ್ಥಾಪನೆ.
ರಾಕ್ಷಸಿಯರ ತರ್ಜನ ಮತ್ತು ತ್ರಿಜಟೆಯಿಂದ ಸೀತೆಯ ಸಾಂತ್ವನ.

ಮಾರ್ಕಂಡೇಯಃ

ತತೋಽವಿದೂರೇ ನಳಿನೀಂ ಪ್ರಭೂತಕಮಲೋತ್ಪಲಾಮ್ ।
ಸೀತಾಹರಣದುಃಖಾರ್ತಃ ಪಂಪಾಂ ರಾಮಃ ಸಮಾಸದತ್ ॥೧॥

ಮಾರ್ಕಂಡೇಯರು– ಅನಂತರ ಸೀತಾಪಹರಣ ದುಃಖದಿಂದ ಆರ್ತನಾದ ರಾಮನು ಸಮೀಪದಲ್ಲೇ ಇದ್ದ ಅನೇಕ ಕಮಲ ಮತ್ತು ನೈದಿಲೆ ಪುಷ್ಪಗಳಿಂದ ಕೂಡಿದ್ದ ಪಂಪಾ ಸರೋವರವನ್ನು ತಲುಪಿದನು.

ಮಾರುತೇನ ಸುಶೀತೇನ ಸುಖೇನಾಮೃತಗಂಧಿನಾ ।
ಸೇವ್ಯಮಾನೋ ವನೇ ತಸ್ಮಿನ್ ಜಗಾಮ ಮನಸಾ ಪ್ರಿಯಾಮ್ ॥೨॥

ಸುಶೀತವಾದ, ಸುಗಂಧಯುಕ್ತವಾದ, ಸುಖಕರವಾದ ಮಾರುತದಿಂದ ಸೇವಿಸಲ್ಪಟ್ಟ ಅವನು ಆ ಕಾಡಿನಲ್ಲಿ ತನ್ನ ಪ್ರಿಯೆಯನ್ನು ಮನಸ್ಸಿನಲ್ಲಿಯೇ ಸ್ಮರಿಸಿದನು.

ವಿಲಲಾಪ ಸ ರಾಜೇಂದ್ರಸ್ತತ್ರ ಕಾಂತಾಮನುಸ್ಮರನ್ ।
ಕಾಮಬಾಣಾಭಿಸಂತಪ್ತಃ ಸೌಮಿತ್ರಿಸ್ತಮಥಾಬ್ರವೀತ್ ॥೩॥

ರಾಜೇಂದ್ರನಾದ ರಾಮನು ಅಲ್ಲಿ ತನ್ನ ಕಾಂತೆಯನ್ನು ಸ್ಮರಿಸುತ್ತಾ ಕಾಮಬಾಣಗಳಿಂದ ತಪ್ತನಾಗಿ ವಿಲಾಪವನ್ನು ಮಾಡಿದನು. ಆಗ ಲಕ್ಷ್ಮಣನು ಅವನನ್ನು ಕುರಿತು ಹೀಗೆ ಹೇಳಿದನು.

ನ ತ್ವಾಮೇವಂವಿಧೋ ಭಾವಃ ಸ್ಪೃಷ್ಟುಮರ್ಹತಿ ಮಾನದ ।
ಆತ್ಮವಂತಮಿವ ವ್ಯಾಧಿಃ ಪುರುಷಂ ವೃದ್ಧಶೀಲಿನಮ್ ॥೪॥

ಸದೃಢವಾದ ದೇಹವುಳ್ಳ ಮನುಷ್ಯನನ್ನು ವ್ಯಾಧಿಯು ಹೇಗೆ ಮುಟ್ಟುವುದಿಲ್ಲವೋ ಹಾಗೆ ಎಲೈ ಮಾನದನೇ, ವೃದ್ಧರ ಶೀಲವನ್ನುಳ್ಳ ಪುರುಷನಾದ ನಿನ್ನನ್ನು ಇಂತಹ ವಿಷಾದಭಾವನೆಗಳು ಸ್ಪರ್ಶಿಸಬಾರದು.

ಪ್ರವೃತ್ತಿರುಪಲಬ್ಧಾ ತೇ ವೈದೇಹ್ಯಾ ರಾವಣಸ್ಯ ಚ ।
ತಾಂ ತ್ವಂ ಪುರುಷಕಾರೇಣ ಬುದ್ಧ್ಯಾ ಚೈವೋಪಪಾದಯ ॥೫॥

ವೈದೇಹಿ ಮತ್ತು ರಾವಣರ ವೃತ್ತಾಂತಗಳು ನಿನಗೆ ದೊರೆತಿವೆ. ನೀನು ಅದನ್ನು ಬುದ್ಧಿಯಿಂದಲೂ ಮತ್ತು ಪುರುಷಪ್ರಯತ್ನದಿಂದಲೂ ಸಾಧಿಸುವವನಾಗು.

ಅಭಿಗಚ್ಛಾವ ಸುಗ್ರೀವಂ ಶೈಲಸ್ಥಂ ಹರಿಪುಂಗವಮ್ ।
ಮಯಿ ಶಿಷ್ಯೇ ಚ ಭೃತ್ಯೇ ಚ ಸಹಾಯೇ ಚ ಸಮಾಶ್ವಸ ॥೬॥

ಪರ್ವತದಲ್ಲಿರುವ ಕಪಿಶ್ರೇಷ್ಠನಾದ ಸುಗ್ರೀವನ ಕಡೆಗೆ ಹೋಗೋಣ. ನಾನು ನಿನ್ನ ಶಿಷ್ಯನೂ, ಭೃತ್ಯನೂ, ಸಹಾಯಕನೂ ಆಗಿರುವಾಗ ನೀನು ಸಮಾಧಾನವನ್ನು ತಂದುಕೋ.

ಮಾರ್ಕಂಡೇಯಃ

ಏವಂ ಬಹುವಿಧೈರ್ವಾಕ್ಯೈರ್ಲಕ್ಷ್ಮಣೇನ ಸ ರಾಘವಃ ।
ಉಕ್ತಃ ಪ್ರಕೃತಿಮಾಪೇದೇ ಕಾರ್ಯೇ ಚಾನಂತರೋಽಭವತ್ ॥೭॥

ಮಾರ್ಕಂಡೇಯ– ಹೀಗೆ ಲಕ್ಷ್ಮಣನಿಂದ ಬಹುವಿಧವಾದ ವಾಕ್ಯಗಳನ್ನು ಕೇಳಿದ ರಾಮನು ಸಮಾಧಾನವನ್ನು ತಂದುಕೊಂಡು ಮಾಡಬೇಕಾದ ಕಾರ್ಯದಲ್ಲಿ ನಿರತನಾದನು.

ನಿಷೇವ್ಯ ವಾರಿ ಪಂಪಾಯಾಸ್ತರ್ಪಯಿತ್ವಾ ಪಿತೃನಪಿ ।
ಪ್ರತಸ್ಥತುರುಭೌ ವೀರೌ ಭ್ರಾತರೌ ರಾಮಲಕ್ಷ್ಮಣೌ ॥೮॥

ಪಂಪಾ ಸರೋವರದಲ್ಲಿ ಪಿತೃಗಳಿಗೆ ತರ್ಪಣವನ್ನು ಕೊಟ್ಟು ಆ ಜಲವನ್ನು ಸೇವಿಸಿ ವೀರರೂ, ಸಹೋದರರೂ ಆದ ರಾಮಲಕ್ಷ್ಮಣರಿಬ್ಬರೂ ಅಲ್ಲಿಂದ ಹೊರಟರು.

ತಾವೃಷ್ಯಮೂಕಮಭ್ಯೇತ್ಯ ಬಹುಮೂಲಫಲದ್ರುಮಮ್ ।
ಗಿರ್ಯಗ್ರೇ ವಾನರಾನ್ ಪಂಚ ವೀರೌ ದದೃಶತುಸ್ತದಾ ॥೯॥

ವೀರರಾದ ಅವರಿಬ್ಬರೂ ಬಹುಮೂಲಫಲ ಭರಿತ ವೃಕ್ಷಗಳಿರುವ ಋಷ್ಯಮೂಕ ಪರ್ವತವನ್ನು ತಲುಪಿ ಅಲ್ಲಿ ಪರ್ವತದ ಮೇಲ್ಭಾಗದಲ್ಲಿ ಐವರು ವಾನರರನ್ನು ನೋಡಿದರು.

ಸುಗ್ರೀವಃ ಪ್ರೇಷಯಾಮಾಸ ಸಚಿವಂ ವಾನರಂ ತಯೋಃ ।
ಬುದ್ಧಿಮಂತಂ ಹನೂಮಂತಂ ಹಿಮವಂತಮಿವ ಸ್ಥಿತಮ್ ॥೧೦॥

ಸುಗ್ರೀವನು ಅವರ ಬಳಿಗೆ ಬುದ್ಧಿವಂತನೂ, ಹಿಮಾಲಯದಂತೆ ಗಂಭೀರನೂ ಆದ ತನ್ನ ಸಚಿವನಾದ ಹನುಮಂತನೆಂಬ ವಾನರನನ್ನು ಕಳುಹಿಸಿದನು.

ತೇನ ಸಂಭಾಷ್ಯ ಪೂರ್ವಂ ತೌ ಸುಗ್ರೀವಮಭಿಜಗ್ಮತುಃ ।
ಸಖ್ಯಂ ವಾನರರಾಜೇನ ಚಕ್ರೇ ರಾಮಸ್ತದಾ ನೃಪ ॥೧೧॥

ಮೊದಲು ಹನುಮಂತನ ಜೊತೆಯಲ್ಲಿ ಸಂಭಾಷಣೆ ಮಾಡಿ ಅವರಿಬ್ಬರೂ ಸುಗ್ರೀವನ ಬಳಿಗೆ ಬಂದರು. ಎಲೈ ರಾಜನೇ, ಆಗ ರಾಮನು ವಾನರರಾಜನಾದ ಸುಗ್ರೀವನ ಜೊತೆಯಲ್ಲಿ ಸಖ್ಯವನ್ನು ಮಾಡಿಕೊಂಡನು.

ತತಃ ಸೀತಾಂ ಹೃತಾಂ ಶ್ರುತ್ವಾ ಸುಗ್ರೀವೋ ವಾಲಿನಾ ಕೃತಮ್ ।
ದುಃಖಮಾಖ್ಯಾತವಾನ್ ಸರ್ವಂ ರಾಮಾಯಾಮಿತತೇಜಸೇ ॥೧೨॥

ಅನಂತರ ಸುಗ್ರೀವನು ಸೀತಾಪಹಾರದ ವಾರ್ತೆಯನ್ನು ಕೇಳಿ ವಾಲಿಯು ತನಗೆ ಮಾಡಿರುವ ಉಪದ್ರವಗಳೆಲ್ಲವನ್ನೂ ಅಮಿತಪರಾಕ್ರಮಿಯಾದ ರಾಮನಿಗೆ ತಿಳಿಸಿದನು.

ತದ್ ವಾಸೋ ದರ್ಶಯಾಮಾಸುಸ್ತಸ್ಯ ಕಾರ್ಯೇ ನಿವೇದಿತೇ ।
ವಾನರಾಣಾಂ ತು ಯತ್ ಸೀತಾ ಹ್ರಿಯಮಾಣಾ ವ್ಯವಾಸೃಜತ್ ॥೧೩॥

ರಾಮನು ಮಾಡಬೇಕಾದ ಕಾರ್ಯವನ್ನು ತಿಳಿಸಿದ ಮೇಲೆ ವಾನರರು ಸೀತೆಯು ಅಪಹರಿಸಲ್ಪಡುತ್ತಿದ್ದಾಗ ಕೆಳಗೆ ಬೀಳಿಸಿದ ಆ ವಸ್ತ್ರವನ್ನು ತೋರಿಸಿದರು.

ತತ್ತ್ವತ್ಯಯಕರಂ ಲಬ್ಧ್ವಾ ಸುಗ್ರೀವಂ ಪ್ಲವಗಾಧಿಪಮ್ ।
ಪೃಥಿವ್ಯಾಂ ವಾನರೈಶ್ವರ್ಯೇ ಸ್ವಯಂ ರಾಮೋಽಭ್ಯಷೇಚಯತ್ ॥೧೪॥

ವಿಶ್ವಾಸಜನಕವಾದ ಆ ಸೂಚನೆಯನ್ನು ಹೊಂದಿ ರಾಮನು ಸುಗ್ರೀವನಿಗೆ ಭೂಮಿಯಲ್ಲಿರುವ ಎಲ್ಲಾ ವಾನರರ ಐಶ್ವರ್ಯಕ್ಕೆ ಮತ್ತು ವಾನರರಿಗೆ ಅಧಿಪತಿಯನ್ನಾಗಿ ತಾನೇ ಅಭಿಷೇಕ ಮಾಡಿದನು.

ಪ್ರತಿಜಜ್ಞೇ ಚ ಕಾಕುತ್ಸ್ಥಃ ಸಮರೇ ವಾಲಿನೋ ವಧಮ್ ।
ಸುಗ್ರೀವಶ್ಚಾಪಿ ವೈದೇಹ್ಯಾಃ ಪುನರಾನಯನಂ ನೃಪ ॥೧೫॥

ಎಲೈ ರಾಜನೇ, ರಾಮನು ಯುದ್ಧದಲ್ಲಿ ವಾಲಿಯ ವಧೆಯನ್ನು ಪ್ರತಿಜ್ಞೆ ಮಾಡಿದನು. ಸುಗ್ರೀವನೂ ಸಹ ಸೀತೆಯನ್ನು ಪುನಃ ಕರೆದುತರುವ ಪ್ರತಿಜ್ಞೆಯನ್ನು ಮಾಡಿದನು.

ಇತ್ಯುಕ್ತ್ವಾ ಸಮಯಂ ಕೃತ್ವಾ ವಿಶ್ವಾಸ್ಯ ಚ ಪರಸ್ಪರಮ್ ।
ಅಭ್ಯೇತ್ಯ ಸರ್ವೇ ಕಿಷ್ಕಿಂಧಾಂ ತಸ್ಥುರ್ಯುದ್ಧಾಭಿಕಾಂಕ್ಷಿಣಃ ॥೧೬॥

ಹೀಗೆ ಪರಸ್ಪರವಾಗಿ ಮಾತನಾಡಿಕೊಂಡು, ಪರಸ್ಪರ ನಿಬಂಧನೆಯನ್ನು ಮಾಡಿಕೊಂಡು, ಪರಸ್ಪರ ವಿಶ್ವಾಸವುಳ್ಳವರಾಗಿ ಅವರು ಕಿಷ್ಕಿಂಧಾ ಪಟ್ಟಣಕ್ಕೆ ಬಂದು ಯುದ್ಧವನ್ನು ಬಯಸುವವರಾಗಿ ವಾಸಮಾಡಿದರು.

ಸುಗ್ರೀವಃ ಪ್ರಾಪ್ಯ ಕಿಷ್ಕಿಂಧಾಂ ನನಾದ ಘನನಿಸ್ವನಃ ।
ನಾಸ್ಯ ತನ್ಮೃಷ್ಯತೇ ವಾಲೀ ತಾರಾ ತಂ ಪ್ರತ್ಯಷೇಧಯತ್ ॥೧೭॥

ಸುಗ್ರೀವನು ಕಿಷ್ಕಿಂಧಾ ಪಟ್ಟಣವನ್ನು ತಲುಪಿ ಮೇಘ ಗರ್ಜನೆಯಂತೆ ಗರ್ಜನೆಯನ್ನು ಮಾಡಿದನು. ವಾಲಿಯು ಅದನ್ನು ಕೇಳಿ ಸಹಿಸಲಿಲ್ಲ. ಹೊರಗೆ ಹೊರಟ ವಾಲಿಯನ್ನು ಅವನ ಪತ್ನಿಯಾದ ತಾರೆಯು ತಡೆದಳು.

ಯಥಾ ನದತಿ ಸುಗ್ರೀವೋ ಬಲವಾನೇಷ ವಾನರಃ ।
ಮನ್ಯೇ ಚಾಶ್ರಯವಾನ್ ಪ್ರಾಪ್ತೋ ನ ತ್ವಂ ನಿಷ್ಕ್ರಾಂತುಮರ್ಹಸಿ ॥೧೮॥

ಸುಗ್ರೀವನು ಗರ್ಜಿಸುವುದನ್ನು ನೋಡಿದರೆ ಈ ಕಪಿಯು ಈಗ ಬಲಿಷ್ಠನಾಗಿರುವಂತೆ ತೋರುತ್ತದೆ. ಅವನಿಗೆ ಯಾವುದೋ ಬಲವಾದ ಆಶ್ರಯವು ದೊರೆತಿರುವಂತೆ ಕಾಣುತ್ತದೆ. ನೀನು ಹೊರಗೆ ಹೋಗುವುದು ಯೋಗ್ಯವಲ್ಲ(ಎಂದು ಹೇಳಿದಳು).

ಹೇಮಮಾಲೀ ತತೋ ವಾಲೀ ತಾರಾಂ ತಾರಾಧಿಪಾನನಾಮ್ ।
ಪ್ರೋವಾಚ ವಚನಂ ವಾಗ್ಮೀ ತಾಂ ವಾನರಪತಿಃ ಪತಿಃ ॥೧೯॥

ಸರ್ವಭೂತರುತಜ್ಞಾ ತ್ವಂ ಪಶ್ಯ ಬುದ್ಧ್ಯಾ ಸಮನ್ವಿತಾ ।
ಕೇನ ಚಾಶ್ರಯವಾನ್ ಪ್ರಾಪ್ತೋ ಮಮೈಷ ಭ್ರಾತೃಗಂಧಿಕಃ ॥೨೦॥

ಆಗ ಹೇಮಮಾಲಿಯಾದ ವಾನರಪತಿಯಾದ, ವಾಗ್ಮಿಯಾದ, ತಾರಾಪತಿಯಾದ ವಾಲಿಯು ಚಂದ್ರಮುಖಿಯಾದ ತಾರೆಯನ್ನು ಕುರಿತು ಎಲ್ಲ ಪ್ರಾಣಿಗಳ ಶಬ್ದಗಳನ್ನೂ ತಿಳಿದಿರುವ ನೀನು ಈಗ ನಿನ್ನ ಬುದ್ಧಿಯಿಂದ ನನ್ನ ಈ ಭ್ರಾತೃವಾದ ಸುಗ್ರೀವನು ಯಾರ ಬಲದಿಂದ ಬಂದಿದ್ದಾನೆ ಎಂದು ನೋಡು ಎಂದು ಹೇಳಿದನು.

ಮಾರ್ಕಂಡೇಯಃ

ಚಿಂತಯಿತ್ವಾ ಮುಹೂರ್ತಂ ತು ತಾರಾ ತಾರಾಧಿಪಪ್ರಭಾ ।
ಪತಿಮಿತ್ಯಬ್ರವೀತ್ ಪ್ರಾಜ್ಞಾ ಶೃಣು ಸರ್ವಂ ಕಪೀಶ್ವರ ॥೨೧॥

ಹೃತದಾರೋ ಮಹಾಸತ್ತ್ವೋ ರಾಮೋ ದಶರಥಾತ್ಮಜಃ ।
ತುಲ್ಯಾರಿಮಿತ್ರತಾಂ ಪ್ರಾಪ್ತಃ ಸುಗ್ರೀವೇಣ ಧನುರ್ಧರಃ ॥೨೨॥

ಚಂದ್ರಕಾಂತಿಯುಳ್ಳ ತಾರೆಯು ಒಂದು ಮುಹೂರ್ತಕಾಲ ಯೋಚಿಸಿ ಪ್ರಾಜ್ಞಳಾದ ಅವಳು ಪತಿಯನ್ನು ಕುರಿತು ಕಪೀಶ್ವರನೇ, ದಶರಥಪುತ್ರನಾದ ಪತ್ನಿಯನ್ನು ಕಳೆದುಕೊಂಡ ರಾಮನು ಮಹಾಸತ್ತ್ವಶಾಲಿಯಾಗಿದ್ದಾನೆ. ಧನುರ್ಧರನಾದ ಅವನು ಸುಗ್ರೀವನ ಜೊತೆಯಲ್ಲಿ ಸಮಾನಶತ್ರುಮಿತ್ರಭಾವವನ್ನು ಹೊಂದಿದ್ದಾನೆ.

ಭ್ರಾತಾ ಚಾಸ್ಯ ಮಹಾಬಾಹುಃ ಸೌಮಿತ್ರಿರಪರಾಜಿತಃ ।
ಲಕ್ಷ್ಮಣೋ ನಾಮ ಮೇಧಾವೀ ಸ್ಥಿತಃ ಕಾರ್ಯಾರ್ಥಸಿದ್ಧಯೇ ॥೨೩॥

ಅವನ ತಮ್ಮನಾದ ಅಪರಾಜಿತನಾದ ಸುಮಿತ್ರಾತನಯನಾದ ಮಹಾಬಾಹುವು ಲಕ್ಷ್ಮಣ ಎಂಬ ಹೆಸರಿನವನು. ಅವನು ಮೇಧಾವಿ. ರಾಮನ ಕಾರ್ಯವನ್ನು ಸಾಧಿಸುವುದಕ್ಕಾಗಿಯೇ ಅವನ ಜೊತೆಯಲ್ಲಿದ್ದಾನೆ.

ಮೈಂದಶ್ಚ ದ್ವಿ(ವಿ)ದಶ್ಚಾಪಿ ಹನೂಮಾಂಶ್ಚಾನಿಲಾತ್ಮಜಃ ।
ಜಾಂಬವಾನೃಕ್ಷರಾಜಶ್ಚ ಸುಗ್ರೀವಸಚಿವಾಃ ಸ್ಥಿತಾಃ ॥೨೪॥

ಮೈಂದ, ವಿವಿದ, ವಾಯುಪುತ್ರನಾದ ಹನುಮಂತ, ಋಕ್ಷರಾಜನಾದ ಜಾಂಬವಂತ ಈ ನಾಲ್ವರು ಸುಗ್ರೀವನ ಸಚಿವರಾಗಿದ್ದಾರೆ.

ಸರ್ವ ಏತೇ ಮಹಾತ್ಮಾನೋ ಬುದ್ಧಿಮಂತೋ ಮಹಾಬಲಾಃ ।
ಅಲಂ ತವ ವಿನಾಶಾಯ ರಾಮವೀರ್ಯಬಲಾಶ್ರಯಾತ್ ॥೨೫॥

ಈ ಎಲ್ಲ ಮಹಾತ್ಮರೂ, ಮೇಧಾವಿಗಳೂ ಮತ್ತು ಮಹಾಬಲರೂ ಆಗಿದ್ದಾರೆ. ರಾಮನ ಪರಾಕ್ರಮ ಮತ್ತು ಬಲಗಳನ್ನು ಆಶ್ರಯಿಸಿ ಒಬ್ಬೊಬ್ಬರೂ ನಿನ್ನನ್ನು ನಾಶ ಮಾಡಲು ಸಮರ್ಥರಾಗಿದ್ದಾರೆ (ಎಂದು ಹೇಳಿದಳು).

ತಸ್ಯಾಸ್ತದಾಕ್ಷಿಪ್ಯ ವಚೋ ಹಿತಮುಕ್ತಂ ಕಪೀಶ್ವರಃ ।
ಪರ್ಯಶಂಕತ ತಾಮೀರ್ಷುಃ ಸುಗ್ರೀವಗತಮಾನಸಾಮ್ ॥೨೬॥

ಕಪೀಶ್ವರನಾದ ವಾಲಿಯು ಅವಳ ಹಿತವಚನಗಳನ್ನು ನಿರಾಕರಿಸಿ ಅವಳಿಗೆ ಸುಗ್ರೀವನ ಮೇಲೆ ಮನಸ್ಸಿದೆ ಎಂದು ಶಂಕಿಸಿ ಅವಳ ಮೇಲೆ ಅಸೂಯೆಯನ್ನು ಪಟ್ಟನು.

ತಾರಾಂ ಪರುಷಮುಕ್ತ್ವಾ ತು ನಿರ್ಜಗಾಮ ಗುಹಾಮುಖಾತ್ ।
ಸ್ಥಿತಂ ಮಾಲ್ಯವತೋಽಭ್ಯಾಶೇ ಸುಗ್ರೀವಂ ಸೋಽಭ್ಯಭಾಷತ ॥೨೭॥

ಅಸಕೃತ್ ತ್ವಂ ಮಯಾ ಪೂರ್ವಂ ನಿರ್ಜಿತೋ ಜೀವಿತಪ್ರಿಯಃ ।
ಮುಕ್ತೋ ಜ್ಞಾತಿರಿತಿ ಜ್ಞಾತ್ವಾ ಕಾ ತ್ವರಾ ಮರಣೇ ಪುನಃ ॥೨೮॥

ತಾರೆಗೆ ಒರಟುಮಾತುಗಳನ್ನು ಆಡಿ ಗುಹಾಮುಖದಿಂದ ಹೊರಗೆ ಬಂದು ಮಾಲ್ಯವಾನ್ ಪರ್ವತದ ಸಮೀಪದಲ್ಲಿದ್ದ ಸುಗ್ರೀವನನ್ನು ಕುರಿತು ಅನೇಕ ಬಾರಿ ನೀನು ಹಿಂದೆ ನನ್ನಿಂದ ನಿರ್ಜಿತನಾಗಿದ್ದೀಯೆ. ಜೀವಿತಪ್ರಿಯನಾದ ನಿನ್ನನ್ನು ಬಂಧು ಎಂದು ತಿಳಿದು ಬಿಟ್ಟಿದ್ದೇನೆ. ಮರಣವನ್ನು ಹೊಂದಲು ಪುನಃ ಏಕೆ ತ್ವರೆಮಾಡುತ್ತಿದ್ದೀಯೆ ಎಂದು ಕೇಳಿದನು.

ಮಾರ್ಕಂಡೇಯಃ

ಇತ್ಯುಕ್ತಃ ಪ್ರಾಹ ಸುಗ್ರೀವೋ ಭ್ರಾತರಂ ಹೇತುಮದ್ವಚಃ ।
ಪ್ರಾಪ್ತಕಾಲಮಮಿತ್ರಘ್ನೋ ರಾಮಂ ಸಂಬೋಧಯನ್ನಿವ ॥೨೯॥

ಮಾರ್ಕಂಡೇಯರು– ಹೀಗೆ ಹೇಳಲ್ಪಟ್ಟ ಶತ್ರುನಾಶನನಾದ ಸುಗ್ರೀವನು ರಾಮನನ್ನು ಸಂಬೋಧಿಸುವಂತೆ ಆ ಕಾಲಕ್ಕೆ ಉಚಿತವಾದ ಯುಕ್ತಿಯುಕ್ತವಾದ ಮಾತುಗಳನ್ನು ಅಣ್ಣನಿಗೆ ಹೇಳಿದನು.

ಹೇತುಮದ್ವಚನಂ ಭ್ರಾತ್ರೇ ಪ್ರೋವಾಚೇದಂ ಮಹಾತ್ಮನೇ ।
ಹೃತರಾಜ್ಯಸ್ಯ ಮೇ ರಾಜನ್‌ಹೃತದಾರಸ್ಯ ಚ ತ್ವಯಾ ।
ಕಿಂ ಮೇ ಜೀವಿತಸಾಮರ್ಥ್ಯಮಿತಿ ವಿದ್ಧಿ ಸಮಾಗತಮ್ ॥೩೦॥

ನಿನ್ನಿಂದ ರಾಜ್ಯವನ್ನೂ ಮತ್ತು ಪತ್ನಿಯನ್ನೂ ಕಳೆದುಕೊಂಡಿರುವ ನನಗೆ ಜೀವನದಲ್ಲಿ ಏನು ಪ್ರಯೋಜನ ಎಂದು ನಾನು ಬಂದಿದ್ದೇನೆಂದು ತಿಳಿ ಎಂದು ಹೇಳಿದನು

ಮಾರ್ಕಂಡೇಯಃ

ಏವಮುಕ್ತ್ವಾ ಬಹುವಿಧಂ ತತಸ್ತೌ ಸನ್ನಿಪೇತತುಃ ।
ಸಮರೇ ವಾಲಿಸುಗ್ರೀವೌ ಶಾಲತಾಲಶಿಲಾಯುಧೌ ॥೩೧॥

ಮಾರ್ಕಂಡೇಯರು– ಹೀಗೆ ಬಹುವಿಧವಾಗಿ ಮಾತನಾಡಿ ವಾಲಿಸುಗ್ರೀವರು ಶಾಲ-ತಾಲ-ಶಿಲೆಗಳನ್ನು ಆಯುಧವನ್ನಾಗಿ ಹಿಡಿದು ಯುದ್ಧದಲ್ಲಿ ಒಬ್ಬರ ಮೇಲೆ ಒಬ್ಬರು ಎರಗಿದರು.

ಉಭೌ ಜಘ್ನತುರನ್ಯೋನ್ಯಮುಭೌ ಭೂಮೌ ನಿಪೇತತುಃ ।
ಉಭೌ ವವಲ್ಗತುಶ್ಚಿತ್ರಂ ಮುಷ್ಟಿಭಿಶ್ಚ ನಿಜಘ್ನತುಃ ॥೩೨॥

ಇಬ್ಬರೂ ಪರಸ್ಪರವಾಗಿ ಹೊಡೆದರು. ಇಬ್ಬರೂ ಭೂಮಿಯ ಮೇಲೆ ಬಿದ್ದರು. ಇಬ್ಬರೂ ವಿಚಿತ್ರವಾಗಿ ಮಾತನಾಡಿದರು ಮತ್ತು ಇಬ್ಬರೂ ಮುಷ್ಟಿಗಳಿಂದ ಗುದ್ದಿದರು.

ಉಭೌ ರುಧಿರಸಂಸಿಕ್ತೌ ನಖದಂತಪರಿಕ್ಷತೌ।
ಶುಶುಭಾತೇ ತದಾ ವೀರೌ ಪುಷ್ಪಿತಾವಿವ ಕಿಂಶುಕೌ ॥೩೩॥

ವೀರರಾದ ಅವರಿಬ್ಬರೂ ನಖದಂತಗಳಿಂದ ಗಾಯಗಳನ್ನು ಹೊಂದಿ ರಕ್ತವನ್ನು ಸುರಿಸುತ್ತಾ ಅರಳಿದ ಮುತ್ತುಗದ ಮರದಂತೆ ಶೋಭಿಸಿದರು.

ನ ವಿಶೇಷಸ್ತಯೋರ್ಯುದ್ಧೇ ಯದಾ ಕಶ್ಚನ ದೃಶ್ಯತೇ ।
ಸುಗ್ರೀವಸ್ಯ ತದಾ ಮಾಲಾಂ ಹನುಮಾನ್ ಕಂಠ ಆಸಜತ್ ॥೩೪॥

ಯುದ್ಧದಲ್ಲಿ ಅವರಿಬ್ಬರ ಮಧ್ಯದಲ್ಲಿ ಯಾವ ವಿಶೇಷವೂ ಕಾಣದಿದ್ದಾಗ ಹನುಮಂತನು ಸುಗ್ರೀವನ ಕೊರಳಿನಲ್ಲಿ ಒಂದು ಮಾಲೆಯನ್ನು ಹಾಕಿದನು.

ಸ ಮಾಲಯಾ ತದಾ ವೀರಃ ಶುಶುಭೇ ಕಂಠಸಕ್ತಯಾ ।
ಶ್ರೀಮಾನಿವ ಮಹಾಶೈಲೋ ಮಲಯೋ ಮೇಘಮಾಲಯಾ ॥೩೫॥

ಕಂಠಗತವಾದ ಆ ಮಾಲೆಯಿಂದ ಕೂಡಿದ ವೀರನಾದ ಸುಗ್ರೀವನು ಮೇಘಮಾಲೆಯಿಂದ ಕೂಡಿದ ಕಾಂತಿಯುಕ್ತವಾದ ಮಲಯ ಮಹಾಪರ್ವತದಂತೆ ಶೋಭಿಸಿದನು.

ಕೃತಚಿಹ್ನಂ ತು ಸುಗ್ರೀವಂ ರಾಮೋ ದೃಷ್ಟ್ವಾ ಮಹಾಧನುಃ ।
ವಿಚಕರ್ಷ ಧನುಃ ಶ್ರೇಷ್ಠಂ ವಾಲಿಮುದ್ದಿಶ್ಯ ಲಕ್ಷ್ಯವತ್ ॥೩೬॥

ಸುಗ್ರೀವನಿಗೆ ಹೀಗೆ ಗುರುತಿನ ಚಿಹ್ನೆಯನ್ನು ಮಾಡಿದುದನ್ನು ನೋಡಿದ ರಾಮನು ವಾಲಿಯನ್ನು ಲಕ್ಷವನ್ನಾಗಿ ಮಾಡಿಕೊಂಡು ತನ್ನ ಶ್ರೇಷ್ಠವಾದ ಧನುಸ್ಸನ್ನು ಎಳೆದನು.

ವಿಸ್ಫಾರಸ್ತಸ್ಯ ಧನುಷೋ ವಜ್ರಘೋಷ ಇವಾಬಭೌ ।
ವಿತತ್ರಾಸ ತದಾ ವಾಲೀ ಶರೇಣಾಭಿಹತೋ ಹೃದಿ ॥೩೭॥

ಆ ಧನುಸ್ಸಿನ ಹೆದೆಯ ನಾದವೇ ವಜ್ರಘೋಷದಂತೆ ಶೋಭಿಸಿತು. ಅದರಿಂದಲೇ ಹೆದರಿದ ವಾಲಿಯು ರಾಮನಿಂದ ಬಾಣದಿಂದ ಎದೆಯಲ್ಲಿ ಹೊಡೆಯಲ್ಪಟ್ಟನು.

ಸ ಭಿನ್ನಹೃದಯೋ ವಾಲೀ ವಕ್ತ್ರಾಚ್ಛೋಣಿತಮುದ್ವಮನ್ ।
ದದರ್ಶಾವಸ್ಥಿತಂ ರಾಮಂ ತತಃ ಸೌಮಿತ್ರಿಣಾ ಸಹ ॥೩೮॥

ಹೃದಯಭೇದನವನ್ನು ಹೊಂದಿದ ವಾಲಿಯು ಬಾಯಿಯಿಂದ ರಕ್ತವನ್ನು ಕಾರುತ್ತಾ ಎದುರಿಗೆ ನಿಂತ ಲಕ್ಷ್ಮಣ ಸಹಿತನಾದ ರಾಮನನ್ನು ನೋಡಿದನು.

ಗರ್ಹಯಿತ್ವಾ ಸ ಕಾಕುತ್ಸ್ಥಂ ಪಪಾತ ಭುವಿ ಮೂರ್ಚ್ಛಿತಃ ।
ತಾರಾ ದದರ್ಶ ತಂ ಭೂಮೌ ತಾರಾಪತಿಸಮೌಜಸಮ್ ॥೩೯॥

ಅವನು ರಾಮನನ್ನು ನಿಂದಿಸಿ ಮೂರ್ಛಿತನಾಗಿ ಭೂಮಿಯ ಮೇಲೆ ಬಿದ್ದನು. ತಾರೆಯು ಚಂದ್ರನಂತಹ ಪರಾಕ್ರಮವನ್ನು ಹೊಂದಿದ್ದ ಅವನು ಭೂಮಿಯಲ್ಲಿ ಬಿದ್ದಿರುವುದನ್ನು ನೋಡಿದಳು.

ಹತೇ ವಾಲೀನಿ ಸುಗ್ರೀವಃ ಕಿಷ್ಕಿಂಧಾಂ ಪ್ರತ್ಯಪದ್ಯತ ।
ತಾಂ ಚ ತಾರಾಪತಿಮುಖೀಂ ತಾರಾಂ ನಿಪತಿತೇಶ್ವರಾಮ್ ॥೪೦॥

ವಾಲಿಯು ಹತನಾಗುತ್ತಿರಲು ಸುಗ್ರೀವನು ಕಿಷ್ಕಿಂಧಾ ಪಟ್ಟಣವನ್ನೂ ಮತ್ತು ಪತಿಯನ್ನು ಕಳೆದುಕೊಂಡ ಚಂದ್ರಮುಖಿಯಾದ ತಾರೆಯನ್ನೂ ಪಡೆದನು.

ರಾಮಸ್ತು ಚತುರೋ ಮಾಸಾನ್‌ಪೃಷ್ಠೇ ಮಾಲ್ಯವತಃ ಶುಭೇ ।
ನಿವಾಸಮಕರೋದ್ ಧೀಮಾನ್ ಸುಗ್ರೀವೇಣಾಭ್ಯುಪಸ್ಥಿತಃ ॥೪೧॥

ಮೇಧಾವಿಯಾದ ರಾಮನು ಪವಿತ್ರವಾದ ಮಾಲ್ಯವಾನ್ ಪರ್ವತದಲ್ಲಿ ನಾಲ್ಕುತಿಂಗಳುಗಳ ಕಾಲ ಸುಗ್ರೀವನಿಂದ ಸೇವಿತನಾಗಿ ವಾಸವನ್ನು ಮಾಡಿದನು.

ರಾವಣೋಽಪಿ ಪುರೀಂ ಗತ್ವಾ ಲಂಕಾಂ ಕಾಮಬಲಾತ್ಕೃತಃ ।
ಸೀತಾಂ ನಿವೇಶಯಾಮಾಸ ಭವನೇ ನಂದನೋಪಮೇ ॥೪೨॥

ರಾವಣನೂ ಕೂಡ ತನ್ನ ಲಂಕಾಪಟ್ಟಣಕ್ಕೆ ಹೋಗಿ ಕಾಮವಶನಾಗಿ ಸೀತೆಯನ್ನು ನಂದನದಂತಿದ್ದ ಒಂದು ಭವನದಲ್ಲಿ ಇರಿಸಿದನು.

ಅಶೋಕವನಿಕಾಭ್ಯಾಶೇ ತಾಪಸಾಶ್ರಮಸನ್ನಿಭೇ ।
ಭರ್ತೃಸ್ಮರಣತನ್ವಂಗೀ ತಾಪಸೀವೇಷಧಾರಿಣೀ ॥೪೩॥

ಉಪವಾಸತಪಃಶೀಲಾ ತತ್ರಾಸ ಪೃಥುಲೇಕ್ಷಣಾ ।
ಉವಾಸ ದುಃಖಿವಸತಿಂ ಫಲಮೂಲಕೃತಾಶನಾ ॥೪೪॥

ತಾಪಸಾಶ್ರಮದಂತೆ ತೋರುವ ಅಶೋಕವನದ ಸಮೀಪದಲ್ಲಿ ತಾಪಸವೇಷ ಧಾರಿಣಿಯಾಗಿ ಭರ್ತೃಸ್ಮರಣದಿಂದ ಕೃಶಳಾಗಿ ವಿಶಾಲನೇತ್ರೆಯಾದ ಸೀತೆಯು ಉಪವಾಸದಲ್ಲಿ ಮತ್ತು ತಪಸ್ಸಿನಲ್ಲಿ ನಿರತಳಾಗಿ ಅಲ್ಲಿ ವಾಸಮಾಡಿದಳು (ಹೆದರಿದಳು). ಅವಳು ಫಲಮೂಲಗಳನ್ನು ತನ್ನ ಆಹಾರವಾಗಿ ಮಾಡಿಕೊಂಡು ಅಲ್ಲಿ ದುಃಖವಾಸವನ್ನು ಕಳೆದಳು.

ದಿದೇಶ ರಾಕ್ಷಸೀಸ್ತತ್ರ ರಕ್ಷಣೇ ರಾಕ್ಷಸಾಧಿಪಃ ।
ಪ್ರಾಸಾಸಿಶೂಲಪರಶುಮುದ್ಗರಾಲಾತಧಾರಿಣೀಃ ॥೪೫॥

ರಾಕ್ಷಸಾಧಿಪನಾದ ರಾವಣನು ಸೀತೆಯ ರಕ್ಷಣೆಗಾಗಿ ಪ್ರಾಸ, ಅಸಿ, ಶೂಲ, ಪರಶು, ಮುದ್ಗರ, ಅಲಾತ ಮೊದಲಾದ ಆಯುಧಗಳನ್ನು ಹಿಡಿದ ರಾಕ್ಷಸಿಯರನ್ನು ಅವಳ ರಕ್ಷಣೆಗಾಗಿ ನೇಮಿಸಿದನು.

ದ್ವ್ಯಕ್ಷೀಂ ತ್ರ್ಯಕ್ಷೀಂ ಲಲಾಟಾಕ್ಷೀಂ ದೀರ್ಘಜಿಹ್ವಾಮಜಿಹ್ವಿಕಾಮ್ ।
ತ್ರಿಸ್ತನೀಮೇಕಪಾದಾಂ ಚ ತ್ರಿಜಟಾಮೇಕಲೋಚನಾಮ್ ॥೪೬॥

ಏತಾಶ್ಚಾನ್ಯಾಶ್ಚ ದೀಪ್ತಾಕ್ಷ್ಯಃ ಕರಭೋತ್ಕರಮೂರ್ದ್ಧಜಾಃ ।
ಪರಿವಾರ್ಯಾಸತೇ ಸೀತಾಂ ದಿವಾರಾತ್ರಮತಂದ್ರಿತಾಃ ॥೪೭॥

ಎರಡುಕಣ್ಣುಳ್ಳವಳು, ಮೂರುಕಣ್ಣುಳ್ಳವಳು, ಹಣೆಯಲ್ಲಿ ಕಣ್ಣುಳ್ಳವಳು, ದೀರ್ಘ ಜಿಹ್ವೆಯುಳ್ಳವಳು, ಜಿಹ್ವೆ ಇಲ್ಲದವಳು, ಮೂರು ಸ್ತನವುಳ್ಳವಳು, ಒಂದು ಪಾದವುಳ್ಳವಳು, ಮೂರು ಜಟೆಯುಳ್ಳವಳು, ಒಂದುಕಣ್ಣುಳ್ಳವಳು ಇವರನ್ನು ಮತ್ತು ಇಂತಹ ಇನ್ನೂ ಅನೇಕ ಹ್ರಸ್ವವಾದ ಸ್ಥೂಲವಾದ ಕೇಶವನ್ನು ಹೊಂದಿದ ಅನೇಕ ದೀಪ್ತಾಕ್ಷಿಯರು ಹಗಲೂ ಮತ್ತು ರಾತ್ರಿಯೂ ಆಲಸ್ಯವಿಲ್ಲದೇ ಸೀತೆಯನ್ನು ಸುತ್ತುವರಿದು ಇರುತ್ತಿದ್ದರು.

ತಾಸ್ತು ತಾಮಾಯತಾಪಾಂಗೀಂ ಪಿಶಾಚ್ಯೋ ದಾರುಣಸ್ವರಾಃ ।
ತರ್ಜಯಂತಿ ಸದಾ ರೌದ್ರಾಃ ಪರುಷವ್ಯಂಜನಸ್ವರಾಃ ॥೪೮॥

ದಾರುಣಸ್ವರದ ಪಿಶಾಚಿಗಳಂತಿದ್ದ ಒರಟಾದ ಸ್ವರದಿಂದ ಕೂಡಿದ ಭಯಂಕರರಾದ ಆ ರಾಕ್ಷಸಿಯರು ಯಾವಾಗಲೂ ವಿಶಾಲನೇತ್ರೆಯಾದ ಸೀತೆಯನ್ನು ಹೆದರಿಸುತ್ತಿದ್ದರು.

ಖಾದಾಮ ಪಾಟಯಾಮೈನಾಂ ತಿಲಶಃ ಪ್ರವಿಭಜ್ಯ ತಾಮ್ ।
ಯೇಯಂ ಭರ್ತಾರಮಸ್ಮಾಕಮವಮನ್ಯೇಹ ಜೀವತಿ ॥೪೯॥

ಯಾವ ಇವಳು ನಮ್ಮ ಸ್ವಾಮಿಯನ್ನು ಅವಮಾನ ಮಾಡಿ ಇಲ್ಲಿ ಜೀವಿಸುತ್ತಿದ್ದಾಳೆಯೋ ಇವಳನ್ನು ಎಳ್ಳುಕಾಳಿನಷ್ಟು ಸಣ್ಣದಾಗಿ ಭಾಗಮಾಡಿ ಕತ್ತರಿಸಿ ತಿನ್ನೋಣ (ಎಂದು ಹೆದರಿಸುತ್ತಿದ್ದರು).

ಮಾರ್ಕಂಡೇಯಃ

ಇತ್ಯೇವಂ ಪರಿಭರ್ತ್ಸಂತೀಸ್ತ್ರಸ್ಯಮಾನಾ ಪುನಃ ಪುನಃ ।
ಭರ್ತೃಶೋಕಸಮಾವಿಷ್ಟಾ ನಿಃಶ್ವಸ್ಯೇದಮುವಾಚ ತಾಃ ॥೫೦॥

ಮಾರ್ಕಂಡೇಯ– ಹೀಗೆ ಅವರಿಂದ ಪುನಃ ಪುನಃ ಹೆದರಿಸಲ್ಪಡುತ್ತಿದ್ದ ಸೀತೆಯು ಭರ್ತೃಶೋಕದಿಂದ ಕೂಡಿದವಳಾಗಿ ನಿಟ್ಟುಸಿರನ್ನು ಬಿಟ್ಟು ತನ್ನನ್ನು ಹೆದರಿಸುವ ಆ ರಾಕ್ಷಸಿಯರನ್ನು ಕುರಿತು ಹೀಗೆ ಮಾತನಾಡಿದಳು.

ಆರ್ಯಾಃ ಖಾದತ ಮಾಂ ಶೀಘ್ರಂ ನ ಮೇ ಲೋಭೋಽಸ್ತಿ ಜೀವಿತೇ ।
ವಿನಾ ತಂ ಪುಂಡರೀಕಾಕ್ಷಂ ನೀಲಕುಂಚಿತಮೂರ್ಧಜಮ್ ॥೫೧॥

ಆರ್ಯೆಯರೇ, ನನ್ನನ್ನು ಬೇಗ ತಿನ್ನಿ. ಕಪ್ಪಾದ ಗುಂಗುರು ಕೂದಲನ್ನುಳ್ಳ ಆ ಪುಂಡರೀಕಾಕ್ಷನನ್ನು ಬಿಟ್ಟು ನಾನು ಬದುಕುವ ಆಸೆಯನ್ನು ಹೊಂದಿಲ್ಲ.

ಅಪ್ಯೇವಾಹಂ ನಿರಾಹಾರಾ ಜೀವಿತಪ್ರಿಯವರ್ಜಿತಾ ।
ಶೋಷಯಿಷ್ಯಾಮಿ ಗಾತ್ರಾಣಿ ವ್ಯಾಲೀ ತಾಳಗತಾ ಯಥಾ ॥೫೨॥

ಅಥವಾ ನಾನು ನನ್ನ ಪ್ರಾಣಪ್ರಿಯನಿಂದ ವರ್ಜಿತಳಾದುದರಿಂದ ನಿರಾಹಾರಳಾಗಿ ತಾಳೆವೃಕ್ಷದಲ್ಲಿರುವ ಸರ್ಪದಂತೆ ನನ್ನ ಶರೀರವನ್ನು ಶೋಷಿಸುವೆನು.

ನ ತ್ವನ್ಯಮಭಿಗಚ್ಛೇಯಂ ಪುಮಾಂಸಂ ರಾಘವಾದೃತೇ ।
ಇತಿ ಜಾನೀತ ಸತ್ಯಂ ಮೇ ಕ್ರಿಯತಾಂ ಯದನಂತರಮ್ ॥೫೩॥

ರಾಮನನ್ನು ಬಿಟ್ಟು ಇನ್ನೊಬ್ಬ ಪುರುಷನನ್ನು ಮನಸ್ಸಿನಲ್ಲಿಯೂ ಯೋಚಿಸುವುದಿಲ್ಲ ಎಂದು ತಿಳಿಯಿರಿ.' ಇದು ನನ್ನ ಸತ್ಯ. ನಿಮಗೆ ಬೇಕಾದಂತೆ ಮಾಡಿ (ಎಂದು ಹೇಳಿದಳು).

ಮಾರ್ಕಂಡೇಯಃ

ತಸ್ಯಾಸ್ತದ್ವಚನಂ ಶ್ರುತ್ವಾ ರಾಕ್ಷಸ್ಯಸ್ತಾಃ ಖರಸ್ವನಾಃ ।
ಆಖ್ಯಾತುಂ ರಾಕ್ಷಸೇಂದ್ರಾಯ ಜಗ್ಮುಸ್ತತ್ಸರ್ವಮಾದಿತಃ ॥೫೪॥

ಗತಾಸು ತಾಸು ಸರ್ವಾಸು ತ್ರಿಜಟಾ ನಾಮ ರಾಕ್ಷಸೀ ।
ಸಾಂತ್ವಯಾಮಾಸ ವೈದೇಹೀಂ ಧರ್ಮಜ್ಞಾ ಪ್ರಿಯವಾದಿನೀ ॥೫೫॥

ಮಾರ್ಕಂಡೇಯ– ಅವಳ ಆ ಮಾತುಗಳನ್ನು ಕೇಳಿ ಒರಟಾದ ಧ್ವನಿಯುಳ್ಳ ಆ ರಾಕ್ಷಸಿಯರು ರಾಕ್ಷಸೇಂದ್ರಿಯನಾದ ಆ ರಾವಣನಿಗೆ ನಡೆದ ಎಲ್ಲಾ ವಿಷಯವನ್ನೂ ಮೊದಲಿನಿಂದ ನಿವೇದಿಸಲು ಅವನ ಬಳಿಗೆ ಹೋದರು. ಅವರೆಲ್ಲರೂ ಹೊರಟು ಹೋದ ಮೇಲೆ ತ್ರಿಜಟೆ ಎಂಬ ಧರ್ಮಜ್ಞಳೂ, ಪ್ರಿಯವಾದಿನಿಯೂ ಆದ ರಾಕ್ಷಸಿಯು ಸೀತೆಯನ್ನು ಸಮಾಧಾನಪಡಿಸಿದಳು.

ಸೀತೇ ವಕ್ಷ್ಯಾಮಿ ತೇ ಕಿಂಚಿದ್ ವಿಶ್ವಾಸಂ ಕುರು ಮೇ ಸಖಿ ।
ಭಯಂ ತ್ವಂ ತ್ಯಜ ವಾಮೋರು ಶೃಣು ಚೇದಂ ವಚೋ ಮಮ ॥೫೬॥

ಸೀತೆಯೇ, ಒಂದು ವಿಷಯವನ್ನು ಹೇಳುವೆನು. ಸಖಿಯೇ, ನನ್ನಲ್ಲಿ ವಿಶ್ವಾಸವನ್ನು ಮಾಡು. ಸುಂದರಿಯೇ, ಭಯವನ್ನು ಬಿಡು. ನನ್ನ ಈ ಮಾತನ್ನು ಕೇಳು.

ಅವಿಂಧ್ಯೋ ನಾಮ ಮೇಧಾವೀ ವೃದ್ಧೋ ರಾಕ್ಷಸಪುಂಗವಃ ।
ಸ ರಾಮಸ್ಯ ಹಿತಾನ್ವೇಷೀ ತ್ವದರ್ಥೇ ಹಿ ಸ ಮಾऽವದತ್ ।
ಸೀತಾ ಮದ್ವಚನಾದ್ ವಾಚ್ಯಾ ಸಮಾಶ್ವಾಸ್ಯ ಪ್ರಸಾದ್ಯ ಚ ॥೫೭॥

ಅವಿಂಧ್ಯನೆಂಬ ಮೇಧಾವಿಯೂ, ವೃದ್ಧನೂ ಆದ ಒಬ್ಬ ರಾಕ್ಷಸಶ್ರೇಷ್ಠನಿದ್ದಾನೆ. ಅವನು ರಾಮನ ಹಿತವನ್ನು ಬಯಸುವವನು. ಅವನು ನಿನ್ನ ಸಲುವಾಗಿ ನನ್ನನ್ನು ಕುರಿತು ಸೀತೆಯನ್ನು ಸಮಾಧಾನಪಡಿಸಿ ಪ್ರಸನ್ನೀಕರಿಸಿಕೊಂಡು ನಾನು ಹೇಳಿದೆನೆಂದು ಸೀತೆಗೆ ತಿಳಿಸು ಎಂದು ನನಗೆ ಹೇಳಿದ್ದಾನೆ.

ಭರ್ತಾ ತೇ ಕುಶಲೀ ರಾಮೋ ಲಕ್ಷ್ಮಣಾನುಗತೋ ಬಲೀ ॥೫೮॥

ನಿನ್ನ ಪತಿಯಾದ ರಾಮನು ಲಕ್ಷ್ಮಣನಿಂದ ಹಿಂಬಾಲಿಸಲ್ಪಟ್ಟವನಾಗಿ ಬಲಿಷ್ಠನಾಗಿ ಕುಶಲದಿಂದಿದ್ದಾನೆ.

ಸಖ್ಯಂ ವಾನರರಾಜೇನ ಶಕ್ರಪ್ರತಿಮತೇಜಸಾ ।
ಕೃತವಾನ್ ರಾಘವಃ ಶ್ರೀಮಾಂಸ್ತ್ವದರ್ಥೇ ಚ ಸಮುದ್ಯತಃ ॥೫೯॥

ಇಂದ್ರನಿಗೆ ಸಮಾನವಾದ ಪರಾಕ್ರಮವುಳ್ಳ ವಾನರರಾಜನಾದ ಸುಗ್ರೀವನ ಸಖ್ಯವನ್ನು ಪಡೆದಿದ್ದಾನೆ. ಕಾಂತಿಯುಕ್ತನಾದ ರಾಘವನು ನಿನ್ನನ್ನು ಪಡೆಯುವ ಸಲುವಾಗಿ ಉದ್ಯುಕ್ತನಾಗಿದ್ದಾನೆ.

ಮಾ ಚ ತೇಽಸ್ತು ಭಯಂ ಭೀರು ರಾವಣಾಲ್ಲೋಕಗರ್ಹಿತಾತ್ ।
ನಳಕೂಬರಶಾಪೇನ ರಕ್ಷಿತಾ ಹ್ಯಸಿ ನಂದಿನಿ ॥೬೦॥

ಎಲೈ ಭೀರುವೇ, ಲೋಕಗರ್ಹಿತನಾದ ರಾವಣನ ದೆಸೆಯಿಂದ ನೀನು ಭಯಪಡಬೇಡ. ಎಲೌ ನಂದಿನಿಯೇ, ನೀನು ನಳಕೂಬರರು ರಾವಣನಿಗೆ ಕೊಟ್ಟ ಶಾಪದಿಂದ ರಕ್ಷಿಸಲ್ಪಟ್ಟಿದ್ದೀಯೆ.

ಶಪ್ತೋ ಹ್ಯೇಷ ಪುರಾ ಪಾಪೋ ವಧೂಂ ರಂಭಾಂ ಪರಾಮೃಶನ್ ।
ನ ಶಕ್ನೋತ್ಯವಶಾಂ ನಾರೀಮುಪೈತುಮಜಿತೇಂದ್ರಿಯಃ ॥೬೧॥

ಹಿಂದೆ ಈ ಪಾಪಿಯು ರಂಭೆಯ ಮೇಲೆ ಕೈಮಾಡಲು ಹೋದಾಗ ಅಜಿತೇಂದ್ರಿಯನಾದ ಇವನು ಇಷ್ಟವಿಲ್ಲದ ಯಾವ ವನಿತೆಯ ಮೇಲೂ ಕೈಮಾಡಲು ಸಾಧ್ಯವಿಲ್ಲವೆಂದು ಶಾಪವನ್ನು ಪಡೆದಿದ್ದಾನೆ.

ಕ್ಷಿಪ್ರಮೇಷ್ಯತಿ ತೇ ಭರ್ತಾ ಸುಗ್ರೀವೇಣಾಭಿರಕ್ಷಿತಃ ।
ಸೌಮಿತ್ರಿಸಹಿತೋ ಧೀಮಾಂಸ್ತ್ವಾಂ ಚೇತೋ ಮೋಕ್ಷಯಿಷ್ಯತಿ ॥೬೨॥

ನಿನ್ನ ಪತಿಯಾದ ಮೇಧಾವಿಯಾದ ರಾಮನು ಸುಗ್ರೀವನಿಂದ ರಕ್ಷಿತನಾಗಿ ಲಕ್ಷ್ಮಣನ ಜೊತೆಯಲ್ಲಿ ಇಲ್ಲಿಗೆ ಬೇಗ ಬಂದು ನಿನ್ನನ್ನು ಇಲ್ಲಿಂದ ಬಿಡುಗಡೆಗೊಳಿಸುವನು (ಎಂದು ನಿನಗೆ ತಿಳಿಸುವಂತೆ ಅವಿಂಧ್ಯನು ನನಗೆ ಹೇಳಿದ್ದಾನೆ).

ತ್ರಿಜಟಾ

ಸ್ವಪ್ನಾ ಹಿ ಸುಮಹಾಘೋರಾ ದೃಷ್ಟಾ ಮೇಽನಿಷ್ಟದರ್ಶನಾಃ ।
ವಿನಾಶಾಯಾಸ್ಯ ದುರ್ಬುದ್ಧೇಃ ಪೌಲಸ್ತ್ಯಕುಲಘಾತಿನಃ ॥೬೩॥

ತ್ರಿಜಟಾ– ನನಗೆ ಪೌಲಸ್ತ್ಯಕುಲಘಾತಿಯಾದ ದುರ್ಬುದ್ಧಿಯಾದ ರಾವಣನ ವಿನಾಶವನ್ನು ಸೂಚಿಸುವ ಮಹಾಘೋರವಾದ ಅನೇಕ ಸ್ವಪ್ನಗಳು ಕಂಡಿವೆ.

ದಾರುಣೋ ಹ್ಯೇಷ ದುಷ್ಪಾತ್ಮಾ ಕ್ಷುದ್ರಕರ್ಮಾ ನಿಶಾಚರಃ ।
ಸ್ವಭಾವಾಚ್ಚೀಲದೋಷೇಣ ಸರ್ವೇಷಾಂ ಭಯವರ್ಧನಃ ॥೬೪॥

ದುಷ್ಪಾತ್ಮನೂ, ನೀಚಕರ್ಮವನ್ನು ಮಾಡುವವನೂ, ಭಯಂಕರನೂ ಆದ ಈ ರಾಕ್ಷಸನು ತನ್ನ ಸ್ವಾಭಾವಿಕ ನಡತೆಯಿಂದಲೇ ಎಲ್ಲರಿಗೂ ಭಯವನ್ನು ಉಂಟು ಮಾಡುವವನಾಗಿದ್ದಾನೆ.

ಸ್ಪರ್ಧತೇ ಸರ್ವದೇವೈರ್ಯಃ ಕಾಲೋಪಹತಚೇತನಃ ।
ಮಯಾ ವಿನಾಶಲಿಂಗಾನಿ ಸ್ವಪ್ನೇ ದೃಷ್ಟಾನಿ ತಸ್ಯ ವೈ ॥೬೫॥

ಕಾಲದಿಂದ ನಷ್ಟಚೇತನನಾಗಿ (ವಿವೇಕವನ್ನು ಕಳೆದುಕೊಂಡು) ದೇವತೆಗಳ ಜೊತೆಯಲ್ಲಿ ಸ್ಪರ್ಧಿಸುತ್ತಿದ್ದಾನೆ. ನಾನು ಸ್ವಪ್ನದಲ್ಲಿ ಅವನ ವಿನಾಶಸೂಚಕವಾದ ಅನೇಕ ಲಿಂಗಗಳನ್ನು ನೋಡಿದೆನು.

ತೈಲಾಭಿಷಿಕ್ತೋ ವಿಕಚೋ ಮಜ್ಜನ್ ಪಂಕೇ ದಶಾನನಃ ।
ಅಸಕೃತ್ ಖರಯುಕ್ತೇ ತು ರಥೇ ನೃತ್ಯನ್ನಿವ ಸ್ಥಿತಃ ॥೬೬॥

ದೇಹಕ್ಕೆ ತೈಲವನ್ನು ಅಭಿಷೇಕ ಮಾಡಿಕೊಂಡು ತಲೆಕೂದಲುಗಳನ್ನು ಕೆದರಿ ಕೆಸರಿನಲ್ಲಿ ಮುಳುಗುತ್ತಾ ಕತ್ತೆಗಳು ಹೂಡಿದ ರಥದಲ್ಲಿ ನರ್ತನ ಮಾಡುವವನಂತೆ ಇರುವ ರಾವಣನನ್ನು ನಾನು ಅನೇಕ ಬಾರಿ ನೋಡಿದ್ದೇನೆ.

ಕುಂಭಕರ್ಣಾದಯಶ್ಚೇಮೇ ನಗ್ನಾಃ ಪತಿತಮೂರ್ಧಜಾಃ ।
ಗಚ್ಛಂತಿ ದಕ್ಷಿಣಾಮಾಶಾಂ ರಕ್ತಮಾಲ್ಯಾನುಲೇಪನಾಃ ॥೬೭॥

ಕುಂಭಕರ್ಣ ಮೊದಲಾದ ಇವರೆಲ್ಲರೂ ನಗ್ನರಾಗಿ ತಲೆಕೂದಲುಗಳೆಲ್ಲಾ ಉದುರಿ ರಕ್ತಮಾಲೆಗಳನ್ನು ಧರಿಸಿ ರಕ್ತಚಂದನವನ್ನು ಲೇಪಿಸಿಕೊಂಡು ದಕ್ಷಿಣ ದಿಕ್ಕಿಗೆ ಹೋಗುತ್ತಾರೆ.

ಶ್ವೇತಾತಪತ್ರಃ ಸೋಷ್ಣೀಷಃ ಶುಕ್ಲಮಾಲ್ಯಾನುಲೇಪನಃ ।
ಶ್ವೇತಪರ್ವತಮಾರೂಢ ಏಕ ಏವ ವಿಭೀಷಣಃ ॥೬೮॥

ವಿಭೀಷಣನೊಬ್ಬನೇ ಬಿಳಿಯ ಛತ್ರಿಯನ್ನು ಹಿಡಿದು ತಲೆಗೆ ರುಮಾಲನ್ನು ಕಟ್ಟಿಕೊಂಡು ಬಿಳಿಯ ಹೂಮಾಲೆಗಳನ್ನು ಮತ್ತು ಅನುಲೇಪನವನ್ನು ಹೊಂದಿ ಶ್ವೇತ ಪರ್ವತವನ್ನು ಹತ್ತಿ ಒಬ್ಬನೇ ಇರುತ್ತಾನೆ.

ಸಚಿವಾಶ್ಚಾಸ್ಯ ಚತ್ವಾರಃ ಶುಕ್ಲಮಾಲ್ಯಾನುಲೇಪನಾಃ ।
ರಾಮಸ್ಯಾಸ್ತ್ರೇಣ ಪೃಥಿವೀ ಪರಿಕ್ಷಿಪ್ತಾ ಸಸಾಗರಾ ।
ಯಶಸಾ ಪೃಥಿವೀಂ ಕೃತ್ಸ್ನಾಂ ಪೂರಯಿಷ್ಯತಿ ತೇ ಪತಿಃ ॥೬೯॥

ಅವನ ನಾಲ್ವರು ಸಚಿವರೂ ಬಿಳಿಯ ಹೂಮಾಲೆಗಳನ್ನೂ ಮತ್ತು ಅನುಲೇಪನಗಳನ್ನೂ ಧರಿಸಿರುತ್ತಾರೆ. ರಾಮನ ಅಸ್ತ್ರದಿಂದ ಸಾಗರ ಸಹಿತವಾದ ಪೃಥಿವಿಯು ಎಲ್ಲವೂ ಅಧೀನವಾಗುತ್ತದೆ. ನಿನ್ನ ಪತಿಯು ತನ್ನ ಕೀರ್ತಿಯಿಂದ ಸಮಸ್ತ ಭೂಮಿಯನ್ನು ತುಂಬುತ್ತಾನೆ.

ಮೋಕ್ಷಿತಾ ತ್ವಾಂ ಭಯಾದಸ್ಮಾದ್ರಾಮಃ ಶತ್ರುನಿಷೂದನಃ ।
ಅಸ್ಥಿಸಂಚಯಮಾರೂಢೋ ಭುಂಜಾನೋ ಮಧುಪಾಯಸಮ್ ।
ಲಕ್ಷ್ಮಣಶ್ಚ ಮಯಾ ದೃಷ್ಟೋ ದಿಧಕ್ಷುಃ ಸರ್ವತೋ ದಿಶಮ್ ॥೭೦॥

ಶತ್ರುಸಂಹಾರಕನಾದ ರಾಮನು ನಿನ್ನನ್ನು ಈ ಭಯದಿಂದ ಪಾರುಮಾಡುವನು. ಅಸ್ಥಿಯ ರಾಶಿಯ ಮೇಲೆ ನಿಂತು ಮಧುಪಾಯಸವನ್ನು ತಿನ್ನುತ್ತಾ ಎಲ್ಲ ದಿಕ್ಕುಗಳನ್ನೂ ದಹಿಸುತ್ತಿರುವ ಲಕ್ಷ್ಮಣನನ್ನೂ ಸಹ ನಾನು ನೋಡಿದ್ದೇನೆ.

ರುದತೀ ರುಧಿರಾರ್ದ್ರಾಂಗೀ ವ್ಯಾಘ್ರೇಣ ಪರಿರಕ್ಷಿತಾ ।
ಅಸಕೃತ್ ತ್ವಂ ಮಯಾ ದೃಷ್ಟಾ ಗಚ್ಛಂತೀ ದಿಶಮುತ್ತರಾಮ್ ।
ಹರ್ಷಮೇಷ್ಯಸಿ ವೈದೇಹಿ ಕ್ಷಿಪ್ರಂ ಭರ್ತ್ರಾ ಸಮನ್ವಿತಾ ॥೭೧॥

ಅಳುತ್ತಾ ರಕ್ತದಿಂದ ಕೆಂಪಾದ ಶರೀರವುಳ್ಳವಳಾಗಿ ವ್ಯಾಘ್ರದಿಂದ ರಕ್ಷಿಸಲ್ಪಟ್ಟು ಉತ್ತರ ದಿಕ್ಕನ್ನು ಕುರಿತು ಪ್ರಯಾಣ ಮಾಡುವ ನಿನ್ನನ್ನು ನಾನು ಅನೇಕ ಬಾರಿ ನೋಡಿದ್ದೇನೆ. ವೈದೇಹಿಯೇ, ಪತಿಯಿಂದ ಸಮಾಗಮವನ್ನು ಹೊಂದಿ ನೀನು ಕ್ಷಿಪ್ರದಲ್ಲಿಯೇ ಸಂತೋಷವನ್ನು ಹೊಂದುವಿ.

ಮಾರ್ಕಂಡೇಯಃ

ಇತ್ಯೇತನ್ಮೃಗಶಾವಾಕ್ಷ್ಯೇ ತತ್‌ಶ್ರುತ್ವಾ ತ್ರಿಜಟಾವಚಃ ।
ಬಭೂವಾಶಾವತೀ ಬಾಲಾ ಪುನರ್ಭರ್ತೃಸಮಾಗಮೇ ॥೭೨॥

ಮಾರ್ಕಂಡೇಯ– ಮೃಗಶಾವಾಕ್ಷಿಯಾದ ಬಾಲೆಯಾದ ಸೀತೆಯು ತ್ರಿಜಟೆಯ ಮಾತುಗಳನ್ನು ಕೇಳಿ ಪುನಃ ಭರ್ತೃಸಮಾಗಮವನ್ನು ಹೊಂದುವ ವಿಷಯದಲ್ಲಿ ಆಸೆಯನ್ನು ಹೊಂದಿದವಳಾದಳು.

ಯಾವದಭ್ಯಾಗತಾ ರೌದ್ರಾಃ ಪಿಶಾಚ್ಯಸ್ತಾಃ ಸುದಾರುಣಾಃ ।
ದದೃಶುಸ್ತಾಂ ತ್ರಿಜಟಯಾ ಸಹಾಸೀನಾಂ ಯಥಾ ಪುರಾ ॥೭೩॥

ಆ ಭಯಂಕರರಾದ ದಾರುಣರಾದ ಪಿಶಾಚ್ಯೀಯರು ಪುನಃ ಹಿಂದಿರುಗಿ ಬರುವ ಹೊತ್ತಿಗೆ ಅವರು ಮೊದಲಿನಂತೆ ದೂರದಲ್ಲಿ ಕುಳಿತಿದ್ದ ತ್ರಿಜಟೆಯನ್ನೂ ಮತ್ತು ಅಲ್ಲಿಯೇ ದೂರದಲ್ಲಿದ್ದ ಸೀತೆಯನ್ನೂ ನೋಡಿದರು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂಸಂಹಿತಾಯಾಂ ವೈಯಾಸಿಕ್ಯಾಂ
ವನಪರ್ವಣಿ ಏಕೋನಸಪ್ತತ್ಯಧಿಕದ್ವಿಶತತಮೋऽಧ್ಯಾಯಃ ॥
॥ ಇತಿ ರಾಮೋಪಖ್ಯಾನಪರ್ವಣಿ ತ್ರಿಜಟಾಸಾಂತ್ವನಂ ನಾಮ ಅಷ್ಟಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವನಪರ್ವದಲ್ಲಿ ಇನ್ನೂರ ಅರವತ್ತೊಂಬತ್ತನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಇನ್ನೂರ ಎಪ್ಪತ್ತನೆಯ ಅಧ್ಯಾಯ

ರಾವಣನಿಂದ ಸೀತೆಯ ಪ್ರಲೋಭನೆ ಮತ್ತು ಸೀತೆಯ ನಿರಾಕರಣೆ.

ಮಾರ್ಕಂಡೇಯಃ

ತತಸ್ತಾಂ ಭರ್ತೃಶೋಕಾರ್ತಾಂ ದೀನಾಂ ಮಲಿನವಾಸಸಮ್ ।
ಮಣಿಶೇಷಾಭ್ಯಲಂಕಾರಾಂ ರುದತೀಂ ಚ ಪತಿವ್ರತಾಮ್ ॥೧॥

ರಾಕ್ಷಸೀಭಿರುಪಾಸ್ಯಂತೀಂ ಸಮಾಸೀನಾಂ ಶಿಲಾತಲೇ ।
ರಾವಣಃ ಕಾಮಬಾಣಾರ್ತೋ ದದರ್ಶೋಪಸಸರ್ಪ ಚ ॥೨॥

ಅನಂತರ ಕಾಮಬಾಣಗಳಿಂದ ಪೀಡಿತನಾದ ರಾವಣನು ಭರ್ತೃಶೋಕದಿಂದ ದುಃಖಿತಳಾಗಿದ್ದ ದೀನಳಾಗಿದ್ದ, ಮಲಿನವಸ್ತ್ರಗಳನ್ನು ಧರಿಸಿದ್ದ, ಅಲ್ಪಾಭರಣವನ್ನು ಧರಿಸಿದ್ದ, ಅಳುತ್ತಿದ್ದ ರಾಕ್ಷಸಿಯರಿಂದ ಸೇವಿಸಲ್ಪಡುತ್ತಿದ್ದ, ಶಿಲಾತಳದಲ್ಲಿ ಕುಳಿತಿದ್ದ ಆ ಪತಿವ್ರತೆಯನ್ನು ನೋಡಿ ಅವಳ ಸಮೀಪಕ್ಕೆ ಬಂದನು.

ದೇವದಾನವಗಂಧರ್ವಯಕ್ಷಕಿಂಪುರುಷೈರ್ಯುಧಿ ।
ಅಜಿತೋಽಶೋಕವನಿಕಾಂ ಯಯೌ ಕಂದರ್ಪಪೀಡಿತಃ ॥೩॥

ದೇವತೆಗಳು, ದಾನವರು, ಗಂಧರ್ವರು, ಯಕ್ಷರು, ಕಿಂಪುರುಷರು ಇವರಿಂದ ಯುದ್ಧದಲ್ಲಿ ಪರಾಜಯವನ್ನು ಹೊಂದದಿದ್ದ ಅವನು ಮನ್ಮಥರ ಬಾಣಪೀಡಿತರಾಗಿ ಅಶೋಕವನಕ್ಕೆ ಬಂದನು.

ದಿವ್ಯಾಂಬರಧರಃ ಶ್ರೀಮಾನ್ ಸುಮೃಷ್ಟಮಣಿಕುಂಡಲಃ ।
ವಿಚಿತ್ರಮಾಲ್ಯಮುಕುಟೋ ವಸಂತ ಇವ ಮೂರ್ತಿಮಾನ್ ॥೪॥

ದಿವ್ಯಾಂಬರವನ್ನು ಧರಿಸಿ ಹೊಳೆಯುವ ಕರ್ಣಕುಂಡಲಗಳನ್ನು ಉಳ್ಳವನಾಗಿ ವಿಚಿತ್ರವಾದ ಹೂಮಾಲೆಗಳನ್ನು ಮತ್ತು ಕಿರೀಟಗಳನ್ನು ಧರಿಸಿ ಶರೀರವನ್ನು ಧರಿಸಿದ ವಸಂತಮಾಸದಂತೆ (ಬಂದನು).

ಸ ಕಲ್ಪವೃಕ್ಷಸದೃಶೋ ಯತ್ನಾದಪಿ ವಿಭೂಷಿತಃ ।
ಶ್ಮಶಾನಚೈತ್ಯದ್ರುಮವದ್ ಭೂಷಿತೋಽಪಿ ಭಯಂಕರಃ ॥೫॥

ಹಿಂದೆ ಪ್ರಯತ್ನಪೂರ್ವಕವಾಗಿ ಅಲಂಕರಿಸಿದ ಕಲ್ಪವೃಕ್ಷದಂತಿದ್ದ ಅವನು ಈಗ ಅಲಂಕಾರ ಮಾಡಿಕೊಂಡಿದ್ದರೂ ಸ್ಮಶಾನದ ವೃಕ್ಷದಂತೆ ಭಯಂಕರನಾಗಿದ್ದನು.

ಸ ತಸ್ಯಾಸ್ತನುಮಧ್ಯಾಯಾಃ ಸಮೀಪೇ ರಜನೀಚರಃ ।
ದದೃಶೇ ರೋಹಿಣೀಮೇತ್ಯ ಶನೈಶ್ಚರ ಇವ ಗ್ರಹಃ ॥೬॥

ಆ ರಾಕ್ಷಸನು ತನುಮಧ್ಯಮಳಾದ ಅವಳ ಸಮೀಪಕ್ಕೆ ಬಂದು ಶನಿಗ್ರಹವು ರೋಹಿಣಿಯ ಬಳಿಗೆ ಬರುವಂತೆ ಕಂಡುಬಂದನು.

ಸ ತಾಮಾಮಂತ್ರ್ಯ ಸುಶ್ರೋಣೀಂ ಪುಷ್ಪಕೇತುಶರಾಹತಃ ।
ಇದಮಿತ್ಯಬ್ರವೀದ್ ಬಾಲಾಂ ತ್ರಸ್ತಾಂ ಮೃಗವಧೂಮಿವ ॥೭॥

ಅವನು ಮನ್ಮಥನ ಬಾಣಗಳಿಂದ ಬಾಧಿತನಾಗಿ ಜಿಂಕೆಯ ಮರಿಯಂತಿದ್ದ ಹೆದರಿದ ಆ ಬಾಲೆಯನ್ನು ಸಂಬೋಧಿಸಿ ಹೀಗೆ ಮಾತನಾಡಿದನು.

ಸೀತೇ ಪರ್ಯಾಪ್ತಮೇತಾವತ್ ಕೃತೋ ಭರ್ತುರನುಗ್ರಹಃ ।
ಪ್ರಸಾದಂ ಕುರು ತನ್ವಂಗಿ ಕ್ರಿಯತಾಂ ಪರಿಕರ್ಮ ತೇ ॥೬॥

ಸೀತೆಯೇ, ಇಷ್ಟು ಮಾಡಿದ್ದು ಸಾಕು. ನಿನ್ನ ವ್ರತದಿಂದ ಪತಿಗೆ ಅನುಗ್ರಹವನ್ನು ಮಾಡಿದ್ದೀಯೆ. ಕೃಶಾಂಗಿಯೇ, ನನ್ನನ್ನು ಅನುಗ್ರಹಿಸು. ನೀನು ಅಲಂಕಾರವನ್ನು ಮಾಡಿಕೋ.

ಭಜಸ್ವ ಮಾಂ ವರಾರೋಹೇ ಮಹಾರ್ಹಾಭರಣಾಂಬರಾ ।
ಭವ ಮೇ ಸರ್ವನಾರೀಣಾಮುತ್ತಮಾ ವರವರ್ಣಿನೀ ॥೯॥

ಎಲೌ ವರಾರೋಹೆಯೇ, ಬೆಲೆಬಾಳುವ ಆಭರಣಗಳನ್ನೂ, ವಸ್ತ್ರಗಳನ್ನೂ ಧರಿಸಿ ನನ್ನನ್ನು ಸೇವಿಸು. ವರವರ್ಣಿನಿಯೇ, ನನ್ನ ಎಲ್ಲಾ ನಾರಿಯರಿಗಿಂತಲೂ ಶ್ರೇಷ್ಠಳಾಗಿರು.

ಸಂತಿ ಮೇ ದೇವಕನ್ಯಾಶ್ಚ ಗಂಧರ್ವಾಣಾಂ ಚ ಯೋಷಿತಃ ।
ಸಂತಿ ದಾನವಕನ್ಯಾಶ್ಚ ದೈತ್ಯಾನಾಂ ಚಾಪಿ ಯೋಷಿತಃ ।
ತಾಸಾಮದ್ಯ ವಿಶಾಲಾಕ್ಷಿ ಸರ್ವಾಸಾಂ ಮೇ ಭವೋತ್ತಮಾ ॥೧೦॥

ನನ್ನ ಅಂತಃಪುರದಲ್ಲಿ ದೇವಕನ್ಯೆಯರೂ, ಗಂಧರ್ವಸ್ತ್ರೀಯರೂ, ದಾನವ ಕನ್ಯೆಯರೂ ಮತ್ತು ದೈತ್ಯಸ್ತ್ರೀಯರೂ ಇದ್ದಾರೆ. ಎಲೌ ವಿಶಾಲಾಕ್ಷಿಯೇ, ನೀನು ಅವರೆಲ್ಲರಿಗಿಂತಲೂ ಶ್ರೇಷ್ಠಳಾದವಳಾಗು.

ಚತುರ್ದಶ ಪಿಶಾಚಾನಾಂ ಕೋಟ್ಯೋ ಮೇ ವಚನೇ ಸ್ಥಿತಾಃ ।
ದ್ವಿಸ್ತಾವತ್ ಪುರುಷಾದಾನಾಂ ರಕ್ಷಸಾಂ ಭೀಮಕರ್ಮಣಾಮ್ ॥೧೧॥

ನನ್ನ ಅಧೀನವಾಗಿ ನನ್ನ ಮಾತನ್ನು ನಡೆಸಿಕೊಡುವ ಹದಿನಾಲ್ಕುಕೋಟಿ ಪಿಶಾಚಗಳಿದ್ದಾರೆ. ಭಯಂಕರವಾದ ಕರ್ಮಗಳನ್ನು ಮಾಡುವ ನರಭಕ್ಷಕರಾದ ರಾಕ್ಷಸರು ಅವರ ಎರಡರಷ್ಟಿದ್ದಾರೆ.

ತತೋ ಮೇ ತ್ರಿಗುಣಾ ಯಕ್ಷಾ ಯೇ ಮದ್ವಚನಕಾರಿಣಃ ।
ಕೇಚಿದೇವ ಧನಾಧ್ಯಕ್ಷಂ ಭ್ರಾತರಂ ಮೇ ಸಮಾಶ್ರಿತಾಃ ॥೧೨॥

ನನ್ನ ಮಾತನ್ನು ನಡೆಸಿಕೊಡುವ ಯಕ್ಷರು ಅದಕ್ಕಿಂತ ಮೂರುಪಟ್ಟು ಇದ್ದಾರೆ. ಕೇವಲ ಕೆಲವರು ಮಾತ್ರ ನನ್ನ ಸಹೋದರನಾದ ಕುಬೇರನನ್ನು ಆಶ್ರಯಿಸಿದ್ದಾರೆ.

ಗಂಧರ್ವಾಪ್ಸರಸೋ ಭದ್ರೇ ಮಾಮಾಪಾನಗತಂ ಸದಾ ।
ಉಪತಿಷ್ಠಂತಿ ವಾಮೋರು ಯಥೈವ ಭ್ರಾತರಂ ಮಮ ॥೧೩॥

ಎಲೌ ಭದ್ರೆಯೇ, ವಾಮೋರುವೇ, ನಾನು ಪಾನಶಾಲೆಯಲ್ಲಿರುವಾಗ ನನ್ನ ಸಹೋದರನಾದ ಕುಬೇರನನ್ನು ಉಪಚರಿಸಿದಂತೆ ಗಂಧರ್ವರು ಮತ್ತು ಅಪ್ಸರೆಯರು ನನ್ನನ್ನು ಉಪಚರಿಸುತ್ತಾರೆ (ಸ್ತೋತ್ರಮಾಡುತ್ತಾರೆ).

ಪುತ್ರೋಽಹಮಪಿ ವಿಪ್ರರ್ಷೇಃ ಸಾಕ್ಷಾದ್ ವಿಶ್ರವಸೋ ಮುನೇಃ ।
ಪಂಚಮೋ ಲೋಕಪಾಲಾನಾಮಿತಿ ಮೇ ಪ್ರಥಿತಂ ಯಶಃ ॥೧೪॥

ನಾನೂ ಸಹ ವಿಪ್ರರ್ಷಿಯಾದ ವಿಶ್ರವಸ್ ಮುನಿಗಳ ಸಾಕ್ಷಾತ್ ಪುತ್ರನಾಗಿದ್ದೇನೆ. ನನಗೆ ಐದನೆಯ ಲೋಕಪಾಲಕನೆಂಬ ಕೀರ್ತಿಯು ಪ್ರಖ್ಯಾತವಾಗಿದೆ.

ದಿವ್ಯಾನಿ ಭಕ್ಷ್ಯಭೋಜ್ಯಾನಿ ಪಾನಾನಿ ವಿವಿಧಾನಿ ಚ ।
ಯಥೈವ ತ್ರಿದಶೇಶಸ್ಯ ತಥೈವ ಮಮ ಭಾಮಿನಿ ॥೧೫॥

ಎಲೌ ಭಾಮಿನಿಯೇ, ಇಂದ್ರನಿಗಿರುವಂತೆಯೇ ನನಗೆ ದಿವ್ಯವಾದ ಭಕ್ಷ್ಯಭೋಜ್ಯಗಳೂ, ವಿವಿಧವಾದ ಪಾನಗಳೂ ಇವೆ.

ಕ್ಷೀಯತಾಂ ದುಷ್ಕೃತಂ ಕರ್ಮ ವನವಾಸಕೃತಂ ತವ ।
ಭಾರ್ಯಾ ಮೇ ಭವ ಸುಶ್ರೋಣಿ ಯಥಾ ಮಂಡೋದರೀ ತಥಾ ॥

ನಿನ್ನ ವನವಾಸರೂಪವಾದ ದುಷ್ಕರ್ಮವು ನಾಶವಾಗಲಿ. ಸುಶ್ರೋಣಿಯೇ, ಮಂಡೋದರಿಯಂತೆ ನನ್ನ ಪತ್ನಿಯಾಗು.

ಮಾರ್ಕಂಡೇಯಃ

ಇತ್ಯುಕ್ತಾ ತೇನ ವೈದೇಹೀ ಪರಿವೃತ್ಯ ಶುಭಾನನಮ್ ।
ತೃಣಮಂತರಿತಂ(ರತಃ) ಕೃತ್ವಾ ಕ್ರೋಧಸಂರಕ್ತಲೋಚನಾ ॥೧೭॥

ಅಶಿವೇನಾತಿವಾಮೋರೂರಜಸ್ಯಂ ನೇತ್ರವಾರಿಣಾ ।
ಸ್ತನಾವಪತಿತೌ ಬಾಲಾ ಸಂಹತಾವಭ್ಯವರ್ಷತೀ ॥೧೮॥

ವ್ಯವಸ್ಥಾಪ್ಯ ಕಥಂಚಿತ್ ಸಾ ವಿಷಾದಾದತಿಮೋಹಿತಾ ।
ಉವಾಚ ವಾಕ್ಯಂ ತಂ ಕುಬ್ಜಂ ವೈದೇಹೀ ಪತಿದೇವತಾ ॥೧೯॥

ಮಾರ್ಕಂಡೇಯ– ಹೀಗೆ ರಾವಣನಿಂದ ಹೇಳಲ್ಪಟ್ಟ ಆ ವೈದೇಹಿಯು ತನ್ನ ಸುಂದರವಾದ ಮುಖವನ್ನು ತಿರುಗಿಸಿ, ಒಂದು ಹುಲ್ಲುಕಡ್ಡಿಯನ್ನು ಮಧ್ಯದಲ್ಲಿ ಹಿಡಿದು ಕೋಪದಿಂದ ಕೆಂಪಾದ ಕಣ್ಣುಳ್ಳವಳಾಗಿ ಅತ್ಯಂತ ಸುಂದರಿಯಾದ ಅವಳು ತನ್ನ ಕಣ್ಣುಗಳಿಂದ ಹೊರಟ ಅಮಂಗಳವಾದ ಕಣ್ಣೀರಿನಿಂದ ತನ್ನ ಸುಂದರವಾದ ಸ್ತನಗಳನ್ನು ಒದ್ದೆಮಾಡುತ್ತಾ ಮನಸ್ಸಿನಲ್ಲಿ ಸ್ವಲ್ಪ ಸಮಾಧಾನವನ್ನು ತೆಗೆದುಕೊಂಡು ವಿಷಾದದಿಂದ ಮೋಹಿತಳಾಗಿ ಪತಿದೇವತೆಯಾದ ಅವಳು ಆ ಕುಬ್ಜನನ್ನು ಕುರಿತು ಮಾತನಾಡಿದಳು.

ಅಸಕೃದ್ ವದತೋ ವಾಕ್ಯಮೀದೃಶಂ ರಾಕ್ಷಸೇಶ್ವರ ।
ವಿಷಾದಯುಕ್ತಮೇತತ್ ತೇ ಮಯಾ ಶ್ರುತಮಭಾಗ್ಯಯಾ ॥೨೦॥

ಎಲೈ ರಾಕ್ಷಸೇಶ್ವರನೇ, ನೀನು ಅನೇಕ ಬಾರಿ ಆಡುವ ಈ ಮಾತುಗಳನ್ನು ವಿಷಾದಯುಕ್ತಳಾಗಿ ಕೇಳುವುದು ನನ್ನ ದೌರ್ಭಾಗ್ಯವಾಗಿದೆ.

ತದ್ ಭದ್ರಮುಖ ಭದ್ರಂ ತೇ ಮಾನಸಂ ವಿನಿವರ್ತ್ಯತಾಮ್ ।
ಪರದಾರಾಸ್ಮ್ಯಲಭ್ಯಾ ಚ ಸತತಂ ಚ ಪತಿವ್ರತಾ ॥೨೧॥

ಭದ್ರನೇ, ನಿನಗೆ ಮಂಗಳವಾಗಲಿ. ನಿನ್ನ ಮನಸ್ಸನ್ನು ತಿರುಗಿಸು. ನಾನು ಸತತವಾಗಿ ಪತಿವ್ರತೆಯಾದ ಪರಸ್ತ್ರೀ. ನಿನಗೆ ಲಭ್ಯಳಾಗುವವಳಲ್ಲ.

ನ ಚೈವೋಪಯಿಕೀ ಭಾರ್ಯಾ ಮಾನುಷೀ ತವ ರಾಕ್ಷಸ ।
ವಿವಶಾಂ ಧರ್ಷಯಿತ್ವಾ ಚ ಕಾಂ ತ್ವಂ ಪ್ರೀತಿಮವಾಪ್ಸ್ಯಸಿ ॥೨೨॥

ಎಲೈ ರಾಕ್ಷಸನೇ, ನಿನಗೆ ಯಾವ ಮನುಷ್ಯ ಕನ್ಯೆಯೂ ವೇಶ್ಯೆಯಾದರೂ ಯೋಗ್ಯಳಾದ ಪತ್ನಿಯಾಗುವುದಿಲ್ಲ. ಇಷ್ಟವಿಲ್ಲದವಳನ್ನು ಬಲಾತ್ಕಾರಮಾಡಿ ನೀನು ಯಾವ ಸುಖವನ್ನು ಹೊಂದುವಿ?

ಪ್ರಜಾಪತಿಸಮೋ ವಿಪ್ರೋ ಬ್ರಹ್ಮಯೋನಿಃ ಪಿತಾ ತವ ।
ನ ಚ ಪಾಲಯಸೇ ಧರ್ಮಂ ಲೋಕಪಾಲಸಮಃ ಕಥಮ್ ॥೨೩॥

ನಿನ್ನ ತಂದೆಯು ಪ್ರಜಾಪತಿಗೆ ಸಮನಾದ ಬ್ರಾಹ್ಮಣ ಮತ್ತು ಬ್ರಹ್ಮದೇವರಿಂದ ಜನಿಸಿದವನು. ಲೋಕಪಾಲಕರಿಗೆ ಸಮನೆಂದು ಹೇಳಿಕೊಳ್ಳುವ ನೀನು ಏಕೆ ಧರ್ಮವನ್ನು ಪಾಲಿಸುತ್ತಿಲ್ಲ?

ಭ್ರಾತರಂ ರಾಜರಾಜಂ ಚ ಮಹೇಶ್ವರಸಖಿಂ ಪ್ರಭುಮ್ ।
ಧನೇಶ್ವರಂ ವ್ಯಪದಿಶನ್ ಕಥಂ ತ್ವಿಹ ನ ಲಜ್ಜಸೇ ॥೨೪॥

ರುದ್ರದೇವರಿಗೆ ಸ್ನೇಹಿತನಾದ ರಾಜರಾಜನಾದ ಕುಬೇರನನ್ನು ಸಹೋದರನೆಂದು ಹೇಳಿಕೊಳ್ಳುವ ನೀನು ಈ ವಿಷಯದಲ್ಲಿ ಏಕೆ ನಾಚಿಕೆಯನ್ನು ಪಡುವುದಿಲ್ಲ?

ಮಾರ್ಕಂಡೇಯಃ

ಇತ್ಯುಕ್ತ್ವಾ ಪ್ರಾರುದತ್ ಸೀತಾ ಕಂಪಯಂತೀ ಪಯೋಧರೌ ।
ಶಿರೋಧರಾಂ ಚ ತನ್ವಂಗೀ ಮುಖಂ ಪ್ರಚ್ಛಾದ್ಯ ವಾಸಸಾ ॥೨೫॥

ಮಾರ್ಕಂಡೇಯ– ಹೀಗೆ ಹೇಳಿ ಆ ಕೃಷ್ಣಾಂಗಿಯಾದ ಸೀತೆಯು ತನ್ನ ವಸ್ತ್ರದಿಂದ ಮುಖವನ್ನು ಮುಚ್ಚಿಕೊಂಡು ಸ್ತನಗಳನ್ನು ಮತ್ತು ಕತ್ತನ್ನು ಕಂಪಿಸುತ್ತಾ ರೋದನವನ್ನು ಮಾಡಿದಳು.

ತಸ್ಯಾ ರುಂತ್ಯಾ ಭಾಮಿನ್ಯಾ ದೀರ್ಘಾ ವೇಣೀ ಸುಸಂಯತಾ ।
ದದೃಶೇಽತಿತರಾಂ ಸ್ನಿಗ್ಧಾ ಕಾಲೀ ವ್ಯಾಲೀವ ಮೂರ್ಧನಿ ॥೨೬॥

ಅಳುತ್ತಿದ್ದ ಆ ಭಾಮಿನಿಯ ದೀರ್ಘವಾದ, ಚೆನ್ನಾಗಿ ಕಟ್ಟಲ್ಪಟ್ಟ, ಒತ್ತಾದ, ಕಪ್ಪಾದ ಕೂದಲುಗಳು ಅವಳ ತಲೆಯಲ್ಲಿ ಕೃಷ್ಣಸರ್ಪದಂತೆ ಕಾಣುತ್ತಿದ್ದವು.

ಶ್ರುತ್ವಾ ತದ್ ರಾವಣೋ ವಾಕ್ಯಂ ಸೀತಯೋಕ್ತಂ ಸುನಿಷ್ಠುರಮ್ ।
ಪ್ರತ್ಯಾಖ್ಯಾತೋಽಪಿ ದುರ್ಮೇಧಾಃ ಪುನರೇವಾಬ್ರವೀದ್ ವಚಃ ॥೨೭॥

ಸೀತೆಯ ನಿಷ್ಠುರವಾದ ಆ ವಾಕ್ಯಗಳನ್ನು ಕೇಳಿದ ಆ ರಾವಣನು ನಿರಾಕರಿಸಲ್ಪಟ್ಟರೂ ಸಹ ದುರ್ಬುದ್ಧಿಯುಳ್ಳ ಅವನು ಪುನಃ ಅವಳನ್ನು ಕುರಿತು ಮಾತನಾಡಿದನು.

ಕಾಮಮಂಗಾನಿ ಮೇ ಸೀತೇ ದುನೋತು ಮಕರಧ್ವಜಃ ।
ನ ತ್ವಾಮಕಾಮಾಂ ಸುಶ್ರೋಣೀಂ ಸಮೇಷ್ಯೇ ಚಾರುಹಾಸಿನೀಮ್॥೨೮॥

ಸೀತೆಯೇ, ನನ್ನ ದೇಹವನ್ನು ಮನ್ಮಥನು ತನಗೆ ಇಷ್ಟಬಂದಂತೆ ಪೀಡಿಸಲಿ ಆದರೆ ನಾನು ಸುಶ್ರೋಣಿಯೂ, ಚಾರುಹಾಸಿನಿಯೂ ಆದ ನಿನ್ನನ್ನು ನಿನ್ನ ಸಮ್ಮತಿ ಇಲ್ಲದೆ ಸಮಾಗಮವನ್ನು ಮಾಡುವುದಿಲ್ಲ.

ಕಿಂ ನು ಶಕ್ಯಂ ಮಯಾ ಕರ್ತುಂ ಯತ್ತ್ವಮದ್ಯಾಪಿ ಮಾನುಷಮ್ ।
ಆಹಾರಭೂತಮಸ್ಮಾಕಂ ರಾಮಮೇವಾನುರುಧ್ಯಸೇ ॥೨೯॥

ನೀನು ಇನ್ನೂ ಸಹ ನಮಗೆ ಆಹಾರನಾದ ರಾಮನನ್ನೇ ಅನುಸರಿಸುತ್ತಿರುವುದರಿಂದ ನಾನು ಏನು ಮಾಡಲು ಸಾಧ್ಯ ? ನಿನಗೆ ನನ್ನಲ್ಲಿ ಕಾಮವಿಲ್ಲದಿರುವುದರಿಂದ ಮತ್ತು ನಾನು ಅಕಾಮಳನ್ನು ಭೋಗಿಸಲು ಸಾಧ್ಯವಿಲ್ಲವಾದ್ದರಿಂದ (ಮನೆಗೆ ಹೋಗುವುದೇ ಲೇಸು).

ಮಾರ್ಕಂಡೇಯಃ

ಇತ್ಯುಕ್ತ್ವಾ ತಾಮನಿಂದ್ಯಾಂಗೀಂ ಸ ರಾಕ್ಷಸಮಹೇಶ್ವರಃ ।
ತತ್ರೈವಾಂತರ್ಹಿತೋ ಭೂತ್ವಾ ಜಗಾಮಾಭಿಮತಾಂ ದಿಶಮ್ ॥೩೦॥

ಮಾರ್ಕಂಡೇಯರು– ಆ ಅನವದ್ಯಾಂಗಿಯಾದ ಸೀತೆಯನ್ನು ಕುರಿತು ರಾಕ್ಷಸೇಶ್ವರನಾದ ಆ ರಾವಣನು ಹೀಗೆ ಹೇಳಿ ಅಲ್ಲಿಯೇ ಅಂತರ್ಧಾನವನ್ನು ಹೊಂದಿ ತನಗೆ ಇಷ್ಟವಾದ ದಿಕ್ಕಿಗೆ ಹೋದನು.

ರಾಕ್ಷಸೀಭಿಃ ಪರಿವೃತಾ ವೈದೇಹೀ ಶೋಕಕರ್ಶಿತಾ ।
ಸೇವ್ಯಮಾನಾ ತ್ರಿಜಟಯಾ ತತ್ರೈವ ನ್ಯವಸತ್ ತದಾ ॥೩೧॥

ರಾಕ್ಷಸಿಯರಿಂದ ಪರಿವೃತಳಾದ ಶೋಕಕರ್ಶಿತಳಾದ ವೈದೇಹಿಯು ತ್ರಿಜಟೆಯಿಂದ ಸೇವಿತಳಾಗಿ ಆಗ ಅಲ್ಲಿಯೇ ವಾಸಮಾಡಿದಳು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂಸಂಹಿತಾಯಾಂ ವೈಯಾಸಿಕ್ಯಾಂ
ವನಪರ್ವಣಿ ಸಪ್ತತ್ಯಧಿಕದ್ವಿಶತತಮೋಽಧ್ಯಾಯಃ ॥
॥ ಇತಿ ರಾಮೋಪಖ್ಯಾನಪರ್ವಣಿ ಸೀತಾರಾವಣ ಸಂವಾದೋ ನಾಮ
ನವಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವನಪರ್ವದಲ್ಲಿ ಇನ್ನೂರ ಎಪ್ಪತ್ತನೆಯ ಅಧ್ಯಾಯ ಮುಗಿಯಿತು.

★ ★ ★ ★

ಇನ್ನೂರ ಎಪ್ಪತ್ತೊಂದನೆಯ ಅಧ್ಯಾಯ

ರಾಮನಿಂದ ಲಕ್ಷ್ಮಣನ ಮೂಲಕ ಸುಗ್ರೀವನಿಗೆ ಎಚ್ಚರಿಕೆಯ ಮಾತುಗಳು. ಸುಗ್ರೀವನಿಂದ ಕಪಿಗಳ ಪ್ರೇಷಣ. ಹನುಮಂತನಿಂದ ಅಶೋಕವನದಲ್ಲಿ ಸೀತೆಯನ್ನು ಕಂಡು ರಾಮನಿಗೆ ಅವಳ ಚೂಡಾಮಣಿಯ ಪ್ರದಾನ.

ಮಾರ್ಕಂಡೇಯಃ

ರಾಘವಃ ಸಹಸೌಮಿತ್ರಿಃ ಸುಗ್ರೀವೇಣಾಭಿಪಾಲಿತಃ ।
ವಸನ್ ಮಾಲ್ಯವತಃ ಪೃಷ್ಠೇ ದದೃಶೇ ವಿಮಲಂ ನಭಃ ॥೧॥

ಮಾರ್ಕಂಡೇಯ– ರಾಘವನು ಲಕ್ಷ್ಮಣನಿಂದ ಸಹಿತನಾಗಿ ಸುಗ್ರೀವನಿಂದ ರಕ್ಷಿತನಾಗಿ ಮಾಲ್ಯವಾನ್ ಪರ್ವತದ ತಪ್ಪಲಿನಲ್ಲಿ ವಾಸಿಸುತ್ತಾ ಸ್ವಚ್ಛವಾದ ಆಕಾಶವನ್ನು (ಶರತ್ಕಾಲದ ಆಕಾಶವನ್ನು) ನೋಡಿದನು.

ಸ ದೃಷ್ಟ್ವಾ ವಿಮಲೇ ವ್ಯೋಮ್ನಿ ನಿರ್ಮಲಂ ಶಶಲಕ್ಷಣಮ್ ।
ಗ್ರಹನಕ್ಷತ್ರತಾರಾಭಿರನುಯಾತಮಮಿತ್ರಹಾ ॥೨॥

ಕುಮುದೋತ್ಪಲಪದ್ಮಾನಾಂ ಗಂಧಮಾದಾಯ ವಾಯುನಾ ।
ಮಹೀಧರಸ್ಥಃ ಶೀತೇನ ಸಹಸಾ ಪ್ರತಿಬೋಧಿತಃ ॥೩॥

ಶತ್ರುಸಂಹಾರಕನಾದ ಅವನು ನಿರ್ಮಲವಾದ ಆಕಾಶದಲ್ಲಿ ಗ್ರಹನಕ್ಷತ್ರತಾರೆಗಳಿಂದ ಕೂಡಿದ ಚಂದ್ರನನ್ನು ನೋಡಿ ಕುಮುದೋತ್ಪಲ ಪದ್ಮಪುಷ್ಪಗಳ ಸುಗಂಧವನ್ನು ತೆಗೆದುಕೊಂಡು ಬೀಸುವ ತಂಪಾದ ವಾಯುವಿನಿಂದ ಆ ಪರ್ವತದಲ್ಲಿ ಬೇಗ ಎಚ್ಚರಗೊಂಡನು.

ಪ್ರಭಾತೇ ಲಕ್ಷ್ಮಣಂ ವೀರಮಭ್ಯಭಾಷತ ದುರ್ಮನಾಃ ।
ಸೀತಾಂ ಸಂಸ್ಮೃತ್ಯ ಧರ್ಮಾತ್ಮಾ ರುದ್ಧಾಂ ರಾಕ್ಷಸವೇಶ್ಮನಿ ॥೪॥

ಪ್ರಾತಃಕಾಲದಲ್ಲಿ ವಿಷಾದಗೊಂಡಿದ್ದ ರಾಮನು ರಾಕ್ಷಸನ ಮನೆಯಲ್ಲಿ ಬದ್ಧಳಾಗಿದ್ದ ಸೀತೆಯನ್ನು ಸ್ಮರಿಸಿ, ಧರ್ಮಾತ್ಮನಾದ ಅವನು ವೀರನಾದ ಲಕ್ಷ್ಮಣನನ್ನು ಕುರಿತು ಮಾತನಾಡಿದನು.

ಗಚ್ಛ ಲಕ್ಷ್ಮಣ ಜಾನೀಹಿ ಕಿಷ್ಕಿಂಧಾಯಾಂ ಕಪೀಶ್ವರಮ್ ।
ಪ್ರಮತ್ತಂ ಗ್ರಾಮ್ಯಧರ್ಮೇಷು ಕೃತಘ್ನಂ ಸ್ವಾರ್ಥಪಂಡಿತಮ್ ॥೫॥

ಲಕ್ಷ್ಮಣನೇ, ಕಿಷ್ಕಿಂಧೆಗೆ ಹೋಗಿ ಕಪೀಶ್ವರನಾದ ಸುಗ್ರೀವನನ್ನು ನೋಡಿ ಬಾ. ಅವನು ಕೃತಘ್ನನಾಗಿ ಸ್ವಾರ್ಥಪಂಡಿತನಾಗಿ ಎಲ್ಲವನ್ನೂ ಮರೆತು ಸ್ತ್ರೀಸುಖದಲ್ಲಿ ಮಗ್ನನಾಗಿದ್ದಾನೆ.

ಯೋಽಸೌ ಕುಲಾಧಮೋ ಮೂಢೋ ಮಯಾ ರಾಜ್ಯೇಽಭಿಷೇಚಿತಃ ।
ಸರ್ವವಾನರಗೋಪುಚ್ಛಾ ಯಮೃಕ್ಷಾಶ್ಚ ಭಜಂತಿ ವೈ ॥೬॥

ಎಲ್ಲ ವಾನರಗಳೂ, ಗೋಪುಚ್ಛಗಳೂ, ಕರಡಿಗಳೂ ಯಾವನನ್ನು ಸೇವಿಸುತ್ತವೆಯೋ ಅಂತಹ ಕುಲಾಧಮನಾದ ಮೂಢನಿಗೆ ನಾನು ರಾಜ್ಯದಲ್ಲಿ ಅಭಿಷೇಕವನ್ನು ಮಾಡಿದೆ.

ಯದರ್ಥಂ ನಿಹತೋ ವಾಲೀ ಮಯಾ ರಘುಕುಲೋದ್ವಹ ।
ತ್ವಯಾ ಸಹ ಮಹಾಬಾಹೋ ಕಿಷ್ಕಿಂಧೋಪವನೇ ತದಾ ॥೭॥

ಕೃತಘ್ನಂ ತಮಹಂ ಮನ್ಯೇ ವಾನರಾಕುಶದಂ ಭುವಿ ।
ಯೋ ಮಾಮೇವಂಗತಂ ಮೂಢೋ ನ ಜಾನೀತೇಽದ್ಯ ಲಕ್ಷ್ಮಣ ॥೮॥

ಎಲೈ ರಘುಕುಲೋದ್ವಹನೇ, ಮಹಾಬಾಹುವೇ, ನಾನು ಕಿಷ್ಕಿಂಧೆಯ ಉಪವನದಲ್ಲಿ ಯಾವನ ಉದ್ದೇಶದಿಂದ ವಾಲಿಯನ್ನು ವಧೆ ಮಾಡಿದೆನೋ ಎಲೈ ಲಕ್ಷ್ಮಣನೇ, ಭೂಮಿಯಲ್ಲಿ ವಾನರಕುಲದೂಷಕನೂ, ಕೃತಘ್ನನೂ ಆದ ಅವನು ಮೂಢನಾಗಿ ಈ ದಿನ ನನ್ನ ಈ ಕಷ್ಟದ ಅವಸ್ಥೆಯನ್ನು ತಿಳಿಯುತ್ತಿಲ್ಲ.

ಅಸೌ ಮನ್ಯೇ ನ ಜಾನೀತೇ ಸಮಯಪ್ರತಿಪಾಲನಮ್ ।
ಕೃತೋಪಕಾರಂ ಮಾಂ ನೂನಮವಮನ್ಯಾಲ್ಪಯಾ ಧಿಯಾ ॥೯॥

ಅವನಿಗೆ ಉಪಕಾರವನ್ನು ಮಾಡಿದ ನನ್ನನ್ನು ಅಲ್ಪಬುದ್ಧಿಯಿಂದ ಅವಮಾನವನ್ನು ಮಾಡಿ ಅವನು ಕೊಟ್ಟಮಾತಿನಂತೆ ನಡೆದುಕೊಳ್ಳಬೇಕೆಂಬುದನ್ನೇ ತಿಳಿದಿಲ್ಲವೆಂದು ನಾನು ಭಾವಿಸುತ್ತೇನೆ.

ಯದಿ ತಾವದನುದ್ಯುಕ್ತಃ ಶೇತೇ ಕಾಮಸುಖಾತ್ಮಕಃ ।
ನೇತವ್ಯೋ ವಾಲಿಮಾರ್ಗೇಣ ಸರ್ವಭೂತಗತಿಂ ತ್ವಯಾ ॥೧೦॥

ಅವನು ನನ್ನ ಕಾರ್ಯದಲ್ಲಿ ಉದ್ಯುಕ್ತನಾಗದೆ ಕಾಮಸುಖದಲ್ಲಿಯೇ ಮಲಗಿರುವವನಾದರೆ ನೀನು ಅವನನ್ನು ವಾಲಿಯು ಹೋದ ಮಾರ್ಗದಿಂದ ಎಲ್ಲ ಪ್ರಾಣಿಗಳೂ ಹೋಗುವ ಸ್ಥಳಕ್ಕೆ ಕಳುಹಿಸಬೇಕು.

ಅಥಾಪಿ ಘಟತೇಽಸ್ಮಾಕಮರ್ಥೇ ವಾನರಪುಂಗವಃ ।
ತಮಾದಾಯೈವ ಕಾಕುತ್ಸ್ಥ ತ್ವರಾವಾನ್ ಭವ ಮಾಚಿರಮ್ ॥೧೧॥

ಇನ್ನಾದರೂ ಆ ವಾನರಪುಂಗವನು ನಮ್ಮ ಕಾರ್ಯದಲ್ಲಿ ಉದ್ಯುಕ್ತನಾಗುವುದಾದರೆ ಎಲೈ ಕಾಕುತ್ಸ್ಥನೇ ಅವನನ್ನು ಕರೆದುಕೊಂಡು ಬೇಗ ನನ್ನ ಬಳಿಗೆ ಬಾ.

ಇತ್ಯುಕ್ತೋ ಲಕ್ಷ್ಮಣೋ ಭ್ರಾತ್ರಾ ಗುರುವಾಕ್ಯಹಿತೇ ರತಃ ।
ಪ್ರತಸ್ಥೇ ರುಚಿರಂ ಗೃಹ್ಯ ಸಮಾರ್ಗಣಗುಣಂ ಧನುಃ ॥೧೨॥

ಹೀಗೆ ಅಣ್ಣನಿಂದ ಹೇಳಲ್ಪಟ್ಟ ಗುರುವಾಕ್ಯವನ್ನು ನಡೆಸಿಕೊಡುವುದರಲ್ಲಿ ರತನಾದ ಲಕ್ಷ್ಮಣನು ತನ್ನ ಮನೋಹರವಾದ ಧನುಸ್ಸನ್ನೂ, ಬಾಣಗಳನ್ನೂ ಮತ್ತು ಹೆದೆಯನ್ನು ತೆಗೆದುಕೊಂಡು ಹೊರಟನು.

ಕಿಷ್ಕಿಂಧಾದ್ವಾರಮಾಸಾದ್ಯ ಪ್ರವಿವೇಶಾನಿವಾರಿತಃ ।
ಸಕ್ರೋಧ ಇತಿ ತಂ ಮತ್ವಾ ರಾಜಾ ಪ್ರತ್ಯುದ್ಯಯೌ ಹರಿಃ ॥೧೩॥

ಕಿಷ್ಕಿಂಧಾಪಟ್ಟಣದ ಮಹಾದ್ವಾರಕ್ಕೆ ಹೋಗಿ ಯಾರಿಂದಲೂ ತಡೆಯಲ್ಪಡದೇ ಪ್ರವೇಶಿಸಿದನು. ಅವನು ಕೋಪದಿಂದ ಕೂಡಿರುವನೆಂದು ತಿಳಿದು ಕಪಿರಾಜನಾದ ಸುಗ್ರೀವನು ಅವನನ್ನು ಎದುರುಗೊಳ್ಳಲು ಮುಂದೆ ಬಂದನು.

ತಂ ಸದಾರೋ ವಿನೀತಾತ್ಮಾ ಸುಗ್ರೀವಃ ಪ್ಲವಗಾಧಿಪಃ ।
ಪೂಜಯಾ ಪ್ರತಿಜಗ್ರಾಹ ಪ್ರೀಯಮಾಣಸ್ತದರ್ಹಯಾ ॥೧೪॥

ಕಪಿಗಳ ಅಧಿಪತಿಯಾದ ವಿನೀತನಾದ ಸುಗ್ರೀವನು ಪತ್ನೀಸಹಿತವಾಗಿ ಅವನನ್ನು ಪೂಜಿಸಿ ಆ ಪೂಜೆಯಿಂದ ಸಂತೋಷಪಡುತ್ತಾ ಅವನನ್ನು ಸ್ವೀಕರಿಸಿದನು.

ತಮಬ್ರವೀದ್ ರಾಮವಚಃ ಸೌಮಿತ್ರಿರಕುತೋಭಯಃ ।
ಸ ತತ್ ಸರ್ವಮಶೇಷೇಣ ಶ್ರುತ್ವಾ ಪ್ರಹೃಷ್ಟಃ ಕೃತಾಂಜಲಿಃ ॥೧೫॥

ಸಭೃತ್ಯದಾರೋ ರಾಜೇಂದ್ರ ಸುಗ್ರೀವೋ ವಾನರಾಧಿಪಃ ।
ಇದಮಾಹ ವಚಃ ಪ್ರೀತೋ ಲಕ್ಷ್ಮಣಂ ನರಕುಂಜರಮ್ ॥೧೬॥

ಲಕ್ಷ್ಮಣನು ಯಾವ ಭಯವೂ ಇಲ್ಲದೆ ಅವನನ್ನು ಕುರಿತು ರಾಮನ ಆದೇಶವನ್ನು ತಿಳಿಸಿದನು. ಎಲೈ ರಾಜೇಂದ್ರನೇ, ಅದೆಲ್ಲವನ್ನೂ ಕೇಳಿದ ಭೃತ್ಯಪತ್ನೀಸಹಿತನಾದ ವಾನರಾಧಿಪನಾದ ಸುಗ್ರೀವನು ಕೈಗಳನ್ನು ಮುಗಿದು ವಿನಯದಿಂದ ಬಾಗಿದವನಾಗಿ ನರಶ್ರೇಷ್ಠನಾದ ಲಕ್ಷ್ಮಣನನ್ನು ಕುರಿತು ಸಂತೋಷದಿಂದ ಈ ಮಾತನ್ನು ಹೇಳಿದನು.

ನಾಸ್ಮಿ ಲಕ್ಷ್ಮಣ ದುರ್ಮೇಧಾ ನಾಕೃತಜ್ಞೋ ನ ನಿರ್ಘೃಣಃ ।
ಶ್ರೂಯತಾಂ ಯಃ ಪ್ರಯತ್ನೋ ಮೇ ಸೀತಾಪರ್ಯೇಷಣೇ ಕೃತಃ ॥೧೭॥

ಲಕ್ಷ್ಮಣನೇ, ನಾನು ದುರ್ಬುದ್ಧಿಯುಳ್ಳವನಲ್ಲ. ಮಾಡಿದ ಉಪಕಾರವನ್ನು ಮರೆಯುವವನೂ ಅಲ್ಲ. ದಯಾರಹಿತನೂ ಅಲ್ಲ. ನಾನು ಸೀತೆಯನ್ನು ಹುಡುಕುವ ವಿಷಯದಲ್ಲಿ ಏನು ಪ್ರಯತ್ನವನ್ನು ಮಾಡಿದ್ದೇನೆ ಎಂಬುದನ್ನು ಕೇಳು.

ದಿಶಃ ಪ್ರಸ್ಥಾಪಿತಾಃ ಸರ್ವೇ ವಿನೀತಾ ಹರಯೋ ಮಯಾ ।
ಸರ್ವೇಷಾಂ ಚ ಕೃತಃ ಕಾಲೇ ಮಾಸೇನಾಗಮನಂ ಪುನಃ ॥೧೮॥

ನಾನು ನನ್ನಲ್ಲಿ ವಿನಯಯುಕ್ತರಾದ ಎಲ್ಲಾ ಕಪಿಗಳನ್ನೂ ದಿಕ್ಕುದಿಕ್ಕುಗಳಿಗೆ ಕಳುಹಿಸಿದ್ದೇನೆ. ಎಲ್ಲರ ಆಗಮನಕ್ಕೂ ಒಂದು ತಿಂಗಳಿನ ಕಾಲಾವಧಿಯನ್ನು ಮಾಡಿದ್ದೇನೆ.

ಯೈರಿಯಂ ಸವನಾ ಸಾದ್ರಿಃ ಸಪುರಾ ಸಾಗರಾಂಬರಾ ।
ವಿಚೇತವ್ಯಾ ಮಹೀ ವೀರ ಸಗ್ರಾಮನಗರಾಕರಾ ॥೧೯॥

ಎಲೈ ವೀರನೇ, ಅವರು ಕಾಡುಗಳಿಂದ, ಪಟ್ಟಣಗಳಿಂದ, ಗ್ರಾಮಗಳಿಂದ, ನಗರಗಳಿಂದ ತುಂಬಿರುವ ಈ ಸಾಗರಾಂಬರವಾದ ಭೂಮಿಯನ್ನು ಹುಡುಕಿ ಬರಬೇಕು.

ಸ ಮಾಸಃ ಪಂಚರಾತ್ರೇಣ ಪೂರ್ಣೋ ಭವಿತುಮರ್ಹತಿ ।
ತತಃ ಶ್ರೋಷ್ಯಸಿ ರಾಮೇಣ ಸಹಿತಃ ಸುಮಹತ್ ಪ್ರಿಯಮ್ ॥೨೦॥

ಆ ಒಂದು ತಿಂಗಳಿನ ಅವಧಿಯು ಇನ್ನು ಐದು ದಿನಗಳಲ್ಲಿ ಪೂರ್ಣಗೊಳ್ಳುತ್ತದೆ. ಅನಂತರ ರಾಮನಿಂದ ಸಹಿತನಾಗಿ ನೀನು ಬಹಳ ಪ್ರಿಯವಾದ ವಾರ್ತೆಯನ್ನು ಕೇಳುವಿ.

ಮಾರ್ಕಂಡೇಯಃ

ಇತ್ಯುಕ್ತೇ ಲಕ್ಷ್ಮಣಸ್ತೇನ ವಾನರೇಂದ್ರೇಣ ಧೀಮತಾ ।
ತ್ಯಕ್ತ್ವಾ ರೋಷಮದೀನಾತ್ಮಾ ಸುಗ್ರೀವಂ ಪ್ರತ್ಯಪೂಜಯತ್ ॥೨೧॥

ಮಾರ್ಕಂಡೇಯ– ವಾನರೇಂದ್ರನಾದ ಮೇಧಾವಿಯಾದ ಅವನಿಂದ ಹೀಗೆ ಹೇಳಲ್ಪಟ್ಟ ಲಕ್ಷ್ಮಣನು ರೋಷವನ್ನು ಬಿಟ್ಟು ಮನಸ್ಸಿನಲ್ಲಿ ಧೈರ್ಯವನ್ನು ಹೊಂದಿ ಸುಗ್ರೀವನನ್ನು ಪ್ರತಿಯಾಗಿ ಪೂಜಿಸಿದನು.

ಸ ರಾಮಂ ಸಹಸುಗ್ರೀವೋ ಮಾಲ್ಯವತ್ಪೃಷ್ಠಮಾಸ್ಥಿತಮ್ ।
ಅಭಿಗಮ್ಯೋದಯಂ ತಸ್ಯ ಕಾರ್ಯಸ್ಯ ಪ್ರತ್ಯವೇದಯತ್ ॥೨೨॥

ಲಕ್ಷ್ಮಣನು ಸುಗ್ರೀವ ಸಹಿತನಾಗಿ ಮಾಲ್ಯವಾನ್ ಪರ್ವತದ ತಪ್ಪಲಿನಲ್ಲಿ ಇದ್ದ ರಾಮನ ಬಳಿಗೆ ಬಂದು ರಾಮಕಾರ್ಯದ ಪ್ರಗತಿಯನ್ನು ಅವನಿಗೆ ನಿವೇದಿಸಿದನು.

ಇತ್ಯೇವಂ ವಾನರೇಂದ್ರಾಸ್ತೇ ಸಮಾಜಗ್ಮುಃ ಸಹಸ್ರಶಃ ।
ದಿಶಸ್ತಿಸ್ರೋ ವಿಚಿತ್ಯಾಥ ನ ತು ಯೇ ದಕ್ಷಿಣಾಂ ಗತಾಃ ॥೨೩॥

ಹೀಗೆ ಮೂರುದಿಕ್ಕುಗಳಿಗೆ ಸಹಸ್ರಾರು ಸಂಖ್ಯೆಯಲ್ಲಿ ಹೋಗಿದ್ದ ಆ ವಾನರೇಂದ್ರರು ಎಲ್ಲವನ್ನೂ ಹುಡುಕಿ ಹಿಂದಿರುಗಿದರು. ಆದರೆ ದಕ್ಷಿಣ ದಿಕ್ಕಿಗೆ ಹೋದವರು ಮಾತ್ರ ಹಿಂದಿರುಗಲಿಲ್ಲ.

ಆಚಖ್ಯುಸ್ತತ್ರ ರಾಮಾಯ ಮಹೀಂ ಸಾಗರಮೇಖಲಾಮ್ ।
ವಿಚಿತಾಂ ನ ತು ವೈದೇಹ್ಯಾ ದರ್ಶನಂ ರಾವಣಸ್ಯ ವಾ ॥೨೪॥

ಮೂರುದಿಕ್ಕುಗಳಿಂದ ಬಂದ ವಾನರರು ರಾಮನಿಗೆ ತಾವು ಸಾಗರಾಂಬರಳಾದ ಭೂಮಿಯನ್ನೆಲ್ಲಾ ಹುಡುಕಿದರೂ ವೈದೇಹಿಯ ಅಥವಾ ರಾವಣನ ದರ್ಶನವು ಸಿಗಲಿಲ್ಲ ಎಂದು ನಿವೇದಿಸಿದರು.

ಗತಾಸ್ತು ದಕ್ಷಿಣಾಮಾಶಾಂ ಯೇ ವೈ ವಾನರಪುಂಗವಾಃ ।
ಆಶಾವಾಂಸ್ತೇಷು ಕಾಕುತ್ಸ್ಥಃ ಪ್ರಾಣಾನಾರ್ತೋಽಧಾರಯತ್ ॥೨೫॥

ಕಾಕುತ್ಸ್ಥನಾದ ರಾಮನು ದಕ್ಷಿಣ ದಿಕ್ಕಿಗೆ ಹೋದ ವಾನರಶ್ರೇಷ್ಠರ ಮೇಲೆ ಆಸೆಯುಳ್ಳವನಾಗಿ ಆರ್ತನಾಗಿ ಪ್ರಾಣಗಳನ್ನು ಧರಿಸಿದನು.

ದ್ವಿಮಾಸೋಪರಮೇ ಕಾಲೇ ವ್ಯತೀತೇ ಪ್ಲವಗಾಸ್ತತಃ ।
ಸುಗ್ರೀವಮಭಿಗಮ್ಯೇದಂ ತ್ವರಿತಾ ವಾಕ್ಯಮಬ್ರುವನ್ ॥೨೬॥

ಎರಡು ತಿಂಗಳುಗಳು ಕಳೆದ ಮೇಲೆ ಕಪಿಗಳು ಸುಗ್ರೀವನ ಸಮೀಪಕ್ಕೆ ಬಂದು ತ್ವರಿತವಾಗಿ ಈ ಮಾತುಗಳನ್ನು ಆಡಿದವು.

ರಕ್ಷಿತಂ ವಾಲಿನಾ ಯತ್ತತ್ಸ್ಫೀತಂ ಮಧುವನಂ ಮಹತ್ ।
ತ್ವಯಾ ಚ ಪ್ಲವಗಶ್ರೇಷ್ಠ ತದ್ ಭುಂಕ್ತೇ ಪವನಾತ್ಮಜಃ ॥೨೭॥

ವಾಲಿಪುತ್ರೋಽಂಗದಶ್ಚೈವ ಯೇ ಚಾನ್ಯೇ ಪ್ಲವಗರ್ಷಭಾಃ ।
ವಿಚೇತುಂ ದಕ್ಷಿಣಾಮಾಶಾಂ ರಾಜನ್ ಪ್ರಸ್ಥಾಪಿತಾಸ್ತ್ವಯಾ ॥೨೮॥

ಎಲೈ ಕಪಿಶ್ರೇಷ್ಠನೇ, ನೀನೂ ಮತ್ತು ವಾಲಿಯೂ ರಕ್ಷಿಸಿದ್ದ ದೊಡ್ಡದಾದ, ಶುದ್ಧವಾದ ಮಧುವನವನ್ನು ಪವನಾತ್ಮಜನಾದ ಹನುಮಂತನು ಭೋಗಿಸುತ್ತಿದ್ದಾನೆ. ಎಲೈ ರಾಜನೇ, ವಾಲಿಪುತ್ರನಾದ ಅಂಗದನೂ ಮತ್ತು ಸೀತೆಯನ್ನು ಹುಡುಕಲು ನೀನು ದಕ್ಷಿಣ ದಿಕ್ಕಿಗೆ ಕಳುಹಿಸಿದ್ದ ಉಳಿದ ಕಪಿಶ್ರೇಷ್ಠರೂ ಸಹ ಮಧುವನದ ಮಧುವನ್ನು ಭೋಗಿಸುತ್ತಿದ್ದಾರೆ.

ಮಾರ್ಕಂಡೇಯಃ

ತೇಷಾಮಪನಯಂ ಶ್ರುತ್ವಾ ಮೇನೇ ಸ ಕೃತಕೃತ್ಯತಾಮ್ ।
ಕೃತಾರ್ಥಾನಾಂ ಹಿ ಭೃತ್ಯಾನಾಮೇತದ್ ಭವತಿ ಚೇಷ್ಟಿತಮ್ ॥೨೯॥

ಮಾರ್ಕಂಡೇಯರು– ಸುಗ್ರೀವನು ಅವರ ಅವಿನಯವನ್ನು ಕೇಳಿ ಅವರು ಕೃತಾರ್ಥರಾಗಿದ್ದಾರೆಂದು ತಿಳಿದನು. ಕಾರ್ಯವನ್ನು ಸಾಧಿಸಿದ ಭೃತ್ಯರಿಗೆ ಇಂತಹ ನಡೆವಳಿಕೆಯು ಉಂಟಾಗುವುದಷ್ಟೆ.

ಸ ತದ್ ರಾಮಾಯ ಮೇಧಾವೀ ಶಶಂಸ ಪ್ಲವಗರ್ಷಭಃ ।
ರಾಮಶ್ಚಾಪ್ಯನುಮಾನೇನ ಮೇನೇ ದೃಷ್ಟಾಂ ತು ಮೈಥಿಲೀಮ್ ॥೩೦॥

ಮೇಧಾವಿಯಾದ ಆ ಕಪಿಶ್ರೇಷ್ಠನು ರಾಮನಿಗೆ ಈ ವಿಷಯವನ್ನು ತಿಳಿಸಿದನು. ರಾಮನೂ ಸಹ ಸೀತೆಯು ನೋಡಲ್ಪಟ್ಟಿದ್ದಾಳೆ ಎಂದು ಊಹಿಸಿದನು.

ಹನೂಮತ್ಪ್ರಮುಖಾಶ್ಚಾಪಿ ವಿಶ್ರುತಾಸ್ತೇ ಪ್ಲವಂಗಮಾಃ ।
ಅಭಿಜಗ್ಮುರ್ಹರೀಂದ್ರಂ ತಂ ರಾಮಲಕ್ಷ್ಮಣಸನ್ನಿಧೌ ॥೩೧॥

ಹನುಮಂತ ಮೊದಲಾದ ಪ್ರಖ್ಯಾತರಾದ ಕಪಿಶ್ರೇಷ್ಠರು ರಾಮಲಕ್ಷ್ಮಣರ ಸನ್ನಿಧಿಯಲ್ಲಿ ಕಪಿರಾಜನಾದ ಸುಗ್ರೀವನ ಬಳಿಗೆ ಬಂದರು.

ಗತಿಂ ಚ ಮುಖವರ್ಣಂ ಚ ದೃಷ್ಟ್ವಾ ರಾಮೋ ಹನೂಮತಃ ।
ಅಗಮತ್ ಪ್ರತ್ಯಯಂ ಭೂಯೋ ದೃಷ್ಟಾ ಸೀತೇತಿ ಭಾರತ ॥೩೨॥

ಎಲೈ ಭಾರತನೇ, ಹನುಮಂತನ ನಡಿಗೆಯನ್ನು ಮತ್ತು ಮುಖವರ್ಣವನ್ನು ಗಮನಿಸಿದ ರಾಮನು ಸೀತೆಯು ನೋಡಲ್ಪಟ್ಟಿದ್ದಾಳೆ ಎಂದು ಪುನಃ ವಿಶ್ವಾಸವನ್ನು ಹೊಂದಿದನು.

ಹನುಮತ್ಪ್ರಮುಖಾಸ್ತೇ ತು ವಾನರಾಃ ಪೂರ್ಣಮಾನಸಾಃ ।
ಪ್ರಣೇಮುರ್ವಿಧಿವದ್ ರಾಮಂ ಸುಗ್ರೀವಂ ಲಕ್ಷ್ಮಣಂ ತಥಾ ।
ತಾನುವಾಚಾಗತಾನ್ ರಾಮಃ ಪ್ರಗೃಹ್ಯ ಸಶರಂ ಧನುಃ ॥೩೩॥

ಹನುಮಂತನೇ ಮೊದಲಾದ ವಾನರರು ಪೂರ್ಣಮನಸ್ಸಿನಿಂದ ರಾಮನಿಗೂ, ಲಕ್ಷ್ಮಣನಿಗೂ ಮತ್ತು ಸುಗ್ರೀವನಿಗೂ ವಿಧಿಪೂರ್ವಕವಾಗಿ ನಮಸ್ಕಾರವನ್ನು ಮಾಡಿದರು. ಧನುರ್ಬಾಣಗಳನ್ನು ಧರಿಸಿದ ರಾಮನು ಹಿಂದಿರುಗಿದ ಅವರನ್ನು ನೋಡಿ ಮಾತನಾಡಿದನು.

ಅಪಿ ಮಾಂ ಜೀವಯಿಷ್ಯಧ್ವಮಪಿ ವಃ ಕೃತಕೃತ್ಯತಾ ।
ಅಪಿ ರಾಜ್ಯಮಯೋಧ್ಯಾಯಾಂ ಕಾರಯಿಷ್ಯಾಮ್ಯಹಂ ಪುನಃ ॥೩೪॥

ನನ್ನ ಪ್ರಾಣಗಳನ್ನು ಏನಾದರೂ ಉಳಿಸುವಿರಾ? ನೀನು ಕೃತಾರ್ಥರಾಗಿದ್ದೀರಾ? ಇನ್ನೊಮ್ಮೆ ನಾನು ಅಯೋಧ್ಯೆಯಲ್ಲಿ ರಾಜ್ಯವನ್ನು ಆಳುವೆನೇ?

ನಿಹತ್ಯ ಸಮರೇ ಶತ್ರೂನಾಹೃತ್ಯ ಜನಕಾತ್ಮಜಾಮ್ ।
ಅಮೋಕ್ಷಯಿತ್ವಾ ವೈದೇಹೀಮಹತ್ವಾ ಚ ರಣೇ ರಿಪೂನ್ ॥೩೫॥

ಹೃತದಾರೋಽವಧೂತಶ್ಚ ನಾಹಂ ಜೀವಿತುಮುತ್ಸಹೇ ।

ಯುದ್ಧಗಳಲ್ಲಿ ಶತ್ರುಗಳನ್ನು ಕೊಲ್ಲದೆ ಸೀತೆಯನ್ನು ಬಂಧನದಿಂದ ಬಿಡಿಸಿ ಹಿಂದಕ್ಕೆ ಕರೆತರದೆ, ಯುದ್ಧದಲ್ಲಿ ಶತ್ರುಗಳನ್ನು ಸಂಹರಿಸದೆ ಪತ್ನಿಯನ್ನು ಕಳೆದುಕೊಂಡು ತಿರಸ್ಕೃತನಾಗಿ ನಾನು ಬದುಕಲು ಬಯಸುವುದಿಲ್ಲ.

ಮಾರ್ಕಂಡೇಯಃ

ಇತ್ಯುಕ್ತವಚನಂ ರಾಮಂ ಪ್ರತ್ಯುವಾಚಾನಿಲಾತ್ಮಜಃ ॥೩೬॥

ಪ್ರಿಯಮಾಖ್ಯಾಮಿ ತೇ ರಾಮ ದೃಷ್ಟಾ ಸಾ ಜಾನಕೀ ಮಯಾ ॥೩೭॥

ಮಾರ್ಕಂಡೇಯರು– ಹೀಗೆ ರಾಮನು ಮಾತನಾಡಿದ ಮೇಲೆ ಅನಿಲಾತ್ಮಜನಾದ ಹನುಮಂತನು ರಾಮನೇ ನಿನಗೆ ಪ್ರಿಯವನ್ನು ಹೇಳುತ್ತೇನೆ ನಾನು ಜಾನಕಿಯನ್ನು ನೋಡಿದ್ದೇನೆ ಎಂದು ಹೇಳಿದನು.

ವಿಚಿತ್ಯ ದಕ್ಷಿಣಾಮಾಶಾಂ ಸಪರ್ವತವನಾಕರಾಮ್ ।
ಶ್ರಾಂತಾಃ ಕಾಲೇ ವ್ಯತೀತೇ ಸ್ಮ ದೃಷ್ಟವಂತೋ ಮಹಾಗುಹಾಮ್ ॥೩೮॥

ನಾವು ಪರ್ವತವನಗಳಿಂದ ಕೂಡಿದ ದಕ್ಷಿಣದಿಕ್ಕಿನಲ್ಲಿ ಹುಡುಕಿ ದಣಿದವರಾಗಿ ಒಂದು ತಿಂಗಳಿನ ಅವಧಿಯು ಮುಗಿದುಹೋಗುತ್ತಿರಲು ಒಂದು ದೊಡ್ಡ ಗುಹೆಯನ್ನು ನೋಡಿದೆವು.

ಪ್ರವಿಶಾಮೋ ವಯಂ ತಾಂ ತು ಬಹುಯೋಜನಮಾಯತಾಮ್ ।
ಸಾಂಧಕಾರಾಂ ಸುವಿಪಿನಾಂ ಗಹನಾಂ ಕೀಟಸೇವಿತಾಮ್ ॥೩೯॥

ನಾವು ಅಂಧಕಾರಮಯವಾಗಿದ್ದ, ಒಳಗಡೆ ಕಾಡುಗಳಿದ್ದ, ಕ್ರಿಮಿಕೀಟಗಳಿಂದ ಸೇವಿತವಾದ ಆ ದಟ್ಟವಾದ ಗುಹೆಯನ್ನು ಪ್ರವೇಶಿಸಿದೆವು.

ಗತ್ವಾ ಸುಮಹದಧ್ವಾನಮಾದಿತ್ಯಸ್ಯ ಪ್ರಭಾಂ ತತಃ ।
ದೃಷ್ಟವಂತಃ ಸ್ಮ ತತ್ರೈವ ಭವನಂ ದಿವ್ಯಮಂತರಾ ॥೪೦॥

ನಾವು ಅಲ್ಲಿ ಬಹಳ ದೂರಹೋದಮೇಲೆ ಸೂರ್ಯನ ಪ್ರಭೆಯನ್ನೂ, ಅಲ್ಲಿಯೇ ಒಳಗೆ ಒಂದು ದಿವ್ಯವಾದ ಭವನವನ್ನೂ ನೋಡಿದೆವು.

ಮಯಸ್ಯ ಕಿಲ ದೈತ್ಯಸ್ಯ ತದಾಸೀದ್ ವೇಶ್ಮ ರಾಘವ ।
ತತ್ರ ಪ್ರಭಾವತೀ ನಾಮ ತಪೋಽತಪ್ಯತ ತಾಪಸೀ ॥೪೧॥

ರಾಘವನೇ, ಅದು ಮಯ ಎಂಬದೈತ್ಯನ ಭವನವಾಗಿದ್ದಿತು. ಅಲ್ಲಿ ಪ್ರಭಾವತೀ ಎಂಬ ಒಬ್ಬ ತಾಪಸಿಯು ತಪಸ್ಸು ಮಾಡುತ್ತಿದ್ದಳು.

ತಯಾ ದತ್ತಾನಿ ಭೋಜ್ಯಾನಿ ಪಾನಾನಿ ವಿವಿಧಾನಿ ಚ ।
ಭುಕ್ತ್ವಾ ಲಬ್ಧಬಲಾಃ ಸಂತಸ್ತಯೋಕ್ತೇನ ಪಥಾ ತತಃ ॥೪೨॥

ಅವಳು ನಮಗೆ ವಿವಿಧವಾದ ಭೋಜ್ಯಗಳನ್ನು ಮತ್ತು ಪಾನಗಳನ್ನು ಕೊಟ್ಟಳು. ಅದನ್ನು ಸ್ವೀಕರಿಸಿ ಬಲವನ್ನು ಹೊಂದಿದವರಾಗಿ ಅವಳು ಹೇಳಿದ ಮಾರ್ಗದಿಂದ ಮುಂದೆ ನಡೆದೆವು.

ನಿರ್ಯಾಯ ತಸ್ಮಾದುದ್ದೇಶಾತ್ ಪಶ್ಯಾಮೋ ಲವಣಾಂಭಸಃ ।
ಸಮೀಪೇ ಮಹ್ಯಮಲಯೌ ದರ್ದುರಂ ಚ ಮಹಾಗಿರಿಮ್ ॥೪೩॥

ಅಲ್ಲಿಂದ ಮುಂದೆ ಬಂದು ಲವಣ ಸಮುದ್ರದ ಸಮೀಪದಲ್ಲಿದ್ದ ಮಹ್ಯಮಲಯಪರ್ವತಗಳನ್ನು ಮತ್ತು ದರ್ದುರ ಪರ್ವತವನ್ನು ನೋಡಿದೆವು.

ತತೋ ಮಲಯಮಾರುಹ್ಯ ಪಶ್ಯಂತೋ ವರುಣಾಲಯಮ್ ।
ವಿಷಣ್ಣಾ ವ್ಯಥಿತಾಃ ಖಿನ್ನಾ ನಿರಾಶಾ ಜೀವಿತೇ ಭೃಶಮ್ ॥೪೪॥

ಅನಂತರ ಮಲಯಪರ್ವತವನ್ನು ಹತ್ತಿ ಸಮುದ್ರವನ್ನು ನೋಡುತ್ತಾ ವಿಷಾದದಿಂದಲೂ, ವ್ಯಥೆಯಿಂದಲೂ ಕೂಡಿದವರಾಗಿ ಜೀವನದ ಆಸೆಯನ್ನು ತೊರೆದೆವು.

ಅನೇಕಶತವಿಸ್ತೀರ್ಣಂ ಯೋಜನಾನಾಂ ಮಹೋದಧಿಮ್ ।
ತಿಮಿನಕ್ರಝಷಾವಾಸಂ ಚಿಂತಯಂತಃ ಸುದುಃಖಿತಾಃ ॥೪೫॥

ಅನೇಕ ಶತಯೋಜನ ವಿಸ್ತಾರವಾದ, ತಿಮಿಂಗಿಲಗಳ ಮತ್ತು ಮೊಸಳೆಗಳ ಆವಾಸಸ್ಥಾನವಾದ ಸಮುದ್ರವನ್ನು ಕುರಿತು ಚಿಂತಿಸುತ್ತಾ ಬಹಳ ದುಃಖಿತರಾದೆವು.

ತತ್ರಾಶನಸಂಕಲ್ಪಂ ಕೃತ್ವಾऽऽಸೀನಾ ವಯಂ ತದಾ ।
ತತಃ ಕಥಾಂತೇ ಗೃಧ್ರಸ್ಯ ಜಟಾಯೋರಭವತ್ ಕಥಾ ॥೪೬॥

ಅಲ್ಲಿ ಉಪವಾಸ ಸಂಕಲ್ಪವನ್ನು ಮಾಡಿ ರಾಮನ ಕಥೆಯನ್ನು ಹೇಳುತ್ತಾ ಕುಳಿತಿದ್ದ ನಮಗೆ ಕಥೆಯ ಕೊನೆಯಲ್ಲಿ ಜಟಾಯು ಪಕ್ಷಿಯ ಕಥೆಯು ಬಂದಿತು.

ತತಃ ಪರ್ವತಶೃಂಗಾಭಂ ಘೋರರೂಪಂ ಭಯಾವಹಮ್ ।
ಪಕ್ಷಿಣಂ ದೃಷ್ಟವಂತಃ ಸ್ಮ ವೈನತೇಯಮಿವಾಪರಮ್ ।
ಸೋऽಸ್ಮಾನತರ್ಕಯದ್ ಭೋಕ್ತುಮಥಾಭ್ಯೇತ್ಯ ವಚೋऽಬ್ರವೀತ್ ॥

ಆಗ ಇನ್ನೊಬ್ಬ ಗರುಡನಂತಿದ್ದ, ಪರ್ವತಶಿಖರದಂತಿದ್ದ, ಭಯಂಕರ ಆಕೃತಿಯನ್ನು ಹೊಂದಿದ್ದ ಒಂದು ಪಕ್ಷಿಯನ್ನು ನೋಡಿದೆವು. ಆ ಪಕ್ಷಿಯು ನಾವು ಪ್ರಾಯೋಪವೇಶಕ್ಕೆ ಕುಳಿತಿರುವುದನ್ನು ಊಹಿಸಿ ನಮ್ಮ ಸಮೀಪಕ್ಕೆ ಬಂದು ಆಹಾರವನ್ನು ಸ್ವೀಕರಿಸುವಂತೆ ಹೇಳಿತು.

ಭೋಃ ಕ ಏಷ ಮಮ ಭ್ರಾತುರ್ಜಟಾಯೋಃ ಕುರುತೇ ಕಥಾಮ್॥೪೮॥

ಸಂಪಾತಿರ್ನಾಮ ತಸ್ಯಾಹಂ ಜ್ಯೇಷ್ಠೋ ಭ್ರಾತಾ ಖಗಾಧಿಪಃ ।
ಅನ್ಯೋನ್ಯಸ್ಪರ್ಧಯಾऽऽರೂಢಾವಾವಾಮಾದಿತ್ಯಸದ್ಮವಮ್ ॥೪೯॥

ಅಯ್ಯಾ! ನನ್ನ ತಮ್ಮನಾದ ಜಟಾಯುವಿನ ಕಥೆಯನ್ನು ಹೇಳುತ್ತಿರುವ ನೀವು ಯಾರು? ನಾನು ಅವನ ಅಣ್ಣನಾದ ಸಂಪಾತಿ ಎಂಬ ಪಕ್ಷಿರಾಜ. ಅನ್ಯೋನ್ಯ ಸ್ಪರ್ಧೆಯಿಂದ ನಾವಿಬ್ಬರೂ ಮೇಲೆ ಮೇಲೆ ಆದಿತ್ಯನ ಸ್ಥಾನವನ್ನು ಉದ್ದೇಶಿಸಿ ಹೊರಟೆವು.

ತತೋ ದಗ್ಧಾವಿಮೌ ಪಕ್ಷೌ ನ ದಗ್ಧೌ ತು ಜಟಾಯುಷಃ ।
ತದಾ ಮೇ ಚಿರದೃಷ್ಟಃ ಸ ಭ್ರಾತಾ ಗೃಧ್ರಪತಿಃ ಪ್ರಿಯಃ ॥೫೦॥

ನಿರ್ದಗ್ಧಪಕ್ಷಃ ಪತಿತೋ ಹ್ಯಹಮಸ್ಮಿನ್ ಮಹಾಗಿರೌ ।
ದ್ರಷ್ಟುಂ ವೀರಂ ನ ಶಕ್ನೋಮಿ ಭ್ರಾತರಂ ವೈ ಜಟಾಯುಷಮ್ ॥೫೧॥

ಆಗ ನನ್ನ ಈ ಎರಡು ರೆಕ್ಕೆಗಳು ಸುಟ್ಟುಹೋದವು. ಜಟಾಯುವಿನ ರೆಕ್ಕೆಯು ಸುಡಲಿಲ್ಲ. ಗೃಧ್ರರಾಜನಾದ ಪ್ರೀತಿಪಾತ್ರನಾದ ಆ ತಮ್ಮನನ್ನು ನೋಡಿ ಬಹಳ ಕಾಲವಾಯಿತು. ನಾನು ರೆಕ್ಕೆಗಳನ್ನು ಸುಟ್ಟುಕೊಂಡು ಈ ದೊಡ್ಡ ಪರ್ವತದಲ್ಲಿ ಬಿದ್ದೆ. ನನ್ನ ತಮ್ಮನಾದ ವೀರನಾದ ಜಟಾಯುವನ್ನು ನೋಡಲು ನನಗೆ ಸಾಧ್ಯವಾಗುತ್ತಿಲ್ಲ.

ಹನುಮಾನ್

ತಸ್ಯೈವಂ ವದತೋಽಸ್ಮಾಭಿರ್ಹತೋ ಭ್ರಾತಾ ನಿವೇದಿತಃ ।
ವ್ಯಸನಂ ಭವತಶ್ಚೇದಂ ಸಂಕ್ಷೇಪಾದ್ವೈ ನಿವೇದಿತಮ್ ॥೫೨॥

ಹನುಮಾನ್– ಹೀಗೆ ಮಾತನಾಡುತ್ತಿದ್ದ ಅವನಿಗೆ ಹನುಮಂತನು ನಿನ್ನ ತಮ್ಮನು ಹತನಾದನು. ನಿನಗೆ ಉಂಟಾದ ಈ ವ್ಯಸನವನ್ನು ಸಂಕ್ಷೇಪವಾಗಿ ಹೇಳುತ್ತಿದ್ದೇನೆ (ಎಂದು ಹೇಳಿದನು).

ಸ ಸಂಪಾತಿಸ್ತದಾ ರಾಜನ್ ಶ್ರುತ್ವಾ ಸುಮಹದಪ್ರಿಯಮ್ ।
ವಿಷಣ್ಣಚೇತಾಃ ಪಪ್ರಚ್ಛ ಪುನರಸ್ಮಾನರಿಂದಮ ॥೫೩॥

ರಾಜನೇ, ಅರಿಂದಮನೇ, ಆ ಸಂಪಾತಿಯಾದರೂ ಈ ದೊಡ್ಡ ಅಪ್ರಿಯವಾದ ವಾರ್ತೆಯನ್ನು ಕೇಳಿ ದುಃಖಗೊಂಡವನಾಗಿ ನಮ್ಮನ್ನು ಪುನಃ ಪ್ರಶ್ನೆಮಾಡಿದನು.

ಕಃ ಸ ರಾಮಃ ಕಥಂ ಸೀತಾ ಜಟಾಯುಶ್ಚ ಕಥಂ ಹತಃ ।
ಇಚ್ಛಾಮಿ ಸರ್ವಮೇವೈತತ್ ಶ್ರೋತುಂ ಪ್ಲವಗಸತ್ತಮಾಃ ॥೫೪॥

ರಾಮನು ಯಾರು? ಸೀತೆಯು ಹೇಗಿದ್ದಾಳೆ? ಜಟಾಯುವು ಹೇಗೆ ಹತನಾದನು? ಎಲೈ ಕಪಿಶ್ರೇಷ್ಠರೇ, ನಾನು ಇವೆಲ್ಲವನ್ನೂ ತಿಳಿಯಲು (ಕೇಳಲು) ಬಯಸುತ್ತೇನೆ.

ಹನುಮಾನ್

ತಸ್ಯಾಹಂ ಸರ್ವಮೇವೈತದ್ ಭವತೋ ವ್ಯಸನಾಗಮಮ್ ।
ಪ್ರಾಯೋಪವೇಶನೇ ಚೈವ ಹೇತುಂ ವಿಸ್ತರಶೋಽಬ್ರುವಮ್ ।
ಸೋಽಸ್ಮಾನುತ್ಥಾಪಯಾಮಾಸ ವಾಕ್ಯೇನಾನೇನ ಪಕ್ಷಿರಾಟ್ ॥೫೫॥

ಹನುಮಾನ್– ಅವನಿಗೆ ಈ ನಿಮ್ಮ ಎಲ್ಲಾ ವ್ಯಸನವನ್ನೂ ಮತ್ತು ನಾವು ಪ್ರಾಯೋಪ್ರವೇಶಕ್ಕೆ ಕುಳಿತುಕೊಳ್ಳುವ ಕಾರಣವನ್ನೂ ವಿಸ್ತಾರವಾಗಿ ಹೇಳಿದೆವು. ಆ ಪಕ್ಷಿರಾಜನು ಈ ವಾಕ್ಯವನ್ನು ಹೇಳಿ ನಮ್ಮನ್ನು ಆ ಸ್ಥಳದಿಂದ ಎಬ್ಬಿಸಿದನು.

ರಾವಣೋ ವಿದಿತೋ ಮಹ್ಯಂ ಲಂಕಾ ಚಾಸ್ಯ ಮಹಾಪುರೀ ।
ದೃಷ್ಟಾ ಪಾರೇ ಸಮುದ್ರಸ್ಯ ತ್ರಿಕೂಟಗಿರಿಕಂದರೇ ॥೫೬॥

ಭವಿತ್ರೀ ತತ್ರ ವೈದೇಹೀ ನ ಮೇಽಸ್ತ್ಯತ್ರ ವಿಚಾರಣಾ ॥೫೭॥

ರಾವಣನನ್ನು ನಾನು ತಿಳಿದಿದ್ದೇನೆ. ಲಂಕೆಯು ಅವನ ದೊಡ್ಡ ಪಟ್ಟಣ. ಸಮುದ್ರದ ದಡದಲ್ಲಿ ತ್ರಿಕೂಟಗಿರಿ ಪರ್ವತದ ತಪ್ಪಲಿನಲ್ಲಿ ಅದು ಕಂಡುಬರುತ್ತದೆ. ಸೀತೆಯು ಅಲ್ಲಿಯೇ ಇರುವಳು. ಈ ವಿಷಯದಲ್ಲಿ ನನಗೆ ಸಂಶಯವಿಲ್ಲ.

ಇತಿ ತಸ್ಯ ವಚಃ ಶ್ರುತ್ವಾ ವಯಮುತ್ಥಾಯ ಸತ್ವರಾಃ ।
ಸಾಗರಕ್ರಮಣೇ ಮಂತ್ರಂ ಮಂತ್ರಯಾಮಃ ಪರಂತಪ ॥೫೮॥

ಎಲೈ ಪರಂತಪನೇ, ಹೀಗೆ ಅವನ ಮಾತುಗಳನ್ನು ಕೇಳಿ ನಾವು ಬೇಗ ಮೇಲೆದ್ದು ಸಮುದ್ರವನ್ನು ದಾಟುವ ವಿಷಯದಲ್ಲಿ ಮಂತ್ರಾಲೋಚನೆಯನ್ನು ಮಾಡಿದೆವು.

ನಾಧ್ಯವಸ್ಯದ್ ಯದಾ ಕಶ್ಚಿತ್ ಸಾಗರಸ್ಯ ವಿಲಂಘನಮ್ ।
ತತಃ ಪಿತರಮಾವಿಶ್ಯ ಪುಪ್ಲು(ಪ್ಲ)ವೇಽಹಂ ಮಹಾರ್ಣವಮ್ ।

ಯಾರೂ ಸಾಗರವನ್ನು ದಾಟುವ ವಿಷಯದಲ್ಲಿ ನಿರ್ಧಾರವನ್ನು ಮಾಡಲಿಲ್ಲವಾದ್ದರಿಂದ ನಾನು ದಕ್ಷಿಣ ದಿಕ್ಕಿನಲ್ಲಿ ಉಂಟಾದ ಒಂದು ಜಂಝಾವಾತವನ್ನು ಆವೇಶಿಸಿ ಆ ಸಮುದ್ರವನ್ನು ದಾಟಿದೆನು.

ಶತಯೋಜನವಿಸ್ತೀರ್ಣಂ ನಿಹತ್ಯ ಜಲರಾಕ್ಷಸೀಮ್ ॥೫೯॥

ತತ್ರ ಸೀತಾ ಮಯಾ ದೃಷ್ಟಾ ರಾವಣಾಂತಃಪುರೇ ಸತೀ ।
ಉಪವಾಸತಪಃಶೀಲಾ ಭರ್ತೃದರ್ಶನಲಾಲಸಾ ॥೬೦॥

ಶತಯೋಜನ ವಿಸ್ತೀರ್ಣವಾದ ಸಮುದ್ರವನ್ನು ದಾಟಿ ಜಲರಾಕ್ಷಸಿಯನ್ನು ಕೊಂದು ರಾವಣನ ಅಂತಃಪುರದಲ್ಲಿ ಉಪವಾಸ ಪರಳೂ, ತಪಃಶೀಲಳೂ, ಪತಿದರ್ಶನ ಲಾಲಸಳೂ ಆದ ಪತಿವ್ರತೆಯಾದ ಸೀತೆಯನ್ನು ನಾನು ನೋಡಿದೆನು.

ಜಟಿಲಾ ಮಲದಿಗ್ಧಾಂಗೀ ಕೃಶಾ ದೀನಾ ತಪಸ್ವಿನೀ ॥೬೧॥

ನಿಮಿತ್ತೈಸ್ತಾಮಹಂ ಸೀತಾಮುಪಲಭ್ಯ ಪೃಥಗ್ವಿಧೈಃ ।
ಉಪಸೃತ್ಯಾಬ್ರುವಂ ಚಾರ್ಯಾಮಭಿಗಮ್ಯ ರಹೋಗತಾಮ್ ॥೬೨॥

ಅವಳು ಜಟಿಲಳೂ, ದೇಹದ ಮೇಲೆ ಕೊಳೆಯನ್ನು ಹೊಂದಿದವಳೂ, ಕೃಶಳೂ, ದೀನಳೂ, ಶೋಚನೀಯಳೂ ಆಗಿದ್ದಳು. ಅನೇಕ ಕಾರಣಗಳಿಂದ ನಾನು ಅವಳನ್ನು ಸೀತೆ ಎಂದು ಊಹಿಸಿ ಅವಳನ್ನು ಸಮೀಪಿಸಿ ಏಕಾಂತದಲ್ಲಿ ಆ ಪೂಜ್ಯೆಯನ್ನು ಕುರಿತು ಮಾತನಾಡಿದೆನು.

ಸೀತೇ ರಾಮಸ್ಯ ದೂತೋಽಹಂ ವಾನರೋ ಮಾರುತಾತ್ಮಜಃ ।
ತ್ವದ್ದರ್ಶನಮಭಿಪ್ರೇಪ್ಸುರಿಹ ಪ್ರಾಪ್ತೋ ವಿಹಾಯಸಾ ॥೬೩॥

ಸೀತೆಯೇ, ನಾನು ರಾಮನ ದೂತನಾದ ವಾಯುಪುತ್ರನಾದ ವಾನರ. ನಿನ್ನ ದರ್ಶನವನ್ನು ಪಡೆಯಲು ಬಯಸಿ ನಾನು ಆಕಾಶಮಾರ್ಗದಿಂದ ಇಲ್ಲಿಗೆ ಬಂದೆನು.

ರಾಜಪುತ್ರೌ ಕುಶಲಿನೌ ಭ್ರಾತರೌ ರಾಮಲಕ್ಷ್ಮಣೌ ।
ಸರ್ವಶಾಖಾಮೃಗೇಂದ್ರೇಣ ಸುಗ್ರೀವೇಣಾಭಿಪಾಲಿತೌ ॥೬೪॥

ರಾಜಕುಮಾರರಾದ ರಾಮಲಕ್ಷ್ಮಣ ಸಹೋದರರು ಕ್ಷೇಮದಿಂದಿದ್ದಾರೆ. ಎಲ್ಲಾ ಕಪಿಗಳ ರಾಜನಾದ ಸುಗ್ರೀವನು ಅವರನ್ನು ರಕ್ಷಿಸುತ್ತಿದ್ದಾನೆ.

ಕುಶಲಂ ತ್ವಾಬ್ರವೀದ್ ರಾಮಃ ಸೀತೇ ಸೌಮಿತ್ರಿಣಾ ಸಹ ।
ಸಖೀಭಾವಾಚ್ಚ ಸುಗ್ರೀವಃ ಕುಲಂ ತ್ವಾಽನುಪೃಚ್ಛತಿ ॥೬೫॥

ಸೀತೆಯೇ, ರಾಮನು ನಿನಗೆ ಕುಶಲವನ್ನು ತಿಳಿಸುವಂತೆ ಲಕ್ಷ್ಮಣನ ಜೊತೆಯಲ್ಲಿ ಹೇಳಿದನು. ಸುಗ್ರೀವನೂ ಸಹ ಸ್ನೇಹಭಾವದಿಂದ ನಿನ್ನ ಕುಶಲವನ್ನು ವಿಚಾರಿಸುತ್ತಾನೆ.

ಕ್ಷಿಪ್ರಮೇಷ್ಯತಿ ತೇ ಭರ್ತಾ ಸರ್ವಶಾಖಾಮೃಗೈಃ ಸಹ ।
ಪ್ರತ್ಯಯಂ ಕುರು ಮೇ ದೇವಿ ವಾನರೋಽಸ್ಮಿ ನ ರಾಕ್ಷಸಃ ॥೬೬॥

ನಿನ್ನ ಪತಿಯಾದ ರಾಮನು ಎಲ್ಲ ಕಪಿಗಳ ಜೊತೆಯಲ್ಲಿ ಶೀಘ್ರವಾಗಿ ಇಲ್ಲಿಗೆ ಬರುವನು. ದೇವಿಯೇ, ನನ್ನ ಮಾತನ್ನು ನಂಬು. ನಾನು ಕಪಿ. ರಾಕ್ಷಸನಲ್ಲ.

ಮುಹೂರ್ತಮಿವ ಚ ಧ್ಯಾತ್ವಾ ಸೀತಾ ಮಾಂ ಪ್ರತ್ಯುವಾಚ ಹ ।
ಅವೈಮಿ ತ್ವಾಂ ಹನೂಮಂತಮವಿಂಧ್ಯವಚನಾದಹಮ್ ॥೬೭॥

ಒಂದು ಮುಹೂರ್ತದ ಕಾಲ ಚಿಂತಿಸಿ ಸೀತೆಯು ನನ್ನನ್ನು ಕುರಿತು ಅವಿಂಧ್ಯನ ಮಾತಿನಂತೆ ನಿನ್ನನ್ನು ಹನುಮಂತನೆಂದು ನಾನು ತಿಳಿಯುತ್ತೇನೆ ಎಂದು ಹೇಳಿದಳು.

ಅವಿಂಧ್ಯೋ ಹಿ ಮಹಾಬಾಹೋ ರಾಕ್ಷಸೋ ವೃದ್ಧಸಮ್ಮತಃ ।
ಕಥಿತಸ್ತೇನ ಸುಗ್ರೀವಸ್ತ ದ್ವಿದ್ಧೈಃ ಸಚಿಮೈರ್ವೃತಃ ॥೬೮॥

ಎಲೈ ಮಹಾಬಾಹುವೇ, ಅವಿಂಧ್ಯನೆಂಬ ವೃದ್ಧಸಮ್ಮತನಾದ ಒಬ್ಬ ರಾಕ್ಷಸನು ಸುಗ್ರೀವನೆಂಬ ಕಪಿರಾಜನು ನಿನ್ನಂತಹ ಸಚಿವರಿಂದ ಕೂಡಿದ್ದಾನೆ ಎಂಬ ವಿಷಯವನ್ನು ನನಗೆ ಹೇಳಿದ್ದನು (ಎಂದೂ ಹೇಳಿದಳು).

ಗಮ್ಯತಾಮಿತಿ ಚೋಕ್ತಾ ವ ಮಾಂ ಸೀತಾ ಪ್ರಾದಾದಿಮಂ ಮಣಿಮ್ ॥

ಧಾರಿತಾ ಯೇನ ವೈದೇಹೀ ಕಾಲಮೇತಮನಿಂದಿತಾ ।
ಪ್ರತ್ಯಯಾರ್ಥಂ ಕಥಾಂ ಚೇಮಾಂ ಕಥಯಾಮಾಸ ಜಾನಕೀ ॥೭೦॥

ನೀನು ಹೊರಡು ಎಂದು ಹೇಳಿ ಸೀತೆಯು ನನಗೆ ಈ ಮಣಿಯನ್ನು ಕೊಟ್ಟಳು. ಈ ಚೂಡಾಮಣಿಯ ಬಲದಿಂದಲೇ ಅನಿಂದಿತಳಾದ ವೈದೇಹಿಯು ಇದುವರೆಗೆ ಜೀವಿಸಿದ್ದಳು. ವಿಶ್ವಾಸವುಂಟಾಗುವುದಕ್ಕಾಗಿ ಜಾನಕಿಯು ಈ ಕಥೆಯನ್ನು ಹೇಳಿದಳು.

ಕ್ಷಿಪ್ತಾಮಿಷೀಕಾಂ ಕಾಕಾಯ ಚಿತ್ರಕೂಟೇ ಮಹಾಗಿರೌ ।
ಭವತಾ ಪುರುಷವ್ಯಾಘ್ರ ಪ್ರತ್ಯಭಿಜ್ಞಾನಕಾರಣಾತ್ ।
ಏಕಾಕ್ಷಿವಿಕಲಃ ಕಾಕಃ ಸುದುಷ್ಟಾತ್ಮಾ ಕೃತಶ್ಚ ವೈ ॥೭೧॥

ಎಲೈ ಪುರುಷವ್ಯಾಘ್ರನೇ, ಚಿತ್ರಕೂಟಪರ್ವತದಲ್ಲಿ ಒಂದು ಕಾಗೆಯ ಮೇಲೆ ನೀನು ಪ್ರಯೋಗಿಸಿದ ಒಂದು ಹುಲ್ಲುಕಡ್ಡಿಯನ್ನೂ ಅದರಿಂದ ಅತ್ಯಂತ ದುಷ್ಟನಾದ ಆ ಕಾಗೆಯು ಏಕಾಕ್ಷಿಯಾಗಿ ಮಾಡಲ್ಪಟ್ಟದ್ದನ್ನೂ ನಂಬಿಕೆಯು ಬರುವ ಸಲುವಾಗಿ ಜಾನಕಿಯು ಹೇಳಿದಳು.

ಮಾರ್ಕಂಡೇಯಃ

ಗ್ರಾಹಯಿತ್ವಾಹಮಾತ್ಮಾನಂ ತತೋ ದಗ್ಧ್ವಾ ಚ ತಾಂ ಪುರೀಮ್ ।
ಸಂಪ್ರಾಪ್ತ ಇತಿ ತಂ ರಾಮಃ ಪ್ರಿಯವಾದಿನಮಾರ್ಚಯತ್ ॥೭೨॥

ಮಾರ್ಕಂಡೇಯ– ಅನಂತರ ನಾನು ನನ್ನ ಪರಿಚಯವನ್ನು ಮಾಡಿಕೊಟ್ಟು ಲಂಕಾಪಟ್ಟಣವನ್ನು ಸುಟ್ಟು ಇಲ್ಲಿಗೆ ಬಂದೆನು ಎಂದು ಹೇಳಿದ ಪ್ರಿಯವಾದಿಯಾದ ಹನುಮಂತನನ್ನು ರಾಮನು ಸತ್ಕರಿಸಿದನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂಸಂಹಿತಾಯಾಂ ವೈಯಾಸಿಕ್ಯಾಂ
ವನಪರ್ವಣಿ ಏಕಸಪ್ತತ್ಯಧಿಕದ್ವಿಶತತಮೋऽಧ್ಯಾಯಃ ॥
॥ಇತಿ ರಾಮೋಪಖ್ಯಾನಪರ್ವಣಿ ಹನೂಮತ್‌ಪ್ರತ್ಯಾಗಮನಾ ನಾಮ ದಶಮೋऽಧ್ಯಾಯಃ॥

ಇಲ್ಲಿಗೆ ಮಹಾಭಾರತದ ವನಪರ್ವದಲ್ಲಿ ಇನ್ನೂರ ಎಪ್ಪತ್ತೊಂದನೆಯ ಅಧ್ಯಾಯ ಮುಗಿಯಿತು.

★ ★ ★ ★

ಇನ್ನೂರ ಎಪ್ಪತ್ತೆರಡನೆಯ ಅಧ್ಯಾಯ

ವಾನರ ಸೈನ್ಯದ ಜೊತೆಯಲ್ಲಿ ಸಮುದ್ರದಡಕ್ಕೆ ಪ್ರಯಾಣ. ರಾಮನಿಂದ ವ್ರತರೂಪವಾಗಿ ದರ್ಭೆಯಲ್ಲಿ ಶಯನ. ಸಮುದ್ರರಾಜನಿಂದ ನಳನಿಂದ ಸೇತುವೆಯನ್ನು ನಿರ್ಮಾಣ ಮಾಡಿಸುವಂತೆ ಪ್ರೇರಣೆ. ವಿಭೀಷಣನ ಸ್ವೀಕಾರ.

ಮಾರ್ಕಂಡೇಯಃ

ತತಸ್ತತ್ರೈವ ರಾಮಸ್ಯ ಸಮಾಸೀನಸ್ಯ ತೈಃ ಸಹ ।
ಸಮಾಜಗ್ಮುಃ ಕಪಿಶ್ರೇಷ್ಠಾಃ ಸುಗ್ರೀವವಚನಾತ್ ತದಾ ॥೧॥

ಮಾರ್ಕಂಡೇಯ– ಅನಂತರ ರಾಮನು ಅಲ್ಲಿಯೇ ಅವರ ಜೊತೆಯಲ್ಲಿ ಕುಳಿತಿರಲು ಸುಗ್ರೀವನ ಆಜ್ಞೆಯಂತೆ ಕಪಿಶ್ರೇಷ್ಠರು ಆಗ ಅಲ್ಲಿಗೆ ಬಂದರು.

ವೃತಃ ಕೋಟಿಸಹಸ್ರೇಣ ವಾನರಾಣಾಂ ತರಸ್ವಿನಾಮ್ ।
ಶ್ವಶುರೋ ವಾಲಿನಃ ಶ್ರೀಮಾನ್ ಸುಷೇಣೋ ರಾಮಮಭ್ಯಯಾತ್ ॥೨॥

ವಾಲಿಯ ಮಾವನಾದ ಸುಷೇಣನು ಶೀಘ್ರಗಾಮಿಗಳಾದ ಒಂದು ಸಹಸ್ರ ಕೋಟಿ ಕಪಿಗಳನ್ನು ತೆಗೆದುಕೊಂಡು ರಾಮನ ಬಳಿಗೆ ಬಂದನು.

ಕೋಟೀಶತವೃತೋ ವಾಪಿ ಗಜೋ ಗವಯ ಏವ ಚ ।
ವಾನರೇಂದ್ರೌ ಮಹಾವೀರ್ಯೌ ಪೃಥಕ್‌ಪೃಥಗದೃಶ್ಯತಾಮ್ ॥೩॥

ಗಜ ಗವಯ ಎಂಬ ಮಹಾವೀರ್ಯಶಾಲಿಗಳಾದ ವಾನರ ಶ್ರೇಷ್ಠರು ಶತಕೋಟಿ ಕಪಿಗಳಿಂದ ಸಹಿತವಾಗಿ ಬೇರೆ ಬೇರೆಯಾಗಿ ಬಂದುದು ಕಂಡುಬಂದಿತು.

ಷಷ್ಟಿಕೋಟಿಸಹಸ್ರಾಣಿ ಪ್ರಕರ್ಷನ್ ಪ್ರತ್ಯದೃಶ್ಯತ ।
ಗೋಲಾಂಗೂಲೋ ಮಹಾರಾಜ ಗವಾಕ್ಷೋ ಭೀಮದರ್ಶನಃ ॥೪॥

ಎಲೈ ಮಹಾರಾಜನೇ, ಗವಾಕ್ಷನೆಂಬ ಘೋರರೂಪವುಳ್ಳ ಗೋಲಾಂಗೂಲ ಜಾತಿಗೆ ಸೇರಿದ ಕಪಿಯು ಅರವತ್ತು ಸಹಸ್ರ ಕೋಟಿ ಕಪಿಗಳನ್ನು ತೆಗೆದುಕೊಂಡು ಬರುವುದು ಕಂಡಿತು.

ಗಂಧಮಾದನವಾಸೀ ತು ಪ್ರಥಿತೋ ಗಂಧಮಾದನಃ ।
ಕೋಟೀಶತಸಹಸ್ರಾಣಿ ಹರೀಣಾಂ ಸಮಕರ್ಷತ ॥೫॥

ಗಂಧಮಾದನ ನಿವಾಸಿಯಾದ ಗಂದಮಾದನ ಎಂಬ ಕಪಿಯು ಒಂದು ಲಕ್ಷ ಕೋಟಿ ಕಪಿಗಳನ್ನು ಕರೆತಂದನು.

ಪನಸೋ ನಾಮ ಮೇಧಾವೀ ವಾನರಃ ಸುಮಹಾಬಲಃ ।
ಕೋಟೀರ್ದಶ ದ್ವಾದಶ ಚ ತ್ರಿಂಶತ್ಪಂಚ ಪ್ರಕರ್ಷತಿ ॥೬॥

ಪನಸ ಎಂಬ ಮೇಧಾವಿಯೂ, ಮಹಾಬಲಿಷ್ಠನೂ ಆದ ಕಪಿಯು ಐವತ್ತೇಳು ಕೋಟಿ ಕಪಿಗಳನ್ನು ಕರೆತಂದನು.

ಶ್ರೀಮಾನ್ ದಧಿಮುಖೋ ನಾಮ ಹರಿವೃದ್ಧೋऽತಿವೀರ್ಯವಾನ್ ।
ಪ್ರಚಕರ್ಷ ಮಹಾಸೈನ್ಯಂ ಹರೀಣಾಂ ಭೀಮತೇಜಸಾಮ್ ॥೭॥

ದಧಿಮುಖ ಎಂಬ ಕಾಂತಿಯುಕ್ತನೂ, ಮಹಾಪರಾಕ್ರಮಿಯೂ ಆದ ಕಪಿವೃದ್ಧನು ಭಯಂಕರ ಪರಾಕ್ರಮವುಳ್ಳ ಕಪಿಗಳ ದೊಡ್ಡ ಸೈನ್ಯವನ್ನು ತೆಗೆದುಕೊಂಡು ಬಂದನು.

ಕೃಷ್ಣಾನಾಂ ಮುಖಿಪುಂಡ್ರಾಣಾಮೃಕ್ಷಾಣಾಂ ಭೀಮಕರ್ಮಣಾಮ್ ।
ಕೋಟೀಶತಸಹಸ್ರೇಣ ಜಾಂಬವಾನ್ ಪ್ರತ್ಯದೃಶ್ಯತ ॥೮॥

ಜಾಂಬವಂತನು ಭಯಂಕರ ಕರ್ಮವನ್ನು ಮಾಡುವ ಮುಖದಲ್ಲಿ ಊರ್ಧ್ವಪುಂಡ್ರವಿದ್ದ ಒಂದು ಲಕ್ಷಕೋಟಿ ಕಪ್ಪು ಕರಡಿಗಳನ್ನು ಕರೆದುಕೊಂಡು ಬಂದನು.

ಏತೇ ಚಾನ್ಯೇ ಚ ಬಹವೋ ಹರಿಯೂಥಪಯೂಥಪಾಃ ।
ಅಸಂಖ್ಯೇಯಾ ಮಹಾರಾಜ ಸಮೀಯೂ ರಾಮಕಾರಣಾತ್ ॥೯॥

ಎಲೈ ಮಹಾರಾಜನೇ, ರಾಮಕಾರ್ಯದ ಸಲುವಾಗಿ ಈ ಮತ್ತು ಇನ್ನೂ ಅನೇಕ ಕಪಿನಾಯಕ ನಾಯಕರು ಲೆಕ್ಕವಿಲ್ಲದ ಸಂಖ್ಯೆಯಲ್ಲಿ ಬಂದು ಒಟ್ಟುಗೂಡಿದರು.

ಗಿರಿಕೂಟನಿಭಾಂಗಾನಾಂ ಸಿಂಹಾನಾಮಿವ ಗರ್ಜತಾಮ್ ।
ಶ್ರೂಯತೇ ತುಮುಲಃ ಶಬ್ದಸ್ತತ್ರ ತತ್ರ ಪ್ರಧಾವತಾಮ್ ॥೧೦॥

ಪರ್ವತದ ಕೋಡುಗಲ್ಲಂತಿರುವ ಅವಯವಗಳುಳ್ಳ ಸಿಂಹದಂತೆ ಗರ್ಜನೆಯನ್ನು ಮಾಡುವ ಅಲ್ಲಲ್ಲಿ ಓಡಾಡುವ ಕಪಿಗಳ ತೀವ್ರವಾದ ಶಬ್ದವು ಕೇಳಿಬರುತ್ತಿದ್ದಿತು.

ಗಿರಿಕೂಟನಿಭಾಃ ಕೇಚಿತ್ ಕೇಚಿನ್ಮಹಿಷಸನ್ನಿಭಾಃ ।
ಶರದಭ್ರಪ್ರತೀಕಾಶಾಃ ಪಿಷ್ಟಹಿಂಗುಲಿಕಾನನಾಃ ॥೧೧॥

ಕೆಲವು ಕಪಿಗಳು ಪರ್ವತದ ಕೋಡುಗಲ್ಲಿನಂತಿದ್ದವು, ಕೆಲವು ಎಮ್ಮೆಗಳಂತಿದ್ದವು, ಕೆಲವು ಕಪಿಗಳು ಶರತ್ಕಾಲದ ಮೋಡದಂತೆ ಬಿಳಿಯ ವರ್ಣದಿಂದ ಕೂಡಿದ್ದು ಹಿಂಗುಲಿ ಎಂಬ ರಕ್ತಧಾತುವಿನಂತೆ ಕೆಂಪಾದ ಮುಖಗಳನ್ನು ಹೊಂದಿದ್ದವು.

ಉತ್ಪತಂತಃ ಪತಂತಶ್ಚ ಪ್ಲವಮಾನಾಶ್ಚ ವಾನರಾಃ ।
ಉದ್ಧೂನ್ವಂತೋಽಪರೇ ರೇಣೂನ್ ಸಮಾಜಗ್ಮುಃ ಸಮಂತತಃ ॥೧೨॥

ಆ ಕಪಿಗಳು ಹಾರುತ್ತಾ, ನೆಗೆಯುತ್ತಾ, ಓಲಾಡುತ್ತಾ , ಧೂಳನ್ನು ಎಬ್ಬಿಸುತ್ತಾ ಎಲ್ಲ ಕಡೆಗಳಿಂದಲೂ ಬಂದು ಸೇರಿದವು.

ಸ ವಾನರಮಹಾಸಂಘಃ ಪೂರ್ಣಸಾಗರಸನ್ನಿಭಃ ।
ನಿವೇಶಕಮಕರೋತ್ ತತ್ರ ಸುಗ್ರೀವಾನುಮತೇ ತದಾ ॥೧೩॥

ಆಗ ಸುಗ್ರೀವನ ಆದೇಶದಂತೆ ಪೂರ್ಣವಾದ ಸಮುದ್ರದಂತಿದ್ದ ಆ ಮಹಾವಾನರ ಸಮೂಹವು ಅಲ್ಲಿ ತಂಗಿತು.

ತತಸ್ತೇಷು ಹರೀಂದ್ರೇಷು ಸಮಾವೃತ್ತೇಷು ಸರ್ವಶಃ ।
ತಿಥೌ ಪ್ರಶಸ್ತೇ ನಕ್ಷತ್ರೇ ಮುಹೂರ್ತೇ ಚಾಭಿಪೂಜಿತೇ ॥೧೪॥

ತೇನ ವ್ಯೂಢೇನ ಸೈನ್ಯೇನ ಲೋಕಾನುದ್ವರ್ತಯನ್ನಿವ ।
ಪ್ರಯಯೌ ರಾಘವಃ ಶ್ರೀಮಾನ್ ಸುಗ್ರೀವಸಹಿತಸ್ತದಾ ॥೧೫॥

ಅನಂತರ ಕಪೀಂದ್ರರೆಲ್ಲರೂ ಎಲ್ಲ ಕಡೆಗಳಿಂದಲೂ ಬಂದು ಸೇರಿದ ಮೇಲೆ ಒಂದು ಪ್ರಶಸ್ತವಾದ ತಿಥಿ ನಕ್ಷತ್ರದಲ್ಲಿ, ಶುಭಮುಹೂರ್ತದಲ್ಲಿ ಆ ಒಂದುಗೂಡಿದ ಸೈನ್ಯ ಸಹಿತನಾಗಿ ಲೋಕಗಳನ್ನೇ ನಾಶಮಾಡುವಂತೆ ಕಾಂತಿಯುಕ್ತನಾದ ರಾಮನು ಸುಗ್ರೀವನ ಜೊತೆಯಲ್ಲಿ ಹೊರಟನು.

ಮುಖಮಾಸೀತ್ ತು ಸೈನ್ಯಸ್ಯ ಹನೂಮಾನ್ ಮಾರುತಾತ್ಮಜಃ ।
ಜಘನಂ ಪಾಲಯಾಮಾಸ ಸೌಮಿತ್ರಿರಕಕುತೋಭಯಃ ॥೧೬॥

ಸೈನ್ಯದ ಮುಂಭಾಗವನ್ನು ಮಾರುತಾತ್ಮಜನಾದ ಹನುಮಂತನೂ ಮತ್ತು ಸೈನ್ಯದ ಹಿಂಭಾಗವನ್ನು ನಿರ್ಭಯನಾದ ಲಕ್ಷ್ಮಣನೂ ಪಾಲಿಸುತ್ತಿದ್ದರು.

ಬದ್ಧಗೋಧಾಂಗುಲಿತ್ರಾಣೌ ರಾಘವೌ ತತ್ರ ಜಗ್ಮತುಃ ।
ವೃತೌ ಹರಿಮಹಾಮಾತ್ರೈಶ್ಚಂದ್ರಸೂರ್ಯೌ ಗ್ರಹೈರಿವ ॥೧೭॥

ಕೈಗಳಿಗೆ ಗೋಧಚರ್ಮದ ತ್ರಾಣಗಳನ್ನು ಹಾಕಿಕೊಂಡು ರಾಮಲಕ್ಷ್ಮಣರು ಶ್ರೇಷ್ಠವಾದ ಕಪಿಗಳಿಂದ ಕೂಡಿ ಗ್ರಹಗಳಿಂದ ಕೂಡಿದ ಚಂದ್ರಸೂರ್ಯರಂತೆ ಹೊರಟರು.

ಪ್ರಬಭೌ ಹರಿಸೈನ್ಯಂ ತತ್ ಸಾಲತಾಳಶಿಲಾಯುಧಮ್ ।
ಸುಮಹಚ್ಚಾಲಿಭವನಂ ಯಥಾ ಸೂರ್ಯೋದಯಂ ಪ್ರತಿ ॥೧೮॥

ಸಾಲತಾಳವೃಕ್ಷಗಳನ್ನು ಮತ್ತು ಶಿಲೆಗಳನ್ನು ಆಯುಧವಾಗಿ ಹೊಂದಿದ್ದ ಆ ಕಪಿಸೈನ್ಯವು ಸೂರ್ಯೋದಯದಲ್ಲಿ ಭತ್ತದ ತೆನೆಗಳಿಂದ ಕೂಡಿದ ದೊಡ್ಡ ಭತ್ತದ ಗದ್ದೆಯಂತೆ ಶೋಭಿಸುತ್ತಿದ್ದಿತು.

ನಳನೀಲಾಂಗದಕ್ರಾಥಮೈಂದದ್ವಿವಿದಪಾಲಿತಾ ।
ಯಯೌ ಸುಮಹತೀ ಸೇನಾ ರಾಘವಸ್ಯಾರ್ಥಸಿದ್ಧಯೇ ॥೧೯॥

ನಳ, ನೀಲ, ಅಂಗದ, ಕ್ರಾಥ, ಮೈಂದ, ದ್ವಿವಿದರಿಂದ ರಕ್ಷಿತವಾದ ಆ ದೊಡ್ಡ ಸೈನ್ಯವು ರಾಮನ ಕಾರ್ಯಸಿದ್ಧಿಗಾಗಿ ಹೊರಟಿತು.

ವಿವಿಧೇಷು ವನೇಷ್ವೇವ(ಪ್ರಶಸ್ತೇಷು) ಬಹುಮೂಲಫಲೇಷು ಚ ।
ಪ್ರಭೂತಮಧುಮೂಲೇಷು ವಾರಿಮತ್ಸು ಶಿವೇಷು ಚ ॥೨೦॥

ನಿವಸಂತೀ ನಿರಾಬಾಧಾ ತಥೈವ ಗಿರಿಸಾನುಷು ।
ಉಪಾಯಾದ್ದರಿಸೇನಾ ಸಾ ಕ್ಷಾರೋದಮಥ ಸಾಗರಮ್ ॥೨೧॥

ಫಲಮೂಲಗಳಿದ್ದ, ಶಿವಜಲಗಳಿದ್ದ, ಪ್ರಭೂತವಾದ ಮಧುಮೂಲಗಳೂ ಇದ್ದ ವಿವಿಧವಾದ ವನಗಳಲ್ಲಿಯೂ ಅದರಂತೆ ಗಿರಿಶಿಖರಗಳಲ್ಲಿಯೂ ನಿವಾಸವನ್ನು ಮಾಡುತ್ತಾ ಆ ಕಪಿಸೈನ್ಯವು ಯಾವ ಬಾಧೆಯೂ ಇಲ್ಲದೆ ಲವಣ ಸಮುದ್ರವನ್ನು ಸಮೀಪಿಸಿತು.

ದ್ವಿತೀಯಸಾಗರನಿಭಂ ತದ್ಬಲಂ ಬಹುಲಧ್ವಜಮ್ ।
ವೇಲಾವನಂ ಸಮಾಸಾದ್ಯ ನಿವಾಸಮಕರೋತ್ ತದಾ ॥೨೨॥

ಎರಡನೆಯ ಸಮುದ್ರದಂತಿದ್ದ ಅನೇಕ ಧ್ವಜಗಳಿಂದ ಕೂಡಿದ ಆ ಸೈನ್ಯವು ಸಮುದ್ರದ ದಡವನ್ನು ಸೇರಿ ಅಲ್ಲಿ ಬೀಡುಬಿಟ್ಟಿತು.

ತತೋ ದಾಶರಥಿಃ ಶ್ರೀಮಾನ್ ಸುಗ್ರೀವಂ ಪ್ರತ್ಯಭಾಷತ ।
ಮಧ್ಯೇ ವಾನರಮುಖ್ಯಾನಾಂ ಪ್ರಾಪ್ತಕಾಲಮಿದಂ ವಚಃ ॥೨೩॥

ಉಪಾಯಃ ಕೋ ನು ಭವತಾಂ ಮತಃ ಸಾಗರಲಂಘನೇ ।
ಇಯಂ ಹಿ ಮಹತೀ ಸೇನಾ ಸಾಗರಶ್ಚಾತಿದುಸ್ತರಃ ॥೨೪॥

ಆಗ ವಾನರಶ್ರೇಷ್ಠರ ಮಧ್ಯದಲ್ಲಿ ಕಾಂತಿಯುಕ್ತನಾದ ರಾಮನು ಸುಗ್ರೀವನನ್ನು ಕುರಿತು ನೀವು ಸಾಗರವನ್ನು ದಾಟುವುದಕ್ಕೆ ಯಾವ ಉಪಾಯವನ್ನು ಹೊಂದಿದ್ದೀರಿ? ನಮ್ಮ ಈ ಸೈನ್ಯವಾದರೂ ಬಹಳ ದೊಡ್ಡದಾಗಿದೆ. ಸಾಗರವೂ ಸಹ ದಾಟಲು ಬಹಳ ಕಷ್ಟವಾದುದು ಎಂದು ಆ ಕಾಲಕ್ಕೆ ಯೋಗ್ಯವಾದ ಮಾತನ್ನು ಆಡಿದನು.

ಮಾರ್ಕಂಡೇಯಃ

ತತ್ರಾನ್ಯೇ ವ್ಯಾಹರಂತಿ ಸ್ಮ ವಾನರಾ ಬಹುಮಾನಿನಃ ।
ಸಮರ್ಥಾ ಲಂಘನೇ ಸಿಂಧೋರ್ನ ತು ತತ್ಕೃತ್ಸ್ನಕಾರಕಮ್ ॥೨೫॥

ಮಾರ್ಕಂಡೇಯ– ಆಗ ಆತ್ಮಾಭಿಮಾನವುಳ್ಳ ಉಳಿದ ಅನೇಕ ಕಪಿಗಳು ಸಮುದ್ರವನ್ನು ದಾಟುವುದಕ್ಕೆ ಸಮರ್ಥರಾದರೂ ಪೂರ್ಣವಾಗಿ ದಾಟಲಾರೆವು ಎಂದು ಮಾತನಾಡುತ್ತಿದ್ದರು.

ಕೇಚಿನ್ನೌಭಿರ್ವ್ಯವಸ್ಯಂತಿ ಕೇಚಿಚ್ಚ ವಿವಿಧೈಃ ಪ್ಲವೈಃ ।
ನೇತಿ ರಾಮಸ್ತು ತಾನ್ ಸರ್ವಾನ್ ಸಾಂತ್ವಯನ್ ಪ್ರತ್ಯಭಾಷತ ॥೨೬॥

ಕೆಲವರು ಹಡಗುಗಳಿಂದ ದಾಟುವುದು ಎಂದು ನಿರ್ಧರಿಸಿದರು. ಇನ್ನು ಕೆಲವರು ಅನೇಕ ದೋಣಿಗಳಿಂದ ಎಂದು ನಿರ್ಧರಿಸಿದರು. ರಾಮನು ಅದು ಸರಿಯಲ್ಲ ಎಂದು ಹೇಳಿ ಆ ಎಲ್ಲ ಕಪಿಗಳಿಗೂ ಸಮಾಧಾನವನ್ನು ಮಾಡಿ ಮಾತನಾಡಿದನು.

ಶತಯೋಜನವಿಸ್ತಾರಂ ನ ಶಕ್ತಾಃ ಸರ್ವವಾನರಾಃ ।
ಕ್ರಾಂತುಂ ತೋಯನಿಧಿಂ ವೀರಾ ನೈಷಾ ವೋ ನೈಷ್ಠಿಕೀ ಮತಿಃ ॥೨೭॥

ನೂರು ಯೋಜನ ವಿಸ್ತಾರವಾದ ಈ ಸಮುದ್ರವನ್ನು ದಾಟಲು ಎಲ್ಲಾ ಕಪಿಗಳೂ ಸಮರ್ಥರಲ್ಲ. ಎಲೈ ವೀರರೇ, ಸಮುದ್ರವನ್ನು ದಾಟುವ ವಿಷಯದಲ್ಲಿ ನಿಮ್ಮ ಅಭಿಪ್ರಾಯವು ಸರಿಯಲ್ಲ.

ನಾವೋ ನ ಸಂತಿ ಸೇನಾಯಾ ಬಹ್ವ್ಯಸ್ತಾರಯಿತುಂ ತಥಾ ।
ವಣಿಜಾಮುಪಘಾತಂ ಚ ಕಥಮಸ್ಮದ್ವಿಧಶ್ಚರೇತ್ ॥೨೮॥

ಸೈನ್ಯವನ್ನು ದಾಟಿಸಲು ಅನೇಕ ಹಡಗುಗಳೂ ಇಲ್ಲ. ಇನ್ನು ಅನೇಕ ದೋಣಿಗಳಲ್ಲಿ ಹೋಗಿ ವರ್ತಕರಿಗೆ ನಮ್ಮಂತಹವರು ಹೇಗೆ ತೊಂದರೆಯನ್ನು ಮಾಡುವುದು ಸಾಧ್ಯ ?

ವಿಸ್ತೀರ್ಣಂ ಚೈವ ನಃ ಸೈನ್ಯಂ ಹನ್ಯಾಚ್ಚಿದ್ರೇಣ ವೈ ಪರಃ ।
ಪ್ಲವೋಡುಪಪ್ರತಾರಶ್ಚ ನೈವಾತ್ರ ಮಮ ರೋಚತೇ ॥೨೯॥

ನಮ್ಮ ಸೈನ್ಯವು ಬಹಳ ವಿಸ್ತಾರವಾದುದು. ಸ್ವಲ್ಪ ಅವಕಾಶವು ದೊರೆತರೂ ಶತ್ರುವು ಸಂಹಾರ ಮಾಡಬಹುದು. ಆದ್ದರಿಂದ ಹಡಗು ಮತ್ತು ದೋಣಿಗಳಲ್ಲಿ ಸಮುದ್ರವನ್ನು ದಾಟುವುದು ನನಗೆ ಇಷ್ಟವಿಲ್ಲ.

ಅಹಂ ತ್ವಿಮಂ ಜಲನಿಧಿಂ ಸಮಾರಪ್ಸ್ಯಾಮ್ಯುಪಾಯತಃ ।
ಪ್ರತಿಶೇಷ್ಯಾಮ್ಯುಪವಸನ್ ದರ್ಶಯಿಷ್ಯತಿ ಮಾಂ ತತಃ ॥೩೦॥

ನಾನು ಉಪಾಯದಿಂದ ಈ ಜಲನಿಧಿಯ ಬಳಿಯಲ್ಲಿ ಉಪವಾಸವನ್ನು ಮಾಡಿ ಶಯನವನ್ನು ಮಾಡುತ್ತೇನೆ. ಆಗ ಸಮುದ್ರರಾಜನು ತನ್ನ ದರ್ಶನವನ್ನು ನೀಡುವನು.

ನ ಚೇದ್ ದರ್ಶಯಿತಾ ಮಾರ್ಗಂ ಧಕ್ಷ್ಯಾಮ್ಯೇನಮಹಂ ತತಃ ।
ಮಹಾಸ್ತ್ರೈರಪ್ರತಿಹತೈರತ್ಯಗ್ನಿಪವನೋಜ್ಜ್ವಲೈಃ ॥೩೧॥

ಸಮುದ್ರರಾಜನು ದಾರಿಯನ್ನು ಕೊಡದಿದ್ದರೆ ಅವನನ್ನು ನಾನು ಆಗ್ನೇಯಾಸ್ತ್ರ, ವಾಯವ್ಯಾಸ್ತ್ರಗಳಿಗಿಂತಲೂ ಉಗ್ರವಾದ, ನಿವಾರಣೆ ಮಾಡಲು ಸಾಧ್ಯವಿಲ್ಲದ ಮಹಾಸ್ತ್ರಗಳಿಂದ ಸುಟ್ಟುಬಿಡುತ್ತೇನೆ.

ಮಾರ್ಕಂಡೇಯಃ

ಇತ್ಯುಕ್ತ್ವಾ ಸಹ ಸೌಮಿತ್ರಿರುಪಸ್ಪೃಶ್ಯಾಥ ರಾಘವಃ ।
ಪ್ರತಿಶಿಶ್ಯೇ ಜಲನಿಧಿಂ ವಿಧಿವತ್ ಕುಶಸಂಸ್ತರೇ ॥೩೨॥

ಮಾರ್ಕಂಡೇಯರು– ಹೀಗೆ ಹೇಳಿ ರಾಮನು ಸೌಮಿತ್ರಿಯ ಜೊತೆಯಲ್ಲಿ ಜಲವನ್ನು ಸ್ಪರ್ಶಿಸಿ ಶುದ್ಧನಾಗಿ ವಿಧಿವತ್ತಾಗಿ ದರ್ಭೆಯನ್ನು ಹರಡಿ ಸಮುದ್ರದ ಎದುರಿನಲ್ಲಿ ಮಲಗಿದನು.

ಸಾಗರಸ್ತು ತತಃ ಸ್ವಪ್ನೇ ದರ್ಶಯಾಮಾಸ ರಾಘವಮ್ ।
ದೇವೋ ನದನದೀಭರ್ತಾ ಶ್ರೀಮಾನ್ ಯಾದೋಗಣೈರ್ವೃತಃ ॥೩೩॥

ನದನದೀಪತಿಯಾದ ಕಾಂತಿಯುಕ್ತನಾದ ಯಾದೋಗಣಗಳಿಂದ ವೃತನಾದ ಸಮುದ್ರರಾಜನಾದ ವರುಣದೇವನು ರಾಮನಿಗೆ ತನ್ನ ದರ್ಶನವನ್ನು ನೀಡಿದನು. (ಒಬ್ಬನೇ ನೋಡುವ ಸ್ವಪ್ನದಂತೆ ರಾಮನೊಬ್ಬನೇ ನೋಡಿದುದರಿಂದ ಸ್ವಪ್ನದಲ್ಲಿ ಎಂದು ಹೇಳಿದ್ದಾರೆ. ಆದರೆ ಇದು ಸ್ವಪ್ನವಲ್ಲ - ವಾದಿರಾಜರು).

ಕೌಸಲ್ಯಾಮಾತರಿತ್ಯೇವಮಾಭಾಷ್ಯ ಮಧುರಂ ವಚಃ ।
ಇದಮಿತ್ಯಾಹ ರತ್ನಾನಾಮಾಕರೈಃ ಶತಶೋ ವೃತಃ ॥೩೪॥

ನೂರಾರು ಸಂಖ್ಯೆಯಲ್ಲಿ ರತ್ನಕೋಶಗಳಿಂದ ವೃತನಾದ ವರುಣನು ಮಧುರವಾದ ಮಾತುಗಳಿಂದ ಕೌಸಲ್ಯಾಪುತ್ರನೆಂದು ಸಂಬೋಧಿಸಿ ಮಾತನಾಡಿದನು.

ಬ್ರೂಹಿ ಕಿಂ ತೇ ಕರೋಮ್ಯತ್ರ ಸಾಹಾಯ್ಯಂ ಪುರುಷರ್ಷಭ ।
ಐಕ್ಷ್ವಾಕೋರಸ್ಮಿ ತೇ ಜ್ಞಾತಿರಿತಿ ರಾಮಸ್ತಮಬ್ರವೀತ್ ।
ಏವಮುಕ್ತಃ ಸಮುದ್ರೇಣ ರಾಮೋ ವಾಕ್ಯಮಥಾಬ್ರವೀತ್ ॥೩೫॥

ಎಲೈ ಪುರುಷರ್ಷಭನೇ, ಏನು ಸಹಾಯವನ್ನು ಮಾಡಲಿ ಎಂದು ಹೇಳು. ಸಗರನ ಪುತ್ರನಿಂದ ನಿರ್ಮಿತವಾಗಿರುವುದರಿಂದ ನಾನೂ ಸಹ ಇಕ್ಷ್ವಾಕುವಂಶಕ್ಕೆ ಸೇರಿದ ನಿನ್ನ ಜ್ಞಾತಿ ಎಂದು ಸಮುದ್ರರಾಜನು ಹೇಳಿದಾಗ ರಾಮನು ಅವನನ್ನು ಕುರಿತು ಮಾತನಾಡಿದನು.

ಮಾರ್ಗಮಿಚ್ಛಾಮಿ ಸೈನ್ಯಸ್ಯ ದತ್ತಂ ನದನದೀಪತೇ ॥೩೬॥

ಯೇನ ಗತ್ವಾ ದಶಗ್ರೀವಂ ಹನ್ಯಾಂ ಪೌಲಸ್ತ್ಯಪಾಂಸನಮ್ ।
ರಾಕ್ಷಸಂ ಸಾನುಬಂಧಂ ತು ಮಮ ಭಾರ್ಯಾಪಹಾರಿಣಮ್ ॥೩೭॥

ನಾನು ಯಾವ ಮಾರ್ಗದಿಂದ ಹೋಗಿ ಪೌಲಸ್ತ್ಯಕುಲಪಾಂಸನನಾದ ರಾಕ್ಷಸನಾದ ನನ್ನ ಪತ್ನಿಯನ್ನು ಅಪಹರಿಸಿದ ದಶಗ್ರೀವನನ್ನು ಅವನ ಪರಿವಾರ ಸಹಿತವಾಗಿ ಕೊಲ್ಲುವೆನೋ, ಎಲೈ ನದನದೀಪತಿಯೇ, ಅಂತಹ ಮಾರ್ಗವನ್ನು ನನ್ನ ಸೈನ್ಯಕ್ಕೆ ನೀನು ಕೊಡಬೇಕೆಂದು ನಾನು ಇಚ್ಛಿಸುತ್ತೇನೆ.

ಯದ್ಯೇವಂ ಯಾಚತೋ ಮಾರ್ಗಂ ನ ಪ್ರದಾಸ್ಯತಿ ಮೇ ಭವಾನ್ ।
ಶರೈಸ್ತ್ವಾಂ ಶೋಷಯಿಷ್ಯಾಮಿ ದಿವ್ಯಾಸ್ತ್ರಪ್ರತಿಮಂತ್ರಿತೈಃ ॥೩೮॥

ನಾನು ಯಾಚನೆ ಮಾಡಿದರೂ ನೀನು ಮಾರ್ಗವನ್ನು ಕೊಡದಿದ್ದರೆ ದಿವ್ಯಾಸ್ತ್ರ ಮಂತ್ರಿತವಾದ ಬಾಣಗಳಿಂದ ನಿನ್ನನ್ನು ಶೋಷಿಸುತ್ತೇನೆ.

ಮಾರ್ಕಂಡೇಯಃ

ಇತ್ಯೇವಂ ಬ್ರುವತಃ ಶ್ರುತ್ವಾ ರಾಮಸ್ಯ ವರುಣಾಲಯಃ ।
ಉವಾಚ ವ್ಯಥಿತೋ ವಾಕ್ಯಮಿತಿ ಬದ್ಧಾಂಜಲಿಃ ಸ್ಥಿತಃ ॥೩೯॥

ಮಾರ್ಕಂಡೇಯರು– ಹೀಗೆ ಹೇಳುತ್ತಿರುವ ರಾಮನ ಮಾತುಗಳನ್ನು ಕೇಳಿ ವ್ಯಥೆಗೊಂಡ ಸಮುದ್ರರಾಜನು ಕೈಗಳನ್ನು ಮುಗಿದು ಮಾತನಾಡಿದನು.

ನೇಚ್ಛಾಮಿ ಪ್ರತಿಘಾತಂ ತೇ ನಾಸ್ತಿ ವಿಘ್ನಕರಸ್ತವ ।
ಶೃಣು ಚೇದಂ ವಚೋ ರಾಮ ಶ್ರುತ್ವಾ ಕರ್ತವ್ಯಮಾಚರ ॥೪೦॥

ನಾನು ನಿನಗೆ ಪ್ರತಿಘಾತವನ್ನು ಮಾಡಲು ಬಯಸುವುದಿಲ್ಲ ಮತ್ತು ನಿನಗೆ ವಿಘ್ನವನ್ನು ಉಂಟುಮಾಡುವವನೂ ಅಲ್ಲ. ರಾಮನೇ, ನನ್ನ ಮಾತನ್ನು ಕೇಳಿ ಅನಂತರ ಮಾಡಬೇಕಾದ ಕಾರ್ಯವನ್ನು ಮಾಡು.

ಯದಿ ದಾಸ್ಯಾಮಿ ತೇ ಮಾರ್ಗಂ ಸೈನ್ಯಸ್ಯ ವ್ರಜತೋऽಽಜ್ಞಯಾ ।
ಅನ್ಯೇऽಪ್ಯಾಜ್ಞಾಪಯಿಷ್ಯಂತಿ ಮಾಮೇವಂ ಧನುಷೋ ಬಲಾತ್ ॥೪೧॥

ನಾನು ನಿನ್ನ ಆಜ್ಞೆಯಂತೆ ಇಲ್ಲಿಂದ ಹೊರಡುತ್ತಿರುವ ನಿನ್ನ ಸೈನ್ಯಕ್ಕೆ ಮಾರ್ಗವನ್ನು ನೀಡಿದರೆ ಬೇರೆಯವರೂ ಸಹ ಧನುಸ್ಸಿನ ಬಲದಿಂದ ನನಗೆ ಹೀಗೆ ಆಜ್ಞೆಯನ್ನು ಮಾಡುವರು.

ಅಸ್ತಿ ತತ್ರ ನಳೋ ನಾಮ ವಾನರಃ ಶಿಲ್ಪಿಸಮ್ಮತಃ ।
ತ್ವಷ್ಟುರ್ದೇವಸ್ಯ ತನಯೋ ಬಲವಾನ್ ವಿಶ್ವಕರ್ಮಣಃ ॥೪೨॥

ಈ ವಾನರ ಸಮೂಹದಲ್ಲಿ ನಳನೆಂಬ ಶಿಲ್ಪಿಗಳಿಗೂ ಸಮ್ಮತನಾದವನು ಒಬ್ಬನಿದ್ದಾನೆ. ಅವನು ತ್ವಷ್ಟೃವಿನ ಮಗ ಮತ್ತು ವಿಶ್ವಕರ್ಮನಿಗಿಂತಲೂ ಬಲಿಷ್ಠನಾದವನು.

ಸ ಯತ್ಕಾಷ್ಠಂ ತೃಣಂ ವಾಪಿ ಶಿಲಾಂ ವಾ ಕ್ಷೇಪ್ಸ್ಯತೇ ಮಯಿ ।
ಸರ್ವಂ ತದ್ಧಾರಯಿಷ್ಯಾಮಿ ಸ ತೇ ಸೇತುರ್ಭವಿಷ್ಯತಿ ॥೪೩॥

ಅವನು ನನ್ನಲ್ಲಿ ಯಾವ ಕಾಷ್ಠವನ್ನಾಗಲೀ, ತೃಣವನ್ನಾಗಲೀ ಅಥವಾ ಶಿಲೆಯನ್ನಾಗಲೀ ಹಾಕುತ್ತಾನೆಯೋ ಅದನ್ನು ನಾನು ಹಾಗೆಯೇ ಹಿಡಿದುಕೊಳ್ಳುವೆನು. ಅದು ನಿನಗೆ ಸೇತುವೆಯಾಗುವುದು.

ಮಾರ್ಕಂಡೇಯಃ

ಇತ್ಯುಕ್ತ್ವಾಂತರ್ಹಿತೇ ತಸ್ಮಿನ್ ರಾಮೋ ನಳಮುವಾಚ ಹ ।
ಕುರು ಸೇತುಂ ಸಮುದ್ರೇ ತ್ವಂ ಶಕ್ತೋ ಹ್ಯಸಿ ಮತೋ ಮಮ ॥೪೪॥

ಮಾರ್ಕಂಡೇಯರು– ಹೀಗೆ ಹೇಳಿ ಸಮುದ್ರರಾಜನು ಅಂತರ್ಧಾನವನ್ನು ಹೊಂದುತ್ತಿರಲು ರಾಮನು ನಳನನ್ನು ಕುರಿತು ಸಮುದ್ರದಲ್ಲಿ ಸೇತುವೆಯನ್ನು ನಿರ್ಮಾಣ ಮಾಡು. ನೀನು ಅದನ್ನು ಮಾಡಲು ಸಮರ್ಥನಾಗಿದ್ದೀಯೆ ಎಂದು ನನ್ನ ಅಭಿಪ್ರಾಯ ಎಂದು ಹೇಳಿದನು.

ತೇನೋಪಾಯೇನ ಕಾಕುಸ್ಥ್ಃ ಸೇತುಬಂಧಮಕಾರಯತ್।
ದಶಯೋಜನವಿಸ್ತಾರಮಾಯತಂ ಶತಯೋಜನಬ್ ॥೪೫॥

ಆ ಉಪಾಯದಿಂದ ಕಾಕುಸ್ಥನಾದ ರಾಮನು ಹತ್ತು ಯೋಜನ ಅಗಲವಾದ, ನೂರುಯೋಜನ ಉದ್ದವಾದ ಸೇತುವೆಯನ್ನು ಕಟ್ಟಿಸಿದನು.

ನಳಸೇತುರಿತಿ ಖ್ಯಾತೋ ಯೋಽದ್ಯಾಪಿ ಪ್ರಥಿತೋ ಭುವಿ ।
ರಾಮಸ್ಯಾಜ್ಞಾಂ ಪುರಸ್ಕೃತ್ಯ ಧಾರ್ಯತೇ ಗಿರಿಸನ್ನಿಭಃ ॥೪೬॥

ಆ ಸೇತುವೆಯು ನಳಸೇತುವೆ ಎಂದು ಇಂದಿಗೂ ಭೂಮಿಯಲ್ಲಿ ಪ್ರಖ್ಯಾತವಾಗಿದೆ. ರಾಮನ ಆಜ್ಞೆಯಂತೆ ಸಮುದ್ರರಾಜನು ನೀರಿನಲ್ಲಿ ಮುಳುಗಿ ಹೋಗದಂತೆ ಆ ಪರ್ವತ ಸದೃಶವಾದ ಸೇತುವೆಯನ್ನು ಎತ್ತಿಹಿಡಿದಿದ್ದಾನೆ.

ತತ್ರಸ್ಥಂ ಸ ತು ಧರ್ಮಾತ್ಮಾ ಸಮಾಗಚ್ಛದ್ ವಿಭೀಷಣಃ ।
ಭ್ರಾತಾ ವೈ ರಾಕ್ಷಸೇಂದ್ರಸ್ಯ ಚತುರ್ಭಿಃ ಸಚಿವೈಃ ಸಹ ॥೪೭॥

ರಾಮನು ಅಲ್ಲಿ ಇರುತ್ತಿರಲು ರಾಕ್ಷಸೇಂದ್ರನ ತಮ್ಮನಾದ ಧರ್ಮಾತ್ಮನಾದ ವಿಭೀಷಣನು ನಾಲ್ಕು ಜನ ಸಚಿವರ ಜೊತೆಯಲ್ಲಿ ಅಲ್ಲಿಗೆ ಬಂದನು.

ಪ್ರತಿಜಗ್ರಾಹ ರಾಮಸ್ತಂ ಸ್ವಾಗತೇನ ಮಹಾಮನಾಃ ।
ಸುಗ್ರೀವಸ್ಯ ತು ಶಂಕಾऽಭೂತ್ ಪ್ರಣಿಧಿಃ ಸ್ಯಾದಿತಿ ಸ್ಮ ಹ ॥೪೮॥

ಉದಾರ ಮನಸ್ಸುಳ್ಳ ರಾಮನು ಅವನಿಗೆ ಸ್ವಾಗತವನ್ನು ಕೋರಿ ಸ್ವೀಕರಿಸಿದನು. ಸುಗ್ರೀವನ ಮನಸ್ಸಿನಲ್ಲಿ ಮಾತ್ರ ಇವನು ಶತ್ರುಪಕ್ಷದಿಂದ ಬಂದ ಗೂಢಚಾರನಿರಬಹುದು ಎಂಬ ಸಂಶಯವಿದ್ದಿತು.

ರಾಘವಃ ಸತ್ಯಚೇಷ್ಟಾಭಿಃ ಸಮ್ಯಕ್ಚ ಚರಿತೇಂಗಿತೈಃ ।
ಯದಾ ತತ್ತ್ವೇನ ತುಷ್ಟೋऽಭೂತ್ ತತ ಏನಮಪೂಜಯತ್ ॥೪೯॥

ರಾಘವನು ಅವನ ಸತ್ಯವಾದ ಚೇಷ್ಟೆಗಳನ್ನು, ಅವನ ಶುದ್ಧವಾದ ಚರಿತ್ರೆಯನ್ನು ಮತ್ತು ಇಂಗಿತಗಳನ್ನು ಯಥಾರ್ಥವಾಗಿ ತಿಳಿದು ಸಂತುಷ್ಟನಾಗಿ ಅವನನ್ನು ಸತ್ಕರಿಸಿದನು.

ಸರ್ವರಾಕ್ಷಸರಾಜ್ಯೇ ಚಾಪ್ಯಭ್ಯಷಿಂಚದ್ ವಿಭೀಷಣಮ್ ।
ಚಕ್ರೇ ಚ ಮಂತ್ರಿಪ್ರವರಂ ಸುಹೃದಂ ಲಕ್ಷ್ಮಣಸ್ಯ ಚ ॥೫೦॥

ಅಲ್ಲದೇ ಸರ್ವರಾಕ್ಷಸ ರಾಜ್ಯದ ಅಧಿಪತಿಯನ್ನಾಗಿ ಅವನಿಗೆ ಅಭಿಷೇಕವನ್ನೂ ಮಾಡಿದನು ಮತ್ತು ತನ್ನ ಮಂತ್ರಿಶ್ರೇಷ್ಠನನ್ನಾಗಿಯೂ ಮತ್ತು ಲಕ್ಷ್ಮಣನ ಸ್ನೇಹಿತನನ್ನಾಗಿಯೂ ಮಾಡಿಕೊಂಡನು.

ವಿಭೀಷಣಮತೇ ಚೈವ ಸೋऽತ್ಯಕ್ರಾಮತ್ ಮಹಾರ್ಣವಮ್ ।
ಸಸೈನ್ಯಃ ಸೇತುನಾ ತೇನ ಮಾಸೇನೈವ ನರಾಧಿಪ ॥೫೧॥

ಎಲೈ ನರಾಧಿಪನೇ, ಸುಗ್ರೀವನ ಅಭಿಪ್ರಾಯದಂತೆ ಅವನು ಸೈನ್ಯ ಸಹಿತನಾಗಿ ಆ ಸೇತುವೆಯ ಮೂಲಕ ಒಂದುತಿಂಗಳಿನಲ್ಲಿ ಆ ಮಹಾಸಮುದ್ರವನ್ನು ದಾಟಿದನು.

ತತೋ ಗತ್ವಾ ಸಮಾಸಾದ್ಯ ಲಂಕೋದ್ಯಾನಾನ್ಯನೇಕಶಃ ।
ಭೇದಯಾಮಾಸ ಕಪಿಭಿರ್ಮಹಾಂತಿ ಚ ಬಹೂನಿ ಚ ॥೫೨॥

ಸೇತುವೆಯ ಸಹಾಯದಿಂದ ಲಂಕೆಯನ್ನು ಪ್ರವೇಶಿಸಿ ಕಪಿಗಳ ಸಹಾಯದಿಂದ ಲಂಕೆಯ ಅನೇಕ ದೊಡ್ಡ ಉದ್ಯಾನವನಗಳನ್ನು ನಾಶಮಾಡಿಸಿದನು.

ತತ್ರಾಸ್ತಾಂ ರಾವಣಾಮಾತ್ಯೌ ಮಂತ್ರಿಣೌ ಶುಕಸಾರಣೌ ।
ಚರೌ ವಾನರರೂಪೇಣ ತೌ ಜಗ್ರಾಹ ವಿಭೀಷಣಃ ।
ದ್ರಷ್ಟುಂ ಸೇನಾಮನುಪ್ರಾಪ್ತೌ ರಾವಣಪ್ರಿಯಕಾರಿಣೌ ॥೫೩॥

ಅಲ್ಲಿ ರಾವಣನ ಸಚಿವರಾದ ಶುಕಸಾರಣರೆಂಬ ರಾವಣಪ್ರಿಯಕಾರಿಗಳಾದ ಇಬ್ಬರು ರಾಮನ ಸೈನ್ಯವನ್ನು ನೋಡಲು ಕಪಿಗಳ ರೂಪವನ್ನು ಧರಿಸಿ ಅಲ್ಲಿಗೆ ಬಂದಿದ್ದರು. ಅವರನ್ನು ವಿಭೀಷಣನು ಗುರುತಿಸಿ ಹಿಡಿದನು.

ಪ್ರತಿಪನ್ನೌ ಯದಾ ರೂಪಂ ರಾಕ್ಷಸಂ ತೌ ನಿಶಾಚರೌ ।
ದರ್ಶಯಿತ್ವಾ ತತಃ ಸೈನ್ಯಂ ರಾಮಃ ಪಶ್ಚಾದವಾಸೃಜತ್ ॥೫೪॥

ತಮ್ಮ ನಿಜಸ್ವರೂಪವು ತಿಳಿದ ಕೂಡಲೆ ಆ ರಾಕ್ಷಸರು ವಾನರರೂಪವನ್ನು ಬಿಟ್ಟು ತಮ್ಮ ರಾಕ್ಷಸರ ರೂಪವನ್ನು ತೋರಿಸಿದರು. ಆಗ ರಾಮನು ಅವರನ್ನು ಅವರ ಸೈನ್ಯಕ್ಕೆ ಹಿಂದಕ್ಕೆ ಕಳುಹಿಸಿದನು.

ನಿವೇಶ್ಯೋಪವನೇ ಸೈನ್ಯಂ ತತ್ಪುರಃ ಪ್ರಾಜ್ಞವಾನರಮ್ ।
ಪ್ರೇಷಯಾಮಾಸ ದೌತ್ಯೇನ ರಾವಣಸ್ಯ ತತೋಽಂಗದಮ್ ॥೫೫॥

ರಾಮನು ತನ್ನ ಸೈನ್ಯವನ್ನು ಲಂಕೆಯ ಉಪವನದಲ್ಲಿ ನಿಲ್ಲಿಸಿ ಶ್ರೇಷ್ಠವಾನರನಾದ ಅಂಗದನನ್ನು ರಾವಣನ ಸಮೀಪಕ್ಕೆ ದೂತನನ್ನಾಗಿ ಮೊದಲು ಕಳುಹಿಸಿದನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂಸಂಹಿತಾಯಾಂ ವೈಯಾಸಿಕ್ಯಾಂ
ವನಪರ್ವಣಿ ದ್ವಿಸಪ್ತ್ಯಧಿಕದ್ವಿಶತತಮೋಽಧ್ಯಾಯಃ ॥
॥ ಇತಿ ರಾಮೋಪಖ್ಯಾನಪರ್ವಣಿ ಸೇತುಬಂಧನಂ ನಾಮ ಏಕಾದಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವನಪರ್ವದಲ್ಲಿ ಇನ್ನೂರ ಎಪ್ಪತ್ತೆರಡನೆಯ
ಅಧ್ಯಾಯ ಮುಗಿಯಿತು.

★ ★ ★ ★

ಇನ್ನೂರ ಎಪ್ಪತ್ಮೂರನೆಯ ಅಧ್ಯಾಯ

ಅಂಗದನಿಂದ ರಾವಣನಿಗೆ ರಾಮಸಂದೇಶವನ್ನು ತಲುಪಿಸಿ ಪ್ರತಿನಿವೃತ್ತಿ. ಯುದ್ಧಪ್ರಾರಂಭ. ರಾಮನಿಂದ ಸೈನ್ಯಾಪಹಾರ.

ಮಾರ್ಕಂಡೇಯಃ

ಪ್ರಭೂತಾನ್ನೋದಕೇ ತಸ್ಮಿನ್ ಬಹುಮೂಲಫಲೇ ವನೇ ।
ಸೇನಾಂ ನಿವೇಶ್ಯ ಕಾಕುತ್ಸ್ಥೋ ವಿಧಿವತ್ ಪರ್ಯರಕ್ಷತ ॥೧॥

ಬಹುಮೂಲಫಲಗಳು, ಅನ್ನೋದಕಗಳು ಇದ್ದ ಆ ಉಪವನದಲ್ಲಿ ರಾಮನು ಸೈನ್ಯವನ್ನು ನಿಲ್ಲಿಸಿ ವಿಧಿಪ್ರಕಾರದಿಂದ ರಕ್ಷಣೆಯನ್ನು ಮಾಡಿದನು.

ರಾವಣಃ ಸಂವಿಧಂ ಚಕ್ರೇ ಲಂಕಾಯಾಂ ಶಾಸ್ತ್ರನಿರ್ಮಿತಾಮ್ ।
ಪ್ರಕೃತ್ಯೈವ ದುರಾಧರ್ಷಾ ದೃಢಪ್ರಾಕಾರತೋರಣಾ ॥೨॥

ಸ್ವಭಾವದಿಂದಲೇ ದುರಾದರ್ಷನಾದ ರಾವಣನು ತನ್ನ ಆಜ್ಞೆಯಿಂದ ಲಂಕೆಯಲ್ಲಿ ದೃಢವಾದ ಕೋಟೆ ತೋರಣಗಳು ಮೊದಲಾದ ವ್ಯವಸ್ಥೆಯನ್ನು ಮಾಡಿದನು.

ಅಗಾಧತೋಯಾಃ ಪರಿಖಾ ಮೀನನಕ್ರಸಮಾಕುಲಾಃ ।
ಬಭೂವುಃ ಸಪ್ತ ದುರ್ಧರ್ಷಾಃ ಖಾದಿರೈಃ ಶಂಕುಭಿಶ್ಚಿತಾಃ ॥೩॥

ಅಗಾಧವಾದ ನೀರುಳ್ಳ ಮೀನುಮೊಸಳೆಗಳಿಂದ ನಿಬಿಡವಾದ ಖದಿರವೃಕ್ಷದ ಗೂಟಗಳನ್ನು ನೆಟ್ಟಿರುವ ದಾಟಲು ಅಸಾಧ್ಯವಾದ ಏಳು ಕಂದಕಗಳನ್ನು ವರ್ತುಲಾಕಾರವಾಗಿ ನಿರ್ಮಾಣ ಮಾಡಿಸಿದನು.

ಕರ್ಣಾಟ್ಟಯಂತ್ರೈರ್ದುರ್ಧರ್ಷಾ ಬಭೂವುಃ ಸಗುಲೋಪಲಾಃ ।
ಸಾಶೀವಿಷಘಟಾಯೋಧಾಃ ಸಸರ್ಜರಸಪಾಂಸವಃ ॥೪॥

ಆ ಕೋಟೆಗಳು ತನ್ನ ಯೋಧರಿಗೆ ರಕ್ಷಣೆಯನ್ನು ಕೊಡುವ, ಪರಯೋಧರಿಂದ ರಕ್ಷಿಸುವ ವರ್ತುಲಾಕಾರ ಗೋಪುರಗಳಿಂದಲೂ, ಗಟ್ಟಿಯಾದ ವೃಕ್ಷರಸಗಳಿಂದಲೂ, ಸರ್ಜರಸವನ್ನು ಸೇರಿಸಿದ ಮಣ್ಣಿನಿಂದಲೂ ಮಾಡಲ್ಪಟ್ಟು ಸರ್ಪಗಳ ವಿಷದಂತೆ ಘೋರರಾದ ಸೈನಿಕರಿಂದ ಕೂಡಿದ್ದವು.

ಮುಸಲಾಲಾತನಾರಾಚತೋಮರಾಸಿಪರಶ್ವಧೈಃ ।
ಅನ್ವಿತಾಶ್ಚ ಶತಘ್ನೀಭಿಃ ಸಮಧೂಚ್ಛಿಷ್ಟಮುದ್ಗರಾಃ ॥೫॥

ಆ ಕೋಟೆಗಳಲ್ಲಿ ಮುಸಲ, ಅಲಾತ, ನಾರಾಚ, ತೋಮರ, ಅಸಿ, ಪರಶು ಮೊದಲಾದ ಆಯುಧಗಳು, ಶತಘ್ನೀ ಮೊದಲಾದ ಯಂತ್ರಗಳು ಜೇನುಮೇಣಗಳಿಂದ ಅಂಟಿಸಿದ ಮುದ್ಗರಗಳು ತುಂಬಿದ್ದವು.

ಪುರದ್ವಾರೇಷು ಸರ್ವೇಷು ಗುಲ್ಮಾಃ ಸ್ಥಾವರಜಂಗಮಾಃ ।
ಬಭೂವುಃ ಪತ್ತಿಬಹುಲಾಃ ಪ್ರಭೂತಗಜವಾಜಿನಃ ॥೬॥

ಪಟ್ಟಣದ ಎಲ್ಲಾ ದ್ವಾರಗಳಲ್ಲಿಯೂ ಅನೇಕ ಪದಾತಿಗಳನ್ನುಳ್ಳ, ಅನೇಕ ಗಜಾಶ್ವಗಳನ್ನುಳ್ಳ, ಅಲ್ಲಿಯೇ ನಿಂತು ಯುದ್ಧಮಾಡುವ ಮತ್ತು ಚಲಿಸುವ ಸೈನ್ಯದ ತುಕಡಿಗಳು ಇದ್ದವು.

ಅಂಗದಸ್ತ್ವಥ ಲಂಕಾಯಾ ದ್ವಾರದೇಶಮುಪಾಗತಃ ।
ವಿದಿತೋ ರಾಕ್ಷಸೇಂದ್ರಸ್ಯ ಪ್ರವಿವೇಶ ಗತವ್ಯಥಃ ॥೭॥

ಅನಂತರ ಅಂಗದನು ರಾಕ್ಷಸೇಂದ್ರನಾದ ರಾವಣನಿಗೆ ತಿಳಿಯುವಂತೆ ಲಂಕಾಪಟ್ಟಣದ ಕೋಟೆ ಬಾಗಿಲಿನ ಬಳಿಗೆ ಬಂದು ಯಾವ ವ್ಯಥೆಯೂ ಇಲ್ಲದೆ ನಗರವನ್ನು ಪ್ರವೇಶಿಸಿದನು.

ಮಧ್ಯೇ ರಾಕ್ಷಸಕೋಟೀನಾಂ ಬಹ್ವೀನಾಂ ಸುಮಹಾಬಲಃ ।
ಶುಶುಭೇ ಮೇಘಮಾಲಾಭಿರಾದಿತ್ಯ ಇವ ಸಂವೃತಃ ॥೮॥

ಅನೇಕ ಕೋಟಿ ರಾಕ್ಷಸರ ಮಧ್ಯದಲ್ಲಿ ಮಹಾಬಲಿಷ್ಠನಾದ ರಾವಣನು ಮೇಘಮಾಲೆಗಳ ಮಧ್ಯದಲ್ಲಿರುವ ಸೂರ್ಯನಂತೆ ಶೋಭಿಸುತ್ತಿದ್ದನು.

ಸ ಸಮಾಸಾದ್ಯ ಪೌಲಸ್ತ್ಯಮಮಾತ್ಯೈರಭಿಸಂವೃತಮ್ ।
ರಾಮಸಂದೇಶಮಾಮಂತ್ರ್ಯ ವಾಗ್ಮೀ ವಕ್ತುಂ ಪ್ರಚಕ್ರಮೇ ।
ಆಹ ತ್ವಾಂ ರಾಘವೋ ರಾಜನ್ ಕೋಸಲೇಂದ್ರೋ ಮಹಾಯಶಾಃ ॥೯॥

ಪ್ರಾಪ್ತಕಾಲಮಿದಂ ವಾಕ್ಯಂ ತದಾದತ್ಸ್ವ ಕುರುಷ್ವ ಚ ॥೧೦॥

ವಾಗ್ಮಿಯಾದ ಅವನು ಅಮಾತ್ಯರಿಂದ ಪರಿವೃತನಾದ ಪೌಲಸ್ತ್ಯಕುಲೋತ್ಪನ್ನನಾದ ರಾವಣನನ್ನು ಸಮೀಪಿಸಿ ಅವನ ಅನುಮತಿಯನ್ನು ಪಡೆದು ರಾಮನ ಸಂದೇಶವನ್ನು ಹೇಳಲು ಪ್ರಾರಂಭಿಸಿದನು. ಎಲೈ ರಾಜನೇ, ಕೋಸಲಾಧಿಪತಿಯಾದ ಮಹಾಕೀರ್ತಿಶಾಲಿಯಾದ ರಾಮನು ಈ ಸಂದರ್ಭಕ್ಕೆ ಉಚಿತವಾದ ಮಾತುಗಳನ್ನು ನಿನಗೆ ಹೇಳಿ ಕಳುಹಿಸಿದ್ದಾನೆ. ಆ ಮಾತುಗಳನ್ನು ಸ್ವೀಕರಿಸಿ ಅದರಂತೆ ನಡೆದುಕೋ.

ಅಕೃತಾತ್ಮಾನಮಾಸಾದ್ಯ ರಾಜಾನಮನಯೇ ರತಮ್ ।
ವಿನಶ್ಯಂತ್ಯನಯಾವಿಷ್ಟಾ ದೇಶಾಶ್ಚ ನಗರಾಣಿ ಚ ॥೧೧॥

ಇಂದ್ರಿಯ ಜಯವಿಲ್ಲದೆ ದುರ್ನೀತಿಯಲ್ಲಿ ರತನಾದ ರಾಜನನ್ನು ಅನುಸರಿಸುವ ದೇಶಗಳು ಮತ್ತು ನಗರಗಳು ದುರ್ನೀತಿಯಿಂದ ಕೂಡಿದವುಗಳಾಗಿ ನಾಶವನ್ನು ಹೊಂದುತ್ತವೆ.

ತ್ವಯ್ಯೇಕೇನಾಪರಾದ್ಧಂ ಮೇ ಸೀತಾಮಾಹರತಾ ಬಲಾತ್ ।
ವಧಾಯಾನಪರಾದ್ಧಾನಾಮನ್ಯೇಷಾಂ ತದ್ ಭವಿಷ್ಯತಿ ॥೧೨॥

ಸೀತೆಯನ್ನು ಅಪಹಾರ ಬಲಾತ್ಕಾರದಿಂದ ಮಾಡಿ ತನಗೆ ಅಪರಾಧವನ್ನು ಮಾಡಿರುವವನು ನೀನೊಬ್ಬನೇ. ಆದರೆ ಆ ಅಪರಾಧವು ಅಪರಾಧವನ್ನು ಮಾಡದಿರುವ ಬೇರೆಯವರ ವಧೆಗೂ ಕಾರಣವಾಗುತ್ತದೆ.

ಯೇ ತ್ವಯಾ ಬಲದರ್ಪಾಭ್ಯಾಮಾವಿಷ್ಟೇನ ವನೇಚರಾಃ ।
ಋಷಯೋ ಹಿಂಸಿತಾಃ ಪೂರ್ವಂ ದೇವಾಶ್ಚಾಪ್ಯವಮಾನಿತಾಃ ॥೧೩॥

ರಾಜರ್ಷಯಶ್ಚ ನಿಹತಾ ರುದತ್ಯಶ್ಚ ಹೃತಾಃ ಸ್ತ್ರಿಯಃ ।
ತದಿದಂ ಸಮನುಪ್ರಾಪ್ತಂ ಫಲಂ ತಸ್ಯಾನಯಸ್ಯ ತೇ ॥೧೪॥

ಯಾವ ನೀನು ಬಲದರ್ಪಗಳಿಂದ ಕೂಡಿದವನಾಗಿ ವನವಾಸಿಗಳಾದ ಋಷಿಗಳನ್ನು ಹಿಂದೆ ಹಿಂಸೆ ಮಾಡಿದ್ದೀಯೋ, ದೇವತೆಗಳನ್ನು ಅವಮಾನ ಮಾಡಿದ್ದೀಯೋ, ರಾಜರ್ಷಿಗಳನ್ನು ಕೊಂದಿದ್ದೀಯೋ, ಅಳುತ್ತಿರುವ ಸ್ತ್ರೀಯರನ್ನು ಅಪಹರಿಸಿದ್ದೀಯೋ ಆ ಎಲ್ಲಾ ಅನ್ಯಾಯದ ಫಲವನ್ನು ಅನುಭವಿಸುವ ಕಾಲವು ಈಗ ನಿನಗೆ ಬಂದೊದಗಿದೆ.

ಹಂತಾಸ್ಮಿ ತ್ವಾಂ ಸಹಾಮಾತ್ಯೈರ್ಯುದ್ಧಸ್ಯ ಪುರುಷೋ ಭವ ।
ಪಶ್ಯ ಮೇ ಧನುಷೋ ವೀರ್ಯಂ ಮಾನುಷಸ್ಯ ನಿಶಾಚರ ॥೧೫॥

ನಿನ್ನನ್ನು ನಿನ್ನ ಮಂತ್ರಿಗಳ ಜೊತೆಯಲ್ಲಿ ಶೀಘ್ರದಲ್ಲಿ ಕೊಲ್ಲುವೆನು. ನೀನು ಗಂಡಸಾಗಿ ಯುದ್ಧವನ್ನು ಮಾಡು. ನಿಶಾಚರನೇ, ಮನುಷ್ಯನಾದ ನನ್ನ ಧನುಸ್ಸಿನ ಬಲವನ್ನು ನೋಡು.

ಮುಚ್ಯತಾಂ ಜಾನಕೀ ಸೀತಾ ನ ಮೇ ಮೋಕ್ಷ್ಯಸಿ ಕರ್ಹಿಚಿತ್ ।
ಅರಾಕ್ಷಸಮಿಮಂ ಲೋಕಂ ಕರ್ತಾಸ್ಮಿ ನಿಶಿತೈಃ ಶರೈಃ ॥೧೬॥

ಜನಕಕುಮಾರಿಯಾದ ಸೀತೆಯನ್ನು ಬಿಟ್ಟುಬಿಡು. ಇಲ್ಲದಿದ್ದರೆ ನೀನು ನನ್ನಿಂದ ಬಿಡುಗಡೆಯನ್ನು ಹೊಂದುವುದಿಲ್ಲ. ನನ್ನ ನಿಶಿತವಾದ ಬಾಣಗಳಿಂದ ಈ ಲೋಕವನ್ನು ರಾಕ್ಷಸಶೂನ್ಯವನ್ನಾಗಿ ಮಾಡುವೆನು.

ಮಾರ್ಕಂಡೇಯಃ

ಇತಿ ತಸ್ಯ ಬ್ರುವಾಣಸ್ಯ ದೂತಸ್ಯ ಪರುಷಂ ವಚಃ ।
ಶ್ರುತ್ವಾ ನ ಮಮೃಷೇ ರಾಜಾ ರಾವಣಃ ಕ್ರೋಧಮೂರ್ಚ್ಛಿತಃ ॥೧೭॥

ಮಾರ್ಕಂಡೇಯರು– ಹೀಗೆ ಹೇಳಿದ ದೂತನಾದ ಅಂಗದನ ಒರಟು ಮಾತನ್ನು ಕೇಳಿ ಕ್ರೋಧಮೂರ್ಛಿತನಾದ ರಾವಣನು ಆ ಮಾತುಗಳನ್ನು ಸಹಿಸಲಿಲ್ಲ.

ಇಂಗಿತಜ್ಞಾಸ್ತತೋ ಭರ್ತುಶ್ಚತ್ವಾರೋ ರಜನೀಚರಾಃ ।
ಚತುರ್ಷ್ವಂಗೇಷು ಜಗೃಹುಃ ಶಾರ್ದೂಲಮಿವ ಪಕ್ಷಿಣಃ ॥೧೮॥

ತಮ್ಮ ಪ್ರಭುವಿನ ಇಂಗಿತವನ್ನು ತಿಳಿದ ನಾಲ್ವರು ರಾಕ್ಷಸರು ಹುಲಿಯನ್ನು ಪಕ್ಷಿಗಳು ಹಿಡಿದಂತೆ ನಾಲ್ಕು ಅವಯವಗಳಲ್ಲಿ ಅಂಗದನನ್ನು ಹಿಡಿದರು.

ತಾಂಸ್ತಥಾಂಗೇಷು ಸಂಸಕ್ತಾನಂಗದೋ ರಜನೀಚರಾನ್ ।
ಆದಾಯೈವ ಖಮುತ್ಪತ್ಯ ಪ್ರಾಸಾದತಳಮಾವಿಶತ್ ॥೧೯॥

ತನ್ನ ದೇಹದ ಮೇಲೆ ಬಿದ್ದ ಆ ರಾಕ್ಷಸರನ್ನು ಹಾಗೆಯೇ ಎತ್ತಿಕೊಂಡು ಅಂಗದನು ಆಕಾಶಕ್ಕೆ ಹಾರಿ ಉಪ್ಪರಿಗೆಯ ಮೇಲ್ಭಾಗವನ್ನು ಪ್ರವೇಶಿಸಿದನು.

ವೇಗೇನೋತ್ಪತತಸ್ತಸ್ಯ ಪೇತುಸ್ತೇ ರಜನೀಚರಾಃ ।
ಭುವಿ ಸಂಭಿನ್ನಹೃದಯಾಃ ಪ್ರಹಾರವರಪೀಡಿತಾಃ ॥೨೦॥

ಅಂಗದನು ಹಾರಿದ ವೇಗಕ್ಕೆ ಅವನ ಶರೀರವನ್ನು ಹಿಡಿದುಕೊಂಡಿದ್ದ ರಾಕ್ಷಸರು ಭೂಮಿಯಲ್ಲಿ ಬಿದ್ದು ಆ ದೊಡ್ಡ ಪ್ರಹಾರದಿಂದ ಪೀಡಿತರಾಗಿ ಹೃದಯಭೇದನವನ್ನು ಹೊಂದಿದರು.

ಸಂಸಕ್ತೋ ಹರ್ಮ್ಯಶಿಖಿರಾತ್ ತಸ್ಮಾತ್ ಪುನರವಾಪತತ್ ।
ಲಂಘಯಿತ್ವಾ ಪುರೀಂ ಲಂಕಾಂ ಸ್ವಬಲಸ್ಯ ಸಮೀಪತಃ ॥೨೧॥

ಕೋಸಲೇಂದ್ರಮಥಾಗಮ್ಯ ಸರ್ವಮಾವೇದ್ಯ ವಾನರಃ ।
ವಿಶಶ್ರಾಮ ಸ ತೇಜಸ್ವೀ ರಾಘವೇಣಾಭಿನಂದಿತಃ ॥೨೨॥

ತೇಜಸ್ವಿಯಾದ ಆ ಅಂಗದನು ಉಪ್ಪರಿಗೆಯ ಮೇಲ್ಭಾಗದಿಂದ ಪುನಃ ಕೆಳಗೆ ಹಾರಿ ಲಂಕಾ ಪಟ್ಟಣವನ್ನು ದಾಟಿ ತನ್ನ ಸೈನ್ಯದ ಸಮೀಪಕ್ಕೆ ಬಂದು ಕೋಸಲೇಂದ್ರನಾದ ರಾಮನಿಗೆ ನಡೆದ ಘಟನೆ ಎಲ್ಲವನ್ನೂ ತಿಳಿಸಿ ರಾಮನಿಂದ ಅಭಿನಂದಿತನಾಗಿ ವಿಶ್ರಾಂತಿಯನ್ನು ಪಡೆದನು.

ತತಃ ಸರ್ವಾಭಿಸಾರೇಣ ಹರೀಣಾಂ ವಾತರಂಹಸಾಮ್ ।
ಭೇದಯಾಮಾಸ ಲಂಕಾಯಾಃ ಪ್ರಾಕಾರಂ ರಘುನಂದನಃ ॥೨೩॥

ಅನಂತರ ರಘುನಂದನನು ವಾಯುವೇಗವುಳ್ಳ ಕಪಿಗಳು ಎಲ್ಲಕಡೆಗಳಿಂದಲೂ ಮುತ್ತುವಂತೆ ಮಾಡಿ ಲಂಕಾಪಟ್ಟಣದ ಕೋಟೆಗಳನ್ನು ಒಡೆಸಿದನು.

ವಿಭೀಷಣರ್ಕ್ಷಾಧಿಪತೀ ಪುರಸೃತ್ಯಾಥ ಲಕ್ಷ್ಮಣಃ ।
ದಕ್ಷಿಣಂ ನಗರದ್ವಾರಮವಾಮೃದ್ನಾದ್ ದುರಾಸದಮ್ ॥೨೪॥

ಲಕ್ಷ್ಮಣನು ವಿಭೀಷಣ ಮತ್ತು ಜಾಂಬವಂತನನ್ನು ಮುಂದೆ ಮಾಡಿಕೊಂಡು ದುರಾಸದವಾದ ನಗರದ ದಕ್ಷಿಣದ್ವಾರವನ್ನು ನಾಶಮಾಡಿದನು.

ಕರಭಾರುಣಗಾತ್ರಾಣಾಂ ಹರೀಣಾಂ ಯುದ್ಧಶಾಲಿನಾಮ್ ।
ಕೋಟೀಶತಸಹಸ್ರೇಣ ಲಂಕಾಮಭ್ಯಪಪತ್ ತದಾ ॥೨೫॥

ಅನಂತರ ಅಂಗೈಯಂತೆ ಕೆಂಪಾದ ಶರೀರವುಳ್ಳ ಯುದ್ಧಶಾಲಿಗಳಾದ ಒಂದು ಲಕ್ಷಕೋಟಿ ಕಪಿಗಳನ್ನು ತೆಗೆದುಕೊಂಡು ಲಂಕಾಪಟ್ಟಣಕ್ಕೆ ಮುತ್ತಿಗೆಯನ್ನು ಹಾಕಿದನು.

ಉತ್ಪತದ್ಭಿಃ ಪತದ್ಭಿಶ್ಚ ನಿಪತದ್ಭಿಶ್ಚ ವಾನರೈಃ ।
ನಾದೃಶ್ಯತ ತದಾ ಸೂರ್ಯೋ ರಜಸಾ ನಾಶಿತಪ್ರಭಃ ॥೨೬॥

ಮೇಲೆ ಹಾರಿ ಮುಂದೆ ನೆಗೆದು, ಕೆಳಗೆ ನೆಗೆಯುವ ಕಪಿಗಳಿಂದ ಉಂಟಾದ ಧೂಳಿನಿಂದ ಸೂರ್ಯಪ್ರಭೆಯು ನಾಶವನ್ನು ಹೊಂದಿ ಸೂರ್ಯನು ಕಾಣಲಿಲ್ಲ.

ಶಾಲಿಪ್ರಸೂನಸದೃಶೈಃ ಶಿರೀಷಕುಸುಮಪ್ರಭೈಃ ।
ತರುಣಾದಿತ್ಯಸದೃಶೈಃ ಶಣಗೌರೈಶ್ಚ ವಾನರೈಃ ॥೨೭॥

ಪ್ರಾಕಾರಂ ದದೃಶುಸ್ತೇ ತು ಸಮಂತಾತ್ ಕಪಿಲೀಕೃತಮ್ ।
ರಾಕ್ಷಸಾ ವಿಸ್ಮಿತಾ ರಾಜನ್ ಸಸ್ತ್ರೀವೃದ್ಧಾಃ ಸಮಂತತಃ ॥೨೮॥

ಉದಯಿಸುವ ಸೂರ್ಯನ ಬಣ್ಣವುಳ್ಳ ಶಣದಂತೆ ಶ್ವೇತವರ್ಣದಿಂದ ಕೂಡಿದ ಭತ್ತದ ಚಿಗುರಿನ ಬಣ್ಣವುಳ್ಳ, ಶಿರೀಷ ಕುಸುಮಗಳ ಬಣ್ಣವುಳ್ಳ ಕಪಿಗಳಿಂದ ತುಂಬಿದ ಆ ಕೋಟೆಯ ಗೋಡೆಯು ಎಲ್ಲ ಕಡೆಯಲ್ಲಿಯೂ ಕಪಿಲವರ್ಣದಿಂದ ಕೂಡಿದಂತೆ ಕಂಡಿತು. ರಾಜನೇ, ಅದನ್ನು ನೋಡಿ ರಾಕ್ಷಸರು, ಅವರ ಸ್ತ್ರೀಯರು ಎಲ್ಲರೂ ವಿಸ್ಮಿತರಾದರು.

ಬಿಭಿದುಸ್ತೇ ಮಣಿಸ್ತಂಭಾನ್ ಕರ್ಣಾಟ್ಟಶಿಖಿರಾಣಿ ಚ ।
ಭಗ್ನೋನ್ನಥಿತಶೃಂಗಾಣಿ ಯಂತ್ರಾಣಿ ಚ ವಿಚಿಕ್ಷಿಪುಃ ॥೨೯॥

ಆ ಕಪಿಗಳು ಮಣಿಸ್ತಂಭಗಳನ್ನೂ, ಕೋಟೆಯ ಮೇಲಿದ್ದ ವರ್ತುಲಾಕಾರದ ರಕ್ಷಣಾಸ್ಥಾನಗಳನ್ನೂ, ಶಿಖರಗಳನ್ನೂ ಒಡೆದು ಮುರಿಯಲ್ಪಟ್ಟ ಶಿಖರಗಳುಳ್ಳ ಅನೇಕ ಯಂತ್ರಗಳನ್ನೂ ಎಸೆದರು.

ಪರಿಗೃಹ್ಯ ಶತಘ್ನೀಶ್ಚ ಸಚಕ್ರಾಃ ಸಹುಡೋಪಲಾಃ ।
ಚಿಕ್ಷಿಪುರ್ಭುಜವೇಗೇನ ಲಂಕಾಮಧ್ಯೇ ಮಹಾಸ್ವನಾಃ ॥೩೦॥

ರಾಕ್ಷಸರು ಪ್ರಯೋಗಿಸಿದ ಶತಘ್ನೀಗಳನ್ನು ಅವುಗಳ ಚಕ್ರ ಮತ್ತು ಸಲಕರಣೆಗಳ ಸಹಿತ ಹಿಡಿದು ಮಹಾನಾದವನ್ನು ಮಾಡುತ್ತಾ ತಮ್ಮ ಭುಜವೇಗದಿಂದ ಅದನ್ನು ಲಂಕಾ ಪಟ್ಟಣದ ಮಧ್ಯದಲ್ಲಿ ಎಸೆದರು.

ಪ್ರಾಕಾರಸ್ಥಾಶ್ಚ ಯೇ ಕೇಚಿನ್ನಿಶಾಚರಗಣಾಸ್ತಥಾ ।
ಪ್ರದುದ್ರುವುಸ್ತೇ ಶತಶಃ ಕಪಿಭಿಃ ಸಮಭಿದ್ರುತಾಃ ॥೩೧॥

ಕೋಟೆಯ ಗೋಡೆಯ ಸಮೀಪದಲ್ಲಿದ್ದ ರಾಕ್ಷಸಗಣಗಳೆಲ್ಲವೂ ನೂರಾರು ಸಂಖ್ಯೆಯಲ್ಲಿದ್ದ ಕಪಿಗಳಿಂದ ಪೀಡಿತರಾಗಿ ಓಡಿಹೋದವು.

ತತಸ್ತು ರಾಜವಚನಾದ್ ರಾಕ್ಷಸಾಃ ಕಾಮರೂಪಿಣಃ ।
ನಿರ್ಯಯುರ್ವಿಕೃತಾಕಾರಾಃ ಸಹಸ್ರಶತಸಂಘಶಃ ॥೩೨॥

ಅನಂತರ ರಾಜವಚನದಿಂದ ಕಾಮರೂಪಿಗಳೂ, ವಿಕೃತಾಕಾರವನ್ನು ಧರಿಸಿದವರೂ ಆದ ರಾಕ್ಷಸರು ನೂರುಸಾವಿರ ಸಂಖ್ಯೆಗಳಲ್ಲಿ ಹೊರಗೆಬಂದರು.

ಶಸ್ತ್ರವರ್ಷಾಣಿ ವರ್ಷಂತೋ ದ್ರಾವಯಿತ್ವಾ ವನೌಕಸಃ ।
ಪ್ರಾಕಾರಂ ಶೋಭಯಂತಸ್ತೇ ಪರಂ ವಿಕ್ರಮಮಾಸ್ಥಿತಾಃ ॥೩೩॥

ಅವರು ಶಸ್ತ್ರಗಳ ಮಳೆಯನ್ನು ಸುರಿಸುತ್ತಾ ವನಚಾರಿಗಳಾದ ಕಪಿಗಳನ್ನು ಓಡಿಸಿ ಕೋಟೆಯ ಗೋಡೆಗೆ ಶೋಭೆಯನ್ನು ತರುತ್ತಾ ಬಹಳ ವಿಕ್ರಮವನ್ನು ಧರಿಸಿ ನಿಂತರು.

ಸ ಮಾಷರಾಶಿಸದೃಶೈರ್ಬಭೂವ ಕ್ಷಣದಾಚರೈಃ ।
ಕೃತೋ ನಿರ್ವಾನರೋ ಭೂಯಃ ಪ್ರಾಕಾರೋ ಭೀಮದರ್ಶನೈಃ ॥೩೪॥

ಭಯಂಕರರೂಪವುಳ್ಳ, ಉದ್ದಿನ ರಾಶಿಯನ್ನು ಹೋಲುವ ಬಣ್ಣವನ್ನು ಹೊಂದಿದ್ದ ಆ ನಿಶಾಚರರು ಕಪಿಗಳನ್ನೆಲ್ಲಾ ಓಡಿಸಿ ಆ ಪ್ರಾಕಾರವು ಪುನಃ ಕಪಿಶೂನ್ಯವಾಗುವಂತೆ ಮಾಡಿದರು.

ಪೇತುಃ ಶೂಲವಿಭಿನ್ನಾಂಗಾ ಬಹವೋ ವಾನರರ್ಷಭಾಃ ।
ಸ್ತಂಭತೋರಣಭಗ್ನಾಶ್ಚ ಪೇತುಸ್ತತ್ರ ನಿಶಾಚರಾಃ ॥೩೫॥

ಶೂಲಗಳಿಂದ ಚುಚ್ಚಲ್ಪಟ್ಟ ಅನೇಕ ವಾನರಶ್ರೇಷ್ಠರು ಅಲ್ಲಿ ಬಿದ್ದರು. ಕಂಬತೋರಣಗಳಿಂದ ಭಗ್ನರಾದ ರಾಕ್ಷಸರೂ ಅಲ್ಲಿ ಬಿದ್ದರು.

ಕೇಶಾಕೇಶ್ಯಭವದ್ ಯುದ್ಧಂ ರಕ್ಷಸಾಂ ವಾನರೈಃ ಸಹ ।
ನಖೈರ್ದಂತೈಶ್ಚ ವೀರಾಣಾಂ ಖಾದತಾಂ ವೈ ಪರಸ್ಪರಮ್ ॥೩೬॥

ಆ ರಾಕ್ಷಸರಿಗೂ ಮತ್ತು ಕಪಿಗಳಿಗೂ ಕೇಶಾಕೇಶಿ ಯುದ್ಧವು ನಡೆಯಿತು. ನಖಗಳಿಂದಲೂ, ದಂತಗಳಿಂದಲೂ ಪರಸ್ಪರವಾಗಿ ಕಚ್ಚುತ್ತಾ ಯುದ್ಧವು ನಡೆಯಿತು.

ನಿಷ್ಪನಂತೋ ಹ್ಯುಭಯತಸ್ತತ್ರ ವಾನರರಾಕ್ಷಸಾಃ ।
ಹತಾ ನಿಪತಿತಾ ಭೂಮೌ ನ ಮುಂಚಂತಿ ಪರಸ್ಪರಮ್ ॥೩೭॥

ಶಸ್ತ್ರಗಳ ಏಟಿಗೆ ಸಿಲುಕಿ ಗರ್ಜನೆಯನ್ನು ಮಾಡುತ್ತಾ ಬೀಳುತ್ತಿದ್ದ ವಾನರರು ಮತ್ತು ರಾಕ್ಷಸರು ಭೂಮಿಯ ಮೇಲೆ ಬಿದ್ದರೂ ಒಬ್ಬರನ್ನೊಬ್ಬರು ಬಿಡುತ್ತಿರಲಿಲ್ಲ.

ರಾಮಸ್ತು ಶರಜಾಲಾನಿ ವವರ್ಷ ಜಲದೋ ಯಥಾ ।
ತಾನಿ ಲಂಕಾಂ ಸಮಾಸಾದ್ಯ ಜಘ್ನುಸ್ತಾನ್ ರಜನೀಚರಾನ್ ॥೩೮॥

ರಾಮನಾದರೂ ಮೋಡವು ಮಳೆಯನ್ನು ಸುರಿಸಿದಂತೆ ಬಾಣಸಮೂಹಗಳನ್ನು ಸೃಷ್ಟಿಸಿದನು. ಆ ಬಾಣಗಳು ಲಂಕಾಪಟ್ಟಣವನ್ನು ತಲುಪಿ ಅನೇಕ ರಾಕ್ಷಸರನ್ನು ಕೊಂದವು.

ಸೌಮಿತ್ರಿರಪಿ ನಾರಾಚೈರ್ದೃಢಧನ್ವಾ ಜಿತಕ್ಲಮಃ ।
ಆದಿಶ್ಯಾದಿಶ್ಯ ದುರ್ಗಸ್ಥಾನ್ ಪಾತಯಾಮಾಸ ರಾಕ್ಷಸಾನ್ ॥೩೯॥

ದೃಢ ಧನುಸ್ಸುಳ್ಳವನೂ, ಶ್ರಮರಹಿತನೂ ಆದ ಲಕ್ಷ್ಮಣನು ಕೋಟೆಯ ಮೇಲಿದ್ದ ರಾಕ್ಷಸರನ್ನು ನಿರ್ದೇಶಮಾಡಿ, ನಿರ್ದೇಶಮಾಡಿ ಬಾಣಗಳಿಂದ ಅವರನ್ನು ಉರುಳಿಸುತ್ತಿದ್ದನು.

ತತಃ ಪ್ರತ್ಯವಹಾರೋऽಭೂತ್ಸೈನ್ಯಾನಾಂ ರಾಘವಾಜ್ಞಯಾ ।
ಕೃತೇ ವಿಮರ್ದೇ ಲಂಕಾಯಾಂ ಲಬ್ಧಲಕ್ಷ್ಯೇ ಜಯೋತ್ತರಃ ॥೪೦॥

ಲಂಕೆಯಲ್ಲಿ ಜಯಸೂಚಕವಾದ ಇಂತಹ ಯುದ್ಧವು ಜರುಗುತ್ತಿರಲು ತನ್ನ ಲಕ್ಷ್ಯವನ್ನು ಸಾಧಿಸಿದ ರಾಮನು ತನ್ನ ಆಜ್ಞೆಯಿಂದ ಸೈನ್ಯಗಳ ಪ್ರತ್ಯಾವಹಾರವನ್ನು ಮಾಡಿಸಿದನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂಸಂಹಿತಾಯಾಂ ವೈಯಾಸಿಕ್ಯಾಂ
ವನಪರ್ವಣಿ ತ್ರಿಸಪ್ತ್ಯಧಿಕದ್ವಿಶತತಮೋऽಧ್ಯಾಯಃ ॥
॥ ಇತಿ ರಾಮೋಪಖ್ಯಾನಪರ್ವಣಿ ಲಂಕಾಪ್ರವೇಶೋ ನಾಮ ದ್ವಾದಶೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವನಪರ್ವದಲ್ಲಿ ಇನ್ನೂರ ಎಪ್ಪತ್ಮೂರನೆಯ
ಅಧ್ಯಾಯ ಮುಗಿಯಿತು.

★ ★ ★ ★

ಇನ್ನೂರ ಎಪ್ಪತ್ತನಾಲ್ಕನೆಯ ಅಧ್ಯಾಯ

ರಾವಣ ಇಂದ್ರಜಿತುಗಳ ಜೊತೆಯಲ್ಲಿ ರಾಮ-ಲಕ್ಷ್ಮಣರ ದ್ವಂದ್ವಯುದ್ಧ.

ಮಾರ್ಕಂಡೇಯಃ

ತತೋ ನಿವಿಶಮಾನಾಂಸ್ತಾನ್ ಸೈನಿಕಾನ್ ರಾವಣಾನುಗಾಃ ।
ಅಭಿಜಗ್ಮುರ್ಗಣಾನೇಕೇ ಪಿಶಾಚಾ ಯಕ್ಷರಾಕ್ಷಸಾಃ ॥೧॥

ಮಾರ್ಕಂಡೇಯ- ಅನಂತರ ಪ್ರವೇಶಿಸುತ್ತಿದ್ದ ಆ ವಾನರ ಸೈನ್ಯದ ಸೈನಿಕರನ್ನು ಕುರಿತು ರಾವಣನ ಅನುಚರರಾದ ಪಿಶಾಚಿಗಳು, ಯಕ್ಷರು ಮತ್ತು ರಾಕ್ಷಸರು ಅಭಿಮುಖವಾಗಿ ಹೋದರು.

ಪರ್ವತಃ(ಣಃ) ಪತನೋ ಜಂಭಃ ಖರಃ ಕ್ರೋಧವಶೋ ಹರಿಃ ।
ಪ್ರರುಜಶ್ಚಾರುಜಶ್ಚೈವ ಪ್ರಘಸಶ್ಚೈವಮಾದಯಃ ॥೨॥

ಪರ್ವತ, ಪತನ, ಜಂಭ, ಖರ, ಕ್ರೋಧವಶ, ಹರಿ, ಪ್ರರುಜ, ಅರುಜ, ಪ್ರಘಸ ಮೊದಲಾದವರು (ವಾನರ ಸೈನ್ಯಕ್ಕೆ ಅಭಿಮುಖವಾಗಿ ಹೋದರು).

ತತೋऽಭಿಪತತಾಂ ತೇಷಾಮದೃಶ್ಯಾನಾಂ ದುರಾತ್ಮನಾಮ್ ।
ಅಂತರ್ಧಾನವಧಂ ತಜ್ಞಶ್ಚಕಾರ ಸ ವಿಭೀಷಣಃ ॥೩॥

ಆಗ ಆ ದುರಾತ್ಮರು ಅದೃಶ್ಯರಾಗಿ ಮೇಲೆ ಎರಗುತ್ತಿರಲು ಆ ವಿದ್ಯೆಯನ್ನು ತಿಳಿದ ವಿಭೀಷಣನು ಅವರ ಅಂತರ್ಧಾನವನ್ನು ನಾಶಮಾಡಿದನು.

ತೇ ದೃಶ್ಯಮಾನಾ ಹರಿಭಿರ್ಬಲಿಭಿರ್ದೂರಪಾತಿಭಿಃ ।
ನಿಹತಾಃ ಸರ್ವಶೋ ರಾಜನ್ಮಹೀಂ ಜಗ್ಮುರ್ಗತಾಸವಃ ॥೪॥

ಎಲೈ ರಾಜನೇ, ದೃಶ್ಯಮಾನರಾದ ಅವರು ದೂರ ನೆಗೆಯುವ ಬಲಿಷ್ಠರಾದ ಕಪಿಗಳಿಂದ ನಿಹತರಾಗಿ ಎಲ್ಲರೂ ಪ್ರಾಣಗಳನ್ನು ಕಳೆದುಕೊಡು ಭೂಮಿಯಮೇಲೆ ಬಿದ್ದರು.

ಅಮೃಷ್ಯಮಾಣಃ ಸಬಲೋ ರಾವಣೋ ನಿರ್ಯಯಾವಥ ।
ವ್ಯೂಹ್ಯ ಚೌಶನಸಂ ವ್ಯೂಹಂ ಹರೀನಭ್ಯವಹಾರಯತ್ ॥೫॥

ರಾವಣನು ಅದನ್ನು ಸಹಿಸದೆ ತನ್ನ ಸೈನ್ಯಸಹಿತನಾಗಿ ಹೊರಗೆ ಬಂದು ಶುಕ್ರವ್ಯೂಹವನ್ನು ರಚಿಸಿ ಕಪಿಗಳನ್ನು ಭಕ್ಷಿಸಲು (ಸಂಹರಿಸಲು) ಪ್ರಾರಂಭಿಸಿದನು.

ರಾಕ್ಷಸಾನಾಂ ಬಲೈರ್ಘೋರೈಃ ಪಿಶಾಚಾನಾಂ ಚ ಸಂವೃತಃ ।
ಯುದ್ಧಶಾಸ್ತ್ರವಿಧಾನಜ್ಞ ಉಶನಾ ಇವ ಚಾಪರಃ ॥೬॥

ರಾಕ್ಷಸರ ಸೈನ್ಯದಿಂದಲೂ ಮತ್ತು ಘೋರವಾದ ಪಿಶಾಚಿಗಳ ಸೈನ್ಯದಿಂದಲೂ ಕೂಡಿದ ಯುದ್ಧಶಾಸ್ತ್ರವಿಧಾನವನ್ನು ಬಲ್ಲ ಅವನು ಇನ್ನೊಬ್ಬ ಶುಕ್ರನಂತೆ ಯುದ್ಧವನ್ನು ಮಾಡಿದನು.

ರಾಘವಸ್ತು ವಿನಿರ್ಯಾಂತಂ ವ್ಯೂಢಾನೀಕಂ ದಶಾನನಮ್ ।
ಬಾರ್ಹಸ್ಪತ್ಯಂ ವಿಧಿಂ ಕೃತ್ವಾ ಪ್ರತ್ಯವ್ಯೂಹನ್ನಿಶಾಚರಮ್ ॥೭॥

ರಾಘವನಾದರೂ ಸೈನ್ಯವನ್ನು ಒಂದುಗೂಡಿಸಿ ಯುದ್ಧಕ್ಕೆ ಹೊರಟುಬರುತ್ತಿದ್ದ ದಶಾನನನನ್ನು ನೋಡಿ ಬೃಹಸ್ಪತಿ ವ್ಯೂಹವನ್ನು ರಚಿಸಿ ಆ ನಿಶಾಚರನನ್ನು ತಡೆಗಟ್ಟಿದನು.

ಸಮೇತ್ಯ ಯುಯುಧೇ ತತ್ರ ತತೋ ರಾಮೇಣ ರಾವಣಃ ।
ಯುಯುಧೇ ಲಕ್ಷ್ಮಣಶ್ಚಾಪಿ ತಥೈವೇಂದ್ರಜಿತಾ ಸಹ ॥೮॥

ಆಗ ರಾವಣನು ರಾಮನ ಜೊತೆಯಲ್ಲಿಯೂ, ಲಕ್ಷ್ಮಣನು ಇಂದ್ರಜಿತುವಿನ ಜೊತೆಯಲ್ಲಿಯೂ ಸಂಧಿಸಿ ಯುದ್ಧವನ್ನು ಮಾಡಿದರು.

ವಿರೂಪಾಕ್ಷೇಣ ಸುಗ್ರೀವಸ್ತಾರೇಣ ಚ ನಿಖರ್ವಣಃ ।
ತುಂಡೇನ ಚ ನಳಸ್ತತ್ರ ಪಟುಶಃ ಪನಸೇನ ಚ ॥೯॥

ಅಲ್ಲಿ ವಿರೂಪಾಕ್ಷನು ಸುಗ್ರೀವನ ಜೊತೆಯಲ್ಲಿಯೂ, ತಾರನು ನಿಖರ್ವಣನ ಜೊತೆಯಲ್ಲಿಯೂ, ನಳನು ತುಂಡನ ಜೊತೆಯಲ್ಲಿಯೂ, ಪಟುಶನು ಪನಸನ ಜೊತೆಯಲ್ಲಿಯೂ ಯುದ್ಧವನ್ನು ಮಾಡಿದರು.

ವಿಷಹ್ಯಂ ಯಂ ಹಿ ಯೋ ಮೇನೇ ಸ ಸ ತೇನ ಸಮೇಯಿವಾನ್ ।
ಯುಯುಧೇ ಯುದ್ಧವೇಲಾಯಾಂ ಸ್ವಬಾಹುಬಲಮಾಶ್ರಿತಃ ॥೧೦॥

ಯಾವನನ್ನು ನಾನು ಇವನನ್ನು ಎದುರಿಸಬಹುದು ಎಂದು ತಿಳಿದನೋ ಅವನು ತನ್ನ ಬಾಹುಬಲವನ್ನು ಆಶ್ರಯಿಸಿ ಆ ಯುದ್ಧದ ಸಮಯದಲ್ಲಿ ಅವನ ಜೊತೆಯಲ್ಲಿ ಯುದ್ಧವನ್ನು ಮಾಡಿದನು.

ಸ ಸಂಪ್ರಹಾರೋ ವವೃಧೇ ಭೀರೂಣಾಂ ಭಯವರ್ಧನಃ ।
ರೋಮಸಂಹರ್ಷಣೋ ಘೋರಃ ಪುರಾ ದೇವಾಸುರೇ ಯಥಾ ॥೧೧॥

ಹಿಂದೆ ದೇವಾಸುರ ಸಂಗ್ರಾಮದಲ್ಲಿ ಇದ್ದಂತಹ, ಭೀರುಗಳಿಗೆ ಭಯಜನಕವೂ, ರೋಮಾಂಚಕಾರಿಯೂ, ಘೋರವೂ ಆದ ಆ ಸಂಗ್ರಾಮವು ಜರುಗಿತು.

ರಾವಣೋ ರಾಮಮಾನರ್ಚ್ಛ ಶಕ್ತಿಶೂಲಾಸಿವೃಷ್ಟಿಭಿಃ ।
ನಿಶಿತೈರಾಯಸೈಸ್ತೀಕ್ಷ್ಣೈ ರಾವಣಂ ಚಾಪಿ ರಾಘವಃ ॥೧೨॥

ರಾವಣನು ರಾಮನನ್ನು ನಿಶಿತವಾದ ಮತ್ತು ತೀಕ್ಷ್ಣವಾದ ಶಕ್ತಿ , ಶೂಲ, ಕತ್ತಿಗಳ ವೃಷ್ಟಿಗಳಿಂದ ಪೀಡಿಸಿದನು. ರಾಮನೂ ರಾವಣನನ್ನು ಹಾಗೆಯೇ ಪೀಡಿಸಿದನು.

ತಥೈವೇಂದ್ರಜಿತಂ ಯತ್ತಂ ಲಕ್ಷ್ಮಣೋ ಮರ್ಮಭೇದಿಭಿಃ ।
ಇಂದ್ರಜಿಚ್ಚಾಪಿ ಸೌಮಿತ್ರಿಂ ಬಿಭೇದ ಬಹುಭಿಃ ಶರೈಃ ॥೧೩॥

ಲಕ್ಷ್ಮಣನು ಮರ್ಮಭೇದಿಗಳಾದ ಶಸ್ತ್ರಗಳಿಂದ ಪ್ರಯತ್ನಶಾಲಿಯಾದ ಇಂದ್ರಜಿತುವನ್ನು ಪೀಡಿಸಿದನು. ಅದರಂತೆಯೇ ಇಂದ್ರಜಿತುವೂ ಸಹ ಲಕ್ಷ್ಮಣನನ್ನು ಅನೇಕ ಬಾಣಗಳಿಂದ ಪೀಡಿಸಿದನು.

ವಿಭೀಷಣಃ ಪ್ರಹಸ್ತಂ ಚ ಪ್ರಹಸ್ತಶ್ಚ ವಿಭೀಷಣಮ್ ।
ಖಗಪತ್ರೈಃ ಶರೈಸ್ತೀಕ್ಷ್ಣೈರಭ್ಯವರ್ಷದ್ ಗತವ್ಯಥಃ ॥೧೪॥

ವಿಭೀಷಣನು ಪ್ರಹಸ್ತನನ್ನು, ಪ್ರಹಸ್ತನು ವಿಭೀಷಣನನ್ನು ಪಕ್ಷಿಗಳ ಗರಿಗಳನ್ನು ಕಟ್ಟಿದ್ದ ತೀಕ್ಷ್ಣವಾದ ಬಾಣಗಳಿಂದ ವ್ಯಥೆಯಿಲ್ಲದೇ ಒಬ್ಬರ ಮೇಲೊಬ್ಬರು ಮಳೆಯನ್ನು ಸುರಿಸಿದರು.

ತೇಷಾಂ ಬಲವತಾಮಾಸೀನ್ಮಹಾಸ್ತ್ರಾಣಾಂ ಸಮಾಗಮಃ ।
ವಿವ್ಯಥುಃ ಸಕಲಾ ಯೇನ ತ್ರಯೋ ಲೋಕಾಶ್ಚರಾಚರಾಃ ॥೧೫॥

ಬಲಿಷ್ಠರಾದ ಅವರಿಗೆ ಮಹಾಸ್ತ್ರಗಳ ಸಮಾಗಮರೂಪವಾದ ಯುದ್ಧವು ಉಂಟಾಯಿತು. ಚರಾಚರವಾದ ಮೂರುಲೋಕಗಳಲ್ಲಿದ್ದ ಸಕಲರೂ ವ್ಯಥೆಯನ್ನು ಹೊಂದಿದರು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂಸಂಹಿತಾಯಾಂ ವೈಯಾಸಿಕ್ಯಾಂ
ವನಪರ್ವಣಿ ಚತುಃಸಪ್ತತ್ಯಧಿಕದ್ವಿಶತತಮೋಽಧ್ಯಾಯಃ ॥
॥ ಇತಿ ರಾಮೋಪಖ್ಯಾನಪರ್ವಣಿ ರಾಮರಾವಣಯುದ್ಧಂ ನಾಮ
ತ್ರಯೋದಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವನಪರ್ವದಲ್ಲಿ ಇನ್ನೂರ ಎಪ್ಪತ್ತನಾಲ್ಕನೆಯ
ಅಧ್ಯಾಯ ಮುಗಿಯಿತು.

★ ★ ★ ★

ಆಗ ರಾವಣನು ರಾಮನ ಜೊತೆಯಲ್ಲಿಯೂ, ಲಕ್ಷ್ಮಣನು ಇಂದ್ರಜಿತುವಿನ ಜೊತೆಯಲ್ಲಿಯೂ ಸಂಧಿಸಿ ಯುದ್ಧವನ್ನು ಮಾಡಿದರು.

ವಿರೂಪಾಕ್ಷೇಣ ಸುಗ್ರೀವಸ್ತಾರೇಣ ಚ ನಿಖರ್ವಣಃ ।
ತುಂಡೇನ ಚ ನಳಸ್ತತ್ರ ಪಟುಶಃ ಪನಸೇನ ಚ ॥೯॥

ಅಲ್ಲಿ ವಿರೂಪಾಕ್ಷನು ಸುಗ್ರೀವನ ಜೊತೆಯಲ್ಲಿಯೂ, ತಾರನು ನಿಖರ್ವಣನ ಜೊತೆಯಲ್ಲಿಯೂ, ನಳನು ತುಂಡನ ಜೊತೆಯಲ್ಲಿಯೂ, ಪಟುಶನು ಪನಸನ ಜೊತೆಯಲ್ಲಿಯೂ ಯುದ್ಧವನ್ನು ಮಾಡಿದರು.

ವಿಷಹ್ಯಂ ಯಂ ಹಿ ಯೋ ಮೇನೇ ಸ ಸ ತೇನ ಸಮೇಯಿವಾನ್ ।
ಯುಯುಧೇ ಯುದ್ಧವೇಲಾಯಾಂ ಸ್ವಬಾಹುಬಲಮಾಶ್ರಿತಃ ॥೧೦॥

ಯಾವನನ್ನು ನಾನು ಇವನನ್ನು ಎದುರಿಸಬಹುದು ಎಂದು ತಿಳಿದನೋ ಅವನು ತನ್ನ ಬಾಹುಬಲವನ್ನು ಆಶ್ರಯಿಸಿ ಆ ಯುದ್ಧದ ಸಮಯದಲ್ಲಿ ಅವನ ಜೊತೆಯಲ್ಲಿ ಯುದ್ಧವನ್ನು ಮಾಡಿದನು.

ಸ ಸಂಪ್ರಹಾರೋ ವವೃಧೇ ಭೀರೂಣಾಂ ಭಯವರ್ಧನಃ ।
ರೋಮಸಂಹರ್ಷಣೋ ಘೋರಃ ಪುರಾ ದೇವಾಸುರೇ ಯಥಾ ॥೧೧॥

ಹಿಂದೆ ದೇವಾಸುರ ಸಂಗ್ರಾಮದಲ್ಲಿ ಇದ್ದಂತಹ, ಭೀರುಗಳಿಗೆ ಭಯಜನಕವೂ, ರೋಮಾಂಚಕಾರಿಯೂ, ಘೋರವೂ ಆದ ಆ ಸಂಗ್ರಾಮವು ಜರುಗಿತು.

ರಾವಣೋ ರಾಮಮಾನರ್ಚ್ಛ ಶಕ್ತಿಶೂಲಾಸಿವೃಷ್ಟಿಭಿಃ ।
ನಿಶಿತೈರಾಯಸೈಸ್ತೀಕ್ಷ್ಣೈ ರಾವಣಂ ಚಾಪಿ ರಾಘವಃ ॥೧೨॥

ರಾವಣನು ರಾಮನನ್ನು ನಿಶಿತವಾದ ಮತ್ತು ತೀಕ್ಷ್ಣವಾದ ಶಕ್ತಿ, ಶೂಲ, ಕತ್ತಿಗಳ ವೃಷ್ಟಿಗಳಿಂದ ಪೀಡಿಸಿದನು. ರಾಮನೂ ರಾವಣನನ್ನು ಹಾಗೆಯೇ ಪೀಡಿಸಿದನು.

ತಥೈವೇಂದ್ರಜಿತಂ ಯತ್ತಂ ಲಕ್ಷ್ಮಣೋ ಮರ್ಮಭೇದಿಭಿಃ ।
ಇಂದ್ರಜಿಚ್ಚಾಪಿ ಸೌಮಿತ್ರಿಂ ಬಿಭೇದ ಬಹುಭಿಃ ಶರೈಃ ॥೧೩॥

ಲಕ್ಷ್ಮಣನು ಮರ್ಮಭೇದಿಗಳಾದ ಶಸ್ತ್ರಗಳಿಂದ ಪ್ರಯತ್ನಶಾಲಿಯಾದ ಇಂದ್ರಜಿತುವನ್ನು ಪೀಡಿಸಿದನು. ಅದರಂತೆಯೇ ಇಂದ್ರಜಿತುವೂ ಸಹ ಲಕ್ಷ್ಮಣನನ್ನು ಅನೇಕ ಬಾಣಗಳಿಂದ ಪೀಡಿಸಿದನು.

ವಿಭೀಷಣಃ ಪ್ರಹಸ್ತಂ ಚ ಪ್ರಹಸ್ತಶ್ಚ ವಿಭೀಷಣಮ್ ।
ಖಗಪತ್ರೈಃ ಶರೈಸ್ತೀಕ್ಷ್ಣೈರಭ್ಯವರ್ಷದ್ ಗತವ್ಯಥಃ ॥೧೪॥

ವಿಭೀಷಣನು ಪ್ರಹಸ್ತನನ್ನು, ಪ್ರಹಸ್ತನು ವಿಭೀಷಣನನ್ನು ಪಕ್ಷಿಗಳ ಗರಿಗಳನ್ನು ಕಟ್ಟಿದ್ದ ತೀಕ್ಷ್ಣವಾದ ಬಾಣಗಳಿಂದ ವ್ಯಥೆಯಿಲ್ಲದೇ ಒಬ್ಬರ ಮೇಲೊಬ್ಬರು ಮಳೆಯನ್ನು ಸುರಿಸಿದರು.

ತೇಷಾಂ ಬಲವತಾಮಾಸೀನ್ಮಹಾಸ್ತ್ರಾಣಾಂ ಸಮಾಗಮಃ ।
ವಿವ್ಯಥುಃ ಸಕಲಾ ಯೇನ ತ್ರಯೋ ಲೋಕಾಶ್ಚರಾಚರಾಃ ॥೧೫॥

ಬಲಿಷ್ಠರಾದ ಅವರಿಗೆ ಮಹಾಸ್ತ್ರಗಳ ಸಮಾಗಮರೂಪವಾದ ಯುದ್ಧವು ಉಂಟಾಯಿತು. ಚರಾಚರವಾದ ಮೂರುಲೋಕಗಳಲ್ಲಿದ್ದ ಸಕಲರೂ ವ್ಯಥೆಯನ್ನು ಹೊಂದಿದರು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂಸಂಹಿತಾಯಾಂ ವೈಯಾಸಿಕ್ಯಾಂ
ವನಪರ್ವಣಿ ಚತುಃಸಪ್ತತ್ಯಧಿಕದ್ವಿಶತತಮೋऽಧ್ಯಾಯಃ ॥
॥ ಇತಿ ರಾಮೋಪಾಖ್ಯಾನಪರ್ವಣಿ ರಾಮರಾವಣಯುದ್ಧಂ ನಾಮ
ತ್ರಯೋದಶೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವನಪರ್ವದಲ್ಲಿ ಇನ್ನೂರ ಎಪ್ಪತ್ತನಾಲ್ಕನೆಯ ಅಧ್ಯಾಯ ಮುಗಿಯಿತು.

★ ★ ★ ★

ಇನ್ನೂರ ಎಪ್ಪತ್ತೈದನೆಯ ಅಧ್ಯಾಯ

ಹನುಮಂತ ಮತ್ತು ವಿಭೀಷಣರಿಂದ ಧೂಮ್ರಾಕ್ಷ ಮತ್ತು ಪ್ರಹಸ್ತನ ವಧೆ. ಕುಂಭಕರ್ಣನ ಯುದ್ಧಭೂಮಿ ಪ್ರವೇಶ.

ಮಾರ್ಕಂಡೇಯಃ

ತತಃ ಪ್ರಹಸ್ತಃ ಸಹಸಾ ಸಮಭ್ಯೇತ್ಯ ವಿಭೀಷಣಮ್ ।
ಗದಯಾ ತಾಡಯಾಮಾಸ ವಿನದ್ಯ ರಣಕರ್ಕಶಃ ॥೧॥

ಮಾರ್ಕಂಡೇಯ– ಅನಂತರ ರಣಕರ್ಕಶನಾದ ಪ್ರಹಸ್ತನು ಇದ್ದಕ್ಕಿದ್ದಂತೆಯೇ ಓಡಿಬಂದು ದೊಡ್ಡನಾದವನ್ನು ಮಾಡಿ ವಿಭೀಷಣನನ್ನು ತನ್ನ ಗದೆಯಿಂದ ಹೊಡೆದನು.

ಸ ತಯಾऽಭಿಹತೋ ಧೀಮಾನ್ ಗದಯಾ ಭೀಮವೇಗಯಾ ।
ನಾಕಂಪತ ಮಹಾಬಾಹುರ್ಹಿಮವಾನಿವ ಸುಸ್ಥಿರಃ ॥೨॥

ಮಹಾವೇಗವುಳ್ಳ ಗದೆಯಿಂದ ಅಭಿಹತನಾದ ಮಹಾಬಾಹುವೂ, ಮೇಧಾವಿಯೂ ಆದ ವಿಭೀಷಣನು ಸುಸ್ಥಿರವಾದ ಹಿಮಾಲಯದಂತೆ ಅಲುಗಾಡಲಿಲ್ಲ.

ತತಃ ಪ್ರಗೃಹ್ಯ ವಿಪುಲಾಂ ಶತಘಂಟಾಂ ವಿಭೀಷಣಃ ।
ಅಭಿಮಂತ್ರ್ಯ ಮಹಾಶಕ್ತಿಂ ಚಿಕ್ಷೇಪಾಸ್ಯ ಶಿರಃ ಪ್ರತಿ ॥೩॥

ಅನಂತರ ವಿಭೀಷಣನು ಮೂರು ಘಂಟಗಳಿದ್ದ ವಿಪುಲವಾದ ಒಂದು ಶಕ್ತ್ಯಾಯುಧವನ್ನು ತೆಗೆದುಕೊಂಡು ಅದನ್ನು ಅಭಿಮಂತ್ರಿಸಿ ಪ್ರಹಸ್ತನ ಶಿರಸ್ಸಿನ ಮೇಲೆ ಎಸೆದನು.

ಪತಂತ್ಯಾ ಸ ತಯಾ ವೇಗಾದ್ ರಾಕ್ಷಸೋऽಶನಿವೇಗಯಾ ।
ಹೃತೋತ್ತಮಾಂಗೋ ದದೃಶೇ ವಾತರುಗ್ಣ ಇವ ದ್ರುಮಃ ॥೪॥

ಸಿಡಿಲಿನ ವೇಗವನ್ನು ಹೊಂದಿದ್ದ ಆ ಶಕ್ತ್ಯಾಯುಧವು ವೇಗದಿಂದ ತನ್ನ ಮೇಲೆ ಬೀಳುತ್ತಿದ್ದಂತೆ ಆ ರಾಕ್ಷಸನು ಶಿರಸ್ಸನ್ನು ಕಳೆದುಕೊಂಡು ಬಿರುಗಾಳಿಯಿಂದ ಮುರಿದು ಬಿದ್ದ ಮರದಂತೆ ಕಂಡುಬಂದನು.

ತಂ ದೃಷ್ಟ್ವಾ ನಿಹತಂ ಸಂಖೇ ಪ್ರಹಸ್ತಂ ಕ್ಷಣದಾಚರಮ್ ।
ಅಭಿದುದ್ರಾವ ಧೂಮ್ರಾಕ್ಷೋ ವೇಗೇನ ಮಹತಾ ಕಪೀನ್ ॥೫॥

ನಿಶಾಚರನಾದ ಪ್ರಹಸ್ತನು ಯುದ್ಧದಲ್ಲಿ ಹತನಾದುದನ್ನು ನೋಡಿ ಧೂಮ್ರಾಕ್ಷನು ಬಹಳ ವೇಗದಿಂದ ಕಪಿಗಳ ಮೇಲೆ ಎರಗಿದನು.

ತಸ್ಯ ಮೇಘೋಪಮಂ ಸೈನ್ಯಮಾಪತದ್ ಭೀಮದರ್ಶನಮ್ ।
ದೃಷ್ಟ್ವೈವ ಸಹಸಾ ದೀರ್ಣಾ ರಣೇ ವಾನರಪುಂಗವಾಃ ॥೬॥

ಮೇಘಸದೃಶವಾದ ಭಯಂಕರ ರೂಪವನ್ನು ತಾಳಿದ ಅವನ ಸೈನ್ಯವು ಮೇಲೆ ಎರಗುವುದನ್ನು ನೋಡುತ್ತಿದ್ದಂತೆಯೇ ವಾನರಪುಂಗವರು ಯುದ್ಧದಲ್ಲಿ ಇದ್ದಕ್ಕಿದ್ದಂತೆಯೇ ಚದುರಿ ಹೋದರು.

ತತಸ್ತಾನ್ ಸಹಸಾ ದೀರ್ಣಾನ್ ದೃಷ್ಟ್ವಾ ವಾನರಪುಂಗವಾನ್ ।
ನಿರ್ಯಯೌ ಕಪಿಶಾರ್ದೂಲೋ ಹನುಮಾನ್ ಮಾರುತಾತ್ಮಜಃ ॥೭॥

ಆ ವಾನರಪುಂಗವರು ಶೀಘ್ರವಾಗಿ ಚದುರಿಹೋದುದನ್ನು ನೋಡಿ ಆಗ ಕಪಿಶಾರ್ದೂಲನಾದ ವಾಯುಪುತ್ರನಾದ ಹನುಮಂತನು ರಣಕ್ಕೆ ಹೊರಟು ಬಂದನು.

ತಂ ದೃಷ್ಟ್ವಾವಸ್ಥಿತಂ ಸಂಖೇ ಹರಯಃ ಪವನಾತ್ಮಜಮ್ ।
ಮಹತ್ಯಾ ತ್ವರಯಾ ರಾಜನ್ ಸನ್ನ್ಯವರ್ತಂತ ಸರ್ವಶಃ ॥೮॥

ಎಲೈ ರಾಜನೇ, ಪವನಾತ್ಮಜನಾದ ಅವನು ಯುದ್ಧದಲ್ಲಿ ನಿಂತಿರುವುದನ್ನು ನೋಡಿದ ಕಪಿಗಳು ಬಹಳ ಶೀಘ್ರವಾಗಿ ಹಿಂದಿರುಗಿ ಎಲ್ಲಕಡೆಗಳಿಂದಲೂ ಅವನನ್ನು ಸುತ್ತುವರಿದರು.

ತತಃ ಶಬ್ದೋ ಮಹಾನಾಸೀತ್ತುಮುಲೋ ಲೋಮಹರ್ಷಣಃ ।
ರಾಮರಾವಣಸೈನ್ಯಾನಾಮನ್ಯೋನ್ಯಮಭಿಧಾವತಾಮ್ ॥೯॥

ಅನಂತರ ಪರಸ್ಪರವಾಗಿ ಹೋರಾಡುವ ರಾಮರಾವಣರ ಸೈನ್ಯಗಳಲ್ಲಿ ತೀವ್ರವೂ ರೋಮಾಂಚನಕಾರಿಯೂ ಆದ ದೊಡ್ಡ ಶಬ್ದವು ಉಂಟಾಯಿತು.

ತಸ್ಮಿನ್ ಪ್ರವೃತ್ತೇ ಸಂಗ್ರಾಮೇ ಘೋರೇ ರುಧಿರಕರ್ದಮೇ ।
ಧೂಮ್ರಾಕ್ಷಃ ಕಪಿಸೈನ್ಯಂ ತದ್ ದ್ರಾವಯಾಮಾಸ ಪತ್ರಿಭಿಃ ॥೧೦॥

ರಕ್ತದ ಕೆಸರುಳ್ಳ ಆ ಘೋರಯುದ್ಧವು ನಡೆಯುತ್ತಿರಲು ಧೂಮ್ರಾಕ್ಷನು ಆ ಕಪಿಸೈನ್ಯವನ್ನು ತನ್ನ ಬಾಣಗಳಿಂದ ಚದುರಿಸಿದನು.

ತಂ ಸ ರಕ್ಷೋಮಹಾಮಾತ್ರಮಾಪತಂತಂ ಸಪತ್ನಜಿತ್ ।
ಪ್ರತಿಜಗ್ರಾಹ ಹನುಮಾಂಸ್ತರಸಾ ಪವನಾತ್ಮಜಃ ॥೧೧॥

ರಾವಣನ ಮಹಾಮಾತ್ರನಾದ ಅವನು ಮೇಲೆರಗುತ್ತಿರುವುದನ್ನು ನೋಡಿದ ಶತ್ರುಗಳ ಮೇಲೆ ಜಯವನ್ನು ಸಾಧಿಸುವ ಪವನಾತ್ಮಜನಾದ ಹನುಮಂತನು ಶೀಘ್ರವಾಗಿ ಅವನನ್ನು ಹಿಡಿದನು (ಸ್ವೀಕರಿಸಿದನು).

ತಯೋರ್ಯುದ್ಧಮಭೂದ್ ಘೋರಂ ಹರಿರಾಕ್ಷಸವೀರಯೋಃ ।
ಜಿಗೀಷತೋರ್ಯುಧಾऽನ್ಯೋನ್ಯಮಿಂದ್ರಪ್ರಹ್ಲಾದಯೋರಿವ ॥೧೨॥

ಜಯವನ್ನು ಬಯಸಿ ಯುದ್ಧವನ್ನು ಮಾಡುವ ಆ ಹರಿಶ್ರೇಷ್ಠರಾಕ್ಷಸ ವೀರರಿಬ್ಬರಿಗೂ ಇಂದ್ರಪ್ರಹ್ಲಾದರಿಗೆ ನಡೆದಂತೆ ಪರಸ್ಪರವಾಗಿ ಘೋರವಾದ ಯುದ್ಧವು ನಡೆಯಿತು.

ಗದಾಭಿಃ ಪರಿಘೈಶ್ಚೈವ ರಾಕ್ಷಸೋ ಜಘ್ನಿವಾನ್ ಕಪಿಮ್ ।
ಕಪಿಶ್ಚ ಜಘ್ನಿವಾನ್ ರಕ್ಷಃ ಸಸ್ಕಂಧವಿಟಪೈರ್ದ್ರುಮೈಃ ॥೧೩॥

ರಾಕ್ಷಸನು ಗದೆಗಳಿಂದಲೂ, ಪರಿಘಗಳಿಂದಲೂ ಕಪಿಯನ್ನು ಹೊಡೆದನು. ಕಪಿಯೂ ಸಹ ರಾಕ್ಷಸನನ್ನು ಕೊಂಬೆಗಳಿಂದ ಸಹಿತವಾದ ಮರಗಳಿಂದ ಹೊಡೆದನು.

ತತಸ್ತಮತಿಕೋಪೇನ ಸಾಶ್ವಂ ಸರಥಸಾರಥಿಮ್ ।
ಧೂಮ್ರಾಕ್ಷಮವಧೀತ್ ಕ್ರುದ್ಧೋ ಹನೂಮಾನ್ ಮಾರುತಾತ್ಮಜಃ ॥೧೪॥

ಅನಂತರ ಬಹಳ ಕೋಪವನ್ನು ಹೊಂದಿದ ಮಾರುತಾತ್ಮಜನಾದ ಹನುಮಂತನು ಕ್ರುದ್ಧನಾಗಿ ಅಶ್ವಸಾರಥಿರಥಸಹಿತವಾದ ಧೂಮ್ರಾಕ್ಷನನ್ನು ಕೊಂದನು.

ತತಸ್ತಂ ನಿಹತಂ ದೃಷ್ಟ್ವಾ ಧೂಮ್ರಾಕ್ಷಂ ರಾಕ್ಷಸೋತ್ತಮಮ್ ।
ಹರಯೋ ಜಾತವಿಸ್ರಂಭಾ ಜಗ್ಮುರಭ್ಯೇತ್ಯ ಸೈನಿಕಾನ್ ॥೧೫॥

ರಾಕ್ಷಸಶ್ರೇಷ್ಠನಾದ ಧೂಮ್ರಾಕ್ಷನು ಹತನಾದುದನ್ನು ನೋಡಿ ಕಪಿಗಳು ವಿಶ್ವಾಸ ಮತ್ತು ಧೈರ್ಯಗಳನ್ನು ಹೊಂದಿ ರಾವಣನ ಸೈನಿಕರನ್ನು ಸಮೀಪಿಸಿದರು.

ತೇ ವಧ್ಯಮಾನಾ ಹರಿಭಿರ್ಬಲಿಭಿರ್ಜಿತಕಾಶಿಭಃ ।
ರಾಕ್ಷಸಾ ಭಗ್ನಸಂಕಲ್ಪಾ ಲಂಕಾಮಭ್ಯಪತನ್ ಭಯಾತ್ ॥೧೬॥

ಜಯಾಕಾಂಕ್ಷಿಗಳಾದ ಬಲಿಷ್ಠರಾದ ಕಪಿಗಳಿಂದ ಪ್ರಹಾರಕ್ಕೆ ಒಳಗಾದ ರಾಕ್ಷಸರು ತಮ್ಮ ಉದ್ದೇಶವು ಭಗ್ನವಾಗುತ್ತಿರಲು ಭಯದಿಂದ ಲಂಕೆಯನ್ನು ಪ್ರವೇಶಿಸಿದರು.

ತೇऽಭಿಪತ್ಯ ಪುರಂ ಭಗ್ನಾ ಹತಶೇಷಾ ನಿಶಾಚರಾಃ ।
ಸರ್ವಂ ರಾಜ್ಞೇ ಯಥಾವೃತ್ತಂ ರಾವಣಾಯ ನ್ಯವೇದಯನ್ ॥೧೭॥

ಹತಶೇಷರಾದ ಅಂಗಭಂಗವನ್ನು ಹೊಂದಿದ ಆ ರಾಕ್ಷಸರು ಬೇಗ ಓಡಿ ರಾಜನಾದ ರಾವಣನಿಗೆ ನಡೆದುದೆಲ್ಲವನ್ನೂ ವಿವರಿಸಿದರು.

ಶ್ರುತ್ವಾ ತು ರಾವಣಸ್ತೇಭ್ಯಃ ಪ್ರಹಸ್ತಂ ನಿಹತಂ ಯುಧಿ ।
ಧೂಮ್ರಾಕ್ಷಂ ಚ ಮಹೇಷ್ವಾಸಂ ಸಸೈನ್ಯಂ ವಾನರರ್ಷಭೈಃ ॥೧೮॥

ಅಶೀತಮಿವ ನಿಃಶ್ವಸ್ಯ ಸಮುತ್ಪತ್ಯ ವರಾಸನಾತ್ ।
ಉವಾಚ ಕುಂಭಕರ್ಣಸ್ಯ ಕರ್ಮಕಾಲೋऽಯಮಾಗತಃ ॥೧೯॥

ರಾವಣನು ಅವರಿಂದ ಯುದ್ಧದಲ್ಲಿ ವಾನರಶ್ರೇಷ್ಠರಿಂದ ಸೈನ್ಯಸಹಿತವಾದ ಪ್ರಹಸ್ತನೂ ಮತ್ತು ಮಹಾಧನುರ್ಧಾರಿಯಾದ ಧೂಮ್ರಾಕ್ಷನೂ ಹತನಾದುದನ್ನು ಕೇಳಿ ಬಿಸಿಯಾದ ನಿಟ್ಟುಸಿರನ್ನು ಬಿಟ್ಟು ತನ್ನ ಶ್ರೇಷ್ಠವಾದ ಆಸನದಿಂದ ಮೇಲೆದ್ದು ಕುಂಭಕರ್ಣನು ತನ್ನ ಕಾರ್ಯವನ್ನು ಮಾಡಬೇಕಾದ ಕಾಲವು ಈಗ ಒದಗಿದೆ ಎಂದು ಹೇಳಿದನು.

ಇತ್ಯೇವಮುಕ್ತ್ವಾ ವಿವಿಧೈರ್ವಾದಿತ್ರೈಃ ಸುಮಹಾಸ್ವನೈಃ ।
ಶಯಾನಮತಿನಿದ್ರಾಲುಂ ಕುಂಭಕರ್ಣಮಬೋಧಯತ್ ॥೨೦॥

ಹೀಗೆ ಹೇಳಿ ಮಹಾಶಬ್ದವನ್ನು ಮಾಡುವ ಅನೇಕ ವಾದಿತ್ರಗಳ ಸಹಾಯದಿಂದ ಅತಿನಿದ್ರಾಶೀಲನಾಗಿ ಮಲಗಿದ್ದ ಕುಂಭಕರ್ಣನನ್ನು ಎಬ್ಬಿಸಿದನು.

ಪ್ರಬೋಧ್ಯ ಮಹತಾ ಚೈನಂ ಯತ್ನೇನಾಗತಸಾಧ್ವಸಃ ।
ಸ್ವಸ್ಥಮಾಸೀನಮವ್ಯಗ್ರಂ ವಿನಿದ್ರಂ ರಾಕ್ಷಸಾಧಿಪಃ ।
ತತೋಽಬ್ರವೀದ್ ದಶಗ್ರೀವಃ ಕುಂಭಕರ್ಣಂ ಮಹಾಬಲಮ್ ॥೨೧॥

ಧನ್ಯೋಽಸಿ ಯಸ್ಯ ತೇ ನಿದ್ರಾ ಕುಂಭಕರ್ಣೇಯಮೀದೃಶೀ ।
ಯ ಇದಂ ದಾರುಣಾಕಾರಂ ನ ಜಾನೀಷೇ ಮಹಾಭಯಮ್ ॥೨೨॥

ಬಹಳ ಪ್ರಯತ್ನದಿಂದ ಕುಂಭಕರ್ಣನನ್ನು ಎಬ್ಬಿಸಿ ನಿದ್ರೆಯನ್ನು ಕಳೆದುಕೊಂಡು ಸಮಾಧಾನದಿಂದ ಕುಳಿತಿದ್ದ ಮಹಾಬಲನಾದ ಅವನನ್ನು ಕುರಿತು ರಾಕ್ಷಸಾಧಿಪನಾದ ರಾವಣನು ಕುಂಭಕರ್ಣನೇ, ಹೀಗೆ ನಿದ್ರೆಯನ್ನು ಮಾಡುತ್ತಿರುವ ನೀನು ಧನ್ಯನಾಗಿದ್ದೀಯೆ. ಏಕೆಂದರೆ ದಾರುಣಾಕಾರವಾದ ಈ ಮಹಾಭಯವನ್ನು ನೀನು ತಿಳಿದೇ ಇಲ್ಲ.

ಏಷ ತೀರ್ತ್ವಾಽರ್ಣವಂ ರಾಮಃ ಸೇತುನಾ ಹರಿಭಿಃ ಸಹ ।
ಅವಮನ್ಯೇಹ ನಃ ಸರ್ವಾನ್ ಕರೋತಿ ಕದನಂ ಮಹತ್ ॥೨೩॥

ಈ ರಾಮನು ಕಪಿಗಳ ಜೊತೆಯಲ್ಲಿ ಸೇತುವೆಯ ಮೂಲಕ ಸಮುದ್ರವನ್ನು ದಾಟಿ ನಮ್ಮೆಲ್ಲರನ್ನೂ ಅವಮಾನ ಮಾಡಿ ದೊಡ್ಡ ಯುದ್ಧವನ್ನು ಮಾಡುತ್ತಿದ್ದಾನೆ.

ಮಯಾ ತತ್ಪಹೃತಾ ಭಾರ್ಯಾ ಸೀತಾನಾಮಾಽಸ್ಯ ಜಾನಕೀ ।
ತಾಂ ನೇತುಂ ಸ ಇಹಾಯಾತೋ ಬದ್ಧ್ವಾ ಸೇತುಂ ಮಹಾರ್ಣವೇ ॥

ನಾನು ಅವನ ಪತ್ನಿಯಾದ ಜನಕರಾಜಕುಮಾರಿಯಾದ ಸೀತೆಯನ್ನು ಅಪಹರಿಸಿದೆ. ಅವಳನ್ನು ಕರೆದುಕೊಂಡು ಹೋಗಲು ಸಮುದ್ರದಲ್ಲಿ ಸೇತುವೆಯನ್ನು ಕಟ್ಟಿ ಅವನು ಇಲ್ಲಿ ಬಂದಿದ್ದಾನೆ.

ತೇನ ಚೈವ ಪ್ರಹಸ್ತಾದಿರ್ಮಹಾನ್ ನಃ ಸ್ವಜನೋ ಹತಃ ।
ತಸ್ಯ ನಾನ್ಯೋ ನಿಹಂತಾಽಸ್ತಿ ತ್ವಾಮೃತೇ ಶತ್ರುಕರ್ಶನ ॥೨೫॥

ಅವನು ನಮ್ಮ ಸ್ವಜನರಾದ ಪ್ರಹಸ್ತಾದಿಗಳನ್ನೆಲ್ಲಾ ಸಂಹರಿಸಿದ್ದಾನೆ. ಎಲೈ ಶತ್ರುಕರ್ಶನನೇ, ನಿನ್ನನ್ನು ಬಿಟ್ಟು ಅವನನ್ನು ಕೊಲ್ಲುವವರು ಬೇರೆ ಯಾರೂ ಇಲ್ಲ.

ಸ ದಂಶಿತೋಽಭಿನಿರ್ಯಾಯ ತ್ವಮದ್ಯ ಬಲಿನಾಂ ವರ ।
ರಾಮಾದೀನ್ ಸಮರೇ ಸರ್ವಾನ್ ಜಹಿ ಶತ್ರೂನರಿಂದಮ ॥೨೬॥

ಎಲೈ ಬಲಿಷ್ಠರಲ್ಲಿ ಶ್ರೇಷ್ಠನೇ, ಅರಿಂದಮನೇ, ನೀನು ಈ ದಿನ ಕವಚವನ್ನು ಧರಿಸಿ ಹೊರಟು ಯುದ್ಧದಲ್ಲಿ ರಾಮ ಮೊದಲಾದ ಎಲ್ಲ ಶತ್ರುಗಳನ್ನೂ ಸಂಹರಿಸು.

ದೂಷಣಾವರಜೌ ಚೈವ ವಜ್ರವೇಗಪ್ರಮಾಥಿನೌ ।
ತೌ ತ್ವಾಂ ಬಲೇನ ಮಹತಾ ಸಹಿತಾವನುಯಾಸ್ಯತಃ ॥೨೭॥

ದೂಷಣನ ತಮ್ಮಂದಿರಾದ ವಜ್ರವೇಗ ಮತ್ತು ಪ್ರಮಾಥಿ ಎಂಬ ಇಬ್ಬರು ದೊಡ್ಡ ಸೈನ್ಯದಿಂದ ಸಹಿತರಾಗಿ ನಿನ್ನನ್ನು ಹಿಂಬಾಲಿಸುವ (ಎಂದು ಹೇಳಿದನು).

ಮಾರ್ಕಂಡೇಯಃ

ಇತ್ಯುಕ್ತ್ವಾ ರಾಕ್ಷಸಪತಿಃ ಕುಂಭಕರ್ಣಂ ತರಸ್ವಿನಮ್ ।
ಸಂದಿದೇಶೇತಿಕರ್ತವ್ಯಂ ವಜ್ರವೇಗಪ್ರಮಾಥಿನೌ ॥೨೮॥

ಮಾರ್ಕಂಡೇಯರು– ರಾಕ್ಷಸ ಪತಿಯು ಹೀಗೆ ಹೇಳಿ ವೇಗಶಾಲಿಯಾದ ಕುಂಭಕರ್ಣನಿಗೂ ಮತ್ತು ವಜ್ರವೇಗಪ್ರಮಾಥಿಗಳಿಗೂ ಮಾಡಬೇಕಾದ ಕರ್ತವ್ಯದ ವಿಷಯವನ್ನು ಆದೇಶಿಸಿದನು.

ತಥೇತ್ಯುಕ್ತ್ವಾ ತು ತೌ ವೀರೌ ರಾವಣಂ ದೂಷಣಾನುಜೌ ।
ಕುಂಭಕರ್ಣಂ ಪುರಸ್ಕೃತ್ಯ ತೂರ್ಣಂ ನಿರ್ಯಯತುಃ ಪುರಾತ್ ॥೨೯॥

ರಾವಣನನ್ನು ಕುರಿತು ಹಾಗೆಯೇ ಆಗಲಿ ಎಂದು ಹೇಳಿ ದೂಷಣನ ತಮ್ಮಂದಿರಾದ ಆ ಇಬ್ಬರು ವೀರರು ಕುಂಭಕರ್ಣನನ್ನು ಮುಂದೆ ಮಾಡಿಕೊಂಡು ಪಟ್ಟಣದಿಂದ ಹೊರಗೆ ಬಂದರು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂಸಂಹಿತಾಯಾಂ ವೈಯಾಸಿಕ್ಯಾಂ
ವನಪರ್ವಣಿ ಪಂಚಸಪ್ತ್ಯಧಿಕದ್ವಿಶತತಮೋಽಧ್ಯಾಯಃ ॥
॥ ಇತಿ ರಾಮೋಪಾಖ್ಯಾನಪರ್ವಣಿ ಕುಂಭಕರ್ಣನಿರ್ಗಮನಂ ನಾಮ
ಚತುರ್ದಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವನಪರ್ವದಲ್ಲಿ ಇನ್ನೂರ ಎಪ್ಪತ್ತೈದನೆಯ ಅಧ್ಯಾಯ ಮುಗಿಯಿತು.

★ ★ ★ ★

ಇನ್ನೂರ ಎಪ್ಪತ್ತಾರನೆಯ ಅಧ್ಯಾಯ

ಲಕ್ಷ್ಮಣನಿಂದ ಅತಿಕಾಯನ ವಧೆ ಮತ್ತು ಹನುಮಂತ ಮತ್ತು ಅನಿಲರಿಂದ ವಜ್ರವೇಗ ಮತ್ತು ಪ್ರಮಾತಿಗಳ ವಧೆ.

ಮಾರ್ಕಂಡೇಯಃ

ತತೋ ನಿರ್ಯಾಯ ಸ್ವಪುರಾತ್ ಕುಂಭಕರ್ಣಃ ಸಹಾನುಗಃ ।
ಅಪಶ್ಯತ್ ಕಪಿಸೈನ್ಯಂ ತಜ್ಜಿತಕಾಶ್ಯಗ್ರತಃ ಸ್ಥಿತಮ್ ॥೧॥

ಮಾರ್ಕಂಡೇಯ– ಅನಂತರ ತನ್ನ ಅನುಚರರಿಂದ ಸಹಿತನಾದ ಕುಂಭಕರ್ಣನು ನಗರದಿಂದ ಹೊರಗೆ ಬಂದು ಜಯಾಕಾಂಕ್ಷಿಗಳಾಗಿ ಎದುರಿನಲ್ಲಿ ನಿಂತಿದ್ದ ಕಪಿಸೈನ್ಯವನ್ನು ನೋಡಿದನು.

ತಮಭ್ಯೇತ್ಯಾಶು ಹರಯಃ ಪರಿವವ್ರುಃ ಸಮಂತತಃ ।
ಶೈಲವೃಕ್ಷಾಯುಧಾ ನಾದಾನಮುಂಚನ್ ಭೀಷಣಾಸ್ತತಃ ॥೨॥

ಕಪಿಗಳು ತಕ್ಷಣ ಅವನನ್ನು ಸುತ್ತುವರಿದು ಶೈಲವೃಕ್ಷ ಆಯುಧಗಳನ್ನು ಹಿಡಿದು ಭಯಂಕರವಾದ ನಾದಗಳನ್ನು ಮಾಡಿದರು.

ಅಭ್ಯಘ್ನಂಶ್ಚ ಮಹಾಕಾಯೈರ್ಬಹುಭಿರ್ಜಗತೀರುಹೈಃ ।
ಕರಜೈರತುದಂಶ್ಚಾನ್ಯೇ ವಿಹಾಯ ಭಯಮುತ್ತಮಮ್ ॥೩॥

ಅವರು ದೊಡ್ಡವೃಕ್ಷಗಳಿಂದ ಅವನನ್ನು ಹೊಡೆದರು ಮತ್ತು ಭಯವನ್ನು ಬಿಟ್ಟು ತಮ್ಮ ಉಗುರುಗಳಿಂದ ಅವನನ್ನು ಪರಚಿ ಹಿಂಸಿಸಿದರು.

ಬಹುಧಾ ಯುಧ್ಯಮಾನಾಸ್ತೇ ಯುದ್ಧಮಾರ್ಗೈಃ ಪ್ಲವಂಗಮಾಃ ।
ನಾನಾಪ್ರಹರಣೈರ್ಭೀಮೈ ರಾಕ್ಷಸೇಂದ್ರಮತಾಡಯನ್ ॥೪॥

ಆ ಕಪಿಗಳು ಅನೇಕ ಯುದ್ಧಪ್ರಕಾರಗಳಿಂದ ಅವನ ಜೊತೆಯಲ್ಲಿ ಯುದ್ಧವನ್ನು ಮಾಡುತ್ತಾ ಆ ರಾಕ್ಷಸೇಂದ್ರನನ್ನು ಅನೇಕ ಭಯಂಕರವಾದ ವೃಕ್ಷ ಮೊದಲಾದ ಪದಾರ್ಥಗಳಿಂದ ಹೊಡೆದರು.

ಸ ತಾಡ್ಯಮಾನಃ ಪ್ರಹಸನ್ ಭಕ್ಷಯಾಮಾಸ ವಾನರಾನ್ ।
ಬಲಂ ಚಂಡಬಲಾಖ್ಯಂ ಚ ವಜ್ರಬಾಹುಂ ಚ ವಾನರಮ್ ॥೫॥

ಅವರಿಂದ ಹೊಡೆಯಲ್ಪಟ್ಟ ಕುಂಭಕರ್ಣನು ನಗುತ್ತಾ ವಾನರರನ್ನು ಭಕ್ಷಿಸಿದನು. ಬಲ, ಚಂಡಬಲ ಮತ್ತು ವಜ್ರಬಾಹು ಎಂಬ ವಾನರರನ್ನು ಅವನು ಭಕ್ಷಿಸಿದನು.

ತದ್ ದೃಷ್ಟ್ವಾ ವ್ಯಥನಂ ಕರ್ಮ ಕುಂಭಕರ್ಣಸ್ಯ ರಕ್ಷಸಃ ।
ಉದಕ್ರೋಶನ್ಪರಿತ್ರಸ್ತಾಸ್ತಾರಪ್ರಭೃತಯಸ್ತದಾ ॥೬॥

ತಮಗೆ ವ್ಯಥೆಯನ್ನುಂಟು ಮಾಡುವ ಕುಂಭಕರ್ಣ ರಾಕ್ಷಸನ ಕ್ರೂರಕರ್ಮವನ್ನು ನೋಡಿ ಹೆದರಿದ ತಾರ ಮೊದಲಾದವರು ಗಟ್ಟಿಯಾಗಿ ಕಿರುಚಿದರು.

ತಾನುಚ್ಚೈಃ ಕ್ರೋಶತಃ ಸೈನ್ಯಾನ್ ಶ್ರುತ್ವಾ ಸ ಹರಿಯೂಥಪಾನ್ ।
ಅಭಿದುದ್ರಾವ ಸುಗ್ರೀವಃ ಕುಂಭಕರ್ಣಮಪೇತಭೀಃ ॥೭॥

ಕಪಿಶ್ರೇಷ್ಠರೂ ಮತ್ತು ಅವರಿಂದ ಒಡಗೂಡಿದ ಸೈನ್ಯಗಳು ಗಟ್ಟಿಯಾಗಿ ಕಿರುಚುತ್ತಿರುವುದನ್ನು ಕೇಳಿದ ಸುಗ್ರೀವನು ಯಾವ ಭಯವೂ ಇಲ್ಲದೆ ಕುಂಭಕರ್ಣನ ಸಮೀಪಕ್ಕೆ ಓಡಿಬಂದನು.

ತತೋ ನಿಪತ್ಯ ವೇಗೇನ ಕುಂಭಕರ್ಣಂ ಮಹಾಮನಾಃ ।
ಶಾಲೇನ ಜಘ್ನಿವಾನ್‌ಮೂರ್ಧ್ನಿ ಬಲೇನ ಕಪಿಕುಂಜರಃ ॥೮॥

ಧೈರ್ಯಶಾಲಿಯಾದ ಆ ಕಪಿಶ್ರೇಷ್ಠನು ವೇಗದಿಂದ ಕುಂಭಕರ್ಣನ ಮೇಲೆ ಎರಗಿ ದೊಡ್ಡ ಶಾಲವೃಕ್ಷದಿಂದ ತನ್ನ ಸಂಪೂರ್ಣಬಲದಿಂದ ಅವನ ತಲೆಯ ಮೇಲೆ ಹೊಡೆದನು.

ಸ ಮಹಾತ್ಮಾ ಮಹಾವೇಗಃ ಕುಂಭಕರ್ಣಸ್ಯ ಮೂರ್ಧನಿ ।
ಬಿಭೇದ ಶಾಲಂ ಸುಗ್ರೀವೋ ನ ಚೈವಾವ್ಯಥಯತ್ ಕಪಿಃ ॥೯॥

ಮಹಾತ್ಮನೂ, ಮಹಾವೇಗವುಳ್ಳವನೂ ಆದ ಕಪಿಯಾದ ಸುಗ್ರೀವನು ಕುಂಭಕರ್ಣನ ತಲೆಯ ಮೇಲೆ ಶಾಲವೃಕ್ಷದಿಂದ ಹೊಡೆದಾಗ ಶಾಲವೃಕ್ಷವು ಮುರಿಯಿತು. ಆದರೆ ಕುಂಭಕರ್ಣನಿಗೆ ವ್ಯಥೆಯಾಗಲಿಲ್ಲ.

ತತೋ ವಿನದ್ಯ ಸಹಸಾ ಶಾಲಸ್ಪರ್ಶವಿಬೋಧಿತಃ ।
ದೋರ್ಭ್ಯಾಮಾದಾಯ ಸುಗ್ರೀವಂ ಕುಂಭಕರ್ಣೋಽಹರದ್ ಬಲಾತ್ ॥

ಆ ಸಾಲವೃಕ್ಷದ ಸ್ಪರ್ಶದಿಂದ ಪೂರ್ಣವಾಗಿ ಎಚ್ಚರಗೊಂಡ ಕುಂಭಕರ್ಣನು ಸುಗ್ರೀವನನ್ನು ತನ್ನ ಬಾಹುಗಳಿಂದ ಎತ್ತಿಕೊಂಡು ತನ್ನ ಬಲದಿಂದ ಅವನನ್ನು ಅಪಹರಿಸಿದನು.

ಹ್ರಿಯಮಾಣಂ ತು ಸುಗ್ರೀವಂ ಕುಂಭಕರ್ಣೇನ ರಕ್ಷಸಾ ।
ಅವೇಕ್ಷ್ಯಾಭ್ಯದ್ರವದ್ ವೀರಃ ಸೌಮಿತ್ರಿರ್ಮಿತ್ರನಂದನಃ ॥೧೧॥

ಆ ಕುಂಭಕರ್ಣ ರಾಕ್ಷಸನು ಸುಗ್ರೀವನನ್ನು ಎತ್ತಿಕೊಂಡು ಹೋಗುತ್ತಿರುವುದನ್ನು ನೋಡಿ ಮಿತ್ರನಂದನನಾದ ಸುಮಿತ್ರೆಯ ಮಗನಾದ ವೀರನಾದ ಲಕ್ಷ್ಮಣನು ಅವನ ಕಡೆಗೆ ಓಡಿದನು.

ಸೋಽಭಿಪತ್ಯ ಮಹಾವೇಗಂ ರುಗ್ಮಪುಂಖಿಂ ಮಹಾಶರಮ್ ।
ಪ್ರಾಹಿಣೋತ್ ಕುಂಭಕರ್ಣಾಯ ಲಕ್ಷ್ಮಣಃ ಪರವೀರಹಾ ॥೧೨॥

ಸ ತಸ್ಯ ದೇಹಾವರಣಂ ಭಿತ್ತ್ವಾ ದೇಹಂ ಚ ಸಾಯಕಃ ।
ಜಗಾಮ ದಾರಯನ್ ಭೂಮಿಂ ರುಧಿರೇಣ ಸಮುಕ್ಷಿತಃ ॥೧೩॥

ಪರಶತ್ರುಘಾತಕನಾದ ಲಕ್ಷ್ಮಣನು ಕುಂಭಕರ್ಣನನ್ನು ಸಂಧಿಸಿ ಮಹಾವೇಗವುಳ್ಳ ಚಿನ್ನದ ಪುಂಖವನ್ನು ಹೊಂದಿದ ದೊಡ್ಡ ಬಾಣವನ್ನು ಕುಂಭಕರ್ಣನ ಮೇಲೆ ಪ್ರಯೋಗಿಸಿದನು (ಇಲ್ಲೆಲ್ಲಾ ಕುಂಭಕರ್ಣನೆಂದರೆ ಅತಿಕಾಯನೆಂದು ಅರ್ಥ ಮಾಡಬೇಕು. ಅತಿಕಾಯನ ಕರ್ಣಗಳು ಕುಂಭನಂತೆ ಇದುದ್ದರಿಂದ ಅವನಿಗೂ ಕುಂಭಕರ್ಣನೆಂದು ಹೆಸರಿದ್ದಿತು ಎಂದು ಮಧ್ವಾಚಾರ್ಯರು ಹೇಳಿದ್ದಾರೆ. ರಾಮನಲ್ಲದೇ ಲಕ್ಷ್ಮಣನು ಕುಂಭಕರ್ಣನನ್ನು ಸಂಹಾರ ಮಾಡಲು ಸಾಧ್ಯವಿಲ್ಲವಾದ್ದರಿಂದ ಹೀಗೆ ಅರ್ಥವನ್ನು ಮಾಡಬೇಕು. ಅದೇ ಕಾಲದಲ್ಲಿಯೇ ರಾಮನು ಕುಂಭಕರ್ಣನ ವಧೆಯನ್ನೂ ಮಾಡಿದನು ಎಂದು ಸೂಚಿಸುವುದಕ್ಕಾಗಿ ಇಲ್ಲಿ ಕುಂಭಕರ್ಣ ಶಬ್ದವನ್ನು ಪ್ರಯೋಗಿಸಿದ್ದಾರೆ– ವಾದಿರಾಜರು).

ಆ ಬಾಣವು ಅವನ ದೇಹದ ಮೇಲೆ ಧರಿಸಿದ್ದ ಕವಚವನ್ನು ಸೀಳಿ ಆ ದೇಹವನ್ನೂ ಸೀಳಿ ರಕ್ತವು ಸೋರುತ್ತಾ ಭೂಮಿಯನ್ನೂ ಸೀಳಿಕೊಂಡು ಹೋಯಿತು.

ತಥಾ ಸ ಭಿನ್ನಹೃದಯಃ ಸಮುತ್ಸೃಜ್ಯ ಕಪೀಶ್ವರಮ್ ।
ವೇಗೇನ ಮಹತಾऽऽವಿಷ್ಟಿಷ್ಠ ತಿಷ್ಠೇತಿ ಚಾಬ್ರವೀತ್ ॥೧೪॥

ಹಾಗೆ ಹೃದಯಭೇದನವನ್ನು ಹೊಂದಿದ ಕುಂಭಕರ್ಣನು ಕಪೀಶ್ವರನಾದ ಸುಗ್ರೀವನನ್ನು ಬಿಟ್ಟು ಲಕ್ಷ್ಮಣನನ್ನು ಕುರಿತು ನಿಲ್ಲು, ನಿಲ್ಲು ಎಂದು ಬಹಳ ವೇಗದಿಂದ ಹೇಳಿದನು.

ಕುಂಭಕರ್ಣೋ ಮಹೇಷ್ವಾಸಃ ಪ್ರಗೃಹೀತಶಿಲಾಯುಧಃ ।
ಅಭಿದುದ್ರಾವ ಸೌಮಿತ್ರಿಮುದ್ಯಮ್ಯ ಮಹತೀಂ ಶಿಲಾಮ್ ॥೧೫॥

ತಸ್ಯಾಭಿಪತತಸ್ತೂರ್ಣಂ ಕ್ಷುರಾಭ್ಯಾಮುಚ್ಛ್ರಿತೌ ಕರೌ ।
ಚಿಚ್ಛೇದ ನಿಶಿತಾಗ್ರಾಭ್ಯಾಂ ಸ ಬಭೂವ ಚತುರ್ಭುಜಃ ॥೧೬॥

ಮಹೇಷ್ವಾಸನಾದ ಶಿಲಾಯುಧವನ್ನು ಹಿಡಿದ ಕುಂಭಕರ್ಣನೂ ಸಹ ದೊಡ್ಡ ಶಿಲೆಯನ್ನು ಎತ್ತಿ ಹಿಡಿದು ಲಕ್ಷ್ಮಣನ ಕಡೆಗೆ ಓಡಿದನು. ಲಕ್ಷ್ಮಣನು ಅವನು ಎತ್ತಿದ ಎರಡು ಕೈಗಳನ್ನು ಶೀಘ್ರವಾಗಿ ಚೂರಿಗಳಂತಹ ಎರಡು ಹರಿತವಾದ ಬಾಣಗಳಿಂದ ಕತ್ತರಿಸಿದನು. ಆಗ ಅತಿಕಾಯನು ಚತುರ್ಭುಜನಾದನು.

ತಾನಪ್ಯಸ್ಯ ಭುಜಾನ್ ಸರ್ವಾನ್ ಪ್ರಗೃಹೀತಶಿಲಾಯುಧಾನ್ ।
ಕ್ಷುರೈಶ್ಚಿಚ್ಛೇದ ಲಘ್ವಸ್ತ್ರೀ ಸೌಮಿತ್ರಿಃ ಪ್ರತಿದರ್ಶಯನ್ ॥೧೭॥

ಎತ್ತಿದ ಶಿಲೆಗಳನ್ನು ಆಯುಧವಾಗಿ ಹಿಡಿದ ಆ ಎಲ್ಲ ಭುಜಗಳನ್ನೂ ತನ್ನ ಕ್ಷಿಪ್ರಕಾರಿತ್ವವನ್ನು ತೋರಿಸುತ್ತಾ ಲಕ್ಷ್ಮಣನು ಪುನಃ ಶೂಲಗಳಿಂದ ಕತ್ತರಿಸಿದನು.

ಸ ಬಭೂವಾತಿಕಾಯಶ್ಚ ಬಹುಪಾದಶಿರೋಭುಜಃ ।
ತಂ ಬ್ರಹ್ಮಾಸ್ತ್ರೇಣ ಸೌಮಿತ್ರಿರ್ದದಾರಾದ್ರಿಚಯೋಪಮಮ್ ॥೧೮॥

ಆ ಅತಿಕಾಯನಾದರೂ ಪುನಃ ಅನೇಕ ಪಾದಗಳು, ಶಿರಸ್ಸುಗಳು ಮತ್ತು ಭುಜಗಳನ್ನು ಹೊಂದಿದವನಾದನು. ಪರ್ವತದ ರಾಶಿಯಂತಿದ್ದ ಅವನನ್ನು ಲಕ್ಷ್ಮಣನು ಬ್ರಹ್ಮಾಸ್ತ್ರದಿಂದ ಸೀಳಿಹಾಕಿದನು.

ಸ ಪಪಾತ ಮಹಾವೀರ್ಯೋ ದಿವ್ಯಾಸ್ತ್ರಾಭಿಹತೋ ರಣೇ ।
ಮಹಾಶನಿವಿನಿರ್ದಗ್ಧಃ ಪಾದಪೋಽಂಕುರವಾನಿವ ॥೧೯॥

ಮಹಾವೀರ್ಯನಾದ ಅವನು ಯುದ್ಧದಲ್ಲಿ ದಿವ್ಯಾಸ್ತ್ರದಿಂದ ಅಭಿಹತನಾಗಿ ಸಿಡಿಲಿನಿಂದ ನಿರ್ದಗ್ಧವಾದ ಅಂಕುರವುಳ್ಳ ವೃಕ್ಷದಂತೆ ಬಿದ್ದನು.

ತಂ ದೃಷ್ಟ್ವಾ ವೃತ್ರಸಂಕಾಶಂ ಕುಂಭಕರ್ಣಂ ತರಸ್ವಿನಮ್ ।
ಗತಾಸುಂ ಪತಿತಂ ಭೂಮೌ ರಾಕ್ಷಸಾಃ ಪ್ರಾದ್ರವನ್ ಭಯಾತ್ ॥೨೦॥

ವೃತ್ರನಂತಿದ್ದ ವೇಗಶಾಲಿಯಾದ ಆ ಕುಂಭಕರ್ಣನು (ಅತಿಕಾಯನು) ಪ್ರಾಣವನ್ನು ಕಳೆದುಕೊಂಡು ಭೂಮಿಯ ಮೇಲೆ ಬಿದ್ದುದನ್ನು ನೋಡಿ ರಾಕ್ಷಸರು ಭಯದಿಂದ ಓಡಿಹೋದರು.

ತಥಾ ತಾನ್ ದ್ರವತೋ ಯೋಧಾನ್ ದೃಷ್ಟ್ವಾ ತೌ ದೂಷಣಾನುಜೌ ।
ಅವಸ್ಥಾಪ್ಯಾಥ ಸೌಮಿತ್ರಂ ಸಂಕ್ರುದ್ಧಾವಭ್ಯಧಾವತಾಮ್ ॥೨೧॥

ಸೈನಿಕರು ಹಾಗೆ ಓಡುತ್ತಿರುವುದನ್ನು ನೋಡಿದ ದೂಷಣನ ತಮ್ಮಂದಿರಾದ ವಜ್ರವೇಗ ಮತ್ತು ಪ್ರಮಾಥಿಗಳು ಕೋಪಗೊಂಡವರಾಗಿ ಸೈನ್ಯವನ್ನು ನಿಲ್ಲಿಸಿ ಲಕ್ಷ್ಮಣನ ಕಡೆಗೆ ಓಡಿದರು.

ತಾವಾದ್ರವಂತೌ ಸಂಕ್ರುದ್ಧೌ ವಜ್ರವೇಗಪ್ರಮಾಥಿನೌ ।
ಅಭಿಜಗ್ರಾಹ ಸೌಮಿತ್ರಿರ್ವಿನದ್ಯೋಭೌ ಪತತ್ತ್ರಿಭಿಃ ॥೨೨॥

ತನ್ನ ಮೇಲೆ ಎರಗಿ ಬರುತ್ತಿರುವ ಕ್ರುದ್ಧರಾದ ವಜ್ರವೇಗ ಮತ್ತು ಪ್ರಮಾಥಿಗಳನ್ನು ಲಕ್ಷ್ಮಣನು ಸಿಂಹನಾದವನ್ನು ಮಾಡಿ ತನ್ನ ಬಾಣಗಳಿಂದ ತಡೆಹಿಡಿದು ಸ್ವೀಕರಿಸಿದನು.

ತತಃ ಸುತುಮುಲಂ ಯುದ್ಧಮಭವಲ್ಲೋಮಹರ್ಷಣಮ್ ।
ದೂಷಣಾನುಜಯೋಃ ಪಾರ್ಥ ಲಕ್ಷ್ಮಣಸ್ಯ ಚ ಧೀಮತಃ ॥೨೩॥

ಎಲೈ ಪಾರ್ಥನೇ, ಅನಂತರ ದೂಷಣನ ತಮ್ಮಂದಿರಿಗೂ ಮತ್ತು ಮೇಧಾವಿಯಾದ ಲಕ್ಷ್ಮಣನಿಗೂ ಘೋರವೂ, ರೋಮಹರ್ಷಣವೂ ಆದ ಯುದ್ಧವು ನಡೆಯಿತು.

ಮಹತಾ ಶರವರ್ಷೇಣ ರಾಕ್ಷಸೌ ಸೋಽಭ್ಯವರ್ಷತ ।
ತೌ ಚಾಪಿ ವೀರೌ ಸಂಕ್ರುದ್ಧಾವುಭೌ ತಂ ಸಮವರ್ಷತಾಮ್ ॥೨೪॥

ಲಕ್ಷ್ಮಣನು ದೊಡ್ಡಬಾಣಗಳ ಮಳೆಯನ್ನು ಆ ರಾಕ್ಷಸರ ಮೇಲೆ ಕರೆದನು. ವೀರರೂ, ಕ್ರುದ್ಧರೂ ಆದ ದೂಷಣನ ತಮ್ಮಂದಿರೂ ಸಹ ಅವನ ಮೇಲೆ ಬಾಣಗಳ ಮಳೆಗರೆದರು.

ಮುಹೂರ್ತಮೇವಮಭವದ್ ವಜ್ರವೇಗಪ್ರಮಾಥಿನೋಃ ।
ಸೌಮಿತ್ರೇಶ್ಚ ಮಹಾಬಾಹೋಃ ಸಂಪ್ರಹಾರಃ ಸುದಾರುಣಃ ॥೨೫॥

ಒಂದುಮುಹೂರ್ತದವರೆಗೆ ಮಹಾಬಾಹುವಾದ ಲಕ್ಷ್ಮಣನಿಗೂ ಮತ್ತು ವಜ್ರವೇಗ ಪ್ರಮಾಥಿಗಳಿಗೂ ದಾರುಣವಾದ ಪರಸ್ಪರ ಪ್ರಹಾರವು ನಡೆಯಿತು.

ಅಥಾದ್ರಿಶೃಂಗಮಾದಾಯ ಹನುಮಾನ್ ಮಾರುತಾತ್ಮಜಃ ।
ಅಭಿದ್ರುತ್ಯಾದದೇ ಪ್ರಾಣಾನ್ ವಜ್ರವೇಗಸ್ಯ ರಕ್ಷಸಃ ॥೨೬॥

ಅನಂತರ ಮಾರುತಾತ್ಮಜನಾದ ಹನುಮಂತನು ಒಂದು ಪರ್ವತದ ಶಿಖರವನ್ನು ಹಿಡಿದು ರಾಕ್ಷಸನಾದ ವಜ್ರವೇಗನ ಕಡೆಗೆ ಓಡಿ ಅದರಿಂದ ಅವನ ಪ್ರಾಣಗಳನ್ನು ಸಂಹರಿಸಿದನು.

ನೀಲಶ್ಚ ಮಹತಾ ಗ್ರಾವ್ಣಾ ದೂಷಣಾವರಜಂ ಹರಿಃ ।
ಪ್ರಮಾಥಿನಮಭಿದ್ರುತ್ಯ ಪ್ರಮಮಾಥ ಮಹಾಬಲಃ ॥೨೭॥

ಮಹಾಬಲನಾದ ನೀಲನೆಂಬ ಕಪಿಯೂ ಸಹ ದೊಡ್ಡ ಶಿಲೆಯನ್ನು ಹಿಡಿದು ದೂಷಣನ ತಮ್ಮನಾದ ಪ್ರಮಾಥಿಯನ್ನು ಹಿಂಸೆಗೊಳಿಸಿದನು (ಸಂಹರಿಸಿದನು).

ತತಃ ಪ್ರಾವರ್ತತ ಪುನಃ ಸಂಗ್ರಾಮಃ ಕಟುಕೋದಯಃ ।
ರಾಮರಾವಣಸೈನ್ಯಾಮನ್ಯೋನ್ಯಮಭಿಧಾವತಾಮ್ ॥೨೮॥

ಅನಂತರ ಪುನಃ ಪರಸ್ಪರ ಪ್ರಹಾರವನ್ನು ಮಾಡುವ ರಾಮರಾಮಣರ ಸೈನ್ಯಗಳಿಗೆ ಕಷ್ಟಕರವಾದ ಘೋರವಾದ ಸಂಗ್ರಾಮವು ಉಂಟಾಯಿತು.

ಶತಶೋ ನೈರ್ಋತಾ ವನ್ಯಾನ್ ಜಘ್ನುರ್ವನ್ಯಾ ನೈರ್ಋತಾನ್ ।
ನೈರ್ಋತಾಸ್ತತ್ರ ವಧ್ಯಂತೇ ಪ್ರಾಯೇಣ ನ ತು ವಾನರಾಃ ॥೨೯॥

ನೂರಾರು ಸಂಖ್ಯೆಯಲ್ಲಿ ರಾಕ್ಷಸರು ಕಪಿಗಳನ್ನೂ, ಕಪಿಗಳು ರಾಕ್ಷಸರನ್ನೂ ಹೊಡೆದರು. ರಾಕ್ಷಸರು ಅಲ್ಲಿ ಹೆಚ್ಚಾಗಿ ಮೃತರಾಗುತ್ತಿದ್ದರು. ಕಪಿಗಳು ಮೃತರಾಗುತ್ತಿರಲಿಲ್ಲ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂಸಂಹಿತಾಯಾಂ ವೈಯಾಸಿಕ್ಯಾಂ
ವನಪರ್ವಣಿ ಷಟ್‌ಸಪ್ತತ್ಯಧಿಕದ್ವಿಶತತಮೋऽಧ್ಯಾಯಃ ॥
॥ ಇತಿ ರಾಮೋಪಾಖ್ಯಾನಪರ್ವಣಿ ಅತಿಕಾಯಾದಿ ವಧೋ ನಾಮ
ಪಂಚದಶೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವನಪರ್ವದಲ್ಲಿ ಇನ್ನೂರ ಎಪ್ಪತ್ತಾರನೆಯ ಅಧ್ಯಾಯ ಮುಗಿಯಿತು.

★ ★ ★ ★

ಇನ್ನೂರ ಎಪ್ಪತ್ತೇಳನೆಯ ಅಧ್ಯಾಯ

ಲಕ್ಷ್ಮಣ-ಇಂದ್ರಜಿತುಗಳ ಯುದ್ಧ. ಇಂದ್ರಜಿತುವಿನಿಂದ ಮಾಯಾಶ್ರಯಣ. ಅಲ್ಲಿಗೆ ರಾಮನ ಆಗಮನ.

ಮಾರ್ಕಂಡೇಯಃ

ಕುಂಭಕರ್ಣಂ ಹತಂ ಶ್ರುತ್ವಾ ಸ್ವಾನುಜಂ ರಾಕ್ಷಸಾಧಿಪಃ ।
ಪ್ರಹಸ್ತಂ ಚ ಮಹೇಷ್ವಾಸಂ ಧೂಮ್ರಾಕ್ಷಂ ಚಾತಿತೇಜಸಮ್ ।
ಪುತ್ರಮಿಂದ್ರಜಿತಂ ವೀರಂ ರಾವಣಃ ಪ್ರತ್ಯಭಾಷತ ॥೧॥

ಮಾರ್ಕಂಡೇಯ– ರಾಕ್ಷಸಾಧಿಪನು ತನ್ನ ತಮ್ಮನಾದ ಕುಂಭಕರ್ಣನು ಹತವಾದುದನ್ನು ಕೇಳಿ ಅದರಂತೆ ಮಹೇಷ್ವಾಸನಾದ ಪ್ರಹಸ್ತನು, ಅತಿತೇಜಸ್ವಿಯಾದ ಧೂಮ್ರಾಕ್ಷನು ಹತವಾದುದನ್ನು ಕೇಳಿ ವೀರನಾದ ತನ್ನ ಪುತ್ರನಾದ ಇಂದ್ರಜಿತುವನ್ನು ಕುರಿತು ರಾವಣನು ಮಾತನಾಡಿದನು.

ಜಹಿ ರಾಮಮಮಿತ್ರಘ್ನ ಸುಗ್ರೀವಂ ಚ ಸಲಕ್ಷ್ಮಣಮ್ ॥೨॥

ತ್ವಯಾ ಹಿ ಮಮ ಸತ್ಪುತ್ರ ಯಶೋ ದೀಪ್ತಮುಪಾರ್ಜಿತಮ್ ।
ಜಿತ್ವಾ ವಜ್ರಧರಂ ಸಂಖೇ ಸಹಸ್ರಾಕ್ಷಂ ಶಚೀಪತಿಮ್ ॥೩॥

ಶತ್ರುಸೂದನನೇ, ರಾಮನನ್ನೂ, ಲಕ್ಷ್ಮಣಸಹಿತನಾದ ಸುಗ್ರೀವನನ್ನೂ ಸಂಹಾರ ಮಾಡು. ಸತ್ಪುತ್ರನೇ, ನೀನು ಸಹಸ್ರಾಕ್ಷನೂ, ವಜ್ರಾಯುಧಧರನೂ ಆದ ಶಚೀಪತಿಯನ್ನು ಗೆದ್ದು ನನಗೆ ದೀಪ್ತವಾದ ಯಶಸ್ಸನ್ನು ತಂದುಕೊಟ್ಟಿದ್ದೀಯೆ.

ಅಂತರ್ಹಿತಃ ಪ್ರಕಾಶೋ ವಾ ದಿವ್ಯೈರ್ದತ್ತವರೈಃ ಶರೈಃ ।
ಜಹಿ ಶತ್ರೂನಮಿತ್ರಘ್ನ ಮಮ ಶಸ್ತ್ರಭೃತಾಂ ವರ ॥೪॥

ಅಮಿತ್ರಜ್ಞನೇ, ಶಸ್ತ್ರಧಾರಿಗಳಲ್ಲಿ ಶ್ರೇಷ್ಠನೇ, ನೀನು ವರಗಳನ್ನು ಹೊಂದಿದ ದಿವ್ಯಬಾಣಗಳಿಂದ ದೃಶ್ಯನಾಗಿಯಾಗಲೀ ಅಥವಾ ಅದೃಶ್ಯನಾಗಿಯಾಗಲೀ ಶತ್ರುಗಳನ್ನು ಕೊಲ್ಲುವವನಾಗು.

ರಾಮಲಕ್ಷ್ಮಣಸುಗ್ರೀವಾಃ ಶರಸ್ಪರ್ಶಂ ನ ತೇಽನಘ ।
ಸಮರ್ಥಾಃ ಪ್ರತಿಸೋಢುಂ ಚ ಕುತಸ್ತದನುಯಾಯಿನಃ ॥೫॥

ಎಲೈ ಅನಘನೇ, ರಾಮಲಕ್ಷ್ಮಣಸುಗ್ರೀವರು ನಿನ್ನ ಬಾಣದ ಸ್ಪರ್ಶವನ್ನು ಸಹಿಸಲಾರರು. ಇನ್ನು ಅವರ ಅನುಯಾಯಿಗಳು ಹೇಗೆ ಸಹಿಸುವರು?

ಅಕೃತಾ ಯಾ ಪ್ರಹಸ್ತೇನ ಕುಂಭಕರ್ಣೇನ ಚಾನಘ ।
ಖರಸ್ಯಾಪಚಿತಿಃ ಸಂಖ್ಯೇ ತಾಂ ಗಚ್ಛ ತ್ವಂ ಮಹಾಭುಜ ॥೬॥

ಎಲೈ ಅನಘನೇ, ಪ್ರಹಸ್ತನಾಗಲೀ, ಕುಂಭಕರ್ಣನಾಗಲೀ ಯುದ್ಧದಲ್ಲಿ ಖರನ ವಧೆಗೆ ಪ್ರತೀಕಾರವನ್ನು ಮಾಡಲಿಲ್ಲ. ಮಹಾಭುಜನೇ, ನೀನು ಆ ಪ್ರತೀಕಾರವನ್ನು ಮಾಡುವವನಾಗು.

ತ್ವಮದ್ಯ ನಿಶಿತೈರ್ಬಾಣೈರ್ಹತ್ವಾ ಶತ್ರೂನ್ ಸಸೈನಿಕಾನ್ ।
ಪ್ರತಿನಂದಯ ಮಾಂ ಪುತ್ರ ಪುರಾ ಜಿತ್ವೇವ ವಾಸವಮ್ ॥೭॥

ಪುತ್ರನೇ, ನೀನು ಈ ದಿನ ನಿನ್ನ ಹರಿತವಾದ ಬಾಣಗಳಿಂದ ಸೈನಿಕರಿಂದ ಕೂಡಿದ ಶತ್ರುಗಳನ್ನು ಕೊಂದು ಹಿಂದೆ ಇಂದ್ರನನ್ನು ಗೆದ್ದು ನನ್ನನ್ನು ಸಂತೋಷಪಡಿಸಿದಂತೆ ಈ ದಿನವೂ ನನ್ನನ್ನು ಸಂತೋಷಪಡಿಸು.

ಮಾರ್ಕಂಡೇಯಃ

ಇತ್ಯುಕ್ತಃ ಸ ತಥೇತ್ಯುಕ್ತ್ವಾ ರಥಮಾಸ್ಥಾಯ ದಂಶಿತಃ ।
ಪ್ರಯಯಾವಿಂದ್ರಜಿದ್ ರಾಜಂಸ್ತೂರ್ಣಮಾಯೋಧನಂ ಪ್ರತಿ ॥೮॥

ಮಾರ್ಕಂಡೇಯ– ಹೀಗೆ ಹೇಳಲ್ಪಟ್ಟ ಇಂದ್ರಜಿತುವು ಎಲೈ ರಾಜನೇ, ಹಾಗೆಯೇ ಆಗಲೀ ಎಂದು ಹೇಳಿ ಕವಚವನ್ನು ಧರಿಸಿ, ರಥವನ್ನು ಏರಿ ಶೀಘ್ರವಾಗಿ ರಣರಂಗದ ಕಡೆಗೆ ಹೋದನು.

ತತೋ ವಿಶ್ರಾವ್ಯ ವಿಸ್ಪಷ್ಟಂ ನಾಮ ರಾಕ್ಷಸಪುಂಗವಃ ।
ಅಹ್ವಯಾಮಾಸ ಸಮರೇ ಲಕ್ಷ್ಮಣಂ ಶುಭಲಕ್ಷಣಮ್ ॥೯॥

ಅನಂತರ ರಾಕ್ಷಸಶ್ರೇಷ್ಠನಾದ ಅವನು ತನ್ನ ಹೆಸರನ್ನು ಗಟ್ಟಿಯಾಗಿ ಹೇಳಿ ಶುಭಲಕ್ಷಣವುಳ್ಳ ಲಕ್ಷ್ಮಣನನ್ನು ಯುದ್ಧದಲ್ಲಿ ಆಹ್ವಾನ ಮಾಡಿದನು.

ತಂ ಲಕ್ಷ್ಮಣೋಽಭ್ಯಧಾವಚ್ಚ ಪ್ರಗೃಹ್ಯ ಸಶರಂ ಧನುಃ ।
ತ್ರಾಸಯಂಸ್ತಳಘೋಷೇಣ ಸಿಂಹಃ ಕ್ಷುದ್ರಮೃಗಾನ್ ಯಥಾ ॥೧೦॥

ಲಕ್ಷ್ಮಣನು ಧನುರ್ಬಾಣಗಳನ್ನು ಹಿಡಿದು ತಳಘೋಷದಿಂದ ಭಯವನ್ನು ಉಂಟು ಮಾಡುತ್ತಾ ಸಿಂಹವು ಕ್ಷುದ್ರಮೃಗದ ಕಡೆಗೆ ಧಾವಿಸಿದಂತೆ ಅವನ ಕಡೆಗೆ ಧಾವಿಸಿದನು.

ತಯೋಃ ಸಮಭವದ್ ಯುದ್ಧಂ ಸುಮಹಜ್ಜಯಗೃದ್ಧಿನೋಃ ।
ದಿವ್ಯಾಸ್ತ್ರವಿದುಷೋಸ್ತೀವ್ರಮನ್ಯೋನ್ಯಸ್ಪರ್ಧಿನೋಸ್ತದಾ ॥೧೧॥

ದಿವ್ಯಾಸ್ತ್ರಜ್ಞಾನವನ್ನು ಹೊಂದಿ ಪರಸ್ಪರವಾಗಿ ಜಯಿಸುವ ಇಚ್ಛೆಯಿಂದ ಪರಸ್ಪರವಾಗಿ ಸ್ಪರ್ಧಿಸುವ ಅವರಿಗೆ ಬಹಳ ದೊಡ್ಡದಾದ ಮತ್ತು ತೀವ್ರವಾದ ಯುದ್ಧವು ಜರುಗಿತು.

ರಾವಣಿಸ್ತು ಯದಾ ನೈನಂ ವಿಶೇಷಯತಿ ಸಾಯಕೈಃ ।
ತತೋ ಗುರುತರಂ ಯತ್ನಮಾತಿಷ್ಠದ್ ಬಲಿನಾಂ ವರಃ ॥೧೨॥

ರಾವಣನ ಪುತ್ರನಾದ ಇಂದ್ರಜಿತುವು ಲಕ್ಷ್ಮಣನನ್ನು ತನ್ನ ಬಾಣಪ್ರಯೋಗದಿಂದ ಅತಿಶಯಗೊಳಿಸಲು ಸಾಧ್ಯವಿಲ್ಲದಿದ್ದಾಗ ಬಲಿಷ್ಠರಲ್ಲಿ ಶ್ರೇಷ್ಠನಾದ ಅವನು ಇನ್ನೂ ಮಹಾಪ್ರಯತ್ನವನ್ನು ಮಾಡಿದನು.

ತತ ಏನಂ ಮಹಾವೇಗೈರರ್ದಯಾಮಾಸ ತೋಮರೈಃ ।
ತಾನಾಗತಾನ್ ಸ ಚಿಚ್ಛೇದ ಸೌಮಿತ್ರಿರ್ನಿಶಿತೈಃ ಶರೈಃ ॥೧೩॥

ಅನಂತರ ಈ ಲಕ್ಷ್ಮಣನನ್ನು ಮಹಾವೇಗವುಳ್ಳ ತೋಮರಗಳಿಂದ ಪೀಡಿಸಿದನು. ಲಕ್ಷ್ಮಣನು ಸಮೀಪಕ್ಕೆ ಬಂದ ಆ ತೋಮರಗಳನ್ನು ಹರಿತವಾದ ಬಾಣಗಳಿಂದ ಕತ್ತರಿಸಿದನು.

ತೇ ನಿಕೃತ್ತಾಃ ಶರೈಸ್ತೀಕ್ಷ್ಣೈರ್ನ್ಯಪತನ್ ಧರಣೀತಳೇ ।
ಸಾಧಕಾ ರಾವಣೇರಾಜೌ ಶತಶಃ ಶಕಲೀಕೃತಾಃ ॥೧೪॥

ರಾವಣನ ಪುತ್ರನಾದ ಇಂದ್ರಜಿತುವಿಗೆ ಯುದ್ಧದಲ್ಲಿ ಸಹಾಯಕವಾಗಿದ್ದ ಆ ತೋಮರಗಳು ಲಕ್ಷ್ಮಣನ ಬಾಣಗಳಿಂದ ಕತ್ತರಿಸಲ್ಪಟ್ಟು ಭೂಮಿಯ ಮೇಲೆ ನೂರಾರು ಚೂರುಗಳಾಗಿ ಬಿದ್ದವು.

ತಮಂಗದೋ ವಾಲಿಸುತಃ ಶ್ರೀಮಾನುದ್ಯಮ್ಯ ಪಾದಪಮ್ ।
ಅಭಿದ್ರುತ್ಯ ಮಹಾವೇಗಸ್ತಾಡಯಾಮಾಸ ಮೂರ್ಧನಿ ॥೧೫॥

ವಾಲಿಸುತನಾದ ಕಾಂತಿಯುಕ್ತನಾದ ಅಂಗದನು ಒಂದುವೃಕ್ಷವನ್ನು ಎತ್ತಿಕೊಂಡು ಮಹಾವೇಗವುಳ್ಳವನಾಗಿ ಅದನ್ನು ಇಂದ್ರಜಿತುವಿನ ತಲೆಯ ಮೇಲೆ ಹೊಡೆದನು.

ತಸ್ಯೇಂದ್ರಜಿದಸಂಭ್ರಾಂತಃ ಪ್ರಾಸೇನೋರಸಿ ವೀರ್ಯವಾನ್ ।
ಪ್ರಹರ್ತುಮೈಚ್ಛತ್ ತಂ ಚಾಸ್ಯ ಪ್ರಾಸಂ ಚಿಚ್ಛೇದ ಲಕ್ಷ್ಮಣಃ ॥೧೬॥

ಅದಕ್ಕೆ ವೀರ್ಯಶಾಲಿಯಾದ ಇಂದ್ರಜಿತುವು ಯಾವ ಆತಂಕಕ್ಕೂ ಒಳಗಾಗದೆ ಪ್ರಾಸದಿಂದ ಅಂಗದನ ವಕ್ಷಸ್ಥಲಕ್ಕೆ ಪ್ರಹಾರಮಾಡಲು ಇಚ್ಛಿಸಿದನು. ಅವನ ಆ ಪ್ರಾಸವನ್ನು ಲಕ್ಷ್ಮಣನು ಕತ್ತರಿಸಿದನು.

ತಮಭ್ಯಾಶಗತಂ ವೀರಮಂಗದಂ ರಾವಣಾತ್ಮಜಃ ।
ಗದಯಾऽತಾಡಯತ್ ಸವ್ಯೇ ಪಾರ್ಶ್ವೇ ವಾನರಪುಂಗವಮ್ ॥೧೭॥

ರಾವಣಪುತ್ರನಾದ ಇಂದ್ರಜಿತುವು ಸಮೀಪಕ್ಕೆ ಬಂದ ವೀರನಾದ ವಾನರ ಪುಂಗವನಾದ ಅಂಗದನ ಎಡಪಾರ್ಶ್ವದಲ್ಲಿ ಗದೆಯಿಂದ ಹೊಡೆದನು.

ತಮಚಿಂತ್ಯ ಪ್ರಹಾರಂ ಸ ಬಲವಾನ್ ವಾಲಿನಃ ಸುತಃ ।
ಸಸರ್ಜೇಂದ್ರಜಿತಃ ಕ್ರೋಧಾಚ್ಛಾಲಸ್ಕಂಧಂ ತಥಾऽಂಗದಃ ॥೧೮॥

ಆ ಪ್ರಹಾರವನ್ನು ಗಣನೆಗೇ ತಂದುಕೊಳ್ಳದೆ ವಾಲಿಪುತ್ರನಾದ ಬಲಿಷ್ಠನಾದ ಅಂಗದನು ಕ್ರೋಧದಿಂದ ಶಾಲವೃಕ್ಷದ ಒಂದು ದೊಡ್ಡ ಕೊಂಬೆಯನ್ನು ಇಂದ್ರಜಿತುವಿನ ಮೇಲೆ ಪ್ರಯೋಗಿಸಿದನು.

ಸೋಽಂಗದೇನ ರುಷೋತ್ಸೃಷ್ಟೋ ವಧಾಯೇಂದ್ರಜಿತಸ್ತರುಃ ।
ಜಘಾನೇಂದ್ರಜಿತಃ ಪಾರ್ಥ ರಥಂ ಸಾಶ್ವಂ ಸಸಾರಥಿಮ್ ॥೧೯॥

ಎಲೈ ಪಾರ್ಥನೇ, ಅಂಗದನಿಂದ ಇಂದ್ರಜಿತನ ವಧೆಗಾಗಿ ರೋಷದಿಂದ ಪ್ರಯೋಗಿಸಲ್ಪಟ್ಟ ಆ ವೃಕ್ಷವು ಅಶ್ವಸಾರಥಿಗಳಿಂದ ಸಹಿತನಾದ ಇಂದ್ರಜಿತುವಿನ ರಥವನ್ನು ಪುಡಿಮಾಡಿತು.

ತತೋ ಹತಾಶ್ವಾತ್ ಪ್ರಸ್ಕಂದ್ಯ ರಥಾತ್ ಸ ಹತಸಾರಥಿಃ ।
ತತ್ರೈವಾಂತರ್ದಧೇ ರಾಜನ್ಮಾಯಯಾ ರಾವಣಾತ್ಮಜಃ ॥೨೦॥

ಎಲೈ ರಾಜನೇ, ಅನಂತರ ಅಶ್ವಸಾರಥಿಗಳನ್ನು ಕಳೆದುಕೊಂಡ ರಥದಿಂದ ಆ ರಾವಣಪುತ್ರನು ಕೆಳಗೆ ಧುಮುಕಿ ಮಾಯೆಯಿಂದ ಅಲ್ಲಿಯೇ ಅಂತರ್ಧಾನವನ್ನು ಹೊಂದಿದನು.

ಅಂತರ್ಹಿತಂ ವಿದಿತ್ವಾ ತಂ ಬಹುಮಾಯಂ ಚ ರಾಕ್ಷಸಮ್ ।
ರಾಮಸ್ತಂ ದೇಶಮಾಗಮ್ಯ ತತ್ಸೈನ್ಯಂ ಪರ್ಯರಕ್ಷತ ॥೨೧॥

ಬಹುಮಾಯವುಳ್ಳ ಆ ರಾಕ್ಷಸನು ಅಂತರ್ಧಾನವನ್ನು ಹೊಂದಿದುದನ್ನು ತಿಳಿದು ರಾಮನು ಆ ಪ್ರದೇಶಕ್ಕೆ ಬಂದು ಆ ಕಪಿಸೈನ್ಯವನ್ನು ರಕ್ಷಿಸಿದನು.

ಸ ರಾಮಮುದ್ದಿಶ್ಯ ಶರೈಸ್ತತೋ ದತ್ತವರೈಸ್ತದಾ ।
ವಿವ್ಯಾಧ ಸರ್ವಗಾತ್ರೇಷು ಲಕ್ಷ್ಮಣಂ ಚ ಮಹಾಬಲಮ್ ॥೨೨॥

ಇಂದ್ರಜಿತುವು ರಾಮನನ್ನೂ, ಮಹಾಬಲನಾದ ಲಕ್ಷ್ಮಣನನ್ನೂ ಉದ್ದೇಶಿಸಿ ಅವರ ಸರ್ವಶರೀರದಲ್ಲಿ ವರಗಳಿಂದ ಕೂಡಿದ ಬಾಣಗಳಿಂದ ಪ್ರಹಾರವನ್ನು ಮಾಡಿದನು.

ತಮದೃಶ್ಯಂ ಶರೈಃ ಶೂರೌ ಮಾಯಯಾಽಂತರ್ಹಿತಂ ತದಾ ।
ಯೋಧಯಾಮಾಸತುರುಭೌ ರಾವಣಂ ರಾಮಲಕ್ಷ್ಮಣೌ ॥೨೩॥

ಮಹಾಶಕ್ತಿಯಿಂದ ಅಂತರ್ಧಾನವನ್ನು ಹೊಂದಿ ಅದೃಶ್ಯನಾದ ರಾವಣನ ಪುತ್ರನ ಜೊತೆಯಲ್ಲಿ ಶೂರರಾದ ರಾಮಲಕ್ಷ್ಮಣರಿಬ್ಬರೂ ಬಾಣಗಳಿಂದ ಯುದ್ಧವನ್ನು ಮಾಡಿದರು.

ಸ ರುಷಾ ಸರ್ವಗಾತ್ರೇಷು ತಯೋಃ ಪುರುಷಸಿಂಹಯೋಃ ।
ವ್ಯಸೃಜತ್ ಸಾಯಕಾನ್ ಭೂಯಃ ಶತಶೋಽಥ ಸಹಸ್ರಶಃ ॥೨೪॥

ಅವನು ರೋಷದಿಂದ ಆ ಪುರುಷಸಿಂಹರಿಬ್ಬರ ಸರ್ವಶರೀರದಲ್ಲಿ ಪುನಃ ನೂರಾರು, ಸಹಸ್ರಾರು ಬಾಣಗಳನ್ನು ಪ್ರಯೋಗಿಸಿದನು.

ತಮದೃಶ್ಯಂ ವಿಚಿನ್ವಂತಃ ಸೃಜಂತಮನಿಶಂ ಶರಾನ್ ।
ಹರಯೋ ವಿವಿಶುರ್ವ್ಯೋಮ ಪ್ರಗೃಹ್ಯ ಮಹತೀಃ ಶಿಲಾಃ ॥೨೫॥

ಸತತವಾಗಿ ಬಾಣಪ್ರಯೋಗವನ್ನು ಮಾಡುತ್ತಾ ಅದೃಶ್ಯನಾಗಿದ್ದ ಅವನನ್ನು ಹುಡುಕಲು ಕಪಿಗಳು ದೊಡ್ಡ ಶಿಲೆಗಳನ್ನು ತೆಗೆದುಕೊಂಡು ಆಕಾಶವನ್ನು ಪ್ರವೇಶ ಮಾಡಿದರು.

ತಾಂಶ್ಚ ತೌ ಚಾಪ್ಯದೃಶ್ಯಃ ಸ ಶರೈರ್ವಿವ್ಯಾಧ ರಾಕ್ಷಸಃ ।
ಸ ಭೃಶಂ ತಾಡಯಾಮಾಸ ರಾವಣಿರ್ಮಾಯಯಾऽऽವೃತಃ ॥೨೬॥

ರಾವಣನ ಪುತ್ರನಾದ ಆ ರಾಕ್ಷಸನು ಮಾಯೆಯನ್ನು ಆಶ್ರಯಿಸಿ ರಾಮಲಕ್ಷ್ಮಣರನ್ನು ಮತ್ತು ಆ ಕಪಿಗಳನ್ನು ಅದೃಶ್ಯನಾಗಿಯೇ ಬಾಣಗಳಿಂದ ಚೆನ್ನಾಗಿ ಪೀಡಿಸಿದನು.

ತೌ ಶರೈರಾಚಿತೌ ವೀರೌ ಭ್ರಾತರೌ ರಾಮಲಕ್ಷ್ಮಣೌ ।
ಪೇತತುರ್ಗಗನಾದ್ ಭೂಮಿಂ ಸೂರ್ಯಾಚಂದ್ರಮಸಾವಿವ ॥೨೭॥

ಅವನ ಬಾಣಗಳಿಂದ ನೆಟ್ಟ ಶರೀರವುಳ್ಳ ವೀರರಾದ ಅಣ್ಣತಮ್ಮಂದಿರಾದ ರಾಮಲಕ್ಷ್ಮಣರು ಸೂರ್ಯಚಂದ್ರರಂತೆ ಆಕಾಶದಿಂದ ಭೂಮಿಗೆ ಬಿದ್ದರು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂಸಂಹಿತಾಯಾಂ ವೈಯಾಸಿಕ್ಯಾಂ
ವನಪರ್ವಣಿ ಸಪ್ತಸಪ್ತ್ಯಧಿಕದ್ವಿಶತತಮೋಽಧ್ಯಾಯಃ ॥
॥ ಇತಿ ರಾಮೋಪಾಖ್ಯಾನಪರ್ವಣಿ ಇಂದ್ರಜಿದ್ಯುದ್ಧಂ ನಾಮ ಷೋಡಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವನಪರ್ವದಲ್ಲಿ ಇನ್ನೂರ ಎಪ್ಪತ್ತೇಳನೆಯ
ಅಧ್ಯಾಯ ಮುಗಿಯಿತು.

★ ★ ★ ★

ಇನ್ನೂರ ಎಪ್ಪತ್ತೆಂಟನೆಯ ಅಧ್ಯಾಯ

ರಾಮಲಕ್ಷ್ಮಣರ ಮೂರ್ಛೆ. ವಿಭೀಷಣನಿಂದ ಪ್ರಜ್ಞಾನಾಸ್ತ್ರಪ್ರಯೋಗದಿಂದ ಅದರ ನಿವೃತ್ತಿ. ಸುಗ್ರೀವನಿಂದ ಅವರ ವಿಶಲ್ಲೀಕರಣ. ಕುಬೇರನು ಕಳುಹಿಸಿದ ಜಲದಿಂದ ರಾಮಾದಿಗಳಿಗೆ ಅತೀಂದ್ರಿಯ ದರ್ಶನ ಶಕ್ತಿ. ಲಕ್ಷ್ಮಣನಿಂದ ಇಂದ್ರಜಿತುವಿನ ವಧೆ. ಸೀತೆಯನ್ನು ಕೊಲ್ಲಲು ಉದ್ಯುಕ್ತನಾದ ರಾವಣನಿಗೆ ವೃದ್ಧಾಮಾತ್ಯನಾದ ಅವಿಂದ್ಯನಿಂದ ಪ್ರತಿನಿವರ್ತನ.

ಮಾರ್ಕಂಡೇಯಃ

ತಾವುಭೌ ಪತಿತೌ ದೃಷ್ಟ್ವಾ ಭ್ರಾತರೌ ರಾಮಲಕ್ಷ್ಮಣೌ ।
ಬಬಂಧ ರಾವಣಿರ್ಘೂರ್ಯಃ ಶರೈರ್ದತ್ತವರೈಸ್ತದಾ ॥೧॥

ಮಾರ್ಕಂಡೇಯರು– ಅಣ್ಣತಮ್ಮಂದಿರಾದ ಆ ರಾಮಲಕ್ಷ್ಮಣರಿಬ್ಬರೂ ಬಿದ್ದುದನ್ನು ನೋಡಿ ರಾವಣಪುತ್ರನು ಪುನಃ ವರಗಳಿಂದ ಕೂಡಿದ ಬಾಣಗಳಿಂದ ಅವರನ್ನು ಬಂಧಿಸಿದನು.

ತೌ ವೀರೌ ಶರಬಂಧೇನ ಬದ್ಧಾವಿಂದ್ರಜಿತಾ ರಣೇ ।
ರೇಜತುಃ ಪುರುಷವ್ಯಾಘ್ರೌ ಶಕುಂತಾವಿವ ಪಂಜರೇ ॥೨॥

ಯುದ್ಧದಲ್ಲಿ ಇಂದ್ರಜಿತುವಿನ ಬಾಣಗಳಿಂದ ಬದ್ಧರಾದ ವೀರರಾದ ಆ ಪುರುಷವ್ಯಾಘ್ರರು ಪಂಜರದಲ್ಲಿಟ್ಟ ಎರಡು ಪಕ್ಷಿಗಳಂತೆ ಶೋಭಿಸಿದರು.

ತೌ ದೃಷ್ಟ್ವಾ ಪತಿತೌ ಭೂಮೌ ಶತಶಃ ಸಾಯಕೈಶ್ಚಿತೌ ।
ಸುಗ್ರೀವಃ ಕಪಿಭಿಃ ಸಾರ್ಧಂ ಪರಿವಾರ್ಯ ತತಃ ಸ್ಥಿತಃ ॥೩॥

ಸುಷೇಣಮೈಂದದ್ವಿವಿದೌ ಕುಮುದೇನಾಂಗದೇನ ಚ ।
ಹನುಮನ್ನೀಲತಾರೈಶ್ಚ ನಳೇನ ಚ ಕಪೀಶ್ವರಃ ॥೪॥

ಅವರಿಬ್ಬರೂ ನೂರಾರು ಬಾಣಗಳು ದೇಹದಲ್ಲಿ ನೆಟ್ಟು ಭೂಮಿಯಲ್ಲಿ ಬಿದ್ದುದನ್ನು ನೋಡಿದ ಕಪೀಶ್ವರನಾದ ಸುಗ್ರೀವನು ಕಪಿಗಳ ಪರಿವಾರದಿಂದ ಕೂಡಿದವನಾಗಿ ಅವನು ಸುಷೇಣ, ಮೈಂದ, ವಿವಿದ, ಕುಮುದ, ಅಂಗದ, ಹನುಮಂತ, ನೀಲ, ತಾರ, ನಳ ಇವರ ಜೊತೆಯಲ್ಲಿ ಅಲ್ಲಿಯೇ ನಿಂತನು.

ತತಸ್ತಂ ದೇಶಮಾಗಮ್ಯ ಕೃತಕರ್ಮಾ ವಿಭೀಷಣಃ ।
ಬೋಧಯಾಮಾಸ ತೌ ವೀರೌ ಪ್ರಜ್ಞಾಸ್ತ್ರೇಣ ಪ್ರಬೋಧಿತೌ ॥೫॥

ಅನಂತರ ವಿಭೀಷಣನು ತನ್ನ ಕಾರ್ಯವನ್ನು ಮಾಡಿ ಆ ಪ್ರದೇಶಕ್ಕೆ ಬಂದು ಆ ವೀರರನ್ನು ತನ್ನ ಪ್ರಜ್ಞಾನಾಸ್ತ್ರದಿಂದ ಎಚ್ಚರಗೊಳ್ಳುವಂತೆ ಮಾಡಿದನು.

ವಿಶಲ್ಯೌ ಚಾಪಿ ಸುಗ್ರೀವಃ ಕ್ಷಣೇನೈತೌ ಚಕಾರ ಹ ।
ವಿಶಲ್ಯಯಾ ಮಹೌಷಧ್ಯಾ ದಿವ್ಯಮಂತ್ರಪ್ರಯುಕ್ತಯಾ ॥೬॥

ಸುಗ್ರೀವನು ಮಂತ್ರಸಹಿತವಾದ ವಿಶಲ್ಯ ಎಂಬ ಮಹೌಷಧಿಯಿಂದ ಅವರ ದೇಹದಲ್ಲಿದ್ದ ವ್ರಣಗಳೆಲ್ಲವನ್ನೂ ಒಂದುಕ್ಷಣದಲ್ಲಿ ನಾಶಪಡಿಸಿದನು.

ತೌ ಲಬ್ಧಸಂಜ್ಞೌ ನೃವರೌ ವಿಶಲ್ಯಾವುದತಿಷ್ಠತಾಮ್ ।
ಗತತಂದ್ರೀಕ್ಲಮೌ ಚಾಪಿ ಕ್ಷಣೇನೈತೌ ಮಹಾರಥೌ ॥೭॥

ಮಹಾರಥರಾದ ಅವರಿಬ್ಬರೂ ಸಂಜ್ಞೆಯನ್ನು ಮರಳಿ ಪಡೆದು, ದೇಹದ ವ್ರಣಗಳೆಲ್ಲವನ್ನೂ ಕಳೆದುಕೊಂಡು ಆಲಸ್ಯವನ್ನೂ, ಆಯಾಸವನ್ನೂ ಕಳೆದುಕೊಂಡವರಾಗಿ ಒಂದು ಕ್ಷಣದಲ್ಲಿ ಆ ನರವೀರರು ಎದ್ದುನಿಂತರು.

ತತೋ ವಿಭೀಷಣಃ ಪಾರ್ಥ ರಾಮಮಿಕ್ಷ್ವಾಕುನಂದನಮ್ ।
ಉವಾಚ ವಿಜ್ವರಂ ದೃಷ್ಟ್ವಾ ಕೃತಾಂಜಲಿರಿದಂ ವಚಃ ॥೮॥

ಎಲೈ ಪಾರ್ಥನೇ, ಅನಂತರ ವಿಭೀಷಣನು ಇಕ್ಷ್ವಾಕುನಂದನನಾದ ರಾಮನು ತಾಪರಹಿತನಾದುದನ್ನು ನೋಡಿ ಕೈಗಳನ್ನು ಮುಗಿದು ಈ ಮಾತನ್ನು ಆಡಿದನು.

ವಿಭೀಷಣಃ

ಇದಮಂಭೋ ಗೃಹೀತ್ವಾ ತು ರಾಜರಾಜಸ್ಯ ಶಾಸನಾತ್ ।
ಗುಹ್ಯಕೋಽಭ್ಯಾಗತಃ ಶ್ವೇತಾತ್ ತತ್ಸಕಾಶಮರಿಂದಮ ॥೯॥

ವಿಭೀಷಣ– ಎಲೈ ಅರಿಂದಮನೇ, ಕುಬೇರನ ಶಾಸನದಂತೆ ಈ ಜಲವನ್ನು ತೆಗೆದುಕೊಂಡು ಒಬ್ಬ ಗುಹ್ಯಕನು ಶ್ವೇತಪರ್ವತದಿಂದ ನಿನ್ನ ಬಳಿಗೆ ಬಂದಿದ್ದಾನೆ.

ಇದಮಂಭಃ ಕುಬೇರಸ್ತೇ ಮಹಾರಾಜಃ ಪ್ರಯಚ್ಛತಿ ।
ಅಂತರ್ಹಿತಾನಾಂ ಭೂತಾನಾಂ ದರ್ಶನಾರ್ಥಂ ಪರಂತಪಃ ॥೧೦॥

ಪರಂತಪನಾದ ಮಹಾರಾಜನಾದ ಕುಬೇರನು ಅಂತರ್ಧಾನವನ್ನು ಹೊಂದಿದ ಭೂತಗಳ ದರ್ಶನಕ್ಕೋಸ್ಕರವಾಗಿ ಈ ಜಲವನ್ನು ನಿನಗೆ ಕಳುಹಿಸಿದ್ದಾನೆ.

ಅನೇನ ಮೃಷ್ಟನಯನೋ ಭೂತಾನ್ಯಂತರ್ಹಿತಾನ್ಯುತ ।
ಭವಾನ್ ದ್ರಕ್ಷ್ಯತಿ ಯಸ್ಮೈ ಚ ಪ್ರದಾಸ್ಯತಿ ನರಃ ಸ ತು ॥೧೧॥

ಈ ಜಲವನ್ನು ನೀನು ಕಣ್ಣಿಗೆ ಹಚ್ಚಿಕೊಂಡರೆ ಅಂತರ್ಧಾನವನ್ನು ಹೊಂದಿದ ಭೂತಗಳನ್ನು ನೋಡುವಿ. ಈ ಜಲವನ್ನು ಯಾವ ಮನುಷ್ಯರಿಗೆ ಕೊಟ್ಟರೂ ಅವನಿಗೂ ಅಂತಹ ಶಕ್ತಿಯುಂಟಾಗುತ್ತದೆ.

ಮಾರ್ಕಂಡೇಯಃ

ತಥೇತಿ ರಾಮಸ್ತದ್ವಾರಿ ಪ್ರತಿಗೃಹ್ಯಾಭಿಸಂಸ್ಕೃತಮ್ ।
ಚಕಾರ ನೇತ್ರಯೋಃ ಶೌಚಂ ಲಕ್ಷ್ಮಣಶ್ಚ ಮಹಾಮನಾಃ ॥೧೨॥

ಮಾರ್ಕಂಡೇಯ– ಹಾಗೆಯೇ ಆಗಲಿ ಎಂದು ಹೇಳಿ ರಾಮನು ಮಂತ್ರಪೂತವಾದ ಆ ನೀರನ್ನು ತೆಗೆದುಕೊಂಡು ತನ್ನ ಕಣ್ಣುಗಳನ್ನು ತೊಳೆದುಕೊಂಡನು. ಮಹಾಮನನಾದ ಲಕ್ಷ್ಮಣನೂ ಸಹ ಹಾಗೆಯೇ ಮಾಡಿದನು.

ಸುಗ್ರೀವಜಾಂಬವಂತೌ ಚ ಹನುಮಾನಂಗದಸ್ತಥಾ ।
ಮೈಂದದ್ವಿವಿದನೀಲಾಶ್ಚ ಪ್ರಾಯಃ ಪ್ಲವಗಸತ್ತಮಾಃ ॥೧೩॥

ತಥಾ ಸಮಭವಚ್ಚಾಪಿ ಯದುವಾಚ ವಿಭೀಷಣಃ ।
ಕ್ಷಣೇನಾತೀಂದ್ರಿಯಾನ್ಯೇಷಾಂ ಚಕ್ಷೂಂಷ್ಯಾಸನ್ ಯುಧಿಷ್ಠಿರ ॥೧೪॥

ಸುಗ್ರೀವ-ಜಾಂಬವಂತರೂ, ಅದರಂತೆ ಹನುಮಂತ-ಅಂಗದರೂ, ಮೈಂದದ್ವಿವಿದನೀಲರೂ ಮತ್ತು ಹೆಚ್ಚಾಗಿ ಎಲ್ಲಾ ಕಪಿಶ್ರೇಷ್ಠರೂ ಹಾಗೆಯೇ ಮಾಡಿದರು. ಎಲೈ ಯುಧಿಷ್ಠಿರನೇ, ವಿಭೀಷಣನು ಹೇಳಿದಂತೆಯೇ ಅವರೆಲ್ಲರ ಕಣ್ಣುಗಳಿಗೂ ಅತೀಂದ್ರಿಯವಾದ ವಸ್ತುವನ್ನು ನೋಡುವ ಶಕ್ತಿಯುಂಟಾಯಿತು.

ಇಂದ್ರಜಿತ್ಕೃತಕರ್ಮಾ ಚ ಪಿತ್ರೇ ಕರ್ಮ ತದಾऽऽತ್ಮನಃ ।
ನಿವೇದ್ಯ ಪುನರಾಗಚ್ಛತ್ ತ್ವರಯಾऽಜಿಶಿರಃ ಪ್ರತಿ ॥೧೫॥

ಇಂದ್ರಜಿತುವು ತನ್ನ ಕಾರ್ಯವನ್ನು ಮಾಡಿ ತನ್ನ ತಂದೆಗೆ ಹೋಗಿ ಈ ವಿಷಯವನ್ನು ತಿಳಿಸಿ ಪುನಃ ಯುದ್ಧಭೂಮಿಗೆ ಶೀಘ್ರವಾಗಿ ಹಿಂದಿರುಗಿದನು.

ತಮಾಪತಂತಂ ಸಂಕ್ರುದ್ಧಂ ಪುನರೇವ ಯುಯುತ್ಸಯಾ ।
ಅಭಿದುದ್ರಾವ ಸೌಮಿತ್ರಿರ್ವಿಭೀಷಣಮತೇ ಸ್ಥಿತಃ ॥೧೬॥

ಪುನಃ ಬಹಳ ಕೋಪಗೊಂಡು ಬರುತ್ತಿರುವ ಅವನನ್ನು ನೋಡಿ ಲಕ್ಷ್ಮಣನು ವಿಭೀಷಣನ ಅಭಿಪ್ರಾಯದಂತೆ ಯುದ್ಧಮಾಡಲು ಬಯಸಿ ಅವನ ಕಡೆಗೆ ಓಡಿದನು.

ಅಕೃತಾಹ್ನಿಕಮೇವೈನಂ ವಿಘಾಂಸುರ್ಜಿತಕಾಶಿನಮ್ ।
ಶರೈರ್ಜಘಾನ ಸಂಕ್ರುದ್ಧಃ ಕೃತಸಂಜ್ಞೋऽಥ ಲಕ್ಷ್ಮಣಃ ॥೧೭॥

ಅವನು ಆಹ್ನಿಕವನ್ನು ಮಾಡುವುದಕ್ಕಿಂತ ಮುಂಚೆಯೇ ಜಯಾಕಾಂಕ್ಷಿಯಾಗಿದ್ದ ಅವನನ್ನು ಕೊಲ್ಲಲು ಬಯಸಿ ಸಂಕ್ರುದ್ಧನಾದ ಲಕ್ಷ್ಮಣನು ಅವನಿಗೆ ಹೇಳಿ ಅವನಿಗೆ ಬಾಣಗಳಿಂದ ಹೊಡೆದನು.

ತಯೋಃ ಸಮಭವದ್ ಯುದ್ಧಂ ತದಾऽನ್ಯೋನ್ಯಂ ಜಿಗೀಷತೋಃ ।
ಅತೀವ ಚಿತ್ರಮಾಶ್ಚರ್ಯಂ ಶಕ್ರಪ್ರಹ್ಲಾದಯೋರಿವ ॥೧೮॥

ಆಗ ಪರಸ್ಪರ ಗೆಲ್ಲುವ ಆಸೆಯಿಂದ ಅವರಿಗೆ ವಿಚಿತ್ರವೂ, ಆಶ್ಚರ್ಯಕರವೂ ಆದ ಯುದ್ಧವು ಇಂದ್ರ ಮತ್ತು ಪ್ರಹ್ಲಾದರಿಗೆ ನಡೆದಂತೆ ಪರಸ್ಪರವಾಗಿ ನಡೆಯಿತು.

ಅವಿಧ್ಯದಿಂದ್ರಜಿತ್ ತೀಕ್ಷ್ಣೈಃ ಸೌಮಿತ್ರಿಂ ಮರ್ಮಭೇದಿಭಿಃ ।
ಸೌಮಿತ್ರಿಶ್ಚಾನಲಸ್ಪರ್ಶೈರವಿಧ್ಯದ್ ರಾವಣಿಂ ಶರೈಃ ॥೧೯॥

ಇಂದ್ರಜಿತುವು ಲಕ್ಷ್ಮಣನನ್ನು ಮರ್ಮಭೇದಕವಾದ ತೀಕ್ಷ್ಣವಾದ ಬಾಣಗಳಿಂದ ಹೊಡೆದನು. ಲಕ್ಷ್ಮಣನೂ ಸಹ ಅಗ್ನಿಯಂತಹ ಸ್ಪರ್ಶವುಳ್ಳ ಬಾಣಗಳಿಂದ ರಾವಣಪುತ್ರನನ್ನು ಹೊಡೆದನು.

ಸೌಮಿತ್ರಿಶರಸಂಸ್ಪರ್ಶಾದ್ ರಾವಣಿಃ ಕ್ರೋಧಮೂರ್ಛಿತಃ ।
ವ್ಯಸೃಜಲ್ಲಕ್ಷ್ಮಣಾಯಾಷ್ಟೌ ಶರಾನಾಶೀವಿಷೋಪಮಾನ್ ॥೨೦॥

ಲಕ್ಷ್ಮಣನ ಶರಸಂಸ್ಪರ್ಶದಿಂದ ಕ್ರೋಧಮೂರ್ಛಿತನಾದ ಇಂದ್ರಜಿತುವು ತನ್ನ ಬಿಲ್ಲಿನಲ್ಲಿ ಸರ್ಪಗಳಂತಿರುವ ಎಂಟುಬಾಣಗಳನ್ನು ಲಕ್ಷ್ಮಣನನ್ನು ಉದ್ದೇಶಿಸಿ ಹೂಡಿದನು.

ತಸ್ಯಾಸೂನ್ ಪಾವಕಸ್ಪರ್ಶೈಃ ಸೌಮಿತ್ರಿಃ ಪತ್ತ್ರಿಭಿಸ್ತ್ರಿಭಿಃ ।
ಯಥಾ ನಿರಹರದ್ ವೀರಸ್ತನ್ಮೇ ನಿಗದತಃ ಶೃಣು ॥೨೧॥

ವೀರನಾದ ಲಕ್ಷ್ಮಣನು ಅಗ್ನಿಸ್ಪರ್ಶವುಳ್ಳ ಮೂರುಬಾಣಗಳಿಂದ ಅವನ ಪ್ರಾಣಗಳನ್ನು ಹೇಗೆ ಅಪಹರಿಸಿದನೆಂಬುದನ್ನು ನನ್ನಿಂದ ಕೇಳು.

ಏಕೇನಾಸ್ಯ ಧನುಷ್ಮಂತಂ ಬಾಹುಂ ದೇಹಾದಪಾತಯತ್ ।
ದ್ವಿತೀಯೇನ ಸನಾರಾಚಂ ಭುಜಂ ಭೂಮೌ ನ್ಯಪಾತಯತ್ ॥೨೨॥

ತೃತೀಯೇನ ತು ಬಾಣೇನ ಪೃಥುಧಾರೇಣ ಭಾಸ್ವತಾ ।
ಜಹಾರ ಸುನಸಂ ಚಾಪಿ ಶಿರೋ ಭ್ರಾಜಿಷ್ಣುಕುಂಡಲಮ್ ॥೨೩॥

ವಿನಿಕೃತ್ತಭುಜಸ್ಕಂಧಂ ಕಬಂಧಂ ಭೀಮದರ್ಶನಮ್ ।
ಪಪಾತ ವಸುಧಾಯಾಂ ತು ಭಿನ್ನಮೂಲ ಇವ ದ್ರುಮಃ ॥೨೪॥

ಒಂದುಬಾಣದಿಂದ ಧನುಸ್ಸನ್ನು ಹಿಡಿದಿದ್ದ ಅವನ ತೋಳನ್ನು ನೆಲಕ್ಕೆ ಬೀಳಿಸಿದನು. ಎರಡನೆಯ ಬಾಣದಿಂದ ಬಾಣವನ್ನು ಹಿಡಿದಿದ್ದ ಅವನ ಬಲಭುಜವನ್ನು ಭೂಮಿಯಲ್ಲಿ ಬೀಳಿಸಿದನು. ಮೂರನೆಯ ವಿಶಾಲವಾದ ಅಲಗನ್ನುಳ್ಳ ಪ್ರಕಾಶಮಾನವಾದ ಬಾಣದಿಂದ ಅವನ ಸುಂದರ ನಾಸಿಕ ಮತ್ತು ಕುಂಡಲಗಳಿಂದ ಅಲಂಕೃತವಾದ ಶಿರಸ್ಸನ್ನು ಅಪಹರಿಸಿದನು. ಭುಜಗಳು ಮತ್ತು ಶಿರಸ್ಸಿಲ್ಲದೇ ಭಯಂಕರವಾಗಿ ತೋರುತ್ತಿದ್ದ ಇಂದ್ರಜಿತುವಿನ ಕಬಂದವು (ರುಂಡವು) ಬುಡವನ್ನು ಕಡಿದ ವೃಕ್ಷದಂತೆ ಭೂಮಿಯ ಮೇಲೆ ಉರುಳಿತು.

ತಂ ಹತ್ವಾ ಸುತಮಪ್ಯಸ್ತ್ರೈರ್ಜಘಾನ ಬಲಿನಾಂ ವರಃ ।
ಲಂಕಾಂ ಪ್ರವೇಶಯಾಮಾಸುಸ್ತಂ ರಥಂ ವಾಜಿನಸ್ತದಾ ।
ದದರ್ಶ ರಾವಣಸಂ ಚ ರಥಂ ಪುತ್ರವಿನಾಕೃತಮ್ ॥೨೫॥

ಬಲಿಷ್ಠರಲ್ಲಿ ಶ್ರೇಷ್ಠನಾದ ಲಕ್ಷ್ಮಣನು ಅವನನ್ನು ಕೊಂದು ಅವನ ಮಗನನ್ನೂ ಅಸ್ತ್ರಗಳಿಂದ ಕೊಂದನು. ಇಂದ್ರಜಿತುವಿನ ಕುದುರೆಗಳು, ಅವನ ರಥವನ್ನು ಲಂಕೆಗೆ ಎಳೆದುಕೊಂಡು ಹೋದವು. ರಾವಣನು ಪುತ್ರನಿಲ್ಲದ ಅವನ ರಥವನ್ನು ನೋಡಿದನು.

ಸ ಪುತ್ರಂ ನಿಹತಂ ಜ್ಞಾತ್ವಾ ತ್ರಾಸಾತ್ ಸಂಭ್ರಾಂತಮಾನಸಃ ।
ರಾವಣಃ ಶೋಕಮೋಹಾರ್ತೋ ವೈದೇಹೀಂ ಹಂತುಮುದ್ಯತಃ ॥೨೬॥

ಆ ರಾವಣನು ಪುತ್ರನು ಹತನಾದುದನ್ನು ತಿಳಿದು ಹೆದರಿಕೆಯಿಂದ ಭ್ರಾಂತವಾದ ಮನಸ್ಸುಳ್ಳವನಾಗಿ ಶೋಕಮೋಹಿತನಾಗಿ ವೈದೇಹಿಯನ್ನು ಕೊಲ್ಲಲು ಉದ್ಯುಕ್ತನಾದನು.

ಅಶೋಕವನಿಕಾಸ್ಥಾಂ ತಾಂ ರಾಮದರ್ಶನಲಾಲಸಾಮ್ ।
ಖಡ್ಗಮಾದಾಯ ದುಷ್ಟಾತ್ಮಾ ಜವೇನಾಭಿಪಪಾತ ಹ ॥೨೭॥

ಅಶೋಕವನದಲ್ಲಿ ರಾಮದರ್ಶನಲಾಲಸೆಯಾಗಿದ್ದ ಅವಳ ಬಳಿಗೆ ದುಷ್ಟಾತ್ಮನಾದ ಅವನು ಖಡ್ಗವನ್ನು ತೆಗೆದುಕೊಂಡು ಶೀಘ್ರವಾಗಿ ಓಡಿದನು.

ತಂ ದೃಷ್ಟ್ವಾ ತಸ್ಯ ದುರ್ಬುದ್ಧೇರವಿಂಧ್ಯಃ ಪಾಪನಿಶ್ಚಯಮ್ ।
ಶಮಯಾಮಾಸ ಸಂಕ್ರುದ್ಧಂ ಶ್ರೂಯತಾಂ ಯೇನ ಹೇತುನಾ ॥೨೮॥

ಆ ದುರ್ಬುದ್ಧಿಯವುಳ್ಳ ರಾವಣನ ಪಾಪನಿಶ್ಚಯವನ್ನು ನೋಡಿದ ಅವಿಂಧ್ಯನು ಕೋಪಗೊಂಡ ಅವನನ್ನು ಯಾವ ಕಾರಣಗಳಿಂದ ಸಮಾಧಾನಮಾಡಿದನೆಂಬುದನ್ನು ಕೇಳು.

ಅವಿಂಧ್ಯಃ

ಮಹಾರಾಜ್ಯೇ ಸ್ಥಿತೋ ದೀಪ್ತೇ ನ ಸ್ತ್ರಿಯಂ ಹಂತುಮರ್ಹಸಿ ।
ಹತೈವೈಷಾ ಯದಾ ಸ್ತ್ರೀ ಚ ಬಂಧನಸ್ಥಾ ಚ ತೇ ವಶೇ ॥೨೯॥

ಅವಿಂಧ್ಯ– ದೊಡ್ಡರಾಜ್ಯದಲ್ಲಿ ಪ್ರಕಾಶಮಾನನಾಗಿದ್ದು ನೀನು ಸ್ತ್ರೀಯನ್ನು ಕೊಲ್ಲುವುದು ಉಚಿತವಲ್ಲ. ಯಾವಾಗ ಈ ಸ್ತ್ರೀಯು ನಿನ್ನ ಬಂಧನಕ್ಕೆ ಒಳಗಾಗಿ ನಿನ್ನ ವಶದಲ್ಲಿ ಸಿಕ್ಕಿದಳೋ ಆಗಲೇ ಅವಳು ಹತಳಾಗಿದ್ದಾಳೆ.

ನ ಚೈಷಾ ದೇಹಭೇದೇನ ಹತಾ ಸ್ಯಾದಿತಿ ಮೇ ಮತಿಃ ।
ಜಹಿ ಭರ್ತಾರಮೇವಾಸ್ಯಾ ಹತೇ ತಸ್ಮಿನ್ ಹತಾ ಭವೇತ್ ॥೩೦॥

ಇವಳು ದೇಹಚ್ಛೇದದಿಂದ ಇನ್ನೊಮ್ಮೆ ಹತಳಾಗುವುದಿಲ್ಲವೆಂದು ನನ್ನ ಅಭಿಪ್ರಾಯ. ಇವಳ ಪತಿಯನ್ನೇ ಕೊಲ್ಲುವವನಾಗು. ಅವನನ್ನು ಕೊಂದರೆ ಇವಳು ಹತಳಾದಂತೆಯೇ ಸರಿ.

ನ ಹಿ ತೇ ವಿಕ್ರಮೇ ತುಲ್ಯಃ ಸಾಕ್ಷಾದಪಿ ಶತಕ್ರತುಃ ।
ಅಸಕೃದ್ಧಿ ತ್ವಯಾ ಸೇಂದ್ರಾಸ್ತ್ರಾಸಿತಾಸ್ತ್ರಿದಶಾ ಯುಧಿ ॥೩೧॥

ನಿನ್ನ ವಿಕ್ರಮಕ್ಕೆ ಸಾಕ್ಷಾತ್ ಇಂದ್ರನೂ ಸಮಾನನಲ್ಲ. ನೀನು ಅನೇಕಬಾರಿ ಇಂದ್ರನನ್ನೂ ಸೇರಿ ಅನೇಕ ದೇವತೆಗಳನ್ನು ಯುದ್ಧದಲ್ಲಿ ಭಯಗ್ರಸ್ತರನ್ನಾಗಿ ಮಾಡಿದ್ದೀಯೆ.

ಮಾರ್ಕಂಡೇಯಃ

ಏವಂ ಬಹುವಿಧೈರ್ವಾಕ್ಯೈರವಿಂಧ್ಯೋ ರಾವಣಂ ತದಾ ।
ಕ್ರುದ್ಧಂ ಸಂಶಮಯಾಮಾಸ ಜಗೃಹೇ ಚ ಸ ತದ್ವಚಃ ॥೩೨॥

ಮಾರ್ಕಂಡೇಯರು– ಹೀಗೆ ಬಹುವಿಧವಾದ ವಾಕ್ಯಗಳಿಂದ ಅವಿಂಧ್ಯನು ಕೋಪಗೊಂಡಿದ್ದ ರಾವಣನನ್ನು ಆಗ ಸಮಾಧಾನಪಡಿಸಿದನು. ರಾವಣನೂ ಸಹ ಆ ಮಾತುಗಳನ್ನು ಸ್ವೀಕರಿಸಿದನು.

ನಿರ್ಯಾಣೇ ಸ ಮತಿಂ ಕೃತ್ವಾ ನಿಧಾಯಾಸಿಂ ಕ್ಷಪಾಚರಃ ।
ಆಜ್ಞಾಪಯಾಮಾಸ ತದಾ ರಥೋ ಮೇ ಕಲ್ಪ್ಯತಾಮಿತಿ ॥೩೩॥

ಆ ರಾಕ್ಷಸನು ತನ್ನ ಕತ್ತಿಯನ್ನು ಒರೆಯಲ್ಲಿಟ್ಟು ಯುದ್ಧಕ್ಕೆ ತಾನೇ ಹೋಗುವುದೆಂದು ನಿಶ್ಚಯಿಸಿ ನನಗೆ ಒಂದು ರಥವನ್ನು ಅಣಿಗೊಳಿಸಿ ಎಂದು ಆಜ್ಞೆಯನ್ನು ಮಾಡಿದನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂಸಂಹಿತಾಯಾಂ ವೈಯಾಸಿಕ್ಯಾಂ
ವನಪರ್ವಣಿ ಅಷ್ಟಸಪ್ತತ್ಯಧಿಕದ್ವಿಶತತಮೋऽಧ್ಯಾಯಃ ॥
॥ ಇತಿ ರಾಮೋಪಾಖ್ಯಾನಪರ್ವಣಿ ಇಂದ್ರಜಿದ್ವಧೋ ನಾಮ ಸಪ್ತದಶೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವನಪರ್ವದಲ್ಲಿ ಇನ್ನೂರ ಎಪ್ಪತ್ತೆಂಟನೆಯ ಅಧ್ಯಾಯ ಮುಗಿಯಿತು.

★ ★ ★ ★

ಇನ್ನೂರ ಎಪ್ಪತ್ತೊಂಬತ್ತನೆಯ ಅಧ್ಯಾಯ

ರಣಭೂಮಿಗೆ ರಾವಣನ ಆಗಮನ. ಇಂದ್ರನಿಂದ ರಾಮನಿಗೆ ಮಾತಲಿಸಹಿತವಾಗಿ ರಥಪ್ರೇಷಣ. ಬ್ರಹ್ಮಾಸ್ತ್ರದಿಂದ ರಾವಣನ ಹನನ.

ಮಾರ್ಕಂಡೇಯಃ

ತತಃ ಕ್ರುದ್ಧೋ ದಶಗ್ರೀವಃ ಪ್ರಿಯೇ ಪುತ್ರೇ ನಿಪಾತಿತೇ ।
ನಿರ್ಯಯೌ ರಥಮಾಸ್ಥಾಯ ಹೇಮರತ್ನವಿಭೂಷಿತಮ್ ॥೧॥

ಮಾರ್ಕಂಡೇಯರು– ತನ್ನ ಪ್ರಿಯಪುತ್ರನು ಹತನಾಗುತ್ತಿರಲು ಕ್ರುದ್ಧನಾದ ದಶಗ್ರೀವನು ಹೇಮರತ್ನವಿಭೂಷಿತವಾದ ರಥವನ್ನು ಏರಿ ಹೊರಟನು.

ಸ ವೃತೋ ರಾಕ್ಷಸೈಘೋರ್ರೈರ್ವಿವಿಧಾಯುಧಪಾಣಿಭಿಃ ।
ಅಭಿದುದ್ರಾವ ರಾಮಂ ಸ ಯೋಧಯನ್ ಹರಿಯೂಥಪಾನ್ ॥೨॥

ಅವನು ವಿವಿಧವಾದ ಆಯುಧಗಳನ್ನು ಕೈಯಲ್ಲಿ ಹಿಡಿದ ರಾಕ್ಷಸರಿಂದ ಸುತ್ತುವರಿಯಲ್ಪಟ್ಟು ಕಪಿಶ್ರೇಷ್ಠರ ಜೊತೆಯಲ್ಲಿ ಯುದ್ಧಮಾಡುತ್ತಾ ರಾಮನ ಕಡೆಗೆ ಓಡಿದನು.

ತಮಾದ್ರವಂತಂ ಸಂಕ್ರುದ್ಧಂ ಮೈಂದನೀಲನಳಾಂಗದಾಃ ।
ಹನೂಮಾನ್ ಜಾಂಬವಾಂಶ್ಚೈವ ಸಸೈನ್ಯಾಃ ಪರ್ಯವಾರಯನ್ ॥೩॥

ಹಾಗೆ ಕ್ರೋಧದಿಂದ ಓಡುತ್ತಿದ್ದ ಅವನನ್ನು ಸೈನ್ಯಸಹಿತರಾದ ಮೈಂದ, ನೀಲ, ನಳ, ಅಂಗದ, ಹನುಮಂತ, ಜಾಂಬವಂತ ಇವರು ತಡೆದರು.

ತೇ ದಶಗ್ರೀವಸೈನ್ಯಂ ತದೃಕ್ಷವಾನರಪುಂಗವಾಃ ।
ದ್ರುಮೈರ್ವಿಧ್ವಂಸಯಾಂಚಕ್ರುರ್ದಶಗ್ರೀವಸ್ಯ ಪಶ್ಯತಃ ॥೪॥

ಋಕ್ಷಶ್ರೇಷ್ಠರೂ ಮತ್ತು ವಾನರಶ್ರೇಷ್ಠರೂ ದಶಗ್ರೀವನು ನೋಡುತ್ತಿರುವಂತೆಯೇ ಅವನ ಸೈನ್ಯವನ್ನು ಮರಗಳಿಂದ ವಿಧ್ವಂಸಗೊಳಿಸಿದರು.

ತತಃ ಸ ಸೈನ್ಯಮಾಲೋಕ್ಯ ವಧ್ಯಮಾನಮರಾತಿಭಿಃ ।
ಮಾಯಾವೀ ಚಾಸೃಜನ್ಮಾಯಾಂ ರಾವಣೋ ರಾಕ್ಷಸಾಧಿಪಃ ॥೫॥

ತನ್ನ ಸೈನ್ಯವು ಶತ್ರುಗಳಿಂದ ಹತವಾಗುತ್ತಿರುವುದನ್ನು ನೋಡಿದ ಮಾಯಾವಿಯಾದ ರಾಕ್ಷಸೇಶ್ವರನಾದ ರಾವಣನು ಮಾಯೆಯನ್ನು ಸೃಷ್ಟಿಮಾಡಿದನು.

ತಸ್ಯ ದೇಹವಿನಿಷ್ಕ್ರಾಂತಾಃ ಶತಶೋಽಥ ಸಹಸ್ರಶಃ ।
ರಾಕ್ಷಸಾಃ ಪ್ರತ್ಯದೃಶ್ಯಂತ ಶರಶಕ್ತ್ಯೃಷ್ಟಿಪಾಣಯಃ ॥೬॥

ಅವನ ದೇಹದಿಂದ ನೂರಾರು ಸಾವಿರಾರು ಸಂಖ್ಯೆಯಲ್ಲಿ ಹೊರಗೆ ಬಂದ ರಾಕ್ಷಸರು ಬಾಣ, ಶಕ್ತಿ, ಋಷ್ಟಿಗಳನ್ನು ಕೈಯಲ್ಲಿ ಹಿಡಿದಿರುವುದು ಕಂಡುಬಂದಿತು.

ತಾನ್‌ರಾಮೋ ಜಘ್ನಿವಾನ್ ಸರ್ವಾನ್ ದಿವ್ಯೇನಾಸ್ತ್ರೇಣ ರಾಕ್ಷಸಾನ್ ।
ಅಥ ಭೂಯೋಽಪಿ ಮಾಯಾಂ ಸ ವ್ಯದಧಾದ್ ರಾಕ್ಷಸಾಧಿಪಃ ॥೭॥

ರಾಮನು ದಿವ್ಯಾಸ್ತ್ರದಿಂದ ಆ ರಾಕ್ಷಸರನ್ನೆಲ್ಲಾ ಹನನ ಮಾಡಿದನು. ಆಗ ರಾಕ್ಷಸಾಧಿಪನು ಪುನಃ ಮಾಯೆಯನ್ನು ಸೃಷ್ಟಿಮಾಡಿದನು.

ಕೃತ್ವಾ ರಾಮಸ್ಯ ರೂಪಾಣಿ ಲಕ್ಷ್ಮಣಸ್ಯ ಚ ಭಾರತ ।
ಅಭಿದುದ್ರಾವ ರಾಮಂ ಚ ಲಕ್ಷ್ಮಣಂ ಚ ದಶಾನನಃ ॥೮॥

ಎಲೈ ಭಾರತನೇ, ದಶಾನನನು ರಾಮನ ರೂಪಗಳನ್ನು, ಲಕ್ಷ್ಮಣನ ರೂಪಗಳನ್ನು ತೆಗೆದುಕೊಂಡು ರಾಮಲಕ್ಷ್ಮಣರ ಕಡೆಗೆ ಓಡಿಬಂದನು.

ತತಸ್ತೇ ರಾಮಮಾರ್ಛಂತೋ ಲಕ್ಷ್ಮಣಂ ಚ ಕ್ಷಪಾಚರಾಃ ।
ಅಭಿಪೇತುಸ್ತದಾ ರಾಮಂ ಪ್ರಗೃಹೀತಶರಾಸನಾಃ ॥೯॥

ಆಗ ಆ ನಿಶಾಚರರು ಕೈಯಲ್ಲಿ ಧನುಸ್ಸನ್ನು ಹಿಡಿದು ರಾಮಲಕ್ಷ್ಮಣರನ್ನು ಹಿಂಸಿಸುತ್ತಾ ರಾಮನ ಕಡೆಗೆ ಬಂದರು.

ತಾಂ ದೃಷ್ಟ್ವಾ ರಾಕ್ಷಸೇಂದ್ರಸ್ಯ ಮಾಯಾಮಿಕ್ಷ್ವಾಕುನಂದನಃ ।
ಉವಾಚ ರಾಮಂ ಸೌಮಿತ್ರಿಸಂಭ್ರಾಂತೋ ಬೃಹದ್ವಚಃ ।
ಜಹೀಮಾನ್ ರಾಕ್ಷಸಾನ್ ಪಾಪಾನಾತ್ಮನಃ ಪ್ರತಿರೂಪಕಾನ್ ॥೧೦॥

ಆ ರಾಕ್ಷಸೇಂದ್ರನ ಮಾಯೆಯನ್ನು ನೋಡಿದ ಇಕ್ಷ್ವಾಕುನಂದನನಾದ ಲಕ್ಷ್ಮಣನು ಯಾವ ಕಳವಳವನ್ನೂ ಹೊಂದದೆ ರಾಮನನ್ನು ಕುರಿತು ನಿನ್ನ ಪ್ರತಿರೂಪವನ್ನು ಧರಿಸಿರುವ ಈ ರಾಕ್ಷಸರನ್ನು ಸಂಹಾರಮಾಡು ಎಂಬ ದೊಡ್ಡಮಾತನ್ನು ಆಡಿದನು.

ಮಾರ್ಕಂಡೇಯಃ

ಜಘಾನ ರಾಮಸ್ತಾಂಶ್ಚಾನ್ಯಾನಾತ್ಮನಃ ಪ್ರತಿರೂಪಕಾನ್ ।
ತತೋ ಹರ್ಯಶ್ವಯುಕ್ತೇನ ರಥೇನಾದಿತ್ಯವರ್ಚಸಾ ।
ಉಪತಸ್ಥೇ ರಣೇ ರಾಮಂ ಮಾತಲಿಃ ಶಕ್ರಸಾರಥಿಃ ॥೧೧॥

ರಾಮನು ತನ್ನ ಪ್ರತಿರೂಪವನ್ನು ಧರಿಸಿದ್ದ ರಾಕ್ಷಸರನ್ನೂ ಮತ್ತು ಬೇರೆ ರಾಕ್ಷಸರನ್ನೂ ಸಂಹರಿಸಿದನು. ಆಗ ಶಕ್ರಸಾರಥಿಯಾದ ಮಾತಲಿಯು ಇಂದ್ರನ ಹರ್ಯಶ್ವಗಳನ್ನು ಹೂಡಿದ ಸೂರ್ಯಕಾಂತಿಯುಳ್ಳ ರಥವನ್ನು ತೆಗೆದುಕೊಂಡು ಯುದ್ಧಭೂಮಿಯಲ್ಲಿ ರಾಮನ ಬಳಿಗೆ ಬಂದನು.

ಮಾತಲಿಃ

ಅಯಂ ಹರ್ಯಶ್ವಯುಗ್ ಜೈತ್ರೋ ಮಘೋನಃ ಸ್ಯಂದನೋತ್ತಮಃ ।
ತ್ವದರ್ಥಮಿಹ ಸಂಪ್ರಾಪ್ತಃ ಸಂದೇಹಾದ್‌ವೈ ಶತಕ್ರತೋಃ ॥೧೨॥

ಮಾತಲಿ– ಹರ್ಯಶ್ವಯುಕ್ತವಾದ ಜಯಶೀಲವಾದ ಇಂದ್ರನ ಈ ಶ್ರೇಷ್ಠರಥವನ್ನು ಇಂದ್ರನು ಸಂದೇಹದಿಂದ ನಿನ್ನ ಸಲುವಾಗಿ ಇಲ್ಲಿಗೆ ಕಳುಹಿಸಿದ್ದಾನೆ.

ಅನೇನ ಶಕ್ರಃ ಕಾಕುತ್ಸ್ಥ ಸಮರೇ ದೈತ್ಯದಾನವಾನ್ ।
ಶತಶಃ ಪುರುಷವ್ಯಾಘ್ರ ರಥೋದಾರೇಣ ಜಘ್ನಿವಾನ್ ॥೧೩॥

ಎಲೈ ಕಾಕುತ್ಸ್ಥನೇ, ಪುರುಷವ್ಯಾಘ್ರನೇ, ಈ ಶ್ರೇಷ್ಠವಾದ ರಥದ ಸಹಾಯದಿಂದ ಇಂದ್ರನು ಯುದ್ಧದಲ್ಲಿ ನೂರಾರು ಸಂಖ್ಯೆಯಲ್ಲಿ ದೈತ್ಯದಾನವರನ್ನು ಸಂಹರಿಸಿದ್ದಾನೆ.

ತದನೇನ ನರವ್ಯಾಘ್ರ ಮಯಾ ಯತ್ತೇನ ಸಂಯುಗೇ ।
ಸ್ಯಂದನೇನ ಜಹಿ ಕ್ಷಿಪ್ರಂ ರಾವಣಂ ಮಾ ಚಿರಂ ಕೃಥಾಃ ॥೧೪॥

ಎಲೈ ನರವ್ಯಾಘ್ರನೇ, ನಾನು ನಿಯಂತ್ರಿಸುವ ಈ ರಥದಲ್ಲಿ ಕುಳಿತು ಯುದ್ಧದಲ್ಲಿ ರಾವಣನನ್ನು ಬೇಗ ಸಂಹಾರ ಮಾಡು. ತಡಮಾಡಬೇಡ.

ಮಾರ್ಕಂಡೇಯಃ

ಇತ್ಯುಕ್ತೋ ರಾಘವಸ್ತಥ್ಯಂ ವಚೋಽಶಂಕತ ಮಾತಲೇಃ ।
ಮಾಯೈಷಾ ರಾಕ್ಷಸಸ್ಯೇತಿ ತಮುವಾಚ ವಿಭೀಷಣಃ ॥೧೫॥

ಮಾರ್ಕಂಡೇಯ– ಹೀಗೆ ಮಾತಲಿಯ ಸತ್ಯವಚನಗಳನ್ನು ಕೇಳಿದ ರಾಮನು ಇದು ರಾಕ್ಷಸನ ಮಾಯೆ ಇರಬಹುದು ಎಂದು ಶಂಕಿಸಿದನು. ಆಗ ವಿಭೀಷಣನು ಅವನನ್ನು ಕುರಿತು ಹೇಳಿದನು.

ವಿಭೀಷಣಃ

ನೇಯಂ ಮಾಯಾ ನರವ್ಯಾಘ್ರ ರಾವಣಸ್ಯ ದುರಾತ್ಮನಃ ।
ತದಾತಿಷ್ಠ ರಥಂ ಶೀಘ್ರಮಿಮಮೈಂದ್ರಂ ಮಹಾದ್ಯುತೇ ॥೧೬॥

ವಿಭೀಷಣ– ನರವ್ಯಾಘ್ರನೇ, ಇದು ದುರಾತ್ಮನಾದ ರಾವಣನ ಮಾಯೆಯಲ್ಲ. ಮಹಾದ್ಯುತಿಯೇ, ಇಂದ್ರನ ಈ ರಥವನ್ನು ಶೀಘ್ರವಾಗಿ ಏರುವವನಾಗು (ಎಂದು ಹೇಳಿದನು).

ಮಾರ್ಕಂಡೇಯಃ

ತತಃ ಪ್ರಹೃಷ್ಟಃ ಕಾಕುತ್ಸ್ಥಸ್ತಥೇತ್ಯುಕ್ತ್ವಾ ವಿಭೀಷಣಮ್ ।
ರಥೇನಾಭಿಪಪಾತಾಥ ದಶಗ್ರೀವಂ ರುಷಾಽನ್ವಿತಃ ॥೧೭॥

ಮಾರ್ಕಂಡೇಯ– ಆಗ ಸಂತೋಷಗೊಂಡ ರಾಮನು ವಿಭೀಷಣನಿಗೆ ಹಾಗೆಯೇ ಆಗಲಿ ಎಂದು ಹೇಳಿ ರಥವನ್ನು ಏರಿ ರೋಷದಿಂದ ಕೂಡಿ ದಶಗ್ರೀವನ ಕಡೆಗೆ ಹೊರಟನು.

ಹಾಹಾಕೃತಾನಿ ಭೂತಾನಿ ರಾವಣೇ ಸಮಭಿದ್ಯುತೇ ।
ಸಿಂಹನಾದಾಃ ಸಪಟಹಾ ದಿವಿ ದಿವ್ಯಾಸ್ತಥಾಽನದನ್ ॥೧೮॥

ರಾವಣನು ಹೀಗೆ ಅಭಿದ್ಯುತನಾಗುತ್ತಿರಲು ಎಲ್ಲ ಭೂತಗಳೂ ಹಾಹಾಕಾರವನ್ನು ಮಾಡಿದವು. ದೇವಲೋಕದಲ್ಲಿ ಸಿಂಹನಾದಗಳು ಉಂಟಾದವು. ಪಟಹ ಮೊದಲಾದ ದಿವ್ಯವಾದ್ಯಗಳು ಮೊಳಗಿದವು.

ತತಃ ಪ್ರವವೃತ್ತೇ ಯುದ್ಧಂ ರಾಮರಾವಣಯೋರ್ಮಹತ್ ।
ದಶಕಂಧರರಾಜಸೂನ್ವೋಸ್ತಥಾ ಯುದ್ಧಮಭೂನ್ಮಹತ್ ॥೧೮.೧॥

ಅಲಬ್ಧೋಪಮಮನ್ಯತ್ರ ತಯೋರೇವ ತಥಾಭವತ್ ।

ಅನಂತರ ರಾಮರಾವಣರಿಗೆ ದೊಡ್ಡ ಯುದ್ಧವು ಪ್ರಾರಂಭವಾಯಿತು. ಬೇರೆ ಯಾವ ಉಪಮಾನವೂ ಇಲ್ಲದಾಗಿದ್ದು, ರಾಮರಾವಣರಿಗೇ ಉಂಟಾಯಿತು.

ಸ ರಾಮಾಯ ಮಹಾಘೋರಂ ವಿಸಸರ್ಜ ನಿಶಾಚರಃ ।
ಶೂಲಮಿಂದ್ರಾಶನಿಪ್ರಖ್ಯಂ ಬ್ರಹ್ಮದಂಡಮಿವೋದ್ಯತಮ್ ॥೧೯॥

ಆ ನಿಶಾಚರನು ರಾಮನನ್ನು ಉದ್ದೇಶಿಸಿ ಇಂದ್ರನ ವಜ್ರಾಯುಧದಂತಿರುವ ಉದ್ಯತವಾದ ಬ್ರಹ್ಮದಂಡದಂತಿರುವ ಮಹಾಘೋರವಾದ ಶೂಲವನ್ನು ಎಸೆದನು.

ತತ್‌ಶೂಲಂ ಸತ್ವರಂ ರಾಮಶ್ಚಿಚ್ಛೇದ ನಿಶಿತೈಃ ಶರೈಃ ।
ತದ್ ದೃಷ್ಟ್ವಾ ದುಷ್ಕರಂ ಕರ್ಮ ರಾವಣಂ ಭಯಮಾವಿಶತ್ ॥೨೦॥

ರಾಮನು ತನ್ನ ಹರಿತವಾದ ಬಾಣಗಳಿಂದ ಶೀಘ್ರವಾಗಿ ಆ ಶೂಲವನ್ನು ಕತ್ತರಿಸಿದನು. ರಾಮನ ಆ ದುಷ್ಕರವಾದ ಕರ್ಮವನ್ನು ನೋಡಿ ರಾವಣನಿಗೆ ಭಯವುಂಟಾಯಿತು.

ತತಃ ಕ್ರುದ್ಧಃ ಸಸರ್ಜಾಶು ದಶಗ್ರೀವಃ ಶಿತಾಂಛರಾನ್ ।
ಸಹಸ್ರಾಯುತಶೋ ರಾಮೇ ಶಸ್ತ್ರಾಣಿ ವಿವಿಧಾನಿ ಚ ॥೨೧॥

ಅನಂತರ ಕ್ರುದ್ಧನಾದ ರಾವಣನು ರಾಮನ ಮೇಲೆ ಸಹಸ್ರಸಂಖ್ಯೆಯಲ್ಲಿ, ಹತ್ತುಸಾವಿರ ಸಂಖ್ಯೆಯಲ್ಲಿ ಹರಿತವಾದ ವಿವಿಧವಾದ ಶಸ್ತ್ರಗಳನ್ನೂ ಮತ್ತು ಬಾಣಗಳನ್ನೂ ಪ್ರಯೋಗಿಸಿದನು.

ತತೋ ಭುಶುಂಡೀಃ ಶೂಲಾನಿ ಮುಸಲಾನಿ ಪರಶ್ವಧಾನ್ ।
ಶಕ್ತೀಶ್ಚ ವಿವಿಧಾರಾಃ ಕಾರ ಶತಘ್ನೀಶ್ಚ ಶಿತಾನ್‌ಕ್ಷುರಾನ್ ॥೨೨॥

ಅನಂತರ ಭುಶುಂಡಿಗಳನ್ನೂ, ಶೂಲಗಳನ್ನೂ, ಮುಸಲಗಳನ್ನೂ, ಪರಶ್ವಧಗಳನ್ನೂ, ಶಕ್ತಿಗಳನ್ನೂ, ವಿವಿಧಾಕಾರದ ಶತಘ್ನಿಗಳನ್ನೂ ಮತ್ತು ಹರಿತವಾದ ಶೂಲಗಳನ್ನು ಪ್ರಯೋಗಿಸಿದನು.

ತಾಂ ಮಾಯಾಂ ವಿಕೃತಾಂ ದೃಷ್ಟ್ವಾ ದಶಗ್ರೀವಸ್ಯ ರಕ್ಷಸಃ ।
ಭಯಾತ್ ಪ್ರದುದ್ರುವುಃ ಸರ್ವೇ ವಾನರಾಃ ಸರ್ವತೋ ದಿಶಮ್ ॥೨೩॥

ರಾಕ್ಷಸನಾದ ರಾವಣನ ಆ ವಿಧವಿಧವಾದ ಮಾಯೆಯನ್ನು ನೋಡಿ ಎಲ್ಲ ಕಪಿಗಳು ಭಯದಿಂದ ದಿಕ್ಕುದಿಕ್ಕುಗಳಿಗೆ ಓಡಿಹೋದವು.

ತತಃ ಸುಪತ್ರಂ ಸುಮುಖಂ ಹೇಮಪುಂಖಂ ಶರೋತ್ತಮಮ್ ।
ತೂಣಾದಾದಾಯ ಕಾಕುತ್ಸ್ಥೋ ಬ್ರಹ್ಮಾಸ್ತ್ರೇಣ ಯುಯೋಜ ಹ ॥೨೪॥

ಆಗ ರಾಮನು ಒಳ್ಳೆಯ ಪತ್ರಸಹಿತವಾದ ಒಳೆಯ ತುದಿಯಿರುವ ಹೇಮದಂಡವಿರುವ ಒಂದು ಶ್ರೇಷ್ಠವಾದ ಬಾಣವನ್ನು ಬತ್ತಳಿಕೆಯಿಂದ ತೆಗೆದು ಅದನ್ನು ಬ್ರಹ್ಮಾಸ್ತ್ರದಿಂದ ಅಭಿಮಂತ್ರಿಸಿದನು.

ತಂ ಬಾಣವರ್ಯಂ ರಾಮೇಣ ಬ್ರಹ್ಮಾಸ್ತ್ರೇಣಾನುಮಂತ್ರಿತಮ್ ।
ಜಹೃಷುರ್ದೇವಗಂಧರ್ವಾ ದೃಷ್ಟ್ವಾ ಶಕ್ರಪುರೋಗಮಾಃ ॥೨೫॥

ರಾಮನು ಆ ಶ್ರೇಷ್ಠವಾದ ಬಾಣವನ್ನು ಬ್ರಹ್ಮಾಸ್ತ್ರದಿಂದ ಅಭಿಮಂತ್ರಿಸುತ್ತಿರುವುದನ್ನು ನೋಡಿದ ಇಂದ್ರ ಮೊದಲಾದ ದೇವತೆಗಳು ಮತ್ತು ದೇವಗಂಧರ್ವರು ಸಂತೋಷಪಟ್ಟರು.

ಅಲ್ಪಾವಶೇಷಮಾಯುಶ್ಚ ತತೋಽಮನ್ಯಂತ ರಕ್ಷಸಃ ।
ಬ್ರಹ್ಮಾಸ್ತ್ರೋದೀರಣಾಚ್ಚತ್ರೋರ್ದೇವದಾನವಕಿನ್ನರಾಃ ॥೨೬॥

ಬ್ರಹ್ಮಾಸ್ತ್ರವನ್ನು ಸದ್ಯದಲ್ಲಿಯೇ ಪ್ರಯೋಗ ಮಾಡುವುದರಿಂದ ದೇವದಾನವ ಕಿನ್ನರರು ಶತ್ರುವಾದ ರಾಕ್ಷಸನಿಗೆ ಅಲ್ಪವೇ ಆಯುಷ್ಯವು ಉಳಿದಿದೆ ಎಂದು ತಿಳಿದರು.

ತತಃ ಸಸರ್ಜ ತಂ ರಾಮಃ ಶರಮಪ್ರತಿಮೌಜಸಮ್ ।
ರಾವಣಾಂತಕರಂ ಘೋರಂ ಬ್ರಹ್ಮದಂಡಮಿವೋದ್ಯತಮ್ ॥೨೭॥

ಅನಂತರ ಅಪ್ರತಿಮಶಕ್ತಿಸಾಮರ್ಥ್ಯವನ್ನು ಹೊಂದಿದ, ರಾವಣನ ವಿನಾಶವನ್ನು ಮಾಡುವ, ಉದ್ಯತಬ್ರಹ್ಮದಂಡದಂತಿರುವ, ಆ ಘೋರವಾದ ಬಾಣವನ್ನು ಪ್ರಯೋಗಿಸಿದನು.

ಸ ತೇನ ರಾಕ್ಷಸಶ್ರೇಷ್ಠಃ ಸರಥಃ ಸಾಶ್ವಸಾರಥಿಃ ।
ಪ್ರಜಜ್ವಾಲ ಮಹಾಜ್ವಾಲೇನಾಗ್ನಿನಾऽಭಿಪರಿಪ್ಲುತಃ ॥೨೮॥

ಆ ಬಾಣದಿಂದ ರಾಕ್ಷಸಶ್ರೇಷ್ಠನಾದ ರಾವಣನು ರಥಾಶ್ವಸಾರಥಿಗಳ ಜೊತೆಯಲ್ಲಿ ಮಹಾಜ್ವಾಲೆಗಳನ್ನುಳ್ಳ ಅಗ್ನಿಯಿಂದ ಸುತ್ತುವರಿಯಲ್ಪಟ್ಟವನಾಗಿ ಸುಟ್ಟುಹೋದನು (ಉರಿದುಬಿದ್ದನು).

ತತಃ ಪ್ರಹೃಷ್ಟಾಸ್ತ್ರಿದಶಾಃ ಸಹಗಂಧರ್ವಚಾರಣಾಃ ।
ನಿಹತಂ ರಾವಣಂ ದೃಷ್ಟ್ವಾ ರಾಮೇಣಾಕ್ಲಿಷ್ಟಕರ್ಮಣಾ ॥೨೯॥

ಆಗ ಅಕ್ಲಿಷ್ಟಕಾರಿಯಾದ ರಾಮನಿಂದ ರಾವಣನು ಹತನಾದುದನ್ನು ನೋಡಿದ ಗಂಧರ್ವಚಾರಣಸಹಿತರಾದ ದೇವತೆಗಳು ಸಂತೋಷಪಟ್ಟರು.

ತತ್ಯಜುಸ್ತಂ ಮಹಾಭಾಗಂ ಪಂಚ ಭೂತಾನಿ ರಾವಣಮ್ ।
ಭ್ರಂಶಿತಃ ಸರ್ವಲೋಕೇಭ್ಯಃ ಸ ಹಿ ಬ್ರಹ್ಮಾಸ್ತ್ರತೇಜಸಾ ॥೩೦॥

ಆ ಮಹಾಭಾಗನಾದ ರಾವಣನನ್ನು ಪಂಚಭೂತಗಳು ತ್ಯಜಿಸಿದವು. ಅವನು ಬ್ರಹ್ಮಾಸ್ತ್ರದ ಸಾಮರ್ಥ್ಯದಿಂದ ಸರ್ವಲೋಕಗಳಿಂದಲೂ ಭ್ರಷ್ಟನಾದನು.

ಶರೀರಧಾತವೋ ಹ್ಯಸ್ಯ ಮಾಂಸಂ ರುಧಿರಮೇವ ಚ ।
ನೇಶುರ್ಬ್ರಹ್ಮಾಸ್ತ್ರನಿರ್ದಗ್ಧಾ ನ ಚ ಭಸ್ಮಾಪ್ಯದೃಶ್ಯತ ॥೩೧॥

ಅವನ ಶರೀರಧಾತುಗಳು, ಮಾಂಸರಕ್ತಗಳು ಬ್ರಹ್ಮಾಸ್ತ್ರದಿಂದ ಸುಟ್ಟು ನಾಶವನ್ನು ಹೊಂದಿದವು. ಅವುಗಳ ಭಸ್ಮವೂ ಕಾಣಲಿಲ್ಲ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂಸಂಹಿತಾಯಾಂ ವೈಯಾಸಿಕ್ಯಾಂ
ವನಪರ್ವಣಿ ಏಕೋನಾಶೀತ್ಯಧಿಕದ್ವಿಶತತಮೋऽಧ್ಯಾಯಃ ॥
॥ ಇತಿ ರಾಮೋಪಾಖ್ಯಾನಪರ್ವಣಿ ರಾವಣವಧೋ ಅಷ್ಟಾದಶೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವನಪರ್ವದಲ್ಲಿ ಇನ್ನೂರ ಎಪ್ಪತ್ತೊಂಬತ್ತನೆಯ ಅಧ್ಯಾಯ ಮುಗಿಯಿತು.

★ ★ ★ ★

ಇನ್ನೂರ ಎಂಬತ್ತನೆಯ ಅಧ್ಯಾಯ

ಅವಿಂಧ್ಯನಿಂದ ರಾಮನ ಬಳಿಗೆ ಸೀತೆಯ ಆನಯನ. ಸೀತೆಯ ಅಗ್ನಿಪರೀಕ್ಷೆ. ಸೀತಾಲಕ್ಷ್ಮಣ ಸಹಿತನಾದ ರಾಮನಿಂದ ಅಯೋಧ್ಯೆಗೆ ಆಗಮನ. ರಾಮನ ಪಟ್ಟಾಭಿಷೇಕ. ಎಲ್ಲರ ಸನ್ಮಾನ ಮತ್ತು ರಾಮನ ಪ್ರಜಾಪಾಲನ.

ಮಾರ್ಕಂಡೇಯಃ

ಸ ಹತ್ವಾ ರಾವಣಂ ಕ್ಷುದ್ರಂ ರಾಕ್ಷಸೇಂದ್ರಂ ಸುರದ್ವಿಷಮ್ ।
ಬಭೂವ ಹೃಷ್ಟಃ ಸಸುಹೃದ್ ರಾಮಃ ಸೌಮಿತ್ರಿಣಾ ಸಹ ॥೧॥

ಮಾರ್ಕಂಡೇಯ– ಕ್ಷುದ್ರನೂ, ದೇವಶತ್ರುವೂ ಆದ ರಾಕ್ಷಸೇಂದ್ರನಾದ ರಾವಣನನ್ನು ಕೊಂದು ಲಕ್ಷ್ಮಣ ಮತ್ತು ಸುಹೃದರ ಜೊತೆಯಲ್ಲಿ ರಾಮನು ಸಂತುಷ್ಟನಾದನು.

ತತೋ ಹತೇ ದಶಗ್ರೀವೇ ದೇವಾಃ ಸರ್ಷಿಪುರೋಗಮಾಃ ।
ಆಶೀರ್ಭಿರ್ಜಯಯುಕ್ತಾಭಿರಾನರ್ಚುಸ್ತಂ ಮಹಾಭುಜಮ್ ॥೨॥

ರಾವಣನು ಹತನಾಗುತ್ತಿರಲು ಋಷಿಗಳನ್ನು ಮುಂದೆ ಮಾಡಿಕೊಂಡು ದೇವತೆಗಳು ಮಹಾಭುಜನಾದ ರಾಮನನ್ನು ಜಯಯುಕ್ತವಾದ ಆಶೀರ್ವಚನಗಳಿಂದ ಪೂಜಿಸಿದರು.

ರಾಮಂ ಕಮಲಪತ್ರಾಕ್ಷಂ ತುಷ್ಟುವುಃ ಸರ್ವದೇವತಾಃ ।
ಗಂಧರ್ವಾಃ ಪುಷ್ಪವರ್ಷೈಶ್ಚ ವಾಗ್ಭಿಶ್ಚ ತ್ರಿದಶಾಲಯಾಃ ॥೩॥

ಕಮಲನೇತ್ರನಾದ ರಾಮನನ್ನು ಎಲ್ಲ ದೇವತೆಗಳೂ ಸ್ತೋತ್ರಮಾಡಿದರು. ಗಂಧರ್ವರು ಪುಷ್ಪವೃಷ್ಟಿಯಿಂದಲೂ, ಸ್ವರ್ಗವಾಸಿಗಳು ಸ್ತೋತ್ರದಿಂದಲೂ ರಾಮನನ್ನು ಸತ್ಕರಿಸಿದರು.

ಪೂಜಯಿತ್ವಾ ಯಥಾ ರಾಮಂ ಪ್ರತಿಜಗ್ಮುರ್ಯಥಾಗತಮ್ ।
ತನ್ಮೋಹತ್ವವಸಂಕಾಶಮಾಸೀದಾಕಾಶಮಚ್ಯುತ ॥೪॥

ಆಕಾಶದಲ್ಲಿದ್ದ ದೇವತೆಗಳು ಮತ್ತು ಗಂಧರ್ವರು ರಾಮನನ್ನು ಚೆನ್ನಾಗಿ ಪೂಜಿಸಿ ಬಂದಂತೆಯೇ ಹೊರಟುಹೋದರು. ಎಲ್ಲೆ ಗುಣಗಳಿಂದ ಚ್ಯುತನಾಗದ ಯುಧಿಷ್ಠಿರನೇ, ಆಕಾಶವೇ ಒಂದು ಮಹೋತ್ಸವ ರೂಪವಾಗಿದ್ದಿತು.

ತತೋ ಹತ್ವಾ ದಶಗ್ರೀವಂ ಲಂಕಾಂ ರಾಮೋ ಮಹಾಯಶಾಃ ।
ವಿಭೀಷಣಾಯ ಪ್ರದದೌ ಪ್ರಭುಃ ಪರಪುರಂಜಯಃ ॥೫॥

ದಶಗ್ರೀವನನ್ನು ಸಂಹರಿಸಿ ಮಹಾಯಶಸ್ವಿಯೂ, ಪರಪುರಂಜಯನೂ, ಪ್ರಭುವೂ ಆದ ರಾಮನು ವಿಭೀಷಣನಿಗೆ ಲಂಕೆಯನ್ನು ಕೊಟ್ಟನು.

ತತಃ ಸೀತಾಂ ಪುರಸ್ಕೃತ್ಯ ವಿಭೀಷಣಪುರಸ್ಕೃತಾಮ್ ।
ಅವಿಂಧ್ಯೋ ನಾಮ ಸುಪ್ರಜ್ಞೋ ವೃದ್ಧಾಮಾತ್ಯೋ ವಿನಿರ್ಯಯೌ ॥೬॥

ಅನಂತರ ವಿಭೀಷಣನನ್ನು ಮುಂದೆ ಮಾಡಿಕೊಂಡ ಸೀತೆಯನ್ನು ಮುಂದೆ ಮಾಡಿಕೊಂಡು ಅವಿಂಧ್ಯನೆಂಬ ಮೇಧಾವಿಯಾದ ವೃದ್ಧಾಮಾತ್ಯನು ಹೊರಗೆ ಬಂದನು.

ಉವಾಚ ಚ ಮಹಾತ್ಮಾನಂ ಕಾಕುತ್ಸ್ಥಂ ದೈನ್ಯಮಾಸ್ಥಿತಃ ।
ಪ್ರತೀಚ್ಛ ದೇವೀಂ ಸದ್ವೃತ್ತಾಂ ಮಹಾತ್ಮನ್ ಜಾನಕೀಮಿತಿ ॥೭॥

ಅವನು ವಿನಯದಿಂದ ಕೂಡಿದವನಾಗಿ ಮಹಾತ್ಮನಾದ ರಾಮನನ್ನು ಕುರಿತು ಮಹಾತ್ಮನೇ, ಒಳ್ಳೆಯ ಚಾರಿತ್ರ್ಯವುಳ್ಳ ಈ ಜಾನಕೀದೇವಿಯನ್ನು ಸ್ವೀಕರಿಸು ಎಂದು ಹೇಳಿದನು.

ಏತತ್ಶ್ರುತ್ವಾ ವಚಸ್ತಸ್ಮಾದವತೀರ್ಯ ರಥೋತ್ತಮಾತ್ ।
ಬಾಷ್ಪೇಣಾಪಿಹಿತಾಂ ಸೀತಾಂ ದದರ್ಶೇಕ್ಷ್ವಾಕುನಂದನಃ ॥೮॥

ಈ ಮಾತುಗಳನ್ನು ಕೇಳಿದ ಇಕ್ಷ್ವಾಕುನಂದನನಾದ ರಾಮನು ತನ್ನ ಶ್ರೇಷ್ಠವಾದ ರಥದಿಂದ ಇಳಿದು ಬಾಷ್ಪಪೂರಿತ ನೇತ್ರಳಾದ ಸೀತೆಯನ್ನು ನೋಡಿದನು.

ತಾಂ ದೃಷ್ಟ್ವಾ ಚಾರುಸರ್ವಾಂಗೀಂ ಯಾನಸ್ಥಾಂ ಶೋಕಕರ್ಶಿತಾಮ್ ।
ಮಲೋಪಚಿತಸರ್ವಾಂಗೀಂ ಜಟಿಲಾಂ ಕೃಷ್ಣವಾಸಸಮ್ ॥೯॥

ಉವಾಚ ರಾಮೋ ವೈದೇಹೀಂ ಪರಾಮರ್ಶವಿಶಂಕಿತಃ ।
ಗಚ್ಛ ವೈದೇಹಿ ಮುಕ್ತಾ ತ್ವಂ ಯತ್ ಕಾರ್ಯಂ ತನ್ಮಯಾ ಕೃತಮ್ ॥

ಸರ್ವಾಂಗ ಸುಂದರಿಯೂ, ಶೋಕಕರ್ಶಿತಳೂ, ಅಲಂಕಾರಮಾಡಿಕೊಳ್ಳದವಳೂ, ಜಟಿಲಳೂ, ಮಲಿನವಸ್ತ್ರಗಳನ್ನು ಧರಿಸಿದವಳೂ ಆದ ಯಾನದಲ್ಲಿ ಕುಳಿತಿದ್ದ ಸೀತೆಯನ್ನು ನೋಡಿ ರಾವಣನ ಪರಾಮರ್ಶವನ್ನು ಶಂಕಿಸಿ ರಾಮನು ಅವಳನ್ನು ಕುರಿತು ವೈದೇಹಿ, ನಿನ್ನನ್ನು ಬಿಡುಗಡೆಗೊಳಿಸಿದ್ದೇನೆ. ಅದಕ್ಕಾಗಿಯೇ ನಾನು ಈ ಕಾರ್ಯವನ್ನು ಮಾಡಿದೆ. ನೀನು ಎಲ್ಲಿಗೆ ಬೇಕಾದರೂ ಹೋಗಬಹುದು ಎಂದು ಹೇಳಿದನು.

ಮಾಮಾಸಾದ್ಯ ಪತಿಂ ಭದ್ರೇ ನ ತ್ವಂ ರಾಕ್ಷಸವೇಶ್ಮನಿ ।
ಜರಾಂ ವ್ರಜೇಥಾ ಇತಿ ಮೇ ನಿಹತೋಽಸೌ ನಿಶಾಚರಃ ॥೧೧॥

ಎಲೌ ಭದ್ರೆಯೇ, ನನ್ನನ್ನು ಪತಿಯಾಗಿ ಪಡೆದು ನೀನು ರಾಕ್ಷಸನ ಮನೆಯಲ್ಲಿ ಮುಪ್ಪನ್ನು ಹೊಂದಬಾರದು ಎಂಬ ಉದ್ದೇಶದಿಂದ ನಾನು ಆ ರಾಕ್ಷಸನನ್ನು ಕೊಂದೆನು.

ಕಥಂ ಹ್ಯಸ್ಮದ್ವಿಧೋ ಜಾತು ಜಾನನ್ ಧರ್ಮವಿನಿಶ್ಚಯಮ್ ।
ಪರಹಸ್ತಗತಾಂ ನಾರೀಂ ಮುಹೂರ್ತಮಪಿ ಧಾರಯೇತ್ ॥೧೨॥

ಧರ್ಮನಿರ್ಣಯವನ್ನು ತಿಳಿದ ನನ್ನಂತಹವನು ಪರಹಸ್ತಗತಳಾದ ನಾರಿಯನ್ನು ಒಂದು ಮುಹೂರ್ತವಾದರೂ ಜೊತೆಯಲ್ಲಿ ಇಟ್ಟುಕೊಳ್ಳುವುದು ಹೇಗೆ ಸಾಧ್ಯ?

ಸುವೃತ್ತಾಮಸುವೃತ್ತಾಂ ವಾಽಪ್ಯಹಂ ತ್ವಾಮದ್ಯ ಮೈಥಿಲಿ ।
ನೋತ್ಸಹೇ ಪರಿಭೋಗಾಯ ಶ್ವಾವಲೀಢಂ ಹವಿರ್ಯಥಾ ॥೧೩॥

ವೈಥಿಲಿಯೇ, ನೀನು ಸುಚರಿತ್ರಳಾಗಿರಬಹುದು ಅಥವಾ ದುಶ್ಚರಿತ್ರಳಾಗಿರಬಹುದು. ಆದರೂ ವಾಯಿಯು ನೆಕ್ಕಿದ ಹವಿಸ್ಸಿನಂತೆ ನೀನು ಈ ದಿನ ನನ್ನ ಭೋಗಕ್ಕೆ ಅರ್ಹಳಲ್ಲ (ಎಂದು ಹೇಳಿದನು).

ಮಾರ್ಕಂಡೇಯಃ

ತತಃ ಸಾ ಸಹಸಾ ಬಾಲಾ ತತ್ ಶ್ರುತ್ವಾ ದಾರುಣಂ ವಚಃ ।
ಪಪಾತ ದೇವೀ ವ್ಯಥಿತಾ ನಿಕೃತ್ತಾ ಕದಲೀ ಯಥಾ ॥೧೪॥

ಮಾರ್ಕಂಡೇಯ– ಆ ದಾರುಣವಾದ ಮಾತುಗಳನ್ನು ಕೇಳಿದ ಆ ಬಾಲೆಯು ಕತ್ತರಿಸಿದ ಕದಳೀ ವೃಕ್ಷದಂತೆ ತಕ್ಷಣ ನೆಲದ ಮೇಲೆ ವ್ಯಥೆಯಿಂದ ಬಿದ್ದಳು.

ಯೋಽಪ್ಯಸ್ಯಾ ಹರ್ಷಸಂಭೂತೋ ಮುಖರಾಗಸ್ತದಾಽಭವತ್ ।
ಕ್ಷಣೇನ ಸ ಪುನರ್ನಷ್ಟೋ ನಿಃಶ್ವಾಸ ಇವ ದರ್ಪಣೇ ॥೧೫॥

ರಾಮನ ದರ್ಶನದಿಂದ ಉಂಟಾದ ಸಂತೋಷದಿಂದ ಅವಳ ಮುಖದಲ್ಲಿ ಉಂಟಾಗಿದ್ದ ಕಾಂತಿಯು ಒಂದುಕ್ಷಣದಲ್ಲಿ ಕನ್ನಡಿಯ ಮೇಲೆ ಬಿಟ್ಟ ನಿಟ್ಟುಸಿರನಂತೆ ನಷ್ಟವಾಯಿತು.

ತತಸ್ತೇ ಹರಯಃ ಸರ್ವೇ ತತ್ಶ್ರುತ್ವಾ ರಾಮಭಾಷಿತಮ್ ।
ಗತಾಸುಕಲ್ಪಾ ನಿಶ್ಚೇಷ್ಟಾ ಬಭೂವುಃ ಸಹಲಕ್ಷ್ಮಣಾಃ ॥೧೬॥

ರಾಮನ ಆ ಮಾತುಗಳನ್ನು ಕೇಳಿದ ಎಲ್ಲಾ ಕಪಿಗಳೂ ಮತ್ತು ಲಕ್ಷ್ಮಣನೂ ಸಹ ಪ್ರಾಣಗಳನ್ನು ಕಳೆದುಕೊಂಡವರಂತೆ ನಿಶ್ಚೇಷ್ಟರಾದರು.

ತತೋ ದೇವೋ ವಿಶುದ್ಧಾತ್ಮಾ ವಿಮಾನೇನ ಚತುರ್ಮುಖಃ ।
ಪದ್ಮಯೋನಿರ್ಜಗತ್ಸ್ರಷ್ಟಾ ದರ್ಶಯಾಮಾಸ ರಾಘವಮ್ ॥೧೭॥

ಆಗ ವಿಶುದ್ಧಾತ್ಮರಾದ, ಜಗತ್ತಿನ ಸೃಷ್ಟಿಕರ್ತರಾದ, ಪದ್ಮಯೋನಿಗಳಾದ ಚತುರ್ಮುಖ ಬ್ರಹ್ಮದೇವರು ರಾಮನಿಗೆ ದರ್ಶನವನ್ನು ನೀಡಿದರು.

ಶಕ್ರಶ್ಚಾಗ್ನಿಶ್ಚ ವಾಯುಶ್ಚ ಯಮೋ ವರುಣ ಏವ ಚ ।
ಯಕ್ಷಾಧಿಪಶ್ಚ ಭಗವಾಂಸ್ತಥಾ ಸಪ್ತರ್ಷಯೋಽಮಲಾಃ ॥೧೮॥

ರಾಜಾ ದಶರಥಶ್ಚೈವ ದಿವ್ಯಭಾಸ್ವರಮೂರ್ತಿಮಾನ್ ।
ವಿಮಾನೇನ ಮಹಾರ್ಹೇಣ ಹಂಸಯುಕ್ತೇನ ಭಾಸ್ವತಾ ॥೧೯॥

ಇಂದ್ರ, ಅಗ್ನಿ, ವಾಯು, ಯಮ, ವರುಣ, ಕುಬೇರ ಅದರಂತೆ ನಿರ್ಮಲರಾದ ಸಪ್ತರ್ಷಿಗಳು ದಿವ್ಯವಾದ ಪ್ರಕಾಶರೂಪವನ್ನು ಧರಿಸಿದ್ದ ದಶರಥ ಇವರೆಲ್ಲರೂ ಪ್ರಕಾಶಿಸುವ ಹಂಸಯುಕ್ತವಾದ ವಿಮಾನಗಳಲ್ಲಿ ರಾಮನಿಗೆ ದರ್ಶನವನ್ನು ನೀಡಿದರು.

ತತೋಽಂತರಿಕ್ಷಂ ತತ್ಸರ್ವಂ ದೇವಗಂಧರ್ವಸಂಕುಲಮ್ ।
ಶುಶುಭೇ ತಾರಕಾಚಿತ್ರಂ ಶರದೀವ ನಭಸ್ತಳಮ್ ॥೨೦॥

ಆಗ ಆ ಅಂತರಿಕ್ಷವೆಲ್ಲವೂ ದೇವತೆಗಳಿಂದ ಮತ್ತು ಗಂಧರ್ವರಿಂದ ನಿಬಿಡವಾಗಿ ಶರತ್ಕಾಲದಲ್ಲಿ ನಕ್ಷತ್ರಗಳಿಂದ ಕಂಗೊಳಿಸುವ ಆಕಾಶದಂತೆ ಶೋಭಿಸಿತು.

ತತ ಉತ್ಥಾಯ ವೈದೇಹೀ ತೇಷಾಂ ಮಧ್ಯೇ ಯಶಸ್ವಿನೀ ।
ಉವಾಚ ವಾಕ್ಯಂ ಕಲ್ಯಾಣೀ ರಾಮಂ ಪೃಥುಲವಕ್ಷಸಮ್ ॥೨೧॥

ಆಗ ಅವರ ಮಧ್ಯೆ ಯಶಸ್ವಿಯೂ ಕಲ್ಯಾಣಿಯೂ ಆದ ವೈದೇಹಿಯು ಎದ್ದುನಿಂತು ವಿಶಾಲವಕ್ಷಸ್ಥಲವುಳ್ಳ ರಾಮನನ್ನು ಕುರಿತು ಮಾತನಾಡಿದಳು.

ರಾಜಪುತ್ರ ನ ತೇ ದೋಷಂ ಕರೋಮಿ ವಿದಿತಾ ಹಿ ತೇ ।
ಗತಿಃ ಸ್ತ್ರೀಣಾಂ ನರಾಣಾಂ ಚ ಶೃಣು ಚೇದಂ ವಚೋ ಮಮ ॥೨೨॥

ರಾಜಪುತ್ರನೇ, ನಿನ್ನಲ್ಲಿ ನಾನು ದೋಷವನ್ನು ಎಣಿಸುವುದಿಲ್ಲ. ಮನುಷ್ಯಸ್ತ್ರೀಯರ ಗತಿ ಏನೆಂಬುದು ನಿನಗೆ ತಿಳಿದ ವಿಷಯ. ನನ್ನ ಈ ಮಾತನ್ನು ಕೇಳು.

ಅಂತಶ್ಚರತಿ ಭೂತಾನಾಂ ಮಾತರಿಶ್ವಾ ಸದಾಗತಿಃ ।
ಸ ಮೇ ವಿಮುಂಚತು ಪ್ರಾಣಾನ್ ಯದಿ ಪಾಪಂ ಚರಾಮ್ಯಹಮ್ ॥

ಸದಾಗತಿಯಾದ ಮಾತರಿಶ್ವನು ಎಲ್ಲ ಜೀವರ ಒಳಗೆ ಸಂಚರಿಸುತ್ತಾನೆ. ನಾನು ಪಾಪವನ್ನು ಮಾಡಿದ್ದರೆ ಅವನು ನನ್ನ ಪ್ರಾಣವನ್ನು ಅಪಹಾರಮಾಡಲಿ.

ಅಗ್ನಿರಾಪಸ್ತಥಾಽಕಾಶಂ ಪೃಥಿವೀ ವಾಯುರೇವ ಚ ।
ವಿಮುಂಚಂತು ಮಮ ಪ್ರಾಣಾನ್ ಯದಿ ಪಾಪಂ ಚರಾಮ್ಯಹಮ್ ॥

ಅಗ್ನಿ, ಜಲ, ಆಕಾಶ, ಪೃಥಿವೀ ಮತ್ತು ವಾಯು ಇವು ನಾನು ಪಾಪವನ್ನು ಮಾಡಿದ್ದರೆ ನನ್ನ ಪ್ರಾಣಗಳನ್ನು ಅಪಹರಿಸಲಿ.

ಯಥಾಹಂ ತ್ವದೃತೇ ವೀರ ನಾನ್ಯಂ ಸ್ವಪ್ನೇಽಪ್ಯಚಿಂತಯಮ್ ।
ತಥಾ ಮೇ ದೇವನಿರ್ದಿಷ್ಟಸ್ತ್ವಮೇವ ಹಿ ಪತಿರ್ಭವ ॥೨೫॥

ವೀರನೇ, ನಾನು ಸ್ವಪ್ನದಲ್ಲಿಯೂ ಸಹ ನಿನ್ನನ್ನು ಬಿಟ್ಟು ಇನ್ನೊಬ್ಬ ಪುರುಷನನ್ನು ಚಿಂತಿಸದಿದ್ದೇ ಆದರೆ ನೀನೇ ನನಗೆ ಇನ್ನೊಂದು ಜನ್ಮದಲ್ಲಿಯೂ ದೇವನಿರ್ದಿಷ್ಟನಾದ ಪತಿಯಾಗು.

ತತೋऽಂತರಿಕ್ಷೇ ವಾಗಾಸೀತ್ ಸುಭಗಾ ಲೋಕಸಾಕ್ಷಿಣೀ ।
ಪುಣ್ಯಾ ಸಂಹರ್ಷಣೀ ತೇಷಾಂ ವಾನರಾಣಾಂ ಮಹಾತ್ಮನಾಮ್ ॥೨೬॥

ಆಗ ಅಂತರಿಕ್ಷದಲ್ಲಿ ಲೋಕಸಾಕ್ಷಿಯೂ, ಸುಂದರವೂ, ಪವಿತ್ರವೂ, ಮಹಾತ್ಮರಾದ ವಾನರರಿಗೆ ಸಂತೋಷವನ್ನು ಉಂಟುಮಾಡುವುದೂ ಆದ ವಾಣಿಯು ಉಂಟಾಯಿತು.

ವಾಯುಃ

ಭೋ ಭೋ ರಾಘವ ಸತ್ಯಂ ವೈ ವಾಯುರಸ್ಮಿ ಸದಾಗತಿಃ ।
ಅಪಾಪಾ ಮೈಥಿಲೀ ರಾಜನ್ ಸಂಗಚ್ಛ ಸಹ ಭಾರ್ಯಯಾ ॥೨೭॥

ವಾಯು– ಎಲೈ ರಾಘವನೇ, ನಾನು ಸದಾಗತಿಯಾದ ವಾಯುವಾಗಿದ್ದೇನೆ. ಮೈಥಿಲಿಯು ಪಾಪರಹಿತಳು ಎಂಬುದು ಸತ್ಯವಾದ ವಿಷಯ. ರಾಜನೇ, ಪತ್ನಿಯ ಜೊತೆಯಲ್ಲಿ ಸಮಾಗಮವನ್ನು ಹೊಂದು.

ಅಗ್ನಿಃ

ಅಹಮಂತಃ ಶರೀರಸ್ಥೋ ಭೂತಾನಾಂ ರಘುನಂದನ ।
ಸುಸೂಕ್ಷ್ಮಮಪಿ ಕಾಕುತ್ಸ್ಥ ಮೈಥಿಲೀ ನಾಪರಾಧ್ಯತಿ ॥೨೮॥

ಅಗ್ನಿ– ರಘುನಂದನನೇ, ನಾನು ಎಲ್ಲಾ ಪ್ರಾಣಿಗಳ ಶರೀರದ ಒಳಗೆ ಇರುವ ಅಗ್ನಿ. ಕಾಕುತ್ಸ್ಥನೇ, ಮೈಥಿಲಿಯು ಅತ್ಯಂತ ಸೂಕ್ಷ್ಮವಾದ ಅಪರಾಧವನ್ನೂ ಸಹ ಮಾಡಿಲ್ಲ.

ವರುಣಃ

ರಸಾ ವೈ ಮತ್ಸಕೂತಾ ಹಿ ಭೂತದೇಹೇಷು ರಾಘವ ।
ಅಹಂ ವೈ ತ್ವಾಂ ಪ್ರಬ್ರವೀಮಿ ಮೈಥಿಲೀ ಪ್ರತಿಗೃಹ್ಯತಾಮ್ ॥೨೯॥

ವರುಣ– ಎಲೈ ರಾಘವನೇ, ಪ್ರಾಣಿಗಳ ಶರೀರಗಳಲ್ಲಿ ರಸಗಳು ನನ್ನಿಂದ ಉಂಟಾಗುತ್ತವೆ. ನಾನು ವಿಶ್ವಾಸದಿಂದ ಹೇಳುತ್ತಿದ್ದೇನೆ ಮೈಥಿಲಿಯನ್ನು ಸ್ವೀಕರಿಸು.

ಯಮಃ

ಧರ್ಮೋಽಹಮಸ್ಮಿ ಕಾಕುತ್ಸ್ಥ ಸಾಕ್ಷೀ ಲೋಕಸ್ಯ ಕರ್ಮಣಾಮ್ ।
ಶುಭಾಶುಭಾನಾಂ ಸೀತೇಯಮಪಾಪಾ ಪ್ರತಿಗೃಹ್ಯತಾಮ್ ॥೩೦॥

ಯಮ– ಕಾಕುತ್ಸ್ಥನೇ, ನಾನು ಸರ್ವಲೋಕದ ಶುಭಾಶುಭ ಕರ್ಮಸಾಕ್ಷಿಯಾದ ಯಮ. ಸೀತೆಯು ಪಾಪರಹಿತಳು. ಇವಳನ್ನು ಸ್ವೀಕರಿಸು.

ಬ್ರಹ್ಮಾ

ಪುತ್ರ ನೈತದಿಹಾಶ್ಚರ್ಯಂ ತ್ವಯಿ ರಾಜರ್ಷಿಧರ್ಮಣಿ ।
ಸಾಧೋ ಸದ್ವೃತ್ತ ಕಾಕುತ್ಸ್ಥ ಶೃಣು ಚೇದಂ ವಚೋ ಮಮ ॥೩೧॥

ಬ್ರಹ್ಮ– ಪುತ್ರನೇ, ರಾಜರ್ಷಿಧರ್ಮವನ್ನು ಅನುಸರಿಸುವ ನಿನ್ನಲ್ಲಿ ಇದು ಆಶ್ಚರ್ಯವಲ್ಲ. ಎಲೈ ಸಾಧುವೇ, ಸದ್ವೃತ್ತನಾದ ಕಾಕುತ್ಸ್ಥನೇ, ನನ್ನ ಈ ಮಾತನ್ನು ಕೇಳು.

ಶತ್ರುರೇಷ ತ್ವಯಾ ವೀರ ದೇವಗಂಧರ್ವಭೋಗಿನಾಮ್ ।
ಯಕ್ಷಾಣಾಂ ದಾನವಾನಾಂ ಚ ಮಹರ್ಷೀಣಾಂ ಚ ಪಾತಿತಃ ॥೩೨॥

ಎಲೈ ವೀರನೇ, ದೇವಗಂಧರ್ವಸರ್ಪಗಳಿಗೂ, ಯಕ್ಷದಾನವಮಹರ್ಷಿಗಳಿಗೂ ಶತ್ರುವಾದ ಇವನು ನಿನ್ನಿಂದ ಹತನಾಗಿದ್ದಾನೆ.

ಅವಧ್ಯಃ ಸರ್ವಭೂತಾನಾಂ ಮತ್ಪ್ರಸಾದಾತ್ ಪುರಾಽಭವತ್ ।
ಕಸ್ಮಾಚ್ಚಿತ್ ಕಾರಣಾತ್ ಪಾಪಃ ಕಶ್ಚಿತ್ ಕಾಲಮುಪೇಕ್ಷಿತಃ ॥೩೩॥

ಅವನು ಹಿಂದೆ ನನ್ನ ವರದಿಂದ ಎಲ್ಲ ಭೂತಗಳಿಂದಲೂ ಅವಧ್ಯನಾಗಿದ್ದನು. ಯಾವುದೋ ಕಾರಣದಿಂದ ಪಾಪವನ್ನು ಮಾಡಿದ ಅವನು ಸ್ವಲ್ಪಕಾಲದವರೆಗೆ ಉಪೇಕ್ಷೆ ಮಾಡಲ್ಪಟ್ಟನು.

ವಧಾರ್ಥಮಾತ್ಮನಸ್ತೇನ ಹೃತಾ ಸೀತಾ ದುರಾತ್ಮನಾ ।
ನಳಕೂಬರಶಾಪೇನ ರಕ್ಷಾ ಚಾಸ್ಯಾಃ ಕೃತಾ ಮಯಾ ॥೩೪॥

ಆ ದುರಾತ್ಮನು ತನ್ನ ವಧೆಯನ್ನು ಸಂಪಾದಿಸಿಕೊಳ್ಳುವುದಕ್ಕಾಗಿಯೇ ಸೀತೆಯನ್ನು ಅಪಹರಿಸಿದನು. ನಳಕೂಬರಶಾಪದ ಮೂಲಕ ನಾನು ಈ ಸೀತೆಯ ರಕ್ಷಣೆಯನ್ನು ಮಾಡಿದ್ದೇನೆ.

ಯದಿ ಹ್ಯಕಾಮಾಂ ಸೇವೇತ ಸ್ತ್ರಿಯಮನ್ಯಾಮಪಿ ಧ್ರುವಮ್ ।
ಶತಧಾಽಸ್ಯ ಫಲೇನ್ಮೂರ್ಧಾ ಇತ್ಯುಕ್ತಃ ಸೋಽಭವತ್ ಪುರಾ ॥೩೫॥

ನೀನು ಕಾಮರಹಿತಳಾದ ಅನ್ಯಸ್ತ್ರೀಯನ್ನು ಸೇವಿಸಿದರೆ ನಿನ್ನ ತಲೆಯು ನೂರು ಹೋಳಾಗುವುದು ಎಂದು ಅವನು ಹಿಂದೆ ಶಪಿಸಲ್ಪಟ್ಟಿದ್ದನು.

ನಾತ್ರ ಶಂಕಾ ತ್ವಯಾ ಕಾರ್ಯಾ ಪ್ರತೀಚ್ಛೇಮಾಂ ಮಹಾದ್ಯುತೇ ।
ಕೃತಂ ತ್ವಯಾ ಮಹತ್ಕಾರ್ಯಂ ದೇವಾನಾಮಮರಪ್ರಭ ॥೩೬॥

ಮಹಾದ್ಯುತಿಯೇ, ಇವಳ ವಿಷಯದಲ್ಲಿ ಶಂಕಿಸಬೇಡ. ಇವಳನ್ನು ಸ್ವೀಕರಿಸು. ಅಮರಪ್ರಭನೇ, ನೀನು ದೇವತೆಗಳಿಗೆ ದೊಡ್ಡ ಉಪಕಾರವನ್ನು ಮಾಡಿದ್ದೀಯೆ.

ದಶರಥಃ

ಪ್ರೀತೋಽಸ್ಮಿ ವತ್ಸ ಭದ್ರಂ ತೇ ಪಿತಾ ದಶರಥೋಽಸ್ಮಿ ತೇ ।
ಅನುಜಾನಾಮಿ ರಾಜ್ಯಂ ಚ ಪ್ರಶಾಧಿ ಪುರುಷೋತ್ತಮ ॥೩೭॥

ದಶರಥ– ಮಗು ನಾನು ನಿನಗೆ ಪ್ರೀತನಾಗಿದ್ದೇನೆ. ನಿನಗೆ ಮಂಗಳವಾಗಲಿ. ನಾನು ನಿನ್ನ ತಂದೆಯಾದ ದಶರಥ. ನಾನು ನಿನಗೆ ರಾಜ್ಯವನ್ನಾಳಲು ಅನುಮತಿಯನ್ನು ನೀಡಿದ್ದೇನೆ. ಪುರುಷೋತ್ತಮನೇ, ನೀನು ರಾಜ್ಯವನ್ನು ಆಳುವವನಾಗು.

ರಾಮಃ

ಅಭಿವಾದಯೇ ತ್ವಾಂ ರಾಜೇಂದ್ರ ಯದಿ ತ್ವಂ ಜನಕೋ ಮಮ ।
ಗಮಿಷ್ಯಾಮಿ ಪುರೀಂ ರಮ್ಯಾಮಯೋಧ್ಯಾಂ ಶಾಸನಾತ್ ತವ ॥೩೮॥

ರಾಮ– ರಾಜೇಂದ್ರನೇ, ನೀನು ನನ್ನ ತಂದೆಯಾಗಿದ್ದರೆ ನಿನಗೆ ನಮಸ್ಕಾರವನ್ನು ಮಾಡುತ್ತಿದ್ದೇನೆ. ನಿನ್ನ ಅಪ್ಪಣೆಯಂತೆ ನಾನು ಸುಂದರವಾದ ಅಯೋಧ್ಯಾ ಪಟ್ಟಣಕ್ಕೆ ಹೋಗುವೆನು.

ಮಾರ್ಕಂಡೇಯಃ

ತಮುವಾಚ ಪಿತಾ ಭೂಯಃ ಪ್ರಹೃಷ್ಟೋ ಭರತರ್ಷಭ ।
ಗಚ್ಛಾಯೋಧ್ಯಾಂ ಪ್ರಶಾಧೀತಿ ರಾಮಂ ರಕ್ತಾಂತಲೋಚನಮ್ ॥೩೯॥

ಮಾರ್ಕಂಡೇಯರು– ಎಲೈ ಭರತರ್ಷಭನೇ, ಆಗ ಸಂತೋಷಗೊಂಡ ಆ ತಂದೆಯು ರಕ್ತಾಂತಲೋಚನನಾದ ರಾಮನನ್ನು ಕುರಿತು ಪುನಃ ಅಯೋಧ್ಯೆಗೆ ಹೋಗಿ ರಾಜ್ಯವನ್ನಾಳು ಎಂದು ಹೇಳಿದನು.

ಮಾರ್ಕಂಡೇಯಃ

ತತೋ ದೇವಾನ್ ನಮಸ್ಕೃತ್ಯ ಸುಹೃದ್ಭಿರಭಿನಂದಿತಃ ।
ಮಹೇಂದ್ರ ಇವ ಪೌಲೋಮ್ಯಾ ಭಾರ್ಯಯಾ ಸ ಸಮೇಯಿವಾನ್ ॥

ಮಾರ್ಕಂಡೇಯ– ಆಗ ರಾಮನು ದೇವತೆಗಳಿಗೆ ನಮಸ್ಕರಿಸಿ ಸುಹೃದರಿಂದ ಅಭಿನಂದಿತನಾಗಿ ಇಂದ್ರನು ಶಚಿಯಿಂದ ಸಮಾಗಮವನ್ನು ಹೊಂದಿದಂತೆ ಪತ್ನಿಯಾದ ಸೀತೆಯ ಸಮಾಗಮ ಹೊಂದಿದನು.

ತತೋ ವರಂ ದದೌ ತಸ್ಮೈ ಹ್ಯವಿಂಧ್ಯಾಯ ಪರಂತಪಃ ।
ತ್ರಿಜಟಾಂ ಚಾರ್ಥಮಾನಾಭ್ಯಾಂ ಯೋಜಯಾಮಾಸ ರಾಕ್ಷಸೀಮ್॥೪೧॥

ಪರಂತಪನಾದ ರಾಮನು ಆಗ ಅವಿಂಧ್ಯನಿಗೆ ವರವನ್ನು ನೀಡಿದನು. ರಾಕ್ಷಸಿಯಾದ ತ್ರಿಜಟೆಗೂ ಅರ್ಥಮಾನಗಳನ್ನು ನೀಡಿದನು.

ತಮುವಾಚ ತತೋ ಬ್ರಹ್ಮಾ ದೇವೈಃ ಶಕ್ರಪುರೋಗಮೈಃ ।
ಕೌಸಲ್ಯಾಮಾತರಿಷ್ಟಾಂಸ್ತೇ ವರಾನದ್ಯ ದದಾನಿ ಕಾನ್ ॥೪೨॥

ಆಗ ಇಂದ್ರಾದಿ ದೇವತೆಗಳಿಂದ ಸಹಿತನಾದ ಬ್ರಹ್ಮನು ರಾಮನನ್ನು ಕುರಿತು ಕೌಸಲ್ಯಾಪುತ್ರನೇ, ನಿನಗೆ ಈ ದಿನ ನಾನು ಯಾವ ಇಷ್ಟವಾದ ವರಗಳನ್ನು ಕೊಡಲಿ ಎಂದು ಕೇಳಿದನು.

ಮಾರ್ಕಂಡೇಯಃ

ವವ್ರೇ ರಾಮಃ ಸ್ಥಿತಿಂ ಧರ್ಮೇ ಶತ್ರುಭಿಶ್ಚಾಪರಾಜಯಮ್ ।
ರಾಕ್ಷಸೈರ್ನಿಹತಾನಾಂ ಚ ವಾನರಾಣಾಂ ಸಮುದ್ಭವಮ್ ॥೪೩॥

ಮಾರ್ಕಂಡೇಯ– ರಾಮನು ಸರ್ವದಾ ಧರ್ಮದಲ್ಲಿ ಸ್ಥಿತಿಯನ್ನೂ, ಶತ್ರುಗಳಿಂದ ಅಪರಾಜಯವನ್ನೂ, ರಾಕ್ಷಸರಿಂದ ನಿಹತರಾದ ವಾನರರ ಪುನರುತ್ಥಾನವನ್ನೂ ವರವಾಗಿ ಬೇಡಿದನು.

ತತಸ್ತೇ ಬ್ರಹ್ಮಣಾ ಪ್ರೋಕ್ತೇ ತಥೇತಿ ವಚನೇ ತದಾ ।
ಸಮುತ್ತಸ್ಥುರ್ಮಹಾರಾಜ ವಾನರಾ ಲಬ್ಧಚೇತಸಃ ॥೪೪॥

ಆಗ ಬ್ರಹ್ಮನು ಹಾಗೆಯೇ ಆಗಲಿ ಎಂದು ಹೇಳುತ್ತಿರಲು ಎಲೈ ಮಹಾರಾಜನೇ, ಎಲ್ಲ ಕಪಿಗಳೂ ಲಬ್ಧಚೇತನರಾಗಿ ಎದ್ದರು.

ಸೀತಾ ಚಾಪಿ ಮಹಾಭಾಗಾ ವರಂ ಹನುಮತೇ ದದೌ ।
ರಾಮಕೀರ್ತ್ಯಾ ಸಮಂ ಪುತ್ರ ಜೀವಿತಂ ತೇ ಭವಿಷ್ಯತಿ ॥೪೫॥

ಮಹಾನುಭಾವಳಾದ ಸೀತೆಯೂ ಸಹ ಹನುಮಂತನಿಗೆ ಪುತ್ರನೇ, ರಾಮನ ಕೀರ್ತಿ ಎಲ್ಲಿಯವರೆಗೆ ಇರುವುದೋ ಅಲ್ಲಿಯವರೆಗೆ ನೀನು ಜೀವಿಸಿರುವಿ ಎಂದು ವರವನ್ನು ಕೊಟ್ಟಳು.

ದಿವ್ಯಾಸ್ತಾ ವುಪಭೋಗಾಶ್ಚ ಮತ್ಪ್ರಸಾದಕೃತಾಃ ಸದಾ ।
ಉಪಸ್ಥಾಸ್ಯಂತಿ ಹನುಮನ್ನಿತಿ ಸ್ಮ ಹರಿಲೋಚನ ॥೪೬॥

ಹರಿಲೋಚನನಾದ ಹನುಮಂತನೇ, ನನ್ನ ಅನುಗ್ರಹದಿಂದ ದಿವ್ಯವಾದ ಉಪಭೋಗಗಳು ಯಾವಾಗಲೂ ನಿನ್ನನ್ನು ಸೇವಿಸುತ್ತವೆ ಎಂದೂ ಹೇಳಿದಳು.

ತತಸ್ತೇ ಪ್ರೇಕ್ಷಮಾಣಾನಾಂ ತೇಷಾಮಕ್ಲಿಷ್ಟಕರ್ಮಣಾಮ್ ।
ಅಂತರ್ಧಾನಂ ಯಯುರ್ದೇವಾಃ ಸರ್ವೇ ಶಕ್ರಪುರೋಗಮಾಃ ॥೪೭॥

ಅನಂತರ ಅಕ್ಲಿಷ್ಟಕಾರಿಗಳಾದ ಅವರು ನೋಡುತ್ತಿದ್ದಂತೆಯೇ, ಇಂದ್ರನೇ ಮೊದಲಾದ ಎಲ್ಲಾ ದೇವತೆಗಳೂ ಅಂತರ್ಧಾನವನ್ನು ಹೊಂದಿದರು.

ದೃಷ್ಟ್ವಾ ರಾಮಂ ತು ಜಾನಕ್ಯಾ ಸಂಗತಂ ಶಕ್ರಸಾರಥಿಃ ।
ಉವಾಚ ಪರಮಪ್ರೀತಃ ಸುಹೃನ್ಮಧ್ಯ ಇದಂ ವಚಃ ॥೪೮॥

ಜಾನಕಿಯ ಜೊತೆಯಲ್ಲಿ ಸಮೇತನಾದ ರಾಮನನ್ನು ನೋಡಿ ಇಂದ್ರ ಸಾರಥಿಯಾದ ಮಾತಲಿಯು ಪರಮಸಂತೋಷದಿಂದ ಸುಹೃಜ್ಜನರ ಮಧ್ಯೆ ಈ ಮಾತನ್ನು ಆಡಿದನು.

ದೇವಗಂಧರ್ವಯಕ್ಷಾಣಾಂ ಮಾನುಷಾಸುರಭೋಗಿನಾಮ್ ।
ಅಪನೀತಂ ತ್ವಯಾ ದುಃಖಮಿದಂ ಸತ್ಯಪರಾಕ್ರಮ ॥೪೯॥

ಎಲೈ ಸತ್ಯಪರಾಕ್ರಮನೇ, ನೀನು ದೇವಗಂಧರ್ವಯಕ್ಷರಿಗೂ, ಮನುಷ್ಯ ಅಸುರ ಸರ್ಪಗಳಿಗೂ ಉಂಟಾಗಿದ್ದ ಈ ದುಃಖವನ್ನು ಪರಿಹರಿಸಿದ್ದೀಯೆ.

ಸದೇವಾಸುರಗಂಧರ್ವಾ ಯಕ್ಷರಾಕ್ಷಸಪನ್ನಗಾಃ ।
ಕಥಯಿಷ್ಯಂತಿ ಲೋಕಾಸ್ತಾ ಂ ಯಾವದ್ ಭೂಮಿರ್ಧರಿಷ್ಯತಿ ॥೫೦॥

ಎಲ್ಲಿಯವರೆಗೆ ಭೂಮಿಯು ಇರುತ್ತದೆಯೋ ಅಲ್ಲಿಯವರೆಗೆ ದೇವಾಸುರ ಗಂಧರ್ವರೂ, ಯಕ್ಷಾಸುರಪನ್ನಗರೂ ಮತ್ತು ಎಲ್ಲ ಲೋಕಗಳೂ ನಿನ್ನ ಕೀರ್ತಿಯನ್ನು ಕೊಂಡಾಡುವವು.

ಮಾರ್ಕಂಡೇಯಃ

ಇತ್ಯೇವಮುಕ್ತಾ ತ್ವನುಜ್ಞಾಪ್ಯ ರಾಮಂ ಶಸ್ತ್ರಭೃತಾಂ ವರಮ್ ।
ಸಂಪೂಜ್ಯಾಪಾಕ್ರಮತ್ ತೇನ ರಥೇನಾದಿತ್ಯವರ್ಚಸಾ ॥೫೧॥

ಮಾರ್ಕಂಡೇಯ– ಹೀಗೆ ಹೇಳಿ ಶಸ್ತ್ರಧಾರಿಗಳಲ್ಲಿ ಶ್ರೇಷ್ಠನಾದ ರಾಮನ ಅಪ್ಪಣೆಯನ್ನು ಪಡೆದು ರಾಮನನ್ನು ಪೂಜಿಸಿ ಆದಿತ್ಯಪ್ರಕಾಶವುಳ್ಳ ರಥಸಹಿತನಾಗಿ ಅವನು ಅಲ್ಲಿಂದ ಹೊರಟು ಹೋದನು.

ತತಃ ಸೀತಾಂ ಪುರಸ್ಕೃತ್ಯ ರಾಮಃ ಸೌಮಿತ್ರಿಣಾ ಸಹ ।
ಸುಗ್ರೀವಪ್ರಮುಖೈಶ್ಚೈವ ಸಹಿತಃ ಸರ್ವವಾನರೈಃ ॥೫೨॥

ವಿಧಾಯ ರಕ್ಷಾಂ ಲಂಕಾಯಾಂ ವಿಭೀಷಣಪುರಸ್ಕೃತಃ ।
ಸಂತತಾರ ಪುನಸ್ತೇನ ಸೇತುನಾ ಮಕರಾಲಯಮ್ ॥೫೩॥

ಅನಂತರ ರಾಮನು ಸೀತೆಯನ್ನು ಮುಂದೆ ಮಾಡಿಕೊಂಡು ಲಕ್ಷ್ಮಣನಿಂದ ಮತ್ತು ಸುಗ್ರೀವ ಮೊದಲಾದ ಸರ್ವವಾನರರಿಂದಲೂ ಸಹಿತನಾಗಿ ವಿಭೀಷಣನನ್ನು

ಮುಂದಿಟ್ಟು ಲಂಕೆಯನ್ನು ರಕ್ಷಣೆ ಮಾಡಿ ಪುನಃ ಅದೇ ಸೇತುವೆಯಿಂದ ಮಕರಾಲಯವಾದ ಸಮುದ್ರವನ್ನು ದಾಟಿದನು.

ಪುಷ್ಪಕೇಣ ವಿಮಾನೇನ ಖೇಚರೇಣ ವಿರಾಜತಾ ।
ಕಾಮಗೇನ ಯಥಾಮುಖ್ಯೈರಮಾತ್ಯೈಃ ಸಂವೃತೋ ವಶೀ ॥೫೪॥

ತತಸ್ತೀರೇ ಸಮುದ್ರಸ್ಯ ಯತ್ರ ಶಿಶ್ಯೇ ಸ ಪಾರ್ಥಿವಃ ।
ತತ್ರೈವೋವಾಸ ಧರ್ಮಾತ್ಮಾ ಸಹಿತಃ ಸರ್ವವಾನರೈಃ ॥೫೫॥

ಕಾಮಗಾಮಿಯಾದ ಪ್ರಕಾಶಮಾನವಾದ ಆಕಾಶದಲ್ಲಿ ಸಂಚರಿಸುವ ಪುಷ್ಪಕ ವಿಮಾನದಲ್ಲಿ ಮುಖ್ಯ ಅಮಾತ್ಯರ ಜೊತೆಯಲ್ಲಿ ಕೂಡಿದವನಾಗಿ ಸಮುದ್ರ ತೀರಕ್ಕೆ ಬಂದು ಮೊದಲು ಎಲ್ಲಿ ದರ್ಭಶಯನನಾಗಿ ಇದ್ದನೋ ಅಲ್ಲಿಯೇ ಆ ಧರ್ಮಾತ್ಮನಾದ ಸರ್ವವಶಿಯಾದ ರಾಜನಾದ ರಾಮನು ಎಲ್ಲ ವಾನರರ ಜೊತೆಯಲ್ಲಿ ವಾಸವನ್ನು ಮಾಡಿದನು.

ಅಥೈನಾನ್ ರಾಘವಃ ಕಾಲೇ ಸಮಾನೀಯಾಭಿಪೂಜ್ಯ ಚ ।
ವಿಸರ್ಜಯಾಮಾಸ ತದಾ ರತ್ನೈಃ ಸಂತೋಷ್ಯ ಸರ್ವಶಃ ॥೫೬॥

ಅನಂತರ ಯೋಗ್ಯಕಾಲದಲ್ಲಿ ರಾಮನು ಅವರೆಲ್ಲರನ್ನೂ ಕರೆದು ಪೂಜಿಸಿ ಅನೇಕ ವಿಧವಾದ ರತ್ನಗಳಿಂದ ಸಂತೋಷಪಡಿಸಿ ಎಲ್ಲರನ್ನೂ ಬೀಳ್ಕೊಟ್ಟನು.

ಗತೇಷು ತೇಷು ಸರ್ವೇಷು (ವಾನರೇಂದ್ರೇಷು)
ಗೋಪುಚ್ಛರ್ಕ್ಷೇಷು ತೇಷು ಚ ।
ಸುಗ್ರೀವಸಹಿತೋ ರಾಮಃ ಕಿಷ್ಕಿಂಧಾಂ ಪುನರಾಗಮತ್ ॥೫೭॥

ಎಲ್ಲಾ ವಾನರರು ಗೋಪುಚ್ಛರು ಮತ್ತು ಋಕ್ಷರು ಹೊರಟು ಹೋದಮೇಲೆ ರಾಮನು ಸುಗ್ರೀವ ಸಹಿತನಾಗಿ ಪುನಃ ಕಿಷ್ಕಿಂಧಾ ಪಟ್ಟಣಕ್ಕೆ ಬಂದನು.

ವಿಭೀಷಣೇನಾನುಗತಃ ಸುಗ್ರೀವಸಹಿತಸ್ತದಾ ।
ಪುಷ್ಪಕೇಣ ವಿಮಾನೇನ ವೈದೇಹ್ಯಾ ದರ್ಶಯನ್‌ವನಮ್ ॥೫೮॥

ಕಿಷ್ಕಿಂಧಾಂ ತು ಸಮಾಸಾದ್ಯ ರಾಮಃ ಪ್ರಹರತಾಂ ವರಃ ।
ಅಂಗದಂ ಕೃತಕರ್ಮಾಣಂ ಯೌವರಾಜ್ಯೇऽಭ್ಯಷೇಚಯತ್ ॥೫೯॥

ವಿಭೀಷಣನಿಂದ ಹಿಂಬಾಲಿಸಲ್ಪಟ್ಟು ಸುಗ್ರೀವ ಸಹಿತನಾಗಿ ಪುಷ್ಪಕವಿಮಾನದಲ್ಲಿ ಕುಳಿತು ಜಾನಕಿಗೆ ವನದ ಸೌಂದರ್ಯವನ್ನು ತೋರಿಸುತ್ತಾ ಶಸ್ತ್ರಧಾರಿಗಳಲ್ಲಿ ಶ್ರೇಷ್ಠನಾದ ರಾಮನು ಕಿಷ್ಕಿಂಧೆಯನ್ನು ತಲುಪಿ ತನ್ನ ಸೇವೆಯನ್ನು ಮಾಡಿದ ಅಂಗದನಿಗೆ ಯೌವರಾಜ್ಯದಲ್ಲಿ ಅಭಿಷೇಕವನ್ನು ಮಾಡಿದನು.

ತತಸ್ತೈರೇವ ಸಹಿತೋ ರಾಮಃ ಸೌಮಿತ್ರಿಣಾ ಸಹ ।
ಯಥಾಗತೇನ ಮಾರ್ಗೇಣ ಪ್ರಯಯೌ ಸ್ವಪುರಂ ಪ್ರತಿ ॥೬೦॥

ಅನಂತರ ಅವರಿಂದಲೂ ಮತ್ತು ಲಕ್ಷ್ಮಣನಿಂದಲೂ ಕೂಡಿಕೊಂಡು ತಾನು ಬಂದ ಮಾರ್ಗದಿಂದಲೇ ರಾಮನು ತನ್ನ ಪಟ್ಟಣವಾದ ಅಯೋಧ್ಯೆಗೆ ಹೊರಟನು.

ಅಯೋಧ್ಯಾಂ ಸ ಸಮಾಸಾದ್ಯ ಪುರೀಂ ರಾಷ್ಟ್ರಪತಿಸ್ತತಃ ।
ಭರತಾಯ ಹನೂಮಂತಂ ದೂತಂ ಪ್ರಾಸ್ಥಾಪಯತ್ ತದಾ ॥೬೧॥

ರಾಷ್ಟ್ರಪತಿಯಾದ ಅವನು ಅಯೋಧ್ಯೆಯನ್ನು ತಲುಪಿ ಹನುಮಂತನನ್ನು ತನ್ನ ದೂತನನ್ನಾಗಿ ಭರತನ ಬಳಿಗೆ ಕಳುಹಿಸಿದನು.

ಲಕ್ಷಯಿತ್ವೇಂಗಿತಂ ಸರ್ವಂ ಪ್ರಿಯಂ ತಸ್ಯೈ ನಿವೇದ್ಯ ವೈ ।
ವಾಯುಪುತ್ರೇ ಪುನಃ ಪ್ರಾಪ್ತೇ ನಂದಿಗ್ರಾಮಮುಪಾಗಮತ್ ॥೬೨॥

ಹನುಮಂತನು ಅವನ ಇಂಗಿತವನ್ನು ಗಮನಿಸಿ ಅವನಿಗೆ ಪ್ರಿಯವಾದ ಎಲ್ಲ ವಾರ್ತೆಯನ್ನೂ ಹೇಳಿ ರಾಮನ ಬಳಿಗೆ ಹಿಂದಿರುಗಿದ ಮೇಲೆ ರಾಮನು ನಂದಿಗ್ರಾಮವನ್ನು ಪ್ರವೇಶಿಸಿದನು.

ಸ ತತ್ರ ಮಲದಿಗ್ಧಾಂಗಂ ಭರತಂ ಚೀರವಾಸಸಮ್ ।
ನಂದಿಗ್ರಾಮಗತಂ ರಾಮಃ ಸಶತ್ರುಘ್ನಂ ಸ ರಾಘವಃ ।
ಅಗ್ರತಃ ಪಾದುಕೇ ಕೃತ್ವಾ ದದರ್ಶಾಸೀನಮಾಸನೇ ॥೬೩॥

ಅಲ್ಲಿ ರಘುವಂಶೋತ್ಪನ್ನನಾದ ಆ ರಾಮನು ಕೊಳೆಯಿಂದ ಕೂಡಿದ ಶರೀರವುಳ್ಳ ನಾರುಮಡಿಯನ್ನು ಧರಿಸಿದ ಶತ್ರುಘ್ನಸಹಿತನಾದ ಭರತನು ತನ್ನ ಪಾದುಕೆಗಳನ್ನು ಶ್ರೇಷ್ಠವಾದ ಆಸನದಲ್ಲಿ ಇಟ್ಟು ಮುಂದೆ ಕುಳಿತಿರುವುದನ್ನು ನೋಡಿದನು.

ಸಂಗತೋ ಭರತೇನಾಥ ಶತ್ರುಘ್ನೇನ ಚ ವೀರ್ಯವಾನ್ ।
ರಾಘವಃ ಸಹಸೌಮಿತ್ರಿರ್ಮುಮುದೇ ಭರತರ್ಷಭ ॥೬೪॥

ಎಲೈ ಭರತರ್ಷಭನೇ, ಪರಾಕ್ರಮಶಾಲಿಯಾದ ರಾಘವನು ಶತ್ರುಘ್ನನಿಂದಲೂ ಮತ್ತು ಭರತನಿಂದಲೂ ಸಂಗತನಾಗಿ ಲಕ್ಷ್ಮಣನ ಜೊತೆಯಲ್ಲಿ ಬಹಳ ಸಂತೋಷವನ್ನು ಪಟ್ಟನು.

ತತೋ ಭರತಶತ್ರುಘ್ನೌ ಸಮೇತೌ ಗುರುಣಾ ತದಾ ।
ವೈದೇಹ್ಯಾ ದರ್ಶನೇನೋಭೌ ಪ್ರಹರ್ಷಂ ಸಮವಾಪತುಃ ॥೬೫॥

ಆಗ ಭರತಶತ್ರುಘ್ನರು ತಮ್ಮ ಹಿರಿಯ ಅಣ್ಣನ ಜೊತೆಯಲ್ಲಿ ಸಮಾಗಮವನ್ನು ಹೊಂದಿ ಸೀತೆಯ ದರ್ಶನವನ್ನು ಮಾಡಿ ಬಹಳ ಸಂತೋಷವನ್ನು ಹೊಂದಿದರು.

ತಸ್ಯೈ ತದ್ ಭರತೋ ರಾಜ್ಯಮಾಗತಾಯಾತಿಸತ್ಕೃತಮ್ ।
ನ್ಯಾಸಂ ನಿರ್ಯಾತಯಾಮಾಸ ಯುಕ್ತಃ ಪರಮಯಾ ಮುದಾ ॥೬೬॥

ಲಂಕಾಪಟ್ಟಣದಿಂದ ಹಿಂದಿರುಗಿದ ರಾಮನಿಗೆ ಭರತನು ತನ್ನ ಬಳಿ ನ್ಯಾಸವಾಗಿ ಇಟ್ಟಿದ್ದ ಅತ್ಯಂತ ಸತ್ಕೃತವಾದ ಆ ರಾಜ್ಯವನ್ನು ಪರಮಸಂತೋಷದಿಂದ ಹಿಂದಿರುಗಿಸಿದನು.

ತತಸ್ತಂ ವೈಷ್ಣವೇ ಶೂರಂ ನಕ್ಷತ್ರೇಽಭಿಮತೇಽಹನಿ ।
ವಸಿಷ್ಠೋ ವಾಮದೇವಶ್ಚ ಸಹಿತಾವಭ್ಯಷಿಂಚತಾಮ್ ॥೬೭॥

ಅನಂತರ ಒಂದು ಶುಭದಿವಸದಲ್ಲಿ ವೈಷ್ಣವ ನಕ್ಷತ್ರವಾದ ಶ್ರವಣ ನಕ್ಷತ್ರದಲ್ಲಿ ಶೂರನಾದ ರಾಮನಿಗೆ ವಸಿಷ್ಠವಾಮದೇವರು ಸಹಿತರಾಗಿ ಅಭಿಷೇಕವನ್ನು ಮಾಡಿದರು.

ಸೋಽಭಿಷಿಕ್ತಃ ಕಪಿಶ್ರೇಷ್ಠಂ ಸುಗ್ರೀವಂ ಸಸುಹೃಜ್ಜನಮ್ ।
ವಿಭೀಷಣಂ ಚ ಪೌಲಸ್ತ್ಯಮನ್ವಜಾನಾದ್ ಗೃಹಾನ್ ಪ್ರತಿ ॥೬೮॥

ಅಭಿಷಿಕ್ತನಾದ ರಾಮನು ಕಪಿಶ್ರೇಷ್ಠನಾದ ಸುಗ್ರೀವನಿಗೂ ಸುಹೃಜ್ಜನರಿಗಳಿಗೂ ಪೌಲಸ್ತ್ಯನಾದ ವಿಭೀಷಣನಿಗೂ ತಮ್ಮ ಗೃಹಗಳಿಗೆ ಹಿಂದಿರುಗಲು ಅನುಮತಿಯನ್ನು ನೀಡಿದನು.

ಅಭ್ಯರ್ಚ್ಯ ವಿವಿಧೈರ್ಭೋಗೈಃ ಪ್ರೀತಿಯುಕ್ತೌ ಮುದಾ ಯುತೌ ।
ಸಮಾಧಾಯೇತಿಕರ್ತವ್ಯಂ ದುಃಖೇನ ವಿಸಸರ್ಜ ಹ ॥೬೯॥

ಸುಗ್ರೀವ ಮತ್ತು ವಿಭೀಷಣರನ್ನು ಅನೇಕ ವಿಧವಾದ ಭೋಗಗಳಿಂದ ಅರ್ಚಿಸಿ ಸಂತೋಷದಿಂದ ಕೂಡಿದವರನ್ನಾಗಿ ಮಾಡಿ ಅವರಿಗೆ ಸಮಾಧಾನವನ್ನು ಮಾಡಿ ಅವರ ಕರ್ತವ್ಯವನ್ನು ತಿಳಿಸಿ ದುಃಖದಿಂದ ಅವರನ್ನು ಬೀಳ್ಕೊಟ್ಟನು.

ಪುಷ್ಪಕಂ ಚ ವಿಮಾನಂ ತತ್ ಪೂಜಯಿತ್ವಾ ಸ ರಾಘವಃ ।
ಪ್ರಾದಾದ್ ವೈಶ್ರವಣಾಯೈವ ಪ್ರೀತ್ಯಾ ಸ ರಘುನಂದನಃ ॥೭೦॥

ರಘುನಂದನನಾದ ರಾಘವನು ಆ ಪುಷ್ಪಕವಿಮಾನವನ್ನು ಪೂಜಿಸಿ ಅದನ್ನು ಪ್ರೀತಿಯಿಂದ ಕುಬೇರನಿಗೇ ಹಿಂದಿರುಗಿಸಿದನು.

ತತೋ ದೇವರ್ಷಿಸಹಿತಃ ಸರಿತಂ ಗೋಮತೀಮನು ।
ದಶಾಶ್ವಮೇಧಾನಾಜಹ್ರೇ ಜಾರೂಥ್ಯಾಂ ಸ ನಿರರ್ಗಲಾನ್ ॥೭೧॥

ಅನಂತರ ಗೋಮತಿ ನದಿಯ ತೀರದಲ್ಲಿ ಜಾರುಥಿ ಎಂಬ ಸ್ಥಳದಲ್ಲಿ ದೇವರ್ಷಿ ಸಹಿತವಾಗಿ ನಿರ್ಮಲವಾದ ಹತ್ತು ಅಶ್ವಮೇಧ ಯಾಗವನ್ನು ಮಾಡಿದನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂಸಂಹಿತಾಯಾಂ ವೈಯಾಸಿಕ್ಯಾಂ
ವನಪರ್ವಣಿ ಶೀತ್ಯಧಿಕದ್ವಿಶತತಮೋऽಧ್ಯಾಯಃ ॥
॥ ಇತಿ ರಾಮೋಪಾಖ್ಯಾನಪರ್ವಣಿ ಶ್ರೀರಾಮಾಭಿಷೇಕೋ ನಾಮ
ಏಕೋನವಿಂಶೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವನಪರ್ವದಲ್ಲಿ ಇನ್ನೂರ ಎಂಬತ್ತನೆಯ
ಅಧ್ಯಾಯ ಮುಗಿಯಿತು.

★ ★ ★ ★

ಇನ್ನೂರ ಎಂಬತ್ತೊಂದನೆಯ ಅಧ್ಯಾಯ

ಮಾರ್ಕಂಡೇಯರಿಂದ ಯುಧಿಷ್ಠಿರನಿಗೆ ಸಮಾಧಾನ ವಚನಗಳು.

ಮಾರ್ಕಂಡೇಯಃ

ಏವಮೇತನ್ಮಹಾಬಾಹೋ ರಾಮೇಣಾಮಿತತೇಜಸಾ ।
ಪ್ರಾಪ್ತಂ ವ್ಯಸನಮತ್ಯುಗ್ರಂ ವನವಾಸಕೃತಂ ಪುರಾ ॥೧॥

ಮಾರ್ಕಂಡೇಯ– ಎಲೈ ಮಹಾಬಾಹುವೇ, ಹೀಗೆ ಅಮಿತಪರಾಕ್ರಮಿಯಾದ ರಾಮನು ಹಿಂದೆ ವನವಾಸವನ್ನು ಮಾಡಿ ಅತ್ಯುಗ್ರವಾದ ವ್ಯಸನವನ್ನು ಹೊಂದಿದನು.

ಮಾ ಶುಚಃ ಪುರುಷವ್ಯಾಘ್ರ ಕ್ಷತ್ರಿಯೋಽಸಿ ಪರಂತಪ ।
ಬಾಹುವೀರ್ಯಾಶ್ರಿತೇ ಮಾರ್ಗೇ ವರ್ತಸೇ ಪುರುಷರ್ಷಭ ।
ನ ಹಿ ತೇ ವೃಜಿನಂ ಕಿಂಚಿದ್ ವರ್ತತೇ ಪರಮಾಣ್ವಪಿ ॥೨॥

ಅಸ್ಮಿನ್ ಮಾರ್ಗೇ ನಿಷೀದೇಯುಃ ಸೇಂದ್ರಾ ಅಪಿ ಸುರಾಸುರಾಃ ॥೩॥

ಪುರುಷವ್ಯಾಘ್ರನೇ, ನೀನು ಶೋಕಪಡಬೇಡ. ಪರಂತಪನೇ, ನೀನು ಕ್ಷತ್ರಿಯನಾಗಿದ್ದೀಯೆ. ಪುರುಷರ್ಷಭನೇ, ನೀನು ಬಾಹುವೀರ್ಯವನ್ನು ಆಶ್ರಯಿಸಿದ ಮಾರ್ಗವನ್ನು ಅನುಸರಿಸುತ್ತಿದ್ದೀಯೆ ಮತ್ತು ನಿನ್ನಲ್ಲಿ ಪರಮಾಣುವಿನಷ್ಟೂ ಪಾಪವಿಲ್ಲ. ನೀನು ಹೋದ ಮಾರ್ಗದಲ್ಲಿ ಹೋಗಲು ಇಂದ್ರ ಮೊದಲಾದ ದೇವತೆಗಳೂ ಮತ್ತು ಅಸುರರೂ ಹೋಗಲು ಪ್ರಯತ್ನಪಟ್ಟಾರು.

ಸಂಹತ್ಯ ನಿಹತೋ ವೃತ್ರೋ ಮರುದ್ಭಿರ್ವಜ್ರಪಾಣಿನಾ ।
ನಮುಚಿಶ್ಚೈವ ದುರ್ಧರ್ಷೋ ದೀರ್ಘಜಿಹ್ವಾ ಚ ರಾಕ್ಷಸೀ ॥೪॥

ಇಂದ್ರನು ಮರುತ್ತುಗಳ ಜೊತೆಯಲ್ಲಿ ಸೇರಿಕೊಂಡು ವೃತ್ರನನ್ನು ಕೊಂದನು. ದುರ್ಧರ್ಷನಾದ ನಮುಚಿಯೂ ದೀರ್ಘಜಿಹ್ವ ಎಂಬ ರಾಕ್ಷಸಿಯೂ ಇಂದ್ರನಿಂದ ಹಾಗೆಯೇ ಕೊಲ್ಲಲ್ಪಟ್ಟರು.

ಸಹಾಯವತಿ ಸರ್ವಾರ್ಥಾಃ ಸಂತಿಷ್ಠಂತೀಹ ಸರ್ವಶಃ ।
ಕಿಂ ನು ತಸ್ಯಾಜಿತಂ ಸಂಖ್ಯೇ ಯಸ್ಯ ಭ್ರಾತಾ ಧನಂಜಯಃ ॥೫॥

ಸಹಾಯವುಳ್ಳವನಿಗೆ ಎಲ್ಲಾ ಅರ್ಥಗಳು ಎಲ್ಲ ಕಡೆಯಲ್ಲಿಯೂ ಸಿದ್ಧಿಸುತ್ತವೆ. ಯಾರಿಗೆ ಅರ್ಜುನನು ತಮ್ಮನಾಗಿದ್ದಾನೋ ಅವನು ಯುದ್ಧದಲ್ಲಿ ಗೆಲ್ಲದಿರುವುದು ಯಾವುದಿದೆ?

ಅಯಂ ಚ ಬಲಿನಾಂ ಶ್ರೇಷ್ಠೋ ಭೀಮೋ ಭೀಮಪರಾಕ್ರಮಃ ।
ಯುವಾನೌ ಚ ಮಹೇಷ್ವಾಸೌ ವೀರೌ ಮಾದ್ರವತೀಸುತೌ ।
ಏಭಿಃ ಸಹಾಯೈಃ ಕಸ್ಮಾತ್ ತ್ವಂ ವಿಷೀದಸಿ ಪರಂತಪ ॥೬॥

ಭೀಮ ಪರಾಕ್ರಮವುಳ್ಳ ಈ ಭೀಮನು ಬಲಿಷ್ಠರಲ್ಲಿ ಶ್ರೇಷ್ಠನಾದವನು. ಮಾದ್ರವತೀ ಸುತರಾದ ಯುವಕರಾದ ನಕುಲಸಹದೇವರು ಮಹಾಧನುರ್ಧಾರಿಗಳಾದ ವೀರರು. ಎಲೈ ಪರಂತಪನೇ, ಇವರ ಸಹಾಯದಿಂದ ಸಹಿತನಾದ ನೀನು ಏಕೆ ವಿಷಾದವನ್ನು ಪಡುತ್ತೀಯೆ?

ಯ ಇಮೇ ವಜ್ರಿಣಃ ಸೇನಾಂ ಜಯೇಯುಃ ಸಮರುದ್ಗಣಾಮ್ ।
ತ್ವಮಪ್ಯೇಭಿರ್ಮಹೇಷ್ವಾಸೈಃ ಸಹಾಯೈರ್ದೇವರೂಪಿಭಿಃ ॥೭॥

ವಿಜೇಷ್ಯಸೇ ರಣೇ ಸರ್ವಾನಮಿತ್ರಾನ್ ಭರತರ್ಷಭ ॥೮॥

ಇವರು ಮರುದ್ಗಣಗಳಿಂದ ಸಹಿತನಾದ ಇಂದ್ರನ ಸೈನ್ಯವನ್ನೂ ಗೆದ್ದಾರು. ಎಲೈ ಭರತರ್ಷಭನೇ, ನೀನೂ ಸಹ ದೇವರೂಪವುಳ್ಳ ಈ ಮಹೇಷ್ವಾಸರ ಸಹಾಯದಿಂದ ಯುದ್ಧದಲ್ಲಿ ಎಲ್ಲಾ ಶತ್ರುಗಳನ್ನೂ ಗೆಲ್ಲುವಿ.

ಇತಶ್ಚ ತ್ವಮಿಮಾಂ ಪಶ್ಯ ಸೈಂಧವೇನ ದುರಾತ್ಮನಾ ।
ಬಲಿನಾ ವೀರ್ಯಮತ್ತೇನ ಹೃತಾಮೇಭಿರ್ಮಹಾತ್ಮಭಿಃ ॥೯॥

ಆನೀತಾಂ ದ್ರೌಪದೀಂ ಕೃಷ್ಣಾಂ ಕೃತ್ವಾ ಕರ್ಮ ಸುದುಷ್ಕರಮ್ ।
ಜಯದ್ರಥಂ ಚ ರಾಜಾನಂ ವಿಜಿತಂ ವಶಮಾಗತಮ್ ॥೧೦॥

ಈ ಕಾರಣದಿಂದಲೂ ನೀನು ಇದನ್ನು ಗಮನಿಸು. ದುರಾತ್ಮನಾದ ಬಲಿಷ್ಠನಾದ ವೀರ್ಯಮತ್ತನಾದ ಸೈಂಧವನು ದ್ರೌಪದಿಯನ್ನು ಅಪಹರಿಸಿದಾಗ ಮಹಾತ್ಮರಾದ ಭೀಮಾರ್ಜುನರು ಸುದುಷ್ಕರವಾದ ಕರ್ಮವನ್ನು ಮಾಡಿ ದ್ರೌಪದಿಯನ್ನು ಹಿಂದಕ್ಕೆ ತಂದರು. ಜಯದ್ರಥ ರಾಜನನ್ನೂ ಜಯಿಸಿ ವಶಪಡಿಸಿಕೊಂಡರು.

ಅಸಹಾಯೇನ ರಾಮೇಣ ವೈದೇಹೀ ಪುನರಾಹೃತಾ ।
ಹತ್ವಾ ಸಂಖೇ ದಶಗ್ರೀವಂ ರಾಕ್ಷಸಂ ಭೀಮವಿಕ್ರಮಮ್ ॥೧೧॥

ರಾಮನು ಅಸಹಾಯನಾಗಿ ಯುದ್ಧದಲ್ಲಿ ಭೀಮಪರಾಕ್ರಮವುಳ್ಳ ರಾಕ್ಷಸನಾದ ರಾವಣನನ್ನು ಕೊಂದು ಜಾನಕಿಯನ್ನು ತಂದನು.

ಯಸ್ಯ ಶಾಖಾಮೃಗಾ ಮಿತ್ರಾಣ್ಯೃಕ್ಷಾಃ ಕಾಲಾಮುಖಾಸ್ತಥಾ ।
ಜಾತ್ಯಂತರಗತಾ ರಾಜನ್ನೇತದ್ ಬುದ್ಧ್ಯಾऽನುಚಿಂತಯ ॥೧೨॥

ಯಾವ ಅವನಿಗೆ ಕಪಿಗಳು, ಕರಡಿಗಳು, ಕಾಲಾಮುಖಿಗಳು ಹೀಗೆ ಜಾತ್ಯಂತರ ಪ್ರಾಣಿಗಳು ಮಿತ್ರರಾಗಿದ್ದರೋ ರಾಜನೇ, ಇದನ್ನು ಬುದ್ಧಿಯಿಂದ ಯೋಚಿಸು.

ತಸ್ಮಾತ್ಸ ತ್ವಂ ಕುರುಶ್ರೇಷ್ಠ ಮಾ ಶುಚೋ ಭರತರ್ಷಭ ।
ತ್ವದ್ವಿಧಾ ಹಿ ಮಹಾತ್ಮಾನೋ ನ ಶೋಚಂತಿ ಪರಂತಪ ॥೧೩॥

ಆದ್ದರಿಂದ ಎಲೈ ಕುರುಶ್ರೇಷ್ಠನೇ, ಭರತರ್ಷಭನೇ, ಶೋಕವನ್ನು ಪಡಬೇಡ. ಎಲೈ ಪರಂತಪನೇ, ನಿನ್ನಂತಹ ಮಹಾತ್ಮರು ಶೋಕವನ್ನು ಪಡುವುದಿಲ್ಲ.

ವೈಶಂಪಾಯನಃ

ಏವಮಾಶ್ವಾಸಿತೋ ರಾಜಾ ಮಾರ್ಕಂಡೇಯೇನ ಧೀಮತಾ ।
ತ್ಯಕ್ತ್ವಾ ದುಃಖಮದೀನಾತ್ಮಾ ಪುನರಪ್ಯೇನಮಬ್ರವೀತ್ ॥೧೪॥

ವೈಶಂಪಾಯನ– ಹೀಗೆ ಮೇಧಾವಿಗಳಾದ ಮಾರ್ಕಂಡೇಯರಿಂದ ಸಮಾಧಾನ ಪಡಿಸಲ್ಪಟ್ಟ ರಾಜನು ದುಃಖವನ್ನು ತ್ಯಜಿಸಿ ಧೈರ್ಯವನ್ನು ಹೊಂದಿ ಪುನಃ ಅವರನ್ನು ಕುರಿತು ಮಾತನಾಡಿದನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂಸಂಹಿತಾಯಾಂ ವೈಯಾಸಿಯಾಂ
ವನಪರ್ವಣಿ ಏಕಾಶೀತ್ಯಧಿಕದ್ವಿಶತತಮೋऽಧ್ಯಾಯಃ ॥
॥ ಇತಿ ರಾಮೋಪಾಖ್ಯಾನಪರ್ವಣಿ ಯುಧಿಷ್ಠಿರಾಶ್ವಾಸನಂ ನಾಮ ವಿಂಶೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವನಪರ್ವದಲ್ಲಿ ಇನ್ನೂರ ಎಂಬತ್ತೊಂದನೆಯ ಅಧ್ಯಾಯ ಮುಗಿಯಿತು.

★ ★ ★ ★

ಸಾವಿತ್ರ್ಯುಪಾಖ್ಯಾನಪರ್ವ

ಇನ್ನೂರ ಎಂಬತ್ತೆರಡನೆಯ ಅಧ್ಯಾಯ

ಮಾರ್ಕಂಡೇಯರಿಂದ ಯುಧಿಷ್ಠಿರನನ್ನು ಕುರಿತು ಸಾವಿತ್ರ್ಯುಪಾಖ್ಯಾನ ಪ್ರಾರಂಭ. ಗಾಯತ್ರಿಯ ಅನುಗ್ರಹದಿಂದ ಅಶ್ವಪತಿರಾಜನಿಗೆ ಕನ್ಯಾರತ್ನ ಜನನ. ವರಾನ್ವೇಷಣೆಗಾಗಿ ಮಂತ್ರಿಗಳ ಜೊತೆಯಲ್ಲಿ ಸಾವಿತ್ರಿಯ ಪ್ರಯಾಣ.

ಯುಧಿಷ್ಠಿರಃ

ನಾತ್ಮಾನಮನುಶೋಚಾಮಿ ನೇಮಾನ್ ಭ್ರಾತೃನ್ ಮಹಾಮುನೇ ।
ಹರಣಂ ಚಾಪಿ ರಾಜ್ಯಸ್ಯ ಯಥೇಮಾಂ ದ್ರುಪದಾತ್ಮಜಾಮ್ ॥೧॥

ಯುಧಿಷ್ಠಿರ– ಎಲೈ ಮಹರ್ಷಿಗಳೇ, ನಾನು ಈ ದ್ರೌಪದಿಯನ್ನು ಕುರಿತು ಶೋಕಪಡುವಂತೆ ನನ್ನನ್ನಾಗಲೀ, ಈ ತಮ್ಮಂದಿರನ್ನಾಗಲೀ ಅಥವಾ ಕಳೆದು ಹೋದ ರಾಜ್ಯವನ್ನಾಗಲೀ ಕುರಿತು ಶೋಕಪಡುವುದಿಲ್ಲ.

ದ್ಯೂತೇ ದುರಾತ್ಮಭಿಃ ಕ್ಲಿಷ್ಟಾಃ ಕೃಷ್ಣಯಾ ತಾರಿತಾ ವಯಮ್ ।
ಜಯದ್ರಥೇನ ಚ ಪುನರ್ವನಾಚ್ಚಾಪಿ ಹೃತಾ ಬಲಾತ್ ॥೨॥

ದ್ಯೂತ ಸಂದರ್ಭದಲ್ಲಿ ನಾವೆಲ್ಲರೂ ಕ್ಲೇಶಕ್ಕೆ ಒಳಗಾಗಿದ್ದೆವು. ದ್ರೌಪದಿಯು ನಮ್ಮನ್ನು ಪಾರುಮಾಡಿದಳು. ಕಾಡಿನಲ್ಲೂ ಕೂಡ ಸೈಂಧವನು ಅವಳನ್ನು ಬಲಾತ್ಕಾರದಿಂದ ಅಪಹರಿಸಿದನು.

ಅಸ್ತಿ ಸೀಮಂತಿನೀ ಕಾಚಿದ್ ದೃಷ್ಟಪೂರ್ವಾಪಿ ವಾ ಶ್ರುತಾ ।
ಪತಿವ್ರತಾ ಮಹಾಭಾಗಾ ಯಥೇಯಂ ದ್ರುಪದಾತ್ಮಜಾ ॥೩॥

ಎಲೈ ಮಹರ್ಷಿಗಳೇ, ದ್ರೌಪದಿಯಂತೆ ಮಹಾನುಭಾವಳೂ, ಪತಿವ್ರತೆಯೂ ಆದ ಇನ್ನೊಬ್ಬ ಸೀಮಂತಿನಿಯು ಇಂತಹ ಕಷ್ಟವನ್ನು ಅನುಭವಿಸಿರುವುದನ್ನು ನೀವು ನೋಡಿದ್ದೀರಾ ಅಥವಾ ಕೇಳಿದ್ದೀರಾ?

ಮಾರ್ಕಂಡೇಯಃ

ಶೃಣು ರಾಜನ್ ಕುಲಸ್ತ್ರೀಣಾಂ ಮಹಾಭಾಗ್ಯಂ ಯುಧಿಷ್ಠಿರ ।
ಸರ್ವಮೇತತ್ ಯಥಾ ಪ್ರಾಪ್ತಂ ಸಾವಿತ್ರ್ಯಾ ರಾಜಕನ್ಯಯಾ ॥೪॥

ಮಾರ್ಕಂಡೇಯರು– ಎಲೈ ಯುಧಿಷ್ಠಿರನೇ, ಕುಲಸ್ತ್ರೀಯರ ಮಹಾತ್ಮೆಯನ್ನು ಕೇಳು. ಇವೆಲ್ಲವನ್ನೂ ರಾಜಕುಮಾರಿಯಾದ ಸಾವಿತ್ರಿಯು ಅನುಭವಿಸಿದ್ದಾಳೆ.

ಆಸೀನ್ಮದ್ರೇಷು ಧರ್ಮಾತ್ಮಾ ರಾಜಾ ಪರಮಧಾರ್ಮಿಕಃ ।
ಬ್ರಹ್ಮಣ್ಯಶ್ಚ ಮಹಾತ್ಮಾ ಚ ಸತ್ಯಸಂಧೋ ಜಿತೇಂದ್ರಿಯಃ ॥೫॥

ಯಜ್ವಾ ದಾನಪತಿರ್ದಕ್ಷಃ ಪೌರಜಾನಪದಪ್ರಿಯಃ ।
ಪಾರ್ಥಿವೋಽಶ್ವಪತಿರ್ನಾಮ ಸರ್ವಭೂತಹಿತೇ ರತಃ ॥೬॥

ಮದ್ರದೇಶದಲ್ಲಿ ಧರ್ಮಾತ್ಮನೂ, ಪರಮಧಾರ್ಮಿಕನೂ, ಬ್ರಾಹ್ಮಣ ವತ್ಸಲನೂ, ಮಹಾನುಭಾವನೂ, ಸತ್ಯಸಂಧನೂ, ಜಿತೇಂದ್ರಿಯನೂ, ಯಾಗಶೀಲನೂ, ದಾನಶೂರನೂ, ಪೌರಜಾನಪದಪ್ರಿಯನೂ ಮತ್ತು ಸರ್ವಭೂತಗಳ ಹಿತದಲ್ಲೂ ನಿರತನಾದವನೂ ಆದ ಅಶ್ವಪತಿ ಎಂಬ ರಾಜನಿದ್ದನು.

ಕ್ಷಮಾವಾನನಪತ್ಯಶ್ಚ ಸತ್ಯವಾಗ್ ವಿಜಿತೇಂದ್ರಿಯಃ ।
ಅತಿಕ್ರಾಂತೇನ ವಯಸಾ ಸಂತಾಪಮುಪಜಗ್ಮಿವಾನ್ ॥೭॥

ಕ್ಷಮಾವಂತನೂ, ಜಿತೇಂದ್ರಿಯನೂ, ಸತ್ಯವಚನನೂ ಆದ ಅವನು ವಯಸ್ಸು ಮೀರಿಹೋಗುತ್ತಿರಲು ಮಕ್ಕಳಿಲ್ಲದೇ ಸಂತಾಪಕ್ಕೆ ಒಳಗಾದನು.

ಅಪತ್ಯೋತ್ಪಾದನಾರ್ಥಂ ಚ ತೀವ್ರಂ ನಿಯಮಮಾಸ್ಥಿತಃ ।
ಕಾಲೇ ಪರಿಮಿತಾಹಾರೋ ಬ್ರಹ್ಮಚಾರೀ ಜಿತೇಂದ್ರಿಯಃ ॥೮॥

ಹುತ್ವಾ ಶತಸಹಸ್ರಂ ಸ ಸಾವಿತ್ರ್ಯಾ ರಾಜಸತ್ತಮ ।
ಷಷ್ಠೇ ಷಷ್ಠೇ ತದಾ ಕಾಲೇ ಬಭೂವ ಮಿತಭೋಜನಃ ॥೯॥

ಮಕ್ಕಳನ್ನು ಪಡೆಯಲು ಅವನು ತೀವ್ರವಾದ ನಿಯಮವನ್ನು ಆಶ್ರಯಿಸಿದನು. ಬ್ರಹ್ಮಚಾರಿಯೂ ಜಿತೇಂದ್ರಿಯನೂ ಆಗಿ ಯೋಗ್ಯಕಾಲದಲ್ಲಿ ಮಿತವಾದ ಆಹಾರವನ್ನು ಸೇವಿಸುತ್ತಿದ್ದನು. ಎಲೈ ರಾಜಶ್ರೇಷ್ಠನೇ, ಗಾಯತ್ರೀಮಂತ್ರದಿಂದ ಒಂದು ಲಕ್ಷ ಆಹುತಿಯನ್ನು ಕೊಟ್ಟು ಹೋಮವನ್ನು ಮಾಡಿ ಹಗಲಿನ ಕೊನೆಯ ಆರನೆಯ ಭಾಗದಲ್ಲಿ ಮಿತವಾದ ಆಹಾರವನ್ನು ಸೇವಿಸುತ್ತಿದ್ದನು.

ಏತೇನ ನಿಯಮೇನಾಸೀದ್ ವರ್ಷಾಣ್ಯಷ್ಟಾದಶೈವ ತು ।
ಪೂರ್ಣೇ ತ್ವಷ್ಟಾದಶೇ ವರ್ಷೇ ಸಾವಿತ್ರೀ ತುಷ್ಟಿಮಭ್ಯಗಾತ್ ॥೧೦॥

ಈ ನಿಯಮವನ್ನು ಅವನು ಹದಿನೆಂಟು ವರ್ಷಗಳ ಕಾಲ ಮಾಡಿದನು. ಹದಿನೆಂಟು ವರ್ಷಗಳು ತುಂಬಿದ ಮೇಲೆ ಗಾಯತ್ರೀ ಮಂತ್ರಾಭಿಮಾನಿಯಾದ ಸಾವಿತ್ರಿಯು ಸಂತುಷ್ಟಳಾದಳು.

ರೂಪಿಣೀ ತು ತದಾ ರಾಜನ್ ದರ್ಶಯಾಮಾಸ ತಂ ನೃಪಮ್ ।
ಅಗ್ನಿಹೋತ್ರಾತ್ ಸಮುತ್ಥಾಯ ಹರ್ಷೇಣ ಮಹತಾಽನ್ವಿತಾ ॥೧೧॥

ಎಲೈ ರಾಜನೇ, ಅವಳು ಶರೀರವನ್ನು ಧರಿಸಿ ಅಗ್ನಿಹೋತ್ರದಿಂದ ಮೇಲೆದ್ದು ಬಂದು ಬಹಳ ಸಂತೋಷದಿಂದ ಕೂಡಿದವಳಾಗಿ ರಾಜನಿಗೆ ಕಾಣಿಸಿಕೊಂಡಳು.

ಉವಾಚ ಚೈನಂ ವರದಾ ವಚನಂ ಪಾರ್ಥಿವಂ ತದಾ ।
ಸಾ ತಮಶ್ವಪತಿಂ ರಾಜನ್ ಸಾವಿತ್ರೀ ನಿಯಮೇ ಸ್ಥಿತಮ್ ॥೧೨॥

ಎಲೈ ರಾಜನೇ, ನಿಯಮನಿಷ್ಠನಾದ ಆ ಅಶ್ವಪತಿರಾಜನನ್ನು ಕುರಿತು ವರವನ್ನು ಕೊಡುವ ಆ ಸಾವಿತ್ರೀದೇವಿಯು ಮಾತನಾಡಿದಳು.

ಬ್ರಹ್ಮಚರ್ಯೇಣ ಶುದ್ಧೇನ ದಮೇನ ನಿಯಮೇನ ಚ ।
ಸರ್ವಾತ್ಮನಾ ಚ ಭಕ್ತ್ಯಾ ಚ ತುಷ್ಟಾಽಸ್ಮಿ ತವ ಪಾರ್ಥಿವ ॥೧೩॥

ಎಲೈ ರಾಜನೇ, ನಿನ್ನ ಶುದ್ಧವಾದ ಬ್ರಹ್ಮಚರ್ಯದಿಂದಲೂ, ನಿಯಮಗಳಿಂದಲೂ, ಇಂದ್ರಿಯನಿಗ್ರಹದಿಂದಲೂ ಮತ್ತು ಸರ್ವಪ್ರಕಾರದಿಂದ ಮಾಡಿದ ಭಕ್ತಿಯಿಂದಲೂ ನಾನು ಸಂತುಷ್ಟಳಾಗಿದ್ದೇನೆ.

ವರಂ ವೃಣೀಷ್ವಾಶ್ವಪತೇ ಮದ್ರರಾಜ ಯದೀಪ್ಸಿತಮ್ ।
ನ ಪ್ರಮಾದಶ್ಚ ಧರ್ಮೇಷು ಕರ್ತವ್ಯಸ್ತೇ ಕಥಂಚನ ॥೧೪॥

ಮದ್ರರಾಜನಾದ ಅಶ್ವಪತಿಯೇ, ನಿನಗೆ ಇಷ್ಟವಾದ ವರವನ್ನು ಕೇಳು. ಧರ್ಮದ ವಿಷಯದಲ್ಲಿ ಎಂದೂ ಪ್ರಮಾದವನ್ನು ಮಾಡಬಾರದು.

ಅಶ್ವಪತಿಃ

ಅಪತ್ಯಾರ್ಥಃ ಸಮಾರಂಭಃ ಕೃತೋ ಧರ್ಮೇಪ್ಸಯಾ ಮಯಾ ।
ಪುತ್ರಾ ಮೇ ಬಹವೋ ದೇವಿ ಭವೇಯುಃ ಕುಲಭಾವನಾಃ ॥೧೫॥

ಅಶ್ವಪತಿ– ಎಲೌ ದೇವಿಯೇ, ನಾನು ಧರ್ಮವನ್ನು ಸಂಪಾದಿಸುವ ದೃಷ್ಟಿಯಿಂದ ಮಕ್ಕಳನ್ನು ಪಡೆಯಲು ಈ ಪ್ರಯತ್ನವನ್ನು ಮಾಡಿದೆ. ದೇವಿಯೇ, ನನಗೆ ನನ್ನ ವಂಶವನ್ನು ಬೆಳೆಸುವ ಅನೇಕ ಮಕ್ಕಳು ಆಗಬೇಕು.

ತುಷ್ಟಾಽಸಿ ಯದಿ ಮೇ ದೇವಿ ವರಮೇತಂ ವೃಣೋಮ್ಯಹಮ್ ।
ಸಂತಾನಂ ಪರಮೋ ಧರ್ಮ ಇತ್ಯಾಹುರ್ಮಾಂ ದ್ವಿಜಾತಯಃ ॥೧೬॥

ದೇವಿಯೇ, ನೀನು ಸಂತುಷ್ಟಳಾಗಿದ್ದರೆ ಇದೇ ವರವನ್ನು ಬೇಡುತ್ತೇನೆ. ಸಂತಾನವು ಉತ್ತಮವಾದ ಧರ್ಮವೆಂದು ಬ್ರಾಹ್ಮಣರು ನನಗೆ ಹೇಳುತ್ತಾರೆ.

ಸಾವಿತ್ರೀ

ಪೂರ್ವಮೇವ ಮಯಾ ರಾಜನ್ನಭಿಪ್ರಾಯಮಿಮಂ ತವ ।
ಜ್ಞಾತ್ವಾ ಪುತ್ರಾರ್ಥಮುಕ್ತೋ ವೈ ಭಗವಾಂಸ್ತೇ ಪಿತಾಮಹಃ ॥೧೭॥

ಸಾವಿತ್ರೀ– ಎಲೈ ರಾಜನೇ, ನಿನ್ನ ಅಭಿಪ್ರಾಯವನ್ನು ಮೊದಲೇ ತಿಳಿದು ನಾನು ಬ್ರಹ್ಮದೇವರಿಗೆ ಮೊದಲೇ ನಿನಗೆ ಮಕ್ಕಳನ್ನು ಕೊಡುವ ಸಲುವಾಗಿ ತಿಳಿಸಿದ್ದೇನೆ.

ಪ್ರಸಾದಾಚ್ಚೈವ ತಸ್ಮಾತ್ ತೇ ಸ್ವಯಂಭುವಿಹಿತಾದ್ ಭುವಿ ।
ಕನ್ಯಾ ತೇಜಸ್ವಿನೀ ಸೌಮ್ಯ ಕ್ಷಿಪ್ರಮೇವ ಭವಿಷ್ಯತಿ ॥೧೮॥

ಎಲೈ ಸೌಮ್ಯನೇ, ಆ ಬ್ರಹ್ಮದೇವರ ಅನುಗ್ರಹದಿಂದ ನಿನಗೆ ಶೀಘ್ರದಲ್ಲಿಯೇ ತೇಜಸ್ವಿನಿಯಾದ ಕನ್ಯೆಯು ಜನಿಸುತ್ತಾಳೆ.

ಉತ್ತರಂ ಚ ನ ತೇ ಕಿಂಚಿದ್ ವ್ಯಾಹರ್ತವ್ಯಂ ಕಥಂಚನ ।
ಪಿತಾಮಹನಿಸರ್ಗೇಣ ತುಷ್ಟಾ ಹ್ಯೇತದ್ ಬ್ರವೀಮಿ ತೇ ॥೧೯॥

ಇದಕ್ಕೆ ನೀನು ಏನೂ ಮರುಮಾತಾಡಬೇಡ. ಬ್ರಹ್ಮದೇವರ ಆಜ್ಞೆಯಂತೆ ನಾನು ಸಂತುಷ್ಟಳಾಗಿ ಈ ವಿಷಯವನ್ನು ನಿನಗೆ ಹೇಳುತ್ತಿದ್ದೇನೆ.

ಮಾರ್ಕಂಡೇಯಃ

ಸ ತಥೇತಿ ಪ್ರತಿಜ್ಞಾಯ ಸಾವಿತ್ರ್ಯಾ ವಚನಂ ನೃಪಃ ।
ಪ್ರಸಾದಯಾಮಾಸ ಪುನಃ ಕ್ಷಿಪ್ರಮೇವ ಭವೇದಿತಿ ॥೨೦॥

ಮಾರ್ಕಂಡೇಯ– ಆ ಅಶ್ವಪತಿರಾಜನು ಸಾವಿತ್ರಿಯ ಮಾತನ್ನು ಕೇಳಿ ಹಾಗೆಯೇ ಆಗಲಿ ಎಂದು ಪ್ರತಿಜ್ಞೆಯನ್ನು ಮಾಡಿ ಬೇಗ ಶಿಶುವು ಜನಿಸಬೇಕು ಎಂದು ಅವಳನ್ನು ಪುನಃ ಪ್ರಾರ್ಥನೆ ಮಾಡಿದನು.

ಅಂತರ್ಹಿತಾಯಾಂ ಸಾವಿತ್ರ್ಯಾಂ ಜಗಾಮ ಸ್ವಪುರಂ ನೃಪಃ ।
ಸ್ವರಾಜ್ಯೇ ಚಾವಸದ್ ವೀರಃ ಪ್ರಜಾ ಧರ್ಮೇಣ ಪಾಲಯನ್ ॥೨೧॥

ಸಾವಿತ್ರಿಯು ಅಂತರ್ಧಾನವನ್ನು ಹೊಂದಿದ ಮೇಲೆ ವೀರನಾದ ಆ ರಾಜನು ತನ್ನ ಪಟ್ಟಣಕ್ಕೆ ಹಿಂದಿರುಗಿ ತನ್ನ ರಾಜ್ಯದ ಪ್ರಜೆಗಳನ್ನು ಧರ್ಮದಿಂದ ಪಾಲಿಸುತ್ತಿದ್ದನು.

ಕಸ್ಮಿಂಶ್ಚಿತ್ತು ಗತೇ ಕಾಲೇ ಸ ರಾಜಾ ನಿಯತವ್ರತಃ ।
ಜ್ಯೇಷ್ಠಾಯಾಂ ಧರ್ಮಚಾರಿಣ್ಯಾಂ ಮಹಿಷ್ಯಾಂ ಗರ್ಭಮಾದಧೇ ॥೨೨॥

ಸ್ವಲ್ಪ ಕಾಲವು ಕಳೆದ ಮೇಲೆ ನಿಯತವ್ರತನಾದ ಆ ರಾಜನು ಧರ್ಮಿಷ್ಠಳಾದ ತನ್ನ ಜ್ಯೇಷ್ಠ ಪತ್ನಿಯಲ್ಲಿ ಗರ್ಭಾಧಾನವನ್ನು ಮಾಡಿದನು.

ರಾಜಪುತ್ರ್ಯಾಸ್ತು ಗರ್ಭಃ ಸ ಮಾಲವ್ಯಾ ಭರತರ್ಷಭ ।
ವ್ಯವರ್ಧತ ತದಾ ಶುಕ್ಲೇ ತಾರಾಪತಿರಿವಾಂಬರೇ ॥೨೩॥

ಎಲೈ ಭರತರ್ಷಭನೇ, ಮಾಲವ ದೇಶದ ರಾಜಕುಮಾರಿಯಾದ ಅವಳ ಉದರದಲ್ಲಿ ಆ ಗರ್ಭವು ಶುಕ್ಲಪಕ್ಷದಲ್ಲಿ ಆಕಾಶದಲ್ಲಿ ಚಂದ್ರನು ಬೆಳೆಯುವಂತೆ ಬೆಳೆಯಿತು.

ಪ್ರಾಪ್ತೇ ಕಾಲೇ ತು ಸುಷುವೇ ಕನ್ಯಾಂ ರಾಜೀವಲೋಚನಾಮ್ ।
ಕ್ರಿಯಾಶ್ಚ ತಸ್ಯಾ ಮುದಿತಶ್ಚಕ್ರೇ ಚ ನೃಪಸತ್ತಮಃ ॥೨೪॥

ಅವಳು ಯೋಗ್ಯವಾದ ಕಾಲದಲ್ಲಿ ರಾಜೀವ ಲೋಚನೆಯಾದ ಒಂದು ಹೆಣ್ಣು ಮಗುವನ್ನು ಪಡೆದಳು. ರಾಜಶ್ರೇಷ್ಠನು ಸಂತೋಷದಿಂದ ಮಗುವಿಗೆ ಎಲ್ಲಾ ಕ್ರಿಯೆಗಳನ್ನೂ ಮಾಡಿಸಿದನು.

ಸಾವಿತ್ರ್ಯಾ ಪ್ರೀತಯಾ ದತ್ತಾ ಸಾವಿತ್ರ್ಯಾ ಹುತಯಾ ಹ್ಯಪಿ ।
ಸಾವಿತ್ರೀತ್ಯೇವ ನಾಮಾಸ್ಯಾಶ್ಚಕ್ರುರ್ವಿಪ್ರಾಸ್ತಥಾ ಪಿತಾ ॥೨೫॥

ಸಾವಿತ್ರಿಯನ್ನು ಉದ್ದೇಶಿಸಿ ಹೋಮವನ್ನು ಮಾಡಿ ಪ್ರೀತಳಾದ ಸಾವಿತ್ರಿಯಿಂದಲೇ ಕೊಡಲ್ಪಟ್ಟ ಪ್ರಯುಕ್ತವಾಗಿ ಬ್ರಾಹ್ಮಣರು ಮತ್ತು ತಂದೆಯು ಆ ಮಗುವಿಗೆ ಸಾವಿತ್ರೀ ಎಂದೇ ನಾಮಕರಣ ಮಾಡಿದರು.

ಸಾ ವಿಗ್ರಹವತೀವ ಶ್ರೀರ್ವ್ಯವರ್ಧತ ನೃಪಾತ್ಮಜಾ ।
ಕಾಲೇನ ಚಾಪಿ ಸಾ ಕನ್ಯಾ ಯೌವನಸ್ಥಾ ಬಭೂವ ಹ ॥೨೬॥

ಆ ರಾಜಕುಮಾರಿಯು ದೇಹವನ್ನು ಧರಿಸಿದ ಲಕ್ಷ್ಮಿಯಂತೆ ಬೆಳೆದಳು. ಕಾಲಕ್ರಮದಲ್ಲಿ ಅವಳು ಯುವತಿಯಾದಳು.

ತಾಂ ಸುಮಧ್ಯಾಂ ಪೃಥುಶ್ರೋಣೀಂ ಪ್ರತಿಮಾಂ ಕಾಂಚನೀಮಿವ ।
ಪ್ರಾಪ್ತೇಯಂ ದೇವಕನ್ಯೇತಿ ದೃಷ್ಟ್ವಾ ಸಮ್ಮೇನಿರೇ ಜನಾಃ ॥೨೭॥

ಸುವರ್ಣಮಯ ಪ್ರತಿಮೆಯಂತೆ ಒಳ್ಳೆಯ ಮಧ್ಯಪ್ರದೇಶವನ್ನು ಮತ್ತು ನಿತಂಬವನ್ನು ಹೊಂದಿದ್ದ ಅವಳನ್ನು ನೋಡಿ ಜನರು ಇವಳು ಯಾವುದೋ ದೇವಕನ್ಯೆಯು ಬಂದಿದ್ದಾಳೆ ಎಂದು ತಿಳಿದರು.

ತಾಂ ತು ಪದ್ಮಪಲಾಶಾಕ್ಷೀಂ ಜ್ವಲಂತೀಮಿವ ತೇಜಸಾ ।
ನ ಕಶ್ಚಿದ್ ವರಯಾಮಾಸ ತೇಜಸಾ ಪ್ರತಿವಾರಿತಃ ॥೨೮॥

ಪದ್ಮದಲಾಯತಾಕ್ಷಿಯಾದ, ತೇಜಸ್ವಿನಿಯಾದ ಅವಳನ್ನು ನೋಡಿ ಅವಳ ತೇಜಸ್ಸಿನಿಂದ ಹೆದರಿದವರಾಗಿ ಯಾರೂ ಅವಳನ್ನು ವರಿಸಲಿಲ್ಲ.

ಅಥೋಪೋಷ್ಯ ಶಿರಃಸ್ನಾತಾ ದೇವತಾಮಭಿಗಮ್ಯ ಸಾ ।
ಹುತ್ವಾಗ್ನಿಂ ವಿಧಿವದ್ ವಿಪ್ರಾನ್ ವಾಚಯಾಮಾಸ ಪರ್ವಣಿ ॥೨೯॥

ಅನಂತರ ಅವಳು ಉಪವಾಸವನ್ನು ಮಾಡಿ ಶಿರಸ್ನಾನವನ್ನು ಮಾಡಿ, ದೇವತಾ ಪೂಜೆಯನ್ನೂ ಮಾಡಿ ಅಗ್ನಿಯಲ್ಲಿ ವಿಧಿವತ್ತಾಗಿ ಹೋಮವನ್ನು ಮಾಡಿ ಪರ್ವಕಾಲದಲ್ಲಿ ಬ್ರಾಹ್ಮಣರಿಂದ ಮಂಗಳಾಶೀರ್ವಾದವನ್ನು ಪಡೆದಳು.

ತತಃ ಸುಮನಸಃ ಶೇಷಾಃ ಪ್ರತಿಗೃಹ್ಯ ಮಹಾತ್ಮನಃ।
ಪಿತುಃ ಸಮೀಪಮಗಮದ್ ದೇವೀ ಶ್ರೀರಿವ ರೂಪಿಣೀ ॥೩೦॥

ಅನಂತರ ದೇವರ ಪ್ರಸಾದಭೂತವಾದ ಹೂಗಳನ್ನು ತೆಗೆದುಕೊಂಡು ಶರೀರವನ್ನು ಧರಿಸಿದ ಲಕ್ಷ್ಮಿಯಂತೆ ಅವಳು ಮಹಾನುಭಾವನಾದ ತನ್ನ ತಂದೆಯ ಸಮೀಪಕ್ಕೆ ಬಂದಳು.

ಸಾಽಭಿವಾದ್ಯ ಪಿತುಃ ಪಾದೌ ಶೇಷಾಃ ಪೂರ್ವಂ ನಿವೇದ್ಯ ಚ ।
ಕೃತಾಂಜಲಿರ್ವರಾರೋಹಾ ನೃಪತೇಃ ಪಾರ್ಶ್ವಮಾಸ್ಥಿತಾ ॥೩೧॥

ಸುಂದರಿಯಾದ ಅವಳು ಮೊದಲು ದೇವತಾಪ್ರಸಾದವನ್ನು ಅವನಿಗೆ ಕೊಟ್ಟು ಕೈಗಳನ್ನು ಜೋಡಿಸಿ ರಾಜನ ಪಾರ್ಶ್ವದಲ್ಲಿ ನಿಂತಳು.

ಯೌವನಸ್ಥಾಂ ತು ತಾಂ ದೃಷ್ಟ್ವಾ ಸ್ವಾಂ ಸುತಾಂ ದೇವರೂಪಿಣೀಮ್ ।
ಅಯಾಚ್ಯಮಾನಾಂ ಚ ವರೈರ್ನೃಪತಿರ್ದುಃಖಿತೋಽಭವತ್ ॥೩೨॥

ದೇವರೂಪಿಣಿಯಾದ ಯೌವನಸ್ಥಳಾದ ತನ್ನ ಮಗಳನ್ನು ಯಾವ ವರನೂ ಯಾಚಿಸದಿರುವುದನ್ನು ನೋಡಿ ರಾಜನು ದುಃಖಿತನಾದನು.

ರಾಜಾ

ಪುತ್ರಿ ಪ್ರದಾನಕಾಲಸ್ತೇ ನ ಚ ಕಶ್ಚಿದ್ ವೃಣೋತಿ ಮಾಮ್ ।
ಸ್ವಯಮನ್ವಿಚ್ಛ ಭರ್ತಾರಂ ಗುಣೈಃ ಸದೃಶಮಾತ್ಮನಃ ॥೩೩॥

ರಾಜ– ಮಗಳೇ, ನಿನಗೆ ವಿವಾಹಕಾಲವು ಪ್ರಾಪ್ತವಾಗಿದೆ. ಆದರೆ ಯಾರೂ ನನ್ನ ಬಳಿಗೆ ಬಂದು ನಿನ್ನನ್ನು ಬೇಡುತ್ತಿಲ್ಲ. ಆದ್ದರಿಂದ ನೀನೇ ನಿನಗೆ ಅನುರೂಪನಾದ ಗುಣವುಳ್ಳ ಪತಿಯನ್ನು ಅನ್ವೇಷಣೆ ಮಾಡು.

ಪ್ರಾರ್ಥಿತಃ ಪುರುಷೋ ಯಶ್ಚ ಸ ನಿವೇದ್ಯಸ್ತ್ವಯಾ ಮಮ ।
ವಿಮೃಶ್ಯಾಹಂ ಪ್ರದಾಸ್ಯಾಮಿ ವರಸ್ಯ ತ್ವಂ ಯಥೇಪ್ಸಿತಮ್ ॥೩೪॥

ನೀನು ಯಾರನ್ನು ಬಯಸುತ್ತೀಯೋ ಅವನನ್ನು ನನಗೆ ತಿಳಿಸಬೇಕು. ನಾನು ವಿಮರ್ಶೆ ಮಾಡಿ ದಾನವನ್ನು ಕೊಡುವೆನು. ನಿನಗೆ ಇಷ್ಟವಾದ ವರನನ್ನು ನೀನು ವರಿಸು.

ಶ್ರುತಂ ಹಿ ಧರ್ಮಶಾಸ್ತ್ರೇಷು ಪಠ್ಯಮಾನಂ ದ್ವಿಜಾತಿಭಿಃ ।
ತಥಾ ತ್ವಮಪಿ ಕಲ್ಯಾಣಿ ಗದತೋ ಮೇ ವಚಃ ಶೃಣು ॥೩೫॥

ಕಲ್ಯಾಣಿಯೇ, ಧರ್ಮಶಾಸ್ತ್ರಗಳಲ್ಲಿ ಬ್ರಾಹ್ಮಣರು ಹೇಳುವ ಈ ಮಾತುಗಳನ್ನು ನಾನು ಕೇಳಿದ್ದೇನೆ. ನಾನು ಅದನ್ನು ಹೇಳುತ್ತೇನೆ. ನೀನೂ ಕೇಳು.

ಅಪ್ರದಾತಾ ಪಿತಾ ವಾಚ್ಯೋ ವಾಚ್ಯಶ್ಚಾನುಪಯನ್ ಪತಿಃ ।
ಮೃತೇ ಭರ್ತರಿ ಪುತ್ರಶ್ಚ ವಾಚ್ಯೋ ಮಾತುರರಕ್ಷಿತಾ ॥೩೬॥

ಮಗಳನ್ನು ದಾನಮಾಡದಿರುವ ತಂದೆಯು ನಿಂದಿತನಾಗುತ್ತಾನೆ. ಯೋಗ್ಯಕಾಲದಲ್ಲಿ ವಿವಾಹವನ್ನು ಮಾಡಿಕೊಂಡ ಪತ್ನಿಯನ್ನು ಸಮಾಗಮವನ್ನು ಮಾಡದಿರುವ ಪತಿಯು ನಿಂದಿತನಾಗುತ್ತಾನೆ. ತಂದೆಯು ಮರಣಹೊಂದಿದ ಮೇಲೆ ತಾಯಿಯನ್ನು ರಕ್ಷಣೆ ಮಾಡದಿರುವ ಪುತ್ರನು ನಿಂದಿತನಾಗುತ್ತಾನೆ.

ಇದಂ ಮೇ ವಚನಂ ಶ್ರುತ್ವಾ ಭರ್ತುರನ್ವೇಷಣೇ ತ್ವರ ।
ದೇವತಾನಾಂ ಯಥಾ ವಾಚ್ಯೋ ನ ಭವೇಯಂ ತಥಾ ಕುರು ॥೩೭॥

ಈ ನನ್ನ ಮಾತನ್ನು ಕೇಳಿ ಬೇಗ ವರನ ಅನ್ವೇಷಣೆಯಲ್ಲಿ ತೊಡಗು. ದೇವತೆಗಳು ನನ್ನನ್ನು ನಿಂದಿಸದಂತೆ ಮಾಡು.

ಮಾರ್ಕಂಡೇಯಃ

ಏವಮುಕ್ತ್ವಾ ದುಹಿತರಂ ತಥಾ ವೃದ್ಧಾಂಶ್ಚ ಮಂತ್ರಿಣಃ ।
ವ್ಯಾದಿದೇಶಾನುಯಾತ್ರಂ ಚ ಗಮ್ಯತಾಂ ಚೇತ್ಯಚೋದಯತ್ ॥೩೮॥

ಮಾರ್ಕಂಡೇಯರು– ಮಗಳನ್ನು ಕುರಿತು ಹೀಗೆ ಮಾತನಾಡಿ ಅದರಂತೆ ವೃದ್ಧರಾದ ಮಂತ್ರಿಗಳನ್ನು ಕುರಿತು ಅವಳ ಜೊತೆಯಲ್ಲಿ ಹೋಗಿ ಎಂದು ಪ್ರೇರಿಸಿದನು.

ಸಾऽಭಿವಾದ್ಯ ಪಿತುಃ ಪಾದೌ ವ್ರೀಡಿತೇವ ಮನಸ್ವಿನೀ ।
ಪಿತುರ್ವಚನಮಾಜ್ಞಾಯ ನಿರ್ಜಗಾಮಾವಿಚಾರಿತಮ್ ॥೫೯॥

ಧೈರ್ಯಶಾಲಿನಿಯಾದ ಅವಳು ತಂದೆಯ ಪಾದಗಳಿಗೆ ನಮಸ್ಕಾರವನ್ನು ಮಾಡಿ ನಾಚಿಕೆಗೊಂಡಂತೆ ತಂದೆಯ ಮಾತುಗಳನ್ನು ಕೇಳಿ ಏನೂ ಸಂಶಯವನ್ನು ಪಡದೆ ಹೊರಟಳು.

ಸಾ ಹೈಮಂ ರಥಮಾಸ್ಥಾಯ ಸ್ಥವಿರೈಃ ಸಚಿವೈರ್ವೃತಾ ।
ತಪೋವನಾನಿ ರಮ್ಯಾಣಿ ರಾಜರ್ಷೀಣಾಂ ಜಗಾಮ ಹ ॥೬೦॥

ಅವಳು ಸುವರ್ಣರಥದಲ್ಲಿ ಕುಳಿತು ವೃದ್ಧರಾದ ಮಂತ್ರಿಗಳಿಂದ ಪರಿವೃತಳಾಗಿ ರಾಜರ್ಷಿಗಳ ಸುಂದರವಾದ ತಪೋವನಗಳಿಗೆ ಹೋದಳು.

ಮಾನ್ಯಾನಾಂ ತತ್ರ ವೃದ್ಧಾನಾಂ ಕೃತ್ವಾ ಪಾದಾಭಿವಾದನಮ್ ।
ವನಾನಿ ಕ್ರಮಶಸ್ತಾತ ಸರ್ವಾಣ್ಯೇವಾಭ್ಯಗಚ್ಛತ ॥೬೧॥

ಮಾನ್ಯರೂ, ವೃದ್ಧರೂ ಆದ ಅಲ್ಲಿದ್ದ ರಾಜರ್ಷಿಗಳಿಗೆ ಪಾದಾಭಿವಂದನೆಯನ್ನು ಮಾಡುತ್ತಾ ಕ್ರಮದಿಂದ ಎಲ್ಲಾ ಆಶ್ರಮಗಳಿಗೂ ಹೋದಳು.

ಏವಂ ತೀರ್ಥೇಷು ಸರ್ವೇಷು ಧನೋತ್ಸರ್ಗಂ ನೃಪಾತ್ಮಜಾ ।
ಕುರ್ವತೀ ದ್ವಿಜಮುಖ್ಯಾನಾಂ ತಂ ತಂ ದೇಶಂ ಜಗಾಮ ಹ ॥೬೨॥

ಈ ರೀತಿಯಲ್ಲಿ ಎಲ್ಲ ತೀರ್ಥಗಳಲ್ಲಿಯೂ ಆ ರಾಜಕುಮಾರಿಯು ಶ್ರೇಷ್ಠರಾದ ಬ್ರಾಹ್ಮಣರಿಗೆ ದ್ರವ್ಯವನ್ನು ದಾನಮಾಡುತ್ತಾ ಆಯಾ ದೇಶಗಳಿಗೆ ಹೋದಳು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂಸಂಹಿತಾಯಾಂ ವೈಯಾಸಿಕ್ಯಾಂ
ವನಪರ್ವಣಿ ದ್ವ್ಯಶೀತ್ಯಧಿಕದ್ವಿಶತತಮೋऽಧ್ಯಾಯಃ ॥
॥ ಇತಿ ಸಾವಿತ್ರ್ಯುಪಾಖ್ಯಾನಪರ್ವಣಿ ಪ್ರಥಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವನಪರ್ವದಲ್ಲಿ ಇನ್ನೂರ ಎಂಬತ್ತೆರಡನೆಯ ಅಧ್ಯಾಯ ಮುಗಿಯಿತು.

★ ★ ★ ★

ಇನ್ನೂರ ಎಂಬತ್ಮೂರನೆಯ ಅಧ್ಯಾಯ

ದ್ಯುಮತ್ಸೇನನ ಪುತ್ರನಾದ ಸತ್ಯವಂತನನ್ನು ಮನಸಾ ವರಿಸಿ ಸಾವಿತ್ರಿಯ ಹಿಂದಿರುಗುವಿಕೆ. ನಾರದರ ಸಮಾಗಮ. ನಾರದರಿಂದ ವರನ ಅಲ್ಪಾಯುಸ್ಸನ್ನು ತಿಳಿದರೂ ಅವನನ್ನೇ ವರಿಸುವುದಾಗಿ ಸಾವಿತ್ರಿಯ ಆಗ್ರಹ.

ಮಾರ್ಕಂಡೇಯಃ

ಅಥ ಮದ್ರಾಧಿಪೋ ರಾಜಾ ನಾರದೇನ ಸಮಾಗತಃ ।
ಉಪವಿಷ್ಟಃ ಸಭಾಮಧ್ಯೇ ಕಥಾಯೋಗೇನ ಭಾರತ ॥೧॥

ಮಾರ್ಕಂಡೇಯರು– ಎಲೈ ಭಾರತನೇ, ಅನಂತರ ಮದ್ರಾಧಿಪತಿಯಾದ ಅಶ್ವಪತಿರಾಜನು ನಾರದರಿಂದ ಸಮಾಗಮವನ್ನು ಹೊಂದಿ ಸಭೆಯಲ್ಲಿ ಮಾತನಾಡುತ್ತಾ ಕುಳಿತಿದ್ದನು.

ತತೋಽಭಿಗಮ್ಯ ತೀರ್ಥಾನಿ ಸರ್ವಾಣ್ಯೇವಾಶ್ರಮಾಂಸ್ತಥಾ ।
ಆಜಗಾಮ ಪಿತುರ್ವೇಶ್ಮ ಸಾವಿತ್ರೀ ಸಹ ಮಂತ್ರಿಭಿಃ ॥೨॥

ಸಾವಿತ್ರಿಯು ಎಲ್ಲಾ ಆಶ್ರಮಗಳಿಗೂ ಮತ್ತು ತೀರ್ಥಕ್ಷೇತ್ರಗಳಿಗೂ ಹೋಗಿ ಮಂತ್ರಿಗಳ ಜೊತೆಯಲ್ಲಿ ತಂದೆಯ ಅರಮನೆಗೆ ಹಿಂದಿರುಗಿದಳು.

ನಾರದೇನ ಸಹಾಸೀನಂ ಸಾ ದೃಷ್ಟ್ವಾ ಪಿತರಂ ತದಾ(ಶುಭಾ) ।
ಉಭಯೋರೇವ ಶಿರಸಾ ಚಕ್ರೇ ಪಾದಾಭಿವಾದನಮ್ ॥೩॥

ನಾರದರ ಜೊತೆಯಲ್ಲಿ ಕುಳಿತಿದ್ದ ತಂದೆಯನ್ನು ನೋಡಿ ಶುಭಳಾದ ಅವಳು ಇಬ್ಬರಿಗೂ ತಲೆಯನ್ನು ಬಗ್ಗಿಸಿ ಪಾದಾಭಿವಂದನವನ್ನು ಮಾಡಿದಳು.

ಕ್ವ ಗತಾಽಭೂತ್ ಸುತೇಯಂ ತೇ ಕುತಶ್ಚೈವಾಗತಾ ನೃಪ ।
ಕಿಮರ್ಥಂ ಯುವತೀಂ ಭರ್ತ್ರೇ ನ ಚೈನಾಂ ಸಂಪ್ರಯಚ್ಛಸಿ ॥೪॥

ನಾರದರು– ಎಲೈ ರಾಜನೇ, ಇಲ್ಲಿಯವರೆಗೆ ನಿನ್ನ ಮಗಳು ಎಲ್ಲಿಗೆ ಹೋಗಿದ್ದಳು? ಎಲ್ಲಿಂದ ಬರುತ್ತಿದ್ದಾಳೆ? ಯುವತಿಯಾದ ಅವಳನ್ನು ನೀನು ಏಕೆ ಯಾರಿಗೂ ದಾನಮಾಡುತ್ತಿಲ್ಲ?

ಅಶ್ವಪತಿಃ

ಕಾರ್ಯೇಣ ಖಲ್ವನೇನೈವ ಪ್ರೇಷಿತಾऽದ್ಯೈವ ಚಾಗತಾ ।
ಏತಸ್ಯಾಃ ಶೃಣು ದೇವರ್ಷೇ ಭರ್ತಾರಂ ಯೋऽನಯಾ ವೃತಃ ॥೫॥

ಅಶ್ವಪತಿ– ಎಲೈ ದೇವರ್ಷಿಯೇ, ಇದೇ ಕಾರ್ಯಕ್ಕಾಗಿಯೇ ಅವಳನ್ನು ಕಳುಹಿಸಿದ್ದೆ. ಈ ದಿನವೇ ಹಿಂದಿರುಗಿದ್ದಾಳೆ. ಅವಳು ಎಂತಹ ಪತಿಯನ್ನು ವರಿಸಿದ್ದಾಳೆ ಎಂದು ಅವಳನ್ನೇ ಕೇಳು.

ಮಾರ್ಕಂಡೇಯಃ

ಸಾ ಬ್ರೂಹಿ ವಿಸ್ತರೇಣೇತಿ ಪಿತ್ರಾ ಸಂಚೋದಿತಾ ಶುಭಾ ।
ತದೈವ ತಸ್ಯ ವಚನಂ ಪ್ರತಿಗೃಹ್ಯೇದಮಬ್ರವೀತ್ ॥೬॥

ಮಾರ್ಕಂಡೇಯ– ಎಲ್ಲವನ್ನೂ ವಿಸ್ತಾರವಾಗಿ ಹೇಳು ಎಂಬ ತಂದೆಯ ಮಾತಿನಿಂದ ಪ್ರೇರಿತಳಾದ ಶುಭಳಾದ ಅವಳು ಆ ಮಾತನ್ನು ಸ್ವೀಕರಿಸಿ ಹೀಗೆ ಮಾತನಾಡಿದಳು.

ಆಸೀಚ್ಛಾಲ್ವೇಷು ಧರ್ಮಾತ್ಮಾ ಕ್ಷತ್ರಿಯಃ ಪೃಥಿವೀಪತಿಃ ।
ದ್ಯುಮತ್ಸೇನ ಇತಿ ಖ್ಯಾತಃ ಪಶ್ಚಾಚ್ಚಾಂಧೋ ಬಭೂವ ಹ ॥೭॥

ಸಾಲ್ವದೇಶದಲ್ಲಿ ಧರ್ಮಾತ್ಮನಾದ ದ್ಯುಮತ್ಸೇನನೆಂದು ಪ್ರಖ್ಯಾತನಾದ ಕ್ಷತ್ರಿಯನಾದ ರಾಜನಿದ್ದನು. ಅವನು ಅನಂತರ ಕುರುಡನಾದನು.

ವಿನಷ್ಟಚಕ್ಷುಷಸ್ತಸ್ಯ ಬಾಲಪುತ್ರಸ್ಯ ಧೀಮತಃ ।
ಸಾಮಂತೇನ ಹೃತಂ ರಾಜ್ಯಂ ಛಿದ್ರೇऽಸ್ಮಿನ್ ಪೂರ್ವವೈರಿಣಾ ॥೮॥

ಅವನು ದೃಷ್ಟಿಯನ್ನು ಕಳೆದುಕೊಂಡ ಮೇಲೆ ಒಂದು ಅವಕಾಶಕ್ಕಾಗಿ ಕಾಯುತ್ತಿದ್ದ ಅವನ ಪೂರ್ವವೈರಿಯಾದ ಸಾಮಂತನೊಬ್ಬನು ಚಿಕ್ಕಮಗನನ್ನು ಹೊಂದಿದ್ದ ಮೇಧಾವಿಯಾದ ದ್ಯುಮತ್ಸೇನನ ರಾಜ್ಯವನ್ನು ಅಪಹರಿಸಿದನು.

ಸ ಬಾಲವತ್ಸಯಾ ಸಾರ್ಧಂ ಭಾರ್ಯಯಾ ಪ್ರಸ್ಥಿತೋ ವನಮ್ ।
ಮಹಾರಣ್ಯಂ ಗತಶ್ಚಾಪಿ ತಪಸ್ತೇಪೇ ಮಹಾವ್ರತಃ ॥೯॥

ಅವನು ಆ ಚಿಕ್ಕಮಗನಲ್ಲಿ ವಾತ್ಸಲ್ಯವುಳ್ಳ ತನ್ನ ಚಿಕ್ಕಪ್ರಾಯದ ಪತ್ನಿಯನ್ನು ಕರೆದುಕೊಂಡು ಮಹಾರಣ್ಯಕ್ಕೆ ಹೋಗಿ ಮಹಾವ್ರತನಿಷ್ಠನಾಗಿ ತಪಸ್ಸನ್ನು ಮಾಡಿದನು.

ತಸ್ಯ ಪುತ್ರಃ ಪುರೇ ಜಾತಃ ಸಂವೃದ್ಧಶ್ಚ ತಪೋವನೇ ।
ಸತ್ಯವಾನನುರೂಪೋ ಮೇ ಭರ್ತೇತಿ ಮನಸಾ ವೃತಃ ॥೧೦॥

ಪಟ್ಟಣದಲ್ಲಿ ಜನಿಸಿ ತಪೋವನದಲ್ಲಿ ಬೆಳೆದ ಸತ್ಯವಂತನೆಂಬ ಅವನ ಮಗನು ನನಗೆ ಅನುರೂಪನಾದ ಪತಿ ಎಂದು ನಾನು ಮನಸ್ಸಿನಲ್ಲಿಯೇ ವರಿಸಿದ್ದೇನೆ.

ನಾರದಃ

ಅಹೋ ಬತ ಮಹತ್ಪಾಪಂ ಸಾವಿತ್ರ್ಯಾ ನೃಪತೇ ಕೃತಮ್ ।
ಅಜಾನಂತ್ಯಾ ಯದನಯಾ ಗುಣವಾನ್ ಸತ್ಯವಾನ್ ವೃತಃ ॥೧೧॥

ನಾರದರು– ಎಲೈ ರಾಜನೇ, ಗುಣವಂತನಾದ ಸತ್ಯವಂತನನ್ನು ಏನೂ ತಿಳಿಯದೇ ವರಿಸಿ ಸಾವಿತ್ರಿಯು ದೊಡ್ಡ ಕಷ್ಟದ ಕಾರ್ಯವನ್ನು ಮಾಡಿದ್ದಾಳೆ.

ಸತ್ಯಂ ವದತ್ಯಸ್ಯ ಪಿತಾ ಸತ್ಯಂ ಮಾತಾ ಪ್ರಭಾಷತೇ ।
ತಥಾऽಸ್ಯ ಬ್ರಾಹ್ಮಣಾಶ್ಚಕ್ರುರ್ನಾಮೈತತ್ ಸತ್ಯವಾನಿತಿ ॥೧೨॥

ಅವನ ತಂದೆಯೂ ಸತ್ಯವಚನನಾದವನು. ಅವನ ತಾಯಿಯೂ ಸತ್ಯವಚನಳಾದವಳು. ಆದ್ದರಿಂದ ಬ್ರಾಹ್ಮಣರು ಅವನಿಗೆ ಸತ್ಯವಾನ್ ಎಂದು ನಾಮಕರಣ ಮಾಡಿದರು.

ಬಾಲಸ್ಯಾಶ್ವಾಃ ಪ್ರಿಯಾಶ್ಚಾಸ್ಯ ಕರೋತ್ಯಶ್ವಾಂಶ್ಚ ಮೃನ್ಮಯಾನ್ ।
ಚಿತ್ರೇऽಪಿ ವಿಲಿಖತ್ಯಶ್ವಾಂಶ್ಚಿತ್ರಾಶ್ವ ಇತಿ ಚೋಚ್ಯತೇ ॥೧೩॥

ಬಾಲಕನಾಗಿದ್ದ ಅವನಿಗೆ ಅಶ್ವಗಳು ಪ್ರಿಯವಾಗಿದ್ದವು. ಆಟವಾಡುತ್ತಾ ಅವನು ಮಣ್ಣಿನಿಂದ ಅಶ್ವಗಳನ್ನು ಮಾಡುತ್ತಿದ್ದನು. ಅಶ್ವಗಳ ಚಿತ್ರಗಳನ್ನೂ ಬರೆಯುತ್ತಿದ್ದನು. ಆದ್ದರಿಂದ ಅವನನ್ನು ಚಿತ್ರಾಶ್ವ ಎಂದೂ ಕರೆಯುತ್ತಾರೆ.

ರಾಜಾ

ಅಪೀದಾನೀಂ ಸ ತೇಜಸ್ವೀ ಬುದ್ಧಿಮಾನ್ ವಾ ನೃಪಾತ್ಮಜಃ ।
ಕ್ಷಮಾವಾನಪಿ ವಾ ಶೂರಃ ಸತ್ಯವಾನ್ ಪಿತೃವತ್ಸಲಃ ॥೧೪॥

ರಾಜ– ಈಗ ಆ ರಾಜಕುಮಾರನಾದ ಸತ್ಯವಂತನು ತೇಜಸ್ವಿಯೂ, ಮೇಧಾವಿಯೂ, ಕ್ಷಮಾವಂತನೂ, ಶೂರನೂ ಮತ್ತು ಪಿತೃವತ್ಸಲನೂ ಆಗಿರುವನಷ್ಟೆ?

ನಾರದಃ

ವಿವಸ್ವಾನಿವ ತೇಜಸ್ವೀ ಬೃಹಸ್ಪತಿಸಮೋ ಮತೌ ।
ಮಹೇಂದ್ರ ಇವ ವೀರಶ್ಚ ವಸುಧೇವ ಕ್ಷಮಾನ್ವಿತಃ ॥೧೫॥

ನಾರದರು– ಸೂರ್ಯನಂತೆ ತೇಜಸ್ವಿ. ಬುದ್ಧಿಯಲ್ಲಿ ಬೃಹಸ್ಪತಿಯನ್ನು ಹೋಲುತ್ತಾನೆ. ಮಹೇಂದ್ರನಂತೆ ಪರಾಕ್ರಮಶಾಲಿ. ಭೂಮಿಯಂತೆ ಕ್ಷಮಾಗುಣವುಳ್ಳವನು.

ಅಶ್ವಪತಿಃ

ಅಪಿ ರಾಜಾತ್ಮಜೋ ದಾತಾ ಬ್ರಹ್ಮಣ್ಯಶ್ಚಾಪಿ ಸತ್ಯವಾನ್ ।
ರೂಪವಾನಪ್ಯುದಾರೋ ವಾऽಪ್ಯಥವಾ ಪ್ರಿಯದರ್ಶನಃ ॥೧೬॥

ಅಶ್ವಪತಿ– ಆ ರಾಜಕುಮಾರನಾದ ಸತ್ಯವಂತನು ದಾನವನ್ನು ಮಾಡುವವನೂ ಬ್ರಾಹ್ಮಣ ವತ್ಸಲನೂ, ರೂಪವಂತನೂ, ಉದಾರಿಯೂ, ಪ್ರಿಯದರ್ಶನನೂ ಆಗಿದ್ದಾನಷ್ಟೆ?

ನಾರದಃ

ಸಾಂಕೃತೇ ರಂತಿದೇವಸ್ಯ ಸ್ವಶಕ್ತ್ಯಾ ದಾನತಃ ಸಮಃ ।
ಬ್ರಹ್ಮಣ್ಯಃ ಸತ್ಯವಾದೀ ಚ ಶಿಬಿರೌಶೀನರೋ ಯಥಾ ॥೧೭॥

ನಾರದರು– ತನ್ನ ಶಕ್ತಿ ಇದ್ದಷ್ಟು ದಾನಮಾಡುವ ವಿಷಯದಲ್ಲಿ ಅವನು ಚೆನ್ನಾಗಿ ದಾನಮಾಡುವ ರಂತಿದೇವನನ್ನು ಹೋಲುತ್ತಾನೆ. ಔಶೀನರ ಶಿಬಿಯಂತೆ ಬ್ರಾಹ್ಮಣ ವತ್ಸಲನೂ ಮತ್ತು ಸತ್ಯವಾದಿಯೂ ಆಗಿದ್ದಾನೆ.

ಯಯಾತಿರಿವ ಚೋದಾರಃ ಸೋಮವತ್ ಪ್ರಿಯದರ್ಶನಃ ।
ರೂಪೇಣಾನ್ಯತಮೋऽಶ್ವಿಭ್ಯಾಂ ದ್ಯುಮತ್ಸೇನಸುತೋ ಬಲೀ ॥೧೮॥

ದ್ಯುಮತ್ಸೇನನ ಮಗನಾದ ಬಲಿಷ್ಠನಾದ ಅವನು ಯಯಾತಿಯಂತೆ ಉದಾರನೂ, ಚಂದ್ರನಂತೆ ಪ್ರಿಯದರ್ಶನನೂ, ರೂಪದಲ್ಲಿ ಅಶ್ವಿನಿಗಳಲ್ಲಿ ಒಬ್ಬರನ್ನು ಹೋಲುವವನೂ ಆಗಿದ್ದಾನೆ.

ಸ ವದಾನ್ಯಃ ಸ ತೇಜಸ್ವೀ ಸ ಧೀಮಾನ್ ಸ ಕ್ಷಮಾನ್ವಿತಃ ।
ಸ ದಾಂತಃ ಸ ಮೃದುಃ ಶೂರಃ ಸ ಸತ್ಯಃ ಸಂಯತೇಂದ್ರಿಯಃ ॥೧೯॥

ಅವನು ದಾನಶೂರನೂ, ತೆಜಸ್ವಿಯೂ, ಮೇಧಾವಿಯೂ, ಕ್ಷಮಾಶೀಲನೂ, ಇಂದ್ರನಿಗ್ರಹವುಳ್ಳವನೂ, ಮೃದುವೂ, ಶೂರನೂ, ಸತ್ಯವಚನನೂ, ಜಿತೇಂದ್ರಿಯನೂ ಆಗಿದ್ದಾನೆ.

ಸ ಮೈತ್ರಃ ಸೋಽನಸೂಯಶ್ಚ ಸ ಹ್ರೀಮಾನ್ ದ್ಯುತಿಮಾಂಶ್ಚ ಸಃ ।
ನಿತ್ಯಶಶ್ಚಾರ್ಜವಂ ತಸ್ಮಿನ್ ಸ್ಥಿತಿಸ್ತಸ್ಯೈವ ಚ ಧ್ರುವಾ ।
ಸಂಕ್ಷೇಪತಸ್ತಪೋವೃದ್ಧೈಃ ಶೀಲವೃದ್ಧೈಶ್ಚ ಕಥ್ಯತೇ ॥೨೦॥

ಅವನು ಸ್ನೇಹಶೀಲನೂ, ಅಸೂಯಾ ರಹಿತನೂ ಆಗಿದ್ದಾನೆ. ಅವನು ಕಾಂತಿಯುಳ್ಳವನೂ ಮತ್ತು ನಾಚಿಕೆಯುಳ್ಳವನೂ ಆಗಿದ್ದಾನೆ. ಅವನು ಯಾವಾಗಲೂ ಆರ್ಜವದಿಂದ ಕೂಡಿದ್ದು ಅದರಲ್ಲಿಯೇ ಶಾಶ್ವತವಾಗಿ ನೆಲೆಸಿದ್ದಾನೆ. ಹೀಗೆ ತಪೋವೃದ್ಧರೂ ಮತ್ತು ಶೀಲವೃದ್ಧರೂ ಸಂಕ್ಷೇಪವಾಗಿ ಅವನ ಗುಣಗಳನ್ನು ಹೇಳುತ್ತಾರೆ.

ಅಶ್ವಪತಿಃ

ಗುಣೈರುಪೇತಂ ಸರ್ವೈಸ್ತಂ ಭಗವಾನ್ ಪ್ರಬ್ರವೀಷಿ ಮೇ ।
ದೋಷಾನಪ್ಯಸ್ಯ ಮೇ ಬ್ರೂಹಿ ಯದಿ ಸಂತೀಹ ಕೇಚನ ॥೨೧॥

ಅಶ್ವಪತಿ– ಪೂಜ್ಯರೇ, ಅವನು ಎಲ್ಲಾ ಗುಣಗಳಿಂದ ಕೂಡಿದವನು ಎಂದು ನೀವು ನನಗೆ ಹೇಳುತ್ತಿದ್ದೀರಿ. ಅವನಲ್ಲಿ ಯಾವುದಾದರೂ ದೋಷಗಳಿದ್ದರೆ ಅದನ್ನೂ ನನಗೆ ಹೇಳಿ.

ನಾರದಃ

ಏಕೋ ದೋಷೋಽಸ್ತಿ ನಾನ್ಯೋಽಸ್ಯ ಸೋದ್ಯಪ್ರಭೃತಿ ಸತ್ಯವಾನ್ ।
ಸಂವತ್ಸರೇಣ ಕ್ಷೀಣಾಯುರ್ದೇಹನ್ಯಾಸಂ ಕರಿಷ್ಯತಿ ॥೨೨॥

ಏಕ ಏವಾಸ್ಯ ದೋಷೋ ಹಿ ಗುಣಾನಾಕ್ರಮ್ಯ ತಿಷ್ಠತಿ ।
ಸ ಚ ದೋಷಃ ಪ್ರಯತ್ನೇನ ನ ಶಕ್ಯಮತಿವರ್ತಿತುಮ್ ।

ನಾರದರು– ಅವನಲ್ಲಿ ಒಂದೇ ಒಂದು ದೋಷವಿದೆ. ಬೇರೆ ಯಾವುದೂ ಇಲ್ಲ. ಸತ್ಯವಂತನು ಈ ದಿನದಿಂದ ಒಂದು ವರ್ಷಕ್ಕೆ ಸರಿಯಾಗಿ ಆಯುಸ್ಸನ್ನು ಕಳೆದುಕೊಂಡು ದೇಹತ್ಯಾಗವನ್ನು ಮಾಡುವನು. ಇದೊಂದೇ ದೋಷವು ಅವನ ಗುಣಗಳನ್ನು ಮೆಟ್ಟಿ ನಿಂತಿದೆ. ಈ ದೋಷವನ್ನು ಪ್ರಯತ್ನಪಟ್ಟು ಪರಿಹರಿಸಲು ಸಾಧ್ಯವಿಲ್ಲ.

ರಾಜಾ

ಏಹಿ ಸಾವಿತ್ರಿ ಗಚ್ಛಸ್ವ ಅನ್ಯಂ ವರಯ ಶೋಭನೇ ।
ತಸ್ಯ ದೋಷೋ ಮಹಾನೇಕೋ ಗುಣಾನಾಕ್ರಮ್ಯ ಚ ಸ್ಥಿತಃ ॥೨೩॥

ರಾಜ– ಸಾವಿತ್ರಿ ಇಲ್ಲಿ ಬಾ! ಶೋಭನಳೇ, ಹೋಗಿ ಬೇರೆ ವರನನ್ನು ಹುಡುಕು. ಅವನ ದೊಡ್ಡ ದೋಷವು ಎಲ್ಲಾ ಗುಣಗಳನ್ನೂ ಮೆಟ್ಟಿನಿಂತಿದೆ.

ಯಥಾ ಮೇ ಭಗವಾನಾಹ ನಾರದೋ ದೇವಸತ್ಕೃತಃ ।
ಸಂವತ್ಸರೇಣ ಸೋಽಲ್ಪಾಯುರ್ದೇಹನ್ಯಾಸಂ ಕರಿಷ್ಯತಿ ॥೨೪॥

ಪೂಜ್ಯರೂ, ದೇವಪೂಜಿತರೂ ಆದ ನಾರದರು ಹೇಳುವಂತೆ ಅಲ್ಪಾಯುವಾದ ಅವನು ಒಂದುವರ್ಷದಲ್ಲಿ ದೇಹತ್ಯಾಗವನ್ನು ಮಾಡುವನು.

ಸಾವಿತ್ರೀ

ಸಕೃದಂಭೋ ನಿಪತತಿ ಸಕೃತ್ ಕನ್ಯಾ ಪ್ರದೀಯತೇ ।
ಸಕೃದಾಹ ದದಾನೀತಿ ತ್ರಿಣ್ಯೇತಾನಿ ಸಕೃತ್ಸಕೃತ್ ॥೨೫॥

ಸಾವಿತ್ರೀ– ಧಾರೋದಕವು ಒಂದೇ ಸಲ ಕೆಳಗೆ ಬೀಳುತ್ತದೆ. ಕನ್ಯೆಯು ಒಂದೇ ಬಾರಿ ಕೊಡಲ್ಪಡುತ್ತಾಳೆ. ಕೊಡುವೆನು ಎಂದು ಹೇಳುವವನು ಒಂದೇ ಬಾರಿ ಹೇಳುತ್ತಾನೆ. ಈ ಮೂರು ಒಂದೊಂದು ಬಾರಿ ನಡೆಯುವಂತಹವು.

ದೀರ್ಘಾಯುರಥವಾಽಲ್ಪಾಯುಃ ಸಗುಣೋ ನಿರ್ಗುಣೋಽಪಿ ವಾ ।
ಸಕೃದ್ ವೃತೋ ಮಯಾ ಭರ್ತಾ ನ ದ್ವಿತೀಯಂ ವೃಣೋಮ್ಯಹಮ್ ॥

ಅವನು ದೀರ್ಘಾಯುವಾಗಿರಲಿ ಅಥವಾ ಅಲ್ಪಾಯುವಾಗಿರಲಿ, ಗುಣವಂತನಾಗಿರಲಿ ಅಥವಾ ನಿರ್ಗುಣನಾಗಿರಲಿ ನಾನು ಒಂದು ಸಲ ಅವನನ್ನು ಪತಿ ಎಂದು ವರಿಸಿದ ಮೇಲೆ ಇನ್ನೊಬ್ಬನನ್ನು ವರಿಸುವುದಿಲ್ಲ.

ಮನಸಾ ನಿಶ್ಚಯಂ ಕೃತ್ವಾ ತತೋ ವಾಚಾऽಭಿಧೀಯತೇ ।
ಕ್ರಿಯತೇ ಕರ್ಮಣಾ ಪಶ್ಚಾತ್ ಪ್ರಮಾಣಂ ಮೇ ಮನಸ್ಕೃತಃ ॥೨೭॥

ಮೊದಲು ಮನಸ್ಸಿನಲ್ಲಿ ನಿಶ್ಚಯಿಸಿ ಅನಂತರ ಅದನ್ನು ಬಾಯಿಯಿಂದ ಹೇಳುತ್ತಾರೆ. ಅನಂತರ ಅದನ್ನು ಕರ್ಮದಿಂದ ಮಾಡುತ್ತಾರೆ. ಆದ್ದರಿಂದ ಈ ವಿಷಯದಲ್ಲಿ ನನ್ನ ಮನಸ್ಸೇ ನನಗೆ ಪ್ರಮಾಣವಾದುದು.

ನಾರದಃ

ಸ್ಥಿರಾ ಬುದ್ಧಿರ್ನರಶ್ರೇಷ್ಠ ಸಾವಿತ್ರ್ಯಾ ದುಹಿತುಸ್ತವ ।
ನೈಷಾ ವಾರಯಿತುಂ ಶಕ್ಯಾ ಧರ್ಮಾದಸ್ಮಾತ್ ಕಥಂಚನ ।
ವಿಲಂಬೋ ನಾತ್ರ ಕರ್ತವ್ಯೋ ನಿಶ್ಚಿತೇ ಕರ್ಮಣಿ ಧ್ರುವಮ್ ॥೨೮॥

ನಾರದರು– ಎಲೈ ನರಶ್ರೇಷ್ಠನೇ, ನಿನ್ನ ಮಗಳಾದ ಸಾವಿತ್ರಿಯ ಬುದ್ಧಿಯು ಸ್ಥಿರವಾಗಿದೆ. ಅವಳನ್ನು ಈ ಧರ್ಮದಿಂದ ಅಲುಗಾಡಿಸಲು ಸಾಧ್ಯವಿಲ್ಲ. ಕಾರ್ಯವು ನಿಶ್ಚಯವಾದ ಮೇಲೆ ಈ ವಿಷಯದಲ್ಲಿ ವಿಳಂಬವನ್ನು ಮಾಡಬಾರದು.

ನಾನ್ಯಸ್ಮಿನ್ ಪುರುಷೇ ಸಂತಿ ಯೇ ಸತ್ಯವತಿ ವೈ ಗುಣಾಃ ।
ಪ್ರದಾನಮೇವ ತಸ್ಮಾನ್ಮೇ ರೋಚತೇ ದುಹಿತುಸ್ತವ ॥೨೯॥

ಸತ್ಯವಂತನಲ್ಲಿ ಇರುವ ಗುಣಗಳು ಇನ್ನೊಬ್ಬ ಪುರುಷನಲ್ಲಿ ಇಲ್ಲ. ಆದ್ದರಿಂದ ನಿನ್ನ ಮಗಳನ್ನು ಅವನಿಗೆ ಕೊಡುವುದೇ ಸೂಕ್ತವೆಂದು ನನಗೆ ತೋರುತ್ತದೆ.

ರಾಜಾ

ಅವಿಚಾಲ್ಯಂ ತದುಕ್ತಂ ಯತ್ ತಥ್ಯಂ ಭಗವತಾ ವಚಃ ।
ಕರಿಷ್ಯಾಮ್ಯೇತದೇವಂ ಚ ಗುರುರ್ಹಿ ಭಗವಾನ್ ಮಮ ॥೩೦॥

ರಾಜ– ಪೂಜ್ಯರಾದ ತಾವು ಹೇಳಿದ ಸತ್ಯವಚನಗಳು ಅಚಾಲ್ಯವಾದವುಗಳು. ತಾವು ನನಗೆ ಗುರುಗಳಾಗಿದ್ದೀರಿ. ತಮ್ಮ ಮಾತಿನಂತೆಯೇ ಇದನ್ನು ಮಾಡುವೆನು.

ನಾರದಃ

ಅವಿಘ್ನಮಸ್ತು ಸಾವಿತ್ರ್ಯಾಃ ಪ್ರದಾನೇ ದುಹಿತುಸ್ತವ ।
ಸಾಧಯಿಷ್ಯಾಮ್ಯಹಂ ತಾವತ್ ಸರ್ವೇಷಾಂ ಭದ್ರಮಸ್ತು ವಃ ॥೩೧॥

ನಾರದರು– ನಿನ್ನ ಮಗಳಾದ ಸಾವಿತ್ರಿಯ ವಿವಾಹ ಮಹೋತ್ಸವವು ನಿರ್ವಿಘ್ನವಾಗಿ ನಡೆಯಲಿ. ಸದ್ಯಕ್ಕೆ ನಾನು ಹೋಗಿ ಬರುತ್ತೇನೆ. ನಿಮ್ಮೆಲ್ಲರಿಗೂ ಮಂಗಳವಾಗಲಿ.

ಮಾರ್ಕಂಡೇಯಃ

ಏವಮುಕ್ತ್ವಾ ಸಮುತ್ಪತ್ಯ ನಾರದಸ್ತ್ರಿದಿವಂ ಗತಃ ।
ರಾಜಾऽಪಿ ದುಹಿತುಃ ಸಜ್ಜಂ ವೈವಾಹಿಕಮಕಾರಯತ್ ॥೩೨॥

ಮಾರ್ಕಂಡೇಯರು– ಹೀಗೆ ಹೇಳಿ ನಾರದರು ಆಕಾಶಕ್ಕೆ ಹಾರಿ ಸ್ವರ್ಗಕ್ಕೆ ಹೋದರು. ರಾಜನೂ ಸಹ ತನ್ನ ಮಗಳ ಮದುವೆಗೆ ಎಲ್ಲವನ್ನೂ ಸಿದ್ಧಗೊಳಿಸಿದನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂಸಂಹಿತಾಯಾಂ ವೈಯಾಸಿಕ್ಯಾಂ ವನಪರ್ವಣಿ ಪತಿವ್ರತಾಮಹಾತ್ಮ್ಯಪರ್ವಣಿ ತ್ರಿಶೀತ್ಯಧಿಕದ್ವಿಶತತಮೋऽಧ್ಯಾಯಃ ॥
॥ ಇತಿ ಸಾವಿತ್ರ್ಯುಪಾಖ್ಯಾನಪರ್ವಣಿ ದ್ವಿತೀಯೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವನಪರ್ವದಲ್ಲಿ ಇನ್ನೂರ ಎಂಬತ್ಮೂರನೆಯ ಅಧ್ಯಾಯ ಮುಗಿಯಿತು.

★ ★ ★ ★

ಇನ್ನೂರ ಎಂಬತ್ತನಾಲ್ಕನೆಯ ಅಧ್ಯಾಯ

ಅಶ್ವಪತಿಯಿಂದ ದ್ಯುಮತ್ಸೇನನ ಆಶ್ರಮದಲ್ಲಿ ಸತ್ಯವಂತನಿಗೆ ಕನ್ಯಾಪ್ರದಾನ. ಅನಂತರ ತನ್ನ ನಗರಕ್ಕೆ ಹಿಂದಿರುಗುವಿಕೆ.

ಮಾರ್ಕಂಡೇಯಃ

ಅಥ ಕನ್ಯಾಪ್ರದಾನೇ ಸ ತಮೇವಾರ್ಥಂ ವಿಚಿಂತಯನ್ ।
ಸಮಾನಿನ್ಯೇ ಚ ತತ್ಸರ್ವಂ ಭಾಂಡಂ ವೈವಾಹಿಕಂ ನೃಪಃ ॥೧॥

ಮಾರ್ಕಂಡೇಯರು– ಅನಂತರ ರಾಜನು ಅದೇ ವಿಷಯವನ್ನು ಆಲೋಚಿಸುತ್ತಾ ಕನ್ಯಾಪ್ರದಾನಕ್ಕೆ ಬೇಕಾದ ಎಲ್ಲ ವಸ್ತುಗಳನ್ನೂ ಅಣಿಗೊಳಿಸಿದನು.

ತತೋ ವೃದ್ಧಾನ್ ದ್ವಿಜಾನ್ ಸರ್ವಾನೃತ್ವಿಜಃ ಸಪುರೋಹಿತಾನ್ ।
ಸಮಾಹೂಯ ದಿನೇ ಪುಣ್ಯೇ ಪ್ರಯಯೌ ಸಹ ಕನ್ಯಯಾ ॥೨॥

ಅನಂತರ ಒಂದು ಶುಭದಿನದಲ್ಲಿ ಹಿರಿಯರನ್ನು, ಎಲ್ಲಾ ಋತ್ವಿಜರನ್ನು ಮತ್ತು ಪುರೋಹಿತರನ್ನು ಕರೆದುಕೊಂಡು ಕನ್ಯೆಯ ಜೊತೆಯಲ್ಲಿ ಹೊರಟನು.

ಮೇಧ್ಯಾರಣ್ಯಂ ಸ ಗತ್ವಾ ಚ ದ್ಯುಮತ್ಸೇನಾಶ್ರಮಂ ನೃಪಃ ।
ಪದ್ಭ್ಯಾಮೇವ ದ್ವಿಜೈಃ ಸಾರ್ಧಂ ರಾಜರ್ಷಿಂ ತಮುಪಾಗಮತ್ ॥೩॥

ಆ ರಾಜನು ಬ್ರಾಹ್ಮಣರ ಜೊತೆಯಲ್ಲಿ ಮೇಧ್ಯಾರಣ್ಯಕ್ಕೆ ಹೋಗಿ ಅಲ್ಲಿಂದ ನಡೆದುಕೊಂಡೇ ದ್ಯುಮತ್ಸೇನನ ಆಶ್ರಮವನ್ನು ತಲುಪಿದನು.

ತತ್ರಾಪಶ್ಯನ್ಮಹಾಭಾಗಂ ಶಾಲವೃಕ್ಷಮುಪಾಶ್ರಿತಮ್ ।
ಕೌಶ್ಯಾಂ ಬೃಸ್ಯಾಂ ಸಮಾಸೀನಂ ಚಕ್ಷುರ್ಹೀನಂ ನೃಪಂ ತದಾ ॥೪॥

ಅಲ್ಲಿ ಒಂದು ಶಾಲವೃಕ್ಷದ ಕೆಳಗೆ ರೇಷ್ಮೆಯ ಆಸನದಲ್ಲಿ ಕುಳಿತಿದ್ದ ಮಹಾನುಭಾವನೂ, ಅಂಧನೂ ಆದ ದ್ಯುಮತ್ಸೇನನನ್ನು ನೋಡಿದನು.

ಸ ರಾಜಾ ತಸ್ಯ ರಾಜರ್ಷೇಃ ಕೃತ್ವಾ ಪೂಜಾಂ ಯಥಾರ್ಹತಃ ।
ವಾಚಾ ಸುನಿಯತೋ ಭೂತ್ವಾ ಚಕಾರಾತ್ಮನಿವೇದನಮ್ ॥೫॥

ಆ ರಾಜನು ರಾಜರ್ಷಿಯಾದ ದ್ಯುಮತ್ಸೇನನಿಗೆ ಯಥೋಚಿತವಾದ ಪೂಜೆಯನ್ನು ಮಾಡಿ ಚೆನ್ನಾಗಿ ನಿಯಮಿತವಾದ ತನ್ನ ಮಾತುಗಳಿಂದ ತನ್ನನ್ನು ನಿವೇದಿಸಿಕೊಂಡನು.

ತಸ್ಯಾರ್ಘ್ಯಮಾಸನಂ ಚೈವ ಗಾಂ ಚಾವೇದ್ಯ ಸ ಧರ್ಮವಿತ್ ।
ಕಿಮಾಗಮನಮಿತ್ಯೇವಂ ರಾಜಾ ರಾಜಾನಮಬ್ರವೀತ್ ॥೬॥

ಧರ್ಮವನ್ನು ತಿಳಿದ ಆ ದ್ಯುಮತ್ಸೇನನು ಅವನಿಗೆ ಅರ್ಘ್ಯವನ್ನೂ, ಆಸನವನ್ನೂ ಕೊಟ್ಟುಮತ್ತು ಗೋವನ್ನು ದಾನಮಾಡಿ ಆಗಮನದ ಕಾರಣವೇನು ಎಂದು ರಾಜನನ್ನು ಕೇಳಿದನು.

ತಸ್ಯ ಸರ್ವಮಭಿಪ್ರಾಯಮಿತಿಕರ್ತವ್ಯತಾಂ ಚ ತಾಮ್ ।
ಸತ್ಯವಂತಂ ಸಮುದ್ದಿಶ್ಯ ಸರ್ವಮೇವ ನ್ಯವೇದಯತ್ ॥೭॥

ಅವನಿಗೆ ತಮ್ಮ ಅಭಿಪ್ರಾಯವೆಲ್ಲವನ್ನೂ ಮತ್ತು ಸಾವಿತ್ರಿಯನ್ನು ಸತ್ಯವಂತನಿಗೆ ಕೊಡಬೇಕಾದರೆ ಮಾಡಬೇಕಾದ ಎಲ್ಲಾ ಕಾರ್ಯಗಳ ವಿವರಗಳನ್ನೂ ತಿಳಿಸಿದನು.

ಅಶ್ವಪತಿಃ

ಸಾವಿತ್ರೀ ನಾಮ ರಾಜರ್ಷೇ ಕನ್ಯೇಯಂ ಮಮ ಶೋಭನಾ ।
ತಾಂ ಸ್ವಧರ್ಮೇಣ ಧರ್ಮಜ್ಞ ಸ್ನುಷಾರ್ಥೇ ತ್ವಂ ಗೃಹಾಣ ಮೇ ॥೮॥

ಅಶ್ವಪತಿ– ಎಲೈ ರಾಜರ್ಷಿಯೇ, ನನ್ನ ಮಗಳಾದ ಈ ಸಾವಿತ್ರಿಯು ಶುಭಳಾಗಿದ್ದಾಳೆ. ಧರ್ಮಜ್ಞನೇ, ನೀನು ಅವಳನ್ನು ನಿನ್ನ ಧರ್ಮದಿಂದ ಸೊಸೆಯಾಗಿ ಸ್ವೀಕರಿಸು.

ದ್ಯುಮತ್ಸೇನಃ

ಚ್ಯುತಾಃ ಸ್ಮ ರಾಜ್ಯಾದ್ವನವಾಸಮಾಶ್ರಿತ್ಯ–
ಚರಾಮ ಧರ್ಮಂ ನಿಯತಾಸ್ತಪಸ್ವಿನಃ ।
ಕಥಂ ತ್ವನರ್ಹಾ ವನವಾಸಮಾಶ್ರಮೇ
ನಿವತ್ಸ್ಯತೇ ಕ್ಲೇಶಮಿಮಂ ಸುತಾ ತವ ॥೯॥

ದ್ಯುಮತ್ಸೇನ– ನಾವು ರಾಜ್ಯವನ್ನು ಕಳೆದುಕೊಂಡು ವನವನ್ನು ಆಶ್ರಯಿಸಿ ತಪಸ್ವಿಗಳಾಗಿ ನಿಯಮದಿಂದ ಧರ್ಮವನ್ನು ಆಚರಿಸುತ್ತಿದ್ದೇವೆ. ಈ ನಿನ್ನ ಮಗಳು ವನವಾಸಕ್ಕೆ ಅನರ್ಹಳಾದವಳು. ಈ ಆಶ್ರಮದ ಕಷ್ಟವನ್ನು ಅವಳು ಹೇಗೆ ಸಹಿಸುವಳು?

ಅಶ್ವಪತಿಃ

ಸುಖಂ ಚ ದುಃಖಂ ಚ ಭವಾಭವಾತ್ಮಕಂ
ಯಥಾ ವಿಜಾನಾತಿ ಸುತಾ ಮಮೈವ ।
ನ ಮದ್ವಿಧೇ ಯುಜ್ಯತಿ ವಾಕ್ಯಮೀದೃಶಂ
ವಿನಿಶ್ಚಯೇನಾಧಿಗತೋಽಸ್ಮಿ ತೇ ನೃಪ ॥೧೦॥

ಅಶ್ವಪತಿ– ಸುಖದುಃಖಗಳು, ಐಶ್ವರ್ಯದಾರಿದ್ರ್ಯಗಳು ಇವುಗಳನ್ನು ನನ್ನ ಮಗಳು ಚೆನ್ನಾಗಿ ತಿಳಿದಿದ್ದಾಳೆ. ನನ್ನಂತಹವನನ್ನು ಕುರಿತು ಇಂತಹ ಮಾತನ್ನು ಆಡುವುದು ಸರಿಯಲ್ಲ. ಎಲೈ ರಾಜನೇ, ನಾನು ನಿನ್ನ ಪುತ್ರನಿಗೆ ಕೊಡುವುದಾಗಿ ನಿಶ್ಚಯವನ್ನು ಮಾಡಿಕೊಂಡೇ ಬಂದಿದ್ದೇನೆ.

ಆಶಾಂ ನಾರ್ಹಸಿ ಮೇ ಹಂತುಂ ಸೌಹೃದಾತ್ ಪ್ರಣತಸ್ಯ ಚ ।
ಅಭಿತಶ್ಚಾಗತಂ ಪ್ರೇಮ್ಣಾ ಪ್ರತ್ಯಾಖ್ಯಾತುಂ ನ ಮಾಽರ್ಹಸಿ ॥೧೧॥

ವಿಶ್ವಾಸದಿಂದ ಮತ್ತು ಪ್ರೀತಿಯಿಂದ ಬಂದ ನನ್ನ ಆಸೆಯನ್ನು ನೀನು ಕಡಿಯಬೇಡ. ನಿನ್ನ ಮೇಲಿನ ಪ್ರೀತಿಯಿಂದ ದೂರದಿಂದ ಬಂದ ನನ್ನನ್ನು ನಿರಾಕರಿಸಬಾರದು.

ಅನುರೂಪೋ ಹಿ ಯುಕ್ತಶ್ಚ ತ್ವಂ ಮಮಾಹಂ ಚ ವೈ ತವ ।
ಸ್ನುಷಾಂ ಪ್ರತೀಚ್ಛ ಮೇ ಕನ್ಯಾಂ ಭಾರ್ಯಾಂ ಸತ್ಯವತಸ್ತತಃ ॥೧೨॥

ನೀನು ನನಗೂ ಮತ್ತು ನಾನು ನಿನಗೂ ಅನುರೂಪವಾಗಿದ್ದೇವೆ. ನನ್ನ ಮಗಳನ್ನು ನಿನ್ನ ಸೊಸೆಯಾಗಿ ಸತ್ಯವಂತನ ಪತ್ನಿಯಾಗಿ ಸ್ವೀಕರಿಸು.

ದ್ಯುಮತ್ಸೇನಃ

ಪೂರ್ವಮೇವಾಭಿಲಷಿತಃ ಸಂಬಂಧೋ ಮೇ ತ್ವಯಾ ಸಹ ।
ಭ್ರಷ್ಟರಾಜ್ಯಸ್ತ್ವಹಮಿತಿ ತತ ಏತದ್ ವಿಚಾರಿತಮ್ ॥೧೩॥

ಅಭಿಪ್ರಾಯಸ್ತ್ವಯಂ ಯೋ ಮೇ ಪೂರ್ವಮೇವಾಭಿಕಾಂಕ್ಷಿತಃ ।
ಸ ನಿರ್ವರ್ತತು ಮೇಽದ್ಯೈವ ಕಾಂಕ್ಷಿತೋ ಹ್ಯಸಿ ಮೇಽತಿಥಿಃ ॥೧೪॥

ದ್ಯುಮತ್ಸೇನ– ನಿನ್ನ ಜೊತೆಯಲ್ಲಿ ಈ ಸಂಬಂಧವು ನನಗೆ ಮೊದಲೇ ಅಭಿಪ್ರೇತವಾಗಿದ್ದಿತು. ಆದರೆ ರಾಜ್ಯವನ್ನು ಕಳೆದುಕೊಂಡುದುದರಿಂದ ನಾನು ಇಪ್ಪು ವಿಚಾರವನ್ನು ಮಾಡಬೇಕಾಗಿದ್ದಿತು. ನನಗೆ ಮೊದಲೇ ಅಭಿಪ್ರೇತವಾಗಿದ್ದ ಈ ನಿನ್ನ ಸಂಬಂಧವು ಈ ದಿನವೇ ಜರುಗಲಿ. ನೀನು ನನಗೆ ಇಷ್ಟವಾದ ಅತಿಥಿಯಾಗಿದ್ದೀಯೆ.

ಮಾರ್ಕಂಡೇಯಃ

ತತಃ ಸರ್ವಾನ್‌ಸಮಾನಾಯ್ಯ ದ್ವಿಜಾನಾಶ್ರಮವಾಸಿನಃ ।
ಯಥಾವಿಧಿ ಸಮುದ್ವಾಹಂ ಕಾರಯಾಮಾಸತುರ್ನೃಪೌ ॥೧೫॥

ಮಾರ್ಕಂಡೇಯರು– ಅನಂತರ ಆಶ್ರಮವಾಸಿಗಳಾದ ಎಲ್ಲಾ ಬ್ರಾಹ್ಮಣರನ್ನೂ ಕರೆಸಿ ಆ ರಾಜರಿಬ್ಬರೂ ಶಾಸ್ತ್ರವಿಧಿಯಂತೆ ವಿವಾಹವನ್ನು ನೆರವೇರಿಸಿದರು.

ದತ್ತ್ವಾ ಸೋಽಶ್ವಪತಿಃ ಕನ್ಯಾಂ ಯಥಾರ್ಹಂ ಸಪರಿಚ್ಛದಮ್ ।
ಯಯೌ ಸ್ವಮೇವ ಭವನಂ ಯುಕ್ತಃ ಪರಮಯಾ ಮುದಾ ॥೧೬॥

ಅಶ್ವಪತಿಯು ಕನ್ಯಾದಾನವನ್ನು ಮಾಡಿ ಯಥಾಯೋಗ್ಯವಾಗಿ ಉಡುಗೊರೆಗಳನ್ನೂ ಸಾಮಗ್ರಿಗಳನ್ನೂ ಕೊಟ್ಟು ಬಹಳ ಸಂತೋಷದಿಂದ ಕೂಡಿದವನಾಗಿ ತನ್ನ ಮನೆಗೆ ಹಿಂದಿರುಗಿದನು.

ಸತ್ಯವಾನಪಿ ತಾಂ ಭಾರ್ಯಾಂ ಲಬ್ಧ್ವಾ ಸರ್ವಗುಣಾನ್ವಿತಾಮ್ ।
ಮುಮುದೇ ಸಾ ಚ ತಂ ಲಬ್ಧ್ವಾ ಭರ್ತಾರಂ ಮನಸೇಪ್ಸಿತಮ್ ॥೧೭॥

ಸತ್ಯವಂತನೂ ಸಹ ಎಲ್ಲ ಗುಣಗಳಿಂದಲೂ ಕೂಡಿದ್ದ ಆ ಪತ್ನಿಯನ್ನು ಪಡೆದು ಸಂತೋಷಪಟ್ಟನು. ಸಾವಿತ್ರಿಯೂ ಸಹ ತನಗೆ ಇಷ್ಟನಾದ ಪತಿಯನ್ನು ಪಡೆದು ಸಂತೋಷಪಟ್ಟಳು.

ಗತೇ ಪಿತರಿ ಸರ್ವಾಣಿ ಸಂನ್ಯಸ್ಯಾಭರಣಾನಿ ಸಾ ।
ಜಗೃಹೇ ವಲ್ಕಲಾನ್ಯೇವ ವಸ್ತ್ರಂ ಕಾಷಾಯಮೇವ ಚ ॥೧೮॥

ತಂದೆಯು ಹಿಂದಿರುಗುತ್ತಿರಲು ಸಾವಿತ್ರಿಯು ಎಲ್ಲಾ ಆಭರಣಗಳನ್ನೂ ತೆಗೆದಿಟ್ಟು ನಾರುಮಡಿಗಳನ್ನೂ, ಕಾಷಾಯವಸ್ತ್ರವನ್ನೂ ಧರಿಸಿದಳು.

ಪರಿಚಾರೈರ್ಗುಣೈಶ್ಚೈವ ಪ್ರಶ್ರಯೇಣ ದಮೇನ ಚ ।
ಸರ್ವಕಾಮಕ್ರಿಯಾಭಿಶ್ಚ ಸರ್ವೇಷಾಂ ತುಷ್ಟಿಮಾದಧೇ ॥೧೯॥

ತನ್ನ ಪರಿಚರ್ಯೆಗುಣಗಳಿಂದಲೂ, ವಿನಯದಿಂದಲೂ, ಇಂದ್ರಿಯ ನಿಗ್ರಹದಿಂದಲೂ ಅವರಿಗೆ ಇಷ್ಟವಾದ ಎಲ್ಲಾ ಕಾರ್ಯವನ್ನು ಮಾಡುವುದರಿಂದಲೂ ಅವಳು ಎಲ್ಲರಿಗೂ ಸಂತೋಷವನ್ನು ಉಂಟುಮಾಡಿದಳು.

ಶ್ವಶ್ರ್ವಾಂ ಶರೀರಸತ್ಕಾರೈಃ ಸರ್ವೈರಾಚ್ಛಾದನಾದಿಭಿಃ ।
ತಥೈವ ಪ್ರಿಯವಾದೇನ ನೈಪುಣೇನ ಶಮೇನ ಚ ।
ರಹಶ್ಚೈವೋಪಚಾರೇಣ ಭರ್ತಾರಂ ಪರ್ಯತೋಷಯತ್ ॥೨೦॥

ಅತ್ತೆಯನ್ನು ವಸ್ತ್ರಾದಿ ಎಲ್ಲಾ ಶರೀರ ಸತ್ಕಾರದಿಂದಲೂ, ಮಾವನನ್ನು ಮಾತುಗಳನ್ನು ನಿಯಂತ್ರಿಸಿ ದೇವಪೂಜೆಗೆ ಸಹಾಯವನ್ನು ಮಾಡುವುದರಿಂದಲೂ, ಮತ್ತು ಪತಿಯನ್ನು ಪ್ರಿಯವಚನದಿಂದಲೂ, ಕೌಶಲದಿಂದಲೂ, ಶಾಂತಿಯಿಂದಲೂ ಮತ್ತು ರಹಸ್ಯೋಪಚಾರಗಳಿಂದಲೂ ಸಂತೋಷಪಡಿಸಿದಳು.

ಏವಂ ತತ್ರಾಶ್ರಮೇ ತೇಷಾಂ ತದಾ ನಿವಸತಾಂ ಸತಾಮ್ ।
ಕಾಲಸ್ತಪಸ್ಯತಾಂ ಕಶ್ಚಿದಪಾಕ್ರಾಮತ ಭಾರತ ॥೨೧॥

ಎಲೈ ಭಾರತನೇ, ಹೀಗೆ ಆಶ್ರಮದಲ್ಲಿ ವಾಸಮಾಡುತ್ತಾ ತಪಸ್ಸನ್ನು ಮಾಡುತ್ತಿದ್ದ ಅವರಿಗೆ ಸ್ವಲ್ಪಕಾಲವು ಕಳೆಯಿತು.

ಸಾವಿತ್ರ್ಯಾ ಗ್ಲಾಯಮಾನಾಯಾಸ್ತಿಷ್ಠಂತ್ಯಾಸ್ತು ದಿವಾನಿಶಮ್ ।
ನಾರದೇನ ಯದುಕ್ತಂ ತದ್ವಾಕ್ಯಂ ಮನಸಿ ವರ್ತತೇ ॥೨೨॥

ಹಗಲು-ಇರುಳು ಎಲ್ಲರ ಸೇವೆ ಮಾಡಿ ಬಳಲುತ್ತಿದ್ದ ಸಾವಿತ್ರಿಗೆ ನಾರದರು ಹೇಳಿದ ಮಾತುಗಳೇ ಮನಸ್ಸಿನಲ್ಲಿ ಯಾವಾಗಲೂ ಇರುತ್ತಿದ್ದವು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂಸಂಹಿತಾಯಾಂ ವೈಯಾಸಿಕ್ಯಾಂ
ವನಪರ್ವಣಿ ಪತಿವ್ರತಾಮಹಾತ್ಮ್ಯಪರ್ವಣಿ ಚತುಶೀತ್ಯಧಿಕದ್ವಿಶತತಮೋऽಧ್ಯಾಯಃ ॥
॥ ಇತಿ ಸಾವಿತ್ರ್ಯುಪಾಖ್ಯಾನಪರ್ವಣಿ ತೃತೀಯೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವನಪರ್ವದಲ್ಲಿ ಇನ್ನೂರ ಎಂಬತ್ತನಾಲ್ಕನೆಯ ಅಧ್ಯಾಯ ಮುಗಿಯಿತು.

★ ★ ★ ★

ಇನ್ನೂರ ಎಂಬತ್ತೈದನೆಯ ಅಧ್ಯಾಯ

ನಾರದರು ಹೇಳಿದ ಪತಿಯ ಮರಣದ ದಿವಸದಲ್ಲಿ ಸಾವಿತ್ರಿಯಿಂದ ಪತಿಯ ಜೊತೆಯಲ್ಲಿ ವನಗಮನ.

ಮಾರ್ಕಂಡೇಯಃ

ತತಃ ಕಾಲೇ ಬಹುತಿಥೇ ವ್ಯತಿಕ್ರಾಂತೇ ಕದಾಚನ ।
ಪ್ರಾಪ್ತಃ ಸ ಕಾಲೋ ಮರ್ತವ್ಯಂ ಯತ್ರ ಸತ್ಯವತಾ ನೃಪ ॥೧॥

ಮಾರ್ಕಂಡೇಯರು– ಎಲೈ ರಾಜನೇ, ಹೀಗೆ ಬಹಳ ಸಮಯವು ಕಳೆದ ಮೇಲೆ ಒಂದು ಸಲ ಸತ್ಯವಂತನು ಮರಣವನ್ನು ಹೊಂದಬೇಕಾದ ದಿನವು ಪ್ರಾಪ್ತವಾಯಿತು.

ಗಣಯಂತ್ಯಾಶ್ಚ ಸಾವಿತ್ರ್ಯಾ ದಿವಸೇ ದಿವಸೇ ಗತೇ ।
ಯದ್ವಾಕ್ಯಂ ನಾರದೇನೋಕ್ತಂ ವರ್ತತೇ ಹೃದಿ ನಿತ್ಯಶಃ ॥೨॥

ಕಳೆದ ಒಂದೊಂದು ದಿವಸವನ್ನೂ ಎಣಿಸುತ್ತಿದ್ದ ಸಾವಿತ್ರಿಗೆ ನಾರದರ ಆ ಮಾತು ಯಾವಾಗಲೂ ಮನಸ್ಸಿನಲ್ಲಿ ಕೊರೆಯುತ್ತಿತ್ತು.

ಚತುರ್ಥೇऽಹನಿ ಮರ್ತವ್ಯಮಿತಿ ಸಂಚಿಂತ್ಯ ಭಾಮಿನೀ ।
ವ್ರತಂ ತ್ರಿರಾತ್ರಮುದ್ದಿಶ್ಯ ದಿವಾರಾತ್ರಂ ಸ್ಥಿತಾऽಭವತ್ ॥೩॥

ಇಂದಿನಿಂದ ನಾಲ್ಕನೆಯ ದಿವಸ ಮರಣದ ದಿನವೆಂದು ಯೋಚಿಸಿದ ಆ ಭಾಮಿನಿಯು ಮೂರು ದಿವಸದ ವ್ರತವನ್ನು ಸಂಕಲ್ಪಿಸಿ ಹಗಲೂ ಮತ್ತು ರಾತ್ರಿಯೂ ಜಾಗರೂಕಳಾಗಿದ್ದಳು.

ತ್ರಯೋದಶ್ಯಾಂ ಚೋಪವಾಸಂ ಪ್ರತಿಪತ್ಸು ಚ ಪಾರಣಮ್ ।
ತಂ ಶ್ರುತ್ವಾ ನಿಯಮಂ ತಸ್ಯಾ ಭೃಶಂ ದುಃಖಾನ್ವಿತೋ ನೃಪಃ ।
ಉತ್ಥಾಯ ವಾಕ್ಯಂ ಸಾವಿತ್ರೀಮಬ್ರವೀತ್ ಪರಿಸಾಂತ್ವಯನ್ ॥೪॥

ತ್ರಯೋದಶಿಯಿಂದ ಮೂರುದಿವಸಗಳ ಉಪವಾಸ ಮತ್ತು ಪ್ರತಿಪತ್‌ದಿನದ ಪಾರಣೆ ಅವಳ ಸಂಕಲ್ಪವಾಗಿದ್ದಿತು. ಅವಳ ನಿಯಮವನ್ನು ಕೇಳಿದ ರಾಜನು ಬಹಳ ದುಃಖಾನ್ವಿತನಾಗಿ ಎದ್ದು ಬಂದು ಸಾವಿತ್ರಿಯನ್ನು ಸಮಾಧಾನ ಮಾಡುತ್ತಾ ಮಾತನಾಡಿದನು.

ಅತಿತೀವ್ರೋऽಯಮಾರಂಭಸ್ತ್ವಯಾऽऽರಬ್ಧೋ ನೃಪಾತ್ಮಜೇ ।
ತಿಸೃಣಾಂ ವಸತೀನಾಂ ಹಿ ಸ್ಥಾನಂ ಪರಮದುಶ್ಚರಮ್ ॥೫॥

ಎಲೌ ರಾಜಕುಮಾರಿಯೇ, ನೀನು ಬಹಳ ಕಷ್ಟಕರವಾದ ವ್ರತವನ್ನು ಆರಂಭಿಸಿದ್ದೀಯೆ. ಮೂರುದಿನಗಳ ಉಪವಾಸದ ಅನುಷ್ಠಾನವು ಬಹಳ ಕಷ್ಟಕರವಾದುದು.

ಸಾವಿತ್ರೀ

ನ ಕಾರ್ಯಸ್ತಾತ ಸಂತಾಪಃ ಪಾರಯಿಷ್ಯಾಮ್ಯಹಂ ವ್ರತಮ್ ।
ವ್ಯವಸಾಯಕೃತಂ ಹೀದಂ ವ್ಯವಸಾಯಶ್ಚ ಕಾರಣಮ್ ॥೬॥

ಸಾವಿತ್ರೀ– ಪೂಜ್ಯರೇ, ಸಂತಾಪಪಡಬೇಡಿ. ನಾನು ಈ ವ್ರತವನ್ನು ಚೆನ್ನಾಗಿ ಮುಗಿಸುವೆನು. ಇಂತಹ ವ್ರತಗಳಿಗೆಲ್ಲಾ ಮನಸ್ಸಿನ ಧೈರ್ಯವೇ ಮುಖ್ಯಕಾರಣ. ನಾನು ಆ ಧೈರ್ಯದಿಂದಲೇ ಹೀಗೆ ಸಂಕಲ್ಪಿಸಿದ್ದೇನೆ.

ದ್ಯುಮತ್ಸೇನಃ

ವ್ರತಂ ಭುಂಧೀತಿ ವಕ್ತುಂ ತ್ವಾಂ ನಾಸ್ಮಿ ಶಕ್ತಃ ಕಥಂಚನ ।
ಪಾರಯಸ್ವೇತಿ ವಚನಂ ಯುಕ್ತಮಸ್ಮದ್ವಿಧೋ ವದೇತ್ ॥೭॥

ದ್ಯುಮತ್ಸೇನ– ವ್ರತವನ್ನು ಬಿಡು ಎಂದು ಹೇಳಲು ನನ್ನಂತಹವನಿಂದ ಸಾಧ್ಯವಾಗುವುದಿಲ್ಲ. ನನ್ನಂತಹವನು ವ್ರತವನ್ನು ಸಮಾಪ್ತಿಗೊಳಿಸು ಎಂದೇ ಹೇಳಬೇಕು.

ಮಾರ್ಕಂಡೇಯಃ

ಏವಮುಕ್ತ್ವಾ ದ್ಯುಮತ್ಸೇನೋ ವಿರರಾಮ ಮಹಾಮನಾಃ ।
ತಿಷ್ಠಂತೀ ಸಾಪಿ ಸಾವಿತ್ರೀ ಕಾಷ್ಠಭೂತೇವ ಲಕ್ಷ್ಯತೇ ॥೮॥

ಮಾರ್ಕಂಡೇಯರು– ಹೀಗೆ ಹೇಳಿ ಮಹಾಮನಸ್ಸುಳ್ಳ ದ್ಯುಮತ್ಸೇನನು ಸುಮ್ಮನಾದನು. ವ್ರತವನ್ನು ಹಿಡಿದ ಸಾವಿತ್ರಿಯು ಕಾಷ್ಠದಂತೆ ಅಲುಗಾಡದೇ ವ್ರತವನ್ನು ಮಾಡಿದಳು.

ಶ್ವೋಭೂತೇ ಭರ್ತೃಮರಣೇ ಸಾವಿತ್ರ್ಯಾ ಭರತರ್ಷಭ ।
ದುಃಖಾನ್ವಿತಾಯಾಸ್ತಿಷ್ಠಂತ್ಯಾಃ ಸಾ ರಾತ್ರಿರ್ವ್ಯತ್ಯವರ್ತತ ॥೯॥

ಎಲೈ ಭರತರ್ಷಭನೇ, ನಾಳೆ ಮರಣ ದಿವಸ ಎಂದಾದಾಗ ದುಃಖಾನ್ವಿತಳಾದ ಸಾವಿತ್ರಿಗೆ ಆ ದಿನವು ಬಹಳ ಕಷ್ಟದಿಂದ ಕಳೆಯಿತು.

ಅದ್ಯ ತದ್ದಿವಸಂ ಚೇತಿ ಹುತ್ವಾ ದೀಪ್ತಂ ಹುತಾಶನಮ್ ।
ಯುಗಮಾತ್ರೋದಿತೇ ಸೂರ್ಯೇ ಕೃತ್ವಾ ಪೌರ್ವಾಹ್ಣಿಕೀಃ ಕ್ರಿಯಾಃ ॥೧೦॥

ತತಃ ಸರ್ವಾನ್ ದ್ವಿಜಾನ್ ವೃದ್ಧಾನ್ ಶ್ವಶ್ರೂಂ ಶ್ವಶುರಮೇವ ಚ ।
ಅಭಿವಾದ್ಯಾನುಪೂರ್ವ್ಯೇಣ ಪ್ರಾಂಜಲಿರ್ನಿಯತಾ ಸ್ಥಿತಾ ॥೧೧॥

ಈ ದಿನ ಮರಣ ದಿವಸವೆಂದು ತಿಳಿದು ಅವಳು ಅಗ್ನಿಯಲ್ಲಿ ಹೋಮವನ್ನು ಮಾಡಿ ಸೂರ್ಯನು ಒಂದು ನೊಗದಷ್ಟು ಮಾತ್ರ ಮೇಲೆ ಬಂದಿರುವಾಗ ಪೂರ್ವಾಹ್ಣಿಕ ಕ್ರಿಯೆಗಳೆಲ್ಲವನ್ನೂ ಮಾಡಿ ಅನಂತರ ಎಲ್ಲ ಬ್ರಾಹ್ಮಣರಿಗೂ, ಹಿರಿಯರಿಗೂ, ಅತ್ತೆಗೂ, ಮಾವನಿಗೂ ಕ್ರಮವನ್ನು ನಮಸ್ಕಾರವನ್ನು ಮಾಡಿ ಕೈಗಳನ್ನು ಮುಗಿದು ಮಾತನಾಡದೇ ನಿಂತಳು.

ಅವೈಧವ್ಯಾಶಿಷಸ್ತೇ ತು ಸಾವಿತ್ರ್ಯರ್ಥಂ ಹಿತಾಃ ಶುಭಾಃ ।
ಊಚುಸ್ತಪಸ್ವಿನಃ ಸರ್ವೇ ತಪೋವನನಿವಾಸಿನಃ ॥೧೨॥

ತಪೋವನ ನಿವಾಸಿಗಳಾದ ಅವರೆಲ್ಲರೂ ಸಾವಿತ್ರಿಗೆ ಹಿತವಾದ, ಶುಭವಾದ, ಸೌಮಂಗಲ್ಯವೃದ್ಧಿಯನ್ನು ಮಾಡುವ ಆಶೀರ್ವಾದಗಳನ್ನು ಮಾಡಿದರು.

ಏವಮಸ್ತ್ವಿತಿ ಸಾವಿತ್ರೀ ಧ್ಯಾನಯೋಗಪರಾಯಣಾ ।
ಮನಸಾ ತಾ ಗಿರಃ ಸರ್ವಾ ಪ್ರತ್ಯಗೃಹ್ಣಾತ್ ತಪಸ್ವಿನಾಮ್ ॥೧೩॥

ಧ್ಯಾನಯೋಗಪರಾಯಣಳಾದ ಸಾವಿತ್ರಿಯು ನೀವು ಆಶೀರ್ವಾದ ಮಾಡಿದಂತೆಯೇ ಆಗಲಿ ಎಂದು ಆ ತಪಸ್ವಿಗಳು ಆಡಿದ ಎಲ್ಲ ಮಾತುಗಳನ್ನೂ ಮನಸ್ಸಿನಿಂದಲೇ ಸ್ವೀಕರಿಸಿದಳು.

ತಂ ಕಾಲಂ ತಂ ಮುಹೂರ್ತಂ ಚ ಪ್ರತೀಕ್ಷಂತೀ ನೃಪಾತ್ಮಜಾ ।
ಯಥೋಕ್ತಂ ನಾರದವಚಶ್ಚಿಂತಯಂತೀ ಸುದುಃಖಿತಾ ॥೧೪॥

ಆ ರಾಜಕುಮಾರಿಯು ನಾರದರು ಹೇಳಿದ ಆ ಕಾಲವನ್ನು, ಆ ಮುಹೂರ್ತವನ್ನು ನಿರೀಕ್ಷಿಸುತ್ತಾ ಚಿಂತಾಕ್ರಾಂತಳಾಗಿ ದುಃಖದಿಂದ ಕೂಡಿದವಳಾಗಿದ್ದಳು.

ತತಸ್ತು ಶ್ವಶ್ರೂಶ್ವಶುರಾವೂಚತುಸ್ತಾಂ ನೃಪಾತ್ಮಜಾಮ್ ।
ಏಕಾಂತಮಾಸ್ಥಿತಾಂ ವಾಕ್ಯಂ ಪ್ರೀತ್ಯಾ ಭರತಸತ್ತಮ ॥೧೫॥

ಎಲೈ ಭರತಸತ್ತಮನೇ, ಆಗ ಅವಳ ಅತ್ತೆ ಮಾವಂದಿರು ಏಕಾಂತದಲ್ಲಿ ಇದ್ದ ಆ ರಾಜಕುಮಾರಿಯನ್ನು ಕುರಿತು ಹೀಗೆ ಹೇಳಿದರು.

ವ್ರತಂ ಯಥೋಪದಿಷ್ಟಂ ತು ಯಥಾ ತತ್ಪಾರಿತಂ ತ್ವಯಾ ।
ಆಹಾರಕಾಲಃ ಸಂಪ್ರಾಪ್ತಃ ಕ್ರಿಯತಾಂ ಯದನಂತರಮ್ ॥೧೬॥

ನೀನು ಸಂಕಲ್ಪ ಮಾಡಿದ್ದಂತೆ ಮೂರುದಿನದ ವ್ರತವನ್ನು ಮುಗಿಸಿದ್ದೀಯೆ. ಈಗ ಪಾರಣೆಯ (ಆಹಾರ ಸ್ವೀಕಾರ ಕಾಲವು) ಕಾಲವು ಪ್ರಾಪ್ತವಾಗಿದೆ. ಈಗ ಮಾಡಬೇಕಾದುದನ್ನು ಮಾಡು.

ಸಾವಿತ್ರೀ

ಅಸ್ತಂ ಗತೇ ಮಯಾऽऽದಿತ್ಯೇ ಭೋಕ್ತವ್ಯಂ ಕೃತಕಾಮಯಾ ।
ಏಷ ಮೇ ಹೃದಿ ಸಂಕಲ್ಪಃ ಸಮಯಶ್ಚ ಕೃತೋ ಮಯಾ ॥೧೭॥

ಸಾವಿತ್ರೀ– ಸೂರ್ಯನು ಅಸ್ತಂಗತನಾದಮೇಲೆ ನಾನು ಆಹಾರವನ್ನು ಸ್ವೀಕಾರ ಮಾಡುತ್ತೇನೆ ಎಂದು ನಾನು ಸಂಕಲ್ಪವನ್ನೂ, ನಿಬಂಧನೆಯನ್ನೂ ಮಾಡಿಕೊಂಡಿದ್ದೇನೆ.

ಮಾರ್ಕಂಡೇಯಃ

ಏವಂ ಸಂಭಾಷಮಾಣಾಯಾಃ ಸಾವಿತ್ರ್ಯಾ ಭೋಜನಂ ಪ್ರತಿ ।
ಸ್ಕಂಧೇ ಪರಶುಮಾದಾಯ ಸತ್ಯವಾನ್ ಪ್ರಸ್ಥಿತೋ ವನಮ್ ॥೧೮॥

ಸಾವಿತ್ರೀ ತ್ವಾಹ ಭರ್ತಾರಂ ನೈಕಸ್ತ್ವಂ ಗಂತುಮರ್ಹಸಿ ।
ಸಹ ತ್ವಯಾ ಗಮಿಷ್ಯಾಮಿ ನ ಹಿ ತ್ವಾಂ ಹಾತುಮುತ್ಸಹೇ ॥೧೯॥

ಮಾರ್ಕಂಡೇಯ– ಭೋಜನದ ವಿಷಯದಲ್ಲಿ ಸಾವಿತ್ರಿಯು ಹೀಗೆ ಮಾತನಾಡುತ್ತಿರುವಾಗ ಹೆಗಲಿನ ಮೇಲೆ ಕೊಡಲಿಯನ್ನು ಇಟ್ಟುಕೊಂಡು ಸತ್ಯವಂತನು

ಕಾಡಿಗೆ ಹೊರಟನು. ಸಾವಿತ್ರಿಯು ಪತಿಯನ್ನು ಕುರಿತು ನೀವೊಬ್ಬರೇ ಹೋಗಬಾರದು, ನಾನೂ ಸಹ ಬರುವೆನು. ನಿಮ್ಮನ್ನು ನಾನು ಬಿಡಲಾರೆ ಎಂದು ಹೇಳಿದಳು.

ಸತ್ಯವಾನ್

ವನಂ ನ ಗತಪೂರ್ವಂ ತೇ ದುಃಖಿಃ ಪಂಥಾಶ್ಚ ಭಾವಿನಿ ।
ವ್ರತೋಪವಾಸಕ್ಲಾಮಾ ಚ ಕಥಂ ಪದ್ಭ್ಯಾಂ ಗಮಿಷ್ಯಸಿ ॥೨೦॥

ಸತ್ಯವಾನ್– ಭಾಮಿನಿಯೇ, ನೀನು ಆ ವನಕ್ಕೆ ಹಿಂದೆ ಹೋದವಳಲ್ಲ. ದಾರಿಯೂ ಕಷ್ಟಕರವಾಗಿದೆ. ನೀನು ಮೂರುದಿನದ ಉಪವಾಸಗಳನ್ನು ಮಾಡಿ ಕೃಶಳಾಗಿದ್ದೀಯೆ. ನೀನು ಹೇಗೆ ನಡೆದುಕೊಂಡು ಬರುವಿ?

ಸಾವಿತ್ರೀ

ಉಪವಾಸಾನ್ನ ಮೇ ಗ್ಲಾನಿರ್ನಾಸ್ತಿ ಚಾಪಿ ಪರಿಶ್ರಮಃ ।
ಗಮನೇ ಚ ಕೃತೋತ್ಸಾಹಾಂ ಪ್ರತಿಷೇದ್ಧುಂ ನ ಮಾಽರ್ಹಸಿ ॥೨೧॥

ಸಾವಿತ್ರೀ– ಉಪವಾಸದಿಂದ ನನಗೆ ಏನೂ ಗ್ಲಾನಿಯಾಗಲೀ ಅಥವಾ ಸಂಕಟವಾಗಲೀ ಅಥವಾ ಆಯಾಸವಾಗಲೀ ಆಗಿಲ್ಲ. ಕಾಡಿನಲ್ಲಿ ಹೊರಡುವ ಉತ್ಸಾಹದಲ್ಲಿದ್ದೇನೆ. ನನ್ನನ್ನು ನಿರಾಕರಿಸಬಾರದು.

ಸತ್ಯವಾನ್

ಯದಿ ತೇ ಗಮನೋತ್ಸಾಹಃ ಕರಿಷ್ಯಾಮಿ ತವ ಪ್ರಿಯಮ್ ।
ಮಮ ತ್ವಾಮಂತ್ರಯ ಗುರೂನ್ ನ ಮಾಂ ದೋಷಃ ಸ್ಪೃಶೇದಯಮ್॥

ಸತ್ಯವಾನ್– ನಿನಗೆ ಕಾಡಿಗೆ ಬರುವುದರಲ್ಲಿ ಆಸಕ್ತಿ ಇರುವುದಾದರೆ ನಿನಗೆ ಪ್ರಿಯವನ್ನು ಮಾಡುವೆನು. ಆದರೆ ನನ್ನ ಹಿರಿಯರ ಅಪ್ಪಣೆಯನ್ನು ಪಡೆದುಕೋ. ನನಗೆ ಈ ದೋಷವು ಬರಬಾರದು.

ಮಾರ್ಕಂಡೇಯಃ

ಸಾಽಭಿವಾದ್ಯಾಬ್ರವೀಚ್ಛ್ವಶ್ರ್ಯಾಂ ಶ್ವಶುರಂ ಚ ಮಹಾವ್ರತಾ ॥೨೩॥

ಅಯಂ ಗಚ್ಛತಿ ಮೇ ಭರ್ತಾ ಫಲಾಹಾರೋ ಮಹಾವನಮ್ ।
ಇಚ್ಛೇಯಮಭ್ಯನುಜ್ಞಾತುಂ ಆರ್ಯಯಾ ಶ್ವಶುರೇಣ ಹ ।
ಅನೇನ ಸಹ ನಿರ್ಗಂತುಂ ನ ಮೇಽದ್ಯ ವಿರಹಃ ಕ್ಷಮಃ ॥೨೪॥

ಮಾರ್ಕಂಡೇಯರು– ಮಹಾವ್ರತವನ್ನು ಧರಿಸಿದ ಆ ಸಾವಿತ್ರಿಯು ಅತ್ತೆ ಮಾವಂದಿರಿಗೆ ನಮಸ್ಕಾರವನ್ನು ಮಾಡಿ ನನ್ನ ಪತಿಯು ಹಣ್ಣುಗಳನ್ನು ತರಲು ದೊಡ್ಡ ಕಾಡಿಗೆ ಹೋಗುತ್ತಿದ್ದಾನೆ. ಪೂಜ್ಯರಾದ ನೀವು ಮತ್ತು ಮಾವನು ಪತಿಯ ಜೊತೆಯಲ್ಲಿ ಕಾಡಿಗೆ ಹೋಗಲು ನನಗೆ ಅನುಮತಿಯನ್ನು ಕೊಡಬೇಕು. ನಾನು ಈ ದಿನ ಪತಿಯನ್ನು ಬಿಟ್ಟಿರಲಾರೆ.

ಗುರ್ವಗ್ನಿಹೋತ್ರಾರ್ಥಕೃತೇ ಪ್ರಸ್ಥಿತಶ್ಚ ಸುತಸ್ತವ ।
ನ ನಿವಾರ್ಯೋ ನಿವಾರ್ಯಃ ಸ್ಯಾದನ್ಯಥಾ ಪ್ರಸ್ಥಿತೋ ವನಮ್ ॥೨೫॥

ನಿಮ್ಮ ಮಗನು ಹಿರಿಯರ ಮತ್ತು ಅಗ್ನಿಹೋತ್ರದ ಸಲುವಾಗಿ ಕಾಡಿಗೆ ಹೊರಟಿದ್ದಾನೆ. ಅವನನ್ನು ನಿವಾರಿಸಬಾರದು. ಬೇರೆ ಉದ್ದೇಶದಿಂದ ಹೊರಟಿದ್ದರೆ ನಿವಾರಿಸಬಹುದಾಗಿದ್ದಿತು.

ಸಂವತ್ಸರಃ ಕಿಂಚಿದೂನೋ ನ ನಿಷ್ಕ್ರಾಂತಾऽಹಮಾಶ್ರಮಾತ್ ।
ವನಂ ಕುಸುಮಿತಂ ದ್ರಷ್ಟುಂ ಪರಂ ಕೌತೂಹಲಂ ಹಿ ಮೇ ॥೨೬॥

ನಾನು ಆಶ್ರಮಕ್ಕೆ ಬಂದು ಸ್ವಲ್ಪ ಕಡಿಮೆ ಒಂದು ವರ್ಷವು ಕಳೆದಿದೆ. ಹೂವುಗಳು ಅರಳಿದ ಕಾಡನ್ನು ನೋಡಲು ನನಗೆ ಕುತೂಹಲವಿದೆ.

ದ್ಯುಮತ್ಸೇನಃ

ಯತಃ ಪ್ರಭೃತಿ ಸಾವಿತ್ರೀ ಪಿತ್ರಾ ದತ್ತಾ ಸ್ನುಷಾ ಮಮ ।
ನಾನಯಾಭ್ಯರ್ಥನಾಯುಕ್ತಮುಕ್ತಪೂರ್ವಂ ಸ್ಮರಾಮ್ಯಹಮ್ ॥೨೭॥

ದ್ಯುಮತ್ಸೇನ– ಸಾವಿತ್ರಿಯು ನಿನ್ನ ತಂದೆಯು ಅವಳನ್ನು ಸೊಸೆಯಾಗಿ ದಾನಮಾಡಿದ ದಿನದಿಂದಲೂ ಯಾವುದೇ ಅನ್ಯಾಯ ಪ್ರಾರ್ಥನೆಯನ್ನು ಮಾಡಿರುವುದು ನನ್ನ ಸ್ಮರಣೆಗೆ ಬರುತ್ತಿಲ್ಲ.

ತದೇಷಾ ಲಭತಾಂ ಕಾಮಂ ಯಥಾಭಿಲಷಿತಂ ವಧೂಃ ।
ಅಪ್ರಮಾದಶ್ಚ ಕರ್ತವ್ಯಃ ಪುತ್ರಿ ಸತ್ಯವತಃ ಪಥಿ ॥೨೮॥

ಆದ್ದರಿಂದ ಸೊಸೆಯಾದ ಅವಳ ಅಭಿಲಾಷೆಯಂತೆ ಅವಳ ಆಸೆಯು ಪೂರ್ಣವಾಗಲಿ. ಮಗಳೇ, ಸತ್ಯವಂತನನ್ನು ದಾರಿಯಲ್ಲಿ ಎಚ್ಚರಿಕೆಯಿಂದ ನೋಡಿಕೊಳ್ಳಬೇಕು.

ಮಾರ್ಕಂಡೇಯಃ

ಉಭಾಭ್ಯಾಮಭ್ಯನುಜ್ಞಾತಾ ಸಾ ಜಗಾಮ ಯಶಸ್ವಿನೀ ।
ಸಹ ಭರ್ತ್ರಾ ಹಸಂತೀವ ಹೃದಯೇನ ವಿದೂಯತಾ ॥೨೯॥

ಮಾರ್ಕಂಡೇಯರು– ಇಬ್ಬರಿಂದಲೂ ಅನುಜ್ಞೆಯನ್ನು ಪಡೆದ ಯಶಸ್ವಿನಿಯಾದ ಆ ಸಾವಿತ್ರಿಯು ಪತಿಯ ಜೊತೆಯಲ್ಲಿ ಮನಸ್ಸಿನಲ್ಲಿ ದುಃಖವನ್ನು ತುಂಬಿಟ್ಟುಕೊಂಡು ನಗುವವಳಂತೆ ನಡೆದಳು.

ಸಾ ವನಾನಿ ವಿಚಿತ್ರಾಣಿ ರಮಣೀಯಾನಿ ಸರ್ವಶಃ ।
ಮಯೂರಗಣಜುಷ್ಟಾನಿ ದದರ್ಶ ವಿಪುಲೇಕ್ಷಣಾ ॥೩೦॥

ವಿಶಾಲನೇತ್ರೆಯಾದ ಅವಳು ಎಲ್ಲ ಕಡೆಗಳಲ್ಲಿಯೂ ಸುಂದರವಾದ, ವಿಚಿತ್ರವಾದ, ನವಿಲುಗಳ ಸಮೂಹದಿಂದ ಸೇವಿತವಾದ ಕಾಡುಗಳನ್ನು ನೋಡಿದಳು.

ನದೀಃ ಪುಣ್ಯವಹಾಶ್ಚೈವ ಪುಷ್ಪಿತಾಂಶ್ಚ ನಗೋತ್ತಮಾನ್ ।
ಸತ್ಯವಾನಾಹ ಪಶ್ಯೇತಿ ಸಾವಿತ್ರೀಂ ಮಧುರಂ ವಚಃ ॥೩೧॥

ಸತ್ಯವಂತನು ಸಾವಿತ್ರಿಯನ್ನು ಕುರಿತು ಪವಿತ್ರವಾದ ನೀರಿನಿಂದ ಹರಿಯುತ್ತಿರುವ ನದಿಗಳನ್ನೂ, ಹೂ ಅರಳಿದ ಶ್ರೇಷ್ಠ ವೃಕ್ಷಗಳನ್ನೂ ನೋಡು ಎಂದು ಮಧುರವಾಗಿ ಮಾತನಾಡಿದನು.

ನಿರೀಕ್ಷಮಾಣಾ ಭರ್ತಾರಂ ಸರ್ವಾವಸ್ಥಮನಿಂದಿತಾ ।
ಮೃತಮೇವ ಹಿ ತಂ ಮೇನೇ ಕಾಲೇ ಮುನಿವಚಃ ಸ್ಮರತ್ ॥೩೨॥

ತನ್ನ ಪತಿಯನ್ನು ಅನಿಂದಿತಳಾದ ಅವಳು ಎಲ್ಲಾ ಅವಸ್ಥೆಯಲ್ಲಿಯೂ ಒಂದು ಕ್ಷಣವೂ ಬಿಡದೆ ನೋಡುತ್ತಾ ನಾರದರ ಮಾತುಗಳನ್ನು ಸ್ಮರಿಸಿಕೊಂಡು ತನ್ನ ಪತಿಯು ಮೃತನೇ ಆಗಿದ್ದಾನೆಂದು ತಿಳಿದಳು.

ಅನುವ್ರಜಂತೀ ಭರ್ತಾರಂ ಜಗಾಮ ಮೃದುಗಾಮಿನೀ ।
ದ್ವಿಧೇವ ಹೃದಯಂ ಕೃತ್ವಾ ತಂ ಚ ಕಾಲಮವೇಕ್ಷತೀ ॥೩೩॥

ಮೃದುಗಾಮಿನಿಯಾದ ಅವಳು ಆ ಕಾಲವನ್ನು ನಿರೀಕ್ಷಿಸುತ್ತಾ ಹೃದಯವು ಎರಡು ಹೋಳಾಗಿ ಬಿರಿದಂತೆ ಪತಿಯನ್ನು ಹಿಂಬಾಲಿಸಿದಳು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂಸಂಹಿತಾಯಾಂ ವೈಯಾಸಿಕ್ಯಾಂ ವನಪರ್ವಣಿ ಪತಿವ್ರತಾಮಹಾತ್ಮ್ಯಪರ್ವಣಿ ಪಂಚಶೀತ್ಯಧಿಕದ್ವಿಶತತಮೋऽಧ್ಯಾಯಃ ॥
॥ ಇತಿ ಸಾವಿತ್ರ್ಯುಪಾಖ್ಯಾನಪರ್ವಣಿ ಚತುರ್ಥೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವನಪರ್ವದಲ್ಲಿ ಇನ್ನೂರ ಎಂಬತ್ತೈದನೆಯ ಅಧ್ಯಾಯ ಮುಗಿಯಿತು.

★ ★ ★ ★

ಇನ್ನೂರ ಎಂಬತ್ತಾರನೆಯ ಅಧ್ಯಾಯ

ಸತ್ಯವಂತನ ಜೊತೆಯಲ್ಲಿ ಸಾವಿತ್ರಿಯ ವನಗಮನ. ಮರವನ್ನು ಕಡಿದು ಸತ್ಯವಂತನಿಗೆ ಆಯಾಸ. ಯಮನ ಆಗಮನ. ಯಮ ಸಾವಿತ್ರಿಯ ಸಂವಾದ.
ಯಮನಿಂದ ಸತ್ಯವಂತನಿಗೆ ಪುನಃ ಪ್ರಾಣದಾನ.

ಮಾರ್ಕಂಡೇಯಃ

ಅಥ ಭಾರ್ಯಾಸಹಾಯಃ ಸ ಫಲಾನ್ಯಾದಾಯ ವೀರ್ಯವಾನ್ ।
ಕಠಿನಂ ಪೂರಯಾಮಾಸ ತತಃ ಕಾಷ್ಠಾನ್ಯಪಾಟಯತ್ ॥೧॥

ಮಾರ್ಕಂಡೇಯರು– ಅನಂತರ ಪತ್ನಿಯ ಸಹಾಯವನ್ನು ಹೊಂದಿದ್ದ ಪರಾಕ್ರಮಶಾಲಿಯಾದ ಅವನು ಹಣ್ಣುಗಳನ್ನು ಆರಿಸಿಕೊಂಡು ಬುಟ್ಟಿಯಲ್ಲಿ ತುಂಬಿಸಿ ಅನಂತರ ಕಟ್ಟಿಗೆಯನ್ನು ಒಡೆದನು.

ತಸ್ಯ ಪಾಟಯತಃ ಕಾಷ್ಠಂ ಸ್ವೇದೋ ವೈ ಸಮಜಾಯತ ।
ವ್ಯಾಯಾಮೇನ ಚ ತೇನಾಸ್ಯ ಜಜ್ಞೇ ಶಿರಸಿ ವೇದನಾ ।
ಸೋऽಭಿಗಮ್ಯ ಪ್ರಿಯಾಂ ಭಾರ್ಯಾಮುವಾಚ ಶ್ರಮಪೀಡಿತಃ ॥೨॥

ಕಟ್ಟಿಗೆಯನ್ನು ಒಡೆಯುತ್ತಿರುವಂತೆ ಅವನ ದೇಹವು ಬೆವರಿತು. ಕಾರ್ಯದಿಂದ ಉಂಟಾದ ಆಯಾಸದಿಂದ ಅವನಿಗೆ ಶಿರೋವೇದನೆ ಉಂಟಾಯಿತು. ಪೀಡಿತನಾದ ಅವನು ಪ್ರಿಯಳಾದ ಪತ್ನಿಯನ್ನು ಸಮೀಪಿಸಿ ಹೀಗೆ ಮಾತನಾಡಿದನು.

ವ್ಯಾಯಾಮೇನ ಮಮಾನೇನ ಜಾತಾ ಶಿರಸಿ ವೇದನಾ ॥೩॥

ಅಂಗಾನಿ ಚೈವ ಸಾವಿತ್ರಿ ಹೃದಯಂ ದೂಯತೀವ ಚ ।
ಅಸ್ವಸ್ಥಮಿವ ಚಾತ್ಮಾನಂ ಲಕ್ಷಯೇ ಮಿತಭಾಷಿಣಿ ॥೪॥

ಶೂಲೈರಿವ ಶಿರೋ ವಿದ್ಧಮಿದಂ ಸಂಲಕ್ಷಯಾಮ್ಯಹಮ್ ।
ತತ್ ಸ್ವಪ್ತುಮಿಚ್ಛೇ ಕಲ್ಯಾಣಿ ನ ಸ್ಥಾತುಂ ಶಕ್ತಿರಸ್ತಿ ಮೇ ॥೫॥

ಈ ಕಟ್ಟಿಗೆಯನ್ನು ಒಡೆಯುವ ಕಾರ್ಯದಿಂದ ನನಗೆ ತಲೆಯಲ್ಲಿ ನೋವು ಉಂಟಾಗಿದೆ. ಸಾವಿತ್ರೀ, ನನ್ನ ಅಂಗಗಳೂ ಮತ್ತು ಹೃದಯವು ಸೋಲುತ್ತಿವೆ. ಮಿತಭಾಷಿಣಿಯೇ, ನಾನು ಅಸ್ವಸ್ಥನಾಗಿದ್ದೇನೆಂದು ತಿಳಿಯುತ್ತೇನೆ. ಈ ನನ್ನ ತಲೆಯನ್ನು ಶೂಲಗಳಿಂದ ಚುಚ್ಚಿದಂತೆ ನನಗೆ ಭಾಸವಾಗುತ್ತಿದೆ. ಕಲ್ಯಾಣಿಯೇ, ನನಗೆ ನಿಲ್ಲಲು ಶಕ್ತಿಯಿಲ್ಲ. ಮಲಗಿಕೊಳ್ಳಲು ಬಯಸುತ್ತೇನೆ.

ಮಾರ್ಕಂಡೇಯಃ

ಸಾ ಸಮಾಸಾದ್ಯ ಸಾವಿತ್ರೀ ಭರ್ತಾರಮುಪಗಮ್ಯ ಚ ।
ಉತ್ಸಂಗೇಽಸ್ಯ ಶಿರಃ ಕೃತ್ವಾ ನಿಷಸಾದ ಮಹೀತಲೇ ॥೬॥

ಮಾರ್ಕಂಡೇಯರು– ಸಾವಿತ್ರಿಯು ಪತಿಯನ್ನು ಸಮೀಪಿಸಿ ಅವನ ತಲೆಯನ್ನು ತನ್ನ ತೊಡೆಯ ಮೇಲಿಟ್ಟುಕೊಂಡು ನೆಲದ ಮೇಲೆ ಕುಳಿತಳು.

ತತಃ ಸಾ ನಾರದವಚೋ ವಿಮೃಶಂತೀ ತಪಸ್ವಿನೀ ।
ತಂ ಮುಹೂರ್ತಂ ಕ್ಷಣಂ ವೇಲಾಂ ದಿವಸಂ ಚ ಯುಯೋಜ ಹ ॥೭॥

ಆಗ ಶೋಚನೀಯಳಾದ ಅವಳು ನಾರದರ ಮಾತನ್ನು ವಿಮರ್ಶೆ ಮಾಡುತ್ತಾ ಆ ದಿವಸವು, ಆ ಮುಹೂರ್ತವು, ಆ ಕ್ಷಣವು ಒದಗಿದೆ ಎಂದು ತಿಳಿದಳು.

ಹಂತ ಪ್ರಾಪ್ತಃ ಸ ಕಾಲೋಽಯಮಿತಿ ಚಿಂತಾಪರಾ ಸತೀ ।
ಮುಹೂರ್ತಾದೇವ ಚಾಪಶ್ಯತ್ ಪುರುಷಂ ರಕ್ತವಾಸಸಮ್ ॥೮॥

ಅಯ್ಯೋ! ಆ ಕಾಲವು ಬಂದೇ ಬಿಟ್ಟಿತು ಎಂದು ಚಿಂತಾಪರಳಾದ ಆ ಪತಿವ್ರತೆಯು ಒಂದು ಮುಹೂರ್ತದಲ್ಲಿ ರಕ್ತವಸ್ತ್ರವನ್ನು ಧರಿಸಿದ ಒಬ್ಬ ಪುರುಷನನ್ನು ನೋಡಿದಳು.

ಬದ್ಧಮೌಲಿಂ ವಪುಷ್ಮಂತಮಾದಿತ್ಯಸಮತೇಜಸಮ್ ।
ಶ್ಯಾಮಾವದಾತಂ ರಕ್ತಾಕ್ಷಂ ಪಾಶಹಸ್ತಂ ಭಯಾವಹಮ್ ॥೯॥

ಸ್ಥಿತಂ ಸತ್ಯವತಃ ಪಾರ್ಶ್ವಂ ನಿರೀಕ್ಷಂತಂ ತಮೇವ ಚ ।
ತಂ ದೃಷ್ಟ್ವಾ ಸಹಸೋತ್ಥಾಯ ಭರ್ತುರ್ನ್ಯಸ್ಯ ಶನೈಃ ಶಿರಃ ।
ಕೃತಾಂಜಲಿರುವಾಚಾರ್ತಾ ಹೃದಯೇನ ಪ್ರವೇಪತೀ ॥೧೦॥

ತಲೆಯ ಕೂದಲುಗಳನ್ನು ಕಟ್ಟಿದ, ಸಮೃದ್ಧವಾದ ಶರೀರವುಳ್ಳ, ಸೂರ್ಯನಂತೆ ತೇಜಸ್ಸುಳ್ಳ, ಶುಭ್ರ ಶ್ಯಾಮವರ್ಣವುಳ್ಳ, ರಕ್ತಾಕ್ಷನೂ, ಪಾಶಹಸ್ತನೂ, ಭಯಂಕರನೂ, ಸತ್ಯವಂತನ ಪಕ್ಕದಲ್ಲಿ ನಿಂತು ಅವನನ್ನೇ ನೋಡುತ್ತಿರುವವನೂ ಆದ ಆ ಪುರುಷನನ್ನು ನೋಡಿ ಪತಿಯ ತಲೆಯನ್ನು ಮೆಲ್ಲನೆ ನೆಲದ ಮೇಲಿರಿಸಿ ಬೇಗ ಎದ್ದು ಕೈಗಳನ್ನು ಮುಗಿದು ಆರ್ತಳಾಗಿ ನಡುಗುವ ಹೃದಯದಿಂದ ಅವನನ್ನು ಕುರಿತು ಮಾತನಾಡಿದಳು.

ದೈವತಂ ತ್ವಾಽಭಿಜಾನಾಮಿ ವಪುರೇತದ್ಧ್ಯಮಾನುಷಮ್ ।
ಕಾಮಯಾ ಬ್ರೂಹಿ ದೇವೇಶ ಕಸ್ತ್ವಂ ಕಿಂ ಚ ಚಿಕೀರ್ಷಸಿ ॥೧೧॥

ನಿನ್ನನ್ನು ದೇವತೆ ಎಂದು ಗುರುತಿಸುತ್ತೇನೆ. ಈ ರೂಪವು ಮನುಷ್ಯರೂಪವಲ್ಲ. ದೇವೇಶನೇ, ನೀನು ಯಾರು ಎಂದು ಮನಃಪೂರ್ವಕವಾಗಿ ಹೇಳು. ಏನು ಮಾಡಲು ಬಂದಿದ್ದೀಯೆ?

ಯಮಃ

ಪತಿವ್ರತಾಽಸಿ ಸಾವಿತ್ರಿ ತಥೈವ ಚ ತಪೋನ್ವಿತಾ ।
ಅತಸ್ತ್ವಾಮಭಿಭಾಷಾಮಿ ವಿದ್ಧಿ ಮಾಂ ತ್ವಂ ಶುಭೇ ಯಮಮ್ ॥೧೨॥

ಅಯಂ ತೇ ಸತ್ಯವಾನ್ ಭರ್ತಾ ಕ್ಷೀಣಾಯುಃ ಪಾರ್ಥಿವಾತ್ಮಜಃ ।
ನೇಷ್ಯಾಮಿ ತಮಹಂ ಬದ್ಧ್ವಾ ವಿದ್ಧ್ಯೇತನ್ಮೇ ಚಿಕೀರ್ಷಿತಮ್ ॥೧೩॥

ಯಮ– ಸಾವಿತ್ರೀ, ನೀನು ಪತಿವ್ರತೆಯಾದವಳು. ಅದರಂತೆ ತಪಸ್ಸಿನಿಂದ ಅನ್ವಿತಳಾದವಳು. ಆದ್ದರಿಂದ ನಿನ್ನ ಜೊತೆಯಲ್ಲಿ ಮಾತನಾಡುತ್ತೇನೆ. ಶುಭಳಾದವಳೇ, ನನ್ನನ್ನು ಯಮನೆಂದು ತಿಳಿ. ಈ ನಿನ್ನ ಪತಿಯಾದ ರಾಜಕುಮಾರನ ಆಯಸ್ಸು ಮುಗಿದಿದೆ. ಅವನನ್ನು ನಾನು ಬಂಧಿಸಿ ಕರೆದುಕೊಂಡು ಹೋಗುವೆನು. ಈ ಕಾರ್ಯಕ್ಕೋಸ್ಕರ ಬಂದಿದ್ದೇನೆಂದು ತಿಳಿ.

ಸಾವಿತ್ರೀ

ಶ್ರೂಯತೇ ಭಗವನ್ ದೂತಾಸ್ತವಾಗಚ್ಛಂತಿ ಮಾನವಾನ್ ।
ನೇತುಂ ಕಿಲ ಭವಾನ್ ಕಸ್ಮಾದಾಗತೋಽಸಿ ಸ್ವಯಂ ಪ್ರಭೋ ॥೧೩.೧॥

ಸಾವಿತ್ರೀ– ಪೂಜ್ಯನೇ, ಮನುಷ್ಯರನ್ನು ಕರೆದೊಯ್ಯಲು ನಿನ್ನ ದೂತರು ಬರುತ್ತಾರೆಂದು ನಾನು ಕೇಳಿದ್ದೇನೆ. ಪ್ರಭುವೇ, ನೀನೇ ಸ್ವತಃ ಏಕೆ ಬಂದೆ?

ಮಾರ್ಕಂಡೇಯಃ

ಇತ್ಯುಕ್ತಃ ಪಿತೃರಾಜಸ್ತಾಂ ಭಗವಾನ್ ಸ್ವಚಿಕೀರ್ಷಿತಮ್ ।
ಯಥಾವತ್ ಸರ್ವಮಾಖ್ಯಾತುಂ ತತ್ಪ್ರಿಯಾರ್ಥಂ ಪ್ರಚಕ್ರಮೇ ॥೧೪॥

ಮಾರ್ಕಂಡೇಯರು– ಹೀಗೆ ಅವಳಿಂದ ಹೇಳಲ್ಪಟ್ಟ ಪೂಜ್ಯನಾದ ಪಿತೃರಾಜನು ಅವಳಿಗೆ ಪ್ರಿಯವನ್ನು ಉಂಟುಮಾಡಲು ಉದ್ದೇಶಿಸಿ ತಾನು ಬಂದ ಕಾರ್ಯವೆಲ್ಲವನ್ನೂ ಸರಿಯಾಗಿ ವಿವರಿಸಲು ಪ್ರಾರಂಭಿಸಿದನು.

ಯಮಃ

ಅಯಂ ಚ ಧರ್ಮಸಂಯುಕ್ತೋ ರೂಪವಾನ್ ಗುಣಸಾಗರಃ ।
ನಾರ್ಹೋ ಮತ್ಪುರುಷೈರ್ನೇತುಮತೋಽಸ್ಮಿ ಸ್ವಯಮಾಗತಃ ॥೧೫॥

ಯಮ– ಈ ನಿನ್ನ ಪತಿಯು ಧರ್ಮದಿಂದ ಕೂಡಿದವನು, ಸುಂದರನಾದವನು, ಗುಣಗಳಿಂದ ಸಮುದ್ರದಂತೆ ಇರುವವನು. ಇವನನ್ನು ನನ್ನ ಭೃತ್ಯರು ಕರೆದುಕೊಂಡು ಹೋಗುವುದು ಯೋಗ್ಯವಲ್ಲ. ಅದಕ್ಕಾಗಿ ನಾನೇ ಬಂದಿದ್ದೇನೆ.

ಮಾರ್ಕಂಡೇಯಃ

ತತಃ ಸತ್ಯವತಃ ಕಾಯಾತ್ ಪಾಶಬದ್ಧಂ ವಶಂಗತಮ್ ।
ಅಂಗುಷ್ಠಮಾತ್ರಂ ಪುರುಷಂ ನಿಶ್ಚಕ್ರಾಮ ಯಮೋ ಬಲಾತ್ ॥೧೬॥

ಮಾರ್ಕಂಡೇಯ– ಅನಂತರ ಯಮನು ತನ್ನ ವಶನಾಗಿದ್ದ ಸತ್ಯವಂತನ ಶರೀರದಿಂದ ಪಾಶದಿಂದ ಕಟ್ಟಿ ಅಂಗುಷ್ಠಮಾತ್ರ ಪರಿಮಾಣವುಳ್ಳ ಪುರುಷನನ್ನು ತನ್ನ ಬಲದಿಂದ ಅವನ ಶರೀರದಿಂದ ಹೊರಗೆ ತೆಗೆದನು.

ತತಃ ಸಮುದ್ಭೂತಪ್ರಾಣಂ ಗತಶ್ವಾಸಂ ಹತಪ್ರಭಮ್ ।
ನಿರ್ವಿಚೇಷ್ಟಂ ಶವಂ ತತ್ ತು ಬಭೂವಾಪ್ರಿಯದರ್ಶನಮ್ ॥೧೭॥

ಆಗ ಪ್ರಾಣವನ್ನೂ, ಶ್ವಾಸವನ್ನೂ, ಕಾಂತಿಯನ್ನೂ ಕಳೆದುಕೊಂಡು ಆ ಶರೀರವು (ಶವವು) ನೋಡುವುದಕ್ಕೆ ಅಪ್ರಿಯವಾಯಿತು.

ಯಮಸ್ತು ತಂ ತತೋ ಬದ್ಧ್ವಾ ಪ್ರಯಾತೋ ದಕ್ಷಿಣಾಮುಖಃ ।
ಸಾವಿತ್ರೀ ಚೈವ ದುಃಖಾರ್ತಾ ಯಮಮೇವಾನ್ವವರ್ತತ ॥೧೮॥

ಯಮನಾದರೂ ಅನಂತರ ಅವನನ್ನು ಬಂಧಿಸಿ ದಕ್ಷಿಣಾಭಿಮುಖವಾಗಿ ಹೊರಟನು. ಸಾವಿತ್ರಿಯೂ ಕೂಡ ದುಃಖಾರ್ತಳಾಗಿ ಅವನ ಹಿಂದೆ ಹೊರಟಳು.

ನಿಯಮವ್ರತಸಂಸಿದ್ಧಾ ಮಹಾಭಾಗಾ ಪತಿವ್ರತಾ ।
ಭರ್ತುಃಶರೀರರಕ್ಷಾಂ ಚ ವಿಧಾಯ ಹಿ ತಪಸ್ವಿನೀ ।
ಭರ್ತಾರಮನುಗಚ್ಛಂತೀ ತಥಾವಸ್ಥಂ ಸುಮಧ್ಯಮಾ ॥೧೯॥

ನಿಯಮಗಳ ಮತ್ತು ವ್ರತಗಳ ಸಿದ್ಧಿಯನ್ನು ಪಡೆದ ಮಹಾನುಭಾವಳೂ, ಪತಿವ್ರತೆಯೂ, ತಪಸ್ವಿನಿಯೂ ಆದ ಅವಳು ಪತಿಯ ಶರೀರವನ್ನು ಒಂದು ಕಡೆಯಲ್ಲಿ ಮುಚ್ಚಿಟ್ಟು ಅಂತಹ ಅವಸ್ಥೆಯಲ್ಲಿದ್ದ ಪತಿಯನ್ನು ಹಿಂಬಾಲಿಸುತ್ತಾ ಸುಂದರಿಯಾದ ಅವಳು ನಡೆದಳು.

ಯಮಃ

ನಿವರ್ತ ಗಚ್ಛ ಸಾವಿತ್ರಿ ಕುರುಷ್ವಾಸ್ಯೌರ್ಧ್ವದೈಹಿಕಮ್ ।
ಕೃತಂ ಭರ್ತುಸ್ತ್ವಯಾऽನೃಣ್ಯಂ ಯಾವದ್ ಗಮ್ಯಂ ಗತಂ ತ್ವಯಾ ॥
ಏಷ ಮಾರ್ಗೋ ವಿಶಾಲಾಕ್ಷಿ ನ ಕೇನಾಪ್ಯನುಗಮ್ಯತೇ ॥೨೧॥

ಯಮ– ಸಾವಿತ್ರಿಯೇ, ಹಿಂದಿರುಗಿ ಹೋಗು. ಇವನ ಉತ್ತರಕ್ರಿಯೆಯನ್ನು ಮಾಡು. ನೀನು ನಿನ್ನ ಪತಿಯ ಋಣವನ್ನು ತೀರಿಸಿದ್ದೀಯೆ. ಎಲ್ಲಿಯವರೆಗೆ ಬರಬಹುದೋ ಅಲ್ಲಿಯವರೆಗೆ ನೀನು ಬಂದಿದ್ದೀಯೆ. ವಿಶಾಲಾಕ್ಷಿಯೇ, ಇನ್ನು ನಾನು ಆಕಾಶಮಾರ್ಗದಲ್ಲಿ ಹೋಗುತ್ತೇನೆ. ಅಲ್ಲಿ ನೀನು ಹಿಂಬಾಲಿಸಲು ಸಾಧ್ಯವಿಲ್ಲ.

ಸಾವಿತ್ರೀ

ಯತ್ರ ಮೇ ನೀಯತೇ ಭರ್ತಾ ಸ್ವಯಂ ವಾ ಯತ್ರ ಗಚ್ಛತಿ ।
ಮಯಾ ಚ ತತ್ರ ಗಂತವ್ಯಮೇಷ ಧರ್ಮಃ ಸನಾತನಃ ॥೨೨॥

ಸಾವಿತ್ರೀ– ನನ್ನ ಪತಿಯು ತಾನೇ ಎಲ್ಲಿಗೆ ಹೋಗುತ್ತಾನೆಯೋ ಅಥವಾ ಇನ್ನೊಬ್ಬನಿಂದ ಎಲ್ಲಿಗೆ ಕರೆದುಕೊಂಡು ಹೋಗಲ್ಪಡುತ್ತಾನೆಯೋ ಆಗ ಅಲ್ಲಿಗೆ ನಾನು ಅವನನ್ನು ಹಿಂಬಾಲಿಸಬೇಕೆಂಬುದೇ ಸನಾತನವಾದ ಧರ್ಮ.

ತಪಸಾ ಗುರುಭಕ್ತ್ಯಾ ಚ ಭರ್ತುಃ ಸ್ನೇಹಾದ್ ವ್ರತೇನ ಚ ।
ತವ ಚೈವ ಪ್ರಸಾದೇನ ನ ಮೇ ಪ್ರತಿಹತಾ ಗತಿಃ ॥೨೩॥

ನಾನು ಮಾಡಿದ ತಪಸ್ಸಿನಿಂದ, ಗುರುಭಕ್ತಿಯಿಂದ, ಪತಿಯ ಪ್ರೇಮದಿಂದ, ವ್ರತಗಳಿಂದ ಮತ್ತು ನಿನ್ನ ಅನುಗ್ರಹದಿಂದ ನನ್ನ ಗಮನವು ಪ್ರತಿಹತವಾಗಿಲ್ಲ (ನಿನ್ನನ್ನು ಹಿಂಬಾಲಿಸಲು ಯಾವ ತೊಂದರೆಯೂ ಉಂಟಾಗಿಲ್ಲ).

ಪ್ರಾಹುಃ ಸಾಪ್ತಪದಂ ಮಿತ್ರಂ ಬುಧಾಸ್ತತ್ತ್ವಾರ್ಥದರ್ಶಿನಃ ।
ಮಿತ್ರತಾಂ ಚ ಪುರಸ್ಕೃತ್ಯ ಕಿಂಚಿದ್ ವಕ್ಷ್ಯಾಮಿ ತತ್ ಶೃಣು ॥೨೪॥

ತತ್ತ್ವಾರ್ಥದರ್ಶಿಗಳಾದ ಜ್ಞಾನಿಗಳು ಸಪ್ತಪದಗಳಿಂದ (ಜೊತೆಯಲ್ಲಿ ಏಳು ಹೆಜ್ಜೆ ನಡೆಯುವುದರಿಂದ ಅಥವಾ ಇನ್ನೊಬ್ಬರನ್ನು ಎದುರುಗೊಳ್ಳಲು ಏನು ಹೆಜ್ಜೆ ನಡೆಯುವುದರಿಂದ) ಮಿತ್ರತ್ವ ಉಂಟಾಗುತ್ತದೆ ಎಂದು ಹೇಳುತ್ತಾರೆ. ಆ ಮಿತ್ರತ್ವವನ್ನು ಮುಂದೆ ಮಾಡಿಕೊಂಡು ಸ್ವಲ್ಪ ಮಾತನಾಡುವೆನು, ಅದನ್ನು ಕೇಳು.

ನಾನಾತ್ಮವಂತಂ ಚ ವನೇ ಚರಂತಿ
ಧರ್ಮಂ ಚ ವಾಸಂ ಚ ಪರಿಶ್ರಮಂ ಚ ।
ವಿಜ್ಞಾನತೋ ಧರ್ಮಮುದಾಹರಂತಿ
ತಸ್ಮಾತ್ಸಂತೋ ಧರ್ಮಮಾಹುಃ ಪ್ರಧಾನಮ್ ॥೨೫॥

ವನದಲ್ಲಿ ವಾಸವನ್ನು ಮಾಡಿ ನಾನಾ ಪ್ರಯತ್ನಪೂರ್ವಕವಾದ ನಿಯಮಗಳನ್ನೂ, ಪರಿಶ್ರಮವನ್ನೂ, ವನವಾಸವನ್ನೂ ಯಾರು ಅನುಷ್ಠಾನ ಮಾಡುತ್ತಾರೆಯೋ ಅಂತಹ ಸಜ್ಜನರು ವಿವೇಕಿಯಾದ ಪುರುಷನಿಗೆ ಧರ್ಮವೇ ಸಹಾಯವೆಂದು ಹೇಳುತ್ತಾರೆ.

ಏಕಸ್ಯ ಧರ್ಮಸ್ಯ ಸತಾಂ ಮತೇನ ಸರ್ವೇ
ಸ್ಮ ತಂ ಮಾರ್ಗಮನುಪ್ರಪನ್ನಾಃ ।
ಮಾ ವೈ ದ್ವಿತೀಯಂ ಮಾ ತೃತೀಯಂ ಚ
ತುರ್ಯಂ ತಸ್ಮಾತ್ಸಂತೋ ಧರ್ಮಮಾಹುಃ ಪ್ರಧಾನಮ್ ॥೨೬॥

ಶ್ರುತಿಗಳಲ್ಲಿ ಪ್ರಸಿದ್ಧವಾದ ಮೋಕ್ಷಸಾಧನವಾದ ನಿವೃತ್ತಿರೂಪವಾದ ಧರ್ಮವಾದ ಪ್ರಧಾನ ಧರ್ಮವನ್ನು ನಾವೆಲ್ಲರೂ ಅನುಸರಿಸುತ್ತಿದ್ದೇವಷ್ಟೆ. ನಿವೃತ್ತಿಧರ್ಮಮಾರ್ಗದಿಂದ ಎರಡನೆಯದಾದ ಪ್ರವೃತ್ತಿ ಧರ್ಮಮಾರ್ಗವನ್ನಾಗಲೀ, ಮೂರನೆಯದಾದ ಅರ್ಥಮಾರ್ಗವನ್ನಾಗಲೀ, ನಾಲ್ಕನೆಯದಾದ ಕಾಮಮಾರ್ಗವನ್ನಾಗಲೀ ನಾವು ಅನುಸರಿಸುವುದಿಲ್ಲ. ಆ ಕಾರಣದಿಂದ ಸಜ್ಜನರು ನಿವೃತ್ತಿರೂಪವಾದ ಧರ್ಮವೇ ಪ್ರಧಾನವೆಂದು ಹೇಳುತ್ತಾರೆ.

ಯಮಃ

ನಿವರ್ತ ತುಷ್ಟೋಽಸ್ಮಿ ತವಾನಯಾ ಗಿರಾ
ಸ್ವರಾಕ್ಷರವ್ಯಂಜನಹೇತುಯುಕ್ತಯಾ ।
ವರಂ ವೃಣೀಷ್ವೇಹ ವಿನಾಽಸ್ಯ ಜೀವಿತಂ
ದದಾನಿ ತೇ ಸರ್ವಮನಿಂದಿತೇ ವರಮ್ ॥೨೭॥

ಯಮ– ನಿನ್ನ ಈ ಸ್ವರವ್ಯಂಜನಗಳಿಂದ ಕೂಡಿದ ಮತ್ತು ಯುಕ್ತಿಯುಕ್ತವಾದ ಮಾತುಗಳಿಂದ ನನಗೆ ಸಂತೋಷವಾಗಿದೆ. ನೀನು ಹಿಂದಿರುಗು. ಇವನ ಪ್ರಾಣವನ್ನು ಬಿಟ್ಟು ಬೇರೆ ಏನಾದರೂ ವರವನ್ನು ಕೇಳು. ಅನಿಂದಿತೆಯೇ, ನೀನು ಕೇಳಿದ ಎಲ್ಲಾ ವರವನ್ನೂ ಕೊಡುವೆನು.

ಸಾವಿತ್ರೀ

ಚ್ಯುತಃ ಸ್ವರಾಜ್ಯಾದ್ ವನವಾಸಮಾಶ್ರಿತೋ
ವಿನಷ್ಟಚಕ್ಷುಃ ಶ್ವಶುರೋ ಮಮಾಶ್ರಮೇ ।
ಸ ಲಬ್ಧಚಕ್ಷುರ್ಬಲವಾನ್ ಭವೇನ್ನೃಪಃ
ತವ ಪ್ರಸಾದಾಜ್ಜ್ವಲನಾರ್ಕಸಪ್ರಭಃ ॥೨೮॥

ಸಾವಿತ್ರೀ– ನನ್ನ ಮಾವನು ಅಂಧನಾಗಿ ರಾಜ್ಯಭ್ರಷ್ಟನಾಗಿ ವನವಾಸವನ್ನು ಮಾಡಿ ಆಶ್ರಮದಲ್ಲಿದ್ದಾನೆ. ಆ ರಾಜನು ನಿನ್ನ ಅನುಗ್ರಹದಿಂದ ಬೆಳಗುವ ಸೂರ್ಯನ ಕಾಂತಿಯುಳ್ಳವನೂ, ದೃಷ್ಟಿಯುಳ್ಳವನೂ ಮತ್ತು ಬಲಿಷ್ಠನೂ ಆಗಬೇಕು.

ಯಮಃ

ದದಾನಿ ತೇ ಸರ್ವಮನಿಂದಿತೇ ವರಂ
ಯಥಾ ತ್ವಯೋಕ್ತಂ ಭವಿತಾ ಚ ತತ್ತಥಾ ।
ತವಾಧ್ವನಾ ಗ್ಲಾನಿಮಿವೋಪಲಕ್ಷಯೇ
ನಿವರ್ತ ಗಚ್ಛಸ್ವ ನ ತೇ ಶ್ರಮೋ ಭವೇತ್ ॥೨೯॥

ಯಮ– ಅನಿಂದಿತೆಯೇ, ನೀನು ಕೇಳಿದ ವರವನ್ನು ಕೊಡುವೆನು. ನೀನು ಕೇಳಿದುದು ಅದರಂತೆಯೇ ಆಗುವುದು. ನಿನಗೆ ಮಾರ್ಗಾಯಾಸವಾಗಿರುವಂತೆ ನನಗೆ ತೋರುತ್ತಿದೆ. ಹಿಂದಿರುಗಿ ಹೋಗು. ನಿನಗೆ ಶ್ರಮವಾಗದಿರಲಿ.

ಸಾವಿತ್ರೀ

ಶ್ರಮಃ ಕುತೋ ಭರ್ತ್ರಸಮೀಪತೋ ಹಿ ಮೇ
ಯತೋ ಹಿ ಭರ್ತಾ ಮಮ ಸಾ ಗತಿರ್ಧ್ರುವಾ ।
ಯತಃ ಪತಿಂ ನೇಷ್ಯಸಿ ತತ್ರ ಮೇ ಗತಿಃ
ಸುರೇಶ ಭೂಯಶ್ಚ ವಚೋ ನಿಬೋಧ ಮೇ ॥೩೦॥

ಸಾವಿತ್ರೀ– ನನ್ನ ಪತಿಯ ಸಮೀಪದಲ್ಲಿ ನನಗೆ ಶ್ರಮವಾಗಲು ಹೇಗೆ ಸಾಧ್ಯ? ಪತಿಗೆ ಯಾವ ಪರಲೋಕಗತಿಯಾಗುವುದೋ ನನಗೂ ಅದೇ ಗತಿಯಾಗುವುದು. ಸುರೇಶನೇ, ನನ್ನ ಪತಿಯನ್ನು ಎಲ್ಲಿಗೆ ಒಯ್ಯುವೆಯೋ ಅಲ್ಲಿಗೆ ನಾನೂ ಬರುವೆನು. ಪುನಃ ನನ್ನ ಮಾತನ್ನು ಕೇಳು.

ಸತಾಂ ಸಕೃತ್ಸಂಗತಮೀಪ್ಸಿತಂ ಪರಂ
ತತಃ ಪರಂ ಮಿತ್ರಮಿತಿ ಪ್ರಚಕ್ಷತೇ ।
ನ ಚಾಫಲಂ ಸತ್ಪುರುಷೇಣ ಸಂಗತಂ
ತತಃ ಸತಾಂ ಸನ್ನಿವಸೇತ್ ಸಮಾಗಮೇ ॥೩೧॥

ಒಂದು ಬಾರಿ ಸಜ್ಜನರ ಸಂಗವು ಅಭೀಪ್ಸಿತವಾದುದು. ಅನಂತರ ಅವರು ಮಿತ್ರರಾಗುತ್ತಾರೆ ಎಂದು ಹೇಳುತ್ತಾರೆ. ಸತ್ಪುರುಷರ ಜೊತೆಯಲ್ಲಿ ಸಮಾಗಮವು ಎಂದೂ ನಿಷ್ಫಲವಾಗುವುದಿಲ್ಲ. ಆದ್ದರಿಂದ ಸಜ್ಜನರ ಸಮಾಗಮದಲ್ಲಿ ವಾಸ ಮಾಡಬೇಕು.

ಯಮಃ

ಮನೋಽನುಕೂಲಂ ಬುಧಬುದ್ಧಿವರ್ಧನಂ
ತ್ವಯಾ ಯದುಕ್ತಂ ವಚನಂ ಹಿತಾಶ್ರಯಮ್ ।
ವಿನಾ ಪುನಃ ಸತ್ಯವತೋಽಸ್ಯ ಜೀವಿತಂ
ವರಂ ದ್ವಿತೀಯಂ ವರಯಸ್ವ ಭಾಮಿನಿ ॥೩೨॥

ಯಮ– ನೀನು ಆಡಿದ ಮಾತುಗಳು ಮನಸ್ಸಿಗೆ ಅನುಕೂಲವಾದವುಗಳು. ವಿವೇಕಿಗಳ ಬುದ್ಧಿಯನ್ನೂ ಹೆಚ್ಚಿಸುವಂತಹವು ಮತ್ತು ಹಿತವನ್ನು ಆಶ್ರಯಿಸಿದಂತಹವು. ಭಾಮಿನಿಯೇ, ಸತ್ಯವಂತನ ಜೀವಿತವನ್ನು ಬಿಟ್ಟು ಪುನಃ ಎರಡನೆಯ ವರವನ್ನು ಕೇಳು.

ಸಾವಿತ್ರೀ

ಹೃತಂ ಪುರಾ ಮೇ ಶ್ವಶುರಸ್ಯ ಧೀಮತಃ
ಸ್ವಮೇವ ರಾಜ್ಯಂ ಲಭತಾಂ ಸ ಪಾರ್ಥಿವಃ ।
ಜಹ್ಯಾತ್ ಸ್ವಧರ್ಮಂ ನ ಚ ಮೇ ಗುರುರ್ಯಥಾ
ದ್ವಿತೀಯಮೇತದ್‌ವರಯಾಮಿ ತೇ ವರಮ್ ॥೩೩॥

ಸಾವಿತ್ರೀ– ರಾಜನೂ, ಮೇಧಾವಿಯೂ ಆದ ನನ್ನ ಮಾವನು ಹಿಂದೆ ಕಳೆದುಕೊಂಡ ತನ್ನದೇ ರಾಜ್ಯವನ್ನು ಮರಳಿ ಪಡೆಯಲಿ ಮತ್ತು ನನ್ನ ಗುರುಸ್ಥಾನದಲ್ಲಿರುವ ಅವನು ಎಂದೂ ತನ್ನ ಧರ್ಮವನ್ನು ಬಿಡದಿರಲಿ ಎಂದು ನಿನ್ನಿಂದ ಎರಡನೆಯ ವರವನ್ನು ಬೇಡುತ್ತೇನೆ.

ಯಮಃ

ಸ್ವಮೇವ ರಾಜ್ಯಂ ಪ್ರತಿಪತ್ಸ್ಯತೇಽಚಿರಂ
ನ ಚ ಸ್ವಧರ್ಮಾತ್ ಪರಿಹಾಸ್ಯತೇ ನೃಪಃ ।
ಕೃತೇನ ಕಾರ್ಯೇಣ ಮಯಾ ನೃಪಾತ್ಮಜೇ
ನಿವರ್ತ ಗಚ್ಛಸ್ವ ನ ತೇ ಶ್ರಮೋ ಭವೇತ್ ॥೩೪॥

ಯಮ– ನಿನ್ನ ಮಾವನು ತನ್ನ ರಾಜ್ಯವನ್ನೇ ಶೀಘ್ರವಾಗಿ ಮರಳಿ ಪಡೆಯುವನು. ಆ ರಾಜನು ತನ್ನ ಧರ್ಮದಿಂದ ಚ್ಯುತಿಯನ್ನು ಹೊಂದುವುದಿಲ್ಲ. ರಾಜಕುಮಾರಿಯೇ, ನಿನ್ನ ಕಾರ್ಯವನ್ನು ಮಾಡಿದ್ದೇನೆ. ಹಿಂದಿರುಗಿ ಹೋಗು. ನಿನಗೆ ಶ್ರಮವಾಗದಿರಲಿ.

ಸಾವಿತ್ರೀ

ಪ್ರಜಾಸ್ತ್ವಯೈತಾ ನಿಯಮೇನ ಸಂಯತಾ
ನಿಯಮ್ಯ ಚೈತಾ ನಯಸೇ ನಿಕಾಮಯಾ ।
ಅತೋ ಯಮತ್ವಂ ತವ ದೇವ ವಿಶ್ರುತಂ
ನಿಬೋಧ ಚೇಮಾಂ ಗಿರಮೀರಿತಾಂ ಮಯಾ ॥೩೫॥

ಸಾವಿತ್ರೀ– ನೀನು ಈ ಪ್ರಜೆಗಳನ್ನು ನಿಯಂತ್ರಿಸಿ ಕಟ್ಟಿಕೊಂಡು ನಿನ್ನ ಇಚ್ಛೆಗೆ ಅನುಗುಣವಾಗಿ ಕರೆದುಕೊಂಡು ಹೋಗುತ್ತೀಯೆ. ಆದ್ದರಿಂದ ಎಂದರೆ ನಿಯಮನವನ್ನು ಮಾಡುವುದರಿಂದ ನಿನಗೆ ಯಮನೆಂದು ಹೆಸರು ಪ್ರಖ್ಯಾತವಾಗಿದೆ. ನಾನು ಆಡುವ ಈ ಮಾತನ್ನು ಕೇಳು.

ಅದ್ರೋಹಃ ಸರ್ವಭೂತೇಷು ಕರ್ಮಣಾ ಮನಸಾ ಗಿರಾ ।
ಅನುಗ್ರಹಶ್ಚ ದಾನಂ ಚ ಸತಾಂ ಧರ್ಮಃ ಸನಾತನಃ ॥೩೬॥

ಏವಂಪ್ರಾಯಶ್ಚ ಲೋಕೋಽಯಂ ಮನುಷ್ಯಾಃ ಭ(ಶ)ಕ್ತಿಪೇಶಲಾಃ ।
ಸಂತಸ್ತ್ವೇವಾಪ್ಯಮಿತ್ರೇಷು ದಯಾಂ ಪ್ರಾಪ್ತೇಷು ಕುರ್ವತೇ ॥೩೭॥

ಎಲ್ಲ ಪ್ರಾಣಿಗಳ ವಿಷಯದಲ್ಲಿ ಮನಸ್ಸಿನಿಂದಲಾಗಲೀ, ಮಾತಿನಿಂದಲಾಗಲೀ ಅಥವಾ ಕ್ರಿಯೆಯಿಂದಲಾಗಲೀ ದ್ರೋಹವನ್ನು ಮಾಡದಿರುವುದು, ಅನುಗ್ರಹ, ದಾನ ಇವುಗಳು ಸಜ್ಜನರ ಸನಾತನ ಧರ್ಮಗಳು. ಲೋಕದಲ್ಲಿ ಸಾಧಾರಣವಾಗಿ ಸಜ್ಜನರು ಹೀಗಿರುತ್ತಾರೆ. ಭಕ್ತಿಭೂಯಿಷ್ಠರಾದ ಸಜ್ಜನರು ಮಾತ್ರ ಪ್ರಾಪ್ತರಾದ ಶತ್ರುಗಳಲ್ಲಿಯೂ ದಯೆಯನ್ನು ಮಾಡುತ್ತಾರೆ.

ಯಮಃ

ಪಿಪಾಸಿತಸ್ಯೇವ ಭವೇದ್ಯಥಾ ಪಯಃ
ತಥಾ ತ್ವಯಾ ವಾಕ್ಯಮಿದಂ ಸಮೀರಿತಮ್ ।

ವಿನಾ ಪುನಃ ಸತ್ಯವತೋಽಸ್ಯ ಜೀವಿತಂ
ವರಂ ವೃಣೀಷ್ವೇಹ ಶುಭೇ ಯದಿಚ್ಛಸಿ ॥೩೮॥

ಯಮ– ನೀನು ಆಡಿದ ಈ ಮಾತುಗಳು ಬಾಯಾರಿದವನಿಗೆ ನೀರಿನಂತೆ ಇವೆ. ಶುಭಳಾದವಳೇ, ಸತ್ಯವಂತನ ಜೀವಿತವನ್ನು ಬಿಟ್ಟು ನೀನು ಬಯಸಿದ ವರವನ್ನು ಕೇಳು.

ಸಾವಿತ್ರೀ

ಮಮಾನಪತ್ಯಃ ಪೃಥಿವೀಪತಿಃ ಪಿತಾ
ಭವೇತ್ ಪಿತುಃ ಪುತ್ರಶತಂ ತಥೌರಸಮ್ ।
ಕುಲಸ್ಯ ಸಂತಾನಕರಂ ಚ ಯದ್
ಭವೇತ್ತೃತೀಯಮೇತದ್ ವರಯಾಮಿ ತೇ ವರಮ್ ॥೩೯॥

ಸಾವಿತ್ರೀ– ಮಕ್ಕಳಿಲ್ಲದ ನನ್ನ ತಂದೆಯಾದ ಅಶ್ವಪತಿರಾಜನು ನೂರುಮಂದಿ ಔರಸ ಪುತ್ರರನ್ನು ಪಡೆಯಲಿ. ವಂಶವನ್ನು ಅಭಿವೃದ್ಧಿಯನ್ನು ಮಾಡುವಂತಹ ಪುತ್ರರನ್ನು ನಾನು ತೃತೀಯ ವರವಾಗಿ ನಿನ್ನನ್ನು ಬೇಡುತ್ತೇನೆ.

ಯಮಃ

ಕುಲಸ್ಯ ಸಂತಾನಕರಂ ಸುವರ್ಚಸಂ
ಶತಂ ಸುತಾನಾಂ ಪಿತುರಸ್ತು ತೇ ಶುಭೇ ।
ಕೃತೇನ ಕಾಮೇನ ನರಾಧಿಪಾತ್ಮಜೇ
ನಿವರ್ತ ದೂರಂ ಹಿ ಪಥಸ್ತ್ವಮಾಗತಾ ॥೪೦॥

ಯಮ– ಶುಭಳಾದವಳೇ, ಕುಲವರ್ಧನರಾದ, ಒಳ್ಳೆಯ ವರ್ಚಸ್ವಿಗಳಾದ ನೂರು ಪುತ್ರರನ್ನು ನಿನ್ನ ತಂದೆಯು ಪಡೆಯಲಿ. ರಾಜಕುಮಾರಿಯೇ, ನಿನ್ನ ಕಾರ್ಯವನ್ನು ಮಾಡಿರುವುದರಿಂದ ನೀನು ಹಿಂದಿರುಗು. ನೀನು ಬಹಳ ದೂರಬಂದಿದ್ದೀಯಷ್ಟೆ.

ಸಾವಿತ್ರೀ

ನ ದೂರಮೇತನ್ಮಮ ಭರ್ತೃಸನ್ನಿಧೌ
ಮನೋ ಹಿ ಮೇ ದೂರತರಂ ಪ್ರಧಾವತಿ ।
ಅಥ ವ್ರಜನ್ನೇವ ಗಿರಂ ಸಮುದ್ಯತಾಂ
ಮಯೋಚ್ಯಮಾನಾಂ ಶೃಣು ಭೂಯ ಏವ ಚ ॥೪೧॥

ನನ್ನ ಪತಿಯ ಸನ್ನಿಧಿಯಲ್ಲಿ ನನಗೆ ಇದೇನೂ ದೂರವಲ್ಲ. ನನ್ನ ಮನಸ್ಸು ಇದಕ್ಕಿಂತ ದೂರವಾಗಿ ಓಡುತ್ತದೆ. ನೀನು ನಡೆಯುತ್ತಲೇ ನಾನು ಹೇಳುವ ಈ ಮಾತುಗಳನ್ನು ಪುನಃ ಕೇಳುವವನಾಗು.

ವಿವಸ್ವತಸ್ತ್ವಂ ತನಯಃ ಪ್ರತಾಪವಾನ್
ತತೋ ಹಿ ವೈವಸ್ವತ ಉಚ್ಯಸೇ ಬುಧೈಃ ।
ಸಮೇನ ಧರ್ಮೇಣ ಚರಂತಿ ತಾಃ
ಪ್ರಜಾಸ್ತತಸ್ತವೇಹೇಶ್ವರ ಧರ್ಮರಾಜತಾ ॥೪೨॥

ವಿವಸ್ವಾನ್ ನಾಮಕನಾದ ಸೂರ್ಯನ ಪ್ರತಾಪಶಾಲಿಯಾದ ಪುತ್ರನಾದುದರಿಂದ ನಿನ್ನನ್ನು ಜ್ಞಾನಿಗಳು ವೈವಸ್ವತ ಎಂದು ಕರೆಯುತ್ತಾರೆ. ನೀನು ಆ ಎಲ್ಲಾ ಪ್ರಜೆಗಳನ್ನೂ ಸಮಾನವಾದ ಧರ್ಮದಿಂದ ನೋಡಿಕೊಳ್ಳುತ್ತೀಯೆ. ಈಶ್ವರನೇ, ಆದ್ದರಿಂದ ನಿನ್ನನ್ನು ಧರ್ಮರಾಜ ಎಂದು ಕರೆಯುತ್ತಾರೆ.

ಆತ್ಮನ್ಯಪಿ ನ ವಿಶ್ವಾಸಸ್ತಥಾ ಭವತಿ ಸತ್ಸು ಯಃ ।
ತಸ್ಮಾತ್ ಸತ್ಸು ವಿಶೇಷೇಣ ಸರ್ವಃ ಪ್ರಣಯಮಿಚ್ಛತಿ ॥೪೩॥

ಸೌಹೃದಾತ್ ಸರ್ವಭೂತಾನಾಂ ವಿಶ್ವಾಸೋ ನಾಮ ಜಾಯತೇ ।
ತಸ್ಮಾತ್ ಸತ್ಸು ವಿಶೇಷೇಣ ವಿಶ್ವಾಸಂ ಕುರುತೇ ಜನಃ ॥೪೪॥

ಸಜ್ಜನರಲ್ಲಿ ಎಂತಹ ವಿಶ್ವಾಸವುಂಟಾಗುತ್ತದೆಯೋ ಅಂತಹ ವಿಶ್ವಾಸವು ತನ್ನಲ್ಲಿಯೂ ಉಂಟಾಗುವುದಿಲ್ಲ. ಆದ್ದರಿಂದ ಎಲ್ಲರೂ ವಿಶೇಷವಾಗಿ ಸಜ್ಜನರ ಸ್ನೇಹವನ್ನು ಬಯಸುತ್ತಾರೆ. ಎಲ್ಲ ಪ್ರಾಣಿಗಳಿಗೂ ಸ್ನೇಹದಿಂದ ವಿಶ್ವಾಸವುಂಟಾಗುತ್ತದೆ. ಆದ್ದರಿಂದ ಮನುಷ್ಯರು ವಿಶೇಷವಾಗಿ ಸಜ್ಜನರಲ್ಲಿ ಸ್ನೇಹವನ್ನು ಮಾಡುತ್ತಾರೆ (ಅದರ ಫಲವಾಗಿ ವಿಶ್ವಾಸವನ್ನೂ ಮಾಡುತ್ತಾರೆ).

ಯಮಃ

ಉದಾಹೃತಂ ತೇ ವಚನಂ ಯದಂಗನೇ
ಶುಭೇ ನ ತಾದೃಕ್ತ್ವದೃತೇ ಶ್ರುತಂ ಮಯಾ ।
ಅನೇನ ತುಷ್ಟೋಽಸ್ಮಿ ವಿನಾಸ್ಯ ಜೀವಿತಂ
ವರಂ ಚತುರ್ಥಂ ವರಯಸ್ವ ಗಚ್ಛ ಚ ॥೪೫॥

ಯಮ– ಎಲೌ ಶುಭಳಾದವಳೇ, ಅಂಗನೆಯೇ, ನೀನು ಆಡಿದ ಮಾತುಗಳನ್ನು ನಾನು ನಿನ್ನನ್ನು ಬಿಟ್ಟು ಬೇರೆ ಯಾರ ಮುಖದಿಂದಲೂ ಕೇಳಲಿಲ್ಲ. ಈ ಮಾತುಗಳಿಂದ ಸಂತುಷ್ಟನಾಗಿದ್ದೇನೆ. ಇವನ ಜೀವಿತವನ್ನು ಬಿಟ್ಟು ನಾಲ್ಕನೆಯ ವರವನ್ನು ಕೇಳಿ ಹೊರಡು.

ಸಾವಿತ್ರೀ

ಮಮಾತ್ಮಜಂ ಸತ್ಯವತಸ್ತಥೌರಸಂ
ಭವೇದುಭಾಭ್ಯಾಮಿಹ ಯತ್ಕುಲೋದ್ವಹಮ್ ।
ಶತಂ ಸುತಾನಾಂ ಬಲವೀರ್ಯಶಾಲಿನಾಂ
ಚತುರ್ಥಮೇತಂ ವರಯಾಮಿ ತೇ ವರಮ್ ।
ವರಂ ವೃಣೇ ಸತ್ಯವತೋ ಮಯಿ ಪ್ರಭೋ
ಭವೇತ್ ಸುತಾನಾಂ ಶತಮೇತದೀಪ್ಸಿತಮ್ ॥೪೫.೧॥

ಸಾವಿತ್ರೀ– ಪ್ರಭುವೇ, ನಾನು ಮತ್ತು ಸತ್ಯವಾನ್ ಈ ನಮ್ಮಿಬ್ಬರಿಂದ ನಮ್ಮ ಕುಲವನ್ನು ಮುಂದುವರೆಸುವ ಬಲವೀರ್ಯಸಂಪನ್ನರಾದ ನೂರು ಮಕ್ಕಳನ್ನು ನಾನು ನಾಲ್ಕನೆಯ ವರವಾಗಿ ಬೇಡುತ್ತೇನೆ. ಇದು ನನಗೆ ಈಪ್ಸಿತವಾದುದು.

ಯಮಃ

ಶತಂ ಸುತಾನಾಂ ಬಲವೀರ್ಯಶಾಲಿನಾಂ
ಭವಿಷ್ಯತಿ ಪ್ರೀತಿಕರಂ ತವಾಬಲೇ ।
ಪರಿಶ್ರಮಸ್ತೇ ನ ಭವೇನ್ನೃಪಾತ್ಮಜೇ
ನಿವರ್ತ ದೂರಂ ಹಿ ಪಥಸ್ತ್ವಮಾಗತಾ ।
ತಥಾಸ್ತು ತೇ ಪುತ್ರಶತಂ ಶುಭಾನನೇ
ದ್ರುತಂ ನಿವರ್ತಸ್ವ ಪರಿಶ್ರಮೋ ನ ತೇ ॥೪೬॥

ಯಮ– ಎಲೌ ಅಬಲೆಯೇ, ನಿನಗೆ ಸಂತೋಷವನ್ನುಂಟು ಮಾಡುವ ಬಲವೀರ್ಯಶಾಲಿಗಳಾದ ನೂರು ಮಕ್ಕಳು ಜನಿಸುವರು. ರಾಜಕುಮಾರಿಯೇ, ನಿನಗೆ ದಣಿವಾಗುವುದು ಬೇಡ. ಹಿಂದಿರುಗು. ಬಹಳ ದೂರಬಂದಿದ್ದೀಯೆ. ಶುಭಾನನೆಯೇ, ನಿನಗೆ ಅಂತಹ ನೂರು ಮಕ್ಕಳೇ ಆಗಲಿ. ಬೇಗ ಹಿಂದಿರುಗು. ನಿನಗೆ ಆಯಾಸವಾಗುವುದು ಬೇಡ.

ಸಾವಿತ್ರೀ

ಸತಾಂ ಸದಾ ಶಾಶ್ವತಧರ್ಮವೃತ್ತಿಃ
ಸಂತೋ ನ ಸೀದಂತಿ ನ ಚ ವ್ಯಥಂತಿ ।
ಸತಾಂ ಸದ್ಭಿರ್ನಾಫಲಂ ಸಂಗಮೋಽಸ್ತಿ
ಸದ್ಭ್ಯೋ ಭಯಂ ನಾನುವರ್ತಂತಿ ಸಂತಃ ॥೪೭॥

ಸಾವಿತ್ರೀ– ಸಜ್ಜನರು ಯಾವಾಗಲೂ ಶಾಶ್ವತವಾದ ಧರ್ಮದಲ್ಲಿಯೇ ನಡೆದುಕೊಳ್ಳುತ್ತಾರೆ. ಅವರು ವಿನಾಶವನ್ನು ಹೊಂದುವುದಿಲ್ಲ ಮತ್ತು ವ್ಯಥೆ ಪಡುವುದಿಲ್ಲ. ಸಜ್ಜನರಿಗೆ ಸಜ್ಜನರ ಸಮಾಗಮವು ನಿಷ್ಫಲವಾಗುವುದಿಲ್ಲ. ಸಜ್ಜನರು ಸಜ್ಜನರಿಂದ ಭಯವನ್ನೂ ಎಣಿಸುವುದಿಲ್ಲ.

ಸಂತೋ ಹಿ ಸತ್ಯೇನ ನಯಂತಿ ಸೂರ್ಯಂ
ಸಂತೋ ಭೂಮಿಂ ತಪಸಾ ಧಾರಯಂತಿ ।
ಸಂತೋ ಗತಿರ್ಭೂತಭವ್ಯಸ್ಯ ರಾಜನ್
ಸತಾಂ ಮಧ್ಯೇ ನಾವಸೀದಂತಿ ಸಂತಃ ॥೪೮॥

ಸಜ್ಜನರು ಸತ್ಯದಿಂದಲೇ ಸೂರ್ಯನನ್ನು ನಡೆಸುತ್ತಾರೆ. ಸಜ್ಜನರು ತಪಸ್ಸಿನಿಂದ ಭೂಮಿಯನ್ನು ಧರಿಸುತ್ತಾರೆ. ರಾಜನೇ, ಸಜ್ಜನರು ಅತೀತ ಭವಿಷ್ಯತ್ಕಾಲದವರಿಗೂ ಗತಿಯಾಗುತ್ತಾರೆ. ಸಜ್ಜನರ ಮಧ್ಯದಲ್ಲಿ ಸಜ್ಜನರು ವಿನಾಶವನ್ನು ಹೊಂದುವುದಿಲ್ಲ.

ಆರ್ಯಜುಷ್ಟಮಿದಂ ವೃತ್ತಮಿತಿ ವಿಜ್ಞಾಯ ಶಾಶ್ವತಮ್ ।
ಸಂತಃ ಪರಾರ್ಥಂ ಕುರ್ವಾಣಾ ನಾವೇಕ್ಷಂತಿ ಪರಸ್ಪರಮ್ ॥೪೯॥

ಇದು ಆರ್ಯರಿಂದ ಸೇವಿತವಾದ ಶಾಶ್ವತವಾದ ನಡತೆ ಎಂದು ತಿಳಿದು ಸಜ್ಜನರು ಬೇರೆ ಏನನ್ನೂ ನೋಡದೇ ಇನ್ನೊಬ್ಬರಿಗೆ ಉಪಕಾರವನ್ನು ಮಾಡುತ್ತಾರೆ.

ನ ಚ ಪ್ರಸಾದಃ ಸತ್ಪುರುಷೇಷು ಮೋಘೋ
ನ ಚಾಪ್ಯರ್ಥೋ ನಶ್ಯತಿ ನಾಪಿ ಮಾನಃ ।
ಯಸ್ಮಾದೇತನ್ನಿಯತಂ ಸತ್ಸು ನಿತ್ಯಂ
ತಸ್ಮಾತ್ ಸಂತೋ ರಕ್ಷಿತಾರೋ ಭವಂತಿ ॥೫೦॥

ಸಜ್ಜನರಿಗೆ ಮಾಡಿದ ಅನುಗ್ರಹವು ಎಂದೂ ವ್ಯರ್ಥವಾಗುವುದಿಲ್ಲ. ಆ ಮಾಡಿದ ಉಪಕಾರದಿಂದ ಧನಹಾನಿಯಾಗಲೀ, ಮಾನಹಾನಿಯಾಗಲೀ ಆಗುವುದಿಲ್ಲ. ಸಜ್ಜನರಿಗೆ ಪರೋಪಕಾರವು ಶಾಶ್ವತಧರ್ಮವಾಗಿರುವುದರಿಂದ ಸಜ್ಜನರು ರಕ್ಷಕರಾಗುತ್ತಾರೆ.

ಯಮಃ

ಯಥಾ ಯಥಾ ಭಾಷಸಿ ಧರ್ಮಸಂಹಿತಂ
ಮನೋಽನುಕೂಲಂ ಸುಪದಂ ಮಹಾರ್ಥವತ್ ।
ತಥಾ ತಥಾ ಮೇ ತ್ವಯಿ ಭಕ್ತಿರುತ್ತಮಾ
ವರಂ ವೃಣೀಷ್ವಾಪ್ರತಿಮಂ ಪತಿವ್ರತೇ ॥೫೧॥

ಯಮ– ಎಲೌ ಪತಿವ್ರತೆಯೇ, ನೀನು ಧರ್ಮಸಮ್ಮಿತವಾದ, ಮಹಾರ್ಥಗರ್ಭಿತವಾದ, ಒಳ್ಳೆಯ ಪದಗಳಿಂದ ಕೂಡಿದ, ಮನಸ್ಸಿಗೆ ಹಿತವಾದ ಮಾತುಗಳನ್ನು ಆಡಿದಂತೆಲ್ಲಾ ನನಗೆ ನಿನ್ನಲ್ಲಿ ಶ್ರೇಷ್ಠವಾದ ಪ್ರೀತಿಯುಂಟಾಗುತ್ತಿದೆ. ಇನ್ನೊಂದು ಅಸದೃಶವಾದ ವರವನ್ನು ಕೇಳು.

ಸಾವಿತ್ರೀ

ನ ತೇಽಪವರ್ಗಃ ಸುಕೃತಾದ್ವಿನಾ ಕೃತಃ
ತಥಾ ಯಥಾನ್ಯೇಷು ವರೇಷು ಮಾನದ ।
ವರಂ ವೃಣೇ ಜೀವತು ಸತ್ಯವಾನಯಂ
ಯಥಾ ಮೃತಾ ಹ್ಯೇವಮಹಂ ಪತಿಂ ವಿನಾ ॥೫೨॥

ನ ಕಾಮಯೇ ಭರ್ತೃವಿನಾಕೃತಾ ಸುಖಂ
ನ ಕಾಮಯೇ ಭರ್ತೃವಿನಾಕೃತಾ ದಿವಮ್ ।
ನ ಕಾಮಯೇ ಭರ್ತೃವಿನಾಕೃತಾಂ ಶ್ರಿಯಂ
ನ ಭರ್ತೃಹೀನಾ ವ್ಯವಸಾಮಿ ಜೀವಿತುಮ್ ॥೫೩॥

ಸಾವಿತ್ರೀ– ಮಾನದನೇ, ಸುಕೃತವಿಲ್ಲದೇ ನಿನ್ನಿಂದ ವರಗಳು ದೊರೆಯುವುದಿಲ್ಲ. ನೀನು ನನಗೆ ಕೊಟ್ಟ ವರವು ಬೇರೆಯವರಿಗೆ ಕೊಟ್ಟ ವರದಂತೆ ಅಲ್ಲ. ನಾನು ಪತಿ ಇಲ್ಲದೆಯೇ ಜೀವಿಸುವುದಿಲ್ಲವಾದ್ದರಿಂದ (ಮೃತಳಾಗುವುದರಿಂದ) ಈ ನನ್ನ ಪತಿಯು

ಬದುಕಲಿ. ನಾನು ನನ್ನ ಪತಿಯಿಲ್ಲದ ಸುಖವನ್ನು ಬಯಸುವುದಿಲ್ಲ. ಪತಿಯಿಲ್ಲದೇ ಸ್ವರ್ಗವನ್ನೂ ಬಯಸುವುದಿಲ್ಲ. ಪತಿಯಿಲ್ಲದೇ ಸಂಪತ್ತನ್ನೂ ಬಯಸುವುದಿಲ್ಲ. ಪತಿಯಿಲ್ಲದೇ ಬದುಕಲೂ ಬಯಸುವುದಿಲ್ಲ.

ವರಾತಿಸರ್ಗಃ ಶತಪುತ್ರತಾ ಮಮ
ತ್ವಯೈವ ದತ್ತೋ ಹ್ರಿಯತೇ ಚ ಮೇ ಪತಿಃ ।
ವರಂ ವೃಣೇ ಜೀವತು ಸತ್ಯವಾನಯಂ
ತವೈವ ಸತ್ಯಂ ವಚನಂ ಭವಿಷ್ಯತಿ ॥೫೪॥

ನೀನೇ ನನಗೆ ನೂರುಮಕ್ಕಳಾಗಲಿ ಎಂದು ವರವನ್ನು ಕೊಟ್ಟಿದ್ದೀಯೆ ಮತ್ತು ನನ್ನ ಪತಿಯನ್ನೂ ಕರೆದುಕೊಂಡು ಹೋಗುತ್ತಿದ್ದೀಯೆ. ಈ ಸತ್ಯವಂತನು ಜೀವಂತನಾಗಲಿ ಎಂಬ ವರವನ್ನು ಬೇಡುತ್ತಿದ್ದೇನೆ. ಹಾಗೆ ಮಾಡಿದರೆ ನಿನ್ನ ವಚನವೇ ಸತ್ಯವಾಗುವುದು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂಸಂಹಿತಾಯಾಂ ವೈಯಾಸಿಕ್ಯಾಂ
ವನಪರ್ವಣಿ ಪತಿವ್ರತಾಮಹಾತ್ಮ್ಯಪರ್ವಣಿ ಷಟ್‌ಶೀತ್ಯಧಿಕದ್ವಿಶತತಮೋऽಧ್ಯಾಯಃ ॥
॥ ಇತಿ ಸಾವಿತ್ರ್ಯುಪಾಖ್ಯಾನಪರ್ವಣಿ ಪಂಚಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವನಪರ್ವದಲ್ಲಿ ಇನ್ನೂರ ಎಂಬತ್ತಾರನೆಯ ಅಧ್ಯಾಯ ಮುಗಿಯಿತು.

★ ★ ★ ★

ಇನ್ನೂರ ಎಂಬತ್ತೇಳನೆಯ ಅಧ್ಯಾಯ

ಸತ್ಯವಂತನನ್ನು ಪಾಶದಿಂದ ಬಿಡುಗಡೆ ಮಾಡಿದ ಯಮನ ಪ್ರಯಾಣ.
ಸಾವಿತ್ರೀ ಮತ್ತು ಸತ್ಯವಂತನ ಸಂವಾದ.

ಮಾರ್ಕಂಡೇಯಃ

ತಥೇತ್ಯುಕ್ತ್ವಾ ತು ತಂ ಪಾಶಂ ಮುಕ್ತ್ವಾ ವೈವಸ್ವತೋ ಯಮಃ ।
ಧರ್ಮರಾಜಃ ಪ್ರಹೃಷ್ಟಾತ್ಮಾ ಸಾವಿತ್ರೀಮಿದಮಬ್ರವೀತ್ ॥೧॥

ಮಾರ್ಕಂಡೇಯ– ವೈವಸ್ವತನಾದ ಯಮಧರ್ಮರಾಜನು ಹಾಗೆಯೇ ಆಗಲಿ ಎಂದು ಹೇಳಿ ತನ್ನ ಪಾಶವನ್ನು ಬಿಡುಗಡೆ ಮಾಡಿ ಸಂತೋಷದಿಂದ ಕೂಡಿದ ಮನಸ್ಸುಳ್ಳವನಾಗಿ ಸಾವಿತ್ರಿಯನ್ನು ಕುರಿತು ಹೀಗೆ ಮಾತನಾಡಿದನು.

ಏಷ ಭದ್ರೇ ಮಯಾ ಮುಕ್ತೋ ಭರ್ತಾ ತೇ ಕುಲನಂದಿನಿ ।
ತೋಷಿತೋಽಹಂ ತ್ವಯಾ ಸಾಧ್ವಿ ವಾಕ್ಯೈರ್ಧರ್ಮಾರ್ಥಸಂಹಿತೈಃ ॥೨॥

ಎಲೌ ಮಂಗಳಸ್ವರೂಪಳೇ, ಕುಲನಂದಿನಿಯೇ, ಈ ನಿನ್ನ ಪತಿಯನ್ನು ಬಿಡುಗಡೆಗೊಳಿಸುತ್ತಿದ್ದೇನೆ. ಪತಿವ್ರತೆಯೇ, ನಿನ್ನ ಧರ್ಮಾರ್ಥ ಸಹಿತವಾದ ಮಾತುಗಳಿಂದ ನಾನು ಸಂತೋಷಪಟ್ಟಿದ್ದೇನೆ.

ಅರೋಗಸ್ತವ ನೇಯಶ್ಚ ಸಿದ್ಧಾರ್ಥಃ ಸ ಭವಿಷ್ಯತಿ ।
ಚತುರ್ವರ್ಷಶತಾಯುಶ್ಚ ತ್ವಯಾ ಸಾರ್ಧಮವಾಪ್ಸ್ಯತಿ ॥೩॥

ನಿನ್ನ ಪತಿಯು ಆರೋಗ್ಯವಂತನೂ, ಸೇವನೀಯನೂ ಮತ್ತು ಸಿದ್ಧಾರ್ಥನೂ ಆಗುವನು. ನಿನ್ನ ಜೊತೆಯಲ್ಲಿ ನಾಲ್ಕುನೂರು ವರ್ಷಗಳ ಆಯಸ್ಸನ್ನೂ ಹೊಂದುವನು.

ಇಷ್ಟ್ವಾ ಯಜ್ಞೈಶ್ಚ ಧರ್ಮೇಣ ಖ್ಯಾತಿಂ ಲೋಕೇ ಗಮಿಷ್ಯತಿ ।
ತ್ವಯಿ ಪುತ್ರಶತಂ ಚಾಪಿ ಸತ್ಯವಾನ್ ಜನಯಿಷ್ಯತಿ ॥೪॥

ಯಜ್ಞಗಳನ್ನು ಮಾಡಿ ಧರ್ಮಾನುಷ್ಠಾನಗಳಿಂದ ಲೋಕದಲ್ಲಿ ಖ್ಯಾತಿಯನ್ನು ಪಡೆಯುವನು ಮತ್ತು ಸತ್ಯವಂತನು ನಿನ್ನಲ್ಲಿ ನೂರುಮಕ್ಕಳನ್ನು ಪಡೆಯುವನು.

ತೇ ಚಾಪಿ ಸರ್ವೇ ರಾಜಾನಃ ಕ್ಷತ್ರಿಯಾಃ ಪುತ್ರಪೌತ್ರಿಣಃ ।
ಖ್ಯಾತಾಸ್ತನ್ನಾಮಧೇಯಾಶ್ಚ ಭವಿಷ್ಯಂತೀಹ ಶಾಶ್ವತಾಃ ॥೫॥

ಅವರೆಲ್ಲರೂ ಮಕ್ಕಳು, ಮೊಮ್ಮಕ್ಕಳನ್ನು ಹೊಂದಿದ ಕ್ಷತ್ರಿಯ ರಾಜರಾಗಿ ನಿನ್ನ ಹೆಸರಿನಿಂದಲೇ ಪ್ರಸಿದ್ಧರಾಗಿ ದೀರ್ಘಾಯುಷ್ಯವನ್ನು ಹೊಂದುವರು.

ಪಿತುಶ್ಚ ತೇ ಪುತ್ರಶತಂ ಭವಿತಾ ತವ ಮಾತರಿ ।
ಮಾಲವ್ಯಾಂ ಮಾಲವಾ ನಾಮ ಶಾಶ್ವತಂ ಪುತ್ರಪೌತ್ರಿಣಃ ।
ಭ್ರಾತರಸ್ತೇ ಭವಿಷ್ಯಂತಿ ಕ್ಷತ್ರಿಯಾಸ್ತ್ರಿದಶೋಪಮಾಃ ॥೬॥

ನಿನ್ನ ತಂದೆಗೆ ನಿನ್ನ ತಾಯಿಯಾದ ಮಾಲವಿಯಲ್ಲಿ ಮಾಲವ ಎಂಬ ಹೆಸರಿನ ನೂರುಮಕ್ಕಳು ಜನಿಸುವರು. ಆ ನಿನ್ನ ಸಹೋದರರೆಲ್ಲರೂ ದೀರ್ಘಾಯುಷ್ಯವನ್ನು ಹೊಂದಿ ಪುತ್ರಪೌತ್ರರಿಂದ ಸಹಿತರಾಗಿ ದೇವತೆಗಳನ್ನು ಹೋಲುವ ಕ್ಷತ್ರಿಯರಾಗುವರು.

ಮಾರ್ಕಂಡೇಯಃ

ಏವಂ ತಸ್ಯೈ ವರಂ ದತ್ತ್ವಾ ಧರ್ಮರಾಜಃ ಪ್ರತಾಪವಾನ್ ।
ನಿವರ್ತಯಿತ್ವಾ ಸಾವಿತ್ರೀಂ ಸ್ವಮೇವ ಭವನಂ ಯಯೌ ॥೭॥

ಮಾರ್ಕಂಡೇಯ– ಪ್ರತಾಪಶಾಲಿಯಾದ ಯಮಧರ್ಮರಾಜನು ಹೀಗೆ ಸತ್ಯವತಿಗೆ ವರವನ್ನು ನೀಡಿ ಅವಳನ್ನು ಹಿಂದಿರುಗಿಸಿ ತನ್ನ ಮನೆಗೇ ಹೊರಟು ಹೋದನು.

ಸಾವಿತ್ರ್ಯಪಿ ಯಮೇ ಯಾತೇ ಭರ್ತಾರಂ ಪ್ರತಿಲಭ್ಯ ಚ ।
ಜಗಾಮ ತತ್ರ ಯತ್ರಾಸ್ಯಾ ಭರ್ತುಃ ಶಾವಂ ಕಳೇಬರಮ್ ॥೮॥

ಸಾವಿತ್ರಿಯೂ ಸಹ ಯಮನು ಹೊರಟ ಮೇಲೆ ತನ್ನ ಪತಿಯನ್ನು ಪಡೆದು ಪತಿಯ ನಿಶ್ಚೇಷ್ಟವಾದ ಶರೀರವನ್ನು ಇಟ್ಟಿದ್ದ ಸ್ಥಳಕ್ಕೆ ಹೋದಳು.

ಸಾ ಭೂಮೌ ಪ್ರೇಕ್ಷ್ಯ ಭರ್ತಾರಮುಪಸೃತ್ಯೋಪಗೃಹ್ಯ ಚ ।
ಉತ್ಸಂಗೇ ಶಿರ ಆರೋಪ್ಯ ಭೂಮಾವುಪವಿವೇಶ ಹ ॥೯॥

ಅವಳು ಭೂಮಿಯ ಮೇಲಿದ್ದ ತನ್ನ ಪತಿಯ ಶರೀರವನ್ನು ನೋಡಿ ಅದನ್ನು ಸಮೀಪಿಸಿ ಆಲಿಂಗಿಸಿ ತನ್ನ ತೊಡೆಯ ಮೇಲೆ ಅವನ ಶಿರಸ್ಸನ್ನು ಇಟ್ಟುಕೊಂಡು ನೆಲದ ಮೇಲೆ ಕುಳಿತಳು.

ಸಂಜ್ಞಾಂ ಚ ಸ ಪುನರ್ಲಬ್ಧ್ವಾ ಸಾವಿತ್ರೀಮಭ್ಯಭಾಷತ ।
ಪ್ರೋಷ್ಯಾಗತ ಇವ ಪ್ರೇಮ್ಣಾ ಪುನಃ ಪುನರುದೀಕ್ಷ್ಯ ವೈ ॥೧೦॥

ಅವನು ಮರಳಿ ಸಂಜ್ಞೆಯನ್ನು ಪಡೆದು ಪ್ರಯಾಣವನ್ನು ಮಾಡಿ ಹಿಂದಿರುಗಿದವನಂತೆ ಪ್ರೀತಿಯಿಂದ ಸಾವಿತ್ರಿಯನ್ನು ಪುನಃ ಪುನಃ ನೋಡುತ್ತಾ ಅವಳನ್ನು ಕುರಿತು ಮಾತನಾಡಿದನು.

ಸುಚಿರಂ ಬತ ಸುಪ್ತೋಽಸ್ಮಿ ಕಿಮರ್ಥಂ ನಾವಬೋಧಿತಃ ।
ಕ್ವ ಚಾಸೌ ಪುರುಷಃ ಶ್ಯಾಮೋ ಯೋಽದ್ಯ ಮಾಂ ಸಂಚಕರ್ಷ ಹ ॥

ನಾನು ಮಲಗಿ ಬಹಳ ಸಮಯವಾಯಿತು. ಏಕೆ ನನ್ನನ್ನು ಎಬ್ಬಿಸಲಿಲ್ಲ? ನನ್ನನ್ನು ಎಳೆಯುತ್ತಿದ್ದ ಆ ಕೃಷ್ಣಪುರುಷನು ಎಲ್ಲಿ? (ಎಂದು ಕೇಳಿದನು).

ಸಾವಿತ್ರೀ

ಸುಚಿರಂ ತ್ವಂ ಪ್ರಸುಪ್ತೋಽಸಿ ಮಮಾಂಕೇ ಪುರುಷರ್ಷಭ ।
ಗತಃ ಸ ಭಗವಾನ್ ದೇವಃ ಪ್ರಜಾಸಂಯಮನೋ ಯಮಃ ॥೧೨॥

ಸಾವಿತ್ರೀ– ಪುರುಷಶ್ರೇಷ್ಠನೇ, ನೀನು ನನ್ನ ತೊಡೆಯ ಮೇಲೆ ಬಹಳ ಸಮಯದಿಂದ ನಿದ್ರೆಯನ್ನು ಮಾಡಿದೆ. ಆ ಕೃಷ್ಣಪುರುಷನು ಪ್ರಜೆಗಳನ್ನು ನಿಯಂತ್ರಿಸುವ ಪೂಜ್ಯನಾದ ಯಮದೇವ. ಅವನು ಹೊರಟುಹೋದನು.

ವಿಶ್ರಾಂತೋಽಸಿ ಮಹಾಭಾಗ ವಿನಿದ್ರಶ್ಚ ನೃಪಾತ್ಮಜ ।
ಯದಿ ಸಹ್ಯಂ ಸಮುತ್ತಿಷ್ಠ ವಿಗಾಢಾಂ ಪಶ್ಯ ಶರ್ವರೀಮ್ ॥೧೩॥

ಮಹಾನುಭಾವನೇ, ರಾಜಕುಮಾರನೇ, ವಿಶ್ರಾಂತಿಯನ್ನು ಪಡೆದು ಎಚ್ಚರಗೊಂಡಿದ್ದೀಯೆ. ಸಾಧ್ಯವಾದರೆ ಎದ್ದೇಳು. ಗಾಢವಾದ ಈ ರಾತ್ರಿಯನ್ನು ನೋಡು.

ಮಾರ್ಕಂಡೇಯಃ

ಉಪಲಭ್ಯ ಸ ಸಂಜ್ಞಾಂ ಚ ಸುಖಿಸುಪ್ತ ಇವೋತ್ಥಿತಃ ।
ದಿಶಃ ಸರ್ವಾ ವನಾಂತಾಂಶ್ಚ ನಿರೀಕ್ಷ್ಯೇವಾಚ ಸತ್ಯವಾನ್ ॥೧೪॥

ಮಾರ್ಕಂಡೇಯ– ಸತ್ಯವಂತನು ಸಂಜ್ಞೆಯನ್ನು ಪೂರ್ಣವಾಗಿ ಪಡೆದು ಸುಖವಾಗಿ ಮಲಗಿದ್ದವನಂತೆ ಎದ್ದು ಎಲ್ಲ ದಿಕ್ಕುಗಳನ್ನೂ ಮತ್ತು ಕಾಡುಪ್ರದೇಶಗಳನ್ನೂ ನೋಡಿ ಹೀಗೆ ಮಾತನಾಡಿದನು.

ಫಲಾಹಾರೋಽಸ್ಮಿ ನಿಷ್ಕ್ರಾಂತಸ್ತ್ವಯಾ ಸಹ ಸುಮಧ್ಯಮೇ ।
ತತಃ ಪಾಟಯತಃ ಕಾಷ್ಠಂ ಶಿರಸೋ ಮೇ ರುಜಾಽಭವತ್ ॥೧೫॥

ಸುಂದರಿಯೇ, ಹಣ್ಣುಗಳನ್ನು ತರಲು ನಿನ್ನ ಜೊತೆಯಲ್ಲಿ ಆಶ್ರಮದಿಂದ ಹೊರಟು ಬಂದೆನು. ಕಟ್ಟಿಗೆಗಳನ್ನು ಒಡೆಯುತ್ತಿದ್ದಂತೆ ನನಗೆ ಶಿರೋವೇದನೆಯು ಉಂಟಾಯಿತು.

ಶಿರೋಽಭಿತಾಪಸಂಯುಕ್ತಃ ಸ್ಥಾತುಂ ಚಿರಮಶಕ್ನುವನ್ ।
ತವೋತ್ಸಂಗೇ ಪ್ರಸುಪ್ತೋಽಸ್ಮಿ ಇತಿ ಸರ್ವಂ ಸ್ಮರೇ ಶುಭೇ ॥೧೬॥

ಎಲೌ ಶುಭಳಾದವಳೇ, ತಲೆಯ ಶೂಲೆಯಿಂದ ಸಂತಪ್ತನಾಗಿ ನಿಲ್ಲಲು ಸಾಧ್ಯವಾಗದೇ ನಿನ್ನ ತೊಡೆಯ ಮೇಲೆ ಮಲಗಿದೆನು ಎಂದು ಇವೆಲ್ಲದರ ಸ್ಮರಣೆ ಇದೆ.

ತ್ವಯೋಪಗೂಢಸ್ಯ ಚ ಮೇ ನಿದ್ರಯಾऽಪಹೃತಂ ಮನಃ ।
ತತೋऽಪಶ್ಯಂ ತಮೋ ಘೋರಂ ಪುರುಷಂ ಚ ಮಹೌಚಸಮ್ ॥೧೭॥

ನಿನ್ನಿಂದ ಆಲಿಂಗಿತನಾದ ನಾನು ನಿದ್ರೆಗೆ ವಶನಾದೆ. ಅನಂತರ ಗಾಢವಾದ ಕತ್ತಲೆಯನ್ನೂ ಮತ್ತು ಮಹಾಶಕ್ತಿಶಾಲಿಯಾದ ಒಬ್ಬ ಪುರುಷನನ್ನು ನೋಡಿದೆನು.

ತದ್ ಯದಿ ತ್ವಂ ವಿಜಾನಾಸಿ ಕಿಂ ತದ್ ಬ್ರೂಹಿ ಸುಮಧ್ಯಮೇ ।
ಸ್ವಪ್ನೋ ಮೇ ಯದಿ ವಾ ದೃಷ್ಟೋ ಯದಿ ವಾ ಸತ್ಯಮೇವ ತತ್ ॥೧೮॥

ಎಲೌ ಸುಮಧ್ಯಮೆಯೇ, ಅದೇನೆಂದು ನಿನಗೆ ತಿಳಿದಿದ್ದರೆ ನನಗೆ ಹೇಳು. ಅದೇನು ಸ್ವಪ್ನವೋ ಅಥವಾ ಸತ್ಯವಾದ ಘಟನೆಯೋ?

ಮಾರ್ಕಂಡೇಯಃ

ತಮುವಾಚಾಥ ಸಾವಿತ್ರೀ ರಜನೀ ವ್ಯವಗಾಹತೇ ।
ಶಸ್ತೇ ಸರ್ವಂ ಯಥಾವೃತ್ತಮಾಖ್ಯಾಸ್ಯಾಮಿ ನೃಪಾತ್ಮಜ ॥೧೯॥

ಮಾರ್ಕಂಡೇಯ– ಸಾವಿತ್ರಿಯು ಅವನನ್ನು ಕುರಿತು ರಾಜಕುಮಾರನೇ, ರಾತ್ರಿಯು ಹಬ್ಬಿದೆ. ನಿನಗೆ ನಾಳೆ ನಡೆದ ಎಲ್ಲಾ ಘಟನೆಯನ್ನು ತಿಳಿಸುವೆನು ಎಂದು ಹೇಳಿದಳು.

ಉತ್ತಿಷ್ಠೋತ್ತಿಷ್ಠ ಭದ್ರಂ ತೇ ಪಿತರೌ ಪಶ್ಯ ಸುವ್ರತ ।
ವಿಗಾಢಾ ರಜನೀ ಚೇಯಂ ನಿವೃತ್ತಶ್ಚ ದಿವಾಕರಃ ॥೨೦॥

ಸುವ್ರತನೇ, ನಿನಗೆ ಮಂಗಳವಾಗಲಿ. ಏಳು ಏಳು, ತಂದೆ ತಾಯಿಗಳನ್ನು ನೋಡು. ಸೂರ್ಯನು ಮುಳುಗಿ ಈ ರಾತ್ರಿಯಲ್ಲಿ ಬಹಳ ಸಮಯವಾಗಿದೆ.

ನಕ್ತಂಚರಾಶ್ಚರಂತ್ಯೇತೇ ಹೃಷ್ಟಾಃ ಕ್ರೂರಾಭಿಭಾಷಿಣಃ ।
ಶ್ರೂಯಂತೇ ಪರ್ಣಶಬ್ದಾಶ್ಚ ಮೃಗಾಣಾಂ ಚರತಾಂ ವನೇ ॥೨೧॥

ಕ್ರೂರವಾಗಿ ಮಾತನಾಡುವ ಸಂತುಷ್ಟರಾದ ಈ ನಿಶಾಚರರು ತಿರುಗಾಡುತ್ತಿದ್ದಾರೆ ಮತ್ತು ಮೃಗಗಳು ತಿರುಗಾಡುವುದರಿಂದ ಎಲೆಗಳ ಶಬ್ದವು ಕೇಳಿ ಬರುತ್ತಿದೆ.

ಏತಾ ಘೋರಂ ಶಿವಾ ನಾದಾನ್ ದಿಶಂ ದಕ್ಷಿಣಪಶ್ಚಿಮಾಮ್ ।
ಆಸ್ಥಾಯ ವಿರುವಂತ್ಯುಗ್ರಾಃ ಕಂಪಯಂತ್ಯೋ ಮನೋ ಮಮ ॥೨೨॥

ಈ ಘೋರವಾದ ಹೆಣ್ಣುನರಿಗಳು ನೈಋತ್ಯದಿಕ್ಕನ್ನು ಆಶ್ರಯಿಸಿ ಭಯಂಕರವಾದ ಅಳುವ ನಾದಗಳನ್ನು ಮಾಡುತ್ತಾ ನನ್ನ ಮನಸ್ಸನ್ನು ನಡುಗಿಸುತ್ತಿವೆ.

ಸತ್ಯವಾನ್

ವನಂ ಪ್ರತಿಭಯಾಕಾರಂ ಘನೇನ ತಮಸಾऽऽವೃತಮ್ ।
ನ ವಿಜ್ಞಾಸ್ಯಸಿ ಪಂಥಾನಂ ಗಂತುಂ ಚೈವ ನ ಶಕ್ಷ್ಯಸಿ ॥೨೩॥

ಸತ್ಯವಾನ್- ಕಾಡು ಭಯಂಕರವಾಗಿದೆ. ಗಾಢವಾದ ಕತ್ತಲೆಯು ಹಬ್ಬಿದೆ. ನೀನು ಮಾರ್ಗವನ್ನು ತಿಳಿಯುವುದಿಲ್ಲ. ಅದರಿಂದ ಆಶ್ರಮಕ್ಕೆ ಹೋಗಲು ನಿನಗೆ ಸಾಧ್ಯವಾಗುವುದಿಲ್ಲ.

ಸಾವಿತ್ರೀ

ಅಸ್ಮಿನ್ನದ್ಯ ವನೇ ದಗ್ಧೇ ಶುಷ್ಕವೃಕ್ಷಃ ಸ್ಥಿತೋ ಜ್ವಲನ್ ।
ವಾಯುನಾ ಧೂಯಮಾನೋऽತ್ರ ದೃಶ್ಯತೇऽಗ್ನಿಃ ಕ್ವಚಿತ್ ಕ್ವಚಿತ್ ॥೨೪॥

ಸಾವಿತ್ರೀ– ಕಾಡಿನಲ್ಲಿ ಈ ದಿನ ದಗ್ಧವಾದ ಒಂದು ಶುಷ್ಕವೃಕ್ಷವಿದೆ. ವಾಯುವು ಜೋರಾಗಿ ಬೀಸಿದಾಗ ಅದರಲ್ಲಿ ಒಮ್ಮೊಮ್ಮೆ ಅಗ್ನಿಯು ಕಂಡುಬರುತ್ತದೆ.

ತತೋऽಗ್ನಿಮಾನಯಿತ್ವೇಹ ಜ್ವಾಲಯಿಷ್ಯಾಮಿ ಸರ್ವತಃ ।
ಕಾಷ್ಠಾನೀಮಾನಿ ಸಂತೀಹ ಜಹಿ ಸಂತಾಪಮಾತ್ಮನಃ ॥೨೫॥

ಅಲ್ಲಿಂದ ಅಗ್ನಿಯನ್ನು ತಂದು ಇಲ್ಲಿ ಎಲ್ಲ ಕಡೆಗಳಲ್ಲಿಯೂ ಅಗ್ನಿಯನ್ನು ಹೊತ್ತಿಸುತ್ತೇನೆ. ಇಲ್ಲಿ ಬೇಕಾದಷ್ಟು ಈ ಕಟ್ಟಿಗೆಗಳಿವೆ. ನಿನ್ನ ವಿಷಾದವನ್ನು ತ್ಯಜಿಸು.

ಯದಿ ನೋತ್ಸಹಸೇ ಗಂತುಂ ಸರುಜಂ ತ್ವಾಂ ಹಿ ಲಕ್ಷಯೇ ।
ನ ಚ ಜ್ಞಾಸ್ಯಸಿ ಪಂಥಾನಂ ತಮಸಾ ಸಂವೃತೇ ವನೇ ॥೨೬॥

ಶ್ವಃ ಪ್ರಭಾತೇ ವನೇ ದೃಶ್ಯೇ ಯಾಸ್ಯಾವೋಽನುಮತೇ ತವ ।
ವಸಾವೇಹ ಕ್ಷಪಾಮೇಕಾಂ ರುಚಿತಂ ಯದಿ ತೇಽನಘ ॥೨೭॥

ನೀನು ಶಿರೋವೇದನೆಯಿಂದ ಆಯಾಸಗೊಂಡಿರುವೆ ಎಂದು ನಾನು ತಿಳಿಯುತ್ತೇನೆ. ಕತ್ತಲೆಯಿಂದ ಆವೃತವಾದ ಈ ಕಾಡಿನಲ್ಲಿ ನನಗೆ ಮಾರ್ಗವೂ ತಿಳಿಯುವುದಿಲ್ಲ. ನಿನಗೆ ಈಗ ಆಶ್ರಮಕ್ಕೆ ಹಿಂದಿರುಗಲು ಇಷ್ಟವಿಲ್ಲದಿದ್ದರೆ ನಿನ್ನ ಅನುಮತಿ ಇದ್ದರೆ ನಾಳೆಯ ಬೆಳಿಗ್ಗೆ ಕಾಡಿನಲ್ಲಿ ಎಲ್ಲವೂ ಚೆನ್ನಾಗಿ ಕಾಣುವಾಗ ಇಲ್ಲಿಂದ ಹೊರಡೋಣ. ಅನಘನೇ, ನಿನಗೆ ಇಷ್ಟವಾದರೆ ಈ ಒಂದು ರಾತ್ರಿಯನ್ನು ಇಲ್ಲಿಯೇ ಕಳೆಯೋಣ.

ಸತ್ಯವಾನ್

ಶಿರೋರುಜಾ ನಿವೃತ್ತಾ ಮೇ ಸ್ವಸ್ಥಾನ್ಯಂಗಾನಿ ಲಕ್ಷಯೇ ।
ಮಾತಾಪಿತೃಭ್ಯಾಮಿಚ್ಛಾಮಿ ಸಂಗಮಂ ತತ್ಪ್ರಸಾದಜಮ್ ॥೨೮॥

ಸತ್ಯವಾನ್- ನನ್ನ ತಲೆಯ ಶೂಲೆಯು ನಿವೃತ್ತವಾಗಿದೆ. ದೇಹದ ಅವಯವಗಳು ಸ್ವಸ್ಥವಾಗಿವೆ. ನಿನ್ನ ಅನುಗ್ರಹದಿಂದ ತಂದೆ ತಾಯಿಯ ಜೊತೆಯಲ್ಲಿ ಸೇರಲು ಬಯಸುತ್ತೇನೆ.

ನ ಕದಾಚಿದ್ ವಿಕಾಲಂ ಹಿ ಗತಪೂರ್ವೋ ಮಯಾಽಽಶ್ರಮಃ ।
ಅನಾಗತಾಯಾಂ ಸಂಧ್ಯಾಯಾಂ ಮಾತಾ ಮೇ ಪ್ರರುಣದ್ಧಿ ಮಾಮ್ ॥

ನಾನು ಹಿಂದೆ ಎಂದೂ ಆಶ್ರಮಕ್ಕೆ ಅಕಾಲದಲ್ಲಿ ಹಿಂದಿರುಗಿಲ್ಲ. ಸಂಜೆಯಾಗುವುದಕ್ಕಿಂತ ಮೊದಲೇ ನನ್ನ ತಾಯಿಯು ನಾನು ಹೊರಗೆ ಹೋಗದಂತೆ ತಡೆಯುತ್ತಿದ್ದಳು.

ದಿವಾಪಿ ಮಯಿ ನಿಷ್ಕ್ರಾಂತೇ ಸಂತಪ್ಯೇತೇ ಗುರೂ ಮಮ ।
ವಿಚಿನೋತಿ ಹಿ ಮಾಂ ತಾತಃ ಸಹೈವಾಶ್ರಮವಾಸಿಭಿಃ ॥೩೦॥

ಹಗಲಿನಲ್ಲಿಯೂ ಸಹ ನಾನು ಹೊರಗೆ ಹೋದರೆ ನನ್ನ ಹಿರಿಯರಾದ ಇವರಿಬ್ಬರೂ ಸಂತಾಪಪಡುತ್ತಾರೆ. ನನ್ನ ತಂದೆಯು ಆಶ್ರಮವಾಸಿಗಳ ಜೊತೆಯಲ್ಲಿ ನನ್ನನ್ನು ಹುಡುಕುತ್ತಾನೆ.

ಮಾತ್ರಾ ಪಿತ್ರಾ ಚ ಸುಭೃಶಂ ದುಃಖಿತಾಭ್ಯಾಮಹಂ ಪುರಾ ।
ಉಪಾಲಬ್ಧಶ್ಚ ಬಹುಶಶ್ಚಿರೇಣಾಗಚ್ಛಸೀತಿ ಹ ॥೩೧॥

ಹಿಂದೆ ನನ್ನ ತಂದೆತಾಯಿಗಳಿಬ್ಬರೂ ನೀನು ತಡವಾಗಿ ಹಿಂದಿರುಗುತ್ತೀಯೆ ಎಂದು ನನ್ನನ್ನು ನಿಂದಿಸಿದ್ದಾರೆ.

ಕಾ ತ್ವವಸ್ಥಾ ತಯೋರದ್ಯ ಮದರ್ಥಮಿತಿ ಚಿಂತಯೇ ।
ತಯೋರದೃಶ್ಯೇ ಮಯಿ ಚ ಮಹದ್ದುಃಖಂ ಭವಿಷ್ಯತಿ ॥೩೨॥

ಈ ದಿನ ಅವರು ನನ್ನ ಸಲುವಾಗಿ ಯಾವ ಅವಸ್ಥೆಯಲ್ಲಿದ್ದಾರೆ ಎಂದು ಯೋಚಿಸುತ್ತಿದ್ದೇನೆ. ನಾನು ಕಣ್ಣಿಗೆ ಕಾಣದಿದ್ದರೆ ಅವರಿಗೆ ಬಹಳ ದುಃಖವು ಉಂಟಾಗುವುದು.

ಪುರಾ ಮಾಮೂಚತುಶ್ಚೈವ ರಾತ್ರ್ಯಾವಸ್ಥಾನಮಾಗತಮ್ ।
ಸುಭೃಶಂ ದುಃಖಿತೌ ವೃದ್ಧೌ ಬಹುಶಃ ಪ್ರೀತಿಸಂಯುತೌ ॥೩೩॥

ತ್ವಯಾ ಹೀನೌ ನ ಜೀವಾವ ಮುಹೂರ್ತಮಪಿ ಪುತ್ರಕ ।
ಯಾವದ್ ಧರಿಷ್ಯಸೇ ಪುತ್ರ ತಾವನ್ನೌ ಜೀವಿತಂ ಧ್ರುವಮ್ ॥೩೪॥

ನಾನು ಹಿಂದೆ ರಾತ್ರಿಯಲ್ಲಿ ಒಮ್ಮೆ ತಡವಾಗಿ ಬಂದಾಗ ಬಹಳ ದುಃಖಿತರಾದ ವೃದ್ಧರಾದ ಅವರು ಪ್ರೀತಿಯಿಂದ ಕೂಡಿದವರಾಗಿ ಪುನಃ ಪುನಃ ನನ್ನನ್ನು ಕುರಿತು ಪುತ್ರನೇ, ನೀನಿಲ್ಲದಿದ್ದರೆ ನಾವು ಒಂದು ಮುಹೂರ್ತವೂ ಬದುಕುವುದಿಲ್ಲ. ನೀನು ಎಲ್ಲಿಯವರೆಗೆ ಬದುಕಿರುತ್ತೀಯೋ ನಾವೂ ಸಹ ಅಲ್ಲಿಯವರೆಗೆ ಮಾತ್ರ ಬದುಕಿರುತ್ತೇವೆ ಎಂದು ಹೇಳಿದರು.

ವೃದ್ಧಯೋರಂಧಯೋರ್ದೃಷ್ಟಿಸ್ತ್ವಯಿ ವಂಶಃ ಪ್ರತಿಷ್ಠಿತಃ ।
ತ್ವಯಿ ಪಿಂಡಶ್ಚ ಕೀರ್ತಿಶ್ಚ ಸಂತಾನಂ ಚಾವಯೋರಿತಿ ॥೩೫॥

ವೃದ್ಧರೂ, ಅಂಧರೂ ಆದ ನಮ್ಮ ದೃಷ್ಟಿಯೂ, ನಮ್ಮ ವಂಶವೂ, ನಮ್ಮ ಪಿಂಡವೂ, ಕೀರ್ತಿಯೂ ಮತ್ತು ಸಂತಾನವೂ ನಿನ್ನನ್ನು ಅವಲಂಬಿಸಿದೆ (ಎಂದು ಹೇಳಿದರು).

ಮಾತಾ ವೃದ್ಧಾ ಪಿತಾ ತ್ವಂಧಸ್ತಯೋರ್ಯಷ್ಟಿರಹಂ ಕಿಲ ।
ತೌರಾತ್ರೌ ಮಾಮಪಶ್ಯಂತೌ ಕಾಮವಸ್ಥಾಂ ಗಮಿಷ್ಯತಃ ॥೩೬॥

ತಾಯಿಯು ವೃದ್ಧಳಾಗಿದ್ದಾಳೆ. ತಂದೆಯು ಅಂಧನಾಗಿದ್ದಾನೆ. ನಾನೊಬ್ಬನೇ ಅವರಿಗೆ ಊರುಗೋಲಷ್ಟೆ? ರಾತ್ರಿಯಲ್ಲಿ ಅವರು ನನ್ನನ್ನು ನೋಡದಿದ್ದರೆ ಅವರಿಗೆ ಎಂತಹ ಅವಸ್ಥೆಯು ಉಂಟಾಗುವುದು?

ನಿದ್ರಾಯಾಶ್ಚಾಭ್ಯಸೂಯಾಮಿ ಯಸ್ಯಾ ಹೇತೋಃ ಪಿತಾ ಮಮ ।
ಮಾತಾ ಚ ಸಂಶಯಂ ಪ್ರಾಪ್ತಾ ಮತೃತೇಽನಪಕಾರೀಣೀ ॥೩೭॥

ನನ್ನ ಸಲುವಾಗಿ ನನ್ನ ತಂದೆತಾಯಿಗಳು ನನ್ನ ವಿಷಯದಲ್ಲಿ ಸಂಶಯವನ್ನು ಹೊಂದುವಂತೆ ಮಾಡಿದ ಈ ಪ್ರತಿಕೂಲವಾದ ನಿದ್ರೆಯ ಮೇಲೆಯೇ ನನಗೆ ಕೋಪವುಂಟಾಗುತ್ತಿದೆ.

ಅಹಂ ಚ ಸಂಶಯಂ ಪ್ರಾಪ್ತಃ ಕೃಚ್ಛ್ರಮಾಪದಮಾಸ್ಥಿತಃ ।
ಮಾತಾಪಿತೃಭ್ಯಾಂ ಹಿ ವಿನಾ ನಾಹಂ ಜೀವಿತುಮುತ್ಸಹೇ ॥೩೮॥

ದೊಡ್ಡ ಕಷ್ಟಕ್ಕೆ ಸಿಲುಕಿ ನಾನೂ ಸಹ ಪ್ರಾಣಸಂಶಯವನ್ನು ಹೊಂದಿದೆನು. ತಂದೆ ತಾಯಿಗಳಿಲ್ಲದೆ ನಾನು ಜೀವಿಸಲಾರೆ.

ವ್ಯಕ್ತಮಾಕುಲಯಾ ಬುದ್ಧ್ಯಾ ಪ್ರಜ್ಞಾಚಕ್ಷುಃ ಪಿತಾ ಮಮ ।
ಏಕೈಕಮಸ್ಯಾಂ ವೇಲಾಯಾಂ ಪೃಚ್ಛತ್ಯಾಶ್ರಮವಾಸಿನಮ್ ॥೩೯॥

ಪ್ರಜ್ಞಾಚಕ್ಷುವಾದ ನನ್ನ ತಂದೆಯು ಕಳವಳಗೊಂಡ ಮನಸ್ಸಿನಿಂದ ಈ ಸಮಯದಲ್ಲಿ ಆಶ್ರಮವಾಸಿಗಳಾದ ಪ್ರತಿಯೊಬ್ಬರನ್ನೂ ನನ್ನನ್ನು ಕುರಿತು ವಿಚಾರಿಸುತ್ತಾನೆ ಎಂಬುದು ನನಗೆ ಸ್ಪಷ್ಟವಾಗಿದೆ.

ನಾತ್ಮಾನಮನುಶೋಚಾಮಿ ಯಥಾಹಂ ಪಿತರಂ ಶುಭೇ ।
ಭರ್ತಾರಂ ಚಾಪ್ಯನುಗತಾಂ ಮಾತರಂ ಪ್ರತಿದುರ್ಬಲಾಮ್ ॥೪೦॥

ಶುಭಳಾದವಳೇ, ತಂದೆಯನ್ನು ಕುರಿತು ಶೋಕಪಡುವಂತೆ ಮತ್ತು ತಂದೆಯ ಹಿಂದೆ ಹೋಗುತ್ತಿರುವ ಅಶಕ್ತಳಾದ ತಾಯಿಯನ್ನು ಕುರಿತು ಶೋಕಪಡುವಂತೆ, ನನ್ನನ್ನು ಕುರಿತು ನಾನು ಶೋಕಿಸುವುದಿಲ್ಲ.

ಮತ್ಕೃತೇ ನಹಿ ತಾವದ್ಯ ಸಂತಾಪಂ ಪರಮೇಷ್ಯತಃ ।
ಜೀವಂತಾವನುಜೀವಾಮಿ ಭರ್ತವ್ಯೌ ತೌ ಮಯೇತಿ ಹ ॥೪೧॥

ಈ ದಿನ ನಾನು ಮಾಡಿದ ಕಾರ್ಯದಿಂದ ಅವರಿಗೆ ಬಹಳ ಸಂತಾಪವಾಗುವುದು. ಅವರು ಬದುಕಿದ್ದರೆ ಅವರನ್ನು ಪೋಷಿಸಬೇಕೆಂದು ನಾನೂ ಬದುಕುತ್ತೇನೆ.

ತಯೋಃ ಪ್ರಿಯಂ ಮೇ ಕರ್ತವ್ಯಮಿತಿ ಜಾನಾಮಿ ಚಾಪ್ಯಹಮ್ ।
ಪರಮಂ ದೈವತಂ ತೌ ಮೇ ಪೂಜನೀಯೌ ಸದಾ ಮಯಾ ॥೪೨॥

ತಯೋಸ್ತು ಮೇ ಸದಾಽಸ್ಯೇವಂ ವ್ರತಮೇತತ್ ಪುರಾತನಮ್ ॥೪೩॥

ಅವರಿಗೆ ಪ್ರಿಯವನ್ನು ಮಾಡಬೇಕೆಂದು ಯಾವಾಗಲೂ ತಿಳಿದಿದ್ದೇನೆ. ಅವರು ನನ್ನ ಪರಮದೇವತೆಗಳು. ನನ್ನಿಂದ ಪೂಜಿಸಲ್ಪಡಬೇಕಾದವರು. ನಾನು ಬಹಳ ಹಿಂದಿನಿಂದಲೂ ಅವರ ವಿಷಯದಲ್ಲಿ ಇದನ್ನು ವ್ರತವೆಂದು ಆಚರಿಸುತ್ತಿದ್ದೇನೆ.

ಮಾರ್ಕಂಡೇಯಃ

ಏವಮುಕ್ತ್ವಾ ಸ ಧರ್ಮಾತ್ಮಾ ಗುರುಭಕ್ತೋ ಗುರುಪ್ರಿಯಃ ।
ಉಚ್ಚ್ರಿತ್ಯ ಬಾಹೂ ದುಃಖಾರ್ತಃ ಸುಸ್ವರಂ ಪ್ರರುರೋದ ಹ ॥೪೪॥

ಮಾರ್ಕಂಡೇಯರು– ಹೀಗೆ ಹೇಳಿ ಧರ್ಮಾತ್ಮನೂ, ಗುರುಭಕ್ತನೂ, ಗುರುಪ್ರಿಯನೂ ಆದವನು ತನ್ನ ತೋಳುಗಳನ್ನು ಮೇಲೆತ್ತಿ ದುಃಖದಿಂದ ಆರ್ತನಾಗಿ ಸುಸ್ವರದಿಂದ ರೋದನವನ್ನು ಮಾಡಿದನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂಸಂಹಿತಾಯಾಂ ವೈಯಾಸಿಕ್ಯಾಂ ವನಪರ್ವಣಿ ಪತಿವ್ರತಾಮಹಾತ್ಮ್ಯಪರ್ವಣಿ ಸಪ್ತಶೀತ್ಯಧಿಕದ್ವಿಶತತಮೋಽಧ್ಯಾಯಃ ॥
॥ ಇತಿ ಸಾವಿತ್ರ್ಯುಪಾಖ್ಯಾನಪರ್ವಣಿ ಷಷ್ಠೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವನಪರ್ವದಲ್ಲಿ ಇನ್ನೂರ ಎಂಬತ್ತೇಳನೆಯ ಅಧ್ಯಾಯ ಮುಗಿಯಿತು.

★ ★ ★ ★

ಇನ್ನೂರ ಎಂಬತ್ತೆಂಟನೆಯ ಅಧ್ಯಾಯ

ಸಾವಿತ್ರಿ ಮತ್ತು ಸತ್ಯವಂತರಿಂದ ಪುನಃ ಆಶ್ರಮದ ಕಡೆಗೆ ಪ್ರಯಾಣ.

ಮಾರ್ಕಂಡೇಯಃ

ತತೋಽಬ್ರವೀತ್ ತಥಾ ದೃಷ್ಟ್ವಾ ಭರ್ತಾರಂ ಶೋಕಕರ್ಶಿತಮ್ ॥೧॥

ಪ್ರಸೃಜ್ಯಾಶ್ರೂಣಿ ಪಾಣಿಭ್ಯಾಂ ಸಾವಿತ್ರೀ ಧರ್ಮಚಾರಿಣೀ ।
ಯದಿ ಮೇಽಸ್ತಿ ತಪಸ್ತಪ್ತಂ ಯದಿ ದತ್ತಂ ಹುತಂ ಯದಿ ।
ಶ್ವಶ್ರೂಶ್ವಶುರಭರ್ತೄಣಾಂ ಮಮ ಪುಣ್ಯಾಽಸ್ತು ಶರ್ವರೀ ॥೨॥

ಮಾರ್ಕಂಡೇಯರು– ಆಗ ಧರ್ಮಚಾರಿಣಿಯಾದ ಸಾವಿತ್ರಿಯು ಹಾಗೆ ಶೋಕಕರ್ಶಿತನಾದ ತನ್ನ ಪತಿಯನ್ನು ನೋಡಿ ಅವನ ಕಣ್ಣೀರನ್ನು ಒರೆಸಿ, ನಾನೇನಾದರೂ ತಪಸ್ಸನ್ನು ಮಾಡಿದ್ದರೆ, ದಾನವನ್ನು ಕೊಟ್ಟಿದ್ದರೆ, ಹೋಮವನ್ನು ಮಾಡಿದ್ದರೆ, ನನ್ನ ಅತ್ತೆ ಮಾವ ಪತಿಗಳಿಗೆ ಈ ರಾತ್ರಿಯು ಶುಭಕರವಾಗಿರಲಿ ಎಂದು ಹೇಳಿದಳು.

ನ ಸ್ಮರಾಮ್ಯುಕ್ತಪೂರ್ವಂ ವೈ ಸ್ವೈರೇಷ್ವಪ್ಯನೃತಾಂ ಗಿರಮ್ ।
ತೇನ ಸತ್ಯೇನ ತಾವದ್ಯ ಧ್ರಿಯೇತಾಂ ಶ್ವಶುರೌ ಮಮ ॥೩॥

ನಾನು ವಿನೋದಕ್ಕಾಗಿಯೂ ಹಿಂದೆ ಎಂದೂ ಒಂದು ಸುಳ್ಳನ್ನೂ ಹೇಳಿದವಳಲ್ಲ. ಆ ಸತ್ಯದಿಂದ ಈ ದಿನ ನನ್ನ ಅತ್ತೆಮಾವಂದಿರು ಜೀವಿಸಿರಲಿ (ಎಂದು ಹೇಳಿದಳು).

ಸತ್ಯವಾನ್

ಕಾಮಯೇ ದರ್ಶನಂ ಪಿತ್ರೋರ್ಯಾಹಿ ಸಾವಿತ್ರಿ ಮಾಚಿರಮ್ ।
ಅಪಿ ನಾಮ ಗುರೂ ತೌ ಹಿ ಪಶ್ಯೇಯಂ ಧ್ರಿಯಮಾಣಕೌ ॥೪॥

ಸತ್ಯವಾನ್- ಸಾವಿತ್ರಿ, ನನ್ನ ತಂದೆ ತಾಯಿಯ ದರ್ಶನವನ್ನು ಮಾಡಲು ಬಯಸುತ್ತೇನೆ. ಶೀಘ್ರವಾಗಿ ಹೊರಡು. ಈ ದಿನ ಸಂತೋಷದಲ್ಲಿರುವ ಆ ನನ್ನ ಹಿರಿಯರನ್ನು ನೋಡುತ್ತೇನೆಯೇ ಎಂಬ ಸಂಶಯವುಂಟಾಗಿದೆ.

ಪುರಾ ಮಾತುಃ ಪಿತುರ್ವಾಪಿ ಯದಿ ಪಶ್ಯಾಮಿ ವಿಪ್ರಿಯಮ್ ।
ನ ಜೀವಿಷ್ಯೇ ವರಾರೋಹೇ ಸತ್ಯೇನಾತ್ಮಾನಮಾಲಭೇ ॥೫॥

ಎಲೌ ಸುಂದರಿಯೇ, ನಾನು ತಂದೆತಾಯಿಗಳಿಗೆ ಅಪ್ರಿಯ ಉಂಟಾಗುವುದನ್ನು ನೋಡುವುದಕ್ಕಿಂತ ಮೊದಲೇ ಮರಣವನ್ನು ಹೊಂದುವೆನು. ಇದನ್ನು ನನ್ನ ಮೇಲೆಯೇ ಪ್ರಮಾಣ ಮಾಡಿ ಹೇಳುತ್ತಿದ್ದೇನೆ.

ಯದಿ ಧರ್ಮೇ ಚ ತೇ ಬುದ್ಧಿರ್ಮಾಂ ಚೇಜ್ಜೀವಂತಮಿಚ್ಛಸಿ ।
ಮಮ ಪ್ರಿಯಂ ವಾ ಕರ್ತವ್ಯಂ ಗಚ್ಛಾವಾಶ್ರಮಮಂತಿಕಾತ್ ॥೬॥

ನಿನಗೆ ಧರ್ಮದಲ್ಲಿ ಬುದ್ಧಿ ಇರುವುದಾದರೆ, ನಾನು ಬದುಕಿರಬೇಕೆಂದು ನೀನು ಬಯಸುವುದಾದರೆ, ನನಗೆ ಪ್ರಿಯವನ್ನು ಮಾಡಬೇಕೆಂದು ನೀನು ತಿಳಿದಿರುವುದಾದರೆ ಈಗಲೇ ಆಶ್ರಮಕ್ಕೆ ಹೊರಡೋಣ.

ಮಾರ್ಕಂಡೇಯಃ

ಸಾವಿತ್ರೀ ತತ ಉತ್ಥಾಯ ಕೇಶಾನ್ ಸಂಯಮ್ಯ ಭಾಮಿನೀ ।
ಪತಿಮುತ್ಥಾಪಯಾಮಾಸ ಬಾಹುಭ್ಯಾಂ ಪರಿಗೃಹ್ಯ ವೈ ॥೭॥

ಮಾರ್ಕಂಡೇಯ– ಅನಂತರ ಭಾಮಿನಿಯಾದ ಸಾವಿತ್ರಿಯು ಎದ್ದು ತಲೆಯ ಕೂದಲನ್ನು ಗಂಟಿಹಾಕಿಕೊಂಡು ತನ್ನ ತೋಳುಗಳಿಂದ ಪತಿಯನ್ನು ಆಲಿಂಗಿಸಿ ಅವನನ್ನು ಎತ್ತಿ ನಿಲ್ಲಿಸಿದಳು.

ಉತ್ಥಾಯ ಸತ್ಯವಾಂಶ್ಚಾಪಿ ಪ್ರಮೃಜ್ಯಾಂಗಾನಿ ಪಾಣಿನಾ ।
ಸರ್ವಾ ದಿಶಃ ಸಮಾಲೋಕ್ಯ ಕಥಿನೇ ದೃಷ್ಟಿಮಾದಧೇ ॥೮॥

ಸತ್ಯವಂತನೂ ಸಹ ಎದ್ದು ತನ್ನ ಹಸ್ತದಿಂದ ತನ್ನ ಶರೀರದ ಧೂಳನ್ನು ಕೊಡವಿಕೊಂಡು ಎಲ್ಲಾ ದಿಕ್ಕುಗಳನ್ನೂ ನೋಡಿ ಹಣ್ಣಿನ ಬುಟ್ಟಿಯ ಕಡೆಗೆ ತನ್ನ ದೃಷ್ಟಿಯನ್ನು ಹಾಯಿಸಿದನು.

ತಮುವಾಚಾಥ ಸಾವಿತ್ರೀ ಶ್ವಃ ಫಲಾನ್ಯಾಹರಿಷ್ಯಸೇ ।
ಯೋಗಕ್ಷೇಮಾರ್ಥಮೇತಂ ತೇ ನೇಷ್ಯಾಮಿ ಪರಶುಂ ತ್ವಹಮ್ ॥೯॥

ಆಗ ಅವನನ್ನು ಕುರಿತು ಸಾವಿತ್ರಿಯು ಹಣ್ಣುಗಳನ್ನು ನಾಳೆ ತೆಗೆದುಕೊಂಡು ಹೋಗುವಿಯಂತೆ. ಈಗ ಯೋಗಕ್ಷೇಮದ ಸಲುವಾಗಿ ನಾನು ಈ ಕೊಡಲಿಯನ್ನು ತೆಗೆದುಕೊಳ್ಳುವೆನು ಎಂದು ಹೇಳಿದಳು.

ಕೃತ್ವಾ ಕಠಿನಭಾರಂ ಸಾ ವೃಕ್ಷಶಾಖಾವಲಂಬಿನಮ್ ।
ಗೃಹೀತ್ವಾ ಪರಶುಂ ಭರ್ತುಃ ಸಕಾಶೇ ಪುನರಾಗಮತ್ ॥೧೦॥

ಅವಳು ಹಣ್ಣಿನ ಬುಟ್ಟಿಯನ್ನು ಒಂದು ಮರದ ಕೊಂಬೆಗೆ ನೇತುಹಾಕಿ ಪರಶುವನ್ನು ತೆಗೆದುಕೊಂಡು ಪತಿಯ ಸಮೀಪಕ್ಕೆ ಬಂದಳು.

ವಾಮೇ ಸ್ಕಂಧೇ ತು ವಾಮೋರೂರ್ಭರ್ತ್ಯರ್ಬಾಹುಂ ನಿವೇಶ್ಯ ಚ ।
ದಕ್ಷಿಣೇನ ಪರಿಷ್ವಜ್ಯ ಜಗಾಮ ಗಜಗಾಮಿನೀ ॥೧೧॥

ಸುಂದರಿಯಾದ ಅವಳು ತನ್ನ ಎಡಭುಜದಲ್ಲಿ ಪತಿಯ ಬಾಹುವನ್ನು ಇಟ್ಟುಕೊಂಡು ಬಲಬಾಹುವಿನಿಂದ ಅವನನ್ನು ಆಲಂಗಿಸಿ ಗಜಗಾಮಿನಿಯಾದ ಅವಳು ಹೊರಟಳು.

ಸತ್ಯವಾನ್

ಅಭ್ಯಾಸಗಮನಾದ್ ಭೀರು ಪಂಥಾನೋ ವಿದಿತಾ ಮಮ ।
ವೃಕ್ಷಾಂತರಾಲೋಕಿತಯಾ ಜ್ಯೋತ್ಸ್ನಯಾ ಚಾಪಿ ಲಕ್ಷ್ಯತೇ ॥೧೨॥

ಸತ್ಯವಾನ್- ಭೀರುವೇ, ನಾನು ಇಲ್ಲಿಗೆ ಬಂದು ಅಭ್ಯಾಸವಿರುವುದರಿಂದ ದಾರಿಯನ್ನು ತಿಳಿದಿದ್ದೇನೆ ಮತ್ತು ಮರಗಳ ಸಂದಿಯಿಂದ ಬರುತ್ತಿರುವ ಬೆಳುದಿಂಗಳೂ ಸಹ ದಾರಿಯನ್ನು ತೋರಿಸುತ್ತಿದೆ.

ಆಗತೌ ಸ್ವಃ ಪಥಾ ಯೇನ ಫಲಾನ್ಯವಚಿತಾನಿ ಚ ।
ಯಥಾಗತಂ ಶುಭೇ ಗಚ್ಛ ಪಂಥಾನಂ ಮಾ ವಿಚಾರಯ ॥೧೩॥

ನಾವು ಹಣ್ಣುಗಳನ್ನು ಆರಿಸಿಕೊಂಡ ಮಾರ್ಗಕ್ಕೆ ಈಗ ನಾವು ಬಂದಿದ್ದೇವೆ. ಶುಭಳಾದವಳೇ, ನಾವು ಬಂದ ದಾರಿಯಲ್ಲಿಯೇ ಹಿಂದಿರುಗು. ದಾರಿಯ ವಿಷಯದಲ್ಲಿ ಯೋಚನೆಯನ್ನು ಮಾಡಬೇಡ.

ಪಲಾಶಖಂಡೇ ಚೈತಸ್ಮಿನ್ ಪಂಥಾ ವ್ಯಾವರ್ತತೇ ದ್ವಿಧಾ ।
ತಸ್ಯೋತ್ತರೇಣ ಯಃ ಪಂಥಾಸ್ತೇನ ಗಚ್ಛ ತ್ವರಸ್ವ ಚ ।
ಸ್ವಸ್ಥೋಽಸ್ಮಿ ಬಲವಾನಸ್ಮಿ ದಿದೃಕ್ಷುಃ ಪಿತರಾವುಭೌ ॥೧೪॥

ಈ ಮುತ್ತುಗದ ಮರದ ಸಮೀಪದಲ್ಲಿ ದಾರಿಯು ಎರಡು ಕವಲಾಗಿ ಒಡೆಯುತ್ತದೆ. ಅದರಲ್ಲಿ ಉತ್ತರದ ಮಾರ್ಗವನ್ನು ಹಿಡಿದು ಶೀಘ್ರವಾಗಿ ಹೊರಡು. ನಾನು ಆರೋಗ್ಯವಾಗಿದ್ದೇನೆ, ಶಕ್ತಿಯುತನೂ ಆಗಿದ್ದೇನೆ ಮತ್ತು ತಂದೆ ತಾಯಿಗಳನ್ನು ನೋಡುವ ಇಚ್ಛೆಯನ್ನು ಉಳ್ಳವನಾಗಿದ್ದೇನೆ.

ಮಾರ್ಕಂಡೇಯಃ

ಬ್ರುವನ್ನೇವಂ ತ್ವರಾಯುಕ್ತಃ ಸಂಪ್ರಾಯಾದಾಶ್ರಮಂ ಪ್ರತಿ ।
ಸಾವಿತ್ರೀಸಹಿತಃ ಶ್ರೀಮಾನ್ ಸತ್ಯವಾನ್ ಶಂಸಿತವ್ರತಃ ॥೧೫॥

ಮಾರ್ಕಂಡೇಯರು– ಹೀಗೆ ಹೇಳುತ್ತಲೇ ಶಂಸಿತವ್ರತನಾದ, ಕಾಂತಿಯುಕ್ತನಾದ ಸತ್ಯವಂತನು ಸಾವಿತ್ರೀ ಸಹಿತನಾಗಿ ಆಶ್ರಮದ ಕಡೆಗೆ ಪ್ರಯಾಣವನ್ನು ಬೆಳೆಸಿದನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂಸಂಹಿತಾಯಾಂ ವೈಯಾಸಿಕ್ಯಾಂ ವನಪರ್ವಣಿ ಪತಿವ್ರತಾಮಹಾತ್ಮ್ಯಪರ್ವಣಿ ಅಷ್ಟಶೀತ್ಯಧಿಕದ್ವಿಶತತಮೋಽಧ್ಯಾಯಃ ॥
॥ ಇತಿ ಸಾವಿತ್ರ್ಯುಪಾಖ್ಯಾನಪರ್ವಣಿ ಸಪ್ತಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವನಪರ್ವದಲ್ಲಿ ಇನ್ನೂರ ಎಂಬತ್ತೆಂಟನೆಯ ಅಧ್ಯಾಯ ಮುಗಿಯಿತು.

★ ★ ★ ★

ಇನ್ನೂರ ಎಂಬತ್ತೊಂಬತ್ತನೆಯ ಅಧ್ಯಾಯ

ಪುತ್ರನನ್ನು ಕಾಣದೆ ಭಾರ್ಯಾಸಹಿತನಾದ ದ್ಯುಮತ್ಸೇನನ ವಿಲಾಪ. ಋಷಿಗಳಿಂದ ಮತ್ತು ಬ್ರಾಹ್ಮಣರಿಂದ ಅವನಿಗೆ ಸಮಾಧಾನ. ಸಾವಿತ್ರಿ ಮತ್ತು ಸತ್ಯವಂತರ ಆಗಮನ ಮತ್ತು ಅವರ ಜೊತೆಯಲ್ಲಿ ಸಂವಾದ.

ಮಾರ್ಕಂಡೇಯಃ

ಏತಸ್ಮಿನ್ನೇವ ಕಾಲೇ ತು ದ್ಯುಮತ್ಸೇನೋ ಮಹಾಬಲಃ ।
ಲಬ್ಧಚಕ್ಷುಃ ಪ್ರಸನ್ನಾಯಾಂ ದೃಷ್ಟ್ಯಾಂ ಸರ್ವಂ ದದರ್ಶ ಹ ॥೧॥

ಮಾರ್ಕಂಡೇಯ– ಈ ಸಮಯದಲ್ಲಿಯೇ ಮಹಾಬಲನಾದ ದ್ಯುಮತ್ಸೇನನು ದೃಷ್ಟಿಯನ್ನು ಮರಳಿ ಪಡೆದು ಪ್ರಸನ್ನವಾದ ದೃಷ್ಟಿಯಿಂದ ಎಲ್ಲವನ್ನೂ ನೋಡಿದನು.

ಸ ಸರ್ವಾನಾಶ್ರಮಾನ್ ಗತ್ವಾ ಶೈಬ್ಯಯಾ ಸಹ ಭಾರ್ಯಯಾ ।
ಪುತ್ರಹೇತೋಃ ಪರಾಮಾರ್ತಿಂ ಜಗಾಮ ಭರತರ್ಷಭ ॥೨॥

ಎಲೈ ಭರತರ್ಷಭನೇ, ಅವನು ಮಗನನ್ನು ಹುಡುಕುವ ಸಲುವಾಗಿ ಪತ್ನಿಯಾದ ಶೈಬ್ಯೆಯ ಜೊತೆಯಲ್ಲಿ ಎಲ್ಲಾ ಆಶ್ರಮಗಳಿಗೂ ಹೋಗಿ ಬಹಳ ದುಃಖವನ್ನು ಹೊಂದಿದನು.

ತಾವಾಶ್ರಮಾನ್ ನದೀಶ್ಚೈವ ವನಾನಿ ಚ ಸರಾಂಸಿ ಚ ।
ತಸ್ಯಾಂ ನಿಶಿ ವಿಚಿನ್ವಂತೌ ದಂಪತೀ ಪರಿಜಗ್ಮತುಃ ॥೩॥

ಆ ದಂಪತಿಗಳು ಆ ರಾತ್ರಿಯಲ್ಲಿ ಎಲ್ಲಾ ಆಶ್ರಮಗಳನ್ನೂ, ಕಾಡುಪ್ರದೇಶಗಳನ್ನೂ, ನದಿಗಳನ್ನೂ, ಸರೋವರಗಳನ್ನೂ ಹುಡುಕುತ್ತಾ ಅಲೆದಾಡಿದರು.

ಶ್ರುತ್ವಾ ಶಬ್ದಂ ತು ಯಂ ಕಂಚಿದುನ್ಮುಖೌ ಸುತಶಂಕಯಾ ।
ಸಾವಿತ್ರೀಸಹಿತೋಽಭ್ಯೇತಿ ಸತ್ಯವಾನಿತ್ಯಧಾವತಾಮ್ ॥೪॥

ಯಾವುದೇ ಶಬ್ದ ಕೇಳಿದರೂ ತಮ್ಮ ಮಗನೆಂಬ ಶಂಕೆಯಿಂದ ಆ ಕಡೆಗೆ ಮುಖವನ್ನು ತಿರುಗಿಸಿ ಸಾವಿತ್ರೀ ಸಹಿತನಾಗಿ ಸತ್ಯವಂತನು ಬರುತ್ತಿದ್ದಾನೆಂದು ಆ ಕಡೆಗೆ ಓಡುತ್ತಿದ್ದರು.

ಭಿನ್ನೈಶ್ಚ ಪರುಷೈಃ ಪಾದ್ಯೈಃ ಸವ್ರಣೈಃ ಶೋಣಿತೋಕ್ಷಿತೈಃ ।
ಕುಶಕಂಟಕವಿದ್ಧಾಂಗಾವುನ್ಮತ್ತಾವಿವ ಧಾವತಃ ॥೫॥

ಅವರ ಪಾದಗಳು ಸೀಳಿ ಗಾಯದಿಂದ ಕೂಡಿ ಕಲ್ಲುಮುಳ್ಳುಗಳನ್ನು ತುಳಿದು ರಕ್ತವು ಸೋರುತ್ತಿದ್ದರೂ ಅವರು ಹುಚ್ಚರಂತೆ ಓಡಿದರು.

ತತೋಽಭಿಸೃತ್ಯ ತೈರ್ವಿಪ್ರೈಃ ಸರ್ವೈರಾಶ್ರಮವಾಸಿಭಿಃ ।
ಪರಿವಾರ್ಯ ಸಮಾಶ್ವಾಸ್ಯ ತಾವಾನೀತೌ ಸ್ವಮಾಶ್ರಮಮ್ ॥೬॥

ಆಗ ಆ ಆಶ್ರಮವಾಸಿಗಳಾದ ಎಲ್ಲಾ ವಿಪ್ರರು ಅವರನ್ನು ಸಮೀಪಿಸಿ ಸುತ್ತುಗಟ್ಟಿ ಸಮಾಧಾನಪಡಿಸಿ ಆಶ್ರಮಕ್ಕೆ ಕರೆದುಕೊಂಡು ಬಂದರು.

ತತ್ರ ಭಾರ್ಯಾಸಹಾಯಃ ಸ ವೃತೋ ವೃದ್ಧೈಸ್ತಪೋಧನೈಃ ।
ಆಶ್ವಾಸಿತೋ ವಿಚಿತ್ರಾರ್ಥೈಃ ಪೂರ್ವರಾಜ್ಞಾಂ ಕಥಾಶ್ರಯೈಃ ॥೭॥

ಅಲ್ಲಿ ಭಾರ್ಯಾಸಹಿತನಾದ ಆ ತಂದೆಯನ್ನು ವೃದ್ಧರಾದ ತಪೋಧನರು ಪೂರ್ವರಾಜರ ವಿಚಿತ್ರಾರ್ಥವುಳ್ಳ ಕಥೆಗಳನ್ನು ಹೇಳಿ ಸಮಾಧಾನಪಡಿಸಿದರು.

ತತಸ್ತೌ ಪುನರಾಶ್ವಸ್ತೌ ವೃದ್ಧೌ ಪುತ್ರದಿದೃಕ್ಷಯಾ ।
ಬಾಲ್ಯವೃತ್ತಾನಿ ಪುತ್ರಸ್ಯ ಸ್ಮರಂತೌ ಭೃಶದುಃಖಿತೌ ॥೮॥

ಆಗ ಸಮಾಧಾನಗೊಂಡ ಆ ವೃದ್ಧ ದಂಪತಿಗಳು ಮಗನನ್ನು ನೋಡುವ ಇಚ್ಛೆಯಿಂದ ಪುತ್ರನ ಬಾಲ್ಯದಿಂದ ಹಿಡಿದು ನಡೆದ ಎಲ್ಲವನ್ನೂ ಸ್ಮರಿಸುತ್ತಾ ಬಹಳ ದುಃಖಿಪಟ್ಟರು.

ಪುನರುಕ್ತ್ವಾ ಚ ಕರುಣಾಂ ವಾಚಂ ತೌ ಶೋಕಕರ್ಶಿತೌ ।
ಹಾ ಪುತ್ರ ಹಾ ಸಾಧ್ವಿ ವಧೂಃ ಕ್ವಾಸಿ ಕ್ವಾಸೀತ್ಯರೋದತಾಮ್ ।
ಬ್ರಾಹ್ಮಣಃ ಸತ್ಯವಾಕ್ ತೇಷಾಮುವಾಚೇದಂ ತಯೋರ್ವಚಃ ॥೯॥

ಶೋಕಕರ್ಶಿತರಾದ ಅವರು ಪುನಃ ಕರುಣಾಜನಕವಾಗಿ ಅಯ್ಯೋ ಪುತ್ರನೇ! ಅಯ್ಯೋ ಪತಿವ್ರತೆಯಾದ ಸೊಸೆಯೇ! ಎಲ್ಲಿದ್ದೀಯೆ, ಎಲ್ಲಿದ್ದೀಯೆ ಎಂದು ಹೇಳುತ್ತಾ ರೋದನವನ್ನು ಮಾಡಿದರು. ಆಗ ಸತ್ಯವಚನನಾದ ಅವರಲ್ಲಿ ಒಬ್ಬ ಬ್ರಾಹ್ಮಣನು ಅವರನ್ನು ಕುರಿತು ಹೀಗೆ ಮಾತನಾಡಿದನು.

ಗೌತಮಃ

ಯಥಾಸ್ಯ ಭಾರ್ಯಾ ಸಾವಿತ್ರೀ ತಪಸಾ ಚ ದಮೇನ ಚ ।
ಆಚಾರೇಣ ಚ ಸಂಯುಕ್ತಾ ತಥಾ ಜೀವತಿ ಸತ್ಯವಾನ್ ॥೧೦॥

ಗೌತಮ– ಹೇಗೆ ಅವನ ಪತ್ನಿಯಾದ ಸಾವಿತ್ರಿಯು ತಪಸ್ಸಿನಿಂದಲೂ, ಇಂದ್ರಿಯ ನಿಗ್ರಹದಿಂದಲೂ ಮತ್ತು ಸದಾಚಾರದಿಂದಲೂ ಯುಕ್ತಳಾಗಿದ್ದಾಳೆಯೋ ಆ ಸತ್ಯದಿಂದ ಸತ್ಯವಂತನು ಬದುಕಿದ್ದಾನೆ.

ವೇದಾಃ ಸಾಂಗಾ ಮಯಾಧೀತಾಸ್ತಪೋ ಮೇ ಸಂಚಿತಂ ಮಹತ್ ।
ಕೌಮಾರಬ್ರಹ್ಮಚರ್ಯಂ ಚ ಗುರವೋऽಗ್ನಿಶ್ಚ ತೋಷಿತಾಃ ॥೧೧॥

ನಾನು ಸಾಂಗವಾದ ವೇದಾಧ್ಯಯನವನ್ನು ಮಾಡಿದ್ದೇನೆ. ದೊಡ್ಡ ತಪಸ್ಸನ್ನು ಮಾಡಿದ್ದೇನೆ. ಕೌಮಾರಬ್ರಹ್ಮಚರ್ಯವನ್ನು ಮಾಡಿ ಗುರುಗಳನ್ನೂ ಮತ್ತು ಅಗ್ನಿಯನ್ನೂ ಸಂತೋಷಪಡಿಸಿದ್ದೇನೆ.

ಸಮಾಹಿತೇನ ಚೀರ್ಣಾನಿ ಸರ್ವಾಣ್ಯೇವ ವ್ರತಾನಿ ಮೇ ।
ವಾಯುಭಕ್ಷೋಪವಾಸಶ್ಚ ಕೃತೋ ಮೇ ವಿಧಿವತ್ ಪುರಾ ॥೧೨॥

ಸಮಾಧಾನವುಳ್ಳ ಮನಸ್ಸಿನಿಂದ ಎಲ್ಲ ವ್ರತಗಳನ್ನೂ ಮಾಡಿದ್ದೇನೆ. ಹಿಂದೆ ವಿಧಿ ಪ್ರಕಾರವಾಗಿ ಕೇವಲ ವಾಯುಸೇವನೆಯನ್ನು ಮಾಡಿ ಉಪವಾಸವನ್ನೂ ಮಾಡಿದ್ದೇನೆ.

ಅನೇನ ತಪಸಾ ವೇದ್ಮಿ ಸರ್ವಂ ಪರಚಿಕೀರ್ಷಿತಮ್ ।
ಸತ್ಯಮೇತನ್ನಿಬೋಧಧ್ವಂ ಧ್ರಿಯತೇ ಸತ್ಯವಾನಿತಿ ॥೧೩॥

ಈ ತಪಸ್ಸಿನ ಬಲದಿಂದ ನಾನು ಇನ್ನೊಬ್ಬರಿಗೆ ಸಂಬಂಧಿಸಿದ ವಿಷಯವನ್ನೆಲ್ಲಾ ತಿಳಿದಿದ್ದೇನೆ. ನಾನು ಸತ್ಯವನ್ನು ಹೇಳುತ್ತಿದ್ದೇನೆ. ಇದನ್ನು ತಿಳಿಯಿರಿ. ಸತ್ಯವಂತನು ಜೀವಿಸಿದ್ದಾನೆ.

ಶಿಷ್ಯಃ

ಉಪಾಧ್ಯಾಯಸ್ಯ ಮೇ ವಕ್ತ್ರಾದ್ಯಥಾ ವಾಕ್ಯಂ ವಿನಿಃಸೃತಮ್ ।
ನೈವ ಜಾತು ಭವೇನ್ಮಿಥ್ಯಾ ತಥಾ ಜೀವತಿ ಸತ್ಯವಾನ್ ॥೧೪॥

ಶಿಷ್ಯ– ನನ್ನ ಗುರುಗಳ ಮುಖದಿಂದ ಯಾವ ಮಾತುಗಳು ಬಂದಿವೆಯೋ ಅವು ಎಂದೂ ಸುಳ್ಳಾಗಿಲ್ಲ. ಅದರಂತೆ ಸತ್ಯವಂತನು ಬದುಕಿದ್ದಾನೆ.

ಋಷಯಃ

ಯಥಾಽಸ್ಯ ಭಾರ್ಯಾ ಸಾವಿತ್ರೀ ಸರ್ವೈರೇವ ಸುಲಕ್ಷಣೈಃ ।
ಅವೈಧವ್ಯಕರೈರ್ಯುಕ್ತಾ ತಥಾ ಜೀವತಿ ಸತ್ಯವಾನ್ ॥೧೫॥

ಋಷಿಗಳು– ಹೇಗೆ ಅವನ ಪತ್ನಿಯಾದ ಸಾವಿತ್ರಿಯು ಅವೈಧವ್ಯಕರವಾದ (ಸೌಮಾಂಗಲ್ಯವನ್ನು ಸೂಚಿಸುವ) ಎಲ್ಲಾ ಶುಭಲಕ್ಷಣಗಳಿಂದಲೂ ಕೂಡಿದ್ದಾಳೆಯೋ ಅದರಂತೆ ಸತ್ಯವಂತನು ಬದುಕಿದ್ದಾನೆ.

ಭಾರದ್ವಾಜಃ

ಯಥಾऽಸ್ಯ ಭಾರ್ಯಾ ಸಾವಿತ್ರೀ ತಪಸಾ ಚ ದಮೇನ ಚ ।
ಆಚಾರೇಣ ಚ ಸಂಯುಕ್ತಾ ತಥಾ ಜೀವತಿ ಸತ್ಯವಾನ್ ॥೧೬॥

ಭಾರದ್ವಾಜ– ಅವನ ಪತ್ನಿಯಾದ ಸಾವಿತ್ರಿಯು ಹೇಗೆ ತಪಸ್ಸಿನಿಂದಲೂ, ಇಂದ್ರಿಯ ನಿಗ್ರಹದಿಂದಲೂ ಮತ್ತು ಸದಾಚಾರದಿಂದಲೂ ಯುಕ್ತಳಾಗಿದ್ದಾಳೆಯೋ ಅದರಂತೆ ಸತ್ಯವಂತನು ಬದುಕಿದ್ದಾನೆ.

ದಾಲ್ಭ್ಯಃ

ಯಥಾ ದೃಷ್ಟಿಃ ಪ್ರವೃತ್ತಾ ತೇ ಸಾವಿತ್ರ್ಯಾಶ್ಚ ಯಥಾ ವ್ರತಮ್ ।
ಗತಾऽऽಹಾರಮಕೃತ್ವಾ ಚ ತಥಾ ಜೀವತಿ ಸತ್ಯವಾನ್ ॥೧೭॥

ದಾಲ್ಭ್ಯ– ನನ್ನ ಜ್ಞಾನಕ್ಕೆ ಗೋಚರಿಸುವಂತೆ ಸಾವಿತ್ರಿಯು ಹೇಗೆ ವ್ರತವನ್ನು ಧರಿಸಿ ಆಹಾರವನ್ನು ಸೇವಿಸದೆ ಉಪವಾಸದಿಂದ ಹೋಗಿದ್ದಾಳೆಯೋ ಅದರಂತೆ ಸತ್ಯವಂತನು ಬದುಕಿದ್ದಾನೆ.

ಆಪಸ್ತಂಬಃ

ಯಥಾ ವದಂತಿ ಶಾಂತಾಯಾಂ ದಿಶಿ ವೈ ಮೃಗಪಕ್ಷಿಣಃ ।
ಪಾರ್ಥಿವೀ ಚೈವ ವೃದ್ಧಿಸ್ತೇ ತಥಾ ಜೀವತಿ ಸತ್ಯವಾನ್ ॥೧೮॥

ಆಪಸ್ತಂಬ– ಹೇಗೆ ಈಶಾನ್ಯ ದಿಕ್ಕಿನಲ್ಲಿ ಶುಭವಾದ ಮೃಗಪಕ್ಷಿಗಳು ಹೇಳುತ್ತಿರುವಂತೆ ನಿನಗೆ ರಾಜ್ಯಪ್ರಾಪ್ತಿ ಉಂಟಾಗುವುದೋ ಅದರಂತೆ ಸತ್ಯವಂತನೂ ಬದುಕಿದ್ದಾನೆ.

ಧೌಮ್ಯಃ

ಸರ್ವೈರ್ಗುಣೈರುಪೇತಸ್ತೇ ಯಥಾ ಪುತ್ರೋ ಜನಪ್ರಿಯಃ ।
ದೀರ್ಘಾಯುರ್ಲಕ್ಷಣೋಪೇತಸ್ತಥಾ ಜೀವತಿ ಸತ್ಯವಾನ್ ॥೧೯॥

ಧೌಮ್ಯ– ನಿನ್ನ ಪುತ್ರನು ಎಲ್ಲಾ ಗುಣಗಳಿಂದ ಕೂಡಿದವನು, ಜನಪ್ರಿಯನು, ದೀರ್ಘಾಯುಷ್ಯದ ಲಕ್ಷಣದಿಂದ ಕೂಡಿದವನು ಆಗಿದ್ದಾನೆ. ಅದರಂತೆ ಸತ್ಯವಂತನು ಬದುಕಿದ್ದಾನೆ.

ಮಾರ್ಕಂಡೇಯಃ

ಏವಮಾಶ್ವಾಸಿತಸ್ತೈಃ ಸ ಸತ್ಯವಾಗ್ಭಿಸ್ತಪಸ್ವಿಭಿಃ ।
ತಾಂಸ್ತಾನ್ ವಿಗಣಯನ್ ಸರ್ವಾಂಸ್ತತಃ ಸ್ಥಿರ ಇವಾಭವತ್ ॥೨೦॥

ಮಾರ್ಕಂಡೇಯರು– ಆ ಸತ್ಯವಾದಿಗಳಾದ ತಪಸ್ವಿಗಳಿಂದ ಹೀಗೆ ಸಮಾಧಾನ ಪಡಿಸಲ್ಪಟ್ಟ ದ್ಯುಮತ್ಸೇನನು ಅವರ ಮಾತುಗಳನ್ನೆಲ್ಲಾ ಚಿಂತಿಸಿ ಧೈರ್ಯವನ್ನು ತಂದುಕೊಂಡವನಂತೆ ಆದನು.

ತತೋ ಮುಹೂರ್ತಾತ್ ಸಾವಿತ್ರೀ ಭರ್ತ್ರಾ ಸತ್ಯವತಾ ಸಹ ।
ಆಜಗಾಮಾಶ್ರಮಂ ರಾತ್ರೌ ಪ್ರಹೃಷ್ಟಾ ಪ್ರವಿವೇಶ ಹ ॥೨೧॥

ಅನಂತರ ಒಂದುಮುಹೂರ್ತವು ಕಳೆದ ಮೇಲೆ ರಾತ್ರಿಯಲ್ಲಿ ಸತ್ಯವಂತನ ಜೊತೆಯಲ್ಲಿಸಾವಿತ್ರಿಯು ಸಂತೋಷದಿಂದ ಆಶ್ರಮವನ್ನು ಪ್ರವೇಶಿಸಿದಳು.

ದೃಷ್ಟ್ವಾ ಚೋತ್ಪತಿತಾಃ ಸರ್ವೇ ಹರ್ಷಂ ಜಗ್ಮುಶ್ಚ ತೇ ದ್ವಿಜಾಃ ।
ಕಂಠಂ ಮಾತಾ ಪಿತಾ ಚಾಸ್ಯ ಸಮಾಲಿಂಗ್ಯಾಭ್ಯರೋದತಾಮ್ ॥೨೨॥

ಅವರನ್ನು ನೋಡಿ ಬ್ರಾಹ್ಮಣರೆಲ್ಲರೂ ತಮ್ಮ ಆಸನದಿಂದ ನೆಗೆದು ಸಂತೋಷವನ್ನು ಪಟ್ಟರು. ಸತ್ಯವಂತನ ತಂದೆ ತಾಯಿಗಳು ಅವನ ಕಂಠವನ್ನು ಆಲಿಂಗಿಸಿ ರೋದನವನ್ನು ಮಾಡಿದರು.

ಬ್ರಾಹ್ಮಣಾಃ

ಪುತ್ರೇಣ ಸಂಗತಂ ತ್ವಾಂ ತು ಚಕ್ಷುಷ್ಮಂತಂ ನಿರೀಕ್ಷ್ಯ ಚ ।
ಸರ್ವೇ ವಯಂ ವೈ ಪೃಚ್ಛಾಮೋ ವೃದ್ಧಿಂ ವೈ ಪೃಥಿವೀಪತೇ ॥೨೩॥

ಬ್ರಾಹ್ಮಣರು– ಎಲೈ ರಾಜನೇ, ಕಣ್ಣಿನ ದೃಷ್ಟಿಯನ್ನು ಪಡೆದು ಪುತ್ರನಿಂದ ಸಂಗತನಾದ ನಿನ್ನನ್ನು ನೋಡಿ ನಾವೆಲ್ಲರೂ ಅಭ್ಯುದ್ಧಿಯನ್ನು ಹಾರೈಸುತ್ತೇವೆ.

ಸಮಾಗಮೇನ ಪುತ್ರಸ್ಯ ಸಾವಿತ್ರ್ಯಾ ದರ್ಶನೇನ ಚ ।
ಚಕ್ಷುಷಶ್ಚಾತ್ಮನೋ ಲಾಭಾತ್ ತ್ರಿಭಿರ್ದಿಷ್ಟ್ಯಾऽಭಿವರ್ಧಸೇ ॥೨೪॥

ಪುತ್ರನ ಆಗಮನದಿಂದ ಸಾವಿತ್ರಿಯ ದರ್ಶನದಿಂದ ಮತ್ತು ನಿನ್ನ ದೃಷ್ಟಿಲಾಭದಿಂದ -ಈ ಮೂರು ಸೂಚನೆಗಳಿಂದ ದೇವರ ದಯೆಯಿಂದ ನೀನು ಅಭ್ಯುದ್ಧಿಯನ್ನು ಹೊಂದುತ್ತಿದ್ದೀಯೆ.

ಸರ್ವೈರಸ್ಮಾಭಿರುಕ್ತಂ ತೇ ತತ್ ತಥಾ ನಾತ್ರ ಸಂಶಯಃ ।
ಭೂಯೋಭೂಯಃ ಸಮೃದ್ಧಿಸ್ತೇ ಕ್ಷಿಪ್ರಮೇವ ಭವಿಷ್ಯತಿ ॥೨೫॥

ನಾವೆಲ್ಲರೂ ಹೇಗೆ ಹೇಳಿದೆವೋ ಅದು ಹಾಗೆಯೇ ಸರಿ. ಅದರಲ್ಲಿ ಸಂಶಯವಿಲ್ಲ. ಶೀಘ್ರದಲ್ಲಿಯೇ ನಿನಗೆ ಇನ್ನೂ ಹೆಚ್ಚು ಹೆಚ್ಚು ಸಮೃದ್ಧಿ ಉಂಟಾಗುವುದು.

ತತೋಽಗ್ನಿಂ ತತ್ರ ಸಂಜ್ವಾಲ್ಯ ದ್ವಿಜಾಸ್ತೇ ಸರ್ವ ಏವ ಹಿ ।
ಉಪಾಸಾಂಚಕ್ರಿರೇ ಪಾರ್ಥ ದ್ಯುಮತ್ಸೇನಂ ಮಹೀಪತಿಮ್ ॥೨೬॥

ಎಲೈ ಪಾರ್ಥನೇ, ಆಗ ಬ್ರಾಹ್ಮಣರೆಲ್ಲರೂ ಅಲ್ಲಿ ಅಗ್ನಿಯನ್ನು ಉತ್ಪಾದನೆ ಮಾಡಿ ರಾಜನಾದ ದ್ಯುಮತ್ಸೇನನನ್ನು ಅದರ ಬಳಿಯಲ್ಲಿ ಕೂಡಿಸಿದರು.

ಶೈಬ್ಯಾ ಚ ಸತ್ಯವಾಂಶ್ಚೈವ ಸಾವಿತ್ರೀ ಚೈಕತಃ ಸ್ಥಿತಾಃ ।
ಸರ್ವೈಸ್ತೈರಭ್ಯನುಜ್ಞಾತಾ ವಿಶೋಕಾಃ ಸಮುಪಾವಿಶನ್ ॥೨೭॥

ತಾಯಿಯಾದ ಶೈಬ್ಯೆ , ಸತ್ಯವಾನ್ ಮತ್ತು ಸಾವಿತ್ರಿಯರು ಬ್ರಾಹ್ಮಣರ ಅಪ್ಪಣೆಯನ್ನು ಪಡೆದು ಶೋಕರಹಿತರಾಗಿ ಒಂದುಕಡೆಯಲ್ಲಿ ಕುಳಿತುಕೊಂಡರು.

ತತೋ ರಾಜ್ಞಾ ಸಹಾಸೀನಾಃ ಸರ್ವೇ ತೇ ವನವಾಸಿನಃ ।
ಜಾತಕೌತೂಹಲಾಃ ಪಾರ್ಥ ಪಪ್ರಚ್ಛುರ್ನೃಪತೇಃ ಸುತಮ್ ॥೨೮॥

ಎಲೈ ಪಾರ್ಥನೇ, ಆಗ ರಾಜನ ಜೊತೆಯಲ್ಲಿ ಕುಳಿತಿದ್ದ ಆ ವನವಾಸಿಗಳೆಲ್ಲರೂ ಕುತೂಹಲದಿಂದ ಕೂಡಿದವರಾಗಿ ರಾಜಪುತ್ರನಾದ ಸತ್ಯವಂತನನ್ನು ಪ್ರಶ್ನೆ ಮಾಡಿದರು.

ಪ್ರಾಗೇವ ನಾಗತಂ ಕಸ್ಮಾತ್ ಸಭಾರ್ಯೇಣ ತ್ವಯಾ ವಿಭೋ ।
ವಿರಾತ್ರೇ ಚಾಗತಂ ಕಸ್ಮಾತ್ ಕೋಽನುಬಂಧಸ್ತವಾಭವತ್ ॥೨೯॥

ಎಲೈ ವಿಭುವೇ, ನೀನು ಪತ್ನಿಯ ಜೊತೆಯಲ್ಲಿ ಮೊದಲೇ ಏಕೆ ಬರಲಿಲ್ಲ? ಈ ಅಪರಾತ್ರಿಯಲ್ಲಿ ಏಕೆ ಬಂದೆ? ನಿನಗೆ ಏನು ತೊಂದರೆಯಾಯಿತು?

ಸಂತಾಪಿತಃ ಪಿತಾ ಮಾತಾ ವಯಂ ಚೈವ ನೃಪಾತ್ಮಜ ।
ನಾಕಸ್ಮಾದೇವ ಜಾನೀಮಸ್ತತ್ ಸರ್ವಂ ವಕ್ತುಮರ್ಹಸಿ ॥೩೦॥

ಎಲೈ ರಾಜಕುಮಾರನೇ, ನಿನ್ನ ತಂದೆ ತಾಯಿ ಮತ್ತು ನಾವು ದುಃಖಕ್ಕೆ ಒಳಗಾದೆವು. ಇದಕ್ಕೆ ಕಾರಣವಿಲ್ಲದೇ ಇರಲು ಸಾಧ್ಯವಿಲ್ಲವೆಂದು ನಾವು ತಿಳಿದಿದ್ದೇವೆ. ಅದೆಲ್ಲವನ್ನೂ ನೀನು ಹೇಳು.

ಸತ್ಯವಾನ್

ಪಿತ್ರಾऽಹಮಭ್ಯನುಜ್ಞಾತಃ ಸಾವಿತ್ರೀಸಹಿತೋ ಗತಃ ।
ಅಥ ಮೇऽಭೂಚ್ಛಿರೋದುಃಖಂ ವನೇ ಕಾಷ್ಠಾನಿ ಭಿಂದತಃ ॥೩೧॥

ಸತ್ಯವಾನ್– ನಾನು ತಂದೆಯ ಅನುಮತಿಯನ್ನು ಪಡೆದು ಸಾವಿತ್ರಿಯ ಜೊತೆಯಲ್ಲಿ ಕಾಡಿಗೆ ಹೊರಟೆ. ಅನಂತರ ಕಾಡಿನಲ್ಲಿ ಕಟ್ಟಿಗೆಯನ್ನು ಸೀಳುತ್ತಿದ್ದ ನನಗೆ ತಲೆಯ ನೋವು ಉಂಟಾಯಿತು.

ಸುಪ್ತಶ್ಚಾಹಂ ವೇದನಯಾ ಚಿರಮಿತ್ಯುಪಲಕ್ಷಯೇ ।
ತಾವತ್ಕಾಲಂ ನ ಚ ಮಯಾ ಸುಪ್ತಪೂರ್ವಂ ಕದಾಚನ ॥೩೨॥

ನೋವಿಗೆ ಒಳಗಾಗಿ ನಾನು ಬಹಳ ಹೊತ್ತು ಮಲಗಿ ನಿದ್ದೆ ಮಾಡಿದೆ ಎಂದು ತಿಳಿಯುತ್ತೇನೆ. ಅಷ್ಟು ಸಮಯದವರೆಗೆ ನಾನು ಹಿಂದೆ ಎಂದೂ ನಿದ್ದೆಮಾಡಿರಲಿಲ್ಲ.

ಸರ್ವೇಷಾಮೇವ ಭವತಾಂ ಸಂತಾಪೋ ಮಾ ಭವೇದಿತಿ ।
ಅತೋ ವಿರಾತ್ರಾಗಮನಂ ನಾನ್ಯದಸ್ತೀಹ ಕಾರಣಮ್ ॥೩೩॥

ನಿಮ್ಮೆಲ್ಲರಿಗೂ ಸಂತಾಪವಾಗಬಾರದೆಂದು ಈ ಅಪರಾತ್ರಿಯಲ್ಲಿ ಬಂದಿದ್ದೇನೆ (ಆ ನಿದ್ರೆಯ ಕಾರಣದಿಂದ ಬೇಗ ಹಿಂದಿರುಗಲು ಸಾಧ್ಯವಾಗಲಿಲ್ಲ). ಇಲ್ಲಿ ಬೇರೆ ಯಾವ ಕಾರಣವೂ ಇಲ್ಲ.

ಗೌತಮಃ

ಅಕಸ್ಮಾಚ್ಚಕ್ಷುಷಃ ಪ್ರಾಪ್ತಿರ್ಮ್ಯಮತ್ವೇನಸ್ಯ ತೇ ಪಿತುಃ ।
ನಾಸ್ಯ ತ್ವಂ ಕಾರಣಂ ವೇತ್ಸಿ ಸಾವಿತ್ರೀ ವಕ್ತುಮರ್ಹತಿ ॥೩೪॥

ಗೌತಮ– ನಿನ್ನ ತಂದೆಯಾದ ದ್ಯುಮತ್ಸೇನನಿಗೆ ಇದ್ದಕ್ಕಿದ್ದಂತೆಯೇ ದೃಷ್ಟಿ ಪ್ರಾಪ್ತಿಯಾಗುವುದಕ್ಕೆ ನೀನು ಕಾರಣವನ್ನು ತಿಳಿದಿಲ್ಲ. ಸಾವಿತ್ರಿಯು ಅದನ್ನು ಹೇಳಬೇಕು?

ಶ್ರೋತುಮಿಚ್ಛಾಮಿ ಸಾವಿತ್ರಿ ತ್ವಂ ಹಿ ವೇತ್ಥ ಪರಾವರಮ್ ।
ತ್ವಾಂ ಹಿ ಜಾನಾಮಿ ಸಾವಿತ್ರಿ ಸಾವಿತ್ರೀಮಿವ ತೇಜಸಾ ॥೩೫॥

ಸಾವಿತ್ರಿ, ನೀನು ಸಣ್ಣಪುಟ್ಟ ವಿಷಯಗಳನ್ನೂ, ದೊಡ್ಡ ವಿಷಯಗಳನ್ನು ಎಲ್ಲವನ್ನೂ ತಿಳಿದಿದ್ದೀಯೆ. ಸಾವಿತ್ರಿಯಂತೆ ನೀನು ತೇಜಸ್ಸಿನಿಂದ ಕೂಡಿದವಳಾಗಿದ್ದೀಯೆ ಎಂದು ನಾನು ತಿಳಿದಿದ್ದೇನೆ. ನಿನ್ನ ಮಾತುಗಳನ್ನು ಕೇಳಲು ಬಯಸುತ್ತೇನೆ.

ತ್ವಮತ್ರ ಹೇತುಂ ಜಾನೀಷೇ ತಸ್ಮಾತ್ ಸತ್ಯಂ ನಿರುಚ್ಯತಾಮ್ ।
ರಹಸ್ಯಂ ಯದಿ ತೇ ನಾಸ್ತಿ ಕಿಂಚಿದತ್ರ ವದಸ್ವ ನಃ ॥೩೬॥

ನೀನು ಇದಕ್ಕೆ ಕಾರಣವನ್ನು ತಿಳಿದಿದ್ದೀಯೆ. ಅದು ರಹಸ್ಯವಾಗದಿದ್ದರೆ ನಮ್ಮನ್ನು ಕುರಿತು ಈ ವಿಷಯದಲ್ಲಿ ಸತ್ಯವನ್ನು ನುಡಿ.

ಸಾವಿತ್ರೀ

ಏವಮೇತದ್ ಯಥಾ ವೇತ್ಥ ಸಂಕಲ್ಪೋ ನಾನ್ಯಥಾ ಹಿ ವಃ ।
ನ ಹಿ ಕಿಂಚಿದ್ ರಹಸ್ಯಂ ಮೇ ಶ್ರೂಯತಾಂ ತಥ್ಯಮೇವ ಯತ್ ॥೩೭॥

ಸಾವಿತ್ರೀ– ನಿಮ್ಮ ಸಂಕಲ್ಪವು ಹೇಗಿದೆಯೋ ಅದರಂತೆ ನೀವು ತಿಳಿದಿರುವಂತೆಯೇ ಎಲ್ಲವೂ ನಡೆದಿದೆ. ಇದರಲ್ಲಿ ಯಾವ ರಹಸ್ಯವೂ ಇಲ್ಲ. ನನ್ನ ಸತ್ಯವಚನಗಳನ್ನು ಕೇಳಿ.

ಮೃತ್ಯುರ್ಮೇ ಪತ್ಯುರಾಖ್ಯಾತೋ ನಾರದೇನ ಮಹಾತ್ಮನಾ ।
ಸ ಚಾದ್ಯ ದಿವಸಃ ಪ್ರಾಪ್ತಸ್ತತೋ ನೈನಂ ಜಹಾಮ್ಯಹಮ್ ॥೩೮॥

ಮಹಾತ್ಮರಾದ ನಾರದರು ನನ್ನ ಪತಿಯ ಮರಣದ ಕಾಲವನ್ನು ಸೂಚಿಸಿದ್ದರು. ಇಂದು ಆ ದಿನವು ಪ್ರಾಪ್ತವಾಯಿತು. ಆದ್ದರಿಂದ ನಾನು ಪತಿಯನ್ನು ಬಿಡಲಿಲ್ಲ.

ಸುಪ್ತಂ ಚೈನಂ ಯಮಃ ಸಾಕ್ಷಾದುಪಾಗಚ್ಛತ್ ಸಕಿಂಕರಃ ।
ಸ ಏನಮನಯದ್ ಬದ್ಧ್ವಾ ದಿಶಂ ಪಿತೃನಿಷೇವಿತಾಮ್ ॥೩೯॥

ಇವನು ಮಲಗಿ ನಿದ್ರಿಸುತ್ತಿದ್ದಾಗ ಸಾಕ್ಷಾತ್ ಯಮದೇವರು ತಮ್ಮ ಸೇವಕರ ಜೊತೆಯಲ್ಲಿ ಬಂದರು. ಅವರು ಇವನನ್ನು ಕಟ್ಟಿ ಪಿತೃಸೇವಿತವಾದ ದಕ್ಷಿಣ ದಿಕ್ಕಿಗೆ ಇವನನ್ನು ಕರೆದುಕೊಂಡು ಹೊರಟರು.

ಅಸ್ತೌಷಂ ತಮಹಂ ದೇವಂ ಸತ್ಯೇನ ವಚಸಾ ವಿಭುಮ್।
ಪಂಚ ವೈ ತೇನ ಮೇ ದತ್ತಾ ವರಾಃ ಶೃಣುತ ತಾನ್ ಮಮ ॥೪೦॥

ನಾನು ವಿಭುವಾದ ಆ ದೇವನನ್ನು ಸತ್ಯವಚನಗಳಿಂದ ಸ್ತೋತ್ರವನ್ನು ಮಾಡಿದೆ. ಯಮನು ನನಗೆ ಐದು ವರಗಳನ್ನು ಕೊಟ್ಟನು. ಅದನ್ನು ನನ್ನಿಂದ ಕೇಳಿ.

ಚಕ್ಷುಷೀ ಚ ಸ್ವರಾಜ್ಯಂ ಚ ದ್ವೌ ವರೌ ಶ್ವಶುರಸ್ಯ ಮೇ ।
ಲಬ್ಧಂ ಪಿತುಃ ಪುತ್ರಶತಂ ಪುತ್ರಾಣಾಂ ಚಾತ್ಮನಃ ಶತಮ್ ॥೪೧॥

ಚತುರ್ವರ್ಷಶತಾಯುರ್ಮೇ ಭರ್ತುರ್ಲಬ್ಧಶ್ಚ ಸತ್ಯವಾನ್ ।
ಭರ್ತುರ್ಹಿ ಜೀವಿತಾರ್ಥಂ ತು ಮಯಾ ಚೀರ್ಣಂ ತ್ವಿದಂ ವ್ರತಮ್ ॥

ಮಾವನಿಗೆ ಸ್ವರಾಜ್ಯ ಪ್ರಾಪ್ತಿ ಮತ್ತು ದೃಷ್ಟಿ ಪ್ರಾಪ್ತಿ ಎಂಬ ಎರಡು ವರಗಳು. ತಂದೆಗೆ ನೂರು ಮಕ್ಕಳು, ನನಗೆ ನೂರು ಮಕ್ಕಳು, ಪತಿಯಾದ ಸತ್ಯವಂತನಿಗೆ ನಾಲ್ನೂರು ವರ್ಷಗಳ ಆಯುಷ್ಯ (ಇವುಗಳನ್ನು ವರವಾಗಿ ಪಡೆದೆನು). ಪತಿಯ ಜೀವನದ ಸಲುವಾಗಿ ನಾನು ಈ ವ್ರತವನ್ನು ಆಚರಿಸಿದೆನು.

ಏತತ್ಸರ್ವಂ ಮಯಾऽऽಖ್ಯಾತಂ ಕಾರಣಂ ವಿಸ್ತರೇಣ ವಃ ।
ಯಥಾವೃತ್ತಂ ಸುಖೋದರ್ಕಮಿದಂ ದುಃಖಂ ಮಹನ್ಮಮ ॥೪೩॥

ನಾನು ನಿಮಗೆ ಎಲ್ಲ ಕಾರಣವನ್ನೂ ವಿಸ್ತಾರವಾಗಿ ನಡೆದಂತೆ ಹೇಳಿದ್ದೇನೆ. ಇಂತಹ ಸುಖಾಂತ್ಯವನ್ನು ಹೊಂದಿದ ಮಹಾದುಃಖವು ನನಗೆ ಪ್ರಾಪ್ತವಾಗಿದ್ದಿತು.

ಋಷಯಃ

ನಿಮಜ್ಜಮಾನಂ ವ್ಯಸನೈರಭಿದ್ರುತಂ
ಕುಲಂ ನರೇಂದ್ರಸ್ಯ ತಮೋಮಯೇ ಹ್ರದೇ ।
ತ್ವಯಾ ಸುಶೀಲವ್ರತಪುಣ್ಯಯಾ ಕುಲಂ
ಸಮುದ್ಧೃತಂ ಸಾಧ್ವಿ ಪುನಃ ಕುಲೀನಯಾ ॥೪೪॥

ಋಷಯಃ– ಎಲೌ ಪತಿವ್ರತೆಯೇ, ವ್ಯಸನಗಳಿಗೆ ತುತ್ತಾಗಿ ಅಂಧಕಾರಮಯವಾದ ಸರೋವರದಲ್ಲಿ ಮುಳುಗುತ್ತಿದ್ದ ರಾಜನ ಕುಲವನ್ನು ಕುಲೀನಳೂ, ಒಳ್ಳೆಯ ಶೀಲ ಮತ್ತು ವ್ರತಸಂಪನ್ನಳೂ ಮತ್ತು ಪುಣ್ಯವಂತಳೂ ಆದ ನೀನು ಪುನಃ ಉದ್ಧರಿಸಿದ್ದೀಯೆ.

ಮಾರ್ಕಂಡೇಯಃ

ತಥಾ ಪ್ರಶಸ್ಯ ಹ್ಯಭಿಪೂಜ್ಯ ಚೈವ
ವರಸ್ತ್ರಿಯಂ ತಾಮೃಷಯಃ ಸಮಾಗತಾಃ ।
ನರೇಂದ್ರಮಾಮಂತ್ರ್ಯ ಸಪುತ್ರಮಂಜಸಾ
ಶಿವೇನ ಜಗ್ಮುರ್ಮುದಿತಾಃ ಸ್ವಮಾಲಯಮ್ ॥೪೫॥

ಮಾರ್ಕಂಡೇಯರು– ಅಲ್ಲಿಗೆ ಪ್ರಾಪ್ತರಾಗಿದ್ದ ಋಷಿಗಳು ಆ ಶ್ರೇಷ್ಠವನಿತೆಯನ್ನು ಹಾಗೆ ಹೊಗಳಿ ಸತ್ಕರಿಸಿ, ಪುತ್ರಸಹಿತನಾದ ದ್ಯುಮತ್ಸೇನ ರಾಜನ ಅನುಮತಿಯನ್ನು ಪಡೆದು ಸುಖದಿಂದ ಕೂಡಿ ತಮ್ಮ ತಮ್ಮ ನಿವಾಸಗಳಿಗೆ ನಿರ್ವಿಘ್ನವಾಗಿ ಹಿಂದಿರುಗಿದರು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂಸಂಹಿತಾಯಾಂ ವೈಯಾಸಿಕ್ಯಾಂ
ವನಪರ್ವಣಿ ಪತಿವ್ರತಾಮಹಾತ್ಮ್ಯಪರ್ವಣಿ ಏಕೋನನವತಿತದ್ವಿಶತತಮೋಽಧ್ಯಾಯಃ ॥
॥ ಇತಿ ಸಾವಿತ್ರ್ಯುಪಾಖ್ಯಾನಪರ್ವಣಿ ಅಷ್ಟಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವನಪರ್ವದಲ್ಲಿ ಇನ್ನೂರ ಎಂಬತ್ತೊಂಬತ್ತನೆಯ
ಅಧ್ಯಾಯ ಮುಗಿಯಿತು.

★ ★ ★ ★

ಇನ್ನೂರ ತೊಂಬತ್ತನೆಯ ಅಧ್ಯಾಯ

ದ್ಯುಮತ್ಸೇನನಿಗೆ ಸ್ವರಾಜ್ಯಪ್ರಾಪ್ತಿ ಮತ್ತು ಸತ್ಯವಂತನಿಗೆ ಪಟ್ಟಾಭಿಷೇಕ.

ಮಾರ್ಕಂಡೇಯಃ

ತಸ್ಯಾಂ ರಾತ್ರ್ಯಾಂ ವ್ಯತೀತಾಯಾಮುದಿತೇ ಸೂರ್ಯಮಂಡಲೇ ।
ಕೃತಪೌರ್ವಾಹ್ಣಿಕಾಃ ಸರ್ವೇ ಸಮೀಯುಸ್ತೇ ತಪೋಧನಾಃ ॥೧॥

ಮಾರ್ಕಂಡೇಯರು– ಆ ರಾತ್ರಿಯು ಕಳೆದು ಸೂರ್ಯೋದಯವಾಗುತ್ತಿರಲು ತಪೋಧನರೆಲ್ಲರೂ ಪೂರ್ವಾಹ್ಣಿಕ ಕ್ರಿಯೆಗಳನ್ನು ಮಾಡಿ ಒಂದುಕಡೆ ಸೇರಿದರು.

ತದೇವ ಸರ್ವಂ ಸಾವಿತ್ರ್ಯಾ ಮಹಾಭಾಗ್ಯಂ ಮಹರ್ಷಯಃ ।
ದ್ಯುಮತ್ಸೇನಾಯ ನಾತೃಪ್ಯನ್ ಕಥಯಂತಃ ಪುನಃ ಪುನಃ ॥೨॥

ಮಹರ್ಷಿಗಳು ಸಾವಿತ್ರಿಯ ಮತ್ತು ದ್ಯುಮತ್ಸೇನನ ಅದೇ ಸೌಭಾಗ್ಯವೆಲ್ಲವನ್ನೂ ಪುನಃ ಪುನಃ ಹೇಳುತ್ತಾ ತೃಪ್ತಿಯನ್ನೇ ಹೊಂದಲಿಲ್ಲ.

ತತಃ ಪ್ರಕೃತಯಃ ಸರ್ವಾಃ ಸಾಲ್ವೇಭ್ಯೋಽಭ್ಯಾಗತಾ ನೃಪ ।
ಆಚಖ್ಯುರ್ನಿಹತಂ ಚೈವ ಸ್ವೇನಾಮಾತ್ಯೇನ ತಂ ದ್ವಿಷಮ್ ॥೩॥

ಎಲೈ ರಾಜನೇ, ಅನಂತರ ಸಾಲ್ವ ದೇಶದಿಂದ ಬಂದ ಎಲ್ಲಾ ಪ್ರಜೆಗಳು ತಮ್ಮ ಅಮಾತ್ಯನಿಂದ ಶತ್ರುವು ಹತನಾದ ವಿಷಯವನ್ನು ಹೇಳಿದರು.

ತಂ ಮಂತ್ರಿಣಾ ಹತಂ ಶ್ರುತ್ವಾ ಸಸಹಾಯಂ ಸಬಾಂಧವಮ್ ।
ನ್ಯವೇದಯನ್ ಯಥಾವೃತ್ತಂ ವಿದ್ರುತಂ ಚ ದ್ವಿಷದ್ಬಲಮ್ ॥೪॥

ಮಂತ್ರಿಯು ತನ್ನ ಬಂಧು ಮತ್ತು ಸೈನಿಕರೊಂದಿಗೆ ಹತನಾದ ವಿಷಯವನ್ನು ತಿಳಿಸಿ ಶತ್ರುಗಳ ಸೈನ್ಯವು ಓಡಿಹೋಯಿತೆಂಬ ವಾರ್ತೆಯನ್ನು ಯಥಾರ್ಥವಾಗಿ ತಿಳಿಸಿದರು.

ಪ್ರಜಾಃ

ಏಕಮತ್ಯಂ ಚ ಸರ್ವಸ್ಯ ಜನಸ್ಯಾಥ ನೃಪಂ ಪ್ರತಿ ।
ಸಚಕ್ಷುರ್ವಾಪ್ಯಚಕ್ಷುರ್ವಾ ಸ ನೋ ರಾಜಾ ಭವತ್ವಿತಿ ॥೫॥

ಪ್ರಜೆಗಳು– ಪ್ರಜೆಗಳೆಲ್ಲರೂ ಏಕಮತ್ಯದಿಂದ ನಮ್ಮ ರಾಜನು ಕಣ್ಣಿದ್ದವನಾಗಿರಲಿ ಅಥವಾ ಇಲ್ಲದವನಾಗಿರಲಿ ಅವನೇ ನಮಗೆ ರಾಜನಾಗಬೇಕು ಎಂದು ಹೇಳುತ್ತಾರೆ.

ಅನೇನ ನಿಶ್ಚಯೇನೇಹ ವಯಂ ಪ್ರಸ್ಥಾಪಿತಾ ನೃಪ ।
ಪ್ರಾಪ್ತಾನೀಮಾನಿ ಯಾನಾನಿ ಚತುರಂಗಂ ಚ ತೇ ಬಲಮ್ ॥೬॥

ಎಲೈ ರಾಜನೇ, ಈ ಒಂದು ನಿಶ್ಚಯದಿಂದ ನಾವು ಇಲ್ಲಿಗೆ ಕಳುಹಿಸಲ್ಪಟ್ಟಿದ್ದೇವೆ. ನಿನ್ನ ಚತುರಂಗ ಸೈನ್ಯವು ಮತ್ತು ಈ ವಾಹನಗಳು ಇಲ್ಲಿಗೆ ಬಂದಿವೆ.

ಪ್ರಯಾಹಿ ರಾಜನ್ ಭದ್ರಂ ತು ಘುಷ್ಟಸ್ತೇ ನಗರೇ ಜಯಃ ।
ಅಧ್ಯಾಸ್ವ ಚಿರರಾತ್ರಾಯ ಪಿತೃಪೈತಾಮಹಂ ಪದಮ್ ॥೭॥

ರಾಜನೇ, ನಿನಗೆ ಮಂಗಳವಾಗಲಿ. ನಗರದಲ್ಲಿ ನಿನ್ನ ಜಯವನ್ನು ಘೋಷಿಸಿದ್ದಾಗಿದೆ. ನೀನು ಇಲ್ಲಿಂದ ಹೊರಡು. ಬಹುಕಾಲದವರೆಗೆ ಪಿತೃಪಿತಾಮಹರಿಂದ ಬಂದ ಸ್ಥಾನವನ್ನು ಅಲಂಕರಿಸು.

ಮಾರ್ಕಂಡೇಯಃ

ಚಕ್ಷುಷ್ಮಂತಂ ಚ ತಂ ದೃಷ್ಟ್ವಾ ರಾಜಾನಂ ವಪುಷಾऽನ್ವಿತಮ್ ।
ಮೂರ್ಧಭಿಃ ಪತಿತಾಃ ಸರ್ವೇ ವಿಸ್ಮಯೋತ್ಫುಲ್ಲಲೋಚನಾಃ ॥೮॥

ಮಾರ್ಕಂಡೇಯರು– ಆ ರಾಜನು ಒಳ್ಳೆಯ ಶರೀರವನ್ನು ಹೊಂದಿ ದೃಷ್ಟಿಯನ್ನು ಹೊಂದಿರುವುದನ್ನು ಕಂದು ಎಲ್ಲರೂ ಆಶ್ಚರ್ಯದಿಂದ ವಿಕಸಿತ ನಯನರಾಗಿ ಶಿರಸಾ ನಮಸ್ಕಾರವನ್ನು ಮಾಡಿದರು.

ತತೋऽಭಿವಾದ್ಯ ತಾನ್‌ವೃದ್ಧಾನ್ ದ್ವಿಜಾನಾಶ್ರಮವಾಸಿನಃ ।
ತೈಶ್ಚಾಭಿಪೂಜಿತಃ ಸರ್ವೈಃ ಪ್ರಯಯೌ ನಗರಂ ಪ್ರತಿ ॥೯॥

ಅನಂತರ ಆಶ್ರಮವಾಸಿಗಳಾದ ಎಲ್ಲಾ ಬ್ರಾಹ್ಮಣರನ್ನೂ ಮತ್ತು ವೃದ್ಧರನ್ನೂ ನಮಸ್ಕರಿಸಿ ಅವರೆಲ್ಲರಿಂದಲೂ ಸತ್ಕರಿಸಲ್ಪಟ್ಟು ರಾಜನು ತನ್ನ ನಗರಕ್ಕೆ ಹೊರಟನು.

ಶೈಬ್ಯಾ ಚ ಸಹ ಸಾವಿತ್ರ್ಯಾ ಸ್ಫೀರ್ತೇನ ಸುವರ್ಚಸಾ ।
ನರಯುಕ್ತೇನ ಯಾನೇನ ಪ್ರಯಯೌ ಸೇನಯಾ ವೃತಾ ॥೧೦॥

ಒಳ್ಳೆಯ ಹಾಸುಗಳನ್ನು ಹಾಸಿದ್ದ ನರಯಾನದಲ್ಲಿ (ಪಲ್ಲಕ್ಕಿಯಲ್ಲಿ) ಶೈಬ್ಯೆಯೂ ಸಾವಿತ್ರಿಯಿಂದ ಕೂಡಿ ಸೇನೆಯಿಂದ ಆವೃತಳಾಗಿ ಹೊರಟಳು.

ತತೋऽಭಿಷಿಷಿಚುಃ ಪ್ರೀತ್ಯಾ ದ್ಯುಮತ್ಸೇನಂ ಪುರೋಹಿತಾಃ ।
ಪುತ್ರಂ ಚಾಸ್ಯ ಮಹಾತ್ಮಾನಂ ಯೌವರಾಜ್ಯೇऽಭ್ಯಷೇಚಯನ್ ॥೧೧॥

ಅನಂತರ ಅವನ ಪುರೋಹಿತರು ದ್ಯುಮತ್ಸೇನನಿಗೆ ಸಂತೋಷದಿಂದ ರಾಜ್ಯದಲ್ಲಿ ಅಭಿಷೇಕವನ್ನು ಮಾಡಿ ಅವನ ಪುತ್ರನಾದ ಮಹಾತ್ಮನಾದ ಸತ್ಯವಂತನಿಗೆ ಯೌವರಾಜ್ಯದಲ್ಲಿ ಅಭಿಷೇಕವನ್ನು ಮಾಡಿದರು.

ತತಃ ಕಾಲೇನ ಮಹತಾ ಸಾವಿತ್ರ್ಯಾಃ ಕೀರ್ತಿವರ್ಧನಮ್ ।
ತದ್ವೈ ಪುತ್ರಶತಂ ಜಜ್ಞೇ ಶೂರಾಣಾಮನಿವರ್ತಿನಾಮ್ ॥೧೨॥

ಕಾಲಕ್ರಮದಲ್ಲಿ ಸಾವಿತ್ರಿಗೆ ಕೀರ್ತಿವರ್ಧನರೂ, ಶೂರರೂ, ಯುದ್ಧದಿಂದ ಹಿಮ್ಮೆಟ್ಟದವರೂ ಆದ ನೂರು ಪುತ್ರರು ಜನಿಸಿದರು.

ಭ್ರಾತೄಣಾಂ ಸೋದರಾಣಾಂ ಚ ತಥೈವಾಸ್ಯಾಭವಚ್ಛತಮ್ ।
ಮದ್ರಾಧಿಪಸ್ಯಾಶ್ವಪತೇರ್ಮಾಲವ್ಯಾಂ ಸುಮಹದ್ಬಲಮ್ ॥೧೩॥

ಮದ್ರಾದೇಶಾದಿಪತಿಯಾದ ಅಶ್ವಪತಿಗೂ ಸಹ ತನ್ನ ಪತ್ನಿಯಾದ ಮಾಲವಿಯಲ್ಲಿ ಮಹಾಬಲಶಾಲಿಗಳಾದ ನೂರುಪುತ್ರರು ಪರಸ್ಪರ ಸೋದರರಾಗಿ ಜನಿಸಿದರು.

ಏವಮಾತ್ಮಾ ಪಿತಾ ಮಾತಾ ಶ್ವಶ್ರೂಃ ಶ್ವಶುರ ಏವ ಚ ।
ಭರ್ತುಃ ಕುಲಂ ಚ ಸಾವಿತ್ರ್ಯಾ ಸರ್ವಂ ಕೃಚ್ಛ್ರಾತ್ ಸಮುದ್ಧೃತಮ್ ॥

ಹೀಗೆ ಸಾವಿತ್ರಿಯು ತಾನು, ತಂದೆತಾಯಿಗಳು, ಅತ್ತೆಮಾವಂದಿರು, ಪತಿಯ ಕುಲ ಈ ಎಲ್ಲವನ್ನೂ ಕಷ್ಟದಿಂದ ಪಾರುಮಾಡಿದಳು.

ತಥೈವೈಷಾ ಹಿ ಕಲ್ಯಾಣೀ ದ್ರೌಪದೀ ಶೀಲಸಮ್ಮತಾ ।
ತಾರಯಿಷ್ಯತಿ ವಃ ಸರ್ವಾನ್ ಸಾವಿತ್ರೀವ ಕುಲಾಂಗನಾ ॥೧೫॥

ಅದರಂತೆಯೇ, ಒಳ್ಳೆಯ ಶೀಲವುಳ್ಳ ಕಲ್ಯಾಣಿಯಾದ ಈ ದ್ರೌಪದಿಯು ಕುಲಾಂಗನೆಯಾದ ಸಾವಿತ್ರಿಯಂತೆ ನಿಮ್ಮೆಲ್ಲರನ್ನೂ ಕಷ್ಟದಿಂದ ಪಾರುಮಾಡುವಳು.

ವೈಶಂಪಾಯನಃ

ಏವಂ ಸ ಪಾಂಡವಸ್ತೇನ ಅನುನೀತೋ ಮಹಾತ್ಮನಾ ।
ವಿಶೋಕೋ ವಿಜ್ವರೋ ರಾಜನ್ ಕಾಮ್ಯಕೇ ನ್ಯವಸನ್ ತದಾ ॥೧೬॥

ವೈಶಂಪಾಯನ– ಎಲೈ ಜನಮೇಜಯರಾಜನೇ, ಹೀಗೆ ಮಹಾತ್ಮರಾದ ಮಾರ್ಕಂಡೇಯರಿಂದ ಸಮಾಧಾನಪಡಿಸಲ್ಪಟ್ಟ ಯುಧಿಷ್ಠಿರನು ತನ್ನ ಶೋಕ ಮತ್ತು ಸಂತಾಪಗಳನ್ನು ತ್ಯಜಿಸಿ ಕಾಮ್ಯಕವನದಲ್ಲಿ ವಾಸಮಾಡಿದನು.

ಯಶ್ಚೇದಂ ಶೃಣುಯಾದ್ ಭಕ್ತ್ಯಾ ಸಾವಿತ್ರ್ಯಾಖ್ಯಾನಮುತ್ತಮಮ್ ।
ಸ ಸುಖೀ ಸರ್ವಸಿದ್ಧಾರ್ಥೋ ನ ದುಃಖಂ ಪ್ರಾಪ್ನುಯಾನ್ನರಃ ॥೧೭॥

ಯಾವನು ಸಾವಿತ್ರಿಯ ಶ್ರೇಷ್ಠವಾದ ಈ ಆಖ್ಯಾನವನ್ನು ಭಕ್ತಿಯಿಂದ ಕೇಳುವನೋ ಅವನು ಸುಖಿಯೂ, ತನ್ನ ಅಪೇಕ್ಷೆಯನ್ನು ಪೂರ್ಣಮಾಡಿಕೊಳ್ಳುವವನೂ ಆಗುವನು. ಅವನು ದುಃಖವನ್ನು ಹೊಂದುವುದಿಲ್ಲ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂಸಂಹಿತಾಯಾಂ ವೈಯಾಸಿಕ್ಯಾಂ
ವನಪರ್ವಣಿ ಪತಿವ್ರತಾಮಹಾತ್ಮ್ಯಪರ್ವಣಿ ನವತಿತದ್ವಿಶತತಮೋಽಧ್ಯಾಯಃ ॥
॥ ಇತಿ ಸಾವಿತ್ರ್ಯುಪಾಖ್ಯಾನಪರ್ವಣಿ ನವಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವನಪರ್ವದಲ್ಲಿ ಇನ್ನೂರ ತೊಂಬತ್ತನೆಯ
ಅಧ್ಯಾಯ ಮುಗಿಯಿತು.

॥ ಸಾವಿತ್ರ್ಯುಪಾಖ್ಯಾನಂ ಸಮಾಪ್ತಮ್ ॥

★ ★ ★ ★

ಕುಂಡಲಾಹರಣಪರ್ವ

ಮಹಾಭಾರತ ತಾತ್ಪರ್ಯನಿರ್ಣಯ -೨೨ ಅಧ್ಯಾಯ

ಸಕುಂಡಲಂ ಸಕವಚಮವಧ್ಯಂ ಸೂರ್ಯನಂದನಮ್ ।
ಜ್ಞಾತ್ವೇಂದ್ರ ಉಭಯಂ ತಸ್ಮಾದೈಚ್ಛಾದಾತುಮುತ್ತಮಮ್ ॥೪೧೪॥

ಕರ್ಣಕುಂಡಲಯುಕ್ತನಾಗಿಯೂ ಕವಚಯುಕ್ತನಾಗಿಯೂ ಇರುವಷ್ಟು ಕಾಲ ಅವಧ್ಯನಾಗಿರುತ್ತಾನೆ ಎಂದು ತಿಳಿದು ಇಂದ್ರ ಉತ್ತಮವಾದ ಆ ಎರಡನ್ನೂ ಅವನಿಂದ ತೆಗೆದುಕೊಳ್ಳಲು ಬಯಸಿದ.

ತದ್ ವಿಜ್ಞಾಯ ರವಿಃ ಕರ್ಣಂ ಸ್ವಪ್ನ ಉಕ್ತ್ವಾ ನ್ಯವಾರಯತ್ ।
ಸರ್ವಥಾ ದಾಸ್ಯ ಇತ್ಯುಕ್ತೇ ಪ್ರಾಹಾऽದೇಯಂ ವರಾಯುಧಮ್॥೪೧೫॥

ಇಂದ್ರನ ಸಂಕಲ್ಪವನ್ನು ತಿಳಿದ ಸೂರ್ಯ ಕರ್ಣನಿಗೆ ಸ್ವಪ್ನದಲ್ಲಿ ಇಂದ್ರನ ಬಯಕೆಯನ್ನು ತಿಳಿಸಿ 'ಅವನು ಕೇಳುವುದನ್ನು ಕೊಡಬೇಡ' ಎಂದು ತಡೆದ. 'ಸರ್ವಥಾ ಕೊಡುವೆನೆಂದು' ಕರ್ಣ ಹೇಳಿದಾಗ 'ಹಾಗಾದರೆ ಶ್ರೇಷ್ಠವಾದ ಆಯುಧವನ್ನು ಇಂದ್ರನಿಂದ ಪಡೆ' ಎಂದ.

ದದೌ ಚೋತ್ಕೃತ್ಯ ಕವಚಂ ಕುಂಡಲೇ ಚ ಶಚೀಪತೇಃ ।
ಅಮೋಘಾಂ ಶಕ್ತಿಮಾದಾಯ ಜ್ಞಾತ್ವೇಂದ್ರಂ ದ್ವಿಜರೂಪಿಣಮ್ ॥೪೧೬॥

ಕರ್ಣ ಬ್ರಾಹ್ಮಣ ರೂಪಿಯಾಗಿ ಬಂದವನನ್ನು ಇಂದ್ರನೆಂದು ತಿಳಿದು ಅವನಿಂದ ಅಮೋಘವಾದ ಶಕ್ತ್ಯಾಯುಧವನ್ನು ಪಡೆದು ಕವಚವನ್ನೂ ಕುಂಡಲವನ್ನೂ ಶರೀರದಿಂದ ಕತ್ತರಿಸಿ ಅವನಿಗೆ ಕೊಟ್ಟ.

ಋತೇऽರ್ಜುನಾದೇಕಮೇವ ವಧಿಷ್ಯನ್ಯಯೇತಿ ಸಃ ।
ದತ್ತ್ವಾ ಶಕ್ತಿಂ ಯಯೌ ಶಕ್ರಃ ಸಾರ್ದ್ಧಂ ಕವಚಕುಂಡಲೈಃ ॥೪೧೭॥

ಅರ್ಜುನನನ್ನು ಹೊರತು ಒಬ್ಬನನ್ನು ಮಾತ್ರ ಈ ಶಕ್ತ್ಯಾಯುಧದಿಂದ ನೀನು ಕೊಲ್ಲುವಿ ಎನ್ನುತ್ತ ಇಂದ್ರ ಶಕ್ತ್ಯಾಯುಧವನ್ನಿತ್ತು ಕವಚ ಕುಂಡಲಗಳೊಂದಿಗೆ ಹೊರಟು ಹೋದ.

★ ★ ★ ★

ಇನ್ನೂರ ತೊಂಬತ್ತೊಂದನೆಯ ಅಧ್ಯಾಯ

ಕರ್ಣನ ಸ್ವಪ್ನದಲ್ಲಿ ಸೂರ್ಯನಿಂದ ಬ್ರಾಹ್ಮಣವೇಷಧಾರಿಯಾದ
ಇಂದ್ರನಿಗೆ ಕವಚ ಕುಂಡಲಗಳನ್ನು ಕೊಡದಂತೆ ಪ್ರತಿಷೇಧ.
ಕರ್ಣನಿಂದ ಸೂರ್ಯನ ಒತ್ತಾಯದ ನಿರಾಕರಣೆ.

ಜನಮೇಜಯಃ

ಯತ್ತದಾ ಹ ಮಹದ್ ಬ್ರಹ್ಮನ್ ಲೋಮಶೋ ವಾಕ್ಯಮಬ್ರವೀತ್ ।
ಇಂದ್ರಸ್ಯ ವಚನಾದೇವ ಪಾಂಡುಪುತ್ರಂ ಯುಧಿಷ್ಠಿರಮ್ ॥೧॥

ಯಚ್ಚಾಪಿ ತೇ ಭಯಂ ತೀವ್ರಂ ನ ಚ ಕೀರ್ತಯಸೇ ಕ್ವಚಿತ್ ।
ತಚ್ಚಾಪ್ಯಪಹರಿಷ್ಯಾಮಿ ಧನಂಜಯ ಇತೋ ಗತೇ ॥೨॥

ಕಿಂ ನು ತಜ್ಜಪತಾಂ ಶ್ರೇಷ್ಠ ಕರ್ಣಂ ಪ್ರತಿ ಮಹದ್ಭಯಮ್ ।
ಆಸೀನ್ನ ಚ ಸ ಧರ್ಮಾತ್ಮಾ ಕಥಯಾಮಾಸ ಕಸ್ಯಚಿತ್ ॥೩॥

ಜನಮೇಜಯ– ವೈಶಂಪಾಯನರೇ, ಇಂದ್ರನ ವಾಕ್ಯದಂತೆ ಲೋಮಶರು ಪಾಂಡುಪುತ್ರನಾದ ಯುಧಿಷ್ಠಿರನನ್ನು ಕುರಿತು ನಿನ್ನ ಮನಸ್ಸಿನಲ್ಲಿ ತೀವ್ರವಾದ ಯಾವ ಭಯವನ್ನಿಟ್ಟುಕೊಂಡು ಅದನ್ನು ಮಾತಿನಿಂದ ಹೇಳುತ್ತಿಲ್ಲವೋ ಆ ಭಯವನ್ನೂ ಸಹ ಧನಂಜಯನು ಇಲ್ಲಿಂದ ಹೋದಮೇಲೆ ಹೇಳುವೆನು ಎಂದು ಆಗ ಹೇಳಿದರಷ್ಟೆ?

ಎಲೈ ಜಪಮಾಡುವುದರಲ್ಲಿ ಶ್ರೇಷ್ಠರಾದವರೇ, ಕರ್ಣನ ವಿಷಯದಲ್ಲಿ ಯುಧಿಷ್ಠಿರನಿಗೆ ಇನ್ನೊಬ್ಬರಿಗೆ ಹೇಳದಂತಹ ಅಂತಹ ಯಾವ ದೊಡ್ಡ ಭಯವಿದ್ದಿತು?

ವೈಶಂಪಾಯನಃ

ಅಹಂ ತೇ ರಾಜಶಾರ್ದೂಲ ಕಥಯಾಮಿ ಕಥಾಮಿಮಾಮ್ ।
ಪೃಚ್ಛತೇ ಭರತಶ್ರೇಷ್ಠ ಶುಶ್ರೂಷಸ್ವ ಗಿರಂ ಮಮ ॥೪॥

ವೈಶಂಪಾಯನ– ರಾಜಶಾರ್ದೂಲನೇ, ಪ್ರಶ್ನೆಯನ್ನು ಕೇಳಿದ ನಿನಗೆ ನಾನು ಈ ಕಥೆಯನ್ನು ಹೇಳುತ್ತೇನೆ. ಭರತಶ್ರೇಷ್ಠನೇ, ನನ್ನ ಮಾತನ್ನು ಆಲಿಸು.

ದ್ವಾದಶೇ ಸಮತಿಕ್ರಾಂತೇ ವರ್ಷೇ ಪ್ರಾಪ್ತೇ ತ್ರಯೋದಶೇ ।
ಪಾಂಡೂನಾಂ ಹಿತಕೃಚ್ಛಕ್ರಃ ಕರ್ಣಂ ಭಿಕ್ಷಿತುಮುದ್ಯತಃ ॥೫॥

ಹನ್ನೆರಡು ವರ್ಷಗಳು ಕಳೆದು ಹದಿಮೂರನೆಯ ವರ್ಷವು ಪ್ರಾಪ್ತವಾಗುತ್ತಿರಲು ಪಾಂಡವರಿಗೆ ಹಿತವನ್ನು ಮಾಡುವವನಾಗಿ ಇಂದ್ರನು ಕರ್ಣನನ್ನು ಯಾಚಿಸಲು ಉದ್ಯುಕ್ತನಾದನು.

ಅಭಿಪ್ರಾಯಮಥೋ ಜ್ಞಾತ್ವಾ ಮಹೇಂದ್ರಸ್ಯ ವಿಭಾವಸುಃ ।
ಕುಂಡಲಾರ್ಥೇ ಮಹಾರಾಜ ಸೂರ್ಯಃ ಕರ್ಣಮುಪಾಗತಃ ॥೬॥

ಎಲೈ ಮಹಾರಾಜನೇ, ಕುಂಡಲಗಳ ವಿಷಯದಲ್ಲಿ ಇಂದ್ರನ ಅಭಿಪ್ರಾಯವನ್ನು ತಿಳಿದ ಸೂರ್ಯನು ಕರ್ಣನ ಬಳಿಗೆ ಬಂದನು.

ಮಹಾರ್ಹೇ ಶಯನೇ ವೀರಂ ಸ್ಪರ್ಧ್ಯಾಸ್ತರಣಸಂವೃತೇ ।
ಶಯಾನಮತಿವಿಶ್ವಸ್ತಂ ಬ್ರಹ್ಮಣ್ಯಂ ಸತ್ಯವಾದಿನಮ್ ॥೭॥

ಸ್ವಪ್ನಾಂತೇ ನಿಶಿ ರಾಜೇಂದ್ರ ದರ್ಶಯಾಮಾಸ ರಶ್ಮಿವಾನ್ ।
ಕೃಪಯಾ ಪರಯಾऽऽವಿಷ್ಟಃ ಪುತ್ರಸ್ನೇಹಾಚ್ಚ ಭಾರತ ॥೮॥

ಎಲೈ ರಾಜೇಂದ್ರನೇ, ಭಾರತನೇ, ಬೆಲೆಬಾಳುವ (ಬಯಸಲ್ಪಡುವ) ಒಳ್ಳೆಯ ಹಾಸುಗಳಿದ್ದ ಶಯನದಲ್ಲಿ ವಿಶ್ವಾಸದಿಂದ ನಿದ್ರಿಸುತ್ತಿದ್ದ ಬ್ರಾಹ್ಮಣವತ್ಸಲನೂ, ಸತ್ಯವಾದಿಯೂ ಆದ ಆ ವೀರನ ಬಳಿಗೆ ರಾತ್ರಿಯಲ್ಲಿ ಸ್ವಪ್ನದಲ್ಲಿ ಬಂದು

ಪುತ್ರಸ್ನೇಹದಿಂದಲೂ, ಪರಮ ದಯೆಯಿಂದಲೂ ಕೂಡಿದ ಸೂರ್ಯನು ತನ್ನನ್ನು ತೋರಿಸಿಕೊಂಡನು (ಕರ್ಣನಿಗೆ ದರ್ಶನವನ್ನು ನೀಡಿದನು).

ಬ್ರಾಹ್ಮಣೋ ವೇದವಿದ್ ಭೂತ್ವಾ ಸೂರ್ಯೋ ಯೋಗರ್ದ್ಧಿರೂಪವಾನ್।
ಹಿತಾರ್ಥಮಬ್ರವೀತ್ ಕರ್ಣಂ ಸಾಂತ್ವಪೂರ್ವಮಿದಂ ವಚಃ ॥೯॥

ಯೋಗಸಮೃದ್ಧಿ ಸಂಪನ್ನನಾದ, ವೇದಜ್ಞನಾದ ಬ್ರಾಹ್ಮಣರೂಪವನ್ನು ಧರಿಸಿ ಸೂರ್ಯನು ಕರ್ಣನ ಹಿತವನ್ನು ಬಯಸಿ ಸಮಾಧಾನಪೂರ್ವಕವಾಗಿ ಈ ಮಾತುಗಳನ್ನು ಆಡಿದನು.

ಕರ್ಣ ಮದ್ವಚನಂ ತಾತ ಶೃಣು ಧರ್ಮಭೃತಾಂ ವರ ।
ಬ್ರುವತೋಽದ್ಯ ಮಹಾಬಾಹೋ ಸೌಹೃದಾತ್ ಪರಮಂ ಹಿತಮ್ ॥

ಪ್ರೀತಿಪಾತ್ರನೇ, ಧರ್ಮಿಷ್ಠರಲ್ಲಿಶ್ರೇಷ್ಠನೇ, ಮಹಾಬಾಹುವೇ, ಕರ್ಣನೇ, ನಿನ್ನ ಮೇಲಿನ ಪ್ರೀತಿಯಿಂದ ನಿನಗೆ ಈ ದಿನ ಪರಮಹಿತವನ್ನು ಹೇಳುತ್ತಿರುವ ನನ್ನ ಮಾತುಗಳನ್ನು ಕೇಳು.

ಉಪಾಯಾಸ್ಯತಿ ಶಕ್ರಸ್ತಾ ತ್ವಂ ಪಾಂಡವಾನಾಂ ಹಿತೇಪ್ಸಯಾ ।
ಬ್ರಾಹ್ಮಣಚ್ಛದ್ಮನಾ ಕರ್ಣ ಕುಂಡಲಾಪಜಿಹೀರ್ಷಯಾ ॥೧೦॥

ಕರ್ಣನೇ, ಪಾಂಡವರ ಹಿತವನ್ನು ಬಯಸಿ ಇಂದ್ರನು ಬ್ರಾಹ್ಮಣವೇಷವನ್ನು ಧರಿಸಿ ನಿನ್ನ ಕುಂಡಲವನ್ನು ಅಪಹರಿಸುವ ಇಚ್ಛೆಯಿಂದ ನಿನ್ನ ಬಳಿಗೆ ಬರುವನು.

ವಿದಿತಂ ತೇನ ಶೀಲಂ ತೇ ಸರ್ವಸ್ಯ ಜಗತಸ್ತಥಾ ।
ಯಥಾ ತ್ವಂ ಭಿಕ್ಷಿತಃ ಸದ್ಯಿರ್ದದಾಸ್ಯೇವ ನ ಯಾಚಸೇ ॥೧೨॥

ನೀನು ಯಾಚನೆಯನ್ನು ಮಾಡುವವರಿಗೆ ಯಾಚಿಸಿದ ವಸ್ತುವನ್ನು ಕೊಟ್ಟೇ ಕೊಡುತ್ತೀಯೆ ಮತ್ತು ನೀನು ಯಾರನ್ನು ಬೇಡುವುದಿಲ್ಲ ಎಂಬ ನಿನ್ನ ಸ್ವಭಾವವನ್ನು ಇಂದ್ರನೂ ತಿಳಿದಿದ್ದಾನೆ ಮತ್ತು ಸರ್ವಜಗತ್ತೂ ತಿಳಿದಿದೆ.

ತ್ವಂ ಹಿ ದಾತಾ ದದಾಸ್ಯೇವ ಬ್ರಾಹ್ಮಣೇಭ್ಯಃ ಪ್ರಯಾಚಿತಮ್ ।
ಏತಂ ಯಚ್ಚಾನ್ಯದಪ್ಯಾಹುರ್ನ ಪ್ರತ್ಯಾಖ್ಯಾಸಿ ಕಸ್ಯಚಿತ್ ॥೧೩॥

ದಾತೃವಾದ ನೀನು ಬ್ರಾಹ್ಮಣರು ಯಾಚನೆ ಮಾಡಿದುದನ್ನು ಕೊಟ್ಟೇ ಕೊಡುತ್ತೀಯೆ. ಅದು ಧನವಾಗಲೀ ಅಥವಾ ಬೇರೆ ವಸ್ತುವಾಗಲೀ ಏನು ಹೇಳಿದರೂ ಅದನ್ನು ನೀನು ನಿರಾಕರಿಸುವುದಿಲ್ಲ.

ತ್ವಾಂ ಸ ಚೈವಂವಿಧಂ ಜಾನನ್ ಸ್ವಯಂ ವೈ ಪಾಕಶಾಸನಃ ।
ಆಗಂತಾ ಕುಂಡಲಾರ್ಥಾಯ ಕವಚಂ ಚೈವ ಭಿಕ್ಷಿತುಮ್ ॥೧೪॥

ನೀನು ಇಂತಹವನು ಎಂದು ತಿಳಿದು ಪಾಕಶಾಸನನಾದ ಇಂದ್ರನು ನಿನ್ನ ಕವಚ ಮತ್ತು ಕುಂಡಲಗಳನ್ನು ಬೇಡಲು ಸ್ವತಃ ತಾನೇ ನಿನ್ನ ಬಳಿಗೆ ಬರುವನು.

ತಸ್ಮೈ ಪ್ರಯಾಚಮಾನಾಯ ನ ದೇಯೇ ಕುಂಡಲೇ ತ್ವಯಾ ।
ಅನುನೇಯಃ ಪರಂ ಶಕ್ಯಾ ಶ್ರೇಯ ಏತದ್ಧಿ ತೇ ಪರಮ್ ॥೧೫॥

ಬೇಡುವ ಅವನಿಗೆ ನೀನು ಕುಂಡಲಗಳನ್ನು ಕೊಡಬಾರದು. ಅವನನ್ನು ಆದಷ್ಟು ಸಮಾಧಾನಮಾಡಿ ಕಳುಹಿಸಬೇಕು. ಇದರಿಂದ ನಿನಗೆ ಶ್ರೇಷ್ಠವಾದ ಶ್ರೇಯಸ್ಸು ಉಂಟಾಗುತ್ತದೆ.

ಕುಂಡಲಾರ್ಥೇ ಬ್ರವಂಸ್ತಾತ ಕಾರಣೈರ್ಬಹುಭಿಸ್ತ್ವಯಾ ।
ಅನ್ಯೈರ್ಬಹುವಿಧೈರ್ವಿತ್ತೈಃ ಸ ನಿವಾರ್ಯಃ ಪುನಃ ಪುನಃ ॥೧೬॥

ಪ್ರೀತಿಪಾತ್ರನೇ, ಕುಂಡಲಗಳ ಸಲುವಾಗಿ ಬಂದು ಯಾಚಿಸುವ ಅವನನ್ನು ಕುರಿತು ನೀನು ಅನೇಕ ಕಾರಣಗಳನ್ನು ಪುನಃ ಪುನಃ ಹೇಳಿ ಬೇರೆ ಬಹುವಿಧವಾದ ವಿತ್ತವನ್ನು ಕೊಟ್ಟು ಕಳುಹಿಸಬೇಕು.

ರತ್ನೈಃ ಸ್ತ್ರೀಭಿಸ್ತಥಾ ಗೋಭಿರ್ಧನೈರ್ಬಹುವಿಧೈರಪಿ ।
ನಿದರ್ಶನೈಶ್ಚ ಬಹುಭಿಃ ಕುಂಡಲೇಪ್ಸುಃ ಪುರಂದರಃ ॥೧೭॥

ಕುಂಡಲವನ್ನು ಬಯಸುವ ಇಂದ್ರನಿಗೆ ನೀನು ರತ್ನಗಳನ್ನಾಗಲೀ, ಸ್ತ್ರೀಯರನ್ನಾಗಲೀ, ಗೋವುಗಳನ್ನಾಗಲೀ, ಬಹುವಿಧ ಧನವನ್ನಾಗಲೀ ನೀಡಿ ಬಹುವಿಧವಾದ ಉದಾಹರಣೆಯ ಮಾತುಗಳಿಂದ ಅವನನ್ನು ಹಿಂದಿರುಗಿಸಬೇಕು.

ಯದಿ ದಾಸ್ಯಸಿ ಕರ್ಣ ತ್ವಂ ಸಹಜೇ ಕುಂಡಲೇ ಶುಭೇ ।
ಆಯುಷಃ ಪ್ರಕ್ಷಯಂ ಕೃತ್ವಾ ಮೃತ್ಯೋರ್ವಶಮುಪೈಷ್ಯಸಿ ॥೧೮॥

ಎಲೈ ಕರ್ಣನೇ, ನೀನು ಒಂದುಪಕ್ಷ ಅವನಿಗೆ ನಿನ್ನ ಸಹಜವಾದ ಶುಭ ಕರ್ಣಕುಂಡಲಗಳನ್ನು ಕೊಟ್ಟರೆ ನೀನು ಆಯುಸ್ಸನ್ನು ಕಳೆದುಕೊಂಡು ಮೃತ್ಯುವಶವಾಗುವಿ.

ಕವಚೇನ ಸಮಾಯುಕ್ತಃ ಕುಂಡಲಾಭ್ಯಾಂ ಚ ಮಾನದ ।
ಅವಧ್ಯಸ್ತ್ವಂ ರಣೇಽರೀಣಾಮಿತಿ ವಿದ್ಧಿ ವಚೋ ಮಮ ॥೧೯॥

ಎಲೈ ಮಾನದನೇ, ಕವಚಕುಂಡಲಗಳನ್ನು ಧರಿಸಿದ ನೀನು ಯುದ್ಧದಲ್ಲಿ ಶತ್ರುಗಳಿಗೆ ಅವಧ್ಯನಾದವನು ಎಂಬ ನನ್ನ ಮಾತನ್ನು ತಿಳಿ.

ಅಮೃತಾದುತ್ಥಿತಂ ಹ್ಯೇತದುಭಯಂ ರತ್ನಸಂಭವಮ್ ।
ತಸ್ಮಾದ್ ರಕ್ಷ್ಯಂ ತ್ವಯಾ ಕರ್ಣ ಜೀವಿತಂ ಚೇತ್ ಪ್ರಿಯಂ ತವ ॥೨೦॥

ಇವೆರಡೂ ಶ್ರೇಷ್ಠವಸ್ತುಗಳು. ಅಮೃತದಿಂದ ಜನಿಸಿದವು. ಆದ್ದರಿಂದ ಎಲೈ ಕರ್ಣನೇ, ನಿನ್ನ ಜೀವನವು ನಿನಗೆ ಪ್ರಿಯವಾದರೆ ನೀನು ಅವುಗಳನ್ನು ರಕ್ಷಿಸಬೇಕು.

ಕರ್ಣಃ

ಕೋ ಮಾಮೇವಂ ಭವಾನ್ ಪ್ರಾಹ ದರ್ಶಯನ್ ಸೌಹೃದಂ ಪರಮ್ ।
ಕಾಮಯಾ ಭಗವನ್ ಬ್ರೂಹಿ ಕೋ ಭವಾನ್ ದ್ವಿಜವೇಷಧೃಕ್ ॥೨೧॥

ಕರ್ಣ– ನನ್ನ ಮೇಲೆ ಹೀಗೆ ಪ್ರೀತಿಯನ್ನು ತೋರಿಸುತ್ತಾ ಮಾತನಾಡುತ್ತಿರುವ ನೀನು ಯಾರು? ಪೂಜ್ಯನೇ, ಬ್ರಾಹ್ಮಣವೇಷವನ್ನು ಧರಿಸಿದ ನೀನು ಯಾರೆಂದು ಮನಃಪೂರ್ವಕವಾಗಿ ಹೇಳು.

ಬ್ರಾಹ್ಮಣಃ

ಅಹಂ ತಾತ ಸಹಸ್ರಾಂಶುಃ ಸೌಹೃದಾತ್ ತ್ವಾಂ ನಿದರ್ಶಯೇ ।
ಕುರುಷ್ವೈತದ್ ವಚೋ ಮೇ ತ್ವಮೇತಚ್ಛ್ರೇಯಃ ಪರಂ ಹಿ ತೇ ॥೨೨॥

ಬ್ರಾಹ್ಮಣ– ಪ್ರೀತಿಪಾತ್ರನೇ, ನಾನು ಸೂರ್ಯ. ಪ್ರೀತಿಯಿಂದ ನಿನಗೆ ಈ ಮಾತುಗಳನ್ನು ಹೇಳುತ್ತಿದ್ದೇನೆ. ನೀನು ಈ ನನ್ನ ಮಾತುಗಳನ್ನು ನಡೆಸಿಕೊಡು. ಇದು ನಿನಗೆ ಪರಮಶ್ರೇಯಸ್ಸು.

ಕರ್ಣಃ

ಶ್ರೇಯ ಏವ ಮಮಾತ್ಯಂತಂ ಯಸ್ಯ ಮೇ ಗೋಪತಿಃ ಪ್ರಭುಃ ।
ಪ್ರವಕ್ತಾऽದ್ಯ ಹಿತಾನ್ವೇಷೀ ಶೃಣು ಚೇದಂ ವಚೋ ಮಮ ॥೨೩॥

ಕರ್ಣ– ಯಾವ ನನಗೆ ಪ್ರಭುವಾದ ಸೂರ್ಯನು ನನ್ನ ಹಿತವನ್ನು ಬಯಸಿ ಮಾತನಾಡುತ್ತಾನೆಯೋ ಅಂತಹ ನನಗೆ ಅತ್ಯಂತ ಶ್ರೇಯಸ್ಸೇ ಸರಿ. ಈ ನನ್ನ ಮಾತನ್ನು ನೀನು ಕೇಳು.

ಪ್ರಸಾದಯೇ ತ್ವಾಂ ವರದಂ ಪ್ರಣಯಾಚ್ಚ ಬ್ರವೀಮ್ಯಹಮ್ ।
ನ ನಿವಾರ್ಯೋ ವ್ರತಾದಸ್ಮಾದಹಂ ಯದ್ಯಸ್ಮಿ ತೇ ಪ್ರಿಯಃ ॥೨೪॥

ವರಪ್ರದನಾದ ನಿನ್ನನ್ನು ನಾನು ಪ್ರಸನ್ನೀಕರಿಸಿಕೊಂಡು ಪ್ರೀತಿಯಿಂದ ಈ ಮಾತನ್ನು ಹೇಳುತ್ತಿದ್ದೇನೆ. ನಾನು ನಿನಗೆ ಪ್ರಿಯನಾಗಿದ್ದರೆ ನನ್ನ ಈ ವ್ರತದಿಂದ ನನ್ನನ್ನು ನಿವಾರಣೆ ಮಾಡಬಾರದು.

ವ್ರತಂ ವೈ ಮಮ ಲೋಕೋऽಯಂ ವೇತ್ತಿ ಕೃತ್ಸ್ನಂ ವಿಭಾವಸೋ ।
ಯಥಾऽಹಂ ದ್ವಿಜಮುಖ್ಯೇಭ್ಯೋ ದದ್ಯಾಂ ಪ್ರಾಣಾನಪಿ ಧ್ರುವಮ್ ॥

ಎಲೈ ಸೂರ್ಯನೇ, ನಾನು ದ್ವಿಜಶ್ರೇಷ್ಠರಿಗೆ ಖಂಡಿತವಾಗಿ ಪ್ರಾಣವನ್ನಾದರೂ ಕೊಟ್ಟೇನು ಎಂಬ ಈ ನನ್ನ ವ್ರತವನ್ನು ಎಲ್ಲ ಜಗತ್ತೂ ತಿಳಿದಿದೆ.

ಯದ್ಯಾಗಚ್ಛತಿ ಶಕ್ರೋ ಮಾಂ ಬ್ರಾಹ್ಮಣಚ್ಛದ್ಮನಾ ವೃತಃ ।
ಹಿತಾರ್ಥಂ ಪಾಂಡುಪುತ್ರಾಣಾಂ ಖೇಚರೋತ್ತಮ ಭಿಕ್ಷಿತುಮ್ ॥೨೬॥

ದಾಸ್ಯಾಮಿ ವಿಬುಧಶ್ರೇಷ್ಠ ಕುಂಡಲೇ ವರ್ಮ ಚೋತ್ತಮಮ್ ।
ನ ಮೇ ಕೀರ್ತಿಃ ಪ್ರಣಶ್ಯೇತ ತ್ರಿಷು ಲೋಕೇಷು ವಿಶ್ರುತಾ ॥೨೭॥

ಎಲೈ ಖೇಚರೋತ್ತಮನೇ, ಪಾಂಡುಪುತ್ರರ ಹಿತವನ್ನು ಬಯಸಿ ಬ್ರಾಹ್ಮಣ ವೇಷಧಾರಿಯಾಗಿ ಇಂದ್ರನು ನನ್ನ ಬಳಿಗೆ ಬೇಡಲು ಬಂದರೆ ನಾನು ಶ್ರೇಷ್ಠವಾದ ಕವಚವನ್ನೂ ಮತ್ತು ಕುಂಡಲಗಳನ್ನೂ ಕೊಡುವೆನು. ಎಲೈ ವಿಬುಧಶ್ರೇಷ್ಠನೇ, ಮೂರುಲೋಕಗಳಲ್ಲಿಯೂ ಹರಡಿದ ನನ್ನ ಕೀರ್ತಿಯು ನಾಶವಾಗದಿರಲಿ.

ಮದ್ವಿಧಸ್ಯ ಯಶಸ್ಯಂ ಹಿ ನ ಯುಕ್ತಂ ಪ್ರಾಣರಕ್ಷಣಮ್ ।
ಯುಕ್ತಂ ಹಿ ಯಶಸಾ ಯುಕ್ತಂ ಮರಣಂ ಲೋಕಸಮ್ಮತಮ್ ॥೨೮॥

ನನ್ನಂತಹವನಿಗೆ ಪ್ರಾಣವನ್ನು ರಕ್ಷಿಸಿಕೊಳ್ಳುವುದು ಕೀರ್ತಿಕರವಾದುದಲ್ಲ. ಲೋಕದಲ್ಲಿ ಮರಣವನ್ನು ಹೊಂದಿ ಕೀರ್ತಿಯನ್ನು ಉಳಿಸಿಕೊಳ್ಳುವುದೇ ಉಚಿತವಾದುದು.

ಸೋಽಹಮಿಂದ್ರಾಯ ದಾಸ್ಯಾಮಿ ಕುಂಡಲೇ ಸಹ ವರ್ಮಣಾ ।
ಯದಿ ಮಾಂ ಬಲವೃತ್ರಘ್ನೋ ಭಿಕ್ಷಾರ್ಥಮುಪಯಾಸ್ಯತಿ ॥೨೯॥

ಬಲಸಂಹಾರಿಯಾದ, ವೃತ್ರಸಂಹಾರಿಯಾದ ಇಂದ್ರನು ನನ್ನ ಬಳಿಗೆ ಬೇಡಲು ಬಂದರೆ ನಾನು ಅವನಿಗೆ ಕವಚದ ಜೊತೆಯಲ್ಲಿ ಕುಂಡಲಗಳನ್ನೂ ಕೊಡುವೆನು.

ಹಿತಾರ್ಥಂ ಪಾಂಡುಪುತ್ರಾಣಾಂ ಕುಂಡಲೇ ಮೇ ಪ್ರಯಾಚಿತಮ್ ।
ತನ್ಮೇ ಕೀರ್ತಿಕರಂ ಲೋಕೇ ತಸ್ಯಾಕೀರ್ತಿರ್ಭವಿಷ್ಯತಿ ॥೩೦॥

ಪಾಂಡವರ ಹಿತಕ್ಕಾಗಿ ಅವನು ಕುಂಡಲಗಳನ್ನು ಯಾಚಿಸಿದರೆ ಲೋಕದಲ್ಲಿ ನನಗೆ ಕೀರ್ತಿಯೂ, ಅವನಿಗೆ ಅಪಕೀರ್ತಿಯೂ ಉಂಟಾಗುವುದು.

ವೃಣೋಮಿ ಕೀರ್ತಿಂ ಲೋಕೇ ಹಿ ಜೀವಿತೇನಾಪಿ ಭಾನುಮನ್ ।
ಕೀರ್ತಿಮಾನಶ್ನುತೇ ಸ್ವರ್ಗಂ ನಷ್ಟಕೀರ್ತಿಸ್ತು ನಶ್ಯತಿ ॥೩೧॥

ಎಲೈ ಸೂರ್ಯನೇ, ನಾನು ಜೀವನಕ್ಕಿಂತಲೂ ಹೆಚ್ಚಾಗಿ ಲೋಕದಲ್ಲಿ ಕೀರ್ತಿಯನ್ನು ವರಿಸುತ್ತೇನೆ. ಕೀರ್ತಿಶಾಲಿಯಾದವನು ಸ್ವರ್ಗವನ್ನು ಹೊಂದುತ್ತಾನೆ. ಅಪಕೀರ್ತಿಯನ್ನು ಹೊಂದಿದವನು ನಾಶವನ್ನು ಹೊಂದುತ್ತಾನೆ.

ಕೀರ್ತಿರ್ಹಿ ಪುರುಷಂ ಲೋಕೇ ಸಂಜೀವಯತಿ ಮಾತೃವತ್ ।
ಅಕೀರ್ತಿರ್ಜೀವಿತಂ ಹಂತಿ ಜೀವತೋಽಪಿ ಶರೀರಿಣಃ ॥೩೨॥

ಲೋಕದಲ್ಲಿ ಕೀರ್ತಿಯು ತಾಯಿಯಂತೆ ಮನುಷ್ಯನನ್ನು ಬದುಕಿಸುತ್ತದೆ. ಅಕೀರ್ತಿಯಾದರೂ ಬದುಕಿದ್ದವನಿಗೂ ಕೂಡ ಜೀವಿತವನ್ನು ನಾಶಮಾಡುತ್ತದೆ.

ಅಯಂ ಪರಾಣಃ ಶ್ಲೋಕೋ ಹಿ ಸ್ವಯಂ ಗೀತೋ ವಿಭಾವಸೋ ।
ಧಾತ್ರಾ ಲೋಕೇಶ್ವರ ಯಥಾ ಕೀರ್ತಿರಾಯುರ್ನರಸ್ಯ ವೈ ॥೩೩॥

ಎಲೈ ಸೂರ್ಯನೇ, ಮನುಷ್ಯನ ಕೀರ್ತಿ ಮತ್ತು ಆಯುಸ್ಸುಗಳನ್ನು ಕುರಿತು ಲೋಕೇಶ್ವರರಾದ ಬ್ರಹ್ಮದೇವರೇ ಸ್ವತಃ ಈ ಪ್ರಾಚೀನವಾದ ಶ್ಲೋಕವನ್ನು ಹಾಡಿದ್ದಾರೆ.

ಪುರುಷಸ್ಯ ಪರೇ ಲೋಕೇ ಕೀರ್ತಿರೇವ ಪರಾಯಣಮ್ ।
ಇಹ ಲೋಕೇ ವಿಶುದ್ಧಾ ಚ ಕೀರ್ತಿರಾಯುರ್ವಿವರ್ಧನೀ ॥೩೪॥

ಪರಲೋಕದಲ್ಲಿ ಮನುಷ್ಯನಿಗೆ ಕೀರ್ತಿಯೇ ಪರಮಾಶ್ರಯವಾದುದು. ವಿಶುದ್ಧವಾದ ಕೀರ್ತಿಯು ಈ ಲೋಕದಲ್ಲಿ ಆಯುಷ್ಯವನ್ನು ಹೆಚ್ಚಿಸುವಂತಹದು.

ಸೋಽಹಂ ಶರಿರಜೇ ದತ್ತ್ವಾ ಕೀರ್ತಿಂ ಪ್ರಾಪ್ಸ್ಯಾಮಿ ಶಾಶ್ವತೀಮ್ ।
ದತ್ತ್ವಾ ಚ ವಿವಿಧಂ ದಾನಂ ಬ್ರಾಹ್ಮಣ್ಯೇಭ್ಯೋ ಯಥಾವಿಧಿ ॥೩೫॥

ನಾನು ನನ್ನ ಶರೀರದ ಜೊತೆಯಲ್ಲಿ ಜನಿಸಿದ ಈ ಕವಚಕುಂಡಲಗಳನ್ನೂ ಬೇರೆ ವಿಧವಿಧವಾದ ದಾನಗಳನ್ನೂ ಶಾಸ್ತ್ರರೀತಿಯಲ್ಲಿ ಬ್ರಾಹ್ಮಣರಿಗೆ ಕೊಟ್ಟು ಶಾಶ್ವತವಾದ ಕೀರ್ತಿಯನ್ನು ಸಂಪಾದಿಸುವೆನು.

ಹುತ್ವಾ ಶರೀರಂ ಸಂಗ್ರಾಮೇ ಕೃತ್ವಾ ಕರ್ಮ ಸುದುಷ್ಕರಮ್ ।
ವಿಜಿತ್ಯ ಚ ಪರಾನಾಜೌ ಯಶಃ ಪ್ರಾಪ್ಸ್ಯಾಮಿ ಕೇವಲಮ್ ॥೩೬॥

ದುಷ್ಕರವಾದ ಕರ್ಮವನ್ನು ಮಾಡಿ ಯುದ್ಧದಲ್ಲಿ ಶತ್ರುಗಳನ್ನು ಜಯಿಸಿ, ಯುದ್ಧದಲ್ಲಿ ಶರೀರವನ್ನು ಹೋಮಮಾಡಿ ಶ್ರೇಷ್ಠವಾದ ಕೀರ್ತಿಯನ್ನು ಸಂಪಾದಿಸುವೆನು.

ಭೀತಾನಾಮಭಯಂ ದತ್ತ್ವಾ ಸಂಗ್ರಾಮೇ ಜೀವಿತಾರ್ಥಿನಾಮ್ ।
ವೃದ್ಧಾನ್ ಬಾಲಾನ್ ದ್ವಿಜಾತೀಂಶ್ಚ ಮೋಕ್ಷಯಿತ್ವಾ ಮಹಾಭಯಾತ್ ॥

ಪ್ರಾಪ್ಸ್ಯಾಮಿ ಪರಮಂ ಲೋಕೇ ಯಶಃ ಸ್ವರ್ಗ್ಯಮನುತ್ತಮಮ್ ।
ಜೀವಿತೇನಾಪಿ ಮೇ ರಕ್ಷ್ಯಾ ಕೀರ್ತಿಸ್ತದ್ ವಿದ್ಧಿ ಮೇ ವ್ರತಮ್ ॥೩೮॥

ಯುದ್ಧದಲ್ಲಿ ಭೀತರಾಗಿ ಜೀವನವನ್ನು ಬಯಸುವವರಿಗೆ ಅಭಯವನ್ನು ನೀಡಿ ವೃದ್ಧರನ್ನೂ, ಬಾಲರನ್ನೂ, ದ್ವಿಜರನ್ನೂ ಮಹಾಭಯದಿಂದ ಪಾರುಮಾಡಿ ಲೋಕದಲ್ಲಿ ಸ್ವರ್ಗಕ್ಕೆ ಕಾರಣವಾದ ಶ್ರೇಷ್ಠವಾದ ಯಶಸ್ಸನ್ನು ಪಡೆಯುವೆನು. ನನಗೆ ಜೀವಿತಕ್ಕಿಂತಲೂ ಕೀರ್ತಿಯೇ ರಕ್ಷಿಸಲ್ಪಡಬೇಕಾದುದು. ಈ ನನ್ನ ವ್ರತವನ್ನು ತಿಳಿ.

ಸೋಽಹಂ ದತ್ತ್ವಾ ಮಘವತೇ ಭಿಕ್ಷಾಮೇತಾಮನುತ್ತಮಾಮ್ ।
ಬ್ರಹ್ಮರೂಪಧರಾಯೇಹ ಲೋಕೇ ಗಂತಾ ಪರಾಂ ಗತಿಮ್ ॥೩೯॥

ಅಂತಹ ನಾನು ಬ್ರಾಹ್ಮಣವೇಷಧಾರಿಯಾದ ಇಂದ್ರನಿಗೆ ಈ ಶ್ರೇಷ್ಠವಾದ ಭಿಕ್ಷೆಯನ್ನು ನೀಡಿ ಪರಲೋಕದಲ್ಲಿ ಶ್ರೇಷ್ಠವಾದ ಗತಿಯನ್ನು ಹೊಂದುವೆನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂಸಂಹಿತಾಯಾಂ ವೈಯಾಸಿಕ್ಯಾಂ
ವನಪರ್ವಣಿ ಏಕನವತಿತದ್ವಿಶತತಮೋಽಧ್ಯಾಯಃ ॥
॥ ಇತಿ ಕುಂಡಲಾಹರಣಪರ್ವಣಿ ಸೂರ್ಯಕರ್ಣಸಂವಾದೋ ನಾಮ
ಪ್ರಥಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವನಪರ್ವದಲ್ಲಿ ಇನ್ನೂರ ತೊಂಬತ್ತೊಂದನೆಯ ಅಧ್ಯಾಯ ಮುಗಿಯಿತು.

★ ★ ★ ★

ಇನ್ನೂರ ತೊಂಬತ್ತೆರಡನೆಯ ಅಧ್ಯಾಯ

ಸೂರ್ಯನಿಂದ ಪುನಃ ಕರ್ಣನಿಗೆ ಕವಚ ಕುಂಡಲಗಳನ್ನು ಕೊಡದಿರುವಂತೆ ಒತ್ತಾಯ.

ಸೂರ್ಯಃ

ಮಾಽಹಿತಂ ಕರ್ಣ ಕಾರ್ಷೀಸ್ತ್ವಮಾತ್ಮನಃ ಸುಹೃದಾಂ ತಥಾ ।
ಪುತ್ರಾಣಾಮಥ ಭಾರ್ಯಾಣಾಮಥೋ ಮಾತುರಥೋ ಪಿತುಃ ॥೧॥

ಸೂರ್ಯ– ಎಲೈ ಕರ್ಣನೇ, ನೀನು ನಿನಗೂ, ನಿನ್ನ ಸಹೃದರಿಗೂ, ಪುತ್ರರಿಗೂ, ಭಾರ್ಯೆಯರಿಗೂ, ತಾಯಿಗೂ ಮತ್ತು ತಂದೆಗೂ ಅಹಿತವನ್ನು ಮಾಡಬೇಡ.

ಶರೀರಸ್ಯಾವಿರೋಧೇನ ಪ್ರಾಣೇನಾಂ ಪ್ರಾಣಭೃತ್ ಪರಮ್ ।
ಇಷ್ಯತೇ ಯಶಸಃ ಪ್ರಾಪ್ತಿಃ ಕೀರ್ತಿಶ್ಚ ತ್ರಿದಿವೇ ಸ್ಥಿರಾ ॥೨॥

ಈ ಲೋಕದಲ್ಲಿ ಕಾಣುವ ವ್ಯಕ್ತಿಗಳಲ್ಲಿ ಯಾವನು ಪ್ರಾಣಗಳನ್ನು ಧರಿಸಿದ್ದಾನೆಯೋ ಅವನು ಶರೀರಕ್ಕೆ ತೊಂದರೆಯಾಗದಂತೆ ಈ ಲೋಕದಲ್ಲಿ ಯಶಸ್ಸನ್ನೂ, ಸ್ವರ್ಗದಲ್ಲಿ ಶಾಶ್ವತವಾದ ಕೀರ್ತಿಯನ್ನೂ ಬಯಸುತ್ತಾನೆ.

ಯಸ್ತ್ವಂ ಪ್ರಾಣವಿರೋಧೇನ ಕೀರ್ತಿಮಿಚ್ಛಸಿ ಶಾಶ್ವತೀಮ್ ।
ಸಾ ತೇ ಪ್ರಾಣಾನ್ ಸಮಾದಾಯ ಗಮಿಷ್ಯತಿ ಶಮಕ್ಷಯಮ್ ॥೩॥

ಯಾವ ನೀನು ನಿನ್ನ ಪ್ರಾಣಕ್ಕೆ ವಿರೋಧವನ್ನು ಮಾಡಿಕೊಂಡು ಶಾಶ್ವತ ಕೀರ್ತಿಯನ್ನು ಪಡೆಯಲು ಬಯಸುತ್ತೀಯೋ ಆ ಕೀರ್ತಿಯು ನಿನ್ನ ಪ್ರಾಣಗಳನ್ನು ಮತ್ತು ಅಕ್ಷಯವಾದ ಸುಖವನ್ನು ತೆಗೆದುಕೊಂಡು ಹೊರಟುಹೋಗುತ್ತದೆ.

ಜೀವತಾ ಕ್ರಿಯತೇ ಕಾರ್ಯಂ ಪಿತಾ ದಾರಾಃ ಸುತಾಸ್ತಥಾ ।
ಯೇ ಚಾನ್ಯೇ ಬಾಂಧವಾಃ ಕೇಚಿಲ್ಲೋಕೇಽಸ್ಮಿನ್ ಪುರುಷರ್ಷಭ ॥೪॥

ರಾಜಾನಶ್ಚ ನರವ್ಯಾಘ್ರ ಪುರುಷೇಣ ನಿಬೋಧ ತತ್ ।
ಕೀರ್ತಿಶ್ಚ ಜೀವತಃ ಸಾಧ್ವೀ ಪುರುಷಸ್ಯ ಮಹಾದ್ಯುತೇ ॥೫॥

ಎಲೈ ಪುರುಷರ್ಷಭನೇ, ತಂದೆಯಾಗಲೀ, ತಾಯಿಯಾಗಲೀ, ಮಕ್ಕಳಾಗಲೀ, ಬೇರೆ ಬಂಧುಗಳಾಗಲೀ ಅಥವಾ ರಾಜರಾಗಲೀ ಈ ಲೋಕದಲ್ಲಿ ಬದುಕಿರುವ ಮನುಷ್ಯನು ಕೀರ್ತಿಯನ್ನು ಸಂಪಾದಿಸುತ್ತಾನೆ ಎಂದು ತಿಳಿ. ಎಲೈ ನರವ್ಯಾಘ್ರನೇ, ಮಹಾದ್ಯುತಿಯೇ, ಬದುಕಿರುವ ಪುರುಷನಿಗೆ ಈ ಲೋಕದಲ್ಲಿ ಕೀರ್ತಿಯು ಸುಖಕರವಾದುದು.

ಮೃತಸ್ಯ ಕೀರ್ತ್ಯಾ ಕಿಂ ಕಾರ್ಯಂ ಭಸ್ಮೀಭೂತಸ್ಯ ದೇಹಿನಃ ।
ಮೃತಃ ಕೀರ್ತಿಂ ನ ಜಾನೀತೇ ಜೀವನ್‌ಕೀರ್ತಿಂ ಸಮಶ್ನುತೇ ॥೬॥

ದೇಹವು ಭಸ್ಮವಾಗಿ ಮೃತನಾದಮೇಲೆ ಕೀರ್ತಿಯಿಂದ ಏನು ಮಾಡಬೇಕು? ಮೃತನಾದ ಜೀವನು ಕೀರ್ತಿಯನ್ನು ತಿಳಿಯುವುದಿಲ್ಲ. ಬದುಕಿದ್ದವನು ಮಾತ್ರ ಕೀರ್ತಿಯನ್ನು ಪಡೆಯುತ್ತಾನೆ.

ಮೃತಸ್ಯ ಕೀರ್ತಿರ್ಮರ್ತ್ಯಸ್ಯ ಯಥಾ ಮೂಲಾ ಗತಾಯುಷಃ ।
ಅಹಂ ತು ತ್ವಾಂ ಬ್ರವೀಮ್ಯೇತದ್ ಭಕ್ತೋಽಸೀತಿ ಹಿತೇಪ್ಸಯಾ ॥೭॥

ಮೃತನಾದ ಮನುಷ್ಯನ ಕೀರ್ತಿಯು ಶವಕ್ಕೆ ಮಾಲೆಯನ್ನು ಹಾಕಿದಂತೆ. ನೀನು ನನ್ನ ಭಕ್ತನೆಂದು ತಿಳಿದು ನಿನ್ನ ಹಿತವನ್ನು ಬಯಸಿ ನಾನು ಈ ಮಾತನ್ನು ಆಡುತ್ತಿದ್ದೇನೆ.

ಭಕ್ತಿಮಂತೋ ಹಿ ಮೇ ರಕ್ಷ್ಯಾ ಇತ್ಯೇತೇನಾಪಿ ಹೇತುನಾ ।
ಭಕ್ತೋಽಯಂ ಪರಯಾ ಭಕ್ತ್ಯಾ ಮಾಮಿತ್ಯೇವ ಮಹಾಭುಜ ।
ಮಮಾಪಿ ಭಕ್ತಿರುತ್ಪನ್ನಾ ಸ ತ್ವಂ ಕುರು ವಚೋ ಮಮ ॥೮॥

ನನ್ನಲ್ಲಿ ಭಕ್ತಿಯುಳ್ಳವರನ್ನು ನಾನು ರಕ್ಷಿಸಬೇಕು ಎಂದು ಕಾರಣದಿಂದಲೂ ನಾನು ನಿನ್ನನ್ನು ರಕ್ಷಿಸಬೇಕು. ಎಲೈ ಮಹಾಭುಜನೇ, ಈ ನೀನು ನನ್ನಲ್ಲಿ ಪರಮಭಕ್ತಿಯುಳ್ಳವನು ಎಂಬ ಕಾರಣದಿಂದಲೂ ನಿನ್ನಲ್ಲಿ ನನಗೆ ಭಕ್ತಿ (ಪ್ರೀತಿ) ಉಂಟಾಗಿದೆ. ಅಂತಹ ನೀನು ನನ್ನ ಮಾತನ್ನು ನಡೆಸಿಕೊಡು.

ಅಸ್ತಿ ಚಾತ್ರ ಪರಂ ಕಿಂಚಿದಧ್ಯಾತ್ಮಂ ದೇವನಿರ್ಮಿತಮ್ ।
ಅತಶ್ಚ ತ್ವಾಂ ಬ್ರವೀಮ್ಯೇತತ್ ಕ್ರಿಯತಾಮವಿಶಂಕಯಾ ॥೯॥

ಅಷ್ಟೇ ಅಲ್ಲದೇ ಇಲ್ಲಿ ದೇವನಿರ್ಮಿತವಾದ ಒಂದು ಅಧ್ಯಾತ್ಮರಹಸ್ಯವಿದೆ. ಆದ್ದರಿಂದಲೂ ನೀನು ನಿಶ್ಶಂಕೆಯಿಂದ ನನ್ನ ಮಾತನ್ನು ನಡೆಸಿಕೊಡು ಎಂದು ಹೇಳುತ್ತಿದ್ದೇನೆ.

ದೇವಗುಹ್ಯಂ ತ್ವಯಾ ಜ್ಞಾತುಂ ನ ಶಕ್ಯಂ ಪುರುಷರ್ಷಭ ।
ತಸ್ಮಾನ್ನಾಖ್ಯಾಮಿ ತೇ ಗುಹ್ಯಂ ಕಾಲೇ ವೇತ್ಸ್ಯತಿ ತದ್‌ಭವಾನ್ ॥೧೦॥

ಎಲೈ ಪುರುಷರ್ಷಭನೇ, ಆ ದೇವರಹಸ್ಯವನ್ನು ನೀನು ಈಗ ತಿಳಿಯಲು ಸಾಧ್ಯವಿಲ್ಲ. ಆದ್ದರಿಂದ ನಿನಗೆ ಆ ರಹಸ್ಯವನ್ನು ಹೇಳುವುದಿಲ್ಲ. ಯೋಗ್ಯಕಾಲದಲ್ಲಿ ಮುಂದೆ ಅದನ್ನು ನೀನು ತಿಳಿಯುವಿ.

ಪುನರುಕ್ತಂ ಚ ವಕ್ಷ್ಯಾಮಿ ತ್ವಂ ರಾಧೇಯ ನಿಬೋಧ ತತ್ ।
ಮಾಸ್ಮೈ ತೇ ಕುಂಡಲೇಽದಾಸ್ತ್ವಂ ಭಿಕ್ಷತೇ ವಜ್ರಪಾಣಯೇ ॥೧೦॥

ಶರೀರಸ್ಯಾವಿರೋಧೇನ ಪ್ರಾಣೇನಾಂ ಪ್ರಾಣಭೃತ್ ಪರಮ್ ।
ಇಷ್ಯತೇ ಯಶಸಃ ಪ್ರಾಪ್ತಿಃ ಕೀರ್ತಿಶ್ಚ ತ್ರಿದಿವೇ ಸ್ಥಿರಾ ॥೨॥

ಈ ಲೋಕದಲ್ಲಿ ಕಾಣುವ ವ್ಯಕ್ತಿಗಳಲ್ಲಿ ಯಾವನು ಪ್ರಾಣಗಳನ್ನು ಧರಿಸಿದ್ದಾನೆಯೋ ಅವನು ಶರೀರಕ್ಕೆ ತೊಂದರೆಯಾಗದಂತೆ ಈ ಲೋಕದಲ್ಲಿ ಯಶಸ್ಸನ್ನೂ, ಸ್ವರ್ಗದಲ್ಲಿ ಶಾಶ್ವತವಾದ ಕೀರ್ತಿಯನ್ನೂ ಬಯಸುತ್ತಾನೆ.

ಯಸ್ತ್ವಂ ಪ್ರಾಣವಿರೋಧೇನ ಕೀರ್ತಿಮಿಚ್ಛಸಿ ಶಾಶ್ವತೀಮ್ ।
ಸಾ ತೇ ಪ್ರಾಣಾನ್ ಸಮಾದಾಯ ಗಮಿಷ್ಯತಿ ಶಮಕ್ಷಯಮ್ ॥೩॥

ಯಾವ ನೀನು ನಿನ್ನ ಪ್ರಾಣಕ್ಕೆ ವಿರೋಧವನ್ನು ಮಾಡಿಕೊಂಡು ಶಾಶ್ವತ ಕೀರ್ತಿಯನ್ನು ಪಡೆಯಲು ಬಯಸುತ್ತೀಯೋ ಆ ಕೀರ್ತಿಯು ನಿನ್ನ ಪ್ರಾಣಗಳನ್ನು ಮತ್ತು ಅಕ್ಷಯವಾದ ಸುಖವನ್ನು ತೆಗೆದುಕೊಂಡು ಹೊರಟುಹೋಗುತ್ತದೆ.

ಜೀವತಾ ಕ್ರಿಯತೇ ಕಾರ್ಯಂ ಪಿತಾ ದಾರಾಃ ಸುತಾಸ್ತಥಾ ।
ಯೇ ಚಾನ್ಯೇ ಬಾಂಧವಾಃ ಕೇಚಿಲ್ಲೋಕೇಽಸ್ಮಿನ್ ಪುರುಷರ್ಷಭ ॥೪॥

ರಾಜಾನಶ್ಚ ನರವ್ಯಾಘ್ರ ಪುರುಷೇಣ ನಿಬೋಧ ತತ್ ।
ಕೀರ್ತಿಶ್ಚ ಜೀವತಃ ಸಾಧ್ವೀ ಪುರುಷಸ್ಯ ಮಹಾದ್ಯುತೇ ॥೫॥

ಎಲೈ ಪುರುಷರ್ಷಭನೇ, ತಂದೆಯಾಗಲೀ, ತಾಯಿಯಾಗಲೀ, ಮಕ್ಕಳಾಗಲೀ, ಬೇರೆ ಬಂಧುಗಳಾಗಲೀ ಅಥವಾ ರಾಜರಾಗಲೀ ಈ ಲೋಕದಲ್ಲಿ ಬದುಕಿರುವ ಮನುಷ್ಯನು ಕೀರ್ತಿಯನ್ನು ಸಂಪಾದಿಸುತ್ತಾನೆ ಎಂದು ತಿಳಿ. ಎಲೈ ನರವ್ಯಾಘ್ರನೇ, ಮಹಾದ್ಯುತಿಯೇ, ಬದುಕಿರುವ ಪುರುಷನಿಗೆ ಈ ಲೋಕದಲ್ಲಿ ಕೀರ್ತಿಯು ಸುಖಕರವಾದುದು.

ಮೃತಸ್ಯ ಕೀರ್ತ್ಯಾ ಕಿಂ ಕಾರ್ಯಂ ಭಸ್ಮೀಭೂತಸ್ಯ ದೇಹಿನಃ ।
ಮೃತಃ ಕೀರ್ತಿಂ ನ ಜಾನೀತೇ ಜೀವನ್‌ಕೀರ್ತಿಂ ಸಮಶ್ನುತೇ ॥೬॥

ದೇಹವು ಭಸ್ಮವಾಗಿ ಮೃತನಾದಮೇಲೆ ಕೀರ್ತಿಯಿಂದ ಏನು ಮಾಡಬೇಕು? ಮೃತನಾದ ಜೀವನು ಕೀರ್ತಿಯನ್ನು ತಿಳಿಯುವುದಿಲ್ಲ. ಬದುಕಿದ್ದವನು ಮಾತ್ರ ಕೀರ್ತಿಯನ್ನು ಪಡೆಯುತ್ತಾನೆ.

ಮೃತಸ್ಯ ಕೀರ್ತಿರ್ಮರ್ತ್ಯಸ್ಯ ಯಥಾ ಮಾಲಾ ಗತಾಯುಷಃ ।
ಅಹಂ ತು ತ್ವಾಂ ಬ್ರವೀಮ್ಯೇತದ್ ಭಕ್ತೋಽಸೀತಿ ಹಿತೇಪ್ಸಯಾ ॥೭॥

ಮೃತನಾದ ಮನುಷ್ಯನ ಕೀರ್ತಿಯು ಶವಕ್ಕೆ ಮಾಲೆಯನ್ನು ಹಾಕಿದಂತೆ. ನೀನು ನನ್ನ ಭಕ್ತನೆಂದು ತಿಳಿದು ನಿನ್ನ ಹಿತವನ್ನು ಬಯಸಿ ನಾನು ಈ ಮಾತನ್ನು ಆಡುತ್ತಿದ್ದೇನೆ.

ಭಕ್ತಿಮಂತೋ ಹಿ ಮೇ ರಕ್ಷ್ಯಾ ಇತ್ಯೇತೇನಾಪಿ ಹೇತುನಾ ।
ಭಕ್ತೋಽಯಂ ಪರಯಾ ಭಕ್ತ್ಯಾ ಮಾಮಿತ್ಯೇವ ಮಹಾಭುಜ ।
ಮಮಾಪಿ ಭಕ್ತಿರುತ್ಪನ್ನಾ ಸ ತ್ವಂ ಕುರು ವಚೋ ಮಮ ॥೮॥

ನನ್ನಲ್ಲಿ ಭಕ್ತಿಯುಳ್ಳವರನ್ನು ನಾನು ರಕ್ಷಿಸಬೇಕು ಎಂದು ಕಾರಣದಿಂದಲೂ ನಾನು ನಿನ್ನನ್ನು ರಕ್ಷಿಸಬೇಕು. ಎಲೈ ಮಹಾಭುಜನೇ, ಈ ನೀನು ನನ್ನಲ್ಲಿ ಪರಮಭಕ್ತಿಯುಳ್ಳವನು ಎಂಬ ಕಾರಣದಿಂದಲೂ ನಿನ್ನಲ್ಲಿ ನನಗೆ ಭಕ್ತಿ (ಪ್ರೀತಿ) ಉಂಟಾಗಿದೆ. ಅಂತಹ ನೀನು ನನ್ನ ಮಾತನ್ನು ನಡೆಸಿಕೊಡು.

ಅಸ್ತಿ ಚಾತ್ರ ಪರಂ ಕಿಂಚಿದಧ್ಯಾತ್ಮಂ ದೇವನಿರ್ಮಿತಮ್ ।
ಅತಶ್ಚ ತ್ವಾಂ ಬ್ರವೀಮ್ಯೇತತ್ ಕ್ರಿಯತಾಮವಿಶಂಕಯಾ ॥೯॥

ಅಷ್ಟೇ ಅಲ್ಲದೇ ಇಲ್ಲಿ ದೇವನಿರ್ಮಿತವಾದ ಒಂದು ಅಧ್ಯಾತ್ಮರಹಸ್ಯವಿದೆ. ಆದ್ದರಿಂದಲೂ ನೀನು ನಿಶ್ಶಂಕೆಯಿಂದ ನನ್ನ ಮಾತನ್ನು ನಡೆಸಿಕೊಡು ಎಂದು ಹೇಳುತ್ತಿದ್ದೇನೆ.

ದೇವಗುಹ್ಯಂ ತ್ವಯಾ ಜ್ಞಾತುಂ ನ ಶಕ್ಯಂ ಪುರುಷರ್ಷಭ ।
ತಸ್ಮಾನ್ನಾಖ್ಯಾಮಿ ತೇ ಗುಹ್ಯಂ ಕಾಲೇ ವೇತ್ಸ್ಯತಿ ತದ್‌ಭವಾನ್ ॥೧೦॥

ಎಲೈ ಪುರುಷರ್ಷಭನೇ, ಆ ದೇವರಹಸ್ಯವನ್ನು ನೀನು ಈಗ ತಿಳಿಯಲು ಸಾಧ್ಯವಿಲ್ಲ. ಆದ್ದರಿಂದ ನಿನಗೆ ಆ ರಹಸ್ಯವನ್ನು ಹೇಳುವುದಿಲ್ಲ. ಯೋಗ್ಯಕಾಲದಲ್ಲಿ ಮುಂದೆ ಅದನ್ನು ನೀನು ತಿಳಿಯುವಿ.

ಪುನರುಕ್ತಂ ಚ ವಕ್ಷ್ಯಾಮಿ ತ್ವಂ ರಾಧೇಯ ನಿಬೋಧ ತತ್ ।
ಮಾಸ್ಮೈ ತೇ ಕುಂಡಲೇಽದಾಸ್ತ್ವಂ ಭಿಕ್ಷತೇ ವಜ್ರಪಾಣಯೇ ॥೧೧॥

ಎಲೈ ರಾಧೇಯನೇ, ಮೊದಲು ಹೇಳಿದುದನ್ನೇ ಇನ್ನೊಮ್ಮೆ ಹೇಳುವೆನು. ಅದನ್ನು ತಿಳಿ. ವಜ್ರಪಾಣಿಯಾದ ಇಂದ್ರನು ಭಿಕ್ಷೆಯನ್ನು ಬೇಡಿದರೆ ಅವನಿಗೆ ನೀನು ಕುಂಡಗಳವನ್ನು ಕೊಡಬೇಡ.

ಶೋಭತೇ ಕುಂಡಲಾಭ್ಯಾಂ ಚ ರುಚಿರಾಭ್ಯಾಂ ಮಹಾದ್ಯುತೇ ।
ವಿಶಾಖಯೋರ್ಮಧ್ಯಗತಃ ಶಶೀವ ವಿಮಲೇ ದಿವಿ ॥೧೨॥

ಎಲೈ ಮಹಾದ್ಯುತಿಯೇ, ಈ ಮನೋಹರವಾದ ಕುಂಡಲಗಳಿಂದ ನೀನು ವಿಶಾಖಾ ನಕ್ಷತ್ರದ ಸಮೂಹದಲ್ಲಿರುವ ಎರಡು ನಕ್ಷತ್ರಗಳ ಮಧ್ಯದಲ್ಲಿ ಚಂದ್ರನು ಆಕಾಶದಲ್ಲಿ ಶೋಭಿಸಿದಂತೆ ಶೋಭಿಸುತ್ತೀಯೆ.

ಕೀರ್ತಿಶ್ಚ ಜೀವತಃ ಸಾಧ್ವೀ ಪುರುಷಸ್ಯೇತಿ ವಿದ್ಧಿ ತತ್ ॥೧೩॥

ಪ್ರತ್ಯಾಖ್ಯೇಯಸ್ತ್ವಯಾ ತಾತ ಕುಂಡಲಾರ್ಥೇ ಸುರೇಶ್ವರಃ ।
ಪಾಂಡವಾನಾಂ ಹಿತೇ ಯುಕ್ತೋ ಭಿಕ್ಷನ್ ಬ್ರಾಹ್ಮಣವೇಷಧೃಕ್ ॥೧೪॥

ಬದುಕಿರುವ ಮನುಷ್ಯನಿಗೆ ಕೀರ್ತಿಯು ಹಿತಕರವಾದುದು ಎಂದು ತಿಳಿ. ಪ್ರೀತಿಪಾತ್ರನೇ, ಪಾಂಡವರ ಹಿತದಲ್ಲಿ ರತನಾಗಿ ಬ್ರಾಹ್ಮಣವೇಷವನ್ನು ಧರಿಸಿ ಬಂದು ಕುಂಡಲಗಳ ಭಿಕ್ಷೆಯನ್ನು ಬೇಡಲು ಬಂದ ದೇವೇಂದ್ರನು ನಿನ್ನಿಂದ ನಿರಾಕರಿಸಲ್ಪಡಬೇಕು.

ಶಕ್ಯಾ ಬಹುವಿಧೈರ್ವಾಕ್ಯೈಃ ಕುಂಡಲೇಪ್ಸಾ ತ್ವಯಾऽನಘ ।
ವಿಹಂತುಂ ದೇವರಾಜಸ್ಯ ಹೇತುಯುಕ್ತೈಃ ಪುನಃ ಪುನಃ ।
ಹೇತುಮದುಪಪನ್ನಾರ್ಥೈರ್ಮಾಧುರ್ಯಕೃತಭೂಷಣೈಃ ॥೧೫॥

ಪುರಂದರಸ್ಯ ಕರ್ಣ ತ್ವಂ ಬುದ್ಧಿಮೇತಾಮಪಾನುದ ॥೧೬॥

ಅನಘನೇ, ದೇವರಾಜನ ಈ ಕುಂಡಲದ ಆಸೆಯನ್ನು ನೀನು ಪುನಃ ಪುನಃ ಹೇತುಯುಕ್ತವಾದ ಮಾತುಗಳಿಂದ ನಿವಾರಿಸಲು ಸಾಧ್ಯವಾಗುತ್ತದೆ. ಎಲೈ ಕರ್ಣನೇ, ಹೇತುಗಳಿಂದ ಕೂಡಿದ ಯುಕ್ತವಾದ ಮತ್ತು ಮಾಧುರ್ಯದಿಂದ ಅಲಂಕರಿಸಲ್ಪಟ್ಟ ಮಾತುಗಳಿಂದ ಪುರಂದರನ ಈ ಬುದ್ಧಿಯನ್ನು ನೀನು ನಿವಾರಿಸು.

ತ್ವಂ ಹಿ ನಿತ್ಯಂ ನರವ್ಯಾಘ್ರ ಸ್ಪರ್ಧಸೇ ಸವ್ಯಸಾಚಿನಾ ।
ಸವ್ಯಸಾಚೀ ತ್ವಯಾ ಚೇಹ ಯುಧಿ ಶೂರಃ ಸಮೇಷ್ಯತಿ ॥೧೭॥

ಎಲೈ ನರವ್ಯಾಘ್ರನೇ, ನೀನು ಯಾವಾಗಲೂ ಸವ್ಯಸಾಚಿಯಾದ ಅರ್ಜುನನ ಜೊತೆಯಲ್ಲಿ ಸ್ಪರ್ಧಿಸುತ್ತೀಯೆ. ಯುದ್ಧದಲ್ಲಿ ಶೂರನೂ, ಸವ್ಯಸಾಚಿಯೂ ಆದ ಅರ್ಜುನನು ನಿನ್ನನ್ನು ಎದುರಿಸುವನು.

ನ ತು ತ್ವಾಮರ್ಜುನಃ ಶಕ್ತಃ ಕುಂಡಲಾಭ್ಯಾಂ ಸಮನ್ವಿತಮ್ ।
ವಿಜೇತುಂ ಯುಧಿ ಯದ್ಯಸ್ಯ ಸ್ವಯಮಿಂದ್ರಃ ಸಖಾ ಭವೇತ್ ॥೧೮॥

ನೀನು ಕುಂಡಲಗಳಿಂದ ಸಮನ್ವಿತನಾಗಿದ್ದರೆ ಅರ್ಜುನನಿಗೆ ಸಹಾಯಕನಾಗಿ ಸ್ವತಃ ಇಂದ್ರನೇ ಬಂದರೂ ಅರ್ಜುನನು ನಿನ್ನನ್ನು ಯುದ್ಧದಲ್ಲಿ ಗೆಲ್ಲಲು ಸಮರ್ಥನಾಗುವುದಿಲ್ಲ.

ತಸ್ಮಾನ್ನ ದೇಯೇ ಶಕ್ರಾಯ ತ್ವಯೈತೇ ಕುಂಡಲೇ ಶುಭೇ ।
ಸಂಗ್ರಾಮೇ ಯದಿ ನಿರ್ಜೇತುಂ ಕರ್ಣ ಕಾಮಯಸೇऽರ್ಜುನಮ್ ॥

ಎಲೈ ಕರ್ಣನೇ, ಆದ್ದರಿಂದ ನಿನಗೆ ಯುದ್ಧದಲ್ಲಿ ಅರ್ಜುನನನ್ನು ಜಯಿಸಬೇಕೆಂಬ ಆಸೆಯಿದ್ದರೆ ನೀನು ಈ ಶುಭವಾದ ಕುಂಡಲಗಳನ್ನು ಇಂದ್ರನಿಗೆ ಕೊಡಬಾರದು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂಸಂಹಿತಾಯಾಂ ವೈಯಾಸಿಕ್ಯಾಂ
ವನಪರ್ವಣಿ ದ್ವಿನವತಿತದ್ವಿಶತತಮೋऽಧ್ಯಾಯಃ ॥
॥ ಇತಿ ಕುಂಡಲಾಹರಣಪರ್ವಣಿ ಸೂರ್ಯಕರ್ಣಸಂವಾದೋ ನಾಮ
ದ್ವಿತೀಯೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವನಪರ್ವದಲ್ಲಿ ಇನ್ನೂರ ತೊಂಬತ್ತೆರಡನೆಯ ಅಧ್ಯಾಯ ಮುಗಿಯಿತು.

★ ★ ★ ★

ಎಲೈ ರಾಧೇಯನೇ, ಮೊದಲು ಹೇಳಿದುದನ್ನೇ ಇನ್ನೊಮ್ಮೆ ಹೇಳುವೆನು. ಅದನ್ನು ತಿಳಿ. ವಜ್ರಪಾಣಿಯಾದ ಇಂದ್ರನು ಭಿಕ್ಷೆಯನ್ನು ಬೇಡಿದರೆ ಅವನಿಗೆ ನೀನು ಕುಂಡಗಳವನ್ನು ಕೊಡಬೇಡ.

ಶೋಭತೇ ಕುಂಡಲಾಭ್ಯಾಂ ಚ ರುಚಿರಾಭ್ಯಾಂ ಮಹಾದ್ಯುತೇ ।
ವಿಶಾಖಯೋರ್ಮಧ್ಯಗತಃ ಶಶೀವ ವಿಮಲೇ ದಿವಿ ॥೧೨॥

ಎಲೈ ಮಹಾದ್ಯುತಿಯೇ, ಈ ಮನೋಹರವಾದ ಕುಂಡಲಗಳಿಂದ ನೀನು ವಿಶಾಖಾ ನಕ್ಷತ್ರದ ಸಮೂಹದಲ್ಲಿರುವ ಎರಡು ನಕ್ಷತ್ರಗಳ ಮಧ್ಯದಲ್ಲಿ ಚಂದ್ರನು ಆಕಾಶದಲ್ಲಿ ಶೋಭಿಸಿದಂತೆ ಶೋಭಿಸುತ್ತೀಯೆ.

ಕೀರ್ತಿಶ್ಚ ಜೀವತಃ ಸಾಧ್ವೀ ಪುರುಷಸ್ಯೇತಿ ವಿದ್ಧಿ ತತ್ ॥೧೩॥

ಪ್ರತ್ಯಾಖ್ಯೇಯಸ್ತ್ವಯಾ ತಾತ ಕುಂಡಲಾರ್ಥೇ ಸುರೇಶ್ವರಃ ।
ಪಾಂಡವಾನಾಂ ಹಿತೇ ಯುಕ್ತೋ ಭಿಕ್ಷನ್ ಬ್ರಾಹ್ಮಣವೇಷಧೃಕ್ ॥೧೪॥

ಬದುಕಿರುವ ಮನುಷ್ಯನಿಗೆ ಕೀರ್ತಿಯು ಹಿತಕರವಾದುದು ಎಂದು ತಿಳಿ. ಪ್ರೀತಿಪಾತ್ರನೇ, ಪಾಂಡವರ ಹಿತದಲ್ಲಿ ರತನಾಗಿ ಬ್ರಾಹ್ಮಣವೇಷವನ್ನು ಧರಿಸಿ ಬಂದು ಕುಂಡಲಗಳ ಭಿಕ್ಷೆಯನ್ನು ಬೇಡಲು ಬಂದ ದೇವೇಂದ್ರನು ನಿನ್ನಿಂದ ನಿರಾಕರಿಸಲ್ಪಡಬೇಕು.

ಶಕ್ಯಾ ಬಹುವಿಧೈರ್ವಾಕ್ಯೈಃ ಕುಂಡಲೇಪ್ಸಾ ತ್ವಯಾऽನಘ ।
ವಿಹಂತುಂ ದೇವರಾಜಸ್ಯ ಹೇತುಯುಕ್ತೈಃ ಪುನಃ ಪುನಃ ।
ಹೇತುಮದುಪಪನ್ನಾರ್ಥೈರ್ಮಾಧುರ್ಯಕೃತಭೂಷಣೈಃ ॥೧೫॥

ಪುರಂದರಸ್ಯ ಕರ್ಣ ತ್ವಂ ಬುದ್ಧಿಮೇತಾಮಪಾನುದ ॥೧೬॥

ಅನಘನೇ, ದೇವರಾಜನ ಈ ಕುಂಡಲದ ಆಸೆಯನ್ನು ನೀನು ಪುನಃ ಪುನಃ ಹೇತುಯುಕ್ತವಾದ ಮಾತುಗಳಿಂದ ನಿವಾರಿಸಲು ಸಾಧ್ಯವಾಗುತ್ತದೆ. ಎಲೈ ಕರ್ಣನೇ, ಹೇತುಗಳಿಂದ ಕೂಡಿದ ಯುಕ್ತವಾದ ಮತ್ತು ಮಾಧುರ್ಯದಿಂದ ಅಲಂಕರಿಸಲ್ಪಟ್ಟ ಮಾತುಗಳಿಂದ ಪುರಂದರನ ಈ ಬುದ್ಧಿಯನ್ನು ನೀನು ನಿವಾರಿಸು.

ತ್ವಂ ಹಿ ನಿತ್ಯಂ ನರವ್ಯಾಘ್ರ ಸ್ಪರ್ಧಸೇ ಸವ್ಯಸಾಚಿನಾ ।
ಸವ್ಯಸಾಚೀ ತ್ವಯಾ ಚೇಹ ಯುಧಿ ಶೂರಃ ಸಮೇಷ್ಯತಿ ॥೧೭॥

ಎಲೈ ನರವ್ಯಾಘ್ರನೇ, ನೀನು ಯಾವಾಗಲೂ ಸವ್ಯಸಾಚಿಯಾದ ಅರ್ಜುನನ ಜೊತೆಯಲ್ಲಿ ಸ್ಪರ್ಧಿಸುತ್ತೀಯೆ. ಯುದ್ಧದಲ್ಲಿ ಶೂರನೂ, ಸವ್ಯಸಾಚಿಯೂ ಆದ ಅರ್ಜುನನು ನಿನ್ನನ್ನು ಎದುರಿಸುವನು.

ನ ತು ತ್ವಾಮರ್ಜುನಃ ಶಕ್ತಃ ಕುಂಡಲಾಭ್ಯಾಂ ಸಮನ್ವಿತಮ್ ।
ವಿಜೇತುಂ ಯುಧಿ ಯದ್ಯಸ್ಯ ಸ್ವಯಮಿಂದ್ರಃ ಸಖಾ ಭವೇತ್ ॥೧೮॥

ನೀನು ಕುಂಡಲಗಳಿಂದ ಸಮನ್ವಿತನಾಗಿದ್ದರೆ ಅರ್ಜುನನಿಗೆ ಸಹಾಯಕನಾಗಿ ಸ್ವತಃ ಇಂದ್ರನೇ ಬಂದರೂ ಅರ್ಜುನನು ನಿನ್ನನ್ನು ಯುದ್ಧದಲ್ಲಿ ಗೆಲ್ಲಲು ಸಮರ್ಥನಾಗುವುದಿಲ್ಲ.

ತಸ್ಮಾನ್ನ ದೇಯೇ ಶಕ್ರಾಯ ತ್ವಯೈತೇ ಕುಂಡಲೇ ಶುಭೇ ।
ಸಂಗ್ರಾಮೇ ಯದಿ ನಿರ್ಜೇತುಂ ಕರ್ಣ ಕಾಮಯಸೇऽರ್ಜುನಮ್ ॥

ಎಲೈ ಕರ್ಣನೇ, ಆದ್ದರಿಂದ ನಿನಗೆ ಯುದ್ಧದಲ್ಲಿ ಅರ್ಜುನನನ್ನು ಜಯಿಸಬೇಕೆಂಬ ಆಸೆಯಿದ್ದರೆ ನೀನು ಈ ಶುಭವಾದ ಕುಂಡಲಗಳನ್ನು ಇಂದ್ರನಿಗೆ ಕೊಡಬಾರದು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂಸಂಹಿತಾಯಾಂ ವೈಯಾಸಿಕ್ಯಾಂ
ವನಪರ್ವಣಿ ದ್ವಿನವತಿತದ್ವಿಶತತಮೋऽಧ್ಯಾಯಃ ॥
॥ ಇತಿ ಕುಂಡಲಾಹರಣಪರ್ವಣಿ ಸೂರ್ಯಕರ್ಣಸಂವಾದೋ ನಾಮ
ದ್ವಿತೀಯೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವನಪರ್ವದಲ್ಲಿ ಇನ್ನೂರ ತೊಂಬತ್ತೆರಡನೆಯ ಅಧ್ಯಾಯ ಮುಗಿಯಿತು.

★ ★ ★ ★

ಇನ್ನೂರ ತೊಂಬತ್ಮೂರನೆಯ ಅಧ್ಯಾಯ

ಕವಚಕುಂಡಲಗಳನ್ನು ಕೊಡುವುದಾದರೆ ಇಂದ್ರನಿಂದ ಶಕ್ಯಾಯುಧವನ್ನು ಪಡೆದು ಅವುಗಳನನ್ನು ಕೊಡಬೇಕೆಂದು ಕರ್ಣನಿಗೆ ಸೂರ್ಯನ ಒತ್ತಾಯ ಮತ್ತು ಅದಕ್ಕೆ ಕರ್ಣನ ಒಪ್ಪಿಗೆ.

ಕರ್ಣಃ

ಭಗವಂತಮಹಂ ಭಕ್ತೋ ಯಥಾ ಮಾಮಾತ್ಥ ಗೋಪತೇ ।
ತಥಾ ಪರಮತಿಗ್ಮಾಂಶೋ ನಾನ್ಯಂ ದೇವಂ ಕಥಂಚನ ॥೧॥

ಕರ್ಣ– ಎಲೈ ಗೋಪತಿಯೇ, ಎಲೈ ತಿಗ್ಮಾಂಶುವೇ, ನಾನು ನಿನ್ನಲ್ಲಿ ಹೇಗೆ ಭಕ್ತಿಯನ್ನು ಮಾಡುತ್ತೇನೆಯೋ ಅದರಂತೆ ಬೇರೆ ಯಾವ ದೇವತೆಯಲ್ಲಿಯೂ ಭಕ್ತಿಯನ್ನು ಮಾಡುವುದಿಲ್ಲವೆಂದು ನೀನು ತಿಳಿದಿದ್ದೀಯೆ.

ನ ಮೇ ದಾರಾ ನ ಮೇ ಪುತ್ರಾ ನ ಚಾತ್ಮಾ ಸುಹೃದೋ ನ ಚ ।
ತಥೇಷ್ಟಾ ವೈ ಸದಾ ಭಕ್ತ್ಯಾ ಯಥಾ ತ್ವಂ ಗೋಪತೇ ಮಮ ॥೨॥

ಎಲೈ ಗೋಪತಿಯೇ, ನೀನು ನನಗೆ ಭಕ್ತಿಯಿಂದ ಹೇಗೆ ಸದಾ ಪ್ರಿಯನಾಗಿದ್ದೀಯೋ ಹಾಗೆ ಹೆಂಡತಿಯಾಗಲೀ, ಮಕ್ಕಳಾಗಲೀ, ಬಾಂಧವರಾಗಲೀ ಅಥವಾ ನಾನೇ ಆಗಲಿ ನನಗೆ ಪ್ರಿಯವಲ್ಲ.

ಇಷ್ಟಾನಾಂ ಚ ಮಹಾತ್ಮಾನೋ ಭಕ್ತಾನಾಂ ಚ ನ ಸಂಶಯಃ ।
ಕುರ್ವಂತಿ ಭಕ್ತಿಮಿಷ್ಟಾಂ ವೈ ಜಾನೀಷೇ ತ್ವಂ ಚ ಭಾಸ್ಕರ ॥೩॥

ಎಲೈ ಭಾಸ್ಕರನೇ, ಮಹಾತ್ಮರಾದವರು ತಮ್ಮ ಪ್ರಿಯರಾದ ಭಕ್ತರಿಗೆ ಪ್ರೀತಿಯನ್ನು ತೋರಿಸಿ ಇಷ್ಟವನ್ನು ಮಾಡುತ್ತಾರೆ ಎಂಬುದರಲ್ಲಿ ಸಂಶಯವಿಲ್ಲ. ಇದನ್ನು ನೀನು ಸಹ ತಿಳಿದಿದ್ದೀಯೆ.

ಇಷ್ಟೋ ಭಕ್ತಸ್ಯ ಮೇ ಕರ್ಣೋ ನ ಚಾನ್ಯದ್ ದೈವತಂ ದಿವಿ ।
ಜಾನೀತ ಇತಿ ವೈ ಕೃತ್ವಾ ಭಗವಾನಾಹ ಮದ್ಧಿತಮ್ ॥೪॥

ಕರ್ಣನು ನನ್ನಲ್ಲಿ ಮಾಡುವಷ್ಟು ಭಕ್ತಿಯನ್ನು ಸ್ವರ್ಗದಲ್ಲಿರುವ ಬೇರೆ ದೇವತೆಗಳಲ್ಲಿ ಮಾಡುವುದಿಲ್ಲ. ಆದ್ದರಿಂದ ಅವನು ನನಗೆ ಪ್ರಿಯನಾದವನು ಎಂದು ಭಾವಿಸಿ ಪೂಜ್ಯನಾದ ನೀನು ನನ್ನ ಹಿತವನ್ನು ಹೇಳಿದ್ದೀಯೆ.

ಭೂಯಶ್ಚ ಶಿರಸಾ ಯಾಚೇ ಪ್ರಸಾದ್ಯ ಚ ಪುನಃ ಪುನಃ ।
ಇತಿ ಬ್ರವೀಮಿ ತಿಗ್ಮಾಂಶೋ ತ್ವಂ ತು ಮೇ ಕ್ಷಂತುಮರ್ಹಸಿ ॥೫॥

ಎಲೈ ತಿಗ್ಮಾಂಶುವೇ, ಪುನಃಪುನಃ ನಿನ್ನನ್ನು ಪ್ರಸನ್ನೀಕರಿಸಿಕೊಂಡು ತಲೆಯನ್ನು ಬಗ್ಗಿಸಿ ಯಾಚಿಸುತ್ತಿದ್ದೇನೆ. ನೀನು ನನ್ನನ್ನು ಕ್ಷಮಿಸಬೇಕು.

ಬಿಭೇಮಿ ನ ತಥಾ ಮೃತ್ಯೋರ್ಯಥಾ ಬಿಭ್ಯೇಽನೃತಾದಹಮ್ ।
ವಿಶೇಷೇಣ ದ್ವಿಜಾತೀನಾಂ ಸರ್ವೇಷಾಂ ಸರ್ವದಾ ಸತಾಮ್ ॥೬॥

ನಾನು ಯಾವಾಗಲೂ ಎಲ್ಲ ಸಜ್ಜನರಿಗೂ ಅದರಲ್ಲಿಯೂ ವಿಶೇಷವಾಗಿ ಬ್ರಾಹ್ಮಣರಿಗೆ ಅನೃತವನ್ನು ಮಾತನಾಡುವುದಕ್ಕೆ ಹೇಗೆ ಹೆದರುತ್ತೇನೆಯೋ ಹಾಗೆ ಮರಣಕ್ಕೂ ಹೆದರುವುದಿಲ್ಲ.

ಪ್ರದಾನೇ ಜೀವಿತಸ್ಯಾಪಿ ನ ಮೇಽತ್ರಾಸ್ತಿ ವಿಚಾರಣಾ ।
ಯಚ್ಚ ಮಾಮಾತ್ಥ ದೇವ ತ್ವಂ ಪಾಂಡವಂ ಫಲ್ಗುನಂ ಪ್ರತಿ ॥೭॥

ವ್ಯೇತು ಸಂತಾಪಜಂ ದುಃಖಂ ತವ ಭಾಸ್ಕರ ಮಾನಸಮ್ ।
ಅರ್ಜುನಪ್ರತಿಮಂ ಚೈವ ವಿಜೇಷ್ಯಾಮಿ ರಣೇಽರ್ಜುನಮ್ ॥೮॥

ನನ್ನ ಪ್ರಾಣವನ್ನು ಕೊಡುವ ವಿಷಯದಲ್ಲಿಯೂ ನನಗೆ ಯಾವ ಸಂಶಯವೂ ಇಲ್ಲ. ಎಲೈ ದೇವನೇ, ಪಾಂಡವನಾದ ಅರ್ಜುನನ ವಿಷಯದಲ್ಲಿ ನೀನು ಏನು ಮಾತನಾಡಿದೆಯೋ ಆ ಸಂತಾಪದಿಂದ ಉಂಟಾದ ಮಾನಸ ವ್ಯಥೆಯನ್ನು ತ್ಯಜಿಸು. ಭಾಸ್ಕರನೇ, ನಾನು ಕಾರ್ತವೀರ್ಯಾರ್ಜುನನಿಗೆ ಸಮನಾದ ಅರ್ಜುನನನ್ನು ಯುದ್ಧದಲ್ಲಿ ಗೆಲ್ಲುವೆನು.

ತವಾಪಿ ವಿದಿತಂ ದೇವ ಮಮಾಪ್ಯಸ್ತ್ರಬಲಂ ಮಹತ್ ।
ಜಾಮದಗ್ನ್ಯಾದುಪಾತ್ತಂ ಯತ್ತಥಾ ದ್ರೋಣಾನ್ಮಹಾತ್ಮನಃ ॥೯॥

ದೇವನೇ, ನಾನು ಜಮದಗ್ನಿಗಳ ಪುತ್ರರಾದ ಪರಶುರಾಮರಿಂದಲೂ ಮತ್ತು ಮಹಾತ್ಮರಾದ ದ್ರೋಣರಿಂದಲೂ ಪಡೆದ ಮಹಾಸ್ತ್ರಗಳ ಸಾಮರ್ಥ್ಯವನ್ನು ನೀನೂ ತಿಳಿದಿದ್ದೀಯೆ.

ಇದಂ ತ್ವಮನುಜಾನೀಹಿ ಸುರಶ್ರೇಷ್ಠ ವ್ರತಂ ಮಮ ।
ಭಿಕ್ಷತೇ ವಜ್ರಿಣೇ ದದ್ಯಾಮಪಿ ಜೀವಿತಮಾತ್ಮನಃ ॥೧೦॥

ಸುರಶ್ರೇಷ್ಠನೇ, ಈ ನನ್ನ ವ್ರತಕ್ಕೆ ನೀನು ಅನುಮತಿಯನ್ನು ಕೊಡು. ಯಾಚಿಸುವ ಇಂದ್ರನಿಗೆ ನಾನು ನನ್ನ ಪ್ರಾಣವನ್ನಾದರೂ ಕೊಟ್ಟೇನು.

ಸೂರ್ಯಃ

ಯದಿ ತಾತ ದದಾಸ್ಯೇತೇ ವಜ್ರಿಣೇ ಕುಂಡಲೇ ಶುಭೇ ।
ತ್ವಮಪ್ಯೇನಮಥೋ ಬ್ರೂಯಾ ವಿಜಯಾರ್ಥಂ ಮಹಾಬಲಮ್ ॥೧೧॥

ಸೂರ್ಯ– ಎಲೈ ಪ್ರೀತಿಪಾತ್ರನೇ, ನೀನು ಇಂದ್ರನಿಗೆ ಈ ಶುಭಕುಂಡಲಗಳನ್ನು ಕೊಡುವುದಾದರೆ ನೀನೂ ಸಹ ವಿಜಯದ ಸಲುವಾಗಿ ಮಹಾಬಲನಾದ ಅವನನ್ನು ಕುರಿತು ಹೀಗೆ ಮಾತನಾಡು.

ನಿಯಮೇನ ಪ್ರದದ್ಯಾಂ ತೇ ಕುಂಡಲೇ ವೈ ಶತಕ್ರತೋ ।
ಅವಧ್ಯೋ ಹ್ಯಸಿ ಭೂತಾನಾಂ ಕುಂಡಲಾಭ್ಯಾಂ ಸಮನ್ವಿತಃ ॥೧೨॥

ಅರ್ಜುನೇನ ವಿನಾಶಂ ಹಿ ತವ ದಾನವಸೂದನಃ ।
ಪ್ರಾರ್ಥಯಾನೋ ರಣೇ ವತ್ಸ ಕುಂಡಲೇ ತೇ ಜಿಹೀರ್ಷತಿ ॥೧೩॥

ಎಲೈ ಇಂದ್ರನೇ, ನಿನಗೆ ಕುಂಡಲಗಳನ್ನು ನಾನು ಒಂದು ನಿಬಂಧನೆಯ ಮೇರೆಗೆ ಕೊಡುವೆನೆಂದು ಹೇಳು. ಕರ್ಣನೇ, ನೀನು ಕುಂಡಲಗಳಿಂದ ಸಮನ್ವಿತನಾದರೆ ಯಾವ ಪುರುಷನಿಂದಲೂ (ಪ್ರಾಣಿಯಿಂದಲೂ) ವಧ್ಯನಾಗುವುದಿಲ್ಲ. ವತ್ಸನೇ, ದಾನವಸೂದನನಾದ ಇಂದ್ರನು ಅರ್ಜುನನಿಂದ ನಿನ್ನ ವಿನಾಶವನ್ನು ಆಲೋಚಿಸಿ ನಿನ್ನ ಕುಂಡಲಗಳನ್ನು ಅಪಹರಿಸಲು ಬಯಸುತ್ತಾನೆ.

ಸ ತ್ವಮಪ್ಯೇನಮಾರಾಧ್ಯ ಸೂನೃತಾಭಿಃ ಪುನಃ ಪುನಃ ।
ಅಭ್ಯರ್ಥಯೇಥಾ ದೇವೇಶಮಮೋಘಾರ್ಥಂ ಪುರಂದರಮ್ ॥೧೪॥

ನೀನು ಅವನನ್ನು ಮತ್ತೆ ಮತ್ತೆ ಒಳ್ಳೆಯ ಮಾತುಗಳಿಂದ ಆರಾಧಿಸಿ ದೇವೇಶನಾದ ಪುರಂದರನನ್ನು ಒಂದು ವ್ಯರ್ಥವಾಗದ ಅಮೋಘವಾದ ಪದಾರ್ಥವನ್ನು ಕೊಡುವಂತೆ ಪ್ರಾರ್ಥಿಸು.

ಅಮೋಘಾಂ ದೇಹಿ ಮೇ ಶಕ್ತಿಮಮಿತ್ರವಿನಿಬರ್ಹಿಣೀಮ್ ।
ದಾಸ್ಯಾಮಿ ತೇ ಸಹಸ್ರಾಕ್ಷ ಕುಂಡಲೇ ವರ್ಮ ಚೋತ್ತಮಮ್ ॥೧೫॥

ಇತ್ಯೇವಂನಿಯಮೇನ ತ್ವಂ ದದ್ಯಾಃ ಶಕ್ರಾಯ ಕುಂಡಲೇ ।
ತಯಾ ತ್ವಂ ಕರ್ಣ ಸಂಗ್ರಾಮೇ ಹನಿಷ್ಯಸಿ ರಣೇ ರಿಪೂನ್ ॥೧೬॥

ಎಲೈ ಸಹಸ್ರಾಕ್ಷನೇ, ನೀನು ನನಗೆ ಶತ್ರುಸಂಹಾರಕವಾದ ಅಮೋಘವಾದ ಶಕ್ತ್ಯಾಯುಧವನ್ನು ಕೊಡು. ನಾನು ನಿನಗೆ ಕುಂಡಲಗಳನ್ನೂ, ಶ್ರೇಷ್ಠವಾದ ಕವಚವನ್ನೂ ಕೊಡುವೆನು ಎಂಬ ಈ ನಿಯಮದಿಂದ ನೀನು ಇಂದ್ರನಿಗೆ ಕುಂಡಲಗಳನ್ನು ಕೊಡುವವನಾಗು. ಎಲೈ ಕರ್ಣನೇ, ಆ ಶಕ್ತ್ಯಾಯುಧದಿಂದ ನೀನು ಯುದ್ಧದಲ್ಲಿ ಶತ್ರುಗಳನ್ನು ಕೊಲ್ಲುವಿ.

ನಾಹತ್ವಾ ಹಿ ಮಹಾಬಾಹೋ ಶತ್ರೂನೇತಿ ಕರಂ ಪುನಃ ।
ಸಾ ಶಕ್ತಿರ್ದೇವರಾಜಸ್ಯ ಶತಶೋಽಥ ಸಹಸ್ರಶಃ ॥೧೭॥

ಎಲೈ ಮಹಾಬಾಹುವೇ, ಇಂದ್ರನು ಪ್ರಯೋಗಿಸುವ ಆ ಶಕ್ತ್ಯಾಯುಧವು ನೂರರ ಸಂಖ್ಯೆಯಲ್ಲಿ, ಸಾವಿರದ ಸಂಖ್ಯೆಯಲ್ಲಿ ಶತ್ರುಗಳನ್ನು ಕೊಲ್ಲದೇ ದೇವರಾಜನ ಕೈಗೆ ಪುನಃ ಬಂದು ಸೇರುವುದಿಲ್ಲ.

ವೈಶಂಪಾಯನಃ

ಏವಮುಕ್ತ್ವಾ ಸಹಸ್ರಾಂಶುಃ ಸಹಸಾಽಂತರಧೀಯತ ।
ಕರ್ಣಸ್ತು ಬುಬುಧೇ ರಾಜನ್ ಸ್ವಪ್ನಾಂತೇ ಪ್ರವ್ಯಥನ್ನಿವ ॥೧೮॥

ವೈಶಂಪಾಯನ– ಸಹಸ್ರಾಂಶುವಾದ ಸೂರ್ಯನು ಹೀಗೆ ಹೇಳಿ ತಕ್ಷಣ ಅಂತರ್ಧಾನವನ್ನು ಹೊಂದಿದನು. ಎಲೈ ರಾಜನೇ, ಕರ್ಣನಾದರೂ ವ್ಯಥೆಯನ್ನು ಪಡುತ್ತಾ ಸ್ವಪ್ನದಿಂದ ಎಚ್ಚರಗೊಂಡನು.

ಪ್ರತಿಬುದ್ಧಸ್ತು ರಾಧೇಯಃ ಸ್ವಪ್ನಂ ಸಂಚಿತ್ಯ ಭಾರತ ।
ಚಕಾರ ನಿಶ್ಚಯಂ ರಾಜನ್ ಶಕ್ಯರ್ಥಂ ವದತಾಂ ವರಃ ॥೧೯॥

ಎಲೈ ಭಾರತನೇ, ಮಾತನಾಡುವವರಲ್ಲಿ ಶ್ರೇಷ್ಠನಾದ ಎಚ್ಚರಗೊಂಡ ಕರ್ಣನು ಆ ಸ್ವಪ್ನವನ್ನು ಆಲೋಚಿಸಿ ಶಕ್ತ್ಯಾಯುಧವನ್ನು ಬೇಡುವುದಾಗಿ ನಿಶ್ಚಯಿಸಿದನು.

ಯದಿ ಮಾಮಿಂದ್ರ ಆಯಾತಿ ಕುಂಡಲಾರ್ಥಂ ಪರಂತಪಃ ।
ಶಕ್ತ್ಯಾ ತಸ್ಮೈ ಪ್ರದಾಸ್ಯಾಮಿ ಕುಂಡಲೇ ವರ್ಮ ಚೈವ ಹ ॥೨೦॥

ಒಂದುಪಕ್ಷ ಪರಂತಪನಾದ ಇಂದ್ರನು ಕುಂಡಲಗಳ ಸಲುವಾಗಿ ನನ್ನ ಬಳಿಗೆ ಬಂದರೆ ಶಕ್ತಿಯನ್ನು ತೆಗೆದುಕೊಂಡು ಅವನಿಗೆ ಕವಚಕುಂಡಲಗಳನ್ನು ಕೊಡುವೆನು.

ಸ ಕೃತ್ವಾ ಪ್ರಾತರುತ್ಥಾಯ ಕಾರ್ಯಾಣಿ ಭರತರ್ಷಭ ।
ಬ್ರಾಹ್ಮಣಾನ್ ವಾಚಯಿತ್ವಾಽಥ ಯಥಾಕಾರ್ಯಮುಪಾಕ್ರಮಮ್ ॥

ಭರತರ್ಷಭನೇ, ಅವನು ಪ್ರಾತಃಕಾಲದಲ್ಲಿ ಎದ್ದು ತನ್ನ ಕಾರ್ಯಗಳನ್ನು ಮಾಡಿಕೊಂಡು ಬ್ರಾಹ್ಮಣರಿಂದ ಸ್ವಸ್ತಿವಾಚನವನ್ನು ಮಾಡಿಸಿಕೊಂಡು ದಿನನಿತ್ಯದಂತೆ ತನ್ನ ಕಾರ್ಯಗಳನ್ನು ಪ್ರಾರಂಭಿಸಿದನು.

ವಿಧಿನಾ ರಾಜಶಾರ್ದೂಲ ಮುಹೂರ್ತಮಜಪತ್ ತತಃ ।
ತತಃ ಸೂರ್ಯಾಯ ಜಪ್ಯಾಂತೇ ಕರ್ಣಃ ಸ್ವಪ್ನಂ ನ್ಯವೇದಯತ್ ॥೨೨॥

ಎಲೈ ರಾಜಶಾರ್ದೂಲನೇ, ವಿಧಿಗೆ ಅನುಸಾರವಾಗಿ ಒಂದು ಮುಹೂರ್ತದವರೆಗೆ ಅವನು ಜಪವನ್ನು ಮಾಡಿದನು. ಜಪವು ಮುಗಿದ ಮೇಲೆ ಕರ್ಣನು ಸೂರ್ಯನಿಗೆ ತನ್ನ ಸ್ವಪ್ನವನ್ನು ನಿವೇದಿಸಿದನು.

ಯಥಾ ದೃಷ್ಟಂ ಯಥಾತತ್ತ್ವಂ ಯದ್ ವೃತ್ತಮುಭಯೋರ್ನಿಶಿ ।
ತತ್ ಸರ್ವಮಾನುಪೂರ್ವ್ಯೇಣ ಶಶಂಸಾಸ್ಮೈ ವೃಷಸ್ತದಾ ॥೨೩॥

ಕರ್ಣನು ಹೇಗೆ ಸ್ವಪ್ನವನ್ನು ನೋಡಿದನೋ, ಕರ್ಣ ಮತ್ತು ಸೂರ್ಯರ ಮಧ್ಯೆ ಹೇಗೆ ರಾತ್ರಿ ಮಾತುಕಥೆಯಾಯಿತೋ ಅವೆಲ್ಲವನ್ನೂ ಕ್ರಮವಾಗಿ ಕರ್ಣಪುತ್ರನು ಸೂರ್ಯನ ಬಳಿಗೆ ಹೋಗಿ ಸೂರ್ಯನಿಗೆ ನಿವೇದಿಸಿದನು. (ವಾದಿರಾಜರು)

ತತ್‌ಶ್ರುತ್ವಾ ಭಗವಾನ್ ದೇವೋ ಭಾನುಃ ಸ್ವರ್ಭಾನುಸೂದನಃ ।
ಉವಾಚ ತಂ ತಥೇತ್ಯೇವ ಕರ್ಣಂ ಸೂರ್ಯಃ ಸ್ಥಯನ್ನಿವ ॥೨೪॥

ಅದನ್ನು ಕೇಳಿದ ರಾಹುಶತ್ರುವಾದ ಭಗವಂತನಾದ ಸೂರ್ಯದೇವನು ನಗುತ್ತಾ ಕರ್ಣ (ಪುತ್ರ)ನನ್ನು ಕುರಿತು ಅದೆಲ್ಲವೂ ಹಾಗೆಯೇ ಸರಿ ಎಂದು ಹೇಳಿದನು.

ತತಸ್ತತ್ತ್ವಮಿತಿ ಜ್ಞಾತ್ವಾ ರಾಧೇಯಃ ಪರವೀರಹಾ ।
ಶಕ್ತಿಮೇವಾಭಿಕಾಂಕ್ಷನ್ ವೈ ವಾಸವಂ ಪ್ರತ್ಯಪಾಲಯತ್ ॥೨೫॥

ಶತ್ರುಸಂಹಾರಕನಾದ ಕರ್ಣನು ಸ್ವಪ್ನದ ಘಟನೆಯನ್ನು ಸತ್ಯವೆಂದು ತಿಳಿದು ಶಕ್ತ್ಯಾಯುಧದ ಪ್ರಾಪ್ತಿಯನ್ನು ಆಶಿಸುತ್ತಾ ಇಂದ್ರನ ನಿರೀಕ್ಷೆಯಲ್ಲಿ ಇದ್ದನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂಸಂಹಿತಾಯಾಂ ವೈಯಾಸಿಕ್ಯಾಂ
ವನಪರ್ವಣಿ ತ್ರಿನವತಿತದ್ವಿಶತತಮೋऽಧ್ಯಾಯಃ ॥
॥ ಇತಿ ಕುಂಡಲಾಹರಣಪರ್ವಣಿ ಸೂರ್ಯಕರ್ಣಸಂವಾದೋ ನಾಮ
ತೃತೀಯೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವನಪರ್ವದಲ್ಲಿ ಇನ್ನೂರ ತೊಂಬತ್ಮೂರನೆಯ ಅಧ್ಯಾಯ ಮುಗಿಯಿತು.

★ ★ ★ ★

ಇನ್ನೂರ ತೊಂಬತ್ನಾಲ್ಕನೆಯ ಅಧ್ಯಾಯ

ಕುಂತಿಭೋಜನ ಅರಮನೆಗೆ ದುರ್ವಾಸರ ಆಗಮನ ಮತ್ತು ನಿವಾಸ.
ಕುಂತಿಭೋಜನಿಂದ ಅವರ ಸೇವೆಗೆ ಕುಂತಿಯ ನಿಯೋಜನೆ.

ಜನಮೇಜಯಃ

ಕಿಂ ತದ್ ಗುಹ್ಯಂ ನ ಚಾಖ್ಯಾತಂ ಕರ್ಣಾಯೇಹೋಷ್ಣರಶ್ಮಿನಾ ।
ಕೀದೃಶೇ ಕುಂಡಲೇ ತೇ ಚ ಕವಚಂ ಚೈವ ಕೀದೃಶಮ್ ॥೧॥

ಕುತಶ್ಚ ಕವಚಂ ತಸ್ಯ ಕುಂಡಲೇ ಚೈವ ಸತ್ತಮ ।
ಏತದಿಚ್ಛಾಮ್ಯಹಂ ಶ್ರೋತುಂ ತನ್ಮೇ ಬ್ರೂಹಿ ತಪೋಧನ ॥೨॥

ಜನಮೇಜಯ– ಎಲೈ ಸಜ್ಜನರಲ್ಲಿ ಶ್ರೇಷ್ಠರೇ, ಸೂರ್ಯನು ಕರ್ಣನಿಗೆ ಹೇಳದಿದ್ದ ಆ ರಹಸ್ಯವು ಯಾವುದು? ಆ ಕುಂಡಲಗಳು ಎಂತಹವು ಮತ್ತು ಕವಚವು ಎಂತಹದು? ಎಲೈ ತಪೋಧನರೇ, ಆ ಕರ್ಣನಿಗೆ ಕವಚಕುಂಡಲಗಳು ಎಲ್ಲಿಂದ ದೊರೆತವು? ಇದನ್ನೂ ಸಹ ನಾನು ತಿಳಿಯಲು ಇಚ್ಛಿಸುತ್ತೇನೆ. ಅದನ್ನು ನನಗೆ ಹೇಳಿ.

ವೈಶಂಪಾಯನಃ

ಅಥ ರಾಜನ್ ಬ್ರವೀಮ್ಯೇತತ್ ತಸ್ಯ ಗುಹ್ಯಂ ವಿಭಾವಸೋಃ ।
ಯಾದೃಶೇ ಕುಂಡಲೇ ತೇ ಚ ಕವಚಂ ಚೈವ ಯಾದೃಶಮ್ ॥೩॥

ವೈಶಂಪಾಯನ– ರಾಜನೇ, ನಿನಗೆ ಮಂಗಳವಾಗಲಿ. ನಿನಗೆ ಸೂರ್ಯನ ಆ ರಹಸ್ಯವನ್ನೂ ಮತ್ತು ಆ ಕವಚಕುಂಡಲಗಳು ಎಂತಹವು ಎಂಬುದನ್ನೂ ಹೇಳುತ್ತೇನೆ.

ಕುಂತಿಭೋಜಂ ಪುರಾ ರಾಜನ್ ಬ್ರಾಹ್ಮಣಃ ಪರ್ಯುಪಸ್ಥಿತಃ ।
ತಿಗ್ಮತೇಜಾ ಮಹಾಪ್ರಾಂಶುಃ ಶ್ಮಶ್ರುದಂಡಜಟಾಧರಃ ॥೪॥

ದರ್ಶನೀಯೋಽನವದ್ಯಾಂಗಸ್ತೇಜಸಾ ಪ್ರಜ್ವಲನ್ನಿವ ।
ಮಧುಪಿಂಗೋ ಮಧುರವಾಕ್ ತಪಃಸ್ವಾಧ್ಯಾಯಭೂಷಣಃ ॥೫॥

ಎಲೈ ರಾಜನೇ, ಹಿಂದೆ ಕುಂತಿಭೋಜನು ಒಬ್ಬ ಬ್ರಾಹ್ಮಣರ ಸೇವೆಯನ್ನು ಮಾಡಿದನು. ಆ ಬ್ರಾಹ್ಮಣನು ಪ್ರಖರವಾದ ತೇಜಸ್ಸುಳ್ಳವನೂ, ಎತ್ತರವಾದವನೂ, ದಂಡವನ್ನು ಮತ್ತು ಜಟೆಗಳನ್ನು ಧರಿಸಿದವನೂ, ಸುಂದರನಾದವನೂ, ನಿರ್ದುಷ್ಟವಾದ ಅವಯವವುಳ್ಳವನೂ, ತನ್ನ ಕಾಂತಿಯಿಂದ ಜ್ವಲಿಸುವವನೂ, ಜೇನಿನಂತೆ ಕಂದುಬಣ್ಣ ಉಳ್ಳವನೂ, ಮಧುರವಾಗಿ ಮಾತನಾಡುವವನೂ, ತಪಸ್ಸು ಮತ್ತು ಸ್ವಾಧ್ಯಾಯ ಎಂಬ ಅಲಂಕಾರದಿಂದ ಭೂಷಿತನಾದವನೂ ಆಗಿದ್ದನು.

ಸ ರಾಜಾನಂ ಕುಂತಿಭೋಜಮಬ್ರವೀತ್ ಸುಮಹಾತಪಾಃ ।
ಭಿಕ್ಷಾಮಿಚ್ಛಾಮಿ ವೈ ಭೋಕ್ತುಂ ತವ ಗೇಹೇ ವಿಮತ್ಸರಃ ॥೬॥

ಮಹಾತಪಸ್ವಿಯಾದ ಅವನು ಕುಂತಿಭೋಜನನ್ನು ಸಮೀಪಿಸಿ ನಿನ್ನ ಮನೆಯಲ್ಲಿ ಯಾವ ಅಸೂಯೆಯೂ ಇಲ್ಲದೆ ಭಿಕ್ಷೆಯನ್ನು ಸ್ವೀಕರಿಸಲು ಇಚ್ಛಿಸುತ್ತೇನೆ ಎಂದು ಹೇಳಿದನು.

ನ ಮೇ ವ್ಯಲೀಕಂ ಕರ್ತವ್ಯಂ ತ್ವಯಾ ವಾ ತವ ಚಾನುಗೈಃ ।
ಏವಂ ವತ್ಸ್ಯಾಮಿ ತೇ ಗೇಹೇ ಯದಿ ತೇ ರೋಚತೇಽನಘ ॥೭॥

ಎಲೈ ಅನಘನೇ, ನಿನ್ನ ಮನೆಯಲ್ಲಿ ನೀನಾಗಲೀ ಅಥವಾ ನಿನ್ನ ಅನುಚರರಾಗಲೀ ನನಗೆ ಅಪಚಾರವನ್ನು ಮಾಡದಿದ್ದರೆ ನಿನಗೆ ಇಷ್ಟವಾದರೆ ನಾನು ನಿನ್ನ ಮನೆಯಲ್ಲಿ ವಾಸಿಸುವೆನು.

ಯಥಾಕಾಮಂ ಚ ಗಚ್ಛೇಯಮಾಗಚ್ಛೇಯಂ ತಥೈವ ಚ ।
ಶಯ್ಯಾಸನೇ ಚ ಮೇ ರಾಜನ್ ನಾಪರಾಧ್ಯೇತ ಕಶ್ಚನ ॥೮॥

ನನಗೆ ಇಷ್ಟವಾದಂತೆ ನಾನು ಬರುತ್ತೇನೆ ಮತ್ತು ಹೋಗುತ್ತೇನೆ. ಎಲೈ ರಾಜನೇ, ನನ್ನ ಶಯ್ಯಾಸನಗಳ ವಿಷಯದಲ್ಲಿ ಯಾರೂ ನನಗೆ ಅಪರಾಧವನ್ನು ಮಾಡಬಾರದು.

ವೈಶಂಪಾಯನಃ

ತಮಬ್ರವೀತ್‌ಕುಂತಿಭೋಜಃ ಪ್ರೀತಿಯುಕ್ತಮಿದಂ ವಚಃ ।
ಏವಮಸ್ತು ಪರಂ ಚೇತಿ ಪುನಶ್ಚೈನಮಥಾಬ್ರವೀತ್ ॥೯॥

ವೈಶಂಪಾಯನ– ಕುಂತಿಭೋಜರಾಜನು ವಿಶ್ವಾಸದಿಂದ ಹಾಗೆಯೇ ಆಗಲಿ ಎಂದು ಹೇಳಿ ಅನಂತರ ಅವನನ್ನು ಕುರಿತು ಪುನಃ ಹೀಗೆ ಮಾತನಾಡಿದನು.

ಮಮ ಕನ್ಯಾ ಮಹಾಪ್ರಾಜ್ಞ ಪೃಥಾ ನಾಮ ಯಶಸ್ವಿನೀ ।
ಶೀಲವೃತ್ತಾನ್ವಿತಾ ಸಾಧ್ವೀ ನಿಯತಾ ನಾತಿಮಾನಿನೀ ॥೧೦॥

ಮಹಾಪ್ರಾಜ್ಞನೇ, ನನ್ನ ಮಗಳಾದ ಪೃಥಾ ಎಂಬ ಯಶಸ್ವಿನಿಯು. ಶೀಲವೃತ್ತದಿಂದ ಕೂಡಿದವಳು. ಸಾಧುಸ್ವಭಾವದವಳು. ಮೌನಶೀಲಳು ಮತ್ತು ಅಹಂಕಾರರಹಿತಳು.

ಉಪಸ್ಥಾಸ್ಯತಿ ಸಾ ತ್ವಾಂ ವೈ ಪೂಜಯಾ ಸುಮಹಾದ್ಯುತೇ ।
ತಸ್ಯಾಸ್ತ್ವಂ ಶೀಲವೃತ್ತೇನ ತುಷ್ಟಿಂ ಸಮುಪಯಾಸ್ಯಸಿ ॥೧೧॥

ಎಲೈ ಮಹಾದ್ಯುತಿಯೇ, ನಿನ್ನನ್ನು ಸತ್ಕರಿಸುತ್ತಾ ಅವಳು ನಿನ್ನ ಸೇವೆಯಲ್ಲಿ ಇರುವಳು. ಅವಳ ಶೀಲವೃತ್ತಗಳಿಂದ ನೀನು ಸಂತೋಷವನ್ನು ಹೊಂದುವಿ.

ವೈಶಂಪಾಯನಃ

ಏವಮುಕ್ತ್ವಾ ತು ತಂ ವಿಪ್ರಮಭಿಪೂಜ್ಯ ಯಥಾವಿಧಿ ।
ಉವಾಚ ಕನ್ಯಾಮಭ್ಯೇತ್ಯ ಪೃಥಾಂ ಪೃಥುಲಲೋಚನಾಮ್ ॥೧೨॥

ವೈಶಂಪಾಯನ– ಹೀಗೆ ಹೇಳಿ ಬ್ರಾಹ್ಮಣನನ್ನು ಶಾಸ್ತ್ರಪ್ರಕಾರದಿಂದ ಸತ್ಕರಿಸಿ ವಿಶಾಲನೇತ್ರೆಯಾದ ಪೃಥೆಯನ್ನು ಸಮೀಪಿಸಿ ಆ ಕನ್ಯೆಯನ್ನು ಕುರಿತು ಹೀಗೆ ಹೇಳಿದನು.

ಅಯಂ ವತ್ಸೇ ಮಹಾಭಾಗೋ ಬ್ರಾಹ್ಮಣೋ ವಸ್ತುಮಿಚ್ಛತಿ ।
ಮಮ ಗೇಹೇ ಮಯಾ ಚಾಸ್ಯ ತಥೇತ್ಯೇವಂ ಪ್ರತಿಶ್ರುತಮ್ ॥೧೩॥

ಮಗಳೇ, ಈ ಮಹಾನುಭಾವನಾದ ಬ್ರಾಹ್ಮಣನು ನನ್ನ ಮನೆಯಲ್ಲಿ ವಾಸ ಮಾಡಲು ಬಯಸುತ್ತಾನೆ. ನಾನು ಇವನಿಗೆ ಹಾಗೆಯೇ ಆಗಲಿ ಎಂದು ಮಾತನ್ನು ಕೊಟ್ಟಿದ್ದೇನೆ.

ತ್ವಯಿ ವತ್ಸೇ ಪರಾಯತ್ತಂ ಬ್ರಾಹ್ಮಣಸ್ಯಾಭಿರಾಧನಮ್ ।
ತನ್ಮೇ ವಾಕ್ಯಮಮಿಥ್ಯಾ ತ್ವಂ ಕರ್ತುಮರ್ಹಸಿ ಕರ್ಹಿಚಿತ್ ॥೧೪॥

ಮಗಳೇ, ಅವನನ್ನು ಪೂಜಿಸುವ ಭಾರವು ನಿನ್ನ ಮೇಲಿದೆ. ನನ್ನ ಮಾತನ್ನು ನೀನು ಯಾವಕಾರಣದಿಂದಲೂ ಸುಳ್ಳು ಮಾಡಬಾರದು.

ಅಯಂ ತಪಸ್ವೀ ಭಗವಾನ್ ಸ್ವಾಧ್ಯಾಯನಿಯತೋ ದ್ವಿಜಃ ।
ಯದ್ಯದ್ ಬ್ರೂಯಾನ್ಮಹಾತೇಜಾಸ್ತದೆ ದೇಯಮಮತ್ಸರಾತ್ ॥೧೫॥

ಈ ತಪಸ್ವಿಯಾದ ಸ್ವಾಧ್ಯಾಯನಿಯತನಾದ ಪೂಜ್ಯನಾದ ಮಹಾತೇಜಸ್ವಿಯಾದ ಬ್ರಾಹ್ಮಣನು ಏನೇನು ಹೇಳುತ್ತಾನೆಯೋ ಅದೆಲ್ಲವನ್ನೂ ಅವನಿಗೆ ಮಾತ್ಸರ್ಯವಿಲ್ಲದೇ ಒದಗಿಸಬೇಕು.

ಬ್ರಾಹ್ಮಣೋ ಹಿ ಪರಂ ತೇಜೋ ಬ್ರಾಹ್ಮಣೋ ಹಿ ಪರಂ ತಪಃ ।
ಬ್ರಾಹ್ಮಣಾನಾಂ ನಮಸ್ಕಾರೈಃ ಸೂರ್ಯೋ ದಿವಿ ವಿರಾಜತೇಃ ॥೧೬॥

ಬ್ರಾಹ್ಮಣನೇ ದಿವ್ಯವಾದ ಶ್ರೇಷ್ಠವಾದ ತೇಜಸ್ಸು. ಬ್ರಾಹ್ಮಣನೇ ಶ್ರೇಷ್ಠವಾದ ತಪಸ್ಸೂ ಕೂಡ. ಬ್ರಾಹ್ಮಣರಿಗೆ ನಮಸ್ಕಾರವನ್ನು ಮಾಡಿ ಅದರಿಂದ ಸೂರ್ಯನು ಆಕಾಶದಲ್ಲಿ ಮೆರೆಯುತ್ತಾನೆ.

ಅಮಾನಯನ್ ಹಿ ಮಾನಾರ್ಹಾನ್ ವಾತಾಪಿಶ್ಚ ಮಹಾಸುರಃ ।
ನಿಹತೋ ಬ್ರಹ್ಮದಂಡೇನ ತಾಳಜಂಘಸ್ತಥೈವ ಚ ॥೧೭॥

ಸತ್ಕಾರಕ್ಕೆ ಯೋಗ್ಯರಾದವರನ್ನು ಸತ್ಕರಿಸದೆ ಮಹಾಸುರನಾದ ವಾತಾಪಿಯು ನಿಧನವನ್ನು ಹೊಂದಿದನು. ಅದರಂತೆಯೇ ತಾಳಜಂಘನೂ ಸಹ ಬ್ರಹ್ಮದಂಡದಿಂದ ನಿಧನ ಹೊಂದಿದನು.

ಸೋಽಯಂ ವತ್ಸೇ ಮಹಾಭಾರ ಆಹಿತಸ್ತ್ವಯಿ ಸಾಂಪ್ರತಮ್ ।
ತ್ವಂ ಸದಾ ನಿಯತಾ ಕುರ್ಯಾ ಬ್ರಾಹ್ಮಣಸ್ಯಾಭಿರಾಧನಮ್ ॥೧೮॥

ಜಾನಾಮಿ ಪ್ರಣಿಧಾನಂ ತೇ ಬಾಲ್ಯಾತ್ ಪ್ರಭೃತಿ ನಂದಿನಿ ॥೧೯॥

ಮಗಳೇ, ಈಗ ಈ ದೊಡ್ಡ ಭಾರವು ನಿನ್ನ ಮೇಲೆ ಹೊರಿಸಲ್ಪಟ್ಟಿದೆ. ನೀನು ಯಾವಾಗಲೂ ಎಚ್ಚರಿಕೆಯಿಂದ ಈ ಬ್ರಾಹ್ಮಣನ ಸತ್ಕಾರವನ್ನು ಮಾಡು. ಪ್ರೀತಿಯ ಮಗಳೇ, ಬಾಲ್ಯದಿಂದಲೂ ನಿನಗಿರುವ ಏಕಾಗ್ರತೆಯನ್ನು ನಾನು ತಿಳಿದಿದ್ದೇನೆ.

ಬ್ರಾಹ್ಮಣೇಷ್ವಿಹ ಸರ್ವೇಷು ಗುರುಬಂಧುಷು ಚೈವ ಹ ।
ತಥಾ ಪ್ರೇಷ್ಯೇಷು ಸರ್ವೇಷು ಮಿತ್ರಸಂಬಂಧಿಮಾತೃಷು ।
ಮಯಿ ಚೈವ ಯಥಾವತ್ತ್ವಂ ಸರ್ವಮಾವೃತ್ಯ ವರ್ತಸೇ ॥೨೦॥

ಎಲ್ಲ ಬ್ರಾಹ್ಮಣರ ವಿಷಯಲ್ಲಿಯೂ, ಗುರುಗಳು ಮತ್ತು ಬಂಧುಗಳಲ್ಲಿಯೂ, ಎಲ್ಲಾ ಸೇವಕರ ವಿಷಯದಲ್ಲಿಯೂ, ಮಿತ್ರಸಂಬಂಧಿ ಮಾತೃಗಳ ವಿಷಯದಲ್ಲಿಯೂ ಮತ್ತು ನನ್ನ ವಿಷಯದಲ್ಲಿಯೂ ನೀನು ಬೇರೆಲ್ಲವನ್ನೂ ಬಿಟ್ಟು ಏಕಾಗ್ರತೆಯಿಂದ ಸರಿಯಾಗಿ ನಡೆದುಕೊಳ್ಳುವವಳಾಗಿದ್ದೀಯೆ.

ನ ಹ್ಯತುಷ್ಟೋ ಜನೋಽಸ್ತೀಹ ಪುರೇ ಚಾಂತಃಪುರೇ ಚ ತೇ ।
ಸಮ್ಯಗ್ವೃತ್ತಾಽನವದ್ಯಾಂಗಿ ತವ ಭೃತ್ಯಜನೇಷ್ವಪಿ ॥೨೧॥

ಎಲೌ ಅನವದ್ಯಾಂಗಿಯೇ, ಈ ಪಟ್ಟಣದಲ್ಲಿ ಮತ್ತು ಅಂತಃಪುರದಲ್ಲಿ ಮತ್ತು ಸೇವಕಜನರಲ್ಲಿ ನಿನ್ನ ನಡತೆಯಿಂದ ಸಂತೋಷಗೊಳ್ಳದಿರುವ ಯಾವ ವ್ಯಕ್ತಿಯೂ ಇಲ್ಲ.

ಸಂದೇಷ್ಟವ್ಯಾಂ ತು ಮನ್ಯೇ ತ್ವಾಂ ದ್ವಿಜಾತಿಂ ಕೋಪನಂ ಪ್ರತಿ ।
ಪೃಥೇ ಬಾಲೇತಿ ಕೃತ್ವಾ ವೈ ಸುತಾ ವಾऽಸಿ ಮಮೇತಿ ಚ ॥೨೨॥

ಎಲೌ ಪೃಥೆಯೇ, ನೀನು ಚಿಕ್ಕವಳು ಮತ್ತು ನನ್ನ ಮಗಳು ಎಂದು ತಿಳಿದು ನಾನು ಕೋಪಶೀಲನಾದ ಬ್ರಾಹ್ಮಣನ ಸೇವೆಯಲ್ಲಿ ನಿನಗೆ ಸಂದೇಶವನ್ನು ನೀಡುತ್ತಿದ್ದೇನೆ.

ವೃಷ್ಣೀನಾಂ ಚ ಕುಲೇ ಜಾತಾ ಶೂರಸ್ಯ ದಯಿತಾ ಸುತಾ ।
ದತ್ತಾ ಪ್ರೀತಿಮತಾ ಮಹ್ಯಂ ಪಿತ್ರಾ ಬಾಲಾ ಪುರಾ ಸ್ವಯಮ್ ॥೨೩॥

ನೀನು ವೃಷ್ಣಿಗಳ ಕುಲದಲ್ಲಿ ಹುಟ್ಟಿದವಳು. ಶೂರನ ಪ್ರೀತಿಯ ಪುತ್ರಿ. ನೀನು ಮಗುವಾಗಿದ್ದಾಗಲೇ ನಿನ್ನ ತಂದೆಯು ಪ್ರೀತಿಯಿಂದ ನಿನ್ನನ್ನು ಸ್ವತಃ ತಾನೇ ನನಗೆ ಕೊಟ್ಟನು.

ವಸುದೇವಸ್ಯ ಭಗಿನೀ ಸುತಾನಾಂ ಪ್ರವರಾ ಮಮ ।
ಅಗ್ರ್ಯಮಗ್ರೇ ಪ್ರತಿಜ್ಞಾಯ ತೇನಾಸಿ ದುಹಿತಾ ಮಮ ॥೨೪॥

ನೀನು ವಸುದೇವನ ಸಹೋದರಿ. ಶೂರನ ಮಕ್ಕಳಲ್ಲಿ ಶ್ರೇಷ್ಠಳಾದವಳು. ನೀನು ಜನಿಸುವುದಕ್ಕಿಂತ ಮೊದಲೇ ಶೂರನು ನಿನ್ನನ್ನು ನನಗೆ ಕೊಡುವುದಾಗಿ ಪ್ರತಿಜ್ಞೆಯನ್ನು ಮಾಡಿ ಅನಂತರ ಕೊಟ್ಟನು. ಆದರಿಂದ ನೀನು ನನ್ನ ಮಗಳಾಗಿದ್ದೀಯೆ.

ತಾದೃಶೇ ಹಿ ಕುಲೇ ಜಾತಾ ಕುಲೇ ಚೇಹ ವಿವರ್ಧಿತಾ ।
ಸುಖಾತ್ ಸುಖಮನುಪ್ರಾಪ್ತಾ ಹ್ರದಾದ್ ಹ್ರದಮಿವಾಗತಾ ॥೨೫॥

ನೀನು ಅಂತಹ ಕುಲದಲ್ಲಿ ಹುಟ್ಟಿ ಈ ಕುಲದಲ್ಲಿ ಬೆಳೆದು ಒಂದು ಸರೋವರದಿಂದ ಇನ್ನೊಂದು ಸರೋವರಕ್ಕೆ ಹೋದಂತೆ ಒಂದು ಸುಖದಿಂದ ಇನ್ನೊಂದು ಸುಖವನ್ನು ಪಡೆದಿದ್ದೀಯೆ.

ದೌಷ್ಕುಲೇಯಾ ವಿಶೇಷೇಣ ಕಥಂಚಿತ್ ಪ್ರಗ್ರಹಂ ಗತಾಃ ।
ಬಾಲಭಾವಾದ್ ವಿಕುರ್ವಂತಿ ಪ್ರಾಯಶಃ ಪ್ರಮದಾಃ ಶುಭೇ ॥೨೬॥

ಶುಭಳಾದವಳೇ, ದುಷ್ಕುಲದಲ್ಲಿ ಹುಟ್ಟಿದ ಸ್ತ್ರೀಯರು ಹೇಗೋ ಒಂದು ಒಳ್ಳೆಯ ಸ್ಥಾನವನ್ನು ತಲುಪಿದ ಮೇಲೆ ಬಾಲ್ಯದಲ್ಲಿ ಇದ್ದ ರೀತಿಗಿಂತ ಹೆಚ್ಚಾಗಿ ವಿಕಾರವನ್ನು ಹೊಂದುತ್ತಾರೆ.

ಪೃಥೇ ರಾಜಕುಲೇ ಜನ್ಮ ರೂಪಂ ಚಾಪಿ ತವಾದ್ಭುತಮ್ ।
ತೇನ ತೇನಾಸಿ ಸಂಪನ್ನಾ ಸಮುಪೇತಾ ಚ ಭಾಮಿನೀ ॥೨೭॥

ಪೃಥೆಯೇ, ಆದರೆ ನೀನು ಒಳ್ಳೆಯ ರಾಜಕುಲದಲ್ಲಿ ಜನಿಸಿದ್ದೀಯೆ. ನಿನ್ನ ರೂಪವೂ ಅದ್ಭುತವಾಗಿದೆ. ಆ ಎರಡು ಕಾರಣಗಳಿಂದಲೂ ಒಳ್ಳೆಯ ಗುಣಗಳಿಂದ ಕೂಡಿದ ಕನ್ಯೆಯಾಗಿದ್ದೀಯೆ.

ಸಾ ತ್ವಂ ದರ್ಪಂ ಪರಿತ್ಯಜ್ಯ ಡಂಭಂ ಮಾನಂ ಚ ಮಾನಿನಿ ।
ಆರಾಧ್ಯ ವರದಂ ವಿಪ್ರಂ ಶ್ರೇಯಸಾ ಯೋಕ್ಷ್ಯಸೇ ಪೃಥೇ ॥೨೮॥

ಮಾನಿನಿಯೇ, ಪೃಥೆಯೇ, ಅಂತಹ ನೀನು ದರ್ಪವನ್ನೂ, ಡಂಭವನ್ನೂ, ಅಹಂಕಾರವನ್ನೂ ಬಿಟ್ಟು ವರಪ್ರದನಾದ ಬ್ರಾಹ್ಮಣನನ್ನು ಆರಾಧಿಸಿ ಶ್ರೇಯಸ್ಸನ್ನು ಹೊಂದುವಿ.

ಏವಂ ಪ್ರಾಪ್ಸ್ಯಸಿ ಕಲ್ಯಾಣಿ ಕಲ್ಯಾಣಂ ಮನಸೇಪ್ಸಿತಮ್ ।
ಕೋಪಿತೇ ತು ದ್ವಿಜಶ್ರೇಷ್ಠೇ ಕೃತ್ಸ್ನಂ ದಹ್ಯೇತ ಮೇ ಕುಲಮ್ ॥೨೯॥

ಕಲ್ಯಾಣಿಯೇ, ಹೀಗೆ ಮಾಡಿದರೆ ನಿನ್ನ ಮನಸ್ಸಿಗೆ ಅಭೀಷ್ಟವಾದ ಎಲ್ಲಾ ಕಲ್ಯಾಣವನ್ನೂ ಹೊಂದುವಿ. ದ್ವಿಜಶ್ರೇಷ್ಠನು ಕೋಪಗೊಂಡರೆ ಮಾತ್ರ ನನ್ನ ಕುಲವೆಲ್ಲವೂ ನಾಶವಾದೀತು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂಸಂಹಿತಾಯಾಂ ವೈಯಾಸಿಕ್ಯಾಂ
ವನಪರ್ವಣಿ ಚತುಃನವತಿತದ್ವಿಶತತಮೋಽಧ್ಯಾಯಃ ॥
॥ಇತಿ ಕುಂಡಲಾಹರಣಪರ್ವಣಿ ಕುಂತಿಭೋಜವಾಕ್ಯಂ ನಾಮ ಚತುರ್ಥೋಽಧ್ಯಾಯಃ॥

ಇಲ್ಲಿಗೆ ಮಹಾಭಾರತದ ವನಪರ್ವದಲ್ಲಿ ಇನ್ನೂರ ತೊಂಬತ್ತನಾಲ್ಕನೆಯ
ಅಧ್ಯಾಯ ಮುಗಿಯಿತು.

★ ★ ★ ★

ಇನ್ನೂರ ತೊಂಬತ್ತೈದನೆಯ ಅಧ್ಯಾಯ

ಕುಂತಿಯ ಆಶ್ವಾಸನೆ ಮತ್ತು ಕುಂತಿಭೋಜನ ಅರಮನೆಯಲ್ಲಿ ದುರ್ವಾಸರ ನಿವಾಸಕ್ಕಾಗಿ ಸರ್ವ ವ್ಯವಸ್ಥೆ.

ಕುಂತೀ

ಬ್ರಾಹ್ಮಣಂ ಯಂತ್ರಿತಾ ರಾಜನ್ನುಪಸ್ಥಾಸ್ಯಾಮಿ ಪೂಜಯೇ ।
ಯಥಾಪ್ರತಿಜ್ಞಂ ರಾಜೇಂದ್ರ ನ ಚ ಮಿಥ್ಯಾ ಬ್ರವೀಮ್ಯಹಮ್ ॥೧॥

ಕುಂತೀ– ರಾಜನೇ, ನಾನು ಆ ಬ್ರಾಹ್ಮಣನನ್ನು ನಿಯಮಬದ್ಧಳಾಗಿ ಸತ್ಕರಿಸಿ ನಿನ್ನ ಪ್ರತಿಜ್ಞೆಗೆ ಅನುಗುಣವಾಗಿ ಅವನ ಸೇವೆಯನ್ನು ಮಾಡುವೆನು. ರಾಜೇಂದ್ರನೇ, ನಾನು ಸುಳ್ಳನ್ನು ಮಾತನಾಡುವುದಿಲ್ಲ.

ಏಷ ಚೈವ ಸ್ವಭಾವೋ ಮೇ ಪೂಜಯೇಯಂ ದ್ವಿಜಾನಿತಿ ।
ತವ ಚೈವ ಪ್ರಿಯಂ ಕಾರ್ಯಂ ಶ್ರೇಯಶ್ಚ ಪರಮಂ ಮಮ ॥೨॥

ಬ್ರಾಹ್ಮಣರನ್ನು ಪೂಜಿಸಬೇಕು ಎಂಬ ಈ ವಿಷಯವು ನನ್ನ ಸ್ವಭಾವವೇ ಆಗಿದೆ ಮತ್ತು ನಿನಗೂ ಪ್ರಿಯವನ್ನುಂಟುಮಾಡಬೇಕು ಎಂಬುದು ಸಹ ನನ್ನ ಆಸೆ. ಇದರಿಂದ ನನಗೆ ಪರಮ ಶ್ರೇಯಸ್ಸಾಗುತ್ತದೆ.

ಯದ್ಯೇವೈಷ್ಯತಿ ಸಾಯಾಹ್ನೇ ಯದಿ ಪ್ರಾತರಥೋ ನಿಶಿ ।
ಯದ್ಯರ್ಧರಾತ್ರೇ ಭಗವಾನ್ ನ ಮೇ ಕೋಪಂ ಕರಿಷ್ಯತಿ ॥೩॥

ಪೂಜ್ಯನಾದ ಅವನು ಸಾಯಂಕಾಲದಲ್ಲಾಗಲೀ, ಪ್ರಾತಃಕಾಲದಲ್ಲಾಗಲೀ, ರಾತ್ರಿಯಲ್ಲಾಗಲೀ, ಅರ್ಧರಾತ್ರಿಯಲ್ಲಾಗಲೀ ಬಂದರೂ ನನ್ನ ಮೇಲೆ ಕೋಪ ಮಾಡುವುದಿಲ್ಲ. (ವಿಭಕ್ತಿವ್ಯತ್ಯಾಸದಿಂದ– ನಾನು ಅವನ ಮೇಲೆ ಕೋಪ ಮಾಡುವುದಿಲ್ಲ- ವಾದಿರಾಜರು)

ಲಾಭೋ ಮಮೈಷ ವೈಭೂಯಾನ್ ಯದ್ವೈ ಪೂಜಯತೀ ದ್ವಿಜಾನ್ ।
ಆದೇಶೇ ತವ ತಿಷ್ಠಂತೀ ತೋಷಯಿಷ್ಯೇ ದ್ವಿಜೋತ್ತಮಮ್ ॥೪॥

ನಾನು ನಿನ್ನ ಆದೇಶದಂತೆ ನಡೆದುಕೊಂಡು ಬ್ರಾಹ್ಮಣರನ್ನು ಪೂಜಿಸುವುದರಿಂದ ನನಗೇ ದೊಡ್ಡ ಲಾಭವಿದೆ. ನಾನು ಆ ಬ್ರಾಹ್ಮಣಶ್ರೇಷ್ಠನನ್ನು ಸಂತೋಷಪಡಿಸುವೆನು.

ವಿಸ್ರಬ್ಧೋ ಭವ ರಾಜೇಂದ್ರ ನ ವ್ಯಲೀಕಂ ದ್ವಿಜೋತ್ತಮಃ ।
ವಸನ್ ಪ್ರಾಪ್ಸ್ಯತಿ ತೇ ಗೇಹೇ ಸತ್ಯಮೇತದ್ ಬ್ರವೀಮಿ ತೇ ॥೫॥

ರಾಜೇಂದ್ರನೇ, ನೀನು ಸಮಾಧಾನದಿಂದಿರು. ನಿನ್ನ ಮನೆಯಲ್ಲಿ ವಾಸಮಾಡುವ ಆ ಬ್ರಾಹ್ಮಣೋತ್ತಮನಿಗೆ ಯಾವ ಅಪಚಾರವೂ ಆಗುವುದಿಲ್ಲ. ನಾನು ಇದನ್ನು ನಿನಗೆ ಸತ್ಯವಾಗಿ ಹೇಳುತ್ತಿದ್ದೇನೆ.

ಯತ್ ಪ್ರಿಯಂ ಚ ದ್ವಿಜಸ್ಯಾಸ್ಯ ಹಿತಂ ಚೈವ ತವಾನಘ ।
ಯತಿಷ್ಯಾಮಿ ತಥಾ ರಾಜನ್ ವೈತು ತೇ ಮಾನಸೋ ಜ್ವರಃ ॥೬॥

ಎಲೈ ರಾಜನೇ, ಎಲೈ ಅನಘನೇ, ಬ್ರಾಹ್ಮಣನಿಗೆ ಯಾವುದು ಪ್ರಿಯವೋ ಮತ್ತು ನಿನಗೆ ಯಾವುದು ಹಿತವೋ ನಾನು ಅದನ್ನೇ ಮಾಡಲು ಪ್ರಯತ್ನಿಸುವೆನು. ನಿನ್ನ ಮನಸ್ಸಿನ ಸಂತಾಪವು ದೂರವಾಗಲಿ.

ಬ್ರಾಹ್ಮಣಾ ಹಿ ಮಹಾಭಾಗಾಃ ಪೂಜಿತಾಃ ಪೃಥಿವೀಪತೇ ।
ತಾರಣಾಯ ಸಮರ್ಥಾಃ ಸ್ಯುರ್ವಿಪರೀತೇ ವಧಾಯ ಚ ॥೭॥

ಎಲೈ ಪೃಥಿವೀಪತಿಯೇ, ಮಹಾನುಭಾವರಾದ ಬ್ರಾಹ್ಮಣರನ್ನು ಪೂಜಿಸಿದರೆ ಅವರು ನಮ್ಮನ್ನು ಆಪತ್ತಿನಿಂದ ಪಾರುಮಾಡಲು ಸಮರ್ಥರಾಗುತ್ತಾರೆ. ಅದಕ್ಕೆ ವಿಪರೀತವಾಗಿ ನಡೆದುಕೊಂಡರೆ ನಮ್ಮನ್ನು ನಾಶಮಾಡಲೂ ಸಮರ್ಥರಾಗುತ್ತಾರೆ.

ಸಾಹಮೇತದ್ ವಿಜಾನಂತೀ ತೋಷಯಿಷ್ಯೇ ದ್ವಿಜೋತ್ತಮಮ್ ।
ನ ಮತ್ಕೃತೇ ವ್ಯಥಾಂ ರಾಜನ್ ಪ್ರಾಪ್ಸ್ಯಸಿ ದ್ವಿಜಸತ್ತಮಾತ್ ॥೮॥

ಇದನ್ನು ತಿಳಿದ ನಾನು ಆ ದ್ವಿಜಶ್ರೇಷ್ಠನನ್ನು ಸಂತೋಷಪಡಿಸುವೆನು. ರಾಜನೇ, ನನ್ನ ಸಲುವಾಗಿ ನೀನು ಆ ಬ್ರಾಹ್ಮಣಶ್ರೇಷ್ಠರಿಂದ ವ್ಯಥೆಯನ್ನು ಪಡುವ ಪ್ರಸಂಗವು ಬರುವುದಿಲ್ಲ.

ಅಪರಾಧೇಽಪಿ ರಾಜೇಂದ್ರ ರಾಜ್ಞಾಮಶ್ರೇಯಸೇ ದ್ವಿಜಾಃ ।
ಭವಂತಿ ಚ್ಯವನೋ ಯದ್ವತ್ ಸುಕನ್ಯಾಯಾಃ ಕೃತೇ ಪುರಾ ॥೯॥

ರಾಜೇಂದ್ರನೇ, ಬ್ರಾಹ್ಮಣರಿಗೆ ಅಪರಾಧವನ್ನು ಮಾಡಿದರೆ ಹಿಂದೆ ಸುಕನ್ಯೆಯ ವಿಷಯದಲ್ಲಿ ಚ್ಯವನರು ನಡೆದುಕೊಂಡಂತೆ ಬ್ರಾಹ್ಮಣರು ರಾಜರ ಅಶ್ರೇಯಸ್ಸಿಗೂ ಕಾರಣರಾಗುತ್ತಾರೆ.

ನಿಯಮೇನ ಪರೇಣಾಹಮುಪಸ್ಥಾಸ್ಯೇ ದ್ವಿಜೋತ್ತಮಮ್ ।
ಯಥಾ ತ್ವಯಾ ನರೇಂದ್ರೇದಂ ಭಾಷಿತಂ ಬ್ರಾಹ್ಮಣಂ ಪ್ರತಿ ॥೧೦॥

ನರೇಂದ್ರನೇ, ನೀನು ಆ ಬ್ರಾಹ್ಮಣರಿಗೆ ಮಾತುಕೊಟ್ಟಂತೆ ನಾನು ಬಹಳ ನಿಯಮದಿಂದ ಆ ಬ್ರಾಹ್ಮಣರ ಸೇವೆಯನ್ನು ಮಾಡುವೆನು.

ಏವಂ ಬ್ರುವಂತೀಂ ಬಹುಶಃ ಪರಿಷ್ವಜ್ಯ ಸಮರ್ಥ್ಯ ಚ ।
ಇತಿ ಚೇತಿ ಚ ಕರ್ತವ್ಯಂ ರಾಜಾ ಸರ್ವಮಥಾದಿಶತ್ ॥೧೦.೧॥

ಹೀಗೆ ಮಾತನಾಡಿದ ಕುಂತಿಯನ್ನು ರಾಜನು ಅನುಮೋದಿಸಿ ಅನೇಕ ಬಾರಿ ಆಲಿಂಗಿಸಿ ಹೀಗೆ ಹೀಗೆ ಮಾಡಬೇಕು ಎಂದು ಆದೇಶವನ್ನು ನೀಡಿದನು.

ರಾಜಾ

ಏವಮೇತತ್ ತ್ವಯಾ ಭದ್ರೇ ಕರ್ತವ್ಯಮವಿಶಂಕಯಾ ।
ಮದ್ಧಿತಾರ್ಥಂ ತಥಾಽಽತ್ಮಾರ್ಥಂ ಕುಲಾರ್ಥಂ ಚಾಪ್ಯನಿಂದಿತೇ ॥೧೧॥

ರಾಜ– ಎಲೌ ಮಂಗಳಸ್ವರೂಪಳೇ, ಅನಿಂದಿತೆಯೇ, ನೀನು ಯಾವ ಸಂಶಯವನ್ನೂ ಪಡದೆ ನನ್ನ ಹಿತದ ಸಲುವಾಗಿ, ನಿನ್ನ ಹಿತದ ಸಲುವಾಗಿ ಮತ್ತು ಕುಲದ ಸಲುವಾಗಿ ಹೀಗೆ ನಡೆದುಕೊಳ್ಳಬೇಕು.

ಏವಮುಕ್ತ್ವಾ ತು ತಾಂ ಕನ್ಯಾಂ ಕುಂತಿಭೋಜೋ ಮಹಾಯಶಾಃ ।
ಪೃಥಾಂ ಪರಿದದೌ ತಸ್ಮೈ ದ್ವಿಜಾಯ ದ್ವಿಜವತ್ಸಲಃ ॥೧೨॥

ಹೀಗೆ ಹೇಳಿ ಮಹಾಕೀರ್ತಿವಂತನಾದ ಬ್ರಾಹ್ಮಣ ವತ್ಸಲನಾದ ಕುಂತಿಭೋಜನು ಆ ಕನ್ಯೆಯನ್ನು ಆ ಬ್ರಾಹ್ಮಣನಿಗೆ ಸೇವೆಗಾಗಿ ನೀಡಿದನು.

ಇಯಂ ಬ್ರಹ್ಮನ್ ಮಮ ಸುತಾ ಬಾಲಾ ಸುಖವಿವರ್ಧಿತಾ ।
ಅಪರಾಧ್ಯೇತ ಯತ್ಕಿಂಚಿನ್ನ ತತ್ ಕಾರ್ಯಂ ಹೃದಿ ತ್ವಯಾ ॥೧೩॥

ಬ್ರಾಹ್ಮಣರೇ, ಇವಳು ನನ್ನ ಮಗಳು. ಚಿಕ್ಕವಳು ಮತ್ತು ಸುಖವಾಗಿ ಬೆಳೆದವಳು. ಅವಳು ಏನಾದರೂ ಅಪರಾಧವನ್ನು ಮಾಡಿದರೆ ಅದನ್ನು ನೀವು ಮನಸ್ಸಿಗೆ ತಂದುಕೊಳ್ಳಬಾರದು.

ದ್ವಿಜಾತಯೋ ಮಹಾಭಾಗಾ ವೃದ್ಧಬಾಲತಪಸ್ವಿಷು ।
ಭವಂತ್ಯಕ್ರೋಧನಾಃ ಪ್ರಾಯೋ ಹ್ಯಪರಾದ್ಧೇಷು ನಿತ್ಯದಾ ॥೧೪॥

ಮಹಾನುಭಾವರಾದ ಬ್ರಾಹ್ಮಣರು ವೃದ್ಧರ ವಿಷಯದಲ್ಲಿ, ಬಾಲರ ವಿಷಯದಲ್ಲಿ, ತಪಸ್ವಿಗಳ ವಿಷಯದಲ್ಲಿ ನಿತ್ಯವೂ ಕ್ಷಮೆಯುಳ್ಳವರಾಗುತ್ತಾರೆ. ಅಪರಾಧವನ್ನು ಮಾಡಿದವರ ವಿಷಯದಲ್ಲಿಯೂ ಹೆಚ್ಚಾಗಿ ಕ್ಷಮೆಯನ್ನು ಹೊಂದಿರುತ್ತಾರೆ.

ಸುಮಹತ್ಯಪರಾಧೇಽಪಿ ಕ್ಷಾಂತಿಃ ಕಾರ್ಯಾ ದ್ವಿಜಾತಿಭಿಃ ।
ಯಥಾಶಕ್ತಿ ಯಥೋತ್ಸಾಹಂ ಪೂಜಾ ಗ್ರಾಹ್ಯಾ ದ್ವಿಜೋತ್ತಮ ॥೧೫॥

ದೊಡ್ಡ ಅಪರಾಧವನ್ನು ಮಾಡಿದರೂ ಸಹ ಬ್ರಾಹ್ಮಣರು ಕ್ಷಮೆಯನ್ನೇ ಮಾಡಬೇಕು. ಎಲೈ ದ್ವಿಜೋತ್ತಮನೇ, ಅವಳ ಶಕ್ತಿಗೆ ಮತ್ತು ಉತ್ಸಾಹಕ್ಕೆ ಅನುಗುಣವಾಗಿ ಮಾಡಿದ ಪೂಜೆಯನ್ನು ಸ್ವೀಕರಿಸಬೇಕು.

ವೈಶಂಪಾಯನಃ

ತಥೇತಿ ಬ್ರಾಹ್ಮಣೇನೋಕ್ತೇ ಸ ರಾಜಾ ಪ್ರೀತಮಾನಸಃ ।
ಹಂಸಚಂದ್ರಾಂಶುಸಂಕಾಶಂ ಗೃಹಮಸ್ಮೈ ನ್ಯವೇದಯತ ॥೧೬॥

ವೈಶಂಪಾಯನ– ಆ ಬ್ರಾಹ್ಮಣನು ಹಾಗೆಯೇ ಆಗಲಿ ಎಂದು ಹೇಳಲು ರಾಜನು ಸಂತೋಷಗೊಂಡ ಮನಸ್ಸುಳ್ಳವನಾಗಿ ಹಂಸದಂತೆ ಅಥವಾ ಚಂದ್ರಕಿರಣಗಳಂತೆ ಶುಭ್ರವಾದ ಒಂದು ಮನೆಯನ್ನು ಅವರಿಗೆ ನಿವೇದಿಸಿದನು.

ತತ್ರಾಗ್ನಿಶರಣೇ ಕ್ಲೃಪ್ತಮಾಸನಂ ತಸ್ಯ ಭಾನುಮತ್ ।
ಆಹಾರಾದಿ ಚ ಸರ್ವಂ ತತ್ತಥೈವ ಪ್ರತ್ಯವೇದಯತ್ ॥೧೭॥

ಅಲ್ಲಿ ಅಗ್ನಿಶಾನೆಯಲ್ಲಿ ಅವರಿಗೆ ಕ್ಲಪ್ತವಾದ ಪ್ರಕಾಶಮಾನವಾದ ಒಂದು ಆಸನವನ್ನು ಕಲ್ಪಿಸಿ ಮತ್ತು ಆಹಾರಾದಿ ಎಲ್ಲ ವಿಷಯಗಳನ್ನೂ ಅವನು ಹೇಳಿದಂತೆಯೇ ಅವನಿಗೆ ನಿವೇದಿಸಿದನು.

ನಿಕ್ಷಿಪ್ಯ ರಾಜಪುತ್ರೀ ತು ತಂದ್ರೀಂ ಮಾನಂ ತಥೈವ ಚ ।
ಆತಸ್ಥೇ ಪರಮಂ ಯತ್ನಂ ಬ್ರಾಹ್ಮಣಸ್ಯಾಭಿರಾಧನೇ ॥೧೮॥

ರಾಜಪುತ್ರಿಯಾದರೂ ಆಲಸ್ಯವನ್ನೂ, ಅಹಂಕಾರವನ್ನೂ ದೂರದಲ್ಲಿಟ್ಟು ಬ್ರಾಹ್ಮಣನನ್ನು ಆರಾಧಿಸುವ ವಿಷಯದಲ್ಲಿ ಪರಮಪ್ರಯತ್ನವನ್ನು ಮಾಡಿದಳು.

ತತ್ರ ಸಾ ಬ್ರಾಹ್ಮಣಂ ಗತ್ವಾ ಪೃಥಾ ಶೌಚಪರಾ ಸತೀ ।
ವಿಧಿವತ್ಪರಿಚಾರಾರ್ಹಂ ದೇವವತ್ ಕುರ್ಯತೋಷಯತ್ ॥೧೯॥

ಆ ಗೃಹದಲ್ಲಿ ಶೌಚಪರಳಾದ ಪೃಥೆಯು ಆ ಬ್ರಾಹ್ಮಣರ ಸಮೀಪಕ್ಕೆ ಹೋಗಿ ಸತ್ಕಾರಕ್ಕೆ ಯೋಗ್ಯವಾದ ಅವರನ್ನು ವಿಧಿವತ್ತಾಗಿ ದೇವತೆಯಂತೆ ಸಂತೋಷಪಡಿಸಿದಳು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂಸಂಹಿತಾಯಾಂ ವೈಯಾಸಿಕ್ಯಾಂ
ವನಪರ್ವಣಿ ಪಂಚನವತಿತದ್ವಿಶತತಮೋऽಧ್ಯಾಯಃ ॥
॥ ಇತಿ ಕುಂಡಲಾಹರಣಪರ್ವಣಿ ಕುಂತೀವಾಕ್ಯಂ ನಾಮ ಪಂಚಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವನಪರ್ವದಲ್ಲಿ ಇನ್ನೂರ ತೊಂಬತ್ತೈದನೆಯ
ಅಧ್ಯಾಯ ಮುಗಿಯಿತು.

★ ★ ★ ★

ಇನ್ನೂರ ತೊಂಬತ್ತಾರನೆಯ ಅಧ್ಯಾಯ

ಕುಂತಿಯ ಸೇವೆಯಿಂದ ಸಂತುಷ್ಟರಾದ ದುರ್ವಾಸರಿಂದ ಅವಳಿಗೆ ಮಂತ್ರೋಪದೇಶ. ಕುಂತಿಭೋಜನ ಜೊತೆಯಲ್ಲಿ ಮಾತನಾಡಿ ಅಂತರ್ಧಾನ.

ವೈಶಂಪಾಯನಃ

ಸಾ ತು ಕನ್ಯಾ ಮಹಾರಾಜ ಬ್ರಾಹ್ಮಣಂ ಸಂಶಿತವ್ರತಮ್ ।
ತೋಷಯಾಮಾಸ ಶುದ್ಧೇನ ಮನಸಾ ಸಂಶಿತವ್ರತಾ ॥೧॥

ವೈಶಂಪಾಯನ– ಮಹಾರಾಜನೇ, ಆ ವ್ರತಶೀಲೆಯಾದ ಕನ್ಯೆಯಾದರೂ ವ್ರತನಿಷ್ಠನಾದ ಆ ಬ್ರಾಹ್ಮಣನನ್ನು ಶುದ್ಧಮನಸ್ಸಿನಿಂದ ಸಂತೋಷಪಡಿಸಿದಳು.

ಪ್ರಾತರೇಷ್ಯಾಮ್ಯಥೇತ್ಯುಕ್ತ್ವಾ ಕದಾಚಿದ್ ದ್ವಿಜಸತ್ತಮಃ ।
ತತ ಆಯಾತಿ ರಾಜೇಂದ್ರ ಸಾಯಂ ರಾತ್ರಾವಥೋ ಪುನಃ ॥೨॥

ಎಲೈ ರಾಜೇಂದ್ರನೇ, ಆ ದ್ವಿಜಶ್ರೇಷ್ಠನು ಒಮ್ಮೊಮ್ಮೆ ನಾಳೆಯ ಬೆಳಿಗ್ಗೆ ಬರುತ್ತೇನೆಂದು ಹೇಳಿ ಸಾಯಂಕಾಲದಲ್ಲಿಯೋ ಅಥವಾ ಮರುರಾತ್ರಿಯಲ್ಲಿಯೋ ಬರುತ್ತಾನೆ.

ತಂ ಚ ಸರ್ವಾಸು ವೇಲಾಸು ಭಕ್ಷ್ಯಭೋಜ್ಯಪ್ರತಿಶ್ರಯೈಃ ।
ಪೂಜಯಾಮಾಸ ಸಾ ಕನ್ಯಾ ವರ್ಧಮಾನೈಸ್ತು ಸರ್ವದಾ ॥೩॥

ಆ ಬ್ರಾಹ್ಮಣನನ್ನು ಆ ಕನ್ಯೆಯು ಎಲ್ಲ ಸಮಯಗಳಲ್ಲಿಯೂ ಪ್ರತಿದಿನವೂ ಅಭಿವೃದ್ಧಿಯನ್ನು ಹೊಂದುವ ಭಕ್ಷ್ಯಭೋಜ್ಯಗಳಿಂದಲೂ ವಿನಯದ ಮಾತುಗಳಿಂದಲೂ ಪೂಜಿಸಿದಳು.

ಅನ್ನಾದಿಸಮುದಾಚಾರಃ ಶಯ್ಯಾಸನಕೃತಸ್ತಥಾ ।
ದಿವಸೇ ದಿವಸೇ ತಸ್ಯ ವರ್ಧತೇ ನ ತು ಹೀಯತೇ ॥೪॥

ಅನ್ನಾದಿ ಉಪಚಾರವೂ, ಶಯ್ಯಾಸನಾದಿ ಉಪಚಾರವೂ ಅವನಿಗೆ ದಿನದಿನಕ್ಕೂ ಅಭಿವೃದ್ಧಿಯಾಯಿತೇ ಹೊರತು ಕಡಿಮೆಯಾಗಲಿಲ್ಲ.

ನಿರ್ಭರ್ತ್ಸನಾಪವಾದೈಶ್ಚ ತಥೈವಾಪ್ರಿಯಯಾ ಗಿರಾ ।
ಬ್ರಾಹ್ಮಣಸ್ಯ ಪೃಥಾ ರಾಜನ್ ನ ಚಕಾರಾಪ್ರಿಯಂ ತದಾ ॥೫॥

ಎಲೈ ರಾಜನೇ, ಕುಂತಿಯು ಗದರಿಸುವುದರಿಂದಲಾಗಲೀ, ನಿಂದಿಸುವುದರಿಂದಲಾಗಲೀ ಅಥವಾ ಅಹಿತವಾದ ಮಾತುಗಳಿಂದಲಾಗಲೀ ಆ ಬ್ರಾಹ್ಮಣನಿಗೆ ಅಪ್ರಿಯವನ್ನು ಮಾಡಲಿಲ್ಲ.

ವ್ಯಸ್ತೇ ಕಾಲೇ ಪುನಶ್ಚೈತಿ ನ ಚೈತಿ ಬಹುಶೋ ದ್ವಿಜಃ ।
ಸುದುರ್ಲಭಮಿದಂ ಚಾನ್ನಂ ದೀಯತಾಮಿತಿ ಸೋಽಬ್ರವೀತ್ ।
ಕೃತಮೇವ ಹಿ ತತ್ಸರ್ವಂ ಪೃಥಾ ತಸ್ಮೈ ನ್ಯವೇದಯತ್ ॥೬॥

ಅಕಾಲದಲ್ಲಿ ಬರುತ್ತಾನೆ, ಆ ಬ್ರಾಹ್ಮಣನು ಎಷ್ಟೋ ಸಮಯದಲ್ಲಿ ಬರುವುದೇ ಇಲ್ಲ. ದುರ್ಲಭವಾದ ಆಹಾರವನ್ನು ಉದ್ದೇಶಿಸಿ ಇದನ್ನು ಕೊಡು ಎಂದು ಕೇಳುತ್ತಾನೆ. ಅವನು ಕೇಳಿದಾಗಲೆಲ್ಲಾ ಪೃಥೆಯು ಅವನಿಗೆ ಎಲ್ಲವೂ ಸಿದ್ಧವಾಗಿದೆ ಎಂದು ಹೇಳಿ ನಿವೇದಿಸಿದಳು.

ಶಿಷ್ಯವತ್ ಪುತ್ರವಚ್ಚೈವ ಸ್ವಸೃವಚ್ಚ ಸುಸಂಯತಾ ।
ಯಥೋಪಜೋಷಂ ರಾಜೇಂದ್ರ ದ್ವಿಜಾತಿಪ್ರವರಸ್ಯ ಸಾ ॥೭॥

ಪ್ರೀತಿಮುತ್ಪಾದಯಾಮಾಸ ಕನ್ಯಾರತ್ನಮತಂದ್ರಿತಾ ॥೮॥

ಎಲೈ ರಾಜೇಂದ್ರನೇ, ಅವಳು ಆ ಬ್ರಾಹ್ಮಣಶ್ರೇಷ್ಠನಿಗೆ ಶಿಷ್ಯಳಂತೆ, ಪುತ್ರನಂತೆ, ಸೊಸೆಯಂತೆ ಯಾವಾಗಲೂ ನಿಯತವಾದ ಮಾತನ್ನುಳ್ಳವಳಾಗಿ ಅವನಿಗೆ ಹಿತವಾಗುವಂತೆ ಆಲಸ್ಯವಿಲ್ಲದೆ ನಡೆದುಕೊಂಡು ಕನ್ಯಾರತ್ನಳಾದ ಅವಳು ಅವನ ಪ್ರೀತಿಯನ್ನು ಸಂಪಾದಿಸಿದಳು.

ತಸ್ಯಾಸ್ತು ಶೀಲವೃತ್ತೇನ ತುತೋಷ ದ್ವಿಜಸತ್ತಮಃ ।
ಅವಧಾನೇನ ಭೂಯೋಽಸ್ಯಾಃ ಪರಂ ಯತ್ನಮಥಾಕರೋತ್ ॥೯॥

ಆ ದ್ವಿಜಶ್ರೇಷ್ಠನು ಅವಳ ಶೀಲವೃತ್ತಗಳಿಂದಲೂ ಮತ್ತು ಏಕಾಗ್ರತೆಯಿಂದಲೂ ಸಂತೋಷಪಟ್ಟನು. ಅವನು ಅವಳಿಗೆ ಅನುಗ್ರಹವನ್ನು ಮಾಡಲು ಪ್ರಯತ್ನಪಟ್ಟನು.

ತಾಂ ಪ್ರಭಾತೇ ಚ ಸಾಯಂ ಚ ಪಿತಾ ಪಪ್ರಚ್ಛ ಭಾರತ ।
ಅಪಿ ತುಷ್ಯತಿ ತೇ ಪುತ್ರಿ ಬ್ರಾಹ್ಮಣಃ ಪರಿಚರ್ಯಯಾ ॥೧೦॥

ಎಲೈ ಭಾರತನೇ, ಅವಳನ್ನು ತಂದೆಯು ಪ್ರಾತಃಕಾಲದಲ್ಲಿಯೂ ಮತ್ತು ಸಾಯಂಕಾಲದಲ್ಲಿಯೂ ಮಗಳೇ, ನಿನ್ನ ಸೇವೆಯಿಂದ ಬ್ರಾಹ್ಮಣನು ಸಂತೋಷದಿಂದಿದ್ದಾನೆಯೇ ಎಂದು ಕೇಳುತ್ತಿದ್ದನು.

ತಂ ತು ಪರಮಿತ್ಯೇವ ಪ್ರತ್ಯುವಾಚ ಯಶಸ್ವಿನೀ ।
ತತಃ ಪ್ರೀತಿಮವಾಪಾಗ್ರ್ಯಂ ಕುಂತಿಭೋಜೋ ಮಹಾಮನಾಃ ॥೧೧॥

ಯಶಸ್ವಿನಿಯಾದ ಅವಳು ಪರಮಸಂತೋಷದಿಂದ ಇದ್ದಾನೆ ಎಂದು ಉತ್ತರವನ್ನು ಕೊಡುತ್ತಿದ್ದಳು. ಆಗ ಮಹಾಮನನಾದ ಕುಂತಿಭೋಜನು ಶ್ರೇಷ್ಠವಾದ ಸಂತೋಷವನ್ನು ಹೊಂದಿದನು.

ತತಃ ಸಂವತ್ಸರೇ ಪೂರ್ಣೇ ಯದಾऽಸೌ ಜಪತಾಂ ವರಃ ।
ನಾಪಶ್ಯದ್ ದುಷ್ಕೃತಂ ಕಿಂಚಿತ್ ಪೃಥಾಯಾಃ ಸೌಹೃದೇ ರತಃ ।
ತತಃ ಪ್ರೀತಮನಾ ಭೂತ್ವಾ ಸ ಏನಾಂ ಬ್ರಾಹ್ಮಣೋऽಬ್ರವೀತ್ ॥೧೨॥

ಒಂದು ಸಂವತ್ಸರವು ಪೂರ್ಣವಾಗುತ್ತಿರಲು ಜಪಮಾಡುವವರಲ್ಲಿ ಶ್ರೇಷ್ಠನಾದ ಆ ಬ್ರಾಹ್ಮಣನು ಕುಂತಿಯಲ್ಲಿ ಯಾವ ಅಪರಾಧವನ್ನೂ ಕಾಣದೆ ಅವಳ ಮೇಲೆ ಪ್ರೀತಿಯುಳ್ಳವನಾಗಿ ಅವಳನ್ನು ಕುರಿತು ಮಾತನಾಡಿದನು.

ಪ್ರೀತೋऽಸ್ಮಿ ಪರಮಂ ಭದ್ರೇ ಪರಿಚಾರೇಣ ತೇ ಶುಭೇ ।
ವರಾನ್ ವೃಣೀಷ್ವ ಕಲ್ಯಾಣಿ ದುರಾಪಾನ್ ಮಾನುಷೈರಿಹ ॥೧೩॥

ಯೈಸ್ತ್ವಂ ಸೀಮಂತಿನೀಃ ಸರ್ವಾ ಯಶಸಾಭಿಭವಿಷ್ಯಸಿ ॥೧೪॥

ಮಂಗಳಸ್ವರೂಪಳೇ, ಶುಭಳಾದವಳೇ, ನಿನ್ನ ಸೇವೆಯಿಂದ ನಾನು ಸಂತುಷ್ಟನಾಗಿದ್ದೇನೆ. ಕಲ್ಯಾಣಿಯೇ, ನೀನು ಮನುಷ್ಯರು ಪಡೆಯಲು ಸಾಧ್ಯವಿಲ್ಲದ ವರಗಳನ್ನು ನನ್ನಿಂದ ಪಡೆ. ಆ ವರಗಳಿಂದ ನೀನು ನಿನ್ನ ಕೀರ್ತಿಯಿಂದ ಎಲ್ಲಾ ಸುಮಂಗಲಿಯರನ್ನೂ ಮೀರಿ ನಿಲ್ಲುವೆ (ಎಂದು ಹೇಳಿದನು).

ಕುಂತೀ

ಕೃತಾನಿ ಮಮ ಸರ್ವಾಣಿ ಯಸ್ಯಾ ಮೇ ವೇದವಿತ್ತಮ ।
ತ್ವಂ ಪ್ರಸನ್ನಃ ಪಿತಾ ಚೈವ ಕೃತಂ ವಿಪ್ರ ವರೈರ್ಮಮ ॥೧೫॥

ಕುಂತೀ– ಎಲೈ ವೇದಜ್ಞರಲ್ಲಿ ಶ್ರೇಷ್ಠನಾದವನೇ, ನಾನು ಮಾಡಿದ ಎಲ್ಲಾ ಸೇವೆಗಳಿಂದ ನೀನೂ ಪ್ರಸನ್ನನಾಗಿ, ತಂದೆಯೂ ಸಂತುಷ್ಟನಾಗಿದ್ದರೆ ಅಷ್ಟೇ ಸಾಕು. ನನಗೆ ಯಾವ ವರಗಳೂ ಬೇಡ.

ಬ್ರಾಹ್ಮಣಃ

ಯದಿ ನೇಚ್ಛಸಿ ಮತ್ತಸ್ತ್ವಂ ವರಂ ಭದ್ರೇ ಶುಚಿಸ್ಮಿತೇ ।
ಇಮಂ ಮಂತ್ರಂ ಗೃಹಾಣ ತ್ವಮಾಹ್ವಾನಾಯ ದಿವೌಕಸಾಮ್ ॥೧೬॥

ಬ್ರಾಹ್ಮಣ– ಭದ್ರಳೇ, ಶುಚಿಸ್ಮಿತೆಯೇ, ನಿನಗೆ ಯಾವ ವರವೂ ಬೇಡದಿದ್ದರೆ ದೇವತೆಗಳನ್ನು ಆಹ್ವಾನಮಾಡುವ ಈ ಮಂತ್ರವನ್ನು ನನ್ನಿಂದ ತೆಗೆದುಕೋ.

ಯಂ ಯಂ ದೇವಂ ತ್ವಮೇತೇನ ಮಂತ್ರೇಣಾವಾಹಯಿಷ್ಯಸಿ ।
ತೇನ ತೇನ ವಶೇ ಭದ್ರೇ ಸ್ಥಾತವ್ಯಂ ತೇ ಭವಿಷ್ಯತಿ ॥೧೭॥

ಈ ಮಂತ್ರದಿಂದ ನೀನು ಯಾವ ಯಾವ ದೇವತೆಗಳನ್ನು ಆಹ್ವಾನ ಮಾಡುವೆಯೋ ಭದ್ರೆಯೇ, ನೀನು ಆಯಾ ದೇವತೆಗಳ ವಶದಲ್ಲಿ ಇರಬೇಕಾಗುವುದು.

ಅಕಾಮೋ ವಾ ಸಕಾಮೋ ವಾ ಸ ಸಮೇಷ್ಯತಿ ತೇ ವಶೇ ।
(ತಸ್ಯ ತಸ್ಯ ಪ್ರಸಾದಾತ್ ತೇ ರಾಜ್ಞಿ ಪುತ್ರೋ ಭವಿಷ್ಯತಿ)
ವಿಬುಧೋ ಮಂತ್ರಸಂಶಾಂತೋ ಭವೇದ್ ಭೃತ್ಯ ಇವಾನತಃ ॥೧೮॥

ಆ ದೇವತೆಯು ತನಗೆ ಇಷ್ಟವಿರಲಿ, ಇಲ್ಲದಿರಲಿ ನಿನಗೆ ವಶನಾಗುವನು. ಈ ಮಂತ್ರದ ಪ್ರಭಾವದಿಂದ ದೇವತೆಯು ಶಾಂತನಾಗಿ ಭೃತ್ಯನಂತೆ ನಿನಗೆ ವಶನಾಗುವನು.

ವೈಶಂಪಾಯನಃ

ನ ಶಶಾಕ ದ್ವಿತೀಯಂ ಸಾ ಪ್ರತ್ಯಾಖ್ಯಾತುಮನಿಂದಿತಾ ।
ತಂ ವೈ ದ್ವಿಜಾತಿಪ್ರವರಂ ತದಾ ಶಾಪಭಯಾನ್ನೃಪ ॥೧೯॥

ವೈಶಂಪಾಯನ– ಎಲೈ ರಾಜನೇ, ಆ ದ್ವಿಜಶ್ರೇಷ್ಠನು ಶಾಪವನ್ನು ಕೊಡಬಹುದೆಂಬ ಭಯದಿಂದ ಅನಿಂದಿತೆಯಾದ ಅವಳು ಅವನ ಈ ಎರಡನೆಯ ಸಲಹೆಯನ್ನು ನಿರಾಕರಿಸಲು ಸಾಧ್ಯವಾಗಲಿಲ್ಲ.

ತತಸ್ತಾಮನವದ್ಯಾಂಗೀಂ ಗ್ರಾಹಯಾಮಾಸ ಸ ದ್ವಿಜಃ ।
ಮಂತ್ರಗ್ರಾಮಂ ತದಾ ರಾಜನ್ನಥರ್ವಶಿರಸಿ ಶ್ರುತಮ್ ।
ತಂ ಪ್ರದಾಯ ತು ರಾಜೇಂದ್ರ ಕುಂತಿಭೋಜಮುವಾಚ ಹ ॥೨೦॥

ಎಲೈ ರಾಜನೇ, ಅನಂತರ ಆ ಬ್ರಾಹ್ಮಣನು ಅನವದ್ಯಾಂಗಿಯಾದ ಅವಳಿಗೆ ಅಥರ್ವವೇದದಲ್ಲಿ ಪ್ರಸಿದ್ಧವಾದ ಮಂತ್ರಸಮೂಹವನ್ನು ಉಪದೇಶ ಮಾಡಿದನು. ಎಲೈ ರಾಜೇಂದ್ರನೇ, ಅವಳಿಗೆ ಮಂತ್ರೋಪದೇಶವನ್ನು ನೀಡಿ ಕುಂತಿಭೋಜನನ್ನು ಕುರಿತು ಹೀಗೆ ಮಾತನಾಡಿದನು.

ಉಷಿತೋಽಸ್ಮಿ ಸುಖಂ ರಾಜನ್ ಕನ್ಯಯಾ ಪರಿತೋಷಿತಃ ।
ತವ ಗೇಹೇಷು ವಿಹಿತಃ ಸದಾ ಸುಪ್ರತಿಪೂಜಿತಃ ॥೨೧॥

ಸಾಧಯಿಷ್ಯಾಮಹೇ ತಾವದಿತ್ಯುಕ್ತ್ವಾ ಽಂತರಧೀಯತ ॥೨೨॥

ಎಲೈ ರಾಜನೇ, ನಿನ್ನ ಮನೆಯಲ್ಲಿ ನಾನು ಸುಖವಾಗಿ ವಾಸಮಾಡಿದ್ದೇನೆ. ನಿನ್ನ ಪುತ್ರಿಯಿಂದಲೂ ಚೆನ್ನಾಗಿ ಪೂಜಿಸಲ್ಪಟ್ಟು ನಿನ್ನ ಮನೆಯಲ್ಲಿ ಸಂತೋಷಪಟ್ಟಿದ್ದೇನೆ. ಈಗ ನಾನು ಹೋಗಿಬರುತ್ತೇನೆ ಎಂದು ಹೇಳಿ ಅಂತರ್ಧಾನವನ್ನು ಹೊಂದಿದನು.

ಸ ತು ರಾಜಾ ದ್ವಿಜಂ ದೃಷ್ಟ್ವಾ ತತ್ಕೃವಾಂತರ್ಹಿತಂ ತದಾ ।
ಬಭೂವ ವಿಸ್ಮಯಾವಿಷ್ಟಃ ಪೃಥಾಂ ಚ ಸಮಪೂಜಯತ್ ॥೨೩॥

ಆ ರಾಜನಾದರೂ ಬ್ರಾಹ್ಮಣನು ಅಂತರ್ಧಾನವನ್ನು ಹೊಂದಿದ್ದನ್ನು ನೋಡಿ ವಿಸ್ಮಯಾವಿಷ್ಟನಾಗಿ ಕುಂತಿಯನ್ನು ಸತ್ಕರಿಸಿದನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂಸಂಹಿತಾಯಾಂ ವೈಯಾಸಿಕ್ಯಾಂ
ವನಪರ್ವಣಿ ಷಟ್‌ನವತಿತದ್ವಿಶತತಮೋಽಧ್ಯಾಯಃ ॥
॥ ಇತಿ ಕುಂಡಲಾಹರಣಪರ್ವಣಿ ಪೃಥಯಾಮಂತ್ರಪ್ರಾಪ್ತಿನಾಮಾ ಷಷ್ಠೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವನಪರ್ವದಲ್ಲಿ ಇನ್ನೂರ ತೊಂಬತ್ತಾರನೆಯ
ಅಧ್ಯಾಯ ಮುಗಿಯಿತು.

★ ★ ★ ★

ಇನ್ನೂರ ತೊಂಬತ್ತೇಳನೆಯ ಅಧ್ಯಾಯ

ಕುಂತಿಯಿಂದ ದುರ್ವಾಸರ ಮಂತ್ರದ ಪರೀಕ್ಷೆ. ಸೂರ್ಯನ ಆಗಮನ ಮತ್ತು ಕುಂತಿ- ಸೂರ್ಯರ ಸಂವಾದ.

ವೈಶಂಪಾಯನಃ

ಗತೇ ತಸ್ಮಿನ್ ದ್ವಿಜಶ್ರೇಷ್ಠೇ ಕಸ್ಮಿಂಶ್ಚಿತ್ ಕಾರಣಾಂತರೇ ।
ಚಿಂತಯಾಮಾಸ ಸಾ ಕನ್ಯಾ ಮಂತ್ರಗ್ರಾಮಬಲಾಬಲಮ್ ॥೧॥

ವೈಶಂಪಾಯನ- ಆ ದ್ವಿಜಶ್ರೇಷ್ಠನು ಯಾವುದೋ ಕಾರಣಾಂತರದಿಂದ ಹೊರಟು ಹೋಗುತ್ತಿರಲು ಕನ್ಯೆಯಾದ ಆ ಕುಂತಿಯು ಆ ಮಂತ್ರಸಮೂಹದ ಬಲಾಬಲವನ್ನು ಕುರಿತು ಚಿಂತಿಸಿದಳು.

ಅಯಂ ವೈ ಕೀದೃಶಸ್ತೇನ ಮಮ ದತ್ತೋ ಮಹಾತ್ಮನಾ ।
ಮಂತ್ರಗ್ರಾಮೋ ಬಲಂ ತಸ್ಯ ಜ್ಞಾಸ್ಯೇ ನಾತಿಚಿರಾದಿತಿ ॥೨॥

ಆ ಮಹಾತ್ಮನು ನನಗೆ ಎಂತಹ ಮಂತ್ರಗ್ರಾಮವನ್ನು ಕೊಟ್ಟಿದ್ದಾನೆ? ಅದರ ಸಾಮರ್ಥ್ಯವನ್ನು ನಾನು ಸದ್ಯದಲ್ಲಿಯೇ ತಿಳಿಯುವೆನು.

ಏವಂ ಸಂಚಿಂತಯಂತೀ ಸಾ ದದರ್ಶರ್ತುಂ ಯದೃಚ್ಛಯಾ ।
ವ್ರೀಡಿತಾ ಸಾऽಭವಾದ್ ಬಾಲಾ ಕನ್ಯಾಭಾವೇ ರಜಸ್ವಲಾ ॥೩॥

ಹೀಗೆ ಚಿಂತಿಸುತ್ತಿದ್ದ ಅವಳು ತಾನು ಇದ್ದಕ್ಕಿದ್ದಂತೆಯೇ ಋತುಮತಿಯಾದುದನ್ನು ಗಮನಿಸಿದಳು. ಕನ್ಯಾವಸ್ಥೆಯಲ್ಲಿಯೇ ರಜಸ್ವಲೆಯಾದ ತನ್ನನ್ನು ನೋಡಿ ಅವಳು ನಾಚಿಕೆಗೊಂಡಳು.

ತತೋ ಹರ್ಮ್ಯತಳಸ್ಥಾ ಸಾ ಮಹಾರ್ಹಶಯನೋಚಿತಾ ।
ಪ್ರಾಚ್ಯಾಂ ದಿಶಿ ಸಮುದ್ಯಂತಂ ದದರ್ಶಾದಿತ್ಯಮಂಡಲಮ್ ॥೪.೧॥

ಅನಂತರ ಉಪ್ಪರಿಗೆಯಲ್ಲಿ ಬೆಲೆಬಾಳುವ ಹಾಸಿಗೆಯಲ್ಲಿರಲು ಯೋಗ್ಯಳಾದ ಅವಳು ಪೂರ್ವದಿಕ್ಕಿನಲ್ಲಿ ಉದಯಿಸುತ್ತಿರುವ ಸೂರ್ಯಮಂಡಲವನ್ನು ನೋಡಿದಳು.

ಅಥೋದ್ಯಂತಂ ಸಹಸ್ರಾಂಶುಂ ಪೃಥಾ ದೀಪ್ತಂ ದದರ್ಶ ಹ ।
ನ ತತರ್ಪ ಚ ರೂಪೇಣ ಭಾನೋಃ ಸಂಧ್ಯಾಗತಸ್ಯ ಸಾ ।
ತತ್ರ ಬದ್ಧಮನೋದೃಷ್ಟಿರಭವತ್ ಸಾ ಸುಮಧ್ಯಮಾ ॥೪॥

ಅನಂತರ ಉದಯಿಸುತ್ತಿದ್ದ ದೀಪ್ತನಾದ ಸೂರ್ಯನನ್ನೂ ನೋಡಿದಳು. ಸಂಧ್ಯಾಕಾಲದಲ್ಲಿದ್ದ ಸೂರ್ಯನ ಆ ರೂಪವನ್ನು ನೋಡಿ ಅವಳಿಗೆ ತೃಪ್ತಿಯಾಗಲಿಲ್ಲ. ಸುಮಧ್ಯಮಳಾದ (ಸುಂದರಿಯಾದ) ಅವಳು ಅವನಲ್ಲಿಯೇ ನೆಟ್ಟ ಮನಸ್ಸು ಮತ್ತು ದೃಷ್ಟಿಯುಳ್ಳವಳಾದಳು.

ತಸ್ಯಾ ದೃಷ್ಟಿರಭೂದ್ ದಿವ್ಯಾ ಸಾऽಪಶ್ಯದ್ ದಿವ್ಯದರ್ಶನಮ್ ।
ಆಮುಕ್ತಕವಚಂ ದೇವಂ ಕುಂಡಲಾಭ್ಯಾಂ ವಿಭೂಷಿತಮ್ ॥೫॥

ಅವಳಿಗೆ ದಿವ್ಯದೃಷ್ಟಿ ಉಂಟಾಯಿತು. ಅವಳು ಕವಚಕುಂಡಲಗಳಿಂದ ಅಲಂಕೃತನಾದ ದಿವ್ಯದರ್ಶನನಾದ ಸೂರ್ಯನನ್ನೂ ನೋಡಿದಳು.

ತಸ್ಯಾಃ ಕೌತೂಹಲಂ ತ್ವಾಸೀನ್ಮಂತ್ರಾನ್ ಪ್ರತಿ ನರಾಧಿಪ ।
ಆಹ್ವಾನಮಕರೋತ್‌ಸಾऽಥ ತಸ್ಯ ದೇವಸ್ಯ ಭಾಮಿನೀ ॥೬॥

ಎಲೈ ರಾಜನೇ, ಅವಳಿಗೆ ತಾನು ಪಡೆದ ಮಂತ್ರಗಳ ವಿಷಯದಲ್ಲಿ ಕುತೂಹಲವು ಇದ್ದಿತು. ಆ ಭಾಮಿನಿಯೂ ಆಗ ಆ ಸೂರ್ಯದೇವನನ್ನು ಆಹ್ವಾನಿಸಿದಳು.

ಪ್ರಾಣಾನುಪಸ್ಪೃಶ್ಯ ತದಾ ಹ್ಯಾಜುಹಾವ ದಿವಾಕರಮ್ ।
ಆಜಗಾಮ ತತೋ ರಾಜಂಸ್ತ್ವರಮಾಣೋ ದಿವಾಕರಃ ॥೭॥

ಅವಳು ಪ್ರಾಣಾಯಾಮವನ್ನು ಮಾಡಿ ಸೂರ್ಯನನ್ನು ಆಹ್ವಾನ ಮಾಡಿದಳು. ರಾಜನೇ, ದಿವಾಕರನಾದರೂ ತ್ವರೆಮಾಡುತ್ತಾ ಅಲ್ಲಿಗೆ ಬಂದನು.

ಮಧುಪಿಂಗೋ ಮಹಾಬಾಹುಃ ಕಂಬುಗ್ರೀವೋ ಹಸನ್ನಿವ ।
ಅಂಗದೀ ಬದ್ಧಮುಕುಟೋ ದಿಶಃ ಪ್ರಜ್ವಾಲಯನ್ನಿವ ॥೮॥

ಯೋಗಾತ್‌ಕೃತ್ವಾ ದ್ವಿಧಾऽऽತ್ಮಾನಮಾಜಗಾಮ ತತೋರವಿಃ ।
ಆಬಭಾಷೇ ತತಃ ಕುಂತೀಂ ಸಾಮ್ನಾ ಪರಮವಲ್ಗುನಾ ॥೯॥

ಜೇನುತುಪ್ಪದಂತೆ ಪಿಂಗಳವರ್ಣನೂ, ಮಹಾಬಾಹುವೂ, ಕಂಬುಗ್ರೀವನೂ, ಅಂಗದವನ್ನೂ ಕಿರೀಟವನ್ನೂ ಧರಿಸಿದವನೂ ಆದ ಅವನು ದಿಕ್ಕುಗಳನ್ನು ಬೆಳಗುತ್ತಾ ನಗುತ್ತಿರುವವನಂತೆ ತೋರಿಬಂದನು. ಅವನು ಯೋಗಸಾಮರ್ಥ್ಯದಿಂದ ತನ್ನ ರೂಪವನ್ನು ಎರಡಾಗಿ ಪರಿವರ್ತಿಸಿ ಕುಂತಿಯ ಬಳಿಗೆ ಬಂದು ಪರಮ ಮಧುರವಾದ ಶಾಂತವಾದ ಮಾತುಗಳನ್ನು ಆಡಿದನು.

ಆಗತೋಽಸ್ಮಿ ವಶಂ ಭದ್ರೇ ತವ ಮಂತ್ರಬಲಾತ್ಕೃತಃ ।
ಕಿಂ ಕರೋಮಿ ವಶೋ ರಾಜ್ಞಿ ಬ್ರೂಹಿ ಕರ್ತಾ ತದಸ್ಮಿ ತೇ ॥೧೦॥

ಎಲೌ ಭದ್ರೆಯೇ, ನಾನು ನಿನ್ನ ಮಂತ್ರದಿಂದ ಬಲಾತ್ಕೃತನಾಗಿ ನಿನಗೆ ವಶನಾಗಿ ಬಂದಿದ್ದೇನೆ. ರಾಣಿಯೇ, ನಿನಗೆ ವಶನಾದ ನಾನು ಏನು ಮಾಡಬೇಕೆಂದು ಹೇಳು. ನಾನು ನಿನಗೆ ಅದನ್ನು ಮಾಡುವೆನು.

ಕುಂತೀ

ಗಮ್ಯತಾಂ ಭಗವಂಸ್ತತ್ರ ಯತ ಏವಾಗತೋ ಹ್ಯಸಿ ।
ಕೌತೂಹಲಾತ್ ಸಮಾಹೂತಃ ಪ್ರಸೀದ ಭಗವನ್ನಿತಿ ॥೧೧॥

ಕುಂತೀ– ಪೂಜ್ಯನೇ, ನೀನು ಎಲ್ಲಿಂದ ಬಂದೆಯೋ ಅಲ್ಲಿಗೇ ಹೊರಟುಹೋಗು. ಪೂಜ್ಯನೇ, ನಾನು ಕುತೂಹಲದಿಂದ ನಿನ್ನನ್ನು ಆಹ್ವಾನ ಮಾಡಿದೆ. ನನ್ನ ಮೇಲೆ ಪ್ರಸನ್ನನಾಗು.

ಸೂರ್ಯಃ

ಗಮಿಷ್ಯೇಽಹಂ ಯಥಾ ಮಾಂ ತ್ವಂ ಬ್ರವೀಷಿ ತನುಮಧ್ಯಮೇ ।
ನ ತು ದೇವಂ ಸಮಾಹೂಯ ನ್ಯಾಯ್ಯಂ ಪ್ರೇಷಯಿತುಂ ವೃಥಾ ॥೧೨॥

ಸೂರ್ಯ– ಎಲೌ ಕೃಶಾಂಗಿಯೇ, ನೀನು ಹೇಳುವಂತೆ ನಾನು ಹೊರಟು ಹೋಗುವೆನು. ಆದರೆ ದೇವತೆಯನ್ನು ಆಹ್ವಾನ ಮಾಡಿ ವ್ಯರ್ಥವಾಗಿ ಕಳುಹಿಸುವುದು ನ್ಯಾಯವಲ್ಲ.

ತವಾಪಿ ಬುದ್ಧಿಃ ಸುಭಗೇ ಸೂರ್ಯಾತ್ ಪುತ್ರೋ ಭವೇದಿತಿ ।
ವೀರ್ಯೇಣಾಪ್ರತಿಮೋ ಲೋಕೇ ಕವಚೀ ಕುಂಡಲೀತಿ ಚ ॥೧೩॥

ಸುಭಗೆಯೇ, ಲೋಕದಲ್ಲಿ ಅಪ್ರತಿಮ ಪರಾಕ್ರಮಿಯೂ, ಕವಚ ಕುಂಡಲಧಾರಿಯೂ ಆದ ಒಬ್ಬ ಪುತ್ರನು ಸೂರ್ಯನಿಂದ ಬೇಕೆಂದು ನಿನ್ನ ಅಭಿಪ್ರಾಯವಿದ್ದಿತು.

ಸಾ ತ್ವಮಾತ್ಮಪ್ರದಾನಂ ವೈ ಕುರುಷ್ವ ಗಜಗಾಮಿನಿ ।
ಉತ್ಪತ್ಸ್ಯಸಿ ಹಿ ಪುತ್ರಸ್ತೇ ಯಥಾಸಂಕಲ್ಪಮಂಗನೇ ॥೧೪॥

ಗಜಗಾಮಿನಿಯೇ ನೀನು ನಿನ್ನನ್ನೇ ನನಗೆ ಪ್ರದಾನವನ್ನು ಮಾಡು. ಅಂಗನೆಯೇ, ನಿನ್ನ ಸಂಕಲ್ಪವಿದ್ದಂತೆ ನಿನಗೆ ಒಬ್ಬ ಪುತ್ರನು ಜನಿಸುವನು.

ಅಥ ಗಚ್ಛಾಮ್ಯಹಂ ಭದ್ರೇ ತ್ವಯಾ ಸಂಗಮ್ಯ ಸುಸ್ಮಿತೇ ।
ಶಪಿಷ್ಯೇ ತ್ವಾಮಹಂ ಕ್ರುದ್ಧೋ ಬ್ರಾಹ್ಮಣಂ ಪಿತರಂ ಚ ತೇ ।
ಯದಿ ತ್ವಂ ವಚನಂ ನಾದ್ಯ ಕರಿಷ್ಯಸಿ ಮಮ ಪ್ರಿಯಮ್ ॥೧೫॥

ಭದ್ರಳೇ, ಸುಸ್ಮಿತೆಯೇ, ನಿನ್ನ ಸಂಗವನ್ನು ಮಾಡಿ ನಾನು ಅನಂತರ ಹೋಗುತ್ತೇನೆ. ನೀನು ನನ್ನ ಮಾತನ್ನು ನಡೆಸದಿದ್ದರೆ ಕೋಪಗೊಂಡು ನಿನಗೂ, ನಿನ್ನ ತಂದೆಗೂ ಮತ್ತು ಆ ಬ್ರಾಹ್ಮಣನಿಗೂ ಶಾಪವನ್ನು ಕೊಡುವೆನು.

ತ್ವತ್ಕೃತೇ ತಾನ್ ಪ್ರಧಕ್ಷ್ಯಾಮಿ ಸರ್ವಾನಪಿ ನ ಸಂಶಯಃ ।
ಪಿತರಂ ಚೈವ ತೇ ಮೂಢಂ ಯೋ ನ ವೇತ್ತಿ ತವಾನಯಮ್ ॥೧೬॥

ನಿನ್ನ ಸಲುವಾಗಿ ನಾನು ಅವರೆಲ್ಲರನ್ನೂ ಸುಡುವೆನು. ಇದರಲ್ಲಿ ಸಂಶಯವಿಲ್ಲ. ನೀನು ಮಾಡುವ ಅನ್ಯಾಯವನ್ನು ತಿಳಿಯದಿರುವ ಮೂಢನಾದ ನಿನ್ನ ತಂದೆಯನ್ನೂ ಸುಡುವೆನು.

ತಸ್ಯ ಚ ಬ್ರಾಹ್ಮಣಸ್ಯಾದ್ಯ ಯೋಽಸೌ ಮಂತ್ರಮದಾತ್ ತವ ।
ಶೀಲವೃತ್ತಮವಿಜ್ಞಾಯ ಧಾಸ್ಯಾಮಿ ವಿನಯಂ ಪರಮ್ ॥೧೭॥

ನಿನ್ನ ಶೀಲವೃತ್ತಗಳನ್ನು ತಿಳಿಯದೆ ನಿನಗೆ ಮಂತ್ರದಾನವನ್ನು ಮಾಡಿದ ಆ ಬ್ರಾಹ್ಮಣನು ಯಾವನಿದ್ದಾನೆಯೋ ಅವನಿಗೆ ಈ ದಿವಸ ವಿನಯವುಂಟಾಗುವಂತೆ ಮಾಡುವೆನು.

ಏತೇ ಹಿ ವಿಬುಧಾಃ ಸರ್ವೇ ಪುರಂದರಮುಖಾ ದಿವಿ ।
ತ್ವಯಾ ಪ್ರಲಬ್ಧಂ ಪಶ್ಯಂತಿ ಸ್ಮಯಂತ ಇವ ಭಾಮಿನಿ ॥೧೮॥

ಎಲೌ ಭಾಮಿನಿಯೇ, ನೀನು ಮಾಡಿದ ಈ ವಂಚನೆಯನ್ನು ಆಕಾಶದಲ್ಲಿ ಇಂದ್ರಾದಿ ದೇವತೆಗಳೆಲ್ಲಾ ನೋಡುತ್ತಾ ನಗುತ್ತಿದ್ದಾರೆ.

ಪಶ್ಯ ಚೈನಾನ್ ಸುರಗಣಾನ್ ದಿವ್ಯಂ ಚಕ್ಷುರಿದಂ ಹಿ ತೇ ।
ಪೂರ್ವಮೇವ ಮಯಾ ದತ್ತಂ ದೃಷ್ಟವತ್ಯಸಿ ಯೇನ ಮಾಮ್ ॥೧೯॥

ಈ ದೇವತೆಗಳ ಸಮೂಹವನ್ನು ನೋಡು. ಅದಕ್ಕಾಗಿ ನಿನಗೆ ಈ ದಿವ್ಯ ಚಕ್ಷುಸ್ಸನ್ನು ನಾನು ಮೊದಲೇ ಕೊಟ್ಟಿದ್ದೇನೆ. ಅದರಿಂದಲೇ ನೀನು ನನ್ನನ್ನು ನೋಡಿದೆ.

ವೈಶಂಪಾಯನಃ

ತತೋಽಪಶ್ಯತ್ ತ್ರಿದಶಾನ್ ರಾಜಪುತ್ರೀ
ಸರ್ವಾನೇವ ಸ್ವೇಷು ಧಿಷ್ಣ್ಯೇಷು ಸ್ವಸ್ಥಾನ್ ।
ಪ್ರಭಾವಂತಂ ಭಾನುಮಂತಂ ಮಹಾಂತಂ
ಯಥಾಽಽದಿತ್ಯಂ ರೋಚಮಾನಾಂಸ್ತಥೈವ ॥೨೦॥

ವೈಶಂಪಾಯನ– ಆಗ ಆ ರಾಜಪುತ್ರಿಯು ತಮ್ಮ ತಮ್ಮ ಆವಾಸಸ್ಥಾನಗಳಲ್ಲಿ ಕುಳಿತಿರುವ ಕಿರಣಗಳಿಂದ ಕೂಡಿದ ಮತ್ತು ಪ್ರಭೆಯಿಂದ ಕೂಡಿದ ಸೂರ್ಯನಂತೆ ಬೆಳಗುತ್ತಿರುವ ಎಲ್ಲಾ ದೇವತೆಗಳನ್ನೂ ನೋಡಿದಳು.

ಸಾ ತಾನ್ ದೃಷ್ಟ್ವಾ ವೇಪಮಾನೇವ ಬಾಲಾ
ಸೂರ್ಯಂ ದೇವೀ ವಚನಂ ಪ್ರಾಹ ಭೀತಾ ।
ಗಚ್ಛ ತ್ವಂ ವೈ ಗೋಪತೇ ಸ್ವಂ ವಿಮಾನಂ
ಕನ್ಯಾಭಾವಾದ್ ದುಃಖ ಏವಾಪಚಾರಃ ॥೨೧॥

ಆ ಬಾಲೆಯು ಅವರನ್ನು ನೋಡಿ ನಡುಗುತ್ತಾ ಸೂರ್ಯನನ್ನು ಕುರಿತು ಗೋಪತಿಯೇ, ನೀನು ನಿನ್ನ ವಿಮಾನಕ್ಕೆ ಹೋಗು. ಕನ್ಯಾಭಾವದಿಂದ ನಿನಗೆ ಈ ದುಃಖಕರವಾದ ಅಪಚಾರವನ್ನು ಮಾಡಿದೆ ಎಂದು ಭಯದಿಂದ ಹೇಳಿದಳು.

ಪಿತಾ ಮಾತಾ ಗುರವಶ್ಚೈವ ಯೇಽನ್ಯೇ
ದೇಹಸ್ಯಾಸ್ಯ ಪ್ರಭವಂತಿ ಪ್ರದಾನೇ ।
ನಾಹಂ ಧರ್ಮಂ ಲೋಪಯಿಷ್ಯಾಮಿ ಲೋಕೇ
ಸ್ತ್ರೀಣಾಂ ವೃತ್ತಂ ಪೂಜ್ಯತೇ ದೇಹರಕ್ಷಾ ॥೨೨॥

ಈ ದೇಹವನ್ನು ಕೊಡುವ ವಿಷಯದಲ್ಲಿ ತಂದೆ, ತಾಯಿ, ಗುರುಗಳು ಮತ್ತು ಇನ್ನು ಕೆಲವರು ಅಧಿಕಾರವುಳ್ಳವರಾಗುತ್ತಾರೆ. ನಾನು ಧರ್ಮಲೋಪವನ್ನು ಮಾಡುವುದಿಲ್ಲ. ಲೋಕದಲ್ಲಿ ಸ್ತ್ರೀಯರ ಒಳ್ಳೆಯ ನಡತೆವಾದ ದೇಹಪಾವಿತ್ರ್ಯವು ಪೂಜಿಸಲ್ಪಡುತ್ತದೆ.

ಮಯಾ ಮಂತ್ರಬಲಂ ಜ್ಞಾತುಮಾಹೂತಸ್ತ್ವಂ ವಿಭಾವಸೋ ।
ಬಾಲ್ಯಾದ್ ಬಾಲೇತಿ ತತ್ಕ್ಷಾ ಕ್ಷಂತುಮರ್ಹಸಿ ಮೇ ವಿಭೋ ॥೨೩॥

ಎಲೈ ಸೂರ್ಯನೇ, ನಾನು ಮಂತ್ರದ ಸಾಮರ್ಥ್ಯವನ್ನು ತಿಳಿಯಲು ಬಾಲ್ಯ ಬುದ್ಧಿಯಿಂದ ನಿನ್ನನ್ನು ಆಹ್ವಾನಿಸಿದೆ. ವಿಭುವೇ, ನನ್ನನ್ನು ಚಿಕ್ಕಬಾಲಕಿ ಎಂದು ತಿಳಿದು ನೀನು ಕ್ಷಮಿಸಬೇಕು.

ಸೂರ್ಯಃ

ಬಾಲೇತಿ ಕೃತ್ವಾಽನುನಯಂ ತವಾಹಂ
ದದಾನಿ ನಾನ್ಯಾಽನುನಯಂ ಲಭೇತ ।
ಆತ್ಮಪ್ರದಾನಂ ಕುರು ಕುಂತಿ ಮನ್ಯೇ
ಶಾಂತಿಸ್ತವೈವಂ ಹಿ ಭವೇತ್ ಚ ಭೀರು ॥೨೪॥

ಸೂರ್ಯ– ನೀನು ಬಾಲಕಿ ಎಂದು ತಿಳಿದೇ ನಿನಗೆ ಮೃದುವಾದ ಮಾತುಗಳನ್ನು ಆಡುತ್ತಿದ್ದೇನೆ. ಇನ್ನೊಬ್ಬಳು ಇಂತಹ ಅನುನಯದ ಮಾತುಗಳಿಗೆ ಅರ್ಹಳಾಗುತ್ತಿರಲಿಲ್ಲ. ಕುಂತಿಯೇ, ನೀನು ನಿನ್ನ ದೇಹಪ್ರದಾನವನ್ನು ಮಾಡು. ಭೀರುವೇ, ಹಾಗೆ ಮಾಡಿದರೆ ನಿನಗೆ ಸುಖವುಂಟಾಗುವುದೆಂದು ನಾನು ಭಾವಿಸುತ್ತೇನೆ.

ನ ಚಾಪಿ ಗಂತುಂ ಯುಕ್ತಂ ಹಿ ಮಯಾ ಮಿಥ್ಯಾಕೃತೇನ ವೈ ।
ಗಮಿಷ್ಯಾಮ್ಯನವದ್ಯಾಂಗಿ ಲೋಕೇ ಸಮವಹಾಸ್ಯತಾಮ್ ॥೨೫॥

ನಿನ್ನಿಂದ ವಂಚಿತನಾಗಿ ನಾನು ಹಾಗೆಯೇ ಹೋಗುವುದು ಉಚಿತವಲ್ಲ. ಎಲೌ ಅನವದ್ಯಾಂಗಿಯೇ, ಹಾಗೆ ಮಾಡಿದರೆ ನಾನು ಲೋಕದಲ್ಲಿ ಹಾಸ್ಯಾಸ್ಪದನಾಗುವೆನು.

ಗಚ್ಛೇಯಮೇವಂ ಸುಶ್ರೋಣಿ ಗತೋಹಂ ವೈ ನಿರಾಕೃತಃ ।
ಸರ್ವೇಷಾಂ ವಿಬುಧಾನಾಂ ಚ ವಕ್ತವ್ಯಃ ಸ್ಯಾಂ ತಥಾ ಶುಭೇ ॥೨೬॥

ಎಲೌ ಸುಶ್ರೋಣಿಯೇ, ನಿನ್ನಿಂದ ನಿರಾಕೃತನಾಗಿ ನಾನು ಹೀಗೆಯೇ ಹೋಗುವುದಾದರೆ ಎಲೌ ಶುಭಳಾದವಳೇ, ನಾನು ಎಲ್ಲ ದೇವತೆಗಳಿಗೂ ಉತ್ತರವನ್ನು ಹೇಳಬೇಕಾಗುತ್ತದೆ.

ಸಾ ತ್ವಂ ಮಯಾ ಸಮಾಗಚ್ಛ ಪುತ್ರಂ ಲಪ್ಸ್ಯಸಿ ಮಾದೃಶಮ್ ।
ವಿಶಿಷ್ಟಾ ಸರ್ವಲೋಕೇಷು ಭವಿಷ್ಯಸಿ ನ ಸಂಶಯಃ ॥೨೭॥

ಅಂತಹ ನೀನು ನನ್ನ ಸಮಾಗಮವನ್ನು ಮಾಡು. ನನ್ನಂತಹ ಪುತ್ರನನ್ನು ಪಡೆಯುವಿ. ಎಲ್ಲ ಲೋಕಗಳಲ್ಲಿಯೂ ನೀನು ಶ್ರೇಷ್ಠಳೆನಿಸುವಿ. ಇದರಲ್ಲಿ ಸಂಶಯವಿಲ್ಲ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂಸಂಹಿತಾಯಾಂ ವೈಯಾಸಿಕ್ಯಾಂ
ವನಪರ್ವಣಿ ಸಪ್ತನವತಿತದ್ವಿಶತತಮೋऽಧ್ಯಾಯಃ ॥
॥ ಇತಿ ಕುಂಡಲಾಹರಣಪರ್ವಣಿ ಸೂರ್ಯಾಹ್ವಾನಂ ನಾಮ ಸಪ್ತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವನಪರ್ವದಲ್ಲಿ ಇನ್ನೂರ ತೊಂಬತ್ತೇಳನೆಯ
ಅಧ್ಯಾಯ ಮುಗಿಯಿತು.

★ ★ ★ ★

ಇನ್ನೂರ ತೊಂಬತ್ತೆಂಟನೆಯ ಅಧ್ಯಾಯ

ಸೂರ್ಯ-ಕುಂತೀ ಸಮಾಗಮ. ಸೂರ್ಯನಿಂದ ಕುಂತಿಯಲ್ಲಿ ಗರ್ಭಾಧಾನ.

ವೈಶಂಪಾಯನಃ

ಸಾ ತು ಕನ್ಯಾ ಬಹುವಿಧಂ ಬ್ರುವಂತೀ ಮಧುರಂ ವಚಃ ।
ಅನುನೇತುಂ ಸಹಸ್ರಾಂಶುಂ ನ ಶಶಾಕ ಮನಸ್ವಿನೀ ॥೧॥

ವೈಶಂಪಾಯನ- ಆ ಧೈರ್ಯಶಾಲಿನಿಯಾದ ಕನ್ಯೆಯು ಅನೇಕ ವಿಧವಾಗಿ ಮಧುರ ಮಾತುಗಳನ್ನಾಡಿ ಸೂರ್ಯನನ್ನು ನಿವಾರಿಸಲು ಪ್ರಯತ್ನಿಸಿದರೂ ಅವಳಿಗೆ ಅದು ಸಾಧ್ಯವಾಗಲಿಲ್ಲ.

ನ ಶಶಾಕ ಯದಾ ಬಾಲಾ ಪ್ರತ್ಯಾಖ್ಯಾತುಂ ತಮೋನುದಮ್ ।
ಭೀತಾ ಶಾಪಾತ್ ತತೋ ರಾಜನ್ ದಧ್ಯೌ ದೀರ್ಘಮಥಾಂತರಮ್ ॥

ಎಲೈ ರಾಜನೇ, ಆ ಬಾಲೆಯು ಅಂಧಕಾರನಾಶಕನಾದ ಸೂರ್ಯನನ್ನು ನಿವಾರಿಸಲು ಸಾಧ್ಯವಾಗದಿದ್ದಾಗ ಅವಳು ಶಾಪದಿಂದ ಭೀತಳಾಗಿ ಮನಸ್ಸಿನಲ್ಲಿಯೇ ದೀರ್ಘವಾಗಿ ಆಲೋಚಿಸಿದಳು.

ಅನಾಗಸಃ ಪಿತುಃ ಶಾಪೋ ಬ್ರಾಹ್ಮಣಸ್ಯ ತಥೈವ ಚ ।
ಮನ್ನಿಮಿತ್ತಃ ಕಥಂ ನ ಸ್ಯಾತ್ ಕ್ರುದ್ಧಾದಸ್ಮಾದ್ ವಿಭಾವಸೋಃ ॥೩॥

ನನ್ನ ನಿಮಿತ್ತದಿಂದ ನಿರಪರಾಧಿಯಾದ ತಂದೆಗೂ ಮತ್ತು ಬ್ರಾಹ್ಮಣನಿಗೂ ಕ್ರೋಧಗೊಂಡ ಸೂರ್ಯನಿಂದ ಶಾಪವು ಬರದೇ ಇರಲು ಹೇಗೆ ಸಾಧ್ಯ ?

ಬಾಲೇನಾಪಿ ಸತಾ ಮೋಹಾದ್ ಭೃಶಂ ಸಾಪಹ್ನವಾನ್ಯಪಿ ।
ನಾಭ್ಯಾಸಾದಯಿತವ್ಯಾನಿ ತೇಜಾಂಸಿ ಚ ತಪಾಂಸಿ ಚ ॥೪॥

ಬಾಲಕನೂ ಸಹ ಮೋಹದಿಂದ ದೊಡ್ಡವರ ತೇಜಸ್ಸಿಗೂ ಮತ್ತು ತಪಸ್ಸಿಗೂ ತೊಂದರೆಯನ್ನು ಮತ್ತು ಭಯವನ್ನು ತಂದೊಡ್ಡಬಾರದು.

ಸಾಹಮದ್ಯ ಭೃಶಂ ಭೀತಾ ಗೃಹೀತಾ ಚ ಕರೇ ಭೃಶಮ್ ।
ಕಥಂ ತ್ವಕಾರ್ಯಂ ಕುರ್ಯಾಂ ವೈ ಪ್ರದಾನಂ ಹ್ಯಾತ್ಮನಃ ಸ್ವಯಮ್ ॥೫॥

ನಾನು ಈ ದಿನ ಸೂರ್ಯನಿಂದ ಕೈಯಲ್ಲಿ ಹಿಡಿಯಲ್ಪಟ್ಟಿದ್ದರೂ ಬಹಳ ಹೆದರಿದವಳಾಗಿ ನನ್ನನ್ನೇ ನಾನು ದಾನಮಾಡಿಕೊಳ್ಳುವಂತಹ ಅಕಾರ್ಯವನ್ನು ಹೇಗೆ ಮಾಡಲಿ?

ವೈಶಂಪಾಯನಃ

ಸಾ ವೈ ಶಾಪಪರಿತ್ರಸ್ತಾ ಬಹು ಚಿಂತಯತೀ ಹೃದಾ ।
ಮೋಹೇನಾಭಿಪರೀತಾಂಗೀ ಸ್ಮಯಮಾನಾ ಪುನಃ ಪುನಃ ॥೬॥

ತಂ ದೇವಮಬ್ರವೀದ್ ಭೀತಾ ಬಂಧೂನಾಂ ರಾಜಸತ್ತಮ ।
ವ್ರೀಡಾವಿಹ್ವಲಯಾ ವಾಚಾ ಶಾಪತ್ರಸ್ತಾ ವಿಶಾಂಪತೇ ॥೭॥

ವೈಶಂಪಾಯನ– ಎಲೈ ರಾಜಶ್ರೇಷ್ಠನೇ, ಆ ಕನ್ಯೆಯು ಶಾಪಭೀತಳಾಗಿ ಮನಸ್ಸಿನಲ್ಲಿ ಬಹಳವಾಗಿ ಚಿಂತಿಸುತ್ತಾ ಸೂರ್ಯನನ್ನು ನೋಡಿ ಮತ್ತೆ ಮತ್ತೆ (ಕಷ್ಟದಿಂದ) ನಗುತ್ತಾ ತನ್ನ ಬಂಧುಗಳಿಗೆ ಒದಗಬಹುದಾದ ಶಾಪದಿಂದ ಭೀತಳಾಗಿ ನಾಚಿಕೆಯಿಂದ ವಿಹ್ವಲಳಾಗಿ ಸೂರ್ಯನನ್ನು ಕುರಿತು ಮಾತನಾಡಿದಳು.

ಪಿತಾ ಮೇ ಧ್ರಿಯತೇ ದೇವ ಮಾತಾ ಚಾನ್ಯೇ ಚ ಬಾಂಧವಾಃ ।
ನ ತೇಷು ಧ್ರಿಯಮಾಣೇಷು ವಿಧಿಲೋಪೋ ಭವೇದಯಮ್ ॥೮॥

ದೇವನೇ, ನನ್ನ ತಂದೆಯು ಬದುಕಿದ್ದಾನೆ. ನನ್ನ ತಾಯಿಯೂ ಮತ್ತು ಬೇರೆ ಬಂಧುಗಳೂ ಬದುಕಿದ್ದಾರೆ. ಅವರು ಬದುಕಿರುವಾಗ ನನಗೆ ಇದು ವಿಧಿ ಲೋಪವಾಗಬಾರದು.

ಮನ್ನಿಮಿತ್ತಂ ಕುಲಸ್ಯಾಸ್ಯ ಲೋಕೇ ಕೀರ್ತಿಕ್ಷಯಸ್ತಥಾ ॥೯॥

ಅಥವಾ ಧರ್ಮಮೇತಂ ತ್ವಂ ಮನ್ಯಸೇ ತಪತಾಂ ವರ ।
ಋತೇ ಪ್ರದಾನಾದ್ ಬಂಧುಭ್ಯಸ್ತವ ಕಾಮಂ ಕರೋಮ್ಯಹಮ್ ॥೧೦॥

ನನ್ನ ನಿಮಿತ್ತದಿಂದ ಈ ಕುಲಕ್ಕೆ ಲೋಕದಲ್ಲಿ ಕೀರ್ತಿಯು ನಾಶವನ್ನು ಹೊಂದಬಾರದು. ಅಥವಾ ಎಲೈ ಪ್ರಕಾಶಿಸುವವರಲ್ಲಿ ಶ್ರೇಷ್ಠನೇ, ಬಂಧುಗಳು ದಾನವನ್ನು ಮಾಡದಿದ್ದರೂ ಇದನ್ನು ನೀನು ಧರ್ಮವೆಂದು ತಿಳಿಯುವುದಾದರೆ ನಾನು ನಿನ್ನ ಆಸೆಯನ್ನು ನಾನು ಪೂರೈಸುತ್ತೇನೆ.

ಆತ್ಮಪ್ರದಾನಂ ದುರ್ಧರ್ಷ ತವ ಕೃತ್ವಾ ಸತೀ ತ್ವಹಮ್ ।
ತ್ವಯಿ ಧರ್ಮೋ ಯಶಶ್ಚೈವ ಕೀರ್ತಿರಾಯುಶ್ಚ ದೇಹಿನಾಮ್ ॥೧೧॥

ಎಲೈ ದುರ್ಧರ್ಷನೇ, ನಿನಗೆ ಆತ್ಮಪ್ರದಾನವನ್ನು ಮಾಡಿ ಶುದ್ಧಳಾಗಿರುತ್ತೇನೆ. ಜೀವರ ಧರ್ಮ, ಯಶಸ್ಸು, ಕೀರ್ತಿ, ಆಯುಸ್ಸು ಇವೆಲ್ಲವೂ ನಿನ್ನನ್ನು ಅವಲಂಬಿಸಿವೆ.

ಸೂರ್ಯಃ

ನ ತೇ ಪಿತಾ ನ ತೇ ಮಾತಾ ಗುರವೋ ವಾ ಶುಚಿಸ್ಮಿತೇ ।
ಪ್ರಭವಂತಿ ವರಾರೋಹೇ ಭದ್ರಂ ತೇ ಶೃಣು ಮೇ ವಚಃ ॥೧೨॥

ಸೂರ್ಯ– ಶುಚಿಸ್ಮಿತೆಯೇ, ನಿನ್ನ ತಂದೆಯಾಗಲೀ, ತಾಯಿಯಾಗಲೀ, ಗುರುಗಳಾಗಲೀ ಈ ವಿಷಯದಲ್ಲಿ ಸಮರ್ಥರಾಗುವುದಿಲ್ಲ. ಸುಂದರಿಯೇ, ನಿನಗೆ ಮಂಗಳವಾಗಲಿ. ನನ್ನ ಮಾತನ್ನು ಕೇಳು.

ಸರ್ವಾನ್ ಕಾಮಯತೇ ಯಸ್ಮಾತ್ ಕಮೇರ್ಧಾತೋಶ್ಚ ಭಾಮಿನಿ ।
ತಸ್ಮಾತ್ ಕನ್ಯೇಹ ಸುಶ್ರೋಣಿ ಸ್ವತಂತ್ರಾ ವರವರ್ಣಿನಿ ॥೧೩॥

ಎಲೌ ಭಾಮಿನಿಯೇ, ಕಮು ಕಾಂತೌ ಎಂಬ ಧಾತುವಿನಿಂದ ಎಲ್ಲವನ್ನೂ ಬಯಸುವವಳು ಎಂಬ ಅರ್ಥದಲ್ಲಿ ಕನ್ಯಾ ಎಂಬ ಶಬ್ದವು ನಿಷ್ಪನ್ನವಾಗುತ್ತದೆ. ಆದ್ದರಿಂದ ವರವರ್ಣಿನಿಯೇ, ಸುಶ್ರೋಣಿಯೇ, ನಿನ್ನನ್ನು ದಾನ ಮಾಡುವ ವಿಷಯದಲ್ಲಿ ನೀನು ಸ್ವತಂತ್ರಳಾಗಿದ್ದೀಯೆ.

ನಾಧರ್ಮಶ್ಚರಿತಃ ಕಶ್ಚಿತ್ ತ್ವಯಾ ಭವತಿ ಭಾಮಿನಿ ।
ಅಧರ್ಮಂ ಕುತ ಏವಾಹಂ ವರೇಯಂ ಲೋಕಕಾಮ್ಯಯಾ ॥೧೪॥

ಭಾಮಿನಿಯೇ, ಇದರಿಂದ ನೀನು ಯಾವ ಅಧರ್ಮವನ್ನೂ ಮಾಡಿದಂತಾಗುವುದಿಲ್ಲ. ನಾನಾದರೂ ಸಲ್ಲೋಕಪ್ರಾಪ್ತಿಗಾಗಿ ನಿನಗೆ ಅಧರ್ಮವನ್ನು ವರಿಸುವಂತೆ ಹೇಗೆ ಹೇಳಲಿ?

ಅನಾವೃತಾಃ ಸ್ತ್ರಿಯಃ ಸರ್ವಾ ನರಾಶ್ಚ ವರವರ್ಣಿನಿ ।
ಸ್ವಭಾವ ಏಷ ಲೋಕಾನಾಂ ಏಕಾರೋಽನ್ಯ ಇತಿ ಸ್ಮೃತಃ ॥೧೫॥

ಸುಂದರಿಯೇ, ಎಲ್ಲ ಸ್ತ್ರೀಯರು ಮತ್ತು ಪುರುಷರು ಅನಾವೃತರಾದವರು. ಇದು ಲೋಕದ ಸ್ವಭಾವ. ಉಳಿದ ನಿಯಮಗಳು ಅಸ್ವಾಭಾವಿಕವಾದವು ಎಂದು ಹೇಳಲ್ಪಡುತ್ತದೆ.

ಸಾ ಮಯಾ ಸಹ ಸಂಗಮ್ಯ ಪುನಃ ಕನ್ಯಾ ಭವಿಷ್ಯಸಿ ।
ಪುತ್ರಶ್ಚ ತೇ ಮಹಾಬಾಹುರ್ಭವಿಷ್ಯತಿ ಮಹಾಯಶಾಃ ॥೧೬॥

ಅಂತಹ ನೀನು ನನ್ನ ಸಮಾಗಮವನ್ನು ಮಾಡಿ ಪುನಃ ಕನ್ಯೆಯೇ ಆಗುವಿ. ನಿನಗೆ ಮಹಾಯಶಸ್ವಿಯೂ, ಮಹಾಬಾಹುವೂ ಆದ ಪುತ್ರನು ಜನಿಸುವನು.

ಕುಂತೀ

ಯದಿ ಪುತ್ರೋ ಮಮ ಭವೇತ್ ತ್ವತ್ತಃ ಸರ್ವತಮೋನುದ ।
ಕುಂಡಲೀ ಕವಚೀ ಶೂರೋ ಮಹಾಬಾಹುರ್ಮಹಾಬಲಃ ।
ಅಸ್ತು ಮೇ ಸಂಗಮೋ ದೇವ ಯಥೋಕ್ತಂ ಭಗವಂಸ್ತ್ವಯಾ ॥೧೭॥

ಕುಂತೀ– ಸರ್ವಾಂಧಕಾರನಾಶಕನಾದ ಸೂರ್ಯನೇ, ನೀನು ಹೇಳಿದಂತೆ ನನಗೆ ನಿನ್ನಿಂದ ಪುತ್ರನು ಜನಿಸುವುದಾದರೆ ಅವನು ಕವಚ ಕುಂಡಲ ಉಳ್ಳವನೂ, ಶೂರನೂ, ಮಹಾಬಾಹುವೂ, ಮಹಾಬಲನೂ ಆಗಿರಬೇಕು. ದೇವನೇ, ಪೂಜ್ಯನೇ, ಹಾಗಾಗುವುದಾದರೆ ನಿನ್ನ ಜೊತೆಯಲ್ಲಿ ಸಂಗಮವುಂಟಾಗಲಿ.

ತಿಗ್ಮರಶ್ಮೇ ಮಹಾಬಾಹೋ ಸಂಗಮಿಷ್ಯೇ ದುರಾಸದ ।
ಅಸ್ತಿ ಮೇ ಸಂಗಮೋ ದೇವ ಅನೇನ ಸಮಯೇನ ತೇ ॥೧೮॥

ತೀಕ್ಷ್ಣಕಿರಣವುಳ್ಳವನೇ, ದುರಾಸದನೇ, ಮಹಾಬಾಹುವೇ, ದೇವನೇ, ಈ ಶರತ್ತಿನ ಮೇಲೆ ನಾನು ನಿನ್ನ ಸಂಗಮವನ್ನು ಮಾಡುವೆನು.

ಸೂರ್ಯಃ

ಭವಿಷ್ಯತಿ ಮಹಾಬಾಹುಃ ಕುಂಡಲೀ ದಿವ್ಯವರ್ಮಭೃತ್ ।
ಉಭಯಂ ಚಾಮೃತಮಯಂ ತಸ್ಯ ಭದ್ರೇ ಭವಿಷ್ಯತಿ ॥೧೯॥

ಸೂರ್ಯ– ಮಂಗಳಸ್ವರೂಪಳೇ, ದಿವ್ಯವಾದ ಕವಚವನ್ನೂ ಮತ್ತು ಕುಂಡಲಗಳನ್ನೂ ಧರಿಸಿದ ಮಹಾಬಾಹುವು ಜನಿಸುವನು. ಅಮೃತದಿಂದ ಉದ್ಭವಿಸಿದ ಅವೆರಡು ಅವನಿಗೆ ಉಂಟಾಗುವುವು.

ಕುಂತೀ

ಯದ್ಯೇತದಮೃತಾದಸ್ತಿ ಕುಂಡಲೇ ವರ್ಮ ಚೋತ್ತಮಮ್ ।
ಮಮ ಪುತ್ರಸ್ಯ ಯಂ ವೈ ತ್ವಂ ಮತ್ತ ಉತ್ಪಾದಯಿಷ್ಯಸಿ ।
ತ್ವದ್ವೀರ್ಯರೂಪಸತ್ತ್ವಾಜ್ಞಾ ಧರ್ಮಯುಕ್ತೋ ಭವೇತ್ ಸ ಚ ॥೨೦॥

ಕುಂತೀ– ನೀನು ನನ್ನಲ್ಲಿ ಅಮೃತದಿಂದ ಉದ್ಭವಿಸಿದ ಕುಂಡಲಗಳನ್ನೂ ಮತ್ತು ಶ್ರೇಷ್ಠವಾದ ಕವಚವನ್ನೂ ಹೊಂದಿರುವ ಪುತ್ರನನ್ನು ಉತ್ಪಾದಿಸುವುದಾದರೆ ಅವನು ನಿನ್ನ ವೀರ್ಯ, ರೂಪ, ಸತ್ತ್ವ ಮತ್ತು ಪರಾಕ್ರಮಗಳನ್ನು ಹೊಂದಿದವನೂ ಧರ್ಮಯುಕ್ತನೂ ಆಗಿರಬೇಕು.

ಸೂರ್ಯಃ

ಅದಿತ್ಯೇ ಕುಂಡಲೇ ರಾಜ್ಞಿ ಮತ್ಸಮೇ ಮತ್ತಕಾಶಿನಿ ।
ತೇಽಸ್ಯ ದಾಸ್ಯಾಮಿ ವೈ ಭೀರು ವರ್ಮ ಚೈವೇದಮುತ್ತಮಮ್ ॥೨೧॥

ಸೂರ್ಯ– ಎಲೌ ಮತ್ತಕಾಶಿನಿಯೇ, ಎಲೌ ರಾಣಿಯೇ, ಎಲೌ ಭೀರುವೇ, ನಾನು ಮೂಲರೂಪದಲ್ಲಿ ಹೊಂದಿದ ನನ್ನ ಕುಂಡಲಗಳನ್ನೂ ಮತ್ತು ಈ ಶ್ರೇಷ್ಠವಾದ ಕವಚವನ್ನೂ ಅವನಿಗೆ ಕೊಡುವೆನು (ವಾದಿರಾಜರು).

ಕುಂತೀ

ಪರಮಂ ಭಗವನ್ನೇವಂ ಸಂಗಮಿಷ್ಯೇ ತ್ವಯಾ ಸಹ ।
ಯದಿ ಪುತ್ರೋ ಭವೇದೇವಂ ಯಥಾ ವದಸಿ ಗೋಪತೇ ॥೨೨॥

ಕುಂತೀ– ಪೂಜ್ಯನೇ, ಇದು ಶ್ರೇಷ್ಠವಾದ ಮಾರ್ಗ. ಗೋಪತಿಯೇ, ನೀನು ಹೇಳುವಂತೆ ಪುತ್ರನು ಜನಿಸುವುದಾದರೆ ನಿನ್ನ ಸಂಗವನ್ನು ಮಾಡುವೆನು.

ವೈಶಂಪಾಯನಃ

ತಥೇಯ್ಯುಕ್ತ್ವಾ ತು ತಾಂ ಕುಂತೀಮಾವಿವೇಶ ವಿಹಂಗಮಃ ।
ಸ್ವರ್ಭಾನುಶತ್ರುರ್ಯೋಗಾತ್ಮಾ ನಾಭ್ಯಾಂ ಪಸ್ಪರ್ಶ ಚೈವ ತಾಮ್ ॥೨೩॥

ವೈಶಂಪಾಯನ– ಹಾಗೆಯೇ ಆಗಲಿ ಎಂದು ಹೇಳಿ ಆಕಾಶದಲ್ಲಿ ಸಂಚರಿಸುವವನೂ, ರಾಹುವಿಗೆ ಶತ್ರುವೂ, ಯೋಗಾತ್ಮನೂ ಆದ ಸೂರ್ಯನು ಕುಂತಿಯ ಸಮೀಪಕ್ಕೆ ಬಂದು ಅವಳ ನಾಭಿಯನ್ನು ಸ್ಪರ್ಶಮಾಡಿದನು.

ತತಃ ಸಾ ವಿಹ್ವಲೇವಾಸೀತ್ ಕನ್ಯಾ ಸೂರ್ಯಸ್ಯ ತೇಜಸಾ ।
ಪಪಾತ ಚಾಥ ಸಾ ದೇವೀ ಶಯನೇ ಮೂಢಚೇತನಾ ॥೨೪॥

ಆಗ ಆ ಕನ್ಯೆಯು ಸೂರ್ಯನ ತೇಜಸ್ಸಿನಿಂದ ವಿಹ್ವಲಳಾಗಿ ತನ್ನ ಪ್ರಜ್ಞೆಯನ್ನು ಕಳೆದುಕೊಂಡು ಹಾಸಿಗೆಯಲ್ಲಿ ಬಿದ್ದಳು.

ಸೂರ್ಯಃ

ಸಾಧಯಿಷ್ಯಾಮಿ ಸುಶ್ರೋಣಿ ಪುತ್ರಂ ವೈ ಜನಯಿಷ್ಯಸಿ ।
ಸರ್ವಶಸ್ತ್ರಭೃತಾಂ ಶ್ರೇಷ್ಠಂ ಕನ್ಯಾ ಚೈವ ಭವಿಷ್ಯಸಿ ॥೨೫॥

ಸೂರ್ಯ– ಸುಶ್ರೋಣಿಯೇ, ನಾನು ಹೋಗಿಬರುತ್ತೇನೆ. ನೀನು ಸರ್ವಶಸ್ತ್ರಧಾರಿಗಳಲ್ಲಿ ಶ್ರೇಷ್ಠನಾದ ಪುತ್ರನನ್ನು ಪಡೆಯುವಿ ಮತ್ತು ಪುನಃ ಕನ್ಯೆಯೇ ಆಗುವಿ.

ವೈಶಂಪಾಯನಃ

ತತಃ ಸಾ ವ್ರೀಡಿತಾ ಬಾಲಾ ತದಾ ಸೂರ್ಯಮಥಾಬ್ರವೀತ್ ।
ಏವಮಸ್ತ್ವಿತಿ ರಾಜೇಂದ್ರ ಪ್ರಸ್ಥಿತಂ ಭೂರಿವರ್ಚಸಮ್ ॥೨೬॥

ವೈಶಂಪಾಯನ– ಎಲೈ ರಾಜೇಂದ್ರನೇ, ಆಗ ನಾಚಿಕೆಯಿಂದ ಕೂಡಿದ ಆ ಬಾಲೆಯು ಮಹಾವರ್ಚಸ್ವಿಯಾದ ಹೊರಟುನಿಂತ ಸೂರ್ಯನನ್ನು ಕುರಿತು ಹಾಗೆಯೇ ಆಗಲಿ ಎಂದು ಹೇಳಿದಳು.

ಇತಿ ಸ್ಮೋಕ್ತಾ ಕುಂತಿರಾಜಾತ್ಮಜಾ ಸಾ
ವಿವಸ್ವಂತಂ ಯಾಚಮಾನಾ ಸಲಜ್ಜಾ ।
ತಸ್ಮಿನ್ ಪುಣ್ಯೇ ಶಯನೀಯೇ ಪಪಾತ
ಮೋಹಾವಿಷ್ಟಾ ಭಜ್ಯಮಾನಾ ಲತೇವ ॥೨೭॥

ಹೀಗೆ ಹೇಳಲ್ಪಟ್ಟ ಕುಂತಿರಾಜಕುಮಾರಿಯಾದ ಅವಳು ಲಜ್ಜೆಯಿಂದ ಕೂಡಿ ಸೂರ್ಯನನ್ನು ಬೇಡುತ್ತಾ ಆ ಪವಿತ್ರವಾದ ಶಯನದಲ್ಲಿ ಮುರಿದುಬೀಳುವ ಲತೆಯಂತೆ ಮೋಹಾವಿಷ್ಟಳಾಗಿ ಬಿದ್ದಳು.

ತಿಗ್ಮಾಂಶುಸ್ತಾಂ ತೇಜಸಾ ಮೋಹಯಿತ್ವಾ
ಯೋಗೇನಾವಿಶ್ಯಾತ್ಮಸಂಸ್ಥಾಂ ಚಕಾರ ।
ನ ಚೈವೈನಾಂ ದೂಷಯಾಮಾಸ ಭಾನುಃ
ಸಂಜ್ಞಾಂ ಲೇಭೇ ಭೂಯ ಏವಾಥ ಬಾಲಾ ॥೨೮॥

ಸೂರ್ಯನು ತನ್ನ ತೇಜಸ್ಸಿನಿಂದ ಅವಳಿಗೆ ಮೋಹವನ್ನುಂಟುಮಾಡಿ ಯೋಗಶಕ್ತಿಯಿಂದ ಅವಳನ್ನು ಪ್ರವೇಶಿಸಿ ಅವಳನ್ನು ತನ್ನ ಅಧೀನಳನ್ನಾಗಿ ಮಾಡಿಕೊಂಡನು. ಸೂರ್ಯನು ಅವಳಿಗೆ ದೋಷವನ್ನು ಉಂಟುಮಾಡಲಿಲ್ಲ. ಅನಂತರ ಆ ಬಾಲೆಯು ಪುನಃ ಸಂಜ್ಞೆಯನ್ನು ಮರಳಿ ಪಡೆದಳು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂಸಂಹಿತಾಯಾಂ ವೈಯಾಸಿಕ್ಯಾಂ
ವನಪರ್ವಣಿ ಅಷ್ಟನವತಿತದ್ವಿಶತತಮೋऽಧ್ಯಾಯಃ ॥
॥ ಇತಿ ಕುಂಡಲಾಹರಣಪರ್ವಣಿ ಸೂರ್ಯಕುಂತೀಸಮಾಗಮೋ
ನಾಮಾಷ್ಟಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವನಪರ್ವದಲ್ಲಿ ಇನ್ನೂರ ತೊಂಬತ್ತೆಂಟನೆಯ ಅಧ್ಯಾಯ ಮುಗಿಯಿತು.

★ ★ ★ ★

ಇನ್ನೂರ ತೊಂಬತ್ತೊಂಬತ್ತನೆಯ ಅಧ್ಯಾಯ

ಕರ್ಣನ ಜನನ ಮತ್ತು ಕುಂತಿಯಿಂದ ಅವನ ಪರಿತ್ಯಾಗ.

ವೈಶಂಪಾಯನಃ

ತತೋ ಗರ್ಭಃ ಸಮಭವತ್ ಪೃಥಾಯಾಃ ಪೃಥಿವೀಪತೇ ।
ಶುಕ್ಲೇ ದಶೋತ್ತರೇ ಪಕ್ಷೇ ತಾರಾಪತಿರಿವಾಂಬರೇ ॥೧॥

ವೈಶಂಪಾಯನ– ಎಲೈ ರಾಜನೇ, ಅನಂತರ ಕುಂತಿಯ ಗರ್ಭವು ಶುಕ್ಲಪಕ್ಷದ ದಶಮಿಯ ನಂತರ ಆಕಾಶದಲ್ಲಿ ಚಂದ್ರನು ಬೆಳೆಯುವಂತೆ ಬೆಳೆಯಿತು.

ಸಾ ಬಾಂಧವಭಯಾದ್ ಬಲಾ ಗರ್ಭಂ ತು ವಿನಿಗೂಹತೀ ।
ಧಾರಯಾಮಾಸ ಸುಶ್ರೋಣೀ ನ ಚೈನಾಂ ಬುಬುಧೇ ಜನಃ ॥೨॥

ಆ ಸುಶ್ರೋಣಿಯಾದ ಬಾಲೆಯು ಬಂಧುಗಳ ಭಯದಿಂದ ಗರ್ಭವನ್ನು ಮುಚ್ಚಟ್ಟುಕೊಂಡೇ ಧರಿಸಿದಳು. ಯಾರಿಗೂ ಅದು ತಿಳಿಯಲಿಲ್ಲ.

ನ ಹಿ ತಾಂ ವೇದ ನಾರ್ಯನ್ಯಾ ಕಾಚಿದ್ ಧಾತ್ರೇಯಿಕಾಮೃತೇ ।
ಕನ್ಯಾಪುರಗತಾಂ ಬಾಲಾಂ ನಿಪುಣಾಂ ಪರಿರಕ್ಷಣೇ ॥೩॥

ಕನ್ಯಾ ಅಂತಃಪುರದಲ್ಲಿ ಇದ್ದ ಕುಂತಿಯನ್ನು ರಕ್ಷಿಸುವುದರಲ್ಲಿ ನಿಪುಣಳಾದ ಧಾತ್ರಿಯ (ದಾದಿಯ) ಮಗಳೊಬ್ಬಳನ್ನು ಬಿಟ್ಟರೆ ಬೇರೆ ಯಾವ ಸ್ತ್ರೀಯರಿಗೂ ಕುಂತಿಯು ಗರ್ಭಿಣಿ ಎಂದು ತಿಳಿಯಲಿಲ್ಲ.

ತತಃ ಕಾಲೇನ ಸಾ ಗರ್ಭಂ ಸುಷುವೇ ವರವರ್ಣಿನೀ ।
ಕನ್ಯೈವ ತಸ್ಯ ದೇವಸ್ಯ ಪ್ರಸಾದಾದಮರಪ್ರಭಮ್ ॥೪॥

ಅನಂತರ ಕಾಲಕ್ರಮದಲ್ಲಿ ಆ ವರವರ್ಣಿನಿಯು ಸೂರ್ಯನ ಅನುಗ್ರಹದಿಂದ ಕನ್ಯೆಯಾಗಿಯೇ ದೇವತಾ ಕಾಂತಿಯನ್ನು ಹೊಂದಿದ್ದ ಮಗನನ್ನು ಪಡೆದಳು.

ತಥೈವಾಬದ್ಧಕವಚಂ ಕನಕೋಜ್ಜ್ವಲಕುಂಡಲಮ್ ।
ಹರ್ಯಕ್ಷಂ ವೃಷಭಸ್ಕಂಧಂ ಯಥಾऽಸ್ಯ ಪಿತರಂ ತಥಾ ॥೫॥

ಅವನ ತಂದೆಯಂತೆಯೇ ಕವಚವನ್ನು ಧರಿಸಿದ್ದ ಉಜ್ವಲ ಕನಕಕುಂಡಲಗಳನ್ನು ಧರಿಸಿದ್ದ ಸಿಂಹದ ದೃಷ್ಟಿಯನ್ನು, ವೃಷಭ ಸ್ಕಂದವನ್ನು ಹೊಂದಿದ್ದ ಶಿಶುವನ್ನು ಪಡೆದಳು.

ಜಾತಮಾತ್ರಂ ಚ ತಂ ಗರ್ಭಂ ಧಾತ್ರ್ಯಾ ಸಮ್ಮಂತ್ರ್ಯ ಭಾಮಿನೀ ।
ಉತ್ಸಸ್ಪೃಕಾಮಾ ತಂ ಗರ್ಭಂ ಕಾರಯಾಮಾಸ ಭಾರತ ॥೬॥

ಎಲೈ ಭಾರತನೇ, ಆ ಭಾಮಿನಿಯು ಶಿಶುವು ಜನಿಸಿದ ತಕ್ಷಣವೇ ತನ್ನ ಧಾತ್ರಿಯ ಜೊತೆಯಲ್ಲಿ ಸಮಾಲೋಚನೆಯನ್ನು ಮಾಡಿ ಆ ಗರ್ಭವನ್ನು ಪರಿತ್ಯಾಗವನ್ನು ಮಾಡಲು ಬಯಸಿ ಒಂದು ಪೆಟ್ಟಿಗೆಯನ್ನು ನಿರ್ಮಿಸಿದಳು.

ಮಂಜೂಷಾಂ ಶಿಲ್ಪಿಭಿಸ್ತೂರ್ಣಂ ಸುನದ್ಧಾಂ ಸುಪ್ರತಿಷ್ಠಿತಾಮ್ ।
ಪ್ಲವೈರ್ಬಹುವಿಧೈರ್ಬದ್ಧಾಂ ಪ್ಲವನಾರ್ಥಂ ಜಲೇ ನೃಪ ॥೭॥

ಎಲೈ ರಾಜನೇ, ಶಿಲ್ಪಿಗಳಿಂದ ಚೆನ್ನಾಗಿ ಕಟ್ಟಲ್ಪಟ್ಟ ಸುಪ್ರತಿಷ್ಠಿತವಾದ ನೀರಿನಲ್ಲಿ ತೇಲಲು ಸಹಕಾರಿಯಾದ ಅನೇಕ ತೇಲುವ ವಸ್ತುಗಳಿಂದ ಕಟ್ಟಲ್ಪಟ್ಟ ಪೆಟ್ಟಿಗೆಯನ್ನು ಮಾಡಿಸಿದಳು.

ಅಜಿನೈರ್ಮೃದುಭಿಶ್ಚೈವಂ ಸಂಸ್ತೀರ್ಣಶಯನಾಂ ತಥಾ ।
ಮಂಜೂಷಾಯಾಂ ಸಮಾಧಾಯ ಸ್ವಾಸ್ತೀರ್ಣಾಯಾಂ ಸಮಂತತಃ ॥೮॥

ಮಧೂಚ್ಚಿಷ್ಟಸ್ಥಿತಾಯಾಂ ಸಾ ಸುಖಾಯಾಂ ರುದತೀ ತಥಾ ।
ಶ್ಲಕ್ಷ್ಣಾಯಾಂ ಸುಪಿಧಾನಾಯಾಮಶ್ವನದ್ಯಾಮವಾಸೃಜತ್ ॥೯॥

ಮೃದುವಾದ ಚರ್ಮಗಳಿಂದ ಮಾಡಿದ ಹಾಸಿಗೆಯನ್ನು ಆ ಪೆಟ್ಟಿಗೆಯಲ್ಲಿ ಎಲ್ಲ ಕಡೆಗಳಲ್ಲಿಯೂ ಚೆನ್ನಾಗಿ ಹಾಸಿ ಅದನ್ನು ಜೇಣುಮೇಣದಿಂದ ಭದ್ರವಾಗಿ ಅಂಟಿಸಿ ಸುಂದರವಾಗಿ ಚೆನ್ನಾಗಿ ಮುಚ್ಚಲ್ಪಟ್ಟ ಆ ಪೆಟ್ಟಿಗೆಯನ್ನು ಅಳುತ್ತಾ ಅಶ್ವನದಿಯಲ್ಲಿ ತೇಲಿ ಬಿಟ್ಟಳು.

ಜಾನತೀ ಚಾಪ್ಯಕರ್ತವ್ಯಂ ಕನ್ಯಾಯಾ ಗರ್ಭಧಾರಣಮ್ ।
ಪುತ್ರಸ್ನೇಹೇನ ಸಾ ರಾಜನ್ ಕರುಣಂ ಪರ್ಯದೇವಯತ್ ॥೧೦॥

ಕನ್ಯೆಯು ಗರ್ಭವನ್ನು ಧರಿಸುವುದು ಅಕಾರ್ಯವೆಂದು ಅವಳು ತಿಳಿದಿದ್ದರೂ ಎಲೈ ರಾಜನೇ, ಪುತ್ರಸ್ನೇಹದಿಂದ ಅವಳು ಕರುಣಾಜನಕವಾಗಿ ಗೋಳಾಡಿದಳು.

ಸಮುತ್ಸೃಜಂತೀ ಮಂಜೂಷಾಮಶ್ವನದ್ಯಾಂ ತದಾ ಜಲೇ ।
ಉವಾಚ ರುದತೀ ಕುಂತೀ ಯಾನಿ ವಾಕ್ಯಾನಿ ತಚ್ಛೃಣು ॥೧೧॥

ಆ ಪೆಟ್ಟಿಗೆಯನ್ನು ಅಶ್ವನದಿಯ ನೀರಿನಲ್ಲಿ ತೇಲಿಬಿಡುತ್ತಾ ಕುಂತಿಯು ಅಳುತ್ತಾ ಯಾವ ಮಾತುಗಳನ್ನು ಆಡಿದಳೆಂದು ಹೇಳುತ್ತೇನೆ ಕೇಳು.

ಸ್ವಸ್ತಿ ತೇ ಚಾಂತರಿಕ್ಷೇಭ್ಯಃ ಪಾರ್ಥಿವೇಭ್ಯಶ್ಚ ಪುತ್ರಕ ।
ದಿವ್ಯೇಭ್ಯಶ್ಚೈವ ಭೂತೇಭ್ಯಸ್ತಥಾ ತೋಯಚರಾಶ್ಚ ಯೇ ॥೧೨॥

ಎಲೈ ಚಿಕ್ಕಶಿಶುವೇ, ನಿನಗೆ ಅಂತರಿಕ್ಷದಲ್ಲಿರುವ ಪ್ರಾಣಿಗಳಿಂದ, ಭೂಮಿಯ ಮೇಲಿರುವ ಪ್ರಾಣಿಗಳಿಂದ, ಆಕಾಶಗಳಿಗೆ ಪ್ರಾಣಿಗಳಿಂದ ಮತ್ತು ಅದರಂತೆ ಜಲಚರ ಪ್ರಾಣಿಗಳಿಂದ ಶುಭವಾಗಲಿ.

ಶಿವಾಸ್ತೇ ಸಂತು ಪಂಥಾನೋ ಮಾ ಚ ತೇ ಪರಿಪಂಥಿನಃ ।
ಆಗತಾಶ್ಚ ತಥಾ ಪುತ್ರ ಭವಂತ್ಯದ್ರೋಹಚೇತಸಃ ॥೧೩॥

ಮಗುವೇ, ನಿನ್ನ ಮಾರ್ಗವು ಸುಖವಾಗಿರಲಿ. ನಿನಗೆ ಯಾರೂ ವಿರೋಧಿಗಳು ಬರುವುದು ಬೇಡ. ಬಂದವರು ನಿನಗೆ ದ್ರೋಹವನ್ನು ಮಾಡದಿರಲಿ.

ಪಾತು ತ್ವಾಂ ವರುಣೋ ರಾಜಾ ಸಲಿಲೇ ಸಲಿಲೇಶ್ವರಃ ।
ಅಂತರಿಕ್ಷೇಽಂತರಿಕ್ಷಸ್ಥಃ ಪವನಃ ಸರ್ವಗಸ್ತಥಾ ॥೧೪॥

ಜಲೇಶ್ವರನಾದ ವರುಣರಾಜನು ಜಲದಲ್ಲಿ ನಿನ್ನನ್ನು ರಕ್ಷಿಸಲಿ. ಅಂತರಿಕ್ಷದಲ್ಲಿ ಸರ್ವವ್ಯಾಪ್ತನೂ, ಅಂತರಿಕ್ಷಸ್ಥಿತನೂ ಆದ ವಾಯುವು ರಕ್ಷಿಸಲಿ.

ಪಿತಾ ತ್ವಾಂ ಪಾತು ಸರ್ವತ್ರ ತಪನಸ್ತಪತಾಂ ವರಃ ।
ಯೇನ ದತ್ತೋಽಸಿ ಮೇ ಪುತ್ರ ದಿವ್ಯೇನ ವಿಧಿನಾ ಕಿಲ ॥೧೫॥

ಎಲೈ ಪುತ್ರನೇ, ಯಾವ ಸೂರ್ಯನು ದಿವ್ಯವಾದ ವಿಧಿಯಿಂದ ನಿನ್ನನ್ನು ನನಗೆ ಕೊಟ್ಟಿದ್ದಾನೆಯೋ, ಅಂತಹ ಪ್ರಕಾಶಿಸುವವರಲ್ಲಿ ಶ್ರೇಷ್ಠನಾದ ತಂದೆಯಾದ ಸೂರ್ಯನು ನಿನ್ನನ್ನು ಎಲ್ಲಾ ಕಡೆಯಲ್ಲಿಯೂ ರಕ್ಷಿಸಲಿ.

ಆದಿತ್ಯಾ ವಸವೋ ರುದ್ರಾಃ ಸಾಧ್ಯಾ ವಿಶ್ವೇ ಚ ದೇವತಾಃ ।
ಮರುತಶ್ಚ ಮಹೇಂದ್ರೇಣ ದಿಶಶ್ಚ ಸದಿಗೀಶ್ವರಾಃ ॥೧೬॥

ರಕ್ಷಂತು ತ್ವಾಂ ಸುರಾಃ ಸರ್ವೇ ಸಮೇಷು ವಿಷಮೇಷು ಚ ।
ವೇತ್ಸ್ಯಾಮಿ ತ್ವಾಂ ವಿದೇಶೇಽಪಿ ಕವಚೇನಾಭಿಸೂಚಿತಮ್ ॥೧೭॥

ಆದಿತ್ಯರು, ವಸುಗಳು, ರುದ್ರರು, ಸಾಧ್ಯರು, ವಿಶ್ವೇದೇವತೆಗಳು, ಇಂದ್ರನಿಂದ ಸಹಿತರಾದ ಮರುತ್ತುಗಳು, ಎಲ್ಲಾ ದಿಕ್ಕುಗಳೂ, ಎಲ್ಲಾ ದಿಕ್ಪಾಲಕರು, ಎಲ್ಲ ದೇವತೆಗಳು ನಿನ್ನನ್ನು ಸಮವಾದ ಅವಸ್ಥೆಯಲ್ಲಿಯೂ, ವಿಷಮವಾದ ಅವಸ್ಥೆಯಲ್ಲಿಯೂ ರಕ್ಷಿಸಲಿ. ನೀನು ವಿದೇಶದಲ್ಲಿದ್ದರೂ ಈ ಕವಚದ ಸೂಚನೆಯಿಂದ ನಾನು ನಿನ್ನನ್ನು ತಿಳಿಯುವೆನು.

ಧನ್ಯಸ್ತೇ ಪುತ್ರ ಜನಕೋ ದೇವೋ ಭಾನುರ್ವಿಭಾವಸುಃ ।
ಯಸ್ತ್ವಾಂ ದ್ರಕ್ಷ್ಯತಿ ದಿವ್ಯೇನ ಚಕ್ಷುಷಾ ವಾಹಿನೀಗತಮ್ ॥೧೮॥

ಮಗುವೇ, ನಿನ್ನನ್ನು ಪಡೆದ ನಿನ್ನ ತಂದೆಯಾದ ಸೂರ್ಯದೇವನು ಧನ್ಯನಾದವನು. ಏಕೆಂದರೆ ಅವನು ನದಿಯಲ್ಲಿ ಹೋಗುವ ನಿನ್ನನ್ನು ತನ್ನ ದಿವ್ಯದೃಷ್ಟಿಯಿಂದ ನೋಡುತ್ತಾನೆ.

ಧನ್ಯಾ ಸಾ ಪ್ರಮದಾ ಯಾ ತ್ವಾಂ ಪುತ್ರತ್ವೇ ಕಲ್ಪಯಿಷ್ಯತಿ ।
ಯಸ್ಯಾಸ್ತ್ವಂ ತೃಷಿತಃ ಪುತ್ರ ಸ್ತನಂ ಪಾಸ್ಯಸಿ ದೇವಜ ॥೧೯॥

ಎಲೈ ಮಗುವೇ, ಯಾವ ವನಿತೆಯು ನಿನ್ನನ್ನು ಪುತ್ರನೆಂದು ಸ್ವೀಕರಿಸುತ್ತಾಳೆಯೋ ದೇವಕುಮಾರನೇ, ಯಾರ ಸ್ತನವನ್ನು ಬಾಯಾರಿದ ನೀನು ಕುಡಿಯುವೆಯೋ ಅಂತಹ ವನಿತೆಯು ಧನ್ಯಳಾದವಳು.

ಕೋ ನು ಸ್ವಪ್ನಸ್ತಯಾ ದೃಷ್ಟೋ ಯಾ ತ್ವಾಮಾದಿತ್ಯವರ್ಚಸಮ್ ।
ದಿವ್ಯವರ್ಮಸಮಾಯುಕ್ತಂ ದಿವ್ಯಕುಂಡಲಭೂಷಿತಮ್ ॥೨೦॥

ಪದ್ಮಾಯತವಿಶಾಲಾಕ್ಷಂ ಪದ್ಮತಾಮ್ರದಲೋಜ್ಜ್ವಲಮ್ ।
ಸುಲಲಾಟಂ ಸುಕೇಶಾಂತಂ ಪುತ್ರತ್ವೇ ಕಲ್ಪಯಿಷ್ಯತಿ ॥೨೧॥

ದಿವ್ಯಕವಚದಿಂದ ಕೂಡಿದವನೂ, ಆದಿತ್ಯನ ಕಾಂತಿಯಿಂದ ಕೂಡಿದವನೂ, ದಿವ್ಯ ಕುಂಡಲಭೂಷಿತನೂ, ಪದ್ಮದಳದಂತೆ ವಿಶಾಲನೇತ್ರನೂ, ಪದ್ಮದಳದಂತೆ ತಾಮ್ರದಂತೆ ಹೊಳೆಯುವವನೂ, ಒಳ್ಳೆಯ ಹಣೆಯನ್ನೂ, ಒಳ್ಳೆಯ ಕೇಶವನ್ನೂ ಹೊಂದಿದವನಾದ ನಿನ್ನನ್ನು ಯಾವ ವನಿತೆಯು ಪುತ್ರನನ್ನಾಗಿ ಸ್ವೀಕರಿಸುವಳೋ ಅವಳು ಎಂತಹ ಸ್ವಪ್ನವನ್ನು ನೋಡಿರಬೇಕು!

ಧನ್ಯಾ ದ್ರಕ್ಷ್ಯಂತಿ ಪುತ್ರ ತ್ವಾಂ ಭೂಮೌ ಸರ್ಪಂತಮಾತ್ಮಜ ।
ಅವ್ಯಕ್ತಕಲವಾಕ್ಯಾನಿ ಭಾಷಂತಂ ಪಾಂಸುಗುಂಠಿತಮ್ ॥೨೨॥

ಎಲೈ ನನ್ನ ಮಗುವೇ, ಭೂಮಿಯಲ್ಲಿ ಹರಿದಾಡುತ್ತಾ ಅವ್ಯಕ್ತ ಮಧುರವಾಗಿ ಮಾತನಾಡುತ್ತಾ ಮಣ್ಣಿನಿಂದ ಕೂಡಿದ ಶರೀರವುಳ್ಳ ನಿನ್ನನ್ನು ನೋಡುವವರು ಧನ್ಯರು.

ಧನ್ಯಾ ದ್ರಕ್ಷ್ಯಂತಿ ಪುತ್ರ ತ್ವಾಂ ಪುನರ್ಯೌವನಗೋಚರಮ್ ।
ಹಿಮವದ್ವನಸಂಭೂತಂ ಸಿಂಹಂ ಕೇಸರಿಣಂ ಯಥಾ ॥೨೩॥

ಪುತ್ರನೇ, ನೀನು ಯೌವನಸ್ಥನಾದಮೇಲೆ ಹಿಮಾಲಯದ ವನದಲ್ಲಿ ಹುಟ್ಟಿದ ಸಿಂಹದಂತಿರುವ ನಿನ್ನನ್ನು ನೋಡುವವರು ಧನ್ಯರು.

ವೈಶಂಪಾಯನಃ

ಏವಂ ಬಹುವಿಧಂ ರಾಜನ್ ವಿಲಪ್ಯ ಕರುಣಂ ಪೃಥಾ ।
ಅವಾಸೃಜತ ಮಂಜೂಷಾಮಶ್ವನದ್ಯಾಸ್ತದಾ ಜಲೇ ॥೨೪॥

ವೈಶಂಪಾಯನ– ಎಲೈ ರಾಜನೇ, ಹೀಗೆ ಕುಂತಿಯು ಬಹುವಿಧವಾಗಿ ಕರುಣಾಜನಕವಾಗಿ ವಿಲಾಪವನ್ನು ಮಾಡಿ ಆ ಪೆಟ್ಟಿಗೆಯನ್ನು ಆಗ ಅಶ್ವನದಿಯ ಜಲದಲ್ಲಿ ತೇಲಿಬಿಟ್ಟಳು.

ರುದತೀ ಪುತ್ರಶೋಕಾರ್ತಾ ನಿಶೀಥೇ ಕಮಲೇಕ್ಷಣಾ ।
ಧಾತ್ರ್ಯಾ ಸಹ ಪೃಥಾ ರಾಜನ್ ಪುತ್ರದರ್ಶನಲಾಲಸಾ ॥೨೫॥

ವಿಸರ್ಜಯಿತ್ವಾ ಮಂಜೂಷಾಂ ಸಂಬೋಧನಭಯಾತ್ ಪಿತುಃ ।
ವಿವೇಶ ರಾಜಭವನಂ ಪುನಃ ಶೋಕಾತುರಾ ತತಃ ॥೨೬॥

ರಾಜನೇ, ಶಿಶುವನ್ನು ನೋಡುವ ಹಿರಿಯ ಬಯಕೆ ಉಳ್ಳವಳಾಗಿ, ಪುತ್ರಶೋಕದಿಂದ ಆರ್ತಳಾಗಿ ಅಳುತ್ತಾ ಕಮಲನೇತ್ರೆಯಾದ ಆ ಕುಂತಿಯು ರಾತ್ರಿಯಲ್ಲಿ ಆ ಪೆಟ್ಟಿಗೆಯನ್ನು ವಿಸರ್ಜಿಸಿ ತಂದೆಗೆ ತಿಳಿಯಬಹುದೆಂದು ಭಯಪಟ್ಟು ಶೋಕಾತುರಳಾಗಿ ಪುನಃ ರಾಜಭವನವನ್ನು ಪ್ರವೇಶಿಸಿದಳು.

ಮಂಜೂಷಾ ತ್ವಶ್ವನದ್ಯಾಃ ಸಾ ಯಯೌ ಚರ್ಮಣ್ವತೀಂ ನದೀಮ್ ।
ಚರ್ಮಣ್ವತ್ಯಾಶ್ಚ ಯಮುನಾಂ ತತೋ ಗಂಗಾಂ ಜಗಾಮ ಹ ॥೨೭॥

ಆ ಪೆಟ್ಟಿಗೆಯಾದರೂ ಅಶ್ವನದಿಯಿಂದ ತೇಲಿಕೊಂಡು ಚರ್ಮಣ್ವತೀ ನದಿಗೆ ಹೋಯಿತು. ಚರ್ಮಣ್ವತೀ ನದಿಯಿಂದ ಯಮುನೆಗೂ ಅಲ್ಲಿಂದ ಗಂಗೆಗೂ ಹೋಯಿತು.

ಗಂಗಾಯಾಂ ಸೂತವಿಷಯಂ ಚಂಪಾಮನುಯಯೌ ಪುರೀಮ್ ।
ಸ ಮಂಜೂಷಾಗತೋ ಗರ್ಭಸ್ತರಂಗೈರುಹ್ಯಮಾನಕಃ ॥೨೮॥

ಗಂಗೆಯಲ್ಲಿ ತೇಲಿಕೊಂಡು ಆ ಪೆಟ್ಟಿಗೆಯು ಸೂತನ ರಾಜ್ಯಪ್ರದೇಶವಾದ ಚಂಪಾಪುರಿಗೆ ಹೋಯಿತು. ಪೆಟ್ಟಿಗೆಯಲ್ಲಿದ್ದ ಶಿಶುವೂ ಸಹ ಅಲೆಗಳಿಂದ ಒಯ್ಯಲ್ಪಟ್ಟು ಅಲ್ಲಿ ತಲುಪಿತು.

ಅಮೃತಾದುತ್ಥಿತಂ ದಿವ್ಯಂ ತನುವರ್ಮ ಸಕುಂಡಲಮ್ ।
ಧಾರಯಾಮಾಸ ತಂ ಗರ್ಭಂ ದಿವ್ಯಂ ಚ ವಿಧಿನಿರ್ಮಿತಮ್ ॥೨೯॥

ವಿಧಿನಿರ್ಮಿತವಾದ ಆ ದಿವ್ಯವಾದ ಗರ್ಭವು ಅಮೃತದಿಂದ ಉದ್ಭವಿಸಿದ ದಿವ್ಯವಾದ ಶರೀರ ಕವಚ ಮತ್ತು ಕುಂಡಲಗಳಿಂದ ರಕ್ಷಿಸಲ್ಪಟ್ಟಿತು.

ಏತದ್ ಗುಹ್ಯಂ ಮಹಾರಾಜ ಸೂರ್ಯಸ್ಯಾಸೀನ್ಮಹಾತ್ಮನಃ ।
ಸ ಸೂರ್ಯಸಂಭವೋ ಗರ್ಭಃ ಕುಂತ್ಯಾ ಗರ್ಭೇಣ ಧಾರಿತಃ ॥೩೦॥

ಮಹಾರಾಜನೇ, ಇದು ಮಹಾತ್ಮನಾದ ಸೂರ್ಯನ ರಹಸ್ಯವಾದ ವಿಷಯ. ಸೂರ್ಯನಿಂದ ಸಂಭವಿಸಿದ ಆ ಶಿಶುವನ್ನು ಕುಂತಿಯು ತನ್ನ ಗರ್ಭದಲ್ಲಿ ಧರಿಸಿದಳು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂಸಂಹಿತಾಯಾಂ ವೈಯಾಸಿಕ್ಯಾಂ
ವನಪರ್ವಣಿ ಏಕೋನತ್ರಿಶತತಮೋಽಧ್ಯಾಯಃ ॥
॥ ಇತಿ ಕುಂಡಲಾಹರಣಪರ್ವಣಿ ಕುಂತ್ಯಾಃ ಕರ್ಣಪರಿತ್ಯಾಗೋನಾಮ
ನವಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವನಪರ್ವದಲ್ಲಿ ಇನ್ನೂರ ತೊಂಬತ್ತೊಂಬತ್ತನೆಯ ಅಧ್ಯಾಯ ಮುಗಿಯಿತು.

★ ★ ★ ★

ಮುನ್ನೂರನೆಯ ಅಧ್ಯಾಯ

ಅಧಿರಥನಿಂದ ಶಿಶುರೂಪ ಕರ್ಣ ಪ್ರಾಪ್ತಿ. ರಾಧೆಯಿಂದ ಪಾಲನೆ. ಪರಶುರಾಮಾದಿಗಳಲ್ಲಿ ಅವನ ಅಸ್ತ್ರಾಭ್ಯಾಸ. ದುರ್ಯೋಧನ ಸಖ್ಯ ಮತ್ತು ದೇವೇಂದ್ರನ ಆಗಮನ.

ವೈಶಂಪಾಯನಃ

ಏತಸ್ಮಿನ್ನೇವ ಕಾಲೇ ತು ಧೃತರಾಷ್ಟ್ರಸ್ಯ ವೈ ಸಖಾ ।
ಸೂತೋಽಧಿರಥ ಇತ್ಯೇವ ಸದಾರೋ ಜಾಹ್ನವೀಂ ಯಯೌ ॥೧॥

ವೈಶಂಪಾಯನ– ಇದೇ ಕಾಲದಲ್ಲಿ ಧೃತರಾಷ್ಟ್ರನ ಸ್ನೇಹಿತನಾದ ಸೂತನಾದ ಅಧಿರಥನು ಪತ್ನೀ ಸಹಿತನಾಗಿ ಗಂಗೆಗೆ ಹೋದನು.

ತಸ್ಯ ಭಾರ್ಯಾಭವದ್ ರಾಜನ್ ರೂಪೇಣಾಸದೃಶೀ ಭುವಿ ।
ರಾಧಾ ನಾಮ ಮಹಾಭಾಗಾ ನ ಸಾ ಪುತ್ರಮವಿಂದತ ।
ಅಪತ್ಯಾರ್ಥೇ ಪರಂ ಯತ್ನಮಕರೋಚ್ಚ ವಿಶೇಷತಃ ॥೨॥

ಅವನಿಗೆ ಅಸದೃಶರೂಪವುಳ್ಳ ರಾಧಾ ಎಂಬ ಮಹಾನುಭಾವಳಾದ ಪತ್ನಿ ಇದ್ದಳು. ಅವರಿಗೆ ಮಕ್ಕಳಿರಲಿಲ್ಲ. ಮಕ್ಕಳನ್ನು ಪಡೆಯುವ ಸಲುವಾಗಿ ಅವಳು ವಿಶೇಷ ಪ್ರಯತ್ನವನ್ನು ಮಾಡಿದಳು.

ಸಾ ದದರ್ಶಾಥ ಮಂಜೂಷಾಮುಹ್ಯಮಾನಾಂ ಯದೃಚ್ಛಯಾ ।
ದತ್ತರಕ್ಷಪ್ರತಿಸರಾಮನ್ವಾಲಂಭನಶೋಭನಾಮ್ ॥೩॥

ಅನಂತರ ಅವಳು ಗಂಗೆಯಲ್ಲಿ ತೇಲಿಬರುತ್ತಿದ್ದ, ಕೆಳಗೆ ತೇಲುವಂತೆ ಅನೇಕ ಸಲಕರಣೆಗಳನ್ನು ಜೋಡಿಸಿದ್ದ ನೋಡುವುದಕ್ಕೆ ಸುಂದರವಾಗಿದ್ದ ಒಂದು ಪೆಟ್ಟಿಗೆಯನ್ನು ನೋಡಿದಳು.

ಊರ್ಮಿತುಂಗೈರುಹ್ಯಮಾನಾಮುಪನೀತಾಮುಪಹ್ವರೇ ।
ವಿವರ್ತಮಾನಾಂ ಬಹುಶಃ ಪುನಃ ಪುನರಿತಸ್ತತಃ ॥೪॥

ಎತ್ತರವಾದ ಅಲೆಗಳಿಂದ ಹೊಡೆಯಲ್ಪಟ್ಟು ದಡದ ಸಮೀಪದಲ್ಲಿ ಪುನಃ ಪುನಃ ಅನೇಕ ಬಾರಿ ಓಲಾಡುತ್ತಿದ್ದ ಆ ಪೆಟ್ಟಿಗೆಯನ್ನು ನೋಡಿದಳು.

ತತಃ ಸಾ ವಾಯುನಾ ರಾಜನ್‌ಸ್ರೋತಸಾ ಚ ಬಲೀಯಸಾ ।
ಊರ್ಮೇಸ್ತರಂಗೈರ್ಜಾಹ್ನವ್ಯಾಃ ಸಮಾನೀತಾಮುಪಹ್ವರಮ್ ॥೫॥

ಅವಳು ತರಂಗ ಮತ್ತು ವಾಯುಗಳ ವೇಗದಿಂದಲೂ ಮತ್ತು ಗಂಗೆಯ ಪ್ರವಾಹದಿಂದಲೂ ತನ್ನ ಸಮೀಪಕ್ಕೆ ತರಲ್ಪಟ್ಟ ಆ ಪೆಟ್ಟಿಗೆಯನ್ನು ನೋಡಿದಳು.

ಸಾ ತು ಕೌತೂಹಲಾತ್ ಪ್ರಾಪ್ತಾಂ ಗ್ರಾಹಯಾಮಾಸ ಭಾಮಿನೀ ।
ತತೋ ನಿವೇದಯಾಮಾಸ ಸೂತಸ್ಯಾಧಿರಥಸ್ಯ ವೈ ॥೬॥

ಅವಳು ಕುತೂಹಲದಿಂದ ಆ ಪೆಟ್ಟಿಗೆಯನ್ನು ಇನ್ನೊಬ್ಬರ ಕೈಯಲ್ಲಿ ಹಿಡಿಸಿ ಅದನ್ನು ಸೂತನಾದ ಅಧಿರಥನಿಗೆ ನಿವೇದಿಸಿದಳು.

ಸ ತಾಮುದ್ಧೃತ್ಯ ಮಂಜೂಷಾಮುತ್ಸಾರ್ಯ ಜಲಮಂತಿಕಾತ್ ।
ಯಂತ್ರೈರುದ್ಘಾಟಯಾಮಾಸ ಸೋಽಪಶ್ಯತ್ ತತ್ರ ಬಾಲಕಮ್ ॥೭॥

ಅವನು ಆ ಪೆಟ್ಟಿಗೆಯನ್ನು ಎತ್ತಿಕೊಂಡು ಕೆಳಭಾಗದಲ್ಲಿದ್ದ ನೀರನ್ನು ಒರೆಸಿ ಯಂತ್ರಗಳಿಂದ ಪೆಟ್ಟಿಗೆಯನ್ನು ತೆಗೆದು ಅದರಲ್ಲಿ ಒಂದು ಶಿಶುವನ್ನು ನೋಡಿದನು.

ತರುಣಾದಿತ್ಯಸಂಕಾಶಂ ವದನೇನ ವಿರಾಜತಾ ।
ಪರಿಮ್ಲಾನಮುಖಂ ಬಾಲಂ ರುದಂತಂ ಕ್ಷುಧಿತಂ ಭೃಶಮ್ ।
ಸ ತು ತಂ ಪರಯಾ ಲಕ್ಷ್ಮ್ಯಾ ದೃಷ್ಟ್ವಾ ಯುಕ್ತಂ ವರಾತ್ಮಜಮ್ ॥೮॥

ಉದಯಿಸುವ ಸೂರ್ಯನ ಕಾಂತಿಯನ್ನು ಹೊಂದಿದ, ಸುವರ್ಣಮಯವಾದ ಕವಚವನ್ನು ಧರಿಸಿದ, ಹೊಳೆಯುವ ಕರ್ಣಕುಂಡಲಗಳಿಂದ ಕೂಡಿದ, ಸುಂದರವಾದ ಮುಖವುಳ್ಳವದಾಗಿದ್ದರೂ ಬಾಡಿದ, ಹಸಿದು ಬಹಳವಾಗಿ ಅಳುತ್ತಿದ್ದ ಶಿಶುವನ್ನು ನೋಡಿದನು.

ಸ ಸೂತೋ ಭಾರ್ಯಯಾ ಸಾರ್ಧಂ ವಿಸ್ಮಯೋತ್ ಫುಲ್ಲಲೋಚನಃ ॥
ಅಂಕಮಾರೋಪ್ಯ ತಂ ಬಾಲಂ ಭಾರ್ಯಾಂ ವಚನಮಬ್ರವೀತ್ ॥೧೦॥

ಅವನು ಬಹಳ ಕಾಂತಿಯುಕ್ತವಾದ ಆ ಶಿಶುವನ್ನು ಪತ್ನಿಯ ಜೊತೆಯಲ್ಲಿ ನೋಡಿ ಎತ್ತಿ ತೊಡೆಯ ಮೇಲೆ ಹಾಕಿಕೊಂಡು ಆಶ್ಚರ್ಯದಿಂದ ಕಣ್ಣುಗಳನ್ನು ಅರಳಿಸಿ ಪತ್ನಿಯನ್ನು ಕುರಿತು ಮಾತನಾಡಿದನು.

ಇದಮಪ್ಯದ್ಭುತಂ ಭೀರು ಜಾತೋ ಜಾತೋಽಸ್ಮಿ ಭಾಮಿನಿ ।
ದಿಷ್ಟ್ಯಾನ್ ದೇವಗರ್ಭೋಽಯಂ ಮನ್ಯೇಽಸ್ಮಾನ್ ಸಮುಪಾಗತಃ ॥
ಅನಪತ್ಯಸ್ಯ ಪುತ್ರೋಽಯಂ ದೇವೈರ್ದತ್ತೋ ಧ್ರುವಂ ಮಮ ॥೧೨॥

ಭೀರುವೇ, ಇದು ಅದ್ಭುತವಾದ ಘಟನೆ. ನಾನು ಜನಿಸಿ ಬಹುಕಾಲವಾದ ಮೇಲೆ ಮಗನನ್ನು ಪಡೆದು ಈಗ ಭಾಗ್ಯವಂತನಾಗಿದ್ದೇನೆ. ದೇವರು ಕೊಟ್ಟ ಈ ಶಿಶುವು ನಮ್ಮ ಬಳಿಗೆ ಬಂದಿದೆ ಎಂದು ಭಾವಿಸುತ್ತೇನೆ. ಮಕ್ಕಳಿಲ್ಲದ ನನಗೆ ಇದು ನಿಶ್ಚಿತವಾಗಿ ದೇವತೆಗಳೇ ಕೊಟ್ಟ ಮಗು.

ವೈಶಂಪಾಯನಃ

ಇತ್ಯುಕ್ತ್ವಾ ತಂ ದದೌ ಪುತ್ರಂ ರಾಧಾಯೈ ಸ ಮಹೀಪತಿಃ ।
ಪ್ರತಿಜಗ್ರಾಹ ತಂ ರಾಧಾ ವಿಧಿವದ್ ದಿವ್ಯರೂಪಿಣಮ್ ।
ಪುತ್ರಂ ಕಮಲಗರ್ಭಾಭಂ ದೇವಗರ್ಭಂ ಶ್ರಿಯಾ ವೃತಮ್ ॥೧೩॥

ವೈಶಂಪಾಯನ– ಹೀಗೆ ಹೇಳಿ ಆ ರಾಜನಾದ ಅಧಿರಥನು ಆ ಶಿಶುವನ್ನು ರಾಧೆಗೆ ನೀಡಿದನು. ರಾಧೆಯಾದರೂ ದಿವ್ಯರೂಪವನ್ನು ಹೊಂದಿದ್ದ, ಕಮಲಗರ್ಭದ ಕಾಂತಿಯನ್ನು ಹೊಂದಿದ್ದ, ಸಂಪತ್ತಿನಿಂದ ಕೂಡಿದ್ದ, ದೇವಗರ್ಭವಾದ ಆ ಶಿಶುವನ್ನು ವಿಧಿಪ್ರಕಾರವಾಗಿ ಸ್ವೀಕರಿಸಿದಳು.

ಸ್ತನ್ಯಂ ಸಮಾಸ್ರವಚ್ಚಾಸ್ಯಾ ದೈವಾದಿತ್ಯಥ ನಿಶ್ಚಯಃ ।
ಪುಪೋಷ ಚೈನಂ ವಿಧಿವದ್ ವವೃಧೇ ಸ ಚ ವೀರ್ಯವಾನ್ ॥೧೪॥

ತತಃ ಪ್ರಭೃತಿ ಚಾಪ್ಯನ್ಯೇ ಪ್ರಾಭವನ್ನೌರಸಾಃ ಸುತಾಃ ॥೧೫॥

ಅವಳಿಗೆ ಆಗ ಸ್ತನಗಳಿಂದ ಹಾಲು ಹರಿಯಿತು. ನಿಶ್ಚಯವಾಗಿಯೂ ಅದು ದೈವ ಘಟನೆಯೇ. ಅವಳು ಆ ಶಿಶುವನ್ನು ಪೋಷಿಸಿದಳು. ಅವನು ಪರಾಕ್ರಮಶಾಲಿಯಾಗಿ ಬೆಳೆದನು. ಅನಂತರ ಅವರಿಗೆ ಬೇರೆ ಔರಸ ಪುತ್ರರೂ ಜನಿಸಿದರು.

ನಾಮಕರ್ಮ ಚ ಚಕ್ರಾತೇ ಕುಂಡಲೇ ತಸ್ಯ ದೃಶ್ಯತೇ ।
ಕರ್ಣ ಇತ್ಯೇವಂ ತಂ ಬಾಲಂ ದೃಷ್ಟ್ವಾ ಕರ್ಣಂ ಸಕುಂಡಲಮ್ ॥೧೬॥

ಆ ಶಿಶುವಿನ ಕುಂಡಲದಲ್ಲಿ ಕರ್ಣ ಎಂಬ ಅಕ್ಷರಗಳು ಕಾಣುತ್ತಿದ್ದವು. ಅದನ್ನು ನೋಡಿ ಅವರು ಕುಂಡಲ ಸಹಿತವಾದ ಆ ಶಿಶುವಿಗೆ ಕರ್ಣನೆಂದು ನಾಮಕರಣ ಮಾಡಿದರು.

ವಸುವರ್ಮಧರಂ ದೃಷ್ಟ್ವಾ ತಂ ಬಾಲಂ ಹೇಮಕುಂಡಲಮ್ ।
ನಾಮಾಸ್ಯ ವಸುಷೇಣೇತಿ ತತಶ್ಚಕ್ರುರ್ದ್ವಿಜಾತಯಃ ॥೧೭॥

ಆ ಶಿಶುವು ಸುವರ್ಣಮಯವಾದ ಕವಚವನ್ನೂ, ಹೇಮಕುಂಡಲಗಳನ್ನೂ ಧರಿಸಿ ಸಂಪತ್ತಿನೊಡನೆ ಇದ್ದುದನ್ನು ನೋಡಿ ಬ್ರಾಹ್ಮಣರು ಅವನಿಗೆ ವಸುಷೇಣ ಎಂದು ನಾಮಕರಣ ಮಾಡಿದರು (ವಾದಿರಾಜರು).

ಏವಂ ಸ ಸೂತಪುತ್ರತ್ವಂ ಜಗಾಮಾಮಿತವಿಕ್ರಮಃ ।
ವಸುಷೇಣ ಇತಿ ಖ್ಯಾತೋ ವೃಷ ಇತ್ಯೇವ ಚ ಪ್ರಭುಃ ॥೧೮॥

ಹೀಗೆ ಅಮಿತವಿಕ್ರಮಿಯೂ ಮತ್ತು ಪ್ರಭುವೂ ಆದ ಅವನು ಸೂತನ ಮಗನಾಗಿ ವಸುಷೇಣನೆಂದೂ, ವೃಷ ಎಂದೂ, ಪ್ರಖ್ಯಾತನಾದನು.

ಸೂತಸ್ಯ ವವೃಧೇಽಂಗೇಷು ಶ್ರೇಷ್ಠಃ ಪುತ್ರಃ ಸ ವೀರ್ಯವಾನ್ ।
ಚಾರೇಣ ವಿದಿತಶ್ಚಾಸೀತ್ ಪೃಥಯಾ ದಿವ್ಯವರ್ಮಭೃತ್ ॥೧೯॥

ಆ ಶ್ರೇಷ್ಠಪುತ್ರನು ಸೂತನ ಆಳ್ವಿಕೆಗೆ ಒಳಪಟ್ಟ ಅಂಗದೇಶದಲ್ಲಿ ಪರಾಕ್ರಮಶಾಲಿಯಾಗಿ ಬೆಳೆದನು. ದಿವ್ಯಕವಚವನ್ನು ಧರಿಸಿದ ಆ ಶಿಶುವು ಅಧಿರಥನ ಬಳಿ ಇದೆ ಎಂದು ಕುಂತಿಯು ಗೂಢಚಾರರ ಮೂಲಕ ತಿಳಿದಳು.

ಸೂತಸ್ತ್ವಧಿರಥಃ ಪುತ್ರಂ ವಿವೃದ್ಧಂ ಸಮಯೇನ ತಮ್ ।
ದೃಷ್ಟ್ವಾ ಪ್ರಸ್ಥಾಪಯಾಮಾಸ ಪುರಂ ವಾರಣಸಾಹ್ವಯಮ್ ॥೨೦॥

ಸೂತನಾದ ಅಧಿರಥನು ಪುತ್ರನು ಬೆಳೆದಿರುವುದನ್ನು ನೋಡಿ ಯೋಗ್ಯ ಸಮಯದಲ್ಲಿ ಅವನನ್ನು ಹಸ್ತಿನಪುರಕ್ಕೆ ಕಳುಹಿಸಿದನು.

ತತ್ರೋಪಸದನಂ ಚಕ್ರೇ ದ್ರೋಣಸ್ಯೇಷ್ವಸ್ತ್ರಕರ್ಮಣೆ ।
ಸಖ್ಯಂ ದುರ್ಯೋಧನೇನಾಪಿ ಸಮಾಗಚ್ಛತ್ ಸುವೀರ್ಯವಾನ್ ॥೨೧॥

ಅಲ್ಲಿ ಕರ್ಣನು ದ್ರೋಣರ ಉಪಸತ್ತಿಯನ್ನು ಮಾಡಿ ಶಸ್ತ್ರಾಸ್ತ್ರಗಳನ್ನು ಕಲಿತು ಮಹಾಪರಾಕ್ರಮಶಾಲಿಯಾಗಿ ದುರ್ಯೋಧನನ ಸಖ್ಯವನ್ನು ಸಂಪಾದಿಸಿದನು.

ದ್ರೋಣಾತ್ ಕೃಪಾಚ್ಚ ರಾಮಾಚ್ಚ ಸೋಽಸ್ತ್ರಗ್ರಾಮಂ ಚತುರ್ವಿಧಮ್ ।
ಲಬ್ಧ್ವಾ ಲೋಕೇಽಭವತ್ ಖ್ಯಾತಃ ಪರಮೇಷ್ವಾಸತಾಂ ಗತಃ ॥೨೨॥

ದ್ರೋಣರಿಂದಲೂ, ಕೃಪರಿಂದಲೂ, ಪರಶುರಾಮನಿಂದಲೂ ಅವನು ನಾಲ್ಕು ವಿಧವಾದ ಅಸ್ತ್ರಸಮೂಹಗಳನ್ನು ಪಡೆದು ಲೋಕದಲ್ಲಿ ಪರಮಧನ್ವೀ ಎಂದು ಪ್ರಖ್ಯಾತನಾದನು.

ಸಂಧಾಯ ಧಾರ್ತರಾಷ್ಟ್ರೇಣ ಪಾರ್ಥಾನಾಂ ವಿಪ್ರಿಯೇ ರತಃ ।
ಯೋದ್ಧುಮಾಶಂಸತೇ ನಿತ್ಯಂ ಫಲ್ಗುನೇನ ಮಹಾತ್ಮನಾ ॥೨೩॥

ದುರ್ಯೋಧನನ ಜೊತೆಯಲ್ಲಿ ಸಖ್ಯವನ್ನು ಹೊಂದಿ ಪಾಂಡವರಿಗೆ ಅಪ್ರಿಯವನ್ನು ಮಾಡುವುದರಲ್ಲಿ ನಿರತನಾಗಿ ಯಾವಾಗಲೂ ಮಹಾತ್ಮನಾದ ಅರ್ಜುನನ ಜೊತೆಯಲ್ಲಿ ಯುದ್ಧವನ್ನು ಮಾಡಲು ಬಯಸುತ್ತಿದ್ದನು.

ಸದಾ ಹಿ ತಸ್ಯ ಸ್ಪರ್ಧಾऽऽಸೀದರ್ಜುನೇನ ವಿಶಾಂಪತೇ ।
ಅರ್ಜುನಸ್ಯ ಚ ಕರ್ಣೇನ ಯತೋ ದೃಷ್ಟೋ ಬಭೂವ ಸಃ ॥೨೩.೧॥

ಎಲೈ ರಾಜನೇ, ಅರ್ಜುನನು ಕರ್ಣನನ್ನು ನೋಡಿದ ದಿವಸದಿಂದಲೂ ಅರ್ಜುನನಿಗೆ ಕರ್ಣನ ಮೇಲೆಯೂ, ಕರ್ಣನಿಗೆ ಅರ್ಜುನನ ಮೇಲೆಯೂ ಸ್ಪರ್ಧೆ ಇದ್ದಿತು.

ಏತದ್ಗುಹ್ಯಂ ಮಹಾರಾಜ ಸೂರ್ಯಸ್ಯಾಸೀನ್ನ ಸಂಶಯಃ ।
ಯಃ ಸೂರ್ಯಸಂಭವಃ ಕರ್ಣಃ ಕುಂತ್ಯಾಂ ಸೂತಕುಲೇ ತಥಾ ॥೨೩.೨॥

ಮಹಾರಾಜನೇ, ಸೂರ್ಯನಿಂದ ಕುಂತಿಯಲ್ಲಿ ಜನಿಸಿದ ಕರ್ಣನು ಸೂತಕುಲದಲ್ಲಿ ಅಭಿವೃದ್ಧಿಯನ್ನು ಹೊಂದಿದ ಈ ವಿಷಯವು ಸೂರ್ಯನು ತಿಳಿದಿದ್ದ ರಹಸ್ಯ ಎಂಬ ವಿಷಯದಲ್ಲಿ ಸಂಶಯವಿಲ್ಲ.

ತಂ ತು ಕುಂಡಲಿನಂ ದೃಷ್ಟ್ವಾ ವರ್ಮಣಾ ಚ ಸಮನ್ವಿತಮ್ ।
ಅವಧ್ಯಂ ಸಮರೇ ಮತ್ವಾ ಪರ್ಯತಪ್ಯದ್ ಯುಧಿಷ್ಠಿರಃ ॥೨೪॥

ಕರ್ಣನು ಕವಚ ಕುಂಡಲಗಳಿಂದ ಯುಕ್ತವಾಗಿರುವುದನ್ನು ನೋಡಿ ಅವನು ಯುದ್ಧದಲ್ಲಿ ಅವಧ್ಯನೆಂದು ತಿಳಿದು ಯುಧಿಷ್ಠಿರನು ಪರಿತಾಪವನ್ನು ಪಟ್ಟನು.

ಯದಾ ಚ ಕರ್ಣೋ ರಾಜೇಂದ್ರ ಭಾನುಮಂತಂ ದಿವಾಕರಮ್ ।
ಸ್ತೌತಿ ಮಧ್ಯಂದಿನೇ ಪ್ರಾಪ್ತೇ ಪ್ರಾಂಜಲಿಃ ಸಲಿಲೇ ಸ್ಥಿತಃ ॥೨೫॥

ತತ್ರೈನಮುಪತಿಷ್ಠಂತಿ ಬ್ರಾಹ್ಮಣಾ ಧನಹೇತವೇ ।
ನಾದೇಯಂ ತಸ್ಯ ತತ್ಕಾಲೇ ಕಿಂಚಿದಸ್ತಿ ದ್ವಿಜಾತಿಷು ॥೨೬॥

ರಾಜೇಂದ್ರನೇ, ಕರ್ಣನು ಮಧ್ಯಾಹ್ನವು ಪ್ರಾಪ್ತವಾದಾಗ ನೀರಿನಲ್ಲಿ ನಿಂತು ಕೈಗಳನ್ನು ಮುಗಿದು ಸೂರ್ಯನನ್ನು ಪ್ರಾರ್ಥಿಸುವಾಗ ಬ್ರಾಹ್ಮಣರು ಧನವನ್ನು ಸ್ವೀಕರಿಸುವ ದೃಷ್ಟಿಯಿಂದ ಅವನ ಬಳಿಗೆ ಬರುತ್ತಾರೆ. ಆ ಕಾಲದಲ್ಲಿ ಬ್ರಾಹ್ಮಣರಿಗೆ ಕೊಡಲಾರದ ವಸ್ತುವು ಅವನ ಬಳಿ ಯಾವುದೂ ಇರುವುದಿಲ್ಲ.

ಏತಸ್ಮಿನ್ನೇವ ಕಾಲೇ ತು ಪಾಂಡವಾನಾಂ ಹಿತೇ ರತಃ ।
ತಮಿಂದ್ರೋ ಬ್ರಾಹ್ಮಣೋ ಭೂತ್ವಾ ಭಿಕ್ಷಾಂ ದೇಹಿತ್ಯುಪಸ್ಥಿತಃ ।
ಸ್ವಾಗತಂ ಚೇತಿ ರಾಧೇಯಸ್ತಮಥ ಪ್ರತ್ಯಭಾಷತ ॥೨೭॥

ಇದೇ ಕಾಲದಲ್ಲಿ ಪಾಂಡವರ ಹಿತದಲ್ಲಿ ರತನಾದ ಇಂದ್ರನು ಬ್ರಾಹ್ಮಣವೇಷವನ್ನು ಧರಿಸಿ ಭಿಕ್ಷೆಯನ್ನು ನೀಡು ಎಂದು ಕರ್ಣನ ಬಳಿಗೆ ಬಂದನು. ಕರ್ಣನು ಅವನಿಗೆ ಸ್ವಾಗತವನ್ನು ಕೋರಿ ಅನಂತರ ಮಾತನಾಡಿದನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂಸಂಹಿತಾಯಾಂ ವೈಯಾಸಿಕ್ಯಾಂ
ವನಪರ್ವಣಿ ತ್ರಿಶತತಮೋಽಧ್ಯಾಯಃ ॥
॥ ಇತಿ ಕುಂಡಲಾಹರಣಪರ್ವಣಿ ರಾಧಾಯಾಃ ಕರ್ಣಪ್ರಾಪ್ತಿರ್ನಾಮ
ದಶಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವನಪರ್ವದಲ್ಲಿ ಮುನ್ನೂರನೆಯ
ಅಧ್ಯಾಯ ಮುಗಿಯಿತು.

★ ★ ★ ★

ಮುನ್ನೂರ ಒಂದನೆಯ ಅಧ್ಯಾಯ

ಬ್ರಾಹ್ಮಣ ರೂಪದ ಇಂದ್ರನಿಂದ ಕವಚಕುಂಡಲಗಳ ಯಾಚನೆ.
ಶಕ್ತ್ಯಾಯುಧವನ್ನು ಕೊಟ್ಟು ಕವಚ-ಕುಂಡಲಗಳ ಸ್ವೀಕಾರ.

ವೈಶಂಪಾಯನಃ

ದೇವರಾಜಮನುಪ್ರಾಪ್ತಂ ಬ್ರಾಹ್ಮಣಚ್ಛದ್ಮನಾ ವೃಷಃ ।
ದೃಷ್ಟ್ವಾ ಸ್ವಾಗತಮಿತ್ಯಾಹ ನ ಬುಬೋಧಾಸ್ಯ ಮಾನಸಮ್ ॥೧॥

ವೈಶಂಪಾಯನ– ಬ್ರಾಹ್ಮಣ ವೇಷದಿಂದ ಬಂದ ದೇವರಾಜನಾದ ಇಂದ್ರನನ್ನು ನೋಡಿ ಕರ್ಣನು ಅವನಿಗೆ ಸ್ವಾಗತವನ್ನು ಹೇಳಿದನು. ಇಂದ್ರನ ಅಭಿಪ್ರಾಯವನ್ನು ಕರ್ಣನು ತಿಳಿದಿರಲಿಲ್ಲ.

ಹಿರಣ್ಯಕಂಠೀಃ ಪ್ರಮದಾ ಗ್ರಾಮಾನ್ ವಾ ಬಹುಗೋಕುಲಾನ್ ।
ಕಂ ದದಾನೀತಿ ತಂ ವಿಪ್ರಮುವಾಚಾಧಿರಥಿಸ್ತತಃ ॥೨॥

ಸುವರ್ಣಾಭರಣಗಳನ್ನು ಧರಿಸಿದ ವನಿತೆಯರನ್ನು, ಗ್ರಾಮಗಳನ್ನು, ಅನೇಕ ಗೋ ಸಮೂಹಗಳನ್ನು ಇವುಗಳಲ್ಲಿ ನಿನಗೆ ಏನನ್ನು ಕೊಡಲಿ ಎಂದು ಕರ್ಣನು ಆಗ ಆ ಬ್ರಾಹ್ಮಣನನ್ನು ಕೇಳಿದನು.

ಬ್ರಾಹ್ಮಣಃ

ಹಿರಣ್ಯಕಂಠ್ಯಃ ಪ್ರಮದಾ ಯಚ್ಚಾನ್ಯದ್ ವಿದ್ಯತೇ ವಸು ।
ನಾಹಂ ದತ್ತಮಭೀಪ್ಸಾಮಿ ತದರ್ಥಿಭ್ಯಃ ಪ್ರದೀಯತಾಮ್ ॥೩॥

ಬ್ರಾಹ್ಮಣ– ಹಿರಣ್ಯಾಭರಣಗಳನ್ನು ಧರಿಸಿದ ವನಿತೆಯರನ್ನಾಗಲೀ ಅಥವಾ ನಿನ್ನ ಬಳಿ ಇರುವ ಬೇರೆ ಧನಗಳನ್ನಾಗಲೀ ನಾನು ಬಯಸುವುದಿಲ್ಲ. ಅದನ್ನು ಅಪೇಕ್ಷೆ ಇದ್ದವರಿಗೆ ಕೊಡು.

ಯದೇತತ್ ಸಹಜಂ ವರ್ಮ ಕುಂಡಲೇ ಚ ತವಾನಘ ।
ಏತದುತ್ಕೃತ್ಯ ಮೇ ದೇಹಿ ಯದಿ ಸತ್ಯವ್ರತೋ ಭವಾನ್ ॥೪॥

ಎಲೈ ಅನಘನೇ, ನಿನ್ನ ಜೊತೆಯಲ್ಲಿಯೇ ಜನಿಸಿರುವ ಈ ಕವಚ ಕುಂಡಲಗಳನ್ನು ನೀನು ಸತ್ಯವ್ರತನಾದರೆ ನಿನ್ನ ದೇಹದಿಂದ ಕತ್ತರಿಸಿ ಕೊಡು.

ಏತದಿಚ್ಛಾಮ್ಯಹಂ ಕ್ಷಿಪ್ರಂ ತ್ವಯಾ ದತ್ತಂ ಪರಂತಪ ।
ಏಷ ಮೇ ಸರ್ವಲಾಭಾನಾಂ ಲಾಭಃ ಪರಮಕೋ ಮತಃ ॥೫॥

ಎಲೈ ಪರಂತಪನೇ, ಇದನ್ನು ನೀನು ಶೀಘ್ರವಾಗಿ ಕೊಡಬೇಕೆಂದು ಬಯಸುತ್ತೇನೆ. ನನಗೆ ಎಲ್ಲಾ ಲಾಭಗಳಿಗಿಂತಲೂ ಇದು ಶ್ರೇಷ್ಠವಾದ ಲಾಭ.

ಕರ್ಣಃ

ಅವನಿಂ ಪ್ರಮದಾ ಗಾಶ್ಚ ನಿರ್ವಾಪಂ ಬಹುವಾರ್ಷಿಕೀಮ್ ।
ತತ್ತೇ ವಿಪ್ರ ಪ್ರದಾಸ್ಯಾಮಿ ನ ತು ವರ್ಮ ಸಕುಂಡಲಮ್ ॥೬॥

ಕರ್ಣ– ನಿನಗೆ ವನಿತೆಯರನ್ನಾಗಲೀ, ಗೋವುಗಳನ್ನಾಗಲೀ, ಒಮ್ಮೆ ಬೀಜವನ್ನು ಬಿತ್ತಿದರೆ ಇನ್ನೊಮ್ಮೆ ಬೀಜವನ್ನು ಬಿತ್ತದೆ ಅನೇಕ ವರ್ಷಗಳ ಕಾಲ ಫಲಗಳನ್ನು ಕೊಡುವ ಭೂಮಿಯನ್ನಾಗಲೀ ಕೊಡುವೆನು. ಆದರೆ ಕವಚ ಮತ್ತು ಕರ್ಣಕುಂಡಲಗಳನ್ನು ಕೊಡುವುದಿಲ್ಲ.

ವೈಶಂಪಾಯನಃ

ಏವಂ ಬಹುವಿಧೈರ್ವಾಕ್ಯೈರ್ಯಾಚ್ಯಮಾನಃ ಸ ತು ದ್ವಿಜಃ ।
ಕರ್ಣೇನ ಭರತಶ್ರೇಷ್ಠ ನಾನ್ಯಂ ವರಮಯಾಚತ ॥೭॥

ವೈಶಂಪಾಯನ– ಎಲೈ ಭರತಶ್ರೇಷ್ಠನೇ, ಹೀಗೆ ಕರ್ಣನು ಆ ಬ್ರಾಹ್ಮಣನನ್ನು ಅನೇಕ ವಿಧವಾದ ವಾಕ್ಯಗಳಿಂದ ಬೇಡಿದರೂ ಆ ಬ್ರಾಹ್ಮಣನು ಬೇರೆಯ ವರವನ್ನು ಕೇಳಲಿಲ್ಲ.

ಸಾಂತ್ವಿತಶ್ಚ ಯಥಾಶಕ್ತಿ ಪೂಜಿತಶ್ಚ ಯಥಾವಿಧಿ ।
ನ ಚಾನ್ಯಂ ಸ ದ್ವಿಜಶ್ರೇಷ್ಠಃ ಕಾಮಯಾಮಾಸ ವೈ ವರಮ್ ॥೮॥

ಆ ದ್ವಿಜಶ್ರೇಷ್ಠನನ್ನು ಶಕ್ತಿಯಿದ್ದಷ್ಟು ಸಮಾಧಾನಗೊಳಿಸಿದರೂ, ವಿಧಿಗೆ ಅನುಸಾರವಾಗಿ ಪೂಜಿಸಿದರೂ ಅವನು ಬೇರೆ ವರವನ್ನು ಬಯಸಲಿಲ್ಲ.

ಯದಾ ನಾನ್ಯಂ ಪ್ರವೃಣುತೇ ವರಂ ವೈ ದ್ವಿಜಸತ್ತಮಃ ।
ತದೈನಮಬ್ರವೀತ್ ಭೂಯೋ ರಾಧೇಯಃ ಪ್ರಹಸನ್ನಿವ ॥೯॥

ಆ ದ್ವಿಜಶ್ರೇಷ್ಠನು ಬೇರೆ ವರವನ್ನು ಕೇಳದಿದ್ದಾಗ ಪುನಃ ಕರ್ಣನು ನಗುತ್ತಾ ಅವನನ್ನು ಕುರಿತು ಮಾತನಾಡಿದನು.

ತದೈನಮಬ್ರವೀತ್ ಕರ್ಣಃ ಸಹಜಂ ಕವಚಂ ಹಿ ಮೇ ।
ಸಹಜಂ ವರ್ಮ ಮೇ ವಿಪ್ರ ಕುಂಡಲೇ ಚಾಮೃತೋದ್ಭವೇ ।
ತೇನಾವಧ್ಯೋಽಸ್ಮಿ ಲೋಕೇಷು ತತೋ ನೈತಜ್ಜಹಾಮ್ಯಹಮ್ ॥೧೦॥

ಆಗ ಕರ್ಣನು ಅವನನ್ನು ಕುರಿತು ಬ್ರಾಹ್ಮಣನೇ, ಈ ಕವಚಕುಂಡಲಗಳು ನನ್ನ ಜೊತೆಯಲ್ಲೇ ಹುಟ್ಟಿದವುಗಳು (ನಾನು ಜನಿಸುವಾಗಲೇ ನನ್ನ ಶರೀರದಲ್ಲಿ ಇದ್ದವುಗಳು). ಇವು ಅಮೃತದಿಂದ ಜನಿಸಿದ ಪದಾರ್ಥಗಳು. ಇವುಗಳ ಬಲದಿಂದ ನಾನು ಲೋಕಗಳಲ್ಲಿ ಅವಧ್ಯನಾಗಿದ್ದೇನೆ. ಆದ್ದರಿಂದ ನಾನು ಇವುಗಳನ್ನು ಕೊಡುವುದಿಲ್ಲ.

ವಿಶಾಲಂ ಪೃಥಿವೀರಾಜ್ಯಂ ಕ್ಷೇಮಂ ನಿಹತಕಂಟಕಮ್ ।
ಪ್ರತಿಗೃಹ್ಣೀಷ್ವ ಮತ್ತಸ್ತ್ವಂ ಸಾಧು ಬ್ರಾಹ್ಮಣಪುಂಗವ ॥೧೧॥

ಎಲೈ ಬ್ರಾಹ್ಮಣಶ್ರೇಷ್ಠನೇ, ವಿಶಾಲವಾದ ಕ್ಷೇಮದಿಂದ ಕೂಡಿದ, ಶತ್ರುರಹಿತವಾದ ಪೃಥಿವೀರಾಜ್ಯವನ್ನು ನನ್ನಿಂದ ಚೆನ್ನಾಗಿ ಸ್ವೀಕರಿಸು.

ಕುಂಡಲಾಭ್ಯಾಂ ವಿಮುಕ್ತೋಽಹಂ ವರ್ಮಣಾ ಸಹಜೇನ ಚ ।
ಗಮನೀಯೋ ಭವಿಷ್ಯಾಮಿ ಶತ್ರೂಣಾಂ ದ್ವಿಜಸತ್ತಮ ॥೧೨॥

ಎಲೈ ದ್ವಿಜಶ್ರೇಷ್ಠನೇ, ಈ ಸಹಜವಾದ ಕವಚ ಮತ್ತು ಕುಂಡಲಗಳಿಲ್ಲದಿದ್ದರೆ ನಾನು ಶತ್ರುಗಳಿಗೆ ವಶನಾಗುವೆನು.

ವೈಶಂಪಾಯನಃ

ಯದಾಽನ್ಯಂ ನ ವರಂ ವವ್ರೇ ಭಗವಾನ್ ಪಾಕಶಾಸನಃ ।
ತತಃ ಪ್ರಹಸ್ಯ ಕರ್ಣಸ್ತಂ ಪುನರಿತ್ಯಬ್ರವೀದ್ ವಚಃ ॥೧೩॥

ವೈಶಂಪಾಯನ– ಪೂಜ್ಯನಾದ ಇಂದ್ರನು ಇನ್ನೊಂದು ವರವನ್ನು ಕೇಳದಿದ್ದಾಗ ಕರ್ಣನು ನಕ್ಕು ಪುನಃ ಅವನನ್ನು ಕುರಿತು ಹೀಗೆ ಮಾತನಾಡಿದನು.

ವಿದಿತೋ ದೇವದೇವೇಶ ಪ್ರಾಗೇವಾಸಿ ಮಮ ಪ್ರಭೋ ।
ನ ತು ನ್ಯಾಯ್ಯಂ ಮಯಾ ದಾತುಂ ತವ ಶಕ್ರ ವೃಥಾ ವರಮ್ ॥೧೪॥

ದೇವದೇವೇಶನಾದ ಇಂದ್ರನೇ, ಪ್ರಭುವೇ, ನಾನು ಮೊದಲೇ ನೀನು ಯಾರೆಂದು ತಿಳಿದಿದ್ದೇನೆ. ಆದರೂ ನಿನಗೆ ವರವನ್ನು ಕೊಟ್ಟು ಅದನ್ನು ವ್ಯರ್ಥಮಾಡುವುದು ನನಗೆ ಉಚಿತವಲ್ಲ.

ತ್ವ ಹಿಂ ದೇವೇಶ್ವರಃ ಸಾಕ್ಷಾತ್ ತ್ವಯಾ ದೇಯೋ ವರೋ ಮಮ ।
ಅನ್ಯೇಷಾಂ ಚೈವ ಭೂತಾನಾಮೀಶ್ವರೋ ಹ್ಯಸಿ ಭೂತಕೃತ್ ॥೧೫॥

ನೀನು ದೇವೇಶ್ವರನಾದ ಇಂದ್ರ . ನೀನೇ ನನಗೆ ವರವನ್ನು ಕೊಡಬೇಕಾದವನು. ಎಲ್ಲಪ್ರಾಣಿಗಳನ್ನೂ ಸೃಷ್ಟಿಸುವ ನೀನು ಬೇರೆ ಎಲ್ಲರಿಗೂ ಸಹ ಒಡೆಯನಾಗಿದ್ದೀಯೆ.

ಯದಿ ದಾಸ್ಯಾಮಿ ತೇ ದೇವ ಕುಂಡಲೇ ಕವಚಂ ತಥಾ ।
ವಧ್ಯತಾಮುಪಯಾಸ್ಯಾಮಿ ತ್ವಂ ಚ ಶಕ್ರಾವಹಾಸ್ಯತಾಮ್ ॥೧೬॥

ಎಲೈ ದೇವೇಂದ್ರನೇ, ಕವಚ ಕುಂಡಲಗಳನ್ನು ನಿನಗೆ ಕೊಟ್ಟರೆ ನಾನು ವಧ್ಯನಾಗುವೆನು ಮತ್ತು ನೀನು ಹಾಸ್ಯಕ್ಕೆ ವಿಷಯನಾಗುವಿ.

ತಸ್ಮಾದ್ ವಿನಿಮಯಂ ಕೃತ್ವಾ ಕುಂಡಲೇ ವರ್ಮ ಚೋತ್ತಮಮ್ ।
ಹರಸ್ವ ಶಕ್ರ ಕಾಮಂ ಮೇ ನ ದದ್ಯಾಮಹಮನ್ಯಥಾ ॥೧೭॥

ಆದ್ದರಿಂದ ವಿನಿಮಯವನ್ನು ಮಾಡಿಕೊಂಡು (ಅದಲು-ಬದಲು ಮಾಡಿಕೊಂಡು) ಕುಂಡಲಗಳನ್ನೂ ಮತ್ತು ಶ್ರೇಷ್ಠವಾದ ಕವಚವನ್ನೂ ತೆಗೆದುಕೋ. ಇದು ನನ್ನ ಆಸೆ. ನಾನು ಬೇರೆ ರೀತಿಯಲ್ಲಿ ಕೊಡುವುದಿಲ್ಲ.

ಶಕ್ರಃ

ವಿದಿತೋಽಹಂ ರವೇಃ ಪೂರ್ವಮಾಯಾನ್ ದೇವಸ್ತವಾಂತಿಕಮ್ ।
ತೇನ ತೇ ಸರ್ವಮಾಖ್ಯಾತಮೇವಮೇತನ್ನ ಸಂಶಯಃ ॥೧೮॥

ಇಂದ್ರ– ನಾನು ನಿನ್ನ ಬಳಿಗೆ ಬರುವುದಕ್ಕಿಂತ ಮೊದಲೇ ಸೂರ್ಯನು ಈ ವಿಷಯವನ್ನು ತಿಳಿದಿದ್ದಾನೆ. ಅವನು ನಿನಗೆ ಎಲ್ಲವನ್ನೂ ಹೇಳಿದ್ದಾನೆ. ಇದು ಹೀಗೆಯೇ ಆಗಿರಬೇಕು. ಇದರಲ್ಲಿ ಸಂಶಯವಿಲ್ಲ.

ಕಾಮಮಸ್ತು ತಥಾ ತಾತ ತವ ಕರ್ಣ ಯಥೇಚ್ಛಸಿ ।
ವರ್ಜಯಿತ್ವಾ ತು ಮೇ ವಜ್ರಂ ಪ್ರವೃಣೀಷ್ವ ಯಥೇಚ್ಛಸಿ ॥೧೯॥

ಪ್ರೀತಿಪಾತ್ರನಾದ ಕರ್ಣನೇ, ನಿನ್ನ ಇಷ್ಟದಂತೆಯೇ ಆಗಲಿ. ನನ್ನ ವಜ್ರಾಯುಧವನ್ನು ಬಿಟ್ಟು ಏನು ಬಯಸುತ್ತೀಯೋ ಅದನ್ನು ಕೇಳು.

ವೈಶಂಪಾಯನಃ

ತತಃ ಕರ್ಣಃ ಪ್ರಹೃಷ್ಟಸ್ತು ಉಪಸಂಗಮ್ಯ ವಾಸವಮ್ ।
ಅಮೋಘಾಂ ಶಕ್ತಿಮಭ್ಯೇತ್ಯ ವವ್ರೇ ಸಂಪೂರ್ಣಮಾನಸಃ ॥೨೦॥

ವೈಶಂಪಾಯನ– ಆಗ ಕರ್ಣನು ಸಂತೋಷಗೊಂಡು ಸಂಪೂರ್ಣ ಮನಸ್ಸುಳ್ಳವನಾಗಿ ಇಂದ್ರನನ್ನು ಸಮೀಪಿಸಿ ಅಮೋಘವಾದ ಶಕ್ತ್ಯಾಯುಧವನ್ನು ಬೇಡಿದನು.

ವರ್ಮಣಾ ಕುಂಡಲಾಭ್ಯಾಂ ಚ ಶಕ್ತಿಂ ಮೇ ದೇಹಿ ವಾಸವ ।
ಅಮೋಘಾಂ ಶತ್ರುಸಂಘಾನಾಂ ಘಾತಿನೀಂ ಪೃತನಾಮುಖೇ ॥೨೧॥

ಇಂದ್ರನೇ, ನನ್ನ ಕವಚ ಕುಂಡಲಗಳಿಗೆ ಬದಲಾಗಿ ರಣರಂಗದಲ್ಲಿ ಶತ್ರುಸಮೂಹವನ್ನು ನಾಶಮಾಡುವ ಅಮೋಘವಾದ ಶಕ್ತ್ಯಾಯುಧವನ್ನು ನನಗೆ ಕೊಡು.

ವೈಶಂಪಾಯನಃ

ತತಃ ಸಂಚಿಂತ್ಯ ಮನಸಾ ಮುಹೂರ್ತಮಿವ ವಾಸವಃ ।
ಶಕ್ಯರ್ಥಂ ಪೃಥಿವೀಪಾಲ ಕರ್ಣಂ ವಾಕ್ಯಮಥಾಬ್ರವೀತ್ ॥೨೨॥

ವೈಶಂಪಾಯನ– ಎಲೈ ಪೃಥಿವೀಪಾಲನೇ, ಅನಂತರ ಇಂದ್ರನು ಒಂದು ಮುಹೂರ್ತದಷ್ಟು ಸಮಯ ಮನಸ್ಸಿನಲ್ಲಿ ಯೋಚಿಸಿ ಶಕ್ತಿಯ ವಿಷಯದಲ್ಲಿ ಕರ್ಣನನ್ನು ಕುರಿತು ಹೀಗೆ ಮಾತನಾಡಿದನು.

ಕುಂಡಲೇ ಮೇ ಪ್ರಯಚ್ಛಸ್ವ ವರ್ಮ ಚೈವ ಶರೀರಜಮ್ ।
ಗೃಹಾಣ ಕರ್ಣ ಶಕ್ತಿಂ ತ್ವಮನೇನ ಸಮಯೇನ ಚ ॥೨೩॥

ಕರ್ಣನೇ, ನೀನು ನಿನ್ನ ಶರೀರದಲ್ಲಿ ಸಹಜವಾದ ಕವಚ-ಕುಂಡಲಗಳನ್ನು ನನಗೆ ಕೊಡು. ಶಕ್ತಿಯನ್ನು ಈ ನಿಬಂಧನೆಯ ಮೇಲೆ ಸ್ವೀಕರಿಸು.

ಅಮೋಘಾ ಹಂತಿ ಶತಶಃ ಶತ್ರೂನ್ ಮಮ ಕರಚ್ಯುತಾ ।
ಪುನಶ್ಚ ಪಾಣಿಮಭ್ಯೇತಿ ಮಮ ದೈತ್ಯಾನ್ ವಿನಿಘ್ನತಃ ॥೨೪॥

ಈ ಶಕ್ತಿಯು ಅಮೋಘವಾದುದು. ನಾನು ದೈತ್ಯರನ್ನು ಸಂಹರಿಸುವಾಗ ನನ್ನ ಹಸ್ತದಿಂದ ಬಿಡುಗಡೆ ಹೊಂದಿದ ಈ ಅಸ್ತ್ರವು ನೂರಾರು ಸಂಖ್ಯೆಯಲ್ಲಿ ಶತ್ರುಗಳಾದ ದೈತ್ಯರನ್ನು ಕೊಂದು ಪುನಃ ನನ್ನ ಕೈಗೇ ಬಂದುಸೇರುತ್ತದೆ.

ಸೇಯಂ ತವ ಕರಪ್ರಾಪ್ತಾ ಹತ್ವೈಕಂ ರಿಪುಮೂರ್ಜಿತಮ್ ।
ಗರ್ಜಂತಂ ಪ್ರತಪಂತಂ ಚ ಮಾಮೇವೈಷ್ಯತಿ ಸೂತಜ ॥೨೫॥

ಎಲೈ ಸೂತಪುತ್ರನೇ, ಅಂತಹ ಈ ಶಕ್ತಿಯು ನಿನ್ನ ಕೈಯನ್ನು ಸೇರಿದ ಮೇಲೆ ಅಭಿವೃದ್ಧನಾದ, ಗರ್ಜಿಸುತ್ತಿರುವ, ಪ್ರತಾಪಶಾಲಿಯಾದ ಒಬ್ಬ ಶತ್ರುವನ್ನು ಸಂಹರಿಸಿ ಪುನಃ ನನ್ನನ್ನೇ ಬಂದು ಸೇರುತ್ತದೆ.

ಕರ್ಣಃ

ಏಕಮೇವಾಹಮಿಚ್ಛಾಮಿ ರಿಪುಂ ಹಂತುಂ ಮಹಾಹವೇ ।
ಗರ್ಜಂತಂ ಪ್ರತಪಂತಂ ಚ ಯತೋ ಮಮ ಭಯಂ ಭವೇತ್ ॥೨೬॥

ಕರ್ಣ– ನಾನು ದೊಡ್ಡ ಯುದ್ಧದಲ್ಲಿ ಗರ್ಜಿಸುತ್ತಿರುವ ಪ್ರತಾಪಶಾಲಿಯಾದ ನನಗೆ ಭಯವನ್ನು ಉಂಟುಮಾಡುವ ಒಬ್ಬನೇ ಶತ್ರುವನ್ನು ಇದರಿಂದ ಕೊಲ್ಲಲು ಬಯಸುತ್ತೇನೆ.

ಇಂದ್ರಃ

ಏಕಂ ಹನಿಷ್ಯಸಿ ರಿಪುಂ ಗರ್ಜಂತಂ ಬಲಿನಂ ರಣೇ ।
ತ್ವಂ ತು ಯಂ ಸ್ಪರ್ಧಸೇ ಹ್ಯೇಕಂ ರಕ್ಷ್ಯತೇ ಸ ಮಹಾತ್ಮನಾ ॥೨೭॥

ಯಮಾಹುರ್ವೇದವಿದ್ವಾಂಸೋ ವರಾಹಮಪರಾಜಿತಮ್ ।
ನಾರಾಯಣಮಚಿಂತ್ಯಂ ಚ ತೇನ ಕೃಷ್ಣೇನ ರಕ್ಷ್ಯತೇ ॥೨೮॥

ಇಂದ್ರ– ಈ ಶಕ್ತಿಯು ಯುದ್ಧದಲ್ಲಿ ಗರ್ಜಿಸುತ್ತಿರುವ ಬಲಿಷ್ಠನಾದ ಒಬ್ಬ ಶತ್ರುವನ್ನು ಕೊಲ್ಲುವುದು. ಆದರೆ ನೀನು ಯಾರ ಜೊತೆಯಲ್ಲಿ ಸ್ಪರ್ಧೆಯನ್ನು ಮಾಡುತ್ತಿದ್ದಿಯೋ ಅವನು ಯಾವನನ್ನು ವೇದವಿದ್ವಾಂಸರು ಅಪರಾಜಿತನಾದ ವರಾಹನೆಂದೂ, ಅಚಿಂತ್ಯ ಮಹಿಮೆಯುಳ್ಳ ನಾರಾಯಣನೆಂದೂ ಕರೆಯುತ್ತಾರೆಯೋ ಅಂತಹ ಮಹಾತ್ಮನಾದ ಕೃಷ್ಣನಿಂದ ರಕ್ಷಿಸಲ್ಪಡುತ್ತಾನೆ.

ಕರ್ಣಃ

ಏವಮಪ್ಯಸ್ತು ಭಗವನ್ನೇಕವೀರವಧೇ ಮಮ ।
ಅಮೋಘಾಂ ದೇಹಿ ಮೇ ಶಕ್ತಿಂ ಯಥಾ ಹನ್ಯಾಂ ಪ್ರತಾಪಿನಮ್॥೨೯॥

ಕರ್ಣ– ಪೂಜ್ಯನೇ, ಹಾಗೆಯೇ ಆಗಲಿ. ಒಬ್ಬ ವೀರನನ್ನು ವಧೆ ಮಾಡುವುದಕ್ಕಾಗಿಯೇ ಅಮೋಘವಾದ ಶಕ್ತಿಯನ್ನು ಕೊಡು. ನಾನು ಅದರಿಂದ ಪ್ರತಾಪಶಾಲಿಯನ್ನೇ ಕೊಲ್ಲುವೆನು.

ಏವಮೇತದ್ಯಥಾऽऽತ್ಥ ತ್ವಂ ದಾನವಾನಾಂ ನಿಷೂದನ ।
ವಧಿಷ್ಯಾಮಿ ರಣೇ ಶತ್ರುಂ ಯೋ ಮೇ ಸ್ಥಾತಾ ಪುರಃಸರಃ ॥೩೦॥

ದಾನವಸೂದನನೇ, ನೀನು ಹೇಳಿದಂತೆಯೇ ಎಲ್ಲವೂ ಸರಿ. ನಾನು ಯುದ್ಧದಲ್ಲಿ ನನ್ನ ಮುಂದೆ ನಿಲ್ಲುವ ಶತ್ರುವನ್ನೇ ಅದರಿಂದ ಕೊಲ್ಲುವೆನು.

ಉತ್ಕೃತ್ಯ ತು ಪ್ರದಾಸ್ಯಾಮಿ ಕುಂಡಲೇ ಕವಚಂ ಚ ತೇ ।
ನಿಕೃತ್ತೇಷು ತು ಗಾತ್ರೇಷು ನ ಮೇ ಬೀಭತ್ಸತಾ ಭವೇತ್ ॥೩೧॥

ನಾನು ನನ್ನ ಶರೀರದಿಂದ ಶಸ್ತ್ರದಿಂದ ಕಿತ್ತು ಕವಚ-ಕುಂಡಲಗಳನ್ನು ನಿನಗೆ ಕೊಡುವೆನು. ಶಸ್ತ್ರದ ವ್ರಣದಿಂದ ನನ್ನ ಶರೀರವು ಬೀಭತ್ಸವಾಗಬಾರದು.

ಇಂದ್ರಃ

ನ ತೇ ಬೀಭತ್ಸತಾ ಕರ್ಣ ಭವಿಷ್ಯತಿ ಕಥಂಚನ ।
ನ ವ್ರಣಾನಿಚ ಗಾತ್ರೇಷು ಯಸ್ತ್ವಂ ನಾನೃತಮಿಚ್ಛಸಿ ॥೩೨॥

ಇಂದ್ರ– ಕರ್ಣನೇ, ಅನೃತವನ್ನು ಬಯಸದಿರುವ ನಿನಗೆ ಶರೀರದಲ್ಲಿ ಬೀಭತ್ಸತೆಯು ಉಂಟಾಗುವುದಿಲ್ಲ. ದೇಹದಲ್ಲಿ ಗಾಯಗಳೂ ಉಂಟಾಗುವುದಿಲ್ಲ.

ಯಾದೃಶಸ್ತೇ ಪಿತುರ್ವರ್ಣಸ್ತೇಜಶ್ಚ ವದತಾಂ ವರ ।
ತಾದೃಶೇನೈವ ವರ್ಣೇನ ತ್ವಂ ಕರ್ಣ ಭವಿತಾ ಪುನಃ ॥೩೩॥

ಮಾತನಾಡುವವರಲ್ಲಿ ಶ್ರೇಷ್ಠನಾದವನೇ, ನಿನ್ನ ತಂದೆಯ ವರ್ಣ ಮತ್ತು ತೇಜಸ್ಸುಗಳು ಹೇಗಿವೆಯೋ ನೀನೂ ಸಹ ಪುನಃ ಅಂತಹ ವರ್ಣ ಮತ್ತು ತೇಜಸ್ಸಿನಿಂದ ಕೂಡಿರುವನಾಗುವಿ.

ವಿದ್ಯಮಾನೇಷು ಶಸ್ತ್ರೇಷು ಯದ್ಯಮೋಘಾಮಸಂಶಯೇ ।
ಪ್ರಮತ್ತೋ ಮೋಕ್ಷ್ಯಸೇ ಚಾಪಿ ತ್ವಯ್ಯೇವೈಷಾ ಪತಿಷ್ಯತಿ ॥೩೪॥

ನಿನ್ನ ಬಳಿಯಲ್ಲಿ ಬೇರೆ ಶಸ್ತ್ರಗಳು ಇರುವಾಗ ಪ್ರಾಣಸಂಶಯವಿಲ್ಲದಿದ್ದಾಗ ಈ ಅಮೋಘವಾದ ಶಕ್ತಿಯನ್ನು ಪ್ರಯೋಗ ಮಾಡಿದರೆ ಅದು ನಿನ್ನ ಮೇಲೆಯೇ ಎರಗುವುದು.

ಕರ್ಣಃ

ಸಂಶಯಂ ಪರಮಂ ಪ್ರಾಪ್ಯ ವಿಮೋಕ್ಷ್ಯೇ ವಾಸವೀಮಿಮಾಮ್ ।
ಯಥಾ ಮಾಮಾತ್ಥ ಶಕ್ರ ತ್ವಂ ಸತ್ಯಮೇತದ್ ಬ್ರವೀಮಿ ತೇ ॥೩೫॥

ಕರ್ಣ– ಇಂದ್ರನೇ, ನೀನು ಹೇಳಿದಂತೆ ಪ್ರಾಣಸಂಶಯವುಂಟಾದಾಗಲೇ ಈ ನಿನ್ನ ಶಕ್ತ್ಯಾಯುಧವನ್ನು ಪ್ರಯೋಗಿಸುವೆನು. ಇದನ್ನು ಸತ್ಯವಾಗಿ ನಿನಗೆ ಹೇಳುತ್ತಿದ್ದೇನೆ.

ವೈಶಂಪಾಯನಃ

ತತಃ ಶಕ್ತಿಂ ಪ್ರಜ್ವಲಿತಾಂ ಪ್ರತಿಗೃಹ್ಯ ವಿಶಾಂಪತೇ ।
ಶಸ್ತ್ರಂ ಗೃಹೀತ್ವಾ ನಿಶಿತಂ ಸರ್ವಗಾತ್ರಾಣ್ಯಕೃಂತತ ॥೩೬॥

ವೈಶಂಪಾಯನ– ಎಲೈ ಜನಮೇಜಯರಾಜನೇ, ಅನಂತರ ಇಂದ್ರನಿಂದ ಪ್ರಜ್ವಲಿತವಾದ ಶಕ್ತಿಯನ್ನು ಸ್ವೀಕರಿಸಿ ಒಂದು ಹರಿತವಾದ ಶಸ್ತ್ರವನ್ನು ತೆಗೆದುಕೊಂಡು ತನ್ನ ಶರೀರವನ್ನು ಎಲ್ಲ ಕಡೆಗಳಲ್ಲಿಯೂ ಕತ್ತರಿಸಿದನು.

ತತೋ ದೇವಾ ಮಾನವಾ ದಾನವಾಶ್ಚ
ನಿಕೃಂತಂತಂ ಕರ್ಣಮಾತ್ಮಾನಮೇವಮ್ ।

ದೃಷ್ಟ್ವಾ ಸರ್ವೇ ಸಿಂಹನಾದಾನ್ ಪ್ರಣೇದುಃ
ನಹ್ಯಸ್ಯಾಸೀನ್ ಮುಖಜೋ ವೈ ವಿಕಾರಃ ॥೩೭॥

ಆಗ ಶಸ್ತ್ರದಿಂದ (ಸಿಪ್ಪೆಯನ್ನು ತೆಗೆಯುವಂತೆ) ಕತ್ತರಿಸಿ ಕವಚವನ್ನು ತೆಗೆಯುತ್ತಿದ್ದ ಕರ್ಣನನ್ನು ನೋಡಿ ಎಲ್ಲ ದೇವತೆಗಳೂ, ಮಾನವರೂ, ದಾನವರೆಲ್ಲರೂ ಸಿಂಹನಾದವನ್ನು ಮಾಡಿ ದೊಡ್ಡ ಗರ್ಜನೆಯನ್ನು ಮಾಡಿದರು. ಆದರೆ ಕರ್ಣನ ಮುಖದಲ್ಲಿ ಯಾವ ವಿಕಾರವೂ ಇರಲಿಲ್ಲ.

ತತೋ ದಿವ್ಯಾ ದುಂದುಭಯಃ ಪ್ರಣೇದುಃ
ಪಪಾತೋಚ್ಚೈಃ ಪುಷ್ಪವರ್ಷಂ ಚ ದಿವ್ಯಮ್ ।
ದೃಷ್ಟ್ವಾ ಕರ್ಣಂ ಶಸ್ತ್ರಸಂಕೃತ್ತಗಾತ್ರಂ
ಮುಹುಶ್ಚಾಪಿ ಸ್ಮಯಮಾನಂ ನೃವೀರಮ್ ॥೩೮॥

ಆಗ ಕರ್ಣನು ತನ್ನ ದೇಹವನ್ನು ಶಸ್ತ್ರದಿಂದ ಕತ್ತರಿಸಿಕೊಳ್ಳುತ್ತಿದ್ದರೂ ನಗುತ್ತಿರುವುದನ್ನು ನೋಡಿ ದೇವತೆಗಳು ದುಂದುಭಿಗಳನ್ನು ಮೊಳಗಿಸಿದರು. ಆ ನರಶ್ರೇಷ್ಠನ ಮೇಲೆ ದಿವ್ಯವಾದ ಪುಷ್ಪವೃಷ್ಟಿಯು ಉಂಟಾಯಿತು.

ತತಶ್ಛಿತ್ತ್ವಾ ಕವಚಂ ದಿವ್ಯಮಂಗಾತ್
ತಥೈವಾರ್ದ್ರಂ ಪ್ರದದೌ ವಾಸವಾಯ ।
ತಥೋತ್ಕೃತ್ಯ ಪ್ರದದೌ ಕುಂಡಲೇ ಚ
ಕರ್ಣಾತ್ತಸ್ಮಾತ್ ಕರ್ಮಣಾ ತೇನ ಕರ್ಣಃ ॥೩೯॥

ಅನಂತರ ಆ ದಿವ್ಯವಾದ ಕವಚವನ್ನು ತನ್ನ ದೇಹದಿಂದ ಕತ್ತರಿಸಿ ರಕ್ತದಿಂದ ಆರ್ದ್ರವಾದ ಅದನ್ನು ಇಂದ್ರನಿಗೆ ನೀಡಿದನು. ಹಾಗೆಯೇ ಕಿವಿಗಳನ್ನು ಕತ್ತರಿಸಿ ಕುಂಡಲಗಳನ್ನು ಕಿವಿಗಳಿಂದ ತೆಗೆದು ನೀಡಿದನು. ಈ ಕರ್ಮದಿಂದಲೂ ಅವನು ಕರ್ಣ ಎನಿಸಿಕೊಂಡನು.

ತತೋ ದೇವೋ ಮುದಿತೋ ವಜ್ರಪಾಣಿ–
ರ್ದೃಷ್ಟ್ವಾ ಕರ್ಣಂ ಶಸ್ತ್ರನಿಕೃತ್ತಗಾತ್ರಮ್ ।
ತತಃ ಶಕ್ರಃ ಪ್ರಹಸನ್ ವಂಚಯಿತ್ವಾ
ಕರ್ಣಂ ಲೋಕೇ ಯಶಸಾ ಯೋಜಯಿತ್ವಾ ॥೪೦॥

ಕೃತಂ ಕಾರ್ಯಂ ಪಾಂಡವಾನಾಂ ಹಿ ಮೇನೇ
ತತಃ ಪಶ್ಚಾದ್ ದಿವಮೇವೋತ್ಪಪಾತ ॥೪೧॥

ಆಗ ವಜ್ರಪಾಣಿಯಾದ ಇಂದ್ರದೇವನು ಕರ್ಣನನ್ನು ವಂಚಿಸಿ ನಗುತ್ತಾ ಶಸ್ತ್ರದಿಂದ ಕತ್ತರಿಸಲ್ಪಟ್ಟ ಶರೀರವುಳ್ಳ ಅವನನ್ನು ನೋಡಿ ಸಂತೋಷಗೊಂಡವನಾಗಿ ಲೋಕದಲ್ಲಿ ಅವನನ್ನು ಅಪಾರವಾದ ಯಶಸ್ಸಿನಿಂದ ಕೂಡಿದವನನ್ನಾಗಿ ಮಾಡಿ ಪಾಂಡವರ ಕಾರ್ಯವನ್ನು ಮಾಡಿದ್ದಾಯಿತು ಎಂದು ತಿಳಿದನು. ಅನಂತರ ಸ್ವರ್ಗಲೋಕಕ್ಕೆ ಹಾರಿ ಹೋದನು.

ಶ್ರುತ್ವಾ ಕರ್ಣಂ ಮುಷಿತಂ ಧಾರ್ತರಾಷ್ಟ್ರಾ
ದೀನಾಃ ಸರ್ವೇ ಭಗ್ನದರ್ಪಾ ಇವಾಸನ್ ।
ತಾಂ ಚಾವಸ್ಥಾಂ ಗಮಿತಂ ಸೂತಪುತ್ರಂ
ಶ್ರುತ್ವಾ ಪಾರ್ಥಾ ಜಹೃಷುಃ ಕಾನನಸ್ಥಾಃ ॥೪೨॥

ಕರ್ಣನು ಕವಚ ಕುಂಡಲಗಳನ್ನು ಕಳೆದುಕೊಂಡ ವಾರ್ತೆಯನ್ನು ಕೇಳಿ ಧೃತರಾಷ್ಟ್ರ ಪುತ್ರರೆಲ್ಲರೂ ದೀನರೂ, ಭಗ್ನದರ್ಪರೂ ಆದರು. ಸೂತಪುತ್ರನಾದ ಕರ್ಣನಿಗೆ ಉಂಟಾದ ಆ ಅವಸ್ಥೆಯನ್ನು ಕೇಳಿ ಕಾಡಿನಲ್ಲಿದ್ದ ಪಾಂಡವರು ಸಂತೋಷಪಟ್ಟರು.

ಜನಮೇಜಯಃ

ಕ್ವಸ್ಥಾ ವೀರಾಃ ಪಾಂಡವಾಸ್ತೇ ಬಭೂವುಃ
ಕುತಶ್ಚೈವ ಶ್ರುತವಂತಃ ಪ್ರಿಯಂ ತತ್ ।
ಕಿಂ ವಾಕಾರ್ಷುರ್ದ್ವಾದಶೇऽಬ್ದೇ ವ್ಯತೀತೇ
ತನ್ಮೇ ಸರ್ವಂ ಭಗವಾನ್ ವ್ಯಾಕರೋತ್ ॥೪೩॥

ಜನಮೇಜಯ– ವೀರರಾದ ಪಾಂಡವರು ಆಗ ಎಲ್ಲಿದ್ದರು? ಮತ್ತು ಯಾರಿಂದ ತಮಗೆ ಪ್ರಿಯವಾದ ಈ ವಾರ್ತೆಯನ್ನು ಕೇಳಿದರು? ಹನ್ನೆರಡು ವರ್ಷಗಳು ಕಳೆದ ಮೇಲೆ ಏನನ್ನು ಮಾಡಿದರು? ಇದೆಲ್ಲವನ್ನೂ ಪೂಜ್ಯರಾದ ನೀವು ನನಗೆ ಹೇಳಬೇಕು.

ವೈಶಂಪಾಯನಃ

ಲಬ್ಧ್ವಾ ಕೃಷ್ಣಾಂ ಸೈಂಧವಂ ದ್ರಾವಯಿತ್ವಾ
ದ್ವಿಜೈಃ ಸಾರ್ಧಂ ಕಾಮ್ಯಕಾದಾಶ್ರಮಾತ್ ತೇ ।

ಮಾರ್ಕಂಡೇಯಾಚ್ಚ್ರುತವಂತಃ ಪುರಾಣಂ
ದೇವರ್ಷೀಣಾಂ ಚರಿತಂ ವಿಸ್ತರೇಣ ॥೪೪॥

ಪ್ರತ್ಯಾಜಗ್ಮುಃ ಸರಥಾಃ ಸಾನುಯಾತ್ರಾಃ
ಸರ್ವೈಃ ಸಾರ್ಧಂ ಸೂತಪೌರೋಗವೈಸ್ತೇ ।
ತತಃ ಪುಣ್ಯಂ ದ್ವೈತವನಂ ನೃವೀರಾ
ನಿಸ್ತೀರ್ಯೋಗ್ರಂ ವನವಾಸಂ ಸಮಗ್ರಮ್ ॥೪೫॥

ವೈಶಂಪಾಯನ– ಸೈಂಧವನನ್ನು ಓಡಿಸಿ, ದ್ರೌಪದಿಯನ್ನು ಪಡೆದು, ಮಾರ್ಕಂಡೇಯರಿಂದ ಪುಣ್ಯಕಥೆಗಳನ್ನು, ದೇವತೆಗಳ ಮತ್ತು ಋಷಿಗಳ ಚರಿತ್ರೆಯನ್ನು ವಿಸ್ತಾರವಾಗಿ ಕೇಳಿ ಅವರು ಕಾಮ್ಯಕವನದ ಆಶ್ರಮದಿಂದ ರಥಗಳು, ತಮ್ಮ ಪರಿವಾರ, ಸೂತಪೌರೋಗವರು ಇವರೆಲ್ಲರ ಸಹಿತವಾಗಿ ಸಮಗ್ರವಾದ ವನವಾಸವನ್ನು ಪೂರೈಸಿ ದ್ವೈತವನಕ್ಕೆ ಹಿಂದಿರುಗಿದರು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂಸಂಹಿತಾಯಾಂ ವೈಯಾಸಿಕ್ಯಾಂ
ವನಪರ್ವಣಿ ಏಕತ್ರಿಶತತಮೋऽಧ್ಯಾಯಃ ॥
॥ ಇತಿ ಕುಂಡಲಾಹರಣಪರ್ವಣಿ ಇಂದ್ರೇಣ ಕುಂಡಲಾಹರಣಂ ನಾಮ
ಏಕಾದಶೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವನಪರ್ವದಲ್ಲಿ ಮುನ್ನೂರ ಒಂದನೆಯ
ಅಧ್ಯಾಯ ಮುಗಿಯಿತು.

॥ ಕುಂಡಲಾಹರಣಪರ್ವ ಸಮಾಪ್ತಮ್ ॥

★ ★ ★ ★

ಆರಣೇಯಪರ್ವ

ಮಹಾಭಾರತ ತಾತ್ಪರ್ಯನಿರ್ಣಯ -೨೨ ಅಧ್ಯಾಯ

ಪಾರ್ಥಾ ವಿಮುಚ್ಯೈವ ಸುಯೋಧನಂ
ತಂ ವನೇ ವಸಂತೋ ಮುದಿತಾಃ ಸದೈವ ।
ಸಹಾರಣೇಭಾಂಡಮಥೋ ಮೃಗೇಣ
ಹೃತಂ ದ್ವಿಜಸ್ಯಾಽಶು ನಿಶಮ್ಯ ಚಾನ್ವಯುಃ ॥೪೧೮॥

ಪಾಂಡವರು ದುರ್ಯೋಧನನನ್ನು ಬಿಡುಗಡೆ ಮಾಡಿ ವನದಲ್ಲಿ ಸುಖಿಗಳಾಗಿ ವಾಸ ಮಾಡಿದರು. ಒಬ್ಬ ಬ್ರಾಹ್ಮಣನ ಅರಣಿ ಮತ್ತು ಪಾತ್ರೆಯನ್ನು ಜಿಂಕೆ ಅಪಹರಿಸಿದ್ದನ್ನು ಕೇಳಿ ಅದನ್ನು ಬೆನ್ನಟ್ಟಿದರು.

ತಸ್ಮಿನ್ನದೃಶ್ಯೇ ತೃಷಿತಾ ಏಕೈಕಮುದಕಾರ್ಥಿನಃ ।
ಯಯುರ್ಯುಧಿಷ್ಠಿರಮೃತೇ ಸುಪ್ತಾಸ್ತೇ ಧರ್ಮಮಾಯಯಾ ।
ಅದೃಶ್ಯೇನೈವ ಧರ್ಮೇಣ ವಾರಿತಾ ವಾರಿಪಾಯಿನಃ ॥೪೧೯॥

ಕ್ಷತ್ರಧರ್ಮಸ್ಯ ರಕ್ಷಾರ್ಥಂ ನ ತತ್ಯಜುಸ್ತಾನ್ ವಿದಾಂ ವರಾಃ ।
ವ್ಯಾಚಕ್ರುಃ ಶಕ್ತಿಮಂತೋಽಪಿ ಪಾನೀಯಾರ್ಥಮರಿಂದಮಾಃ ॥೪೨೦॥

ಜಿಂಕೆ ಅದೃಶ್ಯವಾದಾಗ ಪಾಂಡವರು ಬಾಯಾರಿದ್ದರು. ಯುಧಿಷ್ಠಿರ ಹೊರತು ಎಲ್ಲರೂ ಒಬ್ಬೊಬ್ಬರಾಗಿ ಜಲಾರ್ಥಿಗಳಾಗಿ ಹೋದರು. ಯಮನ ಮಾಯೆಯಿಂದ

ಸುಪ್ರರಾದರು. ಏಕೆಂದರೆ ಯಮ ಅದೃಶ್ಯನಾಗಿ ನಿಂತು ತಡೆದರೂ ಅವರು ನೀರು ಕುಡಿದರು. ಜ್ಞಾನಿಶ್ರೇಷ್ಠರೂ ಶತ್ರುನಾಶಕರೂ ಆದ ಅವರು ಯಮನ ಪ್ರಶ್ನೆಗಳನ್ನು ಉತ್ತರಿಸಲು ಶಕ್ತಿ ಉಳ್ಳವರಾಗಿದ್ದರೂ ನೀರಿಗಾಗಿ ಆ ಪ್ರಶ್ನೆಗಳನ್ನು ಉತ್ತರಿಸಲಿಲ್ಲ. ಇದು ತಮ್ಮ ಕ್ಷಾತ್ರಧರ್ಮರಕ್ಷಣೆಗಾಗಿ.

ನ ವಿಪ್ರಾಣಾಂ ಚ ಧರ್ಮೋಽಯಂ ವಿದ್ಯಾಯಾ ಉಪಜೀವನಮ್ ।
ಕ್ಷತ್ರಿಯಾಣಾಂ ತು ಕಿಮುತ ಪ್ರಸಭಂ ತೇನ ತೇ ಪಪುಃ ॥೪೨೧॥

ಜೀವನಕ್ಕೆ ವಿದ್ಯೆಯನ್ನು ಅವಲಂಬಿಸುವುದು ಬ್ರಾಹ್ಮಣರಿಗೂ ಧರ್ಮವಲ್ಲದಿರುವಾಗ ಕ್ಷತ್ರಿಯರಿಗೆ ಇನ್ನೇನು ಹೇಳಬೇಕು? ಅದರಿಂದ ಪಾಂಡವರು ಬಲಾತ್ಕಾರದಿಂದ ನೀರನ್ನು ಕುಡಿದರು.

ದೇವಾ ಅಪಿ ಮನುಷ್ಯೇಷು ಜಾತಾಃ ಸುಬಲಿನೋಽಪಿ ಹಿ ।
ಮಾನುಷೇಣೈವ ಭಾವೇನ ಯುಕ್ತಾಃ ಸ್ಯುಃ ಕೇಶವಾದೃತೇ ॥೪೨೨॥

ದೇವತೆಗಳೂ ಕೂಡ ಮನುಷ್ಯರಲ್ಲಿ ಹುಟ್ಟಿದಾಗ ಹೆಚ್ಚು ಬಲಉಳ್ಳವರಾದರೂ ಮನುಷ್ಯ ಸ್ವಭಾವವನ್ನೇ ತೋರಬೇಕು. ಈ ನಿಯಮಕ್ಕೆ ಶ್ರೀಹರಿಯೊಬ್ಬನೇ ಹೊರತಾಗಿದ್ದಾನೆ.

ಕಾರ್ಯೇಷ್ವೇಷಾಂ ಕ್ರಮೇಣೈವ ವ್ಯಕ್ತಿಮಾಯಾಂತಿ ಸದ್ಗುಣಾಃ ।
ಅತೋ ಭೀಮಾರ್ಜುನೌ ಧರ್ಮಾದತ್ಯುತ್ತಮಬಲಾವಪಿ ।
ದೇವಮಾಯಾಂ ಸಮಾಶ್ರಿತ್ಯ ಧರ್ಮೇಣ ಸ್ವಾಪಿತೌ ಕ್ಷಣಾತ್ ॥೪೨೩॥

ಪ್ರಸಂಗ ಬಂದಾಗ ಮಾತ್ರ ದೇವತೆಗಳ ಸದ್ಗುಣಗಳು ಕ್ರಮದಿಂದ ಅಭಿವ್ಯಕ್ತಿ ಹೊಂದುತ್ತವೆ. ಅದರಿಂದ ಭೀಮಾರ್ಜುನರು ಯಮನಿಗಿಂತ ಅತ್ಯುತ್ತಮ ಬಲ ಉಳ್ಳವರಾಗಿದ್ದರೂ ದೇವಮಾಯೆಯ ಬಲವನ್ನಾಶ್ರಯಿಸಿ ಯಮನಿಂದ ಕ್ಷಣದಲ್ಲಿ ನಿದ್ರೆಗೊಳಿಸಲ್ಪಟ್ಟರು.

ಮುಹೂರ್ತಮೇವ ಸಾ ಮಾಯಾ ತಯೋರಾಚ್ಛಾದನೇ ಕ್ಷಮಾ ।
ತತಃ ಪ್ರಬುದ್ಧಯೋರ್ಧರ್ಮೋ ನೈವ ಶಕ್ತಿಶತಾಂಶಭಾಕ್ ॥೪೨೪॥

ಆ ದೇವಮಾಯೆ ಒಂದು ಮುಹೂರ್ತಕಾಲ ಮಾತ್ರ ಭೀಮಾರ್ಜುನರನ್ನು ಆವರಿಸಲು ಶಕ್ತವಾಗಿರುತ್ತದೆ. ಅನಂತರ ಅವರು ಎಚ್ಚೆತ್ತರೆ ಅವರ ಶಕ್ತಿಯಲ್ಲಿ ನೂರನೆ ಒಂದಂಶದಷ್ಟೂ ಉಳ್ಳವನಲ್ಲ, ಯಮ.

ಉಕ್ತಂ ಪದ್ಮಪುರಾಣೇ ಚ ತದೇತತ್ ಸರ್ವಮಂಜಸಾ ।
ತಸ್ಮಾನ್ನಾಶಕ್ತಿರನಯೋಃ ಸಂಭಾವ್ಯಾಃ ಭೀಮಪಾರ್ಥಯೋಃ ॥೪೨೫॥

ಇದೆಲ್ಲವೂ ಪಾದ್ಮಪುರಾಣದಲ್ಲಿ ಚೆನ್ನಾಗಿ ಉಕ್ತವಾಗಿದೆ. ಅದರಿಂದ ಭೀಮಾರ್ಜುನರಿಗೆ ಅಶಕ್ತಿಯನ್ನು ಶಂಕಿಸಬಾರದು.

ಧರ್ಮಾತ್ಮಜೋಽಥಾಽಜಗಾಮೋದಕಾಂತಂ
ದೃಷ್ಟ್ವಾ ಭ್ರಾತೄಂಸ್ತತ್ರ ದುಃಖಾಭಿತಪ್ತಃ ।
ಇಚ್ಛನ್ ಪಾತುಂ ವಾರಿ ಸಂವಾರಿತಶ್ಚ
ಪಿತ್ರಾ ಬಕಾಕಾರಮಿತೇನ ನಾಪಾತ್ ॥೪೨೬॥

ಬಳಿಕ ಧರ್ಮರಾಜ ನೀರಿನ ಬಳಿಗೆ ಸೋದರರು ಮಲಗಿರುವುದನ್ನು ಕಂಡು ದುಃಖದಿಂದ ಸಂತಪ್ತನಾದ. ನೀರು ಕುಡಿಯಲು ಬಯಸಿದ. ಬಳಿಕ ಆಕಾರವನ್ನು ಧರಿಸಿದ್ದ ತಂದೆ ಯಮ ತಡೆದುದರಿಂದ ಕುಡಿಯಲಿಲ್ಲ.

ಅರ್ಥೇ ಭ್ರಾತೄಣಾಮೈಚ್ಛದಸೌ
ತದೀಪ್ರಶ್ನಪ್ರತಿವ್ಯಾಹರಣಂ ದಯಾಲುಃ ।
ತತೋ ಧರ್ಮೋ ಯಕ್ಷತನುಃ ಸ ಭೂತ್ವಾ
ಪ್ರಶ್ನಾಂಶ್ಚಕ್ರೇ ವ್ಯಾಕರೋತ್ ತಾನ್ ಸ ಪಾರ್ಥಃ ॥೪೨೭॥

ದಯಾಳುವಾದ ಧರ್ಮರಾಜ ಸೋದರರ ಸಲುವಾಗಿ ಯಮನ ಪ್ರಶ್ನೆಗಳಿಗೆ ಉತ್ತರಿಸಲು ಬಯಸಿದ. ಆಗ ಯಮ ಯಕ್ಷಶರೀರಿಯಾಗಿ ಪ್ರಶ್ನೆಗಳನ್ನು ಕೇಳಿದ. ಧರ್ಮರಾಜ ಅವುಗಳನ್ನು ಉತ್ತರಿಸಿದ.

ತತಸ್ತುಷ್ಟೋ ವರಮಸ್ಮೈ ದದೌ ಸ
ಏಕೋತ್ಥಾನಂ ಭ್ರಾತೃಮಧ್ಯೇ ಸ ವವ್ರೇ ।
ಯದ್ಯೇಕಃ ಸ್ಯಾನ್ನಕುಲೋಽಸ್ತಿ ತ್ವಥಾಽಹ
ತುಷ್ಟೋ ಧರ್ಮಃ ಕಥಮೇತತ್ ಕೃತಂ ತೇ ॥೪೨೮॥

ಅತಿಪ್ರೀತಿರ್ಭೀಮಸೇನೇ ತವಾಸ್ತಿ ಬಲೀ
ಚಾಸೌ ರಾಜ್ಯಹೇತುಸ್ತವ ಸ್ಯಾತ್।
ಇತ್ಯುಕ್ತ ಊಚೇ ಮಾದ್ರಿಪುತ್ರಂ ವಿಹಾಯ
ಕುಂತೀಪುತ್ರೋ ನ ಮಯೋತ್ಥಾಪನೀಯಃ ॥೪೨೯॥

ಆಗ ಯಮ ಸಂತುಷ್ಟನಾಗಿ ಧರ್ಮರಾಜನಿಗೆ ನಿನ್ನ ತಮ್ಮಂದಿರಲ್ಲಿ ಯಾರಾದರೂ ಒಬ್ಬ ಮಾತ್ರ ಎದ್ದು ಬರುವನೆಂದು ವರ ನೀಡಿದ. ಒಬ್ಬ ಏಳುವುದಾದರೆ ನಕುಲ ಏಳಲಿ ಎಂದ ಧರ್ಮರಾಜ. ಯಮ ಸಂತುಷ್ಟನಾಗಿ ಕೇಳಿದ. 'ನೀನೇಕೆ ಹೀಗೆ ಮಾಡಿದೆ? ನಿನಗೆ ಅತ್ಯಂತ ಪ್ರೀತಿ ಭೀಮನಲ್ಲಿ ಇದೆ. ಬಲಿಷ್ಠನಾದ ಅವನೇ ನಿನಗೆ ರಾಜ್ಯ ಲಾಭಕ್ಕೆ ಕಾರಣನಾಗುವನು' ಹೀಗೆ ಯಮ ಕೇಳಿದಾಗ ಧರ್ಮರಾಜನೆಂದ, 'ಮಾದ್ರಿ ಪುತ್ರನನ್ನು ಬಿಟ್ಟು ಕುಂತೀಪುತ್ರನನ್ನು ನಾನು ಎಬ್ಬಿಸುವುದು ಉಚಿತವಲ್ಲ'.

ಸ ಏವಮುಕ್ತೋ ನಿತರಾಂ ಪ್ರೀಯಮಾಣ
ಉತ್ಥಾಪಯಾಮಾಸ ಸ ತಾನ್ ಸಮಸ್ತಾನ್ ।
ಯಥೇಷ್ಟರೂಪಪ್ರಾಪ್ತಿಮೇಷಾಂ ಪುನಶ್ಚ
ಸ್ವಕಾಮತೋ ನಿಜರೂಪಾಪ್ತಿಮಾದಾತ್ ॥೪೩೦॥

ಧರ್ಮರಾಜ ಹೀಗೆ ಹೇಳಿದಾಗ ಬಹಳ ಸಂತುಷ್ಟನಾಗಿ ಎಲ್ಲ ಪಾಂಡವರನ್ನೂ ಎಬ್ಬಿಸಿದ. ಅವರಿಗೆ ತಾವು ಬಯಸಿದ ರೂಪ ಪ್ರಾಪ್ತಿ ವರವನ್ನೂ ನೀಡಿದ. ಸ್ವೇಚ್ಛೆಯಿಂದ ನಿಜರೂಪ ಪ್ರಾಪ್ತಿಯ ವರವನ್ನೂ ನೀಡಿದ.

ಅಜ್ಞಾತವಾಸೇऽಜ್ಞಾತತಾಂ ಸರ್ವದೈವ ದದೌ
ತೇಷಾಂ ಪ್ರೀತ ಏವಾऽನೃಶಂಸ್ಯಾತ್ ।
ಏವಂ ಕ್ರೀಡಾನ್ ಪುತ್ರ ಇತ್ಯಾತ್ಮನೈವ
ಯಶೋಧರ್ಮಾವಾತ್ಮನೋ ವರ್ದ್ಧಯನ್ ಸಃ ॥೪೩೧॥

ಯುಧಿಷ್ಠಿರನ ದಯಾಧರ್ಮದಿಂದ ಸಂತುಷ್ಟನಾದ ಯಮ ಹೀಗೆ ಮಗನೆಂದು ತನ್ನೊಡನೆಯೆ ತಾನು ಕ್ರೀಡಿಸುತ್ತಾ, ಪಾಂಡವರಿಗೆ ಅಜ್ಞಾತವಾಸಕಾಲದಲ್ಲಿ ಸದಾ ಅಜ್ಞಾತರಾಗಿರುವಂತೆ ವರನೀಡಿದ.

ಯುಧಿಷ್ಠಿರಾತ್ಮನಸ್ತಸ್ಯ ಯಶೋಧರ್ಮವಿವೃದ್ಧಯೇ ।
ಕೃತ್ವಾऽರಣ್ಯಪಹಾರಾದಿ ಪುನರ್ದತ್ತ್ವಾ ಚ ತತ್ ಸ್ವಯಮ್ ।
ದಾತುಂ ವಿಪ್ರಾಯ ತದ್ದಸ್ಯೇ ಯಯೌ ಧರ್ಮೋ ದಿವಂ ಪುನಃ ॥೪೩॥

ಯುಧಿಷ್ಠಿರರೂಪದಲ್ಲಿದ್ದ ತನ್ನ ಯಶಸ್ಸು ಪುಣ್ಯಗಳ ವೃದ್ಧಿಗಾಗಿ ಅರಣಿಯ ಅಪಹಾರಾದಿಗಳನ್ನು ತಾನೇ ಮಾಡಿ, ಪುನಃ ತಾನೇ ಅದನ್ನು ಬ್ರಾಹ್ಮಣನಿಗೆ ಕೊಡುವುದಕ್ಕಾಗಿ ಯುಧಿಷ್ಠಿರನ ಕೈಯಲ್ಲಿ ಕೊಟ್ಟು ಪುನಃ ಯಮ ಸ್ವರ್ಗಕ್ಕೆ ತೆರಳಿದ.

ತತೋ ರಾಜಾ ಭೀಮಸೇನಾರ್ಜುನೌ ಚ
ಸಾರ್ದ್ಧಂ ಯಮಾಭ್ಯಾಮರಣೇಂ ಪ್ರದಾಯ ।
ಮುದಾ ಯುತಾಃ ಕೃಷ್ಣಯಾ ಸಾರ್ದ್ಧಮೇವ
ಸಂತುಷ್ಟುವುಃ ಕೃಷ್ಣಮನಂತಮಚ್ಯುತಮ್ ॥೪೩॥

ಬಳಿಕ ರಾಜಾ ಯುಧಿಷ್ಠಿರ ಮತ್ತು ಭೀಮಾರ್ಜುನರು ನಕುಲ ಸಹದೇವರೊಂದಿಗೆ ಬ್ರಾಹ್ಮಣನಿಗೆ ಅರಣಿಯನ್ನು ಕೊಟ್ಟು ಆನಂದಯುಕ್ತರಾಗಿ ದ್ರೌಪದಿಯೊಂದಿಗೆ ಅನಂತ ಅಚ್ಯುತನೆನಿಸಿದ ಶ್ರೀಕೃಷ್ಣನನ್ನು ಚೆನ್ನಾಗಿ ಸ್ತುತಿಸಿದರು.

★ ★ ★ ★

ಮುನ್ನೂರ ಎರಡನೆಯ ಅಧ್ಯಾಯ

ಯುಧಿಷ್ಠಿರಾದಿಗಳಿಂದ ದ್ವೈತವನಕ್ಕೆ ಆಗಮನ.
ಮೃಗದಿಂದ ಬ್ರಾಹ್ಮಣನ ಅರಣಿಯ ಅಪಹರಣ.
ಪಾಂಡವರ ಅನುಧಾವನ ಮತ್ತು ವಟಮೂಲದಲ್ಲಿ ಉಪವೇಶನ.

ಜನಮೇಜಯಃ

ಏವಂ ಹೃತಾಯಾಂ ಕೃಷ್ಣಾಯಾಂ ಪ್ರಾಪ್ಯ ಕ್ಲೇಶಮನುತ್ತಮಮ್ ।
ಪ್ರತಿಪದ್ಯ ತತಃ ಕೃಷ್ಣಾಂ ಕಿಮಕುರ್ವತ ಪಾಂಡವಾಃ ॥೧॥

ಜನಮೇಜಯ– ಹೀಗೆ ದ್ರೌಪದಿಯು ಅಪಹರಿಸಲ್ಪಟ್ಟರಲು ದೊಡ್ಡ ಕ್ಲೇಶವನ್ನು ಅನುಭವಿಸಿ ಪುನಃ ಅವಳನ್ನು ಪಡೆದು ಅನಂತರ ಪಾಂಡವರು ಏನು ಮಾಡಿದರು?

ವೈಶಂಪಾಯನಃ

ಏವಂ ಹೃತಾಯಾಂ ಕೃಷ್ಣಾಯಾಂ ಪ್ರಾಪ್ಯ ಕ್ಲೇಶಮನುತ್ತಮಮ್ ।
ವಿಹಾಯ ಕಾಮ್ಯಕಂ ರಾಜಾ ಸಹ ಭ್ರಾತೃಭಿರಚ್ಯುತಃ ॥೨॥

ಪುನರ್ದ್ವೈತವನಂ ರಮ್ಯಮಾಜಗಾಮ ಯುಧಿಷ್ಠಿರಃ ।
ಸ್ವಾದುಮೂಲಫಲಂ ರಮ್ಯಂ ವಿಚಿತ್ರಬಹುಪಾದಪಮ್ ॥೩॥

ವೈಶಂಪಾಯನ– ಹೀಗೆ ದ್ರೌಪದಿಯು ಅಪಹರಿಸಲ್ಪಟ್ಟಾಗ ದೊಡ್ಡ ಕ್ಲೇಶವನ್ನು ಅನುಭವಿಸಿ ಅನಂತರ ರಾಜನಾದ ಯುಧಿಷ್ಠಿರನು ತನ್ನ ಗುಣಗಳಿಂದ ಚ್ಯುತನಾಗದೆ ಕಾಮ್ಯಕವನವನ್ನು ಬಿಟ್ಟು ಮಧುರವಾದ ಮೂಲಫಲಗಳನ್ನುಳ್ಳ ವಿಚಿತ್ರವಾದ ವೃಕ್ಷಗಳಿಂದ ಕೂಡಿದ ಮನೋಹರವಾದ ದ್ವೈತವನಕ್ಕೆ ಪುನಃ ಹಿಂದಿರುಗಿದನು.

ಅನುಭುಕ್ತಫಲಾಹಾರಾಃ ಸರ್ವ ಏವ ಮಿತಾಶನಾಃ ।
ನ್ಯವಸನ್ ಪಾಂಡವಾಸ್ತತ್ರ ಕೃಷ್ಣಯಾ ಸಹ ಭಾರ್ಯಯಾ ॥೪॥

ಪಾಂಡವರೆಲ್ಲರೂ ಫಲಾಹಾರವನ್ನು ಮಾಡುತ್ತಾ ಮಿತಭೋಜನರಾಗಿ ಪತ್ನಿಯಾದ ದ್ರೌಪದಿಯ ಜೊತೆಯಲ್ಲಿ ಅಲ್ಲಿ ವಾಸವನ್ನು ಮಾಡಿದರು.

ವಸನ್ ದ್ವೈತವನೇ ರಾಜಾ ಕುಂತೀಪುತ್ರೋ ಯುಧಿಷ್ಠಿರಃ ।
ಭೀಮಸೇನೋऽರ್ಜುನಶ್ಚೈವ ಮಾದ್ರೀಪುತ್ರೌ ಚ ಪಾಂಡವೌ ॥೫॥

ಬ್ರಾಹ್ಮಣಾರ್ಥೇ ಪರಾಕ್ರಾಂತಾ ಧರ್ಮಾತ್ಮಾನೋ ಯತವ್ರತಾಃ ।
ಕ್ಲೇಶಮಾರ್ಚ್ಛಂತ ವಿಪುಲಂ ಸುಖೋದರ್ಕಂ ಪರಂತಪಾಃ ॥೬॥

ದ್ವೈತವನದಲ್ಲಿ ವಾಸಮಾಡುತ್ತಾ ರಾಜನಾದ ಕುಂತೀಪುತ್ರನಾದ ಯುಧಿಷ್ಠಿರನು ಭೀಮಸೇನನು, ಪಾಂಡುಪುತ್ರರಾದ ನಕುಲ-ಸಹದೇವರು ಬ್ರಾಹ್ಮಣರಿಗೆ ಉಪಕಾರವನ್ನು ಮಾಡುವ ಸಲುವಾಗಿ ಕಾರ್ಯಗಳನ್ನು ಮಾಡಿದರು. ಧರ್ಮಿಷ್ಠರೂ, ಸತ್ಯವ್ರತರೂ, ಪರಂತಪರೂ ಆದ ಅವರು ಸುಖಾಂತ್ಯವನ್ನು ಕಾಣುವ ವಿಪುಲವಾದ ಕ್ಲೇಶವನ್ನು ಹೊಂದಿದರು.

ತಸ್ಮಿನ್ ಪ್ರತಿವಸಂತಸ್ತೇ ಯತ್ ಪ್ರಾಪುಃ ಕುರುಸತ್ತಮಾಃ ।
ವನೇ ಕ್ಲೇಶಂ ಸುಖೋದರ್ಕಂ ತತ್ ಪ್ರವಕ್ಷ್ಯಾಮಿ ತೇ ಶೃಣು ॥೭॥

ಆ ದ್ವೈತವನದಲ್ಲಿ ವಾಸಮಾಡುತ್ತಾ ಕುರುಶ್ರೇಷ್ಠರಾದ ಅವರು ಸುಖಾಂತವಾದ ಯಾವ ಕ್ಲೇಶವನ್ನು ಅನುಭವಿಸಿದರೂ ಎಂದು ನಾನು ಹೇಳುವೆನು ಅದನ್ನು ಕೇಳು.

ಅರಣೇಸಹಿತಂ ಮಂಥಂ ಬ್ರಾಹ್ಮಣಸ್ಯ ತಪಸ್ವಿನಃ ।
ಮೃಗಸ್ಯ ಘರ್ಷಮಾಣಸ್ಯ ವಿಷಾಣೇ ಸಮಸಜ್ಜತ ॥೮॥

ತಪಸ್ವಿಯಾದ ಒಬ್ಬ ಬ್ರಾಹ್ಮಣನ ಅರಣೀ ಸಹಿತವಾದ ದಂಡವು ಅದಕ್ಕೆ ತನ್ನ ದೇಹವನ್ನು ಉಜ್ಜುತ್ತಿದ್ದ ಜಿಂಕೆಯ ಕೊಂಬಿನಲ್ಲಿ ಸಿಲುಕಿಕೊಂಡಿತು.

ತದಾದಾಯ ಗತೋ ರಾಜಂಸ್ತ್ವರಮಾಣೋ ಮಹಾಮೃಗಃ ।
ಆಶ್ರಮಾಂತರಿತಃ ಶೀಘ್ರಂ ಪ್ಲವಮಾನೋ ಮಹಾಜವಃ ॥೯॥

ಎಲೈ ರಾಜನೇ, ಬಹಳ ವೇಗವುಳ್ಳ ಆ ಮಹಾಮೃಗವು ಆ ಅರಣಿಮಂಥಗಳನ್ನು ತೆಗೆದುಕೊಂಡು ತ್ವರೆಯಿಂದ ಶೀಘ್ರವಾಗಿ ಓಡುತ್ತಾ ಇನ್ನೊಂದು ಆಶ್ರಮವನ್ನು ತಲುಪಿತು.

ಹ್ರಿಯಮಾಣಂ ತು ತಂ ದೃಷ್ಟ್ವಾ ಸ ವಿಪ್ರಃ ಕುರುಸತ್ತಮ ।
ತ್ವರಿತೋಽಭ್ಯಾಗಮತ್ತತ್ರ ಅಗ್ನಿಹೋತ್ರಪರೀಪ್ಸಯಾ ॥೧೦॥

ಎಲೈ ಕುರುಶ್ರೇಷ್ಠನೇ, ತನ್ನ ಅರಣೀದಂಡಗಳು ತೆಗೆದುಕೊಂಡು ಹೋಗಲ್ಪಡುತ್ತಿರುವುದನ್ನು ನೋಡಿದ ಆ ಬ್ರಾಹ್ಮಣನು ತನ್ನ ಅಗ್ನಿಹೋತ್ರವನ್ನು ರಕ್ಷಿಸಿಕೊಳ್ಳುವ ಸಲುವಾಗಿ ದ್ವೈತವನದಲ್ಲಿ ಪಾಂಡವರು ಇದ್ದ ಸ್ಥಳಕ್ಕೆ ಬಂದನು.

ಅಜಾತಶತ್ರುಮಾಸೀನಂ ಭ್ರಾತೃಭಿಃ ಸಹಿತಂ ವನೇ ।
ಆಗಮ್ಯ ಬ್ರಾಹ್ಮಣಸ್ತೂರ್ಣಂ ಸಂತಪ್ತಶ್ಚೇದಮಬ್ರವೀತ್ ॥೧೧॥

ತಮ್ಮಂದಿರ ಜೊತೆಯಲ್ಲಿ ಕಾಡಿನಲ್ಲಿ ಕುಳಿತಿದ್ದ ಅಜಾತಶತ್ರುವಾದ ಯುಧಿಷ್ಠಿರನನ್ನು ಬ್ರಾಹ್ಮಣನು ಶೀಘ್ರವಾಗಿ ತಲುಪಿ ಸಂತಾಪದಿಂದ ಹೀಗೆ ಮಾತನಾಡಿದನು.

ಅರಣೇಸಹಿತಂ ಮಂಥಂ ಸಮಾಸಕ್ತಂ ವನಸ್ಪತೌ ।
ಮೃಗಸ್ಯ ಘರ್ಷಮಾಣಸ್ಯ ವಿಷಾಣೇ ಸಮಸಜ್ಜತ ॥೧೨॥

ಅರಣೀಸಹಿತವಾದ ದಂಡವನ್ನು ನಾನು ಒಂದು ಮರಕ್ಕೆ ತೂಗುಹಾಕಿದ್ದೆನು. ಅದು ಆ ವೃಕ್ಷಕ್ಕೆ ತನ್ನ ಶರೀರವನ್ನು ಉಜ್ಜುವ ಒಂದು ಜಿಂಕೆಯ ಕೊಂಬಿನಲ್ಲಿ ಸಿಲುಕಿಕೊಂಡಿತು.

ತಮಾದಾಯ ಗತೋ ರಾಜಂಸ್ತ್ವರಮಾಣೋ ಮಹಾಮೃಗಃ ।
ಆಶ್ರಮಾತ್ ತ್ವರಿತಃ ಶೀಘ್ರಂ ಪ್ಲವಮಾನೋ ಮಹಾಜವಃ ॥೧೩॥

ಎಲೈ ರಾಜನೇ, ಆ ಮಹಾಮೃಗವು ಅದನ್ನು ತೆಗೆದುಕೊಂಡು ತ್ವರೆಮಾಡುತ್ತಾ ಈ ಆಶ್ರಮದಿಂದ ಮಹಾವೇಗವನ್ನು ಹೊಂದಿ ಹಾರುತ್ತಾ ಶೀಘ್ರವಾಗಿ ಹೊರಟು ಹೋಯಿತು.

ತಸ್ಯ ಗತ್ವಾ ಪದಂ ರಾಜನ್ನಾಸಾದ್ಯ ಚ ಮಹಾಮೃಗಮ್ ।
ಅಗ್ನಿಹೋತ್ರಂ ನ ಲುಪ್ಯೇತ ತದಾನಯತ ಪಾಂಡವಾಃ ॥೧೪॥

ಪಾಂಡವರೇ, ಅದರ ಹಾದಿಯನ್ನು ಹಿಡಿದುಕೊಂಡು ಹೋಗಿ ಆ ಮಹಾಮೃಗವನ್ನು ತಲುಪಿ ಅರಣಿಮಂಥಗಳನ್ನು ಹಿಂದೆ ತನ್ನಿ. ನನ್ನ ಅಗ್ನಿಹೋತ್ರಕ್ಕೆ ಲೋಪ ಉಂಟಾಗಬಾರದು.

ಬ್ರಾಹ್ಮಣಸ್ಯ ವಚಃ ಶ್ರುತ್ವಾ ಸಂತಪ್ತೋಽಥ ಯುಧಿಷ್ಠಿರಃ ।
ಧನುರಾದಾಯ ಕೌಂತೇಯಃ ಪ್ರಾದ್ರವದ್ ಭ್ರಾತೃಭಿಃ ಸಹ ॥೧೫॥

ಬ್ರಾಹ್ಮಣನ ಮಾತನ್ನು ಕೇಳಿ ಸಂತಪ್ತನಾದ ಕುಂತೀಪುತ್ರನಾದ ಯುಧಿಷ್ಠಿರನು ಆಗ ಧನುಸ್ಸನ್ನು ತೆಗೆದುಕೊಂಡು ತಮ್ಮಂದಿರ ಜೊತೆಯಲ್ಲಿ ಧಾವಿಸಿದನು.

ಸನ್ನದ್ಧಧನ್ವಿನಃ ಸರ್ವೇ ಪ್ರಾದ್ರವನ್ ನರಪುಂಗವಾಃ ।
ಬ್ರಾಹ್ಮಣಾರ್ಥೇ ಯತಂತಸ್ತೇ ಶೀಘ್ರಮನ್ವಗಮನ್ ಮೃಗಮ್ ॥೧೬॥

ಆ ನರಶ್ರೇಷ್ಠರೆಲ್ಲರೂ ಸನ್ನದ್ಧರಾಗಿ ಧನುಸ್ಸುಗಳನ್ನು ಧರಿಸಿ ಧಾವಿಸಿದರು. ಬ್ರಾಹ್ಮಣರಿಗೆ ಉಪಕಾರವನ್ನು ಮಾಡಲು ಪ್ರಯತ್ನಪಡುವ ಅವರು ಶೀಘ್ರವಾಗಿ ಆ ಮೃಗವನ್ನು ಹಿಂಬಾಲಿಸಿದರು.

ಕರ್ಣಿನಾಲೀಕನಾರಾಚಾನುತ್ಸೃಜಂತೋ ಮಹಾರಥಾಃ ।
ನಾವಿಧ್ಯನ್ ಪಾಂಡವಾಸ್ತತ್ರ ಪಶ್ಯಂತೋ ಮೃಗಮಂತಿಕಾತ್ ॥೧೭॥

ಆ ಮಹಾರಥರು ಮೃಗವನ್ನು ಸಮೀಪದಲ್ಲಿಯೇ ನೋಡುತ್ತಾ ಕರ್ಣಿ, ನಾಲೀಕ, ನಾರಾಚ ಮೊದಲಾದ ಬಾಣ ವಿಶೇಷಗಳನ್ನು ಪ್ರಯೋಗಿಸಿದರು. ಆದರೆ ಪಾಂಡವರು ಆ ಮೃಗವನ್ನು ಹೊಡೆಯಲಿಲ್ಲ.

ತೇಷಾಂ ಪ್ರಯತಮಾನಾನಾಂ ನಾದೃಶ್ಯತ ಮಹಾಮೃಗಃ ।
ಅಪಶ್ಯಂತೋ ಮೃಗಂ ಶ್ರಾಂತಾ ದುಃಖಂ ಪ್ರಾಪ್ತಾ ಮನಸ್ವಿನಃ ॥೧೮॥

ಅವರು ಹಾಗೆ ಪ್ರಯತ್ನಪಡುತ್ತಿರುವಾಗ ಆ ಮಹಾಮೃಗವು ಅದೃಶ್ಯವಾಯಿತು. ಮೃಗವನ್ನು ಕಾಣದೆ ಧೈರ್ಯಶಾಲಿಗಳಾದ ಅವರು ದಣಿವಿನಿಂದಲೂ ಮತ್ತು ದುಃಖದಿಂದಲೂ ಕೂಡಿದವರಾದರು.

ಶೀತಲಚ್ಛಾಯಮಾಗಮ್ಯ ನ್ಯಗ್ರೋಧಂ ಗಹನೇ ವನೇ ।
ಕ್ಷುತ್ತಿಪ್ಪಾಸಾಪರೀತಾಂಗಾಃ ಪಾಂಡವಾಃ ಸಮುಪಾವಿಶನ್ ॥೧೯॥

ಕಾಡಿನಲ್ಲಿ ಒಂದು ವಟವೃಕ್ಷದ ತಂಪಾದ ನೆರಳನ್ನು ತಲುಪಿ ಪಾಂಡವರು ಹಸಿವು ಬಾಯಾರಿಕೆಗಳಿಂದ ಬಳಲಿದವರಾಗಿ ಅಲ್ಲಿ ಕುಳಿತುಕೊಂಡರು.

ತೇಷಾಂ ಸಮುಪವಿಷ್ಟಾನಾಂ ನಕುಲೋ ದುಃಖಿತಸ್ತದಾ ।
ಅಬ್ರವೀದ್ ಭ್ರಾತರಂ ಶ್ರೇಷ್ಠಮಮರ್ಷಾತ್ ಕುರುನಂದನಮ್ ॥೨೦॥

ಅವರು ಹಾಗೆ ಕುಳಿತಿರಲು ಆಗ ದುಃಖಗೊಂಡ ನಕುಲನು ಸಿಟ್ಟಿನಿಂದ ಕುರುನಂದನನಾದ ಹಿರಿಯ ಅಣ್ಣನನ್ನು ಕುರಿತು ಹೀಗೆ ಮಾತನಾಡಿದನು.

ನಾಸ್ಮಿನ್ ಕುಲೇ ಜಾತು ಮಮಜ್ಜ ಧರ್ಮೋ
ನ ಚಾಲಸ್ಯಾದರ್ಥಲೋಪೋ ಬಭೂವ ।
ಅನುತ್ತರಾಃ ಸರ್ವವರ್ಣೇಷ್ವಭೂಮ
ಸಂಪ್ರಾಪ್ತಾಃ ಸ್ಮಃ ಸಂಶಯಂ ಕಿನ್ನು ರಾಜನ್ ॥೨೧॥

ಈ ಕುಲದಲ್ಲಿ ಧರ್ಮವು ಎಂದೂ ಮುಳುಗಿಹೋಗಲಿಲ್ಲ ಮತ್ತು ಆಲಸ್ಯದಿಂದ ಅರ್ಥದ ಲೋಪವೂ ಉಂಟಾಗಲಿಲ್ಲ. ಎಲ್ಲ ವರ್ಣದವರಿಗಿಂತಲೂ ಶ್ರೇಷ್ಠರಾಗಿದ್ದವರಾಗಿ ಈಗ ನಾವು ಸಂಶಯವನ್ನು ಹೊಂದಿದವರಾಗಿದ್ದೇವೆ. ರಾಜನೇ, ಇದೇನು ಸ್ಥಿತಿ? (ವಾದಿರಾಜರು)

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂಸಂಹಿತಾಯಾಂ ವೈಯಾಸಿಕ್ಯಾಂ ವನಪರ್ವಣಿ ದ್ವ್ಯಧಿಕತ್ರಿಶತತಮೋऽಧ್ಯಾಯಃ ॥
॥ ಇತಿ ಆರಣೇಯಪರ್ವಣಿ ಮೃಗಾನ್ವೇಷಣಂ ನಾಮ ಪ್ರಥಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವನಪರ್ವದಲ್ಲಿ ಮುನ್ನೂರ ಎರಡನೆಯ ಅಧ್ಯಾಯ ಮುಗಿಯಿತು.

★ ★ ★ ★

ಮುನ್ನೂರ ಮೂರನೆಯ ಅಧ್ಯಾಯ

ಧರ್ಮರಾಜನ ಆದೇಶದಂತೆ ನಕುಲನಿಂದ ಸರೋವರ ದರ್ಶನ. ಯಕ್ಷನ ಆದೇಶವನ್ನು ತಿರಸ್ಕರಿಸಿ ನಕುಲ-ಸಹದೇವ ಅರ್ಜುನ-ಭೀಮರ ದೀರ್ಘನಿದ್ರಾಪ್ರಾಪ್ತಿ. ಯುಧಿಷ್ಠಿರನಿಂದ ಸರೋವರ ಗಮನ.

ಯುಧಿಷ್ಠಿರಃ

ನಾಪದಾಮಸ್ತಿ ಮರ್ಯಾದಾ ನ ನಿಮಿತ್ತಂ ನ ಕಾರಣಮ್ ।
ಧರ್ಮಸ್ತು ವಿಭಜತ್ಯರ್ಥಮುಭಯೋಃ ಪುಣ್ಯಪಾಪಯೋಃ ॥೧॥

ಯುಧಿಷ್ಠಿರ– ಆಪತ್ತುಗಳಿಗೆ ಒಂದು ಎಲ್ಲೆಯಾಗಲೀ, ನಿಮಿತ್ತಕಾರಣವಾಗಲೀ ಅಥವಾ ಉಪಾದಾನಕಾರಣವಾಗಲೀ ಇಲ್ಲ. ಪುಣ್ಯಪಾಪ ಕರ್ಮಗಳಿಂದ ಉಂಟಾದ ಧರ್ಮಾಧರ್ಮಗಳು ಅವೆರಡರ ಫಲಗಳನ್ನು ವಿಭಜಿಸುತ್ತವೆ. (ವಾದಿರಾಜರು).

ಭೀಮಃ

ಪ್ರಾತಿಕಾಮ್ಯೇನ ಯತ್ಕೃಷ್ಣಾಂ ಸಭಾಯಾಂ ಪ್ರೇಷ್ಯವತ್ ತದಾ ।
ನ ಮಯಾ ನಿಹತಸ್ತತ್ರ ತೇನ ಪ್ರಾಪ್ತಾಃ ಸ್ಮ ಸಂಶಯಮ್ ॥೨॥

ಭೀಮ– ಪ್ರಾತಿಕಾಮಿಯು ದ್ರೌಪದಿಯನ್ನು ಸಭೆಯಲ್ಲಿ ದಾಸಿಯಂತೆ ಎಳೆದು ತಂದನು. ಅಲ್ಲಿ ಅವನನ್ನು ನಾನು ಕೊಲ್ಲಲಿಲ್ಲ. ಅದರಿಂದ ಇಂತಹ ಸಂಕಟಕ್ಕೆ ಸಿಲುಕಿದ್ದೇವೆ.

ಅರ್ಜುನಃ

ವಾಚಸ್ತೀಕ್ಷ್ಣಾಸ್ಥಿಭೇದಿನ್ಯಃ ಸೂತಪುತ್ರೇಣ ಭಾಷಿತಾಃ ।
ಅತಿತೀವ್ರಾ ಮಯಾ ಕ್ಷಾಂತಾಸ್ತೇನ ಪ್ರಾಪ್ತಾಃ ಸ್ಮ ಸಂಶಯಮ್ ॥೩॥

ಅರ್ಜುನ– ಸೂತಪುತ್ರನಾದ ಕರ್ಣನು ಅಸ್ಥಿಯನ್ನು ಭೇದಿಸುವಂತಹ ತೀಕ್ಷ್ಣವಾದ ಮಾತುಗಳನ್ನು ಆಡಿದನು. ಅತಿತೀಕ್ಷ್ಣವಾದ ಆ ಮಾತುಗಳನ್ನು ನಾನು ಸಹಿಸಿದೆ. ಆದ್ದರಿಂದ ಇಂತಹ ಸಂಕಟವು ಪ್ರಾಪ್ತವಾಗಿದೆ.

ನಕುಲಃ

ಧಾರ್ತರಾಷ್ಟ್ರಾಃ ಕುತ್ಸಯಂತೋ ಯನ್ಮೇ ನ ನಿಹತಾಸ್ತದಾ ।
ದ್ಯೂತಕಾಲೇ ಮಹಾರಾಜ ತೇನೇಮಾಮಾಪದಂ ಗತಾಃ ॥೩.೧॥

ನಕುಲ– ಮಹಾರಾಜನೇ, ದ್ಯೂತಕಾಲದಲ್ಲಿ ಧೃತರಾಷ್ಟ್ರಪುತ್ರರು ನಮ್ಮನ್ನು ಹಿಯಾಳಿಸಿದರು. ಆಗ ಅವರನ್ನು ನಾನು ಕೊಲ್ಲದಿದ್ದುದರಿಂದ ಈ ಆಪತ್ತಿಗೆ ಸಿಲುಕಿದ್ದೇವೆ.

ಸಹದೇವಃ

ಶಕುನಿಸ್ತ್ವಾಂ ಯದಾಽಜೈಷೀದಕ್ಷದ್ಯೂತೇನ ಭಾರತ ।
ಸ ಮಯಾ ನ ಹತಸ್ತತ್ರ ತೇನ ಪ್ರಾಪ್ತಾಃ ಸ್ಮ ಸಂಶಯಮ್ ॥೪॥

ಸಹದೇವ– ಎಲೈ ಭಾರತನೇ, ಅಕ್ಷದ್ಯೂತದಿಂದ ಶಕುನಿಯು ನಿನ್ನನ್ನು ಜಯಿಸಿದನು. ನಾನು ಅಲ್ಲಿ ಅವನನ್ನು ಕೊಲ್ಲಲಿಲ್ಲ. ಆದ್ದರಿಂದ ಇಂತಹ ಆಪತ್ತು (ಪ್ರಾಣಸಂಶಯವು) ಪ್ರಾಪ್ತವಾಗಿದೆ.

ವೈಶಂಪಾಯನಃ

ತತೋ ಯುಧಿಷ್ಠಿರೋ ರಾಜಾ ನಕುಲಂ ವಾಕ್ಯಮಬ್ರವೀತ್ ।
ಆರುಹ್ಯ ವೃಕ್ಷಂ ಮಾದ್ರೇಯ ನಿರೀಕ್ಷಸ್ವ ದಿಶೋ ದಶ ॥೫॥

ಪಾನೀಯಮಂತಿಕೇ ಪಶ್ಯ ವೃಕ್ಷಾಂಶ್ಚಾಪ್ಯುದಕಾಶ್ರಿತಾನ್ ।
ಇಮೇ ವೈ ಭ್ರಾತರಃ ಶ್ರಾಂತಾಸ್ತವ ಸರ್ವೇ ಪಿಪಾಸಿತಾಃ ॥೬॥

ವೈಶಂಪಾಯನ– ಆಗ ರಾಜನಾದ ಯುಧಿಷ್ಠಿರನು ನಕುಲನನ್ನು ಕುರಿತು ಮಾದ್ರೀಪುತ್ರನೇ, ಮರವನ್ನು ಹತ್ತಿ ಎಲ್ಲಾದರೂ ಸಮೀಪದಲ್ಲಿ ನೀರು ಇದೆಯೇ

ನೋಡು. ನೀರನ್ನು ಅವಲಂಬಿಸಿದ ವೃಕ್ಷಗಳು ಇವೆಯೇ ನೋಡು. ಈ ನಿನ್ನ ಸೋದರರೆಲ್ಲರೂ ಬಾಯಾರಿ ಬಳಲಿದ್ದಾರೆ ಎಂದು ಹೇಳಿದನು.

ನಕುಲಸ್ತು ತಥೇತ್ಯುಕ್ತ್ವಾ ಭ್ರಾತುರ್ಜ್ಯೇಷ್ಠಸ್ಯ ಪಾದಪಮ್ ।
ತತ ಉತ್ಥಾಯ ಮತಿಮಾನ್ ಶೀಘ್ರಮಾರುಹ್ಯ ಪಾದಪಮ್ ।
ಅಬ್ರವೀದ್ ಭ್ರಾತರಂ ಜ್ಯೇಷ್ಠಮಭಿವೀಕ್ಷ್ಯ ಸಮಂತತಃ ॥೭॥

ಮೇಧಾವಿಯಾದ ನಕುಲನು ಅಣ್ಣನನ್ನು ಕುರಿತು ಹಾಗೆಯೇ ಆಗಲಿ ಎಂದು ಹೇಳಿ ಅಲ್ಲಿಂದ ಎದ್ದು ಶೀಘ್ರವಾಗಿ ಒಂದು ಮರವನ್ನು ಏರಿ ಸುತ್ತಲೂ ನೋಡಿ ಅಣ್ಣನನ್ನು ಕುರಿತು ಹೀಗೆ ಮಾತನಾಡಿದನು.

ನಕುಲಃ

ಪಶ್ಯಾಮಿ ಬಹುಲಚ್ಛಾಯಾನ್ ವೃಕ್ಷಾನುದಕಸಂಶ್ರಯಾನ್ ।
ಸಾರಸಾನಾಂ ಚ ನಿನದಮತ್ರೋದಕಮಸಂಶಯಮ್ ॥೮॥

ನಕುಲ– ಬಹಳ ನೆರಳಿರುವ, ನೀರನ್ನೇ ವಿಶೇಷವಾಗಿ ಅವಲಂಬಿಸಿದ, ವೃಕ್ಷಗಳನ್ನು ನೋಡುತ್ತಿದ್ದೇನೆ. ಜಲಪಕ್ಷಿಗಳಾದ ಸಾರಸಗಳ ಧ್ವನಿಯು ಕೇಳಿಬರುತ್ತಿದೆ. ಇಲ್ಲಿ ನಿಸ್ಸಂಶಯವಾಗಿ ಜಲವಿದೆ.

ವೈಶಂಪಾಯನಃ

ತತೋಽಬ್ರವೀತ್ ಸತ್ಯಧೃತಿಃ ಕುಂತೀಪುತ್ರೋ ಯುಧಿಷ್ಠಿರಃ ।
ಗಚ್ಛ ಸೌಮ್ಯ ತತಃ ಶೀಘ್ರಂ ತೂರ್ಣೈಃ ಪಾನೀಯಮಾನಯ ॥೯॥

ವೈಶಂಪಾಯನ– ಆಗ ಸತ್ಯಧೃತಿಯಾದ ಕುಂತೀಪುತ್ರನಾದ ಯುಧಿಷ್ಠಿರನು ಪ್ರೀತಿಪಾತ್ರನೇ, ಬೇಗ ಹೋಗಿ ಬತ್ತಳಿಕೆಗಳಲ್ಲಿ ನೀರನ್ನು ತೆಗೆದುಕೊಂಡು ಬಾ ಎಂದು ಹೇಳಿದನು.

ನಕುಲಶ್ಚ ತಥೇತ್ಯುಕ್ತ್ವಾ ಭ್ರಾತುರ್ಜ್ಯೇಷ್ಠಸ್ಯ ಶಾಸನಾತ್ ।
ಪ್ರಾದ್ರವದ್ ಯತ್ರ ಪಾನೀಯಂ ಶೀಘ್ರಂ ಚೈವಾನ್ವಪದ್ಯತ ॥೧೦॥

ನಕುಲನು ಹಾಗೆಯೇ ಆಗಲಿ ಎಂದು ಹೇಳಿ ಅಣ್ಣನ ಆಜ್ಞೆಯಂತೆ ಶೀಘ್ರವಾಗಿ ಓಡಿಹೋಗಿ ಜಲವಿದ್ದ ಸ್ಥಳವನ್ನು ತಲುಪಿದನು.

ಸ ದೃಷ್ಟ್ವಾ ವಿಮಲಂ ತೋಯಂ ಖಗಮೈಃ ಪರಿವಾರಿತಮ್ ।
ಪಾತುಕಾಮಸ್ತತೋ ವಾಚಮಂತರಿಕ್ಷಾಚ್ಚ ಶುಶ್ರುವೇ ॥೧೧॥

ಅವನು ಪಕ್ಷಿಗಳಿಂದ ಪರಿವೃವಾದ ಸ್ವಚ್ಛವಾದ ನೀರಿನಿಂದ ಕೂಡಿದ ಸರೋವರದ ನೀರನ್ನು ನೋಡಿ ಕುಡಿಯಲು ಹೊರಡುವಷ್ಟರಲ್ಲಿ ಅಂತರಿಕ್ಷದಿಂದ ಬಂದ ಒಂದು ಮಾತನ್ನು ಕೇಳಿದನು.

ಯಕ್ಷಃ

ಮಾ ತಾತ ಸಾಹಸಂ ಕಾರ್ಷೀರ್ಮಮ ಪೂರ್ವ ಪರಿಗ್ರಹಃ ।
ಪ್ರಶ್ನಾನೂಕ್ತ್ವಾ ತು ಮಾದ್ರೇಯ ತತಃ ಪಿಬ ಹರಸ್ವ ಚ ॥೧೨॥

ಯಕ್ಷ– ಪ್ರೀತಿಪಾತ್ರನೇ, ಸಾಹಸವನ್ನು ಮಾಡಬೇಡ. ಈ ಸರೋವರವು ಹಿಂದಿನಿಂದಲೂ ನನ್ನ ಅಧೀನವಾಗಿದೆ. ಮಾದ್ರೀಪುತ್ರನೇ, ನಾನು ಕೇಳಿದ ಪ್ರಶ್ನೆಗಳಿಗೆ ಅನಂತರದಲ್ಲಿ ಉತ್ತರವನ್ನು ಹೇಳಿ ಅನಂತರ ನೀರನ್ನು ಕುಡಿದು ತೆಗೆದುಕೊಂಡು ಹೋಗು.

ವೈಶಂಪಾಯನಃ

ಅನಾದೃತ್ಯ ತು ತದ್ವಾಕ್ಯಂ ನಕುಲಃ ಸುಪಿಪಾಸಿತಃ ।
ಅಪಿಬಚ್ಛೀತಲಂ ತೋಯಂ ಪೀತ್ವಾ ಭೂಮ್ಯಾಂ ಪಪಾತ ಹ ॥೧೩॥

ವೈಶಂಪಾಯನ– ಬಹಳ ಬಾಯಾರಿಕೆಯಿಂದ ಕೂಡಿದ್ದ ನಕುಲನು ಆ ಮಾತನ್ನು ತಿರಸ್ಕರಿಸಿ ಶೀತಲವಾದ ಜಲವನ್ನು ಕುಡಿದು ಭೂಮಿಯಲ್ಲಿ ಬಿದ್ದನು.

ಚಿರಾಯಮಾಣೇ ನಕುಲೇ ಕುಂತೀಪುತ್ರೋ ಯುಧಿಷ್ಠಿರಃ ।
ಅಬ್ರವೀದ್ ಭ್ರಾತರಂ ವೀರಂ ಸಹದೇವಮರಿಂದಮಮ್ ॥೧೪॥

ನಕುಲನು ಬರುವುದು ತಡವಾಗುತ್ತಿರಲು ಕುಂತೀಪುತ್ರನಾದ ಯುಧಿಷ್ಠಿರನು ಅರಿಂದಮನಾದ ವೀರನಾದ ತಮ್ಮನಾದ ಸಹದೇವನನ್ನು ಕುರಿತು ಹೀಗೆ ಹೇಳಿದನು.

ಚಿರಾಯತೇ ತವ ಭ್ರಾತಾ ಸಹದೇವ ಮಹಾಭುಜ ।
ತಥೈವಾನಯ ಸೋದರ್ಯಂ ಪಾನೀಯಂ ಚ ತ್ವಮಾನಯ ॥೧೫॥

ಮಹಾಭುಜನಾದ ಸಹದೇವನೇ, ನಿನ್ನ ತಮ್ಮನ್ನು ತಡಮಾಡುತ್ತಿದ್ದಾನೆ. ನೀನು ಅವನನ್ನೂ ಕರೆದುಕೊಂಡು ನೀರನ್ನೂ ತೆಗೆದುಕೊಂಡು ಬಾ.

ವೈಶಂಪಾಯನಃ

ಸಹದೇವಸ್ತಥೇತ್ಯುಕ್ತ್ವಾ ತಾಂ ದಿಶಂ ಪ್ರತ್ಯಪದ್ಯತ ।
ದದರ್ಶ ಪತಿತಂ ಭೂಮೌ ಭ್ರಾತರಂ ನಕುಲಂ ತದಾ ॥೧೬॥

ವೈಶಂಪಾಯನ– ಸಹದೇವನು ಹಾಗೆಯೇ ಆಗಲಿ ಎಂದು ಹೇಳಿ ಅದೇ ದಿಕ್ಕಿನಲ್ಲಿ ಹೊರಟು ಭೂಮಿಯಲ್ಲಿ ಬಿದ್ದಿದ್ದ ನಕುಲನನ್ನು ನೋಡಿದನು.

ಭ್ರಾತೃಶೋಕಾಭಿಸಂತಪ್ತಸ್ತೃಷಯಾ ಚ ಪ್ರಪೀಡಿತಃ ।
ಅಭಿದುದ್ರಾವ ಪಾನೀಯಂ ತತೋ ವಾಗಭ್ಯಭಾಷತ ॥೧೭॥

ತಮ್ಮನ ಶೋಕದಿಂದ ಸಂತಪ್ತನಾಗಿ ಬಾಯಾರಿಕೆಯಿಂದಲೂ ಬಹಳ ಪೀಡಿತನಾಗಿ ನೀರಿನ ಕಡೆಗೆ ಓಡಿದನು. ಆಗ ಅದೇ ವಾಣಿಯು ಮಾತನಾಡಿತು.

ಯಕ್ಷಃ

ಮಾ ತಾತ ಸಾಹಸಂ ಕಾರ್ಷೀರ್ಮಮ ಪೂರ್ವಪರಿಗ್ರಹಃ ।
ಪ್ರಶ್ನಾನುಕ್ತ್ವಾ ಯಥಾಕಾಮಂ ಪಿಬಸ್ವ ಚ ಹರಸ್ವ ಚ ॥೧೮॥

ಯಕ್ಷ– ಪ್ರೀತಿಪಾತ್ರನೇ, ಸಾಹಸವನ್ನು ಮಾಡಬೇಡ. ಈ ಸರೋವರವು ನನಗೆ ಮೊದಲಿನಿಂದಲೂ ಅಧೀನವಾದುದು. ನಾನು ಕೇಳುವ ಪ್ರಶ್ನೆಗಳಿಗೆ ಉತ್ತರವನ್ನು ನೀಡಿ ನೀರನ್ನು ಕುಡಿದು ತೆಗೆದುಕೊಂಡು ಹೋಗು.

ವೈಶಂಪಾಯನಃ

ಅನಾದೃತ್ಯ ತು ತದ್ವಾಕ್ಯಂ ಸಹದೇವಃ ಪಿಪಾಸಿತಃ ।
ಅಪಿಬಚ್ಛೀತಲಂ ತೋಯಂ ಪೀತ್ವಾ ಚ ನಿಪಪಾತ ಹ ॥೧೯॥

ವೈಶಂಪಾಯನ– ಬಾಯಾರಿಕೆಯಿಂದ ಕೂಡಿದ್ದ ಸಹದೇವನು ಆ ಮಾತುಗಳನ್ನು ಆದರಿಸದೇ ಶೀತಲವಾದ ನೀರನ್ನು ಕುಡಿದು ಭೂಮಿಯ ಮೇಲೆ ಬಿದ್ದನು.

ಅಥಾಬ್ರವೀತ್ ಸ ವಿಜಯಂ ಕುಂತೀಪುತ್ರೋ ಯುಧಿಷ್ಠಿರಃ ॥೨೦॥

ಭ್ರಾತರೌ ತೇ ಚಿರಗತೌ ಬೀಭತ್ಸೋ ಶತ್ರುಕರ್ಶನ ।
ತೌ ಚೈವಾನಯ ಭದ್ರಂ ತೇ ಪಾನೀಯಂ ಚ ತ್ವಮಾನಯ ।
ತ್ವಂ ಹಿ ನಸ್ತಾತ ಸರ್ವೇಷಾಂ ದುಃಖಿತಾನಾಂವ್ಯಪಾಶ್ರಯಃ ॥೨೧॥

ಅನಂತರ ಕುಂತೀಪುತ್ರನಾದ ಯುಧಿಷ್ಠಿರನು ಅರ್ಜುನನನ್ನು ಕುರಿತು ಎಲೈ ಶತ್ರುಕರ್ಶನನಾದ ಭೀಭತ್ಸುವೇ, ನಿನ್ನ ತಮ್ಮಂದಿರು ಹೋಗಿ ಬಹಳ ಸಮಯವಾಯಿತು. ನೀನು ಹೋಗಿ ಅವರನ್ನೂ ಮತ್ತು ಜಲವನ್ನೂ ತೆಗೆದುಕೊಂಡು ಬಾ. ಪ್ರೀತಿಪಾತ್ರನೇ, ದುಃಖದಲ್ಲಿರುವ ನಮ್ಮೆಲ್ಲರಿಗೂ ನೀನೇ ಆಶ್ರಯನಾಗಿದ್ದೀಯೆ ಎಂದು ಹೇಳಿದನು.

ಏವಮುಕ್ತೇ ಗುಡಾಕೇಶಃ ಪ್ರಗೃಹ್ಯ ಸಶರಂ ಧನುಃ ।
ಆಮುಕ್ತಖಡ್ಗೋ ಮೇಧಾವೀ ತತ್ಸರಃ ಪ್ರತ್ಯಪದ್ಯತ ॥೨೨॥

ಹೀಗೆ ಹೇಳಲ್ಪಟ್ಟ ಗುಡಾಕೇಶನಾದ ಮೇಧಾವಿಯಾದ ಅರ್ಜುನನು ಬಿಲ್ಲುಬಾಣಗಳನ್ನು ತೆಗೆದುಕೊಂಡು ಖಡ್ಗವನ್ನು ಸೊಂಟಕ್ಕೆ ಬಿಗಿದು ಆ ಸರೋವರವನ್ನು ತಲುಪಿದನು.

ತತಃ ಪುರುಷಶಾರ್ದೂಲೌ ಪಾನೀಯಹರಣೇ ಗತೌ ।
ತೌ ದದರ್ಶ ಹತೌ ತತ್ರ ಭ್ರಾತರೌ ಶ್ವೇತವಾಹನಃ ॥೨೩॥

ಅನಂತರ ಶ್ವೇತವಾಹನನಾದ ಅವನು ನೀರನ್ನು ತರಲು ಹೊರಟಿದ್ದ ಪುರುಷಶಾರ್ದೂಲರಾದ ತನ್ನ ತಮ್ಮಂದಿರು ಅಲ್ಲಿ ಬಿದ್ದಿರುವುದನ್ನು ನೋಡಿದನು.

ವಿಗತಾಸೂ ನರವ್ಯಾಘ್ರೌ ಶಯಾನೌ ವಸುಧಾತಲೇ ।
ಪ್ರಸುಪ್ತಾವಿವ ತೌ ದೃಷ್ಟ್ವಾ ನರಸಿಂಹಃ ಸುದುಃಖಿತಃ ।
ಧನುರುದ್ಯಮ್ಯ ಕೌಂತೇಯೋ ವ್ಯಲೋಕಯತ ತದ್ವನಮ್ ॥೨೪॥

ಪ್ರಾಣವಾಯುವೇ ಕಾಣದೇ ಭೂತಲದಲ್ಲಿ ನಿದ್ರಿಸುತ್ತಿರುವವರಂತೆ ಮಲಗಿದ್ದ ಆ ನರವ್ಯಾಘ್ರರನ್ನು ಕಂಡು ನರಸಿಂಹನಾದ ಅವನು ಬಹಳ ದುಃಖಿತನಾದನು. ಕೌಂತೇಯನಾದ ಅರ್ಜುನನು ಧನುಸ್ಸನ್ನು ಎತ್ತಿ ಆ ವನವನ್ನು ಸುತ್ತಲೂ ನೋಡಿದನು.

ನಾಪಶ್ಯತ್ ತತ್ರ ಕಿಂಚಿತ್ ಸ ಭೂತಮಸ್ಮಿನ್ ಮಹಾವನೇ ।
ಸವ್ಯಸಾಚೀ ತತಃ ಶ್ರಾಂತಃ ಪಾನೀಯಂ ಸೋಽಭ್ಯಧಾವತ ।

ಆ ಮಹಾವನದಲ್ಲಿ ಅವನಿಗೆ ಯಾವ ಪ್ರಾಣಿಯೂ ಕಾಣಲಿಲ್ಲ. ಅನಂತರ ದಣಿದಿದ್ದ ಅರ್ಜುನನು ನೀರಿನ ಬಳಿಗೆ ಹೋದನು.

ಯಕ್ಷಃ

ಅಭಿಧಾವಂಸ್ತತೋ ವಾಕ್ಯಮಂತರಿಕ್ಷಾತ್ ಸ ಶುಶ್ರುವೇ ॥೨೫॥

ಯತ್ ತ್ವಮಿಚ್ಛಸಿ ಪಾನೀಯಂ ನೈತಚ್ಚಕ್ಯಂ ನರರ್ಷಭ ॥೨೬॥

ಕೌಂತೇಯ ಯದಿ ಪ್ರಶ್ನಾಂಸ್ತಾನ್ ಮಯೋಕ್ತಾನ್ ಪ್ರತಿಪತ್ಸ್ಯಸೇ ।
ತತಃ ಪಾಸ್ಯಸಿ ಪಾನೀಯಂ ಹರಿಷ್ಯಸಿ ಚ ಭಾರತ ॥೨೭॥

ಅವನು ನೀರಿನ ಕಡೆಗೆ ಓಡುತ್ತಿದ್ದಂತೆ ಅಂತರಿಕ್ಷದಿಂದ ಬಂದ ಈ ಮಾತುಗಳನ್ನು ಕೇಳಿದನು– ನರಶ್ರೇಷ್ಠನೇ, ನೀನು ಯಾವ ಜಲವನ್ನು ಅಪೇಕ್ಷಿಸುತ್ತಿದ್ದೀಯೋ ಅದನ್ನು ನೀನು ಪಡೆಯಲು ಸಾಧ್ಯವಿಲ್ಲ. ಕೌಂತೇಯನೇ, ಭಾರತನೇ, ನೀನು ನಾನು ಕೇಳುವ ಪ್ರಶ್ನೆಗಳಿಗೆ ಸರಿಯಾದ ಉತ್ತರವನ್ನು ನೀಡಿ ನೀರನ್ನು ಕುಡಿದು ತೆಗೆದುಕೊಂಡು ಹೋಗು.

ವೈಶಂಪಾಯನಃ

ವಾರಿತಸ್ತ ಬ್ರವೀತ್ ಪಾರ್ಥೋ ದೃಶ್ಯಮಾನೋ ನಿವಾರಯ ।
ಯಾವದ್ ಬಾಣೈರ್ವಿನಿರ್ಭಿನ್ನಃ ಪುನರ್ನೈವಂ ವದಿಷ್ಯಸಿ ॥೨೮॥

ವೈಶಂಪಾಯನ– ಹೀಗೆ ನಿವಾರಿಸಲ್ಪಟ್ಟ ಅರ್ಜುನನು ಕಣ್ಣೆದುರಿಗೆ ಬಂದು ನಿಷೇಧ ಮಾಡು. ಅಷ್ಟರಲ್ಲಿ ಬಾಣಗಳಿಂದ ನಿನ್ನನ್ನು ಕತ್ತರಿಸುತ್ತೇನೆ. ಆಗ ನೀನು ಇನ್ನೊಮ್ಮೆ ಹೀಗೆ ಮಾತನಾಡುವುದಿಲ್ಲ ಎಂದು ಹೇಳಿದನು.

ಏವಮುಕ್ತ್ವಾ ತತಃ ಪಾರ್ಥಃ ಶರೈರಸ್ತ್ರಾನುಮಂತ್ರಿತೈಃ ।
ಪ್ರವವರ್ಷ ದಿಶಃ ಕೃತ್ಸ್ನಾಃ ಶಬ್ದವೇಧಂ ಚ ದರ್ಶಯನ್ ॥೨೯॥

ಹೀಗೆ ಹೇಳಿ ಅರ್ಜುನನು ಅಸ್ತ್ರಗಳಿಂದ ಮಂತ್ರಿತವಾದ ಶರಗಳನ್ನು ಪ್ರಯೋಗಿಸಿ ತನ್ನ ಶಬ್ದವೇಧಿ ಕೌಶಲವನ್ನು ಪ್ರದರ್ಶಿಸುತ್ತಾ ಎಲ್ಲ ದಿಕ್ಕುಗಳನ್ನೂ ಬಾಣಗಳ ಮಳೆಯಿಂದ ತುಂಬಿದನು.

ಕರ್ಣನಾಲೀಕನಾರಾಚಾನುತ್ಸೃಜನ್ ಭರತರ್ಷಭ ।
ಅನೇಕ್ಯರಿಷುಸಂಪಾತೈರಂತರಿಕ್ಷೇ ವವರ್ಷ ಹ ॥೩೦॥

ಎಲೈ ಭರತರ್ಷಭನೇ, ಕರ್ಣೀ, ನಾಲೀಕ, ನಾರಾಚ ಮೊದಲಾದ ಬಾಣ ವಿಶೇಷಗಳ ಅನೇಕ ಸಮೂಹಗಳನ್ನು ಸೃಷ್ಟಿಸುತ್ತಾ ಅವನು ಅವುಗಳಿಂದ ಅಂತರಿಕ್ಷದಲ್ಲಿ ಮಳೆಯನ್ನು ಸುರಿಸಿದನು.

ಸೋಽಪ್ಯದೃಶ್ಯಾಯ ಭೂತಾಯ ನಭಸ್ಯಮಿತತೇಜಸೇ ।
ಉತ್ಸಸರ್ಜ ಮಹಾಬಾಹುರ್ಬಾಣಜಾಲಂ ಧನಂಜಯಃ ॥೩೦.೧॥

ಮಹಾಬಾಹುವಾದ ಧನಂಜಯನು ಅಂತರಿಕ್ಷದಲ್ಲಿ ಇದ್ದು ಅಮಿತಪರಾಕ್ರಮಿಯಾದ ಅದೃಶ್ಯವಾದ ಆ ಭೂತವನ್ನು ಉದ್ದೇಶಿಸಿ ಬಾಣಗಳ ಮಳೆಯನ್ನು ಸುರಿಸಿದನು.

ತತಸ್ತಾನಿಷುಸಂಘಾತಾನ್ ಗಾಂಡೀವಧನುಷಶ್ಚ್ಯುತಾನ್ ।
ಮೋಘಾನ್ ಕೃತ್ವಾ ಜಹಾಸೋಚ್ಚೈಸ್ತದದ್ಭುತಮಿವಾಭವತ್ ॥೩೦.೨॥

ಆಗ ಆ ಯಕ್ಷನು ಗಾಂಡೀವಧನುಸ್ಸಿನಿಂದ ಹೊರಟ ಆ ಬಾಣಸಮೂಹಗಳನ್ನು ವ್ಯರ್ಥಗೊಳಿಸಿ ಗಟ್ಟಿಯಾಗಿ ನಕ್ಕನು. ಅದು ಅದ್ಭುತವಾಗಿದ್ದಿತು.

ಯಕ್ಷಃ

ಕಿಂ ವಿದ್ಯಾ ವೈ ನ ತೇ ಪಾರ್ಥ ಪ್ರಶ್ನಾನುಕ್ತ್ವಾ ತತಃ ಪಿಬ ।
ಅನುಕ್ತ್ವಾ ತು ತತಃ ಪ್ರಶ್ನಾನ್ ಪೀತ್ವೈವ ನ ಭವಿಷ್ಯಸಿ ॥೩೧॥

ಯಕ್ಷ– ಎಲೈ ಅರ್ಜುನನೇ, ನಿನಗೇನು ವಿದ್ಯೆಯಿಲ್ಲವೇ? ನನ್ನ ಪ್ರಶ್ನೆಗಳಿಗೆ ಉತ್ತರವನ್ನು ನೀಡಿ ಅನಂತರ ನೀರನ್ನು ಕುಡಿ. ನನ್ನ ಪ್ರಶ್ನೆಗಳಿಗೆ ಉತ್ತರವನ್ನು ಹೇಳದೇ ನೀರನ್ನು ಕುಡಿದರೆ ನೀನು ಉಳಿಯುವುದಿಲ್ಲ.

ವೈಶಂಪಾಯನಃ

ಸ ಚ ಮೋಘಾನಿಷೂನ್ ದೃಷ್ಟ್ವಾ ತೃಷ್ಣಯಾ ಚ ಪ್ರಪೀಡಿತಃ ।
ಅವಜ್ಞಾಯೈವ ತಾಂ ವಾಚಂ ಪೀತ್ವೈವ ನಿಪಪಾತ ಹ ॥೩೨॥

ವೈಶಂಪಾಯನ– ಅವನು ತನ್ನ ಬಾಣಗಳು ವ್ಯರ್ಥವಾದುದನ್ನು ನೋಡಿ ಬಾಯಾರಿಕೆಯಿಂದಲೂ ಪೀಡಿತನಾಗಿ ಯಕ್ಷನ ಮಾತನ್ನು ತಿರಸ್ಕರಿಸಿ ನೀರನ್ನು ಕುಡಿದು ತಕ್ಷಣ ಭೂಮಿಯ ಮೇಲೆ ಬಿದ್ದನು.

ಅಥಾಬ್ರವೀದ್ ಭೀಮಸೇನಂ ಕುಂತೀಪುತ್ರೋ ಯುಧಿಷ್ಠಿರಃ ॥೩೩॥

ನಕುಲಃ ಸಹದೇವಶ್ಚ ಬೀಭತ್ಸುಶ್ಚ ಪರಂತಪ ।
ಚಿರಂ ಗತಾ ವೈ ಕೋಯಾರ್ಥಂ ನ ಚಾಗಚ್ಛಂತಿ ಭಾರತ ।
ತಾಂಶ್ಚೈವಾನಯ ಭದ್ರಂ ತೇ ಪಾನೀಯಂ ಚ ತ್ವಮಾನಯ ॥೩೪॥

ಆಗ ಕುಂತೀಪುತ್ರನಾದ ಯುಧಿಷ್ಠಿರನು ಭೀಮಸೇನನನ್ನು ಕುರಿತು ಪರಂತಪನೇ, ನಕುಲ-ಸಹದೇವ ಮತ್ತು ಅರ್ಜುನರು ನೀರಿನ ಸಲುವಾಗಿ ಹೋಗಿ ಬಹಳ ಹೊತ್ತಾದರೂ ಯಾರೂ ಹಿಂದೆ ಬರುತ್ತಿಲ್ಲ. ಎಲೈ ಭಾರತನೇ, ನಿನಗೆ ಮಂಗಳವಾಗಲಿ. ನೀನು ಅವರನ್ನು ಕರೆದುಕೊಂಡು ನೀರನ್ನೂ ತೆಗೆದುಕೊಂಡು ಬಾ ಎಂದು ಹೇಳಿದನು.

ಭೀಮಸೇನಸ್ತಥೇತ್ಯುಕ್ತ್ವಾ ತಂ ದೇಶಂ ಪ್ರತ್ಯಪದ್ಯತ ।
ಯತ್ರ ತೇ ಪುರುಷವ್ಯಾಘ್ರಾ ಭ್ರಾತರೋಽಸ್ಯ ನಿಪಾತಿತಾಃ ॥೩೫॥

ಭೀಮಸೇನನು ಹಾಗೆಯೇ ಆಗಲಿ ಎಂದು ಹೇಳಿ ಎಲ್ಲಿ ಪುರುಷವ್ಯಾಘ್ರರಾದ ತನ್ನ ತಮ್ಮಂದಿರು ಬಿದ್ದಿದ್ದರೋ ಆ ದೇಶವನ್ನು ತಲುಪಿದನು.

ತಾನ್ ದೃಷ್ಟ್ವಾ ದುಃಖಿತೋ ಭೀಮಸ್ತೃಷಯಾ ಚ ಪ್ರಪೀಡಿತಃ ।
ಅಮನ್ಯತ ಮಹಾಬಾಹುಃ ಕರ್ಮ ತದ್ಯಕ್ಷರಕ್ಷಸಾಮ್ ॥೩೬॥

ಅವರನ್ನು ನೋಡಿ ದುಃಖಿತನಾದ ಮಹಾಬಾಹುವಾದ ಭೀಮನು ಬಾಯಾರಿಕೆಯಿಂದಲೂ ಪೀಡಿತನಾಗಿ ಇದು ಯಕ್ಷರಾಕ್ಷಸರ ಕೆಲಸವೆಂದು ಭಾವಿಸಿದನು.

ಸ ಚಿಂತಯಾಮಾಸ ತದಾ ಯೋದ್ಧವ್ಯಂ ಧ್ರುವಮದ್ಯ ವೈ ।
ಪಾಸ್ಯಾಮಿ ತಾವತ್ ಪಾನೀಯಮಿತಿ ಪಾರ್ಥೋ ವೃಕೋದರಃ ॥೩೭॥

ತತೋಽಭ್ಯಧಾವತ್ ಪಾನೀಯಂ ಪಿಪಾಸುಃ ಪುರಷರ್ಷಭಃ ।
ವಾಗುವಾಚಾಥ ಸುಸ್ಪಷ್ಟಮದೃಶ್ಯಾ ಪಾಂಡುನಂದನಮ್ ॥೩೮॥

ಆಗ ಕುಂತೀಪುತ್ರನಾದ ವೃಕೋದರನು ನಾನು ಈ ದಿನ ಅವಶ್ಯವಾಗಿ ಯುದ್ಧವನ್ನು ಮಾಡಬೇಕಾಗುತ್ತದೆ. ಮೊದಲು ನೀರನ್ನು ಕುಡಿಯುತ್ತೇನೆ ಎಂದು ಚಿಂತಿಸಿ ಆ ಪುರುಷರ್ಷಭನು ಪಿಪಾಸುವಾಗಿ ನೀರಿನ ಸಮೀಪಕ್ಕೆ ಶೀಘ್ರವಾಗಿ ಬಂದನು. ಆಗ ಅದೃಶ್ಯವಾದ ವಾಣಿಯು ಪಾಂಡುನಂದನನಾದ ಅವನನ್ನು ಕುರಿತು ಬಹಳ ಸ್ಪಷ್ಟವಾಗಿ ಹೀಗೆ ಹೇಳಿತು.

ಯಕ್ಷಃ

ಮಾ ತಾತ ಸಾಹಸಂ ಕಾರ್ಷೀರ್ಮಮ ಪೂರ್ವಪರಿಗ್ರಹಃ ।
ಪ್ರಶ್ನಾನುಕ್ತ್ವಾ ತು ಕೌಂತೇಯ ತತಃ ಪಿಬ ಹರಸ್ವ ಚ ॥೫೯॥

ಯಕ್ಷ– ಪ್ರೀತಿಪಾತ್ರನೇ, ಸಾಹಸವನ್ನು ಮಾಡಬೇಡ. ಈ ಸರೋವರವು ನನಗೆ ಅಧೀನವಾದುದು. ಕೌಂತೇಯನೇ, ನನ್ನ ಪ್ರಶ್ನೆಗಳಿಗೆ ಉತ್ತರವನ್ನು ನೀಡಿ ಅನಂತರ ನೀರನ್ನು ಕುಡಿದು ತೆಗೆದುಕೊಂಡು ಹೋಗು.

ವೈಶಂಪಾಯನಃ

ಏವಮುಕ್ತಸ್ತದಾ ಭೀಮೋ ಯಕ್ಷೇಣಾಮಿತತೇಜಸಾ ।
ಅವಜ್ಞಾಯೈವತಾನ್ ಪ್ರಶ್ನಾನ್ ಪೀತ್ವೈವ ನಿಪಪಾತ ಹ ॥೬೦॥

ವೈಶಂಪಾಯನ– ಅಮಿತತೇಜಸ್ವಿಯಾದ ಯಕ್ಷನಿಂದ ಹೀಗೆ ಹೇಳಲ್ಪಟ್ಟ ಭೀಮನು ಆಗ ಅವನ ಪ್ರಶ್ನೆಗಳಿಗೆ ಉತ್ತರವನ್ನು ಹೇಳದೆ ನೀರನ್ನು ಕುಡಿದು ಬಿದ್ದನು.

ತತಃ ಕುಂತೀಸುತೋ ರಾಜಾ ಧರ್ಮಪುತ್ರೋ ಯುಧಿಷ್ಠಿರಃ ।
ತತಶ್ಚಿರಗತಾನ್ ಭ್ರಾತೄನಥ ಜ್ಞಾತುಂ ಯುಧಿಷ್ಠಿರಃ ।
ಚಿರಾಯಮಾಣಾನ್ ಬಹುಶಃ ಪುನಃ ಪುನರುವಾಚ ಹ ॥೬೧॥

ಆಗ ಕುಂತೀಪುತ್ರನಾದ ಧರ್ಮಪುತ್ರನಾದ ರಾಜನಾದ ಯುಧಿಷ್ಠಿರನು ಹೋಗಿ ಬಹಳ ಸಮಯವಾದ ತನ್ನ ತಮ್ಮಂದಿರ ಕ್ಷೇಮವನ್ನು ತಿಳಿದುಕೊಳ್ಳಲು ಪುನಃ ಪುನಃ ಗಟ್ಟಿಯಾಗಿ ಕರೆದನು.

ಮಾದ್ರೇಯೌ ಕಿಂ ಚಿರಾಯೇತೇ ಗಾಂಡೀವೀ ಕಿಂ ಚಿರಾಯತೇ ।
ಮಹಾಬಲಧರಸ್ತತ್ರ ಕಿಂ ನು ಭೀಮಶ್ಚಿರಾಯತೇ ॥೬೨॥

ಮಾದ್ರೇಯರು ಏಕೆ ತಡವಮಾಡುತ್ತಿದ್ದಾರೆ? ಅರ್ಜುನನು ಏಕೆ ತಡಮಾಡುತ್ತಿದ್ದಾನೆ? ಮಹಾಬಲಿಷ್ಠನಾದ ಭೀಮಸೇನನು ಏಕೆ ತಡಮಾಡುತ್ತಿದ್ದಾನೆ?

ತತಃ ಕುಂತೀಸುತೋ ರಾಜಾ ವಿಚಿಂತ್ಯ ಪುರಷರ್ಷಭ ।
ಗಚ್ಛಾಮ್ಯೇಷಾಂ ಪದಂ ದ್ರಷ್ಟುಮಿತಿ ಕೃತ್ವಾ ಯುಧಿಷ್ಠಿರಃ ।
ಸಮುತ್ಥಾಯ ಮಹಾಬಾಹುರ್ದಹ್ಯಮಾನೇನ ಚೇತಸಾ ॥೬೩॥

ಆತ್ಮನಾऽನ್ವಿಷ್ಯ ಚ ಚಿರಂ ವಿಚಾರಮಕರೋತ್ ಪ್ರಭುಃ ।

ಅನಂತರ ಪುರುಷರ್ಷಭನೂ, ಕುಂತೀಪುತ್ರನೂ, ರಾಜನೂ ಆದ ಯುಧಿಷ್ಠಿರನು ನಾನೇ ಇವರ ಪರಿಸ್ಥಿತಿಯನ್ನು ತಿಳಿದುಕೊಳ್ಳಲು ಹೋಗುತ್ತೇನೆ ಎಂದು ನಿಶ್ಚಯಿಸಿ ಮಹಾಬಾಹುವಾದ ಅವನು ಮನಸ್ಸಿನಲ್ಲಿಯೇ ಬೇಯುತ್ತಾ ಅಲ್ಲಿಂದ ಎದ್ದು ತನ್ನನ್ನು ತಾನು ವಿಮರ್ಶಿಸುತ್ತಾ ವಿಚಾರವನ್ನು ಮಾಡಿದನು.

ಕಿಂ ಸ್ವಿದ್ವನಮಿದಂ ದುಷ್ಟಂ ಕಿಂ ಸ್ವಿದ್ ದುಷ್ಟೋ ಮೃಗೋ ಭವೇತ್ ।
ಪ್ರಾಹಸನ್ ವಾ ಮಹಾಭೂತಂ ಶಪ್ತಾಸ್ತೇನಾಥ ತೇಽಪತನ್ ॥೪೪॥

ಇದೇನು ಈ ವನವೇ ದುಷ್ಟವಾಗಿದೆಯೋ ಅಥವಾ ಇಲ್ಲಿ ಯಾವುದಾದರೂ ದುಷ್ಟಮೃಗವಿದೆಯೋ ಅಥವಾ ಈ ನನ್ನ ತಮ್ಮಂದಿರು ಮಹಾಭೂತವನ್ನು ಕುರಿತು ಅಪಹಾಸವನ್ನು ಮಾಡಿ ಅದರಿಂದ ಶಪ್ತರಾಗಿ ಹೀಗೆ ಬಿದ್ದಿದ್ದಾರೆಯೋ?

ನ ಪಶ್ಯಂತ್ಯಥ ವಾ ವೀರಾಃ ಪಾನೀಯಂ ಯತ್ರ ತೇ ಗತಾಃ ।
ಅನಿಷ್ಪದ್ಧಿರ್ವನೇ ತೋಯಂ ಕಾಲೋಽಯಮತಿಪಾತಿತಃ ॥೪೫॥

ಅಥವಾ ನೀರನ್ನು ಹುಡುಕಲು ಹೋದ ಆ ವೀರರು ಎಲ್ಲೂ ನೀರನ್ನು ಕಾಣಲಿಲ್ಲವೋ? ಅವರು ನೀರನ್ನು ಹುಡುಕಲು ಹೊರಟು ಬಹಳ ಕಾಲವಾಯಿತು.

ಕಿಂ ನು ತತ್ಕಾರಣಂ ಯೇನ ನಾಯಾಂತಿ ಪುರುಷರ್ಷಭಾಃ ।
ಗಚ್ಛಾಮ್ಯೇಷಾಂ ಪದಂ ದ್ರಷ್ಟುಮಿತಿ ಕೃತ್ವಾ ಯುಧಿಷ್ಠಿರಃ ॥೪೫.೧॥

ಪುರುಷರ್ಷಭರು ಬರದಿರುವುದಕ್ಕೆ ಏನು ಕಾರಣವಿರಬಹುದು? ಅವರ ಪರಿಸ್ಥಿತಿಯನ್ನು ತಿಳಿಯಲು ನಾನೇ ಹೋಗುತ್ತೇನೆ ಎಂದು ನಿಶ್ಚಯಿಸಿದನು.

ಏವಮಾದೀನಿ ವಾಕ್ಯಾನಿ ವಿಮೃಶನ್ ನೃಪಸತ್ತಮಃ ।
ವ್ಯಪೇತಜನನಿರ್ಘೋಷಂ ಪ್ರವಿವೇಶ ಮಹಾವನಮ್ ॥೪೬॥

ಇಂತಹ ವಾಕ್ಯಗಳನ್ನು ವಿಮರ್ಶೆ ಮಾಡುತ್ತಾ ಆ ರಾಜಶ್ರೇಷ್ಠನು ಮನುಷ್ಯ ಧ್ವನಿಯಿಂದ ರಹಿತವಾದ ಆ ಮಹಾವನವನ್ನು ಪ್ರವೇಶಿಸಿದನು.

ರುರುಭಿಶ್ಚ ವರಾಹೈಶ್ಚ ಮಹಿಷೈಶ್ಚ ನಿಷೇವಿತಮ್ ।
ನೀಲಭಾಸ್ವರವರ್ಣೈಶ್ಚ ಪಾದಪೈರುಪಶೋಭಿತಮ್ ॥೪೭॥

ಭ್ರಮರೈರುಪಗೀತಂ ಚ ಪಕ್ಷಿಭಿಶ್ಚ ಸಮಾಕುಲಮ್ ॥೪೮॥

ರುರು, ವರಾಹ ಮತ್ತು ಮಹಿಷಗಳಿಂದ ಸೇವಿತವಾದ, ಪ್ರಕಾಶಿಸುವ ಕಪ್ಪು ವರ್ಣದ ಮರಗಳಿಂದ ಶೋಭಿತವಾದ, ದುಂಬಿಗಳ ಗಾನದಿಂದ ಕೂಡಿದ, ಪಕ್ಷಿಗಳಿಂದ ಸಮಾಕುಲವಾದ ವನವನ್ನು ಪ್ರವೇಶಿಸಿದನು.

ಸ ಗಚ್ಛನ್ ಕಾನನೇ ತಸ್ಮಿನ್ ಹೇಮಜಾಲಪರಿಷ್ಕೃತಮ್ ।
ದದರ್ಶ ತತ್ಸರಃ ಶ್ರೀಮಾನ್ ವಿಶ್ವಕರ್ಮಕೃತಂ ಯಥಾ ॥೪೯॥

ಆ ಕಾಡಿನಲ್ಲಿ ಹೋಗುತ್ತಾ ವಿಶ್ವಕರ್ಮದಿಂದ ನಿರ್ಮಿತವಾದಂತೆ ಹೇಮಜಾಲದಿಂದ ಸುತ್ತುವರಿಯಲ್ಪಟ್ಟಂತಹ ಆ ಸರೋವರವನ್ನು ನೋಡಿದನು.

ಉಪೇತಂ ನಲಿನೀಜಾಲೈಃ ಸಿಂಧುವಾರೈಃ ಸವೇತಸೈಃ ।
ಕೇತಕೈಃ ಕರವೀರೈಶ್ಚ ಪಿಪ್ಪಲೈಶ್ಚೈವ ಸಂವೃತಮ್ ॥೫೦॥

ನಲಿನೀ ಪುಷ್ಪಗಳ ಸಮೂಹದಿಂದಲೂ, ಸಿಂಧುವಾರ, ವೇತಸ, ಕೇತಕ, ಕರವೀರ, ಮತ್ತು ಪಿಪ್ಪಲವೃಕ್ಷಗಳಿಂದಲೂ ಸಮಾವೃತವಾದ ಆ ಸರೋವರದ ಸಮೀಪಕ್ಕೆ ಹೋಗಿ ಅದನ್ನು ನೋಡಿ ದಣಿದಿದ್ದ ಅವನು ವಿಸ್ಮಿತನಾದನು.

ಶ್ರೀಮಾರ್ತಸ್ತದುಪಗಮ್ಯ ಸರೋ ದೃಷ್ಟ್ವಾಥ ವಿಸ್ಮಿತಃ ।
ತತೋ ಧರ್ಮಸುತಃ ಶ್ರೀಮಾನ್ ಭ್ರಾತೄದರ್ಶನಲಾಲಸಃ ।
ಶ್ರಮಾರ್ತಸ್ತದುಪಾಕ್ರಾಮತ್ ಸರೋ ದೃಷ್ಟ್ವಾ ತು ವಿಸ್ಮಿತಃ ॥೫೧॥

ಅನಂತರ ಶ್ರೀಮಂತನಾದ ಆ ಧರ್ಮಪುತ್ರನು ತಮ್ಮಂದಿರನ್ನು ನೋಡುವ ಆಸೆಯಿಂದ ಶ್ರಮದಿಂದ ಮುಂದೆ ಹೋಗುತ್ತಾ ಆ ಸರೋವರವನ್ನು ನೋಡಿ ಬಹಳ ವಿಸ್ಮಯವನ್ನು ಹೊಂದಿದನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂಸಂಹಿತಾಯಾಂ ವೈಯಾಸಿಕ್ಯಾಂ
ವನಪರ್ವಣಿ ತ್ರ್ಯಧಿಕತ್ರಿಶತತಮೋऽಧ್ಯಾಯಃ ॥
॥ ಇತಿ ಆರಣೇಯಪರ್ವಣಿ ನಕುಲಾದಿಪತನಂ ನಾಮ ದ್ವಿತೀಯೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವನಪರ್ವದಲ್ಲಿ ಮುನ್ನೂರ ಮೂರನೆಯ ಅಧ್ಯಾಯ ಮುಗಿಯಿತು.

★ ★ ★ ★

ಮುನ್ನೂರ ನಾಲ್ಕನೆಯ ಅಧ್ಯಾಯ

ಯುಧಿಷ್ಠಿರನ ವಿಲಾಪ. ಯುಧಿಷ್ಠಿರ-ಯಕ್ಷ ಸಂವಾದ ನಕುಲಾದಿಗಳ ಉತ್ಥಾನ.

ವೈಶಂಪಾಯನಃ

ಸ ದದರ್ಶ ಹತಾನ್ ಭ್ರಾತೄಲ್ಲೋಕಪಾಲಾನಿವ ಚ್ಯುತಾನ್ ।
ಯುಗಾಂತೇ ಸಮನುಪ್ರಾಪ್ತೇ ಶಕ್ರಪ್ರತಿಮಗೌರವಾನ್ ॥೧॥

ಅವನು ತಮ್ಮ ಸ್ಥಾನದಿಂದ ಚ್ಯುತರಾದ ಯುಗಾಂತಕಾಲದಲ್ಲಿ ಲೋಕಪಾಲರಂತೆ ಭೂಮಿಯಲ್ಲಿ ಬಿದ್ದಿರುವ ಇಂದ್ರನಂತಿರುವ ತನ್ನ ತಮ್ಮಂದಿರನ್ನು ನೋಡಿದನು.

ವಿನಿಕೀರ್ಣಧನುರ್ಬಾಣಾಂ ದೃಷ್ಟ್ವಾ ನಿಹತಮರ್ಜುನಮ್ ।
ಭೀಮಸೇನಂ ಯಮೌ ಚೈವ ನಿರ್ವಿಚೇಷ್ಟಾನ್ ಗತಾಯುಷಃ ॥೨॥

ಧರ್ಮಪುತ್ರೋ ಮಹಾಬಾಹುರ್ವಿಲಲಾಪ ಸುವಿಸ್ತರಮ್ ।
ನನು ತ್ವಯಾ ಮಹಾಬಾಹೋ ಪ್ರತಿಜ್ಞಾತಂ ವೃಕೋದರ ॥೨.೧॥

ಸುಯೋಧನಸ್ಯ ಭೇತ್ಸ್ಯಾಮಿ ಗದಯಾ ಸಕ್ಥನೀ ರಣೇ ।

ಧನುರ್ಬಾಣಗಳನ್ನು ಭೂಮಿಯ ಮೇಲೆ ಚೆಲ್ಲಾಡಿ ಭೂಮಿಯಲ್ಲಿ ಬಿದ್ದಿರುವ ಅರ್ಜುನನನ್ನೂ ನಿಶ್ಚೇಷ್ಟರಾಗಿ ಕ್ಷೀಣಾಯುಷರಂತೆ ಇರುವ ಭೀಮಸೇನ ನಕುಲ ಸಹದೇವರನ್ನೂ ನೋಡಿ ಮಹಾಬಾಹುವಾದ ಧರ್ಮಪುತ್ರನಾದ ಯುಧಿಷ್ಠಿರನು ವಿಸ್ತಾರವಾಗಿ ವಿಲಾಪವನ್ನು ಮಾಡಿದನು. ಮಹಾಬಾಹುವಾದ ವೃಕೋದರನೇ, ನೀನು ಯುದ್ಧದಲ್ಲಿ ಸುಯೋಧನನ ತೊಡೆಗಳನ್ನು ಗದೆಯಿಂದ ಭೇದಿಸುವೆನೆಂದು ಪ್ರತಿಜ್ಞೆಯನ್ನು ಮಾಡಿದ್ದೆಯಷ್ಟೆ.

ವ್ಯರ್ಥಂ ತದದ್ಯ ಮೇ ಸರ್ವಂ ತ್ವಯಿ ವೀರ ನಿಪಾತಿತೇ ॥೨.೨॥

ಮಹಾತ್ಮನಿ ಮಹಾಬಾಹೋ ಕುರೂಣಾಂ ಕೀರ್ತಿವರ್ಧನೇ ।
ಮನುಷ್ಯಸಂಭವಾ ವಾಚೋ ವಿಧರ್ಮಿಣ್ಯಃ ಪ್ರತಿಶ್ರುತಾಃ ॥೨.೩॥

ಎಲೈ ವೀರನೇ, ಮಹಾಬಾಹುವೂ, ಕುರುವಂಶದ ಕೀರ್ತಿವರ್ಧನನೂ, ಮಹಾತ್ಮನೂ ಆದ ನೀನು ಹೀಗೆ ಬಿದ್ದಿರಲು ಅವೆಲ್ಲವೂ ನನಗೆ ವ್ಯರ್ಥವೇ ಆಯಿತು.

ಮನುಷ್ಯರಿಗೆ ಸಹಜವಾದ ಮಾತುಗಳಂತೆ ವಿರುದ್ಧವಾಗಿ ಪರ್ಯವಸಾನವನ್ನು ಹೊಂದುವ ಪ್ರತಿಜ್ಞೆಗಳು ಮಾಡಲ್ಪಟ್ಟವು.

ಭವತಾಂ ದಿವ್ಯವಾಚಸ್ತು ತಾ ಭವಂತು ಕಥಂ ಮೃಷಾ ।
ದೇವಾಶ್ಚಾಪಿ ಯದಾऽವೋಚನ್ ಸೂತಕೇ ತ್ವಾಂ ಧನಂಜಯ ॥೨.೪॥

ಸಹಸ್ರಾಕ್ಷಾದನವರಃ ಕುಂತೀ ಪುತ್ರಸ್ತವೇತಿ ವೈ ।
ಉತ್ತರೇ ಪಾರಿಯಾತ್ರೇ ಚ ಜಗುರ್ಭೂತಾನಿ ಸರ್ವಶಃ ॥೨.೫॥

ವಿಪ್ರಣಷ್ಟಾಂ ಶ್ರಿಯಂ ಚೈಷಾಮಾಹರ್ತಾ ಪುನರಂಜಸಾ ।
ನಾಸ್ಯ ಜೇತಾ ರಣೇ ಕಶ್ಚಿದಜೇತಾ ನೈಷ ಕಸ್ಯಚಿತ್ ॥೨.೬॥

ನಿಮ್ಮ ದಿವ್ಯವಾಕ್ಯಗಳು ಹೇಗೆ ಸುಳ್ಳಾಗಲು ಸಾಧ್ಯ ? ಧನಂಜಯನೇ, ನೀನು ಜನಿಸಿದಾಗ ದೇವತೆಗಳೂ ಸಹ ಕುಂತಿಯೇ, ನಿನ್ನ ಪುತ್ರನು ಇಂದ್ರನಿಗೆ ಏನೂ ಕಡಿಮೆ ಇಲ್ಲದವನಾಗುತ್ತಾನೆ ಎಂದು ಹೇಳಿದರಷ್ಟೆ. ಉತ್ತರ ಪಾರಿಯಾತ್ರದಲ್ಲಿ ಎಲ್ಲ ಭೂತಗಳೂ ಇವನು ನಷ್ಟವಾದ ಕುರುಕುಲದ ಸಂಪತ್ತನ್ನು ಪುನಃ ಜಯಿಸಿ ತರುತ್ತಾನೆ. ಇವನನ್ನು ಯುದ್ಧದಲ್ಲಿ ಯಾರೂ ಜಯಿಸಲಾರರು. ಇವನು ಯಾರನ್ನೂ ಜಯಿಸದೇ ಇರುವುದಿಲ್ಲ ಎಂದು ಹೇಳಿದರಷ್ಟೆ.

ಸೋऽಯಂ ಮೃತ್ಯುವಶಂ ಯಾತಃ ಕಥಂ ಜಿಷ್ಣುರ್ಮಹಾಬಲಃ ।
ಅಯಂ ಮಮಾಶಾಂ ಸಂಹತ್ಯ ಶೇತೇ ಭೂಮೌ ಧನಂಜಯಃ ॥೨.೭॥

ಅಂತಹ ಈ ಮಹಾಬಲನಾದ ಅರ್ಜುನನು ಹೇಗೆ ಮೃತ್ಯುವಶನಾಗುತ್ತಾನೆ? ನನ್ನ ಎಲ್ಲಾ ಆಶೆಗಳನ್ನೂ ನಾಶಮಾಡಿ ಈ ಅರ್ಜುನನು ಭೂಮಿಯಲ್ಲಿ ಮಲಗಿದ್ದಾನೆ.

ಆಶ್ರಿತ್ಯ ಯಂ ವಯಂ ನಾಥಂ ದುಃಖಾನ್ಯೇತಾನಿ ಸೇಹಿಮ ।
ರಣೇऽಪ್ರಮತ್ತೌ ವೀರೌ ಚ ಸದಾ ಶತ್ರುನಿಬರ್ಹಣೌ ॥೨.೮॥

ಕಥಂ ರಿಪುವಶಂ ಯಾತೌ ಕುಂತೀಪುತ್ರೌ ಮಹಾಬಲೌ ।
ಯೌ ಸರ್ವಾಸ್ತ್ರಪ್ರತಿಹತೌ ಭೀಮಸೇನಧನಂಜಯೌ ॥೨.೯॥

ಯಾವನ ಬಲವನ್ನು ಆಶ್ರಯಿಸಿ ನಾವು ಈ ಎಲ್ಲ ದುಃಖಗಳನ್ನೂ ಸಹಿಸಿದೆವೋ ಅಂತಹ ಅರ್ಜುನನು ಭೂಮಿಯಲ್ಲಿ ಬಿದ್ದಿದ್ದಾನೆ. ಯುದ್ಧದಲ್ಲಿ ಯಾವಾಗಲೂ ಎಚ್ಚರಿಕೆಯಿಂದಿರುವವರೂ, ವೀರರೂ, ಶತ್ರುಸಂಹಾರಕರೂ ಆದ ಈ ಮಹಾಬಲರಾದ ಕುಂತೀಪುತ್ರರಾದ ಯಾವ ಅಸ್ತ್ರಕ್ಕೂ ವಶವಾಗದ ಭೀಮಸೇನ ಧನಂಜಯರು ಹೇಗೆ ಶತ್ರುಗಳ ವಶವಾಗಿದ್ದಾರೆ?

ಅಶ್ಮಸಾರಮಯಂ ನೂನಂ ಹೃದಯಂ ಮಮ ದುರ್ಹೃದಃ ।
ಯಮೌ ಯದೇತೌ ದೃಷ್ಟ್ವಾದ್ಯ ಪತಿತೌ ನಾವದೀರ್ಯತೇ ॥೨.೧೦॥

ಈ ನಕುಲಸಹದೇವರು ಭೂಮಿಯಲ್ಲಿ ಬಿದ್ದಿರುವುದನ್ನು ನೋಡಿ ನನ್ನ ಹೃದಯವು ಬಿರುದು ಹೋಗುತ್ತಿಲ್ಲ. ದುಷ್ಟನಾದ ನನ್ನ ಹೃದಯವು ನಿಜವಾಗಿಯೂ ಕಲ್ಲಿನಿಂದ ಮಾಡಲ್ಪಟ್ಟಿದೆ.

ಶಾಸ್ತ್ರಜ್ಞಾ ದೇಶಕಾಲಜ್ಞಾಸ್ತಪೋಯುಕ್ತಾಃ ಕ್ರಿಯಾನ್ವಿತಾಃ ।
ಅಕೃತ್ವಾ ಸದೃಶಂ ಕರ್ಮ ಕಿಂ ಶೇಧ್ವಂ ಪುರುಷರ್ಷಭಾಃ ॥೨.೧೧॥

ಶಾಸ್ತ್ರಜ್ಞರೂ, ದೇಶಕಾಲವನ್ನು ತಿಳಿದವರೂ, ತಪೋಯುಕ್ತರೂ, ಯೋಗ್ಯ ಕ್ರಿಯಾನ್ವಿತರೂ ಆದ ಎಲೈ ಪುರುಷರ್ಷಭರೇ, ನೀವು ನಿಮಗೆ ಯೋಗ್ಯವಾದ ಕಾರ್ಯವನ್ನು ಮಾಡದೆ ಏಕೆ ಮಲಗಿದ್ದೀರಿ?

ಅವಿಕ್ಷತಶರೀರಾಶ್ಚಾಪ್ಯಪ್ರಮೃಷ್ಟಶರಾಸನಾಃ ।
ಅಸಂಜ್ಞಾ ಭುವಿ ಸಂಗಮ್ಯ ಕಿಂ ಶೇಧ್ವಮಪರಾಜಿತಾಃ ॥೨.೧೨॥

ಶರೀರದಲ್ಲಿ ಯಾವ ವ್ರಣವೂ ಇಲ್ಲದೆ ನಿಮ್ಮ ಬಿಲ್ಲುಗಳನ್ನು ಸರಿಯಾಗಿ ಉಜ್ಜಿಕೊಳ್ಳದೇ ಸಂಜ್ಞೆಯನ್ನು ಕಳೆದುಕೊಂಡು ಯಾರಿಂದಲೂ ಪರಾಜಿತರಾಗದ ನೀವು ಏಕೆ ಭೂಮಿಯ ಮೇಲೆ ಒಟ್ಟಿಗೆ ಮಲಗಿದ್ದೀರಿ?

ವೈಶಂಪಾಯನಃ

ಸಾನೂನಿವಾದ್ರೇಃ ಸಂಸುಪ್ತಾನ್ ದೃಷ್ಟ್ವಾ ಭ್ರಾತೄನ್ ಮಹಾಮತಿಃ ।
ಸುಖಂ ಪ್ರಸುಪ್ತಾನ್ ಪ್ರಸ್ವಿನ್ನಃ ಖಿನ್ನಃ ಕಷ್ಟಾಂ ದಶಾಂ ಗತಃ ॥೨.೧೩॥

ವೈಶಂಪಾಯನ– ಪರ್ವತದ ಶಿಖರಗಳಂತೆ ಸಂಸುಪ್ತರಾದ ತನ್ನ ತಮ್ಮಂದಿರನ್ನು ನೋಡಿ ಮಹಾಮತಿಯಾದ ಧರ್ಮರಾಜನು ಬಹಳ ಖಿನ್ನನಾಗಿ ಶರೀರವೆಲ್ಲಾ ಬೆವರಿ ದುಃಖದ ಅವಸ್ಥೆಯನ್ನು ತಲುಪಿದರು.

ಏವಮೇವೇದಮಿತ್ಯುಕ್ತ್ವಾ ಧರ್ಮಾತ್ಮಾ ಸ ನರೇಶ್ವರಃ ।
ಶೋಕಸಾಗರಮಧ್ಯಸ್ಥೋ ದಧ್ಯೌ ಕಾರಣಮಾಕುಲಃ ॥೨.೧೪॥

ಇದು ಹೀಗೆಯೇ ಆಗಿರಬೇಕು ಎನ್ನುತ್ತಾ ರಾಜನಾದ ಯುಧಿಷ್ಠಿರನು ಶೋಕ ಸಾಗರದಲ್ಲಿ ಮುಳುಗಿ ಆಕುಲವಾದ ಹೃದಯದಿಂದ ಕಾರಣವನ್ನು ಕುರಿತು ಯೋಚಿಸಿದನು.

ಇತಿಕರ್ತವ್ಯತಾಂ ಚೇತಿ ದೇಶಕಾಲವಿಭಾಗವಿತ್ ।
ನಾಭಿಪೇದೇ ಮಹಾಬಾಹುಶ್ಚಿಂತಯಾನೋ ಮಹಾಮತಿಃ ॥೨.೧೫॥

ದೇಶಕಾಲ ವಿಭಾಗವನ್ನು ತಿಳಿದು ಇವರು ಮಲಗಿರುವ ಪ್ರಕಾರವನ್ನು ಯೋಚಿಸಿದರೂ ಸಹ ಆ ಮಹಾಮತಿಯೂ, ಮಹಾಬಾಹುವೂ ಆದ ಯುಧಿಷ್ಠಿರನಿಗೆ ಯಾವ ಕಾರಣವೂ ತಿಳಿಯಲಿಲ್ಲ.

ಅಥ ಸಂಸ್ತಭ್ಯ ಧರ್ಮಾತ್ಮಾ ತದಾऽऽತ್ಮಾನಂ ತಪಃ ಸುತಃ (ತಪೋಯುತಃ) ।
ಏವಂ ವಿಲಪ್ಯ ಬಹುಧಾ ಧರ್ಮಪುತ್ರೋ ಯುಧಿಷ್ಠಿರಃ ॥೨.೧೬॥

ಅನಂತರ ಹೀಗೆ ಬಹಳ ವಿಲಾಪವನ್ನು ಮಾಡಿ ಧರ್ಮಪುತ್ರನೂ, ತಪೋಯುಕ್ತನೂ ಆದ ಯುಧಿಷ್ಠಿರನು ಮನಸ್ಸನ್ನು ಸಮಾಧಾನ ಮಾಡಿಕೊಂಡು ಯೋಚಿಸಿದನು.

ಸ ದೀರ್ಘಮುಷ್ಣಂ ನಿಃಶ್ವಸ್ಯ ಶೋಚನ್ ಬಾಷ್ಪಪರಿಪ್ಲುತಃ ।
ಬುದ್ಧ್ಯಾ ವಿಚಿಂತಯಾಮಾಸ ವೀರಾಃ ಕೇನ ನಿಪಾತಿತಾಃ ॥೩॥

ಅವನು ಶೋಕದಿಂದಲೂ, ಬಾಷ್ಪದಿಂದಲೂ ಕೂಡಿದವನಾಗಿ ದೀರ್ಘವಾದ ಬಿಸಿಯಾದ ನಿಟ್ಟುಸಿರನ್ನು ಬಿಡುತ್ತಾ ಈ ವೀರರು ಯಾರ ಕಾರಣದಿಂದ ಬಿದ್ದಿದ್ದಾರೆಂದು ತನ್ನ ಬುದ್ಧಿಯಿಂದ ಆಲೋಚಿಸಿದನು.

ನೈಷಾಂ ಶಸ್ತ್ರಪ್ರಹಾರೋಽಸ್ತಿ ಪದಂ ನೇಹಾಸ್ತಿ ಕಸ್ಯಚಿತ್ ।
ಭೂತಂ ಮಹದಿದಂ ಮನ್ಯೇ ಭ್ರಾತರೋ ಯೇನ ಮೇ ಹತಾಃ ॥೪॥

ಇವರ ದೇಹದ ಮೇಲೆ ಶಸ್ತ್ರದಿಂದ ಉಂಟಾದ ಗಾಯವಿಲ್ಲ. ಇಲ್ಲಿ ಬೇರೆ ಯಾರ ಪಾದಚಿಹ್ನೆಗಳೂ ಇಲ್ಲ. ಆದ್ದರಿಂದ ಯಾವುದೋ ಒಂದು ದೊಡ್ಡ ಭೂತವು ನನ್ನ ತಮ್ಮಂದಿರನ್ನು ಕೊಂದಿರಬೇಕು.

ಏಕಾಗ್ರಂ ಚಿಂತಯಿಷ್ಯಾಮಿ ಪೀತ್ವಾ ವೇತ್ಸ್ಯಾಮಿ ವಾ ಜಲಮ್ ।
ಭ್ರಾತೃಣಾಂ ವ್ಯಸನಂ ಘೋರಂ ಸಮಮೇವ ಮಹಾತ್ಮನಾಮ್ ॥೫॥

ನೀರನ್ನು ಕುಡಿದು ಏಕಾಗ್ರವಾಗಿ ಯೋಚಿಸುವೆನು ಮತ್ತು ಕಾರಣವನ್ನು ತಿಳಿಯುವೆನು. ಈ ಮಹಾತ್ಮರಾದ ತಮ್ಮಂದಿರಿಗೆಲ್ಲಾ ಒಂದೇ ವಿಧವಾದ ಘೋರ ವ್ಯಸನವು ಉಂಟಾಗಿರುವುದೆಂದು ತೋರುತ್ತದೆ.

ಸ್ಯಾತ್ತು ದುರ್ಯೋಧನೇನೇದಮುಪಾಂಶು ವಿಹಿತಂ ಕೃತಮ್ ।
ಗಾಂಧಾರರಾಜರಚಿತಂ ಸತತಂ ಜಿಹ್ಮಬುದ್ಧಿನಾ ॥೬॥

ಇದು ಕುಟಿಲ ಬುದ್ಧಿಯುಳ್ಳ ಶಕುನಿಯಿಂದ ಕೂಡಿದ ದುರ್ಯೋಧನನು ಮಾಡಿದ ಅಹಿತವಾದ ಕಾರ್ಯವಾಗಿರಬಹುದು.

ಯಸ್ಯ ಕಾರ್ಯಮಕಾರ್ಯಂ ವಾ ಸಮಮೇವ ಭವತ್ಯುತ ।
ಕಸ್ತಸ್ಯ ವಿಶ್ವಸೇದ್ ವೀರೋ ದುಷ್ಕೃತೇರಕೃತಾತ್ಮನಃ ॥೭॥

ಯಾವ ದುಷ್ಟನೂ, ಅಸಂಸ್ಕೃತ ಮನಸ್ಸುಳ್ಳವನೂ ಆದ ಅವನಿಗೆ ಕಾರ್ಯಾಕಾರ್ಯಗಳಲ್ಲಿ ವ್ಯತ್ಯಾಸವೇ ಇಲ್ಲವೋ ಅಂತಹವನನ್ನು ಯಾವ ವೀರನು ನಂಬಲು ಸಾಧ್ಯ ?

ಅಥವಾ ಪುರುಷೈರ್ಗೂಢೈಃ ಪ್ರಯೋಗೋಽಯಂ ದುರಾತ್ಮನಃ ।
ಭವೇದಿತಿ ಮಹಾಬುದ್ಧಿರ್ಬಹುಧಾ ತದಚಿಂತಯತ್ ॥೮॥

ಅಥವಾ ತನ್ನ ಗೂಢಪುರುಷರಿಂದ ಆ ದುರಾತ್ಮನು ಈ ಜಲದಲ್ಲಿ ವಿಷಾದಿಪ್ರಯೋಗವನ್ನೂ ಮಾಡಿರಬಹುದು ಎಂದು ಮಹಾಬುದ್ಧಿಯುಳ್ಳ ಧರ್ಮರಾಜನು ವಿಧವಿಧವಾಗಿ ಚಿಂತಿಸಿದನು (ವಾದಿರಾಜರು)

ಆಚಾರ್ಯಂ ಕಿಂ ನು ವಕ್ಷ್ಯಾಮಿ ಕೃಪಂ ಭೀಷ್ಮಮಹಂ ನು ಕಿಮ್ ।
ವಿದುರಂ ಕಿಂ ನು ವಕ್ಷ್ಯಾಮಿ ಬೃಹಸ್ಪತಿಸಮಂ ನಯೇ ॥೯॥

ನಾನು ದ್ರೋಣರಿಗೆ ಏನು ಹೇಳಲಿ? ಕೃಪಾಚಾರ್ಯರಿಗೆ ಮತ್ತು ಭೀಷ್ಮರಿಗೆ ಏನು ಹೇಳಲಿ? ನೀತಿಶಾಸ್ತ್ರದಲ್ಲಿ ಬೃಹಸ್ಪತಿಗೆ ಸಮನಾದ ವಿದುರನನ್ನು ಕುರಿತಾದರೂ ಏನು ಹೇಳಲಿ?

ಅಂಬಾಂ ಚ ಕಿಂ ನು ವಕ್ಷ್ಯಾಮಿ ಸರ್ವದಾ ದುಃಖಭಾಗಿನೀಮ್ ।
ದೃಷ್ಟ್ವಾ ಮಾಂ ಭ್ರಾತೃಭಿರ್ಹೀನಂ ಪೃಚ್ಛಂತೀಂ ಪುತ್ರಗೃದ್ಧಿನೀಮ್ ॥೧೦॥

ಸಹೋದರರಿಲ್ಲದೇ ಒಬ್ಬನೇ ಇರುವ ನನ್ನನ್ನು ಪುತ್ರವಾತ್ಸಲ್ಯವುಳ್ಳ ಸರ್ವದಾ ದುಃಖವನ್ನೇ ಅನುಭವಿಸಿರುವ ತಾಯಿಯು ಕೇಳಿದರೆ ಅವಳಿಗೆ ಏನು ಉತ್ತರವನ್ನು ಹೇಳಲಿ?

ಯದಾ ತ್ವಂ ಭ್ರಾತೃಭಿಃ ಸರ್ವೈಃ ಶಕ್ರತುಲ್ಯಪರಾಕ್ರಮೈಃ ।
ಸಾರ್ಧಂ ವನಂ ಗತೋ ವೀರೈಃ ಕಥಮೇಕಃ ಸಮಾಗತಃ ॥೧೧॥

ವೀರನೇ, ನೀನು ನಾಲ್ಕುಜನ ಇಂದ್ರನಿಗೆ ಸಮಾನವಾದ ಪರಾಕ್ರಮವುಳ್ಳ ತಮ್ಮಂದಿರ ಜೊತೆಯಲ್ಲಿ ಕಾಡಿಗೆ ಹೋದವನು ಒಬ್ಬನೇ ಹೇಗೆ ಬಂದೆ (ಎಂದು ಕುಂತಿಯು ಕೇಳಿದರೆ ಏನು ಹೇಳಲಿ).

ತಸ್ಯಾಸೀನ್ನ ವಿಷೇಣೇದಮುದಕಂ ದೂಷಿತಂ ಯಥಾ ।
ಮೃತಾನಾಮಪಿ ಚೈತೇಷಾಂ ವಿಕೃತಂ ನೈವ ಜಾಯತೇ ।
ಮುಖವರ್ಣಾಃ ಪ್ರಸನ್ನಾ ಮೇ ಭ್ರಾತೄಣಾಮಿತಿ ಚಿಂತಯೇ ॥೧೨॥

ಇವರು ಮೃತರಾಗಿದ್ದರೂ ಇವರ ಮುಖದ ಕಾಂತಿಯಲ್ಲಿ ವ್ಯತ್ಯಾಸವಾಗಿಲ್ಲ. ಈ ನನ್ನ ತಮ್ಮಂದಿರ ಮುಖಗಳು ಪ್ರಸನ್ನವಾಗಿಯೇ ಇದೆ. ಆದ್ದರಿಂದ ಈ ಜಲವು ವಿಷದಿಂದ ದೂಷಿತವಲ್ಲ ಎಂದು ನಾನು ತಿಳಿಯುತ್ತೇನೆ.

ಏಕೈಕಶಶ್ಚಾಪಿ ಬಲಾನಿಮಾನ್ ಪುರುಷಸತ್ತಮಾನ್ ।
ಕೋಽನ್ಯಃ ಪ್ರತಿ ಸಮಾಸೇನ ಕಾಲಾಂತಕಯಮಾದೃತೇ ॥೧೩॥

ಈ ನನ್ನ ತಮ್ಮಂದಿರಲ್ಲಿ ಪ್ರತಿಯೊಬ್ಬರೂ ಅಪಾರವಾದ ಬಲವುಳ್ಳ ಪುರುಷ ಶ್ರೇಷ್ಠರು. ಯಮನನ್ನು ಬಿಟ್ಟು ಇವರೆಲ್ಲರನ್ನೂ ಯಾರು ಒಟ್ಟಿಗೆ ಎದುರಿಸಿರಬಹುದು?

ಏತೇನ ವ್ಯವಸಾಯೇನ ತತ್ತೋಯಂ ವ್ಯವಗಾಢವಾನ್ ।
ಗಾಹಮಾನಶ್ಚ ತತ್ತೋಯಮಂತರಿಕ್ಷಾತ್ ಸ ಶುಶ್ರುವೇ ॥೧೪॥

ಈ ನಿರ್ಧಾರದೊಂದಿಗೆ ಆ ನೀರಿನಲ್ಲಿ ಇಳಿದನು. ನೀರಿನಲ್ಲಿ ಇಳಿಯುತ್ತಿರುವಂತೆಯೇ ಅಂತರಿಕ್ಷದಿಂದ ಒಂದು ವಾಣಿಯು ಕೇಳಿ ಬಂದಿತು.

ಯಕ್ಷಃ

ಅಹಂ ಬಕಃ ಶೈವಲಮತ್ಸ್ಯಭಕ್ಷೋ
ನೀತಾ ಮಯಾ ಪ್ರೇತವಶಂ ತವಾನುಜಾಃ ।
ತ್ವಂ ಪಂಚಮೋ ಭವಿತಾ ರಾಜಪುತ್ರ
ನ ಚೇತ್ಪ್ರಶ್ನಾನ್ ಪೃಚ್ಛತೋ ವ್ಯಾಕರೋಷಿ ॥೧೫॥

ಯಕ್ಷ– ನಾನು ನೀರಿನ ಪಾಚಿ (ಶೈವಲ) ಮತ್ತು ಮತ್ಸ್ಯಗಳನ್ನು ಭಕ್ಷಿಸುವ ಒಂದು ಬಕಪಕ್ಷಿ. ನಾನು ನಿನ್ನ ತಮ್ಮಂದಿರನ್ನು ಪ್ರೇತವಶರಾಗಿ ಮಾಡಿದ್ದೇನೆ. ರಾಜಪುತ್ರನೇ, ನನ್ನ ಪ್ರಶ್ನೆಗಳಿಗೆ ಉತ್ತರವನ್ನು ಹೇಳದಿದ್ದರೆ ನೀನು ಐದನೆಯವನಾಗುವಿ.

ಮಾ ತಾತ ಸಾಹಸಂ ಕಾರ್ಷೀರ್ಮಮ ಪೂರ್ವಪರಿಗ್ರಹಃ ।
ಪ್ರಶ್ನಾನುಕ್ತ್ವಾ ತು ಕೌಂತೇಯ ತತಃ ಪಿಬ ಹರಸ್ವ ಚ ॥೧೬॥

ಪ್ರೀತಿಪಾತ್ರನೇ, ಸಾಹಸವನ್ನು ಮಾಡಬೇಡ. ಈ ಸರೋವರವು ನನಗೆ ಮೊದಲೇ ಸೇರಿದುದು. ಕುಂತೀಪುತ್ರನೇ, ನನ್ನ ಪ್ರಶ್ನೆಗಳಿಗೆ ಉತ್ತರವನ್ನು ಹೇಳಿ ಅನಂತರ ನೀರನ್ನು ಕುಡಿದು ತೆಗೆದುಕೊಂಡು (ಕರೆದುಕೊಂಡು) ಹೋಗು.

ಯುಧಿಷ್ಠಿರಃ

ರುದ್ರಾಣಾಂ ವಾ ವಸೂನಾಂ ವಾ ಮಾರುತಾನಾಂ ವಾ ಪ್ರಧಾನಧೃಕ್ ।
ಪೃಚ್ಛಾಮಿ ಕೋ ಭವಾನ್‌ದೇವೋ ನೈತಚ್ಛಕುನಿನಾ ಕೃತಮ್ ॥೧೭॥

ಯುಧಿಷ್ಠಿರ– ರುದ್ರರ, ವಸುಗಳ ಅಥವಾ ಮರುತ್ತುಗಳ ಪ್ರಧಾನವೇಷವನ್ನು ಧರಿಸಿರಬಹುದಾದ ನೀನು ಯಾವ ದೇವತೆ ಎಂದು ಕೇಳುತ್ತಿದ್ದೇನೆ. ಈ ಕಾರ್ಯವನ್ನು ಒಂದು ಪಕ್ಷಿಯು ಮಾಡಲು ಸಾಧ್ಯವಿಲ್ಲ.

ಹಿಮವಾನ್ ಪಾರಿಯಾತ್ರಶ್ಚ ವಿಂಧ್ಯೋ ಮಲಯ ಏವ ಚ ।
ಚತ್ವಾರಃ ಪರ್ವತಾಃ ಕೇನ ಪಾತಿತಾ ಧರಣೀತಳೇ ॥೧೮॥

ಹಿಮಾಲಯ, ಪಾರಿಯಾತ್ರ, ವಿಂಧ್ಯ, ಮಲಯ ಈ ನಾಲ್ಕು ಪರ್ವತಗಳು ಯಾರಿಂದ ಭೂಮಿಯಲ್ಲಿ ಬೀಳಿಸಲ್ಪಟ್ಟವು?

ಅತೀವ ತೇ ಮಹತ್ಕರ್ಮ ಕೃತಂ ಚ ಬಲಿನಾಂ ವರ ।
ಯಾನ್ನ ದೇವಾ ನ ಗಂಧರ್ವಾ ನಾಸುರಾ ನ ಚ ರಾಕ್ಷಸಾಃ ।
ವಿಷಹೇರನ್‌ಮಹಾಬುದ್ಧೇ ಕೃತಂ ಹ್ಯೇತನ್ಮಹಾದ್ಭುತಮ್ ।
ವಿನಿಘ್ನತಾ ಮಹೇಷ್ವಾಸಾಂಶ್ಚತುರೋಽಪಿ ಮಮಾತ್ಮಜಾನ್ ॥೧೯॥

ಬಲಿಷ್ಠರಲ್ಲಿ ಶ್ರೇಷ್ಠನೇ, ಯಾರನ್ನು ದೇವತೆಗಳಾಗಲೀ, ಗಂಧರ್ವರಾಗಲೀ, ಅಸುರರಾಗಲೀ, ರಾಕ್ಷಸರಾಗಲೀ, ಮಹಾಯುದ್ಧದಲ್ಲಿ ಎದುರಿಸಲು ಸಾಧ್ಯವಿಲ್ಲವೋ ಅಂತಹ ಮಹಾಧನುರ್ಧಾರಿಗಳಾದ ನನ್ನ ತಮ್ಮಂದಿರನ್ನು ಕೆಡವಿ ನೀನು ಅದ್ಭುತವಾದ ಮಹಾಕಾರ್ಯವನ್ನು ಮಾಡಿದ್ದೀಯೆ.

ನ ತೇ ಜಾನಾಮಿ ಯತ್ ಕಾರ್ಯಂ ನಾಭಿಜಾನಾಮಿ ಕಾಂಕ್ಷಿತಮ್ ।
ಕೌತೂಹಲಂ ಮಹಜ್ಜಾತಂ ಸಾಧ್ವಸಂ ಚಾಗತಂ ಮಮ ॥೨೦॥

ನಿನಗೆ ಇದರಿಂದ ಏನಾಗಬೇಕಾಗಿದೆ ಎಂದು ನಾನು ತಿಳಿಯುವುದಿಲ್ಲ. ನಿನಗೆ ಅಭಿಪ್ರೇತವಾದುದು ಏನು ಎಂದೂ ತಿಳಿಯಲಾರೆ. ನನಗೆ ದೊಡ್ಡ ಕುತೂಹಲವೂ ಮತ್ತು ಭಯವೂ ಉಂಟಾಗಿದೆ.

ಯೇನಾಸ್ಮ್ಯುದ್ವಿಗ್ನಹೃದಯಃ ಸಮುತ್ಪನ್ನಶಿರೋಜ್ವರಃ ।
ಪೃಚ್ಛಾಮಿ ಭಗವಂಸ್ತಸ್ಮಾತ್ ಕೋ ಭವಾನಿಹ ತಿಷ್ಠತಿ ॥೨೧॥

ಅದರಿಂದ ನಾನು ಉದ್ವಿಗ್ನ ಮನಸ್ಸುಳ್ಳವನಾಗಿ ಶಿರೋವೇದನೆಯನ್ನು ಅನುಭವಿಸುತ್ತಿದ್ದೇನೆ. ಪೂಜ್ಯನೇ, ಆದ್ದರಿಂದ ಇಲ್ಲಿರುವ ನೀನು ಯಾರು ಎಂದು ಕೇಳುತ್ತಿದ್ದೇನೆ.

ಯಕ್ಷಃ

ಯಕ್ಷೋಽಹಮಸ್ಮಿ ಭದ್ರಂ ತೇ ನಾಸ್ಮಿ ಪಕ್ಷೀ ಜಲೇಚರಃ ।
ಮಯೈತೇ ನಿಹತಾಃ ಸರ್ವೇ ಭ್ರಾತರಸ್ತೇ ಮಹೌಜಸಃ ॥೨೨॥

ಯಕ್ಷ– ನಿನಗೆ ಮಂಗಳವಾಗಲಿ. ನಾನು ಒಬ್ಬ ಯಕ್ಷ. ಜಲಚರಪಕ್ಷಿಯಲ್ಲ. ಮಹಾಪರಾಕ್ರಮಶಾಲಿಗಳಾದ ನಿನ್ನ ತಮ್ಮಂದಿರೆಲ್ಲರೂ ನನ್ನಿಂದಲೇ ನಿಹತರಾಗಿದ್ದಾರೆ.

ವೈಶಂಪಾಯನಃ

ತತಸ್ತಾಮಶಿವಾಂ ಶ್ರುತ್ವಾ ವಾಚಂ ಸ ಪರುಷಾಕ್ಷರಾಮ್ ।
ಯಕ್ಷಸ್ಯ ಬ್ರುವತೋ ರಾಜನ್ನಪಾಕ್ರಮ್ಯ ತದಾ ಸ್ಥಿತಃ ॥೨೩॥

ವೈಶಂಪಾಯನ– ರಾಜನೇ, ಆಗ ಆ ಅಮಂಗಳವಾದ ಮತ್ತು ಕ್ರೂರವಾದ ಮಾತುಗಳನ್ನು ಯಕ್ಷನು ಆಡುವುದನ್ನು ಕೇಳಿ ಧರ್ಮರಾಜನು (ನೀರಿನಿಂದ) ಹಿಂದೆ ಸರಿದು ನಿಂತನು.

ವಿರೂಪಾಕ್ಷಂ ಮಹಾಕಾಯಂ ಯಕ್ಷಂ ತಾಳಸಮುಚ್ಛ್ರಯಮ್ ।
ಜ್ವಲನಾರ್ಕಪ್ರತೀಕಾಶಮಧೃಷ್ಯಂ ಪರ್ವತೋಪಮಮ್ ॥೨೪॥

ವೃಕ್ಷಮಾಶ್ರಿತ್ಯ ತಿಷ್ಠಂತಂ ದದರ್ಶ ಭರತರ್ಷಭಃ ।
ಮೇಘಗಂಭೀರನಾದೇನ ತರ್ಜಯಂತಂ ಮಹಾಸ್ವನಮ್ ।
ಉವಾಚ ಯಕ್ಷಃ ಕೌಂತೇಯಂ ಭ್ರಾತೃಶೋಕಾಭಿಪೀಡಿತಮ್ ॥೨೫॥

ಭರತರ್ಷಭನಾದ ಧರ್ಮರಾಜನು ವಿರೂಪಾಕ್ಷನೂ, ಮಹಾಕಾಯನೂ, ತಾಳವೃಕ್ಷದಂತೆ ಉನ್ನತನಾದವನೂ, ಜ್ವಲಿಸುವ ಸೂರ್ಯನಂತೆ ಪ್ರಕಾಶವುಳ್ಳವನೂ, ಅಧೃಷ್ಯನೂ, ಪರ್ವತಸದೃಶನೂ, ಒಂದು ವೃಕ್ಷವನ್ನು ಒರಗಿಕೊಂಡು ನಿಂತಿರುವವನೂ, ತನ್ನ ಮೇಘ ಗಂಭೀರವಾದ ಮಹಾಸ್ವನವುಳ್ಳ ನಾದದಿಂದ ಹೆದರಿಸುತ್ತಿರುವವನೂ ಆದ ಯಕ್ಷನನ್ನು ನೋಡಿದನು. ಆಗ ಯಕ್ಷನು ಭ್ರಾತೃಶೋಕಪೀಡಿತನಾದ ಕೌಂತೇಯನಾದ ಧರ್ಮರಾಜನನ್ನು ಕುರಿತು ಮಾತನಾಡಿದನು.

ಯಕ್ಷಃ

ಇಮೇ ತೇ ಭ್ರಾತರೋ ರಾಜನ್ ವಾರ್ಯಮಾಣಾ ಮಯಾऽಸಕೃತ್ ।
ಬಲಾತ್ತೋಯಂ ಜಿಹೀರ್ಷಂತಸ್ತತೋ ವೈ ಮೃದಿತಾ ಮಯಾ ॥೨೬॥

ಯಕ್ಷ– ಎಲೈ ರಾಜನೇ, ಈ ನಿನ್ನ ತಮ್ಮಂದಿರು ನಾನು ಅನೇಕ ಬಾರಿ ನಿವಾರಣೆ ಮಾಡಿದರೂ ಬಲಾತ್ಕಾರದಿಂದ ಜಲವನ್ನು ತೆಗೆದುಕೊಳ್ಳಲು ಹೋದರು. ಆದ್ದರಿಂದ ನಾನು ಅವರನ್ನು ಮರ್ದಿಸಿದ್ದೇನೆ.

ನ ಪೇಯಮುದಕಂ ರಾಜನ್ ಪ್ರಾಣಾನಿಹ ಪರೀಪ್ಸತಾ ।
ಪಾರ್ಥ ಮಾ ಸಾಹಸಂ ಕಾರ್ಷೀರ್ಮಮ ಪೂರ್ವಪರಿಗ್ರಹಃ ॥೨೭॥

ಪ್ರಶ್ನಾನುಕ್ತ್ವಾ ತು ಕೌಂತೇಯ ತತಃ ಪಿಬ ಹರಸ್ವ ಚ ।

ರಾಜನೇ, ಪ್ರಾಣಗಳನ್ನು ಉಳಿಸಿಕೊಳ್ಳಬೇಕೆಂದು ಬಯಸಿದರೆ ಈ ನೀರನ್ನು ಕುಡಿಯಬಾರದು. ಕುಂತೀಪುತ್ರನೇ, ಸಾಹಸವನ್ನು ಮಾಡಬೇಡ. ಈ ಸರೋವರವು ಮೊದಲಿನಿಂದಲೂ ನನಗೇ ಸೇರಿದುದು. ನನ್ನ ಪ್ರಶ್ನೆಗಳಿಗೆ ಉತ್ತರವನ್ನು ಹೇಳಿ ನೀರನ್ನು ಕುಡಿದು, ತೆಗೆದುಕೊಂಡು ಹೋಗು.

ಯುಧಿಷ್ಠಿರಃ

ನ ಚಾಹಂ ಕಾಮಯೇ ಯಕ್ಷ ತವ ಪೂರ್ವಪರಿಗ್ರಹಮ್ ॥೨೮॥

ಕಾಮಂ ನೈತತ್ ಪ್ರಶಂಸಂತಿ ಸಂತೋ ಹಿ ಪುರುಷಾಃ ಸದಾ ।
ಯದಾತ್ಮನಾ ಸ್ವಮಾತ್ಮಾನಂ ಪ್ರಶಂಸೇತ್ ಪುರುಷರ್ಷಭ ॥೨೯॥

ಯಥಾಪ್ರಜ್ಞಂ ತು ತೇ ಪ್ರಶ್ನಾನ್ ಪ್ರತಿವಕ್ಷ್ಯಾಮಿ ಪೃಚ್ಛ ಮಾಮ್ ॥೩೦॥

ಯುಧಿಷ್ಠಿರ– ಯಕ್ಷನೇ, ಮೊದಲಿನಿಂದಲೂ ನಿನಗೆ ಅಧೀನವಾದ ಈ ಜಲವು ನನಗೆ ಬೇಕಾಗಿಲ್ಲ. ಎಲೈ ಪುರುಷರ್ಷಭನೇ, ಹೀಗೆ ತಮ್ಮನ್ನು ತಾವೇ ಹೊಗಳಿಕೊಳ್ಳುವುದನ್ನು ಸತ್ಪುರುಷರು ಎಂದೂ ಪ್ರಶಂಸಿಸುವುದಿಲ್ಲ. ನಿನ್ನ ಪ್ರಶ್ನೆಗಳಿಗೆ ನನ್ನ ಬುದ್ಧಿಗೆ ತಿಳಿದಂತೆ ಉತ್ತರವನ್ನು ಹೇಳುವೆನು. ನನ್ನನ್ನು ಕೇಳು.

ಯಕ್ಷಃ

ಕಿಂ ಸ್ವಿದಾದಿತ್ಯಮುನ್ನಯತಿ ಕೇ ಚೇತಶ್ಚಾಭಿತಶ್ಚರಾಃ ।
ಕಶ್ಚೈನಮಸ್ತಂ ನಯತಿ ಕಸ್ಮಿಂಶ್ಚ ಪ್ರತಿತಿಷ್ಠತಿ ॥೩೧॥

ಯಕ್ಷ– ಆದಿತ್ಯನನ್ನು ಯಾವ ವಸ್ತುವು ಮೇಲಕ್ಕೆ ತೆಗೆದುಕೊಂಡು ಹೋಗುತ್ತದೆ? ಆದಿತ್ಯನ ಸುತ್ತಲೂ ಚಲಿಸುವವರು ಯಾರು? ಆದಿತ್ಯನನ್ನು ಅಸ್ತಮಯಕ್ಕೆ ಕೊಂಡೊಯ್ಯುವವರು ಯಾರು? ಮತ್ತು ಆದಿತ್ಯನು ಎಲ್ಲಿ ಪ್ರತಿಷ್ಠಿತನಾಗಿದ್ದಾನೆ?

ಯುಧಿಷ್ಠಿರಃ

ಬ್ರಹ್ಮ ಹ್ಯಾದಿತ್ಯಮುನ್ನಯತಿ ದೇವಾಸ್ತಸ್ಯಾಭಿತಶ್ಚರಾಃ ।
ಧರ್ಮಶ್ಚಾಸ್ತಂ ನಯತಿ ಚ ಸತ್ಯೇ ಚ ಪ್ರತಿತಿಷ್ಠತಿ ॥೩೨॥

ಸೂರ್ಯೋದಯಕ್ಕಿಂತ ಮೊದಲು ಪ್ರತಿಬಂಧಕರಾದ ರಾಕ್ಷಸರ ವಧೆಗಾಗಿ ಗಾಯತ್ರಿಯಿಂದ ಅರ್ಘ್ಯವನ್ನು ಕೊಡುವ ಬ್ರಾಹ್ಮಣ ಕುಲವು ಆದಿತ್ಯನನ್ನು ಮೇಲೊಯ್ಯುತ್ತದೆ. ಆದಿತ್ಯನ ಸುತ್ತಲೂ ದೇವತೆಗಳು ಚಲಿಸುತ್ತಾರೆ. ಸಾಯಂಕಾಲಕ್ಕಿಂತ ಮುಂಚೆಯೇ ಪ್ರತಿಬಂಧಕರಾದ ರಾಕ್ಷಸರ ವಿನಾಶಕ್ಕಾಗಿ ಕೊಡುವ ಗಾಯತ್ರಿ ಮಂತ್ರ ಸಹಿತವಾದ ಅರ್ಘ್ಯರೂಪವಾದ ಧರ್ಮವು ಸೂರ್ಯನನ್ನು ಅಸ್ತಮಯಕ್ಕೆ ಕರೆದುಕೊಂಡು ಹೋಗುತ್ತದೆ. ಆದಿತ್ಯನು ಸತ್ಯದಲ್ಲಿ ಪ್ರತಿಷ್ಠಿತನಾಗಿದ್ದಾನೆ.

ಯಕ್ಷಃ

ಕೇನಸ್ವಿಚ್ಛ್ರೋತ್ರಿಯೋ ಭವತಿ ಕೇನಸ್ವಿದ್ ವಿಂದತೇ ಮಹತ್ ।
ಕೇನಸ್ವಿದ್ ದ್ವಿತೀಯವಾನ್ ಭವತಿ ರಾಜನ್ ಕೇನ ಚ ಬುದ್ಧಿಮಾನ್ ॥

ಯಕ್ಷ– ಮನುಷ್ಯನು ಯಾವುದರಿಂದ ಶ್ರೋತ್ರಿಯನಾಗುತ್ತಾನೆ? ಯಾವುದರಿಂದ ಮಹಾಫಲವನ್ನು ಪಡೆಯುತ್ತಾನೆ? ಯಾವುದರಿಂದ ಸದ್ವಿತೀಯನಾಗುತ್ತಾನೆ? ರಾಜನೇ, ಯಾವುದರಿಂದ ಬುದ್ಧಿವಂತನಾಗುತ್ತಾನೆ?

ಯುಧಿಷ್ಠಿರಃ

ಶ್ರುತೇನ ಶ್ರೋತ್ರಿಯೋ ಭವತಿ ತಪಸಾ ವಿಂದತೇ ಮಹತ್ ।
ಧೃತ್ಯಾ ದ್ವಿತೀಯವಾನ್ ಭವತಿ ಬುದ್ಧಿಮಾನ್ ವೃದ್ಧಸೇವಯಾ ॥೩೪॥

ಯುಧಿಷ್ಠಿರ– ವೇದಾಧ್ಯಯನದಿಂದ ಶ್ರೋತ್ರಿಯನಾಗುತ್ತಾನೆ. ತಪಸ್ಸಿನಿಂದ ಮಹಾಫಲವನ್ನು ಪಡೆಯುತ್ತಾನೆ. ಧೈರ್ಯದಿಂದ ಸದ್ವಿತೀಯನಾಗುತ್ತಾನೆ. ಹಿರಿಯರ ಸೇವೆಯಿಂದ ಬುದ್ಧಿವಂತನಾಗುತ್ತಾನೆ.

ಯಕ್ಷಃ

ಕಿಂ ಬ್ರಾಹ್ಮಣಾನಾಂ ದೇವತ್ವಂ ಕಶ್ಚ ಧರ್ಮಃ ಸತಾಮಿವ ।
ಕಶ್ಚೈಷಾಂ ಮಾನುಷೋ ಭಾವಃ ಕಿಮೇಷಾಮಸತಾಮಿವ ॥೩೫॥

ಯಕ್ಷ– ಬ್ರಾಹ್ಮಣರಿಗೆ ದೇವತ್ವವು ಯಾವುದು? ಸಜ್ಜನರಂತಿರುವ ಧರ್ಮವು ಯಾವುದು? ಮನುಷ್ಯರಿಗೆ ಸಮಾನವಾದ ಅವರ ಅಭಿಪ್ರಾಯವು ಯಾವುದು? ಅಸಜ್ಜನರಿಗೆ ಸಾಧಾರಣವಾದ ನಡತೆಯು ಯಾವುದು?

ಯುಧಿಷ್ಠಿರಃ

ಸ್ವಾಧ್ಯಾಯ ಏಷಾಂ ದೇವತ್ವಂ ತಪ ಏಷಾಂ ಸತಾಮಿವ ।
ಮರಣಂ ಮಾನುಷೋ ಭಾವಃ ಪರಿತ್ಯಾಗೋಽಸತಾಮಿವ ॥೩೬॥

ಯುಧಿಷ್ಠಿರ– ವೇದಾಧ್ಯಯನವು ಇವರಿಗೆ ದೇವಸ್ವಭಾವವಾದುದು. ತಪಸ್ಸು ಸಜ್ಜನರಿಗೆ ಸಮಾನವಾದ ಧರ್ಮ. ಮರಣವು ಅವರ ಮಾನುಷ ಭಾವ. ಪರನಿಂದನೆಯು ಅಸಜ್ಜನರಿಗೆ ಸಮಾನವಾದ ಧರ್ಮ.

ಯಕ್ಷಃ

ಕಿಂ ಕ್ಷತ್ರಿಯಾಣಾಂ ದೇವತ್ವಂ ಕಶ್ಚ ಧರ್ಮಃ ಸತಾಮಿವ ।
ಕಶ್ಚೈಷಾಂ ಮಾನುಷೋ ಭಾವಃ ಕಿಮೇಷಾಮಸತಾಮಿವ ॥೩೭॥

ಯಕ್ಷ– ಕ್ಷತ್ರಿಯರಿಗೆ ದೇವತ್ವವು ಯಾವುದು? ಅವರಿಗೆ ಸಜ್ಜನರಿಗೆ ಸಮಾನವಾದ ಧರ್ಮವು ಯಾವುದು? ಮಾನುಷ ಭಾವವು ಯಾವುದು? ಅವರಿಗೆ ಅಸಜ್ಜನರಿಗೆ ಸಮಾನವಾದ ಧರ್ಮವು (ದೂಷಣವು) ಯಾವುದು?

ಯುಧಿಷ್ಠಿರಃ

ಇಜ್ಯಾಸ್ತ್ರವೇಷಾಂ ದೇವತ್ವಂ ಯಜ್ಞ ಏಷಾಂ ಸತಾಮಿವ ।
ಭಯಂ ವೈ ಮಾನುಷೋಭಾವಃ ಪರಿತ್ಯಾಗೋಽಸತಾಮಿವ ॥೩೮॥

ಯುಧಿಷ್ಠಿರ– ಸರ್ವಜನ ಪೂಜ್ಯತ್ವವು ಕ್ಷತ್ರಿಯರ ದೇವತ್ವವು. ಯಜ್ಞವು ಸಜ್ಜನರಿಗೆ ಸಮಾನವಾದ ಅವರ ಧರ್ಮ. ಭಯವು ಮಾನುಷ ಭಾವ. ಅಸಜ್ಜನರಿಗೆ ಇರುವಂತಹ ಧರ್ಮವು ಪರಿತ್ಯಾಗ (ಬ್ರಾಹ್ಮಣರಿಗೂ ಒಂದು ಪರಿತ್ಯಾಗವಿದೆ. ಆ ಪರಿತ್ಯಾಗವೆಂದರೆ ಪುತ್ರಮಿತ್ರಕಳತಾದಿಗಳನ್ನು ಪರಿತ್ಯಜಿಸಿ ಸಂನ್ಯಾಸಾಶ್ರಮವನ್ನು ಸ್ವೀಕಾರ ಮಾಡುವುದು. ಅದು ಅವರ ಶ್ರೇಷ್ಠವಾದ ಧರ್ಮ. ಪರಿತ್ಯಾಗ ಎಂದರೆ ಅಲ್ಲಿ ಮಹಾತ್ಯಾಗ ಎಂದು ಅರ್ಥ. ಕ್ಷತ್ರಿಯರಿಗೆ ರಾಜ್ಯವನ್ನು ಬಿಟ್ಟು ತಪಸ್ಸಿಗೆ ಹೋಗುವುದು ಪರಿತ್ಯಾಗ ಮತ್ತು ಮಹಾಧರ್ಮ. ಆದರೆ ಸಜ್ಜನರನ್ನು ಪರಿತ್ಯಾಗಮಾಡುವುದು ಬ್ರಾಹ್ಮಣರಿಗಾಗಲೀ, ಕ್ಷತ್ರಿಯರಿಗಾಗಲೀ ಇಲ್ಲದಿರುವ ಅಸಜ್ಜನರಿಗೆ ಮಾತ್ರ ಸಮಾನವಾದ ಧರ್ಮ).

ಯಕ್ಷಃ

ಕಿಮೇಕಂ ಯಜ್ಞಿಯಂ ಸಾಮ ಕಿಮೇಕಂ ಯಜ್ಞಿಯಂ ಯಜುಃ ।
ಕಾ ಚೈಷಾ ವೃಶ್ಚತೇ ಯಜ್ಞಂ ಕಾಂ ಯಜ್ಞೋ ನಾತಿವರ್ತತೇ ॥೩೯॥

ಯಕ್ಷ– ಯಜ್ಞಿಯಂ ಸಾಮ ಎಂಬುದು ಯಾವುದು? ಯಜ್ಞಿಯ ಯಜುಸ್ಸು ಯಾವುದು? ಯಾವುದು ಯಜ್ಞವನ್ನು ನಾಶಮಾಡುತ್ತದೆ? ಯಜ್ಞವು ಯಾವುದನ್ನು ಮೀರುವುದಿಲ್ಲ?

ಯುಧಿಷ್ಠಿರಃ

ಪ್ರಾಣೋ ವೈ ಯಜ್ಞಿಯಂ ಸಾಮ ಮನೋ ವೈ ಯಜ್ಞಿಯಂ ಯಜುಃ
ವಾಗೇಷಾವೃಶ್ಚತೇऽಯಜ್ಞಂ ತಾಂ ಯಜ್ಞೋ ನಾತಿವರ್ತತೇ ॥೪೦॥

ಯುಧಿಷ್ಠಿರ– ಯಜ್ಞಿಯ ಸಾಮವೆಂದರೆ ಪ್ರಾಣ. ಯಜ್ಞಿಯ ಯಜುಸ್ಸು ಎಂದರೆ ಮನಸ್ಸು (ಯಾವ ಸಾಮವನ್ನು ಗಾನಮಾಡಿದರೆ, ಯಾವ ಯಜುಸ್ಸನ್ನು ಪಾಠಮಾಡಿದರೆ ಯಜ್ಞವಿರೋಧಿಗಳು ನಾಶವನ್ನು ಹೊಂದುತ್ತಾರೆಯೋ ಅದು ಯಜ್ಞೀಯ ಸಾಮ ಮತ್ತು ಯಜ್ಞೀಯ ಮನಸ್ಸು. ಅವು ಕ್ರಮವಾಗಿ ವಾಯುದೇವರು ಮತ್ತು ರುದ್ರದೇವರು ಎಂದು ತಿಳಿಯಬೇಕು). ವೇದವಾಕ್ಯವು ಅಯಜ್ಞನನ್ನು, ಅಂದರೆ ಯಜ್ಞವಿರೋಧಿಯನ್ನು ನಾಶಮಾಡುತ್ತದೆ. ಯಜ್ಞವು ಸಾಮ, ಯಜುಸ್ಸಿನ ಮಾತುಗಳನ್ನು ಮೀರುವುದಿಲ್ಲ.

ಯಕ್ಷಃ

ಕಿಂ ಸ್ವಿದಾವಪತಾಂ ಶ್ರೇಷ್ಠಂ ಕಿಂಸ್ವಿನ್ನಿವಪತಾಂ ವರಮ್ ।
ಕಿಂಸ್ವಿತ್ ಪ್ರತಿಷ್ಠಮಾನಾನಾಂ ಕಿಂಸ್ವಿತ್ ಪ್ರಸವತಾಂ ವರಮ್ ॥೪೧॥

ಯಕ್ಷ– ಬೀಜಾವಾಪವನ್ನು ಮಾಡುವವರಿಗೆ ಯಾವುದು ಶ್ರೇಷ್ಠವಾದ ವಸ್ತು ? ಬೀಜಾವಾಪ ಮಾಡುವವರಿಗೆ ತಮ್ಮ ಪ್ರಯತ್ನದಿಂದ ಪಡೆಯಬಹುದಾದ ಶ್ರೇಷ್ಠವಾದ ವಸ್ತುವು ಯಾವುದು? ಸಂಚರಿಸುವವುಗಳಲ್ಲಿ ಶ್ರೇಷ್ಠವಾದುದು ಯಾವುದು? ಹುಟ್ಟುವ ವಸ್ತುಗಳಲ್ಲಿ ಶ್ರೇಷ್ಠವಾದುದು ಯಾವುದು?

ಯುಧಿಷ್ಠಿರಃ

ವರ್ಷಮಾವಪತಾಂ ಶ್ರೇಷ್ಠಂ ಬೀಜಂ ನಿವಪತಾಂ ವರಮ್ ।
ಗಾವಃ ಪ್ರತಿಷ್ಠಮಾನಾನಾಂ ಪುತ್ರಃ ಪ್ರಸವತಾಂ ವರಃ ॥೪೨॥

ಯುಧಿಷ್ಠಿರ– ಮಳೆಯು ಬೀಜಾವಾಪವನ್ನು ಮಾಡುವವರಿಗೆ ತಮ್ಮ ಪ್ರಯತ್ನದಿಂದ ಸಾಧ್ಯವಲ್ಲದ ಶ್ರೇಷ್ಠವಾದ ವಸ್ತು. ಬೀಜಗಳು ಬೀಜಾವಾಪ (ಬಿತ್ತುವವರಿಗೆ) ಮಾಡುವವರಿಗೆ ತಮ್ಮ ಪ್ರಯತ್ನ ಸಾಧ್ಯವಾದ ಶ್ರೇಷ್ಠವಾದ ವಸ್ತು. ಸಂಚರಿಸುವವುಗಳಲ್ಲಿ ಗೋವುಗಳು ಶ್ರೇಷ್ಠವಾದವು. ಜನಿಸುವವರಲ್ಲಿ ಪುತ್ರನು ಶ್ರೇಷ್ಠನಾದವನು.

ಯಕ್ಷಃ

ಇಂದ್ರಿಯಾರ್ಥಾನನುಭವನ್ ಬುದ್ಧಿಮಾಂಲ್ಲೋಕಪೂಜಿತಃ ।
ಸಮ್ಮತಃ ಸರ್ವಭೂತಾನಾಮುಚ್ಛ್ವಸನ್ ಕೋ ನ ಜೀವತಿ ॥೪೩॥

ಇಂದ್ರಿಯಾರ್ಥಗಳನ್ನು ಅನುಭವಿಸುತ್ತಾ ಮೇಧಾವಿಯೂ ಲೋಕಪೂಜಿತನೂ ಆಗಿದ್ದು, ಸರ್ವಭೂತಗಳಿಗೂ ಸಮ್ಮತನಾಗಿದ್ದು ಉಸಿರಾಡುವ ಯಾವನು ಜೀವಿಸುವುದಿಲ್ಲ?

ಯುಧಿಷ್ಠಿರಃ

ದೇವತಾತಿಥಿಭೃತ್ಯಾನಾಂ ಪಿತೄಣಾಮಾತ್ಮನಶ್ಚ ಯಃ ।
ನ ನಿರ್ವಪತಿ ಪಂಚಾನಾಮುಚ್ಛ್ವಸನ್ನ ಸ ಜೀವತಿ ॥೪೪॥

ಯುಧಿಷ್ಠಿರ– ದೇವತೆಗಳು, ಅತಿಥಿಗಳು, ಭೃತ್ಯರು, ಪಿತೃಗಳು ಮತ್ತು ತಾನು ಈ ಐದುಜನರಿಗೆ ಯಾವನು ಯೋಗ್ಯವಾದ ಪೂಜೆಯನ್ನು ಸಲ್ಲಿಸುವುದಿಲ್ಲವೋ ಅವನು ಉಸಿರಾಡುತ್ತಿದ್ದರೂ ಜೀವಿಸುವುದಿಲ್ಲ.

ಯಕ್ಷಃ

ಕಿಂಸ್ವಿದ್ಗುರುತರಂ ಭೂಮೇಃ ಕಿಂಸ್ವಿದುಚ್ಚತರಂ ಚ ಖಾತ್ ।
ಕಿಂಸ್ವಿಚ್ಛೀಘ್ರತರಂ ವಾಯೋಃ ಕಿಂಸ್ವಿದ್ ಬಹುತರಂ ನೃಣಾಮ್(ತೃಣಾತ್) ॥

ಭೂಮಿಗಿಂತ ಭಾರವಾದುದು ಯಾವುದು? ಆಕಾಶಕ್ಕಿಂತ ಎತ್ತರವಾದುದು ಯಾವುದು? ವಾಯುವಿಗಿಂತ ಶೀಘ್ರವಾದುದು ಯಾವುದು? ಮನುಷ್ಯರಿಗೆ ಬಹುತರವಾದುದು ಯಾವುದು?

ಯುಧಿಷ್ಠಿರಃ

ಮಾತಾ ಗುರುತರಾ ಭೂಮೇಃ ಖಾತ್ ಪಿತೋಚ್ಚತರಸ್ಮೃತಃ ।
ಮನಃ ಶೀಘ್ರತರಂ ವಾತಾಚ್ಚಿಂತಾ ಬಹುತರೀ ನೃಣಾಮ್ (ತೃಣಾತ್) ॥

ಯುಧಿಷ್ಠಿರ– ತಾಯಿಯು ಭೂಮಿಗಿಂತ ಭಾರಳಾದವಳು. ತಂದೆಯು ಆಕಾಶಕ್ಕಿಂತಲೂ ಎತ್ತರವಾದವನು. ಮನಸ್ಸು ವಾಯುವಿಗಿಂತ ಶೀಘ್ರವಾದುದು. ಮನುಷ್ಯರಿಗೆ ಚಿಂತೆಯು ಬಹುತರವಾದುದು (ಅನೇಕ ಚಿಂತೆಗಳು ಯಾವಾಗಲೂ ಇರುತ್ತವೆ).

ಯಕ್ಷಃ

ಕಿಂಸ್ವಿತ್ಸುಪ್ತಂ ನ ನಿಮಿಷತಿ ಕಿಂಸ್ವಿಜ್ಜಾತಂ ನ ಚೋಪತಿ ।
ಕಸ್ಯಸ್ವಿದ್ಧೃದಯಂ ನಾಸ್ತಿ ಕಿಂಸ್ವಿದ್ ವೇಗೇನ ವರ್ಧತೇ ॥೪೭॥

ಯಕ್ಷ– ಯಾವುದು ನಿದ್ರಿಸುವಾಗ ಕಣ್ಣನ್ನು ಮುಚ್ಚುವುದಿಲ್ಲ? ಯಾವುದು ಜನಿಸಿದಾಗ ಶಿಶುವಿನಂತೆ ಚಲಿಸುವುದಿಲ್ಲ? ಯಾವುದಕ್ಕೆ ಹೃದಯವಿಲ್ಲ? ಯಾವುದು ವೇಗದಿಂದ ವರ್ಧಿಸುತ್ತದೆ?

ಯುಧಿಷ್ಠಿರಃ

ಮತ್ಸ್ಯಃ ಸುಪ್ತೋ ನ ನಿಮಿಷತ್ಯಂಡಂ ಜಾತಂ ನ ಚೋಪತಿ ।
ಅಶ್ಮನೋ ಹೃದಯಂ ನಾಸ್ತಿ ನದೀ ವೇಗೇನ ವರ್ಧತೇ ॥೪೮॥

ಯುಧಿಷ್ಠಿರ– ಮೀನು ನಿದ್ರಿಸುವಾಗ ಕಣ್ಣುಮುಚ್ಚುವುದಿಲ್ಲ. ಮೊಟ್ಟೆಯು ಜನಿಸಿದಾಗ ಶಿಶುವಿನಂತೆ ಚಲಿಸುವುದಿಲ್ಲ. ಶಿಲೆಗೆ ಹೃದಯವಿಲ್ಲ. ನದಿಯು ವೇಗದಿಂದ ಹೆಚ್ಚಾಗುತ್ತದೆ.

ಯಕ್ಷಃ

ಕಿಂಸ್ವಿತ್ ಪ್ರವಸತೋ ಮಿತ್ರಂ ಕಿಂಸ್ವಿನ್ಮಿತ್ರಂ ಗೃಹೇ ಸತಃ ।
ಆತುರಸ್ಯ ಚ ಕಿಂ ಮಿತ್ರಂ ಕಿಂಸ್ವಿನ್ಮಿತ್ರಂ ಮರಿಷ್ಯತಃ ॥೪೯॥

ಯಕ್ಷ– ಪ್ರವಾಸವನ್ನು ಮಾಡುವವನಿಗೆ ಯಾವುದು ಮಿತ್ರ ? (ಸಹಾಯವನ್ನು ಮಾಡುವವನು) ಮನೆಯಲ್ಲಿ ಇರುವವನಿಗೆ ಯಾವುದು ಮಿತ್ರ ? ರೋಗಿಯಾದವನಿಗೆ ಯಾವುದು ಮಿತ್ರ ? ಮರಣವನ್ನು ಹೊಂದುವವನಿಗೆ ಯಾವುದು ಮಿತ್ರ ?

ಯುಧಿಷ್ಠಿರಃ

ವಿದ್ಯಾ(ಸಾರ್ಥಃ) ಪ್ರವಸತೋ ಮಿತ್ರಂ ಭಾರ್ಯಾ ಮಿತ್ರಂ ಗೃಹೇ ಸತಃ ।
ಆತುರಸ್ಯ ಭಿಷಗ್ ಮಿತ್ರಂ ದಾನಂ ಮಿತ್ರಂ ಮರಿಷ್ಯತಃ ॥೫೦॥

ಯುಧಿಷ್ಠಿರ– ಪ್ರವಾಸವನ್ನು ಮಾಡುವವನಿಗೆ ವಿದ್ಯೆಯು ಮಿತ್ರ . ಮನೆಯಲ್ಲಿ ಇರುವವನಿಗೆ ಪತ್ನಿಯು ಮಿತ್ರಳು. ರೋಗಿಯಾದವನಿಗೆ ವೈದ್ಯನು ಮಿತ್ರ . ಮರಣವನ್ನು ಹೊಂದುವವನಿಗೆ ದಾನವು ಮಿತ್ರ .

ಯಕ್ಷಃ

ಕೋಽತಿಥಿಃ ಸರ್ವಭೂತಾನಾಂ ಕಿಂ ಸ್ವಿದ್ಧರ್ಮಂ ಸನಾತನಮ್ ।
ಅಮೃತಂ ಕಿಂ ಸ್ವಿದ್ರಾಜೇಂದ್ರ ಕಿಂ ಸ್ವಿತ್ಸರ್ವಮಿದಂ ಜಗತ್ ॥೫೧॥

ಯಕ್ಷ– ಸರ್ವಭೂತಗಳಿಗೆ ಅತಿಥಿಯು ಯಾವನು? ಸನಾತನ ಧರ್ಮವು ಯಾವುದು? ರಾಜೇಂದ್ರನೇ, ಅಮೃತವು ಯಾವುದು? ಈ ಸರ್ವಜಗತ್ತು ಯಾವುದು?

ಯುಧಿಷ್ಠಿರಃ

ಅತಿಥಿಃ ಸರ್ವಭೂತಾನಾಮಗ್ನಿಃ ಸೋಮೋ ಗವಾಮೃತಮ್ ।
ಸನಾತನೋಽಮೃತೋ ಧರ್ಮೋ ವಾಯುಃ ಸರ್ವಮಿದಂ ಜಗತ್ ॥

ಯುಧಿಷ್ಠಿರ– ಅಗ್ನಿಯು ಎಲ್ಲರಿಗೂ ಅತಿಥಿ. ಗೋರಸಗಳಾದ ಕ್ಷೀರಾದಿಗಳು ಅಮೃತ. ವೇದಪ್ರತಿಪಾದ್ಯವಾದುದು ಸನಾತನವಾದ ಧರ್ಮ. ಎಲ್ಲ ಜಗತ್ತೂ ವಾಯ್ವಾತ್ಮಕವಾಗಿದೆ.

ಯಕ್ಷಃ

ಕಿಂಸ್ವಿದೇಕೋ ವಿಚರತೇ ಜಾತಃ ಕೋ ಜಾಯತೇ ಪುನಃ ।
ಕಿಂಸ್ವಿದ್ದಿಮಸ್ಯ ಭೈಷಜ್ಯಂ ಕಿಂಸ್ವಿದಾವಪನಂ ಮಹತ್ ॥೫೨॥

ಯಕ್ಷ– ಯಾವುದು ಒಂದೇ ಚಲಿಸುತ್ತದೆ? ಜನಿಸಿದ ಯಾವುದು ಪುನಃ ಜನಿಸುತ್ತದೆ? ಹಿಮಕ್ಕೆ ಯಾವುದು ಔಷಧಿ? ಬೀಜಾವಪನವನ್ನು ಮಾಡುವ ದೊಡ್ಡ ವಸ್ತುವು ಯಾವುದು?

ಯುಧಿಷ್ಠಿರಃ

ಸೂರ್ಯ ಏಕೋ ವಿಚರತೇ ಚಂದ್ರಮಾ ಜಾಯತೇ ಪುನಃ ।
ಅಗ್ನಿರ್ಹಿಮಸ್ಯ ಭೈಷಜ್ಯಂ ಭೂಮಿರಾವಪನಂ ಮಹತ್ ॥೫೩॥

ಯುಧಿಷ್ಠಿರ– ಸೂರ್ಯನು ಒಬ್ಬನೇ ಸಂಚರಿಸುತ್ತಾನೆ. ಚಂದ್ರನು ಪುನಃ ಪುನಃ ಹುಟ್ಟುತ್ತಾನೆ. ಅಗ್ನಿಯು ಹಿಮಕ್ಕೆ ಔಷಧಿ. ಭೂಮಿಯು ದೊಡ್ಡ ಆವಪನ (ಬಿತ್ತುವ ಸ್ಥಳ).

ಯಕ್ಷಃ

ಕಿಂಸ್ವಿದೇಕಪದಂ ಧರ್ಮ್ಯಂ ಕಿಂಸ್ವಿದೇಕಪದಂ ಯಶಃ ।
ಕಿಂಸ್ವಿದೇಕಪದಂ ಸ್ವರ್ಗ್ಯಂ ಕಿಂಸ್ವಿದೇಕಪದಂ ಸುಖಮ್ ॥೫೪॥

ಯಕ್ಷ– ಒಂದು ಪದದಲ್ಲಿ ಧರ್ಮವೆಂದರೆ (ಧರ್ಮಸಾಧನ) ಯಾವುದು? ಒಂದು ಪದದಲ್ಲಿ ಯಶಸ್ಸು ಯಾವುದು? ಒಂದು ಪದದಲ್ಲಿ ಸ್ವರ್ಗಸಾಧನವು ಯಾವುದು? ಒಂದು ಪದದಲ್ಲಿ ಸುಖವು ಯಾವುದು?

ಯುಧಿಷ್ಠಿರಃ

ದಾಕ್ಷ್ಯಮೇಕಪದಂ ಧರ್ಮ್ಯಂ ದಾನಮೇಕಪದಂ ಯಶಃ ।
ಸತ್ಯಮೇಕಪದಂ ಸ್ವರ್ಗ್ಯಂ ಶೀಲಮೇಕಪದಂ ಸುಖಮ್ ॥೫೫॥

ದಾಕ್ಷ್ಯ ಎಂದರೆ ದಾಕ್ಷಿಣ್ಯ ಎಂದರೆ ದಯೆಯು ಒಂದು ಪದದಲ್ಲಿ ಧರ್ಮಸಾಧನ ಎಂದು ಹೇಳಬಹುದು. ದಾನವು ಒಂದು ಪದದಲ್ಲಿ ಯಶಸ್ಸು. ಸತ್ಯವು ಒಂದು ಪದದಲ್ಲಿ ಸ್ವರ್ಗಸಾಧನ. ಶೀಲವು ಒಂದು ಪದದಲ್ಲಿ ಸುಖ.

ಯಕ್ಷಃ

ಕಿಂಸ್ವಿದಾತ್ಮಾ ಮನುಷ್ಯಸ್ಯ ಕಿಂಸ್ವಿದ್ ದೈವಕೃತಃ ಸಖಾ ।
ಉಪಜೀವನಂ ಕಿಂಸ್ವಿದಸ್ಯ ಕಿಂಸ್ವಿದಸ್ಯ ಪರಾಯಣಮ್ ॥೫೬॥

ಯಕ್ಷ– ಮನುಷ್ಯನ ಆತ್ಮ ಎಂದರೆ ಯಾವುದು? ಮನುಷ್ಯನಿಗೆ ದೈವಕೃತವಾದ ಸ್ನೇಹಿತನು ಯಾರು? ಮನುಷ್ಯನ ಉಪಜೀವನವು ಯಾವುದು? ಅವನಿಗೆ ಶ್ರೇಷ್ಠವಾದ ಆಶ್ರಯವು ಯಾವುದು?

ಯುಧಿಷ್ಠಿರಃ

ಪುತ್ರ ಆತ್ಮಾ ಮನುಷ್ಯಸ್ಯ ಭಾರ್ಯಾ ದೈವಕೃತಃ ಸಖಾ ।
ಉಪಜೀವನಂ ಚ ಪರ್ಜನ್ಯೋ ದಾನಮಸ್ಯ ಪರಾಯಣಮ್ ॥೫೭॥

ಯುಧಿಷ್ಠಿರ– ಮನುಷ್ಯನಿಗೆ ಪುತ್ರನು ಆತ್ಮ. ಪತ್ನಿಯು ದೈವಕೃತವಾದ ಸ್ನೇಹಿತಳು. ಪರ್ಜನ್ಯನು (ಪರ್ಜನ್ಯನಿಂದ ಉಂಟಾಗುವ ಮಳೆಯು) ಉಪಜೀವನ. ದಾನವು ಅವನ ಶ್ರೇಷ್ಠವಾದ ಆಶ್ರಯ.

ಯಕ್ಷಃ

ಧನ್ಯಾನಾಮುತ್ತಮಂ ಕಿಂಸ್ವಿದ್ ಧನಾನಾಂ ಸ್ಯಾತ್ ಕಿಮುತ್ತಮಮ್ ।
ಲಾಭಾನಾಮುತ್ತಮಂ ಕಿಂ ಸ್ಯಾತ್ ಸುಖಾನಾಂ ಸ್ಯಾತ್ ಕಿಮುತ್ತಮಮ್॥

ಯಕ್ಷ– ಧನ್ಯರಲ್ಲಿ ಶ್ರೇಷ್ಠವಾದುದು ಯಾವುದು? ಧನಗಳಲ್ಲಿ ಶ್ರೇಷ್ಠವಾದುದು ಯಾವುದು? ಲಾಭಗಳಲ್ಲಿ ಉತ್ತಮವಾದುದು ಯಾವುದು? ಸುಖಗಳಲ್ಲಿ ಉತ್ತಮವಾದುದು ಯಾವುದು?

ಯುಧಿಷ್ಠಿರಃ

ಧನ್ಯಾನಾಮುತ್ತಮಂ ದಾಕ್ಷ್ಯಂ ಧನಾನಾಮುತ್ತಮಂ ಶ್ರುತಮ್ ।
ಲಾಭಾನಾಂ ಶ್ರೇಯ ಆರೋಗ್ಯಂ ಸುಖಾನಾಂ ತುಷ್ಟಿರುತ್ತಮಾ ॥೫೯॥

ಯುಧಿಷ್ಠಿರ– ಧನ್ಯರಲ್ಲಿ (ಧನವುಳ್ಳವರಲ್ಲಿ) ಉತ್ತಮವಾದುದು ದಕ್ಷತೆ. ಧನಗಳಲ್ಲಿ ಉತ್ತಮವಾದುದು ವಿದ್ಯೆ. ಲಾಭಗಳಲ್ಲಿ ಉತ್ತಮವಾದುದು ಆರೋಗ್ಯ. ಸುಖಗಳಲ್ಲಿ ಉತ್ತಮವಾದುದು ತೃಪ್ತಿ.

ಯಕ್ಷಃ

ಕಿಂಸ್ವಿದ್ಧರ್ಮಃ ಪರೋ ಲೋಕೇ ಕಶ್ಚ ಧರ್ಮಃ ಸದಾಫಲಃ ।
ಕಂ ನಿಯಮ್ಯ ನ ಶೋಚಂತಿ ಕೈಶ್ಚ ಸಂಧಿರ್ನ ಜೀರ್ಯತೇ ॥೬೦॥

ಯಕ್ಷ– ಲೋಕದಲ್ಲಿ ಶ್ರೇಷ್ಠವಾದ ಧರ್ಮವು ಯಾವುದು? ಸದಾಫಲವುಳ್ಳ ಧರ್ಮವು ಯಾವುದು? ಯಾವುದನ್ನು ನಿಯಮನ ಮಾಡಿದರೆ ಶೋಕವುಂಟಾಗುವುದಿಲ್ಲ? ಯಾರ ಜೊತೆಯಲ್ಲಿ ಮಾಡಿದ ಸ್ನೇಹವು ನಶಿಸಿ ಹೋಗುವುದಿಲ್ಲ?

ಯುಧಿಷ್ಠಿರಃ

ಆನೃಶಂಸ್ಯಂ ಪರೋ ಧರ್ಮಸ್ತ್ರಯೀಧರ್ಮಃ ಸದಾಫಲಃ ।
ಮನೋ ಯಮ್ಯ ನ ಶೋಚಂತಿ ಸಂಧಿಃ ಸದ್ಭಿರ್ನ ಜೀರ್ಯತೇ ॥೬೧॥

ದಯೆಯು ಶ್ರೇಷ್ಠವಾದ ಧರ್ಮ. ವೇದೋಕ್ತವಾದ ಧರ್ಮವು ಸದಾ ಫಲವನ್ನು ಕೊಡುವಂತಹದು. ಮನಸ್ಸನ್ನು ನಿಗ್ರಹಿಸಿದವರು ಶೋಕಪಡುವುದಿಲ್ಲ. ಸಜ್ಜನರ ಜೊತೆಯಲ್ಲಿ ಮಾಡಿದ ಸ್ನೇಹವು ನಾಶಹೊಂದುವುದಿಲ್ಲ.

(ಸದಾಫಲವನ್ನು ಕೊಡುವ ಧರ್ಮ ಎಂದರೆ ಅದು ತ್ರೇತಾಯುಗದ ಧರ್ಮ. ಕೃತಯುಗದಲ್ಲಿ ಧರ್ಮಫಲವು ನಿಶ್ಚಿತವಾಗಿರುವುದರಿಂದ ಅದರಲ್ಲಿ ಧರ್ಮದ ಫಲದ ಪ್ರಶ್ನೆಯು ಕೂಡುವುದಿಲ್ಲ, ದ್ವಾಪರ ಮತ್ತು ಕಲಿಯುಗಗಳಲ್ಲಿ ಸಂಶಯ ಮತ್ತು ವಿಪರೀತ ಜ್ಞಾನವಿರುವುದರಿಂದ ಧರ್ಮವು ವಿಫಲವೇ ಆಗುತ್ತದೆ ಎಂದು ನಿಶ್ಚಯ. ತ್ರೇತಾಯುಗದಲ್ಲಿ ಮಾತ್ರ ಪುಣ್ಯಶ್ಲೋಕರಾದ ಚಕ್ರವರ್ತಿಗಳು ಮೊದಲಾದವರು

ಅಪ್ರಶಂಸಾ ರಹಿತರಾಗಿರುವುದರಿಂದ ಮಾಡಿದ ಧರ್ಮಕ್ಕೆ ಕ್ಷಯವುಂಟಾಗದೇ ಇರುವ ಕಾರಣದಿಂದ ಅದು ಸದಾ ಫಲವನ್ನು ಕೊಡುವಂತಹದು ಎಂದು ಧರ್ಮ ರಾಜನ ಉತ್ತರದ ಅಭಿಪ್ರಾಯ-ವಾದಿರಾಜರು).

ಯಕ್ಷಃ

ಕಿಂ ನು ಹಿತ್ವಾ ಪ್ರಿಯೋ ಭವತಿ ಕಿಂ ನು ಹಿತ್ವಾ ನ ಶೋಚತಿ ।
ಕಿಂ ನು ಹಿತ್ವಾರ್ಥವಾನ್ ಭವತಿ ಕಿಂ ನು ಹಿತ್ವಾ ಸುಖೀ ಭವೇತ್ ॥

ಯಕ್ಷ- ಯಾವುದನ್ನು ಬಿಟ್ಟರೆ ಪ್ರಿಯವಾಗುತ್ತಾನೆ? ಯಾವುದನ್ನು ಬಿಟ್ಟರೆ ಶೋಕ ಪಡುವುದಿಲ್ಲ? ಯಾವುದನ್ನು ಬಿಟ್ಟರೆ ಧನವಂತನಾಗುತ್ತಾನೆ? ಯಾವುದನ್ನು ಬಿಟ್ಟರೆ ಸುಖಿಯಾಗುತ್ತಾನೆ?

ಯುಧಿಷ್ಠಿರಃ

ಮಾನಂ ಹಿತ್ವಾ ಪ್ರಿಯೋ ಭವತಿ ಕ್ರೋಧಂ ಹಿತ್ವಾ ನ ಶೋಚತಿ ।
ಕಾಮಂ ಹಿತ್ವಾರ್ಥವಾನ್ ಭವತಿ ಲೋಭಂ ಹಿತ್ವಾ ಸುಖೀ ಭವೇತ್ ॥

ಯುಧಿಷ್ಠಿರ- ಅಹಂಕಾರವನ್ನು ಬಿಟ್ಟು ಪ್ರಿಯನಾಗುತ್ತಾನೆ. ಕ್ರೋಧವನ್ನು ಬಿಟ್ಟವನು ಶೋಕಪಡುವುದಿಲ್ಲ. ಕಾಮುವನ್ನು ಬಿಟ್ಟವನು ಧನವಂತನಾಗುತ್ತಾನೆ. ಲೋಭವನ್ನು ಬಿಟ್ಟವನು ಸುಖಿಯಾಗುತ್ತಾನೆ.

ಯಕ್ಷಃ

ಕಮರ್ಥಂ ಬ್ರಾಹ್ಮಣೇ ದಾನಂ ಕಮರ್ಥಂ ನಟನರ್ತಕೇ ।
ಕಮರ್ಥಂ ಭೃತ್ಯೇಷು ಭೃತ್ಯೈಃ ಕಮರ್ಥಂ ಚೈವ ರಾಜಸು ॥೬೫॥

ಯಕ್ಷ- ಬ್ರಾಹ್ಮಣರಿಂಗೆ ದಾನವು ಏತಕ್ಕಾಗಿ? ನಟನರ್ತಕರಿಂಗೆ ಏತಕ್ಕಾಗಿ? ಭೃತ್ಯರಿಗೆ ಏತಕ್ಕಾಗಿ? ಮತ್ತು ರಾಜರಿಂಗೆ ಏತಕ್ಕಾಗಿ?

ಯುಧಿಷ್ಠಿರಃ

ಧರ್ಮಾರ್ಥಂ ಬ್ರಾಹ್ಮಣೇ ದಾನಂ ಯಶೋಽರ್ಥಂ ನಟನರ್ತಕೇ ।
ಭೃತ್ಯೇಷು ಭರಣಾರ್ಥಂ ವೈ ಭಯಾರ್ಥಂ ಚೈವ ರಾಜಸು ॥೬೬॥

ಯುಧಿಷ್ಠಿರಃ

ಧನ್ಯಾನಾಮುತ್ತಮಂ ದಾಕ್ಷ್ಯಂ ಧನಾನಾಮುತ್ತಮಂ ಶ್ರುತಮ್ ।
ಲಾಭಾನಾಂ ಶ್ರೇಯ ಆರೋಗ್ಯಂ ಸುಖಾನಾಂ ತುಷ್ಟಿರುತ್ತಮಾ ॥೫೯॥

ಯುಧಿಷ್ಠಿರ– ಧನ್ಯರಲ್ಲಿ (ಧನವುಳ್ಳವರಲ್ಲಿ) ಉತ್ತಮವಾದುದು ದಕ್ಷತೆ. ಧನಗಳಲ್ಲಿ ಉತ್ತಮವಾದುದು ವಿದ್ಯೆ. ಲಾಭಗಳಲ್ಲಿ ಉತ್ತಮವಾದುದು ಆರೋಗ್ಯ. ಸುಖಗಳಲ್ಲಿ ಉತ್ತಮವಾದುದು ತೃಪ್ತಿ.

ಯಕ್ಷಃ

ಕಿಂಸ್ವಿದ್ಧರ್ಮಃ ಪರೋ ಲೋಕೇ ಕಶ್ಚ ಧರ್ಮಃ ಸದಾಫಲಃ ।
ಕಿಂ ನಿಯಮ್ಯ ನ ಶೋಚಂತಿ ಕೈಶ್ಚ ಸಂಧಿರ್ನ ಜೀರ್ಯತೇ ॥೬೦॥

ಯಕ್ಷ– ಲೋಕದಲ್ಲಿ ಶ್ರೇಷ್ಠವಾದ ಧರ್ಮವು ಯಾವುದು? ಸದಾಫಲವುಳ್ಳ ಧರ್ಮವು ಯಾವುದು? ಯಾವುದನ್ನು ನಿಯಮನ ಮಾಡಿದರೆ ಶೋಕವುಂಟಾಗುವುದಿಲ್ಲ? ಯಾರ ಜೊತೆಯಲ್ಲಿ ಮಾಡಿದ ಸ್ನೇಹವು ನಶಿಸಿ ಹೋಗುವುದಿಲ್ಲ?

ಯುಧಿಷ್ಠಿರಃ

ಆನೃಶಂಸ್ಯಂ ಪರೋ ಧರ್ಮಸ್ತ್ರಯೀಧರ್ಮಃ ಸದಾಫಲಃ ।
ಮನೋ ಯಮ್ಯ ನ ಶೋಚಂತಿ ಸಂಧಿಃ ಸದ್ಭಿರ್ನ ಜೀರ್ಯತೇ ॥೬೧॥

ದಯೆಯು ಶ್ರೇಷ್ಠವಾದ ಧರ್ಮ. ವೇದೋಕ್ತವಾದ ಧರ್ಮವು ಸದಾ ಫಲವನ್ನು ಕೊಡುವಂತಹದು. ಮನಸ್ಸನ್ನು ನಿಗ್ರಹಿಸಿದವರು ಶೋಕಪಡುವುದಿಲ್ಲ. ಸಜ್ಜನರ ಜೊತೆಯಲ್ಲಿ ಮಾಡಿದ ಸ್ನೇಹವು ನಾಶಹೊಂದುವುದಿಲ್ಲ.

(ಸದಾಫಲವನ್ನು ಕೊಡುವ ಧರ್ಮ ಎಂದರೆ ಅದು ತ್ರೇತಾಯುಗದ ಧರ್ಮ. ಕೃತಯುಗದಲ್ಲಿ ಧರ್ಮಫಲವು ನಿಶ್ಚಿತವಾಗಿರುವುದರಿಂದ ಅದರಲ್ಲಿ ಧರ್ಮದ ಫಲದ ಪ್ರಶ್ನೆಯು ಕೂಡುವುದಿಲ್ಲ. ದ್ವಾಪರ ಮತ್ತು ಕಲಿಯುಗಗಳಲ್ಲಿ ಸಂಶಯ ಮತ್ತು ವಿಪರೀತ ಜ್ಞಾನವಿರುವುದರಿಂದ ಧರ್ಮವು ವಿಫಲವೇ ಆಗುತ್ತದೆ ಎಂದು ನಿಶ್ಚಯ. ತ್ರೇತಾಯುಗದಲ್ಲಿ ಮಾತ್ರ ಪುಣ್ಯಶ್ಲೋಕರಾದ ಚಕ್ರವರ್ತಿಗಳು ಮೊದಲಾದವರು

ಆತ್ಮಪ್ರಶಂಸಾ ರಹಿತರಾಗಿರುವುದರಿಂದ ಮಾಡಿದ ಧರ್ಮಕ್ಕೆ ಕ್ಷಯವುಂಟಾಗದೇ ಇರುವ ಕಾರಣದಿಂದ ಅದು ಸದಾ ಫಲವನ್ನು ಕೊಡುವಂತಹದು ಎಂದು ಧರ್ಮ ರಾಜನ ಉತ್ತರದ ಅಭಿಪ್ರಾಯ-ವಾದಿರಾಜರು).

ಯಕ್ಷಃ

ಕಿಂ ನು ಹಿತ್ವಾ ಪ್ರಿಯೋ ಭವತಿ ಕಿಂ ನು ಹಿತ್ವಾ ನ ಶೋಚತಿ ।
ಕಿಂ ನು ಹಿತ್ವಾऽರ್ಥವಾನ್ ಭವತಿ ಕಿಂ ನು ಹಿತ್ವಾ ಸುಖೀ ಭವೇತ್ ॥

ಯಕ್ಷ– ಯಾವುದನ್ನು ಬಿಟ್ಟರೆ ಪ್ರಿಯನಾಗುತ್ತಾನೆ? ಯಾವುದನ್ನು ಬಿಟ್ಟರೆ ಶೋಕ ಪಡುವುದಿಲ್ಲ? ಯಾವುದನ್ನು ಬಿಟ್ಟರೆ ಧನವಂತನಾಗುತ್ತಾನೆ? ಯಾವುದನ್ನು ಬಿಟ್ಟರೆ ಸುಖಿಯಾಗುತ್ತಾನೆ?

ಯುಧಿಷ್ಠಿರಃ

ಮಾನಂ ಹಿತ್ವಾ ಪ್ರಿಯೋ ಭವತಿ ಕ್ರೋಧಂ ಹಿತ್ವಾ ನ ಶೋಚತಿ ।
ಕಾಮಂ ಹಿತ್ವಾऽರ್ಥವಾನ್ ಭವತಿ ಲೋಭಂ ಹಿತ್ವಾ ಸುಖೀ ಭವೇತ್ ॥

ಯುಧಿಷ್ಠಿರ– ಅಹಂಕಾರವನ್ನು ಬಿಟ್ಟು ಪ್ರಿಯನಾಗುತ್ತಾನೆ. ಕ್ರೋಧವನ್ನು ಬಿಟ್ಟವನು ಶೋಕಪಡುವುದಿಲ್ಲ. ಕಾಮವನ್ನು ಬಿಟ್ಟವನು ಧನವಂತನಾಗುತ್ತಾನೆ. ಲೋಭವನ್ನು ಬಿಟ್ಟವನು ಸುಖಿಯಾಗುತ್ತಾನೆ.

ಯಕ್ಷಃ

ಕಿಮರ್ಥಂ ಬ್ರಾಹ್ಮಣೇ ದಾನಂ ಕಿಮರ್ಥಂ ನಟನರ್ತಕೇ ।
ಕಿಮರ್ಥಂ ಚೈವ ಭೃತ್ಯೇಷು ಕಿಮರ್ಥಂ ಚೈವ ರಾಜಸು ॥೬೪॥

ಯಕ್ಷ– ಬ್ರಾಹ್ಮಣರಿಗೆ ದಾನವು ಏತಕ್ಕಾಗಿ? ನಟನರ್ತಕರಿಗೆ ಏತಕ್ಕಾಗಿ? ಭೃತ್ಯರಿಗೆ ಏತಕ್ಕಾಗಿ? ಮತ್ತು ರಾಜರಿಗೆ ಏತಕ್ಕಾಗಿ?

ಯುಧಿಷ್ಠಿರಃ

ಧರ್ಮಾರ್ಥಂ ಬ್ರಾಹ್ಮಣೇ ದಾನಂ ಯಶೋऽರ್ಥಂ ನಟನರ್ತಕೇ ।
ಭೃತ್ಯೇಷು ಭರಣಾರ್ಥಂ ವೈ ಭಯಾರ್ಥಂ ಚೈವ ರಾಜಸು ॥೬೫॥

ಯುಧಿಷ್ಠಿರ– ಧರ್ಮಕ್ಕಾಗಿ ಬ್ರಾಹ್ಮಣರಿಗೆ ದಾನ. ಕೀರ್ತಿಗಾಗಿ ನಟನರ್ತಕರಿಗೆ. ಪೋಷಣೆ ಮಾಡುವುದಕ್ಕೋಸ್ಕರ ಭೃತ್ಯರಿಗೆ ಮತ್ತು ಭಯದಿಂದ ರಾಜರಿಗೆ.

ಯಕ್ಷಃ

ಕೇನ ಸ್ವಿದಾವೃತೋ ಲೋಕಃ ಕೇನ ಸ್ವಿನ್ನ ಪ್ರಕಾಶತೇ ।
ಕೇನ ತ್ಯಜತಿ ಮಿತ್ರಾಣಿ ಕೇನ ಸ್ವರ್ಗಂ ನ ಗಚ್ಛತಿ ॥೬೬॥

ಯಕ್ಷ– ಲೋಕವು ಯಾವುದರಿಂದ ಆವೃತವಾಗಿದೆ? ಯಾವುದರಿಂದ ಪ್ರಕಾಶಿಸುವುದಿಲ್ಲ? ಯಾವುದರಿಂದ ಮಿತ್ರರು ದೂರವಾಗುತ್ತಾರೆ? ಯಾವುದರಿಂದ ಸ್ವರ್ಗವು ತಪ್ಪಿಹೋಗುತ್ತದೆ?

ಯುಧಿಷ್ಠಿರಃ

ಅಜ್ಞಾನೇನಾವೃತೋ ಲೋಕಸ್ತಮಸಾ ನ ಪ್ರಕಾಶತೇ ।
ಲೋಭಾತ್ ತ್ಯಜತಿ ಮಿತ್ರಾಣಿ ಸಂಗಾತ್ ಸ್ವರ್ಗಂ ನ ಗಚ್ಛತಿ ॥೬೭॥

ಯುಧಿಷ್ಠಿರ– ಲೋಕವು ಅಜ್ಞಾನದಿಂದ ಆವೃತವಾಗಿದೆ. ಕತ್ತಲೆಯಲ್ಲಿ ಯಾವುದೂ ಪ್ರಕಾಶಿಸುವುದಿಲ್ಲ. ಲೋಭದಿಂದ ಮಿತ್ರರು ದೂರಹೋಗುತ್ತಾರೆ. ವಿಷಯಾಸಕ್ತಿಯಿಂದ ಸ್ವರ್ಗವನ್ನು ಹೊಂದುವುದಿಲ್ಲ.

ಯಕ್ಷಃ

ಮೃತಃ ಕಥಂ ಸ್ಯಾತ್ ಪುರುಷಃ ಕಥಂ ರಾಷ್ಟ್ರಂ ಮೃತಂ ಭವೇತ್ ।
ಶ್ರಾದ್ಧಂ ಮೃತಂ ಕಥಂ ವಾ ಸ್ಯಾತ್ ಕಥಂ ಯಜ್ಞೋ ಮೃತೋ ಭವೇತ್॥

ಯಕ್ಷ– ಪುರುಷನು ಯಾವುದರಿಂದ ಮೃತನಾಗುತ್ತಾನೆ? ರಾಷ್ಟ್ರವು ಹೇಗೆ ಮೃತವಾಗುತ್ತದೆ? ಶ್ರಾದ್ಧವು ಹೇಗೆ ಮೃತವಾಗುತ್ತದೆ? ಯಜ್ಞವು ಹೇಗೆ ಮೃತವಾಗುತ್ತದೆ?

ಯುಧಿಷ್ಠಿರಃ

ಮೃತೋ ದರಿದ್ರಃ ಪುರುಷೋ ಮೃತಂ ರಾಷ್ಟ್ರಮರಾಜಕಮ್ ।
ಮೃತಮಶ್ರೋತ್ರಿಯಂ ಶ್ರಾದ್ಧಂ ಮೃತೋ ಯಜ್ಞಸ್ತ್ವದಕ್ಷಿಣಃ ॥೬೯॥

ದರಿದ್ರನಾದ ಪುರುಷನು ಮೃತನೆನಿಸುತ್ತಾನೆ. ಅರಾಜಕವಾದ ರಾಷ್ಟ್ರ ಮೃತವಾಗುತ್ತದೆ. ಶ್ರೋತ್ರಿಯನಿಲ್ಲದ ಶ್ರಾದ್ಧವು ಮೃತವಾಗುತ್ತದೆ. ದಕ್ಷಿಣೆಯಿಲ್ಲದ ಯಜ್ಞವು ಮೃತವಾಗುತ್ತದೆ.

ಯಕ್ಷಃ

ಕಾ ದಿಕ್ಕಿಮುದಕಂ ಪ್ರೋಕ್ತಂ ಕಿಮನ್ನಂ ಕಿಂ ಚ ವೈ ವಿಷಮ್ ।
ಶ್ರಾದ್ಧಸ್ಯ ಕಾಲಮಾಖ್ಯಾಹಿ ತತಃ ಪಿಬ ಹರಸ್ವ ಚ ॥೭೦॥

ಯಕ್ಷ– ದಿಕ್ಕು ಎಂದರೆ ಯಾವುದು? ಉದಕವೆಂದರೆ ಯಾವುದು? ಅನ್ನವು ಯಾವುದು? ವಿಷವು ಯಾವುದು? ಶ್ರಾದ್ಧದ ಕಾಲವನ್ನು ಹೇಳು? ಅನಂತರ ನೀರನ್ನು ಕುಡಿದು ತೆಗೆದುಕೊಂಡು ಹೋಗು.

ಯುಧಿಷ್ಠಿರಃ

ಸಂತೋ ದಿಗ್ಜಲಮಾಕಾಶಂ ಗೌರನ್ನಂ ಪ್ರಾರ್ಥನಾ ವಿಷಮ್ ।
ಶ್ರಾದ್ಧಸ್ಯ ಬ್ರಾಹ್ಮಣಃ ಕಾಲಃ ಕಥಂ ವಾ ಯಕ್ಷ ಮನ್ಯಸೇ ॥೭೧॥

ಯುಧಿಷ್ಠಿರ– ಸಜ್ಜನರು ದಿಕ್ಕು. ಆಕಾಶವು ಜಲ. ಗೋವುಗಳು ಅನ್ನ. ಬೇಡುವುದು ವಿಷ. ಯೋಗ್ಯಬ್ರಾಹ್ಮಣನೇ ಶ್ರಾದ್ಧಕಾಲ. ಯಕ್ಷನೇ ನಿನ್ನ ಅಭಿಪ್ರಾಯವೇನು?

ಯಕ್ಷಃ

ವ್ಯಾಖ್ಯಾತಾ ಮೇ ತ್ವಯಾ ಪ್ರಶ್ನಾ ಯಥಾತಥ್ಯಂ ಪರಂತಪ ।
ಪುರುಷಂ ತ್ವಿದಾನೀಮಾಖ್ಯಾಹಿ ಯಶ್ಚ ಸರ್ವಧನೀಃ ನರಃ ॥೭೨॥

ಯಕ್ಷ– ಪರಂತಪನೇ, ನನ್ನ ಪ್ರಶ್ನೆಗಳಿಗೆ ನೀನು ಸರಿಯಾಗಿ ಉತ್ತರವನ್ನು ಹೇಳಿದ್ದೀಯೆ. ಈಗ ಪುರುಷ ಎಂದರೆ ಯಾರು? ಸರ್ವಧನವುಳ್ಳ ನರನು ಯಾರು ಎಂದು ಹೇಳು.

ಯಕ್ಷಃ

ತಪಃ ಕಿಂಲಕ್ಷಣಂ ಪ್ರೋಕ್ತಂ ಕೋ ದಮಶ್ಚ ಪ್ರಕೀರ್ತಿತಃ ।
ಕ್ಷಮಾ ಚ ಕಾ ಪರಾ ಪ್ರೋಕ್ತಾ ಕಾ ಚ ಹ್ರೀಃ ಪರಿಕೀರ್ತಿತಾ ॥೭೨.೧॥

ಯಕ್ಷ– ತಪಸ್ಸಿನ ಲಕ್ಷಣವೇನು? ಯಾವುದನ್ನು ದಮದ ಲಕ್ಷಣವೆಂದು ಹೇಳುತ್ತಾರೆ? ಯಾವುದು ಶ್ರೇಷ್ಠವಾದ ಕ್ಷಮೆ? ನಾಚಿಕೆ ಎಂದರೆ ಯಾವುದು?

ಯುಧಿಷ್ಠಿರಃ

ತಪಃ ಸ್ವಧರ್ಮವರ್ತಿತ್ವಂ ಮನಸೋ ದಮನಂ ದಮಃ ।
ಕ್ಷಮಾ ದ್ವಂದ್ವಸಹಿಷ್ಣುತ್ವಂ ಹ್ರೀರಕಾರ್ಯನಿವರ್ತನಮ್ ॥೭೨.೨॥

ಯುಧಿಷ್ಠಿರ– ತನ್ನ ಧರ್ಮವನ್ನು ಆಚರಿಸುವುದೇ ತಪಸ್ಸು. ಮನಸ್ಸನ್ನು ನಿಗ್ರಹಿಸುವುದು ದಮ. ದ್ವಂದ್ವಸಹಿಷ್ಣುತೆಯೇ ಕ್ಷಮೆ. ಅಕಾರ್ಯವನ್ನು ಮಾಡದಿರುವುದೇ ನಾಚಿಕೆ.

ಯಕ್ಷಃ

ಕಿಂ ಜ್ಞಾನಂ ಪ್ರೋಚ್ಯತೇ ರಾಜನ್ ಕಃ ಶಮಶ್ಚ ಪ್ರಕೀರ್ತಿತಃ ।
ದಯಾ ಚ ಕಾ ಪರಾ ಪ್ರೋಕ್ತಾ ಕಿಂ ಚಾರ್ಜವಮುದಾಹೃತಮ್॥೭೨.೩॥

ಯಕ್ಷ– ರಾಜನೇ, ಜ್ಞಾನವು ಯಾವುದು? ಶಮವೆಂದರೆ ಯಾವುದು? ಶ್ರೇಷ್ಠವಾದ ದಯೆಯಾವುದು? ಯಾವುದನ್ನು ಆರ್ಜವೆಂದು ಕರೆಯುತ್ತಾರೆ?

ಯುಧಿಷ್ಠಿರಃ

ಜ್ಞಾನಂ ತತ್ತ್ವಾರ್ಥಸಂಬೋಧಃ ಶಮಶ್ಚಿತ್ತಪ್ರಶಾಂತತಾ ।
ದಯಾ ಸರ್ವಸುಖೈಷಿತ್ವಮಾರ್ಜವಂ ಸಮಚಿತ್ತತಾ ॥೭೨.೪॥

ಯುಧಿಷ್ಠಿರ– ತತ್ತ್ವಾರ್ಥವಿಷಯಕವಾದುದು ಜ್ಞಾನ. ಮನಸ್ಸಿನ ಶಾಂತಿಯು ಶಮ. ಎಲ್ಲರಿಗೂ ಸುಖವನ್ನು ಬಯಸುವುದು ದಯೆ. ಸಮಚಿತ್ತತೆಯು ಆರ್ಜವ.

ಯಕ್ಷಃ

ಕಃ ಶತ್ರುರ್ದುರ್ಜಯಃ ಪುಂಸಾಂ ಕಶ್ಚ ವ್ಯಾಧಿರನಂತಕಃ ।
ಕೀದೃಶಶ್ಚ ಸ್ಮೃತಃ ಸಾಧುರಸಾಧುಃ ಕೀದೃಶಃ ಸ್ಮೃತಃ ॥೭೨.೫॥

ಯಕ್ಷ– ಮನುಷ್ಯರಿಗೆ ದುರ್ಜಯನಾದ ಶತ್ರುವು ಯಾವನು? ಅಂತವಿಲ್ಲದ ವ್ಯಾಧಿಯು ಯಾವುದು? ಯಾವನನ್ನು ಸಾಧುವೆಂದು ಕರೆಯುತ್ತಾರೆ? ಅಸಾಧುವು ಎಂತಹವನು?

ಯುಧಿಷ್ಠಿರಃ

ಕ್ರೋಧಃ ಸುದುರ್ಜಯಃ ಶತ್ರುರ್ಲೋಭೋ ವ್ಯಾಧಿರನಂತಕಃ ।
ಸರ್ವಭೂತಹಿತಃ ಸಾಧುರಸಾಧುರ್ನಿರ್ದಯಃ ಸ್ಮೃತಃ ॥೭೨.೬॥

ಯುಧಿಷ್ಠಿರ– ಕ್ರೋಧವು ದುರ್ಜಯನಾದ ಶತ್ರು. ಲೋಭವು ಅಂತವಿಲ್ಲದ ವ್ಯಾಧಿ. ಸರ್ವಭೂತಗಳಲ್ಲಿ ಹಿತನಾದವನು ಸಾಧು. ನಿರ್ದಯನಾದವನು ಅಸಾಧುವೆಂದು ಕರೆಯಲ್ಪಡುತ್ತಾನೆ.

ಯಕ್ಷಃ

ಕೋ ಮೋಹಃ ಪ್ರೋಚ್ಯತೇ ರಾಜನ್ ಕಶ್ಚ ಮಾನಃ ಪ್ರಕೀರ್ತಿತಃ ।
ಕಿಮಾಲಸ್ಯಂ ಚ ವಿಜ್ಞೇಯಂ ಕಶ್ಚ ಶೋಕಃ ಪ್ರಕೀರ್ತಿತಃ ॥೭೨.೭॥

ಯಕ್ಷ– ರಾಜನೇ, ಮೋಹವೆಂದರೆ ಯಾವುದು? ಮಾನ ಎಂದರೆ ಏನು? ಯಾವುದನ್ನು ಆಲಸ್ಯವೆಂದು ತಿಳಿಯಬೇಕು? ಯಾವುದು ಶೋಕವೆಂದು ಹೇಳಲ್ಪಡುತ್ತದೆ?

ಯುಧಿಷ್ಠಿರಃ

ಮೋಹೋ ಹಿ ಧರ್ಮಮೂಢತ್ವಂ ಮಾನಸ್ತ್ವಾತ್ಮಾಭಿಮಾನಿತಾ ।
ಧರ್ಮನಿಷ್ಕ್ರಿಯತಾऽऽಲಸ್ಯಂ ಶೋಕಸ್ತ್ವಜ್ಞಾನಮುಚ್ಯತೇ ॥೭೨.೮॥

ಯುಧಿಷ್ಠಿರ– ಮೋಹವೆಂದರೆ ಧರ್ಮಜ್ಞಾನದ ಅಭಾವ. ಮಾನವೆಂದರೆ ಆತ್ಮಾಭಿಮಾನ- ಅಹಂಕಾರ. ಆಲಸ್ಯವೆಂದರೆ ಧರ್ಮಕಾರ್ಯದಲ್ಲಿ ತೊಡಗದಿರುವುದು. ಅಜ್ಞಾನವು ಶೋಕವೆಂದು ಕರೆಯಲ್ಪಡುತ್ತದೆ.

ಯಕ್ಷಃ

ಕಿಂ ಸ್ಥೈರ್ಯಮೃಷಿಭಿಃ ಪ್ರೋಕ್ತಂ ಕಿಂ ಚ ಧೈರ್ಯಮುದಾಹೃತಮ್ ।
ಸ್ನಾನಂ ಚ ಕಿಂ ಪರಂ ಪ್ರೋಕ್ತಂ ದಾನಂ ಚ ಕಿಮಿಹೋಚ್ಯತೇ ॥೭೨.೯॥

ಯಕ್ಷ– ಋಷಿಗಳು ಹೇಳಿದ ಸ್ಥೈರ್ಯವು ಯಾವುದು? ಯಾವುದನ್ನು ಧೈರ್ಯವೆಂದು ಕರೆಯುತ್ತಾರೆ? ಶ್ರೇಷ್ಠವಾದ ಸ್ನಾನವು ಯಾವುದು? ಶ್ರೇಷ್ಠವಾದ ದಾನವು ಯಾವುದು?

ಯುಧಿಷ್ಠಿರಃ

ಸ್ವಧರ್ಮೇ ಸ್ಥಿರತಾ ಸ್ಥೈರ್ಯಂ ಧೈರ್ಯಮಿಂದ್ರಿಯನಿಗ್ರಹಃ ।
ಸ್ನಾನಂ ಮನೋಮಲತ್ಯಾಗೋ ದಾನಂ ವೈ ಭೂತರಕ್ಷಣಮ್ ॥೭೨.೧೦॥

ಯುಧಿಷ್ಠಿರ– ತನ್ನ ಧರ್ಮದಿಂದ ವಿಚಲಿತನಾಗದಿರುವುದು ಸ್ಥೈರ್ಯ. ಧೈರ್ಯವೆಂದರೆ ಇಂದ್ರಿಯನಿಗ್ರಹ. ಮನಸ್ಸಿನ ಶುದ್ಧಿಯು ಸ್ನಾನ. ಎಲ್ಲ ಪ್ರಾಣಿಗಳ ರಕ್ಷಣೆಯು ದಾನ.

ಯಕ್ಷಃ

ಕಃ ಪಂಡಿತಃ ಪುಮಾನ್ ಜ್ಞೇಯೋ ನಾಸ್ತಿಕಃ ಕಶ್ಚ ಉಚ್ಯತೇ ।
ಕೋ ಮೂರ್ಖಃ ಕಶ್ಚ ಕಾಮಃ ಸ್ಯಾತ್ ಕೋ ಮತ್ಸರ ಇತಿ ಸ್ಮೃತಃ ॥

ಯಕ್ಷ– ಯಾವನನ್ನು ಪಂಡಿತನೆಂದು ತಿಳಿಯಬೇಕು? ಯಾವನು ನಾಸ್ತಿಕನೆಂದು ಕರೆಯಲ್ಪಡುತ್ತಾನೆ? ಮೂರ್ಖನು ಯಾರು? ಕಾಮವು ಯಾವುದು? ಯಾವುದನ್ನು ಮತ್ಸರವೆಂದು ಕರೆಯುತ್ತಾರೆ?

ಯುಧಿಷ್ಠಿರಃ

ಧರ್ಮಜ್ಞಃ ಪಂಡಿತೋ ಜ್ಞೇಯೋ ನಾಸ್ತಿಕೋ ಮೂರ್ಖ ಉಚ್ಯತೇ ।
ಕಾಮಃ ಸಂಸಾರಹೇತುಶ್ಚ ಹೃತ್ತಾಪೋ ಮತ್ಸರಃ ಸ್ಮೃತಃ ॥೭೨.೧೨॥

ಯುಧಿಷ್ಠಿರ– ಧರ್ಮಜ್ಞನನ್ನು ಪಂಡಿತನೆಂದು ತಿಳಿಯಬೇಕು. ಮೂರ್ಖನು ನಾಸ್ತಿಕನೆಂದು ಕರೆಯಲ್ಪಡುತ್ತಾನೆ. ಸಂಸಾರಕ್ಕೆ ಕಾರಣವಾದುದಕ್ಕೆ ಕಾಮ ಎಂದು ಹೆಸರು. ಮನುಷ್ಯನ ಹೃದಯ ತಾಪವು ಮತ್ಸರವೆಂದು ಕರೆಯಲ್ಪಡುತ್ತದೆ.

ಯಕ್ಷಃ

ಕೋಽಹಂಕಾರ ಇತಿ ಪ್ರೋಕ್ತಃ ಕಶ್ಚ ಡಂಭಃ ಪ್ರಕೀರ್ತಿತಃ ।
ಕಿಂ ತದ್ ದೈವಂ ಪರಂ ಪ್ರೋಕ್ತಂ ಕಿಂ ತತ್ ಪೈಶುನ್ಯಮುಚ್ಯತೇ ॥

ಯಕ್ಷ– ಅಹಂಕಾರವೆಂದರೆ ಯಾವುದು? ಡಂಭವೆಂದು ಯಾವುದನ್ನು ಕರೆಯುತ್ತಾರೆ? ಶ್ರೇಷ್ಠವಾದ ದೈವವೆಂದರೆ ಯಾವುದು? ಪೈಶುನ್ಯವೆಂದರೆ ಯಾವುದು?

ಯುಧಿಷ್ಠಿರಃ

ಮಹಾಜ್ಞಾನಮಹಂಕಾರೋ ಡಂಭೋ ಧರ್ಮಧ್ವಜೋಚ್ಛ್ರಯಃ ।
ದೈವಂ ದಾನಫಲಂ ಪ್ರೋಕ್ತಂ ಪೈಶುನ್ಯಂ ಪರದೂಷಣಮ್ ॥೭೨.೧೪॥

ಯುಧಿಷ್ಠಿರ– ಮಹಾ ಜ್ಞಾನವನ್ನು ಅಹಂಕಾರವೆಂದು ಕರೆಯುತ್ತಾರೆ. ಧರ್ಮದಂತೆ ಕಾಣುವ ಧರ್ಮವಲ್ಲದ ಕಾರ್ಯವನ್ನು ಆಚರಿಸುವುದು ಡಂಭ. ಯಾವುದು ಮಾಡಿದ ದಾನಕ್ಕೆ ಫಲವನ್ನು ಕೊಡುವುದೋ ಅದು ಶ್ರೇಷ್ಠವಾದ ದೈವ. ಪರನಿಂದೆಯು ಪೈಶುನ್ಯವೆನಿಸುತ್ತದೆ.

ಯಕ್ಷಃ

ಧರ್ಮಶ್ಚಾರ್ಥಶ್ಚ ಕಾಮಶ್ಚ ಪರಸ್ಪರವಿರೋಧಿನಃ ।
ಏಷಾಂ ನಿತ್ಯವಿರುದ್ಧಾನಾಂ ಕಥಮೇಕತ್ರ ಸಂಗಮಃ ॥೭೨.೧೫॥

ಯಕ್ಷ– ಧರ್ಮ ಅರ್ಥ ಮತ್ತು ಕಾಮಗಳು ಪರಸ್ಪರ ವಿರೋಧಿಗಳು. ಯಾವಾಗಲೂ ವಿರುದ್ಧವಾದ ಇವುಗಳು ಒಂದುಕಡೆ ಹೇಗೆ ಸೇರುತ್ತವೆ?

ಯುಧಿಷ್ಠಿರಃ

ಯದಾ ಧರ್ಮಶ್ಚ ಭಾರ್ಯಾ ಚ ಪರಸ್ಪರವಶಾನುಗೌ ।
ತದಾ ಧರ್ಮಾರ್ಥಕಾಮಾನಾಂ ತ್ರಯಾಣಾಮಪಿ ಸಂಗಮಃ ॥೭೨.೧೬॥

ಯುಧಿಷ್ಠಿರ– ಯಾವಾಗ ಧರ್ಮವು ಮತ್ತು ಪತ್ನಿಯು ಪರಸ್ಪರ ವಶರಾಗಿರುತ್ತಾರೆಯೋ ಆಗ ಧರ್ಮಾರ್ಥಕಾಮ ಈ ಮೂರಕ್ಕೂ ಸಂಗಮ ಉಂಟಾಗುತ್ತದೆ.

ಯಕ್ಷಃ

ಅಕ್ಷಯೋ ನರಕಃ ಕೇನ ಪ್ರಾಪ್ಯತೇ ಭರತರ್ಷಭ ।
ಏತನ್ಮೇ ಪೃಚ್ಛತಃ ಪ್ರಶ್ನಂ ತಚ್ಛೀಘ್ರಂ ವಕ್ತುಮರ್ಹಸಿ ॥೭೨.೧೭॥

ಯಕ್ಷ– ಭರತರ್ಷಭನೇ, ಅಕ್ಷಯವಾದ ನರಕವು ಯಾವುದರಿಂದ ಪ್ರಾಪ್ತವಾಗುತ್ತದೆ? ಈ ಪ್ರಶ್ನೆಯನ್ನು ಕೇಳುತ್ತಿರುವ ನನಗೆ ಶೀಘ್ರವಾಗಿ ಉತ್ತರವನ್ನು ಹೇಳು.

ಯುಧಿಷ್ಠಿರಃ

ಬ್ರಾಹ್ಮಣಂ ಸ್ವಯಮಾಹೂಯ ಯಾಚಮಾನಮಕಿಂಚನಮ್ ।
ಪಶ್ಚಾನ್ನಾಸ್ತೀತಿ ಯೋ ಬ್ರೂಯಾತ್ ಸೋಽಕ್ಷಯಂ ನರಕಂ ವ್ರಜೇತ್ ॥

ಯುಧಿಷ್ಠಿರ– ಭಿಕ್ಷೆಯನ್ನು ಬೇಡುವ ಧನಹೀನನಾದ ಬ್ರಾಹ್ಮಣನನ್ನು ತಾನಾಗಿಯೇ ಆಹ್ವಾನವನ್ನು ಮಾಡಿ ಅನಂತರ ಯಾವನು ಇಲ್ಲವೆಂದು ಹೇಳುತ್ತಾನೆಯೋ ಅವನು ಅಕ್ಷಯವಾದ ನರಕವನ್ನು ಹೊಂದುತ್ತಾನೆ.

ವೇದೇಷು ಧರ್ಮಶಾಸ್ತ್ರೇಷು ಮಿಥ್ಯಾ ಯೋ ವೈ ದ್ವಿಜಾತಿಷು ।
ದೇವೇಷು ಪಿತೃಧರ್ಮೇಷು ಸೋಽಕ್ಷಯಂ ನರಕಂ ವ್ರಜೇತ್॥೭೨.೧೯॥

ಯಾವನು ವೇದಗಳ ವಿಷಯದಲ್ಲಿಯೂ, ಧರ್ಮಶಾಸ್ತ್ರ ವಿಷಯದಲ್ಲಿಯೂ, ಬ್ರಾಹ್ಮಣರ ವಿಷಯದಲ್ಲಿಯೂ, ದೇವತೆಗಳ ವಿಷಯದಲ್ಲಿಯೂ, ಪಿತೃಧರ್ಮಗಳ ವಿಷಯದಲ್ಲಿಯೂ ಸುಳ್ಳಾಗಿ ನಡೆದುಕೊಳ್ಳುತ್ತಾನೆಯೋ ಅವನು ನರಕಕ್ಕೆ ಹೋಗುತ್ತಾನೆ.

ವಿದ್ಯಮಾನೇ ಧನೇ ಲೋಭಾದ್ ದಾನಭೋಗವಿವರ್ಜಿತಃ ।
ಪಶ್ಚಾನ್ನಾಸ್ತೀತಿ ಯೋ ಬ್ರೂಯಾತ್ ಸೋಽಕ್ಷಯಂ ನರಕಂ ವ್ರಜೇತ್ ॥

ತನ್ನ ಬಳಿ ಧನವಿದ್ದರೂ ಲೋಭದಿಂದ ದಾನವನ್ನು ಕೊಡದೆ ಭೋಗವನ್ನೂ ಮಾಡದೆ ಯಾವನು ತನ್ನ ಬಳಿ ಧನವಿಲ್ಲವೆಂದು ಹೇಳುತ್ತಾನೆಯೋ ಅವನು ಅಕ್ಷಯವಾದ ನರಕವನ್ನು ಹೊಂದುತ್ತಾನೆ.

ಯಕ್ಷಃ

ರಾಜನ್ ಕುಲೇನ ವೃತ್ತೇನ ಸ್ವಾಧ್ಯಾಯೇನ ಶ್ರುತೇನ ವಾ ।
ಬ್ರಾಹ್ಮಣ್ಯಂ ಕೇನ ಭವತಿ ಪ್ರಬ್ರೂಹ್ಯೇತತ್ ಸುನಿಶ್ಚಿತಮ್ ॥೭೨.೨೧॥

ಯಕ್ಷ– ರಾಜನೇ, ಕುಲದಿಂದಲೋ, ನಡತೆಯಿಂದಲೋ, ಸ್ವಾಧ್ಯಾಯದಿಂದಲೋ ಅಥವಾ ವಿದ್ಯೆಯಿಂದಲೋ ಬ್ರಾಹ್ಮಣ್ಯವು ಹೇಗೆ ಉಂಟಾಗುತ್ತದೆ ಎಂಬುದನ್ನು ಸುನಿಶ್ಚಿತವಾಗಿ ಹೇಳು.

ಯುಧಿಷ್ಠಿರಃ

ಶೃಣು ಯಕ್ಷ ಕುಲಂ ತಾತ ನ ಸ್ವಾಧ್ಯಾಯೋ ನ ಚ ಶ್ರುತಮ್ ।
ಕಾರಣಂ ಹಿ ದ್ವಿಜತ್ವೇ ಚ ವೃತ್ತಮೇವ ನ ಸಂಶಯಃ ॥೭೨.೨೨॥

ಯುಧಿಷ್ಠಿರ– ಯಕ್ಷನೇ ಕೇಳು. ಪ್ರೀತಿಪಾತ್ರನೇ, ಕುಲವಾಗಲೀ, ಸ್ವಾಧ್ಯಾಯವಾಗಲೀ, ವಿದ್ಯೆಯಾಗಲೀ ಬ್ರಾಹ್ಮಣ್ಯವನ್ನು ಕುರಿತು ಕಾರಣವಲ್ಲ. ಶೀಲವೇ ಕಾರಣ. ಇದರಲ್ಲಿ ಸಂಶಯವಿಲ್ಲ.

ವೃತ್ತಂ ಯತ್ನೇನ ಸಂರಕ್ಷ್ಯಂ ಬ್ರಾಹ್ಮಣೇನ ವಿಶೇಷತಃ ।
ಅಕ್ಷೀಣವೃತ್ತೋ ನ ಕ್ಷೀಣೋ ವೃತ್ತತಸ್ತು ಹತೋ ಹತಃ ॥೭೨.೨೩॥

ಬ್ರಾಹ್ಮಣನಾದವನು ವಿಶೇಷವಾಗಿ ಪ್ರಯತ್ನಪೂರ್ವಕವಾಗಿ ತನ್ನ ಶೀಲವನ್ನು ರಕ್ಷಿಸಿಕೊಳ್ಳಬೇಕು. ಯಾವನು ತನ್ನ ಶೀಲವನ್ನು ಕಳೆದುಕೊಂಡಿಲ್ಲವೋ ಅವನು ಕ್ಷೀಣನಲ್ಲ. ಶೀಲಹೀನನಾದವನು ನಿಜವಾಗಿಯೂ ಹತನಾದವನು.

ಪಠಕಾಃ ಪಾಠಕಾಶ್ಚೈವ ಯೇ ಚಾನ್ಯೇ ಶಾಸ್ತ್ರಚಿಂತಕಾಃ ।
ಸರ್ವೇ ವ್ಯಸನಿನೋ ಮೂರ್ಖಾ ಯಃ ಕ್ರಿಯಾವಾನ್ ಸ ಪಂಡಿತಃ ॥

ಚಟಗಳಿಗೆ ತುತ್ತಾಗಿ ಅಧ್ಯಯನ ಮಾಡುವವರು, ಅಧ್ಯಾಪನ ಮಾಡುವವರೂ ಮತ್ತು ಉಳಿದ ಶಾಸ್ತ್ರಚಿಂತಕರೂ ಎಲ್ಲರೂ ಮೂರ್ಖರು. ಯಾವನು ಸತ್ಕ್ರಿಯೆಯನ್ನು ಆಚರಿಸುತ್ತಾನೆಯೋ ಅವನೇ ಪಂಡಿತ.

ಚತುರ್ವೇದೋಽಪಿ ದುರ್ವೃತ್ತಃ ಸ ಶೂದ್ರಾದತಿರಿಚ್ಯತೇ ।
ಯೋಽಗ್ನಿಹೋತ್ರಪರೋ ದಾಂತಃ ಸ ಬ್ರಾಹ್ಮಣ ಇತಿ ಸ್ಮೃತಃ ॥೭೨.೨೫॥

ನಾಲ್ಕುವೇದಗಳನ್ನು ಹೊಂದಿದ್ದರೂ ಯಾವನು ದುರ್ನಡತೆಯನ್ನು ಹೊಂದಿದ್ದಾನೆಯೋ ಅವನು ಶೂದ್ರನಿಗಿಂತ ಕೆಳಗಿನವನು. ಯಾವನು ಇಂದ್ರಿಯ ನಿಗ್ರಹವನ್ನು ಹೊಂದಿ ಅಗ್ನಿಹೋತ್ರಪರನಾಗಿರುತ್ತಾನೆಯೋ ಅವನು ಬ್ರಾಹ್ಮಣನೆಂದು ಕರೆಯಲ್ಪಡುತ್ತಾನೆ.

ಯಕ್ಷಃ

ಪ್ರಿಯವಚನವಾದೀ ಕಿಂ ಲಭತೇ ವಿಮೃಶಿತಕಾರ್ಯಕರಃ ಕಿಂ ಲಭತೇ ।
ಬಹುಮಿತ್ರಕರಃ ಕಿಂ ಲಭತೇ ಧರ್ಮರತಃ ಕಿಂ ಲಭತೇ ಕಥಯ ॥

ಯಕ್ಷ– ಪ್ರಿಯವಚನವನ್ನು ಮಾತನಾಡುವವನು ಏನನ್ನು ಪಡೆಯುತ್ತಾನೆ? ವಿಮರ್ಶೆ ಮಾಡಿ ಕಾರ್ಯವನ್ನು ಮಾಡುವವನು ಏನನ್ನು ಪಡೆಯುತ್ತಾನೆ? ಅನೇಕ ಮಿತ್ರರನ್ನು ಸಂಪಾದಿಸುವವನು ಏನನ್ನು ಪಡೆಯುತ್ತಾನೆ? ಧರ್ಮರತನಾದವನು ಏನನ್ನು ಪಡೆಯುತ್ತಾನೆ ಎಂದು ಹೇಳು.

ಯುಧಿಷ್ಠಿರಃ

ಪ್ರಿಯವಚನವಾದೀ ಪ್ರಿಯೋ ಭವತಿ
ವಿಮೃಶಿತಕಾರ್ಯಕರೋಽಧಿಕಂ ಜಯತಿ ।
ಬಹುಮಿತ್ರಕರಃ ಸುಖಂ ವಸತೇ
ಯಶ್ಚ ಧರ್ಮರತಃ ಸ ಗತಿಂ ಲಭತೇ ॥೭೨.೨೭॥

ಯುಧಿಷ್ಠಿರ– ಪ್ರಿಯವಚನವಾದಿಯು ಪ್ರಿಯನಾಗುತ್ತಾನೆ. ವಿಮರ್ಶೆ ಮಾಡಿ ಕಾರ್ಯವನ್ನು ಮಾಡುವವನು ಎಲ್ಲರಿಗಿಂತಲೂ ಹೆಚ್ಚಾಗಿ ಜಯಿಸುತ್ತಾನೆ. ಅನೇಕ ಮಿತ್ರರನ್ನು ಸಂಪಾದಿಸಿದವನು ಸುಖವಾಗಿ ವಾಸಮಾಡುತ್ತಾನೆ. ಧರ್ಮರತನಾದವನು ಮಾತ್ರ ಸದ್ಗತಿಯನ್ನು ಪಡೆಯುತ್ತಾನೆ.

ಯಕ್ಷಃ

ಕೋ ಮೋದತೇ ಕಿಮಾಶ್ಚರ್ಯಂ ಕಃ ಪಂಥಾಃ ಕಾ ಚ ವಾರ್ತಿಕಾ ।
ಮಮೈತಾಂಶ್ಚತುರಃ ಪ್ರಶ್ನಾನ್ ಕಥಯಿತ್ವಾ ಜಲಂ ಪಿಬ ।
(ವದ ಮೇ ಚತುರಃ ಪ್ರಶ್ನಾನ್ಮೃತಾ ಜೀವಂತು ಬಾಂಧವಾಃ) ॥

ಯಕ್ಷ– ಸಂತೋಷಪಡುವವನು ಯಾವನು? ಆಶ್ಚರ್ಯವೆಂದರೆ ಯಾವುದು? ಮಾರ್ಗವು ಯಾವುದು? ವಾರ್ತಿಕ ಎಂದರೆ ಯಾವುದು? ಈ ನಾಲ್ಕು ಪ್ರಶ್ನೆಗಳಿಗೆ ಉತ್ತರವನ್ನು ಹೇಳಿ ನೀರನ್ನು ಕುಡಿ ಮತ್ತು ಮೃತರಾದ ನಿನ್ನ ಬಂಧುಗಳು ಜೀವಂತರಾಗಲಿ.

ಯುಧಿಷ್ಠಿರಃ

ಪಂಚಮೇऽಹನಿ ಷಷ್ಠೇ ವಾ ಶಾಕಂ ಪಚತಿ ಸ್ವೇ ಗೃಹೇ ।
ಅನೃಣೇ ಚಾಪ್ರವಾಸೀ ಚ ಸ ವಾರಿಚರ ಮೋದತೇ ॥೭೨.೨೯॥

ಯುಧಿಷ್ಠಿರ– ಎಲೈ ಯಕ್ಷನೇ (ವಾರಿಚರನೇ), ಯಾವನು ತನ್ನ ಮನೆಯಲ್ಲಿಯೇ ಇದ್ದು ದಿವಸದ ಐದನೆಯ ಅಥವಾ ಆರನೆಯ ಭಾಗದಲ್ಲಿ ಶಾಕವನ್ನು ಬೇಯಿಸಿಕೊಂಡು ಜೀವಿಸಿ ಸಾಲವನ್ನು ಮಾಡದೆ ಪ್ರವಾಸವನ್ನು ಮಾಡದೆ ಇರುತ್ತಾನೆಯೋ ಅವನು ಸುಖವಾಗಿ ಇರುತ್ತಾನೆ.

ಅಹನ್ಯಹನಿ ಭೂತಾನಿ ಗಚ್ಛಂತೀಹ ಯಮಾಲಯಮ್ ।
ಶೇಷಾಃ ಸ್ಥಾವರಮಿಚ್ಛಂತಿ ಕಿಮಾಶ್ಚರ್ಯಮತಃ ಪರಮ್ ॥೭೨.೩೦॥

ಪ್ರತಿದಿನವೂ ಪ್ರಾಣಿಗಳು ಈ ಲೋಕದಿಂದ ಯಮಲೋಕಕ್ಕೆ ಹೋಗುತ್ತವೆ. ಇಲ್ಲಿ ಇರುವವರು ಮಾತ್ರ ಸ್ಥಿರವಾಗಿರುತ್ತೇವೆಂದು ಬಯಸುತ್ತಾರೆ. ಇದಕ್ಕಿಂತ ಆಶ್ಚರ್ಯವಾದುದು ಯಾವುದು?

ತರ್ಕೋऽಪ್ರತಿಷ್ಠಃ ಶ್ರುತಯೋ ವಿಭಿನ್ನಾ ನೈಕೋ
ಋಷಿರ್ಯಸ್ಯ ಮತಂ ಪ್ರಮಾಣಮ್ ।
ಧರ್ಮಸ್ಯ ತತ್ತ್ವಂ ನಿಹಿತಂ ಗುಹಾಯಾಂ
ಮಹಾಜನೋ ಯೇನ ಗತಃ ಸ ಪಂಥಾಃ ॥೭೨.೩೧॥

ತರ್ಕವು ನೆಲೆ ಇಲ್ಲದುದು. ಶ್ರುತಿಗಳು ಭಿನ್ನಭಿನ್ನವಾಗಿವೆ. ನಿರ್ವಿವಾದದಿಂದ ಅಂಗೀಕರಿಸಲ್ಪಡುವ ಯಾವ ಋಷಿಯ ಅಭಿಪ್ರಾಯವೂ ಇಲ್ಲ. ಧರ್ಮದ ತತ್ತ್ವವು ಗುಹೆಯಲ್ಲಿ ಅಡಗಿದೆ (ಬಹಳ ರಹಸ್ಯವಾಗಿದೆ). ಮಹಾಜನರು ಎಲ್ಲಿ ನಡೆಯುತ್ತಾರೆಯೋ ಅದೇ ಮಾರ್ಗ.

ಅಸ್ಮಿನ್ಮಹಾಮೋಹಮಯೇ ಕಟಾಹೇ
ಸೂರ್ಯಾಗ್ನಿನಾ ರಾತ್ರಿದಿವೇಂಧನೇನ ।
ಮಾಸರ್ತುದರ್ವೀಪರಿಘಟ್ಟನೇನ
ಭೂತಾನಿ ಕಾಲಃ ಪಚತೀತಿ ವಾರ್ತಾ ॥೭೨.೩೨॥

ಈ ಮಹಾಮೋಹಮಯವಾದ ದೊಡ್ಡ ಬ್ರಹ್ಮಾಂಡ ಕಟಾಹದಲ್ಲಿ ಸೂರ್ಯ ರೂಪವಾದ ಅಗ್ನಿಯಿಂದ ರಾತ್ರಿ ಮತ್ತು ಹಗಲುಗಳು ಎಂಬ ಇಂಧನಗಳಿಂದ ಮಾಸಗಳು ಮತ್ತು ಋತುಗಳು ಎಂಬ ಸಟ್ಟುಗದ (ಸೌಟು) ಪರಿವರ್ತನೆಯಿಂದ ಕಾಲವು ಎಲ್ಲ ಪ್ರಾಣಿಗಳನ್ನೂ ಬೇಯಿಸುತ್ತದೆ ಎಂಬುದೇ ವಾರ್ತೆ.

ಯುಧಿಷ್ಠಿರಃ

ದಿವಂ ಸ್ಪೃಶತಿ ಭೂಮಿಂ ಚ ಶಬ್ದಃ ಪುಣ್ಯಸ್ಯ ಕರ್ಮಣಃ ।
ಯಾವತ್ ಸ ಶಬ್ದೋ ಭವತಿ ತಾವತ್ ಪುರುಷ ಉಚ್ಯತೇ ॥೭೩॥

ಯುಧಿಷ್ಠಿರ– ಪುಣ್ಯಕರ್ಮವನ್ನು ಮಾಡಿದ ಯಾವನ ಕೀರ್ತಿ ಶಬ್ದವು ಭೂಮಿಯನ್ನು ಮತ್ತು ಸ್ವರ್ಗವನ್ನು ಮುಟ್ಟುತ್ತದೆಯೋ ಎಂದರೆ ಎಲ್ಲಿಯವರೆಗೆ ಭೂಮಿ ಮತ್ತು ಸ್ವರ್ಗಗಳಲ್ಲಿ ಅವನ ಕೀರ್ತಿ ಇರುತ್ತದೆಯೋ ಅಲ್ಲಿಯವರೆಗೆ ಅವನನ್ನು ಪುರುಷನೆಂದು ಕರೆಯುತ್ತಾರೆ.

ತುಲ್ಯೇ ಪ್ರಿಯಾಪ್ರಿಯೇ ಯಸ್ಯ ಸುಖದುಃಖೇ ತಥೈವ ಚ ।
ಅತೀತಾನಾಗತೇ ಚೋಭೇ ಸ ವೈ ಸರ್ವಧನೀ ನರಃ ॥೭೪॥

ಯಾವ ಮನುಷ್ಯನಿಗೆ ಪ್ರಿಯಾಪ್ರಿಯಗಳು, ಸುಖದುಃಖಗಳು, ಭೂತ ಭವಿಷ್ಯತ್ತುಗಳು ಸಮಾನವಾಗಿರುತ್ತವೆಯೋ ಅವನೇ ಸರ್ವಧನವುಳ್ಳವನು.

ಸಮತ್ವಂ ಯಸ್ಯ ಸರ್ವೇಷು ನಿಃಸ್ಪೃಹಃ ಶಾಂತಮಾನಸಃ ।
ಸುಪ್ರಸನ್ನಃ ಸದಾ ಯೋಗೀ ಸ ವೈ ಸರ್ವಧನೀ ನರಃ ॥೭೫॥

ಯಾವನು ಎಲ್ಲರ ವಿಷಯದಲ್ಲಿಯೂ ಸಮನಾಗಿದ್ದು, ನಿಃಸ್ಪೃಹನೂ, ಶಾಂತಮನಸ್ಸುಳ್ಳವನೂ, ಸುಪ್ರಸನ್ನನಾದವನೂ, ಸದಾ ಯೋಗನಿರತನೂ ಆಗಿರುತ್ತಾನೆಯೋ ಅವನೇ ಸರ್ವಧನವನ್ನು ಹೊಂದಿದ ಮನುಷ್ಯ.

ಯಕ್ಷಃ

ವ್ಯಾಖ್ಯಾತಃ ಪುರುಷೋ ರಾಜನ್ಯಶ್ಚ ಸರ್ವಧನೀ ನರಃ ।
ತಸ್ಮಾತ್ ತ್ವಮೇಕಂ ಭ್ರಾತೄಣಾಂ ಯಮಿಚ್ಛಸಿ ಸ ಜೀವತು ॥೭೬॥

ಯಕ್ಷ– ರಾಜನೇ, ಪುರುಷನನ್ನೂ ಮತ್ತು ಸರ್ವಧನವುಳ್ಳ ಮನುಷ್ಯನನ್ನೂ ನೀನು ವಿವರಿಸಿದ್ದೀಯೆ. ಆದ್ದರಿಂದ ನಿನ್ನ ತಮ್ಮಂದಿರಲ್ಲಿ ನೀನು ಬಯಸುವ ಒಬ್ಬನು ಜೀವಂತನಾಗಲಿ.

ಯುಧಿಷ್ಠಿರಃ

ಶ್ಯಾಮೋಯ ಏಷ ರಕ್ತಾಕ್ಷೋ ಬೃಹಚ್ಛಾಲ ಇವೋತ್ಥಿತಃ ।
ವ್ಯೂಢೋರಸ್ಕೋ ಮಹಾಬಾಹುರ್ನಕುಲೋ ಯಕ್ಷ ಜೀವತು ॥೭೭॥

ಯುಧಿಷ್ಠಿರ– ಎಲೈ ಯಕ್ಷನೇ, ಶ್ಯಾಮವರ್ಣದವನೂ, ರಕ್ತಾಕ್ಷನಾದವನೂ, ದೊಡ್ಡ ಶಾಲವೃಕ್ಷದಂತೆ ಎತ್ತರನಾದವನೂ, ವಿಸ್ತಾರವಾದ ವಕ್ಷಸ್ಥಲವುಳ್ಳವನೂ ಆದ ಈ ನಕುಲನು ಜೀವಂತನಾಗಲಿ.

ಯಕ್ಷಃ

ಪ್ರಿಯಸ್ತೇ ಭೀಮಸೇನೋऽಯಮರ್ಜುನೋ ವಃ ಪರಾಯಣಮ್ ।
ಸ ಕಸ್ಮಾನ್ನಕುಲಂ ರಾಜನ್ ಸಾಪತ್ನಂ ಜೀವಮಿಚ್ಛಸಿ ॥೭೮॥

ಯಕ್ಷ– ನಿನಗೆ ಭೀಮಸೇನನು ಪ್ರಿಯನಾದವನು. ಅರ್ಜುನನು ನಿಮ್ಮೆಲ್ಲರಿಗೂ ಆಶ್ರಯನಾದವನು. ರಾಜನೇ, ಹೀಗಿರುವಾಗ ನಿನ್ನ ತಾಯಿಯ ಸವತಿಯ ಮಗನಾದ ನಕುಲನು ಬದುಕಬೇಕೆಂದು ಏಕೆ ಬಯಸುತ್ತೀಯೆ?

ಯಸ್ಯ ನಾಗಸಹಸ್ರೇಣ ದಶಸಂಖ್ಯೇನ ವೈ ಬಲಮ್ ।
ತುಲ್ಯಂ ತಂ ಭೀಮಮುತ್ಸೃಜ್ಯ ನಕುಲಂ ಜೀವಮಿಚ್ಛಸಿ ॥೭೯॥

ಯಾವನಿಗೆ ಹತ್ತುಸಹಸ್ರ ಆನೆಗಳ ಬಲವಿದೆಯೋ ಅಂತಹ ಭೀಮನನ್ನು ಬಿಟ್ಟು ನಕುಲನನ್ನು ಏಕೆ ಬಯಸುತ್ತಿದ್ದೀಯೆ?

ತಥೈನಂ ಮನುಜಾಃ ಪ್ರಾಹುರ್ಭೀಮಸೇನಂ ಪ್ರಿಯಂ ತವ ।
ಅಥ ಕೇನಾನುಭಾವೇನ ಸಾಪತ್ನಂ ಜೀವಮಿಚ್ಛಸಿ ॥೮೦॥

ಎಲ್ಲ ಮನುಷ್ಯರೂ ಭೀಮಸೇನನನ್ನು ನಿನಗೆ ಪ್ರಿಯನಾದವನು ಎಂದು ಹೇಳುತ್ತಾರೆ. ಹಾಗಾದರೆ ಯಾವ ಅಭಿಪ್ರಾಯದಿಂದ ತಾಯಿಯ ಸವತಿಯ ಮಗನು ಬದುಕಬೇಕೆಂದು ಬಯಸುತ್ತೀಯೆ?

ಯಸ್ಯ ಬಾಹುಬಲಂ ಸರ್ವೇ ಪಾಂಡವಾಃ ಸಮುಪಾಸತೇ ।
ಅರ್ಜುನಂ ತಮಪಾಹಾಯ ನಕುಲಂ ಜೀವಮಿಚ್ಛಸಿ ॥೮೧॥

ಯಾವನ ಬಾಹುಬಲವನ್ನು ಎಲ್ಲ ಪಾಂಡವರೂ ಪೂಜಿಸುತ್ತಾರೆಯೋ ಅಂತಹ ಅರ್ಜುನನನ್ನು ಬಿಟ್ಟು ನಕುಲನು ಬದುಕಬೇಕೆಂದು ಏಕೆ ಬಯಸುತ್ತೀಯೆ?

ಯುಧಿಷ್ಠಿರಃ

ಅನೃಶಂಸ್ಯಂ ಪರೋ ಧರ್ಮಃ ಪರಮಾರ್ಥಾಚ್ಚ ಮೇ ಮತಮ್ ।
ಅನೃಶಂಸ್ಯಂ ಚಿಕೀರ್ಷಾಮಿ ನಕುಲೋ ಯಕ್ಷ ಜೀವತು ॥೮೨॥

ಯುಧಿಷ್ಠಿರ– ದಯೆಯು ಶ್ರೇಷ್ಠವಾದ ಧರ್ಮ. ಅದು ಧನಕ್ಕಿಂತಲೂ ಅಥವಾ ಪರಮಾರ್ಥವಾದ ಮೋಕ್ಷಕ್ಕಿಂತಲೂ ದೊಡ್ಡದು ಎಂದು ನನ್ನ ಅಭಿಪ್ರಾಯ. ನಾನು ಆ ದಯೆಯನ್ನು ತೋರಿಸಲು ಬಯಸುತ್ತೇನೆ. ಯಕ್ಷನೇ, ನಕುಲನು ಜೀವಿಸಲಿ.

ಧರ್ಮ ಏವ ಹತೋ ಹಂತಿ ಧರ್ಮೋ ರಕ್ಷತಿ ರಕ್ಷಿತಃ ।
ತಸ್ಮಾದ್ ಧರ್ಮಂ ನ ತ್ಯಜಾಮಿ ಮಾ ನೋ ಧರ್ಮೋ ಹತೋ ವಧೀತ್ ॥೮೩॥

ನಾವು ಧರ್ಮವನ್ನು ಕೊಂದರೆ ಅದು ನಮ್ಮನ್ನು ಕೊಲ್ಲುತ್ತದೆ. ನಾವು ಧರ್ಮವನ್ನು ರಕ್ಷಿಸಿದರೆ ಅದು ನಮ್ಮನ್ನು ರಕ್ಷಿಸುತ್ತದೆ. ಆದ್ದರಿಂದ ನಾನು ಧರ್ಮವನ್ನು ತ್ಯಜಿಸುವುದಿಲ್ಲ. ನಾಶಗೊಂಡ ಧರ್ಮವು ನಮ್ಮನ್ನು ಕೊಲ್ಲದಿರಲಿ.

ಧರ್ಮಶೀಲಃ ಸದಾ ರಾಜಾ ಇತಿ ಮಾಂ ಮಾನವಾ ವಿದುಃ ।
ಸ್ವಧರ್ಮಾನ್ನ ಚಲಿಷ್ಯಾಮಿ ನಕುಲೋ ಯಕ್ಷ ಜೀವತು ॥೮೪॥

ರಾಜನು ಸದಾ ಧರ್ಮಶೀಲನೆಂದು ನನ್ನನ್ನು ಎಲ್ಲ ಜನರೂ ತಿಳಿಯುತ್ತಾರೆ. ನನ್ನ ಧರ್ಮದಿಂದ ನಾನು ಚ್ಯುತನಾಗುವುದಿಲ್ಲ. ಯಕ್ಷನೇ ನಕುಲನು ಜೀವಿಸಲಿ.

ಕುಂತೀ ಚೈವ ತು ಮಾದ್ರೀ ಚ ದ್ವೇ ಭಾರ್ಯೇ ತು ಪಿತುರ್ಮಮ ।
ಉಭೇ ಸಪುತ್ರೇ ಸ್ಯಾತಾಂ ವೈ ಇತಿ ಮೇ ಧೀಯತೇ ಮತಿಃ ॥೮೪.೧॥

ನನ್ನ ತಂದೆಗೆ ಕುಂತೀ ಮತ್ತು ಮಾದ್ರೀ ಇಬ್ಬರು ಪತ್ನಿಯರು (ನಕುಲನು ಬದುಕಿದರೆ) ಇಬ್ಬರೂ ಪುತ್ರವಂತರಾಗುವರು ಎಂದು ನನ್ನ ಅಭಿಪ್ರಾಯ.

ಯಥಾ ಕುಂತೀ ತಥಾ ಮಾದ್ರೀ ವಿಶೇಷೋ ನಾಸ್ತಿ ಮೇ ತಯೋಃ ।
ಮಾತೃಸ್ವಂ ಸಮಮಿಚ್ಛಾಮಿ ನಕುಲೋ ಯಕ್ಷ ಜೀವತು ॥೮೫॥

ನನಗೆ ಕುಂತಿಯು ಹೇಗೋ ಮಾದ್ರಿಯೂ ಹಾಗೆಯೇ. ಅವರಿಬ್ಬರಲ್ಲಿ ನನಗೆ ಯಾವ ವ್ಯತ್ಯಾಸವೂ ಇಲ್ಲ. ಪುತ್ರರೂಪವಾದ ತಾಯಿಯ ಸಂಪತ್ತು ಇಬ್ಬರಿಗೂ ಸಮನಾಗಿರಬೇಕು. ಆದ್ದರಿಂದ ಯಕ್ಷನೇ, ನಕುಲನು ಜೀವಿಸಲಿ.

ಯಕ್ಷಃ

ಯಸ್ಯ ತೇऽರ್ಥಾಚ್ಚ ಕಾಮಾಚ್ಚ ಆನೃಶಂಸ್ಯಂ ಪರಂ ಮತಮ್ ।
ತಸ್ಮಾತ್ ತೇ ಭ್ರಾತರಃ ಸರ್ವೇ ಜೀವಂತು ಭರತರ್ಷಭ ॥೮೬॥

ಯಕ್ಷ– ಯಾವ ನಿನಗೆ ಅರ್ಥಕ್ಕಿಂತಲೂ, ಕಾಮಕ್ಕಿಂತಲೂ, ದಯೆಯೇ ಶ್ರೇಷ್ಠವಾದ ಧರ್ಮವೋ ಆ ಕಾರಣದಿಂದ ಎಲೈ ಭರತರ್ಷಭನೇ, ನಿನ್ನ ತಮ್ಮಂದಿರೆಲ್ಲರೂ ಜೀವಿಸಲಿ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂಸಂಹಿತಾಯಾಂ ವೈಯಾಸಿಕ್ಯಾಂ
ವನಪರ್ವಣಿ ಚತುರಧಿಕತ್ರಿಶತತಮೋऽಧ್ಯಾಯಃ ॥
॥ ಇತಿ ಆರಣೇಯಪರ್ವಣಿ ನಕುಲಾದ್ಯುತ್ಥಾನಂ ನಾಮ ತೃತೀಯೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವನಪರ್ವದಲ್ಲಿ ಮುನ್ನೂರ ನಾಲ್ಕನೆಯ ಅಧ್ಯಾಯ ಮುಗಿಯಿತು.

★ ★ ★ ★

ಮುನ್ನೂರ ಐದನೆಯ ಅಧ್ಯಾಯ

ಯಕ್ಷನಿಂದ ಯುಧಿಷ್ಠಿರನಿಗೆ ತನ್ನ ಸ್ವರೂಪ ಪರಿಚಯ ಮತ್ತು ವರದಾನ.

ವೈಶಂಪಾಯನಃ

ತತಸ್ತೇ ಯಕ್ಷವಚನಾದುದತಿಷ್ಠಂತ ಪಾಂಡವಾಃ ।
ಕ್ಷುತ್ತಿಪಾಸೇ ಚ ಸರ್ವೇಷಾಂ ಕ್ಷಣೇನ ವ್ಯಪಗಚ್ಛತಾಮ್ ॥೧॥

ವೈಶಂಪಾಯನ– ಅನಂತರ ಯಕ್ಷನ ಮಾತಿನಿಂದ ಪಾಂಡವರೆಲ್ಲರೂ ಎದ್ದರು. ಅವರೆಲ್ಲರಿಗೂ ಒಂದೇಕ್ಷಣದಲ್ಲಿ ಹಸಿವು ನೀರಡಿಕೆಗಳು ಹೊರಟುಹೋದವು.

ಯುಧಿಷ್ಠಿರಃ

ಸರಸ್ಯೇಕೇನ ಪಾದೇನ ತಿಷ್ಠಂತಮಪರಾಜಿತಮ್ ।
ಪೃಚ್ಛಾಮಿ ಕೋ ಭವಾನ್‌ದೇವೋ ನ ಮೇ ಯಕ್ಷೋ ಮತೋ ಭವಾನ್ ॥

ಯುಧಿಷ್ಠಿರ– ಸರೋವರದಲ್ಲಿ ಒಂದು ಪಾದದಿಂದ ನಿಂತಿರುವ ನೀನು ಯಾವ ದೇವತೆ ಎಂದು ಕೇಳುತ್ತಿದ್ದೇನೆ. ನನ್ನ ಅಭಿಪ್ರಾಯದಲ್ಲಿ ನೀನು ಯಕ್ಷನಲ್ಲ.

ವಸೂನಾಂ ವಾ ಭವಾನೇಕೋ ರುದ್ರಾಣಾಮಥವಾ ಭವಾನ್ ।
ಅಥವಾ ಮರುತಾಂ ಶ್ರೇಷ್ಠೋ ವಜ್ರೀ ವಾ ತ್ರಿದಶೇಶ್ವರಃ ॥೨.೧॥

ನೀನು ವಸುಗಳಲ್ಲಿ ಒಬ್ಬನೋ ಅಥವಾ ರುದ್ರರಲ್ಲಿ ಒಬ್ಬನೋ, ಅಥವಾ ಮರುತ್ತುಗಳಲ್ಲಿ ಶ್ರೇಷ್ಠನಾದವನೋ ಅಥವಾ ಸ್ವರ್ಗಾಧಿಪತಿಯಾದ ವಜ್ರಿಯಾದ ಇಂದ್ರನೋ?

ಮಮ ಹಿ ಭ್ರಾತರ ಇಮೇ ಸಹಸ್ರಶತಯೋಧಿನಃ ।
ತಂ ಯೋಧಂ ನ ಪ್ರಪಶ್ಯಾಮಿ ಯೇನ ಸರ್ವೇ ನಿಪಾತಿತಾಃ ॥೩॥

ನನ್ನ ತಮ್ಮಂದಿರೆಲ್ಲರೂ ಒಂದು ಲಕ್ಷ ಯೋಧರ ಜೊತೆಯಲ್ಲಿ ಯುದ್ಧ ಮಾಡುವಂತಹವರು. ಇವರೆಲ್ಲರನ್ನೂ ಬೀಳಿಸುವಂತಹ ಒಬ್ಬ ಯೋಧನು ನನಗೆ ಗೋಚರನಾಗುವುದಿಲ್ಲ.

ಸುಖಿಪ್ರತಿಮಬುದ್ಧಾನಾಮಿಂದ್ರಿಯಾಣ್ಯುಪಲಕ್ಷಯೇ ।
ಸ ಭವಾನ್ ಸುಹೃದೋಽಸ್ಮಾಕಮಥವಾ ನಃ ಪಿತಾ ಭವಾನ್ ॥೪॥

ನಿದ್ದೆಯನ್ನು ಮಾಡಿ ಸುಖವಾಗಿ ಎದ್ದವರಂತೆ ಅವರ ಇಂದ್ರಿಯಗಳು ಪ್ರಸನ್ನವಾಗಿರುವುದನ್ನು ನಾನು ಗಮನಿಸುತ್ತಿದ್ದೇನೆ. ಅಂತಹ ನೀನು ನಮ್ಮ ವಿಶ್ವಾಸಿಯೋ ಅಥವಾ ನಮ್ಮ ತಂದೆಯೋ?

ಯಕ್ಷಃ

ಅಹಂ ತೇ ಜನಕಸ್ತಾತ ಧರ್ಮೋಽಮೃದುಪರಾಕ್ರಮ ।
ತ್ವಾಂ ದಿದೃಕ್ಷುರನುಪ್ರಾಪ್ತೋ ವಿದ್ಧಿ ಮಾಂ ಭರತರ್ಷಭ ॥೫॥

ಯಕ್ಷ– ಪ್ರೀತಿಪಾತ್ರನೇ, ಉಗ್ರಪರಾಕ್ರಮಿಯೇ, ಭರತರ್ಷಭನೇ, ನಾನು ನಿನ್ನ ತಂದೆಯಾದ ಯಮ. ನಿನ್ನನ್ನು ನೋಡಲು ಇಲ್ಲಿಗೆ ಬಂದಿದ್ದೇನೆಂದು ತಿಳಿ.

ಯಶಃ ಸತ್ಯಂ ದಮಃ ಶೌಚಮಾರ್ಜವಂ ಹ್ರೀರಚಾಪಲಮ್ ।
ದಾನಂ ತಪೋ ಬ್ರಹ್ಮಚರ್ಯಮಿತ್ಯೇತಾಸ್ತನವೋ ಮಮ ॥೬॥

ಯಶಸ್ಸು, ಸತ್ಯ, ದಮ, ಶೌಚ, ಆರ್ಜವ, ಲಜ್ಜಾ, ಅಚಾಂಚಲ್ಯ, ದಾನ, ತಪಸ್ಸು, ಬ್ರಹ್ಮಚರ್ಯ ಇವು ನನ್ನ ಶರೀರಗಳು.

ಅಹಿಂಸಾ ಸಮತಾ ಶಾಂತಿರಾನೃಶಂಸ್ಯಮಮತ್ಸರಃ ।
ದ್ವಾರಾಣ್ಯೇತಾನಿ ಮೇ ವಿದ್ಧಿ ಪ್ರಿಯೋ ಹ್ಯಸಿ ಸದಾ ಮಮ ॥೭॥

ಅಹಿಂಸೆ, ಸಮತಾ, ಶಾಂತಿ, ದಯಾ, ಅಮತ್ಸರ ಇವುಗಳು ನನ್ನನ್ನು ಹೊಂದುವ ದ್ವಾರಗಳು. ನೀನು ನನಗೆ ಯಾವಾಗಲೂ ಪ್ರಿಯನಾಗಿದ್ದೀಯೆ.

ದಿಷ್ಟ್ಯಾ ಪಂಚಸು ರಕ್ತೋಽಸಿ ದಿಷ್ಟ್ಯಾ ತೇ ಷಟ್ ಸದಾ ಜಿತಾ ।
ದ್ವೇ ಪೂರ್ವೇ ಮಧ್ಯಮೇ ದ್ವೇ ಚ ದ್ವೇ ಚಾಂತೇಽಸಾಂಪರಾಯಕೇ ॥೮॥

ನೀನು ಪಂಚಮಹಾಯಜ್ಞಗಳಲ್ಲಿ ಅಥವಾ ನಾಲ್ಕುವೇದಗಳು ಮತ್ತು ಪಂಚರಾತ್ರ ಎಂಬ ಐದುವಿದ್ಯೆಗಳಲ್ಲಿ ಅನುರಕ್ತನಾಗಿದ್ದೀಯೆ. ಶೈಶವದಿಂದ ಇರುವ ಕಾಮಕ್ರೋಧಗಳು ಮಧ್ಯದಲ್ಲಿ ಬರುವ ಧನಲೋಭ ಮತ್ತು ಪುತ್ರಮಿತ್ರಾದಿ ಮೋಹರೂಪವಾದ ಮಮತೆ ಮತ್ತು ಮೋಕ್ಷವಿರೋಧಿಯಾದ ಕೊನೆಯಲ್ಲಿ ಬರುವ ಎಂದರೆ ಪುತ್ರಾದಿ ಸಂಪತ್ತಿಯಿಂದ ಉಂಟಾಗುವ ಮದಮತ್ಸರಗಳು ಎರಡು ಈ ಆರನ್ನೂ ನೀನು ಯಾವಾಗಲೂ ತ್ಯಜಿಸಿದ್ದೀಯೆ.

ಧರ್ಮೋಽಹಮಿತಿ ಭದ್ರಂ ತೇ ಜಿಜ್ಞಾಸುಸ್ತ್ವಮಿಹಾಗತಃ ।
ಆನೃಶಂಸ್ಯೇನ ತುಷ್ಟೋಽಸ್ಮಿ ವರಂ ದಾಸ್ಯಾಮಿ ತೇಽನಘ ॥೯॥

ನಾನು ಯಮಧರ್ಮರಾಜ. ನಿನ್ನನ್ನು ನೋಡಲು ಇಲ್ಲಿಗೆ ಬಂದೆನು. ನಿನ್ನ ದಯಾರೂಪವಾದ ಧರ್ಮದಿಂದ ಸಂತುಷ್ಟನಾಗಿದ್ದೇನೆ. ಅನಘನೇ, ನಿನಗೆ ವರವನ್ನು ಕೊಡುವೆನು.

ವರಂ ವೃಣೀಷ್ವ ರಾಜೇಂದ್ರ ದಾತಾ ಹ್ಯಸ್ಮಿ ತವಾನಘ ।
ಯೇ ಹಿ ಮೇ ಪುರುಷಾ ಭಕ್ತಾ ನ ತೇಷಾಮಸ್ತಿ ದುರ್ಗತಿಃ ॥೧೦॥

ರಾಜೇಂದ್ರನೇ, ವರವನ್ನು ಕೇಳು. ಅನಘನೇ, ನಾನು ವರವನ್ನು ಕೊಡುವವನಾಗಿದ್ದೇನೆ. ಯಾರು ನನ್ನ ಭಕ್ತರಾದ ಪುರುಷರಿದ್ದಾರೋ ಅವರಿಗೆ ಎಂದೂ ದುರ್ಗತಿಯಿಲ್ಲ.

ಯುಧಿಷ್ಠಿರಃ

ಅರಣೀಸಹಿತಂ ಯಸ್ಯ ಮೃಗೋ ಹ್ಯಾದಾಯ ಗಚ್ಛತಿ ।
ತಸ್ಯಾಗ್ನಯೋ ನ ಲುಪ್ಯೇರನ್ ಪ್ರಥಮೋಽಸ್ತು ವರೋ ಮಮ ॥೧೧॥

ಯುಧಿಷ್ಠಿರ– ಬ್ರಾಹ್ಮಣನ ಅರಣೀಸಹಿತವಾದ ಮಂಥವನ್ನು ತೆಗೆದುಕೊಂಡು ಜಿಂಕೆಯು ಓಡುತ್ತಿದೆ. ಬ್ರಾಹ್ಮಣನ ಅಗ್ನಿಗೆ ಲೋಪವಾಗದಿರಲಿ. ಇದು ನಾನು ಕೇಳುವ ಪ್ರಥಮ ವರ.

ಯಕ್ಷಃ

ಅರಣೀಸಹಿತಂ ಹ್ಯಸ್ಯ ಬ್ರಾಹ್ಮಣಸ್ಯ ಹೃತಂ ಮಯಾ ।
ಮೃಗವೇಷೇಣ ಕೌಂತೇಯ ಜಿಜ್ಞಾಸಾರ್ಥಂ ತವ ಪ್ರಭೋ ॥೧೨॥

ಯಕ್ಷ– ಪ್ರಭುವೇ, ಕುಂತೀಪುತ್ರನೇ, ನಾನೇ ಮೃಗವೇಷವನ್ನು ಧರಿಸಿ ನಿನ್ನನ್ನು ಪರೀಕ್ಷಿಸುವುದಕ್ಕೋಸ್ಕರ ಬ್ರಾಹ್ಮಣನ ಅರಣೀಸಹಿತವಾದ ಮಂಥವನ್ನು ತೆಗೆದುಕೊಂಡು ಹೋದೆನು.

ವೈಶಂಪಾಯನಃ

ದದಾನೀತ್ಯೇವ ಭಗವಾನುತ್ತರಂ ಪ್ರತ್ಯಪದ್ಯತ ।
ಅನ್ಯಂ ವರಯ ಭದ್ರಂ ತೇ ವರಂ ತ್ವಮಮರೋಮಪ ॥೧೩॥

ವೈಶಂಪಾಯನ– ಪೂಜ್ಯನಾದ ಯಮನು ನಾನು ಕೊಡುವೆನು ಎಂದೇ ಉತ್ತರವನ್ನು ನೀಡಿದನು. ದೇವತಾಸದೃಶನಾದವನೇ ನಿನಗೆ ಮಂಗಳವಾಗಲಿ. ಇನ್ನೊಂದು ವರವನ್ನು ಕೇಳು (ಎಂದು ಹೇಳಿದನು).

ಯುಧಿಷ್ಠಿರಃ

ವರ್ಷಾಣಿ ದ್ವಾದಶಾರಣ್ಯೇ ತ್ರಯೋದಶಮುಪಸ್ಥಿತಮ್ ।
ತತ್ರ ನೋ ನಾಭಿಜಾನೀಯುರ್ವಸತೋ ಮನುಜಾಃ ಕ್ವಚಿತ್ ॥೧೪॥

ಯುಧಿಷ್ಠಿರ– ಅರಣ್ಯದಲ್ಲಿ ಹನ್ನೆರಡು ವರ್ಷಗಳನ್ನು ನಾವು ಕಳೆದಿದ್ದಾಯಿತು. ಹದಿಮೂರನೆಯ ವರ್ಷವು ಪ್ರಾಪ್ತವಾಗುತ್ತಿದೆ. ಅಜ್ಞಾತವಾಸವನ್ನು ಮಾಡುವ ನಮ್ಮನ್ನು ಯಾವ ಮನುಷ್ಯರೂ ಗುರುತಿಸಬಾರದು.

ವೈಶಂಪಾಯನಃ

ದದಾನೀತ್ಯೇವ ಭಗವಾನುತ್ತರಂ ಪ್ರತ್ಯಪದ್ಯತ ।
ಭೂಯಶ್ಚಾಶ್ವಾಸಯಾಮಾಸ ಕೌಂತೇಯಂ ಸತ್ಯವಿಕ್ರಮಮ್ ॥೧೫॥

ವೈಶಂಪಾಯನ– ಕೊಡುವೆನು ಎಂದೇ ಪೂಜ್ಯನಾದ ಯಮನು ಉತ್ತರವನ್ನು ಕೊಟ್ಟನು. ಮತ್ತು ಸತ್ಯವಿಕ್ರಮನಾದ ಕೌಂತೇಯನಿಗೆ ಮತ್ತೂ ಆಶ್ವಾಸನೆಯನ್ನು ನೀಡಿದನು.

ಯಕ್ಷಃ

ಯದ್ಯಪಿ ಸ್ವೇನ ರೂಪೇಣ ಚರಿಷ್ಯಥ ಮಹೀಮಿಮಾಮ್ ।
ನ ವೋ ವಿಜ್ಞಾಸ್ಯತೇ ಕಶ್ಚಿತ್ತ್ರಿಷು ಲೋಕೇಷು ಭಾರತ ॥೧೬॥

ಯಕ್ಷ– ಎಲೈ ಭಾರತನೇ, ನೀವು ನಿಮ್ಮ ನಿಜರೂಪದಿಂದಲೇ ಭೂಮಿಯಲ್ಲೆಲ್ಲಾ ತಿರುಗಿದರೂ, ಮೂರುಲೋಕದಲ್ಲಿಯೂ ಯಾರೂ ನಿಮ್ಮನ್ನು ಗುರುತಿಸುವುದಿಲ್ಲ.

ವರ್ಷಂ ತ್ರಯೋದಶಮಿದಂ ಮತ್ಪ್ರಸಾದಾತ್ ಕುರೂದ್ವಹಾಃ ।
ವಿರಾಟನಗರೇ ಗೂಢಾ ಅವಿಜ್ಞಾತಾಶ್ಚರಿಷ್ಯಥ ॥೧೭॥

ಕುರೂದ್ವಹರೇ, ನನ್ನ ಅನುಗ್ರಹದಿಂದ ನೀವು ಈ ಹದಿಮೂರನೆಯ ವರ್ಷವನ್ನು ವಿರಾಟನಗರದಲ್ಲಿ ಯಾರಿಗೂ ತಿಳಿಯದಂತೆ ಗೂಢವಾಗಿ ಕಳೆಯುವಿರಿ.

ಯದ್ವಃ ಸಂಕಲ್ಪಿತಂ ರೂಪಂ ಮನಸಾ ಯಸ್ಯ ಯಾದೃಶಮ್ ।
ತಾದೃಶಂ ತಾದೃಶಂ ಸರ್ವೇ ಚ್ಛಂದತೋ ಧಾರಯಿಷ್ಯಥ ॥೧೮॥

ನಿಮ್ಮಲ್ಲಿ ಯಾರು ಯಾರು ಯಾವ ರೂಪವನ್ನು ಪಡೆಯಬೇಕೆಂದು ಮನಸ್ಸಿನಲ್ಲಿ ಸಂಕಲ್ಪಿಸುತ್ತಾರೋ ಅಂತಹ ರೂಪಗಳು ಅವರೆಲ್ಲರಿಗೂ ಇಚ್ಛಾಮಾತ್ರದಿಂದಲೇ ಉಂಟಾಗುತ್ತವೆ. ಆ ರೂಪಗಳನ್ನು ಧರಿಸುವರಾಗುವಿರಿ.

ಅರಣೀಸಹಿತಂ ಚೇದಂ ಬ್ರಾಹ್ಮಣಾಯ ಪ್ರಯಚ್ಛತ ।
ಜಿಜ್ಞಾಸಾರ್ಥಂ ಮಯಾ ಹ್ಯೇತದಾಹೃತಂ ಮೃಗರೂಪಿಣಾ ॥೧೯॥

ಅರಣೀಸಹಿತವಾದ ಈ ಮಂಥವನ್ನು ಬ್ರಾಹ್ಮಣನಿಗೆ ಕೊಡಿ. ನಿಮ್ಮನ್ನು ಪರೀಕ್ಷಿಸುವ ಸಲುವಾಗಿ ಮೃಗರೂಪದಿಂದ ನಾನು ಇದನ್ನು ಅಪಹರಿಸಿದೆನು.

ತೃತೀಯಂ ಗೃಹ್ಯತಾಂ ಪುತ್ರ ಪರಮಪ್ರತಿಮಂ ಮಹತ್ ।
ತ್ವಂ ಹಿ ಮತ್ಪ್ರಭವೋ ರಾಜನ್ ವಿದುರಶ್ಚ ಮಮಾಂಶಜಃ ॥೨೦॥

ಪುತ್ರನೇ, ಮೂರನೆಯ ಅಪ್ರತಿಮವಾದ ದೊಡ್ಡ ವರವನ್ನು ಕೇಳು. ನೀನು ಮತ್ತು ವಿದುರನು ನನ್ನ ಅಂಶದಿಂದ ಜನಿಸಿದವರು.

ಯುಧಿಷ್ಠಿರಃ

ದೇವದೇವೋ ಮಯಾ ದೃಷ್ಟೋ ಭವಾನ್ ಸಾಕ್ಷಾತ್ ಸನಾತನಃ ।
ಯಂ ದದಾಸಿ ವರಂ ತುಷ್ಟಸ್ತಂ ಗ್ರಹೀಷ್ಯಾಮ್ಯಹಂ ಪಿತಃ ॥೨೧॥

ಯುಧಿಷ್ಠಿರ– ದೇವದೇವನೂ, ಸನಾತನನೂ ಆದ ನಿನ್ನನ್ನು ನಾನು ಸಾಕ್ಷಾತ್ ಆಗಿ ನೋಡಿದೆನು. ತಂದೆಯೇ, ನೀನು ಸಂತೋಷದಿಂದ ಯಾವ ವರವನ್ನು ಕೊಡುತ್ತೀಯೋ ಅದನ್ನು ಸ್ವೀಕರಿಸುವೆನು.

ಜಯೇಯಂ ಲೋಭಮೋಹೌ ಚ ಕ್ರೋಧಂ ಚಾಹಂ ಸದಾ ವಿಭೋ ।
ದಾನೇ ತಪಸಿ ಸತ್ಯೇ ಚ ಮನೋ ಮೇ ಸತತಂ ಭವೇತ್ ॥೨೨॥

ವಿಭುವೇ, ಲೋಭಮೋಹಗಳನ್ನು ಮತ್ತು ಕ್ರೋಧವನ್ನೂ ನಾನು ಯಾವಾಗಲೂ ಗೆಲ್ಲುವವನಾಗಬೇಕು. ದಾನದಲ್ಲಿಯೂ, ತಪಸ್ಸಿನಲ್ಲಿಯೂ ಮತ್ತು ಸತ್ಯದಲ್ಲಿಯೂ ನನ್ನ ಮನಸ್ಸು ಯಾವಾಗಲೂ ಸ್ಥಿರವಾಗಿರಬೇಕು.

ಧರ್ಮಃ

ಉಪಪನ್ನೋ ಗುಣೈರೇತೈಃ ಸ್ವಭಾವೇನಾಪಿ ಪಾಂಡವ ।
ಭವಾನ್ ಧರ್ಮೀ ಪುನಶ್ಚೈವ ಯಥೋಕ್ತಂ ತೇ ಭವಿಷ್ಯತಿ ॥೨೩॥

ಧರ್ಮ– ಎಲೈ ಪಾಂಡವನೇ, ನೀನು ಸ್ವಾಭಾವಿಕವಾಗಿಯೇ ಈ ಗುಣಗಳಿಂದ ಕೂಡಿದವನಾಗಿದ್ದೀಯೆ. ನೀನೇ ಧರ್ಮಸ್ವರೂಪನು. ಆದರೂ ನೀನು ಕೇಳಿದಂತೆಯೇ ಆಗುವುದು.

ವೈಶಂಪಾಯನಃ

ಇತ್ಯುಕ್ತ್ವಾ ಽಂತರ್ದಧೇ ಧರ್ಮೋ ಭಗವಾಂಲ್ಲೋಕಭಾವನಃ ।
ಸಮೇತಾಃ ಪಾಂಡವಾಶ್ಚೈವ ಸುಖಂ ಪ್ರಾಪ್ತಾ ಮನಸ್ವಿನಃ ॥೨೪॥

ವೈಶಂಪಾಯನ– ಲೋಕಭಾವನನಾದ ಭಗವಂತನಾದ ಯಮಧರ್ಮನು ಹೀಗೆ ಹೇಳಿ ಅಂತರ್ಧಾನವನ್ನು ಹೊಂದಿದನು. ಧೈರ್ಯಶಾಲಿಗಳಾದ ಪಾಂಡವರೆಲ್ಲರೂ ಒಟ್ಟಿಗೆ ಸುಖವನ್ನು ಹೊಂದಿದರು.

ಉಪೇತ್ಯ ಚಾಶ್ರಮಂ ವೀರಾಃ ಸರ್ವ ಏವ ಗತಕ್ಲಮಾಃ ।
ಅರಣೇಂ ಪ್ರದದುಸ್ತಸ್ಮೈ ಬ್ರಾಹ್ಮಣಾಯ ತಪಸ್ವಿನೇ ॥೨೫॥

ಆ ಎಲ್ಲ ವೀರರೂ ಆಯಾಸರಹಿತರಾಗಿ ಆಶ್ರಮಕ್ಕೆ ಹಿಂದಿರುಗಿ ತಪಸ್ವಿಯಾದ ಆ ಬ್ರಾಹ್ಮಣನಿಗೆ ಅವನ ಅರಣಿಯನ್ನು ಕೊಟ್ಟರು.

ಇದಂ ಸಮುತ್ಥಾನಸಮಾಗತಂ ಮಹತ್
ಪಿತುಶ್ಚ ಪುತ್ರಸ್ಯ ಚ ಕೀರ್ತಿವರ್ಧನಮ್ ।
ಪಠನ್ ನರಃ ಸ್ಯಾದ್ ವಿಜಿತೇಂದ್ರಿಯೋ ಧನೀ
ಸಪುತ್ರಪೌತ್ರಃ ಶತವರ್ಷಭಾಕ್ ತಥಾ ॥೨೬॥

ತಂದೆ ಮತ್ತು ಮಗನ ನಡುವೆ ನಡೆದ ಈ ಪಾಂಡವರ ಉತ್ಥಾನಸಹಿತವಾದ ಸಮಾಗಮದ ಆಖ್ಯಾನವು ಕೀರ್ತಿಯನ್ನು ಹೆಚ್ಚಿಸುವಂತಹದು. ಇದನ್ನು ಪಠಿಸುವ ಅಧಿಕಾರಿಯು ಜಿತೇಂದ್ರಿಯನೂ, ಧನವಂತನೂ, ಪುತ್ರಪೌತ್ರಸಹಿತನೂ, ಶತವರ್ಷಾಯುಷ್ಯವನ್ನು ಉಳ್ಳವನೂ ಆಗುವನು.

ನ ಚಾಪ್ಯಧರ್ಮೇ ನ ಸುಹೃದ್ವಿಭೇದೇ
ಪರಸ್ವಹಾರೇ ಪರದಾರಧರ್ಷಣೇ ।
ಕದರ್ಯಭಾವೇ ನ ರಮೇನ್ಮನಃ ಸದಾ
ನೃಣಾಂ ಸದಾಖ್ಯಾನಮಿದಂ ವಿಜಾನತಾಮ್ ॥೨೭॥

ಈ ಆಖ್ಯಾನವನ್ನು ಯಾವಾಗಲೂ ಚಿಂತನೆ ಮಾಡುವವನಿಗೆ ಅಧರ್ಮದಲ್ಲಾಗಲೀ ಬಾಂಧವರನ್ನು ಭೇದಿಸುವುದರಲ್ಲಾಗಲೀ, ಪರಸ್ವತ್ತನ್ನು ಅಪಹಾರ ಮಾಡುವುದರಲ್ಲಾಗಲೀ, ಪರಪತ್ನಿಯನ್ನು ಸ್ಪರ್ಶಮಾಡುವುದರಲ್ಲಾಗಲೀ, ದೈನ್ಯಭಾವದಲ್ಲಾಗಲೀ ಎಂದೂ ಮನಸ್ಸು ಉಂಟಾಗುವುದಿಲ್ಲ (ಸಂತೋಷಪಡುವುದಿಲ್ಲ).

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂಸಂಹಿತಾಯಾಂ ವೈಯಾಸಿಕ್ಯಾಂ
ವನಪರ್ವಣಿ ಪಂಚಾಧಿಕತ್ರಿಶತತಮೋಽಧ್ಯಾಯಃ ॥
॥ ಇತಿ ಆರಣೇಯಪರ್ವಣಿ ಯುಧಿಷ್ಠಿರ ಪ್ರಾಪ್ತಿರ್ನಾಮ ಚತುರ್ಥೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವನಪರ್ವದಲ್ಲಿ ಮುನ್ನೂರ ಐದನೆಯ ಅಧ್ಯಾಯ ಮುಗಿಯಿತು.

★ ★ ★ ★

ಮುನ್ನೂರ ಆರನೆಯ ಅಧ್ಯಾಯ

ಅಜ್ಞಾತವಾಸವನ್ನು ಚಿಂತಿಸಿ ಶೋಕಪರನಾದ ಧರ್ಮರಾಜನಿಗೆ ಧೌಮ್ಯರಿಂದ ಸಮಾಶ್ವಾಸನೆ. ಪಾಂಡವರಿಂದ ಒಂದುಕಡೆಯಲ್ಲಿ ಕುಳಿತು ಅಜ್ಞಾತವಾಸಕ್ಕಾಗಿ ಮಂತ್ರಾಲೋಚನೆ.

ವೈಶಂಪಾಯನಃ

ಧರ್ಮೇಣ ತೇಽಭ್ಯನುಜ್ಞಾತಾಃ ಪಾಂಡವಾಃ ಸತ್ಯವಾದಿನಃ ।
ಅಜ್ಞಾತವಾಸಂ ವತ್ಸ್ಯಂತಶ್ಚಾನ್ನಾ ವರ್ಷಂ ತ್ರಯೋದಶಮ್ ।
ಉಪೋಪವಿಷ್ಟಾ ವಿದ್ವಾಂಸಃ ಸಹಿತಾಃ ಸಂಶ್ರಿತವ್ರತಾಃ ॥೧॥

ವೈಶಂಪಾಯನ– ಸತ್ಯವಾದಿಗಳಾದ ಆ ಪಾಂಡವರು ಯಮಧರ್ಮರಾಜನಿಂದ ಅಪ್ಪಣೆಯನ್ನು ಪಡೆದು ವೇಷಾಂತರದಿಂದ ಹದಿಮೂರನೆಯ ವರ್ಷ

ಅಜ್ಞಾತವಾಸವನ್ನು ಮಾಡಲು ಬಯಸಿದವರಾಗಿ ವಿದ್ವಾಂಸರೂ, ಒಳ್ಳೆಯ ವ್ರತಗಳಿಂದ ಕೂಡಿದವರೂ ಆದ ಅವರು ಒಂದೆಡೆಯಲ್ಲಿ ಒಟ್ಟಿಗೆ ಕುಳಿತರು.

ತಾನಬ್ರುವನ್ ಮಹಾತ್ಮಾನಃ ಸ್ಥಿತಾಃ ಪ್ರಾಂಜಲಯಸ್ತದಾ ।
ಅಭ್ಯನುಜ್ಞಾಪಯಿಷ್ಯಂತಃ ಸ್ವನಿವಾಸಂ ಧೃತವ್ರತಾಃ ॥೨॥

ಮಹಾತ್ಮರೂ, ಧೃತವ್ರತರೂ ಆದ ಅವರು ತಮ್ಮ ಅಜ್ಞಾತವಾಸವನ್ನು ಮಾಡುವವರಾಗಿ ಆ ಬ್ರಾಹ್ಮಣರಿಂದ ಅನುಜ್ಞೆಯನ್ನು ಪಡೆಯಲು ಅವರಿಗೆ ಕೈಗಳನ್ನು ಮುಗಿದು ಹೀಗೆ ಮಾತನಾಡಿದರು.

ವಿದಿತಂ ಭವತಾಂ ಸರ್ವಂ ಧಾರ್ತರಾಷ್ಟ್ರೈರ್ಯಥಾ ವಯಮ್ ।
ಛದ್ಮನಾ ಹೃತರಾಜ್ಯಾಶ್ಚ ನಿಃಸ್ವಾಶ್ಚ ಬಹುಶಃ ಕೃತಾಃ ॥೩॥

ಧೃತರಾಷ್ಟ್ರಪುತ್ರರಿಂದ ನಾವು ಹೇಗೆ ರಾಜ್ಯವನ್ನು ಕಸಿದುಕೊಳ್ಳಲ್ಪಟ್ಟೆವು ಮತ್ತು ಹೇಗೆ ಅನೇಕ ರೀತಿಯ ಸಂಪತ್ತಿನಿಂದ ರಹಿತರಾದೆವು ಎಂಬುದು ನಿಮಗೆಲ್ಲರಿಗೂ ತಿಳಿದ ವಿಷಯ.

ಉಷಿತಾಶ್ಚ ವನೇ ಕೃಚ್ಛ್ರಂ ವಯಂ ದ್ವಾದಶ ವತ್ಸರಾನ್ ।
ಅಜ್ಞಾತವಾಸಸಮಯಂ ಶೇಷಂ ವರ್ಷಂ ತ್ರಯೋದಶಮ್ ।
ತದ್ ವಸಾಮೋ ವಯಂ ಛನ್ನಾಸ್ತದನುಜ್ಞಾತುಮರ್ಹಥ ॥೪॥

ಕಾಡಿನಲ್ಲಿ ಕಷ್ಟದಿಂದ ಹನ್ನೆರಡು ವರ್ಷಗಳನ್ನು ಕಳೆದಿದ್ದಾಯಿತು. ಇನ್ನು ಉಳಿದ ಹದಿಮೂರನೆಯ ವರ್ಷ ಅಜ್ಞಾತವಾಸದ ಸಮಯ. ನಾವು ಛದ್ಮರೂಪದಿಂದ ಎಲ್ಲಾದರೂ ವಾಸಮಾಡುತ್ತೇವೆ. ನೀವು ಅದಕ್ಕೆ ಅನುಮತಿಯನ್ನು ಕೊಡಬೇಕು.

ಸುಯೋಧನಶ್ಚ ದುಷ್ಪ್ರಾತ್ಮಾ ಕರ್ಣಶ್ಚ ಸಹಸೌಬಲಃ ।
ಜಾನಂತೋ ವಿಷಮಂ ಕುರ್ಯುರಸ್ಮಾಸ್ವತ್ಯಂತವೈರಿಣಃ ।
ಯುಕ್ತಚಾರಾಶ್ಚ ಯುಕ್ತಾಶ್ಚ ಪೌರಸ್ಯ ಸ್ವಜನಸ್ಯ ಚ ॥೫॥

ಸುಯೋಧನನೂ, ಶಕುನಿಯೂ ಮತ್ತು ಕರ್ಣನೂ ದುಷ್ಪರಾದವರು. ನಾವು ಇರುವುದು ಅವರಿಗೆ ತಿಳಿದರೆ ಅತ್ಯಂತ ವೈರಿಗಳಾದ ಅವರು ನಮಗೆ ತೊಂದರೆಯನ್ನೇ

ಮಾಡಬಹುದು. ಅವರು ತಮ್ಮ ಪೌರರ ಮೇಲೆಯೂ ಮತ್ತು ತಮ್ಮ ಜನರ ಮೇಲೆಯೂ ಗೂಢಚಾರರನ್ನಿಟ್ಟು ಎಚ್ಚರಿಕೆಯಿಂದ ಇರುವವರು.

ಅಪಿ ನಸ್ತದ್ ಭವೇದ್ ಭೂಯೋ ಯದ್ ವಯಂ ಬ್ರಾಹ್ಮಣೈಃ ಸಹ ।
ಸಮಸ್ತಾಃ ಸ್ವೇಷು ರಾಷ್ಟ್ರೇಷು ಸ್ವರಾಜ್ಯಸ್ಥಾ ಭವೇಮಹಿ ॥೬॥

ನಮಗೆ ಇನ್ನೊಮ್ಮೆ ಎಲ್ಲಿ ಹನ್ನೆರಡುವರ್ಷದ ವನವಾಸವಾಗುವುದೋ ಎಂದು ಶಂಕೆಯಾಗುತ್ತಿದೆ. ನಾವು ಬ್ರಾಹ್ಮಣರ ಜೊತೆಯಲ್ಲಿ ನಮ್ಮ ರಾಷ್ಟ್ರಗಳಲ್ಲಿ ಇರುತ್ತೇವೆಯೋ ಇಲ್ಲವೋ (ಎಂಬುದೂ ಸಂಶಯಗ್ರಸ್ತ ವಿಷಯವಾಗಿದೆ).

ವೈಶಂಪಾಯನಃ

ಇತ್ಯುಕ್ತ್ವಾ ದುಃಖಶೋಕಾರ್ತಃ ಶುಚಿರ್ಧರ್ಮಸುತಸ್ತದಾ ।
ಸಮ್ಮೂರ್ಛಿತೋಽಭವದ್ ರಾಜಾ ಸಾಶ್ರುಕಂಠೋ ಯುಧಿಷ್ಠಿರಃ ॥೭॥

ವೈಶಂಪಾಯನ– ಹೀಗೆ ಹೇಳಿ ಶುಚಿಯೂ, ಧರ್ಮಪುತ್ರನೂ ಆದ ಯುಧಿಷ್ಠಿರ ರಾಜನು ದುಃಖಶೋಕಗಳಿಗೆ ಒಳಗಾಗಿ ಕಣ್ಣೀರಿನಿಂದ ಗದ್ಗದವಾದ ಸ್ವರದಿಂದ ಮೂರ್ಛಿತನಾದನು.

ತಮಥಾಶ್ವಾಸಯನ್ ಸರ್ವೇ ಬ್ರಾಹ್ಮಣಾ ಭ್ರಾತೃಭಿಃ ಸಹ ।
ಅಥ ಧೌಮ್ಯೋಽಬ್ರವೀದ್ ವಾಕ್ಯಂ ಮಹಾರ್ಥಂ ನೃಪತಿಂ ತದಾ ॥೮॥

ಆಗ ಅವನನ್ನು ಎಲ್ಲ ತಮ್ಮಂದಿರೂ ಮತ್ತು ಬ್ರಾಹ್ಮಣರೂ ಸಮಾಧಾನ ಪಡಿಸಿದರು. ಆನಂತರ ಧೌಮ್ಯರು ರಾಜನನ್ನು ಕುರಿತು ಬಹ್ವರ್ಥಗರ್ಭಿತವಾದ ಮಾತುಗಳನ್ನು ಆಡಿದರು.

ರಾಜನ್ ವಿದ್ವಾನ್ ಭವಾನ್ ದಾಂತಃ ಸತ್ಯಸಂಧೋ ಜಿತೇಂದ್ರಿಯಃ ।
ನೈವಂವಿಧಾಃ ಪ್ರಮುಹ್ಯಂತೇ ನರಾಃ ಕಸ್ಯಾಂಚಿದಾಪದಿ ॥೯॥

ರಾಜನೇ, ನೀನು ವಿದ್ವಾಂಸನೂ, ಇಂದ್ರಿಯನಿಗ್ರಹವುಳ್ಳವನೂ, ಜಿತೇಂದ್ರಿಯನೂ ಆಗಿದ್ದೀಯೆ. ಇಂತಹ ಪುರುಷರು ಯಾವ ಆಪತ್ತಿನಲ್ಲಿಯೂ ಮೋಹಕ್ಕೆ ಒಳಗಾಗುವುದಿಲ್ಲ.

ದೇವೈರಪ್ಯಾಪದಃ ಪ್ರಾಪ್ತಾಶ್ಚನ್ನೈಶ್ಚ ಬಹುಶಸ್ತಥಾ ।
ತತ್ರ ತತ್ರ ಸಪತ್ನಾನಾಂ ನಿಗ್ರಹಾರ್ಥಂ ಮಹಾತ್ಮಭಿಃ ॥೧೦॥

ಮಹಾತ್ಮರಾದ ದೇವತೆಗಳೂ ಸಹ ಶತ್ರುಗಳ ನಿಗ್ರಹಕ್ಕೋಸ್ಕರವಾಗಿ ಅನೇಕಬಾರಿ ಛದ್ಮರೂಪವನ್ನು ಧರಿಸಿ ಆಪತ್ತಿಗೆ ಒಳಗಾಗಿದ್ದಾರೆ.

ಇಂದ್ರೇಣ ನಿಷಧಾನ್ ಪ್ರಾಪ್ಯ ಗಿರಿಪ್ರಸ್ಥಾಶ್ರಮೇ ತದಾ ।
ಛನ್ನೇನೋಷ್ಯ ಕೃತಂ ಕರ್ಮ ದ್ವಿಷತಾಂ ಚ ವಿನಿಗ್ರಹೇ ॥೧೧॥

ಇಂದ್ರನು ಶತ್ರುಗಳ ನಿಗ್ರಹಕ್ಕಾಗಿ ನಿಷಧದೇಶಕ್ಕೆ ಹೋಗಿ ಗಿರಿಪ್ರಸ್ಥಾಶ್ರಮದಲ್ಲಿ ಛದ್ಮರೂಪದಿಂದ ವಾಸವನ್ನು ಮಾಡಿ ತನ್ನ ಕಾರ್ಯವನ್ನು ಸಾಧಿಸಿದನು.

ವಿಷ್ಣುನಾऽಶ್ವಶಿರಃ ಪ್ರಾಪ್ಯ ತಥಾ ದಿತ್ಯಾಂ ನಿವತ್ಸ್ಯತಾ ।
ಗರ್ಭೇ ವಧಾರ್ಥಂ ದೈತ್ಯಾನಾಮಜ್ಞಾತೇನೋಷಿತಂ ಚಿರಮ್ ॥೧೨॥

ವಿಷ್ಣುವು ಒಮ್ಮೆ ಅಶ್ವಶಿರಸ್ಸನ್ನು ಹೊಂದಿ, ಇನ್ನೊಮ್ಮೆ ದೈತ್ಯರ ವಧೆಯನ್ನು ಮಾಡುವುದಕ್ಕೋಸ್ಕರ ಅದಿತಿಯ ಗರ್ಭದಲ್ಲಿ, ಅಜ್ಞಾತವಾಗಿ ಬಹುಕಾಲ ವಾಸಮಾಡಿದನು.

ಪ್ರಾಪ್ಯ ವಾಮನರೂಪೇಣ ಪ್ರಚ್ಛನ್ನಂ ಬ್ರಹ್ಮರೂಪಿಣಾ ।
ಬಲೇರಪಹೃತಂ ರಾಜ್ಯಂ ವಿಕ್ರಮೈಸ್ತಚ್ಚ ತೇ ಶ್ರುತಮ್ ॥೧೩॥

ವಾಮನರೂಪದಿಂದ ಛದ್ಮಬ್ರಹ್ಮಚಾರಿಯ ವೇಷವನ್ನು ಧರಿಸಿ ತನ್ನ ಮೂರು ಹೆಜ್ಜೆಗಳಿಂದ ಬಲಿಯ ರಾಜ್ಯವನ್ನು ಅಪಹರಿಸಿದ ವಿಷಯವನ್ನು ನೀನು ಕೇಳಿದ್ದೀಯೆ.

ಪ್ರಚ್ಛನ್ನಮೇವ ಹರಿಣಾ ಧರ್ಮಜ್ಞೋ ಬಲನಿಗ್ರಹೇ ।
ಮುನಿರೂಪಾಯ ವಜ್ರೇಣ ಯತ್ಕೃತಂ ತಚ್ಚ ತೇ ಶ್ರುತಮ್ ॥೧೪॥

ಇಂದ್ರನು ಶತ್ರುಸೈನ್ಯವನ್ನು ನಿಗ್ರಹಿಸುವಾಗ ಪ್ರಚ್ಛನ್ನನಾಗಿಯೇ ಮುನಿಯಂತೆ ಹರಿಸ್ಮರಣೆ ಮಾಡುತ್ತಿದ್ದ ವೃತ್ರಾಸುರನಿಗೆ ಏನು ಮಾಡಿದನೆಂಬ ವಿಷಯವನ್ನು ನೀನು ಕೇಳಿದ್ದೀಯೆ (ವಾದಿರಾಜರು).

ಹುತಾಶನೇನ ಯಚ್ಚಾಪಃ ಪ್ರವಿಶ್ಯ ಚ್ಛನ್ನಮಾಸತಾ ।
ವಿಬುಧಾನಾಂ ಕೃತಂ ಕರ್ಮ ತಚ್ಚ ಸರ್ವಂ ಶ್ರುತಂ ತ್ವಯಾ ॥೧೫॥

ಅಗ್ನಿಯು ಯಾರಿಗೂ ತಿಳಿಯದಂತೆ ಸಮುದ್ರೋದಕವನ್ನು ಪ್ರವೇಶಿಸಿ ದೇವತೆಗಳಿಗೆ ಮಾಡಿದ ಉಪಕಾರವೆಲ್ಲವನ್ನೂ ನೀನು ಕೇಳಿದ್ದೀಯೆ.

ಔರ್ವೇಣ ವಸತಾ ಛನ್ನಮೂರೌ ಬ್ರಹ್ಮರ್ಷಿಣಾ ತದಾ ।
ಯತ್ಕೃತಂ ತಾತ ಲೋಕೇಷು ಕರ್ಮ ತತ್ತೇಽನಘ ಶ್ರುತಮ್ ॥೧೬॥

ಎಲೈ ಅನಘನೇ, ಪ್ರೀತಿಪಾತ್ರನೇ, ಬ್ರಹ್ಮರ್ಷಿಗಳಾದ ಔರ್ವರು ತಾಯಿಯ ತೊಡೆಯಲ್ಲಿ ಅಡಗಿಕೊಂಡು ಲೋಕದಲ್ಲಿ ಯಾವ ಕಾರ್ಯವನ್ನು ಮಾಡಿದರು ಎಂಬ ವಿಷಯವನ್ನು ನೀನು ಕೇಳಿದ್ದೀಯೆ.

ಏವಂ ವಿವಸ್ವತಾ ತಾತ ಛನ್ನೇನೋತ್ತಮತೇಜಸಾ ।
ನಿರ್ದಗ್ಧಾಃ ಶಾತ್ರವಾಃ ಸರ್ವೇ ವಸತಾ ಭುವಿ ಸರ್ವಶಃ ॥೧೭॥

ಎಲೈ ಪ್ರೀತಿಪಾತ್ರನೇ, ಅದರಂತೆ ಉತ್ತಮ ತೇಜಸ್ಸುಳ್ಳ ಸೂರ್ಯನು ಛದ್ಮರೂಪದಿಂದ ಭೂಮಿಯಲ್ಲಿ ವಾಸವನ್ನು ಮಾಡಿ ಎಲ್ಲ ಶತ್ರುಗಳನ್ನೂ ಸಂಪೂರ್ಣವಾಗಿ ದಹಿಸಿದನು.

ವಿಷ್ಣುನಾ ವಸತಾ ಚಾಪಿ ಗೃಹೇ ದಶರಥಸ್ಯ ವೈ ।
ದಶಗ್ರೀವೋ ಹತಶ್ಛನ್ನಂ ಸಂಯುಗೇ ಭೀಮಕರ್ಮಣಾ ॥೧೮॥

ಭಯಂಕರ ಕರ್ಮವನ್ನು ಮಾಡುವ ವಿಷ್ಣುವೂ ಸಹ ದಶರಥನ ಮನೆಯಲ್ಲಿ ಮನುಷ್ಯರೂಪದಿಂದ ವಾಸವನ್ನು ಮಾಡಿ ಛನ್ನನಾಗಿ ಯುದ್ಧದಲ್ಲಿ ರಾವಣನನ್ನು ಸಂಹರಿಸಿದನು.

ಏವಮೇವ ಮಹಾತ್ಮಾನಃ ಪ್ರಚ್ಛನ್ನಾಸ್ತತ್ರ ತತ್ರ ಹ ।
ಅಜಯಂಛಾತ್ರವಾನ್ ಯುದ್ಧೇ ತಥಾ ತ್ವಮಪಿ ಜೇಷ್ಯಸಿ ॥೧೯॥

ಈ ರೀತಿಯಲ್ಲಿ ಅಲ್ಲಲ್ಲಿ ಅನೇಕ ಮಹಾತ್ಮರು ಪ್ರಚ್ಛನ್ನರಾಗಿ ಯುದ್ಧದಲ್ಲಿ ಶತ್ರುಗಳನ್ನು ಜಯಿಸಿದರು. ಅದರಂತೆ ನೀನೂ ಜಯಿಸುವಿ.

ವೈಶಂಪಾಯನಃ

ತಥಾ ಧೌಮ್ಯೇನ ಧರ್ಮಜ್ಞೋ ವಾಕ್ಯೈಃ ಸಂಪರಿತೋಷಿತಃ ।
ಶಾಸ್ತ್ರದೃಷ್ಟ್ಯಾಪುನರ್ಬುದ್ಧಿಂ ಪ್ರತಿಪೇದೇ ಯುಧಿಷ್ಠಿರಃ ॥೨೦॥

ವೈಶಂಪಾಯನ– ಹೀಗೆ ಧೌಮ್ಯರ ವಾಕ್ಯಗಳಿಂದ ಸಂತೋಷಗೊಂಡ ಧರ್ಮಜ್ಞನಾದ ಯುಧಿಷ್ಠಿರನು ಶಾಸ್ತ್ರದೃಷ್ಟಿಯನ್ನು ಹೊಂದಿ ತನ್ನ ಸದ್ಬುದ್ಧಿಯನ್ನು ಮರಳಿ ಪಡೆದನು.

ಅಥಾಬ್ರವೀನ್ಮಹಾಬಾಹುರ್ಭೀಮಸೇನೋ ಮಹಾಬಲಃ ।
ರಾಜಾನಂ ಬಲಿನಾಂ ಶ್ರೇಷ್ಠೋ ಗಿರಾ ಸಂಪರಿಹರ್ಷಯನ್ ॥೨೧॥

ಅನಂತರ ಮಹಾಬಾಹುವೂ, ಮಹಾಬಲನೂ, ಬಲಿಷ್ಠರಲ್ಲಿ ಶ್ರೇಷ್ಠನೂ ಆದ ಭೀಮಸೇನನು ತನ್ನ ಮಾತುಗಳಿಂದ ರಾಜನನ್ನು ಸಂತೋಷಪಡಿಸುತ್ತಾ ಹೀಗೆ ಮಾತನಾಡಿದನು.

ಅವೇಕ್ಷಯಾ ಮಹಾರಾಜ ತವ ಗಾಂಡೀವಧನ್ವನಾ ।
ಧರ್ಮಾನುಗತಯಾ ಬುದ್ಧ್ಯಾ ನ ಕಿಂಚಿತ್ ಸಾಹಸಂ ಕೃತಮ್ ॥೨೨॥

ಎಲೈ ಮಹಾರಾಜನೇ, ನಿನ್ನ ಉಪೇಕ್ಷೆಯಿಂದಲೂ ಮತ್ತು ಧರ್ಮಾನುಗತ ಬುದ್ಧಿಯಿಂದಲೂ (ನಿವಾರಿತನಾಗಿ) ಗಾಂಡೀವಧನುಸ್ಸನ್ನು ಹೊಂದಿದ ಅರ್ಜುನನು ಯಾವ ಸಾಹಸಕಾರ್ಯವನ್ನೂ ಮಾಡಲಿಲ್ಲ.

ಸಹದೇವೋ ಮಯಾ ನಿತ್ಯಂ ನಕುಲಶ್ಚ ನಿವಾರಿತೌ ।
ಶಕ್ತೌ ವಿಧ್ವಂಸನೇ ತೇಷಾಂ ಶತ್ರೂಣಾಂ ಭೀಮವಿಕ್ರಮೌ ॥೨೩॥

ಭೀಮಪರಾಕ್ರಮವುಳ್ಳ ನಕುಲಸಹದೇವರು ಶತ್ರುಗಳನ್ನು ವಿನಾಶಮಾಡಲು ಸಮರ್ಥರಾದವರು. ನಾನು ಅವರಿಬ್ಬರನ್ನೂ ಯಾವಾಗಲೂ ತಡೆದಿದ್ದೇನೆ.

ನ ವಯಂ ತತ್ ಪ್ರಹಾಸ್ಯಾಮೋ ಯಸ್ಮಿನ್ ಯೋಕ್ಷ್ಯತಿ ನೋ ಭವಾನ್ ।
ಭವಾನ್ ವಿಧತ್ತಾಂ ತತ್‌ಸರ್ವಂ ಕ್ಷಿಪ್ರಂ ಜೇಷ್ಯಾಮಹೇ ರಿಪೂನ್ ॥೨೪॥

ನೀನು ನಮಗೆ ಏನನ್ನು ವಿಧಿಸುತ್ತೀಯೋ ಅದನ್ನು ನಾವು ಎಂದೂ ಪರಿತ್ಯಜಿಸಿಲ್ಲ. ಆದ್ದರಿಂದ ಈಗ ನೀನು ಎಲ್ಲವನ್ನೂ ವಿಧಾನಮಾಡು. ಶತ್ರುಗಳನ್ನು ಶೀಘ್ರವಾಗಿ ಜಯಿಸುತ್ತೇವೆ.

ಇತ್ಯುಕ್ತೇ ಭೀಮಸೇನೇನ ಬ್ರಾಹ್ಮಣಾಃ ಪರಮಾಶಿಷಃ ।
ಉಕ್ತ್ವಾ ಚಾಪೃಚ್ಛ್ಯ ಭರತಾನ್ ಯಥಾಸ್ವಾನ್ ಜಗ್ಮುರಾಶ್ರಮಾನ್ ॥೨೫॥

ಭೀಮಸೇನನು ಹೀಗೆ ಹೇಳುತ್ತಿರಲು ಬ್ರಾಹ್ಮಣರು ಶ್ರೇಷ್ಠವಾದ ಆಶೀರ್ವಾದವನ್ನು ಮಾಡಿ ಆ ಭರತವಂಶೋತ್ಪನ್ನರ ಅನುಮತಿಯನ್ನು ಪಡೆದು ತಮ್ಮ ತಮ್ಮ ಆಶ್ರಮಗಳಿಗೆ ಹಿಂದಿರುಗಿದರು.

ಸರ್ವೇ ವೇದವಿದೋ ಮುಖ್ಯಾ ಯತಯೋ ಮುನಯಸ್ತಥಾ ।
ಆಶೀರ್ಯುಕ್ತ್ವಾ ಯಥಾಕಾಮಂ ಪುನರ್ದರ್ಶನಕಾಂಕ್ಷಯಾ ॥೨೬॥

ಸಹ ಧೌಮ್ಯೇನ ವಿದ್ವಾಂಸಸ್ತತಸ್ತೇ ಪಂಚ ಪಾಂಡವಾಃ ।
ಉತ್ಥಾಯ ಪ್ರಯಯುರ್ವೀರಾಃ ಕೃಷ್ಣಾಮಾದಾಯ ಧನ್ವಿನಃ ॥೨೭॥

ವೇದಜ್ಞರಾದ ಎಲ್ಲಾ ಮುನಿಗಳೂ, ಪ್ರಧಾನರಾದ ಸಂನ್ಯಾಸಿಗಳು ಆಶೀರ್ವಾದಗಳನ್ನು ಮಾಡಿ ಪುನಃ ಬೇಗ ದರ್ಶನವಾಗಲೆಂದು ಹಾರೈಸಿ ವಿದ್ವಾಂಸರಾದ ಧೌಮ್ಯರ ಜೊತೆಯಲ್ಲಿ ಹೊರಟರು. ಅದರಂತೆ ವೀರರಾದ ಪಂಚಪಾಂಡವರೂ ಸಹ ಎದ್ದು ಧನುಸ್ಸನ್ನು ಧರಿಸಿ ದ್ರೌಪದಿಯನ್ನು ಕರೆದುಕೊಂಡು ಹೊರಟರು.

ಕ್ರೋಶಮಾತ್ರಮುಪಾಗಮ್ಯ ತಸ್ಮಾದ್ದೇಶಾನ್ನಿಮಿತ್ತತಃ ।
ಶ್ವೋಭೂತೇ ಮನುಜವ್ಯಾಘ್ರಾಶ್ಚನ್ನವಾಸಾರ್ಥಮುದ್ಯತಾಃ ॥೨೮॥

ಮೊದಲನೆಯ ಸ್ಥಳದಿಂದ ಒಂದು ಕ್ರೋಶದೂರ ನಡೆದು ಮಾರನೆಯ ದಿವಸ ಅಜ್ಞಾತವಾಸವನ್ನು ಮಾಡುವ ನಿಮಿತ್ತದಿಂದ ಆ ಮನುಜವ್ಯಾಘ್ರರೆಲ್ಲರೂ ಉದ್ಯುಕ್ತರಾದರು.

ಪೃಥಕ್‌ಶಾಸ್ತ್ರವಿದಃ ಸರ್ವೇ ಸರ್ವೇ ಮಂತ್ರವಿಶಾರದಾಃ ।
ಸಂಧಿವಿಗ್ರಹಕಾಲಜ್ಞಾ ಮಂತ್ರಾಯ ಸಮುಪಾವಿಶನ್ ॥೨೯॥

ಅವರೆಲ್ಲರೂ ಅನೇಕ ಶಾಸ್ತ್ರಗಳನ್ನು ಬಲ್ಲವರು, ಅನೇಕ ಮಂತ್ರಗಳಲ್ಲಿ ವಿಶಾರದರಾದವರು. ಸಂಧಿವಿಗ್ರಹಕಾಲವನ್ನು ತಿಳಿದವರು. ಅವರು ಅಜ್ಞಾತವಾಸಕ್ಕಾಗಿ ಮಂತ್ರಾಲೋಚನೆಯನ್ನು ಮಾಡಲು ಅಲ್ಲಿ ಕುಳಿತುಕೊಂಡರು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂಸಂಹಿತಾಯಾಂ ವೈಯಾಸಿಕ್ಯಾಂ
ವನಪರ್ವಣಿ ಷಡಧಿಕತ್ರಿಶತತಮೋऽಧ್ಯಾಯಃ ॥

॥ ಇತಿ ಆರಣೇಯಪರ್ವಣಿ ಅಜ್ಞಾತವಾಸಮಂತ್ರಣಂ ನಾಮ ಪಂಚಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವನಪರ್ವದಲ್ಲಿ ಮುನ್ನೂರ ಆರನೆಯ
ಅಧ್ಯಾಯ ಮುಗಿಯಿತು.

★ ★ ★ ★

ಪರಿಶಿಷ್ಟ–೧

ಮುನ್ನೂರ ಏಳನೆಯ ಅಧ್ಯಾಯ

ವನಪರ್ವದ ವಿಷಯಾನುಕ್ರಮಣಿಕೆ

ಇತಿ ಸಮಾಪ್ತಮಾರಣ್ಯಕಂ ಪರ್ವ । ಅಸ್ಮಿನ್ ಪರ್ವಣ್ಯಮೀ ವೃತ್ತಾಂತಾಃ।

ವನಪರ್ವವು ಸಮಾಪ್ತವಾಯಿತು. ಇದರಲ್ಲಿ ಈ ವಿಷಯಗಳಿವೆ.

೧. ಪಾಂಡವಪ್ರಸ್ಥಾನಮ್, ೨. ಪೌರಾನುಗಮನಮ್, ೩. ಪೌರಮಂತ್ರಃ, ೪. ಪೌರವಿಸರ್ಜನಮ್, ೫. ಬ್ರಾಹ್ಮಣಾನುಗಮನಮ್, ೬. ಯುಧಿಷ್ಠಿರಚಿಂತಾ, ೭. ಶೌನಕವಾಕ್ಯಮ್, ೮. ಧೌಮ್ಯಸ್ತವಃ, ೯. ಆದಿತ್ಯನಾಮಾಷ್ಟಶತಮ್, ೧೦. ವಿದುರನಿರ್ವಾಸನಮ್, ೧೧. ವಿದುರಾಗಮನಮ್, ೧೨. ಧೃತರಾಷ್ಟ್ರಸಂತಾಪಃ, ೧೩. ಸುರಭಿವಿಪ್ರಸಂವಾದಃ, ೧೪. ಅರ್ಜುನವಾಕ್ಯಮ್, ೧೫. ಭೀಮಸೇನವಾಕ್ಯಮ್, ೧೬. ವ್ಯಾಸದರ್ಶನಮ್, ೧೭. ಲೋಕಪಾಲಾಗಮನಮ್, ೧೮. ಮೈತ್ರೇಯಗಮನಮ್, ೧೯. ತಚ್ಛಾಪಃ, ೨೦. ಕಿರ್ಮೀರವಧಃ, ೨೧. ವೃಷ್ಣಿಪಾಂಡವಸಮಾಗಮಃ, ೨೩. ಸೌಭವಧಃ, ೨೩. ದ್ವೈತವನ ಪ್ರವೇಶಃ, ೨೪. ದ್ರೌಪದೀವಾಕ್ಯಮ್, ೨೫. ವಿದ್ಯಾಲಾಭಃ, ೨೬. ಶಸ್ತ್ರಪ್ರಾಪ್ತಿಃ, ೨೭. ಇಂದ್ರಲೋಕಾಭಿಗಮನಮ್, ೨೮. ಕೈರಾತಮ್, ೨೯. ಉಲೂಕಾಭಿಗಮನಮ್, ೩೦. ಧೃತರಾಷ್ಟ್ರಚಿಂತಾ, ೩೧. ಸಂಜಯವಾಕ್ಯಮ್, ೩೨. ಬೃಹದಶ್ವಾಗಮನಮ್, ೩೩. ನಲೋಪಾಖ್ಯಾನಮ್, ೩೪. ಅಕ್ಷಜ್ಞಾನಪ್ರಾಪ್ತಿಃ, ೩೫. ನಾರದಾಗಮನಮ್, ೩೬. ಪೌಲಸ್ತ್ಯತೀರ್ಥಯಾತ್ರಾ, ೩೭. ತೀರ್ಥಯಾತ್ರಾರ್ಥಂ ಪಾಂಡವಪ್ರಸ್ಥಾನಮ್, ೩೮. ಲೋಮಶವಾಕ್ಯಮ್, ೩೯. ತತ್ತೀರ್ಥಯಾತ್ರಾಪ್ರಸ್ಥಾನಮ್,

೪೦. ಲೋಪಾಮುದ್ರೋಪಾಖ್ಯಾನಮ್, ೪೧. ವಿಂಧ್ಯಶೈಲಚರಿತಮ್, ೪೨. ವಾತಾಪಿನಾಶನಮ್, ೪೩. ಸಮುದ್ರಶೋಷಣಮ್, ೪೪. ಕಾಲಯವನವಧಃ, ೪೫. ಸಗರಪುತ್ರವಿನಾಶಃ, ೪೬. ಗಂಗಾವತಾರಃ, ೪೭. ಋಷ್ಯಶೃಂಗೋಪಾಖ್ಯಾನಮ್, ೪೮. ವೃಷ್ಣಿಪಾಂಚಾಲಾಗಮನಮ್ ೪೯. ಹಲಧರವಾಕ್ಯಮ್, ೫೦. ವಾಸುದೇವವಾಕ್ಯಮ್, ೫೧. ಜಾಮದಗ್ನ್ಯಚರಿತಮ್, ೫೨. ಬದರೀವಾಸಃ, ೫೩. ಕದಳೀಷಂಡಮ್, ೫೪. ಹನುಮದ್ಭೀಮಸಮಾಗಮಃ, ೫೫. ಸೌಕನ್ಯೋಪಾಖ್ಯಾನಮ್, ೫೬. ಮಂಧಾತ್ರುಪಾಖ್ಯಾನಮ್, ೫೭. ಶ್ಯೇನಕಪೋತೀಯಮ್, ೫೮. ಅಷ್ಟಾವಕ್ರೀಯಮ್, ೫೯. ಯಾವಕ್ರೀತಮ್, ೬೦. ಗಂಧಮಾದನಪ್ರವೇಶಃ, ೬೧. ಔತ್ಪತಿಕಮ್, ೬೨. ಘಟೋತ್ಕಚಾಗಮನಮ್, ೬೩. ಜಟಾಸುರವಧಃ, ೬೪. ಗಂಧಮಾದನನಿವಾಸಃ, ೬೫. ಮಣಿಮದ್ದರ್ಶನಮ್, ೬೬. ಸೌಗಂಧಿಕಾಹರಣಮ್, ೬೭. ವೈಶ್ರವಣಸಮಾಗಮಃ, ೬೮. ಅರ್ಷ್ಟಿಷೇಣಾಶ್ರಮನಿವಾಸಃ, ೬೯. ಇಂದ್ರಲೋಕಾದರ್ಜುನಾಗಮನಮ್, ೭೦. ನಿವಾತಕವಚವಧಃ, ೭೧. ಪಾಶುಪತದರ್ಶನಪ್ರರ್ಥಾನಾ, ೭೨. ರಾಜ್ಞಃ ಪ್ರಶ್ನಃ, ೭೩. ಶಸ್ತ್ರದರ್ಶನಮ್, ೭೪. ಆಜಗರಮ್, ೭೫. ಮಾರ್ಕಂಡೇಯಸಮಾಸ್ಯಾ, ೭೬. ಕಾಮ್ಯಕೇ ವಾಸುದೇವ ಸಮಾಗಮಃ, ೭೭. ಬ್ರಾಹ್ಮಣಮಾಹಾತ್ಮ್ಯಕಥನಮ್, ೭೮. ತಾರ್ಕ್ಷ್ಯಸರಸ್ವತೀಸಂವಾದಃ, ೭೯. ಮಾರ್ಕಂಡೇಯಪುರಾಣಮ್, ೮೦. ಮಾರ್ಕಂಡೇಯೋಕ್ತಭವಿಷ್ಯಮ್, ೮೧. ಮಾಂಡೂಕೋಪಾಖ್ಯಾನಮ್, ೮೨. ಇಂದ್ರದ್ಯುಮ್ನೋಪಾಖ್ಯಾನಮ್, ೮೩. ಧುಂಧುಮಾರೋಪಾಖ್ಯಾನಮ್, ೮೪. ಪತಿವ್ರತಾಮಾಹಾತ್ಮ್ಯೋಪಾಖ್ಯಾನಮ್, ೮೫. ಶಿಬಿಚರಿತಮ್, ೮೬. ಬಕೋಪಾಖ್ಯಾನಮ್, ೮೭. ಆಂಗಿರಸಮ್, ೮೮. ಸ್ಕಂದಜನನಮ್, ೮೯. ದ್ರೌಪದೀಸತ್ಯಭಾಮಾ ಸಂವಾದಃ, ೯೦. ಘೋಷಯಾತ್ರಾಯಾಂ ದುರ್ಯೋಧನಪ್ರತಿಜ್ಞಾ, ೯೧. ಕರ್ಣಪಲಾಯನಮ್, ೯೨. ಪಾಂಡವೈರ್ಧಾರ್ತರಾಷ್ಟ್ರಾದೀನಾಂ ವಿಮೋಕ್ಷಣಮ್, ೯೩. ದುರ್ಯೋಧನ ಯಜ್ಞಃ, ೯೪. ರಾಮೋಪಾಖ್ಯಾನಮ್, ೯೫. ಸಾವಿತ್ರ್ಯುಪಾಖ್ಯಾನಮ್, ೯೬. ಕುಂಡಲಾಹರಣಮ್, ೯೭. ಆರಣೇಯಮ್, ೯೮. ಯಕ್ಷಪ್ರಶ್ನಾ ಇತಿ ಶಮ್॥

॥ ಇತಿ ವನಪರ್ವ ಸಮಾಪ್ತಮ್ ॥

ಪರಿಶಿಷ್ಟ–೨ ಅಧ್ಯಾಯ-೧

ಜನಮೇಜಯಃ

ವಸತ್ಸ್ವೇವಂ ವನೇ ತೇಷು ಪಾಂಡವೇಷು ಮಹಾತ್ಮಸು ।
ರಮಮಾಣೇಷು ಚಿತ್ರಾಭಿಃ ಕಥಾಭಿಃ ಮುನಿಭಿಃ ಸಹ ॥೧॥

ಸೂರ್ಯದತ್ತಾಕ್ಷಯಾನ್ನೇನ ಕೃಷ್ಣಾಯಾ ಭೋಜನಾವಧಿ ।
ಬ್ರಾಹ್ಮಣಾಂಸ್ತರ್ಪಮಾಣೇಷು ಯೇ ಚಾನ್ನಾರ್ಥಮುಪಾಗತಾಃ ॥೨॥

ಆರಣ್ಯಾನಾಂ ಮೃಗಾಣಾಂ ಚ ಮಾಂಸೈರ್ನಾನಾವಿಧೈರಪಿ ।
ಧಾರ್ತರಾಷ್ಟ್ರಾ ದುರಾತ್ಮಾನಃ ಸರ್ವೇ ದುರ್ಯೋಧನಾದಯಃ ।
ಕಥಂತೇಷ್ವನ್ವವರ್ತಂತ ಪಾಪಾಚಾರಾ ಮಹಾಮುನೇ ॥೩॥

ದುಃಶಾಸನಸ್ಯ ಕರ್ಣಸ್ಯ ಶಕುನೇಶ್ಚ ಮತೇ ಸ್ಥಿತಾಃ ।
ಏಕದಾಚಕ್ಷ್ವ ಭಗವನ್ ವೈಶಂಪಾಯನ ಪೃಚ್ಛತಃ ॥೪॥

ವೈಶಂಪಾಯನಃ

ಶ್ರುತ್ವಾ ಶೇಷಾಂ ಕಥಾ ವೃತ್ತಿಂ ನಗರೇ ವಸತಾಮಿವ ।
ದುರ್ಯೋಧನೋ ಮಹಾರಾಜ ತೇಷು ಪಾಪಮರೋಚಯತ್ ॥೫॥

ತಥಾ ತೈರ್ನಿಕೃತಿಪ್ರಜ್ಞೈಃ ಕರ್ಣದುಃಶಾಸನಾದಿಭಿಃ ।
ನಾನೋಪಾಯೈರಘಂ ತೇಷು ಚಿಂತಯತ್ಸು ದುರಾತ್ಮಸು ॥೬॥

ಅಭ್ಯಗಚ್ಛತ್ ಸ ಧರ್ಮಾತ್ಮಾ ದುರ್ವಾಸಾ ನಾಮ ಕಾಮತಃ ।
ಶಿಷ್ಯಾಯುತಸಮೋಪೇತೋ ತಪಸ್ವೀ ಸುಮಹಾಯಶಾಃ ॥೭॥

ತಮಾಗತ ಮಭಿಪ್ರೇಕ್ಷ್ಯ ಮುನಿಂ ಪರಮಕೋಪನಮ್ ।
ದುರ್ಯೋಧನೋ ವಿನೀತಾತ್ಮಾ ಪ್ರಶ್ರಯೇಣ ದಮೇನ ಚ ।
ಸಹಿತೋ ಭ್ರಾತೃಭಿಃ ಶ್ರೀಮಾನಾತಿಥ್ಯೇನ ನ್ಯಮಂತ್ರಯತ್ ॥೮॥

ವಿಧಿವತ್ ಪೂಜಯಾಮಾಸ ಸ್ವಯಂ ಕಿಂಕರವತ್ ಸ್ಥಿತಃ ।
ಅಹಾನಿ ಕ್ವಚಿತ್ ತತ್ರ ತಸ್ಥೌ ಸ ಮುನಿಪುಂಗವಃ ॥೯॥

ತಂ ಚ ಪರ್ಯಚರದ್ ರಾಜಾ ದಿವಾರಾತ್ರಮತಂದ್ರಿತಃ ।
ದುರ್ಯೋಧನೋ ಮಹಾರಾಜ ಶಾಪಾತ್ ತಸ್ಯ ವಿಶಂಕಿತಃ ॥೧೦॥

ಕ್ಷುಧಿತೋಸ್ಮಿ ದದಸ್ವಾನ್ನಂ ಶೀಘ್ರಂ ಮಮ ನರಾಧಿಪ ।
ಇತ್ಯುಕ್ತ್ವಾ ಗಚ್ಛತಿ ಸ್ನಾತುಂ ಪ್ರತ್ಯಾಗಚ್ಛತಿ ವೈ ಚಿರಾತ್ ॥೧೧॥

ನ ಭೋಕ್ಷ್ಯಾಮ್ಯದ್ಯ ಮೇ ನಾಸ್ತಿ ಕ್ಷುಧೇತ್ಯುಕ್ತ್ವೈತ್ಯ ದರ್ಶನಮ್ ।
ಅಕಸ್ಮಾದೇತ್ಯ ಚ ಬ್ರೂತೇ ಭೋಜಯಾಸ್ಮಾನ್ ತ್ವರಾನ್ವಿತಃ ॥೧೨॥

ಕದಾಚಿಚ್ಚ ನಿಶೀಥೇ ಸ ಉತ್ಥಾಯ ನಿಕೃತೌ ಸ್ಥಿತಃ ।
ಪೂರ್ವವತ್ ಕಾರಯಿತ್ವಾನ್ನಂ ನ ಭುಂಕ್ತೇ ಗರ್ಹಯನ್ ಸ್ಮ ಸಃ ॥೧೩॥

ವರ್ತಮಾನೇ ತಥಾ ತಸ್ಮಿನ್ ಯದಾ ದುರ್ಯೋಧನೋ ನೃಪಃ ।
ನಿಕೃತಿಂ ನೈತಿ ನ ಕ್ರೋಧಂ ತದಾ ತುಷ್ಟೋಽಭವನ್ಮುನಿಃ ॥೧೪॥

ಆಹ ಚೈನಂ ದುರಾಧರ್ಷೋ ವರದೋಸ್ಮೀತಿ ಭಾರತ ॥೧೫॥

ವರಂ ವರಯ ಭದ್ರಂತೇ ಯಕ್ತೇ ಮನಸಿ ವರ್ತತೇ ।
ಮಯಿ ಪ್ರೀತೇ ತು ಯದ್ಧರ್ಮ್ಯಂ ನಾಲಭ್ಯಂ ವಿದ್ಯತೇ ತವ ॥೧೬॥

ವೈಶಂಪಾಯನಃ

ಏತಚ್ಛ್ರುತ್ವಾ ವಚಸ್ತಸ್ಯ ಮಹರ್ಷೇರ್ಭಾವಿತಾತ್ಮನಃ ।
ಅಮನ್ಯತ ಪುನರ್ಜಾತಮಾತ್ಮಾನಂ ಸ ಸುಯೋಧನಃ ॥೧೭॥

ಪ್ರಾಗೇವ ಮಂತ್ರಿತಂ ಚಾಸೀತ್ ಕರ್ಣದುಃಶಾಸನಾದಿಭಿಃ ।
ಯಾಚನೀಯಂ ಮುನೇಸ್ತುಷ್ಟಾದಿತಿ ನಿಶ್ಚಿತ್ಯ ದುರ್ಮತಿಃ ॥೧೮॥

ಅತಿಹರ್ಷಾನ್ವಿತೋ ರಾಜನ್ ವರಮೇನಮಯಾಚತ ।
ಶಿಷ್ಯೈಃ ಸಹ ಮಮಬ್ರಹ್ಮನ್ ಯಥಾಜಾತೋಽತಿಥಿರ್ಭವಾನ್ ॥೧೯॥

ಅಸ್ತ್ಯುಲೇ ಮಹಾರಾಜೋ ಜ್ಯೇಷ್ಠಃ ಶ್ರೇಷ್ಠೋ ಯುಧಿಷ್ಠಿರಃ ।
ವನೇ ವಸತಿ ಧರ್ಮಾತ್ಮಾ ಭ್ರಾತೃಭಿಃ ಪರಿವಾರಿತಃ ।
ಗುಣವಾನ್ ಶೀಲಸಂಪನ್ನಸ್ತಸ್ಯ ತ್ವಮತಿಥಿರ್ಭವ ॥೨೦॥

ಯದಾ ಚ ರಾಜಪುತ್ರೀ ಸಾ ಸುಕುಮಾರೀ ಯಶಸ್ವಿನೀ ।
ಭೋಜಯಿತ್ವಾ ದ್ವಿಜಾನ್ ಸರ್ವಾನ್ ಪತೀಂಶ್ಚ ವರವರ್ಣಿನೀ ॥೨೧॥

ವಿಶ್ರಾಂತಾ ಚ ಸ್ವಯಂ ಭುಕ್ತ್ವಾ ಸುಖಾಸೀನಾ ಭವೇತ್ ಯದಾ ।
ತದಾ ತ್ವಂ ತತ್ರ ಗಚ್ಛೇಥಾ ಯದ್ಯನುಗ್ರಾಹ್ಯತಾ ಮಯಿ ॥೨೨॥

ತಥಾಕರಿಷ್ಯೇ ತ್ವತ್ತೋತ್ಯೇತ್ಯೇವಮುಕ್ತ್ವಾ ಸುಯೋಧನಮ್ ।
ದುರ್ವಾಸಾ ಅಪಿ ವಿಪ್ರೇಂದ್ರೋ ಯಥಾಗತಮಗಾತ್ ತತಃ ॥೨೩॥

ಕೃತಾರ್ಥಮಪಿ ಚಾತ್ಮಾನಂ ತದಾ ಮೇನೇ ಸುಯೋಧನಃ ।
ಕರೇಣ ಚ ಕರಂ ಗೃಹ್ಯ ಕರ್ಣಸ್ಯ ಮುದಿತೋ ಭೃಶಮ್ ॥೨೪॥

ಕರ್ಣೋಽಪಿ ಭ್ರಾತೃಸಹಿತಮಿತ್ಯುವಾಚ ನೃಪಂ ಮುದಾ ।
ದಿಷ್ಟ್ಯಾಕಾಮಃ ಸುಸಂವೃತ್ತೋ ದಿಷ್ಟ್ಯಾ ಕೌರವ ವರ್ಧಸೇ ॥೨೫॥

ದಿಷ್ಟ್ಯಾ ತೇ ಶತ್ರವೋ ಮಗ್ನಾ ದುಸ್ತರೇ ವ್ಯಸನಾರ್ಣವೇ ॥೨೬॥

ದುರ್ವಾಸಃ ಕ್ರೋಧಜೇ ವಹ್ನೌ ಪತಿತಾಃ ಪಾಂಡುನಂದನಾಃ ।
ಸ್ವೈರೇವ ತೇ ಮಹಾಪಾಪೈರ್ಗತಾ ವೈ ದುಸ್ತರಂ ತಮಃ ॥೨೭॥

ವೈಶಂಪಾಯನಃ

ಇತ್ಥಂ ತೇ ನಿಕೃತಿಪ್ರಜ್ಞಾ ರಾಜನ್ ದುರ್ಯೋಧನಾದಯಃ ।
ಹಸಂತಃ ಪ್ರೀತಮನಸೋ ಜಗ್ಮುಃ ಸ್ವಂಸ್ವಂ ನಿಕೇತನಮ್ ॥೨೮॥

॥ ಇತಿ ಪ್ರಥಮೋಧ್ಯಾಯಃ ॥

★ ★ ★ ★

ವೈಶಂಪಾಯನಃ

ತತಃ ಕದಾಚಿದ್ ದುರ್ವಾಸಾಃ ಸುಖಾಸೀನಾಂಸ್ತು ಪಾಂಡವಾನ್ ।
ಭುಕ್ತ್ವಾ ಚಾವಸ್ಥಿತಾಂ ಕೃಷ್ಣಾಂ ಜ್ಞಾತ್ವಾ ತಸ್ಮಿನ್ ವನೇ ಮುನಿಃ ।
ಅಭ್ಯಾಗಚ್ಛತ್ ಪರಿವೃತಃ ಶಿಷ್ಯೈರಯುತಸಮ್ಮಿತೈಃ ॥೧॥

ದೃಷ್ಟ್ವಾಽಽಯಾಂತಂ ತಮತಿಥಿಂ ಸ ಚ ರಾಜಾ ಯುಧಿಷ್ಠಿರಃ ।

ಜಗಾಮಾಭಿಮುಖಃ ಶ್ರೀಮಾನ್ ಸಹ ಭ್ರಾತೃಭಿರಚ್ಯುತಃ ॥೨॥

ತಸ್ಮೈ ಬದ್ಧ್ವಾಂಜಲಿಂ ಸಮ್ಯಗುಪವೇಶ್ಯ ವರಾಸನೇ ।
ವಿಧಿವತ್ ಪೂಜಯಿತ್ವಾ ತಮಾತಿಥ್ಯೇನ ನ್ಯಮಂತ್ರಯತ್ ।
ಆಹ್ನಿಕಂ ಭಗವನ್ ಕೃತ್ವಾ ಶೀಘ್ರಮೇಹೀತಿ ಚಾಬ್ರವೀತ್ ॥೩॥

ಜಗಾಮ ಚ ಮುನಿಃ ಸೋಪಿ ಸ್ನಾತುಂ ಶಿಷ್ಯೈಃ ಸಹಾನಘಃ ।
ಭೋಜಯೇತ್ ಸಹಶಿಷ್ಯಂ ಮಾಂ ಕಥಮಿತ್ಯವಿಚಿಂತಯನ್ ॥೪॥

ವ್ಯಮಜ್ಜತ್ ಸಲಿಲೇ ಚಾಪಿ ಮುನಿಸಂಘಃ ಸಮಾಹಿತಃ ॥೫॥

ಏತಸ್ಮಿನ್ನಂತರೇ ರಾಜನ್ ದ್ರೌಪದೀ ಯೋಷಿತಾಂ ವರಾ ।
ಚಿಂತಾಮವಾಪ ಪರಮಾಮನ್ನಹೇತೋಃ ಪತಿವ್ರತಾ ॥೬॥

ಸಾ ಚಿಂತಯಂತೀ ಚ ಯದಾ ನಾನ್ನಹೇತುಮವಿಂದತ ।
ಮನಸಾ ಚಿಂತಯಾಮಾಸ ಕೃಷ್ಣಂ ಕಂಸನಿಷೂದನಮ್ ॥೭॥

ಕೃಷ್ಣಕೃಷ್ಣ ಮಹಾಬಾಹೋ ದೇವಕೀನಂದನಾವ್ಯಯ ।
ವಾಸುದೇವ ಜಗನ್ನಾಥ ಪ್ರಣತಾರ್ತಿವಿನಾಶನ ॥೮॥

ವಿಶ್ವಾತ್ಮನ್ ವಿಶ್ವಜನಕ ವಿಶ್ವಹರ್ತಃ ಪ್ರಭೋವ್ಯಯ ।
ಪ್ರಪನ್ನಪಾಲ ಗೋಪಾಲ ಪ್ರಜಾಪಾಲ ಪರಾತ್ಪರ ॥೯॥

ಆಕೂತೀನಾಂ ಚ ಚಿತ್ತೀನಾಂ ಪ್ರವರ್ತಕ ನತಾಸ್ಮಿ ತೇ ॥೧೦॥

ವರೇಣ್ಯ ವರದಾನಂತ ಅಗತೀನಾಂ ಗತಿಪ್ರದ ।
ಪುರಾಣಪುರುಷ ಪ್ರಾಣಮನೋವೃತ್ತ್ಯಾದ್ಯಗೋಚರ ॥೧೧॥

ಸರ್ವಾಧ್ಯಕ್ಷ ಪರಾಧ್ಯಕ್ಷ ತ್ವಾಮಹಂ ಶರಣಂ ಗತಾ ।
ಪಾಹಿ ಮಾಂ ಕೃಪಯಾ ದೇವ ಶರಣಾಗತವತ್ಸಲ ॥೧೨॥

ನೀಲೋತ್ಪಲದಲಶ್ಯಾಮ ಪದ್ಮಗರ್ಭಾರುಣೇಕ್ಷಣ ।
ಪೀತಾಂಬರಪರೀಧಾನ ಲಸತ್‌ಕೌಸ್ತುಭಭೂಷಣ ॥೧೩॥

ತ್ವಮಾದಿರಂತೋ ಭೂತಾನಾಂ ತ್ವಮೇವ ಚ ಪರಾಯಣಮ್ ।
ಪರಾತ್ಪರತರಂ ಜ್ಯೋತಿರ್ವಿಶ್ವಾತ್ಮಾ ಸರ್ವತೋಮುಖಃ ॥೧೪॥

ತ್ವಾಮೇವಾಹುಃ ಪರಂ ಬೀಜಂ ನಿಧಾನಂ ಸರ್ವಸಂಪದಾಮ್ ।
ತ್ವಯಾ ನಾಥೇನ ದೇವೇಶ ಸರ್ವಾಪದ್ಭ್ಯೋ ಭಯಂ ನ ಹಿ ॥೧೫॥

ದುಃಶಾಸನಾದಹಂ ಪೂರ್ವಂ ಸಭಾಯಾಂ ಮೋಚಿತಾ ಯಥಾ ।
ತಥೈವ ಸಂಕಟಾದಸ್ಮಾತ್ ಮಾಮುದ್ಧರ್ತುಮಿಹಾರ್ಹಸಿ ॥೧೬॥

ವೈಶಂಪಾಯನಃ

ಏವಂ ಸ್ತುತಸ್ತದಾ ದೇವಃ ಕೃಷ್ಣಯಾ ಭಕ್ತವತ್ಸಲಃ ।
ದ್ರೌಪದ್ಯಾಃ ಸಂಕಟಂ ಜ್ಞಾತ್ವಾ ದೇವದೇವೋ ಜಗತ್ಪತಿಃ ॥೧೭॥

ಪಾರ್ಶ್ವಸ್ಥಾಂ ಶಯನೇ ತ್ಯಕ್ತ್ವಾ ರುಗ್ಮಿಣೀಂ ಕೇಶವಃ ಪ್ರಭುಃ ।
ತತ್ರಾಜಗಾಮ ತ್ವರಿತೋ ಹ್ಯಚಿಂತ್ಯಗತಿರೀಶ್ವರಃ ॥೧೮॥

ತತಸ್ತಂ ದ್ರೌಪದೀ ದೃಷ್ಟ್ವಾ ಪ್ರಣಮ್ಯ ಪರಯಾ ಮುದಾ ।
ಅಬ್ರವೀದ್ ವಾಸುದೇವಸ್ಯ ಮುನೇರಾಗಮನಾದಿಕಮ್ ॥೧೯॥

ತತಸ್ತಾಮಬ್ರವೀತ್ ಕೃಷ್ಣಃ ಕ್ಷುಧಿತೋಸ್ಮಿ ಭೃಶಾತುರಃ ।
ಶೀಘ್ರಃ ಭೋಜಯ ಮಾಂ ಕೃಷ್ಣೇ ಪಶ್ಚಾತ್ ಸರ್ವಂ ಕರಿಷ್ಯಸಿ ॥೨೦॥

ನಿಶಮ್ಯ ತದ್ವಚಃ ಕೃಷ್ಣಾ ಲಜ್ಜಿತಾ ವಾಕ್ಯಮಬ್ರವೀತ್ ।
ಸ್ಥಾಲ್ಯಾಂ ಭಾಸ್ಕರದತ್ತಾಯಾಮನ್ನಂ ಮದ್ಭೋಜನಾವಧಿ ॥೨೧॥

ಭುಕ್ತವತ್ಯಸ್ಮ್ಯಹಂ ದೇವ ತಸ್ಮಾದನ್ನಂ ನ ವಿದ್ಯತೇ ।
ತತಃ ಪ್ರೋವಾಚ ಭಗವಾನ್ ಕೃಷ್ಣಾಂ ಕಮಲಲೋಚನಃ ॥೨೨॥

ಕೃಷ್ಣೇ ನ ನರ್ಮಕಾಲೋಯಂ ಕ್ಷುಚ್ಛ್ರಮೇಣಾತುರೇ ಮಯಿ ।
ಶೀಘ್ರಂ ಗಚ್ಛ ಮಮ ಸ್ಥಾಲೀಮಾನಯಿತ್ವಾ ಪ್ರದರ್ಶಯ ॥೨೩॥

ಇತಿ ನಿರ್ಬಂಧತಃ ಸ್ಥಾಲೀಮಾನಾಯ್ಯ ಸ ಯದೂದ್ವಹಃ ।
ಸ್ಥಾಲ್ಯಾಃ ಕಂಠೇಥ ಸಂಲಗ್ನಂ ಶಾಕಾನ್ನಂ ವೀಕ್ಷ್ಯ ಕೇಶವಃ ॥೨೪॥

ಉಪಯುಜ್ಯಾಬ್ರವೀದೇನಾಮನೇನ ಹರಿರೀಶ್ವರಃ ।
ವಿಶ್ವಾತ್ಮಾ ಪ್ರೀಯತಾಂ ದೇವಸ್ತುಷ್ಟಶ್ಚಾಸ್ತ್ವಿತಿ ಯಜ್ಞಭುಕ್ ॥೨೫॥

ಆಕಾರಯ ಮುನೀನ್ ಶೀಘ್ರಂ ಭೋಜನಾಯೇತಿ ಜಾಬ್ರವೀತ್ ।
ಭೀಮಸೇನಂ ಮಹಾಬಾಹುಃ ಕೃಷ್ಣಃ ಕ್ಲೇಶವಿನಾಶನಃ ॥೨೬॥

ತತೋ ಜಗಾಮ ತ್ವರಿತೋ ಭೀಮಸೇನೋ ಮಹಾಯಶಾಃ ।
ಆಕಾರಿತುಂ ತು ತಾನ್ ಸರ್ವಾನ್ ಭೋಜನಾರ್ಥಂ ನೃಪೋತ್ತಮ ॥

ತೇ ಚಾವಕೀರ್ಣಾಃ ಸಲೀಲೇऽಕೃತವಂತೋऽಘಮರ್ಷಣಮ್ ।
ದೃಷ್ಟ್ವೋದ್ಗಾರಾನ್ ಸಾನ್ನರಸಾನ್ ತೃಪ್ತಾ ಪರಮಯಾ ಯುತಾಃ ।
ಉತ್ತೀರ್ಯ ಸಲಿಲಾತ್ ತಸ್ಮಾದ್ ದೃಷ್ಟವಂತಃ ಪರಸ್ಪರಮ್ ॥೨೮॥

ದುರ್ವಾಸಸಮಭಿಪ್ರೇಕ್ಷ್ಯತೇ ಸರ್ವೇ ಮುನಯೋऽಬ್ರುವನ್ ।
ರಾಜ್ಞಾ ಹಿ ಕಾರಯಿತ್ವಾನ್ನಂ ವಯಂ ಸ್ನಾತುಂ ಸಮಾಗತಾಃ ॥೨೯॥

ಆಕಂಠಕೃಪ್ತಾ ವಿಪ್ರರ್ಷೇ ಕಿಂಸ್ವಿದ್ ಭುಂಜಾಮಹೇ ವಯಮ್ ।
ವೃಥಾಪಾಕಃ ಕೃತೋಸ್ಮಾಭಿಸ್ತತ್ರ ಕಿಂ ಕರವಾಮಹೇ ॥೩೦॥

ದುರ್ವಾಸಾಃ

ವೃಥಾಪಾಕೇನ ರಾಜರ್ಷೇರಪರಾಧಃ ಕೃತೋ ಮಹಾನ್ ।
ಮಾऽಸ್ಮಾನಧಾಕ್ಷುರ್ದುಷ್ಟೈವ ಪಾಂಡವಾಃ ಕ್ರೂರಚಕ್ಷುಷಃ ॥೩೧॥

ಸ್ಮೃತ್ವಾऽನುಭಾವಂ ರಾಜರ್ಷೇರಂಬರೀಷಸ್ಯ ಧೀಮತಃ ।
ಬಿಭೇಮಿ ಸುತರಾಂ ವಿಪ್ರಾ ಹರಿಪಾದಾಶ್ರಯಾಜ್ಜನಾತ್ ॥೩೨॥

ಪಾಂಡವಾಶ್ಚ ಮಹಾತ್ಮಾನಃ ಸರ್ವೇ ಧರ್ಮಪರಾಯಣಾಃ ।
ಶೂರಾಶ್ಚ ಕೃತವಿದ್ಯಾಶ್ಚ ವ್ರತಿನಃ ತಪಸಿ ಸ್ಥಿತಾಃ ॥೩೩॥

ಸದಾಚಾರರತಾ ನಿತ್ಯಂ ವಾಸುದೇವಪರಾಯಣಾಃ ।
ಕ್ರುದ್ಧಾಸ್ತೇ ನಿರ್ದಹೇಯುರ್ವೈ ತೂಲರಾಶಿಮಿವಾನಲಃ ।
ತತ ಏತಾನಪೃಷ್ಟ್ವೈವ ಶಿಷ್ಯಾಃ ಶೀಘ್ರಂ ಪಲಾಯತ ॥೩೪॥

ವೈಶಂಪಾಯನಃ

ಇತ್ಯುಕ್ತಾಸ್ತೇ ದ್ವಿಜಾಃ ಸರ್ವೇ ಮುನಿನಾ ಗುರುಣಾ ತದಾ ।
ಪಾಂಡವೇಭ್ಯೋ ಭೃಶಂ ಭೀತಾ ದುದ್ರುವುಸ್ತೇ ದಿಶೋ ದಶ ॥೩೫॥

ಭೀಮಸೇನೋ ದೇವನದ್ಯಾಮಪಶ್ಯನ್ ಮುನಿಸತ್ತಮಾನ್ ।
ತೀರ್ಥೇಷ್ವಿತಸ್ತತಸ್ತಸ್ಯಾ ವಿಚಚಾರ ಗವೇಷಯನ್ ॥೩೬॥

ತತ್ರಸ್ಥೇಭ್ಯಸ್ತಾಪಸೇಭ್ಯಃ ಶ್ರುತ್ವಾ ತಾಂಶ್ಚೈವ ವಿದ್ರುತಾನ್ ।
ಯುಧಿಷ್ಠಿರಮಥಾಭ್ಯೇತ್ಯ ತಂ ವೃತ್ತಾಂತಂ ನ್ಯವೇದಯತ್ ॥೩೭॥

ತತಸ್ತೇ ಪಾಂಡವಾಃ ಸರ್ವೇ ಪ್ರತ್ಯಾಗಮನಕಾಂಕ್ಷಿಣಃ ।
ಪ್ರತೀಕ್ಷಂತಃ ಕಿಯತ್ಕಾಲಂ ಜಿತಾತ್ಮಾನೋಽವತಸ್ಥಿರೇ ॥೩೮॥

ನಿಶೀಥೇಽಭ್ಯೇತ್ಯ ಚಾಕಸ್ಮಾದಸ್ಮಾನ್ ಸ ಛಲಯಿಷ್ಯತಿ ।
ಕಥಂ ಚ ನಿಸ್ತರೇಮಾಸ್ಮಾತ್ ಕೃಚ್ಛ್ರಾದ್ ದೈವೋಪಪಾದಿತಾತ್ ॥೩೯॥

ಇತಿ ಚಿಂತಾಪರಾನ್ ದೃಷ್ಟ್ವಾ ನಿಃಶ್ವಸಂತೋ ಮುಹುರ್ಮುಹುಃ ।
ಉವಾಚ ವಚನಂ ಶ್ರೀಮಾನ್ ಕೃಷ್ಣಃ ಪ್ರತ್ಯಕ್ಷತಾಂ ಗತಃ ॥೪೦॥

ಭವತಾಮಾಪದಂ ಜ್ಞಾತ್ವಾ ಋಷೇಃ ಪರಮಕೋಪನಾತ್ ।
ದ್ರೌಪದ್ಯಾ ಚಿಂತಿತಃ ಪಾರ್ಥಾ ಅಹಂ ಸತ್ವರಮಾಗತಃ ॥೪೧॥

ನ ಭಯಂ ವಿದ್ಯತೇ ತಸ್ಮಾದ್ ಋಷೇರ್ದುರ್ವಾಸಸೋಽಲ್ಪಕಮ್ ।
ತೇಜಸಾ ಭವತಾಂ ಭೀತಃ ಪೂರ್ವಮೇವ ಪಲಾಯಿತಃ ॥೪೨॥

ಧರ್ಮನಿತ್ಯಾಸ್ತು ಯೇ ಕೇಚಿನ್ನ ತೇ ಸೀದಂತಿ ತರ್ಹಿಚಿತ್ ।
ಆಪೃಚ್ಛೇ ವೋ ಗಮಿಷ್ಯಾಮಿ ನಿಯತಂ ಭದ್ರಮಸ್ತು ತೇ ॥೪೩॥

ವೈಶಂಪಾಯನಃ

ಶ್ರುತ್ವೇರಿತಂ ಕೇಶವಸ್ಯ ಬಭೂವುಃ ಸ್ವಸ್ಥಮಾನಸಾಃ ।
ದ್ರೌಪದ್ಯಾ ಸಹಿತಾಃ ಪಾರ್ಥಾಸ್ತಮೂಚುರ್ವಿಗತಜ್ವರಾಃ ॥೪೪॥

ತ್ವಯಾ ನಾಥೇನ ಗೋವಿಂದ ದುಸ್ತರಾಮಾಪದಂ ವಿಭೋ ।
ತೀರ್ಣಾಃ ಪ್ಲವಮಿವಾಸಾದ್ಯ ಮಜ್ಜಮಾನಾ ಮಹಾರ್ಣವೇ ॥೪೫॥

ಸ್ವಸ್ತಿ ಸಾಧಯ ಭದ್ರಂತೇ ಇತ್ಯಾಜ್ಞಾತೋ ಯಯೌ ಪುರೀಮ್ ॥೪೬॥

ಪಾಂಡವಾಶ್ಚ ಮಹಾಭಾಗಾ ದ್ರೌಪದ್ಯಾ ಸಹಿತಾಃ ಪ್ರಭೋ ।
ಊಷುಃ ಪ್ರಹೃಷ್ಟಮನಸೋ ವಿಹರಂತೋ ವನಾದ್ ವನಮ್ ॥೪೭॥

ಇತಿ ತೇಽಭಿಹಿತಂ ರಾಜನ್ ಯತ್‌ಪೃಷ್ಟೋಹಮಿಹ ತ್ವಯಾ ।
ಏವಂ ವಿಧಾನ್ಯಲೀಕಾನಿ ಧಾರ್ತರಾಷ್ಟ್ರೈರ್ದುರಾತ್ಮಭಿಃ ।
ಪಾಂಡವೇಷು ವನಸ್ಥೇಷು ಪ್ರಯುಕ್ತಾನಿ ವೃಥಾಽಭವನ್ ॥೪೮॥

॥ ಇತಿ ದ್ವಿತೀಯೋಧ್ಯಾಯಃ ॥

★ ★ ★ ★